ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 23

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಅನ್ಯಂ ವೇಷಮುಪಾಗತಾಃ ಪೃಥಗಿತೋ ಗತ್ವಾ ವಿರಾಟಾಲಯಂ
ತದ್ದೇಹಸ್ಥ ಹರೇರ್ನಿಷೇವಣಪರಾ ಮಲ್ಲಂ ತಥಾ ಕೀಚಕಾನ್ ।
ಹತ್ವಾ ಗೋಗ್ರಹಣೋದ್ಯತಾನಪಿ ಕುರೂನ್ ಜಿತ್ವಾ ವಿರಾಟಾರ್ಚಿತಾಃ
ಪಾರ್ಥಾಃ ಸ್ವಾಂತಿಕಮಾಗತಂ ಯಮಜಿತಂ ಭೇಜುಸ್ತಮೀಡೇಽಚ್ಯುತಂ ॥೨೩॥

ಪಾರ್ಥರು ಬೇರೆಬೇರೆ ಮಾರುವೇಷ ಧರಿಸಿ ಅಲ್ಲಿಂದ ವಿರಾಟನಗರಕ್ಕೆ ಹೋಗಿ ಅವನ ದೇಹದಲ್ಲಿದ್ದ ಹರಿಯನ್ನೇ ಸೇವಿಸುತ್ತ ಮಲ್ಲನನ್ನೂ ಕೀಚಕರನ್ನೂ ಸದೆಬಡಿದು ಗೋಗ್ರಹಣೋದ್ಯತರಾದ ಕೌರವರನ್ನೂ ಗೆದ್ದು ವಿರಾಟನಿಂದ ಸಮ್ಮಾನಿತರಾಗಿ ತಮ್ಮ ಬಳಿಗೆ ಬಂದ ಶ್ರೀಕೃಷ್ಣನನ್ನು ಸೇವಿಸಿದರು. ಅಂಥಹ ಅಜಿತನಾಮಕ ಅಚ್ಯುತನನ್ನು ಸ್ತುತಿಸುತ್ತೇನೆ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೩

ವಿರಾಟ ಪರ್ವ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ವಿರಾಟನಗರಕ್ಕೆ ಪಾಂಡವರು

ಓಂ॥ ನಾರಾಯಣಾನುಗ್ರಹತೋ ಯಥಾವ-
ನ್ನಿಸ್ತೀರ್ಯ ತಾನ್ ದ್ವಾದಶಾಬ್ದಾನ್ ವನೇ ತೇ ।
ವಿಸೃಜ್ಯ ಚ ಬ್ರಾಹ್ಮಣಾದೀನ್ ಸಧೌಮ್ಯಾ-
ನಜ್ಞಾತವಾಸಾಯ ತತೋ ಮನೋ ದಧುಃ ॥೧॥

ಶ್ರೀಹರಿಯ ಅನುಗ್ರಹದಿಂದ ಪಾಂಡವರು ಸರಿಯಾದ ರೀತಿಯಲ್ಲಿ ಹನ್ನೆರಡು ವರ್ಷಗಳನ್ನು ವನವಾಸದಲ್ಲಿ ಕಳೆದು ಧೌಮ್ಯರನ್ನೂ ಋಷಿಮುನಿಗಳು ಮುಂತಾದವರನ್ನೂ ಬೀಳ್ಕೊಟ್ಟು ಕ್ಷತ್ರಿಯ ವೇಷವನ್ನು ಬಿಟ್ಟು ಅಜ್ಞಾತವಾಸಕ್ಕೆ ಸಂಕಲ್ಪಿಸಿದರು.

ಹನ್ನೆರಡು ವರ್ಷಗಳ ವನವಾಸ ಮುಗಿದೊಡನೆ ಅಜ್ಞಾತವಾಸಕ್ಕೆ ಹೊರಡುವ ಮುನ್ನ ಅಗ್ನಿಹೋತ್ರಗಳನ್ನು ಪುರೋಹಿತರಾದ ಧೌಮ್ಯರ ವಶಕ್ಕೆ ಕೊಟ್ಟರು. ಎಂಬತ್ತೆಂಟು ಸಾವಿರ ಋಷಿಗಳೂ ಹತ್ತು ಸಾವಿರ ಯತಿಗಳೂ ತಮ್ಮೊಂದಿಗೆ ವನವಾಸದಲ್ಲಿ ಇದ್ದರು. ಇಂದ್ರಸೇನ ಮುಂತಾದ ಸಾರಥಿಗಳೂ ಇದ್ದರು. ಪಾಂಡವರು ಋಷಿಗಳನ್ನೂ ಯತಿಗಳನ್ನೂ ಅವರ ಮನೆ ಮಠಗಳಿಗೆ ಕಳಿಸಿದರು. ಸಾರಥಿಗಳನ್ನು ದ್ವಾರಕೆಗೆ ಕಳಿಸಿದರು. ಯಾರಾದರೂ ಕೇಳಿದರೆ ಪಾಂಡವರು ಅರ್ಧರಾತ್ರಿಯಲ್ಲಿ ನಮಗೆ ತಿಳಿಸದೆಯೆ ದ್ವೈತವನದಿಂದ ಎಲ್ಲಿಗೋ ಹೊರಟು ಹೋದರೆಂದು ಹೇಳಲು ಆದೇಶ ನೀಡಿದರು. ಬೀಳ್ಕೊಟ್ಟರು. ಬಳಿಕ ತಮ್ಮ ಕ್ಷತ್ರಿಯ ವೇಷವನ್ನು ಕಳಚಿ ಮಾರುವೇಷದಿಂದ ಅಜ್ಞಾತವಾಸಕ್ಕೆ ಸಂಕಲ್ಪಿಸಿದರು.

ಗತ್ವಾ ವಿರಾಟಸ್ಯ ಪುರೀಂ ನಿಧಾಯ
ಹೇತೀಃ ಶಮ್ಯಾಂ ಛನ್ನರೂಪಾ ಬಭೂವುಃ ।
ಯತಿಃ ಸೂದಃ ಷಂಡವೇಷೋಽಶ್ವಸೂತ-
ವೇಷೋ ಗೋಪೋ ಗಂಧಕರ್ತ್ರೀ ಚ ಜಾತಾಃ ॥೨॥

ಪಾಂಡವರು ವಿರಾಟನಗರದ ಬಳಿಗೆ ಹೋಗಿ ಬನ್ನಿಮರದಲ್ಲಿ ಆಯುಧಗಳನ್ನಿರಿಸಿ ಮಾರುವೇಷತೊಟ್ಟರು. ಕ್ರಮವಾಗಿ ಸನ್ಯಾಸಿ ಅಡಿಗೆಯವ ನಪುಂಸಕ ಸೂತ ಗೋವಳ ಮತ್ತು ಸೈರಂಧ್ರಿಗಳಾದರು.

ಧರ್ಮರಾಜ ತಾನು 'ಕಂಕ' ಎಂಬ ತ್ರಿದಂಡಿ ಸನ್ಯಾಸಿಯಾಗಿ ವಿರಾಟರಾಜನ ಬಳಿಯಲ್ಲಿ ಜ್ಯೋತಿಷ್ಯ ಶಕುನಶಾಸ್ತ್ರ ಅಥರ್ವವೇದ ವ್ಯಾಕರಣಾದಿ ವೇದಾಂಗಗಳು ನೀತಿಶಾಸ್ತ್ರ ಧರ್ಮ ಅರ್ಥ ಕಾಮ ಮೋಕ್ಷಶಾಸ್ತ್ರಗಳು ಇವುಗಳಲ್ಲಿ ರಾಜನಿಗೆ ಉತ್ತಮವಾದ ಸಲಹೆಗಳನ್ನು ನೀಡುತ್ತ ವಿಶೇಷವಾಗಿ ವೈಢೂರ್ಯ ದಂತ ಚಿನ್ನ ಬೆಳ್ಳಿಗಳ ದಾಳಗಳಿಂದ ಜೂಜಾಡುತ್ತ ರಾಜನನ್ನು ಸಂತೋಷಗೊಳಿಸುವೆನೆಂದ.

ಭೀಮಸೇನ ತಾನು 'ವಲಲ' ಅಥವಾ ಬಲ್ಲವ ಎಂಬ ಹೆಸರಿನಿಂದ ಅಡಿಗೆಯವನಾಗಿ ವಿರಾಟರಾಜನೆಂದೂ ಕಂಡರಿಯದ ಹೊಸರುಚಿಯ ಅಡಿಗೆ ಮಾಡಿ ಉಣಿಸುವೆನು. ಮಲ್ಲಯುದ್ಧದಲ್ಲಿ ಪ್ರಸಿದ್ಧ ಮಲ್ಲರನ್ನೆಲ್ಲ ಮೀರಿಸಿ ಬೆರಗಾಗಿಸುವೆನು ಎಂದ.

ಅರ್ಜುನ ತಾನು ನಪುಂಸಕವೇಷದಲ್ಲಿ 'ಬೃಹನ್ನಲೆ' ಎಂಬ ನರ್ತಕಿಯಾಗಿ ಅಂತಃಪುರದಲ್ಲಿ ನೃತ್ಯಗೀತ ವಾದ್ಯಗಳನ್ನು ಕಲಿಸುತ್ತ ಮನರಂಜನೆ ನೀಡುವೆನೆಂದ.

ನಕುಲ ತಾನು 'ದಾಮಗ್ರಂಥಿ' ಅಥವಾ 'ಗ್ರಂಥಿಕ' ಎಂಬ ಹೆಸರಿನಿಂದ ಅಶ್ವಪಾಲಕನಾಗಿ ರಾಜನ ಕುದುರೆಗಳನ್ನು ಪಳಗಿಸುತ್ತ ಚಿಕಿತ್ಸೆ ಮಾಡುತ್ತ ವಾಸಮಾಡುವೆನೆಂದ.

ಸಹದೇವ 'ತಂತ್ರೀಪಾಲ' 'ತಂತಿಪಾಲ' ಅಥವಾ 'ಅರಿಷ್ಟನೇಮಿ' ಎಂಬ ಹೆಸರಿನಿಂದ 'ಬಲ್ಲವ' ಅಂದರೆ, ಗೋಪಾಲಕನಾಗಿ ರಾಜನ ಗೋವುಗಳಿಗೆ ಕಳ್ಳಕಾಕರ ಮತ್ತು ಮೃಗಗಳ ಭಯದಿಂದಲೂ ವ್ಯಾಧಿಭಯದಿಂದಲೂ ರಕ್ಷಣೆ ನೀಡುವೆನೆಂದ. ಗೋ ಸಂತತಿ ಸಮೃದ್ಧವಾಗಿ ಬೆಳೆಯುವಂತೆ ಮಾಡುವೆನೆಂದ. ಹಸುಗಳನ್ನು ಜಾತಿವಾರು ವಿಂಗಡಿಸಿ ಸರಿಯಾದ ಲೆಕ್ಕಪತ್ರ ಇಡುವೆನೆಂದ.

ದ್ರೌಪದಿ 'ಮಾಲಿನಿ' ಎಂಬ ಹೆಸರಿನಿಂದ ಸೈರಂಧ್ರಿಯಾಗಿ ಚತುಃಷಷ್ಟಿ ಕಲಾಭಿಜ್ಞಳಾಗಿ ಗಂಧಲೇಪ ಕೇಶಾಲಂಕಾರ ಹೂವಮಾಲೆ ಮುಂತಾದವುಗಳಲ್ಲಿ ಪರಿಣತೆಯಾಗಿ ರಾಣಿಯ ದಾಸಿಯಾಗಿರುವೆನೆಂದಳು. ತಾನು ಇನ್ನೊಬ್ಬರ ಎಂಜಲು ಉಣಲಾರೆ ಇನ್ನೊಬ್ಬರ ಕಾಲು ತೊಳೆಯಲಾರೆ. ಜಯ ಜಯೇಶ ವಿಜಯ ಜಯತ್ಸೇನ ಜಯದ್ಬಲ ಎಂಬ

ಐವರು ಗಂಧರ್ವರು ತನ್ನ ಪತಿಗಳು, ಅವರು ಗುಪ್ತವಾಗಿ ನನ್ನ ರಕ್ಷಣೆ ಮಾಡುತ್ತಾರೆ. ಯಾರಾದರೂ ನನ್ನನ್ನು ಕೆಟ್ಟಕಣ್ಣಿಂದ ಕಂಡರೆ ತಕ್ಕ ಶಿಕ್ಷೆಮಾಡುತ್ತಾರೆ. ಅದರಿಂದ ನಿರ್ಭೀತಿಯಿಂದ ಸಂಚರಿಸುವೆನು. ಶ್ರೀಕೃಷ್ಣನ ರಾಣಿ ಸತ್ಯಭಾಮೆಯನ್ನೂ ಪಾಂಡವರ ರಾಣಿ ದ್ರೌಪದಿಯನ್ನೂ ಸೇವಿಸಿ ಅನುಭವ ಪಡೆದವಳು ನಾನು ಎಂದು ಹೇಳಿಕೊಳ್ಳುತ್ತೇನೆ ಎಂದಳು.

ವಿರಾಟ ಮತ್ಸ್ಯದೇಶದ ರಾಜ. ಪಾಂಡವರ ಮಿತ್ರ, ಧರ್ಮಾತ್ಮ. ಆದರೆ ಹೆಚ್ಚು ಪ್ರಸಿದ್ಧನಲ್ಲ. ಅದರಿಂದ ಅವನ ರಾಜಧಾನಿಯಾದ ಉಪಪ್ಲವ್ಯವನ್ನು ಪಾಂಡವರು ಅಜ್ಞಾತವಾಸಕ್ಕೆ ಆರಿಸಿಕೊಂಡರು. ಅದರ ಹೊರವಲಯದಲ್ಲಿ ಸ್ಮಶಾನದ ಬಳಿಯ ನಿರ್ಜನ ಪ್ರದೇಶದಲ್ಲಿ ಒಂದು ಬನ್ನಿಮರದ ಮೇಲೆ ತಮ್ಮ ಆಯುಧಗಳನ್ನು ಒಂದು ಶವದೊಂದಿಗೆ ಚರ್ಮದಿಂದ ಬಿಗಿದುಕಟ್ಟಿ ನೇಣು ಹಾಕಿಕೊಂಡ ಶವದ ಆಕಾರದಲ್ಲಿ ತೂಗುಹಾಕಿದರು. ಶವದ ದುರ್ಗಂಧದಿಂದಾಗಿ ಯಾರೂ ಅದನ್ನು ಸ್ಪರ್ಶಿಸುವಂತಿರಲಿಲ್ಲ: ತಮ್ಮ ತಾಯಿಯ ಶವವೆಂದು ಜನರಿಗೆ ಹೇಳಿದರು.

ಮಹಾಭಾರತ ದಾಕ್ಷಿಣಾತ್ಯಪಾಠದಲ್ಲಿ ಭೀಮ, ನಕುಲ, ಸಹದೇವರು ತಮ್ಮನ್ನು ವಲಲ, ದಾಮಗ್ರಂಥಿ, ತಂತ್ರೀಪಾಲ ಎಂದು ಕರೆದುಕೊಳ್ಳುತ್ತಾರೆ. ಔತ್ತರೇಯಪಾಠದಲ್ಲಿ ಬಲ್ಲವ, ಗ್ರಂಥಿಕ, ತಂತಿಪಾಲ ಎಂದು ಕರೆದುಕೊಳ್ಳುತ್ತಾರೆ.

ಐವರೂ ಪಾಂಡವರು ತಾವು ಹಿಂದೆ ಪಾಂಡವರ ಬಳಿ ಸೇವೆ ಮಾಡುತ್ತಿದ್ದವರು ಎಂದು ಹೇಳಿಕೊಳ್ಳುತ್ತಾರೆ.

ಭೀಮಸೇನ ದಾಕ್ಷಿಣಾತ್ಯಪಾಠದಲ್ಲಿ 'ಸೂದವೇಷ'ವನ್ನು ಅಂದರೆ ಅಡಿಗೆಯವನ ವೇಷವನ್ನು ಧರಿಸುವುದಾಗಿ ಪ್ರತಿಜ್ಞೆ ಮಾಡಿ (ವಿ.3-8) ವಿರಾಟ ರಾಜನ ಮುಂದೆ ನಾನು ಶೂದ್ರ, ಚತುರ್ಥವರ್ಣದವ ಎನ್ನುತ್ತಾನೆ(ವಿ. 10-13, 17). ಅದರಿಂದ ನಿರ್ಣಯದಲ್ಲಿ ಜನಾರ್ದನ ಭಟ್ಟೀಯ ಪ್ರಕಾರ 'ಸೂದವೇಷಃ' ಎಂದು ಪಾಠ. ವಾದಿರಾಜೀಯ ಪ್ರಕಾರ 'ಶೂದ್ರವೇಷಃ' ಎಂದು.

ಸರ್ವೇ ವಿರಾಟಂ ಯಯುರತ್ರ ದೇವವತ್
ಸಂಭಾವಿತಾಸ್ತೇನ ಶುಭೋರುಲಕ್ಷಣಾಃ।
ಯುಧಿಷ್ಠಿರಸ್ಯೈವ ಶುಶ್ರೂಷಣಂ ತೇ
ಚಕ್ರುರ್ಹೃದಾ ವಾಸುದೇವಸ್ಯ ನಾನ್ಯತ್ ॥೩॥

ಪಾಂಡವರೂ ದ್ರೌಪದಿಯೂ ಎಲ್ಲರೂ ವಿರಾಟರಾಜನ ಬಳಿಗೆ ಹೋದರು. ಉತ್ತಮ ಶುಭಲಕ್ಷಣಯುಕ್ತರಾದ ಅವರು ದೇವತೆಗಳಂತೆ ರಾಜನಿಂದ ಸತ್ಕರಿಸಲ್ಪಟ್ಟರು. ಅವರು ರಾಜನ ಸೇವೆ ಮಾಡಲಿಲ್ಲ. ಯುಧಿಷ್ಠಿರನೊಳಗೆ ಶ್ರೀಹರಿ ಇರುವನೆಂಬ ಭಾವನೆಯಿಂದ ಅವನ ಸೇವೆಯನ್ನೇ ಮಾಡಿದರು.

ಆರಾಧಯಂತೋ ರಾಜಾನಂ (ವಿ 15.2) ಎಂದರೆ ಪಾಂಡವರು ವಿರಾಟರಾಜನನ್ನು ಸೇವಿಸಿದರೆಂದಲ್ಲ. ರಾಜಾ ಯುಧಿಷ್ಠಿರನನ್ನೇ ಸೇವಿಸಿರು. ದೇವೋತ್ತಮರಾದ ಅವರು ವಿರಾಟನಂಥ ಒಬ್ಬ ಸಾಮಾನ್ಯ ರಾಜನನ್ನು ಸೇವಿಸಲಿಲ್ಲ. ಅವನೆ ಅವರನ್ನು ದೇವತೆಗಳಂತೆ ಸೇವಿಸಿದ. ನನ್ನೆಲ್ಲ ಸಂಪತ್ತಿಗೂ ನೀನೆ ಒಡೆಯ. ರಾಜಯೋಗ್ಯ ಮರ್ಯಾದೆಗಳಿಂದ ಎಲ್ಲೆಡೆ ಅಧಿಕಾರ ನಡೆಸುತ್ತ ಸ್ವತಂತ್ರನಾಗಿ ನೀನು ಇಲ್ಲಿ ಇರು ಎಂದು ಧರ್ಮರಾಜನಿಗೆ ಹೇಳಿದ (ವಿ.9.48) ಸಮಗ್ರ ಭೂಮಂಡಲ ಆಳಬಲ್ಲವನೆಂದು ಭೀಮನನ್ನು ಕೊಂಡಾಡಿದ (ವಿ.10.22) ಬೃಹನ್ನಳೆ ಯಾರ ತಡೆ ಇಲ್ಲದೆ ಎಲ್ಲೆಡೆ ಸಂಚಲಿಸಲಿ ಎಂದ (ವಿ. 11.21) ರಾಜನಂತೆ ಬೆಳೆಗುತ್ತಿರುವೆ ಎಂದು ನಕುಲನನ್ನೂ (ವಿ.12.14) ಹೊಗಳಿದ. ಸಮಸ್ತ ಭೂಮಂಡಲವನ್ನು ಆಳಬಲ್ಲವ ಎಂದು ಸಹದೇವನನ್ನು (ವಿ. 13.23) ಹೊಗಳಿ ಆದರದಿಂದಲೆ ಒಂದು ಲಕ್ಷ ಗೋಗಳ ಗೋಶಾಲೆಗೆ ಅಧ್ಯಕ್ಷನನ್ನಾಗಿ ಮಾಡಿದ. ಧರ್ಮರಾಜ ಜೂಜಿನಲ್ಲಿ ವಿರಾಟನಿಂದ ಹಣವನ್ನು ಗೆದ್ದು ತಮ್ಮಂದಿರಿಗೆ ಕೊಡುತ್ತಿದ್ದ. ಭೀಮ ಅಡಿಗೆ ಮಾಡಿ ಧರ್ಮರಾಜನಿಗೂ ತಮ್ಮಂದಿರಿಗೂ ಬಡಿಸಿ ಅವರೊಳಗಿನ ಹರಿಯನ್ನೇ ಆರಾಧಿಸುತ್ತಿದ್ದ. ಅರ್ಜುನನೂ ರಾಣಿಯಿಂದ ವಸ್ತ್ರಾಭರಣಾದಿಗಳನ್ನು ಬಹುಮಾನವಾಗಿ ಪಡೆದು ಸೋದರರಿಗೂ ದ್ರೌಪದಿಗೂ ನೀಡುತ್ತಿದ್ದ. ನಕುಲ ಸಹದೇವರೂ ತಾವು ಗಳಿಸಿದ್ದನ್ನು ಅಣ್ಣಂದಿರಿಗೆ ನೀಡುತ್ತಿದ್ದರು.

ಭೀಮನ ಅಡಿಗೆ

ಪರಪಾಕೋ ಗೃಹಸ್ಥಸ್ಯ ಕ್ಷತ್ರಿಯಸ್ಯ ವಿಶೇಷತಃ ।
ನ ಯೋಗ್ಯ ಇತಿ ಸೂದಸ್ಯ ಬಭ್ರೋ ವೇಷಂ ವೃಕೋದರಃ ॥ ೪ ॥

ಗೃಹಸ್ಥನಾದ ಕ್ಷತ್ರಿಯನಿಗೆ ವಿಶೇಷ ಕಾರಣವಿದ್ದಾಗ ಹೊರತು ಬೇರೆ ಸಮಯದಲ್ಲಿ ಪರಾನ್ನ ಭೋಜನ ಉಚಿತವಲ್ಲ ಎಂದು ಭೀಮ ಅಡಿಗೆಯವನ ವೇಷ ಧರಿಸಿದ.

ಭೀಮ ಅಡಿಗೆಯವನ ವೇಷ ತೊಟ್ಟು ತಾನು ಪಾಕ ಮಾಡಿದ ಅನ್ನವನ್ನೆ ತಾನು ಉಂಡ ಹೊರತು ಪರಾನ್ನ ಉಣಲಿಲ್ಲ. ಏಕೆಂದರೆ ಆತ ಕ್ಷತ್ರಿಯ,

ಗೃಹಸ್ಥ. ಗೃಹಸ್ಥನಾದ ಕ್ಷತ್ರಿಯನಿಗೆ ಪರಾನ್ನ ಭೋಜನ ಸಾಮಾನ್ಯವಾಗಿ ನಿಷಿದ್ಧ. ಸಾಮಾನ್ಯವಾಗಿ ಎಂದರೆ ಸರ್ವಥಾ ನಿಷಿದ್ಧವೇನಲ್ಲ ಎಂದರ್ಥ. ಸರ್ವಥಾ ನಿಷಿದ್ಧವೆ ಆದರೆ ಭೀಮ ಪಾಕ ಮಾಡಿದ್ದನ್ನು ವಿರಾಟ ರಾಜ ಹೇಗೆ ಉಂಡ? ಭೀಮ ಅವನಿಗೆ ಹೇಗೆ ಉಣಿಸಿದ? ಇದೇನೂ ವಿಶೇಷ ಕಾರಣವಿದ್ದ ಪ್ರಯುಕ್ತವಲ್ಲ.

ಕ್ಷತ್ರಿಯನಿಗೂ ಬ್ರಹ್ಮಚರ್ಯಾಶ್ರಮದಲ್ಲಿ ಪರಪಾಕ ನಿಷಿದ್ಧವಲ್ಲ. ಅದರಿಂದಲೆ ಪಾಂಡವರು ಏಕಚಕ್ರನಗರದಲ್ಲಿ ಭಿಕ್ಷಾನ್ನ ಉಂಡರು.

ಬ್ರಾಹ್ಮಣರಿಗೆ ಪರಪಾಕ ನಿಷಿದ್ಧವಲ್ಲ. ಶ್ರಾದ್ಧಾದಿಗಳಲ್ಲಿ ಪರಾನ್ನ ಭೋಜನ ಅವರಿಗೆ ವಿಹಿತವೆ ಆಗಿದೆ. ಅವರು ಉಣದಿದ್ದಲ್ಲಿ ಶ್ರಾದ್ಧಕರ್ಮವೆ ನಡೆಯದು.

ಗೃಹಸ್ಥನಾದ ಕ್ಷತ್ರಿಯನಿಗೂ ವಿಶೇಷ ಸಂಬಂಧವಿದ್ದಾಗ ಪರಾನ್ನ ನಿಷಿದ್ಧವಲ್ಲ. ಉತ್ತಮ ಬ್ರಾಹ್ಮಣರ ಮನೆಯಲ್ಲಿ ಕ್ಷತ್ರಿಯರು ಉಣಬಹುದು. ಏಕೆಂದರೆ ಅವರಿಗೆ ಬ್ರಾಹ್ಮಣರು ಗುರುಸ್ಥಾನದಲ್ಲಿರುವವರು. ಗುರುಶಿಷ್ಯರ ಸಂಬಂಧ ಇಲ್ಲಿ ಇದೆ.

ವಿಶೇಷ ಫಲವಿದ್ದಾಗಲೂ ಪರಾನ್ನ ನಿಷಿದ್ಧವಲ್ಲ. ಪುಣ್ಯಕ್ಷೇತ್ರಗಳಲ್ಲಿ ಶುದ್ಧವಾದ ವಿಷ್ಣುನೈವೇದ್ಯ ಸಿಗುತ್ತಿದ್ದರೆ ವಿಶೇಷ ಫಲವಿರುವುದರಿಂದ ಉಣಬಹುದು. ಅದರಿಂದ ಅರ್ಜುನ ತೀರ್ಥಯಾತ್ರೆಯಲ್ಲಿ ರೈವತಕಗಿರಿಯಲ್ಲಿ ಯಾದವರು ನೀಡಿದ ಅನ್ನವನ್ನು ಉಂಡ.

ವಿಶೇಷವಿಧಿಗೆ ಅನುಗುಣವಾಗಿದ್ದಾಗಲೂ ಪರಾನ್ನ ನಿಷಿದ್ಧವಲ್ಲ. ಶೂದ್ರನಿಗೆ ಮೇಲಿನ ವರ್ಣದವರ ಮನೆಗಳಲ್ಲಿ ಅಡಿಗೆ ಮಾಡಲು ಹಾರೀತ ಸ್ಮೃತಿಯಲ್ಲಿ ವಿಶೇಷವಿಧಿ ಇದೆ-

ವರ್ಣತ್ರಯಸ್ಯ ಶುಶ್ರೂಷಾಂ ಕುರ್ಯಾ ಚ್ಛೂದ್ರಃ ಪ್ರಯತ್ನತಃ।
ಪಾಕಯಜ್ಞವಿಧಾನೇನ ಯಜೇದ್ದೇವಮತಂದ್ರಿತಃ॥

'ಮೂರು ವರ್ಣದವರ ಮನೆಗಳಲ್ಲಿ ಶೂದ್ರ ಆಲಸ್ಯ ತೊರೆದು ಪ್ರಯತ್ನದಿಂದ ಸೇವೆ ಮಾಡುತ್ತ ಯಜ್ಞವೆಂಬ ಭಾವನೆಯಿಂದ ಅಡಿಗೆ ಮಾಡಿ ಭಗವಂತನನ್ನು ಆರಾಧಿಸಬೇಕು' ಈ ವಿಧಿಗೆ ಅನುಗುಣವಾಗಿ ಸಚ್ಛೂದ್ರ ಬೇಯಿಸಿದ ಅನ್ನವನ್ನು ಗೃಹಸ್ಥನಾದ ಕ್ಷತ್ರಿಯ ನಿರಾಕರಿಸಬೇಕಾಗಿಲ್ಲ. ಇಲ್ಲದಿದ್ದರೆ ಭೀಮ ಶೂದ್ರವೇಷ ಧರಿಸಿದಾಗ ಅವನ ಅಡಿಗೆಯನ್ನು ವಿರಾಟರಾಜ ಹೇಗೆ ಸ್ವೀಕರಿಸಿದ?[1] -ವಾದಿರಾಜೀಯ

1. ವಿಶೇಷತ ಇತಿ ಲ್ಯಬ್‌ಲೋಪನಿಮಿತ್ತಾ ಪಂಚಮೀ। ಗೃಹಸ್ಥಾಶ್ರಮಂ ಪ್ರಾಪ್ತಸ್ಯ ಕ್ಷತ್ರಿಯಸ್ಯ ವಿಶೇಷತಃ ಸಂಬಂಧ ವಿಶೇಷಂ ಫಲವಿಶೇಷಂ ವಾ ವಿಹಾಯ ಪರಪಾಕೋ ಯೋಗ್ಯೋ ನ। ಸಂಬಂಧ ವಿಶೇಷೇ

ವೈದಿಕವ್ಯವಹಾರೇಷು ಜ್ಞಾನಾಧಿಕ್ಯಪ್ರಸಿದ್ಧಿತಃ।
ಜಾನೀಯುರ್ಭೀಮ ಇತ್ಯೇವ ಶೂದ್ರವೇಷಸ್ತತೋಽಭವತ್ ॥೫॥

ವೈದಿಕ ವ್ಯವಹಾರಗಳಲ್ಲಿ ಜ್ಞಾನದ ಹೆಚ್ಚಳ ಎದ್ದು ಕಾಣುವುದರಿಂದ ಈತ ಭೀಮ ಎಂದು ಜನರು ತಿಳಿಯುವ ಸಂಭವವಿದ್ದಿತು. ಅದರಿಂದ ಶೂದ್ರವೇಷ ಧರಿಸಿದ.

ಭೀಮ ಬ್ರಾಹ್ಮಣ ವೇಷ ಧರಿಸಿದ್ದರೆ ವೈದಿಕ ವ್ಯವಹಾರಗಳಲ್ಲಿ ಅವನ ಜ್ಞಾನದ ಹೆಚ್ಚಳ ಎದ್ದು ಕಾಣುತ್ತಿತ್ತು. ಅದರಿಂದ ಭೀಮನೆ ಬ್ರಾಹ್ಮಣ ವೇಷದಲ್ಲಿದ್ದಾನೆ ಎಂದು ಕೌರವರಿಗೆ ತಿಳಿಯುತ್ತಿತ್ತು. ಶೂದ್ರವೇಷದಲ್ಲಿ ವೈದಿಕ ವ್ಯವಹಾರವಿಲ್ಲದ್ದರಿಂದ ಜ್ಞಾನ ಪ್ರಕಟವಾಗುವುದಿಲ್ಲ ಎಂದು ಭೀಮ ಶೂದ್ರನಂತೆ ವೇಷ ಧರಿಸಿದ.

ಸ್ವೀಯಂ ವೇದವಿದಾಂ ಸರ್ವಂ ದೇವೇಶಾನಾಂ ಚ ಕಿಂ ಪುನಃ।
ಅತಸ್ತೇಽನ್ಯಾಶ್ರಯಂ ನೈವ ಚಕ್ರುಃ ಸ್ವಬಲಸಂಶ್ರಯಾತ್ ॥೬॥

ವೇದವೇತ್ತರಾದ ಮಾನವರಿಗೂ ಋಷಿಗಳಿಗೂ ತಮಗಿಂತ ಕೆಳಗಿನವರ ಎಲ್ಲ ವಸ್ತೂ ತಮ್ಮ ಸೊತ್ತೇ ಆಗುವುದೆಂದಮೇಲೆ ದೇವೋತ್ತಮರಿಗೆ ಏನು ಹೇಳಬೇಕು? ಅದರಿಂದಲೂ ತಮ್ಮ ಬಲವನ್ನೇ ಆಶ್ರಯಿಸಿದ್ದ ಪ್ರಯುಕ್ತವೂ ಪಾಂಡವರು ಪರಾಶ್ರಯವನ್ನು ಮಾಡಲೆ ಇಲ್ಲ.

ಜ್ಞಾನ, ಮೋಕ್ಷ, ಮೋಕ್ಷದಲ್ಲಿ ಆನಂದ ಎಲ್ಲವೂ ಕಿರಿಯರಿಗೆ ಹಿರಿಯರ ಅನುಗ್ರಹದಿಂದಲೇ ಹೊರತು ಬೇರೆ ರೀತಿಯಿಂದಲ್ಲ ಎಂದಿರುವುದರಿಂದ ಕಿರಿಯರು ಹಿರಿಯರಿಗೆ ಶಿಷ್ಯರು. ಶಿಷ್ಯರ ಸಂಪತ್ತೆಲ್ಲವೂ ಗುರುವಿನ ಸೊತ್ತು. ಗುರು ಎಂದಾದರೂ ದ್ರೋಣನಂತೆ ಶಿಷ್ಯನನ್ನು ಬೇಡಿದರೆ ಅವನ ಆಯಾಚಿತ ವೃತ್ತಿ ಕೆಡುವುದಿಲ್ಲ. ಶಿಷ್ಯನ ಮನೆಯಲ್ಲಿ ವಾಸ ಮಾಡಿದರೆ ಪರಾನ್ನ ಉಂಡ ದೋಷವೂ ಬರುವುದಿಲ್ಲ. ಕೇವಲ ಅನುಗ್ರಹ ಬಲದಿಂದಲೆ ಮಾನವರಲ್ಲಿ ಹೀಗೆ ಇರುವುದಾದರೆ ದೇವತೆಗಳ ಬಗ್ಗೆ ಏನು ಹೇಳಬೇಕು? ದೇವತೆಗಳು ಮಾನವರಿಗೆ ಜ್ಞಾನ ನೀಡಿ, ಪ್ರವೃತ್ತಿಯನ್ನು ಪ್ರೇರಿಸಿ, ಶಾಸ್ತ್ರರಚನೆ ಮಾಡಿ, ಸಂಪ್ರದಾಯ ಪ್ರವರ್ತನೆ ಮಾಡುವ

ಸತಿ ಉತ್ತಮ ಬ್ರಾಹ್ಮಣ ಗೃಹೇ ಫಲವಿಶೇಷೇ ಚ ಸತಿ ಪರಪಾಕೋ ದೋಷಾಯ ನ। ಕ್ಷತ್ರಿಯಾಣಾಂ ವಾ ಬ್ರಹ್ಮಚರ್ಯಾಶ್ರಮೇ ಪರಪಾಕೋ ನ ದೋಷಾಯ। ಅತ ಏವೈಕಚಕ್ರನಗರೇ ಭಿಕ್ಷಾಟನಂ ಕೃತಂ। ಬ್ರಾಹ್ಮಣಾನಾಂ ತು ಶ್ರಾದ್ಧಾದಿಷು ಭೋಜನಾನಾಂ ಸ್ವವಿಹಿತತ್ವಾತ್ ನ ತೇಷಾಮಿಹ ಗೋಷ್ಠೀ। ತಥಾಸತಿ ವಿಪ್ರಸ್ಯ ಕ್ಷತ್ರಿಯಸ್ಯೇತ್ಯವಕ್ಷ್ಯತ್। ಅಥವಾ ವಿಶೇಷತಃ ವಿಧಿವಿಶೇಷಂ ವಿನಾ ಯೋಗ್ಯೋ ನ। ಅನ್ಯಥಾ ಶೂದ್ರವೇಷಸ್ತತೋಽ ಭವದಿತಿ ವಕ್ಷ್ಯಮಾಣತ್ವಾತ್ ಶೂದ್ರ ಕೃತಪಾಕಂ ಕಥಂ ಸ್ವೀಕುರ್ಯುಃ? ಯದ್ವಾ ವಿಶೇಷತಃ ಪ್ರಾಯಶಃ । ಅನ್ಯಥಾ ವಿರಾಟೋಽಪ್ಯೇತತ್ ಕೃತಂ ಪಾಕಂ ಕಥಮಶ್ನೀಯಾತ್? ಅತಃ ಸಾಮಾನ್ಯ ಧರ್ಮೋಽಯಮಿತಿ ಜ್ಞೇಯಂ —ವಾದಿರಾಜೀಯ

ಗುರುಗಳು. ಅನ್ನ ನೀಡುವ ಪ್ರಭುಗಳು. ಜನ್ಮ ನೀಡುವ ತಾಯಿತಂದೆಗಳು. ಎಲ್ಲ ಅಸ್ತಿತ್ವಕ್ಕೇ ಕಾರಣ ಭೂತರು. ಅಂಥ ದೇವತೆಗಳು ಪಾಂಡವರು. ವೇದವೇತ್ತರಾಗಿದ್ದರು. ತಮ್ಮ ಬಲವನ್ನೇ ಅವಲಂಬಿಸಿದ್ದವರು. ಅದರಿಂದ ಅನ್ಯರ ಆಶ್ರಯ ಪಡೆಯಲೆ ಇಲ್ಲ. ಬಲಉಳ್ಳವರಿಗೆ ಇನ್ನೊಬ್ಬರ ಆಶ್ರಯ ಪಡೆಯುವುದೆಂದರೆ ಮರಣಕ್ಕೆ ಸಮಾನವಾಗಿರುತ್ತದೆ.

ಗೀತಾ ತಾತ್ಪರ್ಯದಲ್ಲಿ ಹೇಳಿದೆ - ಬಲಿಷ್ಠನಾದ ಕ್ಷತ್ರಿಯನಿಗೂ ಜ್ಞಾನಿಯಾದ ಬ್ರಾಹ್ಮಣನಿಗೂ ಮೂಲೋಕದಲ್ಲಿರುವುದೆಲ್ಲವೂ ತನ್ನ ಸೊತ್ತೇ ಎನಿಸುತ್ತದೆ. ನ್ಯಾಯದೀಪದಲ್ಲಿಯೂ ಹೇಳಿದೆ- ಎಲ್ಲರೂ ಅವರಿಗೆ ಅಧೀನರಾದ್ದರಿಂದ ಅವರಿಗೆ ಪರಾಶ್ರಯವೆಂಬುದೆ ಇಲ್ಲ.

ಮಾಘಮಾಹಾತ್ಮ್ಯದಲ್ಲಿ ಹೇಳಿದೆ- 'ಎಲ್ಲರ ಸಂಪಾದನೆಯಲ್ಲಿ ಆರನೆ ಒಂದಂಶ ವೇದವೇತ್ತರ ಸೊತ್ತು' ಅದರಿಂದ ಎಲ್ಲವೂ ವೇದವೇತ್ತರ ಸೊತ್ತೆಂದರೆ ಎಲ್ಲದರಲ್ಲಿಯೂ ಆರನೆ ಒಂದಂಶ ವೇದವೇತ್ತರ ಸೊತ್ತೆಂದರ್ಥ ಎಂದೂ ಕೆಲವರ ಅಭಿಪ್ರಾಯ ವಿದೆ.[1]

ಶಾಪಾದೇವಾರ್ಜುನಃ ಷಂಢವೇಷೋಽಭೂನ್ನಕುಲಸ್ತಥಾ ।
ಕ್ಷತ್ರಿಯಾನಂತರತ್ವಾತ್ತು ಸೂತಜಾತೇಸ್ತಥಾಽಭವತ್ ॥೭॥

ಊರ್ವಶಿಯ ಶಾಪದಿಂದಲೆ ಅರ್ಜುನ ನಪುಂಸಕ ವೇಷದವನಾದ. ಕ್ಷತ್ರಿಯ ಜಾತಿಗೆ ಹತ್ತಿರದ ಜಾತಿಯವನು ಸೂತನಾದ್ದರಿಂದ ನಕುಲ ಸೂತ ಜಾತಿಯವನಾದ.

'ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಜನಿಸಿದವ ಸೂತನೆನಿಸುತ್ತಾನೆ.

---

1. ಮೋಕ್ಷೋ ಜ್ಞಾನಂ ಚ ಕ್ರಮಶೋ ಮುಕ್ತಿಗೋ ಭೋಗ ಏವ ಚ। ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇದಿತಿ ವಚನಾತ್ ನೀಚಾಃ ಸ್ವೋತ್ತಮ ಪ್ರಸಾದಲಬ್ಧ ಜ್ಞಾನತ್ವಾತ್ ತಚ್ಛಿಷ್ಯಾಃ। ಶಿಷ್ಯಾರ್ಥಃ ಸ್ವೀಯ ಏವೇತಿ ಕದಾಚಿತ್ ತಂ ಪ್ರತಿ ದ್ರೋಣಾದಿವದ್ ಯಾಂಚಾಯಾಂ ತದ್ಗೃಹವಾಸಾದೌ ಚ ನಾಯಾಚಿತವೃತ್ತಿಚ್ಛೇದಃ। ಪರಾನ್ನ ಭೋಜನ ದೋಷವಾನ್ನೇತಿ ಭಾವಃ। ಯದಿ ಪ್ರಸಾದ ಮಾತ್ರೇಣ ಸ್ವಾಧಮ ಸಂಬಂಧಿ ಸ್ವೀಯಂ ಭವತಿ ಮನುಷ್ಯಾಣಾಂ, ತದಾ ಜ್ಞಾನ ಪ್ರವೃತ್ತಿ ಪ್ರೇರಕತ್ವೇನ ಶಾಸ್ತ್ರಕರ್ತೃತ್ವೇನ ಸಂಪ್ರದಾಯ ಪ್ರವರ್ತಕತ್ವೇನ ಚ ಗುರೂಣಾಂ ಅನ್ನದಾತೃತ್ವೇನ ಸ್ವಾಮಿನಾಂ ಜನಕತ್ವೇನ ಮಾತಾ ಪಿತೃಣಾಂ ಸಕಲ ಸತ್ತಾ ಪ್ರದಾತೃಣಾಂ ದೇವೋತ್ತಮಾನಾಂ ಸರ್ವಂ ಸ್ವೀಯಂ ಭವತೀತಿ ಕಿಮು ವಾಚ್ಯಂ? ಅತೋ ದೇವೇಶತ್ವಾತ್ ವೇದವಿತ್ತ್ವಾತ್ ಸ್ವಬಲ ಸಂಶ್ರಯಾಚ್ಚ ನಾನ್ಯಾಶ್ರಯಂ ಚಕ್ರುಃ। ಬಲವತಾಮನ್ಯಾಶ್ರಯಣಸ್ಯ ಮರಣ ತುಲ್ಯತ್ವಾದಿತಿ ಭಾವಃ। ತದುಕ್ತಂ ಗೀತಾ ತಾತ್ಪರ್ಯ ನಿರ್ಣಯೇ- ಬಾಹ್ವೋರ್ಬಲೋಽಧಿಕೋ ಯಶ್ಚ ಕ್ಷತ್ರಿಯೋ ವಿದ್ಯಯಾಧಿಕಃ। ವಿಪ್ರೋ ಭಾಗವತಶ್ಚೈತೌ ಸೇಶಾ ಲೋಕಾಸ್ತಯೋರಿಮೇ ಇತಿ। ನ್ಯಾಯದೀಪೇ ಚ- ಸರ್ವಸ್ಯ ತದಧೀನತ್ವಾತ್ ನ ಪರೋಪಜೀವನಮಿತಿ ಭಾವಃ ಇತಿ। ಕೇಚಿತ್ತು ಆರ್ಜಿತಾನಾಂ ತು ಷಷ್ಠಾಂಶೋ ವಿಪ್ರಾಣಾಂ ಸ್ವೀಯಮುಚ್ಯತ ಇತಿ ಮಾಘ ಮಾಹಾತ್ಮ್ಯವಚನಾತ್ ತಂಡುಲ ಮಾಷಾದಿಕಂ ಸರ್ವಂ ಷಷ್ಠಾಂಶೇನ ಸ್ವೀಯಮಿತ್ಯರ್ಥಃ। ಅನ್ಯಥಾ ಜ್ಞಾನಿನಾಂ ಪರದ್ರವ್ಯಾಪಹಾರದೋಷಃ ಸ್ಯಾದಿತ್ಯಾಹುಃ। -ತಾಮ್ರಪರ್ಣೀಯ

ಪ್ರತಿಲೋಮ ಜಾತಿಗಳಲ್ಲಿ ಸೂತನೊಬ್ಬನೆ ದ್ವಿಜನೆನಿಸುತ್ತಾನೆ. ಅವನಿಗೆ ರಥಕಾರನೆಂದೂ ಹೆಸರು. ದ್ವಿಜರ ಎಲ್ಲ ಯಾಗಾದಿ ಕರ್ಮಗಳು ಅವನಿಗೆ ವಿಹಿತವಾಗಿವೆ. ಕ್ಷತ್ರಿಯನಿಗಿಂತ ಈತ ಕಡಿಮೆ, ವೈಶ್ಯನಿಗಿಂತ ಮೇಲು, ಅವನೊಂದಿಗೆ ರಾಜರು ವಿವಾಹ ಸಂಬಂಧ ಮಾಡುತ್ತಾರೆ. ಆದರೆ ಸೂತ 'ರಾಜ' ನೆನಿಸುವುದಿಲ್ಲ'. (ವಿರಾಟ 21.9-11) ಎಂದು ಮಹಾಭಾರತ ಹೇಳುವಂತೆ ಕ್ಷತ್ರಿಯ ಜಾತಿಗೆ ಹತ್ತಿರದ ಕೆಳಜಾತಿಯವನು ಸೂತ. ಕ್ಷತ್ರಿಯನಾದ ವಿರಾಟನಿಗೆ ಲೋಕದೃಷ್ಟಿಯಿಂದ ಸೇವೆ ಮಾಡಲು ಬಂದ ನಕುಲ ಕ್ಷತ್ರಿಯನಿಗಿಂತ ಕೆಳಗೆ ಹತ್ತಿರದ ಜಾತಿಯಾದ ಸೂತನ ವೇಷವನ್ನೆ ಧರಿಸಿದ. ಭೀಮಾರ್ಜುನರೂ ಯದ್ಯಪಿ ಹಾಗೇ ಕ್ಷತ್ರಿಯನ ಸೇವೆಗೇ ಬಂದವರು. ಆದರೂ ಹಿಂದೆ ಹೇಳಿದಂತೆ ವಿಶೇಷ ಕಾರಣಗಳಿಂದ ಅವರು ಶೂದ್ರವೇಷ ನಪುಂಸಕವೇಷಗಳನ್ನು ಧರಿಸಬೇಕಾಯಿತು. ನಕುಲನಿಗೆ ಅಂಥ ವಿಶೇಷ ಕಾರಣವಿರಲಿಲ್ಲ.[1]

ಯುಧಿಷ್ಠಿರನ ಜೂಜಾಟ

ಸೂತಸ್ಯಾನಂತರತ್ವಾತ್ತು ವೈಶ್ಯಜಾತೇಸ್ತಥಾಽಭವತ್ ।
ಸಹದೇವೋ ವೈಶ್ಯಜಾತಿಗೋ೯ಪಾಲಸ್ತೇಷು ಚೋತ್ತಮಃ ।
ತತೋ ಗೋಪಾಲತಾಮಾಪ ಯತಿಃ ಪೂಜ್ಯೋಽಖಿಲೈರ್ಯತಃ ॥೮॥
ಯತಿರಾಸೀದ್ ಧರ್ಮಜೋಽತಃ ಸೋಽಭ್ಯಾಸಾರ್ಥಂ ಸದೈವ ಚ ।
ಅಕ್ಷಾಸಕ್ತೋಽಭವತ್ ಪಶ್ಚಾದ್ ದರ್ಶಯಿಷ್ಯನ್ ಸ್ವಶಿಷ್ಟತಾಮ್ ॥೯॥

ಸೂತ ಜಾತಿಯ ಅನಂತರದವನು ವೈಶ್ಯ ಜಾತಿಯಾದ್ದರಿಂದ ಸಹದೇವ ವೈಶ್ಯನಾದ. ವೈಶ್ಯರಲ್ಲಿಯೂ ಗೋಪಾಲಕ ಉತ್ತಮನಾದ್ದರಿಂದ ಗೋಪಾಲಕನಾದ. ಯತಿ ಎಲ್ಲ ವರ್ಣ ಎಲ್ಲ ಆಶ್ರಮದವರಿಗೂ ಪೂಜ್ಯನಾಗಿರುವುದರಿಂದ ಧರ್ಮರಾಜ ಯತಿಯಾದ. ಜೂಜಾಟದಲ್ಲಿ ತನ್ನ ಅದ್ವಿತೀಯತ್ವವನ್ನು ತೋರುವುದಕ್ಕಾಗಿ ತನ್ನ ಅಭ್ಯಾಸ ಕೌಶಲವನ್ನು ಮೆರೆಸಬೇಕೆಂದು ಸದಾ ಜೂಜಿನಲ್ಲಿ ನಿರತನಾದ.

---

1. ಬ್ರಾಹ್ಮಣ್ಯಾಂ ಕ್ಷತ್ರಿಯಾಜ್ಜಾತಃ ಸೂತೋ ಭವತಿ ಪಾರ್ಥಿವ। ಪ್ರಾತಿಲೋಮ್ಯೇನ ಜಾತಾನಾಂ ಸ ಹ್ಯೇಕೋ ದ್ವಿಜ ಏವತು। ರಥಕಾರಮಿತೀಮಂ ಹಿ ಕ್ರಿಯಾಯುಕ್ತಂ ದ್ವಿಜನ್ಮನಾಂ। ಕ್ಷತ್ರಿಯಾದವರಂ ವೈಶ್ಯಾದ್ ವಿಶಿಷ್ಟಮಿತಿ ಚಕ್ಷತೇ। ಸಹ ಸೂತೇನ ಸಂಬಂಧಃ ಕೃತಪೂರ್ವೋ ನರೇಶ್ವರೈಃ। ತಥಾಪಿ ತೈರ್ಮಹೀಪಾಲ ರಾಜಶಬ್ದೋ ನ ಲಭ್ಯತೇ। ಇತಿ ವಿರಾಟಪರ್ವಣಿ। -ಪ್ರಮಾಣ ಸಂಗ್ರಹ
ಭೀಮಾರ್ಜುನೌ ನಿಮಿತ್ತಾತ್ ನೀಚವೇಷಧಾರಿಣೌ ಬಭೂವತುಃ। ನಕುಲಃ ಸೂತಜಾತೇಃ ಕ್ಷತ್ರಿಯಾನಂತರತ್ವಾತ್ ಸೂತಜಾತಿರಭವತ್। ನಕುಲಃ ಸ್ವಸ್ಯ ಕ್ಷತ್ರಿಯ ಸೇವಾಧಿಕಾರಾರ್ಥಂ ಸ್ವಜಾತೇಃ ಕಂಚಿದೂನ ಜಾತಿವೇಷೋಽ ಭೂದಿತಿ ಭಾವಃ। -ಜನಾರ್ದನೀಯ

ಯುಧಿಷ್ಠಿರ ಲೋಕದೃಷ್ಟಿಯಿಂದಲೂ ವಿರಾಟರಾಜನ ಸೇವೆ ಮಾಡಲಿಲ್ಲ. ಅವನಿಗೆ ಗುರುಸ್ಥಾನದಲ್ಲಿದ್ದ. ಅದರಿಂದ ಅವನು ಸರ್ವಪೂಜ್ಯನಾದ ಬ್ರಾಹ್ಮಣ ಯತಿಯಾದ. ಸಹದೇವ ವಿರಾಟರಾಜನ ಸೇವೆ ಮಾಡಲು ತನ್ನ ಅಣ್ಣನಾದ, ಸೂತಜಾತಿಯ ನಕುಲನಿಗಿಂತ ಕೆಳಗಿನ ವೈಶ್ಯ ಜಾತಿಯವನಾದ. ವೈಶ್ಯರಲ್ಲಿಯೂ ಗೋಪಾಲಕ ಶ್ರೇಷ್ಠನಾದ್ದರಿಂದ ಗೋಪಾಲಕನೆನಿಸಿದ.

ಧರ್ಮರಾಜ ಯತಿಯಾಗಿಯೂ ಜೂಜಿನ ಚಟವನ್ನು ಬಿಡಲಿಲ್ಲ ಎಂದು ತಪ್ಪು ತಿಳಿಯಬಾರದು. ಮುಂದೆ ಅಜ್ಞಾತವಾಸದ ಕೊನೆಯಲ್ಲಿ ವಿರಾಟನಿಗೂ ಅವನ ಪ್ರಜೆಗಳಿಗೂ 'ತನಗೆ ಜೂಜಾಟದಲ್ಲಿ ಒಳ್ಳೆಯ ಪರಿಣತಿಯೆ ಇದ್ದಿತು. ಶಕುನಿ ಕೇವಲ ಮೋಸದಿಂದ ತನ್ನನ್ನು ಸೋಲಿಸಿದ' ಎಂದು ಮನವರಿಕೆ ಮಾಡಿಸುವ ಉದ್ದೇಶದಿಂದ ಜೂಜಾಡುತ್ತ ವಿರಾಟನನ್ನು ಸೋಲಿಸುತ್ತಿದ್ದ. ಅವನು ವಸ್ತುತಃ ಯತಿಯಾಗದಿದ್ದುದರಿಂದ ಜೂಜು ನಿಷಿದ್ಧವಲ್ಲ. ಜೂಜಾಡಿ ಎಲ್ಲ ಕಳೆದುಕೊಂಡು ತಲೆ ಬೋಳಿಸಿಕೊಂಡೆನೆಂದೇ ಹೇಳಿಕೊಂಡು ಬಂದಿದ್ದವನು ಆ ಚಟವನ್ನು ಬಿಡಲಾರೆ ಎಂದೂ ತೋರಿಕೊಂಡ. ಇದು ವಾದಿರಾಜೀಯದ ಅಭಿಪ್ರಾಯ.[1]

ವನವಾಸ ಕಳೆದಾಗ ಇನ್ನೊಮ್ಮೆ ಶಕುನಿ ಜೂಜಿಗೆ ಕರೆದರೆ ಆಗ ಅವನನ್ನು ಸೋಲಿಸಲು ಹೆಚ್ಚು ಪರಿಣತಿಯನ್ನು ಪಡೆಯುವ ಉದ್ದೇಶವೂ ಇದ್ದಿತೆಂದು ಕನ್ನಡ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಕಾಣುತ್ತದೆ. ಪ್ರಮಾಣ ಸಂಗ್ರಹಕಾರರೂ ಹಾಗೇ ಅಭಿಪ್ರಾಯಪಡುತ್ತಾರೆ. ಮಹಾಭಾರತ (ವನ 77ನೇ ಅಧ್ಯಾಯ) ದಲ್ಲಿ ಬೃಹದಶ್ವನಿಂದ ಜೂಜನ್ನು ವಿಶೇಷವಾಗಿ ಕಲಿತು ಧರ್ಮರಾಜ ತಾನು ಇನ್ನು ಯಾರ ಮೋಸಕ್ಕೂ ಬಲಿಯಾಗೆನೆಂದು ಧೈರ್ಯತಾಳುತ್ತಾನೆ. ಬೃಹದಶ್ವ ಹೇಳಿಕೊಟ್ಟುದನ್ನು ಮರೆಯಬಾರದೆಂದು ಈಗ ವಿರಾಟನ ಮುಂದೆ ಅಭ್ಯಾಸ ಮಾಡುತ್ತಾನೆ. ಶಕುನಿಯೊಡನೆ ಜೂಜಾಡುವಾಗ ಅವನಿಗೆ ಹೆಚ್ಚು ಪರಿಣತಿ ಇರಲಿಲ್ಲ. ಅದನ್ನರಿತೇ ಶಕುನಿ ಅವನನ್ನು ಜೂಜಿಗೆ ಕರೆದಿದ್ದ.[2] (ಉದ್ಯೋಗ 6.6)

---

1. ಅಭ್ಯಾಸಾರ್ಥಂ ಸ್ವಾಭ್ಯಾಸ ಕೌಶಲ ಪ್ರದರ್ಶನಾರ್ಥಂ ಅಕ್ಷಾಸಕ್ತೋಽಭವದಿತಿ ಯೋಜನಾ। ಅಕ್ಷ ವಿದ್ಯಾಯಾಮಹಮತೀವ ಕುಶಲಃ। ಶಕುನಿನಾ ಧರ್ಮನೈವ ಜಿತಮಿತಿ ಅಜ್ಞಾತವಾಸಾನಂತರಂ ವಿರಾಟಂ ಪ್ರತಿ ದರ್ಶಯಿತುಮಿತಿ ಭಾವಃ। –ವಾದಿರಾಜೀಯ

2. ಅನೇನ ಶಕುನಿನಾ ಪ್ರಥಮತೋ ದೇವನ ಸಮಯೇ ಧರ್ಮರಾಜೋ ದ್ಯೂತಂ ಸಮ್ಯಗ್ ನಾಜಾನಾದಿತಿ ಸೂಚಿತಂ। ಅತ ಏವಾರಣ್ಯಪರ್ವಣಿ– 'ಭಗವನ್ನಕ್ಷ ಹೃದಯಂ ಜ್ಞಾತು ಮಿಚ್ಛಾಮಿ ತತ್ವತಃ।' ಇತಿ ಬೃಹದಶ್ವ

ಭೀಮಸೇನಸಧರ್ಮಾರ್ಥಂ ಶೂದ್ರಾ ಸೈರಂಧ್ರಿಕಾಽಭವತ್ ।
ದ್ರೌಪದೀ ಭರ್ತೃಸಾಧರ್ಮ್ಯಂ ಸ್ತ್ರೀಣಾಂ ಧರ್ಮೋ ಯತಃ ಸದಾ ॥೧೦॥

ದ್ರೌಪದಿ ಭೀಮಸೇನನಿಗೆ ಸಮಾನಧರ್ಮಿಣಿ ಎನಿಸುವ ಉದ್ದೇಶದಿಂದ ಶೂದ್ರ ವೇಷದ ಸೈರಂಧ್ರಿಯಾದಳು. ಏಕೆಂದರೆ ಪತಿಗೆ ಸಮಾನಧರ್ಮಿಣಿಯೆನಿಸುವುದೆ ಸ್ತ್ರೀಯರಿಗೆ ಸದಾ ಧರ್ಮವಾಗಿದೆ.

ಯುಧಿಷ್ಠಿರ ಮುಂತಾದವರು ಬ್ರಾಹ್ಮಣ ಸೂತ ವೈಶ್ಯ ವರ್ಣಗಳ ವೇಷ ಧರಿಸಿದರು. ದ್ರೌಪದಿ ಅವರ ವೇಷವನ್ನು ಅನುಕರಣೆ ಮಾಡದೆ ಭೀಮನ ಶೂದ್ರ ವೇಷವನ್ನೇ ಅನುಕರಿಸಲು ಕಾರಣ ದ್ರೌಪದಿ ಸ್ವರೂಪದಲ್ಲಿ ಭಾರತಿ, ಭೀಮನ ಪತ್ನಿ. ಶಚಿ ಶ್ಯಾಮಲೆ ಉಷೆಯರ ಆವೇಶ ಮಾತ್ರವಿದ್ದುದರಿಂದ ಅರ್ಜುನ ಮುಂತಾದವರಿಗೂ ಪತ್ನಿಯಾದಳಷ್ಟೆ, ಕ್ರಮೇಣ ಆವೇಶವೂ ಕಡಿಮೆಯಾಗಿ ದ್ರೌಪದಿ ಭೀಮನ ಬಳಿಯಲ್ಲಿಯೆ ಪತ್ನಿಯಾಗಿ ಇರುವಂತಾಯಿತು. ಆದರಿಂದ ಪತಿಯಾದ ಭೀಮ ಶೂದ್ರ ವೇಷ ಧರಿಸಿದಾಗ ಪತ್ನಿ ತಾನು ಮೇಲಿನ ವರ್ಣದ ವೇಷ ಧರಿಸುವುದು ಧರ್ಮವಲ್ಲವೆಂದು ಶೂದ್ರ ವೇಷದ ಸೈರಂಧ್ರಿಯೆ ಆದಳು.

ಮಲ್ಲ ಯುದ್ಧ

ಅಥಾಜಗಾಮ ಮಲ್ಲಕಃ ಸಮಸ್ತಭೂಮಿಮಂಡಲೇ ।
ವರೇಣ ಯೋಽಜಿತೋ ಜಯೀ ಶಿವಸ್ಯ ಸಂಜಗರ್ಜ ಚ ॥೧೧॥

ಬಳಿಕ ಶಿವನ ವರ ಬಲದಿಂದ ಸಮಸ್ತ ಭೂಮಂಡಲದಲ್ಲಿ ಯಾರಿಗೂ ಸೋಲದೆ ವಿಜಯಿಯಾಗುತ್ತಿದ್ದ ದುಷ್ಟಮಲ್ಲನೊಬ್ಬ ಬಂದ. ಸಿಂಹನಾದಗೈದ.

ಅಜ್ಞಾತವಾಸದ ಮೂರು ತಿಂಗಳುಗಳು ಕಳೆದವು. ಒಂದು ದಿನ ಊರಿನ ಶಿವಾಲಯದಲ್ಲಿ ಮಹೋತ್ಸವ. ಅಲ್ಲಿಗೆ ದೇಶವಿದೇಶಗಳ ಮಹಾಮಲ್ಲರು ಪಂದ್ಯಕ್ಕೆ ಬಂದು ಸೇರಿದರು. ಎಲ್ಲರೂ ಕಾಲಕೇಯಾಸುರರಂಥ ದೈತ್ಯ ಶರೀರಿಗಳು. ಅವರಲ್ಲಿಯೂ ಒಬ್ಬ ಮಲ್ಲ- ಜೀಮೂತ ಎಂದು ಅವನ ಹೆಸರು - ಮಹಾಭಯಂಕರನಾಗಿದ್ದ. ಅವನು ಮುಂದೆ ಬಂದು ಸಿಂಹನಾದಗೈದರೆ

ಪ್ರಾರ್ಥನ ಪೂರ್ವಕಂ -'ತತೋಽಕ್ಷಹೃದಯಂ ಪ್ರಾದಾತ್ ಪಾಂಡವಾಯ ಮಹಾತ್ಮನೇ। ಲಬ್ಧ್ವಾ ಚ ಪಾಂಡವೋ ರಾಜಾ ವಿಶೋಕಃ ಸಮಪದ್ಯತ।' ಇತಿ ದ್ಯೂತೇ ಪರಾಜಯಾನಂತರಂ ಅಭ್ಯಾಸಕಥನಾತ್। ಅನ್ಯಥಾಽಭ್ಯಾಸ ಪದ ವೈಯರ್ಥ್ಯಾಪತ್ತೇಃ। ಲೋಕೇ ತಾವದಭ್ಯಾಸೇಽಜ್ಞಾತಸ್ಯೈವಾಭ್ಯಾಸ ದರ್ಶನಾತ್। 'ಶಕುನಿರ್ಬುದ್ಧಿಪೂರ್ವಂ ಹಿ ಕುಂತೀಪುತ್ರಂ ಸಮಾಹ್ವಯತ್। ಅನಕ್ಷಜ್ಞಂ ಮತಾಕ್ಷಃ ಸನ್ ಕ್ಷತ್ರವೃತ್ತೇ ಸ್ಥಿತಂ ಶುಚಿಂ' ಇತ್ಯುದ್ಯೋಗ ಪರ್ವಣಿ ಶಕುನಿನಾ ಸಾಕಂ ದೇವನ ಸಮಯೇ ಅಕ್ಷಾನಜ್ಞತ್ವೋಕ್ತೇಃ।
-ಪ್ರಮಾಣ ಸಂಗ್ರಹಃ

ಎಲ್ಲ ಮಲ್ಲರೂ ಭಯದಿಂದ ಕಂಗೆಟ್ಟು ನೆಲದಡಿಗೆ ಹೋಗಿ ಸೇರಲೋ ಆಕಾಶದಲ್ಲಿ ಹಾರಿಹೋಗಲೋ ಎಂದುಕೊಂಡು ನಡುಗುತ್ತ ಓಡಲು ತೊಡಗಿದರು.

ತಮೀಕ್ಷ್ಯ ಸರ್ವಮಲ್ಲಕಾ ವಿರಾಟರಾಜಸಂಶ್ರಯಾಃ।
ಪ್ರದುದ್ರುವುರ್ಭಯಾರ್ದಿತಾಸ್ತದಾಕವದದ್ ಯುಧಿಷ್ಠಿರಃ ॥೧೨॥

ಆ ಮಲ್ಲನನ್ನು ಕಂಡು ವಿರಾಟರಾಜನ ಆಶ್ರಯದಲ್ಲಿದ್ದ ಎಲ್ಲ ಮಲ್ಲರೂ ಭಯದಿಂದ ಕಂಗೆಟ್ಟು ಓಡಿದರು. ಆಗ ಯುಧಿಷ್ಠಿರ ನುಡಿದ.

ವಿರಾಟನ ಬಳಿ ಕೀಚಕನಿರುತ್ತಿದ್ದ. ಅವನ ಮುಂದೆ ಯಾವ ಮಲ್ಲನೂ ನಿಲ್ಲುವ ಸಾಹಸ ಮಾಡಿದ್ದಿಲ್ಲ. ಆದರೆ ಅವನು ದಿಗ್ವಿಜಯಕ್ಕೆ ಹೊರಟು ಹೋಗಿದ್ದ. ಈಗ ವಿರಾಟನ ಆಶ್ರಯದಲ್ಲಿದ್ದ ಮಲ್ಲರು ಯಾರೂ ಹೋರಾಟಕ್ಕೆ ಮುಂದೆ ಬಾರದಿದ್ದಾಗ ವಿರಾಟ ಕೋಪದಿಂದ 'ನೀವು ಯಾರೂ ಈ ಮಲ್ಲನನ್ನು ಇದಿರಿಸದಿದ್ದರೆ ನಿಮ್ಮ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕುತ್ತೇನೆ. ಸಂಬಳ ನಿಲ್ಲಿಸುತ್ತೇನೆ' ಎಂದ. ಆದರೂ ಮಲ್ಲರು ಮುಂದೆ ಬರಲಿಲ್ಲ. ಆಗ ಯುಧಿಷ್ಠಿರ, 'ನಮ್ಮ ಅಡಿಗೆಯವನನ್ನೆ ಕರೆಸು' ಎಂದ. ಏಕೆಂದರೆ ಅಡಿಗೆ ಕೆಲಸ ಮಾತ್ರವಲ್ಲದೆ ಮಲ್ಲವಿದ್ಯೆಯನ್ನು ಪ್ರದರ್ಶಿಸುತ್ತ ಹುಲಿ ಕರಡಿ ಕಾಡುಕೋಣಗಳೊಂದಿಗೂ ಮದ್ದಾನೆಯೊಂದಿಗೂ ಹೋರಾಡುತ್ತ ಅರಮನೆಯ ಎಲ್ಲ ಮಂದಿಗೂ ರೋಮಾಂಚಕರವಾದ ಮನರಂಜನೆ ನೀಡುತ್ತಿದ್ದ, ಭೀಮ. ಅದನ್ನು ಕಂಡು ದ್ರೌಪದಿ ಭಯದಿಂದ ಮೂರ್ಛೆ ಹೋಗುತ್ತಿದ್ದಳಂತೆ!

ಯ ಏಷ ಸೂದ ಆಶು ತಂ ನಿಹತ್ಯ ಮಲ್ಲಮೋಜಸಾ।
ಯಶಸ್ತವಾಭಿವರ್ಧಯೇತ್ ಸಮಾಹ್ವಯಾದ್ಯ ತಂ ನೃಪ ॥೧೩॥

'ರಾಜನೆ, ನಮ್ಮ ಅಡಿಗೆಯವನು ಈ ಮಲ್ಲನನ್ನು ತನ್ನ ಬಲದಿಂದ ಬೇಗನೆ ಕೊಂದು ನಿನ್ನ ಕೀರ್ತಿಯನ್ನು ಹೆಚ್ಚಿಸಬಲ್ಲ. ಅವನನ್ನು ಕರೆಸು.'

ಇತೀರಿತೇ ಸಮಾಹುತೋ ಜಗಾದ ಮಾರುತಿರ್ವಚಃ।
ಪ್ರಸಾದತೋ ಹರೇರಹಂ ನಿಷೂದಯೇಽದ್ಯ ಮಲ್ಲಕಮ್ ॥೧೪॥

ಯುಧಿಷ್ಠಿರ ಹೀಗೆ ಹೇಳಿದಾಗ ವಿರಾಟ ಭೀಮನನ್ನು ಕರೆಸಿದ. ಭೀಮನೆಂದ 'ಹರಿಯ ಅನುಗ್ರಹದಿಂದ ನಾನೀಗಲೇ ಮಲ್ಲನನ್ನು ಸಂಹರಿಸುವೆನು.'

ಸಮಸ್ತದೇವವೃಂದತೋ ಮಹಾನ್ ಯ ಏವ ಕೇಶವಃ।
ಸಮಸ್ತದೇವನಾಮವಾಂಸ್ತದೀಯಭಕ್ತಿತೋ ಬಲಮ್ ॥೧೫॥

ಸಮಸ್ತ ದೇವ ಸಮೂಹಕ್ಕಿಂತಲೂ ಯಾರು ಉತ್ತಮನೋ ಯಾರು ಸಮಸ್ತದೇವತೆಗಳ ನಾಮಗಳಿಂದಲೂ ಕರೆಸಿಕೊಳ್ಳುವನೋ ಅವನು ಶ್ರೀಕೇಶವ. ಅವನ ಭಕ್ತಿಯಿಂದಲೆ ನನ್ನಲ್ಲಿ ಬಲ ವ್ಯಕ್ತವಾಗುತ್ತದೆ.

ಮಹಾಭಾರತ ದಾಕ್ಷಿಣಾತ್ಯ ಪಾಠದಲ್ಲಿ

ಯುಧಿಷ್ಠಿರ ಕೃತಂ ಜ್ಞಾತ್ವಾ ಶ್ರಿಯಾ ತವ ವಿಶಾಂಪತೇ।
ಮಹಾದೇವಸ್ಯ ಭಕ್ತ್ಯಾ ಚ ತಂ ಮಲ್ಲಂ ಪಾತಯಾಮ್ಯಹಂ
(ವಿರಾಟ 15-32)

'ಯುಧಿಷ್ಠಿರ ಮಾಡಿದ ಅನುಗ್ರಹವನ್ನು ನೆನೆದು ನಿನ್ನ ಅನುಗ್ರಹದಿಂದ ಮತ್ತು ಮಹಾದೇವನ ಭಕ್ತಿಯ ಬಲದಿಂದ ನಾನು ಆ ಮಲ್ಲನನ್ನು ಕೆಡಹುವೆನು' ಎಂದಿದೆ. ಹಿಂದೆ ಭೀಮ ತನಗೆ ಹರಿಯ ಅನುಗ್ರಹವಿದೆ ಎಂದರೆ, ಮಲ್ಲನಿಗೆ ಮಹಾದೇವನ ಅನುಗ್ರಹವಿದೆ ಎಂದರು, ಸಭಾಸದರು. ಆಗ ಭೀಮ ಮಹಾದೇವನ ಅನುಗ್ರಹವೂ ತನಗುಂಟು. ಯುಧಿಷ್ಠಿರನ ಅನುಗ್ರಹವೂ ಉಂಟು. ವಿರಾಟನ ಅನುಗ್ರಹವೂ ಉಂಟೆನ್ನುತ್ತಾನೆ. ವಸ್ತುತಃ ಋಜುಯೋಗಿಯಾದ ಭೀಮ ಹರಿಯ ಅನುಗ್ರಹ ಒಂದನ್ನೆ ಅವಲಂಬಿಸಿದವ. ಈ ನಾಲ್ಕನ್ನೂ ಅವಿರೋಧವಾಗಿ ಹೊಂದಿಸುವುದು ಹೇಗೆ ಎಂಬ ಪ್ರಶ್ನೆಗೆ ಈ ಶ್ಲೋಕದಲ್ಲಿ ಸಮಾಧಾನವಿದೆ.[1]

'ಕೇಶವ' ಎಂದು ಹರಿಯ ಅನುಗ್ರಹವನ್ನು ಹೇಳಿ 'ಸಮಸ್ತದೇವ ನಾಮಉಳ್ಳವ'ನೆಂದು 'ಮಹಾದೇವ' ನಾಮವೂ 'ಯುಧಿಷ್ಠಿರ' ನಾಮವೂ, ವಿರಾಟನನ್ನು ಸಂಬೋಧಿಸಿ ಹೇಳಿದ 'ತ್ವಂ' ಎಂಬ ನಾಮವೂ ಹರಿನಾಮವೆಂದು ಹೇಳುವ ಮೂಲಕ ಮಹಾದೇವನ ಅನುಗ್ರಹವೆಂದರೂ ಯುಧಿಷ್ಠಿರನ ಅನುಗ್ರಹವೆಂದರೂ ವಿರಾಟನ ಅನುಗ್ರಹವೆಂದರೂ ಆ ಹೆಸರುಗಳಿಂದ ಕರೆಸಿಕೊಳ್ಳುವ ಅವರ ಅಂತರ್ಯಾಮಿಯಾದ ಹರಿಯ ಅನುಗ್ರಹವೆ ಎಂದಂತಾಯಿತು. 'ಸಮಸ್ತ ದೇವ ಸಮೂಹಕ್ಕಿಂತ ಉತ್ತಮ' ಎಂದು. 'ಮಹಾದೇವ' ಶಬ್ದಾರ್ಥವನ್ನು ಹೇಳುವ ಮೂಲಕ ಮಹಾದೇವನ ಅನುಗ್ರಹವೆಂದರೂ ಹರಿಯ ಅನುಗ್ರಹವೆ ಎಂದಂತಾಯಿತು.[1]

---

1. ಪೂರ್ವಂ ಭೀಮೇನ ಮಮ ಹರೇಃ ಪ್ರಸಾದೋಽಸ್ತೀತ್ಯುಕ್ತಂ। ಪಶ್ಚಾತ್ ಸಭಾಯಾಂ ಪ್ರತಿಮಲ್ಲಸ್ಯ ಮಹಾದೇವ ಪ್ರಸಾದೋಽಸ್ತೀತಿ ಸಭಾಸದೈರುಕ್ತೇ ಮಮಾಪಿ ಮಹಾದೇವ ಪ್ರಸಾದೋಽಸ್ತೀತ್ಯುಕ್ತಂ। ಯುಧಿಷ್ಠಿರ ರಾಜ್ಯ ಕಾಲೇ ತಸ್ಯ ಸ್ವಯಂ ಪಾಕಂ ಕೃತ್ವಾ ಬಹುಕಾಲಂ ಸ್ಥಿತಂ। ತೇನ ಯುಧಿಷ್ಠಿರ ಪ್ರಸಾದೋಽಸ್ತೀತ್ಯುಕ್ತಂ। ಇದಾನೀಮನ್ನದಾತುಸ್ತವ ಪ್ರಸಾದೋಽಸ್ತೀತ್ಯಪ್ಯುಕ್ತಂ। ಅಸ್ಯ ವಾಕ್ಯಚತುಷ್ಟಯ ಸ್ಯಾಪ್ಯೇಕವಾಕ್ಯತಾಂ ಕರೋತಿ ಸಮಸ್ತದೇವ ವೃಂದತ ಇತಿ। -ವಾದಿರಾಜೀಯ

ಯ ಏವ ದೇವನಾಮಧಾ ಇತಿ ಶ್ರುತಿರ್ಜಗಾದ ಹಿ ।
ಮಹಾಂಶ್ಚ ದೇವ ಏಷ ತತ್ ಸ ಮೇ ಜಯಂ ವಿಧಾಸ್ಯತಿ ॥೧೬॥

ಶ್ರೀಹರಿಯೆ ಎಲ್ಲ ದೇವತೆಗಳ ನಾಮವನ್ನು ಹೊತ್ತವನೆಂದು ಶ್ರುತಿ ಹೇಳಿದೆ. ಅದರಿಂದಲೂ ಎಲ್ಲ ದೇವತೆಗಳಿಗಿಂತ ಉತ್ತಮನಾದ್ದರಿಂದಲೂ ಮಹಾದೇವನೆನಿಸಿದವನು ಶ್ರೀಹರಿ. ಅವನೆ ನನಗೆ ಜಯ ಉಂಟುಮಾಡುವನು.

'ಯ ಏವ ದೇವನಾಮಧಾ' ಎಂಬುದು 'ಯೋ ದೇವಾನಾಂ ನಾಮಧಾ ಏಕ ಏವ' ಎಂಬ ಶ್ರುತಿಯ ಅನುಕರಣೆ. ಎಲ್ಲ ದೇವತೆಗಳ ಹೆಸರುಗಳೂ ಮುಖ್ಯವಾಗಿ ಶ್ರೀಹರಿಗೇ ಸಲ್ಲುತ್ತವೆ. ಆಯಾ ದೇವತೆಗಳಿಗೆ ಮುಖ್ಯವಾಗಿ ಆ ಹೆಸರುಗಳು ಅಜ್ಞರಿಂದ ಮಾತ್ರ ಬಳಕೆಯಾಗುತ್ತಿದೆ. ಜ್ಞಾನಿಗಳು ಅಮುಖ್ಯವಾಗಿಯೆ, ವ್ಯವಹಾರ ನಡೆಯುವ ಉದ್ದೇಶದಿಂದ ಬಳಸುತ್ತಾರೆ. ಸರ್ವಜ್ಞನಾದ ಭೀಮನೂ ಹಾಗೇ ಮಾಡುತ್ತಾನೆ. ಮಹಾದೇವ ನಾಮದಿಂದ ಹರಿಯನ್ನು ಕರೆಯುತ್ತಾನೆ. ಏಕೆ ಹೀಗೆ ಎಂದರೆ ತಾನು ವೈಷ್ಣವಾಗ್ರೇಸರ, ಭೀಮ ಎಂಬುದನ್ನು ಮರೆಮಾಡುವುದಕ್ಕಾಗಿ, ಅಜ್ಞಾತವಾಸ ನಡೆಸುವುದಕ್ಕಾಗಿ ಎಂದು ಲಕ್ಷ್ಮಾಲಂಕಾರ ಹೇಳಿದೆ-

'ವೈಷ್ಣವತ್ವ ಗೂಹನಾರ್ಥಮಿದಂ ವಚನಂ'

ಮೂರು ಬಗೆಯಿಂದ 'ಮಹಾದೇವ' ಶಬ್ದ ಹರಿಪರವೆಂದು ಸೂಚಿತವಾಗುತ್ತದೆ-

1. 'ಕ' ಎಂದರೆ ಬ್ರಹ್ಮ, 'ಈಶ' ಎಂದರೆ ರುದ್ರ, ಇಬ್ಬರೂ ಹರಿಯ ಅವಯವಗಳಲ್ಲಿ ಹುಟ್ಟಿದವರು. ಅದರಿಂದ ಹರಿ ಕೇಶವನೆನಿಸುತ್ತಾನೆ' ಎಂಬ ಹರಿವಂಶದ ವಚನವನ್ನು 'ಕೇಶವ' ಶಬ್ದ ಸೂಚಿಸುವುದರಿಂದ ದೇವರುಗಳಲ್ಲಿ ಮಹಾದೇವ ಹರಿಯೆ ಎನ್ನುವುದು ತಿಳಿಯುತ್ತದೆ.

2. 'ಎಲ್ಲ ದೇವತೆಗಳ ನಾಮ ಮುಖ್ಯವಾಗಿ ಹರಿಯದು' ಎಂದು ಶ್ರುತಿ ಇರುವುದರಿಂದ ಮಹಾದೇವ ನಾಮವೂ ಹರಿನಾಮವೆಂದು ತಿಳಿಯುತ್ತದೆ.

3. 'ಮಹಾಂಶ್ಚ ದೇವ ಏಷಃ' ಎಂದು ಏಷ ಶಬ್ದದಿಂದ 'ಏಷ ಸರ್ವೇಶ್ವರಃ' 'ದೇವಸ್ಯೈಷಃ ಸ್ವಭಾವೋಽಯಂ' ಇತ್ಯಾದಿ ವಚನಗಳು ಸೂಚಿತವಾಗುವುದರಿಂದ 'ಮಹಾನ್' ಅಂದರೆ, ಸರ್ವೇಶ್ವರನಾಗಿದ್ದಾನೆ. 'ದೇವ' ಶಬ್ದದಿಂದ ಪ್ರಸಿದ್ಧನಾಗಿದ್ದಾನೆ. ಅದರಿಂದ ಮಹಾದೇವನೆನಿಸಿದ್ದಾನೆ ಎಂದು ತಿಳಿಯುತ್ತದೆ.

ಯುಧಿಷ್ಠಿರಾಭಿಧಶ್ಚ ಯೋ ಯುಧಿಷ್ಠಿರೇ ಸ್ಥಿತಃ ಸದಾ ।
ತ್ವಯಿ ಸ್ಥಿತಸ್ತ್ವಮಿತ್ಯಸೌ ಸದಾಽಭಿಧೀಯತೇ ಹರಿಃ ॥೧೭॥

ಆ ಹರಿಯೆ ಸದಾ ಯುಧಿಷ್ಠಿರನಲ್ಲಿದ್ದು ಯುಧಿಷ್ಠಿರ ನಾಮದಿಂದ ಕರೆಸಿಕೊಳ್ಳುತ್ತಾನೆ. ನಿನ್ನಲ್ಲಿದ್ದು 'ತ್ವಂ' ಎಂಬ ನಾಮದಿಂದಲೂ ಕರೆಸಿಕೊಳ್ಳುತ್ತಾನೆ.

ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುತ್ತಾನೆ, ಎಂದೂ ಹಿಮ್ಮೆಟ್ಟುವುದಿಲ್ಲ ಎಂಬ ಅರ್ಥದಲ್ಲಿ ಮುಖ್ಯವಾಗಿ ಯುಧಿಷ್ಠಿರ ಹರಿಯೆ. ಯುಧಿಷ್ಠಿರನಲ್ಲಿ ಇರುವುದರಿಂದಲೂ ಹರಿ ಯುಧಿಷ್ಠಿರನೆನಿಸುತ್ತಾನೆ. ಇದು ಅಮುಖ್ಯವೆಂದು ತಿಳಿಯಬಾರದು. ಮುಖ್ಯವಾಗಿ ಯುಧಿಷ್ಠಿರ ನಾಮಕನಾದ ಹರಿ ಒಳಗೆ ಇರುವುದರಿಂದಲೆ ಯುಧಿಷ್ಠಿರನಿಗೆ ಯುಧಿಷ್ಠಿರನಾಮ. ಹೀಗೇ 'ತ್ವಂ' ಎಂದರೂ ಮುಖ್ಯವಾಗಿ ಹರಿಯೆ. 'ತ್+ವಂ' ತನು ವಿಸ್ತಾರೇ, ವಾ ಗತಿಗಂಧನಯೋಃ - ಸರ್ವವ್ಯಾಪಿ ಜ್ಞಾನಸ್ವರೂಪನಾದ್ದರಿಂದ, ಸರ್ವವನ್ನೂ ವ್ಯಾಪಿಸಿ ಎಲ್ಲೆಡೆ ತನ್ನ ಮೈಯ ಸುಗಂಧ ಹರಡಿಸುವುದರಿಂದ 'ತ್ವಂ' ಎನಿಸುತ್ತಾನೆ. 'ತ್ವಂ' ಎಂದು ಕರೆಸಿಕೊಳ್ಳುವ ಜೀವರಲ್ಲಿ ಅಂತರ್ಯಾಮಿಯಾದ್ದರಿಂದಲೂ 'ತ್ವಂ' ಎನಿಸುತ್ತಾನೆ.[1]

ಇತಿ ಬ್ರುವಾಣೋ ಮಲ್ಲಂ ತಮಭಿಯಾತೋ ವೃಕೋದರಃ।
ಅನಯನ್ಮೃತ್ಯುಲೋಕಾಯ ಬಲಾಢ್ಯೈರಪಿ ದುರ್ಜಯಮ್ ॥೧೮॥

ಭೀಮಸೇನ ಹೀಗೆ ಹೇಳುತ್ತ, ಬಲಾಢ್ಯರಿಗೂ ಗೆಲ್ಲಲಾಗದಿದ್ದ ಆ ಮಲ್ಲನನ್ನು ಆಕ್ರಮಿಸಿ ಮೃತ್ಯುಲೋಕಕ್ಕೆ ಕಳಿಸಿಕೊಟ್ಟ.

ಮೊದಲಿಗೆ ವಾಗ್ಯುದ್ಧದಲ್ಲಿ ಮಹಾದೇವಭಕ್ತ ನಾನೆಂದು ಮಲ್ಲ

---

1. ಸಮಸ್ತದೇವವ್ಯಂದತಃ ಮಹಾನ್ ಇತಿಕೃತ್ವಾ ದೇವೇಷು ಮಹಾನ್ ಮಹಾದೇವ ಇತಿ ವ್ಯುತ್ಪತ್ತ್ಯಾ ಹರಿರೇವ ಮಹಾದೇವ ಇತಿಭಾವಃ। ಕ ಇತಿ ಬ್ರಹ್ಮಣೋ ನಾಮ ಈಶೋಽಹಂ ಸರ್ವ ದೇಹಿನಾಂ। ಆವಾಂ ತವಾಂಗ ಸಂಭೂತೌ ತತಃ ಕೇಶವನಾಮವಾನ್ ಇತಿ ಸ್ಮೃತೇಃ ಪ್ರಾಮಾಣ್ಯ ಸೂಚನಾಯ ಕೇಶವ ಪದಂ ಪ್ರಾಯುಂಕ್ತ। ಪ್ರಕಾರಾಂತರೇಣಾಪಿ ಹರೇರ್ಮಹಾದೇವಾದಿ ನಾಮವತ್ತ್ವಂ ಉಪಪಾದಯತಿ ಯ ಏವ ದೇವನಾಮಧೇತಿ। ಯೋ ದೇವಾನಾಂ ನಾಮಧಾ ಏಕಏವೇತಿ ಶ್ರುತಾವನುಶಾಸನಾತ್ ಸಮಸ್ತ ದೇವನಾಮಾಂತರ್ಗತ ಮಹಾದೇವ ನಾಮವಾನ್ ಹರಿರಿತಿ ಭಾವಃ। ಪ್ರಕಾರಾಂತರೇಣಾಪಿ ಹರೇರ್ಮಹಾದೇವನಾಮ ಘಟಯತಿ ಮಹಾಂಶ್ಚದೇವ ಏಷ ಇತಿ। ಏಷ ಇತ್ಯುಕ್ತ್ವಾ ಏಷ ಸರ್ವೇಶ್ವರಃ ದೇವಸ್ಯೈಷ ಇತ್ಯಾದಿ ಶ್ರುತಿಂ ಸ್ವೋಕ್ತಾರ್ಥೇ ಪ್ರಮಾಣಂ ಸೂಚಯತಿ। ಯುಧಿಷ್ಠಿರಾಭಿಧಶ್ಚೇತಿವದತಾ ಯುಧಿ ಸ್ಥಿರತ್ವಾತ್ ಯುಧಿಷ್ಠಿರ ನಾಮಧೇಯೋ ಹರಿರಿತಿ ಸೂಚಿತಂ। ಅಪರಾಂ ಚ ವೃತ್ತಿಮಾಹ ಯುಧಿಷ್ಠಿರೇ ಸ್ಥಿತ ಇತಿ। ಸದಾಭಿಧೀಯತ ಇತಿ ವದತಾ ತನು ವಿಸ್ತಾರ ಇತಿಧಾತೋ ರ್ವ್ಯಾಪ್ತತ್ವಾತ್ ವಾ ಗತಿಗಂಧನಯೋರಿತಿಧಾತೋರ್ಜ್ಞಾನರೂಪತ್ವಾತ್ ಸಕಲಜಗತ್ಸುರಭೀಕರಣ ಶೀಲತ್ವಾಚ್ಚ ತ್ವಮಿತಿ ಯೋಗೋಽಪಿ ಸೂಚಿತಃ। ಅಭಿಧೀಯತೇ ಇತಿ ವದತಾ ಸಂತಪ್ತಾಯಸೋಽಗ್ನಿ ಸಂನಿಧಾನಾದಗ್ನಿಶಬ್ದವಾಚ್ಯತ್ವವತ್ ಮುಖ್ಯತೋ ಭಗವದಭಿಧಾಯಕೈಸ್ತೈಸ್ತೈಃ ಶಬ್ದೈಃ ಭಗವತ್ಸನ್ನಿಧಾನಾತ್ ತೇತೇ ಉಚ್ಯಂತ ಇತಿ ಸೂಚಿತಂ। ಅತಃ ಪ್ರಕಾರ ಚತುಷ್ಟಯೇನಾಪಿ ಹರೇರೇವ ಪ್ರಾರ್ಥನಂ ಕೃತಮಿತಿ ಸೂಚಯತಿ। - ವಾದಿರಾಜೀಯ

ಹೇಳಿದಾಗ ಭೀಮ ನಾನೂ ಮಹಾದೇವಭಕ್ತನೆ ಎಂದು ವಾದ ಮಾಡಿ ಸೋಲಿಸಿ ಮಲ್ಲಯುದ್ಧದಿಂದ ಸಂಹರಿಸಿದ.

ಕೀಚಕ ವಧ

ಏವಂ ನಿವಸತಾಂ ತತ್ರ ಪಾಂಡವಾನಾಂ ಮಹಾತ್ಮನಾಮ್ ।
ಸಂವತ್ಸರೇ ದ್ವಿಮಾಸೋನೇ ವಿಜಿತ್ಯ ದಿಶ ಆಗತಃ ।
ಕೀಚಕೋ ಮತ್ಸ್ಯನೃಪತೇಃ ಶ್ಯಾಲೋ ಬಲವತಾಂ ವರಃ ॥೧೯॥

ಹೀಗೆ ಮಹಾತ್ಮರಾದ ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡುತ್ತಿದ್ದಾಗ ಒಂದು ವರ್ಷ ತುಂಬಲು ಎರಡೇ ತಿಂಗಳುಗಳಿದ್ದಾಗ ವಿರಾಟರಾಜನ ಭಾವನಾದ, ಬಲಶಾಲಿಗಳಲ್ಲಿ ಶ್ರೇಷ್ಠನಾದ ಕೀಚಕ ದಿಗ್ವಿಜಯ ಮಾಡಿ ಹಿಂತಿರುಗಿ ಬಂದ.

'ಸುದೇಷ್ಣಾಕೀಚಕಯೋಃ ಕ್ಷತ್ರಸ್ತ್ರೀ ಸೂತಸ್ತ್ರೀ ಜಾತತ್ವೇಽಪಿ ಪಿತೃಕ್ಯಾತ್ ಪತ್ನೀ ಭ್ರಾತೃತ್ವಂ' ಎಂದು ಲಕ್ಷಾಲಂಕಾರ ಹೇಳುವಂತೆ ಕೇಕಯ ರಾಜನ ಕ್ಷತ್ರಿಯರಾಣಿಯಲ್ಲಿ ಹುಟ್ಟಿದ ಮಗಳು ಸುದೇಷ್ಣೆ, ವಿರಾಟನ ರಾಣಿ. ಮಾಲವಿ ಎಂಬ ಸೂತಸ್ತ್ರೀಯಲ್ಲಿ ಹುಟ್ಟಿದ ನೂರಾರು ಮಂದಿ ಕೀಚಕರು ಸುದೇಷ್ಣೆಯ ಅಣ್ಣಂದಿರು, ವಿರಾಟನ ಭಾವಂದಿರು. ಕೀಚಕ ವಿರಾಟನಿಗೆ ಭಾವ ಮಾತ್ರವಲ್ಲ, ಸೇನಾಪತಿಯೂ ಆಗಿದ್ದ. ಬಲದಿಂದ ಮತ್ತನಾಗಿ ಗೂಂಡಾಗಿರಿ ಮಾಡುತ್ತಿದ್ದ! ಕೀಚಕೋ ನಷ್ಟಮರ್ಯಾದೋ ಬಭೂವ ಭಯದೋ ನೃಣಾಂ (ವಿರಾಟ 21.23)

ಸ ದ್ರೌಪದೀಮೀಕ್ಷ್ಯ ಮನೋಭವಾರ್ತಃ
ಸಂಪ್ರಾರ್ಥಯಾಮಾಸ ತಯಾ ನಿರಸ್ತಃ ।
ಮಾಸೇ ಗತೇ ಭಗಿನೀಂ ಸ್ವಾಂ ಸುದೇಷ್ಣಾಂ
ಸಂಪ್ರಾರ್ಥಯಾಮಾಸ ತದರ್ಥಮೇವ ॥೨೦॥

ಕೀಚಕ ದ್ರೌಪದಿಯನ್ನು ಕಂಡು ಕಾಮಾರ್ತನಾಗಿ ಬೇಡಿದ. ಅವಳು ತಿರಸ್ಕರಿಸಿದಳು. ಒಂದು ತಿಂಗಳು ಕಳೆದ ಬಳಿಕ ಕೀಚಕ ದ್ರೌಪದೀಸಂಗಕ್ಕಾಗಿ ತನ್ನ ಸೋದರಿಯಾದ ಸುದೇಷ್ಣೆಯನ್ನು ಕೇಳಿಕೊಂಡ.

ತಯಾ ನಿಷಿದ್ಧೋಽಪಿ ಪುನಃಪುನಸ್ತಾಂ
ಯದಾ ಯಯಾಚೇಽಥ ಚ ಸಾಽಽಹ ಕೃಷ್ಣಾಮ್ ।
ಸಮಾನಯಾಶ್ವೇವ ಸುರಾಂ ಮದರ್ಥ-
ಮಿತೀರಿತಾ ನೇತಿ ಭೀತಾವದತ್ ಸಾ ॥೨೧॥

ಸುದೇಷ್ಣೆ ಮೊದಲಿಗೆ ಬೇಡವೆಂದಳು. ಆದರೂ ಕೀಚಕ ಮತ್ತೆ ಮತ್ತೆ ಕೇಳಿಕೊಂಡಾಗ ಅವಳು ದ್ರೌಪದಿಗೆ ಹೇಳಿದಳು 'ಕೀಚಕನ ಮನೆಯಿಂದ ನನಗೆ ಮದ್ಯ ತಂದುಕೊಡು' ಅವಳು ಹೀಗೆ ಹೇಳಿದಾಗ ದ್ರೌಪದಿ ಭೀತಳಾಗಿ ಬೇಡ ಎಂದಳು.

ಕೀಚಕ ಸುದೇಷ್ಣೆಯ ಕಾಲಿಗೆ ಬಿದ್ದು ನನ್ನ ಪ್ರಾಣ ಹೋಗುತ್ತದೆ, ಕಾಪಾಡೆಂದು ಮತ್ತೆ ಮತ್ತೆ ಕೇಳಿಕೊಂಡಾಗ ಸುದೇಷ್ಣೆ 'ಈಗ ನೀನು ಮನೆಗೇ ಹೋಗು. ಒಂದು ಸಮಾರಂಭದ ನೆಪದಿಂದ ಮದ್ಯಮಾಂಸಗಳನ್ನು ಸಿದ್ಧಪಡಿಸಿ ನನಗೆ ತಿಳಿಸು. ಆಗ ಸೈರಂಧ್ರಿಯ ಮೂಲಕ ಅವುಗಳನ್ನು ತರಿಸಿಕೊಳ್ಳುತ್ತೇನೆ' ಎಂದಳು. ಕೀಚಕ ಹಾಗೇ ಮಾಡಿದ. ಸುದೇಷ್ಣೆ ಸೈರಂಧ್ರಿಯನ್ನು ಕರೆದು ಮದ್ಯಮಾಂಸ ತಂದುಕೊಡಲು ಆಜ್ಞಾಪಿಸಿದಳು. ದ್ರೌಪದಿಗೆ ಭಯವಾಯಿತು.

ಇಲ್ಲಿ ವಾದಿರಾಜೀಯ ಹೇಳುತ್ತದೆ - 'ಭೀಮ ಪತ್ನಿಗೆ ಯಾರ ಭಯ? ಆದರೂ ತನಗೆ ಅಸ್ಪೃಶ್ಯ ಸ್ಪರ್ಶವಾಗುವುದು ಮತ್ತು ಕೀಚಕ ಭೀಮನ ಕೈಯಲ್ಲಿ ಸತ್ತರೆ ಅಜ್ಞಾತವಾಸ ಹಾಳಾದೀತೆಂದು ಭಯ' ಅದರಿಂದ ಹೇಳಿದಳು, 'ಬೇಡ, ನನ್ನನ್ನು ಆ ಪಾಪಿಯ ಮನೆಗೆ ಕಳಿಸಬೇಡ. ಬೇರೆ ದಾಸಿಯರಿಲ್ಲವೆ?' ಎಂದು.

ಬಲಾತ್ ತಯಾ ಪ್ರೇಷಿತಾ ತದ್ಗೃಹಾಯ
ಯದಾಽಗಮತ್ ತೇನ ಹಸ್ತೇ ಗೃಹೀತಾ ।
ವಿಧೂಯ ತಂ ಪ್ರಾದ್ರವತ್ ಸಾ ಸಭಾಯೈ
ಸ್ಮೃತ್ವಾಽಽದಿತ್ಯಸ್ಥಂ ವಾಸುದೇವಂ ಪರೇಶಮ್ ॥ ೨೨ ॥

ಸುದೇಷ್ಣೆ ಬಲಾತ್ಕಾರದಿಂದ ದ್ರೌಪದಿಯನ್ನು ಕೀಚಕನ ಮನೆಗೆ ಕಳಿಸಿದಳು. ದ್ರೌಪದಿ ಅಲ್ಲಿಗೆ ಹೋದಾಗ ಕೀಚಕ ಕೈಯಲ್ಲಿ ಹಿಡಿದ. ಅವಳು ಕೈ ಕೊಡವಿಕೊಂಡು ಪರಮೇಶ್ವರನಾದ ಸೂರ್ಯಾಂತರ್ಗತ ನಾರಾಯಣನನ್ನು ನೆನೆದು ಸಭೆಯ ಕಡೆಗೆ ಧಾವಿಸಿದಳು.

ಉಪಾತಿಷ್ಠತ ಸಾ ಸೂರ್ಯಂ ಮುಹೂರ್ತಮಬಲಾ ತತಃ (ವಿರಾಟ 19.3) 'ದ್ರೌಪದಿ ಸ್ವಲ್ಪಕಾಲ ಸೂರ್ಯನನ್ನು ಪ್ರಾರ್ಥಿಸಿದಳು' ಎನ್ನುತ್ತದೆ ಮಹಾಭಾರತ. ಹರಿಯನ್ನಲ್ಲದೆ ಅನ್ಯ ದೇವತೆಗಳನ್ನು ಒಲ್ಲದ ದ್ರೌಪದಿ ಸೂರ್ಯಾಂತರ್ಗತ ಹರಿಯನ್ನೆ ಪ್ರಾರ್ಥಿಸಿದಳೆಂದು ಅಭಿಪ್ರಾಯ ವಿಟ್ಟುಕೊಳ್ಳಬೇಕು. 'ಸಭೆ' ಎಂದರೆ ಸಂಸ್ಕೃತದಲ್ಲಿ ಜೂಜಿನ ಸ್ಥಳ. ಅಲ್ಲಿಗೆ ಓಡಿದಳು. ಏಕೆಂದರೆ ಅಲ್ಲಿ ಯುಧಿಷ್ಠಿರನಿರುತ್ತಾನೆ.

ಅನುದ್ಯುತ್ಕ್ಷ್ಯನಾಂ ಪಾತಯಿತ್ವಾ ಪದಾ ಸ
ಸಂತಾಡಯಾಮಾಸ ತದಾ ರವಿಸ್ಥಃ।

ನಾರಾಯಣೋ ಹೇತಿನಾಮೈವ ರಕ್ಷೋ
ನ್ಯಯೋಜಯತ್ ತದದೃಶ್ಯಂ ಸಮಾಗಾತ್ ॥ ೨೩ ॥

ಕೀಚಕ ದ್ರೌಪದಿಯನ್ನು ಬೆನ್ನಟ್ಟಿಹೋಗಿ ಕೆಳಗೆ ಬೀಳಿಸಿ ಕಾಲಿಂದ ಒದ್ದ. ಆಗ ಸೂರ್ಯಾಂತರ್ಗತ ನಾರಾಯಣ ದ್ರೌಪದಿಯ ರಕ್ಷಣೆಗೆ ಹೇತಿ, ಎಂಬ ಹೆಸರಿನ ರಾಕ್ಷಸನನ್ನು ಕಳಿಸಿದ. ಆ ರಾಕ್ಷಸ ಅದೃಶ್ಯನಾಗಿ ಬಂದ.

ವಾಯುಸ್ತದಾವಿಶ್ಯ ತು ಕೀಚಕಂ ತಂ
ನ್ಯಪಾತಯತ್ ತಾಂ ಸಮೀಕ್ಷ್ಯೈವ ಭೀಮಃ ।
ಚುಕೋಪ ವೃಕ್ಷಂ ಚ ಸಮೀಕ್ಷಮಾಣಂ
ತಂ ವಾರಯಾಮಾಸ ಯುಧಿಷ್ಠಿರೋಽಗ್ರಜಃ ॥ ೨೪ ॥

ರಾಕ್ಷಸನಲ್ಲಿ ವಾಯು ಆವೇಶಗೊಂಡು ಕೀಚಕನನ್ನು ಕೆಡವಿದ. ದ್ರೌಪದಿಯನ್ನು ಆ ಸ್ಥಿತಿಯಲ್ಲಿ ಕಂಡೊಡನೆ ಭೀಮ ಕುಪಿತನಾದ. ಒಂದು ಮರವನ್ನು ದಿಟ್ಟಿಸತೊಡಗಿದ. ಆ ಭೀಮನನ್ನು ಅಣ್ಣನಾದ ಯುಧಿಷ್ಠಿರ ತಡೆದ.

ರಾಕ್ಷಸನಿಗೆ ಕೀಚಕನನ್ನು ಕೆಡವಲು ಶಕ್ತಿ ಸಾಲದೆಂದು ಅವನಲ್ಲಿ ವಾಯುದೇವ ಆವಿಷ್ಟನಾದ. ದ್ರೌಪದಿಯನ್ನು ಕೀಚಕ ಒದ್ದಾಗ ಅವಳ ಮುಖದಿಂದ ರಕ್ತ ಸುರಿಯಿತು. ಸಭೆಯಲ್ಲಿದ್ದ ವಿರಾಟ ಧರ್ಮರಾಜ ಬ್ರಾಹ್ಮಣರು ವೃದ್ಧರು ಎಲ್ಲರೂ ನೋಡಿದರು. 'ಕೀಚಕ! ಇದು ಸರಿಯಲ್ಲ' ಎಂದರು. ಪಾಂಡವರೆಲ್ಲರೂ ಅಲ್ಲಿ ಬಂದು ಸೇರಿದರು. ಭೀಮ ಕ್ರೋಧದಿಂದ ಹುಬ್ಬುಗಂಟಿಕ್ಕಿ ಹಲ್ಲು ಕಡೆಯುತ್ತ ಕೆಂಗಣ್ಣಿನಿಂದ ಒಂದು ದೊಡ್ಡ ಮರವನ್ನು ದಿಟ್ಟಿಸಿದ. ಯುಧಿಷ್ಠಿರನನ್ನೂ ಕಂಡ. ಮರದಂತೆ ಸುಮ್ಮನೆ ನಿಂತು ನೋಡುವ ವಿರಾಟನನ್ನು ಕಿತ್ತು ಎಸೆಯುತ್ತೇನೆ ಎಂಬ ಭಾವವಿದ್ದಿತು. ಅದರಿಂದ ಯುಧಿಷ್ಠಿರನೆಂದ– 'ಈ ವೃಕ್ಷ ಬಹುಜನೋಪಕಾರಿ. ಸೌದೆಗೆ ಬೇರೆ ಮರವನ್ನು ನೋಡಿಕೊಳ್ಳು' ಅಂದರೆ ವಿರಾಟ ಸಜ್ಜನ. ನಮಗೆ ಅವನಿಂದ ಉಪಕಾರವಿದೆ. ಅವನನ್ನು ಬಿಡು ಎಂದು ಉಪದೇಶಿಸಿದ. ಅಷ್ಟರಲ್ಲಿ ವಾಯುವಿನಿಂದ ಆವಿಷ್ಟನಾದ ರಾಕ್ಷಸ ಅದೃಶ್ಯನಾಗಿ ಬಿರುಗಾಳಿಯ ರೂಪದಿಂದ ಬಂದು ಕೀಚಕನನ್ನು ಬಲು ದೂರಕ್ಕೆ ಸೆಳೆದೊಯ್ದು ಕೆಡವಿದ. ಆತ ಬುಡಸಹಿತ ಕಿತ್ತ ಮರದಂತೆ ಬಿದ್ದು ಪ್ರಜ್ಞಾಹೀನನಾದ.

ಕೃಷ್ಣಾ ರಾತ್ರೌ ಭೀಮಸಕಾಶಮೇತ್ಯ
ಹಂತುಂ ಪಾಪಂ ಕೀಚಕಂ ಪ್ರೈರಯತ್ ತಮ್ ।

ಭೀಮಸ್ಯ ಬುದ್ಧ್ಯಾ ನಿಶಿ ಸಾ ಕೀಚಕಂ ಚ
ಜಗಾದ ಗಂತುಂ ಶೂನ್ಯಗೃಹಂ ಸ ಚಾಗಾತ್ ॥ ೨೫ ॥

ದ್ರೌಪದಿ ರಾತ್ರಿಯಲ್ಲಿ ಭೀಮನ ಬಳಿಗೆ ಬಂದು ಪಾಪಿ ಕೀಚಕನನ್ನು ಕೊಲ್ಲಲು ಪ್ರೇರಿಸಿದಳು. ಭೀಮ ಹೇಳಿಕೊಟ್ಟ ಬುದ್ಧಿಯಿಂದ ಕೀಚಕನಿಗೆ ರಾತ್ರಿಯಲ್ಲಿ ನಿರ್ಜನವಾದ ನರ್ತನಶಾಲೆಗೆ ಹೋಗಲು ಹೇಳಿದಳು. ಅದರಂತೆ ಕೀಚಕ ಹೋದ.

ಭೀಮನನ್ನು ಯುಧಿಷ್ಠಿರ ತಡೆದಾಗ ವಿರಾಟನು ಸುಮ್ಮನಿದ್ದ. ಅವನಿಗೆ ಕೀಚಕನ ಭಯ. ಯುಧಿಷ್ಠಿರನೆಂದ, 'ಸೈರಂಧ್ರಿ! ತಾಳು, ನಿನ್ನ ಪತಿಗಳು ಕಾಲ ಪ್ರತೀಕ್ಷೆ ಮಾಡುತ್ತಿರಬಹುದು. ನಿನಗಾದ ಅಪಚಾರಕ್ಕೆ ತಕ್ಷ ಶಿಕ್ಷೆ ಅವಶ್ಯ ಮಾಡುತ್ತಾರೆ'. ದ್ರೌಪದಿ ಸುದೇಷ್ಣೆಯ ಬಳಿ ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ನೀನಿಚ್ಛಿಸುವಿಯಾದರೆ ಕೀಚಕನಿಗೆ ಮರಣದಂಡನೆ ವಿಧಿಸುವೆನೆಂದಳು ಸುದೇಷ್ಣೆ. ಇದು ತೋರಿಕೆಗಷ್ಟೇ! ವಸ್ತುತಃ ಅವಳಿಗೆ ವಿರಾಟನೆ ದ್ರೌಪದಿಗೆ ಮರುಳಾಗುವ ಭಯವಿದ್ದಿತು. ಕೀಚಕ ಅವಳನ್ನು ವಶಪಡಿಸಿಕೊಂಡರೇ ಕ್ಷೇಮ ಎಂದುಕೊಂಡಿದ್ದಳು. ದ್ರೌಪದಿ ದುಃಖದಿಂದ ಸ್ನಾನ ಭೋಜನ ಅಲಂಕಾರಗಳನ್ನು ತ್ಯಜಿಸಿ ವ್ರತಸ್ಥಳಾದಳು. ಅವಳ ಸ್ಥಿತಿಯನ್ನು ಕಂಡು ರಾಣಿವಾಸದ ಎಲ್ಲ ಸ್ತ್ರೀಯರೂ ಕೀಚಕನ ವಧೆಯನ್ನು ಹಾರೈಸಿದರು. ಒಂದು ರಾತ್ರಿ ದ್ರೌಪದಿ ಭೀಮನ ಬಳಿಗೆ ಹೋಗಿ ಕೀಚಕನನ್ನು ಕೊಲ್ಲದಿದ್ದರೆ ನಾನು ಕೆರೆ ಬಾವಿ ನೋಡಿಕೊಳ್ಳುವೆ ವಿಷ ಕುಡಿವೆನೆಂದಳು. ಆಗ ಭೀಮ ಹೇಳಿದ 'ರಾತ್ರಿಯಲ್ಲಿ ಕೀಚಕನನ್ನು ನರ್ತನಶಾಲೆಗೆ ಕರೆಸು' ಎಂದು. ಮರುದಿನ ಕೀಚಕ ದ್ರೌಪದಿಯ ಮುಂದೆ ಹೇಳಿದ 'ನಾನೇ ಈ ದೇಶಕ್ಕೆ ನಿಜವಾಗಿ ರಾಜ, ನೀ ನನ್ನ ರಾಣಿಯಾಗು' ದ್ರೌಪದಿ ನುಡಿದಳು. 'ಆಗಲಿ, ಯಾರಿಗೂ ತಿಳಿಯದಂತೆ ನಾವು ರಾತ್ರಿ ನರ್ತನಶಾಲೆಯಲ್ಲಿ ಸೇರೋಣ.' ಅದರಂತೆ ಕೀಚಕ ನರ್ತನಶಾಲೆಗೆ ಬಂದ.

ತತ್ರೈನಮಾಸಾದ್ಯ ಚ ಭೀಮಸೇನೋ
ವಿಜಿತ್ಯ ತಂ ಬಾಹುಯುದ್ಧೇ ನಿಹತ್ಯ ।
ಶಿರೋ ಗುದೇ ಪಾಣಿಪಾದೌ ಚ ತಸ್ಯ
ಪ್ರವೇಶಯಾಮಾಸ ವಿಮೃದ್ಯ ವೀರಃ ॥ ೨೬ ॥

ನರ್ತನಶಾಲೆಯಲ್ಲಿ ಭೀಮ ಕೀಚಕನನ್ನು ಹಿಡಿದು ಬಾಹು ಯುದ್ಧದಲ್ಲಿ ಗೆದ್ದು ಕೊಂದು ಮರ್ದಿಸಿ ತಲೆ ಕೈಕಾಲುಗಳನ್ನು ಗುದದಲ್ಲಿ ಸೇರಿಸಿ ಮಾಂಸದ ಮುದ್ದೆಯಾಗಿ ಮಾಡಿದ.

ಭೀಮ ಕೀಚಕನ ತಲೆಗೆ ಹೊಡೆದು ಕೊಂದು ತಲೆ ಕೈಕಾಲುಗಳನ್ನು ಗುದದ್ವಾರದ ಮೂಲಕ ಹೊಟ್ಟೆಯೊಳಗೆ ಸೇರಿಸಿ ಮಾಂಸದ ಮುದ್ದೆ ಮಾಡಿದ.

ಕೀಚಕನ ತಮ್ಮಂದಿರು ನೂರೈದು ಮಂದಿ ಬಂದು ನೋಡಿದರು. ಕೀಚಕನ ತಲೆ ಎಲ್ಲಿ, ಕುತ್ತಿಗೆ ಎಲ್ಲಿ, ಕೈಕಾಲುಗಳೆಲ್ಲಿ ಎಂದು ಅರಸಿ ಕಾಣದಾದರು. ಅಮಾನುಷ ಕಾರ್ಯ! ಎಂದು ಉದ್ಗರಿಸಿದರು. ಹೌದು! ಇದು ನನ್ನ ಪತಿಗಳಾದ ಗಂಧರ್ವರ ಕೆಲಸ! ಎಂದಳು ದ್ರೌಪದಿ.

ಅವಧ್ಯಂ ತಂ ನಿಹತಂ ವೀಕ್ಷ್ಯ ತಸ್ಯ
ಪಂಚೋತ್ತರಂ ಶತಮೇವಾನುಜಾನಾಮ್ ।
ಸರ್ವಂ ವರಾಚ್ಛಂಕರಸ್ಯ ಹ್ಯವಧ್ಯಂ
ಸಹೈವ ಕೃಷ್ಣಾಂ ತೇನ ದಗ್ಧುಂ ಬಬಂಧ ॥೨೭॥

ಅವಧ್ಯನಾದ ಕೀಚಕ ಹತನಾದುದನ್ನು ಕಂಡು ಶಿವವರದಿಂದ ಅವಧ್ಯರಾದ ಅವನ ನೂರೈದು ಮಂದಿ ತಮ್ಮಂದಿರು ಎಲ್ಲರೂ ಕೀಚಕನೊಂದಿಗೆ ದ್ರೌಪದಿಯನ್ನೂ ಸುಡಲು ಕಟ್ಟಿದರು.

ದ್ರೌಪದಿಗೆ ಆಶಿಸಿ ಸತ್ತ ಕೀಚಕನನ್ನು ದ್ರೌಪದಿಯೊಂದಿಗೆ ಸುಟ್ಟರೆ ಪರಲೋಕದಲ್ಲಾದರೂ ಅವನಿಗೆ ಅವಳ ಸಂಗ ದೊರಕೀತು. ಮತ್ತು ಕೀಚಕನ ವಧೆಗೆ ಕಾರಣಳಾದ ದ್ರೌಪದಿ ಬದುಕಿ ಉಳಿಯಲೂ ಕೂಡದು ಎನ್ನುತ್ತ ಉಪಕೀಚಕರು ವಿರಾಟನಲ್ಲಿ ಅನುಮತಿ ಕೇಳಿ ಪಡೆದು ದ್ರೌಪದಿಯನ್ನು ಶವವಾಹನದಲ್ಲಿ ಕಟ್ಟಿ ಸ್ಮಶಾನಕ್ಕೆ ಒಯ್ಯಲು ತೊಡಗಿದರು.

ಸಾ ನೀಯಮಾನಾ ಕೀಚಕೈಃ ಸಂರುರಾವ
ಶ್ರುತ್ವೈವ ತಂ ಭೀಮಸೇನೋ ಮಹಾಂತಮ್ ।
ಉದ್ಧೃತ್ಯ ವೃಕ್ಷಂ ತೇನ ಜಘಾನ ಸರ್ವಾ-
ನಾದಾಯ ಕೃಷ್ಣಾಂ ಪುನರಾಗಾತ್ ಪುರಂ ಚ ॥೨೮॥

ಉಪಕೀಚಕರು ದ್ರೌಪದಿಯನ್ನು ಒಯ್ಯುವಾಗ ಅವಳು ಕೂಗಿಕೊಂಡಳು. ಅದನ್ನು ಕೇಳಿ ಭೀಮ ದೊಡ್ಡ ಮರವನ್ನು ಕಿತ್ತು ಅದರಿಂದಲೆ ಅವರನ್ನು ಕೊಂದು ದ್ರೌಪದಿಯನ್ನು ಕರೆದುಕೊಂಡು ನಗರಕ್ಕೆ ಹಿಂತಿರುಗಿದ.

ಜಯೆ! ಜಯೇಶ! ವಿಜಯ! ಜಯತ್ಸೇನ! ಜಯದ್ಬಲ! ಎಂದು ಐದು ಮಂದಿ 'ಗಂಧರ್ವ'ರನ್ನು ದ್ರೌಪದಿ ಕೂಗಿಕರೆದಳು. ಒಡನೆ 'ಜಯೇಶ' ಭೀಮ ಬಂದು ಉಪಕೀಚಕರನ್ನು ನಿರ್ನಾಮ ಮಾಡಿಬಿಟ್ಟ.

ಏವಂ ಯತ್ನಾತ್ ತಪಸಾ ತೈರವಾಪ್ತೋ ವರಃ ಶಿವಾದಜಯತ್ವಂ ರಣೇಷು ।
ಅವಧ್ಯತಾ ಚೈವ ಷಡುತ್ತರಾಸ್ತೇ ಶತಂ ಹತಾ ಭೀಮಸೇನೇನ ಸಂಖ್ಯೇ । ೨೯॥

ಆ ಉಪಕೀಚಕರೂ ಕೂಡ ಪ್ರಯತ್ನಮಾಡಿ ತಪಸ್ಸಿನಿಂದ ಶಿವನನ್ನು ಒಲಿಸಿಕೊಂಡು

ಯುದ್ಧಗಳಲ್ಲಿ ಅಜೇಯರಾಗುವ ವರ ಪಡೆದಿದ್ದರು. ಹೀಗೆ ನೂರ ಆರು ಮಂದಿ ಕೀಚಕರೆಲ್ಲರೂ ಯುದ್ಧದಲ್ಲಿ ಭೀಮಸೇನನಿಂದ ಹತರಾದರು.

ಗಂಧರ್ವ ಇತ್ಯೇವ ನಿಹತ್ಯ ಸರ್ವಾನ್
ಮುಮೋದ ಭೀಮೋ ದ್ರೌಪದೀ ಚಾಽಥ ಕೃಷ್ಣಾಮ್ ।
ಯಾಹೀತ್ಯೂಚೇ ಸಾ ಸುದೇಷ್ಣಾ ಭಯೇನ
ತ್ರಯೋದಶಾಹಂ ಪಾಲಯೇತ್ಯಾಹ ತಾಂ ಸಾ ।
ಅಸ್ತ್ವಿತ್ಯೇನಾಮಾಹ ಭಯಾತ್ ಸುದೇಷ್ಣಾ
ತಥಾಽವಸನ್ ಪೂರ್ಣಮಬ್ದಂ ಚ ತೇಽತ್ರ ॥೩೦॥

ಭೀಮ ತನ್ನನ್ನು ಗಂಧರ್ವನೆಂದು ಹೇಳಿಕೊಂಡು ಎಲ್ಲ ಕೀಚಕರನ್ನೂ ಕೊಂದು ಆನಂದಿಸಿದ. ದ್ರೌಪದಿಯೂ ಸಂತೋಷಗೊಂಡಳು. ಬಳಿಕ ಸುದೇಷ್ಣೆ ಭಯದಿಂದ 'ಹೋಗು!' ಎಂದಳು. 'ಹದಿಮೂರು ದಿನಗಳ ಕಾಲ ಮಾತ್ರ ತಾಳು' ಎಂದಳು ದ್ರೌಪದಿ. ಸುದೇಷ್ಣೆ ಭಯದಿಂದ ಆಗಲಿ ಎಂದಳು. ಪಾಂಡವರು ಹೀಗೆ ಪೂರ್ಣ ಒಂದು ವರ್ಷ ವಿರಾಟನಗರದಲ್ಲಿ ಅಜ್ಞಾತವಾಸ ಪೂರೈಸಿದರು.

ಭೀಮ ತಾನು ಅಡಿಗೆಯವನು 'ವಲಲ' ಎನ್ನದೆ ನಾನು ಜಯೇಶನೆಂಬ ಗಂಧರ್ವನೆಂದೇ ಹೇಳಿಕೊಂಡು ಉಪಕೀಚಕರನ್ನೆಲ್ಲ ಕೊಂದು ಬೇರೆ ದಾರಿಯಿಂದ ನಗರಕ್ಕೆ ಹಿಂತಿರುಗಿದ. ದ್ರೌಪದಿ ಬೇರೆ ದಾರಿಯಿಂದ ನಡೆದಳು. ಅಂತಃಪುರಕ್ಕೆ ಹೋಗುತ್ತ ದಾರಿಯಲ್ಲಿ ಅಡಿಗೆಮನೆ ಮುಂದೆ ಭೀಮನನ್ನು ಕಂಡು ನಕ್ಕು ಕಣ್ಣುಸನ್ನೆಮಾಡಿ ಗಂಧರ್ವರಾಜನಿಗೆ ನಮಸ್ಕಾರ ಎನ್ನುತ್ತ ಹೊರಟು ಹೋದಳು. ಒಬ್ಬ ಗಂಧರ್ವನಿಂದ ನೂರ ಆರು ಮಂದಿ ಬಲಾಢ್ಯರಾದ ಕೀಚಕರು ಹತರಾದುದನ್ನು ಕಂಡು ನಾಗರಿಕರು ಭಯದಿಂದ ತಲ್ಲಣಿಸಿದರು. ಈ ಸೈರಂಧ್ರಿಯನ್ನು ಕಂಡವರೆಲ್ಲ ಮೋಹಪರವಶರಾಗಿ ಗಂಧರ್ವರಿಂದ ಹತರಾಗುವರು. ಅದರಿಂದ ಅಪಾಯಕಾರಿಯಾದ ಸೈರಂಧ್ರಿಯನ್ನು ಊರಿಂದ ಹೊರಗೆ ಕಳಿಸಬೇಕೆಂದು ನಾಗರಿಕರು ಆಗ್ರಹಿಸಿದರು. ಸುದೇಷ್ಣೆ 'ಸೈರಂಧ್ರಿ! ನೀನು ಇಲ್ಲಿ ಇದ್ದರೆ ಗಂಧರ್ವರಿಂದ ನಗರಕ್ಕೆ ಅಪಾಯ. ಅದರಿಂದ ಹೊರಟು ಹೋಗು' ಎಂದಳು. ಸೈರಂಧ್ರಿ ಹೇಳಿದಳು, 'ಕೇವಲ ಹದಿಮೂರು ದಿನಗಳ ಕಾಲ ಸೈರಿಸು. ಅಷ್ಟರಲ್ಲಿ ಗಂಧರ್ವರು ಕೃತಕೃತ್ಯರಾಗಿ ನನ್ನನ್ನು ಕರೆದೊಯ್ಯುತ್ತಾರೆ. ನಿನಗೂ ರಾಜನಿಗೂ ಬಂಧುಗಳಿಗೂ ಎಲ್ಲರಿಗೂ ಅನುಗ್ರಹಿಸುತ್ತಾರೆ.' ಸುದೇಷ್ಣೆ 'ಹಾಗಾದರೆ ಇರು, ನನ್ನ ಪತಿ ಪುತ್ರರನ್ನು ಮಾತ್ರ ಕಾಪಾಡು' ಎಂದಳು.

ದಕ್ಷಿಣ ಗೋಗ್ರಹಣ

ತದಾ ಪಾರ್ಥಾನ್ ಪ್ರವಿಚಿತ್ಯಾಖಿಲಾಯಾಂ
ಪೃಥ್ವ್ಯಾಂ ಛನ್ನಾನ್ ಧಾರ್ತರಾಷ್ಟ್ರಸ್ಯ ದೂತಾಃ।
ಅವಿಜ್ಞಾಯ ಪ್ರಯಯುರ್ಧಾರ್ತರಾಷ್ಟ್ರ-
ಮೂಚುರ್ಹತಂ ಕೀಚಕಂ ಯೋಷಿದರ್ಥೇ ॥೩೧॥

ಆಗ ದುರ್ಯೋಧನನ ಗೂಢಚಾರರು ಮರೆಯಾಗಿದ್ದ ಪಾಂಡವರನ್ನು ಸಮಸ್ತ ಭೂಮಂಡಲದಲ್ಲಿ ಹುಡುಕಿ ಕಾಣದೆ ದುರ್ಯೋಧನನ ಬಳಿಕೆ ಬಂದರು. ಒಂದು ಹೆಣ್ಣಿಗಾಗಿ ಕೀಚಕ ಹತನಾದುದನ್ನು ತಿಳಿಸಿದರು.

ತೇನಾವದದ್ ದ್ರೌಪದೀಕಾರಣೇನ
ದುರ್ಯೋಧನೋ ನಿಹತಂ ಕೀಚಕಂ ತಮ್ ।
ಭೀಮೇನಾಗುಸ್ತತ್ರ ದುರ್ಯೋಧನಾದ್ಯಾ ,
ಭೀಷ್ಮಾದಿಭಿಃ ಸಹ ಕರ್ಣೇನ ಚೈವ ॥೩೨॥

ಅದರಿಂದ ದುರ್ಯೋಧನನೆಂದ, 'ದ್ರೌಪದೀ ನಿಮಿತ್ತವಾಗಿ ಭೀಮನಿಂದ ಕೀಚಕ ಹತನಾಗಿದ್ದಾನೆ'. ಬಳಿಕ ದುರ್ಯೋಧನ ಮುಂತಾದವರು ಭೀಷ್ಮ ಮುಂತಾದವರೊಡನೆ ಮತ್ತು ಕರ್ಣನೊಡನೆ ವಿರಾಟನಗರಕ್ಕೆ ಹೊರಟರು.

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ।
(ವಿರಾಟ 32.19)

'ಭೀಮ ಬಲರಾಮ ಶಲ್ಯರಾದ ಬಳಿಕ ನಾಲ್ಕನೆಯವನು ಬಲಿಷ್ಠನಾದ ಕೀಚಕ. ಇವರಿಗೆ ಐದನೆಯವನು ಯಾರೂ ಕೇಳಿ ಬರುತ್ತಿಲ್ಲ' ಎಂದ ಮೇಲೆ ಭೀಮನಲ್ಲದೆ ಇನ್ನಾರು ಕೀಚಕನನ್ನು ಕೊಂದಿರುತ್ತಾನೆ? ಇದು ದುರ್ಯೋಧನನ ತರ್ಕ.

ಅಗ್ರೇ ಯಯೌ ತತ್ರ ಯೋದ್ಧುಂ ಸುಶರ್ಮಾ
ಸ ಗಾ ವಿರಾಟಸ್ಯ ಸಮಾಜಹಾರ।
ಶ್ರುತ್ವಾ ವಿರಾಟೋಽನುಯಯೌ ಸಸೇನ -
ಸ್ತಂ ಪಾಂಡವಾಶ್ಚಾನುಯಯುರ್ವಿನಾರ್ಜುನಮ್ ॥೩೩॥

ಮೊದಲಿಗೆ ಸುಶರ್ಮ ಯುದ್ಧ ಮಾಡಲು ವಿರಾಟನಗರಕ್ಕೆ ತೆರಳಿದ. ವಿರಾಟನ ಗೋವುಗಳನ್ನು ಅಪಹರಿಸಿದ. ಇದನ್ನು ಕೇಳಿ ವಿರಾಟ ಸೈನ್ಯ ಸಮೇತನಾಗಿ ಬಂದು ಸುಶರ್ಮನನ್ನು ಬೆನ್ನಟ್ಟಿದ. ಅರ್ಜುನ ಹೊರತು ಬೇರೆ ಪಾಂಡವರು ವಿರಾಟನನ್ನು ಹಿಂಬಾಲಿಸಿದರು.

ನಾವು ಮೊದಲಿಗೆ ವಿರಾಟನ ಗೋವುಗಳನ್ನು ಅಪಹರಿಸೋಣ. ಆಗ ಬಿಡಿಸಿಕೊಳ್ಳಲು ಪಾಂಡವರು ಬಂದೇ ಬರುತ್ತಾರೆ. ಏಕೆಂದರೆ ಈಗ ಕೀಚಕನಿಲ್ಲ. ಪಾಂಡವರು ಬಂದರೆ ಅವರ ಅಜ್ಞಾತವಾಸ ಮುಗಿಯದಿರುವುದರಿಂದ ತಿರುಗಿ ವನವಾಸಕ್ಕೆ ಕಳಿಸೋಣ ಎಂದ ದುರ್ಯೋಧನ. ಆಗ ಸುಶರ್ಮನೆಂಬ ತ್ರಿಗರ್ತದೇಶದ ರಾಜನೆಂದ, 'ವಿರಾಟ ಕೀಚಕರು ನನ್ನ ರಾಜ್ಯವನ್ನು ಅಪಹರಿಸಿದ ಹಗೆಗಳು. ಈಗ ಕೀಚಕ ಮಡಿದಿರುವಾಗ ನಾನು ವಿರಾಟನಲ್ಲಿ ಹಗೆ ತೀರಿಸಿಕೊಳ್ಳುವೆನು' ಎಂದು. ಅದರಂತೆ ವಿರಾಟನಗರದ ದಕ್ಷಿಣ ದಿಕ್ಕಿನ ಭಾಗದಲ್ಲಿ ಒಂದು ಲಕ್ಷ ಗೋವುಗಳನ್ನು ಸುಶರ್ಮ ಅಪಹರಿಸಿದ. ಅರ್ಜುನ ನಪುಂಸಕ ವೇಷದಲ್ಲಿದ್ದುದರಿಂದ ಬೇರೆ ಪಾಂಡವರು ವಿರಾಟನ ಬೆಂಗಾವಲಾಗಿ ಹೊರಟರು.

ವಿಜಿತ್ಯ ಸಂಖ್ಯೇ ಜಗೃಹೇ ವಿರಾಟಂ
ತದಾ ಸುಶರ್ಮಾ ತಮಯಾದ್ ವೃಕೋದರಃ।
ಸ ತಸ್ಯ ಸೇನಾಂ ವಿನಿಹತ್ಯ ಮಾತ್ಸ್ಯಂ
ವಿಮೋಚ್ಯ ಜಗ್ರಾಹ ಸುಶರ್ಮರಾಜಮ್ ॥೩೪॥

ಸುಶರ್ಮ ವಿರಾಟನನ್ನು ಗೆದ್ದು ಸೆರೆಹಿಡಿದ. ಆಗ ಅವನನ್ನು ಭೀಮ ಇದಿರಿಸಿದ. ಅವನ ಸೈನ್ಯವನ್ನು ಸಂಹರಿಸಿ ವಿರಾಟನನ್ನು ಬಿಡುಗಡೆ ಮಾಡಿ ಸುಶರ್ಮರಾಜನನ್ನು ಸೆರೆಹಿಡಿದ.

ಕೃಷ್ಣಪಕ್ಷ ಸಪ್ತಮೀ ರಾತ್ರಿ. ಯುದ್ಧದಲ್ಲಿ ಸುಶರ್ಮನ ಕೈಮೇಲಾಯಿತು. ಅವನು ವಿರಾಟನನ್ನು ಸೆರೆ ಹಿಡಿದು ಒಯ್ಯುತ್ತಿದ್ದಾಗ ಭೀಮ ಒಂದು ಮರವನ್ನು ಕಿತ್ತುಕೊಳ್ಳಲು ಹೊರಟ. ಧರ್ಮರಾಜ ತಡೆದ. ಸಿಂಹನಾದವನ್ನೂ ಮಾಡಬೇಡ ಎಂದ. ಬಳಿಕ ಭೀಮ ಸುಶರ್ಮನ ಸಾರಥಿಯನ್ನೂ ಕುದುರೆಗಳನ್ನೂ ಕೊಂದ. ಆಗ ವಿರಾಟ ರಥದಿಂದ ಕೆಳಗೆ ಹಾರಿ ತಪ್ಪಿಸಿಕೊಂಡ. ಭೀಮ ಸುಶರ್ಮನನ್ನು ಸೆರೆಹಿಡಿದ. ಈ ಯುದ್ಧದಲ್ಲಿ ಧರ್ಮರಾಜ ಒಂದುಸಾವಿರ ಸೈನಿಕರನ್ನೂ ಭೀಮ ಏಳುಸಾವಿರ, ನಕುಲ ಏಳು ನೂರು, ಸಹದೇವ ಮುನ್ನೂರು, ಸೈನಿಕರನ್ನೂ ವಧಿಸಿದರು.

ಯುಧಿಷ್ಠಿರೋ ಮೋಚಯಾಮಾಸ ತಂ ಚ
ತತೋ ರಾತ್ರೌ ನ್ಯವಸನ್ ಬಾಹ್ಯತಸ್ತೇ ॥೩೫॥

ಧರ್ಮರಾಜ ಸುಶರ್ಮನನ್ನು ಬಿಡುಗಡೆ ಮಾಡಿಸಿದ. ಆ ರಾತ್ರಿಯಲ್ಲಿ ಕೌರವರು ನಗರದ ಹೊರಗೇ ಬೀಡುಬಿಟ್ಟಿದ್ದರು.

ಭೀಮ ಸುಶರ್ಮನನ್ನು ಹಿಡಿದು ನೆಲದಲ್ಲಿ ಕೆಡವಿ ಕಾಲಿಂದ ತಲೆಗೆ

ಚೆನ್ನಾಗಿ ಥಳಿಸಿ ರಥದಲ್ಲಿ ತಂದು ಧರ್ಮರಾಜನ ಮುಂದೆ ನಿಲ್ಲಿಸಿದಾಗ ಆತನಕ್ಕು 'ಬಿಟ್ಟುಬಿಡು' ಎಂದ. 'ನಾನು ದಾಸ' ಎನ್ನಲಿ ಎಂದ ಭೀಮ. ಆಗ ಸುಶರ್ಮನ ಅಣ್ಣ ಅವನ ಪರವಾಗಿ 'ಈತ ವಿರಾಟನ ದಾಸ' ಎಂದು ಹೇಳಿ ಬಿಡಿಸಿಕೊಂಡ. ವಿರಾಟ ಆನಂದದಿಂದ ಧರ್ಮರಾಜನನ್ನು ಸಿಂಹಾಸನದಲ್ಲಿ ಅಭಿಷೇಕ ಮಾಡುವೆನೆಂದ. ಸೂರ್ಯೋದಯಕಾಲದಲ್ಲಿ ನಗರಪ್ರವೇಶ ಮಾಡಿದ.

ಉತ್ತರ ಗೋಗ್ರಹಣ

ತತೋಽಪರದಿನೇ ಸರ್ವೇ ಭೀಷ್ಮದ್ರೋಣಪುರಸ್ಸರಾಃ ।
ರಹಿತಂ ಕೀಚಕೈರ್ಮಾತ್ಸ್ಯಂ ಶಕ್ಯಂ ಮತ್ವಾಽಭಿನಿರ್ಯಯುಃ ॥೩೬॥

ಮರುದಿನ ಕೀಚಕರ ಬಲವಿಲ್ಲದ ವಿರಾಟರಾಜನನ್ನು ಸುಲಭವಾಗಿ ಸೆರೆ ಹಿಡಿಯಲು ಶಕ್ಯವೆಂದು ಬಗೆದು ಭೀಷ್ಮದ್ರೋಣ ಮುಂತಾದವರೆಲ್ಲರೂ ಹೊರಟರು.

ನಗರದ ಉತ್ತರದಿಕ್ಕಿನಲ್ಲಿ ಅರವತ್ತುಸಾವಿರ ಗೋವ್ರುಗಳನ್ನು ಕೌರವರು ಮರುದಿನ ಬೆಳಿಗ್ಗೆ ಅಪಹರಿಸಿದರು. ವಿರಾಟನಿನ್ನೂ ನಗರ ಪ್ರವೇಶ ಮಾಡಿರಲಿಲ್ಲ.

ಕೀಚಕಸ್ಯ ಹಿಡಿಂಬಸ್ಯ ಬಕಕಿರ್ಮೀರಯೋರಪಿ ।
ಜರಾಸಂಧಸ್ಯ ನೃಪತೇಃ ಕಂಸಾದೀನಾಂ ಚ ಸರ್ವಶಃ ॥೩೭॥
ನ ಬಾಧನಾಯ ಭೀಷ್ಮಾದ್ಯಾ ಅಪಿ ಶೇಕುಃ ಕಥಂಚನ ।
ತಸ್ಮಾತ್ ತೇ ಕೀಚಕಂ ಶಾಂತಂ ಶ್ರುತ್ವಾ ಮಾತ್ಸ್ಯಂ ಯಯುರ್ಯುಧೇ ।೩೮।

ಕೀಚಕ ಹಿಡಿಂಬ ಬಕ ಕಿರ್ಮೀರ ಜರಾಸಂಧ ಕಂಸ ಮುಂತಾದವರನ್ನೆಲ್ಲ ನಿಗ್ರಹಿಸಲು ಭೀಷ್ಮ ಮುಂತಾದವರು ಯಾವರೀತಿಯಿಂದಲೂ ಶಕ್ತರಾಗಿರಲಿಲ್ಲ. ಅದರಿಂದ ಕೀಚಕ ಹತನಾದುದನ್ನು ಕೇಳಿ ಅವರು ವಿರಾಟನೊಡನೆ ಯುದ್ಧಕ್ಕೆ ಹೋದರು.

ಯತಿಷ್ಯೇ ರಕ್ಷಿತುಂ ಭೀಮಾದ್ ಧಾರ್ತರಾಷ್ಟ್ರಾನಿತಿ ಸ್ವಕಾಮ್ ।
ಸತ್ಯಾಂ ಕರ್ತುಂ ಪ್ರತಿಜ್ಞಾಂ ತು ಯಯೌ ದ್ರೋಣಃ ಸಪುತ್ರಕಃ ॥೩೯॥

ಕೌರವರನ್ನು ಭೀಮನಿಂದ ರಕ್ಷಿಸಲು ಯತ್ನಿಸುವನೆಂದು ತಾನು ಮಾಡಿದ ಪ್ರತಿಜ್ಞೆಯನ್ನು ಸತ್ಯವಾಗಿಸಲು ದ್ರೋಣ ಪುತ್ರಸಮೇತನಾಗಿ ಯುದ್ಧಕ್ಕೆ ಹೋದ.

ಯದಿ ಯುದ್ಧಾಯ ನಿರ್ಯಾಂತಿ ಜ್ಞಾತಾಃ ಸ್ಯುಃ ಪಾಂಡವಾಸ್ತದಾ ।
ನ ಚೇದ್ ವಿರಾಟಮನತಂ ನಮಯಿಷ್ಯಾಮಹೇ ವಯಮ್ ॥೪೦॥
ಇತಿ ಮತ್ವಾ ವಿರಾಟಸ್ಯ ಜಗೃಹುರ್ಗಾಃ ಸಮಂತತಃ ॥೪೧॥

ಪಾಂಡವರು ಯುದ್ಧಕ್ಕೆ ಬಂದರೆ ಅವರ ಪತ್ತೆಯಾಗುವುದು. ಇಲ್ಲದಿದ್ದರೂ ನಮಗೆ ತಲೆಬಾಗದಿದ್ದ ವಿರಾಟನನ್ನು ಬಾಗಿಸುವೆವು ಎಂದು ಬಗೆದು ವಿರಾಟನ ಗೋವುಗಳನ್ನು ಎಲ್ಲೆಡೆಯಿಂದಲೂ ಆಕ್ರಮಿಸಿದರು.

ತದೋತ್ತರಃ ಸಾರಥಿತ್ವೇ ಪ್ರಕಲ್ಪ್ಯ
ಪಾರ್ಥಂ ಯಯೌ ತಾನ್ ನಿಶಾಮ್ಯೈವ ಭೀತಃ।
ತತೋಽರ್ಜುನಃ ಸಾರಥಿಂ ತಂ ವಿಧಾಯ
ಕೃಚ್ಛ್ರೇಣ ಸಂಸ್ಥಾಪ್ಯ ಚ ತಂ ಯಯೌ ಕುರೂನ್ ॥೪೨॥

ಆಗ ಉತ್ತರಕುಮಾರ ಅರ್ಜುನನನ್ನು ಸಾರಥಿಯಾಗಿ ಮಾಡಿಕೊಂಡು ಯುದ್ಧಕ್ಕೆ ಹೋದ. ಆದರೆ ಕೌರವರನ್ನು ಕಂಡೇ ಹೆದರಿ ಓಡಲು ತೊಡಗಿದ. ಆಗ ಅರ್ಜುನ ಅವನನ್ನು ಕಷ್ಟದಿಂದ ಹಿಡಿದು ನಿಲ್ಲಿಸಿ ತನ್ನ ಸಾರಥಿಯನ್ನಾಗಿ ಮಾಡಿಕೊಂಡು ತಾನೆ ಕೌರವರ ಇದಿರಿಗೆ ಹೋದ.

ವಿರಾಟನ ಮೊದಲ ಹೆಂಡತಿ ಕೋಸಲ ರಾಜ ಪುತ್ರಿ ಸುರಥೆ. ಈಕೆಗೆ ಶ್ವೇತ ಮತ್ತು ಶಂಖ ಇಬ್ಬರು ಮಕ್ಕಳು. ಎರಡನೆ ಹೆಂಡತಿ ಕೇಕಯ ರಾಜಪುತ್ರಿ ಸುದೇಷ್ಣೆ. ಈಕೆಗೆ ಉತ್ತರಕುಮಾರ ಮತ್ತು ಬಭ್ರು ಇಬ್ಬರು ಗಂಡುಮಕ್ಕಳು. ಉತ್ತರೆ ಮಗಳು. ಉತ್ತರಕುಮಾರನಿಗೆ ಭೂಮಿಂಜಯ ಎಂದೂ ಹೆಸರಿದೆ. ವಿರಾಟನಿಗೆ ಶತಾನೀಕ ಮದಿರಾಕ್ಷ ಸೂರ್ಯದತ್ತ ಶ್ರುತಾನೀಕ ಶ್ರುತಧ್ವಜ ಬಲಾನೀಕ ಜಯಾನೀಕ ಜಯಾಶ್ವ ರಥವಾಹನ ಚಂದ್ರೋದಯ ಸಮರಥರೆಂದು ಹನ್ನೊಂದು ಮಂದಿ ಸೋದರರು. ಎಲ್ಲರೂ ದಕ್ಷಿಣ ಗೋಗ್ರಹಣ ಯುದ್ಧಕ್ಕೆ ಹೋಗಿದ್ದರು. ನಗರ ರಕ್ಷಣೆಗೆ ಉತ್ತರಕುಮಾನೊಬ್ಬನೆ ಉಳಿದಿದ್ದ. ಅದರಿಂದ ಅವನೆ ಉತ್ತರ ಗೋಗ್ರಹಣ ಯುದ್ಧಕ್ಕೆ ಹೊರಟ. ಬೃಹನ್ನಳೆ ತಾನು ಅರ್ಜುನನಿಗೆ ಖಾಂಡವ ವನ ದಹನ ಕಾಲದಲ್ಲಿ ಸಾರಥ್ಯ ಮಾಡಿದ ಅನುಭವವಿದೆ ಎನ್ನುತ್ತ ಸಾರಥ್ಯಕ್ಕೆ ಒಪ್ಪಿದಾಗ ಉತ್ತರ ಅಂತಃಪುರಸ್ತ್ರೀಯರ ಮುಂದೆ ಬಡಾಯಿಕೊಚ್ಚಿಕೊಂಡ. ಕೌರವರ ಸೈನ್ಯಸಾಗರವನ್ನು ಕಣ್ಣಾರೆ ಕಂಡಾಗ ತುಂಬ ಗಾಬರಿಯಾಗಿ ಓಡಿದ. ಅರ್ಜುನ ಕಷ್ಟದಿಂದ ಅವನನ್ನು ಹಿಡಿದು ನಿಲ್ಲಿಸಿ ಶಮೀವೃಕ್ಷದ ಬಳಿಗೆ ಕರೆದುಕೊಂಡು ಹೋದ. ತನ್ನ ಪರಿಚಯ ಹೇಳಿ ಶಮಿಯ ಬುಡದಲ್ಲಿ ವಿರಾಟನ ಆ ರಥವನ್ನೂ ಧ್ವಜವನ್ನೂ ಧನುರ್ಬಾಣಗಳನ್ನೂ ಬಿಟ್ಟು ತನ್ನ ದಿವ್ಯರಥವನ್ನೂ ಅಗ್ನಿಯನ್ನೂ ವಾನರಧ್ವಜವನ್ನೂ ನೆನೆದ. ಒಡನೆ ಅಗ್ನಿ ರಥವನ್ನು ತಂದು ನಿಲ್ಲಿಸಿದ. ಆಕಾಶದಿಂದ ವಾನರ ಧ್ವಜವೂ ಬಂದಿಳಿಯಿತು. ಅಸ್ತ್ರದೇವತೆಗಳನ್ನೂ ನೆನೆದಾಗ ಅವರೆಲ್ಲ ಮೈದೋರಿ ನೀನು ಬಯಸಿದಾಗೆಲ್ಲ ಬರುತ್ತೇವೆ ಎಂದರು.

ಪ್ರಚಲಿತ ಭಾರತ ಪಾಠದಲ್ಲಿ ಉತ್ತರನ ರಥದಲ್ಲಿಯೆ ಹಿಂದೆ ಇದ್ದ ಸಿಂಹಧ್ವಜವನ್ನು ಶಮೀ ಬುಡದಲ್ಲಿ ಬಿಟ್ಟು ವಾನರ ಧ್ವಜವಿರಿಸಿದಂತೆ ಕಾಣುತ್ತದೆ. ಪ್ರಮಾಣ ಸಂಗ್ರಹಕಾರರ ಮಹಾಭಾರತ ಪಾಠದಲ್ಲಿ-

ಧ್ವಜಂ ರಥಂ ಚ ಮಾತ್ಸ್ಯಸ್ಯ ಶರಾಂಸ್ತಾನಿ ಧನೂಂಷಿ ಚ।
ಪ್ರಣಿಧಾಯ ಶಮೀಮಧ್ಯೇ ಪ್ರಾಯಾದುತ್ತರ ಸಾರಥಿಃ।

'ವಿರಾಟನ ಧ್ವಜರಥ ಧನುರ್ಬಾಣಗಳನ್ನೆಲ್ಲ ಶಮೀ ಬುಡದಲ್ಲಿ ಬಿಟ್ಟು ಅರ್ಜುನ ಹೊರಟ' ಎಂದಿದೆ. ಪ್ರಚಲಿತಪಾಠದಲ್ಲಿ-

ಧ್ವಜಂ ಸಿಂಹಂ ರಥಾತ್ ತಸ್ಮಾದ ಪನೀಯ ಮಹಾರಥಃ।
ಪ್ರಣಿಧಾಯ ಶಮೀ ಮೂಲೇ ಪ್ರಾಯಾದುತ್ತರ ಸಾರಥಿಃ॥
(ವಿ.46.2)

'ಸಿಂಹಧ್ವಜವನ್ನು ಮಾತ್ರ ಬಿಟ್ಟು ಹೊರಟ' ಎಂದಿದೆ. ಆದರೆ ಅಲ್ಲಿಯೆ ಮುಂದೆ 'ರಥಂ ತಮಾಗತಂ ದೃಷ್ಟ್ವಾ ದಕ್ಷಿಣಂ ಪ್ರಾಕರೋತ್ತದಾ' ಆ ರಥ ಬಂದುದನ್ನು ಕಂಡು ಅರ್ಜುನ ಅದಕ್ಕೆ ಪ್ರದಕ್ಷಿಣೆಮಾಡಿದ ಎಂದು ರಥದ ಆಗಮನವೂ ಉಕ್ತವಾಗಿದೆ.

ಬಳಿಕ ಅರ್ಜುನ ಗಾಂಡೀವ ಅಕ್ಷಯ ಬತ್ತಳಿಕೆಗಳನ್ನು ಧರಿಸಿ ದಿವ್ಯ ರಥವನ್ನೇರಿ ಹೊರಟ. ಅವನ ದೇವದತ್ತ ಶಂಖನಾದ, ಧನುಷ್ಟಂಕಾರ, ಹನುಮಂತನ ಗರ್ಜನೆ, ರಥಚಕ್ರಧ್ವನಿ ಈ ನಾಲ್ಕು ಸೇರಿದಾಗ ಭೂಮಿ ನಡುಗಿತು. ಶತ್ರುಗಳು ಭೀತರಾದರು.

ಆದಾಯ ಗಾಂಡೀವಮಥ ಧ್ವಜಂ ಚ
ಹನೂಮದಂಕಂ ಸದರೋಽಗ್ರತೋ ಗಾಃ।
ನಿವರ್ತ್ಯ ಯುದ್ಧಾಯ ಯಯೌ ಕುರೂಂಸ್ತಾನ್
ಜಿಗ್ಯೇ ಸರ್ವಾನ್ ದ್ವೈರಥೇನೈವ ಸಕ್ತಾನ್ ॥೪೩॥

ಅರ್ಜುನ ತನ್ನ ದಿವ್ಯ ರಥವನ್ನೇರಿ ಹನುಮಂತನ ಚಿಹ್ನೆಉಳ್ಳ ಧ್ವಜವನ್ನೂ ಗಾಂಡೀವವನ್ನೂ ಸ್ವೀಕರಿಸಿ ಶಂಖವನ್ನು ಹಿಡಿದು ಮೊದಲಿಗೆ ಗೋವುಗಳನ್ನು ಹಿಂದೆ ಕಳಿಸಿ ದ್ವಂದ್ವ ರಥಯುದ್ಧದಲ್ಲಿ ತೊಡಗಿದ ಕೌರವರನ್ನೆಲ್ಲ ಪರಾಭವಗೊಳಿಸಿದ.

'ತನ್ನ ದಿವ್ಯ ರಥವನ್ನೇರಿ' ಎಂಬ ಅಂಶ ನಿರ್ಣಯದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಪ್ರಮಾಣ ಸಂಗ್ರಹಕಾರರು ಹೇಳುತ್ತಾರೆ-

'ಸ್ವಸ್ಮೈತ ಪಾವಕ ಪ್ರೇಷಿತ ದಿವ್ಯರಥಂ ಚಾರುಹ್ಯೇತಿ ಶೇಷಃ'।
'ಉತ್ತರನ ರಥದಲ್ಲಿಯೆ ನಿಂತು ಹೋರಾಡಿದರೆ ಭೀಷ್ಮಾದಿಗಳನ್ನು

ಗೆಲ್ಲಲು ಶಕ್ಯವಾಗಲಾರದು' ಎಂದು ಕಾರಣ ಕೊಟ್ಟು ಮಹಾಭಾರತ ದಲ್ಲಿಯೂ ದಿವ್ಯರಥಾಗಮನ ಉಕ್ತವಾಗಿದೆ ಎನ್ನುತ್ತಾರೆ.

ಅರ್ಜುನ ನೇರ ಕೌರವ ಸೈನ್ಯದ ಮುಂದೆ ಹೋಗದೆ ಬೇರೆ ಮಾರ್ಗದಿಂದ ಗೋವುಗಳ ಬಳಿ ಹೋಗಿ ಬಿಡಿಸಿಕೊಂಡು ವಿರಾಟನಗರಕ್ಕೆ ಹಿಂತಿರುಗಿಸಿ ಆಗ ಯುದ್ಧಕ್ಕೆ ಒಬ್ಬೊಬ್ಬರಾಗಿ ಬಂದ ರಥಿಕರೊಡನೆ ದ್ವಂದ್ವಯುದ್ಧಮಾಡಿದ.

ಏಕೀಭೂತಾನ್ ಪುನರೇವಾನುಯಾತಾನ್
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ ।
ಜಗ್ರಾಹ ತೇಷಾಮುತ್ತರೀಯಾಣ್ಯೃತೇ ತು
ಭೀಷ್ಮಸ್ಯ ವೇದಾಸ್ತ್ರಘಾತಂ ಸ ಏವ ॥೪೪॥

ಕೌರವರೆಲ್ಲರೂ ಒಂದಾಗಿ ಪುನಃ ಬಂದಾಗ ಅರ್ಜುನ, ಭೀಷ್ಮನನ್ನು ಹೊರತು, ಎಲ್ಲರನ್ನೂ ಸಂಮೋಹನಾಸ್ತ್ರದಿಂದ ಮೂರ್ಛೆಗೊಳಿಸಿ ಅವರ ಉತ್ತರೀಯಗಳನ್ನು ತೆಗೆಸಿದ. ಭೀಷ್ಮ ಆ ಸಂಮೋಹನಾಸ್ತ್ರಕ್ಕೆ ವಿಜ್ಞಾನಾಸ್ತ್ರದಿಂದ ಪ್ರತೀಕಾರ ಮಾಡುವುದನ್ನು ಬಲ್ಲ.

ದ್ವಂದ್ವ ರಥಯುದ್ಧದಲ್ಲಿ ಮೊದಲಿಗೆ ಕರ್ಣನೆ ಸೋತ. ಅವನ ರಥ ಕುದುರೆಗಳು ಸಾರಥಿ ಬಿಲ್ಲುಗಳು ಎಲ್ಲ ನಾಶವಾದವು. ತಮ್ಮನೂ ಸತ್ತ. ಬಳಿಕ ಕರ್ಣ ಪಲಾಯನ ಗೈದ. ಬಳಿಕ ಭೀಷ್ಮ ದ್ರೋಣ ಅಶ್ವತ್ಥಾಮ ಕೃಪರೂ ಒಬ್ಬೊಬ್ಬರಾಗಿ ಬಂದು ಸೋತು ಹಿಂತಿರುಗಿದರು. ಭೀಷ್ಮ ಬಂದಾಗ ಅವನ ಪಾದದ ಬಳಿ ಎರಡು ಬಾಣಗಳಿಂದ ನಮಿಸಿ ಕಿವಿಗಳ ಬಳಿಗೂ ಎರಡು ಬಾಣಗಳಿಸೆದು ಕುಶಲ ಪ್ರಶ್ನೆ ಮಾಡಿದ. ಆಗ ಭೀಷ್ಮ 'ಅರ್ಜುನನಿಗೆ ಜಯವಾಗಲಿ' ಎಂದು ಆಶೀರ್ವದಿಸಿ ಯುದ್ಧದಲ್ಲಿ ಸೋತು ಹಿಂದಿರುಗಿದ. ದ್ರೋಣನನ್ನೂ ಹೀಗೆ ಆದರಿಸಿದ್ದ ಅರ್ಜುನ. ಬಳಿಕ ದುರ್ಯೋಧನನನ್ನು ಕರೆದಾಗ ಅವನ ರಕ್ಷಣೆಗೆ ಎಲ್ಲರೂ ಬಂದರು ಸಮಸ್ತ ಸೈನ್ಯ ಒಮ್ಮೆಗೇ ಮುನ್ನುಗ್ಗಿತು. ಆಗ ಅರ್ಜುನ ಸಂಮೋಹನಾಸ್ತ್ರದಿಂದ ಎಲ್ಲರನ್ನೂ ಮೂರ್ಛೆಗೊಳಿಸಿದ. ಭೀಷ್ಮನಿಗೆ ಸಂಮೋಹನಾಸ್ತ್ರವೂ ಅದರ ನಿವಾರಣೆಯೂ ತಿಳಿದಿತ್ತು. ಅದರಿಂದ ಮೂರ್ಛೆ ಹೊಂದಲಿಲ್ಲ. ದ್ರೋಣನಿಗೆ ತ್ವಾಷ್ಟ್ರಸಂಮೋಹನಾಸ್ತ್ರಮಾತ್ರ ತಿಳಿದಿತ್ತು. ಅರ್ಜುನ ಐಂದ್ರ ಸಂಮೋಹನಾಸ್ತ್ರ ಪ್ರಯೋಗಿಸಿದ್ದ ಎಂದು ಊಹಿಸಬೇಕು. ಉತ್ತರೆ ತನ್ನ ಗೊಂಬೆಗಳಿಗೆ ಉಡಿಸಲು ವಸ್ತ್ರಾಭರಣ ತರಲು ಹೇಳಿದ್ದಳು. ಉತ್ತರ ಅವುಗಳನ್ನು ಎತ್ತಿಕೊಂಡ. ಎಲ್ಲರೂ ಎಚ್ಚೆತ್ತಾಗ ಭೀಷ್ಮ ಮುಂತಾದ ಹಿರಿಯರಿಗೆ ಎರಡೆರಡು ಬಾಣಗಳಿಂದ ವಂದನೆ ಸಲ್ಲಿಸಿ ದುರ್ಯೋಧನನ

ಕಿರೀಟವನ್ನು ಕೆಳಗೆ ಬೀಳಿಸಿ ಶಮಿಯ ಬುಡಕ್ಕೆ ಹಿಂತಿರುಗಿದ. ಉತ್ತರನಿಗೆ ತನ್ನ ಬಗ್ಗೆ ವಿರಾಟನ ಮುಂದೆ ಏನು ಹೇಳಬೇಡವೆಂದ. ಆತ ಭಯಪಡಬಹುದು ಎಂದು. ಶಮಿಯಲ್ಲಿ ರಥ ಆಯುಧಗಳನ್ನಿಟ್ಟು ತಿರುಗಿ ಬೃಹನ್ನಲಾ ವೇಷದಿಂದ ಸಾರಥ್ಯ ಮಾಡುತ್ತ ನಗರಕ್ಕೆ ಹಿಂತಿರುಗಿದ.

ವಿಧಾಯ ಭೀಷ್ಮಂ ವಿರಥಂ ಜಗಾಮ
ತದಾ ಶ್ರುತ್ವಾ ಮತ್ಸ್ಯಪತಿರ್ಜಿತಾನ್ ಕುರೂನ್ ।
ಮುಮೋದ ಪುತ್ರೇಣ ಜಿತಾ ಇತಿ ಸ್ಮ
ತದಾಕಹ ಷಂಢೇನ ಜಿತಾನ್ ಯುಧಿಷ್ಠಿರಃ ॥ ೪೫ ॥

ಅರ್ಜುನ ಭೀಷ್ಮನನ್ನು ವಿರಥನನ್ನಾಗಿ ಮಾಡಿ ಹಿಂತಿರುಗಿದ. ವಿರಾಟರಾಜ ಕೌರವರು ಪರಾಜಿತರಾದುದನ್ನು ಕೇಳಿ ತನ್ನ ಮಗನಿಂದಲೆ ಅವರು ಪರಾಜಿತರಾದರೆಂದುಕೊಂಡು ಹಿಗ್ಗಿದ. ಆಗ ಯುಧಿಷ್ಠಿರನೆಂದ, 'ಕೌರವರು ಬೃಹನ್ನಲೆಯಿಂದ ಪರಾಜಿತರಾದರು.'

ವಿರಾಟರಾಜ ಸುಶರ್ಮನ ಮೇಲೆ ಜಯಗಳಿಸಿ ನಗರಕ್ಕೆ ಹಿಂತಿರುಗುವಷ್ಟರಲ್ಲಿ ಉತ್ತರಕುಮಾರ ಒಬ್ಬನೆ ಬೃಹನ್ನಳೆಯೊಂದಿಗೆ ಹೋದುದನ್ನು ಕೇಳಿ 'ಅಯ್ಯೋ ನಪುಂಸಕನೊಂದಿಗೆ ಕುವಾರ ಹೋಗಿದ್ದಾನೆ. ಬದುಕಿ ಉಳಿಯಲಾರ' ಎನ್ನುತ್ತ ಅವನ ರಕ್ಷಣೆಗೆ ಹೋಗಲು ಸೈನ್ಯಕ್ಕೆ ಆದೇಶ ನೀಡಿದ. ಧರ್ಮರಾಜನೊಡನೆ ಜೂಜಾಡಲು ಕುಳಿತ. ಅಷ್ಟರಲ್ಲಿ ಉತ್ತರನ ವಿಜಯವಾರ್ತೆ ಬಂದಿತು. ಕಂಕನೆಂದ, 'ಉತ್ತರನ ಸಾರಥ್ಯದಲ್ಲಿ ಬೃಹನ್ನಳೆ ಗೆದ್ದಿರಬೇಕು. ಅವಳ ಜಯಘೋಷಣೆ ನಡೆಯಲಿ' ಎಂದು.

ತದಾ ಕ್ರುದ್ಧಃ ಪ್ರಾಹರತ್ ತಂ ವಿರಾಟಃ
ಸೋಕಕ್ಷೇಣ ತದ್ ಭೀಮಧನಂಜಯಾಭ್ಯಾಮ್ ।
ಶ್ರುತಂ ತದಾ ಕುಪಿತೌ ತೌ ನಿಶಾಮ್ಯ
ನ್ಯವಾರಯತ್ ತಾವಪಿ ಧರ್ಮಸೂನುಃ ॥ ೪೬ ॥

ಆಗ ವಿರಾಟರಾಜ ಕೋಪಗೊಂಡು ಲೆತ್ತದಿಂದ ಧರ್ಮರಾಜನನ್ನು ಹೊಡೆದ. ಇದನ್ನು ಭೀಮಾರ್ಜುನರು ಕೇಳಿದರು. ಕುಪಿತರಾದರು. ಧರ್ಮರಾಜ ನೋಡಿ ಅವರನ್ನು ತಡೆದ.

ಸನ್ಯಾಸಿಯ ರಕ್ತವನ್ನು ನೆಲಕ್ಕೆ ಬೀಳಿಸಿದರೆ ಆಯುಸ್ಸು ನಾಶ. ದೇಶ ನಾಶ. ದೇಶದಲ್ಲಿ ಅನಾವೃಷ್ಟಿ ತಲೆದೋರುತ್ತದೆ ಎನ್ನುತ್ತ ದ್ರೌಪದಿ ಧರ್ಮರಾಜನ ಮೂಗಿನಿಂದ ಬಂದ ರಕ್ತವನ್ನು ಬಂಗಾರದ ಪಾತ್ರೆಯಲ್ಲಿ ಹಿಡಿದಳು. ರಕ್ತ ಸುರಿಯುವಷ್ಟು ಕಾಲ ಅರ್ಜುನನಿಗೆ ಭೆಟ್ಟಿಗೇ ಅವಕಾಶ ಕೊಡಲಿಲ್ಲ. ನಿಂತ ಬಳಿಕ ಕೊಟ್ಟ. ಏಕೆಂದರೆ ರಣರಂಗದಲ್ಲಿ ಹೊರತು

ಬೇರೆಡೆ ಧರ್ಮರಾಜನ ಮೈರಕ್ತ ಹರಿಸಿದವನನ್ನು ಜೀವಸಹಿತ ಬೀಡಲಾರೆನೆಂದು ಅರ್ಜುನನ ಪ್ರತಿಜ್ಞೆ ಇದ್ದಿತು. ಆದರೂ ಈ ವೃತ್ತಾಂತವನ್ನು ಭೀಮಾರ್ಜುನರು ಕೇಳಿದರು, ಕುಪಿತರಾದರು. ಧರ್ಮರಾಜ ತಡೆದ.

ನಿಜಸ್ವರೂಪೇಣ ಸಮಾಸ್ಥಿತಾನ್ ನೋ
ಯದಿ ಸ್ಮ ನಾಸೌ ಪ್ರಣಿಪಾತಪೂರ್ವಕಮ್ ।
ಕ್ಷಮಾಪಯೇದ್ ವಧ್ಯ ಇತ್ಯಾತ್ಮರೂಪಂ
ಸಮಾಸ್ಥಿತಾಸ್ತಸ್ಥುರಥಾಪರೇ ದಿನೇ ॥೪೭॥

ನಿಜರೂಪದಿಂದ ನಾವು ಕುಳಿತಾಗ ವಿರಾಟ ನಮಗೆ ತಲೆಬಾಗಿ ಕ್ಷಮೆ ಕೇಳದಿದ್ದರೆ ಆಗ ವಧಾರ್ಹನೆನಿಸುತ್ತಾನೆ ಎಂದ ಧರ್ಮರಾಜ. ಮರುದಿನ ಪಾಂಡವರು ನಿಜರೂಪ ತಳೆದುನಿಂತರು.

ಅಭಿಮನ್ಯು ವಿವಾಹ

ತದಾ ವಿರಾಟಾಸನಮಾಸ್ಥಿತಂ ನೃಪಂ
ಯುಧಿಷ್ಠಿರಂ ವೀಕ್ಷ್ಯ ವಿರಾಟ ಆಹ ।
ಕಿಮೇತದಿತ್ಯೂಚಿವಾನುತ್ತರೋಽಸ್ಯೈ
ತಾನ್ ಪಾಂಡವಾನ್ ಗೋಗ್ರಹಣೇ ಚ ವೃತ್ತಮ್ ॥೪೮॥

ಆಗ ವಿರಾಟನ ಸಿಂಹಾಸನದಲ್ಲಿ ರಾಜಾ ಯುಧಿಷ್ಠಿರ ಕುಳಿತಿದ್ದುದನ್ನು ವಿರಾಟ ಕಂಡು 'ಇದೇನು?' ಎಂದ. ಉತ್ತರ ಅವನಿಗೆ 'ಅವರು ಪಾಂಡವರು' ಎಂದ. ಗೋಗ್ರಹಣದಲ್ಲಿ ನಡೆದ ವೃತ್ತಾಂತವನ್ನೂ ಹೇಳಿದ.

ತತೋ ವಿರಾಟೋ ಭಯಕಂಪಿತಾಂಗಃ
ಪ್ರಣಮ್ಯ ಪಾರ್ಥಾನ್ ಶರಣಂ ಜಗಾಮ ।
ದದೌ ಚ ಕನ್ಯಾಮುತ್ತರಾಂ ಫಲ್ಗುನಾಯ
ಪುತ್ರಾರ್ಥಮೇವ ಪ್ರತಿಜಗ್ರಾಹ ಸೋಽಪಿ ॥೪೯॥

ಆಗ ವಿರಾಟ ಭಯದಿಂದ ನಡುಗುತ್ತ ತಲೆಬಾಗಿ ಪಾಂಡವರನ್ನು ಶರಣು ಹೊಂದಿದ. ಅರ್ಜುನನಿಗೆ ಮಗಳನ್ನು ವಾಗ್ದಾನ ಮಾಡಿದ. ಅವನು ಅವಳನ್ನು ಮಗನಿಗಾಗಿ ಸ್ವೀಕರಿಸಿದ.

ವಿರಾಟನ ಮಗಳು ಉತ್ತರೆ ಅಜ್ಞಾತವಾಸದ ಒಂದು ವರ್ಷಕಾಲ ಬೃಹನ್ನಳೆಯಿಂದ ನಾಟ್ಯ ವಿದ್ಯೆ ಕಲಿತಳು. ಅವಳನ್ನು ಅರ್ಜುನನಿಗೆ ವಾಗ್ದಾನ ಮಾಡುತ್ತ ನೆಲದಲ್ಲಿ ದಂಡ ಪ್ರಣಾಮಮಾಡಿ ನಾನೀ ರಾಜ್ಯವನ್ನು ನಿಮಗೆ ಕೊಡುತ್ತೇನೆ. ನಿಮ್ಮ ಎಂಜಲು ಉಣ್ಣುತ್ತೇನೆ ಎಂದ ವಿರಾಟ. (ವಿ77.1) ಆದರೆ ಅರ್ಜುನನಿಗೆ ಉತ್ತರೆ ಶಿಷ್ಯಳು. ಮಗಳಿಗೆ ಸಮಾನಳು. ಮತ್ತು ಒಂದು

ವರ್ಷಕಾಲ ಅಂತಃಪುರದಲ್ಲಿ ಅವನ ಜೊತೆಗಿದ್ದುದರಿಂದ ಜನರು ಅವಳ ಶೀಲವನ್ನು ಶಂಕಿಸಬಹುದು. ಮಗನಿಗೆ ತಂದುಕೊಂಡರೆ ಮಗಳಂತೇ ಇದ್ದಳೆಂದು ಸ್ಪಷ್ಟವಾಗುವುದು ಎಂದ ಅರ್ಜುನ.

ಏವಂ ವಿರಾಟಂ ಮೋಚಯಿತ್ವೈವ ಗಾಶ್ಚ
ತಮಸ್ಯನ್ಧೇ ಕೀಚಕಾನ್ ಪಾತಯಿತ್ವಾ ।
ಪ್ರಾಪ್ತೋ ಧರ್ಮಃ ಸುಮಹಾನ್ ವಾಯುಜೇನ
ತಸ್ಮಾನು ಪಾರ್ಥೇನ ಚ ಗೋವಿಮೋಕ್ಷಣಾತ್ ॥೫೦॥

ಹೀಗೆ ವಿರಾಟನನ್ನೂ ಗೋವುಗಳನ್ನೂ ಬಿಡಿಸಿ ಕೀಚಕರನ್ನು ಅಂಧಂತಮಸ್ಸಿನಲ್ಲಿ ಬೀಳಿಸಿ ಭೀಮ ಬಹಳ ಮಹತ್ತಾದ ಪುಣ್ಯ ಸಂಪಾದಿಸಿದ. ಗೋವುಗಳನ್ನು ಬಿಡಿಸಿದ್ದರಿಂದ ಅನಂತರದ ಪುಣ್ಯಶಾಲಿ ಅರ್ಜುನ.

ವಿರಾಟ ರಾಜನಾದ್ದರಿಂದ ಅವನನ್ನು ಶತ್ರುಗಳ ಸೆರೆಯಿಂದ ಭೀಮ ಬಿಡಿಸಿದ್ದು ಮಹಾಪುಣ್ಯಕರ. ಅರ್ಜುನ ಗೋವುಗಳನ್ನು ಬಿಡಿಸಿದ್ದು ಅಷ್ಟು ಪುಣ್ಯಕರವಲ್ಲ.

ಅಯಾತಯನ್ ಕೇಶವಾಯಾಥ ದೂತಾನ್
ಸಹಾಭಿಮನ್ಯುಃ ಸೋಽಪಿ ರಾಮೇಣ ಸಾರ್ಧಮ್ ।
ಆಗಾದನಂತಾನಂದಚಿದ್ ವಾಸುದೇವೋ
ವಿವಾಹಯಾಮಾಸುರಥಾಭಿಮನ್ಯುಮ್ ॥೫೧॥

ಬಳಿಕ ಪಾಂಡವರು ಶ್ರೀಕೃಷ್ಣನಿಗೆ ದೂತರನ್ನು ಕಳಿಸಿದರು. ಅನಂತರ ಸುಖಜ್ಞಾನ ಸ್ವರೂಪನಾದ ವಾಸುದೇವ ಅಭಿಮನ್ಯು ಬಲರಾಮರೊಂದಿಗೆ ಬಂದ. ಬಳಿಕ ಅಭಿಮನ್ಯುವಿಗೆ ವಿವಾಹ ನಡೆಸಿದರು.

ಧರ್ಮರಾಜ ದ್ವಾರಕೆಗೂ ಪಾಂಚಾಲ ದೇಶಕ್ಕೂ ದೂತರನ್ನು ಕಳಿಸಿದ. ಪರಿವಾರ ಸಮೇತ ಶ್ರೀಕೃಷ್ಣನನ್ನೂ ದ್ರುಪದನನ್ನೂ ಕರೆಸಿಕೊಂಡ. ವನವಾಸ ಅಜ್ಞಾತವಾಸದ ತಪಸ್ಸನ್ನು ಭಗವಂತನಿಗೆ ಸಮರ್ಪಿಸಿದ.

ಆಸೀನ್ಮಹಾನುತ್ಸವಸ್ತತ್ರ ತೇಷಾಂ
ದಾಶಾರ್ಹವೀರೈಃ ಸಹ ಪಾಂಡವಾನಾಮ್ ।
ಸಪಾಂಚಾಲಾನಾಂ ವಾಸುದೇವೇನ ಸಾರ್ಧ-
ಮಜ್ಞಾತವಾಸಂ ಸಮತೀತ್ಯ ಮೋದತಾಮ್ ॥೫೨॥

ಅಜ್ಞಾತವಾಸವನ್ನು ಯಶಸ್ವಿಯಾಗಿ ಪೂರೈಸಿ ಆನಂದಗೊಂಡ ಪಾಂಡವರು ಯಾದವ ವೀರರೊಂದಿಗೂ ಪಾಂಚಾಲರೊಂದಿಗೂ ಶ್ರೀಕೃಷ್ಣನೊಂದಿಗೂ ಅಭಿಮನ್ಯು ವಿವಾಹದಲ್ಲಿ ಮಹಾ ಆನಂದ ಅನುಭವಿಸಿದರು.

ಅಜ್ಞಾತವಾಸ ಸಮಾಪ್ತಿ:

ದುರ್ಯೋಧನಾದ್ಯಾಃ ಸೂತಪುತ್ರೇಣ ಸಾರ್ಧಂ
ಸಸೌಬಲೇಯಾ ಯುಧಿ ಪಾರ್ಥಪೀಡಿತಾಃ।
ಭೀಷ್ಮಾದಿಭಿಃ ಸಾರ್ಧಮುಪೇತ್ಯ ನಾಗ-
ಪುರಂ ಮಂತ್ರಂ ಮಂತ್ರಯಾಮಾಸುರತ್ರ ॥೫೩॥

ಯುದ್ಧದಲ್ಲಿ ಅರ್ಜುನನಿಂದ ಹೊಡೆಸಿಕೊಂಡು ದುರ್ಯೋಧನ ಮುಂತಾದವರು ಹಸ್ತಿನಾವತಿಗೆ ಹಿಂತಿರುಗಿ ಬಂದು ಭೀಷ್ಮಾದಿಗಳೊಂದಿಗೆ ಮತ್ತು ಕರ್ಣ ಶಕುನಿಗಳೊಂದಿಗೆ ಮಂತ್ರಾಲೋಚನೆ ಮಾಡಿದರು.

ಅಜ್ಞಾತವಾಸೇ ಫಲ್ಗುನೋ ನೋಽದ್ಯ ದೃಷ್ಟ-
ಸ್ತಸ್ಮಾತ್ ಪುನರ್ಯಾಂತು ಪಾರ್ಥಾ ವನಾಯ।
ಇತಿ ಬ್ರುವಾಣಾನಾಹ ಭೀಷ್ಮೋಽಭ್ಯತೀತ-
ಮಜ್ಞಾತವಾಸಂ ದ್ರೋಣ ಆಹೈವಮೇವ ॥೫೪॥

ಅಜ್ಞಾತವಾಸ ಕಾಲದಲ್ಲಿ ಅರ್ಜುನ ನಮಗೆ ಕಾಣಿಸಿಕೊಂಡಿದ್ದಾನೆ. ಅದರಿಂದ ಪಾಂಡವರು ತಿರುಗಿ ಕಾಡಿಗೆ ಹೋಗಲಿ ಎಂದು ದುರ್ಯೋಧನ ಮುಂತಾದವರು ಹೇಳಿದಾಗ ಭೀಷ್ಮ 'ಅಜ್ಞಾತವಾಸ ಮುಗಿದಿದೆ' ಎಂದ. ದ್ರೋಣನೂ ಹೀಗೇ ಹೇಳಿದ.

ತಯೋರ್ವಾಕ್ಯಂ ತೇ ತ್ವನಾದೃತ್ಯ ಪಾಪಾ
ವನಂ ಪಾರ್ಥಾಃ ಪುನರೇವ ಪ್ರಯಾಂತು।
ಇತಿ ದೂತಂ ಪ್ರೇಷಯಾಮಾಸುರತ್ರ
ಜಾನಂತಿ ವಿಪ್ರಾ ಇತಿ ಧರ್ಮಜೋಽವದತ್ ॥೫೫॥

ಪಾಪಿ ಕೌರವರು ಭೀಷ್ಮದ್ರೋಣರ ಮಾತನ್ನು ತಿರಸ್ಕರಿಸಿ 'ಪಾಂಡವರು ಪುನಃ ಕಾಡಿಗೆ ಹೋಗಲಿ' ಎಂದು ದೂತನನ್ನು ಕಳಿಸಿದರು. 'ಈ ವಿಷಯದಲ್ಲಿ ಬ್ರಾಹ್ಮಣರು ತಿಳಿದಿರುತ್ತಾರೆ' ಎಂದ ಧರ್ಮರಾಜ.

ನಮ್ಮ ಅಜ್ಞಾತವಾಸದ ಕಾಲಾವಧಿ ಮುಗಿಯಿತೆ ಇಲ್ಲವೆ ಎನ್ನುವ ವಿಷಯದಲ್ಲಿ ದ್ರೋಣ ಕೃಪ ಅಶ್ವತ್ಥಾಮ ಮುಂತಾದ ಬ್ರಾಹ್ಮಣರು ಅಧಿಕೃತವಾಗಿ ಬಲ್ಲರು. ಅವರನ್ನು ಕೇಳಿ ತೀರ್ಮಾನಕ್ಕೆ ಬನ್ನಿ ಎಂದು ಧರ್ಮರಾಜ ಕೌರವರಿಗೆ ಹೇಳಿ ಕಳಿಸಿದ.

ಸೌರಮಾಸಾನುಸಾರೇಣ ಧಾರ್ತರಾಷ್ಟ್ರಾ ಅಪೂರ್ಣತಾಮ್।
ಆಹುಶ್ಚಾಂದ್ರೇಣ ಮಾಸೇನ ಪೂರ್ಣಃ ಕಾಲೋಽಖಿಲೋಽಪ್ಯಸೌ ॥೫೬॥

ಚಾಂದ್ರಮಾನದಿಂದ ಅಜ್ಞಾತವಾಸ ಕಾಲವೆಲ್ಲವೂ ಪೂರೈಸಿತ್ತು. ಕೌರವರು ಸೌರಮಾನುಸಾರವಾಗಿ ಪೂರೈಸಿಲ್ಲ ಎಂದರು.

ಸೌರ ಚಾಂದ್ರ ಸಾವನ ನಾಕ್ಷತ್ರ ಬಾರ್ಹಸ್ಪತ್ಯ ಎಂದು ಐದು ಬಗೆಯ ಕಾಲಮಾನಗಳಿವೆ. ಶುಕ್ಲ ಪ್ರತಿಪದೆಯಿಂದ ಅಮಾವಾಸ್ಯೆವರೆಗೆ ಸುಮಾರು ಮೂವತ್ತು ದಿನಗಳಿಂದ ಚಾಂದ್ರಮಾನದಲ್ಲಿ ಒಂದು ತಿಂಗಳಾಗುತ್ತದೆ. ಒಂದು ಸೂರ್ಯ ಸಂಕ್ರಮಣದಿಂದ ಇನ್ನೊಂದು ಸೂರ್ಯ ಸಂಕ್ರಮಣದ ವರೆಗಿನ ಸುಮಾರು ಮೂವತ್ತು ದಿನಗಳು ಸೌರಮಾನದಲ್ಲಿ ಒಂದು ತಿಂಗಳು, ಸೂರ್ಯನ ಮೇಷಾದಿ ರಾಶಿ ಸಂಚಾರಕಾಲ ಒಂದು ತಿಂಗಳೆಂದರೆ ಸೌರಮಾನದಲ್ಲಿ ಮೂವತ್ತು ದಿನಗಳಿಗಿಂತ ಸ್ವಲ್ಪ ಹೆಚ್ಚಿರುತ್ತದೆ. ಚಾಂದ್ರಮಾನದಲ್ಲಿ ಸ್ವಲ್ಪ ಕಡಿಮೆ ಇರುತ್ತದೆ. ಚಾಂದ್ರಮಾನದಲ್ಲಿ ಸುಮಾರು ಮುನ್ನೂರೈವತ್ತ ನಾಲ್ಕು ದಿನಗಳು ಒಂದು ವರ್ಷ. ಸೌರಮಾನದಲ್ಲಿ ಮೂನ್ನೂರ ಅರವತ್ತೈದಕ್ಕಿಂತ ಸ್ವಲ್ಪ ಹೆಚ್ಚು ದಿನಗಳು ಒಂದು ವರ್ಷ. ಹೀಗಾಗಿ ಪ್ರತಿ ವರ್ಷಕ್ಕೆ ಹನ್ನೆರಡರಂತೆ ಹದಿಮೂರು ವರ್ಷಗಳಿಗೆ ಐದು ತಿಂಗಳು ಆರುದಿನಗಳು ವ್ಯತ್ಯಾಸವಾಗುತ್ತದೆ. ಕೌರವರು ವನವಾಸವಿನ್ನೂ ಬಾಕಿ ಇದೆ ಎಂದರು. ಇದು ಸೌರಮಾನ ಪ್ರಕಾರ. ಪಾಂಡವರು ಚಾಂದ್ರಮಾನ ಪ್ರಕಾರ ಮುಗಿದಿದೆ ಎಂದರು. ಮಹಾಭಾರತದಲ್ಲಿ ಭೀಷ್ಮ ಹಾಗೇ ಹೇಳುತ್ತಾನೆ-

ಪಂಚಮೇ ಪಂಚಮೇ ವರ್ಷೇ ದ್ವೌಮಾಸಾವಧಿ ಮಾಸಕೌ।
ಏಷಾಮಭ್ಯಧಿಕಾ ಮಾಸಾಃ ಪಂಚ ಚ ದ್ವಾದಶ ಕ್ಷಪಾಃ॥
(ವಿರಾಟ 52-3)

ಇಲ್ಲಿ ಲಕ್ಷಾಲಂಕಾರ ಹೇಳುತ್ತದೆ-

ಚಾಂದ್ರಮಾನದಲ್ಲಿ ಐದೈದು ವರ್ಷಗಳು ಮುಗಿದಾಗ ಎರಡೆರಡು ಅಧಿಕ ಮಾಸಗಳು ಬರುತ್ತವೆ. ಹದಿಮೂರು ವರ್ಷಗಳಲ್ಲಿ ಒಟ್ಟು ಐದು ಮಾಸಗಳು ಮತ್ತು ಹನ್ನೆರಡು ರಾತ್ರಿಗಳು ಎಂದರೆ ಆರುದಿನಗಳು ಅಧಿಕ ಬರುತ್ತವೆ.

ದೇವ ಪಿತೃಕಾರ್ಯಗಳಿಗೆ ಅಧಿಕಮಾಸ ಸೇರಿಸಿ ಗಣನೆ ಮಾಡಿದರೂ ತಮ್ಮ ನಿಯಮಾದಿಗಳಿಗೆ ಬಿಟ್ಟೇ ಗಣನೆ ಮಾಡಬಹುದು ಎನ್ನುವುದು ಭೀಷ್ಮ ದ್ರೋಣಾದಿಗಳ ಅಭಿಪ್ರಾಯ. ಕೌರವರು ಅದಕ್ಕೆ ಒಪ್ಪಲಿಲ್ಲ.[1]

1. ಪಂಚಮೇ ಪಂಚಮೇ ವರ್ಷೇ ದ್ವೌಮಾಸೌ, ಸಾರ್ಧ ವರ್ಷದ್ವಯೇ ಏಕೋಽಧಿಮಾಸಃ, ತ್ರಯೋದಶಾನಾಂ ವರ್ಷಾಣಾಂ ಪಂಚಅಧಿಮಾಸಾಃ । ಚಶವರ್ಷಾಣಾಂ ಚತ್ವಾರಃ। ಪುನಃ ಸಾರ್ಧವರ್ಷದ್ವಯಸ್ಯ ಏಕೋಮಾಸಃ। ಏವಂ ಸಾರ್ಧ ದ್ವಾದಶವರ್ಷಾಣಾಂ ಪಂಚಾಧಿಕ ಮಾಸಾಃ।

ದಿನಾನಾಮಧಿಪಃ ಸೂರ್ಯಃ ಪಕ್ಷಮಾಸಾಬ್ದಪಃ ಶಶೀ ।
ತಸ್ಮಾತ್ ಸೌಮ್ಯಾಬ್ದಮೇವಾತ್ರ ಮುಖ್ಯಮಾಹುರ್ಮನೀಷಿಣಃ ॥ ೫೭ ॥

ದಿನಗಳಿಗೆ ಅಧಿಪತಿ ಸೂರ್ಯನಾದರೂ ಪಕ್ಷ-ಮಾಸ-ವರ್ಷಗಳಿಗೆ ಚಂದ್ರ ಅಧಿಪತಿ. ಅದರಿಂದ ಬಲ್ಲವರು ಅಜ್ಞಾತವಾಸದ ವಿಷಯದಲ್ಲಿ ಚಾಂದ್ರವರ್ಷವೆ ಮುಖ್ಯ ಎನ್ನುತ್ತಾರೆ.

'ಪಕ್ಷಾಧಿಪೋ ಮಾಸಾಧಿಪೋಽಬ್ದಾಧಿಪಶ್ಚಂದ್ರ ಏವ' ಎಂದು ವಾದಿರಾಜೀಯದಲ್ಲಿಯೂ, 'ಪಕ್ಷಮಾಸಾಬ್ದಪಃ ಪಕ್ಷ ಮಾಸಾಬ್ದಾನಾಂ ಸ್ವಾಮೀ' ಎಂದು ವರದರಾಜೀಯದಲ್ಲಿಯೂ ಪಾಠವಿರುವುದರಿಂದ ಅದಕ್ಕನುಗುಣವಾಗಿ ಅನುವಾದಿಸಲಾಗಿದೆ. 'ಪಕ್ಷಮಾಸಾಧಿಪಃ ಶಶೀ' ಎಂಬ ಪಾಠದಲ್ಲಿ ವರ್ಷಕ್ಕೆ ಅಧಿಪತಿ ಚಂದ್ರ ಎನ್ನುವುದು ಸಿಗುವುದಿಲ್ಲ.

ಚಂದ್ರ ಕೆಲವು ಕಾಲ ಹಗಲಿನಲ್ಲಿ ಕೆಲವು ಕಾಲ ರಾತ್ರಿಯಲ್ಲಿ ಉದಿಸುವುದರಿಂದ ಚಂದ್ರೋದಯವನ್ನೂ ದಿನವನ್ನೂ ತಿಳಿಯುವುದು ಕಷ್ಟ, ಸೂರ್ಯೋದಯ ನಿಯಮಬದ್ಧವಾಗಿ ನಡೆಯುವುದರಿಂದ ದಿನಗಣನೆಗೆ ಅದುವೆ ಅನುಕೂಲ. ಹೀಗಾಗಿ ದಿನಗಳಿಗೆ ಅಧಿಪತಿ ಸೂರ್ಯ. ಆದರೆ ಹುಣ್ಣಿಮೆಯಿಂದ ಅಮಾವಾಸ್ಯವರೆಗೆ ಕೃಷ್ಣಪಕ್ಷ, ಅಮಾವಾಸ್ಯೆಯಿಂದ ಹುಣ್ಣಿಮೆವರೆಗೆ ಶುಕ್ಲಪಕ್ಷ. ಎರಡೂ ಪಕ್ಷ ಸೇರಿ ಒಂದು ಮಾಸ, ಹನ್ನೆರಡು ಮಾಸಗಳಿಂದ ಒಂದು ವರ್ಷ ಎಂದು ಚಂದ್ರನ ಗತಿಯನ್ನು ಆಧರಿಸಿ ವ್ಯವಹರಿಸುವುದರಿಂದ ಚಂದ್ರನೆ ಪಕ್ಷ ಮಾಸ ವರ್ಷಗಳಿಗೆ ಅಧಿಪತಿ. ಯಾಜ್ಞಿಕರೂ ಯತಿಗಳೂ ಎಲ್ಲೆಡೆ ಚಾಂದ್ರಮಾನದಿಂದಲೆ ವರ್ಷವನ್ನು ಗ್ರಹಿಸುವುದರಿಂದ ಚಾಂದ್ರವರ್ಷವೆ ಮುಖ್ಯ. ಅದರಿಂದಲೇ ಮಾಸಪೂರ್ತಿಯಾಗುವ ದಿನವೆಂದೇ ಹುಣ್ಣಿಮೆಯನ್ನು ಪೌರ್ಣಮಾಸೀ ಎನ್ನುತ್ತಾರೆ.[1]

ಪುನರುರ್ವರಿತಷಣ್ಮಾಸಾನಾಂ ದ್ವಾದಶಕ್ಷಪಾಃ। ಕ್ಷಪಾಶಬ್ದೇನ ತ್ರಿಂಶದ್ಘಟಿಕಾತ್ಮಕಮರ್ಧದಿನಮುಚ್ಯತೇ। ಸಂಪೂರ್ಣಾಃ ಷಡ್ ದಿವಸಾ ಇತಿಯಾವತ್। ತಸ್ಮಾದಾಪಾತದರ್ಶಿನಃ ತ್ರಯೋದಶವರ್ಷಾಣಾಂ ಷಡ್ ದಿನಾಧಿಕ ಪಂಚಮಾಸೈರ್ನ್ಯೂನತಾಮಾಶಂಕಂತೇ। ದೇವಪಿತೃಕಾರ್ಯಾರ್ಘೇ ಸಾಧಿಕಮಾಸ ಸಂವತ್ಸರಾನುಸರಣೇಽಪಿ ಸ್ವೋಕ್ತ ನಿಯಮರಕ್ಷಣಾಯ ಪೌರ್ಣಮಾಸೀತಃ ಪೌರ್ಣಮಾಸೀ ಪರ್ಯಂತಮೇಕೋ ಮಾಸ ಇತಿ ಚಾಂದ್ರಮಾಸಾನುಸರಣೇನೈವ ಕೃತಕೃತ್ಯತ್ವಾದಿತಿ ಭಾವಃ।
-ಲಕ್ಷಾಲಂಕಾರ

1. ಸೂರ್ಯೋದಯ ಮಾರಭ್ಯ ಸೂರ್ಯೋದಯ ಪರ್ಯಂತ ಮೇಕೈಕಂ ದಿನಂ ಭವತಿ। ಅತಃ ದಿನಾನಾ ಮಧಿಪಃ ಸೂರ್ಯ ಏವ। ಚಂದ್ರೋದಯಸ್ತು ರಾತ್ರಾವಹ್ನ್ಯಪಿ ಭವನ್ ದಿನ ಸಂಖ್ಯಾಯೈ ನಾಲಂ। ಅತಃ ಸೂರ್ಯ ಏವ ದಿನಾನಾ ಮಧಿಪ ಇತಿ ಭಾವಃ। ಪಕ್ಷಸ್ತು ಚಾಂದ್ರಮಾನರೀತ್ಯಾ ಪೌರ್ಣಮಾಸೀ ಮಾರಭ್ಯಾಮಾವಾಸ್ಯಾಪರ್ಯಂತಮೇಕಃ। ಸ ಕೃಷ್ಣಪಕ್ಷ ಇತ್ಯುಚ್ಯತೇ। ಅಮಾವಾಸ್ಯಾಮಾರಭ್ಯ ಪೌರ್ಣಮಾಸೀಪರ್ಯಂತಮಪರಃ। ಸ ಶುಕ್ಲ ಪಕ್ಷ ಇತ್ಯುಚ್ಯತೇ। ಅತಃ ಪಕ್ಷಾಧಿಪೋ ಮಾಸಾ-

ಸೌಮ್ಯಂ ಕಾಲಂ ತತೋ ಯಜ್ಞೇ ಗೃಹ್ಣಂತಿ ನ ತು ಸೂರ್ಯಜಮ್ ।
ತದೇತದವಿಚಾರ್ಯೈವ ಲೋಭಾಚ್ಚ ಧೃತರಾಷ್ಟ್ರಜೈಃ ॥೫೮॥
ರಾಜ್ಯಂ ನ ದತ್ತಂ ಪಾರ್ಥೇಭ್ಯಃ ಪಾರ್ಥಾಃ ಕಾಲಸ್ಯ ಪೂರ್ಣತಾಮ್ ।
ಖ್ಯಾಪಯನ್ತೋ ವಿಪ್ರವರೈರುಪಪ್ಲಾವ್ಯಮುಪಾಯಯುಃ ॥೫೯॥

ಅದರಿಂದ ಚಾಂದ್ರಸಮಯವನ್ನೇ ಯಜ್ಞದಲ್ಲಿ ಸ್ವೀಕರಿಸುತ್ತಾರೆ ಹೊರತು ಸೌರ ಸಮಯವನ್ನಲ್ಲ. ಕೌರವರು ಇದನ್ನು ವಿಚಾರ ಮಾಡದೆ ಲೋಭಕ್ಕೂ ವಶರಾಗಿ ಪಾಂಡವರಿಗೆ ರಾಜ್ಯವನ್ನು ಕೊಡಲಿಲ್ಲ. ಪಾಂಡವರು ತಮ್ಮ ವನವಾಸ ಕಾಲಾವಧಿ ಪೂರ್ಣವಾಗಿರುವುದನ್ನು ಬ್ರಾಹ್ಮಣರ ಮೂಲಕ ಲೋಕಕ್ಕೆ ತಿಳಿಸುತ್ತ ಅವರೊಂದಿಗೆ ಉಪಪ್ಲಾವ್ಯನಗರಕ್ಕೆ ಬಂದರು.

ಉಪಪ್ಲಾವ್ಯ ಉಪಪ್ಲವ್ಯವೆಂದು ಎರಡು ಪಾಠಗಳಿವೆ. ಮಹಾಭಾರತ ನೀಲಕಂಠೀ ವ್ಯಾಖ್ಯಾನ ಪ್ರಕಾರ ಉಪಪ್ಲಾವ್ಯ ವಿರಾಟನಗರದಲ್ಲಿಯೆ ಒಂದು ಭಾಗ. ಗದಗು ಭಾರತ ಪ್ರಕಾರ ವಿರಾಟನಗರದ ಬಳಿಯಲ್ಲಿಯೆ ಇರುವ ಒಂದು ಉಪನಗರ, ಪಾಂಡವರೆ ನಿರ್ಮಿಸಿದುದು–

ಬಳಿಕ ಸುಮೂರ್ಹತದಲಿ ಮತ್ಸ್ಯನ
ಹೊಳಲ ಹೊರವಂಟುತರ ದಿಶಾ
ವಳಯದಲಿ ರಚಿಸಿದರು ಪಪ್ಲವ್ಯಾಖ್ಯ ಪುರವರವ (ವಿರಾಟ 10-40)

ಸವಾಸುದೇವಾ ಅಖಿಲೈಶ್ಚ ಯಾದವೈಃ
ಪಾಂಚಾಲಮಾತ್ಸ್ಯೈಶ್ಚ ಯುತಾಃ ಸಭಾರ್ಯಾಃ ।
ಉಪಪ್ಲಾವ್ಯೇ ತೇ ಕತಿಚಿದ್ ದಿನಾನಿ
ವಾಸಂ ಚಕ್ರುಃ ಕೃಷ್ಣಸಂಶಿಕ್ಷಿತಾರ್ಥಾಃ ॥೬೦॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಅಜ್ಞಾತವಾಸಸಮಾಪ್ತಿರ್ನಾಮ ತ್ರಯೋವಿಂಶೋಽಧ್ಯಾಯಃ

ಪಾಂಡವರು ಪತ್ನೀ ಸಮೇತರಾಗಿ ಕೆಲವು ದಿನಗಳ ಕಾಲ ಶ್ರೀಕೃಷ್ಣನಿಂದ ಪುರುಷಾರ್ಥಗಳ

ಧಿಪೋಽಬ್ದಾಧಿಪಶ್ಚಂದ್ರ ಏವ। ಯಾಜ್ಞಿಕಾನಾಂ ಯತೀನಾಂ ಚ ಸರ್ವದೇಶೇಷ್ವಪಿ ಸೌಮ್ಯಮಾಸೇನೈವ ಪ್ರವರ್ತನಾತ್ ಸ ಏವ ಮಾಸೋಽಬ್ದಶ್ಚ ಶ್ಲಾಘ್ಯಃ। ಅತ ಏವ ಮಾಸಪೂರ್ತೇರವಧಿ ದಿನತ್ವಾತ್ ಪೌರ್ಣಮಾಸೀತ್ಯಾಹುರಿತಿ ಸರ್ವಮವದಾತಂ। –ವಾದಿರಾಜೀಯ

ಬಗ್ಗೆ ಉಪದೇಶಗಳನ್ನು ಕೇಳುತ್ತ ಶ್ರೀಕೃಷ್ಣ ಎಲ್ಲ ಯಾದವರು, ಪಾಂಚಾಲರು ಮತ್ತು ಮಾತ್ಸ್ಯರೊಡನೆ ಉಪಪ್ಲಾವ್ಯನಗರದಲ್ಲಿ ವಾಸಮಾಡಿದರು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಅಜ್ಞಾತವಾಸಸಮಾಪ್ತಿ
ಎಂಬ ಇಪ್ಪತ್ತಮೂರನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 24

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯತ್ಸಂಮತ್ಯಾ ಪೃಷತತನುಜಪ್ರೇಷಿತ ಬ್ರಾಹ್ಮಣೋಕ್ತ್ಯಾ
ರಾಜ್ಯಂ ನಾದಾದನುಜಜನಿತಸ್ಯಾಂಬಿಕೇಯೋಽರ್ಜುನಸ್ಯ ।
ಯಃ ಸಾಹಾಯ್ಯಂ ವ್ಯಧಿತ ನಗರೀಂ ಕೌರವಾಣಾಮವಾಪ್ತಃ
ಸ್ವೋಕ್ತೈಃ ಕೃಷ್ಣಸ್ತದನಭಿಮತೇಽವಾಪ್ತಪಾರ್ಥಃ ಸ ನೋಽವ್ಯಾತ್ ॥೨೪॥

ಶ್ರೀಕೃಷ್ಣನ ಅನುಮತಿಯಿಂದ ದ್ರುಪದ ತನ್ನ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ರಾಯಭಾರಕ್ಕೆ ಕಳಿಸಿದರೂ ಧೃತರಾಷ್ಟ್ರ ಧರ್ಮರಾಜನಿಗೆ ರಾಜ್ಯ ಕೊಡಲಿಲ್ಲ. ಶ್ರೀಕೃಷ್ಣ ಅರ್ಜುನನಿಗೆ ಸಹಾಯ ನೀಡಿದ. ಸಂಧಾನಕ್ಕಾಗಿ ಹಸ್ತಿನಾವತಿಗೆ ಹೋಗಿ, ಧೃತರಾಷ್ಟ್ರ ಸಂಧಿಗೆ ಒಪ್ಪದಿದ್ದಾಗ ಪಾಂಡವರ ಬಳಿಗೇ ಹಿಂತಿರುಗಿದ. ಅಂಥಹ ಶ್ರೀಕೃಷ್ಣ ನಮ್ಮನ್ನು ಕಾಪಾಡಲಿ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೪

ಉದ್ಯೋಗಪರ್ವ

॥ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಹಸ್ತಿನಾವತಿಗೆ ರಾಯಭಾರ

ಓಂ ॥ ತತಃ ಸಮ್ಮಂತ್ರ್ಯಾನುಮತೇ ಕೃಷ್ಣಸ್ಯ ಸ್ವಪುರೋಹಿತಮ್ ।
ದ್ರುಪದಃ ಪ್ರೇಷಯಾಮಾಸ ಧೃತರಾಷ್ಟ್ರಾಯ ಶಾಂತಯೇ ॥೧॥

ಬಳಿಕ ದ್ರುಪದರಾಜ ಚೆನ್ನಾಗಿ ಮಂತ್ರಾಲೋಚನೆ ಮಾಡಿ ಕೃಷ್ಣನ ಅನುಮತಿಯಿಂದ ತನ್ನ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ಸಂಧಿಗಾಗಿ ಕಳಿಸಿದ.

ದ್ರುಪದ ವಿರಾಟ ಮುಂತಾದ ರಾಜರ ಸಭೆಯಲ್ಲಿ ಶ್ರೀಕೃಷ್ಣನೆಂದ. 'ಕೌರವರು ಮೋಸದ ಜೂಜಿನಲ್ಲಿ ಅಪಹರಿಸಿದ ಪಾಂಡವರ ರಾಜ್ಯವನ್ನು ಅವರಿಗೆ ಹಿಂತಿರುಗಿಸುವರೋ ಇಲ್ಲವೊ ಎಂಬುದನ್ನು ತಿಳಿಯಲು ಒಬ್ಬ ದೂತನನ್ನು ಕಳಿಸೋಣ'. ಬಲರಾಮನೆಂದ 'ದೂತ ನಯವಾಗಿ ಮಾತನಾಡಬೇಕು. ಜೂಜಾಡಲು ಬಾರದ ಧರ್ಮರಾಜ ಎಲ್ಲರೂ ತಡೆಯುತ್ತಿದ್ದರೂ ಜೂಜಾಡಲು ಹೋಗಿ ಅಲ್ಲಿಯೂ ಕರ್ಣ ದುರ್ಯೋನಾದಿಗಳನ್ನು ಬಿಟ್ಟು ಶಕುನಿಯೊಂದಿಗೆ ಆಡಿಸೋತ. ಇದರಲ್ಲಿ ದುರ್ಯೋಧನನ ತಪ್ಪೇನಿಲ್ಲ. ಅದರಿಂದ ರಾಜ್ಯವನ್ನು ಹಿಂತಿರುಗಿಸಲು ಅವನಲ್ಲಿ ತಲೆಬಾಗಿ ವಿನಯದಿಂದಲೆ ಕೇಳಿಕೊಳ್ಳಬೇಕು.' ಇದನ್ನು ಸಾತ್ಯಕಿ ಪ್ರತಿಭಟಿಸಿದ 'ಜೂಜಾಡಲು ಬಾರದ ಧರ್ಮರಾಜನನ್ನು ದುರ್ಯೋಧನ ತಾನೇ ಕರೆದು ಮೋಸದ ಜೂಜಿನಿಂದ ರಾಜ್ಯ ಅಪಹರಿಸಿ ವನಕ್ಕೆ ಅಟ್ಟಿದ. ಈಗ ವನವಾಸ ಅಜ್ಞಾತವಾಸಗಳನ್ನು ಸರಿಯಾಗಿ ಪೂರೈಸಿದರೂ ಇಲ್ಲ ಎನ್ನುತ್ತಿದ್ದಾರೆ. ಇಂಥ ದುಷ್ಟರಲ್ಲಿ ಸಾಮಪ್ರಯೋಗ ತಪ್ಪು.' ದ್ರುಪದನೆಂದ, 'ಕತ್ತೆಯ ಮೈ ದಡವುತ್ತ ಕಾಮಧೇನುವಿಗೆ ಹೊಡೆದಂತೆ ಇದು. ದುರ್ಯೋಧನನಿಗೆ ಸಾಮವಲ್ಲ. ದಂಡವೆ ಸರಿ. ಅದರಿಂದ ಮೊದಲಿಗೆ ಶಲ್ಯ ಭಗದತ್ತ ಬಾಹ್ಲೀಕ ಮುಂತಾದ ರಾಜರ ಬಳಿಗೆ ಮೈತ್ರಿಯ ಒಪ್ಪಂದಕ್ಕೆ ರಾಯಭಾರಿಗಳನ್ನು ಕಳಿಸೋಣ. ವಿಲಂಬ ಮಾಡಿದರೆ ದುರ್ಯೋಧನನೆ ಅವರನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತಾನೆ. ಅದರಿಂದ ಮಿತ್ರಕೂಟವನ್ನು

ಸೇರಿಸಿದ ಬಳಿಕ ನಮ್ಮ ಪುರೋಹಿತರನ್ನು ಧೃತರಾಷ್ಟ್ರನ ಬಳಿಗೆ ಕಳಿಸೋಣ'. ದ್ರುಪದನ ಈ ಸೂಚನೆಗೆ ಶ್ರೀಕೃಷ್ಣ ಸಂಮತಿ ಸೂಚಿಸಿ ದ್ವಾರಕೆಗೆ ತೆರಳಿದ. ದ್ರುಪದ ಏಳು ಅಕ್ಷೌಹಿಣಿ ಸೈನ್ಯ ಸೇರಿಸಿ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ಕಳಿಸಿದ. ಅಷ್ಟರಲ್ಲಿಯೆ ದುರ್ಯೋಧನ ಹನ್ನೊಂದು ಅಕ್ಷೌಹಿಣಿ ಸೈನ್ಯ ಸಂಗ್ರಹಿಸಿದ್ದ.

ಸ ಗತ್ವಾ ಧೃತರಾಷ್ಟ್ರಂ ತಂ ಭೀಷ್ಮದ್ರೋಣಾದಿಭಿರ್ಯುತಮ್ ।
ಉವಾಚ ನ ವಿರೋಧಸ್ತ ಉತ್ಪಾದ್ಯೋ ಧರ್ಮಸೂನುನಾ ॥೨॥

ದ್ರುಪದನ ಪುರೋಹಿತ ಹಸ್ತಿನಾವತಿಗೆ ಹೋಗಿ ಭೀಷ್ಮ ದ್ರೋಣಾದಿ ಸಮೇತ ಕುಳಿತಿದ್ದ ಧೃತರಾಷ್ಟ್ರನಿಗೆ ಹೇಳಿದ, 'ಧರ್ಮರಾಜನೊಂದಿಗೆ ವಿರೋಧ ಮಾಡಬೇಡ.

ಯಸ್ಯ ಭೀಮಾರ್ಜುನೌ ಯೋಧೌ ನೇತಾ ಯಸ್ಯ ಜನಾರ್ದನಃ ।
ಶ್ರುತಾಸ್ತೇ ಭೀಮನಿಹತಾ ಜರಾಸಂಧಾದಯೋಽಖಿಲಾಃ ॥೩॥

ಧರ್ಮರಾಜನಿಗೆ ಭೀಮಾರ್ಜುನರು ಯೋಧರು. ಶ್ರೀಕೃಷ್ಣ ಮಾರ್ಗದರ್ಶಕ. ಜರಾಸಂಧಾದಿ ರಾಜರು ಎಲ್ಲರೂ ಭೀಮನಿಂದ ಹತರಾಗಿರುವುದನ್ನು ನೀನೆ ಕೇಳಿರುವಿ.

ಯಥಾ ಚ ರುದ್ರವಚನಾದವಧ್ಯಾ ರಾಕ್ಷಸಾಧಿಪಾಃ । ॥೪॥
ತೀರ್ಥವಿಘ್ನಕರಾಃ ಸರ್ವತೀರ್ಥಾನ್ಯಾಶ್ಚಾದ್ಯ ಸಂಸ್ಥಿತಾಃ।
ತಿಸ್ರಃ ಕೋಟ್ಯೋ ಮಹಾವೀರ್ಯಾ ಭೀಮೇನೈವ ನಿಷೂದಿತಾಃ ॥೫॥
ಭ್ರಾತೄಣಾಂ ಬ್ರಾಹ್ಮಣಾನಾಂ ಚ ಲೋಕಾನಾಂ ಚ ಹಿತೈಷಿಣಾ ।
ತತೋ ಹಿ ಸರ್ವತೀರ್ಥಾನಿ ಗಮ್ಯಾನ್ಯಾಸನ್ ನೃಣಾಂ ಕ್ಷಿತೌ ॥೬॥

ರುದ್ರವರದಿಂದ ಅವಧ್ಯರೆನಿಸಿದ ಮಹಾ ಬಲಿಷ್ಠರಾದ ಮೂರುಕೋಟಿ ಮಹಾ ರಾಕ್ಷಸರು ಎಲ್ಲ ತೀರ್ಥಕ್ಷೇತ್ರಗಳಲ್ಲಿ ವಿಘ್ನ ಉಂಟುಮಾಡುತ್ತ ಸುತ್ತಮುತ್ತ ಆವರಿಸಿದ್ದರು. ಸೋದರರಿಗೂ ಬ್ರಾಹ್ಮಣರಿಗೂ ಲೋಕದ ಜನರಿಗೂ ಹಿತವನ್ನು ಬಯಸಿ ಭೀಮನೇ ಅವರೆಲ್ಲರನ್ನೂ ಸಂಹರಿಸಿದ. ಅದರಿಂದ ಈಗ ಭೂಮಿಯಲ್ಲಿ ಎಲ್ಲ ತೀರ್ಥಕ್ಷೇತ್ರಗಳೂ ಮನುಷ್ಯರಿಗೆ ಹೋಗಿಬರಲು ಶಕ್ಯವಾಗಿವೆ.

ಯಥಾ ಜಟಾಸುರಃ ಪಾಪಃ ಶರ್ವಾಣೇವರಸಂಶ್ರಯಾತ್ ।
ಅವಧ್ಯೋ ವಿಪ್ರರೂಪೇಣ ವಂಚಯನ್ನೇವ ಪಾಂಡವಾನ್ ॥೭॥

ಪಾಪಿಯಾದ ಜಟಾಸುರ ಪಾರ್ವತಿಯ ವರಬಲದಿಂದ ಅವಧ್ಯನಾಗಿದ್ದು ಬ್ರಾಹ್ಮಣರೂಪದಿಂದ ಪಾಂಡವರನ್ನು ವಂಚಿಸುತ್ತಲಿತ್ತಿದ್ದ.

ಜ್ಞಾತ್ವಾಽಪಿ ಭೀಮಸೇನೇನ ವಿಪ್ರರೂಪಸ್ಯ ನೋ ವಧಃ ।
ಯೋಗ್ಯ ಇತ್ಯಹತೋ ಭೀಮೇ ಮೃಗಯಾರ್ಥಂ ಗತೇ ಕ್ವಚಿತ್ ॥೮॥

ಯಮೌ ಯುಧಿಷ್ಠಿರಂ ಕೃಷ್ಣಾಂ ಚಾಕದಾಯ್ಯೈವ ಪರಾದ್ರವತ್ ।
ದೃಷ್ಟ್ವೋ ಭೀಮೇನ ತಾಂಸ್ಥಕ್ತ್ವಾ ಸಂಸಕ್ತಸ್ತೇನ ಸಂಗರೇ ॥೯॥

ಭೀಮ ಇದನ್ನು ತಿಳಿದೂ ಕೂಡ 'ಬ್ರಾಹ್ಮಣ ವೇಷ ಧರಿಸಿದ್ದಾನೆ, ಕೊಲ್ಲುವುದು ಸರಿಯಲ್ಲ' ಎಂದು ಕೊಲ್ಲದೆ ಬಿಟ್ಟಿದ್ದ. ಒಂದು ದಿನ ಭೀಮ ಬೇಟೆಗೆ ಹೋಗಿದ್ದಾಗ ಜಟಾಸುರ ನಕುಲ ಸಹದೇವರನ್ನೂ ಧರ್ಮರಾಜನನ್ನೂ ದ್ರೌಪದಿಯನ್ನೂ ಎತ್ತಿಕೊಂಡು ಓಡಿದ. ಭೀಮ ತನ್ನನ್ನು ಕಂಡಾಗ ಅವರನ್ನು ಬಿಟ್ಟು ಭೀಮನೊಡನೆ ಯುದ್ಧಕ್ಕೆ ನಿಂತ.

ನಿಪಾತ್ಯ ಭೂಮೌ ಪಾದೇನ ಸುಚೂರ್ಣತಶಿರಾಸ್ತಮಃ ।
ಜಗಾಮ ಕಿಮು ತೇ ಪುತ್ರಾಃ ಶಕ್ಯಾ ಹಂತುಮಿತಿ ಸ್ಮ ಹ ।
ನಿವಾತಕವಚಾಶ್ಚೈವ ಹತಾಃ ಪಾರ್ಥೇನ ತೇ ಶ್ರುತಾಃ ॥೧೦॥

ಭೀಮ ಜಟಾಸುರನನ್ನು ನೆಲದಲ್ಲಿ ಕೆಡವಿ ತಲೆಯನ್ನು ಕಾಲಿಂದ ಪುಡಿಗೈದ. ಆತ ಅಂಧತಮಸ್ಸಿಗೆ ನಡೆದ. ಇಂಥ ಭೀಮನಿಗೆ ನಿನ್ನ ಮಕ್ಕಳನ್ನು ಕೊಲ್ಲುವುದು ಶಕ್ಯವೆಂದು ಬೇರೇನು ಹೇಳಬೇಕು? ನಿವಾತಕವಚರೂ ಅರ್ಜುನನಿಂದ ಹತರಾದುದನ್ನು ನೀನು ಕೇಳಿರುವಿ.

ಜಟಾಸುರ ಬ್ರಾಹ್ಮಣ ವೇಷತೊಟ್ಟು ಬದರಿಕಾಶ್ರಮದಲ್ಲಿ ಪಾಂಡವರ ಜೊತೆ ಸೇರಿದ. ಪಾಂಡವರ ಆಯುಧಗಳನ್ನು ದ್ರೌಪದಿಯನ್ನೂ ಅಪಹರಿಸುವ ಆಸೆ ಆತನಿಗೆ. ಬ್ರಾಹ್ಮಣ, ಆಯುಧಗಳನ್ನು ಪರೀಕ್ಷಿಸುತ್ತಿದ್ದಾನೆ ಎಂದಾಗ ಭೀಮನಿಗೆ ಈತ ಮಾರುವೇಷದವನೆಂಬುದು ತಿಳಿಯಿತು. ಆದರೂ ಬ್ರಾಹ್ಮಣವೇಷಕ್ಕೆ ಪೂಜ್ಯತೆ ನೀಡಬೇಕು, ಅವನಿನ್ನೂ ಅಪರಾಧ ಮಾಡದಿದ್ದಾಗ ಕೊಲ್ಲುವುದೂ ಸರಿಯಲ್ಲವೆಂದು ಸುಮ್ಮನಿದ್ದ. ಅರ್ಜುನ ಆಗ ಐದು ವರ್ಷಕಾಲ ಅಸ್ತ್ರವಿದ್ಯೆ ಕಲಿಯುತ್ತ ಸ್ವರ್ಗದಲ್ಲಿ ವಾಸ ಮಾಡುತ್ತಿದ್ದ. ಒಂದು ದಿನ ಭೀಮ ಬೇಟೆಗೆ ಹೋಗಿದ್ದಾಗ, ಲೋಮಶಾದಿ ಮುನಿಗಳು ಸ್ನಾನಾಹ್ನಿಕಾದಿಗಳಿಗಾಗಿ ದೂರ ಹೋಗಿದ್ದಾಗ, ಜಟಾಸುರ ತನ್ನ ಸ್ವಾಭಾವಿಕವಾದ ರಾಕ್ಷಸ ರೂಪ ತಳೆದು ಧರ್ಮರಾಜ ನಕುಲ ಸಹದೇವರನ್ನೂ ದ್ರೌಪದಿಯನ್ನೂ ಆಯುಧಗಳನ್ನೂ ಹೊತ್ತು ಓಡಲು ತೊಡಗಿದ. ಸಹದೇವ ಹೇಗೋ ಕೆಳಗೆ ಹಾರಿ ಹೋರಾಟಕ್ಕೆ ನಿಂತ. ಭೀಮನನ್ನು ಕೂಗಿಕರೆದ. ಧರ್ಮರಾಜ ತನ್ನ ಶರೀರದ ಭಾರ ಹೆಚ್ಚಿಸಿಕೊಂಡು ರಾಕ್ಷಸನಿಗೆ ಶ್ರಮ ಉಂಟುಮಾಡಿದ. ಅಷ್ಟರಲ್ಲಿ ಭೀಮ ಬಂದು, 'ಅಂದೇ ನಾನು ನಿನ್ನನ್ನು ಕಂಡು ಎಲ್ಲ ತಿಳಿದಿದ್ದೆ. ನಿನ್ನ ನೀಚ ಬುದ್ಧಿ ಪ್ರಕಟವಾಗಲೆಂದು ಕಾದಿದ್ದೆ' ಎನ್ನುತ್ತ ರಾಕ್ಷಸನನ್ನು ನೆಲಕ್ಕೆ ಕೆಡವಿ ತಲೆಯ ಮೇಲೆ ತುಳಿದು ಸಾಯಿಸಿದ. ರಾಕ್ಷಸ ಹಿಂದೆ ಬ್ರಾಹ್ಮಣ ವೇಷದಲ್ಲಿದ್ದರೂ ಈಗ ರಾಕ್ಷಸ ವೇಷದಲ್ಲಿದ್ದುದರಿಂದ ಕೊಂದ. ಒಂದು ವೇಳೆ ಬ್ರಾಹ್ಮಣವೇಷದಲ್ಲಿಯೇ

ಇದ್ದಿದ್ದರೂ ಅವನೇ ಯುದ್ಧಕ್ಕೆ ನಿಂತಿದ್ದರಿಂದ ಕೊಲ್ಲಬಹುದಿತ್ತು. ಅಧರ್ಮವಾಗುತ್ತಿರಲಿಲ್ಲ.[1]

ಘೋಷಯಾತ್ರೆ, ಉತ್ತರಗೋಗ್ರಹಣಾದಿಗಳನ್ನೂ ಪುರೋಹಿತ ನೆನಪಿಸಿದನೆಂದು ವಾದಿರಾಜೀಯ ಹೇಳಿದೆ.

ಜಾನಾಸಿ ಚ ಹರೇರ್ವೀರ್ಯಂ ಯಸ್ಯೇದಮಖಿಲಂ ವಶೇ ।
ಸಬ್ರಹ್ಮರುದ್ರಶಕ್ರಾದ್ಯಂ ಚೇತನಾಚೇತನಾತ್ಮಕಮ್ ॥೧೧॥

ಶ್ರೀಕೃಷ್ಣನ ಶಕ್ತಿಯನ್ನೂ ನೀನು ಬಲ್ಲೆ. ಬ್ರಹ್ಮರುದ್ರ ಇಂದ್ರಾದಿ ಚೇತನಾ ಚೇತನಾತ್ಮಕ ಸಮಸ್ತ ಪ್ರಪಂಚ ಅವನ ವಶದಲ್ಲಿದೆ.

ತಸ್ಮಾದೇತೈಃ ಪಾಲಿತಸ್ಯ ಧರ್ಮಜಸ್ಯ ಸ್ವಕಂ ವಸು ।
ದೀಯತಾಮಿತಿ ತೇನೋಕ್ತೋ ಧೃತರಾಷ್ಟ್ರೋ ನ ಚಾಕರೋತ್ ॥೧೨॥

ಅದರಿಂದ ಭೀಮ ಅರ್ಜುನ ಕೃಷ್ಣರಿಂದ ರಕ್ಷಿತನಾಗಿರುವ ಧರ್ಮರಾಜನಿಗೆ ಅವನ ಸಂಪತ್ತನ್ನು ಕೊಟ್ಟುಬಿಡು, ಹೀಗೆ ದ್ರುಪದನ ಪುರೋಹಿತ ಹೇಳಿದರೂ ಧೃತರಾಷ್ಟ್ರ ಅದರಂತೆ ಮಾಡಲಿಲ್ಲ.

ಶ್ರೀಕೃಷ್ಣ ಯಾವ ಕಡೆಗೆ

ತತಃ ಸಹೈವ ಯದುಭಿಃ ಕೃಷ್ಣಂ ದ್ವಾರವತೀಂ ಗತಮ್ ।
ಯುದ್ಧಸಾಹಾಯ್ಯಮಿಚ್ಛಂತೌ ಧಾರ್ತರಾಷ್ಟ್ರಧನಂಜಯೌ ।
ಯುಗಪದ್ ಯಯತುಸ್ತತ್ರ ವೇಗೇನಾಜಯದರ್ಜುನಮ್ ॥೧೩॥
ದುರ್ಯೋಧನಃ ಶಿರಸ್ಥಾನ ಆಸೀನೋಽಭೂದ್ಧರೇಸ್ತದಾ ।
ದರ್ಪಾನ್ನಾಹಂ ರಾಜರಾಜ ಉಪಾಸ್ಯೇ ಪಾದಯೋರಿತಿ ॥೧೪॥

ಅದರಿಂದ ದುರ್ಯೋಧನ ಮತ್ತು ಅರ್ಜುನರಿಬ್ಬರೂ ಯುದ್ಧಕ್ಕೆ ಸಹಾಯವನ್ನು ಬಯಸಿ ಏಕಸ್ಮಾತ್ ಏಕಕಾಲದಲ್ಲಿ ಕೃಷ್ಣನ ಬಳಿ ಹೊರಟರು. ಕೃಷ್ಣ ಆಗ ಯಾದವರೊಂದಿಗೆ ದ್ವಾರಕೆಯಲ್ಲಿ ಇದ್ದ. ದುರ್ಯೋಧನ ವೇಗದಲ್ಲಿ ಅರ್ಜುನನನ್ನು ಮೀರಿಸಿದ. ನಾನು ರಾಜರಿಗೆ ರಾಜ. ಕೃಷ್ಣನ ಕಾಲುಗಳ ಬಳಿ ಕುಳಿತುಕೊಳ್ಳಲಾರೆ ಎಂದು ಅಹಂಕಾರದಿಂದ ತಲೆಯ ಬಳಿಯೆ ಕುಳಿತುಕೊಂಡ.

ಗದಗು ಭಾರತದಲ್ಲಿ ಮೊದಲಿಗೆ ಅರ್ಜುನ ಬರುತ್ತಾನೆ. ಬಳಿಕ ದುರ್ಯೋಧನ. (ಉ. 1-24)

---

1. ಸಂಸಕ್ತಸ್ತೇನ ಸಂಗರ ಇತ್ಯುಕ್ತ್ಯಾ ತೇನೈವ ಸಂಗರೇ ಸಂಸಕ್ತತ್ವಾತ್ ವಿಪ್ರರೂಪಸ್ಯಾಪಿ ತಸ್ಯ ಹನನೇ ನ ದೋಷ ಇತಿ ಸೂಚಯತಿ। -ವಾದಿರಾಜೀಯ

ತಯೋರಾಗಮನಂ ಪೂರ್ವಂ ಜ್ಞಾತ್ವೈವ ಹಿ ಹರಿಃ ಪ್ರಭುಃ ।
ಅಸುಪ್ತಃ ಸುಪ್ತವಚ್ಛಯ್ಯೇ ತತ್ರಾತಿಷ್ಠದ್ ಧನಂಜಯಃ ॥೧೫॥
ಪ್ರಣಮ್ಯ ಪಾದಯೋಃ ಪ್ರಹ್ವೋ ಭಕ್ತ್ಯುದ್ರೇಕಾತ್ ಕೃತಾಂಜಲಿಃ ॥೧೬॥

ಅರ್ಜುನ ದುರ್ಯೋಧನರಿಬ್ಬರ ಆಗಮನವನ್ನು ಮೊದಲಿಗೆ ತಿಳಿದೇ ಇದ್ದ ಪ್ರಭು ಶ್ರೀಕೃಷ್ಣ ನಿದ್ರೆ ಇಲ್ಲದವನಾದರೂ ನಿದ್ರಿಸಿದವನಂತೆ ಮಲಗಿದ್ದ. ಅರ್ಜುನ ಭಕ್ತ್ಯುದ್ರೇಕದಿಂದ ಕೃಷ್ಣನ ಪಾದಗಳಿಗೆ ನಮಿಸಿ ಬಾಗಿ ಕೈಮುಗಿದು ನಿಂತುಕೊಂಡ.

ತಮ್ಮೈಕ್ಷತ್ ಪ್ರಥಮಂ ದೇವೋ ಜಾನನ್ನಪಿ ಸುಯೋಧನಮ್ ।
ಸ್ವಾಗತಂ ಫಲ್ಗುನೇತ್ಯುಕ್ತೇ ಪೂರ್ವಮಾಗಾಮಹಂ ತ್ವಿತಿ ॥೧೭॥
ಅಹ ದುರ್ಯೋಧನಸ್ತಂ ಚ ಸ್ವಾಗತೇನಾಭ್ಯಪೂಜಯತ್ ॥೧೮॥

ದುರ್ಯೋಧನ ಮೊದಲಿಗೆ ಬಂದಿದ್ದನ್ನು ತಿಳಿದೂ ಕೂಡ ಶ್ರೀಕೃಷ್ಣ ಮೊದಲಿಗೆ ಅರ್ಜುನನನ್ನು ಕಂಡು 'ಅರ್ಜುನ! ನಿನಗೆ ಸ್ವಾಗತ' ಎಂದ. ದುರ್ಯೋಧನನೆಂದ. 'ನಾನೇ ಮೊದಲಿಗೆ ಬಂದಿರುವೆ' ಶ್ರೀಕೃಷ್ಣ ಅವನಿಗೂ ಸ್ವಾಗತ ಹೇಳಿ ಸತ್ಕರಿಸಿದ.

'ದುರ್ಯೋಧನ' ಎಂದರೆ ಶತ್ರುಗಳಿಗೆ ಅವನೊಡನೆ ಯುದ್ಧಮಾಡಿ ಗೆಲ್ಲುವುದು ಅಶಕ್ಯ ಎಂದರ್ಥ. 'ಸುಯೋಧನ' ಎಂದರೆ ಅವನು ಶತ್ರುಗಳೊಡನೆ ಯುದ್ಧ ಮಾಡಿ ಸುಲಭವಾಗಿ ಸೋಲಿಸುತ್ತಾನೆ ಎಂದರ್ಥ. ಎರಡೂ ಹೆಸರುಂಟು.

ತಯೋರಾಗಮನೇ ಹೇತುಂ ಶ್ರುತ್ವಾ ಪ್ರಾಹ ಜನಾರ್ದನಃ ।
ಏಕಃ ಪೂರ್ವಾಗತೋಽತ್ರಾನ್ಯಃ ಪೂರ್ವದೃಷ್ಟೋ ಮಯಾ ಯತಃ ॥೧೯॥
ಸಮಂ ಕರಿಷ್ಯೇ ಯುವಯೋರೇಕತ್ರಾಹಂ ನಿರಾಯುಧಃ ।
ಅನ್ಯತ್ರ ದಶಲಕ್ಷಂ ಮೇ ಪುತ್ರಾಃ ಶೂರಾಃ ಪದಾತಯಃ ॥೨೦॥

ಶ್ರೀಕೃಷ್ಣ ಅರ್ಜುನ ದುರ್ಯೋಧನರಿಬ್ಬರ ಆಗಮನದ ಉದ್ದೇಶವನ್ನೂ ಕೇಳಿ 'ಒಬ್ಬ ಮೊದಲಿಗೆ ಬಂದಿದ್ದಾನೆ. ಒಬ್ಬ ಮೊದಲಿಗೆ ಕಣ್ಣಿಗೆ ಬಿದ್ದಿದ್ದಾನೆ. ಅದರಿಂದ ನಿಮಗಿಬ್ಬರಿಗೂ ಸಮಾನವಾಗಿಯೆ ಸಹಾಯ ಮಾಡುವೆನು. ಒಂದು ಕಡೆ ನಿರಾಯುಧನಾದ ನಾನಿರುವೆ. ಇನ್ನೊಂದು ಕಡೆ ಹತ್ತು ಲಕ್ಷ ಮಂದಿ ಶೂರರಾದ ನನ್ನ ಮಕ್ಕಳ ಸೈನ್ಯ' ಎಂದ.

ಇತ್ಯುಕ್ತೇ ಫಲ್ಗುನಃ ಕೃಷ್ಣಂ ವವ್ರೇ ತದ್ಭಕ್ತಿಮಾನ್ ಯತಃ ।
ಅನ್ಯಸ್ತತ್ರಾಭಕ್ತಿಮತ್ತ್ವಾದ್ ವವ್ರೇ ಗೋಪಾನ್ ಪ್ರಯುದ್ಧ್ಯತಃ ॥೨೧॥

ಶ್ರೀಕೃಷ್ಣ ಹೀಗೆ ಹೇಳಿದಾಗ ಅರ್ಜುನ ಶ್ರೀಕೃಷ್ಣನನ್ನು ಸ್ವೀಕರಿಸಿದ. ಏಕೆಂದರೆ ಅವನು ಕೃಷ್ಣನಲ್ಲಿ ಭಕ್ತಿ ಉಳ್ಳವ. ದುರ್ಯೋಧನ ಅವನಲ್ಲಿ ಭಕ್ತಿರಹಿತನಾದ್ದರಿಂದ ಯೋಧರಾದ ಗೋಪಾಲಕರನ್ನೇ ಆರಿಸಿಕೊಂಡ.

ಶ್ರೀಕೃಷ್ಣ ಉಪಪ್ಲಾವ್ಯದಿಂದ ದ್ವಾರಕೆಗೆ ಹೊರಟಾಗಲೆ ಗೂಢಚಾರರಿಂದ ಅದನ್ನು ತಿಳಿದ ದುರ್ಯೋಧನ ಸಹಾಯ ಕೇಳಲು ದ್ವಾರಕೆಗೆ ಧಾವಿಸಿದ. ಅರ್ಜುನನೂ ಆಗ ಅಲ್ಲಿಗೇ ಹೊರಟಿದ್ದ. ಇಬ್ಬರೂ ಬಂದರು. ದುರ್ಯೋಧನ ಮೊದಲಿಗೆ ಬಂದು ಕೃಷ್ಣ ಮಲಗಿದ್ದನ್ನು ಕಂಡು ತಾನು ರಾಜಾಧಿರಾಜನೆಂಬ ಅಹಂಕಾರದಿಂದ ತಲೆಯ ಬಳಿ ಕುಳಿತ. ಬಳಿಕ ಬಂದ ಅರ್ಜುನ ಭಕ್ತಿಯಿಂದ ಕಾಲಬಳಿ ನಿಂತ. 'ಮೊದಲಿಗೆ ಬಂದವನು ನಾನು ನನಗೇ ಸಹಾಯ ನೀಡಬೇಕೆಂ' ದು ದುರ್ಯೋನ ವಾದಿಸಿದ. 'ನೀನು ಮೊದಲಿಗೆ ಬಂದಿರಬಹುದು, ನಾನು ಮೊದಲಿಗೆ ಕಂಡಿರುವುದು ಅರ್ಜುನನನ್ನು. ಅದರಿಂದ ಇಬ್ಬರಿಗೂ ಸಹಾಯ ಮಾಡುವೆನು. ಒಂದುಕಡೆ ನಿರಾಯುಧನಾದ ನಾನು. ಇನ್ನೊಂದು ಕಡೆ ಶೂರರಾದ ಹತ್ತುಲಕ್ಷ ಗೋಪಾಲಕರ ನಾರಾಯಣೀ ಸೈನ್ಯ. ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲು ಮೊದಲನೆ ಅವಕಾಶ ಅರ್ಜುನನಿಗೆ. ಏಕೆಂದರೆ ಅವನು ಕಿರಿಯ. ನೀನು ಹಿರಿಯ. ಕಿರಿಯರಿಗೇ ಮೊದಲು ಅವಕಾಶ ಕೊಡಬೇಕು' ಎಂದ ಕೃಷ್ಣ. ~~ಅರ್ಜುನ ಕೃಷ್ಣನನ್ನೇ ಆರಿಸಿಕೊಂಡ. ದುರ್ಯೋಧನನಿಗೆ ನಗು ಬಂದಿತು.~~ ಜೊತೆಗೆ, ಸೈನ್ಯ ತನ್ನದಾಯಿತೆಂದು ಆನಂದವಾಯಿತು.

ಪಾರ್ಥಾನಾಮೇವ ಸಾಹಾಯ್ಯಂ ಕರಿಷ್ಯನ್ನಪಿ ಕೇಶವಃ ।
ತಸ್ಯಾಭಕ್ತಿಂ ದರ್ಶಯಿತುಂ ಚಕ್ರೇ ಸಮವದೀಶ್ವರಃ ॥೨೨॥

ಶ್ರೀಕೃಷ್ಣ ಪಾಂಡವರಿಗೆ ಮಾತ್ರವೆ ಸಹಾಯ ಮಾಡುವವನಾಗಿದ್ದರೂ ದುರ್ಯೋಧನನ ಅಭಕ್ತಿಯನ್ನು ಲೋಕಕ್ಕೆ ತೋರಿಸುವುದಕ್ಕಾಗಿ ಸಮಾನತೆಯ ನಟನೆಯನ್ನು ಮಾಡಿದ.

ಕೃಷ್ಣ! ನಿನಗೆ ನಾವಿಬ್ಬರೂ ಬಂಧುತ್ವದಲ್ಲಿ ಸಮಾನರು ಸ್ನೇಹಸಂಬಂಧದಲ್ಲಿಯೂ ಸಮಾನರು. ಅದರಿಂದ ಮೊದಲಿಗೆ ಬಂದಿರುವ ನನಗೇ ನೀವು ಸಹಾಯ ಮಾಡಬೇಕು ಎಂದಿದ್ದ ದುರ್ಯೋಧನ. ಕೃಷ್ಣ ಈ ಸಮಾನತೆಯನ್ನು ನಿರಾಕರಿಸಲಿಲ್ಲ. ಅದನ್ನೆ ನಟನೆ ಮಾಡಿದ. ಇದು ದುರ್ಯೋಧನನಿಗೆ ಭಕ್ತಿ ಇಲ್ಲ ಎಂದು ಲೋಕಕ್ಕೆ ತೋರುವುದಕ್ಕಾಗಿ. ಅವನಿಗೆ ನಿರಾಯುಧನಾದ ಕೃಷ್ಣ ಬೇಡವಾದ. ಕೃಷ್ಣನ ಮಹಿಮೆ ಅವನಿಗೆ ತಿಳಿದಿಲ್ಲ. ಅವನು ಭಕ್ತನಲ್ಲ. ಅರ್ಜುನ ಭಕ್ತ, ಜ್ಞಾನಿ ಎನ್ನುವ ವ್ಯತ್ಯಾಸವನ್ನು ತೋರಿಸುವುದಕ್ಕಾಗಿ ಸಮಾನತೆಯನ್ನು ನಟಿಸಿದ್ದ. ಅಥವಾ ಸರ್ವಶಕ್ತನಾದ ತನಗೂ ಅಲ್ಪವಾದ ನಾರಾಯಣೀ ಸೇನೆಗೂ ಸಮಾನತೆಯನ್ನು ನಟಿಸಿದ. ಆ ಸಮಾನತೆಯನ್ನು ಒಪ್ಪಿ ದುರ್ಯೋಧನನ ಅಭಕ್ತಿಯನ್ನು ಲೋಕಕ್ಕೆ ತೋರಿಸಿಕೊಟ್ಟ.

ತತಃ ಪಾರ್ಥೇನ ಸಹಿತಃ ಪಾಂಡವಾನ್ ಕೇಶವೋ ಯಯೌ ।
ದುರ್ಯೋಧನೋ ಯಯೌ ರಾಮಂ ಸ ಭಯಾತ್ ಕೇಶವಸ್ಯ ಚ ।
ನ ಸಾಹಾಯ್ಯಂ ಕರೋಮೀತಿ ಪ್ರಾಹ ತತ್ಸ್ನೇಹವಾನಪಿ ॥ ೨೩ ॥

ಬಳಿಕ ಅರ್ಜುನಸಮೇತನಾಗಿ ಕೃಷ್ಣ ಪಾಂಡವರ ಬಳಿಗೆ ನಡೆದ. ದುರ್ಯೋಧನ ಬಲರಾಮನ ಬಳಿಗೆ ಹೋದ. ಬಲರಾಮ ದುರ್ಯೋಧನನಲ್ಲಿ ಸ್ನೇಹ ಉಳ್ಳವನೇ ಆದರೂ ಕೃಷ್ಣನ ಭಯದಿಂದ 'ನಾನು ಸಹಾಯ ಮಾಡುವುದಿಲ್ಲ' ಎಂದ.

'ಉಪಪ್ಲಾವ್ಯದ ಮಂತ್ರಾಲೋಚನ ಸಭೆಯಲ್ಲಿ ನಾನು ನಿನ್ನ ಪರವಾಗಿ ವಾದಿಸಿದೆ. ನಮಗೆ ಪಾಂಡವರು ಕೌರವರು ಸಮಾನರು ಎಂದೆ. ಆಗ ಸಾತ್ಯಕಿ ಪ್ರತಿಭಟಿಸಿದ. ಕೃಷ್ಣನೂ ನನ್ನ ಮಾತನ್ನು ಒಪ್ಪಲಿಲ್ಲ. ಪಾಂಡವರ ಪಕ್ಷ ವಹಿಸಿದ. ನಾನಂತೂ ಕೃಷ್ಣನನ್ನು ಕ್ಷಣ ಮಾತ್ರವೂ ಬಿಟ್ಟಿರಲಾರೆ. ಅದರಿಂದ ನಿಮ್ಮಿಬ್ಬರಿಗೂ ಸಹಾಯ ಮಾಡಲಾರೆ. ತೀರ್ಥಯಾತ್ರೆಗೇ ಹೊರಟು ಹೋಗುವೆ' ಎಂದ ಬಲರಾಮ. ಅವನಿಗೆ ಕೃಷ್ಣನ ಭಯವೆಂದರೆ ಅವನ ಪ್ರೀತಿಯಿಂದ ತಾನು ವಂಚಿತನಾದೇನೆಂದು ಭಯ.

ಉಪಪ್ಲಾವ್ಯೇ ಸಭಾಯಾಂ ಹಿ ತತ್ಪಕ್ಷೀಯಂ ವಚೋ ಬ್ರುವನ್ ।
ನಿರಾಕೃತಃ ಸಾತ್ಯಕಿನಾ ಸಮಕ್ಷಂ ಕೇಶವಸ್ಯ ಚ ॥ ೨೪ ॥

ಉಪಪ್ಲಾವ್ಯದಲ್ಲಿ ನಡೆದ ಮಂತ್ರಾಲೋಚನ ಸಭೆಯಲ್ಲಿ ಬಲರಾಮ ದುರ್ಯೋಧನನ ಪರವಾಗಿ ವಾದಿಸಿದಾಗ ಅವನ ವಾದವನ್ನು ಕೃಷ್ಣನ ಸಮ್ಮುಖದಲ್ಲಿಯೆ ಸಾತ್ಯಕಿ ನಿರಾಕರಿಸಿದ.

ಸೈನ್ಯ ಜಮಾವಣೆ

ತತೋ ದುರ್ಯೋಧನಂ ನಾಯಾತ್ ಸ ಚ ಹಾರ್ದಿಕ್ಯಸಂಯುತಃ ॥ ೨೫ ॥
ಜಗಾಮ ಹಸ್ತಿನಪುರಮಕ್ಷೋಹಿಣ್ಯೋ ದಶಾಭವನ್ ।
ಏಕಾ ಚ ಧಾರ್ತರಾಷ್ಟ್ರಸ್ಯ ನಾನಾದೇಶ್ಯೈರ್ನರೈಃ ಕೃತಾಃ ।
ಸಪ್ತ ಪಾಂಡುಸುತಾನಾಂ ಚ ಮಾತ್ಸ್ಯದ್ರುಪದಕೇಕಯೈಃ ॥ ೨೬ ॥
ಧೃಷ್ಟಕೇತುಜರಾಸಂಧಸುತಕಾಶಿನೃಪೈರ್ಯುತಾಃ ।
ಪುರುಜಿತ್ ಕುಂತಿಭೋಜಶ್ಚ ಚೇಕಿತಾನಶ್ಚ ಸಾತ್ಯಕಿಃ ॥ ೨೭ ॥
ಪಾಂಡವಾನ್ ಸೇನಯಾ ಯುಕ್ತಾಃ ಸಮೀಯುರ್ದೇವಪಕ್ಷಿಣಃ ।
ವಿಂದಾನುವಿಂದಾವಾವಂತ್ಯೌ ಜಯತ್ಸೇನೋಽನ್ಯಕೇಕಯಾಃ ।
ಕ್ಷೇಮಧೂರ್ತಿರ್ದಂಡಧಾರಃ ಕಲಿಂಗೋಽಂಬಷ್ಠ ಏವ ಚ ॥ ೨೮ ॥
ಶ್ರುತಾಯುರಚ್ಯುತಾಯುಶ್ಚ ಬೃಹದ್ಬಲಸುದಕ್ಷಿಣೌ ।
ಶ್ರುತಾಯುಧಃ ಸೈಂಧವಶ್ಚ ರಾಕ್ಷಸೋಽಲಂಬುಸಸ್ತಥಾ ।
ಅಲಾಯುಧೋಽಲಂಬಲಶ್ಚ ದೈತ್ಯಾ ದುರ್ಯೋಧನಂ ಯಯುಃ ॥ ೨೯ ॥

ಅದರಿಂದ ಬಲರಾಮ ದುರ್ಯೋಧನನ ಪಕ್ಷಕ್ಕೆ ಹೋಗಲಿಲ್ಲ. ಕೃತವರ್ಮ ಮತ್ತು ಒಂದು ಅಕ್ಷೌಹಿಣಿ ಸೇನೆಯೊಂದಿಗೆ ದುರ್ಯೋಧನ ಹಸ್ತಿನಾವತಿಗೆ ಹಿಂತಿರುಗಿದ. ದುರ್ಯೋಧನನ ಪಕ್ಷದಲ್ಲಿ ನಾನಾದೇಶದ ರಾಜರಿಂದ ಯುಕ್ತವಾದ ಹನ್ನೊಂದು ಅಕ್ಷೌಹಿಣಿ ಸೈನ್ಯ ಕೂಡಿತು. ಪಾಂಡವರ ಪಕ್ಷದಲ್ಲಿ ದೇವಪಕ್ಷಿಗಳಾದ ವಿರಾಟ ದ್ರುಪದ ಕೈಕೆಯ ಧೃಷ್ಟಕೇತು; ಜರಾಸಂಧಪುತ್ರ ಸಹದೇವ, ಕಾಶಿರಾಜ, ಪುರುಜಿತ್, ಕುಂತಿ ಭೋಜ, ಚೇಕಿತಾನ, ಸಾತ್ಯಕಿ ಇವರಿಂದ ಯುಕ್ತವಾದ ಏಳು ಅಕ್ಷೌಹಿಣಿ ಸೈನ್ಯಗಳು ಸೇರಿದುವು. ಅವಂತಿಯ ವಿಂದ ಅನುವಿಂದರು, ಜಯತ್ಸೇನ, ಬೇರೆ ಕೇಕಯರು, ಕ್ಷೇಮಧೂರ್ತಿ, ದಂಡಧಾರ, ಕಲಿಂಗ, ಅಂಬಷ್ಠ, ಶ್ರುತಾಯು ಅಚ್ಯುತಾಯು ಬೃಹದ್ಬಲ, ಸುದಕ್ಷಿಣ, ಶ್ರುತಾಯುಧ, ಸೈಂಧವ, ರಾಕ್ಷಸರಾದ ಅಲಂಬುಸ ಅಲಾಯುಧ ಅಲಂಬಲರು ದುರ್ಯೋಧನ ಪಕ್ಷವನ್ನು ಸೇರಿದರು.

ಒಂದು ರಥ, ಒಂದು ಆನೆ, ಮೂರು ಕುದುರೆ ಐವರು ಕಾಲಾಳುಗಳು ಸೇರಿದರೆ ಒಂದು ಚತುರಂಗ ಪತ್ತಿಸೈನ್ಯವಾಗುವುದು. ಮೂರು ಪತ್ತಿಗಳು ಒಂದು ಸೇನಾಮುಖವಾಗುವುದು. ಮೂರು ಸೇನಾಮುಖ ಒಂದು ಗುಲ್ಮ. ಮೂರು ಗುಲ್ಮ ಒಂದು ಗುಣ. ಮೂರು ಗುಣ ಒಂದು ವಾಹಿನಿ. ಮೂರು ವಾಹಿನಿ ಒಂದು ಪೃತನೆ. ಮೂರು ಪೃತನೆ ಒಂದು ಚಮು. ಮೂರು ಚಮು ಒಂದು ಅನೀಕಿನಿ. ಹತ್ತು ಅನೀಕಿನಿ ಒಂದು ಅಕ್ಷೌಹಿಣಿ. ಅದರಿಂದ ಒಂದು ಅಕ್ಷೌಹಿಣಿ ಎಂದರೆ ಇಪ್ಪತ್ತೊಂದು ಸಾವಿರದ ಎಂಟುನೂರ ಎಪ್ಪತ್ತು ರಥಗಳು, ಅಷ್ಟೇ ಆನೆಗಳು, ಅರವತ್ತೈದು ಸಾವಿರದ ಆರು ನೂರಹತ್ತು ಕುದುರೆಗಳು. ಒಂದು ಲಕ್ಷ ಒಂಭತ್ತು ಸಾವಿರದ ಮೂನ್ನೂರೈವತ್ತು ಕಾಲಾಳುಗಳಿರಬೇಕು.

ಗತ್ವಾ ದುರ್ಯೋಧನಾಹೂತೋ ಭಗದತ್ತೋಽಪಿ ತಂ ಯಯೌ ॥೩೦॥

ದುರ್ಯೋಧನ ತಾನೇ ಪ್ರಾಗ್‌ಜ್ಯೋತಿಷಕ್ಕೆ ಹೋಗಿ ಕರೆದುದರಿಂದ ಭಗದತ್ತನೂ ಅವನ ಕಡೆಗೆ ಹೋದ.

ಭಗದತ್ತ ನರಕಾಸುರನ ಮಗನಾದರೂ ಕುಬೇರನ ಅವತಾರವಾದ್ದರಿಂದ ದಾನವಾಂಶರಂತೆ ತಾನಾಗಿ ಬರಲಿಲ್ಲ. ದುರ್ಯೋಧನ ತಾನೇ ಬಂದು ಕೇಳಿಕೊಂಡುದರಿಂದ ಬಂದ. ಅವನು ಚೀನ-ಕಿರಾತರ ಒಂದು ಅಕ್ಷೌಹಿಣಿ ಸೇನೆಯೊಂದಿಗೆ ಬಂದ.

ಸಪುತ್ರಪೌತ್ರೋ ಬಾಹ್ಲೀಕೋ ಭೀಷ್ಮದ್ರೋಣಕೃಪಾ ಅಪಿ।
ಪ್ರೀತ್ಯರ್ಥಂ ಧೃತರಾಷ್ಟ್ರಸ್ಯ ಬಭೂವುಸ್ತತ್ಸುತಾನುಗಾಃ ॥೩೧॥

ಪುತ್ರ ಪೌತ್ರ ಸಮೇತನಾಗಿ ಬಾಹ್ಲೀಕನೂ ಭೀಷ್ಮ ದ್ರೋಣ ಕೃಪರೂ ಧೃತರಾಷ್ಟ್ರನ ಸಂತೋಷಕ್ಕಾಗಿ ದುರ್ಯೋಧನನ ಪಕ್ಷ ವಹಿಸಿದರು.

ಪ್ರಹ್ಲಾದಾಂಶ ಸಂಭೂತನಾದ ಬಾಹ್ಲೀಕರಾಜ ಶಂತನುವಿನ ಸೋದರ. ಅವನಿಗೆ ಧೃತರಾಷ್ಟ್ರ ಮೊಮ್ಮಗನಾಗುತ್ತಾನೆ. ಅವನ ಮೇಲಿನ ಪ್ರೀತಿಯಿಂದ ಬಾಹ್ಲೀಕ ತನ್ನ ಮಗನಾದ ಸೋಮದತ್ತ ಮತ್ತು ಸೋಮದತ್ತನ ಮಕ್ಕಳಾದ ಭೂರಿ ಭೂರಿಶ್ರವ ಶಲರೊಂದಿಗೆ ದುರ್ಯೋಧನನ ಪಕ್ಷವಹಿಸಿದ. ಅವನನ್ನು ಮುಂದೆ ಭೀಮ ಸಂಹರಿಸುತ್ತಾನೆ.

ಪಾಂಡ್ಯಶ್ಚ ವೀರಸೇನಾಖ್ಯಃ ಪಾಂಡವಾನೇವ ಸಂಶ್ರಿತಃ ॥೩೨॥

ವೀರಸೇನನೆಂಬ ಪಾಂಡ್ಯ ರಾಜ ಪಾಂಡವರನ್ನೆ ಆಶ್ರಯಿಸಿದ.

ಶಲ್ಯಂ ಚ ಪಾಂಡವಾನೇವ ಯಾಂತಂ ಜ್ಞಾತ್ವಾ ಸುಯೋಧನಃ ।
ಸುಸಭಾಃ ಕಾರಯಾಮಾಸ ಸರ್ವಭೋಗಸಮನ್ವಿತಾಃ ॥೩೩॥
ತಾ ಯುಧಿಷ್ಠಿರಕ್ಲೃಪ್ತಾಃ ಸ ಮತ್ವಾ ಶಲ್ಯೋಽಬ್ರವೀದಿದಮ್ ।
ಯ ಏತಾಃ ಕಾರಯಾಮಾಸ ತದಭೀಷ್ಟಂ ಕರೋಮ್ಯಹಮ್ ॥೩೪॥

ಶಲ್ಯ ಪಾಂಡವರ ಕಡೆಗೆ ಹೊರಟುದನ್ನು ತಿಳಿದು ದುರ್ಯೋಧನ ಅವನಿಗೆ ದಾರಿಯಲ್ಲಿ ಸಕಲ ಭೋಗವಸ್ತುಗಳಿಂದ ಕೂಡಿದ ಒಳ್ಳೆಯ ಸಭಾಗೃಹಗಳನ್ನು ಏರ್ಪಡಿಸಿದ. ಅವುಗಳನ್ನು ಧರ್ಮರಾಜನೆ ಏರ್ಪಡಿಸಿದ್ದನೆಂದು ಭಾವಿಸಿ ಶಲ್ಯನುಡಿದ, 'ಇವುಗಳನ್ನು ಏರ್ಪಡಿಸಿದವನಿಗೆ ನಾನು ಅವನ ಅಭೀಷ್ಟವನ್ನು ಪೂರೈಸುವೆನು' ಎಂದ.

ಲೀನಃ ಶ್ರುತ್ವಾ ಧಾರ್ತರಾಷ್ಟ್ರಃ ಸತ್ಯಂ ಕುರ್ವಿತ್ಯಭಾಷತ ।
ದೇಹಿ ಮೇ ಯುದ್ಧಸಾಹಾಯ್ಯಮಿತಿ ಸೋಽಪಿ ಯಶೋಽರ್ಥಯನ್ ।
ರಕ್ಷಾರ್ಥಮಾತ್ಮವಾಕ್ಯಸ್ಯ ತಥೇತ್ಯೇವಾಭ್ಯಭಾಷತ ॥೩೫॥

ದುರ್ಯೋಧನ ಅಡಗಿ ಕುಳಿತು ಅದನ್ನು ಕೇಳಿ 'ನಿನ್ನ ಮಾತನ್ನು ಸತ್ಯವನ್ನಾಗಿ ಮಾಡು ಎಂದ. ನನಗೆ ಯುದ್ಧದಲ್ಲಿ ಸಹಾಯ ನೀಡು ಎಂದ. ಶಲ್ಯ ಕೀರ್ತಿಯನ್ನು ಬಯಸಿ ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ 'ಹಾಗೇ ಆಗಲಿ' ಎಂದ.

ಸ ಪಾಂಡವಾಂಸ್ತತೋ ಗತ್ವಾ ತೈರನುಜ್ಞಾತ ಏವ ಚ ।
ತೇಜೋವಧಾರ್ಥಂ ಕರ್ಣಸ್ಯ ಧನಂಜಯಕೃತೇಽರ್ಥಿತಃ ॥೩೬॥
ತಥೇತ್ಯುಕ್ತ್ವಾ ಯಯೌ ಧರ್ಮನಂದನಂ ಕೌರವಾನ್ ಪ್ರತಿ ॥೩೭॥

ಬಳಿಕ ಶಲ್ಯ ಪಾಂಡವರ ಬಳಿಗೆ ಹೋಗಿ ತಾನು ಕೌರವರಿಗೆ ಸಹಾಯ ನೀಡಲು ಅವರಿಂದ ಅನುಮತಿ ಪಡೆದ. ಮತ್ತು ಅರ್ಜುನನ ಸಲುವಾಗಿ ಕರ್ಣನ ತೇಜೋವಧೆ ಮಾಡುವುದಕ್ಕೆ ಧರ್ಮರಾಜನಿಂದ ಪ್ರಾರ್ಥಿತನಾಗಿ 'ಹಾಗೇ ಆಗಲಿ' ಎಂದು ಹೇಳಿ ಕೌರವರ ಬಳಿಗೆ ಹೋದ.

ಶಲ್ಯ ಮಾದ್ರಿಯ ತಮ್ಮ. ಪಾಂಡವರ ಸೋದರ ಮಾವ. ಅದರಿಂದ ಧರ್ಮರಾಜನ ಮುಂದೆ, 'ಬಲಿಷ್ಠನಾದ ನಹುಷನೂ ಸ್ವರ್ಗದಿಂದ

ಚ್ಯುತನಾದಂತೆ ದುರ್ಯೋಧನನೂ ಪರಾಭವ ಹೊಂದುತ್ತಾನೆ. ಚಿಂತಿಸಬೇಡ ಎಂದು ಹೇಳಿ ತಾನು ದುರ್ಯೋಧನನ ಪಕ್ಷಕ್ಕೆ ಹೋಗಲು ಅನುಮತಿ ಕೇಳಿದ. ಧರ್ಮರಾಜ ಆಗಲಿ ಎಂದು ಹೇಳಿ ನೀನು ಮಹಾರಥಿಕನಾದರೂ ಸೂತಪುತ್ರನಾದ ಕರ್ಣನಿಗೆ ಸಾರಥ್ಯ ಮಾಡಲು ಪ್ರಸ್ತಾವ ಬಂದರೆ ಇಲ್ಲವೆನ್ನಬೇಡ. ಸಾರಥ್ಯ ಮಾಡುತ್ತ ಅರ್ಜುನನ ಪರಾಕ್ರಮವನ್ನು ಹೊಗಳುತ್ತ ಕರ್ಣನನ್ನು ತೆಗಳಿ ತೇಜೋವಧೆ ಮಾಡು ಎಂದು. ಕರ್ಣನಿಗೆ ಒಳ್ಳೆಯ ಸಾರಥಿ ಇಲ್ಲ. ಶಲ್ಯನಂಥ ಅಶ್ವಶಾಸ್ತ್ರತಜ್ಞ ಇನ್ನೊಬ್ಬನಿಲ್ಲ. ಅದರಿಂದ ಕರ್ಣ ಸಾರಥ್ಯವನ್ನು ಶಲ್ಯ ಮಾಡಬೇಕಾಗುತ್ತದೆ ಎಂದು ಧರ್ಮರಾಜ ಊಹಿಸಿದ್ದ. ಅದು ನಿಜವಾಯಿತು. ಶಲ್ಯ ಹಾಗೇ ಮಾಡಿದ. ಕೊನೆಯಲ್ಲಿ ಧರ್ಮರಾಜನಿಂದಲೆ ಹತನಾದ.

ಉಭಯಸೇನಾಪ್ರಮುಖರು

ವಿರಾಟ: ಮತ್ಸ್ಯದೇಶದ ರಾಜ. ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಪಾಂಡವಪಕ್ಷದಲ್ಲಿ ಹೋರಾಡಿದವ. ಪಾಂಡವರ ಏಳು ಪ್ರಮುಖ ಸೇನಾಪತಿಗಳಲ್ಲಿ ಒಬ್ಬ. ಈತನಿಗೆ ಮೊದಲ ಹೆಂಡತಿ ಕ್ಷತ್ರಿಯ ಜಾತಿಯ ಕೋಸಲ ರಾಜಕುಮಾರಿ ಸುರಥೆಯಲ್ಲಿ ಶ್ವೇತ ಮಗ. ಶ್ವೇತನನ್ನು ಭೀಷ್ಮ ವಧಿಸುತ್ತಾನೆ (ಭೀ.೪೮.೧೧) ಎರಡನೆ ಹೆಂಡತಿ ಸೂತಜಾತಿಯ ಕೇಕಯ ರಾಜಕುಮಾರಿ ಸುದೇಷ್ಣೆಯಲ್ಲಿ ಶಂಖ, ಉತ್ತರಕುಮಾರ, ಉತ್ತರೆ ಮಕ್ಕಳು. ಶಂಖನನ್ನು ದ್ರೋಣ (ಭೀ.೮೨.೨೩), ಉತ್ತರನನ್ನು ಶಲ್ಯ (ಭೀ೪೭.೩೫) ವಧಿಸುತ್ತಾರೆ. ವಿರಾಟನಿಗೆ ಶತಾನೀಕ ಮದಿರಾಕ್ಷ ಮುಂತಾದ ಹನ್ನೊಂದು ಮಂದಿ ಸೋದರರು. ವಿರಾಟನನ್ನು ದ್ರೋಣ ವಧಿಸುತ್ತಾನೆ (ದ್ರೋ.೧೮೭.೪೨)

ದ್ರುಪದ : ಉತ್ತರ ಪಾಂಚಾಲ ದೇಶದ ಅರಸು. ಯಜ್ಞಸೇನ ಇನ್ನೊಂದು ಹೆಸರು. ಸೋಮಕನ ಮೊಮ್ಮಗನಾದ್ದರಿಂದ ಸೌಮಕಿ, ಪೃಷತನ ಮಗನಾದ್ದರಿಂದ ಪಾರ್ಷತ ಇವನೆ. ಇವನ ರಾಜಧಾನಿ ಮಾಕಂದಿ. ಒಂದು ಅಕ್ಷೌಹಿಣೀ ಸೇನೆ ಸಮೇತನಾಗಿ ಪಾಂಡವ ಪಕ್ಷದಲ್ಲಿ ಹೋರಾಡಿದವ. ಪಾಂಡವರ ಏಳು ಸೇನಾಪತಿಗಳಲ್ಲಿ ಇವನೂ ಒಬ್ಬ. ಇವನಿಗೆ ಶಿಖಂಡಿ, ಧೃಷ್ಟದ್ಯುಮ್ನ ದ್ರೌಪದಿಯರು ಮಾತ್ರವಲ್ಲದೆ ಸುಮಿತ್ರ, ಪ್ರಿಯದರ್ಶನ, ವೀರಕೇತು, ಸುರಥ, ಶತ್ರುಂಜಯರೂ ಮಕ್ಕಳು. ಶಿಖಂಡಿ, ಧೃಷ್ಟದ್ಯುಮ್ನರನ್ನು ರಾತ್ರಿ ಶಿಬಿರದಲ್ಲಿ ಅಶ್ವತ್ಥಾಮ ಕೊಲ್ಲುತ್ತಾನೆ. ಸುಮಿತ್ರನನ್ನು ಜಯದ್ರಥ, ಪ್ರಿಯದರ್ಶನನನ್ನು ಕರ್ಣ, ವೀರಕೇತುವನ್ನು ದ್ರೋಣ, ಸುರಥ

ಶತ್ರುಂಜಯರನ್ನು ಅಶ್ವತ್ಥಾಮ ವಧಿಸುವರು. ದ್ರುಪದ ದ್ರೋಣನಿಂದ ಹತನಾಗುತ್ತಾನೆ (ದ್ರೋ.೧೮೭.೪೨)

ಕೈಕೇಯರು: (೧) ಕೈಕಯರು ಕೇಕಯರು ಎಂದೂ ಹೆಸರಿದೆ. ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಪಾಂಡವ ಪಕ್ಷದಲ್ಲಿ ನಿಂತವರು. ಕೇಕಯದ ರಾಜಾ ಧೃಷ್ಟಕೇತುವಿನ ಮಕ್ಕಳು ಸಂತರ್ದನ ಮುಂತಾದ ಐವರು ಸೋದರರು, ಶ್ರೀಕೃಷ್ಣನ ಸೋದರತ್ತೆ ಶ್ರುತಕೀರ್ತಿಯಲ್ಲಿ ಜನಿಸಿದವರು. ಇವರ ಸೋದರಿ ಭದ್ರೆ ಶ್ರೀಕೃಷ್ಣನ ಅಷ್ಟಮಹಿಷಿಯರಲ್ಲಿ ಒಬ್ಬಳು. ಇವರು ಐವರೂ ದ್ರೋಣನಿಂದ ಹತರಾಗುತ್ತಾರೆ. (೨)ವಿಂದ ಅನುವಿಂದರೆಂಬ ಇಬ್ಬರು ರಾಜಕುಮಾರರು ಕೇಕಯ ದೇಶದವರು ಕೌರವರ ಕಡೆಯವರು. ಅವರನ್ನು ಸಾತ್ಯಕಿ ವಧಿಸುತ್ತಾನೆ.

ಧೃಷ್ಟಕೇತು: ಚೇದಿ ದೇಶದ ರಾಜಾ ಶಿಶುಪಾಲನ ಪುತ್ರ. ಇವನು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಬಂದು ಪಾಂಡವರ ಪಕ್ಷದಲ್ಲಿ ಹೋರಾಡಿದ. ಪಾಂಡವರ ಏಳುಮಂದಿ ಸೇನಾಪತಿಗಳಲ್ಲಿ ಇವನೂ ಒಬ್ಬ. ಪುತ್ರಸಹಿತ ದ್ರೋಣನಿಂದ ಹತನಾದ (ದ್ರೋ.೧೨೫-೩೯, ೪೧) ಇವನ ತಮ್ಮ ಸುಕೇತುವನ್ನೂ ದ್ರೋಣ ಕೊಂದ. (ಕರ್ಣ೩.೩೨)

ಸಹದೇವ: ಮಗಧದೇಶದ ರಾಜಾ ಜರಾಸಂಧನ ಪುತ್ರ. ಒಂದು ಅಕ್ಷೌಹಿಣಿ ಸೇನೆಯೊಂದಿಗೆ ಪಾಂಡವರ ಪಕ್ಷದಲ್ಲಿ ನಿಂತ. ಇವನೂ ಪಾಂಡವರ ಏಳು ಸೇನಾಪತಿಗಳಲ್ಲಿ ಒಬ್ಬ. ದ್ರೋಣನಿಂದ ಹತನಾಗುತ್ತಾನೆ. (ದ್ರೋಣ ೧೨೫-೪೨)

ಕಾಶಿರಾಜ: ಒಂದು ಅಕ್ಷೌಹಿಣಿ ಸೇನೆಯೊಂದಿಗೆ ಪಾಂಡವರ ಕಡೆ ಯುದ್ಧ ಮಾಡಿದ. ಭೀಮ ಪತ್ನಿ ಕಾಳೀದೇವಿ ಇವನ ಮಗಳು.

ಪುರುಜಿತ್: ಕುಂತಿ ಭೋಜನ ಮಗ, ಕುಂತಿಯ ತಮ್ಮ. ದ್ರೋಣನಿಂದ ಹತನಾಗುತ್ತಾನೆ. (ಕರ್ಣ೩-೨೨)

ಕುಂತಿಭೋಜ: ಶೂರಸೇನನ ಚಿಕ್ಕಪ್ಪನ ಮಗನಾದ, ಕುಂತಿಯ ಸಾಕು ತಂದೆಯಾದ ಒಬ್ಬ ಕುಂತಿ ಭೋಜ ಹಿಂದೆ ಇದ್ದ. ಇವನ ಒಬ್ಬ ಮಗನಿಗೂ ಕುಂತಿ ಭೋಜನೆಂದು ಹೆಸರಿದೆ.

ಪುರುಜಿತ್ ಕುಂತಿಭೋಜಶ್ಚ ಮಾತುಲೌ ಸವ್ಯಸಾಚಿನಃ।
ಸಂಗ್ರಾಮ ನಿರ್ಜಿತಾನ್ ಲೋಕಾನ್ ಗಮಿತೌ ದ್ರೋಣಸಾಯಕೈಃ
(ಕರ್ಣ೩.೨೨)

ಅದರಿಂದ ಪುರುಜಿತ್ ಕುಂತಿಭೋಜರಿಬ್ಬರೂ ಅರ್ಜುನನಿಗೆ ಸೋದರಮಾವಂದಿರು! ಈ ಕುಂತಿಭೋಜನ ಹತ್ತುಮಂದಿ ಮಕ್ಕಳೂ ಅಶ್ವತ್ಥಾಮನಿಂದ ಹತರಾಗುತ್ತಾರೆ. (ದ್ರೋ.೧೫೭.೧೮೩) ಕುಂತಿಭೋಜ ದ್ರೋಣನಿಂದ ಹತನಾಗುತ್ತಾನೆ (ಕರ್ಣ ೩.೨೨)

ಚೇಕಿತಾನ: ಒಬ್ಬ ಯಾದವ ವೀರ, ಮಹಾರಥ. ದುರ್ಯೋಧನನಿಂದ ಹತನಾಗುತ್ತಾನೆ (ಶಲ್ಯ ೧೧.೩೧)

ಸಾತ್ಯಕಿ: ಯಾದವವೀರ, ಅರ್ಜುನನ ಪ್ರೀತಿಯ ಧನುರ್ವಿದ್ಯಾ ಶಿಷ್ಯ. ಶಿನಿಯ ಮೊಮ್ಮಗನಾದ್ದರಿಂದ ಶೈನೇಯ ಎಂದೂ, ಸತ್ಯಕನ ಮಗನಾದ್ದರಿಂದ ಸಾತ್ಯಕಿಯೆಂದೂ ಕರೆಸಿಕೊಂಡ. ಇವನ ಹೆಸರು ಯುಯುಧಾನ. ಇವನ ಹತ್ತು ಮಂದಿ ಮಕ್ಕಳನ್ನೂ ಭೂರಿಶ್ರವ ಕೊಂದ. ಒಂದು ಅಕ್ಷೌಹಿಣಿ ಸೇನೆಯೊಂದಿಗೆ ಪಾಂಡವರ ಕಡೆ ಹೋರಾಡಿ ಭೂರಿಶ್ರವ, ಭೂರಿ, ಸೋಮದತ್ತ ವಿಂದ ಅನುವಿಂದ ಜಲಸಂಧ ಅಲಂಬುಸರಾಜ ಕ್ಷೇಮಧೂರ್ತಿ ಮುಂತಾದವರನ್ನು ಕೊಂದ. ಮುಂದೆ ಯಾದವರ ಅಂತಃಕಲಹದಲ್ಲಿ ಕೃತವರ್ಮನನ್ನು ಕೊಂದು ತಾನು ಹತನಾಗುತ್ತಾನೆ.

ಹೀಗೆ ವಿರಾಟ- ದ್ರುಪದ- ಕೈಕೇಯರು- ದೃಷ್ಟಕೇತು- ಸಹದೇವ- ಕಾಶಿರಾಜ- ಸಾತ್ಯಕಿ ಈ ಏಳು ಮಂದಿಗಳ ಏಳು ಅಕ್ಷೌಹಿಣಿ ಸೈನ್ಯ ಪಾಂಡವರಿಗಾಗಿ ಹೋರಾಡಿ ನಾಶಹೊಂದಿತು.

ವಿಂದಾನುವಿಂದರು: (೧) ಅವಂತಿಯ ರಾಜಕುಮಾರರು ಇಬ್ಬರೂ ಒಂದೊಂದು ಅಕ್ಷೌಹಿಣಿ ಸೈನ್ಯದೊಂದಿಗೆ ಬಂದು ಕೌರವರ ಕಡೆ ಯುದ್ಧಮಾಡಿ ಅರ್ಜುನನಿಂದ ಹತರಾಗುತ್ತಾರೆ.(ದ್ರೋಣ ೯೯.೨೭)

(೨) ಕೇಕಯ ರಾಜಕುಮಾರರೂ ಇದೇ ಹೆಸರಿನವರು. ಸಾತ್ಯಕಿಯಿಂದ ಹತರಾಗುತ್ತಾರೆ. (ಕರ್ಣ ೧೦.೬)

ನಿರ್ಣಯದಲ್ಲಿ 'ಅನ್ಯಕೇಕಯಾಃ' 'ಅನ್ಯಕೇಕಯರು' ಎಂದು ಬಹುವಚನವಿದೆ. ಏಕೆಂದರೆ ಮಹಾಭಾರತದಲ್ಲಿ (ಉದ್ಯೋ ೧೯೫.೫) ಹಾಗೇ ಇದೆ–

ವಿಂದಾನುವಿಂದಾವಾವಂತ್ಯೌ ಕೇಕಯಾ ಬಾಹ್ಲಿಕೈಃ ಸಹ।
ಪ್ರಯಯುಃ ಸರ್ವ ಏವೈತೇ ಭಾರದ್ವಾಜಪುರೋಗಮಾಃ॥

ಕೇಕಯರು ಇಬ್ಬರೇ ಆದರೂ ಸೈನ್ಯಸಮೇತರಾಗಿ ಬಹುವಚನದಿಂದ ಕರೆಸಿಕೊಂಡರು.

ಜಯತ್ಸೇನ: ಮಗಧರಾಜ ಜರಾಸಂಧನ ಪುತ್ರ, ಸಹದೇವನ ಸೋದರ. ಜಯತ್ಸೇನ ಧೃಷ್ಟಕೇತು ಸಮೇತನಾಗಿ ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಧರ್ಮರಾಜನ ಪಕ್ಷದಲ್ಲಿ ಹೋರಾಡಿದನೆಂದು ಮಹಾಭಾರತ ಹೇಳಿದೆ–

ಧೃಷ್ಟಕೇತುರುಪಾಗಚ್ಛತ್ ಪಾಂಡವಾನಮಿತೌಜಸಃ।
ಮಾಗಧಶ್ಚ ಜಯತ್ಸೇನೋ ಜಾರಾಸಂಧಿರ್ಮಹಾಬಲಃ।
ಅಕ್ಷೌಹಿಣ್ಯೈವ ಸೈನ್ಯಸ್ಯ ಧರ್ಮರಾಜಮುಪಾಗಮತ್॥
(ಉದ್ಯೋ.೧೯.೮)

ಈ ಶ್ಲೋಕ ಪ್ರಕ್ಷಿಪ್ತವೆನ್ನುವಂತಿಲ್ಲ. ಸಂಜಯ ಧೃತರಾಷ್ಟ್ರನ ಮುಂದೆ ಪಾಂಡವರ ಕಡೆಯ ವೀರರನ್ನು ಹೆಸರಿಸುವಾಗಲೂ ಸಹದೇವ ಜಯತ್ಸೇನರನ್ನು ಜೊತೆಯಾಗಿಯೇ ನಿರ್ದೇಶಿಸುತ್ತಾನೆ–

ಜಾರಾಸಂಧಿಃ ಸಹದೇವೋ ಜಯತ್ಸೇನಶ್ಚ ತಾವುಭೌ।
ಯುದ್ಧೇಕಪ್ರತಿರಥೇ ವೀರೌ ಪಾಂಡವಾರ್ಥೇ ವ್ಯವಸ್ಥಿತೌ॥
(ಉದ್ಯೋ.೫೦.೪೮)

ಮುಂದೆ ಜಯತ್ಸೇನ ಧೃತರಾಷ್ಟ್ರಪುತ್ರನಾದ ವಿಜಯನೊಡನೆ ಹೋರಾಡುವುದರ ಉಲ್ಲೇಖವೂ ಭಾರತದಲ್ಲಿ ಬರುತ್ತದೆ. (ದ್ರೋಣ ೨೫.೪೫) ನಿರ್ಣಯದಲ್ಲಿ–

ಧೃಷ್ಟಕೇತು ಜರಾಸಂಧಸುತ ಕಾಶಿನೃಪೈರ್ಯುತಾಃ।

ಎಂಬಲ್ಲಿ 'ಸಹದೇವ' ಎನ್ನದೆ 'ಜರಾಸಂಧಸುತ' ಎಂದುದು ಇಬ್ಬರು ಜರಾಸಂಧ ಪುತ್ರರನ್ನು ಗ್ರಹಿಸುವ ಅಭಿಪ್ರಾಯಕ್ಕೆ ಸೂಚಕವಾಗಬಹುದು.

ನಿರ್ಣಯದಲ್ಲಿ 'ಜಯತ್ಸೇನಾನ್ಯಕೇಕಯಾಃ' ಎಂದು ಕೌರವರ ಕಡೆಯಲ್ಲಿ ಜಯತ್ಸೇನನನ್ನು ಹೇಳಿರುವುದೂ ಮಹಾಭಾರತಕ್ಕೆ ಅನುಗುಣವೆ. ಅಲ್ಲಿ ಜಯತ್ಸೇನ ಒಂದು ಅಕ್ಷೌಹಿಣಿ ಸೈನ್ಯ ಸಮೇತನಾಗಿ ಬಂದು ಕೌರವರ ಕಡೆಯಲ್ಲಿ ಹೋರಾಡುತ್ತಾನೆ. (ಭೀಷ್ಮ ೧೬.೧೬) ಅಭಿಮನ್ಯುವಿನಿಂದ ಹತನಾಗುತ್ತಾನೆ (ಭೀಷ್ಮ ೬೨.೪೬, ಕರ್ಣ ೫೫.೩೦, ಕರ್ಣ ೭೩.೨೫) ಹೀಗೆ ನಾಲ್ಕು ಕಡೆ ಉಲ್ಲೇಖವಿರುವುದರಿಂದ ಇದೂ ಪ್ರಕ್ಷಿಪ್ತವಲ್ಲ.

ಈ ವಿರೋಧ ಪರಿಹಾರಕ್ಕೆ ಹೀಗೆ ಹೇಳಬೇಕು–

ವಿಶಾಲವಾದ ಮಗಧದೇಶದಲ್ಲಿ ಅನೇಕ ರಾಜರಿದ್ದಾರೆ. 'ಜರಾಸಂಧ' ಎಂಬ ಹೆಸರೂ ಅನೇಕರಿಗೆ ಇದೆ. ಅವರು 'ಜರೆಯಿಂದ ಸಂಧಿತ'ರಾಗಬೇಕಿಲ್ಲ. ಉದಾ: ಧೃತರಾಷ್ಟ್ರ ಪುತ್ರರು ನೂರು ಮಂದಿಯಲ್ಲಿ ಒಬ್ಬನಿಗೆ

ಜರಾಸಂಧ ಎಂಬ ಹೆಸರಿದೆ. (ಆದಿ ೬೮.೧೦೦, ೧೩೧-೨) ಹಾಗೇ 'ಜಯತ್ಸೇನ' ಎಂಬ ಹೆಸರೂ ಇನ್ನೊಬ್ಬ ಧೃತರಾಷ್ಟ್ರಪುತ್ರನಿಗೆ ಇದೆ. (ಭೀಷ್ಮ ೭೭.೭, ೭೯.೪೨, ಶಲ್ಯ ೨೫.೧೦) ಮಗಧರಾಜರೂ ಬೇರೆ ಇದ್ದಾರೆ. ಉದಾ: ದಂಡಧಾರ. ಇವನ ತಮ್ಮ ದಂಡ. ದಿಗ್ವಿಜಯ ಕಾಲದಲ್ಲಿ ಇವರನ್ನೂ ಭೀಮ ಗೆದ್ದಿದ್ದಾನೆ. ಆದರಿಂದ ಮಗಧದೇಶದ ಇಬ್ಬರು ಜರಾಸಂಧರ ಮಕ್ಕಳು, ಇಬ್ಬರು ಜಯತ್ಸೇನರು ಎಂದರೆ ತಪ್ಪಿಲ್ಲ. ಐತರೇಯ ಮಹಿದಾಸರು, ದೇವಕೀಪುತ್ರ ಕೃಷ್ಣರು, ದೇವಹೂತಿ ಪುತ್ರ ಕಪಿಲರು ಇವರೆಲ್ಲರೂ ಇಬ್ಬಿಬ್ಬರು ಬೇರೆ ಬೇರೆ ಇರುವರೆಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿದೆ. ಹಾಗೇ ಇದೂ ಎನ್ನಬಹುದು.

ಇಲ್ಲಿ ಇನ್ನೂ ಒಂದು ತೊಡಕಿದೆ. ಜಯತ್ಸೇನನನ್ನು ಭೀಮ ಕೊಲ್ಲುತ್ತಾನೆ, ನಿರ್ಣಯದಲ್ಲಿ-

ತತ್ರ ಭೀಮೋ ಗಜಾನೀಕಂ ಜಯತ್ಸೇನಂ ಚ ಮಾಗಧಂ।
ಜಘಾನ ಸುಬಹೂಂಶ್ಚೈವ ಮಾಗಧಾನಾಂ ರಥವ್ರಜಾನ್॥
(೨೬.೨೮೬)

ಆದರೆ ಮಹಾಭಾರತದಲ್ಲಿ ಅಭಿಮನ್ಯು ಕೊಲ್ಲುತ್ತಾನೆ-

ಜಯತ್ಸೇನಸ್ತದಾ ರಾಜನ್ ಜಾರಾಸಂಧಿರ್ಮಹಾಬಲಃ॥
ಮಾಗಧೋ ನಿಹತಃ ಸಂಖ್ಯೇ ಸೌಭದ್ರೇಣ ಮಹಾತ್ಮನಾ॥
(ಕರ್ಣ ೫೫.೩೦)

ಜಯತ್ಸೇನನನ್ನು ಅಭಿಮನ್ಯು ಕೊಂದುದು ಹತ್ತನೇ ದಿನದ ಯುದ್ಧದಲ್ಲಿ, ಭೀಮ ಕೊಂದುದು ಹದಿನೈದನೆ ದಿನದ ಯುದ್ಧದಲ್ಲಿ. ಈ ವಿರೋಧ ಪರಿಹಾರಕ್ಕೆ ಭೀಮ ಕೊಂದುದು ಧೃತರಾಷ್ಟ್ರಪುತ್ರನಾದ ಜಯತ್ಸೇನನನ್ನು, ಅಭಿಮನ್ಯು ಕೊಂದುದು ಮಾಗಧ ಜಯತ್ಸೇನನನ್ನು ಎಂದು ಅಂಗೀಕರಿಸ ಬೇಕು. ನಿರ್ಣಯದಲ್ಲಿ 'ಜಯತ್ಸೇನಂ ಚ ಮಾಗಧಂ' ಎಂದಿದ್ದರೂ ಅದಕ್ಕೆ ವರದರಾಜೀಯ ಟೀಕೆಯಲ್ಲಿ ಜಯತ್ಸೇನನ್ನೂ ಮತ್ತು ಮಗಧ ದೇಶದ ಬೇರೆ ಒಬ್ಬ ರಾಜನನ್ನೂ ಭೀಮ ಕೊಂದನೆಂದು ವ್ಯಾಖ್ಯಾನಿಸಿದೆ ಹೊರತು, ಮಗಧರಾಜಕುಮಾರನಾದ ಜಯತ್ಸೇನನನ್ನು ಕೊಂದನೆಂದಲ್ಲ-

'ಜಯತ್ಸೇನ-ಮಾಗಧೌ ಮಾಗಧಾನಾಂ ರಥವ್ರಜಾಂಶ್ಚ ಜಘಾನ'

ಕ್ಷೇಮಧೂರ್ತಿ:

ಈ ಹೆಸರಿನವರು ಮೂರು ಮಂದಿ ಕೌರವ ಸೈನ್ಯದಲ್ಲಿ ಕಾಣುತ್ತಾರೆ.

(೧) ಸಾಲ್ವನ ಸಚಿವನೂ ಸೇನಾಪತಿಯೂ ಆದ ಕ್ಷೇಮಧೂರ್ತಿ. ಇವನು ಬೃಹತ್‌ಕ್ಷತ್ರನಿಂದ ಹತನಾಗುತ್ತಾನೆ (ದ್ರೋಣ ೧೦೭.೮)

(೨) ಕರೂಶ ದೇಶದ ರಾಜನಾದ ಕ್ಷೇಮಧೂರ್ತಿ ಭೀಮನಿಂದ ಹತನಾಗುತ್ತಾನೆ (ಕರ್ಣ ೯.೪೪)

(೩) ಸಾತ್ಯಕಿಯಿಂದ ಉಲೂಕ ದೇಶಾಧಿಪತಿಯಾದ ಒಬ್ಬ ಕ್ಷೇಮಧೂರ್ತಿ ಹತನಾಗುತ್ತಾನೆ (ಶಲ್ಯ ೨೧.೮)

ಇವರಲ್ಲದೆ ಒಬ್ಬ ಧೃತರಾಷ್ಟ್ರ ಪುತ್ರನೂ ಕ್ಷೇಮಧೂರ್ತಿ ಅಥವಾ ಕ್ಷೇಮಮೂರ್ತಿ ಇದ್ದಾನೆ.

ದಂಡಧರ: ಈ ಹೆಸರಿನವರೂ ಮೂರು ಮಂದಿ ಇದ್ದಾರೆ-

(೧) ಮಗಧರಾಜ ದಂಡಧರ. ಕೌರವಪಕ್ಷದವ. ಭಗದತ್ತನಂತೆ ಮಹಾ ಪರಾಕ್ರಮಿ. ಅವನಂತೆಯೆ ಆನೆಯ ಮೇಲೆ ಕುಳಿತು ಯುದ್ಧಮಾಡಿ ಅರ್ಜುನನಿಂದ ಹತನಾಗುತ್ತಾನೆ (ಕರ್ಣ ೫೪.೧೫)

(೨) ಪಾಂಚಾಲ ದೇಶದ ದಂಡಧರ, ಪಾಂಡವರ ಪಕ್ಷದವ, ಕರ್ಣನೊಡನೆ ಹೋರಾಡಿ ಮಡಿದ (ಕರ್ಣ ೪೪.೨೯)

(೩) ಚೇದಿ ದೇಶದ ದಂಡಧರ, ಧರ್ಮರಾಜನ ಚಕ್ರರಕ್ಷಕ. ಕರ್ಣನಿಂದ ಹತನಾಗುತ್ತಾನೆ. (ಕರ್ಣ ೪೯.೫೦)

ಇವರಲ್ಲದೆ ಒಬ್ಬ ಧೃತರಾಷ್ಟ್ರಪುತ್ರನೂ ದಂಡಧರನಿದ್ದಾನೆ.

ಕಲಿಂಗ: ಈ ಹೆಸರಿನವರೂ ಅನೇಕ ಮಂದಿ. 'ಭಾನುಮಾನ್' ಎಂಬ ಕಲಿಂಗ ದೇಶದ ರಾಜ ಭೀಮನಿಂದ ಹತನಾಗುತ್ತಾನೆ. (ಭೀಷ್ಮ ೫೪.೩೯) ಇದೇ ಅಧ್ಯಾಯದಲ್ಲಿ ಭೀಮನಿಂದ ಹತರಾದ ಶ್ರುತಾಯು, ಶಕ್ರದೇವ, ಸತ್ಯದೇವ, ಸತ್ಯ, ಕೇತುಮಾನ್ ಮೊದಲಾದವರೂ ಕಲಿಂಗರು ಅಥವಾ ಕಾಲಿಂಗರು.

ಅಂಬಷ್ಠ: ಈ ಹೆಸರಿನವರು ಇಬ್ಬರು.

(೧) ಅಂಬಷ್ಠ ದೇಶದರಾಜ ಈ ಹೆಸರಿನವರು ಇಬ್ಬರು. ಅರ್ಜುನನಿಂದ ಹತನಾಗುತ್ತಾನೆ. (ದ್ರೋಣ ೯೩.೭೩)

(೨) ಪಾಂಡವಪಕ್ಷದಲ್ಲಿಯೂ ಒಬ್ಬ ಅಂಬಷ್ಠ (ದ್ರೋಣ ೧೨೫.೪೯)

ಶ್ರುತಾಯು: ಈ ಇನ್ನೊಬ್ಬ ಶ್ರುತಾಯುವೂ ಕಲಿಂಗ ದೇಶದವ. ಭೀಷ್ಮನಿಗೆ ಚಕ್ರರಕ್ಷಕ. ಅರ್ಜುನನಿಂದ ಹತನಾಗುತ್ತಾನೆ. (ದ್ರೋಣ ೯೩.೬೩)

ಅಚ್ಯುತಾಯು: ಶ್ರುತಾಯು ಅಚ್ಯುತಾಯುಗಳು ಸೋದರರು. ಈ ಅಚ್ಯುತಾಯುವೂ ಅರ್ಜುನನಿಂದ ಹತನಾಗುತ್ತಾನೆ. (ದ್ರೋಣ೯೩.೭)

ಧೃತರಾಷ್ಟ್ರಪುತ್ರನೂ ಒಬ್ಬ ಶ್ರುತಾಯು ಇದ್ದಾನೆ.

ಬೃಹದ್ಬಲ: ಈ ಹೆಸರಿನವರೂ ಇಬ್ಬರು.(೧) ಕೋಸಲ ದೇಶದ ರಾಜ. ಅಭಿಮನ್ಯುವಿನಿಂದ ಹತನಾಗುತ್ತಾನೆ. (ದ್ರೋಣ ೪೭.೨೪) ಶಕುನಿಯ ಸೋದರನೂ ಒಬ್ಬ ಬೃಹದ್ಬಲನಿದ್ದಾನೆ.

ಸುದಕ್ಷಿಣ: ಈ ಹೆಸರಿನವರೂ ಇಬ್ಬರು.

(೧) ಕಾಂಬೋಜರಾಜ ಸುದಕ್ಷಿಣ ಒಂದು ಅಕ್ಷೌಹಿಣಿ ಸೈನ್ಯ ಸಮೇತನಾಗಿ ಕೌರವ ಪಕ್ಷದಲ್ಲಿ ಹೋರಾಡಿ ಅರ್ಜುನನಿಂದ ಹತನಾಗುತ್ತಾನೆ (ದ್ರೋಣ೯೨.೬೩)

(೨) ಪಾಂಡವ ಪಕ್ಷದಲ್ಲಿ ಹೋರಾಡಿದ ಸುದಕ್ಷಿಣನನ್ನು ದ್ರೋಣ ರಥದಿಂದ ಬೀಳಿಸುತ್ತಾನೆ. (ದ್ರೋಣ ೨೧.೫೬)

ಶ್ರುತಾಯುಧ: ಇವನೂ ಕಲಿಂಗರಾಜ. ವರುಣ ಪುತ್ರ. ಈತ ಕೃಷ್ಣನ ಮೇಲೆ ಗದೆ ಬೀಸಿದಾಗ ಅದು ಹಿಂತಿರುಗಿ ಬಂದು ಇವನನ್ನೆ ಕೊಂದಿತು. (ದ್ರೋಣ೯೨.೬೦)

ಸೈಂಧವ: ಜಯದ್ರಥ ಎಂದು ಹೆಸರು. ಸಿಂಧು ಸುವೀರ ದೇಶಾಧಿಪತಿ, ಸೈಂಧವ, ಸೌವೀರ ಎಂದೂ ಪ್ರಸಿದ್ಧ. ಇವನ ತಂದೆ ವೃದ್ಧಕ್ಷತ್ರ. ಅರ್ಜುನ ಸೈಂಧವನ ಶಿರವನ್ನು ಕಡಿದು ವೃದ್ಧಕ್ಷತ್ರನ ಕೈಗೇ ಹಾಕಿದ. ಅದು ಕೆಳಗೆ ಬಿದ್ದಾಗ ವೃದ್ಧಕ್ಷತ್ರನ ತಲೆಯೂ ಹೋಳಾಯಿತು. (ದ್ರೋಣ ೧೪೮.೧೮)

ಅಲಂಬುಸ: ಈ ಹೆಸರಿನವರು ಮೂರು ಜನ.

(೧) ಋಷ್ಯಶೃಂಗನ ಮಗ ರಾಕ್ಷಸ ರಾಜ, ಅರ್ಜುನ ಪುತ್ರ ಇರಾವಂತನನ್ನು ಕೊಂದ. ಘಟೋತ್ಕಚನಿಂದ ಮಡಿದ (ದ್ರೋಣ ೧೦೯.೭೫)

(೨) ಅಲಂಬುಸನೆಂಬ ಕ್ಷತ್ರಿಯ ರಾಜ ಸಾತ್ಯಕಿಯಿಂದ ಮಡಿದ. (ದ್ರೋಣ ೧೪೦.೧೮)

(೩) ಜಟಾಸುರ ಪುತ್ರ ಬಕನ ಸೋದರ. ಘಟೋತ್ಕಚನಿಂದ ಮಡಿದ (ದ್ರೋಣ ೧೭೪.೮)

ಅಲಾಯುಧ: ಬಕನ ತಮ್ಮ, ಘಟೋತ್ಕಚನಿಂದ ಮಡಿದ (ದ್ರೋಣ ೧೭೯.೩೨)

ಅಲಂಬಲ: ಇನ್ನೊಬ್ಬ ಬಕನ ತಮ್ಮ ಘಟೋತ್ಕಚನಿಂದ ಮಡಿದ (ದ್ರೋಣ ೧೭೫.೨೪).

ಸಂಜಯನ ರಾಯಭಾರ

ಸಂಜಯಂ ಪ್ರೇಷಯಾಮಾಸ ಧೃತರಾಷ್ಟ್ರೋಽಥ ಶಾಂತಯೇ ।
ಪಾಂಡವಾನ್ ಪ್ರತ್ಯಧರ್ಮಂ ಚ ಯುದ್ಧಂ ಸ ಪ್ರತ್ಯಪಾದಯತ್ ॥ ೩೮ ॥

ಬಳಿಕ ಶಾಂತಿ ಸಂಧಾನಕ್ಕಾಗಿ ಧೃತರಾಷ್ಟ್ರ ಸಂಜಯನನ್ನು ಪಾಂಡವರ ಬಳಿಗೆ ಕಳಿಸಿದ. ಯುದ್ಧ ಮಾಡುವುದು ಅಧರ್ಮ ಎಂದು ಮುಂತಾಗಿ ಸಂಜಯ ಪ್ರತಿಪಾದಿಸಿದ.

'ದುರ್ಯೋಧನ ರಾಜ್ಯ ಕೊಡುವುದಿಲ್ಲ. ಯುದ್ಧ ಅನಿವಾರ್ಯವಾಗುತ್ತದೆ. ಯುದ್ಧದಲ್ಲಿ ನೀವು ಭೀಷ್ಮ ದ್ರೋಣಾದಿ ಗುರುಹಿರಿಯರ ವಧೆ ಮಾಡಬೇಕಾಗುತ್ತದೆ. ಇದು ಅಧರ್ಮ. ಅದರಿಂದ ಪಡೆದ ರಾಜ್ಯ ಭೋಗದಲ್ಲಿ ಸುಖವೂ ಇರುವುದಿಲ್ಲ. ಅದರಿಂದ ಯುದ್ಧ ಮಾಡಬೇಡಿ. ಯುದ್ಧ ಮಾಡುವುದಕ್ಕಿಂತ ವನವಾಸ ಮಾಡುವುದು ಲೇಸು. ಬೇಡಿಯಾದರೂ ತಿನ್ನಬಹುದು. ದೈವಾತ್ ತನ್ನಿಂದ ತಾನೇ ಸಿಗುವ ಪದಾರ್ಥಗಳನ್ನಾದರೂ ಭೋಗಿಸಬಹುದು' - ಇದು ಧೃತರಾಷ್ಟ್ರನ ಬುದ್ಧಿವಾದ. ಇದು ಪಾಂಡವರಿಗೆ ಹೃದಯದಲ್ಲಿ ಆಳವಾಗಿ ಬೇರುಬಿಟ್ಟಿತು. ಅರ್ಜುನನ ವಿಷಾದಯೋಗದಲ್ಲಿ ಇದು ಅಭಿವ್ಯಕ್ತವಾಗಿ ಗೀತೋಪದೇಶದಿಂದ ಉಪಶಮವಾಯಿತು. ಧರ್ಮರಾಜನಿಗೆ ಮಾತ್ರ ಸಾಯುವವರೆಗೂ ಅದು ಹಿಂಸೆ ಮಾಡುತ್ತಿತ್ತು. ಹರಿಯ ಅನುಗ್ರಹದಿಂದ ಭೀಮಾರ್ಜುನರು ಅದಕ್ಕೆ ಸಿಲುಕದೆ ವಿಜಯಶಾಲಿಗಳಾದರು.

ಹಠವಾದೇಽವದದ್ ಭೀಮೋ ಯಂ ಧರ್ಮಂ ದ್ರೌಪದೀ ತಥಾ ।
ತಮೇವೋಕ್ತ್ವಾ ಧರ್ಮಜಸ್ತು ಚಕಾರ ಚ ನಿರುತ್ತರಮ್ ॥ ೩೯ ॥

ಆಗ ಹಿಂದೆ ಹಠವಾದದಲ್ಲಿ ಭೀಮ ದ್ರೌಪದಿಯರು ಯಾವ ಧರ್ಮವನ್ನು ಹೇಳಿದ್ದರೋ ಅದನ್ನೆ ಧರ್ಮರಾಜ ಹೇಳಿ ಸಂಜಯನನ್ನು ನಿರುತ್ತರಗೊಳಿಸಿದ.

ಈ ಪ್ರಸಂಗವನ್ನು ಊಹಿಸಿ ಅಂದೇ ಭೀಮದ್ರೌಪದಿಯರು ಧರ್ಮರಾಜನಿಗೆ ದುರ್ಜನರಲ್ಲಿ ಕ್ಷಮೆ ಪಾಪಕರ. ಅದರಿಂದ ಆಪತ್ತಿನಲ್ಲಿ ಕ್ಷತ್ರಿಯ ಯುದ್ಧ ಮಾಡಲೇಬೇಕು ಎಂದು ಹೇಳಿ ಅವನಿಂದ ಯುದ್ಧ ಪ್ರತಿಜ್ಞೆ ಮಾಡಿಸಿದ್ದರು. ಅದರಿಂದ ಸಂಜಯನನ್ನು ಧರ್ಮರಾಜ ನಿರುತ್ತರಗೊಳಿಸಿದ. ಆದರೆ ಎದೆಯಾಳದಲ್ಲಿ ಅವನಿಗೆ ಅಧರ್ಮಶಂಕೆ ಇದ್ದಿತು. ತೊಡೆ ಮುರಿದು ಬಿದ್ದ ದುರ್ಯೋಧನ ತಿರುಗಿ ಈ 'ಅಧರ್ಮ'ವನ್ನು ಪುನರುಚ್ಚರಿಸಿದಾಗ ಧರ್ಮರಾಜ ವಿಚಲಿತನಾಗುತ್ತಾನೆ.

ಕೃಷ್ಣೋಽಪಿ ತಸ್ಯ ಧರ್ಮಸ್ಯ ಪ್ರಾಮಾಣ್ಯಂ ಪ್ರತ್ಯಪಾದಯತ್ ॥೪೦॥

ಶ್ರೀಕೃಷ್ಣನೂ ಆ ಧರ್ಮದ ಪ್ರಾಮಾಣಿಕತೆಯನ್ನು ಸಮರ್ಥಿಸಿದ.

'ಯುದ್ಧದಲ್ಲಿ ಗುರುಹಿರಿಯರನ್ನು ಕೊಲ್ಲುವುದೂ ಆಪದ್ಧರ್ಮವಾಗುತ್ತದೆ. ನಾವು ಈಗ ಸರ್ವಸ್ವ ಕಳೆದುಕೊಂಡು ಆಪತ್ತಿನಲ್ಲಿ ಬಿದ್ದಿರುವಾಗ ಬ್ರಾಹ್ಮಣರಂತೆ ಭಿಕ್ಷಾಟನೆಗೆ ಹೊರಟರೆ ಅದೇ ಅಧರ್ಮವಾಗುತ್ತದೆ. ಲೋಕ ನಮ್ಮನ್ನು ಕಂಡು ಅಪಹಾಸ ಮಾಡುತ್ತದೆ, ನಿಂದೆ ಮಾಡುತ್ತದೆ. ಇದು ನನ್ನ ಅಭಿಪ್ರಾಯ. ಇನ್ನು ಈ ವಿಷಯದಲ್ಲಿ ಕೃಷ್ಣನೆ ನಮಗೆ ದಾರಿ ತೋರಬೇಕು' ಎಂದ ಧರ್ಮರಾಜ. ಆಗ ಕೃಷ್ಣನೆಂದ, ''ಸ್ವವಿಹಿತ ಕರ್ಮಾಚರಣದಿಂದಲೆ ದೇವ ಋಷಿ ಗಂಧರ್ವಾದಿಗಳು ಉನ್ನತಿ ಹೊಂದಿದ್ದಾರೆ. ಅದರಿಂದ ಆಪತ್ಕಾಲದಲ್ಲಿಯೂ ಕ್ಷತ್ರಿಯ ಬ್ರಾಹ್ಮಣರ ಭಿಕ್ಷಾಟನಕರ್ಮವನ್ನು ಮಾಡದೆ ಯುದ್ಧವನ್ನೆ ಮಾಡಬೇಕು. ಅದು ಸ್ವಧರ್ಮ. ಯುದ್ಧವಿಲ್ಲದೆ ರಾಜ್ಯ ಪ್ರಾಪ್ತಿಯಾಗುವುದಿದ್ದರೆ ನಾವು ಸರ್ವಥಾ ಶಾಂತಿ ಬಯಸುವವರೆ. ಭೀಮಸೇನನನ್ನು ನಾವು ಹೇಗಾದರೂ ಸುಮ್ಮನಿರುವಂತೆ ಮಾಡುವೆವು. ಈಗ ಯುದ್ಧ ಅನಿವಾರ್ಯವಾಗಿದೆ. ಅಂದು ಸಭೆಯಲ್ಲಿ ಕೌರವರ ದುರ್ವರ್ತನೆ ಯನ್ನು ನೋಡುತ್ತ ಸುಮ್ಮನೆ ಕುಳಿತು ಈಗ ನಮಗೇ ಉಪದೇಶ ಮಾಡುವಿರಿ. ಅಧರ್ಮ ಮಾಡಿದವರೊಂದಿಗೆ ಅದನ್ನು ನೋಡಿಯೂ ತಡೆಯದೆ ಬಿಟ್ಟವರನ್ನೂ ವಧಿಸುವುದು ಧರ್ಮವೆ ಆಗಿದೆ.''

ತತೋ ನಿರುತ್ತರಃ ಕೃಷ್ಣಂ ಪಾಂಡವಾಂಶ್ಚ ಪ್ರಣಮ್ಯ ಸಃ ।
ಧೃತರಾಷ್ಟ್ರಂ ಯಯೌ ತಂ ಚ ಏನಿಂದ್ಯ ಪ್ರಯಯೌ ಗೃಹಮ್ ॥೪೧॥

ಸಂಜಯ ನಿರುತ್ತರನಾಗಿ ಕೃಷ್ಣನನ್ನೂ ಪಾಂಡವರನ್ನೂ ನಮಿಸಿ ಧೃತರಾಷ್ಟ್ರನ ಬಳಿಗೆ ಹೋಗಿ ನಿಂದಿಸಿ ತನ್ನ ಮನೆಗೆ ಹೊರಟುಹೋದ.

'ನಮಗೆ ಐದು ಊರುಗಳನ್ನಾದರೂ ಕೊಡು. ನಿನ್ನನ್ನು ಕ್ಷಮಿಸುತ್ತೇವೆ. ಅದಕ್ಕೂ ಒಪ್ಪದಿದ್ದರೆ ನಾವು ಯುದ್ಧಕ್ಕೆ ಸಿದ್ಧರಿದ್ದೇವೆ' ಎನ್ನುವ ಧರ್ಮರಾಜನ ಸಂದೇಶವನ್ನು ಧೃತರಾಷ್ಟ್ರನ ಮುಂದೆ ಹೇಳುತ್ತಾನೆ ಸಂಜಯ. 'ಪಾಂಡವರ ಸೊತ್ತನ್ನು ಅಪಹರಿಸಿರುವಿ, ಮಹಾ ಅಪಕೀರ್ತಿ ಗಳಿಸಿರುವಿ, ಉತ್ತಮ ಕುಲದವನು ಹೀಗೆ ಮಾಡಬಾರದು. ಧರ್ಮರಾಜ ಕೋಪಗೊಂಡರೆ ಇಡೀ ಕುಲವೆ ನಾಶವಾದೀತು. ಪಾಪಿಗಳನ್ನು ನಾಶ ಮಾಡಿದರೆ ಪಾಪವಿಲ್ಲ' ಎಂದು ಎಚ್ಚರಿಸುತ್ತಾನೆ. 'ಧರ್ಮರಾಜನ ಮಾತನ್ನು ಬೆಳಿಗ್ಗೆ ಸಭೆಯ ಮುಂದೆ ಇಡುತ್ತೇನೆ' ಎಂದು ಹೇಳಿ ವಿಶ್ರಾಂತಿಗಾಗಿ ತನ್ನ ಮನೆಗೆ ಹೋಗುತ್ತಾನೆ.

ವಿದುರನೀತಿ ಸನತ್ಸುಜಾತೀಯ

ನಿಂದಿತಃ ಸಂಜಯೇನಾಸಾವಾಹೂಯ ವಿದುರಂ ನಿಶಿ ।
ಪಪ್ರಚ್ಛ ಸೋಽವದದ್ ಧರ್ಮಂ ಪಾರ್ಥಾನಾಂ ರಾಜ್ಯದಾಪನಮ್ ॥೪೨॥

ಸಂಜಯನಿಂದ ನಿಂದಿಸಲ್ಪಟ್ಟ ಧೃತರಾಷ್ಟ್ರ ರಾತ್ರಿಯಲ್ಲಿ ವಿದುರನನ್ನು ಕರೆಸಿಕೊಂಡು ಧರ್ಮದ ಬಗ್ಗೆ ಕೇಳಿದ. ಆಗ ವಿದುರ ಪಾಂಡವರಿಗೆ ರಾಜ್ಯ ಕೊಡಿಸುವುದೇ ನಿನಗೆ ಧರ್ಮ ಎಂದ.

ಸಂಜಯ ನಾಳೆ ಏನು ಹೇಳುವನೋ ಎಂಬ ಚಿಂತೆಯಿಂದ ಧೃತರಾಷ್ಟ್ರನಿಗೆ ರಾತ್ರಿ ನಿದ್ರೆ ಬರಲಿಲ್ಲ. ವಿದುರನನ್ನು ಕರೆಸಿಕೊಂಡು ಧರ್ಮದ ಬಗ್ಗೆ ಕೇಳಿದ.

ಐಹಿಕಸ್ಯ ಸುಖಸ್ಯಾಪಿ ಕಾರಣಂ ತದನಿಂದಿತಮ್ ।
ಅನ್ಯಥಾ ಸರ್ವಪುತ್ರಾಣಾಂ ನಾಶಂ ಧರ್ಮಾತಿಲಂಘನಮ್ ॥೪೩॥

'ಪಾಂಡವರಿಗೆ ರಾಜ್ಯ ಕೊಟ್ಟರೆ ಅದು ಐಹಿಕ ಸುಖಕ್ಕೂ ಕಾರಣವಾಗುವುದು. ಕೊಡದಿದ್ದರೆ ಧರ್ಮೋಲ್ಲಂಘನೆಯೆ ಆಗುವುದು. ನಿನ್ನೆಲ್ಲ ಮಕ್ಕಳ ನಾಶವೂ ಆಗುವುದು' ಎಂದ.

ತತ್ರ ಭಾವಮಕೃತ್ವಾ ಸ ಜ್ಞಾನಾದಿಚ್ಛನ್ನಘಕ್ಷಯಮ್ ।
ವಿಷ್ಣೋಃ ಸ್ವರೂಪಂ ಪಪ್ರಚ್ಛ ಸೋಽಸ್ಮರಚ್ಚ ಸನಾತನಮ್ ॥೪೪॥

ಧೃತರಾಷ್ಟ್ರ ವಿದುರನ ಸಲಹೆಯನ್ನೊಪ್ಪದೆ ಪಾಂಡವ ದ್ವೇಷದ ಪಾಪವನ್ನು ತತ್ವಜ್ಞಾನದಿಂದ ಕ್ಷಯ ಮಾಡಿಕೊಳ್ಳಲು ಬಯಸಿ ವಿಷ್ಣುವಿನ ಸ್ವರೂಪದ ಬಗ್ಗೆ ಕೇಳಿದ. ಆಗ ವಿದುರ ಸನಾತನನನ್ನು ನೆನೆದ.

ಪ್ರಜಾಗರಪರ್ವದಲ್ಲಿ ವಿದುರನೀತಿ ಬರುತ್ತದೆ-

ಏಕಯಾ ದ್ವೇ ವಿನಿಶ್ಚಿತ್ಯ ತ್ರೀನ್ ಚತುರ್ಭಿರ್ವಶೇ ಕುರು।
ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ॥

(ಉದ್ಯೋಗ 33.51)

ಕರ್ಮಕಾಂಡ ರೂಪವಾದ ವೇದದ ಒಂದು ಭಾಗದಿಂದ ಪ್ರವೃತ್ತಿ ನಿವೃತ್ತಿ ಮಾರ್ಗಗಳೆರಡರ ವ್ಯತ್ಯಾಸ ತಿಳಿದು ಪ್ರವೃತ್ತಿ ಧರ್ಮ ಸಾಧ್ಯವಾದ ಧರ್ಮ ಅರ್ಥ ಕಾಮ ಈ ಮೂರನ್ನು ಯಜ್ಞ ದಾನ ಅಧ್ಯಯನ ತಪ ಎಂಬ ನಾಲ್ಕು ಉಪಾಯಗಳಿಂದ ವಶಪಡಿಸಿಕೊಳ್ಳು. ಅವುಗಳಿಗೆ ದಾಸನಾಗಬೇಡ. ಪಾಂಡವರಿಗೆ ಅವರ ರಾಜ್ಯ ಹಿಂದೆ ಕೊಟ್ಟುಬಿಡು.

ಬ್ರಹ್ಮಕಾಂಡ ರೂಪವಾದ ವೇದದ ಒಂದು ಭಾಗದಿಂದ ಜೀವ ಪರಮಾತ್ಮ ಇವೆರಡರ ವ್ಯತ್ಯಾಸ ತಿಳಿದು ವೈಕುಂಠ ಶ್ವೇತದ್ವೀಪ ಅನಂತಾಸನ

ಗಳೆಂಬ ಮೂರನ್ನು ವೈರಾಗ್ಯಭಕ್ತಿ ಉಪಾಸನೆ ಅಪರೋಕ್ಷ ಜ್ಞಾನಗಳೆಂಬ ಸಾಧನ ಚತುಷ್ಟಯದಿಂದ ವಶಪಡಿಸಿಕೊಳ್ಳು, ಅಂದರೆ ಮೂರು ವಿಷ್ಣು ಲೋಕಗಳಲ್ಲಿ ಯಥೇಷ್ಟ ಸಂಚರಿಸುವಂತೆ ಹರಿಯ ಅನುಗ್ರಹ ಸಂಪಾದಿಸಿಕೊಳ್ಳು.

ಐದು ಇಂದ್ರಿಯಗಳನ್ನೂ ಆರು ವೈರಿಗಳನ್ನೂ ಗೆದ್ದು ಸಪ್ತಧಾತುಮಯವಾದ ಜಡಶರೀರವನ್ನು ತೊರೆದು ಸ್ವರೂಪಸುಖವನ್ನು ಅನುಭವಿಸು.

ಭಕ್ಷ್ಯೈತ್ತಮಪ್ರತಿಚ್ಛನ್ನಂ ಮತ್ಸ್ಯೋ ಬಡಿಶಮಾಯಸಂ।
ಅನ್ನಾಭಿಲಾಷೀ ಗ್ರಸತೇ ನಾನುಬಂಧಮವೇಕ್ಷತೇ।
(ಉದ್ಯೋಗ 34.13)

ಮಾಂಸದಾಸೆಯಿಂದ ಮೀನು ಗಾಳವನ್ನು ನುಂಗುತ್ತದೆ. ಹಾಗೇ ನೀನೂ ಪಾಂಡವರ ರಾಜ್ಯವನ್ನು ಕಬಳಿಸಿರುವಿ. ಮುಂದೆ ಆಗಲಿರುವ ಕುಲನಾಶದ ಬಗ್ಗೆ ಯೋಚಿಸುತ್ತಿಲ್ಲ.

ಹೀಗೆ ವಿದುರ ಎಷ್ಟು ಹೇಳಿದರೂ ಧೃತರಾಷ್ಟ್ರ ಹೇಳುತ್ತಾನೆ, 'ನಿಜ, ಎಷ್ಟೋ ಬಾರಿ ನೀನು ಹೇಳುವಂತೆ ಮಾಡಲು ನಿರ್ಧರಿಸುತ್ತೇನೆ. ಆದರೆ ದುರ್ಯೋಧನ ನನ್ನ ಬಳಿಗೆ ಬಂದರೆ ನನ್ನ ನಿರ್ಧಾರ ಬದಲಾಗುವುದು. ನಾನೇನು ಮಾಡಲಿ. ದೈವೇಚ್ಛೆ. ಪಾಂಡವದ್ವೇಷದ ಪಾಪಪರಿಹಾರವಾಗಿ ಧರ್ಮಬುದ್ಧಿ ಸ್ಥಿರವಾಗಲು ನನಗೆ ಬ್ರಹ್ಮವಿದ್ಯೆ ಉಪದೇಶಿಸು.' ವಿದುರನೆಂದ, 'ನಾನು ಜಾತಿಯಲ್ಲಿ ಶೂದ್ರ. ಬ್ರಹ್ಮವಿದ್ಯೆ ಉಪದೇಶಿಸಲಾರೆ' ಎನ್ನುತ್ತ ಸನಾತನನೆಂಬ ಮುನಿಯನ್ನು ನೆನೆದ.

ಮುಂದೆ ಸನತ್ಸುಜಾತಪರ್ವ. ಎಲ್ಲಕಡೆ ಸನತ್ಸುಜಾತ ಉವಾಚ ಎಂದೇ ಬರುತ್ತದೆ. ಕೊನೆಯಲ್ಲಿ 'ಸನತ್ಸುಜಾತೀಯಂ ಸಮಾಪ್ತಂ' ಎಂದಿದೆ.

ಧೃತರಾಷ್ಟ್ರ ಕುಮಾರೋ ವೈ ಯಃ ಪುರಾಣಃ ಸನಾತನಃ (ಉ. 41.2)
ಕಿಂ ತ್ವಂ ನವೇದ ತದ್ ಭೂಯೋ ಯನ್ಮೇ ಬ್ರೂಯಾತ್ ಸನಾತನಃ
(ಉ. 41.4)
ಬ್ರವೀಹಿ ವಿದುರ ತ್ವಂಮೇ ಪುರಾಣಂ ತಂ ಸನಾತನಂ (ಉ. 41.7)

ಇಲ್ಲಿ ಎಲ್ಲ ಕಡೆ ಸನಾತನ ಎಂಬ ಹೆಸರು ಬರುತ್ತದೆ.

ಸನತ್ಕುಮಾರಂ ರಹಿತೇ ಮಹಾತ್ಮಾ (ಉ. 42.1)

ಎಂಬಲ್ಲಿ ಸನತ್ಕುಮಾರ ಎಂಬ ಹೆಸರಿದೆ. ಇದು ಲಕ್ಷ್ಮಾಲಂಕಾರ ಪಾಠ. ಪ್ರಚಲಿತ ಪಾಠ 'ಸನತ್ಸುಜಾತಂ ರಹಿತೇ' ಎಂದಿದೆ. ಹೀಗೆ ಮೂರು ಹೆಸರುಗಳು ಒಬ್ಬ ಮುನಿಗೆ ಬರುತ್ತವೆ. ಆದರೆ ನಿಜವಾದ ಹೆಸರು 'ಸನತ್ಕುಮಾರ' ಏಕೆಂದರೆ

ಲಕ್ಷಾಲಂಕಾರದಲ್ಲಿ 'ಸನತ್‌ಸುಜಾತ' ಎಂದರೆ 'ಸನತ್' ಶಬ್ದದೊಂದಿಗೆ ಸುಪ್ರಸಿದ್ಧ ಕುಮಾರ ನಾಮ ಯಾರಿಗೆ 'ಸುಜಾತ' ಉಂಟಾಗಿದೆಯೋ ಅವನು. ಅಂದರೆ ಸನತ್ಕುಮಾರ ಎಂದು ವ್ಯಾಖ್ಯಾನಿಸಿದೆ. ನಿರ್ಣಯದಲ್ಲಿ ಹೇಳಿದ 'ಸನಾತನ' ಎಂಬ ಹೆಸರು ಭಾರತದಲ್ಲಿದ್ದರೂ ಅದು 'ಸನತ್ಕುಮಾರ' ನಾಮದಲ್ಲಿರುವ 'ಸನತ್' ಪದದ ಅರ್ಥನಿರ್ದೇಶ. ಸನತ್=ಎಂದಿಗೂ, ಕುಮಾರ=ಕುಮಾರನೇ ಆಗಿರುವವನು. ಐದು ವರ್ಷದ ಬಾಲಕನಂತೇ ಇರುವವನು.

ಸ ಆಗತ್ಯಾವದತ್ ತತ್ವಂ ವಿಷ್ಣೋರ್ಮಾಯಾವಿನಃ ಶುಭಾ ।
ನ ಗತಿಶ್ಚೇತ್ಯಥ ಪ್ರಾತಃ ಸಂಜಯಃ ಪಾಂಡವೋದಿತಮ್ ।
ಅವದದ್ ಧೃತರಾಷ್ಟ್ರಾಯ ಸಭಾಯಾಂ ಕುರುಸನ್ನಿಧೌ ॥೪೫॥

ಸನತ್ಕುಮಾರ ಬಂದು ವಿಷ್ಣುವಿನ ಸ್ವರೂಪವನ್ನು ಉಪದೇಶಿಸಿದ. ಕಪಟಿಗೆ ಸದ್ಗತಿ ಇಲ್ಲವೆಂದೂ ಹೇಳಿದ. ಮರುದಿನ ಬೆಳಿಗ್ಗೆ ಸಭೆಯಲ್ಲಿ ಕೌರವರ ಉಪಸ್ಥಿತಿಯಲ್ಲಿ ಸಂಜಯ ಧೃತರಾಷ್ಟ್ರನಿಗೆ ಧರ್ಮರಾಜನ ಸಂದೇಶವನ್ನು ತಿಳಿಸಿದ.

'ಲೋಕಕ್ಕೆ ಯಮನೂ ಅವನ ಸೋದರನಾದ ಮೃತ್ಯುದೇವನೂ ಮೃತ್ಯು ಎನಿಸುತ್ತಾನೆ. ಆದರೆ 'ಆತ್ಮಾವಾ ಇದಮೇಕ ಏವಾಗ್ರ ಆಸೀತ್' ಎಂದು ಶ್ರುತಿ ಹೇಳುವಂತೆ ಬ್ರಹ್ಮಚರ್ಯ ಸ್ವರೂಪನಾದ, ಅಂದರೆ, ವೇದಪ್ರತಿಪಾದ್ಯನಾದ ನಾರಾಯಣ 'ಅಮೃತ' ಅಂದರೆ, ಮೃತ್ಯು ರಹಿತನಾಗಿದ್ದಾನೆ. ಸರ್ವ ಮಾರಕನಾದ ಯಮನಿಗೂ ಪೂಜ್ಯನಾಗಿ ಒಳ್ಳೆಯವರಿಗೆ ಒಳ್ಳೆಯದನ್ನೂ ಕೆಟ್ಟವರಿಗೆ ಕೆಟ್ಟದನ್ನೂ ಯಮನ ಮೂಲಕ ಮಾಡಿಸುವ ಶ್ರೀರಾಮನಿಗೆ ಮರಣವೆಲ್ಲಿ?' ಎಂದು ಮುಂತಾಗಿ ಸನತ್ಕುಮಾರ ವಿಷ್ಣುತತ್ವವನ್ನು ಧೃತರಾಷ್ಟ್ರನಿಗೆ ಉಪದೇಶಿಸಿದ.

ನ ಚ್ಛಂದಾಂಸಿ ವೃಜಿನಾತ್ ತಾರಯಂತಿ
ಮಾಯಾವಿನಂ ಮಾಯಯಾ ವರ್ತಮಾನಂ (ಉದ್ಯೋಗ 43.5)

'ಕಪಟಾಚರಣೆ ಮಾಡುವ ವಂಚಕನನ್ನು ಯಾವ ವೇದಮಂತ್ರ ಜಪ ಪಾರಾಯಣವೂ ಪಾಪದಿಂದ ಕಾಪಾಡುವುದಿಲ್ಲ.' ರೆಕ್ಕೆ ಬಂದ ಹಕ್ಕಿಗಳು ಗೂಡನ್ನು ಬಿಡುವಂತೆ ವೇದಗಳೂ ಅಂತ್ಯಕಾಲದಲ್ಲಿ ವಂಚಕನನ್ನು ತೊರೆಯುತ್ತವೆ. ಏಕೆಂದರೆ ವಂಚಕ ವೇದವನ್ನು ವಿಷ್ಣುಸ್ತುತಿರೂಪವೆಂದರಿಯದೆ ಪಠಿಸುತ್ತಾನೆ. ಅಂತ್ಯಕಾಲದಲ್ಲಿ ಸದ್ಗತಿ ನೀಡುವವನು ಹರಿ. ಅವನು ಈತನನ್ನು ಪರಿತ್ಯಜಿಸುತ್ತಾನೆ. ಆಗ ಬರಿ ವೇದ ಅವನನ್ನು ಹೇಗೆ

ಕಾಪಾಡೀತು? ಅದರಿಂದ ಕಪಟಿಗೆ ಸದ್ಗತಿ ಇಲ್ಲ ಎಂದೂ ಸನತ್ಕುಮಾರ ಹೇಳಿದ.

'ಧರ್ಮರಾಜನ ಸಂದೇಶ'ವೆಂದು ಪ್ರಚಲಿತ ಭಾರತದಲ್ಲಿ ಏನೂ ಕಾಣುವುದಿಲ್ಲ. ಅಲ್ಲಿ ಶ್ರೀಕೃಷ್ಣಾರ್ಜುನರ ಬಳಿಗೆ ಸಂಜಯ ಬರುತ್ತಾನೆ. ಕೃಷ್ಣ ಹೇಳುತ್ತಾನೆ 'ಕೌರವರು ಪಾಂಡವರ ರಾಜ್ಯ ಹಿಂತಿರುಗಿಸದಿದ್ದರೆ ಅವರೆಷ್ಟು ಯಾಗದಾನಾದಿ ಕರ್ಮ ಮಾಡಿದರೂ ಫಲವಿಲ್ಲ, ಅಂದು ಸಭೆಯಲ್ಲಿ ದ್ರೌಪದಿ ನನ್ನನ್ನು ಕೂಗಿ ಕರೆದುದನ್ನು ನಾನೆಂದೂ ಮರೆಯಲಾರೆ. ಅದರಿಂದ ಯುದ್ಧದಲ್ಲಿ ಕೌರವರ ಸರ್ವನಾಶವಾಗುವುದು ನಿಶ್ಚಿತ' ಎಂದು. ಅರ್ಜುನನೂ ಹಾಗೇ ಹೇಳುತ್ತಾನೆ. ಭೀಷ್ಮದ್ರೋಣ ಕೃಪ ಅಶ್ವತ್ಥಾಮ ವಿದುರರು ಏನು ಹೇಳುವರೋ ಅದರಂತೆ ನಡೆದುಕೊಂಡರೆ ಮಾತ್ರ ಅವರು ಉಳಿಯುತ್ತಾರೆ ಎನ್ನುತ್ತಾನೆ. ಇದೇ ಧರ್ಮರಾಜನ ಸಂದೇಶವೆಂದಿಟ್ಟುಕೊಳ್ಳಬೇಕು.

ತಚ್ಛ್ರುತ್ವಾ ಸ ತು ಭೀತೋಽಪಿ ಪುತ್ರಸ್ನೇಹಾನುಗೋ ನೃಪಃ ।
ರಾಜ್ಯಂ ನಾದಾತ್ ಪಾಂಡವಾನಾಂ ತತೋ ಧರ್ಮಸುತೋ ನೃಪಃ ॥ ೪೬ ॥
ಯದುಕ್ತವಾನ್ ಸಂಜಯಾಯ ಯದಿ ದಿತ್ಸತಿ ನಃ ಪಿತಾ ।
ರಾಜ್ಯಂ ತದಾ ತ್ವಮಾಗಚ್ಛ ವಿದುರೋ ವಾ ನ ಚೇನ್ನ ಚ ।
ತಾವಥಾನಾಗತೌ ಜ್ಞಾತ್ವಾ ಮಂತ್ರಯಾಮಾಸ ಶೌರಿಣಾ ॥ ೪೭ ॥

ಅದನ್ನು ಕೇಳಿದ ಧೃತರಾಷ್ಟ್ರ ಭೀತನಾದರೂ ಪುತ್ರಮೋಹಕ್ಕೆ ವಶನಾಗಿ ಪಾಂಡವರಿಗೆ ರಾಜ್ಯ ಕೊಡಲಿಲ್ಲ. 'ನಮಗೆ ಧೃತರಾಷ್ಟ್ರ ರಾಜ್ಯ ಕೊಡಲು ಒಪ್ಪಿದರೆ ಅದನ್ನು ತಿಳಿಸಲು ನೀನು ಬಾ ಅಥವಾ ವಿದುರ ಬರಲಿ. ಇಲ್ಲದಿದ್ದರೆ ಬೇಡ' ಎಂದು ಧರ್ಮರಾಜ ಸಂಜಯನಿಗೆ ಹೇಳಿದ್ದರಿಂದ ಅವರಿಬ್ಬರೂ ಬಾರದಿದ್ದುದನ್ನು ಕಂಡು ತಾನು ಕೃಷ್ಣನೊಡನೆ ಮಂತ್ರಾಲೋಚನೆ ಮಾಡಿದ.

ಭೀಮನಿಗೆ ಭೀತಿ !

ಸೋಽಪ್ಯಾಹಾಹಂ ಗಮಿಷ್ಯಾಮಿ ಸಭಾಯಾಮೃಷಿಸನ್ನಿಧೌ ॥ ೪೮ ॥
ವಕ್ಷ್ಯೇ ಪಥ್ಯಾನಿ ಯುಕ್ತಾನಿ ಯದಿ ನಾಸೌ ಗ್ರಹೀಷ್ಯತಿ ।
ವಧ್ಯಃ ಸರ್ವಸ್ಯ ಲೋಕಸ್ಯ ಸ ಭವೇತ್ ಸರ್ವಧರ್ಮಹಾ ॥ ೪೯ ॥

ಶ್ರೀಕೃಷ್ಣನೆಂದ 'ನಾನು ಹೋಗುವೆನು. ರಾಜಸಭೆಯಲ್ಲಿ ಋಷಿಗಳ ಸಮಕ್ಷಮದಲ್ಲಿ ಹಿತಕರವಾದ ಯೋಗ್ಯವಾದ ಮಾತುಗಳನ್ನಾಡುವೆನು. ಅವನ್ನು ದುರ್ಯೋಧನ ಕೇಳದಿದ್ದರೆ, ಎಲ್ಲ ಜನರ ಕಣ್ಣಿಗೆ ಸರ್ವಧರ್ಮ ಪರಿತ್ಯಾಗಿ ವಧಾರ್ಹನೆನಿಸುತ್ತಾನೆ.'

ಎಲ್ಲ ವಿಧಿ ನಿಷೇಧಗಳೂ ಹರಿಯಾಜ್ಞೆಯೆ ಆಗಿರುವುದರಿಂದ ಅವನು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ನಡೆದರೆ ಸಕಲ ಧರ್ಮ ಪರಿತ್ಯಾಗವಾಗುತ್ತದೆ.

ಇತ್ಯುಕ್ತೇ ವೈರಮಾತ್ಮೋತ್ಥಂ ಲೋಕಮಧ್ಯೇ ಪ್ರಹಾಪಯನ್ ।
ಲೋಕಸಂಗ್ರಹಣಾರ್ಥಾಯ ಭೀಮಸೇನೋಽಬ್ರವೀದ್ ವಚಃ ॥೫೦॥

ಶ್ರೀಕೃಷ್ಣ ಹೀಗೆ ಹೇಳಿದಾಗ ಭೀಮ ತನ್ನಿಂದಾಗಿ ಯುದ್ಧವಾಯಿತೆಂಬ ಗ್ರಹಿಕೆ ಲೋಕಕ್ಕೆ ಆಗುವುದನ್ನು ತಪ್ಪಿಸಲು ಲೋಕರೀತಿಯನ್ನು ಅನುಸರಿಸುವುದಕ್ಕಾಗಿ ಈ ಒಂದು ಮಾತನ್ನು ಹೇಳಿದ.

ನಾಸ್ಮನ್ನಿಮಿತ್ತಂ ನಾಶಃ ಸ್ಯಾತ್ ಕುಲಸ್ಯಾಪಿ ವಯಂ ಕುಲಮ್ ।
ರಕ್ಷಿತುಂ ಧಾರ್ತರಾಷ್ಟ್ರಸ್ಯ ಭವೇಮಾಧಶ್ಚರಾ ಇತಿ ॥೫೧॥

'ನಮ್ಮ ನಿಮಿತ್ತವಾಗಿ ಕುಲನಾಶವಾಗುವುದು ಬೇಡ. ಕುಲ ರಕ್ಷಣೆಯ ಸಲುವಾಗಿ ನಾವು ದುರ್ಯೋಧನನ ಕೆಳಗೇ ಇರೋಣ.'

ಅಪಿ ದುರ್ಯೋಧನಂ ಕೃಷ್ಣ ಸರ್ವೇ ವಯಮಧಶ್ಚರಾಃ।
ನೀಚೈರ್ಭೂತ್ವಾನುಯಾಸ್ಯಾಮೋ ಮಾ ಸ್ಮ ನೋ ಭರತಾ ನಶನ್ ॥
(ಉದ್ಯೋಗ 73.20)

'ಕೃಷ್ಣ, ನಮ್ಮಿಂದಾಗಿ ಕುರುಕುಲ ನಾಶವಾಗುವುದು ಬೇಡ. ಅದಕ್ಕೆ ನಾವು ದುರ್ಯೋಧನನ ಕೆಳಗೇ ಓಡಾಡುವೆವು.' ಎಂದು ಭೀಮ ಹೇಳುತ್ತಾನೆ. ಆದರೆ ಭೀಮ ಅಚ್ಛಿನ್ನ ಭಾಗವತ ಧರ್ಮದವನು ಲೋಕರೀತಿಯ ಅನುಸರಣೆಗಾಗಿಯಾದರೂ ಬರಿ ಸುಳ್ಳನ್ನೆಂದೂ ಹೇಳಲಾರ. ಅದರಿಂದ ಅವನ ಮಾತಿಗೆ ಒಳ ಅರ್ಥ ಹೀಗೆ- ಯುದ್ಧದಲ್ಲಿ ಕುಲನಾಶಕನಾದ ದುರ್ಯೋಧನನನ್ನು ಕೊಂದು ಕುಲವನ್ನು ಉಳಿಸುತ್ತೇವೆ. ದುರ್ಯೋಧನ ಸತ್ತು ಸ್ವಲ್ಪಕಾಲ ಮೇಲೆ ವೀರಸ್ವರ್ಗ ಹೊಂದುತ್ತಾನೆ. ಆಗ ಅವನಿಗೆ ನಾವು, ಅಧಃ- ಕೆಳಗೆ ಭೂಲೋಕದಲ್ಲಿ, ಚರಾಃ - ರಾಜ್ಯಭಾರ ಕಾರ್ಯಗಳಲ್ಲಿ ಓಡಾಡುವೆವು.[1]

ಇಚ್ಛತಾಽಪ್ಯಖಿಲಾನ್ ಹಂತುಂ ಧಾರ್ತರಾಷ್ಟ್ರಾನ್ ದೃಢಾತ್ಮನಾ ।
ಭೀಮೇನೋಕ್ತೋ ವಾಸುದೇವೋ ಲೋಕಸಂಗ್ರಹಣೇಚ್ಛಯಾ ॥೫೨॥

, ಭೀಮ ದೃಢಮನಸಿನಿಂದ ಎಲ್ಲ ಕೌರವರನ್ನೂ ಕೊಲ್ಲಲು ಭಯಸಿಯೂ ಕೂಡ ಹೀಗೆ ಲೋಕರೀತಿಯನ್ನು ಅನುಸರಿಸುವ ಇಚ್ಛೆಯಿಂದ ಕೃಷ್ಣನಿಗೆ ಹೇಳಿದ.

ವಧಂ ತೇಷಾಂ ಧರ್ಮಮೇವ ಲೋಕೇ ಜ್ಞಾಪಯಿತುಂ ಹರಿಃ ।
ಆಕ್ಷಿಪನ್ನಿವ ಭೀಮಂ ತಂ ಯುದ್ಧಾಯ ಪ್ರೈರಯದ್ ದೃಢಮ್ ॥೫೩॥

---

1. ಅಚ್ಛಿನ್ನ ಧರ್ಮೋ ಭೀಮೋ ಲೋಕಸಂಗ್ರಹಾಯಾಪಿ ಕೇವಲಂ ನಾನೃತಂ ವದೇತ್। ಅತೋ ಯುದ್ಧೇ ಮರಣಾನಂತರಂ ಕಂಚಿತ್ಕಾಲಂ ವೀರಸ್ವರ್ಗೇ ಸ್ಥಿತಸ್ಯ ಧಾರ್ತರಾಷ್ಟ್ರಸ್ಯ ಅಧೋ ಭೂಲೋಕೇ ಚರಾಮ ರಾಜ್ಯಪರಿಪಾಲನಾಯೇತಸ್ತತಃ ಸಂಚಾರವಂತೋ ಭವೇಮೇತ್ಯಾಂತರಾರ್ಥಃ॥ -ವಾದಿರಾಜೀಯ

ಕೌರವರ ವಧೆ ಧರ್ಮವೆಂದು ಲೋಕಕ್ಕೆ ತಿಳಿಸುವುದಕ್ಕಾಗಿ ಕೃಷ್ಣ ಭೀಮನನ್ನು ಆಕ್ಷೇಪಿಸುವವನಂತೆ ಯುದ್ಧಕ್ಕೆ ದೃಢವಾಗಿ ಪ್ರೇರಿಸಿದ.

ಮಹಾಭಾರತದಲ್ಲಿ ಮೇಲುನೋಟಕ್ಕೆ ಭೀಮ ವಿಷಾದಕ್ಕೊಳಗಾದಂತೆ ಕೃಷ್ಣ ಆಕ್ಷೇಪಿಸಿದಂತೆ ಕಾಣುತ್ತದೆ. ಕೃಷ್ಣ ಹೇಳುತ್ತಾನೆ–

ಉತ್ತಿಷ್ಠಸ್ವ ವಿಷಾದಂ ಮಾ ಕೃಥಾ ವೀರ ಸ್ಥಿರೋ ಭವ।
(ಉದ್ಯೋಗ 74.22)

'ಭೀಮ ಎದ್ದೇಳು, ವಿಷಾದ ಮಾಡಬೇಡ. ದುರ್ಯೋಧನನ ತೊಡೆ ಮುರಿವ ಪ್ರತಿಜ್ಞೆ ಮಾಡಿರುವಿ. ಈಗ ನಪುಂಸಕನಂತೆ ನಡಿಯುತ್ತಿರುವಿ. ನಿನ್ನ ಪೌರುಷವೆಲ್ಲಿ ಹೋಯಿತು. ಭೀಮನಿಗೆ ಭಯವೆ? ಶಾಂತಿ ಸಂಧಾನದ ಮಾತನ್ನಾಡುತ್ತಿರುವೆಯಲ್ಲ!'

ಮುಂದೆ ಅರ್ಜುನ ವಿಷಾದಯೋಗದಲ್ಲಿ ಶ್ರೀಕೃಷ್ಣ ಅರ್ಜುನನಿಗೂ ಇದೇ ಮಾತನ್ನು ಹೇಳುತ್ತಾನೆ–

ಕ್ಷುದ್ರಂ ಹೃದಯಂ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ॥

ಮೇಲುನೋಟಕ್ಕೆ ಇಲ್ಲಿ ಕೃಷ್ಣನಿಗೆ ಭೀಮನ ಮಾತಿನ ಆಂತರ್ಯ ತಿಳಿದಿಲ್ಲವೆಂದು ಕಾಣುತ್ತದೆ. ನಿರ್ಣಯದಲ್ಲಿ ವಾಸ್ತವಸಂಗತಿಯನ್ನು ಹೇಳಿದೆ. ವಸ್ತುತಃ ಭೀಮ ಲೋಕ ರೀತಿಯನ್ನು ಅನುಸರಿಸುತ್ತಿದ್ದಾನೆ. ಕೃಷ್ಣನ ಅಭಿಪ್ರಾಯದಲ್ಲಿ ಭೀಮ ತನಗೆ ಭಯವಿಲ್ಲವೆಂದು ತನ್ನ ಬಲವನ್ನು ಹೇಳಿಕೊಳ್ಳಬೇಕೆಂದಿದೆ. ಕೌರವರ ವಧೆ ಧರ್ಮವೆಂದು ತಿಳಿಸುವ ಅಭಿಪ್ರಾಯವಿದೆ.

ಅಭಿಪ್ರಾಯಂ ಕೇಶವಸ್ಯ ಜ್ಞಾನನ್ ಭೀಮೋ ನಿಜಂ ಬಲಮ್ ।
ರಾಜ್ಞಾಂ ಮಧ್ಯೇಽವದತ್ ತಚ್ಚ ಕೃಷ್ಣೋಽಭ್ಯಧಿಕಮೇವ ಹಿ ॥ ೫೪ ॥

ಆಗ ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದ ಭೀಮ ರಾಜರುಗಳ ನಡುವೆ ತನ್ನ ಬಲವನ್ನು ಹೇಳಿಕೊಂಡ. ಕೃಷ್ಣ 'ಅದು ಅಷ್ಟೇ ಅಲ್ಲ, ಇನ್ನೂ ಹೆಚ್ಚೇ ಇದೆ' ಎಂದ.

'ನನಗೆ ವಿಷಾದವಾಗಲಿ ಭಯವಾಗಲಿ ಇಲ್ಲ. ಭೂ ಮ್ಯಂತರಿಕ್ಷಗಳು ಒಂದಾಗಿ ಬಂದರೂ ನಾನು ನನ್ನ ಬಾಹುಗಳಿಂದಲೆ ನಿಗ್ರಹಿಸಬಲ್ಲೆ' ಎನ್ನುತ್ತಾನೆ ಭೀಮ. 'ಅಷ್ಟೇ ಅಲ್ಲ ನಿನ್ನ ಬಲ ಇನ್ನೂ ಸಾವಿರ ಪಾಲು ಹೆಚ್ಚೇ ಇದೆ ಎಂದು ನಾನು ತಿಳಿದಿದ್ದೇನೆ' ಎನ್ನುತ್ತಾನೆ ಕೃಷ್ಣ–

ಯತ್ ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಂ।
(ಉದ್ಯೋಗ 76-3)

ಕುಲ ನಾಶವಾಗದಿರಲೆಂದು ಭೀಮ ಶಾಂತಿಯನ್ನು ಬಯಸಿದ್ದಾನೆ. ಭಯದಿಂದಲ್ಲ, ವಿಷಾದದಿಂದಲ್ಲ ಎಂದು ಲೋಕ ತಿಳಿಯಲೆನ್ನುವುದು ಕೃಷ್ಣನ ಅಭಿಪ್ರಾಯವಾಗಿತ್ತು. ಈ ಅಭಿಪ್ರಾಯ ತಿಳಿದು ಭೀಮ ತನ್ನ ಬಲವನ್ನು ಹೇಳಿಕೊಂಡ. ಇಲ್ಲದಿದ್ದರೆ ಆತ್ಮಪ್ರಶಂಸೆ ಧೀರೋದಾತ್ತನ ಲಕ್ಷಣವಲ್ಲ. ಧರ್ಮವೂ ಅಲ್ಲ. ಕೃಷ್ಣ ಅದನ್ನು ಬಯಸಿದ್ದರಿಂದ ಧರ್ಮವಾಯಿತು.

ಶಶಂಸ ಸತ್ಯೈಃ ಸದ್ವಾಕ್ಯೈ ರಾಜ್ಞಾಂ ಮಧ್ಯೇ ಪ್ರಕಾಶಯನ್ ।
ವಧಂ ಕುರೂಣಾಂ ಸದ್ಧರ್ಮಂ ಗುಣಾನ್ ಭೀಮಸ್ಯ ಚಾಮಿತಾನ್ ॥೫೫॥

ಭೀಮನ ಗುಣಗಳು ಅಪರಿಮಿತವೆಂಬುದನ್ನೂ ಕೌರವರ ವಧೆ ಉತ್ತಮ ಧರ್ಮವೆಂಬುದನ್ನೂ ಪ್ರಕಟಗೊಳಿಸುತ್ತ ಶ್ರೀಕೃಷ್ಣ ರಾಜರುಗಳ ನಡುವೆ ಸತ್ಯವಾದ ನಿರ್ದುಷ್ಟವಾದ ಮಾತುಗಳಿಂದ ಭೀಮನನ್ನು ಪ್ರಶಂಸೆ ಮಾಡಿದ.

'ಸಹಸ್ರಗುಣಮಪ್ಯೇತತ್' ಎಂಬಲ್ಲಿ ಭೀಮನ ಗುಣಗಳು ಅಪರಿಮಿತವೆಂದಿದ್ದಾನೆ ಕೃಷ್ಣ. 'ನಹಿ ಯುದ್ಧಂ ನ ಕಾಮಯೇ' (ಉದ್ಯೋ. 76. 19) ಎಂಬಲ್ಲಿ 'ಈ ಯುದ್ಧ ನಿಶ್ಚಯವಾಗಿ ನನಗೆ ಇಷ್ಟವಾಗಿದೆ' ಎಂಬ ಮಾತಿನಿಂದ ಕೌರವರ ವಧೆ ಉತ್ತಮ ಧರ್ಮವೆಂದಿದ್ದಾನೆ. ಭಗವಂತನಿಗೆ ಇಷ್ಟವಾದುದೆ ಧರ್ಮತಾನೆ?

ನಿತ್ಯಮೇಕಮನಸ್ಕೌ ತಾವಪಿ ಕೇಶವಮಾರುತೀ ।
ಏವಂ ಲೋಕಸ್ಯ ಸಂವಾದಹೇತೋಃ ಸಂವಾದಮಕೃತಾಮ್ ॥೫೬॥

ಶ್ರೀಕೃಷ್ಣ ಭೀಮರು ಎಂದಿಗೂ ಒಂದೇ ಅಭಿಪ್ರಾಯ ಉಳ್ಳವರು. ಆದರೂ ಲೋಕದ ಸಂಮತಿ ಪಡೆಯುವುದಕ್ಕಾಗಿ ಹೀಗೆ ತೋರಿಕೆಗೆ ವಿವಾದ ಮಾಡಿದರು.

ಕುಲಕ್ಷಯವಾಗುತ್ತಿದ್ದುದನ್ನು ಕಂಡೂ ಶಕ್ತಿ ಇದ್ದೂ ಕೃಷ್ಣ ತಡೆಯಲಿಲ್ಲ ಎಂದು ಅಜ್ಞರೂ ಶತ್ರುಗಳೂ ತಿಳಿಯದಿರಲಿ ಎನ್ನುವ ದೃಷ್ಟಿಯಿಂದ (ಉದ್ಯೋ. 93. 17) ಕೃಷ್ಣ ಸಂಧಾನಕ್ಕೆ ಹೋಗುತ್ತಾನೆ. ಭೀಮನೆ ಜಗಳಕ್ಕೆ ನಿಂತನೆಂದು ಜನ ಆಡಿಕೊಳ್ಳಬಾರದೆಂದು ಭೀಮನೂ ಶಾಂತಿಸಂಧಾನದ ಪ್ರಸ್ತಾವ ಮಾಡುತ್ತಾನೆ. ಹೀಗೆ ಇಬ್ಬರೂ ಒಂದೇ ಅಭಿಪ್ರಾಯದವರು. ಆದರೂ ತೋರಿಕೆಗೆ ವಿವಾದ ಮಾಡಿದರು. ನಿರ್ಣಯದಲ್ಲಿ 'ಸಂವಾದ' ಎಂದಿದೆ. ಅದರರ್ಥ 'ಸಂ' ಹೃದಯದಲ್ಲಿ ನೀನು ಹೇಳಿದುದು ಸಮರ್ಪಕವೇ ಆಗಿದೆ ಎಂಬ ಭಾವ. 'ವಾದ' - ಹೊರಗೆ ತೋರಿಕೆಗೆ ಮಾತ್ರ ವಿವಾದ. ಭೀಮ 'ಯುದ್ಧಬೇಡ' ಎಂದರೆ ಅದರ ಅಭಿಪ್ರಾಯ ತಿಳಿದ ಕೃಷ್ಣ ಹೃದಯದಲ್ಲಿ ನೀನು ಹೇಳುವುದು ಸರಿ ಎಂದುಕೊಳ್ಳುತ್ತಾನೆ. ಹೊರಗೆ 'ಭೀಮನಿಗೆ ಯುದ್ಧದ ಭಯ!' ಎಂದು ಗೇಲಿಮಾಡುತ್ತಾನೆ. ಕೃಷ್ಣಭೀಮರ ಈ ವಿವಾದ ತೋರಿಕೆಗೇ

ಹೊರತು ಮನಃಪೂರ್ವಕವಲ್ಲ ಎಂದು ಸೂಚಿಸುವುದಕ್ಕಾಗಿ ನಿರ್ಣಯದಲ್ಲಿ 'ಅಕುರುತಾಂ' ಎಂದು ಲೌಕಿಕ ಪ್ರಯೋಗ ಮಾಡದೆ 'ಅಕ್ರತಾಂ' ಎಂದು ವೈದಿಕ ಪ್ರಯೋಗವಿದೆ.[1]

ತತಃ ಕೃಷ್ಣೋಽರ್ಜುನಂ ಚೈವ ಕೃಪಾಲುಂ ಸಂಧಿಕಾಮುಕಮ್ ।
ಹೇತುಮದ್ಭಿಃ ಶುಭೈರ್ವಾಕ್ಯೈರನುನೀಯ ಜಗತ್ಪತಿಃ ।
ಉಕ್ತೋ ಮಾನುಷಯಾ ಬುದ್ಧ್ಯಾ ನಕುಲೇನ ಸುನೀತಿವತ್ ॥ ೫೭ ॥

ಬಳಿಕ ದಯಾಳುವಾಗಿ ಸಂಧಿಯನ್ನು ಬಯಸಿದ್ದ ಅರ್ಜುನನನ್ನು ಜಗದೊಡೆಯನಾದ ಕೃಷ್ಣ ಯುಕ್ತಿಯುಕ್ತವಾದ ಮಾತುಗಳಿಂದ ಯುದ್ಧಕ್ಕೆ ಒಪ್ಪಿಸಿದ. ನಕುಲ ಕೃಷ್ಣನಿಗೆ ಅವನೊಬ್ಬ ಮನುಷ್ಯನೆಂಬ ಭಾವನೆಯಿಂದ ಒಬ್ಬ ನೀತಿಜ್ಞನಿಗೆ ಹೇಳುವಂತೆ ಉಪದೇಶದ ಮಾತನ್ನು ಹೇಳಿದ.

ದುರ್ಯೋಧನ ವಧಾರ್ಹನೆನ್ನುವುದರಲ್ಲಿ ಸಂದೇಹವಿಲ್ಲ. ಅವನು ಸಂಧಿಗೆ ಒಪ್ಪುತ್ತಾನೆ ಎಂದೂ ನನಗೆ ಅನಿಸುವುದಿಲ್ಲ. ಆದರೂ ನಿನಗೆ ಅಸಾಧ್ಯವಾದುದು ಏನೂ ಇಲ್ಲ. ಸಂಧಿಗೇ ಯತ್ನಮಾಡು. ಅಥವಾ ನೀನು ಇಷ್ಟಪಟ್ಟರೆ ಯುದ್ಧವನ್ನೇ ನಿಶ್ಚಯಿಸು ಎಂದ ಅರ್ಜುನ. ಇದು ಅವನ ದಯಾ ಮನೋಭಾವವನ್ನು ತೋರುತ್ತದೆ. ಕೃಷ್ಣ ಯುಕ್ತಿಯುಕ್ತವಾಗಿ ಹೇಳುತ್ತಾನೆ. ದುರ್ಯೋಧನ ಬಾಲ್ಯದಿಂದಲೂ ನಿಮ್ಮನ್ನು ದ್ವೇಷಿಸಿದವ. ನಾನೆಷ್ಟೋ ಬಾರಿ ಹೇಳಿದ್ದೇನೆ. ಅವನು ಕೇಳಲಿಲ್ಲ. ಈಗಲೂ ನಾನು ಎಲ್ಲ ಪ್ರಯತ್ನ ಮಾಡುತ್ತೇನೆ. ಅದು ಫಲಿಸೀತೆಂದು ನನಗಂತೂ ಅನಿಸುವುದಿಲ್ಲ.'

ನಕುಲ ಅಸುರಾವೇಶದಿಂದ ಕೃಷ್ಣನನ್ನು ಮಾನವನೆಂದು ಭ್ರಮಿಸಿ ಒಬ್ಬ ರಾಜನೀತಿ ಪಟುವಾದ ಮಾನವನಿಗೆ ಹೇಳುವಂತೆ ಹೇಳಿದ- 'ಕೃಷ್ಣ, ನೀನು ಈಗ ಧರ್ಮರಾಜ ಹೇಳಿದ್ದನ್ನೂ ಭೀಮ ಅರ್ಜುನರು ಹೇಳಿದ್ದನ್ನೂ ಕೇಳಿರುವಿ ನಿನ್ನ ಅಭಿಪ್ರಾಯವನ್ನೂ ಹೇಳಿರುವಿ. ಆದರೆ ಒಂದೊಂದು ಸಂದರ್ಭದಲ್ಲಿ ಮನುಷ್ಯನಿಗೆ ಒಂದೊಂದು ಅಭಿಪ್ರಾಯ ಮೂಡುತ್ತದೆ. ಮನುಷ್ಯನಾದವನು ಆಲೋಚಿಸಿ ಸಂದರ್ಭೋಚಿತವಾಗಿ ನಿರ್ಧಾರ ಕೈಗೊಳ್ಳಬೇಕು.' ದುರ್ಯೋಧನನಿಗೆ ಮೊದಲು ನಯವಾಗಿಯೆ ಹೇಳು, ಕೇಳದಿದ್ದರೆ ಬೆದರಿಕೆ ಹಾಕು. ಆಗ ಕೇಳಬಹುದು. ಅಥವಾ ನಿನ್ನ ಮಾತು ಭೀಷ್ಮಾದಿಗಳಿಗೆ ಮನವರಿಕೆಯಾಗುವುದು. ಅವರು ದುರ್ಯೋಧನನನ್ನು ದಾರಿಗೆ ತರಬಹುದು' ಎಂದ.

---

1. 'ಸಂವಾದಂ' ಹೃದಿ ಸಮೀಚೀನಂ, ಬಹಿರ್ವಾದಂ ವಿವಾದಂ। ಅಕ್ರತಾಮಿತಿ ವೈದಿಕಃ ಪ್ರಯೋಗಃ। ಅಕುರುತಾಮಿತ್ಯರ್ಥಃ। ಸಂವಾದಸ್ಯ ಮನಃಪೂರ್ವಕತ್ವಾಭಾವ ಸೂಚನಾಯ ಪ್ರಯೋಗ ವ್ಯತ್ಯಾಸಃ।- -ವಾದಿರಾಜೀಯ

ಶೌರ್ಯಪ್ರಕಾಶನಾಯೈವ ಯುದ್ಧಂ ಯೋಜಯತಾದ್ ಭವಾನ್ ।
ಇತ್ಯುಕ್ತಃ ಸಹದೇವೇನ ಯುಯುಧಾನೇನ ಚಾಚ್ಯುತಃ ॥ ೫೮ ॥

ಸಹದೇವ ತನ್ನ ಶೌರ್ಯವನ್ನು ಮೆರೆಸುವುದಕ್ಕಾಗಿ ಯುದ್ಧವನ್ನು ಬಯಸಿ ನೀನು ಯುದ್ಧ ನಡೆಯುವಂತೆಯೇ ಮಾಡು ಎಂದ. ಸಾತ್ಯಕಿಯೂ ಹಾಗೇ ಹೇಳಿದ.

ದಸ್ಯೂನಾಂ ನಿಗ್ರಹೋ ಧರ್ಮಃ ಕ್ಷತ್ರಿಯಾಣಾಂ ಯತಃ ಪರಃ ।
ಅತೋ ನ ಧಾರ್ತರಾಷ್ಟ್ರೈರ್ನಃ ಸಂಧಿಃ ಸ್ಯಾದಿತಿ ಪಾರ್ಷತೀ ॥ ೫೯ ॥
ಜಗಾದ ಕೃಷ್ಣಂ ಸೋಽಪ್ಯೇನಾಮೋಮಿತ್ಯುಕ್ತ್ವಾವಿನಿರ್ಯಯೌ ॥ ೬೦ ॥

ದ್ರೌಪದಿ ಕೃಷ್ಣನಿಗೆ ಹೇಳಿದಳು, 'ದರೋಡೆಕೋರರನ್ನು ನಿಗ್ರಹಿಸುವುದು ಕ್ಷತ್ರಿಯರಿಗೆ ಪರಮಧರ್ಮ. ಅದರಿಂದ ಕೌರವರೊಡನೆ ಸಂಧಿ ಬೇಡ' ಕೃಷ್ಣ ಅವಳಿಗೆ ಹಾಗೇ ಆಗಲಿ ಎಂದು ಹೇಳಿ ಹೊರಟುಹೋದ.

ವಿದುರನ ಆತಿಥ್ಯ

ಸಸಾತ್ಯಕಿಃ ಸ್ಯಂದನವರ್ಯಸಂಸ್ಥಿತಃ
ಪೃಥಾತನೂಜೈರಖಿಲೈಃ ಸ ಭೂಮಿಪೈಃ ।
ಅನ್ವಾಗತೋ ದೂರತರಂ ಗಿರಾ ತಾನ್
ಸಂಸ್ಥಾಪ್ಯ ವಿಪ್ರಪ್ರವರೈಃ ಕುರೂನ್ ಯಯೌ ॥ ೬೧ ॥

ಶ್ರೀಕೃಷ್ಣ ಸಾತ್ಯಕಿಯೊಡನೆ ಉತ್ತಮವಾದ ರಥವೇರಿ ಕುಳಿತ. ಪಾಂಡವರೂ ಎಲ್ಲ ರಾಜರೂ ಬಲುದೂರದವರೆಗೆ ಅವನನ್ನು ಹಿಂಬಾಲಿಸಿದರು. ಅವರನ್ನು ಮಾತಿನಿಂದ ಹಿಂದೆ ನಿಲ್ಲಿಸಿ ಬ್ರಾಹ್ಮಣರೊಂದಿಗೆ ಕೌರವರ ಬಳಿಗೆ ಹೊರಟ ಶ್ರೀಕೃಷ್ಣ.

ಕಾರ್ತಿಕಮಾಸ ರೇವತಿ ನಕ್ಷತ್ರದಲ್ಲಿ ಬೆಳಿಗ್ಗೆ ಮೈತ್ರ ಮುಹೂರ್ತದಲ್ಲಿ ಶ್ರೀಕೃಷ್ಣ ಹಸ್ತಿನಾವತಿಗೆ ಹೊರಟನೆಂದು ಮಹಾಭಾರತ ಹೇಳಿದೆ.

ಏಕೋಽಪಿ ವಿಷ್ಣುಃ ಸ ತು ಭಾರ್ಗವಾತ್ಮಾ
ವ್ಯಾಸಾತ್ಮಕಶ್ಚಾನುಗತೋ ಮುನೀಂದ್ರೈಃ ।
ಯಯೌ ತದುಕ್ತೇರ್ಹಿ ಗುಣಾನ್ ಪ್ರವೇತ್ತುಂ
ನಾನ್ಯೋ ಹಿ ಶಕ್ತಸ್ತಮೃತೇ ಯತಃ ಪ್ರಭುಮ್ ॥ ೬೨ ॥

ವಿಷ್ಣು ಒಬ್ಬನೇ ಆದರೂ ಕೃಷ್ಣರೂಪನಾದ ಅವನು ಪರಶುರಾಮರೂಪನಾಗಿಯೂ ವೇದವ್ಯಾಸರೂಪನಾಗಿಯೂ ಶ್ರೇಷ್ಠರಾದ ಮುನಿಗಳೊಂದಿಗೆ ಹೊರಟ. ಏಕೆಂದರೆ ವಿಷ್ಣುವಿನ ಮಾತಿನ ಸ್ವಾರಸ್ಯವನ್ನು ತಿಳಿಯಲು ಪ್ರಭುವಾದ ಆ ವಿಷ್ಣು ಒಬ್ಬನೆ ಹೊರತು ಇನ್ನೊಬ್ಬ ಸಮರ್ಥನಾಗಲಾರ.

ದಾರಿಯಲ್ಲಿ ನಾರದಾದಿ ಮುನಿಗಳೊಂದಿಗೆ ವೇದವ್ಯಾಸ ಪರಶುರಾಮರು ಕೃಷ್ಣನನ್ನು ಕಂಡರು (ಉದ್ಯೋ. 83-31) ಪರಶುರಾಮ ಎಲ್ಲರ ಪರವಾಗಿ ಹೇಳುತ್ತಾನೆ-

ತವ ವಾಕ್ಯಾನಿ ದಿವ್ಯಾನಿ ತಥಾ ತೇಷಾಂ ಚ ಮಾಧವ
ಶ್ರೋತುಮಿಚ್ಛಾಮ ಗೋವಿಂದ ಸತ್ಯಾನಿ ಚ ಹಿತಾನಿ ಚ ॥
(ಉದ್ಯೋ. 83.41)

'ಕೃಷ್ಣ! ನಾವೆಲ್ಲರೂ ನಿನ್ನ ದಿವ್ಯ, ಸತ್ಯ, ಹಿತಕರವಾದ ಮಾತುಗಳನ್ನು ಕೇಳಲು ಬಯಸುತ್ತೇವೆ' ಈ ಮಾತಿನಿಂದ ವೇದವ್ಯಾಸ ಪರಶುರಾಮರು ಕೃಷ್ಣನಿಗಿಂತ ಬೇರೆ ಎಂದಂತಾಯಿತು. ಇಲ್ಲದಿದ್ದರೆ ಒಬ್ಬನೇ ವಿಷ್ಣು ಮೂರು ರೂಪಗಳಿಂದ ಏಕೆ ಬರಬೇಕು? ಎಂಬ ಪ್ರಶ್ನೆಗೆ ಸಮಾಧಾನ- ಕೃಷ್ಣನ ಮಾತಿನ ಮರ್ಮ ತಿಳಿದು ಧೃತರಾಷ್ಟ್ರನಿಗೆ ಪುನಃ ವಿವರಿಸಿ ಹೇಳಲು ಪರಶುರಾಮ ವೇದವ್ಯಾಸ ರೂಪನಾದ ಅವನೇ ಸಮರ್ಥ. ಅವನು ಹೇಳಿದ ಬಳಿಕ ಕಣ್ವ ನಾರದಾದಿ ಮುನಿಗಳೂ ಹೇಳಬಲ್ಲರು. ಅದಕ್ಕಾಗಿ ಪರಶುರಾಮ ಮೊದಲಿಗೆ ಸಭೆಯಲ್ಲಿ ಮಾತನಾಡುತ್ತಾನೆ. ಬೇರೆ ಎಲ್ಲರೂ ರೋಮಾಂಚನಗೊಂಡು ಸ್ತಬ್ಧರಾಗಿ ಕುಳಿತು,

ಕಃ ಸ್ವಿದುತ್ತರಮೇತೇಷಾಂ ವಕ್ತುಮುತ್ಸಹತೇ ಪುಮಾನ್?
(ಉದ್ಯೋ96.2)

'ಯಾರು ಈ ಬಗ್ಗೆ ಮಾತನಾಡಬಲ್ಲರು?' ಎಂದು ಆಲೋಚಿಸುತ್ತಿದ್ದರು.

ಸ ವಂದ್ಯಮಾನೋಽಖಿಲರಾಷ್ಟ್ರವಾಸಿಭಿಃ
ಪ್ರಸೂನವರ್ಷೈರಭಿವರ್ಷಿತಃ ಸುರೈಃ ।
ಸಂಸ್ತೂಯಮಾನಃ ಪ್ರಣತೋಽಬ್ಜಜಾದಿಭಿ-
ರ್ಗಜಾಹ್ವಯಂ ಪ್ರಾಪ ಪರೋಽಪ್ರಮೇಯಃ ॥೬೩॥

ಅಪ್ರಮೇಯನಾದ ಸರ್ವೋತ್ತಮನಾದ ಶ್ರೀಕೃಷ್ಣ ಸಕಲ ದೇಶವಾಸಿಗಳು ವಂದಿಸುತ್ತಿದ್ದಂತೆ, ದೇವತೆಗಳು ಹೂಮಳೆಗರೆಯುತ್ತ ಚೆನ್ನಾಗಿ ಸ್ತೋತ್ರ ಮಾಡುತ್ತಿದ್ದಂತೆ, ಬ್ರಹ್ಮಾದಿಗಳು ನಮಿಸುತ್ತಿದ್ದಂತೆ ಹಸ್ತಿನಾವತಿನಗರವನ್ನು ಸೇರಿದ.

ಧೃತರಾಷ್ಟ್ರ ಭೀಷ್ಮವಿದುರರನ್ನು ಕರೆಸಿ ಕೃಷ್ಣನನ್ನು ಲಂಚದಾನದ ಉಪಾಯದಿಂದ ವಶಪಡಿಸಿಕೊಳ್ಳಲೆ ಎಂದು ಕೇಳಿದ. ವಿದುರ ಹೇಳಿದ, ಕೃಷ್ಣ ಪೂರ್ಣ ಕುಂಭ ಸ್ವಾಗತವನ್ನೂ ಪಾದಪ್ರಕ್ಷಾಲನ ಕುಶಲ ಪ್ರಶ್ನೆಗಳನ್ನೂ

ಹೊರತು ಬೇರೇನೂ ಬಯಸುವವನಲ್ಲ. ಅವನ ಮಾತಿನಂತೆ ಸಂಧಿಗೆ ಒಪ್ಪು ಎಂದು. ದುರ್ಯೋಧನನೆಂದ, 'ನಾವೇನಾದರೂ ಕೊಡಲು ಹೋದರೆ ಕೃಷ್ಣನಿಗೆ ಅದು ಲಂಚವೆಂದು ತಿಳಿದೇ ತಿಳಿಯುತ್ತದೆ. ಅವನೆಂದೂ ಪಾಂಡವ ಪಕ್ಷವನ್ನು ಬಿಡಲಾರ. ಆದರಿಂದ ಅವನನ್ನು ಸೆರೆ ಹಿಡಿಯೋಣ. ಆಗ ಪಾಂಡವರು ನಮಗೆ ದಾಸರಾಗುತ್ತಾರೆ. ನಮ್ಮ ಈ ಯೋಜನೆ ಅವನಿಗೆ ತಿಳಿಯಬಾರದು. ನಮಗೆ ಅಪಾಯವಾಗಬಾರದು. ಹೇಗೆ?' ಎಂದು. ಭೀಷ್ಮನಿಗೆ ಕೋಪ ತಡೆಯಲಾಗಲಿಲ್ಲ. ಪಾಪಿ! ಬೇಗನೆ ನಾಶವಾಗುವನೆಂದು ಹೇಳುತ್ತ ಸಭಾತ್ಯಾಗ ಮಾಡಿದ. ಇತ್ತ ಧೃತರಾಷ್ಟ್ರ ಕೃಷ್ಣನಿಗೆ ದಾರಿಯುದ್ದಕ್ಕೂ ಅಲ್ಲಲ್ಲಿ ವಿಶ್ರಾಂತಿ ಗೃಹಗಳನ್ನು ಸಕಲ ಭೋಗ ವಸ್ತುಗಳೊಂದಿಗೆ ಸಜ್ಜುಗೊಳಿಸಿಟ್ಟಿದ್ದ. ಕೃಷ್ಣ ಒಂದನ್ನೂ ನೋಡದೆ ಮುಂದೆ ನಡೆದ. ಹಸ್ತಿನಾವತಿಯ ಬಳಿಯಲ್ಲಿ ವೃಕಸ್ಥಳದಲ್ಲಿ ರಾತ್ರಿಯನ್ನು ಕಳೆದು ಬೆಳಿಗ್ಗೆ ನಗರ ಪ್ರವೇಶಿಸಿದ.

ಸ ಭೀಷ್ಮಮುಖ್ಯೈಃ ಸರಸಾಭಿಯಾತಃ
ಸಹೈವ ತೈಃ ಪ್ರಯಯೌ ರಾಜಮಾರ್ಗೇ ।
ದಿದೃಕ್ಷವಸ್ತಂ ಜಗದೇಕಸುಂದರಂ
ಗುಣಾರ್ಣವಂ ಪ್ರಾಯಯುರತ್ರ ಸರ್ವೇ ॥೬೪॥

ಭೀಷ್ಮ ಮುಂತಾದವರು ಶ್ರೀಕೃಷ್ಣನನ್ನು ಪ್ರೀತಿಯಿಂದ ಇದಿರುಗೊಂಡರು. ಶ್ರೀಕೃಷ್ಣ ಅವರೊಂದಿಗೆ ರಾಜಮಾರ್ಗದಲ್ಲಿ ನಡೆದ. ಜಗದೇಕ ಸುಂದರನಾದ ಸದ್ಗುಣ ಸಾಗರನಾದ ಆತನನ್ನು ಕಾಣಲು ಬಯಸಿ ಪ್ರಜೆಗಳೆಲ್ಲರೂ ಆ ರಾಜಮಾರ್ಗಕ್ಕೆ ಬಂದರು.

ದುರ್ಯೋಧನನೊಬ್ಬನು ಹೊರತು ಉಳಿದ ಎಲ್ಲ ಧೃತರಾಷ್ಟ್ರ ಪುತ್ರರೂ ಭೀಷ್ಮದ್ರೋಣ ಕೃಪಾದಿಗಳೂ ಎಲ್ಲ ನಾಗರಿಕರೂ ಬಂದರು. ಯಾವ ಸ್ತ್ರೀಯಾಗಲಿ ವೃದ್ಧನಾಗಲಿ ಮಗುವಾಗಲಿ ಮನೆಯೊಳಗೆ ಕುಳ್ಳಿರಲಿಲ್ಲ.

ಸಭಾಜಿತಸ್ತೈಃ ಪರಮಾದರೇಣ
ವಿವೇಶ ಗೇಹಂ ನೃಪತೇರನಂತಃ ।
ಸ ಭೀಷ್ಮಮುಖ್ಯಾನ್ ಪುರತೋ ನಿಧಾಯ
ವೈಚಿತ್ರವೀರ್ಯೇಣ ಸಮರ್ಚಿತೋಽಜಃ ॥೬೫॥
ರೌಕ್ಮೇ ನಿಷಣ್ಣಃ ಪರಮಾಸನೇ ಪ್ರಭು-
ರ್ಬಭೌ ಸ್ವಭಾಸಾ ಕಕುಭೋಽವಭಾಸಯನ್ ॥೬೬॥

ಎಲ್ಲರಿಂದಲೂ ಪರಮಾದರದಿಂದ ಆದರಿಸಲ್ಪಡುತ್ತ ಶ್ರೀಕೃಷ್ಣ ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿದ. ಧೃತರಾಷ್ಟ್ರ ಭೀಷ್ಮ ಮುಂತಾದವರನ್ನು ಮುಂದೆ ಮಾಡಿಕೊಂಡು

ಬಂದು ಕೃಷ್ಣನನ್ನು ಸತ್ಕರಿಸಿದ. ಪ್ರಭು ಶ್ರೀಕೃಷ್ಣ ತನ್ನ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತ ಬಂಗಾರದ ಉತ್ತಮ ಆಸನದಲ್ಲಿ ಕುಳಿತು ಶೋಭಿಸಿದ.

ಯಥೋಚಿತಂ ತೇಷು ವಿಧಾಯ ಕೇಶವೋ
ದೌರ್ಯೋಧನಂ ಪ್ರಾಪ್ಯ ಗೃಹಂ ಚ ಪೂಜಿತಃ ।
ಪೂಜಾಂ ತದೀಯಾಂ ಗುಣವದ್ವಿಡಿತ್ಯಸೌ
ಜಗ್ರಾಹ ನೋ ವಿದುರಂ ಚಾಽಜಗಾಮ ॥೬೭॥

· ಶ್ರೀಕೃಷ್ಣ ಭೀಷ್ಮ ಮುಂತಾದವರಲ್ಲಿ ಯಥಾಯೋಗ್ಯವಾಗಿ ಗೌರವ ಸಲ್ಲಿಸಿ ದುರ್ಯೋಧನನ ಮನೆಗೆ ಹೋಗಿ ಅಲ್ಲಿ ಅವನು ಸತ್ಕರಿಸಿದರೂ ಆತ ಗುಣವಂತರಾದ ಪಾಂಡವರ ದ್ವೇಷಿ ಎಂಬ ಕಾರಣದಿಂದ ಅವನ ಆ ಸತ್ಕಾರವನ್ನು ಸ್ವೀಕರಿಸಲಿಲ್ಲ. ಬೇಗನೆ ವಿದುರನ ಮನೆಗೇ ನಡೆದ.

ಶ್ರೀಕೃಷ್ಣ ಧೃತರಾಷ್ಟ್ರನ ಅರಮನೆಯಿಂದ ವಿದುರನ ಮನೆಗೂ ಹೋಗಿ ಸಂಜೆ ಕುಂತಿಯ ಮನೆಗೆ ಹೋಗಿ ಅವಳನ್ನು ಸಂತೈಸಿದ. ಬಳಿಕ ದುರ್ಯೋಧನನ ಮನೆಗೆ ಹೋದರೆ ಅಲ್ಲಿ ದುರ್ಯೋಧನ ಸಪರಿವಾರನಾಗಿ ಆಸನದಲ್ಲಿ ಕುಳಿತಿದ್ದವನು ಕೃಷ್ಣ ಬಂದುದನ್ನು ಕಂಡು ಎದ್ದುನಿಂತು ಆಸನ ನೀಡಿ ಸತ್ಕರಿಸಿದ. ಗದಗು ಭಾರತದಲ್ಲಿ-

ಸೆಣಸು ಸೇರದ ದೇವನಿದಿರಲಿ
ಮಣೆಯದಾತನ ಕಾಣುತಲೆ ಧಾ
ರುಣಿಯನೊತ್ತಿದ ನುಂಗುಟದ ತುದಿಯಿಂದ ನಸುನಗುತ
ಮಣಿಖಚಿತಕಾಂಚನದ ಪೀಠದ
ಗೊಣಸುಮುರಿದುದು ಮೇಲೆ ಸುರಸಂ
ದಣಿಗಳಾ ಎನೆ ಕವಿದು ಬಿದ್ದನು ಹರಿಯ ಚರಣದಲಿ॥

(ಉದ್ಯೋಗ 9-59)

ಎಂದು ಕೃಷ್ಣನು ಮಾಡಿದ ಒಂದು ಚಮತ್ಕಾರದ ವರ್ಣನೆ ಇದೆ. ಮಹಾಭಾರತದ ಯಾವುದೋ ಒಂದು ಪಾಠದಲ್ಲಿ ಇದೂ ಇರಬಹುದು. ಏಕೆಂದರೆ ವಾದಿರಾಜರ ಕೀರ್ತನೆ- 'ಎಂಥಾ ಪಾವನ ಪಾದ ಇಂತು ಜಗತಿನೊಳು ಪಂಥದೊಳಿದ್ದ ಕುರುಪತಿಯ ಉರುಳಿಸಿದ' ವ್ಯಾಸರಾಜರ ಸುಳಾದಿ - 'ಪೊಡವಿಯನು ಮೆಟ್ಟಿ ಪಾಪಿಷ್ಠನನು ಕೆಡಹಿದೆ'. ಬಳಿಕ ದುರ್ಯೋಧನ ಭೋಜನಕ್ಕೆ ಆಹ್ವಾನಿಸಿದರೆ ಕೃಷ್ಣ

ಗುಣವಂತಂ ಚ ಯೋ ದ್ವೇಷ್ಟಿ ತಮಾಹುಃ ಪುರುಷಾಧಮಂ

(ಉದ್ಯೋ 91-31)

ಗುಣವಂತರಾದ ಪಾಂಡವರ ದ್ವೇಷಿ ಪುರುಷಾಧಮನಾದ ನಿನ್ನ ಅನ್ನವನ್ನು ನಾನು ಉಣಲಾರೆ ಎನ್ನುತ್ತ ವಿದುರನ ಮನೆಗೆ ಬೇಗನೆ ಹೊರಟು ಹೋಗುತ್ತಾನೆ. ಬೇಗನೆ ಹೋಗುತ್ತಾನೆ ಎಂದರೆ, ನಡುವೆ ಭೀಷ್ಮಾದಿಗಳೆಲ್ಲರೂ ತಮ್ಮ ಮನೆಗೆ ಭೋಜನಕ್ಕೆ ಕರೆದರೂ ಒಲ್ಲೆನೆನ್ನುತ್ತ ಪ್ರೀತಿಯಿಂದ ವಿದುರನ ಮನೆಗೇ ಹೋಗುತ್ತಾನೆ. ಏಕೆಂದರೆ ಭೀಷ್ಮಾದಿಗಳೆಲ್ಲರೂ ದ್ರೌಪದಿಗೆ ಸಭೆಯಲ್ಲಿ ಅವಮಾನವಾಗುತ್ತಿದ್ದಾಗ ಸುಮ್ಮನಿದ್ದರು.

ಸ ಭೀಷ್ಮಪೂರ್ವೈರಭಿಯಾಚಿತೋಽಪಿ
ಜಗಾಮ ನೈಷಾಂ ಗೃಹಮಾದಿದೇವಃ ।
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ
ಜಗಾಮ ಗೇಹಂ ವಿದುರಸ್ಯ ಶೀಘ್ರಮ್ ॥೬೮॥

ಆದಿ ದೇವನಾದ ಶ್ರೀಕೃಷ್ಣ ಭೀಷ್ಮ ಮುಂತಾದವರಿಂದ ಪ್ರಾರ್ಥಿತನಾದರೂ ದ್ರೌಪದಿಯನ್ನು ಅವರು ಉಪೇಕ್ಷಿಸಿದರೆಂದು ಅವರ ಮನೆಗೆ ಹೋಗಲಿಲ್ಲ. ವಿದುರನ ಮನೆಗೇ ಬೇಗನೆ ನಡೆದ.

ಸ ತೇನ ಭಕ್ತ್ಯಾಭಿಗತಃ ಪ್ರಸನ್ನಃ
ಪ್ರವಿಶ್ಯ ಚಾಂತರ್ಗೃಹಮೀಶ್ವರೋಽಜಃ ।
ಭಕ್ತ್ಯಾಭಿಪೂರ್ಣೇನ ಸಸಂಭ್ರಮೇಣ
ಸಂಪೂಜಿತಃ ಸರ್ವಸಮರ್ಪಣೇನ ॥೬೯॥

ವಿದುರ ಶ್ರೀಕೃಷ್ಣನನ್ನು ಭಕ್ತಿಯಿಂದ ಇದಿರುಗೊಂಡ. ಪ್ರಸನ್ನನಾಗಿ ಮನೆಯೊಳಗೆ ಪ್ರವೇಶಿಸಿದ ಪ್ರಭುವನ್ನು ಭಕ್ತಿಪೂರ್ಣನಾಗಿ ಸಂಭ್ರಮಯುಕ್ತನಾಗಿ ಸರ್ವ ಸಮರ್ಪಣೆಯಿಂದ ಆರಾಧಿಸಿದ.

'ವಿದುರ ನಿಲಯದೊಳೊಕ್ಕುಡಿತೆ ಹಾಲಲಿ ಹಸಿವ ನೂಕಿದನು' ಎಂದು ಗದಗು ಭಾರತದಲ್ಲಿ ಮತ್ತು 'ವಿದುರನ ಆಲಯದಿ ಪಾಲುಂಡು' ಎಂದು ಹರಿಕಥಾಮೃತಸಾರದಲ್ಲಿ ಹೇಳಿದ್ದು ಅತಿಶಯೋಕ್ತಿ. ವಿದುರ ಶುಚಿರುಚಿಯಾದ ಚತುರ್ವಿಧ ಷಡ್ರಸಾನ್ನ ಪಾನೀಯಗಳನ್ನು ಸಿದ್ಧಪಡಿಸಿದ. ಕೃಷ್ಣ ವೇದಜ್ಞರಾದ ಬ್ರಾಹ್ಮಣರಿಗೆ ಅವುಗಳನ್ನು ಉಣಿಸಿ ಬಹಳ ದಾನದಕ್ಷಿಣೆಗಳನ್ನಿತ್ತು ತೃಪ್ತಿಪಡಿಸಿದ. ಬಳಿಕ ವಿದುರ ಭಕ್ತಿಯಿಂದ ಕೃಷ್ಣನಿಗೆ ಅನ್ನ ಬಡಿಸಿದ. 'ದುರ್ಯೋಧನನಿಗೆ ಬುದ್ಧಿ ಹೇಳಿ ಏನೂ ಫಲವಿಲ್ಲ, ನೀನೊಬ್ಬನೆ ಆ ದುಷ್ಟರ ಮಧ್ಯಕ್ಕೆ ಹೋಗುವುದು ಅಪಾಯಕರವೂ ಹೌದು ನೀನು ಸರ್ವಶಕ್ತನಾದರೂ ಪ್ರೀತಿಯಿಂದ ಈ ರೀತಿ ನುಡಿಯುತ್ತಿದ್ದೇನೆ' ಎಂದ. ಕೃಷ್ಣ 'ನನಗೇನೂ ಭಯವಿಲ್ಲ. ಕುಲ ಕ್ಷಯವಾಗುವುದನ್ನು ತಡೆಯಲು ಯತ್ನಿಸಲಿಲ್ಲ ಎಂಬ

ಅಪವಾದ ಬರಬಾರದೆಂದು ಯತ್ನಿಸುತ್ತಿದ್ದೇನಷ್ಟೆ" ಎಂದ. ಸುಖ ಶಯ್ಯೆಯಲ್ಲಿ ಮಲಗಿದ. ಆದರೆ ನಿದ್ದೆ ಮಾಡದೆ ಬೆಳಗಿನವರೆಗೂ ವಿದುರನೊಡನೆ ಮಧುರ ಸಂಭಾಷಣೆ ನಡೆಸಿ ರಾತ್ರಿ ಏಕೆ ಕಳೆಯಿತೆಂದು ಕೊಂಡನಂತೆ!

ಅಕಾಮಸ್ಯೈವ ಕೃಷ್ಣಸ್ಯ ಸಾ ವ್ಯತೀಯಾಯ ಶರ್ವರೀ।
(ಉದ್ಯೋಗ. 94-3)

ವಿಶ್ವರೂಪ ದರ್ಶನ

ಪರೇ ದಿನೇಽಪೌ ಧೃತರಾಷ್ಟ್ರಸೂನುನಾ
ಸಮಾನೀತಃ ಸಂಸದಿ ಕೌರವಾಣಾಮ್ ।
ವಿವೇಶ ದಿವ್ಯೇ ಮಣಿಕಾಂಚನಾಸನೇ
ಸಾರ್ದ್ಧಂ ಮುನೀಂದ್ರೈಃ ಪರಮಾರ್ಥವೇದಿಭಿಃ ॥೭೦॥

ಮರುದಿನ ಶ್ರೀಕೃಷ್ಣ ಕೌರವರ ಸಭೆಯಲ್ಲಿ ದುರ್ಯೋಧನನಿಂದ ಕರೆಸಲ್ಪಟ್ಟ. ಮಹಾತತ್ವಜ್ಞರಾದ ಮುನೀಶ್ವರರೊಂದಿಗೆ ದಿವ್ಯ ರತ್ನಸುವರ್ಣಮಯ ಆಸನದಲ್ಲಿ ಕುಳಿತ.

ಮರುದಿನ ವಿದುರನ ಮನೆಗೆ ಶಕುನಿ ದುರ್ಯೋಧನರು ಬಂದು ಕೃಷ್ಣನನ್ನು ಓಲಗ ಶಾಲೆಗೆ ಆಮಂತ್ರಿಸಿದರು. ಹೀಗೆ ಕರೆಸಲ್ಪಟ್ಟ ಕೃಷ್ಣ ರಥವನ್ನೇರಿ ಮಹಾದ್ವಾರಕ್ಕೆ ಬಂದಿಳಿದು ವಿದುರ ಸಾತ್ಯಕಿಗಳ ಕೈ ಹಿಡಿದು ಓಲಗಕ್ಕೆ ನಡೆದ. ಮುಂದಿನಿಂದ ಕರ್ಣ ದುರ್ಯೋಧನರು ಹಿಂದೆ ಕೃತವರ್ಮ ಮುಂತಾದ ಯಾದವರು. ಕೃಷ್ಣ ಒಳಗೆ ಪ್ರವೇಶಿಸುತ್ತಿದ್ದಂತೆ ಧೃತರಾಷ್ಟ್ರ ಭೀಷ್ಮ ದ್ರೋಣಾದಿಗಳೂ ಎಲ್ಲ ರಾಜರೂ ಎದ್ದು ನಿಂತರು. ಅಷ್ಟರಲ್ಲಿ ನಾರದಾದಿ ಮುನಿಗಳು ಬಂದರು. ಕೃಷ್ಣ ಭೀಷ್ಮನ ಮೂಲಕ ಅವರನ್ನು ಕುಳ್ಳಿರಿಸಿದ, ಬಳಿಕ ಎಲ್ಲರೂ ಕುಳಿತರು. ಕೃಷ್ಣನ ಸಮೀಪದಲ್ಲಿಯೆ ಕರ್ಣ ದುರ್ಯೋಧನರು ಏಕಾಸನದಲ್ಲಿ ಕುಳಿತರು. ಕೃಷ್ಣ ದಿವ್ಯ ರತ್ನಮಯ ಆಸನದಲ್ಲಿ ಕುಳಿತ. ಅವನ ಆಸನವನ್ನು ಸ್ಪರ್ಶಿಸುತ್ತ ಬಳಿಯಲ್ಲಿ ವಿದುರನೂ ಕೃಷ್ಣಾಜಿನ ಹಾಸಿದ ಆಸನದಲಿ ಕುಳಿತ.

ಸಂಪೂಜಿತೋ ಭೀಷ್ಮಮುಖೈಃ ಸಮಸ್ತೈ
ರರಾಜ ರಾಜೀವಸಮಾನನೇತ್ರಃ ।
ಯಥೋಚಿತಾಸ್ತತ್ರ ವಿಧಾಯ ವಾರ್ತಾ
ಜಗಾದ ಕಾಲೇ ಕಲಿಕಲ್ಮಷಾಪಹಃ ॥೭೧॥

ಕಲಿ ಕಲ್ಮಷವನ್ನು ಕಳೆವ ಕಮಲಲೋಚನನಾದ ಶ್ರೀಕೃಷ್ಣ ಭೀಷ್ಮಾದಿಗಳೆಲ್ಲರಿಂದಲೂ ಸತ್ಕೃತನಾಗಿ ಸಂದರ್ಭೋಚಿತವಾದ ಮಾತುಗಳನ್ನಾಡಿ ಯೋಗ್ಯಕಾಲದಲ್ಲಿ ಹೀಗೆ ನುಡಿದ.

ವೈಚಿತ್ರವೀರ್ಯ ಸ್ವಕುಲಸ್ಯ ವೃದ್ಧ್ಯೈ
ಪ್ರದೇಹಿ ರಾಜ್ಯಂ ತವ ಸತ್ಸುತಾಯ ।
ಯಶಶ್ಚ ಧರ್ಮಂ ಪರಮಂ ಪ್ರಸಾದಂ
ಮಮ ತ್ವಮಾಪ್ನೋಷಿ ತದೈವ ರಾಜನ್ ॥೭೨॥

'ಧೃತರಾಷ್ಟ್ರ! ನಿನ್ನ ಕುಲದ ಏಳಿಗೆಗಾಗಿ ನಿನ್ನ ಸುಪುತ್ರನಿಗೆ ರಾಜ್ಯನೀಡು. ಆಗಲೆ ನೀನು ಕೀರ್ತಿಯನ್ನೂ ಪುಣ್ಯವನ್ನೂ ನನ್ನ ಪರಮಾನುಗ್ರಹವನ್ನೂ ಪಡೆಯುವಿ.'

ಅತೋಽನ್ಯಥಾ ಯಶಸೋ ಧರ್ಮತಶ್ಚ
ಹೀನಃ ಪ್ರತೀಪತ್ವಮುಪೈಷಿ ಮೇಽತಃ ।
ಇತೀರಿತಃ ಪ್ರಾಹ ಮಮಾತಿವರ್ತಿನಂ
ಸುತಂ ಸ್ವಯಂ ಮೇ ಪ್ರತಿಬೋಧಯೇತಿ ॥೭೩॥

'ಹಾಗೆ ಮಾಡದಿದ್ದರೆ ಕೀರ್ತಿಯನ್ನೂ ಪುಣ್ಯವನ್ನೂ ಕಳೆದುಕೊಂಡು ನನಗೆ ವಿರೋದಿ ಎನಿಸುವೆ' ಕೃಷ್ಣ ಹೀಗೆ ಹೇಳಿದಾಗ ಧೃತರಾಷ್ಟ್ರನೆಂದ, 'ನನ್ನ ಮಗ ನನ್ನ ಮಾತನ್ನು ಮೀರುತ್ತಾನೆ. ಸ್ವಯಂ ನೀನೆ ತಿಳಿಯ ಹೇಳು.'

ದುರ್ಯೋಧನನಿಗೆ ಗಾಂಧಾರಿ ಧೃತರಾಷ್ಟ್ರರಿಬ್ಬರೂ ಹೇಳುತ್ತಾರೆ.

'ಧೃತರಾಷ್ಟ್ರ ಕುರುಡನಾದ್ದರಿಂದ ರಾಜ್ಯಾಧಿಕಾರ ಹೊಂದಲಿಲ್ಲ. ಪಾಂಡುವೆ ರಾಜನಾದ. ಅವನ ಬಳಿಕ ಅವನ ಮಕ್ಕಳಾದ ಪಾಂಡವರಿಗೇ ಅಧಿಕಾರ. ಅದರಿಂದ ದುರ್ಯೋಧನನಿಗೆ ಅಧಿಕಾರ ಬರುವುದಿಲ್ಲ. ಪಾಂಡವರೆಲ್ಲರೂ ದೇವಾಂಶ ಸಂಭೂತರು. ಶ್ರೀಕೃಷ್ಣ ನಾರಾಯಣ. ದೇವತೆಗಳ ಸಹಾಯವೂ ಪಾಂಡವರಿಗೇ ಇದೆ' ದುರ್ಯೋಧನ ಹೇಳುತ್ತಾನೆ. 'ನನಗೂ ಭೀಷ್ಮ, ದ್ರೋಣಾದಿ ಹಿರಿಯರ ಸಹಾಯವಿದೆ, ನನ್ನಲ್ಲಿ ಮಂತ್ರಶಕ್ತಿ ಇದೆ. ಅಗ್ನಿಸ್ತಂಭ ಜಲಸ್ತಂಭಗಳನ್ನು ಮಾಡಬಲ್ಲೆ. ನನ್ನ ರಾಷ್ಟ್ರದಲ್ಲಿ ಚೆನ್ನಾಗಿ ಮಳೆ ಬೆಳೆಯಾಗುವಂತೆ ನಾನು ಮಾಡಬಲ್ಲೆ. ದೇವತೆಗಳು ನನ್ನನ್ನು ವಿರೋಧಿಸಲಾರರು. ಪರಮಾಕ್ರಮದಲ್ಲಿಯೂ ನಾವೇ ಮೇಲು. ನಮಗೆ ಹೆದರಿ ಧರ್ಮರಾಜ ದೈನ್ಯದಿಂದ ಐದು ಊರುಗಳನ್ನು ಬೇಡುತ್ತಿದ್ದಾನೆ.'

ಸ ವಾಸುದೇವೇನ ವಿಬೋಧಿತೋಽಪಿ
ಪಾಪಾಭಿಸಂಧಿರ್ಧೃತರಾಷ್ಟ್ರಸೂನುಃ ।
ಉತ್ಥಾಯ ತಸ್ಮಾದನುಜೈರಮಾತ್ಯೈ-
ರ್ನಿಯಂತುಮೀಶಂ ಕುಮತಿರ್ವ್ಯಧಾನ್ಮತಿಮ್ ॥೭೪॥

ಶ್ರೀಕೃಷ್ಣ ಎಷ್ಟು ಬೋಧಿಸಿದರೂ ಪಾಪಸಂಕಲ್ಪವುಳ್ಳ ದುರ್ಬುದ್ಧಿಯವನಾದ

ದುರ್ಯೋಧನ ತಮ್ಮಂದಿರೊಡನೆ ಮತ್ತು ಮಂತ್ರಿಗಳೊಡನೆ ಅಲ್ಲಿಂದ ಎದ್ದು ಹೋಗಿ ಕೃಷ್ಣನನ್ನು ಬಂಧಿಸಲು ಸಂಕಲ್ಪಿಸಿದ.

'ನಾನೇನು ತಪ್ಪು ಮಾಡಿದ್ದೇನೆ? ಪಾಂಡವರು ತಾವೇ ಜೂಜಿನಲ್ಲಿ ನನಗೆ ಸೋತ ರಾಜ್ಯವನ್ನು ನಾನೇಕೆ ಹಿಂದಿರುಗಿಸಬೇಕು? ಭೀಷ್ಮಾದಿಗಳ ಸಹಾಯವಿರುವಾಗ ನನಗೇನೂ ಭಯವಿಲ್ಲ. ಸೂಜಿಮೊನೆ ಊರುವಷ್ಟೂ ನೆಲವನ್ನು ಬಿಟ್ಟುಕೊಡಲಾರೆ' ಎಂದ ದುರ್ಯೋಧನ. ಶ್ರೀಕೃಷ್ಣ 'ಜೂಜಾಡಿ ರಾಜ್ಯವನ್ನು ಅಪಹರಿಸಿದುದೇ ತಪ್ಪು' ಎನ್ನುತ್ತ ಬಾಲ್ಯದಿಂದಲೂ ದುರ್ಯೋಧನ ಮಾಡಿದ ತಪ್ಪುಗಳನ್ನು ಹೇಳತೊಡಗಿದ. ದುಃಶಾಸನ 'ಇವರೆಲ್ಲ ಸೇರಿ ನಮ್ಮನ್ನು ಸೆರೆಹಿಡಿದು ಪಾಂಡವರಿಗೆ ಒಪ್ಪಿಸುವರಂತೆ!' ಎಂದ. ಒಡನೆ ದುರ್ಯೋಧನ ಕರ್ಣ ದುಃಶಾಸನರೊಂದಿಗೆ ಸಭಾತ್ಯಾಗ ಮಾಡಿದ. ಶ್ರೀಕೃಷ್ಣ ಭೀಷ್ಮಾದಿಗಳಿಗೆ ದುರ್ಯೋಧನಾದಿಗಳನ್ನು ಸೆರೆಹಿಡಿದು ಪಾಂಡವರಿಗೆ ಒಪ್ಪಿಸಲು ಸಲಹೆ ಮಾಡಿದ. ಧೃತರಾಷ್ಟ್ರ ಭೀತನಾಗಿ ದುರ್ಯೋಧನನಿಗೂ ಗಾಂಧಾರಿಗೂ ಹೇಳಿ ಕಳಿಸಿದ. ಗಾಂಧಾರಿ ಬಂದು ದುರ್ಯೋಧನನಿಗೆ ಈ ಭೀಷ್ಮಾದಿಗಳನ್ನು ನಂಬಿ ಕೆಡಬೇಡ. ಅವರು ನಿನ್ನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದವರು ಎಂದು ಮುಂತಾಗಿ ಹೇಳಿದರೂ ಕೇಳದೆ ದುರ್ಯೋಧನ ತಿರುಗಿ ಸಭಾತ್ಯಾಗ ಮಾಡಿ 'ಕೃಷ್ಣ ನಮ್ಮನ್ನು ಸೆರೆಹಿಡಿಯುವ ಮುನ್ನ ನಾವೇ ಅವನನ್ನು ಸೆರೆಹಿಡಿಯಬೇಕೆಂ' ದು ಮಂತ್ರಾಲೋಚನೆ ಮಾಡಿದ.

ಯೇಯೇ ತದಾ ಕೇಶವಸಂಯಮಾಯ
ನ್ಯಮಂತ್ರಯಂಸ್ತೇ ವಿಬುಧಪ್ರತೀಪಾಃ ।
ಅತೋ ವಿಕರ್ಣಪ್ರಮುಖಾ ಅಪಿ ಸ್ಮ
ವಧ್ಯತ್ವಮಾಯನ್ನಶುಭಾಂ ಗತಿಂ ಚ ॥೭೫॥

ಯಾರು ಯಾರು ಕೃಷ್ಣನ ಬಂಧನ ಮಾಡಬೇಕೆಂದು ಆಲೋಚಿಸಿದರೋ ಅವರೆಲ್ಲರೂ ಅಸುರರು. ಅದರಿಂದ ವಿಕರ್ಣ ಮುಂತಾದವರೂ ವಧಾರ್ಹರೆನಿಸಿದರು. ದುರ್ಗತಿಗೆ ಈಡಾದರು.

ವಿಕರ್ಣನ ಹೆಸರನ್ನು ಉಲ್ಲೇಖಿಸಿದ್ದು, ಅವನು ಹಿಂದೆ ಸಭೆಯಲ್ಲಿ 'ದ್ರೌಪದಿಗೆ ಅಪಮಾನ ಮಾಡುವುದು ಅಧರ್ಮ' ಎಂದುದು ಸಾತ್ವಿಕ ಬುದ್ಧಿಯಿಂದಲ್ಲ, ಅದು ದಂಭಾಚಾರ ಎಂದು ತಿಳಿಸುವುದಕ್ಕಾಗಿ. ಮಹಾಭಾರತದಲ್ಲಿ ದುರ್ಯೋಧನ ಕರ್ಣ ಶಕುನಿ ದುಃಶಾಸನರು ನಾಲ್ವರು

ಮಂತ್ರಾಲೋಚನಮಾಡಿದರೆಂದಿದೆ(ಉದ್ಯೋಗ 130. 7) ಆದರೆ ವಿದುರ ಧೃತರಾಷ್ಟ್ರನಿಗೆ-

ರಾಜನ್ ಪರೀತಕಾಲಾಸ್ತೇ ಪುತ್ರಾಃ ಸರ್ವೇ ಪರಂತಪ।
ಅಶಕ್ಯಮಯಶಸ್ಯಂ ಚ ಕರ್ತುಂ ಕರ್ಮ ಸಮುದ್ಯತಾಃ।
(ಉದ್ಯೋಗ 130.22)

'ಧೃತರಾಷ್ಟ್ರ! ನಿನ್ನ ಮಕ್ಕಳೆಲ್ಲರೂ ಕೃಷ್ಣನನ್ನು ಸೆರೆ ಹಿಡಿಯಲು ಹೊರಟಿದ್ದಾರೆ. ಅವರಿಗೆ ಇದು ವಿನಾಶಕಾಲ' ಎಂದು ಎಚ್ಚರಿಸುತ್ತಾನೆ. ಅದರಿಂದ ವಿಕರ್ಣನೂ ಕೃಷ್ಣಬಂಧನಕಾರ್ಯದಲ್ಲಿ ಭಾಗಿಯಾಗಿದ್ದಾನೆ.

ಕರ್ಣಃ ಸುರಾಂಶೋಽಪಿ ಸುಯೋಧನಾರ್ಥೇ
ನ್ಯಮಂತ್ರಯದ್ ಭಾವತೋ ನೈವ ದುಷ್ಟಃ।
ಅತೋ ಗತಿಶ್ಚಾಸ್ಯ ಸುಶೋಭನಾಽಭೂದ್
ಯೇಽತ್ರಾನುಕೂಲಾಃ ಪರಮಸ್ಯ ತೇ ಶುಭಾಃ ॥೭೬॥

ಕರ್ಣ ದೇವಾಂಶನಾದರೂ ಅಸುರಾವೇಶದಿಂದ ದುರ್ಯೋಧನನ ಸಂತೋಷಕ್ಕಾಗಿಯೇ ಮಂತ್ರಾಲೋಚನೆಯಲ್ಲಿ ಸೇರಿದ್ದ ಹೊರತು ಹೃದಯದಲ್ಲಿ ದುಷ್ಟನಲ್ಲ. ಅದರಿಂದ ಅವನಿಗೆ ಒಳ್ಳೆಯ ಗತಿಯೆ ಆಯಿತು. ಈ ಸಮಯದಲ್ಲಿ ಯಾರು ಕೃಷ್ಣನಿಗೆ ಅನುಕೂಲರಾಗಿದ್ದರೋ ಅವರೆಲ್ಲರೂ ಸಜ್ಜನರು.

ದುರ್ಯೋಧನಾದಿಗಳು ಕೃಷ್ಣನನ್ನು ದ್ವೇಷದಿಂದ ಕಟ್ಟಲು ಹೋದರು. ಕರ್ಣನಿಗೆ ದ್ವೇಷವಿರಲಿಲ್ಲ. ಅಸುರಾವೇಶದಿಂದ ದುರ್ಯೋಧನನನ್ನು ಮೆಚ್ಚಿಸುವ ಭರದಲ್ಲಿ ಕೃಷ್ಣನ ಬಂಧನಕ್ಕೆ ಸಂಮತಿ ನೀಡಿದನಷ್ಟೆ, ಅದರಿಂದ ಅವನಿಗೆ ದುರ್ಗತಿಯಾಗಲಿಲ್ಲ. ಕೃಷ್ಣನ ಭೂಭಾರಹರಣ ಕಾರ್ಯದಲ್ಲಿ ಸಹಭಾಗಿಯಾದ್ದರಿಂದ ಸದ್ಗತಿಯೆ ಆಯಿತು. ಅವನ ಪ್ರೋತ್ಸಾಹವಿಲ್ಲದಿರುತ್ತಿದ್ದರೆ ದುರ್ಯೋಧನ ಯುದ್ಧಕ್ಕೆ ಇಳಿಯುವ ಸಾಹಸವನ್ನೇ ಮಾಡುತಿರಲಿಲ್ಲ.

ಮುಂದೆ ಕರ್ಣ ಕೃಪನಿಗೆ ಹೇಳುವ ಮಾತುಗಳಿಂದ ಅವನ ಸಾತ್ವಿಕತೆ ವ್ಯಕ್ತವಾಗುತ್ತದೆ- ದುರ್ಯೋಧನನನ್ನು ಮೆಚ್ಚಿಸುವ ಸಲುವಾಗಿ ದ್ಯೂತ ಸಭೆಯಲ್ಲಿ ಪಾಂಡವರಿಗೆ ಕೆಟ್ಟಮಾತುಗಳನ್ನಾಡಿಬಿಟ್ಟೆ, ಅದಕ್ಕೆ ನಾನೀಗ ಪರಿತಪಿಸುತ್ತಿದ್ದೇನೆ. (ಉದ್ಯೋಗ 141.45) ಈ ಯುದ್ಧಯಜ್ಞದಲ್ಲಿ ಭೀಮ ದುಃಶಾಸನನ ರಕ್ತಪಾನಮಾಡುವಾಗಸೋಮಾಹುತಿಯಾಗುವುದು. ದುರ್ಯೋಧನನನ್ನು ಕೆಡವಿದಾಗ ಯಜ್ಞಪೂರ್ತಿಯಾಗುವುದು

(ಉದ್ಯೋಗ 141-47, 49) ಭೀಮ ಆ ಪ್ರಸಂಗದಲ್ಲಿ ಹೇಳುವ ಮಾತೂ ಇದೇ.

ಋಷಿಭಿರ್ಜಾಮದಗ್ನ್ಯೇನ ವ್ಯಾಸೇನಾಪ್ಯಮಿತೌಜಸಾ ।
ವಾಸುದೇವಾತ್ಮಕೇನೈವಂ ತ್ರಿರೂಪೇಣೈವ ವಿಷ್ಣುನಾ ॥ ೭೭ ॥
ಮಾತಾಪಿತೃಭ್ಯಾಂ ಭೀಷ್ಮಾದ್ಯೈರನುಶಿಷ್ಟೋಽಪಿ ದುರ್ಮತಿಃ ।
ದುರ್ಯೋಧನೋ ಮಂತ್ರಯತೇ ಮುಕುಂದಸ್ಯಾನುಬಂಧನಮ್ ॥ ೭೮ ॥

ಋಷಿಗಳು, ಪರಶುರಾಮ ವೇದವ್ಯಾಸ ಕೃಷ್ಣ ಎಂಬ ಮೂರು ರೂಪಗಳಿಂದಿದ್ದ ವಿಷ್ಣು ತಾಯಿ ತಂದೆಗಳು ಭೀಷ್ಮ ಮುಂತಾದವರು ಎಲ್ಲರೂ ಉಪದೇಶಿಸಿದರೂ ದುರ್ಬುದ್ಧಿಯವನಾದ ದುರ್ಯೋಧನ ಭವಬಂಧಮೋಚಕನಾದ ಕೃಷ್ಣನ ಬಂಧನಕ್ಕೆ ಮಂತ್ರಾಲೋಚನ ಮಾಡಿದ.

ಪರಶುರಾಮ ದಂಭೋದ್ಭವನೆಂಬ ರಾಜನ ಕಥೆ ಹೇಳಿದ. ಆ ರಾಜ ತನಗೆ ಯುದ್ಧದಲ್ಲಿ ಯಾರೂ ಸಮರಿಲ್ಲವೆಂದು ದರ್ಪದಿಂದ ನರನಾರಾಯಣರಲ್ಲಿ ಯುದ್ಧಮಾಡಿ ಸೋತು ಶರಣಾದ. ಆ ನರನಾರಾಯಣರೇ ಅರ್ಜುನ ಕೃಷ್ಣರು ಎಂದ.

ಕಣ್ವಮುನಿ ಇಂದ್ರ, ಉಪೇಂದ್ರರ ಕಥೆ ಹೇಳಿದ. 'ಮಾತಲಿ ತನ್ನ ಅಳಿಯನಾದ ಸುಮುಖನೆಂಬ ನಾಗನಿಗೆ ಇಂದ್ರನಿಂದ ಚಿರಂಜೀವಿತ್ವವರ ಪಡೆದಾಗ ಆಗತಾನೆ ಸುಮುಖನ ತಂದೆಯನ್ನು ತಿಂದು ಒಂದು ತಿಂಗಳ ಬಳಿಕ ಸುಮುಖನನ್ನೂ ತಿನ್ನುವೆನೆಂದಿದ್ದ ಗರುಡನಿಗೆ ಕೋಪ ಬಂದಿತು. ಇಂದ್ರ, ಉಪೇಂದ್ರರೊಡನೆ ಯುದ್ಧಕ್ಕೆ ನಿಂತ. ಉಪೇಂದ್ರ, ಗರುಡನ ಹೆಗಲ ಮೇಲೆ ತನ್ನ ಬಲಗೈ ಇಟ್ಟ, ಗರುಡನಿಗೆ ಅದರ ಭಾರವನ್ನು ತಾಳಲಾಗಲಿಲ್ಲ. ಸೋತು ಶರಣಾದ. ಉಪೇಂದ್ರ, ಪಾದಾಂಗುಷ್ಟದಿಂದ ಸುಮುಖನನ್ನು ಗರುಡನ ಎದೆಯ ಮೇಲೆ ಎಸೆದಾಗ ಗರುಡ ನಾಗಾಭರಣನಾದ. ಆ ಇಂದ್ರ, ಉಪೇಂದ್ರರೇ ಈ ಅರ್ಜುನ ಕೃಷ್ಣರು. ಅವರನ್ನು ವಿರೋಧಿಸಲು ಯಾರೂ ಸಮರ್ಥರಲ್ಲ' ಎಂದು ಮುನಿ ಹೇಳಿದಾಗ ದುರ್ಯೋಧನ ತೊಡೆ ತಟ್ಟಿಕೊಂಡ. ತೊಡೆಯಲ್ಲಿಯೆ ನಿನಗೆ ಮರಣ ಎಂದು ಮುನಿ ಶಾಪಕೊಟ್ಟ. ಹೀಗೆ ಮುನಿಗಳ ಮಾತನ್ನೂ ಕೇಳಲಿಲ್ಲ. ಧೃತರಾಷ್ಟ್ರ ಭೀಷ್ಮ ಮುಂತಾದವರೂ ಭೀಮನ ಪರಾಕ್ರಮವನ್ನು ಬಣ್ಣಿಸಿದರು. ಆದರೂ ದುರ್ಬುದ್ಧಿಯಿಂದ ಕೃಷ್ಣನನ್ನು ಬಂಧಿಸಿ ಆ ಮೂಲಕ ಭೀಮಾರ್ಜುನರನ್ನು ಮಣಿಸುವ ಆಲೋಚನೆಯನ್ನೇ ಮಾಡಿದ ದುರ್ಯೋಧನ. ಭವಬಂಧನವೆ ಕೃಷ್ಣನ ಸ್ಮರಣ ಮಾತ್ರದಿಂದ ಕಳಚಿಹೋಗುವಾಗ ಆ ಕೃಷ್ಣನನ್ನು ಹಗ್ಗದಿಂದ ಕಟ್ಟಲು

ಹೋಗುತ್ತಿದ್ದಾನೆ, ಎಂಥ ಮೂರ್ಖ! ತನಗೇ ತಮಸ್ಸಿನಲ್ಲಿ ಬಂಧನ ತಂದುಕೊಳ್ಳುತ್ತಿದ್ದಾನೆ.[1]

ಸಾತ್ಯಕಿಃ ಕೃತವರ್ಮಾ ಚ ತಚ್ಛ್ರುತ್ವಾತುರಂಜಸಾ।
ಸಂಸ್ಥಾಪ್ಯ ಕೃತವರ್ಮಾಣಂ ರಹಃ ಸಾತ್ಯಕಿರತ್ರ ಚ ।
ಅಭ್ಯೇತ್ಯ ಕೇಶವಂ ಪ್ರಾಹ ದುರ್ಯೋಧನವಿನಿಶ್ಚಯಮ್ ॥೭೯॥

ಸಾತ್ಯಕಿ ಕೃತವರ್ಮರು ಈ ಮಂತ್ರಾಲೋಚನೆಯ ಮಾತುಗಳನ್ನು ಕೇಳಿಸಿಕೊಂಡರು. ಸಾತ್ಯಕಿ ಕೃತವರ್ಮನನ್ನು ಸಭಾದ್ವಾರದಲ್ಲಿ ನಿಲ್ಲಿಸಿ ಕೃಷ್ಣನ ಬಳಿಗೆ ಬಂದು ರಹಸ್ಯದಲ್ಲಿ ದುರ್ಯೋಧನನ ನಿರ್ಧಾರವನ್ನು ಹೇಳಿದ.

ಜಾನನ್ನಪ್ಯಖಿಲಂ ಕೃಷ್ಣಸ್ತಚ್ಛ್ರುತ್ವಾ ಸಾತ್ಯಕೇರ್ಮುಖಾತ್ ।
ವೈಚಿತ್ರವೀರ್ಯಮವದತ್ ಪಶ್ಯ ಮಾಮಿತಿ ಸರ್ವಗಮ್ ॥೮೦॥

ಕೃಷ್ಣ ಎಲ್ಲವನ್ನೂ ತಿಳಿದವನೇ ಆದರೂ ಸಾತ್ಯಕಿಯ ಮುಖದಿಂದ ಕೇಳಿದ ಬಳಿಕ ಧೃತರಾಷ್ಟ್ರನಿಗೆ ಹೇಳಿದ. "ಸರ್ವವ್ಯಾಪ್ತನಾದ ನನ್ನನ್ನು ನೋಡು' ಎಂದು.

ಹುಟ್ಟು ಕುರುಡನಾದ ಧೃತರಾಷ್ಟ್ರನಿಗೆ 'ನೋಡು' ಎಂದುದರಿಂದ ದಿವ್ಯದೃಷ್ಟಿ ಕೊಟ್ಟು 'ನೋಡು' ಎಂದನೆಂದು ತಿಳಿಯುತ್ತದೆ.

ಅಥ ತೇನಾಽಹುತೇ ಪುತ್ರೇ ಸಾಮಾತ್ಯೇ ಪುರುಷೋತ್ತಮಃ ।
ಸ್ವರೂಪಂ ದರ್ಶಯಾಮಾಸ ಸರ್ವಗಂ ಪೂರ್ಣಷಡ್ಗುಣಮ್ ॥೮೧॥

ಬಳಿಕ ಧೃತರಾಷ್ಟ್ರ ದುರ್ಯೋಧನನನ್ನೂ ಅವನ ಮಂತ್ರಿಗಳನ್ನು ಕರೆಸಿದಾಗ ಶ್ರೀಕೃಷ್ಣ ಸರ್ವವ್ಯಾಪ್ತವಾದ ತನ್ನ ಷಡ್ಗುಣಪೂರ್ಣ ರೂಪವನ್ನು ತೋರಿದ.

ತತ್ ಕಾಲಸೂರ್ಯಾಮಿತದೀಪ್ತಿ ಸರ್ವ-
ಜಗದ್ಭರಂ ಶಾಶ್ವತಮಪ್ರಮೇಯಮ್ ।
ದೃಷ್ಟ್ವೈವ ಚಕ್ಷೂಂಷಿ ಸುಯೋಧನಾದ್ಯಾ
ನ್ಯಮೀಲಯನ್ ದೀಧಿತಿವಾರಿತಾನಿ ॥೮೨॥

ಪ್ರಳಯಕಾಲದ ಸೂರ್ಯನಂಥ ಅಮಿತಪ್ರಕಾಶವುಳ್ಳ ಸಕಲ ಲೋಕಧಾರಕ ಶಾಶ್ವತ ಅಪ್ರಮೇಯವಾದ ಆ ವಿಶ್ವರೂಪವನ್ನು ಕಂಡೊಡನೆ ದುರ್ಯೋಧನ ಮುಂತಾದವರು ಕಣ್ಣುಮುಚ್ಚಿಕೊಂಡರು. ಏಕೆಂದರೆ ಆ ಬೆಳಕು ಕಣ್ಣುಕೋರೈಸುತ್ತಿತ್ತು.

---

1. ಮುಕುಂದಸ್ಯಾನುಬಂಧನಮಿತ್ಯತ್ರ ಭವ ಬಂಧನ ಮೋಚಕಸ್ಯ ಬಂಧನಮಸಾಧ್ಯಮಿತಿ ಸೂಚಯಿತುಂ ಮುಕುಂದ ಪದಂ। ಅನು ಈದೃಶಬುದ್ಧಿಕರಣಾನಂತರಂ ಬಂಧನಂ ಅಂಧೇ ತಮಸಿ ಸ್ವಸ್ಯಾಪಿ ಶೃಂಖಲಾದಿಭಿರ್ಬಂಧನಂ ಯಸ್ಮಾತ್ ತದನುಬಂಧನಂ। ತಮೋಗತೇರನುಕೂಲಂ ಬಂಧನಂ ವಾ।
-ವಾದಿರಾಜೀಯ

ನಾನೊಬ್ಬನೆ ಅಸಹಾಯಕನೆಂದು ತಿಳಿದು ಕಟ್ಟಲು ಬಂದೆಯ? ನನ್ನೊಳಗೇ ಎಲ್ಲರೂ ಇದ್ದಾರೆ ನೋಡೆಂದು ನಗುತ್ತ ಶ್ರೀಕೃಷ್ಣ ವಿಶ್ವರೂಪ ತೋರಿದ.

ಅವನ ಶರೀರದಲ್ಲಿ ಅಂಗುಷ್ಠ ಪ್ರಮಾಣದ ತೇಜೋಮಯ ಶರೀರದ ದೇವತೆಗಳು ಯಕ್ಷ ಗಂಧರ್ವಾದಿಗಳು ಅಂಗಾಂಗಗಳಲ್ಲಿ ಕಂಡುಬಂದರು. ಬಲಭುಜದಲ್ಲಿ ಧನುರ್ಧಾರಿ ಅರ್ಜುನ. ಎಡಬುಜದಲ್ಲಿ ಬಲರಾಮ ಹಿಂಭಾಗದಲ್ಲಿ ಭೀಮ ಧರ್ಮರಾಜ ನಕುಲ ಸಹದೇವರು ಮುಂಭಾಗದಲ್ಲಿ ಪ್ರದ್ಯುಮ್ನ ಮುಂತಾದ ಯಾದವರು ಅಸಂಖ್ಯ ಬಾಹುಗಳಲ್ಲಿ ಶಂಖಚಕ್ರಾದಿ ಅಸಂಖ್ಯ ಆಯುಧಗಳು ರೋಮಕೂಪಗಳಲ್ಲಿ ಪ್ರಖರವಾದ ತೇಜಸ್ಸುಗಳು, ಸಹಸ್ರಾಕ್ಷ ಸಹಸ್ರ ಪಾದಗಳುಳ್ಳ ವಿರಾಡ್ರೂಪದ ಕಾಲುಗಳಲ್ಲಿ ಪಾತಾಳ ಲೋಕಗಳು ಉದರದಲ್ಲಿ ಊರ್ಧ್ವ ಲೋಕಗಳು, ಬೆವರಿನ ರೂಪದಲ್ಲಿ ನದೀ ಸಮುದ್ರಗಳು ರೋಮರೂಪದಲ್ಲಿ ಮರಗಳು- ಇಂಥ ವಿಶ್ವರೂಪವನ್ನು ಶ್ರೀಕೃಷ್ಣ ತೋರಿದ. ದೇವದುಂದುಭಿ ಮೊಳಗಿತು. ಪುಷ್ಪ ವೃಷ್ಟಿಯಾಯಿತು.

ಒಂದೇ ಕ್ಷಣ ಆ ವಿಶ್ವರೂಪ ಕಂಡು ದುರ್ಯೋಧನ ಮುಂತಾದವರು ಕಣ್ಣು ಮುಚ್ಚಿದರು. ಅವರಿಗೆ ನೋಡುವ ಶಕ್ತಿ ಇರಲಿಲ್ಲ. ಭೀಷ್ಮ ದ್ರೋಣ ವಿದುರ ಸಂಜಯ ಧೃತರಾಷ್ಟ್ರ ಮತ್ತು ಮುನಿಗಳು ಮಾತ್ರ ಕಂಡರು. ಅವರೆಲ್ಲರಿಗೂ ದಿವ್ಯದೃಷ್ಟಿ ನೀಡಿದ್ದ ಶ್ರೀಕೃಷ್ಣ.

ಪಿಧಾಯ ರೂಪಂ ಪುನರೇವ ತದ್ಧರಿ-
ರ್ವೈಚಿತ್ರವೀರ್ಯೇಣ ಸಮರ್ಥಿತಃ ಪುನಃ ।
ಕೃತ್ವಾಽಂಧಮೇವ ಪ್ರಯಯೌ ಸುಯೋಧನಂ
ಸಹಾನುಗಂ ಪಾಪತಮಂ ಪ್ರಕಾಶ್ಯ ॥೮೩॥

ಶ್ರೀಕೃಷ್ಣ ವಿಶ್ವರೂಪವನ್ನು ಮರೆಮಾಡಿ, ಧೃತರಾಷ್ಟ್ರ ಪುನಃ ಪುನಃ ಬೇಡಿಕೊಂಡುದರಿಂದ ಅವನನ್ನು ಹಿಂದಿನಂತೆಯೆ ಅಂಧನನ್ನಾಗಿ ಮಾಡಿ, ದುರ್ಯೋಧನನನ್ನೂ ಅವನ ಕಡೆಯವರನ್ನೂ ಮಹಾಪಾಪಿಗಳೆಂದು ಲೋಕಕ್ಕೆ ತೋರಿಸಿ ಹೊರಗೆ ನಡೆದ.

'ನಿನ್ನ ಈ ದಿವ್ಯವಾದ ವಿಶ್ವರೂಪವನ್ನು ಕಂಡಬಳಿಕ ಬೇರೇನನ್ನೂ ನಾನು ಕಾಣಲಾರೆ, ಕಾಣದಂತೆ ಮೊದಲಿನ ಹಾಗೇ ಕುರುಡನನ್ನಾಗಿ ಮಾಡು' ಎಂದು ಧೃತರಾಷ್ಟ್ರ ಮತ್ತೆ ಮತ್ತೆ ಬೇಡಿದ್ದರಿಂದ ಅವನನ್ನು ಪುನಃ ಕುರುಡನನ್ನಾಗಿ ಮಾಡಿ, ವಿಶ್ವರೂಪವನ್ನು ಮರೆಮಾಡಿಕೊಂಡು ರಥವನ್ನೇರಿ ಕುಂತಿಯ ಮನೆಗೆ ಹೊರಟ.

ಅನಂತಶಕ್ತಿಃ ಪುರುಷೋತ್ತಮೋಽಸೌ
ಶಕ್ತೋಽಪಿ ದುರ್ಯೋಧನಚಿತ್ತನಿಗ್ರಹೇ ।
ನೈವ ವ್ಯಧಾದೇನಮಥೋಕ್ತಕಾರಿಣಂ
ನಿಪಾತಯನ್ನಂಧತಮಸ್ಯನಂತಃ ॥೮೪॥

ಅನಂತಶಕ್ತಿ ಉಳ್ಳ ಪುರುಷೋತ್ತಮ ಶ್ರೀಕೃಷ್ಣ ದುರ್ಯೋಧನನ ಪಾಪ ಬುದ್ಧಿಯನ್ನು ಕಳೆಯಲು ಶಕ್ತನಾಗಿದ್ದರೂ ಅವನಿಗೆ ತನ್ನ ಮಾತಿನಂತೆ ನಡೆಯಲು ಒಳಗೆ ಪ್ರೇರಣೆ ಮಾಡಲಿಲ್ಲ. ಇದು ಅವನನ್ನು ಬೇಗನೆ ಅಂಧಂತಮಸ್ಸಿನಲ್ಲಿ ಹಾಕುವುದಕ್ಕಾಗಿ.

ಶ್ರೀಕೃಷ್ಣ ಅನಂತಶಕ್ತಿ ಉಳ್ಳವನು. ಅವನ ಸಂಧಾನ ಯತ್ನ ಏಕೆ ವಿಫಲವಾಯಿತು ಎಂದರೆ ಅವನು ಯುದ್ಧ ನಿಶ್ಚಯ ಮಾಡಲೆಂದೇ ಬಂದವನು. ಹೊರಗೆ ಬುದ್ಧಿಯ ಮಾತನ್ನು ಹೇಳಿದರೂ ಒಳಗೆ ಅದರಂತೆ ನಡೆಯಲು ಪ್ರೇರಣೆ ಮಾಡಲಿಲ್ಲ. ಅವನು ಇನ್ನಷ್ಟು ಪಾಪಮಾಡಿ ತಮಸ್ಸಿಗೆ ಹೋಗಲು ಬೇಗನೆ ಸಿದ್ಧನಾಗಲಿ ಎಂದು.

ಕರ್ಣನ ಜನ್ಮ ರಹಸ್ಯ

ಪುನಶ್ಚ ಕುಂತೀಗೃಹಮೇತ್ಯ ಕೃಷ್ಣ-
ಸ್ತಯೋದ್ಯೋಗಂ ಧರ್ಮಸುತಸ್ಯ ಶಿಷ್ಟಮ್ ।
ಶ್ರುತ್ವಾ ಯಯೌ ಸೂರ್ಯಜಮಾತ್ಮಯಾನೇ
ನಿಧಾಯ ತಸ್ಯಾವದದಾತ್ಮಜನ್ಮ ।
ಆಯಾಹಿ ಪಾರ್ಥಾನಿತಿ ತದ್ವಚಃ ಸ
ನೈವಾಕರೋನ್ಮಾನಿತೋ ಧಾರ್ತರಾಷ್ಟ್ರೈಃ ॥೮೫॥

ಶ್ರೀಕೃಷ್ಣ ಪುನಃ ಕುಂತಿಯ ಮನೆಗೆ ಬಂದು ಅವಳು ಧರ್ಮರಾಜನಿಗೆ ಯುದ್ಧಕ್ಕೆ ತೊಡಗಲೆಂದು ಉಪದೇಶಿಸಿದುದನ್ನು ಕೇಳಿ, ಕರ್ಣನ ಬಳಿಗೆ ಹೋದ. ಅವನನ್ನು ನಗರದಿಂದ ಹೊರಗೆ ಸ್ವಲ್ಪ ದೂರಕ್ಕೆ ರಥದಲ್ಲಿ ಕರೆದುಕೊಂಡು ಹೋಗಿ ಅವನ ಜನನದ ಬಗ್ಗೆ ತಿಳಿಸಿದ. ಪಾಂಡವರ ಪಕ್ಷಕ್ಕೆ ಬಾ ಎಂದ. ಕೌರವರಿಂದ ಸಮ್ಮಾನಿತನಾಗಿದ್ದ ಆತ ಕೃಷ್ಣನ ಆ ಮಾತನ್ನು ಒಪ್ಪಲಿಲ್ಲ.

ಹಿಂದಿನ ದಿನ ಶ್ರೀಕೃಷ್ಣ ಒಬ್ಬನೇ ಕುಂತಿಯ ಮನೆಗೆ ಹೋಗಿ ಅವಳನ್ನು ಸಂತೈಸಿದ್ದ. ಈಗ ದುರ್ಯೋಧನ ಭೀಷ್ಮ ದ್ರೋಣ ಮುಂತಾದ ಎಲ್ಲರೊಂದಿಗೆ ಹೋಗಿ ಪಾಂಡವರಿಗೆ ನಿನ್ನ ಸಂದೇಶವೇನೆಂದು ಕೇಳಿದ. ಕುಂತಿ ವಿದುಲೋಪಾಖ್ಯಾನವನ್ನು ಹೇಳಿದಳು. ವಿದುಲೆ ತನ್ನ ಮಗನಾದ ಸೃಂಜಯನಿಗೆ 'ಶತ್ರುವಿಗೆ ಹೆದರಿ ಬದುಕಲು ಆಸೆಪಟ್ಟರೆ ನೀನು ಕಳ್ಳನೆ ಸರಿ

ಎದ್ದೇಳು ಪೌರುಷ ತೋರು' ಎಂದು ಉಪದೇಶಿಸಿದ್ದನ್ನು ಹೇಳಿದಳು. ಭೀಮನನ್ನು ಹೊರತು ಉಳಿದ ಪಾಂಡವರಿಗೆ ಯುದ್ಧ ಮಾಡಿರಿಂಬ ಸಂದೇಶ ಕಳಿಸಿದಳು. ಭೀಮನಿಗೆ ಅವನು 'ನಿತ್ಯೋದ್ಯುಕ್ತೋ ವೃಕೋದರಃ' ಕ್ಷಾತ್ರಧರ್ಮದಲ್ಲಿ ಸದಾ ಉದ್ಯುಕ್ತನಾದ್ದರಿಂದ ಸಂದೇಶ ಬೇಡ ಎಂದಳು. ಕುಂತಿಯು ಈ ಸಂದೇಶವನ್ನು ಹೇಳಿ ಭೀಷ್ಮಾದಿಗಳು ಪುನಃ ದುರ್ಯೋಧನನನ್ನು ಎಚ್ಚರಿಸಿದರು. ಅವನೇನೂ ಪ್ರತಿಕ್ರಿಯೆ ತೋರಲಿಲ್ಲ.

ಶ್ರೀಕೃಷ್ಣ ಕರ್ಣನಿಗೆ ಪಾಂಡವ ಪಕ್ಷಕ್ಕೆ ಬರಲು ಹೇಳಿದ. ಹೊರಗೆ ಹೇಳಿದರೂ ಅದನ್ನು ಕೇಳಲು ಒಳಗೆ ಪ್ರೇರಣೆ ಮಾಡಲಿಲ್ಲ. ಏಕೆಂದರೆ ಭೂ ಭಾರಹರಣಕ್ಕೆ ಅವನ ಸಹಭಾಗಿತ್ವ ಕೃಷ್ಣನಿಗೆ ಬೇಕಾಗಿತ್ತು. ಹೀಗಾಗಿ ಕರ್ಣ ಕೃಷ್ಣನ ಸಲಹೆಯನ್ನು ತಿರಸ್ಕರಿಸಿದ.

ಕರ್ಣನ ಜನ್ಮರಹಸ್ಯವನ್ನು ಹೇಳಿ ಕೃಷ್ಣ ಭೇದೋಪಾಯ ಮಾಡಿದನೆಂದು ಕುಮಾರವ್ಯಾಸ ಹೇಳುತ್ತಾನೆ–

'ಭೇದದಲಿ ಹೊಕ್ಕಿರಿದನೋ ಮಧುಸೂಧನ!'

ಆದರೆ ತಾನು ಕುಂತೀಪುತ್ರನೆಂಬುದು ಕರ್ಣನಿಗೆ ಮೊದಲೇ ಗೊತ್ತಿದ್ದಿತು–

ಸರ್ವಂ ಚೈವಾಭಿಜಾನಾಮಿ ಪಾಂಡೋಃ ಪುತ್ರೋಽಸ್ಮಿ ಧರ್ಮತಃ।
(ಉದ್ಯೋ 141.2)

ಎಂದು ಅವನೇ ಕೃಷ್ಣನಿಗೆ ಇದನ್ನು ಹೇಳುತ್ತಾನೆ. ನಾರದರಿಂದ ಭೀಷ್ಮನಿಗೆ, ಭೀಷ್ಮನಿಂದ ಕರ್ಣನಿಗೆ ಈ ರಹಸ್ಯ ತಿಳಿದು ಬಂದಿತ್ತು–

ಸೂರ್ಯಜಸ್ತ್ವಂ ಮಹಾಬಾಹೋ ವಿದಿತೋ ನಾರದಾನ್ಮಯಾ
(ಭೀಷ್ಮ 122-9)

ಸಂಸ್ಥಾಪ್ಯ ತಂ ಭಗವಾನ್ ದ್ರೌಣಯೇ ಚ
ರಹೋಽವದನ್ಮಿತ್ರಭಾವಂ ಪೃಥಾಜ್ಯೈಃ।
ಯಾವತ್ ಪಿತುರ್ಮರಣಂ ಸೋಽಪಿ ಮೈತ್ರೀಂ
ವವ್ರೇ ಪಾರ್ಥೈಸ್ತಂ ಚ ವಿಸೃಜ್ಯ ಕೃಷ್ಣಃ ॥೮೬॥

ಯಯೌ ಕುರೂನ್ ಪೂರ್ವಮೇವೋದ್ವಿಸೃಜ್ಯ
ಪೃಥಾಸುತಾನಾಂ ಸ ಸಕಾಶಮೀಶಃ ॥೮೭॥

ಭಗವಾನ್ ಶ್ರೀಕೃಷ್ಣ ಕರ್ಣನನ್ನು ರಥದಿಂದ ಕೆಳಗೆ ಇಳಿಸಿ, ಅಶ್ವತ್ಥಾಮನಿಗೂ ಪಾಂಡವರೊಡನೆ ಮೈತ್ರಿಯಿಂದ ಇರಲು ಏಕಾಂತದಲ್ಲಿ ಹೇಳಿದ. ಅವನು ತಂದೆಯ

ಮರಣಪರ್ಯಂತ ಮೈತ್ರಿಯಿಂದಿರಲು ಒಪ್ಪಿದ. ಕೃಷ್ಣ ಅವನನ್ನೂ ಹಿಂದೆ ಕಳಿಸಿದ. ಕೌರವರನ್ನು ಕರ್ಣ ನೊಡನೆ ಮಾತನಾಡುವ ಮೊದಲೆ ಹಿಂದಿರುಗಿಸಿದ್ದ. ಬಳಿಕ ಕೃಷ್ಣ ಪಾಂಡವರ ಬಳಿಗೆ ಬಂದ.

ಕುಂತಿ ಮಗನಲ್ಲಿ ಬೇಡಿದಳು

ಸಂಪ್ರಾರ್ಥಿತಃ ಪೃಥಯಾ ಚೈವ ಕರ್ಣಃ
ಪಾರ್ಥೈಯೋರ್ಗಂ ಯಾಹಿ ಸೂನುರ್ಮಮಾಸಿ ।
ತೇನಾಪ್ಯುಕ್ತಾ ವಾಸವಿನಾ ವಿನಾಽಹಂ
ಹನ್ಯಾಂ ಸುತಾಂಸ್ತೇ ನ ಕಥಂಚನೇತಿ ॥೮೮॥

ಕುಂತಿ ಕರ್ಣನನ್ನು ಕೇಳಿಕೊಂಡಳು. 'ನೀನು ನನ್ನ ಮಗನಾಗಿರುವಿ. ಪಾಂಡವರ ಜೊತೆ ಸೇರು' ಎಂದು. ಅವನೆಂದ 'ಅಮ್ಮ! ಅರ್ಜುನನನ್ನು ಹೊರತು ನಿನ್ನ ಬೇರೆ ಯಾವ ಮಕ್ಕಳನ್ನೂ ನಾನು ಸರ್ವಥಾ ಕೊಲ್ಲುವುದಿಲ್ಲ' ಎಂದು.

ಶ್ರೀಕೃಷ್ಣ ಹೊರಟುಹೋದ ಬಳಿಕ ವಿದುರ ಕುಂತಿಯ ಬಳಿಗೆ ಬಂದು ಇನ್ನು ಯುದ್ಧವಾಗುವುದು ನಿಶ್ಚಿತ. ಕುಲನಾಶ ಭೀತಿಯಿಂದ ನನಗೆ ನಿದ್ದೆ ಇಲ್ಲವಾಗಿದೆ ಎಂದ. ಒಡನೆ ಕುಂತಿ ಮಾತೃವಾತ್ಸಲ್ಯದಿಂದ ಕರ್ಣನ ಬಳಿಗೆ ಹೋಗಿ ಕರ್ಣ ಅರ್ಜುನರು ರಾಮಕೃಷ್ಣರಂತೆ ಒಂದಾಗಿ ಇಬ್ಬರೂ ಉಳಿಯ ಬೇಕೆಂದು (ಉದ್ಯೋ 145-10) ಹೇಳಿದಳು. ಒಡನೆ ಸೂರ್ಯನೂ ಹೇಳಿದ, 'ಕುಂತಿ ಹೇಳಿದಂತೆ ಮಾಡು' ಎಂದು. ಆದರೆ ಕರ್ಣ ಹೇಳುತ್ತಾನೆ, 'ನಾನು ಸತ್ತರೂ ಅರ್ಜುನ ಸತ್ತರೂ ನಿನಗೆ ಐದು ಮಕ್ಕಳು ಇದ್ದೇ ಇರುತ್ತಾರೆ.'

ಕುಮಾರವ್ಯಾಸ ಭಾರತದಲ್ಲಿ ಕುಂತಿ ಸೂರ್ಯರ ಪಾತ್ರ ಬೇರೆ ರೀತಿ ಚಿತ್ರಿತವಾಗಿದೆ. ಸೂರ್ಯ ಕರ್ಣನಿಗೆ ಕಿವಿಮಾತು ಹೇಳುತ್ತಾನೆ.

'ಮುರಹರನ ಮತದಿಂದ ನಿನ್ನಯ
ಸರಳ ಬೇಡಲು ಬಂದಳಂದಿನ
ಹರಿಗೆ ಕವಚವನಿತ್ತವೊಲು ಮರುಳಾಗಬೇಡೆಂದ'
(ಉದ್ಯೋಗ 10.29)

ಕುಂತಿಯೂ ಕರ್ಣನಿಂದ ತೊಟ್ಟ ಬಾಣವನ್ನು ತಿರುಗಿ ತೊಡದಿರಲು ಪ್ರತಿಜ್ಞೆ ಮಾಡಿಸುತ್ತಾಳೆ–'ಹೋದ ಬಾಣವ ಮರಳಿ ತೊಡದಿರು' (ಉದ್ಯೋ 10.35) ಇಲ್ಲಿ ಆಧುನಿಕ ವಿಮರ್ಶಕರ ದೃಷ್ಟಿಯಲ್ಲಿ ಕುಂತಿ ಪಾಂಡವರ ಉಳಿವಿಗಾಗಿ ಕರ್ಣನನ್ನು ಬಲಿ ತೆಗೆದುಕೊಳ್ಳಲು ಬಂದ ಹೆಣ್ಣು ಪಿಶಾಚಿಯಾಗುತ್ತಾಳೆ!

ತತೋ ಯಯುಃ ಕೌರವಾಃ ಪಾಂಡವಾಶ್ಚ
ಕುರುಕ್ಷೇತ್ರಂ ಯೋದ್ಧುಕಾಮಾಃ ಸಕೃಷ್ಣಾಃ ।
ಚಕ್ರುಶ್ಚ ತೇ ಶಿಬಿರಾಣ್ಯತ್ರ ಸರ್ವೇ
ಶುಭೇ ದೇಶೇ ಪಾಂಡವಾಃ ಕೃಷ್ಣಬುದ್ಧ್ಯಾ ॥೯೯॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಯುದ್ಧೋದ್ಯೋಗೋ ನಾಮ ಚತುರ್ವಿಂಶೋಽಧ್ಯಾಯಃ

ಬಳಿಕ ಪಾಂಡವರೂ ಕೌರವರೂ ಯುದ್ಧ ಮಾಡಲು ಬಯಸಿ ಕೃಷ್ಣನೊಂದಿಗೆ ಕುರುಕ್ಷೇತ್ರಕ್ಕೆ ನಡೆದರು. ಅಲ್ಲಿ ಎಲ್ಲರೂ ಶಿಬಿರಗಳನ್ನು ನಿರ್ಮಿಸಿಕೊಂಡರು. ಅದರಲ್ಲಿಯೂ ಪಾಂಡವರು ಕೃಷ್ಣನ ಆದೇಶದಿಂದ ಶುಭಕರವಾದ ಒಂದು ಸ್ಥಳದಲ್ಲಿಯೆ ಶಿಬಿರ ರಚಿಸಿಕೊಂಡರು.

ಕೌರವರ ಸೈನ್ಯ ಮೂರು ಭಾಗವಾಗಿ ಕುರುಕ್ಷೇತ್ರದಲ್ಲಿ ಶಿಬಿರ ಹಾಕಿಕೊಂಡಿತು. ವಿಂದ ಅನುವಿಂದರು, ಕೇಕಯರು, ಬಾಹ್ಲಿಕ ದ್ರೋಣರುಗಳದು ಒಂದು ಭಾಗ. ಅಶ್ವತ್ಥಾಮ ಭೀಷ್ಮ ಜಯದ್ರಥ ಶಕುನಿ ಮುಂತಾದವರದು ಎರಡನೆ ಭಾಗ. ಕೃತವರ್ಮ ತ್ರಿಗರ್ತರಾಜ ನೂರು ಮಂದಿ ಕೌರವರು ಶಲ ಭೂರಿಶ್ರವ ಶಲ್ಯ ಬೃಹದ್ರಥರದು ಮೂರನೇ ಭಾಗ. ಪಾಂಡವರ ಸೈನ್ಯವೂ ಮೂರು ಭಾಗವಾಗಿ ಶಿಬಿರ ಸ್ಥಾಪಿಸಿತು. ಅಭಿಮನ್ಯು ಉಪಪಾಂಡವರು ಮತ್ತು ಧೃಷ್ಟದ್ಯುಮ್ನರದು, ಭೀಮ ಅರ್ಜುನ ಸಾತ್ಯಕಿಗಳದು, ವಿರಾಟದ್ರುಪದ ಧರ್ಮರಾಜರದು ಎಂದು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಯುದ್ಧೋದ್ಯೋಗ ಎಂಬ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 25

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಸೇನೇ ವೀಕ್ಷ್ಯ ರಣೋನ್ಮುಖೇ ಕರುಣಯಾ ಶಸ್ತ್ರೋದ್ಯತಂ ಫಲ್ಗುನಂ
ಸದ್ಗೀತಾಮುಪದಿಶ್ಯ ಕಾರ್ಮುಕಧರಂ ಚಕ್ರೇಕಸ್ಯ ಯಃ ಸಾರಥಿಃ ।
ಅನ್ಯೋನ್ಯಂ ಕುರುಪಾಂಡವೈಶ್ಚ ಪೃತನಾಂ ಯೋಕಜೀಘನತ್ ಸ್ಯಂದನಾತ್
ಯೋ ಭೀಷ್ಮಂ ನಿರಪಾತಯತ್ ಸುತಶರೈಃ ಪಾಂಡೋಸ್ತಮೀಡೇಕಚ್ಯುತಂ ॥

ಯುದ್ಧಮಾಡಲು ಉದ್ಯುಕ್ತವಾದ ಉಭಯಸೇನೆಗಳನ್ನು ನೋಡಿ ಅರ್ಜುನ ಕರುಣೆಯಿಂದ ಶಸ್ತ್ರವನ್ನು ಕೆಳಗಿಟ್ಟಾಗ ಅವನಿಗೆ ಶ್ರೀಕೃಷ್ಣ ಉತ್ತಮವಾದ ಗೀತೆಯನ್ನು ಉಪದೇಶಿಸಿ ಅವನು ಬಿಲ್ಲನ್ನು ಎತ್ತಿಕೊಳ್ಳುವಂತೆ ಮಾಡಿದ. ಅವನಿಗೆ ಸಾರಥಿಯಾಗಿ ಕುರುಪಾಂಡವ ಸೇನೆಯನ್ನು ಪರಸ್ಪರವಾಗಿ ನಾಶಗೊಳಿಸಿದ. ಅರ್ಜುನನ ಬಾಣಗಳಿಂದ ಭೀಷ್ಮನನ್ನು ರಥದಿಂದ ಕೆಳಗೆ ಬೀಳಿಸಿದ. ಅಂಥ ಅಚ್ಯುತನನ್ನು ಸ್ತುತಿಸುವೆನು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೫

ಭೀಷ್ಮಪಾತ

॥ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಮೊದಲ ದಿನದ ಯುದ್ಧ - ಗೀತೋಪದೇಶ

ಓಂ ॥ತೇ ಸೇನೇ ಸಮರಾರಂಭೇ ಸಮೇತೇ ಸಾಗರೋಪಮೇ ।
ಭೀಮಭೀಷ್ಮಮುಖೇ ವೀಕ್ಷ್ಯ ಪ್ರಾಹ ವಾಸವಿರಚ್ಯುತಮ್ ॥೧॥

ಯುದ್ಧದ ಆರಂಭದಲ್ಲಿ ಭೀಮ ಭೀಷ್ಮರ ನಾಯಕತ್ವದಲ್ಲಿ ನಿಂತ ಸಾಗರದಂಥ ಎರಡು ಸೇನೆಗಳನ್ನು ಕಂಡು ಅರ್ಜುನ ಶ್ರೀಕೃಷ್ಣನಿಗೆ ನುಡಿದ.

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ।
ಇತ್ಯುಕ್ತಃ ಸ ತಥಾ ಚಕ್ರೇ ಪಾರ್ಥೋ ಽಪಶ್ಯಚ್ಚ ಬಾಂಧವಾನ್ ॥೨॥

'ಹೇ ಅಚ್ಯುತ, ಎರಡು ಸೈನ್ಯಗಳ ನಡುವೆ ನನ್ನ ರಥವನ್ನು ನಿಲ್ಲಿಸು.' ಎಂದು ಅರ್ಜುನ ನುಡಿದಾಗ ಕೃಷ್ಣ ಹಾಗೇ ಮಾಡಿದ. ಅರ್ಜುನ ಸೈನ್ಯದಲ್ಲಿ ಬಾಂಧವರನ್ನು ಕಂಡ.

ವಿಸಸರ್ಜ ಧನುಃ ಪಾಪಾಶಂಕೀ ತತ್ರಾಽಹ ಮಾಧವಃ
ಸ್ವಧರ್ಮೋ ದುಷ್ಟದಮನಂ ಧರ್ಮಜ್ಞಾನಾನುಪಾಲನಮ್ ।
ಕ್ಷತ್ರಿಯಸ್ಯ ತಮುತ್ಸೃಜ್ಯ ನಿಂದಿತೋ ಯಾತ್ಯಧೋ ಧ್ರುವಮ್ ॥೩॥

ಅರ್ಜುನ ಯುದ್ಧದಿಂದ ಪಾಪ ಬರುವುದೆಂದು ಶಂಕಿಸಿ ಬಿಲ್ಲನ್ನು ಕೆಳಗೆ ಚೆಲ್ಲಿದ. ಆಗ ಶ್ರೀಕೃಷ್ಣ ನುಡಿದ. 'ದುಷ್ಟರನ್ನು ಸಂಹರಿಸುವುದು ಮತ್ತು ಆ ಮೂಲಕ ಧರ್ಮಜ್ಞಾನಗಳನ್ನು ಕಾಪಾಡುವುದು ಕ್ಷತ್ರಿಯನಿಗೆ ವಿಹಿತವಾದ ಸ್ವಧರ್ಮ. ಸ್ವಧರ್ಮವನ್ನು ಬಿಟ್ಟಿರುವವನು ನಿಂದಿತನಾಗಿ ಅಧೋಗತಿ ಹೊಂದುತ್ತಾನೆ.

ಭಗವದ್ಗೀತಾ ಪ್ರಥಮಾಧ್ಯಾಯದಲ್ಲಿ ಹೇಳಿದ ಅರ್ಜುನನ ವಿಷಾದ ಸಂಕ್ಷೇಪವಾಗಿ ಇಲ್ಲಿ ಬಂದಿದೆ. ದುಷ್ಟಕೌರವರನ್ನೂ ಅವರ ಕಡೆಯ ಭೀಷ್ಮಾದಿಗಳನ್ನೂ ಕೊಲ್ಲುವುದು ಧರ್ಮವಾಗಿದ್ದರೂ ಅಧರ್ಮವೆಂದು ಅರ್ಜುನ ಶಂಕಿಸುತ್ತಾನೆ. ಕೃಷ್ಣ ನಗುತ್ತಾನೆ ಏಕೆಂದರೆ,

1. ಅರ್ಜುನನಿಗೆ ಬಂಧು ವಧೆಯಿಂದ ಪಾಪ ಬರುವುದೆಂದು ಭಯ.
2. ಬಂಧುಗಳಿಗೆ ಮರಣ ಉಂಟಾಗುತ್ತದೆ ಎಂದು ಕನಿಕರ

3. ಬಂಧುಗಳ ಶರೀರ ಭಿನ್ನ ಭಿನ್ನವಾಗುವುದನ್ನೂ ನೋಡಬೇಕಾಗುವುದು, ಮುಂದೆ ಅವರ ದರ್ಶನ ಸಂಭಾಷಣಾದಿಗಳನ್ನು ಕಳೆದುಕೊಳ್ಳಬೇಕಾಗುವುದು ಎಂದು ಕಳವಳ.

ಈ ಶ್ಲೋಕದಲ್ಲಿ ಮೊದಲನೆಯದಾದ ಭಯಕ್ಕೆ ಪರಿಹಾರ.

ಭೀಷ್ಮ ಮುಂತಾದ ಬಂಧುಗಳ ವಧೆಯಿಂದ ಪಾಪವಿಲ್ಲ. ಅದು ಸ್ವಧರ್ಮ. ಅದರಿಂದ ಧರ್ಮರಕ್ಷಣೆಯಾಗುವುದು ಜ್ಞಾನಕಾರ್ಯ ನಿರ್ವಿಘ್ನವಾಗಿ ಸಾಗುವುದು. ಇದು ಎಲ್ಲ ಮಾನವರಿಗೂ ಸ್ವಧರ್ಮ. ವಿಶೇಷವಾಗಿ ಕ್ಷತ್ರಿಯನಿಗೆ ಸ್ವಧರ್ಮ ಇದರಿಂದ ಸುಖವೆ ಹೊರತು ಅನರ್ಥವಿಲ್ಲ-

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ

ತೃತೀಯಾಧ್ಯಾಯದಲ್ಲಿ ಅರ್ಜುನ ಪ್ರಶ್ನೆ ಮಾಡುತ್ತಾನೆ- ಬ್ರಾಹ್ಮಣರ ಸನ್ಯಾಸ ಧರ್ಮದಲ್ಲಿ ಶಮದಮಾದಿಗಳಿ ಇರುತ್ತವೆ. ಕಾಮಕ್ರೋಧಾದಿಗಳಿಗೆ ಅವಕಾಶವಿಲ್ಲ. ಕ್ಷತ್ರಿಯ ಧರ್ಮದಲ್ಲಿ ಇದೆ. ಅದರಿಂದ ನಾನೇಕೆ ಕ್ಷತ್ರಿಯ ಧರ್ಮವನ್ನೇ ಅನುಸರಿಸಬೇಕು?

ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ?

ಅದಕ್ಕೆ ಉತ್ತರ- ನೀನು ಜನಕರಾಜ ಮೊದಲದಾವರಂತೆ ಅಧಿಕಾರಿಕ. ನಿನಕೆ ಕ್ಷಾತ್ರ ಧರ್ಮ ಸಹಜ. ಅದರಲ್ಲಿ ನ್ಯೂನತೆ ಇದ್ದರೂ ಅದನ್ನು ಬಿಡಕೂಡದು. ಬಿಟ್ಟರೆ ಅಧೋಗತಿಯಾಗುತ್ತದೆ-

ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ।

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥೪೬॥

ಈ ಜಗತ್ತಿನ ಸಕಲ ಪ್ರಾಣಿಗಳ ಪ್ರವೃತ್ತಿ ಯಾರಿಂದಾಗುವುದೋ ಯಾರಿಂದ ಈ ಎಲ್ಲ ಜಗತ್ತೂ ವ್ಯಾಪ್ತವಾಗಿದೆಯೋ ಆ ಭಗವಂತನನ್ನು ಸ್ವವಿಹಿತ ಕರ್ಮಾನುಷ್ಠಾನದಿಂದ ಚೆನ್ನಾಗಿ ಆರಾಧಿಸಿಯೆ ಮಾನವ ಸಿದ್ಧಿ ಪಡೆಯುತ್ತಾನೆ.

ವಿಷ್ಣುಪೂಜೆಯೆ ಧರ್ಮ. ದುಷ್ಟನಿಗ್ರಹ ಹೇಗೆ ಧರ್ಮವಾಗುವುದು? ಎಂಬ ಪ್ರಶ್ನೆಗೆ ಭಗವದ್ಗೀತೆಯ ಈ ಶ್ಲೋಕ (18.46) ಸಮಾಧಾನ ನೀಡುತ್ತಿದೆ. ಕಾಮಕ್ರೋಧಾದಿಗಳನ್ನು ಬಿಟ್ಟು ಶಮದಮಾದಿ ಗುಣಗಳನ್ನು ಸಂಪಾದಿಸಿ ಸ್ವವಿಹಿತವಾದ ಕರ್ಮವನ್ನು ಭಗವತ್ಪ್ರೀತಿಗಾಗಿ ಮಾಡುವುದೇ

ಪೂಜೆ. ಅದುವೆ ಧರ್ಮ. ಅದರಿಂದಲೇ ಜ್ಞಾನಸಿದ್ಧಿ, ಮೋಕ್ಷಸಿದ್ಧಿ.

ನಚ ಶೋಕಸ್ತ್ವಯಾ ಕಾರ್ಯೋ ಬಂಧೂನಾಂ ನಿಧನೇಚ್ಛಯಾ ।
ದೇಹಸ್ಯ ಸರ್ವಥಾ ನಾಶಾದನಾಶಾಚ್ಚೇತನಸ್ಯ ಚ ॥ ೫ ॥

ಯುದ್ಧೇಚ್ಛೆ ಬಂಧುಗಳ ಮರಣಕ್ಕೆ ಕಾರಣವಾಗುವುದೆಂದು ನೀನು ಶೋಕ ಪಡಬಾರದು. ಏಕೆಂದರೆ ದೇಹಕ್ಕೆ ಸರ್ವಥಾ ನಾಶವಿದೆ. ಚೈತನ್ಯಕ್ಕೆ ಸರ್ವಥಾ ನಾಶವಿಲ್ಲ.

ಯುದ್ಧೇಚ್ಛೆ ಕ್ಷತ್ರಿಯನಾದ ಅರ್ಜುನನಿಗೆ ಸ್ವಕರ್ಮಾನುಷ್ಠಾನದ ಇಚ್ಛೆಯೆ ಆದುದರಿಂದ ಒಳ್ಳೆಯದೆನ್ನುತ್ತಿದ್ದಾನೆ ಕೃಷ್ಣ. ಆದರೆ ಆ ಇಚ್ಛೆಯ ಪರಿಣಾಮವಾಗಿ ನನ್ನ ಬಂಧುಗಳಿಗೆ ಮರಣ ಉಂಟಾಗುತ್ತದೆ ಎಂದು ಅರ್ಜುನ ಕನಿಕರ ತೋರುತ್ತಾನೆ. ಇದು ಅರ್ಜುನನ ಎರಡನೆ ಸಮಸ್ಯೆ. ಇದಕ್ಕೆ ಉತ್ತರವಾಗಿ ಶ್ರೀಕೃಷ್ಣ ಹೇಳುತ್ತಾನೆ- ಮರಣವೆಂದರೇನು? ಶರೀರ ನಾಶವೆನ್ನುವುದಾದರೆ ಶರೀರಕ್ಕೆ ಸರ್ವಥಾ ನಾಶವಿದೆ. ಬಾಲ್ಯ ಶರೀರ ಹೋಗಿ ಯೌವನ ಶರೀರ ಬರುವಾಗ ಕಳೆದುಹೋದ ಬಾಲ್ಯಶರೀರಕ್ಕೆ ಯಾರೂ ಅಳುವುದಿಲ್ಲ. ಹಾಗೇ ಮರಣವಾಗಿ ಪುನರ್ಜನ್ಮದಲ್ಲಿ ಇನ್ನೊಂದು ಶರೀರ ಬರುವಾಗ ಹಿಂದಿನ ಶರೀರ ಕಳೆದು ಹೋದುದಕ್ಕೆ ಶೋಕಿಸಬಾರದು. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಎಂದು (2.22) ಗೀತೆ ಇದನ್ನೆ ಹೇಳಿದೆ. ಮರಣವೆಂದರೆ ಆತ್ಮನಾಶವಂತೂ ಅಲ್ಲ. ಆತ್ಮನಿಗೆ ಸರ್ವಥಾ ನಾಶವಿಲ್ಲ. ಏಕೆಂದರೆ ಆತ ಶಾಶ್ವತನಾದ ಆತ್ಮನ ಪ್ರತಿಬಿಂಬ. ಜೀವನ ಅನಾದಿಯಾದ ಸ್ವರೂಪದೇಹ ಉಪಾಧಿ. ಬಿಂಬ ಉಪಾಧಿ ಈ ಎರಡರ ಸನ್ನಿಧಿ ಇವೆಲ್ಲವೂ ಅನಾದಿ ನಿತ್ಯವಾದ್ದರಿಂದ ಪ್ರತಿಬಿಂಬನಾದ ಆತ್ಮನೂ ಅನಾದಿ ನಿತ್ಯ. ನೀರು ಬೆಂಕಿ ಶಸ್ತ್ರವಿಷಶಾಪಾದಿ ಯಾವುದೇ ಕಾರಣದಿಂದ ಅವನಿಗೆ ನಾಶವಿಲ್ಲ.

'ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ' (2.20)
'ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ।' (2.23)

ಸೃಷ್ಟಿಸ್ಥಿತ್ಯಪ್ಯಯಾಜ್ಞಾನಬಂಧಮೋಕ್ಷಪ್ರವೃತ್ತಯಃ ।
ಪ್ರಕಾಶನಿಯಮೌ ಚೈವ ಬ್ರಹ್ಮೇಶಾದಿಕ್ಷರಸ್ಯ ಚ ॥ ೬ ॥
ಅಕ್ಷರಪ್ರಕೃತೇಃ ಸಂತೋ ಮತ್ತ ಏವ ನ ಚಾನ್ಯತಃ ॥ ೭ ॥

ಸೃಷ್ಟಿ ಸ್ಥಿತಿ ಲಯ ಅಜ್ಞಾನ ಬಂಧ ಮೋಕ್ಷ ಪ್ರವೃತ್ತಿ ಪ್ರಕಾಶನಿಯಮಗಳು ಬ್ರಹ್ಮ ರುದ್ರಾದಿ ಕ್ಷರಪುರುಷರಿಗೂ ಅಕ್ಷರ ಪುರುಷಳಾದ ಲಕ್ಷ್ಮಿಗೂ ಇರುವವುಗಳು ನನ್ನಿಂದಲೇ ಆಗುವುವು. ಬೇರೆ ಯಾರಿಂದಲೂ ಅಲ್ಲ.

ಬಂಧುಗಳ ಶರೀರ ಛಿನ್ನಭಿನ್ನವಾಗುವುದನ್ನು ನೋಡಬೇಕಾಗುವು ದೆಂಬ ಅರ್ಜುನನ ಮೂರನೆ ಸಮಸ್ಯೆಗೆ ಉತ್ತರ 'ಮಾತ್ರಾ ಸ್ಪರ್ಶಾಸ್ತು ಕೌಂತೇಯ' (2.14) ಎಂಬಲ್ಲಿ ಬಂದಿದೆ. ಬಂಧುಗಳೆಂಬ ಅಭಿಮಾನವನ್ನು ಬಿಡು. ಆಗ ದುಃಖ ಸಹನೆಯಾಗುತ್ತದೆ ಎಂದು ನಿರ್ಣಯದಲ್ಲಿ 'ಬಂಧೂನಾಂ ನಿಧನೇಚ್ಛಯಾ' ಎಂಬಲ್ಲಿಯೆ ಸೂಚಿಸಲಾಗಿದೆ.

ಹೀಗೆ ಅಭಿಮಾನ ತ್ಯಾಗಪೂರ್ವಕ ಸ್ವಧರ್ಮಾಚರಣೆ ಕರ್ತವ್ಯವಾಗಿದೆ ಎಂದು ಹೇಳುತ್ತ ಗೀತಾ ಪ್ರಥಮ ಷಟ್ಕದಲ್ಲಿ ಕರ್ಮಯೋಗ ಜ್ಞಾನಯೋಗಗಳನ್ನು ವರ್ಣಿಸಿ, ಮುಂದೆ ಏಳನೆ ಅಧ್ಯಾಯದಲ್ಲಿ ಸ್ವಧರ್ಮವನ್ನು ಭಕ್ತಿಪೂರ್ವಕವಾಗಿ ಆಚರಿಸಬೇಕೆಂದು ಭಕ್ತಿಯೋಗವನ್ನು ಹೇಳುವುದಕ್ಕಾಗಿ ಭಕ್ತ್ಯರ್ಥವಾಗಿ ಭಗವನ್ಮಹಿಮೆಯನ್ನು,

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ ಮದಾಶ್ರಯಃ।

ಎಂದು ತೊಡಗಿ, ಹದಿನೈದನೆ ಅಧ್ಯಾಯದ

'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ'

ಇತ್ಯಾದಿ ಶ್ಲೋಕಗಳ ವರೆಗೆ ವರ್ಣಿಸಲಾಗಿದೆ. ಇವೆಲ್ಲವುಗಳ ಸಂಗ್ರಹ ನಿರ್ಣಯದ ಮೇಲಿನ ಎರಡು ಶ್ಲೋಕಗಳಲ್ಲಿ ಬಂದಿದೆ.

ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ

ಅಹಮಾದಿರ್ಹಿ ದೇವಾನಾಂ

ಬುದ್ಧಿರ್ಜ್ಞಾನಮಸಂಮೋಹಃ

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ

ಅಹಮಜ್ಞಾನಜಂ ತಮಃ

ನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನದೀಪೇನ ಭಾಸ್ವತಾ

ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರಸಾಗರಾತ್

ಇತ್ಯಾದಿ ಗೀತಾವಚನಗಳನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.[1]

---

1. ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸ ಇತ್ಯುಕ್ತ ಯುದ್ಧ ಪ್ರತಿಬಂಧಕಶೋಕಸ್ತ್ವಯಾ ನ ಕಾರ್ಯಃ। ಕಾರಣಾಭಾವಾತ್। ತಥಾ ಹಿ। ಕಿಂ ಯುದ್ಧಾತ್ ಪರಲೋಕೇ ದುಃಖಿಂ ಭವತೀತಿ ಶೋಕಃ? ಉತ ಬಾಂಧವಾದೀನಾಂ ಹಾನಿರ್ಭವಿಷ್ಯತೀತಿ ಕೃಪಾಧಿಯಾ ಶೋಕಃ? ಉತ ಪರಮ ಪ್ರೇಮಾಸ್ಪದಾನಾಂ ಬಾಂಧವಾದೀನಾಂ ದರ್ಶನ ಸ್ಪರ್ಶನಾದ್ಯಭಾವಾತ್ ಸುಖಹಾನಿಃ, ತಥಾ ತೇಷಾಂ ಛೇದಭೇದಾದಿ

ನ ಮೇ ಕುತಶ್ಚಿತ್ ಸರ್ಗಾದ್ಯಾಃ ಸ್ವಾತಂತ್ರ್ಯಾದ್ ಗುಣಪೂರ್ತಿತಃ ।
ಅತಃ ಸಮಾಧಿಕಾಭಾವಾತ್ ಸರ್ವಂ ಮದ್ವಶಮೇವ ಚ ॥೮॥

ಸ್ವಾತಂತ್ರ್ಯವಿರುವುದರಿಂದಲೂ ಗುಣಪೂರ್ಣತ್ವವಿರುವುದರಿಂದಲೂ ನನಗೆ ಯಾರಿಂದಲೂ ಸೃಷ್ಟ್ಯಾದಿಗಳಿಲ್ಲ. ಅದರಿಂದ ನನಗೆ ಸಮಾನನಾಗಲಿ ಉತ್ತಮನಾಗಲಿ ಇಲ್ಲದುದರಿಂದ ಎಲ್ಲವೂ ನನ್ನ ವಶದಲ್ಲಿಯೆ ಇರುತ್ತದೆ.

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ (10.2)

ದರ್ಶನೇನ ದುಃಖಾವಾಪ್ತಿಶ್ಚೇತ್ಯೈಹಿಕ ಶೋಕ ಪ್ರಾಪ್ತಿಃ? ತತ್ರಾದ್ಯಂ ತಾವದ್ ದೂಷಯತಿ ಸ್ವಧರ್ಮ ಇತಿ। ಸ್ವಧರ್ಮತ್ವಂ ಕುತ ಇತ್ಯತೋ ನಾರಾಯಣ ದ್ವಿಟ್ ತದನುಬಂಧಿನಿಗ್ರಹ ರೂಪತ್ವಾದಿತಿ ಸ್ಥಿತೇಽಪಿ ಹೇತ್ವಂತರಮಾಹ ಧರ್ಮಜ್ಞಾನಯೋರನುಪಾಲನಂ ಯೇನೇತಿ। ತಥಾ ಚ ಯುದ್ಧಸ್ಯ ಪರಮಧರ್ಮತ್ವಾತ್ ಅಸತ್ಕರ್ಮಣಃ ಸುಖಾಭಾವವತ್ ಸತ್ಕರ್ಮಣೋ ದುಃಖಾಭಾವಾತ್ ಶೋಕೋ ನ ಕಾರ್ಯ ಇತಿ ಭಾವಃ। ಏತೇನ ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ। ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ಇತ್ಯಾದ್ಯುಕ್ತೇ ಸ್ತಾತ್ಪರ್ಯಮುಕ್ತಂ ಭವತಿ। ಏತೇನ ಶುದ್ಧೇಷು ಯತಿಧರ್ಮೇಷು ಸತ್ಸು ಅವರ್ಜನೀಯ ಕಾಮಕ್ರೋಧೇಷು ಯುದ್ಧಾದಿಷು ವಿಧಾನಮಯುಕ್ತ ಮಿತ್ಯರ್ಜುನ ಶಂಕಾಯಾ, ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ, ಶ್ರೇಯಾನ್ ಸ್ವಧರ್ಮೋ ವಿಗುಣ ಇತ್ಯಾದಿನಾ ಯತ್ ಸಮಾಧಾನಮುಕ್ತಂ ತದಪಿ ಸಂಗೃಹೀತಂ ಭವತಿ। ತವ ಜನಕಾದಿವದಾಧಿಕಾರಿಕತ್ವೇನ ಅವರ್ಜನೀಯ ರಾಗಾದ್ಯುಪೇತೇಽಪಿ ಕರ್ಮಣ್ಯಧಿಕೃತತ್ವೇನ ತಸ್ಯ ವಿಗುಣತ್ವೇಽಪಿ ಸ್ವಧರ್ಮತ್ವೇನ ಕಾರ್ಯತ್ವಾದಿತಿ। ನ ಕೇವಲ ಮಾಮುಷ್ಮಿಕ ದುಃಖಾಭಾವಾತ್ ಕಾರ್ಯತ್ವಂ। ಅಕರಣೇ ಲೌಕಿಕ ವೈದಿಕಾ ನರ್ಥೌ ಚ ಭವತ ಇತ್ಯಾಹ ತಮುತ್ಸೃಜ್ಯೇತಿ। ಏತೇನ ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸೀತ್ಯಾದ್ಯುಕ್ತಾತಾತ್ಪರ್ಯಂ ಭವತಿ।

ದ್ವಿತೀಯಂ ದೂಷಯತಿ ನಚೇತಿ। ಕುತ ಇತಿ ಚೇದ್ವಿಕಲ್ಪಾಸಹತ್ವಾತ್। ತಥಾಹಿ। ಕಿಂ ಬಂಧುಶಬ್ದೇನ ತದ್ದೇಹೋ ವಿವಕ್ಷಿತ, ಉತ ಚೈತನ್ಯಂ? ಆದ್ಯಂ ದೂಷಯತಿ ದೇಹೇತಿ। ಕೌಮಾರಾದಿವದವಶ್ಯಂ ನಾಶಾದಿತ್ಯರ್ಥಃ। ಏತೇನ ದೇಹಿನೋಽಸ್ಮಿನ್ ಯಥಾದೇಹೇ। ವಾಸಾಂಸಿ ಜೀರ್ಣಾನಿ ಯಥಾ ವಿಹಾಯ। ಜಾತಸ್ಯಹಿ ಧ್ರುವೋ ಮೃತ್ಯುರಿತ್ಯಾದಿತಾತ್ಪರ್ಯಮುಕ್ತಂ ಭವತಿ। ದ್ವಿತೀಯಂ ದೂಷಯತಿ ಅನಾಶಾದಿತಿ। ಸರ್ವಥೇತಿ ವರ್ತತೇ। ಸರ್ವಪ್ರಕಾರೇಣ ಉಪಾಧಿ ಬಿಂಬ ಸನ್ನಿಧಿ ನಾಶಾಭಾವೇನ ಶಾಪಶಸ್ತ್ರ ಜಲಾನಿಲಾನಲೈರ್ವಾ ದಕ್ಷಶಿರಶ್ಛೇದವದ್ ವಿಶೇಷ ನಿಮಿತ್ತೇನ ವಾ ಚೇತನಸ್ಯಾನಾಶಾದಿತ್ಯರ್ಥಃ। ಏತೇನ, ನ ತ್ವೇವಾಹಂ ಜಾತುನಾಸಂ। ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ। ನೈನಂ ಛಿಂದಂತಿ ಶಸ್ತ್ರಾಣೀತ್ಯಾದಿ ಬಹುಗ್ರಂಥ ತಾತ್ಪರ್ಯ ಮುಕ್ತಂ ಭವತಿ।

ನಾಪಿ ತೃತೀಯಃ। ಅಭಿಮಾನ ಸಹಿತ ವಿಷಯ ಸಂಬಂಧಸ್ಯೈವ ಸುಖದುಃಖ ಪ್ರದತ್ವಸ್ಯಾನ್ವಯ ವ್ಯತಿರೇಕ ಸಿದ್ಧತ್ವಾತ್ ಬಾಂಧವಾದಿಷ್ವಭಿಮಾನಂ ಪರಿತ್ಯಜ್ಯ ತದ್ದರ್ಶನಾದಿ ನಿಮಿತ್ತಂ ದುಃಖಂ ಸೋಢವ್ಯಮಿತಿ ಮಾತ್ರಾ ಸ್ಪರ್ಶಾಸ್ತು ಕೌಂತೇಯೇತ್ಯತ್ರೋಕ್ತೇ ರಿತಿ ಭಾವಃ॥

ತದೇವಂ ಪ್ರಥಮಷಟ್ಕೇನ ಸ್ವವಿಹಿತವೃತ್ತ್ಯಾ ಭಗವದಾರಾಧನಂ ಕಾರ್ಯಮಿತಿ ಕರ್ಮಯೋಗಂ ಧ್ಯಾನಯೋಗಂ ಚ ನಿರೂಪ್ಯ ತದ್ ಭಕ್ತಿಪೂರ್ವಮನುಷ್ಠಿತ ಮೇವ ಜ್ಞಾನ ಸಾಧನಂ, ನಾನ್ಯಥಾ, ಅತೋ ಭಕ್ತ್ಯರ್ಥಂ ಭಗವನ್ಮಹಿಮೋಚ್ಯತೇ। ಮಯ್ಯಾಸಕ್ತಮನಾ ಇತಿ ಸಪ್ತಮೋಪಕ್ರಮೇ ಪ್ರತಿಜ್ಞಾಯ ಪಂಚದಶೇ ದ್ವಾವಿಮೌ ಪುರುಷೌ ಲೋಕ ಇತ್ಯಾದಿನಾ ತತ್ವಸಾರೋಪಸಂಹಾರಃ ಕೃತಃ। ತದಂತ ಗ್ರಂಥ ತಾತ್ಪರ್ಯ ಮಾಹ ಸೃಷ್ಟಿರಿತ್ಯಾದಿನಾ।

-ತಾಮ್ರಪರ್ಣೀಯ

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ (10.3)

ಇತ್ಯಾದಿ ಗೀತಾ ಶ್ಲೋಕಗಳಲ್ಲಿ ಹೇಳಿದ ಭಗವಂತನ ಸೃಷ್ಟಿಲಯಾದಿ ದೋಷ ದೂರತ್ವವು ಅವನಲ್ಲಿರುವ ಸ್ವಾತಂತ್ರ್ಯ ಗುಣ ಪ್ರಯುಕ್ತವಾಗಿದೆ, ಗುಣಪೂರ್ಣತ್ವಪ್ರಯುಕ್ತವಾಗಿದೆ. ಅದರಿಂದ,

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ

ಇತ್ಯಾದಿ ಗೀತೋಕ್ತವಾದ ಅದ್ವಿತೀಯತ್ವವೂ ಯುಕ್ತಿಯುಕ್ತವಾಗಿದೆ.

ಜ್ಞಾತೈಷಾಂ ನಿಧನಾದ್ಯಂ ಚ ಜೀವಾದೇರಸ್ವತಂತ್ರತಾಮ್ ।
ಅಸ್ವಾತಂತ್ರ್ಯಾನ್ನಿವೃತ್ತೌ ಚ ಮಾಮನುಸ್ಮರ ಯುದ್ಧ್ಯ ಚ ॥೯॥

ಈ ಬಾಂಧವರ ಮರಣಾದಿಗಳು ನನ್ನ ವಶವೆಂದು ತಿಳಿದು ಜೀವ ಜಡಗಳಿಗೆ ಅಸ್ವಾತಂತ್ರ್ಯವನ್ನೂ ತಿಳಿದು, ಯುದ್ಧದಿಂದ ಹಿಂತಿರುಗಲೂ ನೀನು ಅಸ್ವತಂತ್ರನಾದ್ದರಿಂದ, ಯುದ್ಧವನ್ನೇ ಮಾಡು. ಅದು ನನ್ನ ಪೂಜೆ ಎಂದು ನನ್ನನ್ನು ಸ್ಮರಿಸು.

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ
ಮಿಥ್ಯೈವ ವ್ಯವಸಾಯಸ್ತೇ ಪ್ರಕೃತಿಸ್ತಾಂ ನಿಯೋಕ್ಷ್ಯತಿ

ಇತ್ಯಾದಿ ಗೀತಾವಚನಗಳ ತಾತ್ಪರ್ಯ ಇಲ್ಲಿ ಉಕ್ತವಾಗಿದೆ.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸನ್ನ್ಯಸ್ಯ ಮತ್ಪರಾಃ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥೧೦॥
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥೧೧॥

ಯಾರು ಎಲ್ಲ ಕರ್ಮಗಳನ್ನೂ ನನ್ನಲ್ಲಿ ಪೂಜೆಯ ರೂಪದಿಂದ ಸಮರ್ಪಿಸಿ ನನ್ನನ್ನು ಅನ್ಯ ದೇವತೆಗಳಂತೆ ಕಾಣದೆ ಸರ್ವೋತ್ತಮನೆಂದು ಅನನ್ಯ ಯೋಗದಿಂದ ಧ್ಯಾನಿಸುತ್ತ ಉಪಾಸನೆ ಮಾಡುವರೋ ನನ್ನಲ್ಲಿ ನೆಟ್ಟ ಮನಸ್ಸಿನವರಾದ ಅವರಿಗೆ ನಾನು ಬೇಗನೆ ಮರಣದಿಂದ ಸಂಸಾರಸಾಗರದಿಂದ ಉದ್ಧಾರಕನೆನಿಸುತ್ತೇನೆ.

ಬೇರೆ ದೇವತೆಗಳಲ್ಲಿಯೂ ಭಕ್ತಿ ಬೇಕು. ಆದರೆ ಅವರು ಹರಿಯ ಪರಿವಾರದವರು, ಹರಿಯ ಅಧೀನರು ಎಂದು ಮಾತ್ರ, ಹೊರತು ಸ್ವತಂತ್ರರೆಂದು ತಿಳಿಯಬಾರದು. ಆಗ ಆ ಭಕ್ತಿ ಅನನ್ಯ ಯೋಗವೆನಿಸುತ್ತದೆ.

ಮೇಲಿನ ಎರಡೂ ಶ್ಲೋಕಗಳು ಗೀತಾ ಶ್ಲೋಕಗಳು (12-6, 7)

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥೧೨॥

ಅವ್ಯಕ್ತರೂಪನಾದ ನನ್ನಿಂದ ಈ ಎಲ್ಲ ಜಗತ್ತೂ ವ್ಯಾಪ್ತವಾಗಿದೆ. ಎಲ್ಲ ಚೇತನರೂ ನನ್ನನ್ನು ಆಶ್ರಯಿಸಿದ್ದಾರೆ.

'ನಾನು ಅವರಲ್ಲಿ ಆಶ್ರಯಿಸಿಕೊಂಡಿಲ್ಲ' ಎಂದರೆ, 'ನಾನು ಅವರೊಳಗೆ ಇದ್ದರೂ ಅವರು ನನಗೆ ಆಶ್ರಯರಲ್ಲ. ಮತ್ತು ಅವರ ಪುಣ್ಯಪಾಪಗಳು ನನಗೆ ಲೇಪವಾಗುವುದೂ ಇಲ್ಲ. ಅದರಿಂದ ನಾನು ಅವರಲ್ಲಿ ಇದ್ದೂ ಇಲ್ಲದಂತೆ' ಹೇಗೆ ನಾವು ಹಾಕಿಕೊಳ್ಳುವ ಅಂಗಿಗೆ ಒಳಗಿರುವ ನಾವೇ ಆಧಾರವೋ, ಆನೆ ಕುದುರೆ ವೇಷದವರು ಧರಿಸುವ ಆ ವೇಷಗಳಿಗೆ ಒಳಗಿರುವ ವ್ಯಕ್ತಿಗಳೇ ಆಧಾರವೋ, ಹಾಗೆ ಜೀವರೊಳಗಿರುವ ಹರಿಯೆ ಜೀವರಿಗೆ ಆಧಾರ. ಹರಿಗೆ ಜೀವರು ಆಧಾರರಲ್ಲ.[1]

ಸುಪೂರ್ಣ ಸತ್ಸರ್ವಗುಣದೇಹೋಽಹಂ ಸರ್ವದಾ ಪ್ರಭುಃ ।
ಅಸ್ಪೃಷ್ಟಾಖಿಲದೋಷೈಕನಿತ್ಯಸತ್ತನುರವ್ಯಯಃ ॥೧೩॥

ಇತ್ಯುಕ್ತೋ ವಾಸವಿಃ ಪ್ರಾಹ ವ್ಯಾಪ್ತಿಂ ತೇ ದರ್ಶಯೇಶ ಮೇ ॥೧೪॥

ಪರಿಪೂರ್ಣ ಸದ್ಗುಣಗಳೆ ಸ್ವರೂಪ ದೇಹವಾಗಿ ಉಳ್ಳವನು ನಾನು ಸದಾ ಸರ್ವಶಕ್ತ. ಎಲ್ಲ ದೋಷಗಳಿಂದ ದೂರವಾದ ನಿತ್ಯವಾದ ಉತ್ತಮ ಶರೀರ ಉಳ್ಳವನು. ನಾಶ ರಹಿತ. ಹೀಗೆ ಶ್ರೀಕೃಷ್ಣನುಡಿದಾಗ ಅರ್ಜುನನೆಂದ, 'ಪ್ರಭು, ನೀನು ನಿನ್ನ ವ್ಯಾಪ್ತಿಯನ್ನು ತೋರಿಸು.'

ಅಥ ದಿವ್ಯದೃಶಂ ತಸ್ಯ ದತ್ತ್ವಾ ವ್ಯಾಪ್ತಂ ನಿಜಂ ವಪುಃ ।
ದೇಶತಃ ಕಾಲತಶ್ಚೈವ ಪೂರ್ಣಂ ಸರ್ವಗುಣೈಃ ಸದಾ ।
ದರ್ಶಯಾಮಾಸ ಭಗವಾನ್ ಯಾವತ್ಯರ್ಜುನಯೋಗ್ಯತಾ ॥೧೫॥

ಆಗ ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ದಿವ್ಯ ದೃಷ್ಟಿ ನೀಡಿ ವ್ಯಾಪ್ತವಾದ, ದೇಶಕಾಲಗಳಿಂದಲೂ ಸಕಲ ಗುಣಗಳಿಂದಲೂ ಸದಾಪೂರ್ಣವೂ ಆದ ತನ್ನ ಶರೀರವನ್ನು ಅರ್ಜುನನ ಯೋಗ್ಯತೆ ಇದ್ದಷ್ಟು ತೋರಿದ.

---

1. ನಚಾಹಂ ತೇಷ್ವವಸ್ಥಿತ ಇತ್ಯತ್ರ ತೇಷು ಭೂತೇಷ್ವವಸ್ಥಿತೋಽಪ್ಯವಸ್ಥಿತೋ ನ। ತೇಷಾಂ ಮಾಂ ಪ್ರತ್ಯಾಧಾರತ್ವಾಭಾವಾತ್। ತತ್‌ಕೃತ ಪುಣ್ಯಪಾಪಾದಿ ಲೇಪಾಭಾವಾಚ್ಚ। ಯಥಾಂಗವೇಷ್ಟನಸ್ಯ ಅಂತಃಸ್ಥಿತ ಏವ ಪುರುಷ ಆಧಾರಃ, ಯಥಾ ವಾ ಕೃತ್ರಿಮ ಕರಿತುರಗಾದೇರದೃಶ್ಯತಯಾಂತಃಸ್ಥಿತ ಏವ ಪುರುಷ ಆಧಾರಃ, ಯಥಾ ಚ ದೇಹಾಂತಃಸ್ಥಿತ ಜೀವ ಏವಾನ್ವಯ ವ್ಯತಿರೇಕಾಭ್ಯಾಂ ಜಡದೇಹಸ್ಯ ಪ್ರವರ್ತಕಃ, ತಥಾಂತಃಸ್ಥಿತೋಽಪ್ಯಹಮೇವ ತೇಷಾಮಾಧಾರಃ। ನ ತು ತೇ ಮಮಾಧಾರಾ ಇತಿ ಭಾವಃ।

-ವಾದಿರಾಜೀಯ

ಭಗವಂತನ ವಿಶ್ವರೂಪನ್ನು ಬ್ರಹ್ಮ ಎಷ್ಟು ಕಂಡನೋ ಅದರ ನೂರನೆ ಒಂದು ಅಂಶದಷ್ಟು ರುದ್ರ ಕಂಡ. ಅದರ ನೂರನೆ ಒಂದು ಅಂಶದಷ್ಟು ಇಂದ್ರ ಕಂಡ. ಇಂದ್ರ ಎಷ್ಟು ಕಂಡನೋ ಅಷ್ಟು ಅರ್ಜುನನೂ ಕಂಡ. ಉಳಿದವರು ಕ್ರಮವಾಗಿ ಅದರ ನೂರನೆ ಒಂದು ಅಂಶದಷ್ಟು ಕಂಡರು ಎಂದು ಗೀತಾ ತಾತ್ಪರ್ಯ ಹೇಳಿದೆ. ಅದರಿಂದ ಅರ್ಜುನ ಬಹಳ ಸಾಧನಾನುಷ್ಠಾನದಿಂದ ಅಹಂಕಾರತತ್ತ್ವಾವರಣ ಪರ್ಯಂತ ವ್ಯಾಪ್ತವಾದ ಭಗವದ್ರೂಪವನ್ನು ಕಾಣ ಬಲ್ಲವನಾದರೂ ಅನಂತ ದೇಶ ವ್ಯಾಪ್ತವಾದ ಭಗವದ್ರೂಪದರ್ಶನವೂ ಒಮ್ಮೊಮ್ಮೆ ಆಗಬಹುದು ಎಂದು ವಿರೋಧೋದ್ಧಾರದಲ್ಲಿ ಹೇಳಿದೆ.[1]

ತತ್ಪ್ರಾರ್ಥಿತಃ ಪುನಃ ಕೃಷ್ಣಸ್ತದ್ ರೂಪಂ ಲೋಕಮಾನತಃ ।
ಪೂರ್ವವದ್ ದರ್ಶಯಾಮಾಸ ಪುನಶ್ಚೈನಮಶಿಕ್ಷಯತ್ ॥೧೬॥
ಜ್ಞಾನಜ್ಞೇಯಪ್ರಕೃತ್ಯಾದಿ ಜ್ಞಾಪಯನ್ ಪುರುಷೋತ್ತಮಃ ।
ತೇನಾನುಶಿಷ್ಟಃ ಪಾರ್ಥಸ್ತು ಸಶರಂ ಧನುರಾದದೇ ॥೧೭॥

ಅರ್ಜುನನಿಂದ ಪ್ರಾರ್ಥಿತನಾದ ಪುರುಷೋತ್ತಮ ಶ್ರೀಕೃಷ್ಣ ಪುನಃ ಅವನ ರೂಪವನ್ನು ಲೋಕದೃಷ್ಟಿಗನುಸಾರ ಹಿಂದಿನಂತೆ ಮಾಡಿ ತೋರಿಸಿದ. ಪುನಃ ಅರ್ಜುನನಿಗೆ ಜ್ಞಾನಜ್ಞೇಯ ಸ್ವಭಾವ ಯೋಗ್ಯತಾದಿಗಳನ್ನು ತಿಳಿಸುತ್ತ ಯುದ್ಧಮಾಡೆಂದು ಉಪದೇಶಿಸಿದ. ಅವನಿಂದ ಉಪದೇಶ ಹೊಂದಿದ ಅರ್ಜುನ ಧನುರ್ಬಾಣಗಳನ್ನು ಎತ್ತಿಕೊಂಡ.

ಸ್ವಭಾವ ಯೋಗ್ಯತೆ ಎಂದರೆ ಸಾತ್ವಿಕ ರಾಜಸ ತಾಮಸ ಎಂಬ ತ್ರಿವಿಧ ಸ್ವಭಾವ.[2] 'ಹಿಂದಿನಂತೆ' ಎಂದರೆ ಲೋಕದೃಷ್ಟಿಯಿಂದ ಹಿಂದಿನಂತೆ ಹೊರತು ವಾಸ್ತವದೃಷ್ಟಿಯಿಂದಲ್ಲ. ವಾಸ್ತವದಲ್ಲಿ ಹಿಂದೆಯೂ ಕೃಷ್ಣನ ರೂಪ ಸರ್ವವ್ಯಾಪ್ತವಾಗಿತ್ತು. ಬ್ರಹ್ಮಾದಿಗಳು ಹಾಗೇ ಕಾಣುತ್ತಿದ್ದರು.[3]

'ತೇನೈವ ರೂಪೇಣ ಚತುರ್ಭುಜೇನ' (11.46)

---

1. ವಿಶ್ವರೂಪಂ ಭಗವತೋ ಬ್ರಹ್ಮಾಪಶ್ಯಚ್ಚತುರ್ಮುಖಃ। ತಚ್ಚತಾಂಶೇನ ರುದ್ರಸ್ತು ತಚ್ಚತಾಂಶೇನ ವಾಸವಃ। ಯಥೇಂದ್ರೇಣ ಪುರಾ ದೃಷ್ಟಂ ಅಪಶ್ಯತ್ ಸೋಽರ್ಜುನೋಽಪಿತು। ತದನ್ಯೇ ತು ಕ್ರಮೇಣೈವ ತಚ್ಚತಾಂಶಾದಿದರ್ಶನಃ ಇತಿ ಗೀತಾತಾತ್ಪರ್ಯೋದಾಹೃತ ಪ್ರಮಾಣಾನುಸಾರೇಣ ಯಾವತ್ಯರ್ಜುನ ಯೋಗ್ಯತಾ ತಾವದ್ ದರ್ಶಯಾಮಾಸೇತ್ಯರ್ಥಃ। ಬಹುಸಾಹಸ್ರವರ್ಷೇಣ ಮಹತ್ತತ್ತ್ವಂ ಕ್ವಚಿತ್ ಕ್ವಚಿತ್ ಇತ್ಯುಕ್ತರೀತ್ಯಾ ಬಹುಸಾಧನ ವಶೇನಾಹಂಕಾರವ್ಯಾಪ್ತದರ್ಶಿನೋಽಪಿ ಅನಂತ ದೇಶವ್ಯಾಪ್ತ ಭಗವದ್ ದರ್ಶನಂ ಕದಾಚಿದವಿರುದ್ಧಂ। ವಿವೃತಂ ಚೈತದ್ ವಿರೋಧೋದ್ಧಾರೇ। -ತಾಮ್ರಪರ್ಣೀಯ

2. ಪ್ರಕೃತಿಃ ಸ್ವಭಾವೋ ಯೋಗ್ಯತೇತಿ ಯಾವತ್। ತಾಂ ಜ್ಞಾಪಯನ್। ಸಾತ್ವಿಕ ರಾಜಸ ತಾಮಸ ಭೇದೇನ ತ್ರಿವಿಧಾಂ ಜ್ಞಾಪಯನ್॥ -ವಾದಿರಾಜೀಯ

3. ಪೂರ್ವಮಪಿ ವ್ಯಾಪ್ತಿ ಸದ್ಭಾವಾತ್ ಬ್ರಹ್ಮಾದೀನಾಂ ತದ್ದರ್ಶನ ಭಾವಾಚ್ಚೋಕ್ತಂ ಲೋಕಮಾನತ ಇತಿ। ಲೋಕದೃಷ್ಟ್ಯನುಸಾರೇಣೇತ್ಯರ್ಥಃ। -ತಾಮ್ರಪರ್ಣೀಯ

ಎಂಬ ಗೀತಾವಚನದ ತಾತ್ಪರ್ಯ 'ಹಿಂದಿನಂತೆ' ಎಂದು. ಅಂದರೆ 'ತಮದ್ಭುತಂ ಬಾಲಕಮಂಬುಜೇಕ್ಷಣಂ ಚತುರ್ಭುಜಂ' ಎಂದು ಹಿಂದೆ ಅವತಾರ ಕಾಲದಲ್ಲಿ ತೋರಿದಂತೆ ಚತುರ್ಭುಜರೂಪನಾಗು. ಅಥವಾ ಲೋಕದೃಷ್ಟ್ಯನುಸಾರವಾಗಿ ದ್ವಿಭುಜರೂಪವನ್ನಾದರೂ ತೋರು. ಈ ವಿಶ್ವರೂಪವನ್ನು ಮಾತ್ರ ಉಪಸಂಹರಿಸು.[1]

ಮೊದಲನೆ ದಿನದ ಯುದ್ಧ

ಅಥ ವ್ಯೂಢೇಷ್ವನೀಕೇಷು ನದನ್ ವಾಯುಸುತೋಽಭ್ಯಯಾತ್ ।
ಸಮಿತಿಂ ಧಾರ್ತರಾಷ್ಟ್ರಾಣಾಂ ತೇ ತಂ ಸರ್ವೇನ್ಯವಾರಯನ್ ॥೧೮॥

ಬಳಿಕ ಸೈನ್ಯಗಳು ಯುದ್ಧಕ್ಕೆ ತೊಡಗಿದಾಗ ಭೀಮ ಘರ್ಜಿಸುತ್ತ ಕೌರವರ ಸೈನ್ಯವನ್ನು ಆಕ್ರಮಿಸಿದ. ಅವರು ಅವನನ್ನು ಇದಿರಿಸಿದರು.

ಸಸೃಜುಃ ಶರವೃಷ್ಟಿಂ ಚ ಭೀಮಸೇನಸ್ಯ ಮೂರ್ಧನಿ ।
ಕ್ಷಿಪ್ರಂ ನೈವ ಪ್ರಹರ್ತವ್ಯಂ ಜ್ಞಾತಿಷು ಪ್ರಹರತ್ಸ್ವಪಿ ।
ಇತ್ಯೇವಾಪ್ರಹರತ್ಯಸ್ಮಿನ್ ಶತ್ರುಭಿಃ ಶರವಿಕ್ಷತೇ ॥೧೯॥
ಅಮುಚನ್ ಧಾರ್ತರಾಷ್ಟ್ರೇಷು ಶಸ್ತ್ರವೃಷ್ಟಿಂ ದುರಾಸದಾಮ್ ।
ಸೌಭದ್ರಪ್ರಮುಖಾ ವೀರಾಃ ಸರ್ವೇ ಪಾಂಡುಸುತಾತ್ಮಜಾಃ ॥೨೦॥

ಕೌರವರು ಭೀಮನ ತಲೆಯ ಮೇಲೆ ಬಾಣಗಳ ಮಳೆಗರೆದರು. ಬಂಧುಗಳು ಹೊಡೆಯುತ್ತಿದ್ದರೂ ಪ್ರತಿಯಾಗಿ ಕೂಡಲೆ ಹೊಡೆಯಬಾರದೆಂದೇ ಭೀಮ ಹೊಡೆಯದೆ ನಿಂತು ಶತ್ರುಗಳ ಬಾಣಗಳಿಂದ ಜರ್ಜರಿತನಾಗದೇ ನಿಂತ. ಆಗ ಅಭಿಮನ್ಯು ಮುಂತಾದ ವೀರರಾದ ಎಲ್ಲ ಪಾಂಡವ ಪುತ್ರರೂ ಕೌರವರ ಮೇಲೆ ಸಹಿಸಲಸಾಧ್ಯವಾದ ಬಾಣಗಳ ಮಳೆಗರೆದರು.

ಯುದ್ಧಾರಂಭದಲ್ಲಿ ಯುಧಿಷ್ಠಿರ ಕವಚವನ್ನು ತೆಗೆದು ರಥದಿಂದಿಳಿದು ಕಾಲುನಡಿಗೆಯಿಂದ ಭೀಷ್ಮ ದ್ರೋಣ ಕೃಪ ಶಲ್ಯರ ಪಾದಸ್ಪರ್ಶ ಮಾಡಿ ಯುದ್ಧಕ್ಕೆ ಅನುಜ್ಞೆ ಪಡೆದು ಕೌರವ ಪಕ್ಷದಿಂದ ನಮ್ಮ ಪಕ್ಷಕ್ಕೆ ಯಾರಾದರೂ ಬರಲು ಬಯಸಿದರೆ ಈಗ ಬರಬಹುದೆಂದು ಘೋಷಿಸಿದ. ಆಗ ಯುಯುತ್ಸು

---

3. ತವ ಜನ್ಮಕಾಲೇ ಸ್ಥಿತಂ ಚತುರ್ಭುಜಂ ರೂಪಂ ಯುದ್ಧಾರಂಭ ಸಮಯಸ್ಥಿತಂ ದ್ವಿಭುಜಂ ವಾ ರೂಪಂ ಪ್ರದರ್ಶಯ, ನೇದಂ ಘೋರಂ ರೂಪಂ ಪ್ರದರ್ಶಯೇತಿ ತೇನೈವ ರೂಪೇಣ ಚತುರ್ಭುಜೇನೇ-ತ್ಯಸ್ಯಾರ್ಥತ್ವಾತ್ 'ನನು ಚತುರ್ಭುಜಂ ರೂಪ ಪ್ರದರ್ಶಯೇತಿ ಪ್ರಾರ್ಥಿತತ್ವಾತ್ ದ್ವಿಭುಜ ರೂಪ ಪ್ರದರ್ಶನಂ ಕಥಮಿ'ತ್ಯೇತಚ್ಚೋದ್ಯಂ ನಿರಾಕೃತಂ ವೇದಿತವ್ಯಂ।

-ಪ್ರಮಾಣಸಂಗ್ರಹ

ಒಬ್ಬನೇ ಬಂದ. ಬಳಿಕ ಭೀಮ ಎಲ್ಲ ರಣವಾದ್ಯ ಘೋಷಗಳನ್ನೂ ವೀರರ ಗರ್ಜನೆಗಳನ್ನೂ ಮೀರಿಸುವಂತೆ ಸಿಂಹನಾದ ಮಾಡಿದ. ಕೌರವ ಸೈನ್ಯದ ಆನೆ ಕುದುರೆಗಳು ಆಗಲೇ ಭಯದಿಂದ ಮಲಮೂತ್ರ ವಿಸರ್ಜಿಸಿದುವು. ಭೀಮನ ಮೇಲೆ ಕೌರವರು ಬಾಣಗಳ ಮಳೆಗರೆದರು. ಭೀಮ ಶತ್ರುಗಳ ಮೇಲೆ ಕೈ ಮಾಡದೆ ಸುಮ್ಮನೆ ನಿಂತ. ಗಾಯಗೊಳ್ಳಲಿಲ್ಲ.

'ಶತ್ರುಭಿಃ ಪೀಡಿತೋ ಭೀಮೋ ನ ಕಿಂಚಿತ್ ಪ್ರತ್ಯಪದ್ಯತ'

ಶತ್ರುಗಳು ದಾಳಿ ಮಾಡಿ ಪೀಡಿಸಿದಾಗ ಭೀಮನಿಗೆ ಏನು ಮಾಡಬೇಕೆಂದೇ ತೋಚದಂತಾಯಿತಂತೆ! ವಸ್ತುತಃ ಭೀಮನ ವಜ್ರಕಾಯಕ್ಕೇನೂ ಗಾಯವಾಗಲಿಲ್ಲ ಎಂದರ್ಥ. 'ಶರವಿಕ್ಷತೇ' ಎಂಬಲ್ಲಿ 'ವಿ' ಶಬ್ದ ನಕಾರಾರ್ಥಕ ಎಂದು ಸತ್ಯಾಭಿನವೀಯದಲ್ಲಿ ಹೇಳುವಂತೆ 'ವಿಕ್ಷತ' ಎಂದರೆ ಅಕ್ಷತ, ಗಾಯಗೊಳ್ಳಲಿಲ್ಲ. ಬಂಧುಗಳ ಮೇಲೆ ಬೇಗನೆ ಕೈಮಾಡಬಾರದೆಂದು ನಿಂತಿದ್ದ. ಇದನ್ನು ತಿಳಿಯದೆ ದ್ರೌಪದೀ ಪುತ್ರರು ಭೀಮನ ರಕ್ಷಣೆಗೆ ಧಾವಿಸಿದರು.

ಅಪೀಡಯಂಸ್ತಾನ್ ಶಸ್ತ್ರೌಘೈರ್ಧಾರ್ತರಾಷ್ಟ್ರಾಃ ಸಮಂತತಃ ।
ರರಕ್ಷ ತಾನ್ ವಾಯುಸುತೋ ವಿಸೃಜನ್ ಶರಸಂಚಯಾನ್ ॥ ೨೧ ॥
ತತ್ರ ಭೀಮಶರೈರ್ನುನ್ನಾ ಧಾರ್ತರಾಷ್ಟ್ರಾಃ ಸಮಂತತಃ ।
ಭಗ್ನಾಸ್ತಾನಥ ಗಾಂಗೇಯೋ ದಿವ್ಯಾಸ್ತ್ರವಿದಧಾರಯತ್ ॥ ೨೨ ॥
ಅಥ ದ್ವಂದ್ವಾನಿ ಯುದ್ಧಾನಿ ಭಭೂವುರ್ವಿಜಿಗೀಷತಾಮ್ ।
ದ್ರೋಣಪಾರ್ಷತಯೋಶ್ಚೈವ ಶೈನೇಯಕೃತವರ್ಮಣೋಃ ॥ ೨೩ ॥

ಅಭಿಮನ್ಯು ಮುಂತಾದವರನ್ನು ಕೌರವರು ಎಲ್ಲ ಕಡೆ ಶಸ್ತ್ರ ಸಮೂಹಗಳಿಂದ ಪೀಡಿಸಿದರು. ಅವರನ್ನು ಭೀಮನೆ ಬಾಣ ಸಮೂಹಗಳನ್ನೆಸೆಯುತ್ತ ರಕ್ಷಿಸಿದ. ಆಗ ಭೀಮನ ಬಾಣಗಳಿಂದ ಕೌರವರು ಎಲ್ಲಕಡೆ ಪಲಾಯನ ಮಾಡುವಂತಾಯಿತು. ಸೋತ ಅವರನ್ನು ದಿವ್ಯಾಸ್ತ್ರವೇತ್ತನಾದ ಭೀಷ್ಮ ಸ್ಥಿರವಾಗಿ ನಿಲ್ಲಿಸಿದ. ಬಳಿಕ ಜಯೇಚ್ಛುಗಳಾದ ವೀರರ ದ್ವಂದ್ವಯುದ್ಧಗಳು ನಡೆದುವು.

ಭೀಮ ತನ್ನ ಮೇಲೆ ಬಾಣಗಳ ಮಳೆ ಬೀಳುವುದನ್ನು ಸಹಿಸಿದ.
ಅಭಿಮನ್ಯು ಮುಂತಾದ ಬಾಲಕರ ಮೇಲೆ ಬೀಳುವುದನ್ನು ಸಹಿಸಲಿಲ್ಲ.

ದ್ವಂದ್ವ ಯುದ್ಧ

ದುಃಶಾಸನೇನ ವೀರಸ್ಯ ಮಾದ್ರೇಯಸ್ಯ ಯವೀಯಸಃ ।
ನಕುಲಸ್ಯ ವಿಕರ್ಣಸ್ಯ ಕಾರ್ಷ್ಣೇಯೈರ್ದುರ್ಮುಖಾದಿನಾಮ್ ॥ ೨೪ ॥

ವೃತ್ತೇ ದ್ವಂದ್ವಮಹಾಯುದ್ಧೇ ತತ್ರ ಧರ್ಮಜಪಕ್ಷಗಾಃ ।
ಜಿತಾ ಏನೈವ ಶೈನೇಯಂ ಸೋಽಜಯದ್ದೃದಿಕಾತ್ಮಜಮ್ ॥ ೨೫ ॥
ಅಥ ಭೀಷ್ಮದ್ರೋಣಮುಖೈರ್ಭಗದತ್ತಾದಿಭಿಸ್ತಥಾ ।
ವಿದ್ರಾವ್ಯಮಾಣಂ ಸ್ವಬಲಂ ಸ್ಥಾಪಯಾಮಾಸ ಮಾರುತಿಃ ॥ ೨೬ ॥
ದ್ರೋಣಂ ಚ ಭಗದತ್ತಂ ಚ ಕೃಪಂ ದುರ್ಯೋಧನಂ ತಥಾ ।
ಕೇವಲಂ ಬಾಹುವೀರ್ಯೇಣ ವ್ಯಜಯದ್ ಭೀಮವಿಕ್ರಮಃ ॥ ೨೭ ॥

ದ್ರೋಣ ದ್ರುಪದರಿಗೂ ಸಾತ್ಯಕಿ ಕೃತವರ್ಮರಿಗೂ ದುಃಶಾಸನ ಸಹದೇವರಿಗೂ ನಕುಲ ವಿಕರ್ಣರಿಗೂ ದ್ರೌಪದೀಪುತ್ರರು ದುರ್ಮುಖ ಮುಂತಾದವರಿಗೂ ಮಹಾ ದ್ವಂದ್ವ ಯುದ್ಧ ನಡೆಯಲು ಧರ್ಮರಾಜನ ಪಕ್ಷದವರು ಸಾತ್ಯಕಿ ಹೊರತಾಗಿ ಎಲ್ಲರೂ ಪರಾಜಿತರಾದರು. ಸಾತ್ಯಕಿ ಕೃತವರ್ಮನನ್ನು ಗೆದ್ದ. ಭಯಂಕರ ಪರಾಕ್ರಮಿಯಾದ ಭೀಮ ತನ್ನ ಸೈನ್ಯವನ್ನು ಭೀಷ್ಮ ದ್ರೋಣಾದಿಗಳೂ ಭಗದತ್ತಾದಿಗಳೂ ಓಡಿಸಿದಾಗ ತಡೆದು ನಿಲ್ಲಿಸಿದ. ದ್ರೋಣ ಭಗದತ್ತ ಕೃಪ ದುರ್ಯೋಧನರನ್ನು ಕೇವಲ ಬಾಹುಬಲದಿಂದ ಗೆದ್ದ.

ಮಹಾಭಾರತದಲ್ಲಿ ಈ ದ್ವಂದ್ವ ಯುದ್ಧಗಳು ವ್ಯತ್ಯಾಸವಾಗಿ ಕಾಣುತ್ತವೆ.
ಭೀಷ್ಮ - ಅರ್ಜುನ, ಸಾತ್ಯಕಿ - ಕೃತವರ್ಮ, ಅಭಿಮನ್ಯು - ಬೃಹದ್ಬಲ,
ಭೀಮ - ದುರ್ಯೋಧನ, ದುಃಶಾಸನ - ನಕುಲ, ದುರ್ಮುಖ - ಸಹದೇವ,
ಧರ್ಮರಾಜ - ಶಲ್ಯ, ದ್ರೋಣ - ಧೃಷ್ಟದ್ಯುಮ್ನ, ಬಾಹ್ಲೀಕ - ಧೃಷ್ಟಕೇತು,
ಅಲಂಬುಸ - ಘಟೋತ್ಕಚ, ಅಶ್ವತ್ಥಾಮ - ಶಿಖಂಡಿ, ಭಗದತ್ತ - ವಿರಾಟ,
ಕೃಪ - ಬೃಹತ್‌ಕ್ಷತ್ರ, ಜಯದ್ರಥ - ದ್ರುಪದ, ವಿಕರ್ಣ - ಸುತಸೋಮ,
ಶಕುನಿ - ಪ್ರತಿವಿಂಧ್ಯ, ಈ ಹದಿನಾರು ಪ್ರಧಾನ ದ್ವಂದ್ವಂಗಳಲ್ಲಿ ಐದು ದ್ವಂದ್ವಗಳನ್ನು ಮಾತ್ರ ನಿರ್ಣಯ ಹೇಳಿದೆ. ಅವುಗಳಲ್ಲಿ ಸಾತ್ಯಕಿ ಕೃತವರ್ಮರ ದ್ವಂದ್ವ ಒಂದು ಹೊರತು ಇನ್ನೆಲ್ಲ ನಾಲ್ಕೂ ದ್ವಂದ್ವಗಳು ವ್ಯತ್ಯಾಸವಾಗಿವೆ. ಪ್ರಚಲಿತ ಪಾಠ ಸರಿ ಇಲ್ಲವೆಂದೇ ಸಮಾಧಾನ ಹೇಳಬೇಕು.

ಹತ್ವೋತ್ತರಂ ಮದ್ರರಾಜೋ ವ್ಯದ್ರಾವಯದನೀಕಿನೀಮ್ ॥ ೨೮ ॥
ಅಥ ಭೀಷ್ಮಮುದೀರ್ಣಾಸ್ತ್ರಂ ದ್ರಾವಯಂತಂ ವರೂಥಿನೀಮ್ ।
ಸಸೌಮದತ್ತಿಂ ಸೌಭದ್ರಸಹಾಯೋಽರ್ಜುನ ಆಸದತ್ ॥ ೨೯ ॥
ಸೌಭದ್ರಂ ತತ್ರ ವಿಕ್ರಾಂತಮತೀತ್ಯ ದ್ಯುಸರಿತ್ಸುತಃ ।
ದ್ರಾವಯಾಮಾಸ ಪಾಂಚಾಲಾನ್ ಪಶ್ಯತಃ ಸವ್ಯಸಾಚಿನಃ ॥ ೩೦ ॥

ಶಲ್ಯ ಉತ್ತರ ಕುಮಾರನನ್ನು ಕೊಂದು ಸೇನೆಯನ್ನು ಓಡಿಸಿದ. ಬಳಿಕ ಮಹಾ ಅಸ್ತ್ರಗಳನ್ನು ಪ್ರಯೋಗಿಸಿ ಸೈನ್ಯವನ್ನು ಅಟ್ಟುತ್ತಿದ್ದ ಭೀಷ್ಮನನ್ನೂ ಸೌಮದತ್ತಿಯನ್ನೂ ಅಭಿಮನ್ಯು ಸಮೇತನಾದ ಅರ್ಜುನ ಇದಿರಿಸಿದ. ಪರಾಕ್ರಮ ತೋರುತ್ತಿದ್ದ ಅಭಿಮನ್ಯುವನ್ನು ಬಿಟ್ಟು ಭೀಷ್ಮ,

ಅರ್ಜುನ ನೋಡುತ್ತಿದ್ದಂತೆಯೆ, ಪಾಂಚಾಲರನ್ನು ಓಡಿಸಿದ.

ಉತ್ತರಕುಮಾರ ಆನೆಯ ಮೇಲೆ ಕುಳಿತು ಶಲ್ಯನ ರಥವನ್ನು ಆಕ್ರಮಿಸಿದ. ಆನೆ ಶಲ್ಯನ ನಾಲ್ಕೂ ಕುದುರೆಗಳನ್ನು ಕೊಂದಿತು. ಆಗ ಶಲ್ಯ ಶಕ್ತ್ಯಾಯುಧದಿಂದ ಉತ್ತರನನ್ನೂ ಖಡ್ಗದಿಂದ ಅವನ ಆನೆಯನ್ನೂ ವಧಿಸಿದ. ಅಭಿಮನ್ಯು ಭೀಷ್ಮನ ಮುಂದೆ ದೇವತೆಗಳೂ ನೋಡಿ ಸಂತುಷ್ಟರಾಗುವಂತೆ ಕೈಚಳಕ ತೋರುತ್ತಿದ್ದ. ಅರ್ಜುನ ನೋಡುತ್ತಿದ್ದ. ಆದರೆ ಉತ್ತರನ ವಧೆಯಿಂದ ಕುಪಿತನಾದ ಅವನ ಸೋದರ ಶ್ವೇತ ಭೀಷ್ಮನನ್ನು ಆಕ್ರಮಿಸಿದಾಗ ಭೀಷ್ಮ ಅವನನ್ನು ಬ್ರಹ್ಮಾಸ್ತ್ರದಿಂದ ವಧಿಸಿ ಪಾಂಚಾಲಸೇನೆಯನ್ನು ಓಡಿಸಿದ.

ತಸ್ಯ ವಿಕ್ರಮಮಾಲಕ್ಷ್ಯ ಪಾರ್ಥಂ ತದ್ಗೌರವಾನುಗಮ್ ।
ದೃಷ್ಟ್ವಾ ಯುಧಿಷ್ಠಿರೋ ರಾಜಾ ಕ್ರುದ್ಧಃ ಸೇನಾಮಪಾಹರತ್ ॥೩೧॥

ರಾಜಾ ಯುಧಿಷ್ಠಿರ ಭೀಷ್ಮನ ಪರಾಕ್ರಮವನ್ನೂ ಅರ್ಜುನ ಭೀಷ್ಮನ ಬಗ್ಗೆ ಗೌರವ ಭಾವನೆಯನ್ನು ಅನುಸರಿಸಿದುದನ್ನೂ ಕಂಡು ಕುಪಿತನಾಗಿ ಸೈನ್ಯವನ್ನು ಹಿಂದೆ ಕರೆಸಿಕೊಂಡ.

ಎರಡನೆ ದಿನದ ಯುದ್ಧ - ಕರ್ಣ ರಣರಂಗಕ್ಕೆ ಕಾಲಿಡಲಿಲ್ಲ

ರಾತ್ರೌ ಯುಧಿಷ್ಠಿರಶ್ಚಿಂತಾಮಾಪ್ಯ ಪಾರ್ಥಂ ವ್ಯಗರ್ಹಯತ್ ।
ಸ ಕೃಷ್ಣಾದ್ಯೈಃ ಸಾಂತ್ವಿತಶ್ಚ ಪುನರ್ಯುದ್ಧಾಯ ನಿರ್ಯಯೌ ॥೩೨॥

ರಾತ್ರಿಯಲ್ಲಿ ಯುಧಿಷ್ಠಿರ ಚಿಂತೆಗೊಳಗಾಗಿ ಅರ್ಜುನನನ್ನು ತೆಗಳಿದ. ಕೃಷ್ಣ ಮುಂತಾದವರು ಸಮಾಧಾನ ಮಾಡಿದ ಬಳಿಕ ಪುನಃ ಯುದ್ಧಕ್ಕೆ ಹೊರಟ.

ಶ್ವೇತನನ್ನು ಭೀಷ್ಮ ವಧಿಸುವಾಗ ಅರ್ಜುನ ಭೀಷ್ಮರ ಮೇಲಿನ ಗೌರವ ಬುದ್ಧಿಯಿಂದ ಉಪೇಕ್ಷಿಸಿದುದು ಧರ್ಮರಾಜನನ್ನು ಚಿಂತೆಗೀಡು ಮಾಡಿತು. ಕೃಷ್ಣ ಹೇಳಿದ 'ನಿನ್ನ ಸೇನಾಪತಿ, ಧೃಷ್ಟದ್ಯುಮ್ನ, ನಾನು, ದ್ರುಪದ, ವಿರಾಟ ಮುಂತಾದವರೆಲ್ಲರೂ ಇದ್ದೇವೆ, ನಿನಗೆ ಜಯ ತಂದುಕೊಡುತ್ತೇವೆ.' ಮರುದಿನ ಬೆಳಿಗ್ಗೆ ಧೃಷ್ಟದ್ಯುಮ್ನ ಕ್ರೌಂಚಾರುಣವೆಂಬ ಅಭೇದ್ಯವಾದ ವ್ಯೂಹರಚಿಸಿ, ಎಲ್ಲರಿಗೂ ಮುಂದೆ ಅರ್ಜುನನನ್ನು ನಿಲ್ಲಿಸಿದ. ಆಗ ಯುಧಿಷ್ಠಿರ ಯುದ್ಧಕ್ಕೆ ಹೊರಟ.

ಏವಂ ಭೀಷ್ಮೋ ದಶಾಹಾನಿ ಸೇನಾಪತ್ಯಂ ಚಕಾರ ಹ ।
ಕೃತ್ವಾಽಪಿ ಪಾಂಡವೈರ್ಯುದ್ಧಂ ತತ್ ಕರ್ತುಮಕೃತೋಪಮಮ್ ॥೩೩॥
ಕರ್ಣೋಽರ್ಧರಥ ಇತ್ಯುಕ್ತ್ವಾ ತಾವದ್ ಯುದ್ಧಾತ್ ಪ್ರಯಾಪಿತಃ ।
ಯಾವತ್ ತ್ವಂ ಯೋತ್ಸ್ಯಸೇ ತಾವನ್ನ ಯೋತ್ಸ್ಯಾಮೀತಿ ನಿರ್ಗತೇ ॥೩೪॥

ಕರ್ಣೇಽಯುತರಥಾನಾಂ ಸ ನಿತ್ಯಶೋ ವಧಮಾಹವೇ ।
ಪ್ರತಿಜಜ್ಞೇಽಕರೋತ್ ತಚ್ಚ ಪುನಶ್ಚಾಸ್ತ್ರವಿದಾಂ ವರಃ ॥ ೩೫ ॥

ಹೀಗೆ ಭೀಷ್ಮ ಹತ್ತು ದಿನವೂ ಸೇನಾಧಿಪತ್ಯ ನಿರ್ವಹಿಸಿದ ತಾನು ಏಕಾಂಗಿಯಾಗಿ ಪಾಂಡವರೊಡನೆ ಯುದ್ಧಮಾಡಿ ಅದನ್ನು ಅನುಪಮವಾಗಿಸುವುದಕ್ಕಾಗಿ ಕರ್ಣನನ್ನು ಅರ್ಧರಥನೆಂದು ನಿಂದಿಸಿ ರಣರಂಗದಿಂದ ಹೊರಗೆ ಮಾಡಿದ್ದ. ನೀನು ಯುದ್ಧ ಮಾಡುವಷ್ಟು ಕಾಲ ನಾನು ಯುದ್ಧ ಮಾಡೆನೆನ್ನುತ್ತ ಕರ್ಣ ಹೊರಟುಹೋದಾಗ ಭೀಷ್ಮ ತಾನು ಪ್ರತಿದಿನ ಹತ್ತು ಸಾವಿರ ರಥಿಕರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದ. ಅದನ್ನು ನಡೆಸಿಯೂ ಕೊಟ್ಟ, ಮಾತ್ರವಲ್ಲದೆ ಇನ್ನೂ ಹೆಚ್ಚು ಯೋಧರನ್ನು ವಧಿಸಿದ, ಅಸ್ತ್ರವೇತ್ತರಲ್ಲಿ ಅಗ್ರಗಣ್ಯನಾದ ಭೀಷ್ಮ.

ಏಕಾಕಿಯಾಗಿ ಹತ್ತುಸಾವಿರ ಬಿಲ್ಲುಗಾರರೊಂದಿಗೆ ಹೋರಾಡಬಲ್ಲ ಶಸ್ತ್ರಶಾಸ್ತ್ರಪ್ರವೀಣ ಮಹಾರಥನೆನಿಸುತ್ತಾನೆ. ಹತ್ತುಸಾವಿರವೆ ಅಲ್ಲದೆ ಇನ್ನೂ ಹೆಚ್ಚು ಅಸಂಖ್ಯ ಯೋಧರೊಡನೆ ಏಕಾಕಿಯಾಗಿ ಹೋರಾಡಬಲ್ಲವ ಅತಿರಥ. ಒಬ್ಬ ಬಿಲ್ಲಾರನೊಡನೆ ಹೋರಾಡಬಲ್ಲವ ರಥಿಕ. ಒಬ್ಬನೊಡನೆಯೂ ಸರಿಯಾಗಿ ಹೋರಾಡಲಾರದವನು ಅರ್ಧರಥ. ಕರ್ಣ ಇಂಥ ಅರ್ಧರಥನೆಂದು ಭೀಷ್ಮ ಹಳಿಯುತ್ತಾನೆ. ಅದಕ್ಕೆ ಅವನು ಕಾರಣ ಕೊಡುತ್ತಾನೆ. ಕರ್ಣನಿಗೆ ಗುರು ಪರಶುರಾಮನ ಶಾಪ, ಒಬ್ಬ ಬ್ರಾಹ್ಮಣನ ಶಾಪಗಳಿರುವುದರಿಂದ ಮತ್ತು ಕವಚ ಕುಂಡಲರಹಿತನಾದ್ದರಿಂದ ಸ್ಪರ್ಧೆಯಿಂದ ಹೋರಾಡುವಾಗ ಸೋಲುತ್ತಾನೆ, ಅಂತ್ಯಕಾಲದಲ್ಲಿ ಅಸ್ತ್ರಮಂತ್ರಗಳೆಲ್ಲ ಮರೆತುಹೋಗುತ್ತವೆ, ಅವನ ರಥ ಚಕ್ರ ನೆಲದಲ್ಲಿ ಹೂತು ಹೋಗುತ್ತವೆ. ಇಂಥವನು ಹೇಗೆ ಎಲ್ಲರಂತೆ ಹೋರಾಡಬಲ್ಲ? ಎಂದು.

ವಸ್ತುತಃ ಭೀಷ್ಮ ದ್ರೋಣಾದಿಗಳು ಕರ್ಣನನ್ನು ವಿರೋಧಿಸಲು ಕಾರಣ

'ಏವಂ ಸುರಾಶ್ಚ ಪವನಸ್ಯ ವಶೇ ಯತೋಽತಃ' ।(5.48)

ಎಂದು ನಿರ್ಣಯದಲ್ಲಿ ಹಿಂದೆ ಹೇಳಿದೆ. ದೇವತೆಗಳೆಲ್ಲರೂ ಭೀಮನ ಪಕ್ಷ ಹಿಡಿದರು. ಭೀಷ್ಮದ್ರೋಣರು ವಿರುದ್ಧಪಕ್ಷದಲ್ಲಿ ನಿಂತಿದ್ದರೂ ಪ್ರತಿದಿನ ಬೆಳಿಗ್ಗೆ 'ಜಯೋಽಸ್ತು ಪಾಂಡುಪುತ್ರಾಣಾಂ' ಎಂದು ಹರಸುತ್ತಿದ್ದರು. ಕರ್ಣ ಭೀಮನ ಪಕ್ಷ ಬಿಟ್ಟವನಾದ್ದರಿಂದ ಅವನನ್ನು ಭೀಷ್ಮ ಬೈದು ದೂರ ಕಳಿಸಿದ. ಕರ್ಣ ಹೋಗುವಾಗ 'ಭೀಷ್ಮನೆ ಅರ್ಧರಥ. ಅವನ ಸೇನಾಧಿಪತ್ಯದಲ್ಲಿ ನಾನು ಎಷ್ಟು ಪರಾಕ್ರಮ ತೋರಿದರೂ ಅದರ ಯಶಸ್ಸು ಅವನಿಗೇ ಹೋಗುತ್ತದೆ. ಅದರಿಂದ ಅವನು ಯುದ್ಧ ಮಾಡುವಷ್ಟು ಕಾಲ ನಾನು ಯುದ್ಧ ಮಾಡಲಾರೆ' ಎಂದು ಹೇಳಿ ಹೊರಟುಹೋದ. ಭೀಷ್ಮನಿಗೆ ಅದುವೆ ಬೇಕಾಗಿತ್ತು. ಕರ್ಣ

ಯುದ್ಧ ಮಾಡುತ್ತಿದ್ದರೆ ಭೀಷ್ಮನಿಗೆ ತನ್ನ ಪರಾಕ್ರಮವನ್ನು ಮೆರೆಸಲು ಕಷ್ಟವಾಗುತ್ತಿತ್ತು. ಕರ್ಣ ತನ್ನನ್ನು ಅರ್ಧರಥನೆಂದು ಹೇಳಿದುದನ್ನು ಸುಳ್ಳಾಗಿಸಿ ತನ್ನ ಪರಾಕ್ರಮವನ್ನು ಅನುಪಮವಾಗಿಸುವುದಕ್ಕಾಗಿ ಪ್ರತಿದಿನ ಹತ್ತುಸಾವಿರ ರಥಿಕರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಅದಕ್ಕೂ ಹೆಚ್ಚೇ ರಥಿಕರನ್ನು ಕೊಂದ ಭೀಷ್ಮ.

ಕರ್ಣ ಭೀಷ್ಮರು ಪರಸ್ಪರ ಅರ್ಧರಥನೆಂದು ಮೂದಲಿಸಿದ್ದರಿಂದ ನಿರ್ಣಯದಲ್ಲಿ 'ಕರ್ಣ ಅರ್ಧರಥ ಎಂದು ಹೇಳಿ' ಎಂದಿದೆ. ಇದಕ್ಕೆ 'ಕರ್ಣ ಅರ್ಧರಥ' ನೆಂದು ಭೀಷ್ಮ ಹೇಳಿದನೆಂದೂ ಅನ್ವಯಿಸಬಹುದು, ಕರ್ಣ 'ಭೀಷ್ಮ ಅರ್ಧರಥ' ನೆಂದು ಹೇಳಿದನೆಂದೂ ಅನ್ವಯಿಸಬಹುದು. ಹಾಗೇ ಎರಡೂ ರೀತಿಯಿಂದ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.

ಸುಸಮರ್ಥಾವಪಿ ವಧೇ ತಸ್ಯ ಭೀಮಧನಂಜಯೌ ।
ಸ್ನೇಹೇನ ಯಂತ್ರಿತೌ ತಸ್ಯ ಗೌರವಾಚ್ಚಾನ್ವವರ್ತತಾಮ್ ॥೩೬॥

ಭೀಮಾರ್ಜುನರು ಭೀಷ್ಮನ ವಧೆಗೆ ಬಲುಸಮರ್ಥರೇ ಆದರೂ ಅವನ ಮೇಲಿನ ಪ್ರೀತಿಯಿಂದ ಬದ್ಧರಾದ್ದರಿಂದಲೂ ಪಿತಾಮಹನೆಂಬ ಗೌರವ ಭಾವನೆ ಇದ್ದುದರಿಂದಲೂ ಅವನಿಗೆ ಅನುಕೂಲರಾಗಿಯೆ ವರ್ತಿಸಿದರು.

ಬಭೂವುಸ್ತತ್ರ ಯುದ್ಧಾನಿ ಚಿತ್ರಾಣಿ ಸುಬಹೂನಿ ಚ ।
ತಾನ್ಯಂಬರೇ ವಿಮಾನಸ್ಥಾ ಬ್ರಹ್ಮರುದ್ರಪುರಸ್ಸರಾಃ ॥೩೭॥
ಅಪಶ್ಯನ್ ದೇವತಾಃ ಸರ್ವಾ ಗಂಧರ್ವಾಪ್ಸರಸೋಽಸುರಾಃ ॥೩೮॥

ಆಗ ಆಶ್ಚರ್ಯಕರವಾದ ಬಹಳ ಯುದ್ಧಗಳು ನಡೆದುವು. ಅವುಗಳನ್ನು ಆಕಾಶದಲ್ಲಿ ವಿಮಾನಗಳಲ್ಲಿ ಕುಳಿತು ಬ್ರಹ್ಮರುದ್ರಾದಿ ದೇವತೆಗಳೂ ಗಂಧರ್ವರೂ ಅಪ್ಸರೆಯರೂ ಅಸುರರೂ ಎಲ್ಲರೂ ನೋಡಿದರು.

ಧೃಷ್ಟದ್ಯುಮ್ನೋ ಮಹೇಷ್ವಾಸಃ ಪ್ರತಿವ್ಯೂಹ್ಯಾಽಪಗಾಸುತಮ್ ।
ಚಕ್ರೇ ಯುದ್ಧಾನಿ ಸುಬಹೂನ್ಯಜೇಯಃ ಶತ್ರುಭೀ ರಣೇ ॥೩೯॥

ಯುದ್ಧದಲ್ಲಿ ಶತ್ರುಗಳಿಂದ ಅಜೇಯನಾದ ಮಹಾ ಧನುರ್ಧಾರಿ ಧೃಷ್ಟದ್ಯುಮ್ನ ಭೀಷ್ಮನನ್ನು ಇದಿರಿಸಿ ಬಹಳ ಯುದ್ಧಗಳನ್ನು ಮಾಡಿದ.

ಮೂರನೆ ದಿವಸದ ಯುದ್ಧ - ಶ್ರೀಕೃಷ್ಣ ಚಕ್ರ ಎತ್ತಿದ

ತತ್ರೋದ್ದಧಾರ ಕೃಷ್ಣೋಽಪಿ ಫಲ್ಗುನಂ ಮೃದುಯೋಧಿನಮ್ ।
ದೃಷ್ಟ್ವಾ ಚಕ್ರಂ ತಥೋದ್ಯಮ್ಯ ಬಾಹುಂ ಭೀಷ್ಮಾಯ ಜಗ್ಮಿವಾನ್ ॥೪೦॥

ಮರುದಿನ ಅರ್ಜುನ ಮಿದುವಾಗಿ ಯುದ್ಧ ಮಾಡುತ್ತಿದ್ದುದನ್ನು ಕಂಡು ಕೃಷ್ಣ ಚಕ್ರವನ್ನೆತ್ತಿದ. ತೋಳೆತ್ತಿ ಭೀಷ್ಮನ ಕಡೆಗೆ ನಡೆದ.

ತೇನ ಸ್ತುತೋ ಗೃಹೀತಶ್ಚ ಫಲ್ಗುನೇನ ಪ್ರಣಮ್ಯ ಚ ।
ಪ್ರಾರ್ಥಿತೋ ರಥಮಾರೂಢಃ ಪುನಃ ಶಂಖಮಪೂರಯತ್ ॥೪೧॥

ಭೀಷ್ಮ ಸ್ತೋತ್ರ ಮಾಡಿದಾಗ ಅರ್ಜುನನೂ ನಮಿಸಿ ಕೈಹಿಡಿದು ಬೇಡಿಕೊಂಡಾಗ ತಿರುಗಿ ರಥವನ್ನೇರಿ ಶಂಖನಾದ ಮಾಡಿದ.

ಭೀಷ್ಮರ ಕೈಮೇಲಾದಾಗ ಕೃಷ್ಣ ಅರ್ಜುನನನ್ನು ಎಚ್ಚರಿಸಿದ. 'ಅಂದು ನೀನು ಭೀಷ್ಮದ್ರೋಣಾದಿಗಳಿಲ್ಲರನ್ನೂ ಕೊಲ್ಲುವ ಪ್ರತಿಜ್ಞೆ ಮಾಡಿರುವೆ. ಅದನ್ನು ನಡೆಸು' ಅರ್ಜುನನೆಂದ 'ನಮಗೆ ಗುರುಹಿರಿಯರ ಮೇಲೆ ಕೈಮಾಡುವ ಈ ಯುದ್ಧವೂ ಆ ವನವಾಸವೂ ಒಂದೇ ಎರಡರಲ್ಲೂ ಸುಖವಿಲ್ಲ. ಆದರೂ ನೀನು ಹೇಳಿದಂತೆ ಮಾಡುವೆ' ಹೀಗೆ ಹೇಳಿ ಭೀಷ್ಮನ ಬಿಲ್ಲುಗಳನ್ನು ಒಂದೊಂದಾಗಿ ಕತ್ತರಿಸಿದ. ಭೀಷ್ಮ ಸಂತುಷ್ಟನಾಗಿ ಭೇಷ್ ಭಲೆ ಎನ್ನುತ್ತ ಇನ್ನೂ ಬಲವಾಗಿ ಹೋರಾಡಿ ಪಾಂಡವ ಸೈನ್ಯವನ್ನು ನಾಶಮಾಡತೊಡಗಿದ. ಆಗಲೂ ಅರ್ಜುನ ಮಿದುವಾಗಿ ಯುದ್ಧಮಾಡಿದ. ಹಿಂದೆ ಭೀಷ್ಮ ದ್ರೋಣರು ಪಾಂಡವರಿಂದ ಮಾತು ತೆಗೆದುಕೊಂಡಿದ್ದರು-

ನಾಹಂ ಯುಧಿ ವಿಮೋಕ್ತವ್ಯೋ ನಾಪ್ಯಾಚಾರ್ಯಃ ಕಥಂಚನ

(ಭೀಷ್ಮ 88.41)

'ಯುದ್ಧದಲ್ಲಿ ನಮ್ಮನ್ನು ಹಿರಿಯರೆಂದು ಬಿಡಕೂಡದು' ಎಂದು. ಆದರೂ ಅರ್ಜುನ ಮಿದುವಾಗಿ ಯುದ್ಧ ಮಾಡುವುದನ್ನು ಕಂಡು ಕೃಷ್ಣ ಕುಪಿತನಾಗಿ ರಥದಿಂದಿಳಿದು ಬಾರುಕೋಲು ಹಿಡಿದೇ ತೋಳನ್ನೆತ್ತಿ ಸಿಂಹನಾದಗೈಯುತ್ತ ಭೀಷ್ಮನ ಬಳಿಗೆ ಧಾವಿಸಿದನೆಂದು ಮಹಾಭಾರತ (106.55) ಒಂಬತ್ತನೇ ದಿವಸದ ಯುದ್ಧವರ್ಣನೆಯಲ್ಲಿ ಹೇಳಿದೆ. ಮೂರನೇ ದಿವಸದ ಯುದ್ಧದಲ್ಲಿ ಮಾತ್ರ (59.88) ಚಕ್ರವನ್ನೆತ್ತಿದಂತೆ ವರ್ಣನೆ ಇದೆ. ಈ ಎರಡೂ ಪ್ರಸಂಗಗಳನ್ನು ಸೇರಿಸಿ 'ತತ್ರೋದ್ಧಾರ ಚಕ್ರಂ' 'ತಥೋದ್ಯಮ್ಯ ಬಾಹುಂ' 'ಚಕ್ರವನ್ನೆತ್ತಿದ' 'ತೋಳನ್ನೆತ್ತಿ ನಡೆದ' ಎಂದು ನಿರ್ಣಯ ಹೇಳಿದಂತೆ ಕಾಣುತ್ತದೆ. ವರದರಾಜೀಯದಲ್ಲಿ ಜನಾರ್ದನೀಯದಂತೆ 'ತೋಳನ್ನು, ಚಕ್ರಹಿಡಿದ ತೋಳನ್ನು' ಎಂದು ವ್ಯಾಖ್ಯಾನಿಸದೆ 'ತೋಳನ್ನೆತ್ತಿ' ಎಂದು ಮಾತ್ರ ವ್ಯಾಖ್ಯಾನಿಸಿದೆ. ಮೂರನೆ ದಿನದ ಯುದ್ಧದಲ್ಲಿ ಚಕ್ರಹಿಡಿದಿದ್ದ. ಒಂಬತ್ತನೇ ದಿನದಲ್ಲಿ 'ಭುಜಪ್ರಹರಣಃ'

ತೋಳೇ ಆಯುಧವಾಗಿತ್ತು. ಮೂರನೆ ದಿನ ಚಕ್ರಹಿಡಿದುದು ಭಾಗವತ ಹೇಳುವಂತೆ,

ಸ್ವನಿಯಮಮಪಹಾಯ ಮತ್ಪ್ರತಿಜ್ಞಾಂ
ಋತಮಧಿ ಕರ್ತುಮವಪ್ಲುತೋ ರಥಸ್ಥಃ (1.9.37)

ತಾನು ಕೃಷ್ಣನಿಂದ ಚಕ್ರ ಹಿಡಿಸುತ್ತೇನೆ ಎಂದು ಭೀಷ್ಮ ಮಾಡಿದ್ದ ಪ್ರತಿಜ್ಞೆಯನ್ನು ನಿರವೇರಿಸಿ ಭಕ್ತವಾತ್ಸಲ್ಯವನ್ನು ಮೆರೆಸುವುದಕ್ಕಾಗಿ. ಒಂಬತ್ತನೆ ದಿನ ತೋಳನ್ನೆತ್ತಿ ನಡೆದುದು. 'ಯುದ್ಧದಲ್ಲಿ ಭೀಷ್ಮನನ್ನಾಗಲಿ ದ್ರೋಣನನ್ನಾಗಲಿ ಹಿರಿಯರೆಂದು ಬಿಡಕೂಡದು' ಎಂದು ಪಾಂಡವರಿಂದ ಅವರೇ ಮಾತು ತೆಗೆದುಕೊಂಡಿದ್ದರಿಂದ ಅರ್ಜುನ ಆ ಮಾತನ್ನು ನಡೆಸಿಕೊಡಲಿ ಎಂದು. ಅರ್ಜುನ ಮೃದುವಾಗಿ ಹೋರಾಡಿದರೆ ಭೀಷ್ಮ ತೋರುವ ಪರಾಕ್ರಮಕ್ಕೆ ಏನೂ ಬೆಲೆ ಇಲ್ಲವಾಗುತ್ತದೆ ಎಂದು.

ಕೃಷ್ಣ ರಥದಿಂದ ಕೆಳಗೆ ಧುಮುಕಿದಾಗ ಅರ್ಜುನ ಅವನ ಕೈಹಿಡಿದು ನಿಲ್ಲಿಸಲು ಯತ್ನಿಸಿದ. ಆದರೆ ಕೃಷ್ಣ ಅವನನ್ನೇ ಸೆಳೆದುಕೊಂಡು ಮುಂದೆ ನಡೆದು ತನ್ನ ಕೃಷ್ಣನಾಮವನ್ನು ಸಾರ್ಥಕ ಮಾಡಿಕೊಂಡ- 'ಕರ್ಷತೀತಿ ಕೃಷ್ಣಃ' ಸೆಳೆಯುವುದರಿಂದ ಕೃಷ್ಣನೆನಿಸುತ್ತಾನೆ ಕೃಷ್ಣ. ಬಳಿಕ ಕೃಷ್ಣ ಹತ್ತು ಹೆಜ್ಜೆ ಇಡುವಷ್ಟರಲ್ಲಿ ಅರ್ಜುನ ಕಾಲುಹಿಡಿದು ಹಿಂತಿರುಗಲು ಬೇಡಿದ. ಗಾಂಡೀವದ ಮೇಲೆ ಆಣೆಯಿಟ್ಟು 'ನಾನು ಭೀಷ್ಮನನ್ನು ಕೊಲ್ಲುವೆ' ನೆಂದ. ಆಗ ಕೃಷ್ಣ ಹಿಂತಿರುಗಿ ರಥವನ್ನೇರಿದ.

ಕುಮಾರವ್ಯಾಸ ಭಾರತದಲ್ಲಿ ಕೃಷ್ಣ ಭೀಷ್ಮನ ಪ್ರಾರ್ಥನೆಯಂತೆ ಹಿಂತಿರುಗಿ ರಥವೇರುತ್ತಾನೆ-

'ನೆಚ್ಚಿದಾಳಿನ ಭಿನ್ನಹಕೆ ಹರಿ
ಮೆಚ್ಚಿಮನದಲಿ ನಾಚಿ ಚಕ್ರವ
ಮುಚ್ಚಿದನು ಮುರಿದನು ಕಿರೀಟಿಯ ರಥದ ಹೊರೆಗಾಗಿ'
(ಭೀಷ್ಮ 6.46)

ಕೃಷ್ಣನನ್ನು ಕೆರಳಿಸಿಯೂ ತನ್ನನ್ನು ಕಾಪಾಡಿಕೊಂಡ ಭೀಷ್ಮನೆಂದು ಬ್ರಹ್ಮನಕ್ಕನು.

ತತೋ ಭೀಷ್ಮೋಽರ್ಜುನಶ್ಚೈವ ಶಸ್ತ್ರಾಸ್ತ್ರೈರಭ್ಯವರ್ಷತಾಮ್ ।
ಅಯತ್ನೇನ ಜಿತಶ್ಚೈವ ಫಲ್ಗುನೇನಾऽಪಗಾಸುತಃ ॥೪೨॥
ಅಯುತಾನಿ ಬಹೂನ್ಯಾಜೌ ರಥಾನಾಂ ನಿಜಘಾನ ಚ ।
ಜಿತಾಃ ಸೇನಾಪಹಾರಂ ಚ ಚಕ್ರುರ್ಭೀಷ್ಮಮುಖಾಸ್ತತಃ ॥೪೩॥

ಬಳಿಕ ಭೀಷ್ಮನೂ ಅರ್ಜುನನೂ ಪರಸ್ಪರ ಶಸ್ತ್ರಾಸ್ತ್ರಗಳ ಮಳೆ ಸುರಿಸಿದರು. ಅರ್ಜುನನಿಂದ ಭೀಷ್ಮ ಅಯತ್ನವಾಗಿ ಪರಾಜಿತನಾದರೂ ಅನೇಕ ಹತ್ತು ಸಾವಿರ ರಥಿಕರನ್ನು ಯುದ್ಧದಲ್ಲಿ ಸಂಹರಿಸಿದ. ಬಳಿಕ ಭೀಷ್ಮಾದಿಗಳು ಸೋತು ಸೈನ್ಯವನ್ನು ಶಿಬಿರಕ್ಕೆ ಕರೆಸಿಕೊಂಡರು.

ನಾಲ್ಕನೆ ದಿವಸದ ಯುದ್ಧ - ಇಪ್ಪತ್ತೈದು ಕೌರವರ ಸಂಹಾರ

ಕದಾಚಿದಗ್ರಗೋ ಭೀಮೋ ಭೀಷ್ಮದ್ರೋಣೌ ವಿಸಾರಥೀ ।
ಕೃತ್ವಾ ವಿದ್ರಾವ್ಯ ತಾನಶ್ವಾನ್ ಭಿತ್ವಾ ವ್ಯೂಹಂ ವಿವೇಶ ಹ ॥ ೪೪ ॥

ಒಮ್ಮೆ ಭೀಮಸೇನ ಯುದ್ಧದಲ್ಲಿ ಮುಂದೆ ಬಂದು ಭೀಷ್ಮದ್ರೋಣರನ್ನು ಸಾರಥಿ ರಹಿತರನ್ನಾಗಿ ಮಾಡಿ ಕುದುರೆಗಳನ್ನು ಓಡಿಸಿ ವ್ಯೂಹವನ್ನು ಭೇದಿಸಿ ಒಳಗೆ ಪ್ರವೇಶಿಸಿದ.

ಪುನಃ ಸಂಸ್ಥಾಪಿತರಥೌ ವಿಜಿತ್ಯಾಯತ್ನತೋ ಬಲೀ ।
ಯತಮಾನೌ ಮಹೇಷ್ವಾಸೌ ಧಾರ್ತರಾಷ್ಟ್ರಾನ್ ಜಘಾನ ಹ ॥ ೪೫ ॥

ಮಹಾಧನುರ್ಧಾರಿಗಳಾದ ಭೀಷ್ಮ ದ್ರೋಣರು ಪುನಃ ರಥಗಳನ್ನು ನಿಲ್ಲಿಸಿಕೊಂಡು ಯತ್ನಿಸಿದರೂ ಭೀಮ ಅವರನ್ನು ಅನಾಯಾಸವಾಗಿ ಪರಾಭವಗೊಳಿಸಿ ಕೌರವರನ್ನು ಕೊಲ್ಲತೊಡಗಿದ.

ಪಂಚವಿಂಶದ್ಧತಾಸ್ತತ್ರ ಧಾರ್ತರಾಷ್ಟ್ರಾ ಮಹಾಬಲಾಃ ।
ಭಗದತ್ತದ್ರೌಣಿಕೃಪಶಲ್ಯದುರ್ಯೋಧನಾದಯಃ ॥ ೪೬ ॥
ಸರ್ವೇ ಜಿತಾ ದ್ರಾವಿತಾಶ್ಚ ಸೇನಾ ಚ ಬಹುಲಾ ಹತಾ ।
ವಿರಥೋ ವ್ಯಾಯುಧಶ್ಚೈವ ದೃಢವೇಧವಿಮೂರ್ಚ್ಛಿತಃ ॥ ೪೭ ॥
ಕೃತೋ ದುರ್ಯೋಧನಃ ಸರ್ವರಾಜ್ಞಾಂ ಭೀಮೇನ ಪಶ್ಯತಾಮ್ ।
ತತೋಽಪಹಾರಂ ಸೈನ್ಯಸ್ಯ ಜಿತಾಶ್ಚಕ್ರುಶ್ಚ ಕೌರವಾಃ ॥ ೪೮ ॥

ಆಗ ಎಲ್ಲ ರಾಜರೂ ನೋಡುತ್ತಿದ್ದಂತೆಯೆ ಇಪ್ಪತ್ತೈದು ಮಂದಿ ಮಹಾಬಲಿಷ್ಠರಾದ ಧೃತರಾಷ್ಟ್ರಪುತ್ರರು ಭೀಮನಿಂದ ಹತರಾದರು. ಭಗದತ್ತ ಅಶ್ವತ್ಥಾಮ ಕೃಪ ಶಲ್ಯ ದುರ್ಯೋಧನ ಮುಂತಾದವರೆಲ್ಲರೂ ಪರಾಜಿತರಾಗಿ ಪಲಾಯನಗೊಳಿಸಲ್ಪಟ್ಟರು. ಬಹಳ ಸೈನ್ಯವೂ ಹತವಾಯಿತು. ದುರ್ಯೋಧನನೂ ರಥ ಆಯುಧ ರಹಿತನಾಗಿ ತೀವ್ರ ಗಾಯಗಳಿಂದ ಮೂರ್ಛೆಗೊಳಿಸಲ್ಪಟ್ಟ. ಬಳಿಕ ಸೋತ ಕೌರವರು ಸೈನ್ಯವನ್ನು ಹಿಂದೆ ಕರೆಸಿಕೊಂಡರು.

ಭೀಮ ನಾಲಿಗೆಯಿಂದ ತುಟಿಗಳನ್ನು ಸವರಿಕೊಳ್ಳುತ್ತ ಪಶುಗಳ ಮಂದೆಯೊಳಗೆ ತೋಳ್ದದಂತೆ ನುಗ್ಗಿ ಬಾಣಗಳಿಂದ ಕೌರವರನ್ನು ಕೊಲ್ಲತೊಡಗಿದ. ಸೇನಾಪತಿ, ಜಲಸಂಧ, ಸುಷೇಣ, ಉಗ್ರ, ವೀರಬಾಹು, ಭೀಮ, ಭೀಮರಥ, ಸುಲೋಚನ ಮುಂತಾದ ಇಪ್ಪತ್ತೈದು ಮಂದಿ ಕೌರವರು ಹತರಾದರು.

ಕೃಷ್ಣಾರ್ಜುನರ ಮಹಿಮೆ

ದುರ್ಯೋಧನೋ ನಿಶಾಯಾಂ ಚ ಯಯೌ ಯತ್ರ ನದೀಸುತಃ ।
ಪೀಡಿತೋ ಭೀಮಬಾಣೈಶ್ಚ ಕ್ಷರದ್ಗಾತ್ರೋ ನನಾಮ ತಮ್ ।
ಉವಾಚ ಹೇತುನಾ ಕೇನ ವಯಂ ಜೀಯಾಮ ಸರ್ವದಾ ॥ ೪೯ ॥

ದುರ್ಯೋಧನ ಭೀಮನ ಬಾಣಗಳಿಂದ ಗಾಯಗೊಂಡು ಮೈನೆತ್ತರು ಸುರಿಸುತ್ತ ರಾತ್ರಿಯಲ್ಲಿ ಭೀಷ್ಮನಿದ್ದಲ್ಲಿಗೆ ಹೊರಟುಹೋದ. ಅವನನ್ನು ನಮಿಸಿದ. ಕೇಳಿದ, 'ನಾವು ಸದಾ ಜಯಶಾಲಿಗಳಾಗಬೇಕು, ಹೇಗೆ?'

ಪಾಂಡವಾಶ್ಚ ಜಯಂ ನಿತ್ಯಂ ಲಬ್ಧ್ವಾ ಹರ್ಷಮವಾಪ್ನುವನ್ ।
ತಮಾಹ ಭೀಷ್ಮಸ್ತೇಽಜೇಯಾ ದೇವಾಸ್ತೇ ಧರಣೇಂ ಗತಾಃ ।
ವಿಶೇಷತಃ ಕೇಶವೇನ ಪಾಲಿತಾಸ್ತತ್ಪ್ರಿಯಾಃ ಸದಾ ॥ ೫೦ ॥

'ಪಾಂಡವರು ನಿತ್ಯವೂ ಜಯಹೊಂದಿ ಹರ್ಷಪಟ್ಟಿದ್ದಾರೆ!' ಹೀಗೆ ದುರ್ಯೋಧನ ಹೇಳಿದಾಗ ಭೀಷ್ಮನೆಂದ, 'ಪಾಂಡವರು ಅಜೇಯರು. ಏಕೆಂದರೆ ಅವರು ಭೂಮಿಯಲ್ಲಿ ಅವತರಿಸಿದ ದೇವತೆಗಳು, ವಿಶೇಷವಾಗಿ ಶ್ರೀಕೃಷ್ಣನಿಂದ ರಕ್ಷಿತರಾಗಿರುವರು. ಸದಾ ಅವನಿಗೆ

ಪ್ರಿಯರು.

ಮಾನಸೋತ್ತರಶೈಲೇ ಹಿ ಪುರಾ ಬ್ರಹ್ಮಪುರಸ್ಸರಾಃ ।
ಸ್ಥಿತಾ ದೇವಾಸ್ತದಾಽಪಶ್ಯದ್ ಬ್ರಹ್ಮೈಕೋ ಹರಿಮಂಬರೇ ॥ ೫೧ ॥

ಹಿಂದೆ ಮಾನಸೋತ್ತರ ಪರ್ವತದಲ್ಲಿ ಬ್ರಹ್ಮಾದಿ ದೇವತೆಗಳು ಇದ್ದರು. ಆಗ ಬ್ರಹ್ಮನೊಬ್ಬನೆ ಆಕಾಶದಲ್ಲಿ ಹರಿಯನ್ನು ಕಂಡ.

ಸ್ತುತ್ವಾ ಸಂಪೂಜ್ಯ ಭೂಮೇಃ ಸ ಭಾರಾವತರಣಾಯ ತಮ್ ।
ಪ್ರಾರ್ಥಯಾಮಾಸ ತೇನೋಕ್ತಂ ದೇವಾನಾಮವದದ್ ವಿಭುಃ ॥ ೫೨ ॥

ಬ್ರಹ್ಮ ಶ್ರೀಹರಿಯನ್ನು ಸ್ತೋತ್ರಮಾಡಿ ಪೂಜಿಸಿ ಭೂ ಭಾರಹರಣ ಮಾಡಲು ಪ್ರಾರ್ಥಿಸಿದ. ಆಗ ಶ್ರೀಹರಿ ಹೇಳಿದುದನ್ನು ದೇವತೆಗಳಿಗೆ ತಿಳಿಸಿದ.

ಅಯಂ ನಾರಾಯಣೋ ದೇವಃ ಪೂರ್ಣಾನಂತಗುಣಾರ್ಣವಃ ।
ಆಜ್ಞಾಪಯತಿ ವಃ ಸರ್ವಾನ್ ಪ್ರಾದುರ್ಭಾವಾಯ ಭೂತಲೇ ॥ ೫೩ ॥
ಸ್ವಯಂ ಚ ದೇವಕೀಪುತ್ರೋ ಭವಿಷ್ಯತಿ ಜಗತ್ಪತಿಃ ॥ ೫೪ ॥

'ಪೂರ್ಣ ಅನಂತ ಗುಣಸಾಗರನಾದ ಈ ನಾರಾಯಣ ದೇವ ನಿಮ್ಮೆಲ್ಲರನ್ನೂ ಭೂತಳದಲ್ಲಿ ಅವತರಿಸಲು ಆಜ್ಞಾಪಿಸುತ್ತಿದ್ದಾನೆ. ಜಗದೊಡೆಯ ಸ್ವತಃ ದೇವಕೀಪುತ್ರನಾಗಿ ಅವತರಿಸುವನು.'

ಏವಂ ತೇನ ಸಮಾದಿಷ್ಟಾ ಧರ್ಮವಾಯ್ವಾದಯೋಽಖಿಲಾಃ ।
ಅಭವನ್ ಪಾಂಡವಾದ್ಯಾಸ್ತೇ ಸೇಂದ್ರಾಃ ಸಹಮರುದ್ಗಣಾಃ ॥ ೫೫ ॥

ಹೀಗೆ ಶ್ರೀಹರಿಯಿಂದ ಆಜ್ಞಪ್ತರಾದ ಯಮಧರ್ಮ, ವಾಯು ಮುಂತಾದವರೆಲ್ಲರೂ ಇಂದ್ರ ಮತ್ತು ಮರುದ್ಗಣ ಸಮೇತರಾಗಿ ಪಾಂಡವರು ಮುಂತಾದವರಾಗಿ ಅವತರಿಸಿದರು.

ಸ ಚ ನಾರಾಯಣೋ ದೇವೋ ದೇವಕೀನಂದನೋಽಭವತ್ ।
ತೇನೈತೇ ಪಾಲಿತಾಃ ಪಾರ್ಥಾ ಅಜೇಯಾ ದೇವಸರ್ಗಿಣಃ ।
ತಸ್ಮಾತ್ ತೈಃ ಸಂಧಿಮನ್ವಿಚ್ಛ ಯದೀಚ್ಛಸ್ಯಪರಾಭವಮ್ ॥ ೫೬ ॥

ಆ ನಾರಾಯಣ ದೇವ ದೇವಕೀಪುತ್ರನಾಗಿ ಅವತರಿಸಿದ್ದಾನೆ. ಅವನಿಂದ ರಕ್ಷಿತರಾದ ದೇವಾಂಶ ಸಂಭೂತರಾದ ಪಾಂಡವರು ಅಜೇಯರಾಗಿದ್ದಾರೆ. ಅದರಿಂದ ಸೋಲಾಗದಿರಲು ಬಯಸುವಿಯಾದರೆ ಅವರೊಡನೆ ಸಂಧಿಗೆ ಒಪ್ಪಿಕೊಳ್ಳು.

ಇತ್ಯುಕ್ತೋ ಡಂಭಬುದ್ಧ್ಯೈವ ನತ್ವಾ ವಿಷ್ಣುಂ ತತೋ ಯಯೌ ।
ಪ್ರಾತರ್ನಿರ್ಯಾತಯಾಮಾಸ ಸೇನಾಂ ಯುದ್ಧಾಯ ದುರ್ಮತಿಃ ॥ ೫೭ ॥

ಭೀಷ್ಮ ಹೀಗೆ ಹೇಳಿದಾಗ ದುರ್ಬುದ್ಧಿಯವನಾದ ದುರ್ಯೋಧನ ಡಾಂಭಿಕ ಭಾವನೆಯಿಂದಲೆ ಹರಿಯನ್ನು ನಮಿಸಿ ಅಲ್ಲಿಂದ ಹೊರಟು ಹೋದ. ಬೆಳಿಗ್ಗೆ ಯುದ್ಧಕ್ಕೆ ಸೇನೆಯನ್ನು ಹೊರಡಿಸಿದ.

ಪುಣ್ಯಂ ಶ್ರುತ್ವೈತದಾಖ್ಯಾನಂ ಮಹಾರಾಜ ಸುತಸ್ತವ।
ಕೇಶವಂ ಬಹುಮೇನೇ ಸ ಪಾಂಡವಾಂಶ್ಚ ಮಹಾರಥಾನ್

(ಭೀಷ್ಮ 68.13)

'ಭೀಷ್ಮನಿಂದ ಈ ಪುಣ್ಯ ಕಥೆಯನ್ನು ಕೇಳಿ ದುರ್ಯೋಧನ ಶ್ರೀಕೃಷ್ಣನಲ್ಲಿ ಮತ್ತು ಮಹಾರಥರಾದ ಪಾಂಡವರಲ್ಲಿ ಭಕ್ತಿ ಮಾಡಿದ.' ಎಂದು ಮಹಾಭಾರತ ಹೇಳುತ್ತಿದೆ. ಆದರೆ ಇದು ಕೇವಲ ಡಂಭಾಚಾರ. ಏಕೆಂದರೆ ಮರುದಿನ ಬೆಳಿಗ್ಗೆ ಸಂಧಿಮಾಡದೆ ಪಾಂಡವರೊಡನೆ ಯುದ್ಧಕ್ಕೆ ಹೊರಡುತ್ತಾನೆ.

ಐದನೇ ದಿನದ ಯುದ್ಧ - ಭೀಮನ ಪರಾಕ್ರಮ

ದಿವ್ಯೌಷಧೇನ ಭೀಷ್ಮಸ್ಯ ಭೂತ್ವಾ ಸ ನಿರುಜಸ್ತತಃ ।
ಭೀಷ್ಮಮಗ್ರೇ ನಿಧಾಯೈವ ಯಯೌ ಯುದ್ಧಾಯ ದಂಶಿತಃ ॥ ೫೮ ॥

ಭೀಷ್ಮನ ದಿವ್ಯೌಷಧ ಪ್ರಭಾವದಿಂದ ದುರ್ಯೋಧನ ನೋವಿಲ್ಲದವನಾಗಿ ಕವಚ ಧರಿಸಿ ಭೀಷ್ಮನನ್ನೇ ಮುಂದಿಟ್ಟುಕೊಂಡು ಯುದ್ಧಕ್ಕೆ ಹೊರಟ.

ತತ್ರಾಽಸೀದ್ ಸುಮಹದ್ ಯುದ್ಧಂ ಭೀಮಭೀಷ್ಮಾನುಯಾಯಿನಾಮ್ ।
ಪಾಂಡವಾನಾಂ ಕುರೂಣಾಂ ಚ ಶೂರಾಣಾಮನಿವರ್ತಿನಾಮ್ ॥ ೫೯ ॥

ಆಗ ಭೀಮ ಭೀಷ್ಮರ ಅನುಯಾಯಿಗಳಾದ, ಯುದ್ಧಕ್ಕೆ ಬೆನ್ನು ಹಾಕದ ಶೂರರಾದ ಪಾಂಡವರಿಗೂ ಕೌರವರಿಗೂ ಬಲು ದೊಡ್ಡ ಕಾಳಗ ನಡೆಯಿತು.

ಧೃಷ್ಟದ್ಯುಮ್ನಸ್ತತ್ರ ಭೀಮಾನುಯಾಯೀ
ದುರ್ಯೋಧನಸ್ಯಾವರಜೈಃ ಪ್ರಯುದ್ಧ್ಯನ್ ।
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ
ವಿಕರ್ಣಪೂರ್ವಾನಹನಚ್ಚ ಸೇನಾಮ್ ॥೬೦॥

ಆಗ ಭೀಮನ ಹಿಂಬಾಲಕನಾದ ಧೃಷ್ಟದ್ಯುಮ್ನ ದುರ್ಯೋಧನನ ತಮ್ಮಂದಿರೊಡನೆ ಹೋರಾಡುತ್ತ ಸಂಮೋಹನಾಸ್ತ್ರದಿಂದ ಮೂರ್ಛೆಗೊಳಿಸಿ ಸೈನ್ಯವನ್ನು ನಾಶಮಾಡಲು ತೊಡಗಿದ.

ತತೋ ದ್ರೋಣಸ್ತಾನ್ ಸಮುತ್ಥಾಪ್ಯ ಸರ್ವಾನ್
ವಿಜ್ಞಾನಾಸ್ತ್ರೇಣಾಽಸದತ್ ಪಾರ್ಷತಂ ಚ ।
ತಂ ಭೀಮಸೇನಃ ಸೂತಹೀನಂ ವಿಧಾಯ
ವ್ಯದ್ರಾವಯಚ್ಛತ್ರುಗಣಾನ್ ಶರೌಘೈಃ ॥೬೧॥

ಆಗ ದ್ರೋಣ ವಿಜ್ಞಾನಾಸ್ತ್ರದಿಂದ ಅವರೆಲ್ಲರನ್ನೂ ಎಬ್ಬಿಸಿ ಧೃಷ್ಟದ್ಯುಮ್ನನನ್ನು ಆಕ್ರಮಿಸಿದ. ಒಡನೆ ಭೀಮಸೇನ ಅವನನ್ನು ಸಾರಥಿ ರಹಿತನನ್ನಾಗಿ ಮಾಡಿ ಶತ್ರು ಸಮೂಹಗಳನ್ನು ಬಾಣ ಸಮೂಹಗಳಿಂದ ಓಡಿಸಿದ.

ಅಥಾಽಸದತ್ ಕೃತವರ್ಮಾ ರಥೇನ
ಧೃಷ್ಟದ್ಯುಮ್ನಂ ಸೋಽಭ್ಯಯಾತ್ ತಾವುಭೌ ಚ ।
ವವರ್ಷತುಃ ಶರವರ್ಷೈರಥೋಗ್ರೈ-
ಸ್ತತ್ರಾಕರೋದ್ ವಿರಥಂ ದ್ರೌಪದಿಸ್ತಮ್ ॥೬೨॥

ಬಳಿಕ ಕೃತವರ್ಮ ರಥದಿಂದ ಧೃಷ್ಟದ್ಯುಮ್ನನಿಗೆ ಇದಿರಾದ. ಧೃಷ್ಟದ್ಯುಮ್ನ ಅವನನ್ನು ಇದಿರಿಸಿದ. ಅವರಿಬ್ಬರೂ ಭಯಂಕರವಾದ ಬಾಣಗಳ ಮಳೆಗರೆದುಕೊಂಡರು. ಆಗ ಧೃಷ್ಟದ್ಯುಮ್ನ ಕೃತವರ್ಮನನ್ನು ರಥರಹಿತನನ್ನಾಗಿ ಮಾಡಿದ.

ತಸ್ಮಿನ್ ಜಿತೇ ರಥವೀರೇ ಸ್ವಯಂ ತಂ
ದುರ್ಯೋಧನಃ ಪಾರ್ಷತಮಾಸಸಾದ ।
ತಂ ಭೀಮಸೇನೋ ವಿರಥಾಯುಧಂ ಚ
ಕೃತ್ವಾ ಬಾಣೇನಾಹನಜ್ಜತ್ರುದೇಶೇ ॥೬೩॥

ರಥಿಕರಲ್ಲಿ ಶ್ರೇಷ್ಠನಾದ ಕೃತವರ್ಮ ಪರಾಜಿತನಾದಾಗ ದುರ್ಯೋಧನ ಸ್ವತಃ ಧೃಷ್ಟದ್ಯುಮ್ನನನ್ನು ಇದಿರಿಸಿದ. ಅವನನ್ನು ಭೀಮಸೇನ ರಥ ಆಯುಧ ರಹಿತನನ್ನಾಗಿ ಮಾಡಿ ಬಾಣದಿಂದ ಕುತ್ತಿಗೆ ಎದೆಗಳ ಮಧ್ಯದಲ್ಲಿ ಚೆನ್ನಾಗಿ ಹೊಡೆದ.

ವಿಮೂರ್ಛಿತಂ ತಂ ರುಧಿರೌಘಮುಚ್ಚೈ-
ರ್ವಮಂತಮಾಶು ಸ್ವರಥೇ ನಿಧಾಯ ।
ಕೃಪೋ ಯಯೌ ಮಾರುತಿರ್ಧಾರ್ತರಾಷ್ಟ್ರೀಂ
ವ್ಯದ್ರಾವಯತ್ ಪೃತನಾಂ ಬಾಣಪೂಗೈಃ ॥೬೪॥

ಮೂರ್ಛಿತನಾಗಿ ರಕ್ತಪ್ರವಾಹವನ್ನು ಕಾರುತ್ತಿದ್ದ ದುರ್ಯೋಧನನನ್ನು ಕೃಪ ಬೇಗನೆ ತನ್ನ ರಥದಲ್ಲಿರಿಸಿಕೊಂಡೊಯ್ದ. ಭೀಮಸೇನ ಕೌರವ ಸೇನೆಯನ್ನು ಬಾಣ ಪ್ರವಾಹಗಳಿಂದ ಅಟ್ಟಿದ.

ಅಥೇಂದ್ರಸೂನುಃ ಕೇಶವಪ್ರೇರಿತೇನ
ರಥೇನ ಶತ್ರೂನ್ ವಿಧಮನ್ ಶರೌಘೈಃ ।
ರಥಾನ್ ರಣೇ ಪಂಚವಿಂಶತ್ಸಹಸ್ರಾನ್
ನಿನಾಯ ವೈವಸ್ವತಸಾದನಾಯ ॥೬೫॥

ಬಳಿಕ ಕೃಷ್ಣ ನಡೆಸುತ್ತಿದ್ದ ರಥದಿಂದ ಅರ್ಜುನ ಯುದ್ಧದಲ್ಲಿ ಶತ್ರುಗಳನ್ನು ಬಾಣಪ್ರವಾಹಗಳಿಂದ ಹೊಡೆಯುತ್ತ ಇಪ್ಪತ್ತೈದು ಸಾವಿರ ರಥಿಕರನ್ನು ಯಮ ಸದನಕ್ಕೆ ಕಳಿಸಿದ.

ತಮನ್ವಯಾದ್ ಯುಯುಧಾನಃ ಸುಧನ್ವಾ
ವಿದ್ರಾವಯನ್ ಧಾರ್ತರಾಷ್ಟ್ರಸ್ಯ ಸೇನಾಮ್ ।
ತಮಭ್ಯಯಾತ್ ಸೌಮದತ್ತಿಸ್ತಥೋಚ್ಚೈ
ಸುಯುದ್ಧಮಾಸೀದತಿಭೈರವಾಸ್ತ್ರಮ್ ॥೬೬॥

ಅರ್ಜುನನ ಹಿಂದಿನಿಂದ ಒಳ್ಳೆಯ ಧನುಸ್ಸನ್ನು ಹಿಡಿದ ಸಾತ್ಯಕಿಯೂ ಕೌರವನ ಸೇನೆಯನ್ನು ಅಟ್ಟುತ್ತ ಬಂದ. ಅವನನ್ನು ಭೂರಿಶ್ರವ ಇದಿರಿಸಿದ. ಅವರಿಬ್ಬರೊಳಗೆ ಅತ್ಯಂತ ಭೀಕರ ಅಸ್ತ್ರಗಳಿಂದ ಯುಕ್ತವಾದ ಘೋರಯುದ್ಧ ನಡೆಯಿತು.

ಪುತ್ರಾನ್ ದಶಾಸ್ಯಾಕಶು ನಿಹತ್ಯ ವೀರಃ ಸ ಸಾತ್ಯಕೇಃ ಸೌಮದತ್ತಿಃ ಸಕಾಶೇ ।
ಸಮರ್ಪಯಾಮಾಸ ಶರೀರದಾರಣೈಃ ಶರೈರುಭೌ ತೌ ವಿರಥೌ ಚ ಚಕ್ರತುಃ ॥೬೭

ವೀರನಾದ ಭೂರಿಶ್ರವ ಸಾತ್ಯಕಿಯ ಕಣ್ಣಮುಂದೆಯೆ ಅವನ ಹತ್ತು ಮಕ್ಕಳನ್ನು ಕೊಂದು, ಶರೀರವನ್ನು ಸೀಳುವ ಆಯುಧಗಳಿಂದ ಅವನನ್ನೂ ಪೀಡಿಸಿದ. ಅವರಿಬ್ಬರೂ ಒಬ್ಬರನ್ನೊಬ್ಬರು ವಿರಥರನ್ನಾಗಿ ಮಾಡಿದರು.

ಅಥಾಸಿಪಾಣಿಂ ಯುಯುಧಾನಮಾಶು
ಮಹಾಸಿಹಸ್ತೇನ ಚ ಸೌಮದತ್ತಿನಾ ।
ಆಸಾದಿತಂ ವೀಕ್ಷ್ಯ ರಥಂ ಸ್ವಕೀಯ-
ಮಾರೋಪಯಾಮಾಸ ಸುತೋಽನಿಲಸ್ಯ ॥೬೮॥

ಬಳಿಕ ಖಡ್ಗಧಾರಿಯಾದ ಸಾತ್ಯಕಿಯನ್ನು ಮಹಾಖಡ್ಗಧಾರಿ ಭೂರಿಶ್ರವ ಆಕ್ರಮಿಸಿದುದನ್ನು ಕಂಡು ಭೀಮಸೇನ ಬೇಗನೆ ಸಾತ್ಯಕಿಯನ್ನು ತನ್ನ ರಥದಲ್ಲಿ ಏರಿಸಿಕೊಂಡ.

ಸುಯೋಧನಃ ಸೌಮದತ್ತಿಂ ಸ್ವಕೀಯ
ರಥೇ ವ್ಯವಸ್ಥಾಪ್ಯ ಚ ಭೀಮಸೇನಾತ್ ।
ಅಪಾದ್ರವದ್ ವಾಸವಿರ್ಭೀಷ್ಮಮಾಜೌ
ಸಮಾಸಸಾದಾಕಶು ಮಹೇಂದ್ರಕಲ್ಪಃ ॥೬೯॥

ದುರ್ಯೋಧನ ಭೂರಿಶ್ರವನನ್ನು ತನ್ನ ರಥದಲ್ಲಿ ಇರಿಸಿಕೊಂಡು ಭೀಮನನ್ನು ಇದಿರಿಸಲಾರದೆ ಪಲಾಯನ ಮಾಡಿದ. ದೇವೇಂದ್ರನಿಗೆ ಸಮಾನನಾದ ಅರ್ಜುನ ಯುದ್ಧದಲ್ಲಿ ಬೇಗನೆ ಭೀಷ್ಮನ ಬಳಿಗೆ ಬಂದ.

ಮಹಾಭಾರತ ಪ್ರಕಾರ ಸಾತ್ಯಕಿ ಭೂರಿಶ್ರವರ ಯುದ್ಧದೊಂದಿಗೆ (ಅಧ್ಯಾಯ 74) ಐದನೆ ದಿನದ ಯುದ್ಧ ಮುಗಿಯುತ್ತದೆ. ಮರುದಿನ ಭೀಷ್ಮಾರ್ಜುನರ ಯುದ್ಧ ನಡೆಯುತ್ತದೆ.

ಆರನೆ ದಿನದ ಯುದ್ಧ – ಭೀಷ್ಮ ಪರಾಜಯ

ಉಭೌ ಚ ತಾವಸ್ತ್ರವಿದಾಂ ಪ್ರಬರ್ಹೌ ಶರೈರ್ಮಹಾಶೀವಿಷಸನ್ನಿಕಾಶೈಃ ।
ತತಕ್ಷತುರ್ನಾಕಸದಾಂ ಸಮಕ್ಷಂ ಮಹಾಬಲೌ ಸಂಯತಿ ಜಾತದರ್ಪೌ ।೭೦

ಯುದ್ಧದಲ್ಲಿ ತಮ್ಮ ಸಾಮರ್ಥ್ಯದ ಮೇಲೆ ಹೆಮ್ಮೆಪಡುವ ಅಸ್ತ್ರವೇತ್ತರಲ್ಲಿ ಶ್ರೇಷ್ಠರಾದ ಮಹಾ ಬಲಾಶಾಲಿಗಳಾದ ಭೀಷ್ಮಾರ್ಜುನರು ಇಬ್ಬರೂ ದೇವತೆಗಳ ಸಮಕ್ಷಮದಲ್ಲಿ ಮಹಾಸರ್ಪ ಸದೃಶವಾದ ಬಾಣಗಳಿಂದ ಒಬ್ಬರನ್ನೊಬ್ಬರು ಗಾಯಗೊಳಿಸಿದರು.

ಸ್ವಬಾಹುವೀರ್ಯೇಣ ಜಿತಃ ಸ ಭೀಷ್ಮಃ
ಕಿರೀಟಿನಾ ಲೋಕಮಹಾರಥೇನ ।
ಸೇನಾಮಪಾಹೃತ್ಯ ಯಯೌ ನಿಶಾಯಾ-
ಮಾಸಾದಿತಾಯಾಮಥ ಪಾಂಡವಾಶ್ಚ ॥೭೧॥

ಲೋಕದಲ್ಲಿ ಮಹಾರಥಿಕನಾದ ಅರ್ಜುನನಿಂದ ಸ್ವಬಾಹುಬಲದಿಂದಲೆ ಪರಾಜಿತನಾದ ಆ ಭೀಷ್ಮ ಸೇನೆಯನ್ನು ಹಿಂದೆ ತೆಗೆದುಕೊಂಡು ಹೊರಟುಹೋದ. ಕತ್ತಲಾದ್ದರಿಂದ ಪಾಂಡವರೂ ಹಾಗೇ ಮಾಡಿದರು.

ಏಳನೇದಿನದ ಯುದ್ಧ – ಘಟೋತ್ಕಚನ ಪರಾಕ್ರಮ

ತತಃ ಪರೇದ್ಯುಃ ಪುನರೇವ ಭೀಮ
ಭೀಷ್ಮೌ ಪುರಸ್ಕೃತ್ಯ ಸಮೀಯತುಸ್ತೇ ।

ಸೇನೇ ತದಾ ಸಾರಥಿಹೀನಮಾಶು
ಭೀಷ್ಮಂ ಕೃತ್ವಾ ಮಾರುತಿರಭ್ಯಯಾತ್ ಪರಾನ್ ॥ ೭೨ ॥

ಬಳಿಕ ಮರುದಿನ ಪುನಃ ಭೀಮ ಭೀಷ್ಮರನ್ನು ಮುಂದೆ ಮಾಡಿಕೊಂಡು ಎರಡೂ ಸೈನ್ಯಗಳು ಇದಿರಾದುವು. ಆಗ ಭೀಮಸೇನ ಭೀಷ್ಮನನ್ನು ಬೇಗನೆ ಸಾರಥಿ ರಹಿತನನ್ನಾಗಿ ಮಾಡಿ ಶತ್ರುಗಳನ್ನು ಇದಿರಿಸಿದ.

ನಿಪಾತಿತಾಸ್ತೇನ ರಥೇಭವಾಜಿನಃ
ಪ್ರದುದ್ರುವುಶ್ಚಾವಶಿಷ್ಟಾಃ ಸಮಸ್ತಾಃ ।
ದುರ್ಯೋಧನಾದ್ಯೇಷು ಪರಾಜಿತೇಷು
ಭೀಷ್ಮದ್ರೋಣದ್ರೌಣಿಪುರಸ್ಸರೇಷು ॥ ೭೩ ॥

ರಥ ಆನೆ ಕುದುರೆಗಳಲ್ಲಿ ಬಂದ ವೀರರು ಭೀಮನಿಂದ ಹತರಾದರು. ಅವನಿಂದ ಭೀಷ್ಮ ದ್ರೋಣ ಅಶ್ವತ್ಥಾಮ ಮುಂತಾದವರೂ ದುರ್ಯೋಧನ ಮುಂತಾದವರೂ ಪರಾಜಿತರಾದಾಗ ಉಳಿದೆಲ್ಲರೂ ಪಲಾಯನಗೈದರು.

ಮಹಾಗಜಸ್ಥೋ ಭಗದತ್ತ ಆಗಾ-
ದಾಯನ್ ಬಾಣಾನ್ ಭೀಮಸೇನೇಽಮುಚಚ್ಚ ।
ತೇನಾತಿವಿದ್ಧೋ ಭೀಮಸೇನೋಽಸ್ಯ ಪುತ್ರ
ಉದ್ಯಚ್ಛಮಾನಂ ಪಿತರಂ ನಿವಾರ್ಯ ।
ಘಟೋತ್ಕಚೋಽಭ್ಯದ್ರವದಾಶು ವೀರಃ
ಸ್ವಮಾಯಯಾ ಹಸ್ತಿಚತುಷ್ಟಯಸ್ಥಃ ॥ ೭೪ ॥

ಮಹಾಗಜವನ್ನೇರಿದ್ದ ಭಗದತ್ತ ಬಂದ. ಬಂದು ಬಾಣಗಳನ್ನು ಭೀಮಸೇನನ ಮೇಲೆ ಎಸೆದ. ಅದರಿಂದ ಭೀಮ ಬಹಳ ಹೊಡೆಸಿಕೊಂಡಾಗ, ತನ್ನ ಮಾಯೆಯಿಂದ ನಾಲ್ಕು ಆನೆಗಳಲ್ಲಿ ನಾಲ್ಕು ರೂಪಗಳಿಂದ ಕುಳಿತ ವೀರ ಘಟೋತ್ಕಚ ಯುದ್ಧದಲ್ಲಿ ಉದ್ಯತನಾದ ತಂದೆಯನ್ನು ತಡೆದು ತಾನೇ ಬೇಗನೆ ಭಗದತ್ತನ ಇದಿರಿಗೆ ಬಂದ.

ಐರಾವತ ಅಂಜನ ವಾಮನ ಮಹಾಪದ್ಮ ಎಂಬ ನಾಲ್ಕು ಆನೆಗಳಲ್ಲಿ ಘಟೋತ್ಕಚನೊಬ್ಬನೆ ನಾಲ್ಕುರೂಪಗಳಿಂದ ಕುಳಿತು ನಾಲ್ಕು ದಿಕ್ಕುಗಳಿಂದ ಒಮ್ಮೆಲೆ ಬಂದು ಭಗದತ್ತನ ಸುಪ್ರತೀಕ ಆನೆಯ ಮೇಲೆ ದಾಳಿ ಮಾಡಿದ.

ಈ ನಾಲ್ಕು ಆನೆಗಳು ರಾಕ್ಷಸರಿಂದ ಕಳಿಸಲ್ಪಟ್ಟವುಗಳೆಂದು ಪ್ರಮಾಣ ಸಂಗ್ರಹಕಾರರು ಹೇಳುತ್ತಾರೆ. ಅದಕ್ಕೆ

ಪ್ರೇಷಿತಾಸ್ತೇ ಮಹಾರಾಜ ರಾಕ್ಷಸೈಶ್ಚ ಚತುರ್ದಿಶಂ

ಎಂಬ ಭಾರತ ಶ್ಲೋಕವನ್ನು ಉದಾಹರಿಸುತ್ತಾರೆ. ಪ್ರಚಲಿತ ಪಾಠದಲ್ಲಿ ಇದು ಇಲ್ಲ.

ಐರಾವತಂ ಸಮಾರುಹ್ಯ ಹೃಷ್ಟದಂತಂ ಮಹಾಗಜಂ

ಎಂದು ಪ್ರಮಾಣಸಂಗ್ರಹಕಾರರು ಉದಾಹರಿಸುವ ಶ್ಲೋಕದಲ್ಲಿಯೂ ಪ್ರಚಲಿತಪಾಠ-

ಐರಾವತಂ ಸಮಾರುಹ್ಯ ಸ ವೈ ಮಾಯಾಕೃತಂ ಸ್ವಯಂ

ಎಂದು ಕಾಣುತ್ತದೆ. ಪ್ರಾಯಃ ಈ ಪಾಠವನ್ನು ಇಟ್ಟುಕೊಂಡು ವಾದಿರಾಜೀಯ ಜನಾರ್ದನೀಯಗಳಲ್ಲಿ ಆನೆಗಳೂ ಘಟೋತ್ಕಚನೇ ಮಾಯೆಯಿಂದ ಧರಿಸಿದ ರೂಪಗಳೆಂದಿದೆ-

ಚತುರ್ಗಜಾತ್ಮೋಪರಿಗಾತ್ಮಕಶ್ಚೇತ್ಯತ್ರ
ಚತುರ್ಗಜಾತ್ಮಾ ಚತುರ್ಗಜಸ್ವರೂಪಃ ಉಪರಿಗಾತ್ಮಕಃ
ಉಪರಿಗತರೂಪಚತುಷ್ಟಯವಾಂಶ್ಚೇತ್ಯರ್ಥಃ॥
(79ನೇ ಶ್ಲೋಕದ ವ್ಯಾಖ್ಯಾನ ವಾದಿರಾಜೀಯ)

ಸ ವೈಷ್ಣವಾಸ್ತ್ರಂ ಭಗದತ್ತಸಂಸ್ಥಂ ವಿಜ್ಞಾಯ
ವಿಷ್ಣೋರ್ವರತೋ ವಿಶೇಷತಃ।
ಅಮೋಘಮನ್ಯತ್ರ ಹರೇರ್ಮರುತ್ಸುತಃ
ಪುತ್ರೇ ಯಾತೇ ನ ಸ್ವಯಮಭ್ಯಧಾವತ್ ॥೭೫॥

ಭಗವತ್ತನಲ್ಲಿರುವ ವೈಷ್ಣವಾಸ್ತ್ರ ವರಾಹರೂಪಿ ಹರಿಯ ವಿಶೇಷ ವರ ಬಲದಿಂದ ಹರಿಯಲ್ಲಿ ಹೊರತು ಅನ್ಯರಲ್ಲಿ ವ್ಯರ್ಥವಾಗದುದೆಂದು ತಿಳಿದು ಭೀಮ, ಘಟೋತ್ಕಚ ಮುಂದೆ ನಡೆದಾಗ, ತಾನು ಸ್ವತಃ ಮುಂದೆ ಹೋಗಲಿಲ್ಲ.

ಅನುಗ್ರಹಾದಭ್ಯಧಿಕಾದವಧ್ಯಂ ಜಾನನ್ನಪಿ ಸ್ವಂ ವಾಸುದೇವಸ್ಯ ನಿತ್ಯಮ್ ।
ತದ್ಭಕ್ತಿವೈಶೇಷ್ಯತ ಏವ ತಸ್ಯ ಸತ್ಯಂ ವಾಕ್ಯಂ ಕರ್ತುಮರಿಂ ನ ಚಾಗಾತ್ ॥೭೬॥

ಹರಿಯ ಪರಮಾನುಗ್ರಹದಿಂದ ತಾನು ಹರಿಗೆ ಸದಾ ಅವಧ್ಯನೆಂಬುದನ್ನು ತಿಳಿದವನಾದರೂ ಭೀಮ ಹರಿಭಕ್ತಿಯ ಅತಿಶಯದಿಂದ ವರಾಹರೂಪಿ ಹರಿಯ ವಾಕ್ಯವನ್ನು ಸತ್ಯವನ್ನಾಗಿ ಮಾಡುವುದಕ್ಕೆಂದೇ ಶತ್ರುವಿನ ಇದಿರಿಗೆ ಹೋಗಲಿಲ್ಲ.

ವೈಷ್ಣವಾಸ್ತ್ರ ಅಮೋಘ. ಅದು ಅಮೋಘವಾಗಿರಲೆಂದು ಶ್ರೀವರಾಹ ಭಗದತ್ತನಿಗೆ ನೀಡಿದ ವರವೂ ಇದ್ದಿತು. ಆದರೆ ಭೀಮ ಅದಕ್ಕೆ ಭಯಪಟ್ಟು ಹಿಂದೆ ಸರಿದು ಘಟೋತ್ಕಚನನ್ನು ಮುಂದೆ ಮಾಡಿದನೆಂದು ತಿಳಿಯಬಾರದು.

ಆ ಅಸ್ತ್ರವನ್ನು ಭೀಮನ ಮೇಲೆ ಎಸೆದರೂ ವ್ಯರ್ಥವೆ ಆಗುವುದು. ಏಕೆಂದರೆ ಹರಿಯ ಪರಮಾನುಗ್ರಹದಿಂದ ಭೀಮ ಸದಾ ಅವಧ್ಯನೆ. ಆಗ ವರಾಹ ಕೊಟ್ಟ ವರ ಸುಳ್ಳಾಗುವುದು. ಅದಕ್ಕೆ ಅವಕಾಶ ಕೊಡಬಾರದೆಂದೇ ಭಗದತ್ತನ ಇದಿರಿಗೆ ಘಟೋತ್ಕಚನನ್ನು ಹೋಗಲುಬಿಟ್ಟ.

ಯದಾ ಸ್ವಪುತ್ರೇಣ ಜಿತೋ ಭವೇತ್ ಸ
ಕಿಂ ಸ್ವಾತ್ಮನೇತ್ಯೇವ ತದಾ ಪ್ರವೇತ್ತುಮ್ ।
ಸ ವಿಸ್ಮೃತಾಸ್ತ್ರಸ್ತು ಯದಾ ಭವೇತ
ತದಾ ಭೀಮೋ ಭಗದತ್ತಂ ಪ್ರಯಾತಿ ॥ ೭೭ ॥

ಭಗದತ್ತ ಯಾವಾಗ ತನ್ನ ಮಗನಿಂದಲೆ ಪರಾಜಿತನಾಗುವನೋ ಆಗ ತನ್ನಿಂದ ಪರಾಜಿತನಾಗುವನೆಂದು ಏನು ಹೇಳಬೇಕು? ಎಂದು ತಿಳಿಸುವ ಉದ್ದೇಶದಿಂದಲೂ ಭೀಮ ಭಗದತ್ತನ ಇದಿರಿಗೆ ಹೋಗಲಿಲ್ಲ. ಭಗದತ್ತ ಯಾವಾಗ ಆ ಅಸ್ತ್ರಮಂತ್ರವನ್ನು ಮರೆಯುವನೋ ಆಗ ಭೀಮ ಅವನನ್ನು ಇದಿರಿಸುತ್ತಾನೆ.

ವರಾಹನ ವರವನ್ನು ಸುಳ್ಳಾಗಿಸಬಾರದೆಂಬ ಅರಿವಿದ್ದ ಭೀಮ ಏಕೆ ಅನೇಕ ಬಾರಿ ಭಗದತ್ತನ ಮೇಲೇರಿ ಹೋಗುತ್ತಾನೆ ಎಂದರೆ ಭಗದತ್ತನಿಗೆ ಅಸ್ತ್ರಮಂತ್ರ ಮರೆತಾಗಲೆಲ್ಲ ಭೀಮ ಅವನೆದುರಿಗೆ ಹೋಗುತ್ತಿದ್ದ. ಆಗ ಅವನು ಅಸ್ತ್ರವನ್ನು ಪ್ರಯೋಗಿಸುವುದಿಲ್ಲ. ಅದು ವಿಫಲವಾಗುವುದೂ ಇಲ್ಲ, ಎಂದು.

ಋತೇ ಭೀಮಂ ಚಾರ್ಜುನಂ ನಾಸ್ತ್ರಮೇಷ
ಪ್ರಮುಂಚತೀತ್ಯೇವ ಹಿ ವೇದ ಭೀಮಃ ॥ ೭೮ ॥

ಭೀಮನ ಮತ್ತು ಅರ್ಜುನನ ಮೇಲೆ ಹೊರತು ಬೇರೆ ಕಡೆ ಭಗದತ್ತ ವೈಷ್ಣವಾಸ್ತ್ರವನ್ನು ಬಿಡುವುದಿಲ್ಲವೆಂದು ಭೀಮ ತಿಳಿದೇ ಇದ್ದಾನೆ.

ಮಗನಿಂದ ಭಗದತ್ತನನ್ನು ಪರಾಭವಗೊಳಿಸುವುದು ಹೇಗೆ? ಮಗನೆ ವೈಷ್ಣವಾಸ್ತ್ರದಿಂದ ಹತನಾಗಬೇಕಷ್ಟೆ? ಭಗದತ್ತನಿಗೆ ಆಗ ಅಸ್ತ್ರ ಮರೆತಿರುತ್ತದೆ ಎಂದರೆ ಭೀಮನೆ ಆಗ ಅವನ ಮುಂದೆ ಹೋಗಬಹುದಷ್ಟೆ? ಈ ಪ್ರಶ್ನೆಗೆ ಹೀಗೆ ಸಮಾಧಾನ- ಭಗದತ್ತನಿಗೆ ಮಂತ್ರ ಮರೆತಿರುವುದಿಲ್ಲ. ಭೀಮಾರ್ಜುನರ ಮೇಲೆ ಹೊರತು ಬೇರೆಡೆ ಅಸ್ತ್ರವನ್ನು ಅವನು ಪ್ರಯೋಗಿಸುವುದಿಲ್ಲ. ಪ್ರಯೋಗಿಸಿದರೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತಾಗಿ ಅಸ್ತ್ರಕ್ಕೆ ಅಗೌರವ ತೋರಿದಂತಾಗುವುದೆಂದು ಭಗದತ್ತ ಭಾವಿಸುತ್ತಾನೆ. ಅದರಿಂದ ಘಟೋತ್ಕಚನಿಂದ ಆತ ಪರಾಜಿತನಾಗುತ್ತಾನೆ ಎಂದು ಭೀಮ ತಿಳಿಯುತ್ತಾನೆ.

ಚತುರ್ಗಜಾತ್ಮೋತ್ಪರಿಗಾತ್ಮಕಶ್ಚ
ಘಟೋತ್ಕಚಃ ಸುಪ್ರತೀಕಂ ಚ ತಂ ಚ ।
ನಾನಾಪ್ರಹಾರೈರ್ವಿತುದಂಶ್ಚಕಾರ
ಸಂದಿಗ್ಧಜೀವೌ ಜಗತಃ ಸಮಕ್ಷಮ್ ॥೭೯॥

ಘಟೋತ್ಕಚ ನಾಲ್ಕು ಆನೆಗಳೂ ತಾನೇ ಆದ. ಆ ಆನೆಗಳ ಮೇಲೇರಿರುವ ನಾಲ್ವರು ವೀರರೂ ತಾನೇ ಆದ. ಆಗಿ ಸುಪ್ರತೀಕವನ್ನೂ ಆದನ್ನೇರಿರುವ ಭಗದತ್ತನನ್ನೂ ನಾನಾ ಬಗೆಯ ಪ್ರಹಾರಗಳಿಂದ ಪೀಡಿಸುತ್ತ ಜಗತ್ತಿನ ಸಮಕ್ಷಮದಲ್ಲಿ ಇಬ್ಬರ ಉಳಿವೂ ಸಂದಿಗ್ಧವಾಗುವಂತೆ ಮಾಡಿದ.

ಇಬ್ಬರೂ ಪರಸ್ಪರ ಹತರಾಗುವರೇ ಹೊರತು ಒಬ್ಬನೂ ಉಳಿಯಲಾರ ಎಂದು ಲೋಕ ಭಾವಿಸುವಂತೆ ಘಟೋತ್ಕಚ ಯುದ್ಧ ಮಾಡಿದ.

ಪ್ರಮಾಣಸಂಗ್ರಹಕಾರರ ಅಭಿಪ್ರಾಯದಲ್ಲಿ ನಾಲ್ಕು ಆನೆಗಳು ವಾಸ್ತವವೆ. ನಾಲ್ಕು ಆನೆಗಳ ಮೇಲಿ ಕುಳಿತ ಘಟೋತ್ಕಚನ ನಾಲ್ಕು ರೂಪಗಳು ಮಾತ್ರ ಮಾಯೆ-

ಚತುರ್ಗಜಾನಾಮೈರಾವತಾದಿಚತುರ್ಗಜಾನಾಮಾತ್ಮನಾಂ
ದೇಹಾನಾಮುಪರಿಗಃ ಆತ್ಮಾ ದೇಹೋ ಯಸ್ಯ ಸ ತಥೋಕ್ತಃ।
ಚತುರ್ಗಜದೇಹೋ ಪರಿಸ್ಥಿತ ಚತುರ್ದೇಹ ಇತ್ಯರ್ಥಃ।

ಗಜಾರ್ತನಾದಂ ತು ನಿಶಮ್ಯ ಭೀಷ್ಮ
ಮುಖಾಃ ಸಮಾಪೇತುರಮುಂ ಚ ದೃಷ್ಟ್ವಾ ।
ಮಹಾಕಾಯಂ ಭೀಮಮಮುಷ್ಯ ಪೃಷ್ಠ
ಗೋಪಂ ಚ ವಾಯ್ವಾತ್ಮಜಮತ್ರಸನ್ ಭೃಶಮ್ ॥೮೦॥

ಸುಪ್ರತೀಕ ಆನೆಯ ಆರ್ತನಾದವನ್ನು ಕೇಳಿ ಭೀಷ್ಮ ಮುಂತಾದವರು ಧಾವಿಸಿಬಂದರು. ಭೀಕರ ಮಹಾಕಾಯನಾದ ಘಟೋತ್ಕಚನನ್ನೂ ಅವನ ಹಿಂದೆ ರಕ್ಷಕನಾಗಿ ನಿಂತ ಭೀಮನನ್ನೂ ಕಂಡು ಬಹಳ ಭಯಪಟ್ಟರು.

ತೇ ಭೀತಭೀತಾಃ ಪೃತನಾಪಹಾರಂ
ಕೃತ್ವಾಽಪಜಗ್ಮುಃ ಶಿಬಿರಾಯ ಶೀಘ್ರಮ್ ॥೮೧॥

ಭೀಷ್ಮ ಮುಂತಾದವರು ಬಹಳ ಭೀತರಾಗಿ ಬೇಗನೆ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಶಿಬಿರದ ಕಡೆಗೆ ನಡೆದರು.

ಎಂಟನೆ ದಿನದ ಯುದ್ಧ - ಇರಾವಂತನ ವಧ

ದಿನೇ ಪರೇ ಚೈವ ಪುನಃ ಸಮೇತಾಃ
ಪರಸ್ಪರಂ ಪಾಂಡವಕೌರವಾಸ್ತೇ ।

ತತ್ರಾಽಸದನ್ನಾಗಸುತಾಸಮುದ್ಭವಃ
ಪಾರ್ಥಾತ್ಮಜಃ ಶಾಕುನೇಯಾನ್ ಷಡೇಕಃ ॥೮೨॥

ಮರುದಿನ ಪುನಃ ಪಾಂಡವರೂ ಕೌರವರೂ ಪರಸ್ಪರ ಸೇರಿದರು. ಆಗ ಅರ್ಜುನನಿಗೆ ನಾಗಕನ್ಯೆ ಉಲೂಪಿಯಲ್ಲಿ ಜನಿಸಿದ ಇರಾವಂತ ಆರುಮಂದಿ ಶಕುನಿ ಸೋದರರನ್ನು ಒಬ್ಬನೆ ಇದಿರಿಸಿದ.

ಗಜ, ಗವಾಕ್ಷ, ವೃಷಭ, ಚರ್ಮವಾನ್, ಆರ್ಜವ, ಶುಕ ಎಂಬ ಆರು ಮಂದಿ ಶಕುನಿ ಸೋದರರು ಯುದ್ಧಕ್ಕೆ ಹೊರಟರೆಂದು ಮಹಾಭಾರತ (ಭೀಷ್ಮ 90.28) ಹೇಳಿರುವುದರಿಂದ ನಿರ್ಣಯದಲ್ಲಿ ಶಾಕುನೇಯರೆಂದರೆ ಶಕುನಿ ಪುತ್ರರಲ್ಲ, ಶಕುನಿ ಸೋದರರು.

'ಸೌಬಲಸ್ಯಾನುಜಾಃ ಶೂರಾಃ'
ಎಂದು ಒಮ್ಮೆ (90.28) ಹೇಳಿ ಮುಂದೆ, ಎಲ್ಲ ಕಡೆ,
ಸುಬಲಸ್ಯಾತ್ಮಜಾಃ (90.37) ಸುಬಲಸ್ಯಾತ್ಮಜಾನ್ (90.42)
ಸುಬಲಾತ್ಮಜಾಃ (90.44), (90.46) ಎಂದೇ ಹೇಳಿದೆ.

ತೈಃ ಪ್ರಾಸಹಸ್ತೈಃ ಕ್ಷತಕಾಯೋಽತಿರೂಢ
ಕೋಪಃ ಸ ಖಡ್ಗೇನ ಚಕರ್ತ ತೇಷಾಮ್ ।
ಶಿರಾಂಸಿ ವೀರೋ ಬಲವಾನಿರಾವಾನ್
ಭಯಂ ದಧದ್ ಧಾರ್ತರಾಷ್ಟ್ರೇಷು ಚೋಗ್ರಮ್ ॥೮೩॥

ಪ್ರಾಸವೆಂಬ ಆಯುಧವನ್ನು ಕೈಯಲ್ಲಿ ಹಿಡಿದಿದ್ದ ಶಕುನಿ ಸೋದರರು ಇರಾವಂತನ ಶರೀರವನ್ನು ಗಾಯಗೊಳಿಸಿದಾಗ ಅವನ ಕೋಪ ಹೆಚ್ಚಿತು. ಬಲಿಷ್ಠ ವೀರನಾದ ಆತ ಕೌರವರಿಗೆ ಮಹಾಭಯವನ್ನು ಹುಟ್ಟಿಸುತ್ತ ಶಕುನಿ ಸೋದರರ ತಲೆಗಳನ್ನು ಖಡ್ಗದಿಂದ ಕತ್ತರಿಸಿದ.

ದೃಷ್ಟ್ವಾಽಥ ತಮುಗ್ರಂ ಧೃತರಾಷ್ಟ್ರಪುತ್ರೋ
ದಿದೇಶ ರಕ್ಷೋಽಲಂಬುಸನಾಮಧೇಯಮ್ ।
ಜಹ್ಯಾರ್ಜುನಿಂ ಕ್ಷಿಪ್ರಮಿತಿ ಸ್ಮ ತಚ್ಚ
ಸಮಾಸದನ್ನಾಗಸುತಾತನೂಜಮ್ ॥೮೪॥

ಭಯಂಕರನಾದ ಇರಾವಂತನನ್ನು ಕಂಡು ದುರ್ಯೋಧನ ಅಲಂಬುಸನೆಂಬ ಹೆಸರಿನ ರಾಕ್ಷಸನಿಗೆ 'ಇರಾವಂತನನ್ನು ಬೇಗನೆ ಕೊಲ್ಲು' ಎಂದು ಆದೇಶಿಸಿದ. ರಾಕ್ಷಸ ಇರಾವಂತನನ್ನು ಇದಿರಿಸಿದ.

ತಯೋರಭೂದ್ ಯುದ್ಧಮತೀವ ದಾರುಣಂ
ಮಾಯಾಯುಜೋರ್ವೀರ್ಯವತೋರ್ಮಹಾದ್ಭುತಮ್ ।

ಸಸಾದಿನೋಽಶ್ವಾನ್ ಸ ತು ರಾಕ್ಷಸೋಽಸೃಜತ್
ತೇ ಪಾರ್ಥಪುತ್ರಸ್ಯ ಚ ಸಾದಿನೋಽಹನನ್।
ತತಸ್ತ್ವನಂತಾಕೃತಿಮಾಪ್ತಮಾರ್ಜುನಿಂ
ಸುಪರ್ಣರೂಪೋಽಹನದಾಶು ರಾಕ್ಷಸಃ ॥೮೫॥

ಮಾಯಾವಿಗಳೂ ಪರಾಕ್ರಮಿಗಳೂ ಆದ ಅಲಂಬುಸ ಮತ್ತು ಇರಾವಂತರಿಗೆ ಅತ್ಯಂತ ಭೀಕರವೂ ಮಹಾ ಅದ್ಭುತವೂ ಆದ ಯುದ್ಧ ನಡೆಯಿತು. ರಾಕ್ಷಸ ಕುದುರೆಗಳನ್ನೂ ಸವಾರರನ್ನೂ ಮಾಯೆಯಿಂದ ನಿರ್ಮಿಸಿದ. ಅವರು ಇರಾವಂತನ ಅಶ್ವಸೈನಿಕರನ್ನು ಕೊಂದರು. ಆಗ ಸರ್ಪಾಕಾರವನ್ನು ತಳೆದ ಇರಾವಂತನನ್ನು ಗರುಡರೂಪನಾದ ರಾಕ್ಷಸ ಬೇಗನೆ ವಧಿಸಿದ.

ಇರಾವಂತ ತಾನು ಸರ್ಪಾಕಾರನಾಗಿ ಅಸಂಖ್ಯಸರ್ಪಗಳನ್ನು ನಿರ್ಮಿಸಿ ಅಲಂಬುಸ ರಾಕ್ಷಸನನ್ನು ಆವರಿಸಿದಾಗ ಅಲಂಬುಸ ಗರುಡರೂಪ ತಾಳಿ ಆ ಹಾವುಗಳನ್ನೆಲ್ಲ ತಿಂದ. ಬಳಿಕ ಮೂರ್ಛಿತನಾದ ಇರಾವಂತ ಮಾನವರೂಪದಲ್ಲಿ ಅಲಂಬುಸನ ಖಡ್ಗಕ್ಕೆ ಬಲಿಯಾಗಿ ಶಿರಶ್ಛೇದ ಹೊಂದಿದ.

ಹತಂ ನಿಶಮ್ಯಾಕರ್ಜುನಿಮುಗ್ರಪೌರುಷೋ
ನನಾದ ಕೋಪೇನ ವೃಕೋದರಾತ್ಮಜಃ।
ಚಚಾಲ ಭೂರ್ನಾನದತೋಽಸ್ಯ ರಾವತಃ
ಸಸಾಗರಾಗೇಂದ್ರನಗಾ ಭೃಶಂ ತದಾ ॥೮೬॥

ಇರಾವಂತ ಹತನಾದುದನ್ನು ಕಂಡು ಭಯಂಕರ ಪೌರುಷಶಾಲಿಯಾದ ಘಟೋತ್ಕಚ ಕೋಪದಿಂದ ಗರ್ಜಿಸಿದ. ಅವನು ಗರ್ಜಿಸಿದಾಗ ಆ ಶಬ್ದದಿಂದ ಸಾಗರಗಳು ಮಹಾ ವೃಕ್ಷಗಳು ಮತ್ತು ಬೆಟ್ಟಗಳಿಂದ ಕೂಡಿದ ಭೂಮಿ ಬಲವಾಗಿ ಕಂಪಿಸಿತು.

ಅಲಂಬುಸಸ್ತಂ ಪ್ರಸಮೀಕ್ಷ್ಯ ಮಾರುತೇಃ
ಸುತಂ ಬಲಾಢ್ಯಂ ಭಯತಃ ಪರಾದ್ರವತ್ ।
ಪರಾದ್ರವನ್ ಧಾರ್ತರಾಷ್ಟ್ರಸ್ಯ ಸೇನಾಃ
ಸರ್ವಾಸ್ತಮಾರಾಧ ಸುಯೋಧನೋ ನೃಪಃ ॥೮೭॥

ಅಲಂಬುಸನು ಬಲಾಢ್ಯನಾದ ಘಟೋತ್ಕಚನನ್ನು ಕಂಡು ಭಯದಿಂದ ಓಡಿದ. ದುರ್ಯೋಧನನ ಸೇನೆಗಳೆಲ್ಲವೂ ಪಲಾಯನಗೈದುವು. ಆಗ ದುರ್ಯೋಧನ ಘಟೋತ್ಕಚನನ್ನು ಇದಿರಿಸಿದ.

ಸ ಭೀಮಪುತ್ರಸ್ಯ ಜಘಾನ ಮಂತ್ರಿಣೋ
ಮಹಾಬಲಾಂಶ್ಚತುರೋಽನ್ಯಾಂಸ್ತಥೈವ ।
ಹತಾವಶೇಷೇಷು ಚ ವಿದ್ರವತ್ಸು
ಘಟೋತ್ಕಚೋಽಭ್ಯಾಹನದಾಶು ತಂ ನೃಪಮ್ ॥೮೮॥

ದುರ್ಯೋಧನ ಘಟೋತ್ಕಚನ ನಾಲ್ಕು ಮಂದಿ ಮಹಾಬಲಶಾಲಿಗಳಾದ ಸಹಾಯಕರನ್ನು ಕೊಂದ. ಹಾಗೇ ಇತರರನ್ನೂ ಕೊಂದ. ಅಳಿದುಳಿದ ಸೈನಿಕರು ಓಡಿಹೋದಾಗ ಘಟೋತ್ಕಚ ಬೇಗನೆ ದುರ್ಯೋಧನನನ್ನು ಹೊಡೆದ.

ಸ ಪೀಡ್ಯಮಾನೋ ಯುಧಿ ತೇನ ರಕ್ಷಸಾ
ಪ್ರವೇಶಯಾಮಾಸ ಶರಂ ಘಟೋತ್ಕಚೇ ।
ದೃಢಾಹತಸ್ತೇನ ತದಾ ಬಲೀಯಸಾ
ಘಟೋತ್ಕಚಃ ಪ್ರವ್ಯಥಿತೇಂದ್ರಿಯೋ ಭೃಶಮ್ ।
ತಸ್ಥೌ ಕಥಂಚಿದ್ ಭುವಿ ಪಾತ್ಯಮಾನಃ
ಪುನಃ ಶರಾನಪ್ಯಸೃಜತ್ ಸುಯೋಧನೇ ॥೮೯॥

ದುರ್ಯೋಧನ, ಯುದ್ಧದಲ್ಲಿ ಘಟೋತ್ಕಚನಿಂದ ಪೀಡಿತನಾಗುತ್ತಿದ್ದಂತೆ, ಘಟೋತ್ಕಚನ ಮೈಯೊಳಗೆ ಬಾಣವನ್ನು ತೂರಿದ. ಬಲಿಷ್ಠನಾದ ದುರ್ಯೋಧನನಿಂದ ಬಲವಾಗಿ ಹೊಡೆಸಿಕೊಂಡ ಘಟೋತ್ಕಚನ ಇಂದ್ರಿಯಗಳೆಲ್ಲವೂ ಬಹಳ ಗಾಯಗೊಂಡವು. ನೆಲದಲ್ಲಿ ಕೆಡವಲ್ಪಡುತ್ತಲೆ ಅವನು ಹೇಗೋ ಸಾವರಿಸಿಕೊಂಡು ನಿಂತ. ಪುನಃ ದುರ್ಯೋಧನನ ಮೇಲೆ ಬಾಣಗಳನ್ನೆಸೆದ.

ಚಿರಂ ಪ್ರಯುದ್ಧ್ವಾ ನೃಪರಾಕ್ಷಸಾಧಿಪೌ
ಪರಸ್ಪರಾಜೇಯತನೂ ರಣಾಜಿರೇ ।
ದ್ರೋಣಾದಯೋ ವೀಕ್ಷ್ಯ ರಿರಕ್ಷಿಷಂತಃ
ಸುಯೋಧನಂ ಪ್ರಾಪುರಮಿತ್ರಸಾಹಾಃ ॥೯೦॥

ದುರ್ಯೋಧನ ಘಟೋತ್ಕಚರು ರಣರಂಗದಲ್ಲಿ ದೀರ್ಘಕಾಲ ಯುದ್ಧ ಮಾಡಿದರು. ಆದರೆ ಒಬ್ಬರಿಗೊಬ್ಬರು ಸೋಲಲಿಲ್ಲ. ಶತ್ರುಗಳನ್ನು ಸಮರ್ಥವಾಗಿ ಇದಿರಿಸಬಲ್ಲ ದ್ರೋಣ ಮುಂತಾದವರು ನೋಡಿ ದುರ್ಯೋಧನನನ್ನು ರಕ್ಷಿಸಲು ಬಯಸಿ ಅವನ ಬಳಿಗೆ ಬಂದರು.

ಸ ದ್ರೋಣಶಲ್ಯೌ ಗುರುಪುತ್ರಗೌತಮೌ
ಭೂರಿಶ್ರವಃಕೃತವರ್ಮಾದಿಕಾಂಶ್ಚ ।
ವವರ್ಷ ಬಾಣೈರ್ಗಗನಂ ಸಮಾಶ್ರಿತೋ
ಘಟೋತ್ಕಚಃ ಸ್ಥೂಲತಮೈಃ ಸುವೇಗೈಃ ॥೯೧॥

ದ್ರೋಣ ಶಲ್ಯ ಅಶ್ವತ್ಥಾಮ ಕೃಪ ಭೂರಿಶ್ರವ ಕೃತವರ್ಮಾದಿಗಳ ಮೇಲೆ ಆಕಾಶದಲ್ಲಿ ನಿಂತಿದ್ದ ಘಟೋತ್ಕಚ ಅತಿ ದೊಡ್ಡ ಗಾತ್ರದ ಬಲು ವೇಗದ ಬಾಣಗಳ ಮಳೆಗರೆದ.

ತಮೇಕಮಗ್ರ್ಯೈ ರಥಿಭಿಃ ಪರಿಷ್ಕೃತಂ
ನಿರೀಕ್ಷ್ಯ ಭೀಮೋಽಭ್ಯಗಮತ್ ಸಮಸ್ತಾನ್ ।

ದ್ರೋಣೋಽತ್ರ ಭೀಮಪ್ರಹಿತೈಃ ಶರೋತ್ತಮೈಃ
ಸುಪೀಡಿತಃ ಪ್ರಾಪ್ತಮೂರ್ಚ್ಛಃ ಪಪಾತ ॥೯೨॥

ಒಬ್ಬ ಘಟೋತ್ಕಚ ಅನೇಕ ಶ್ರೇಷ್ಠ ರಥಿಕರಿಂದ ಸುತ್ತುವರಿಯಲ್ಪಟ್ಟುದನ್ನು ಕಂಡು ಭೀಮ ಎಲ್ಲರನ್ನೂ ಆಕ್ರಮಿಸಿದ. ಆಗ ಭೀಮ ಎಸೆದ ಉತ್ತಮ ಬಾಣಗಳಿಂದ ಬಹಳ ಪೀಡಿತನಾದ ದ್ರೋಣ ಮೂರ್ಛೆ ಹೊಂದಿ ಬಿದ್ದ.

ದ್ರೌಣಂ ಕೃಪಾದ್ಯಾನ್ ಸಸುಯೋಧನಾಂಶ್ಚ
ಚಕಾರ ಭೀಮೋ ವಿರಥಾನ್ ಕ್ಷಣೇನ।
ನಿವಾರ್ಯಮಾಣಾಂಸ್ತು ವೃಕೋದರೇಣ
ಘಟೋತ್ಕಚಸ್ತಾನ್ ಪ್ರವವರ್ಷ ಸಾಯಕೈಃ ॥೯೩॥

ಅಶ್ವತ್ಥಾಮ ದುರ್ಯೋಧನ ಕೃಪ ಮುಂತಾದವರನ್ನು ಭೀಮ ಕ್ಷಣದಲ್ಲಿ ವಿರಥನನ್ನಾಗಿ ಮಾಡಿದ. ಅವರನ್ನು ಭೀಮ ತಡೆಯುತ್ತಿದ್ದಂತೆ ಘಟೋತ್ಕಚ ಅವರ ಮೇಲೆ ಬಾಣಗಳ ಮಳೆಗರೆದ.

ತೇನಾಂಬರಸ್ಥೇನ ತರುಪ್ರಮಾಣೈ-
ರಭ್ಯರ್ದಿತಾಃ ಕುರವಃ ಸಾಯಕೌಘೈಃ।
ಭೂಮೌ ಚ ಭೀಮೇನ ಶರೌಘಪೀಡಿತಾಃ
ಪೇತುರ್ನೇದುಃ ಪ್ರಾದ್ರವಂಶ್ಚಾತಿಭೀತಾಃ ॥೯೪॥

ಕೌರವರು ಆಕಾಶದಲ್ಲಿ ನಿಂತ ಘಟೋತ್ಕಚನಿಂದ ಮರಗಳಷ್ಟು ಗಾತ್ರದ ಬಾಣ ಸಮೂಹಗಳಿಂದ ಪೀಡಿಸಿಕೊಳ್ಳುತ್ತ ನೆಲದಲ್ಲಿಯೂ ಭೀಮನ ಬಾಣ ಪ್ರವಾಹಗಳಿಂದ ಪೀಡಿತರಾಗಿ ಬಿದ್ದರು. ಕೂಗಿದರು, ಅತ್ಯಂತ ಭೀತರಾಗಿ ಪಲಾಯನ ಮಾಡಿದರು.

ಸರ್ವಾಂಶ್ಚ ತಾನ್ ಶಿಬಿರಂ ಪ್ರಾಪಯಿತ್ವಾ
ವಿನಾ ಭೀಷ್ಮಂ ಕೌರವಾನ್ ಭೀಮಸೇನಃ।
ಘಟೋತ್ಕಚಶ್ಚಾನದತಾಂ ಮಹಾಸ್ವನೌ
ನಾದೇನ ಲೋಕಾನಭಿಪೂರಯಂತೌ ॥೯೫॥

ಭೀಷ್ಮನನ್ನು ಹೊರತು ಆ ಎಲ್ಲ ಕೌರವರನ್ನೂ ಶಿಬಿರಕ್ಕೆ ಅಟ್ಟಿ ಭೀಮ ಘಟೋತ್ಕಚರು ಮಹಾಧ್ವನಿ ಮಾಡಿ ಗರ್ಜಿಸಿದರು. ಆ ಧ್ವನಿಯಿಂದ ಲೋಕಗಳನ್ನು ತುಂಬಿಸಿದರು.

ದುರ್ಯೋಧನೋಽಥ ಸ್ವಜನೈಃ ಸಮೇತಃ
ಪುನಃ ಪ್ರಾಯಾದ್ ರಣಭೂಮಿಂ ಸಭೀಷ್ಮಮ್।
ಜಯೋಪಾಯಂ ಭೈಮಸೇನೇರಪೃಚ್ಛತ್
ಸ್ವಸ್ಯೈವ ಸ ಪ್ರಾಹ ನ ತಂ ವ್ರಜೇತಿ ॥೯೬॥

ಬಳಿಕ ದುರ್ಯೋಧನ ತಮ್ಮವರೊಂದಿಗೆ ಪುನಃ ರಣಭೂಮಿಗೆ ಹೋದ. ಭೀಷ್ಮನಲ್ಲಿ ಘಟೋತ್ಕಚನನ್ನು ತಾನು ಗೆಲ್ಲುವ ಉಪಾಯವನ್ನು ಕೇಳಿದ. ಭೀಷ್ಮನೆಂದ, 'ನೀನು ಅವನ ಇದಿರಿಗೆ ಹೋಗಬೇಡ.'

ಪ್ರಾಗ್ಜ್ಯೋತಿಷಂ ಚೈವ ಘಟೋತ್ಕಚಾಯ
ಸಂಪ್ರೇಷಯಾಮಾಸ ಸುರಾಪಗಾಸುತಃ ।
ಸ ಪ್ರಾಪ್ಯ ಹೈಡಿಂಬಮಯೋಧಯದ್ ಬಲೀ
ಸ ಚಾರ್ದಯಾಮಾಸ ಸಕುಂಜರಂ ತಮ್ ॥೯೭॥

ಭೀಷ್ಮ ಘಟೋತ್ಕಚನ ಎದುರಿಗೆ ಭಗದತ್ತನನ್ನು ಕಳಿಸಿದ. ಬಲಿಷ್ಠನಾದ ಭಗದತ್ತ ಘಟೋತ್ಕಚನ ಬಳಿಗೆ ಹೋಗಿ ಯುದ್ಧ ಮಾಡಿದ. ಘಟೋತ್ಕಚ ಅವನನ್ನೂ ಅವನ ಆನೆಯನ್ನೂ ಪೀಡಿಸಿದ.

ತೇನಾರ್ದಿತಃ ಪ್ರಾಹಿಣೋಚ್ಛೂಲಮಸ್ಮೈ
ವಿಯತ್ಯವಪ್ಲುತ್ಯ ತದಾ ಘಟೋತ್ಕಚಃ ।
ಪ್ರಗೃಹ್ಯ ಶೂಲಂ ಪ್ರಬಭಂಜ ಜಾನು-
ಮಾರೋಪ್ಯ ದೇವಾ ಜಹೃಷುಸ್ತದೀಕ್ಷ್ಯ ॥೯೮॥

। ಘಟೋತ್ಕಚನಿಂದ ಪೀಡಿತನಾದ ಭಗದತ್ತ ಅವನ ಮೇಲೆ ಶೂಲವನ್ನೆಸೆದ. ಆಗ ಘಟೋತ್ಕಚ ಶೂಲವನ್ನು ಹಿಡಿದು ಆಕಾಶದಲ್ಲಿ ಹಾರಿ ಮೊಣಕಾಲ ಮೇಲೆ ಅದನ್ನಿಟ್ಟು ಮುರಿದ. ಅದನ್ನು ನೋಡಿ ದೇವತೆಗಳು ಆನಂದಿಸಿದರು.

ತದಾ ಸ ತಸ್ಯೈವ ಪದಾನುಗಾನ್ ನೃಪೋ
ಜಘಾನ ತಂ ಮಾರುತಿರಭ್ಯಯಾದ್ ರಣೇ ।
ಸ ಪ್ರಾಹಿಣೋದ್ ಭೀಮಸೇನಾಯ ವೀರೋ
ಗಜಂ ತಮಸ್ತಂಭಯದಾಶು ಸಾಯಕೈಃ ॥೯೯॥

ಆಗ ಭಗದತ್ತ ಘಟೋತ್ಕಚನ ಪರಿವಾರದವರನ್ನು ಕೊಂದ. ಅವನನ್ನು ಯುದ್ಧದಲ್ಲಿ ಭೀಮ ಇದಿರಿಸಿದ. ಆಗ ವೀರನಾದ ಅವನು ಭೀಮಸೇನನಿಗೆ ಇದಿರಾಗಿ ಆನೆಯನ್ನು ನಡೆಸಿದ. ಒಡನೆ ಭೀಮ ಆನೆಯನ್ನು ಬಾಣಗಳಿಂದ ತಡೆದ.

ಸಂಸ್ತಂಭಿತೇ ಬಾಣವರೈಸ್ತು ನಾಗೇ
ಭೀಮಸ್ಯಾಶ್ವಾನ್ ಸಾಯಕೈರಾರ್ದಯತ್ ಸಃ ।
ಸೋಽಭ್ಯರ್ದಿತಾಶ್ವೋಽಥ ಗದಾಂ ಪ್ರಗೃಹ್ಯ
ಹಂತುಂ ನೃಪಂ ತಂ ಸಗಜಂ ಸಮಾಸದತ್ ॥೧೦೦॥

ಭೀಮ ಶ್ರೇಷ್ಠವಾದ ಬಾಣಗಳಿಂದ ಸುಪ್ರತೀಕ ಆನೆಯನ್ನು ತಡೆದಾಗ ಅವನ

ಕುದುರೆಗಳನ್ನು ಭಗದತ್ತ ಬಾಣಗಳಿಂದ ಪೀಡಿಸಿದ. ತನ್ನ ಕುದುರೆಗಳಿಗೆ ಬಹಳ ಪೀಡೆಯಾದಾಗ ಭೀಮ ಗದೆಯನ್ನೆತ್ತಿಕೊಂಡು ಭಗದತ್ತನನ್ನು ಆನೆ ಸಮೇತವಾಗಿ ಕೊಲ್ಲಲು ಮುಂದೆ ಬಂದ.

ಸ ಹಂತುಕಾಮೇನ ರುಷಾಽಭಿಪನ್ನೋ
ಭೀಮೇನ ರಾಜಾ ಪುರತಃ ಪೃಷ್ಠತಶ್ಚ ।
ಕೃಷ್ಣೇನಾಸ್ತ್ರಂ ವೈಷ್ಣವಂ ತದ್ ಗ್ರಹೀತುಂ
ಸಹಾರ್ಜುನೇನಾಪಯಯೌ ಸುಭೀತಃ ॥೧೦೧॥

ಮುಂದಿನಿಂದ, ತನ್ನನ್ನು ಕೊಲ್ಲಲು ಬಯಸಿ ಕೋಪದಿಂದ ಭೀಮ ಬರುತ್ತಿರುವುದನ್ನೂ, ಹಿಂದಿನಿಂದ, ತನ್ನ ವೈಷ್ಣ್ಣವಾಸ್ತ್ರವನ್ನು ಅಪಹರಿಸಲು ಅರ್ಜುನ ಸಮೇತನಾಗಿ ಕೃಷ್ಣ ಬರುತ್ತಿರುವುದನ್ನೂ ಕಂಡು ಭಗದತ್ತ ಭಯಗ್ರಸ್ತನಾಗಿ ಪಲಾಯನಗೈದ.

ತಸ್ಮಿನ್ ಗತೇ ಭೀಮಸೇನಾರ್ಜುನಾಭ್ಯಾಂ
ವಿದ್ರಾವಿತೇ ರಾಜಸಂಘೇ ಸಮಸ್ತೇ ।
ಭೀಷ್ಮಃ ಸೇನಾಮಪಹೃತ್ಯಾಪಯಾತೋ
ದುರ್ಯೋಧನಸ್ತಂ ನಿಶಿ ಚೋಪಜಗ್ಮಿವಾನ್ ॥೧೦೨॥

ಭಗದತ್ತ ಪಲಾಯನ ಮಾಡಿದಾಗ ಭೀಮಾರ್ಜುನರು ಸಮಸ್ತ ರಾಜ ಸಮೂಹವನ್ನೂ ಓಡಿಸಿದರು. ಆಗ ಭೀಷ್ಮ ಸೈನ್ಯವನ್ನು ಹಿಂದೆ ಕರೆಸಿಕೊಂಡು ಹೊರಟು ಹೋದ. ರಾತ್ರಿಯಲ್ಲಿ ಅವನ ಬಳಿಗೆ ದುರ್ಯೋಧನ ಬಂದ.

ಒಂಬತ್ತನೆ ದಿನದ ಯುದ್ಧ - ಅಭಿಮನ್ಯು ಪರಾಕ್ರಮ

ಸಂಶ್ರಾವಿತಃ ಕ್ರೂರವಚಃ ಸ ತೇನ
ಚಕ್ರೇ ಪ್ರತಿಜ್ಞಾಂ ಮೃತ್ಯುಭಯಂ ವಿಹಾಯ ।
ಶಕ್ತ್ಯಾ ಹನಿಷ್ಯಾಮಿ ಪರಾನಿತಿ ಸ್ಮ
ಚಕ್ರೇ ಚ ತತ್ ಕರ್ಮ ತಥಾ ಪರೇದ್ಯುಃ ॥೧೦೩॥

ದುರ್ಯೋಧನನಿಂದ ಕಠೋರ ಮಾತುಗಳನ್ನು ಕೇಳಿಸಿಕೊಂಡ ಭೀಷ್ಮ ಮೃತ್ಯು ಭಯವನ್ನು ತೊರೆದು ಶಕ್ತಿಪೂರ್ತಿ ವೈರಿಗಳನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ. ಮರುದಿನ ಆ ಕಾರ್ಯವನ್ನೂ ಮಾಡಿದ.

'ನೀನು ಪಾಂಡವರನ್ನು ಕೊಲ್ಲು, ಪಾಂಚಾಲ ಸೇನೆಯನ್ನು ನಾವು ಕೊಲ್ಲುತ್ತೇವೆ. ನಿನಗೆ ಪಾಂಡವರಲ್ಲಿ ಮೋಹ, ನನ್ನಲ್ಲಿ ದ್ವೇಷವಿರುವುದರಿಂದ ನೀನು ಹಾಗೆ ಮಾಡೆಯಾದರೆ ಶಸ್ತ್ರಸನ್ಯಾಸ ಮಾಡು. ಆಗ ಕರ್ಣ ಬರುತ್ತಾನೆ' ಎಂದು ನಿಷ್ಠುರವಾಗಿ ನುಡಿದ ದುರ್ಯೋಧನ. 'ಘೋಷಯಾತ್ರೆಯಲ್ಲಿ ಗೋಗ್ರಹಣದಲ್ಲಿ ಕರ್ಣ ಮಾಡಿದ್ದೇನು? ನಿನಗೇಕೆ ಅವನಲ್ಲಿ ಅಷ್ಟು

ಮೋಹ? ಶಿಖಂಡಿ ಹೊರತು ಎಲ್ಲ ಪಾಂಚಾಲ ಸೇನೆಯನ್ನು ನಾನು ಕೊಲ್ಲುತ್ತೇನೆ. ಇಲ್ಲವೆ, ನಾನೇ ಸಾಯುತ್ತೇನೆ, ಇದು ನನ್ನ ಪ್ರತಿಜ್ಞೆ ಎನ್ನುತ್ತಾನೆ ಭೀಷ್ಮ.

ತಂ ಶಕ್ತಿತೋ ಜುಗುಪುರ್ಧಾರ್ತರಾಷ್ಟ್ರಾ-
ಸ್ತೇನಾರ್ದಿತಾಶ್ಚೇದಿಪಾಂಚಾಲಮತ್ಸ್ಯಾಃ ।
ಪರಾದ್ರವನ್ ಭೀಷ್ಮಬಾಣೋರುಭೀತಾಃ
ಸಿಂಹಾರ್ದಿತಾಃ ಕ್ಷುದ್ರಮೃಗಾ ಇವಾರ್ತಾಃ ॥೧೦೪॥

ಕೌರವರು ಭೀಷ್ಮನನ್ನು ಶಕ್ತಿಪೂರ್ತಿ ರಕ್ಷಿಸಿಕೊಂಡರು. ಭೀಷ್ಮನಿಂದ ಪೀಡಿತರಾದ ಚೇದಿ ಪಾಂಚಾಲ ಮತ್ಸ್ಯದೇಶಗಳ ರಾಜರು ಭೀಷ್ಮನ ಬಾಣಗಳಿಗೆ ಬಹಳ ಭಯಪಟ್ಟು ಆರ್ತರಾಗಿ ಸಿಂಹದಿಂದ ಪೀಡಿತವಾದ ಕ್ಷುದ್ರಮೃಗಗಳಂತೆ ಓಡಿದರು.

ಸಂಸ್ಥಾಪ್ಯ ತಾನ್ ಭೀಷ್ಮಮಭಿಪ್ರಯಾಂತ-
ಮಲಂಬುಸೋಽವಾರಯತ್ ಪಾರ್ಥಸೂನುಮ್ ।
ವಿಜಿತ್ಯ ತಂ ಕೇಶವಭಾಗಿನೇಯೋ
ಭೀಷ್ಮಂ ಯಯೌ ಧಾರ್ತರಾಷ್ಟ್ರೋಽಮುಮಾರ ॥೧೦೫॥

ಅವರನ್ನು ತಡೆದು ನಿಲ್ಲಿಸಿ ಭೀಷ್ಮನ ಇದಿರಾಗಿ ಹೋಗುತ್ತಿದ್ದ ಅಭಿಮನ್ಯುವನ್ನು ಅಲಂಬುಸ ರಾಕ್ಷಸ ತಡೆದ. ಅವನನ್ನು ಅಭಿಮನ್ಯು ಪರಾಭವಗೊಳಿಸಿ ಭೀಷ್ಮನ ಬಳಿಗೆ ಧಾವಿಸಿದ. ಆಗ ದುರ್ಯೋಧನ ಅವನನ್ನು ಇದಿರಿಸಿದ.

ತದ್ ಯುದ್ಧಮಾಸೀನ್ನೃಪಪಾರ್ಥಪುತ್ರಯೋ
ರ್ವಿಚಿತ್ರಮತ್ಯದ್ಭುತರೂಪಮುಗ್ರಮ್ ।
ಸಮಂ ಚಿರಂ ತತ್ರ ಧನುಶ್ಚಕರ್ತ
ಧ್ವಜಂ ಚ ರಾಜಾ ಸಹಸಾಽಭಿಮನ್ಯೋಃ ॥೧೦೬॥

ದುರ್ಯೋಧನ ಅಭಿಮನ್ಯುಗಳ ಆ ಯುದ್ಧ ವಿಚಿತ್ರ, ಅತ್ಯದ್ಭುತ ಸ್ವರೂಪದ್ದಾಗಿತ್ತು. ಭಯಂಕರವಾಗಿತ್ತು. ದೀರ್ಘಕಾಲದವರೆಗೆ ಸಮವಾಗಿಯೆ ಇತ್ತು. ಬಳಿಕ ದುರ್ಯೋಧನ ಅಭಿಮನ್ಯುವಿನ ಬಿಲ್ಲನ್ನೂ ಧ್ವಜವನ್ನೂ ಬಲಾತ್ಕಾರವಾಗಿ ಕತ್ತರಿಸಿದ.

ಅಥೈನಮುಗ್ರೈಶ್ಚ ಶರೈರ್ವವರ್ಷ
ಸೂತಂ ಚ ತಸ್ಯಾಽಶು ಜಘಾನ ವೀರಃ ।
ತದಾಽಽಸದದ್ ಭೀಮಸೇನೋ ನೃಪಂ ತಂ
ಜಘಾನ ಚಾಶ್ವಾನ್ ಧೃತರಾಷ್ಟ್ರಜಸ್ಯ ॥೧೦೭॥

ಬಳಿಕ ವೀರ ದುರ್ಯೋಧನ ಅಭಿಮನ್ಯುವಿನ ಮೇಲೆ ಭಯಂಕರ ಬಾಣಗಳ ಮಳೆಗರೆದ.

ಅವನ ಸಾರಥಿಯನ್ನು ಬೇಗನೆ ಕೊಂದ. ಆಗ ಭೀಮಸೇನ ದುರ್ಯೋಧನನನ್ನು ಆಕ್ರಮಿಸಿದ. ಅವನ ಕುದುರೆಗಳನ್ನು ಕೊಂದ.

ದ್ರೋಣೋ ದ್ರೌಣಿರ್ಭಗದತ್ತಃ ಕೃಪಶ್ಚ
ಸಚಿತ್ರಸೇನಾ ಅಭ್ಯಯುರ್ಭೀಮಸೇನಮ್ ।
ಸರ್ವಾಂಶ್ಚ ತಾನ್ ವಿಮುಖೀಕೃತ್ಯ ಭೀಮಃ
ಸ ಚಿತ್ರಸೇನಾಯ ಗದಾಂ ಸಮಾದದೇ ॥೧೦೮॥

ದ್ರೋಣ ಅಶ್ವತ್ಥಾಮ ಭಗದತ್ತ ಕೃಪ ಮತ್ತು ಚಿತ್ರಸೇನನೆಂಬ ದುರ್ಯೋಧನನ ಸೋದರ ಇವರು ಭೀಮನನ್ನು ಆಕ್ರಮಿಸಿದರು. ಅವರೆಲ್ಲರನ್ನೂ ಹಿಮ್ಮೆಟ್ಟಿಸಿ ಭೀಮ ಚಿತ್ರಸೇನನ ವಧೆಗೆ ಗದೆ ಬೀಸಿದ.

ತಾಮುದ್ಯತಾಂ ವೀಕ್ಷ್ಯ ಪರಾದ್ರವಂಸ್ತೇ
ಸ ಚಿತ್ರಸೇನಶ್ಚ ರಥಾದವಪ್ಲುತಃ ।
ಸಂಚೂರ್ಣಿತೋ ಗದಯಾ ತದ್ರಥಶ್ಚ
ತಜ್ಜೀವನೇನೋದ್ಧೃಷಿತಾಶ್ಚ ಕೌರವಾಃ ॥೧೦೯॥

ಬೀಸಿ ಒಗೆದ ಆ ಗದೆಯನ್ನು ಕಂಡು ಎಲ್ಲರೂ ಪಲಾಯನ ಮಾಡಿದರು. ಚಿತ್ರಸೇನ ರಥದಿಂದ ಕೆಳಗೆ ಹಾರಿದ. ಅವನ ರಥ ಗದೆಯಿಂದ ಪುಡಿಯಾಯಿತು. ಚಿತ್ರಸೇನ ಬದುಕಿದನೆಂದು ಕೌರವರು ಹರ್ಷಿತರಾದರು.

ಭೀಷ್ಮಸ್ತು ಪಾಂಚಾಲಕರೂಶಚೇದಿ
ಷ್ವಹನ್ ಸಹಸ್ರಾಣಿ ಚತುರ್ದಶೋಗ್ರಃ ।
ರಥಪ್ರಬರ್ಹಾನತಿತಿಗ್ಮತೇಜಾ
ವಿದ್ರಾವಯಾಮಾಸ ಪರಾನವೀನಿವ ॥೧೧೦॥

ಭಯಂಕರ ನಾದ, ಪ್ರಖರ ತೇಜಸ್ಸುಳ್ಳ ಭೀಷ್ಮ ಪಾಂಚಾಲ ಕರೂಷ ಚೇದಿ ದೇಶಗಳ ಹದಿನಾಲ್ಕು ಸಾವಿರ ಮಹಾರಥರನ್ನು ಕೊಂದ. ತೋಳ ಕುರಿಗಳನ್ನು ಓಡಿಸುವಂತೆ ಉಳಿದವರನ್ನು ಓಡಿಸಿದ.

ವಿದ್ರಾವ್ಯ ಸರ್ವಾಮಪಿ ಪಾಂಡುಸೇನಾಂ
ವಿಶ್ರಾವ್ಯ ಲೋಕೇಷು ಚ ಕೀರ್ತಿಮಾತ್ಮನಃ ।
ಸೇನಾಮಪಾಹೃತ್ಯ ಯಯೌ ನಿಶಾಗಮೇ
ಸಂಸ್ತೂಯಮಾನೋ ಧೃತರಾಷ್ಟ್ರಪುತ್ರೈಃ ॥೧೧೧॥

ಭೀಷ್ಮ ಸಮಸ್ತ ಪಾಂಡವ ಸೈನ್ಯವನ್ನು ಓಡಿಸಿ ಲೋಕಗಳಲ್ಲಿ ತನ್ನ ಕೀರ್ತಿಯನ್ನು ಶ್ರುತಪಡಿಸಿ, ರಾತ್ರಿಕಾಲ ಬಂದಾಗ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು, ಕೌರವರಿಂದ ಹೊಗಳಿಸಿಕೊಳ್ಳುತ್ತ, ಶಿಬಿರಕ್ಕೆ ನಡೆದ.

ದ್ರೋಣೋ ವಿರಾಟಸ್ಯ ಪುರೋ ನಿಹತ್ಯ
ಶಂಖಂ ಸುತಂ ತಸ್ಯ ವಿಜಿತ್ಯ ತಂ ಚ ।
ವಿದ್ರಾವ್ಯ ಸೇನಾಮಪಿ ಪಾಂಡವಾನಾಂ
ಯಯೌ ನದೀಜೇನ ಸಹೈವ ಹೃಷ್ಟಃ ॥೧೧೨॥

ದ್ರೋಣ ವಿರಾಟನ ಮುಂದೆಯೆ ಅವನ ಮಗನಾದ ಶಂಖನನ್ನು ಕೊಂದು ವಿರಾಟನನ್ನೂ ಗೆದ್ದು ಪಾಂಡವರ ಸೈನ್ಯವನ್ನೂ ಓಡಿಸಿ ಹರ್ಷಿತನಾಗಿ ಭೀಷ್ಮನೊಡನೆ ಹೊರಟುಹೋದ.

ದ್ರೋಣ ಮೊದಲಿಗೆ ವಿರಾಟನನ್ನು ವಿರಥನನ್ನಾಗಿ ಮಾಡಿದ. ಒಡನೆ ವಿರಾಟ ತನ್ನ ಮಗನಾದ ಶಂಖನ ರಥವನ್ನೇರಿದ. ಇಬ್ಬರೂ ದ್ರೋಣರೊಡನೆ ಕಾದಿದರು. ಆಗ ಶಂಖ ಸತ್ತ. ವಿರಾಟ ಪರಾಜಿತನಾದ.

ಭೀಮಾರ್ಜುನಾವಪಿ ಶತ್ರೂನ್ ನಿಹತ್ಯ
ವಿದ್ರಾವ್ಯ ಸರ್ವಾಂಶ್ಚ ಯುಧಿ ಪ್ರವೀರಾನ್ ।
ಯುಧಿಷ್ಠಿರೇಣಾಪಹೃತೇ ಸ್ವಸೈನ್ಯೇ
ಭೀತೇನ ಭೀಷ್ಮಾಚ್ಛಿಬಿರಂ ಪ್ರಜಗ್ಮತುಃ ॥೧೧೩॥

ಭೀಮಾರ್ಜುನರೂ ಕೂಡ ಶತ್ರುಗಳನ್ನು ಕೊಂದು ಯುದ್ಧದಲ್ಲಿ ವೀರರಾಗಿರುವ ಉಳಿದ ಎಲ್ಲರನ್ನೂ ಓಡಿಸಿ, ಯುಧಿಷ್ಠಿರ ಭೀಷ್ಮನಿಗೆ ಭಯಗೊಂಡು ತನ್ನ ಸೈನ್ಯವನ್ನು ಹಿಂದೆ ಕರೆಸಿಕೊಂಡಾಗ, ತಾವೂ ಶಿಬಿರಕ್ಕೆ ತೆರಳಿದರು.

ಯುಧಿಷ್ಠಿರೋ ಭೀಷ್ಮಪರಾಕ್ರಮೇಣ
ಭೀತೋ ಭೀಷ್ಮಂ ಸ್ವವಧೋಪಾಯಮೇವ ।
ಪ್ರಷ್ಟುಂ ಯಯೌ ನಿಶಿ ಕೃಷ್ಣೋಽನುಜಾಶ್ಚ
ತಸ್ಯಾನ್ವಯುಸ್ತಂ ಸ ಪಿತಾಮಹೋ ಯತ್ ॥೧೧೪॥

ಯುಧಿಷ್ಠಿರ ಭೀಮನ ಪರಾಕ್ರಮದಿಂದ ಭೀತನಾಗಿ ಅವನ ವಧೆಗೆ ಉಪಾಯವನ್ನು ಅವನಲ್ಲಿಯೆ ಕೇಳುವುದಕ್ಕಾಗಿ ಅವನು ಪಿತಾಮಹನಾದುದರಿಂದ ರಾತ್ರಿಯಲ್ಲಿ ಅವನ ಶಿಬಿರಕ್ಕೇ ನಡೆದ. ಅವನ ತಮ್ಮಂದಿರೂ ಕೃಷ್ಣನೂ ಅವನನ್ನು ಹಿಂಬಾಲಿಸಿದರು.

ಭೀಮಾರ್ಜುನೌ ಶಕ್ನುವಂತಾವಪಿ ಸ್ಮ
ನತೇಽನುಜ್ಞಾಂ ಹಂತುಮಿಮಂ ಸಮೈಚ್ಛತಾಮ್ ।
ಪೂಜ್ಯೋ ಯತೋ ಭೀಷ್ಮ ಉದಾರಕರ್ಮಾ
ಕೃಷ್ಣೋಽಪ್ಯಾಯಾತ್ ತೇನ ಹಿ ಪಾಂಡವಾರ್ಥೇ ॥೧೧೫॥

ಭೀಮಾರ್ಜುನರು ಭೀಷ್ಮನನ್ನು ಕೊಲ್ಲಲು ಶಕ್ತರಾಗಿದ್ದರೂ ಅವನ ಅನುಜ್ಞೆ ಇಲ್ಲದೆ

ಅವನನ್ನು ಕೊಲ್ಲಲು ಬಯಸಲಿಲ್ಲ. ಏಕೆಂದರೆ ಉತ್ತಮ ಕರ್ಮವನ್ನೇ ಮಾಡುತ್ತಿದ್ದ ಭೀಷ್ಮ ಅವರಿಗೆ ಪೂಜ್ಯನಾಗಿದ್ದ. ಆದರಿಂದಲೆ ಕೃಷ್ಣನೂ ಪಾಂಡವರಿಗಾಗಿ ಅಲ್ಲಿಗೆ ಬಂದಿದ್ದ.

ಭೀಷ್ಮನ ವಧೆಗೆ ಉಪಾಯವನ್ನು ಭೀಷ್ಮನಿಂದಲೆ ಕೇಳಲು ಪಾಂಡವರು ಬಂದರು ಎನ್ನುವುದು ಸರಿಯೆ. ಆದರೆ ಉಪಾಯವನ್ನು ಕೇಳಿ ತಿಳಿದುಕೊಳ್ಳುವುದು ಉದ್ದೇಶವಾಗಿರಲಿಲ್ಲ. ಅದು ಮೊದಲೇ ಲೋಕಕ್ಕೆಲ್ಲ ಗೊತ್ತಿತ್ತು. ಶಿಖಂಡಿಯ ಮೇಲೆ ಶಸ್ತ್ರ ಪ್ರಯೋಗ ಮಾಡುವುದಿಲ್ಲ. ಪಾಂಡವರನ್ನು ಕೊಲ್ಲುವುದಿಲ್ಲ ಎಂದು ಸ್ಪಷ್ಟವಾಗಿ ಮೊದಲೇ ಭೀಷ್ಮ ಸಾರಿ ಹೇಳಿದ್ದಾನೆ (ಉದ್ಯೋ. 172.16) ಭೀಷ್ಮ ದ್ರೋಣ ಕೃಪ ಅಶ್ವತ್ಥಾಮರು ಯಾರೂ ಪಾಂಡವರನ್ನು ಕೊಲ್ಲುವುದಿಲ್ಲವೆಂದು ದುರ್ಯೋಧನನಿಗೆ ಮೊದಲೇ ಗೊತ್ತಿದ್ದಿತು. ಕೊಲ್ಲುವ ಬಯಕೆಯೂ ಅವನಿಗೆ ಇರಲಿಲ್ಲ. ಕೊಂದರೆ ಕೃಷ್ಣ ತನಗೆ ರಾಜ್ಯವಾಳಲು ಬಿಡಲಾರ ದ್ರೌಪದಿಗೋ ಕುಂತಿಗೋ ರಾಜ್ಯ ನೀಡಿಯಾನು ಎಂದು ದುರ್ಯೋಧನ ದ್ರೋಣರಿಗೆ ಹೇಳುತ್ತಾನೆ (ದ್ರೋಣ 12.17) ಧರ್ಮರಾಜನನ್ನು ಸೆರೆ ಹಿಡಿದು ಪುನಃ ಜೂಜಾಡಿ ಸೋಲಿಸಿ ಕಾಡಿಗೆ ಅಟ್ಟುವುದೇ ದುರ್ಯೋಧನನ ಬಯಕೆಯಾಗಿತ್ತು. ಹಾಗೇ ದ್ರೋಣರಿಗೆ ಹೇಳುತ್ತಾನೆ.

ಆದರೆ ಶಿಖಂಡಿಯನ್ನು ಮುಂದೆ ಮಾಡಿ ನೀವು ನನ್ನನ್ನು ಕೊಲ್ಲಬಹುದೆಂದು ಭೀಷ್ಮ ಅನುಜ್ಞೆ ನೀಡಲಿ ಎಂದೇ ಪಾಂಡವರು ಬಂದರು. ಅದು ಪ್ರೀತಿಯಿಂದ, ಪಿತಾಮಹನೆಂಬ ಗೌರವದಿಂದ. ಪಾಂಡವರು ಕೇವಲ ಉಪಾಯದಿಂದಲೆ ಭೀಷ್ಮನನ್ನು ಗೆದ್ದರೆಂದು ಅವನಿಗೆ ಕೀರ್ತಿಯೂ ಬರಲಿ ಎಂಬ ಉದ್ದೇಶದಿಂದ. ಧರ್ಮರಾಜನಿಗೆ ಯದ್ಯಪಿ ಭಯವಿದ್ದಿತು. ಭೀಮಾರ್ಜುನರಿಗೆ ಇರಲಿಲ್ಲ.

ಹತ್ತನೆ ದಿನದ ಯುದ್ಧ - ಭೀಷ್ಮ ಪತನ

ಪ್ರಾಪ್ಯಾನುಜ್ಞಾಂ ಭೀಷ್ಮತಸ್ತೇ ವಧಾಯ
ಶಿಖಂಡಿನಂ ತದ್ವಚಸಾಽಗ್ರ್ಯಾಯಿನಮ್ ।
ಕೃತ್ವಾ ಪರೇದ್ಯುರ್ಯುಧಯೇ ವಿನಿರ್ಗತಾ
ಭೀಷ್ಮಂ ಪುರಸ್ಕೃತ್ಯ ತಥಾ ಪರೇಽಪಿ ॥೧೧೬॥

ಪಾಂಡವರು ಭೀಷ್ಮನಿಂದ ಅವನ ವಧೆಗೆ ಅನುಜ್ಞೆ ಪಡೆದು ಮರುದಿನ ಅವನ ಮಾತಿನಿಂದ ಶಿಖಂಡಿಯನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟರು. ಕೌರವರೂ ಭೀಷ್ಮನನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟರು.

ಶಿಖಂಡಿನೋ ರಕ್ಷಕಃ ಫಲ್ಗುನೋಽಭೂದ್
ಭೀಷ್ಮಸ್ಯ ದುಃಶಾಸನ ಆಸ ಚಾಗ್ರೇ ।
ಅನ್ಯೇ ಚ ಸರ್ವೇ ಜುಗುಪುರ್ಭೀಷ್ಮಮೇವ ನ್ಯ
ವಾರಯನ್ ಭೀಮಸೇನಾದಯಸ್ತಾನ್ ॥೧೧೭॥

ಶಿಖಂಡಿಗೆ ರಕ್ಷಕನಾಗಿ ಅರ್ಜುನ ಹಿಂದೆ ನಿಂತ. ಭೀಷ್ಮನ ರಕ್ಷಕನಾಗಿ ದುಃಶಾಸನ ಮುಂದೆ ನಿಂತ. ಬೇರೆ ಎಲ್ಲ ಕೌರವ ಸೈನಿಕರೂ ಭೀಷ್ಮನ ರಕ್ಷಣೆಗೆ ನಿಂತರು. ಭೀಮಸೇನ ಮುಂತಾದವರು ಅವರನ್ನು ಇದಿರಿಸಿದರು.

ಭೀಷ್ಮಾಯ ಯಾಂತಂ ಯುಯುಧಾನಮಾಜೌ
ನ್ಯವಾರಯದ್ ರಾಕ್ಷಸೋಽಲಂಬುಸೋಽಥ ।
ತಂ ವಜ್ರಕಲ್ಪೈರತುದದ್ ವೃಷ್ಣಿವೀರಃ
ಶರೈಃ ಸ ಮಾಯಾಮಸೃಜತ್ ತದೋಗ್ರಮ್ ॥೧೧೮॥

ಯುದ್ಧದಲ್ಲಿ ಭೀಷ್ಮನ ಮೇಲೇರಿ ಬರುತ್ತಿದ್ದ ಸಾತ್ಯಕಿಯನ್ನು ಅಲಂಬುಸ ರಾಕ್ಷಸ ತಡೆದ. ವೀರಸಾತ್ಯಕಿ ಅವನನ್ನು ವಜ್ರಾಯುಧದಂಥ ಬಾಣಗಳಿಂದ ಗಾಯಗೊಳಿಸಿದ. ಆಗ ರಾಕ್ಷಸ ಭಯಂಕರವಾದ ಮಾಯೆಯನ್ನು ನಿರ್ಮಿಸಿದ.

ಅಸ್ತ್ರೇಣ ಮಾಯಾಮಪನುದ್ಯ ವೀರೌ
ವ್ಯದ್ರಾವಯದ್ ರಾಕ್ಷಸಂ ಸಾತ್ಯಕಿಸ್ತಮ್ ।
ತಸ್ಮಿನ್ ಗತೇ ಯುಯುಧಾನೋ ರಥೇನ
ಯಯೌ ಭೀಷ್ಮಂ ಪಾರ್ಥಮನ್ವೇವ ಧನ್ವೀ ॥೧೧೯॥

ವೀರಸಾತ್ಯಕಿ ಅಸ್ತ್ರದಿಂದ ಮಾಯೆಯನ್ನು ದೂರಮಾಡಿ ರಾಕ್ಷಸನನ್ನು ಓಡಿಸಿದ. ರಾಕ್ಷಸ ಓಡಿಹೋದಾಗ ಧನುರ್ಧಾರಿಯಾದ ಸಾತ್ಯಕಿ ಅರ್ಜುನನಿಗೆ ಸಹಾಯಕನಾಗಿ ರಥದಿಂದ ಭೀಷ್ಮನ ಬಳಿಗೆ ಹೋದ.

ದ್ರೋಣೋ ದ್ರೌಣಿರ್ಧಾರ್ತರಾಷ್ಟ್ರಶ್ಚ ರಾಜಾ
ಭೂರಿಶ್ರವಾ ಭಗದತ್ತಃ ಕೃಪಶ್ಚ ।
ಶಲ್ಯೋ ಬಾಹ್ಲೀಕಃ ಕೃತವರ್ಮಾ ಸುಶರ್ಮಾ
ಸರ್ವಾಶ್ಚ ಸೇನಾ ವಾರಿತಾ ವಾಯುಜೇನ ॥೧೨೦॥

ದ್ರೋಣ ಅಶ್ವತ್ಥಾಮ ದುರ್ಯೋಧನ ಭೂರಿಶ್ರವ ಭಗದತ್ತ ಕೃಪ ಶಲ್ಯ ಬಾಹ್ಲೀಕ ಕೃತವರ್ಮ ಸುಶರ್ಮರನ್ನೂ ಎಲ್ಲ ಸೈನ್ಯಗಳನ್ನೂ ಭೀಮ ತಡೆದ.

ಸ ತಾನ್ ಮುಹುರ್ವಿರಥೀಕೃತ್ಯ ವೀರಃ
ಪ್ರಾಗ್ಜ್ಯೋತಿಷಂ ಸಗಜಂ ದ್ರಾವಯಿತ್ವಾ ।

ನ್ಯವಾರಯತ್ ಫಲ್ಗುನಂ ರೋದ್ಧುಕಾಮಂ
ಪಾರ್ಥಶ್ಚ ದೇವವ್ರತಮಾಸಸಾದ ॥೧೨೧॥

ವೀರ ಭೀಮಸೇನ ಅವರನ್ನು ಪುನಃಪುನಃ ವಿರಥರನ್ನಾಗಿ ಮಾಡಿ ಓಡಿಸಿ, ಅರ್ಜುನನನ್ನು ತಡೆಯಲು ಬಯಸಿದ ಭಗದತ್ತನನ್ನೂ ಆನೆ ಸಹಿತವಾಗಿ ತಡೆದ, ಓಡಿಸಿದ. ಅದರಿಂದ ಅರ್ಜುನ ನಿರಾತಂಕವಾಗಿ ಭೀಷ್ಮನೊಡನೆ ಹೋರಾಡಿದ.

'ರೋದ್ಧುಕಾಮಂ' ಎಂದು ವಾದಿರಾಜೀಯ ವರದರಾಜೀಯ ವ್ಯಾಖ್ಯಾನಗಳಿಗೆ ಅನುಗುಣವಾದ ಪಾಠ. ಹೃಷೀಕೇಶೀಯ ಪಾಠವೂ ಹಾಗೇ ಇದೆ.

ಫಲ್ಗುನ ಪ್ರತಿರೋಧೇಚ್ಛಂ ದೂರೀಚಕಾರೇತಿ ಭಾವಃ।

ಎಂದು ಮುಂತಾಗಿ ವಾದಿರಾಜೀಯದಲ್ಲಿ ಹೇಳಿದೆ. ವರದರಾಜೀಯದಲ್ಲಿ-

ರೋದ್ಧುಕಾಮಂ ನಿರುದ್ಧಂ ಕರ್ತುಕಾಮಂ।

ಎಂದಿದೆ. ಜನಾರ್ದನೀಯದಲ್ಲಿ ಮಾತ್ರ-

'ಫಲ್ಗುನಂ ಪ್ರತಿಯೋದ್ಧುಕಾಮಂ'

ಎಂದಿದೆ. ಇದೂ 'ಫಲ್ಗುನಂ ಪ್ರತಿರೋದ್ಧುಕಾಮಂ' ಎಂದಿರಬಹುದು.

ವಾದಿರಾಜೀಯದಲ್ಲಿ 'ರೋದ್ಧುಕಾಮಂ' ಶಬ್ದಕ್ಕೆ-

'ಅರ್ಜುನನನ್ನು ತಡೆಯಬೇಕೆನ್ನುವ ಭಗದತ್ತನ ಬಯಕೆಯನ್ನು ಭೀಮ ತಡೆದ. ಅಂದರೆ ವಿಫಲವಾಗಿಸಿದ' ಎಂದು ವ್ಯಾಖ್ಯಾನಿಸಲಾಗಿದೆ.

ಯುಧಿಷ್ಠಿರಂ ಭೀಷ್ಮಮಭಿಪ್ರಯಾಂತಂ
ಮಾದ್ರೀಸುತಾಭ್ಯಾಂ ಸಹಿತಂ ನೃವೀರಮ್ ।
ನ್ಯವಾರಯಚ್ಛಕುನಿಃ ಸಾದಿನಾಂ ಚ
ಯುತೋಽಯುತೇನೈವ ವರಾಶ್ವಗೇನ ॥೧೨೨॥

ನಕುಲ ಸಹದೇವರ ಸಮೇತನಾಗಿ ಭೀಷ್ಮನ ಮೇಲೇರಿ ಹೋಗುತ್ತಿದ್ದ ವೀರ ಯುಧಿಷ್ಠಿರನನ್ನು ಹತ್ತು ಸಾವಿರ ಅಶ್ವಸೈನಿಕರಿಂದ ಯುಕ್ತನಾದ ಶಕುನಿ ತಡೆದ.

ತಾನ್ ಸಾದಿನೋಽಶ್ವಾಂಶ್ಚ ನಿಹತ್ಯ ಸರ್ವಾನ್
ವಿಜಿತ್ಯ ತಂ ಶಕುನಿಂ ಪಾಂಡವಾಸ್ತೇ ।

ಪ್ರಾಪುರ್ಭೀಷ್ಮಂ ದ್ರೌಪದೇಯಾಶ್ಚ ಸರ್ವೇ
ತಥಾ ವಿರಾಟದ್ರುಪದೌ ಕುಂತಿಭೋಜಃ ॥೧೨೩॥

ಯುಧಿಷ್ಠಿರ ನಕುಲ ಸಹದೇವರು ಆ ಅಶ್ವಸೈನಿಕರನ್ನೂ ಕುದುರೆಗಳನ್ನೂ ಕೊಂದು ಶಕುನಿಯನ್ನೂ ಪರಾಭವಗೊಳಿಸಿ ಭೀಷ್ಮನ ಬಳಿಗೆ ಬಂದರು. ಹಾಗೇ ದ್ರೌಪದೀ ಪುತ್ರರು, ವಿರಾಟ ದ್ರುಪದರು ಕುಂತಿಭೋಜ ಎಲ್ಲರೂ ಬಂದರು.

ಧೃಷ್ಟದ್ಯುಮ್ನಂ ಭೀಷ್ಮಮಭಿಪ್ರಯಾಂತಂ
ನ್ಯವಾರಯತ್ ಸೈಂಧವಸ್ತಂ ಸ ಬಾಣೈಃ।
ಹತಾಶ್ವಸೂತಂ ಸಗಣಂ ದ್ರಾವಯಿತ್ವಾ
ಸಮಾಸದದ್ ಭೀಷ್ಮಮೇವಾಕಶು ವೀರಃ ॥೧೨೪॥

ಭೀಷ್ಮನಿಗೆ ಇದಿರಾಗಿ ಹೋಗುತ್ತಿದ್ದ ಧೃಷ್ಟದ್ಯುಮ್ನನನ್ನು ಜಯದ್ರಥ ತಡೆದ. ವೀರ ಧೃಷ್ಟದ್ಯುಮ್ನ ಬಾಣಗಳಿಂದ ಅವನ ಕುದುರೆಗಳನ್ನೂ ಸಾರಥಿಯನ್ನೂ ಕೊಂದು ಅವನನ್ನು ಪರಿವಾರ ಸಮೇತವಾಗಿ ಅಟ್ಟಿ ಬೇಗನೆ ಭೀಷ್ಮನ ಬಳಿಗೆ ಬಂದ.

ಗುಪ್ತೋಽಥ ಪಾರ್ಥೇನ ರಣೇ ಶಿಖಂಡೀ
ಭೀಷ್ಮಂ ಸಮಾಸಾದ್ಯ ಶರೈರತಾಡಯತ್।
ಭೀಷ್ಮಃ ಸ್ತ್ರೀತ್ವಂ ತಸ್ಯ ಜಾನನ್ ನ ತಸ್ಮೈ
ಮುಮೋಚ ಬಾಣಾನ್ ಸ ತು ತಂ ತುತೋದ ॥೧೨೫॥

ಯುದ್ಧದಲ್ಲಿ ಅರ್ಜುನನಿಂದ ರಕ್ಷಿತನಾದ ಶಿಖಂಡಿ ಭೀಷ್ಮನ ಇದಿರಿಗೆ ಹೋಗಿ ಬಾಣಗಳಿಂದ ಹೊಡೆದ. ಆದರೆ ಹಿಂದೆ ಶಿಖಂಡಿ ಹೆಣ್ಣಾಗಿದ್ದುದನ್ನು ತಿಳಿದಿರುವ ಭೀಷ್ಮ ಅವನಿಗೆ ಪ್ರತಿಯಾಗಿ ಬಾಣಗಳನ್ನು ಎಸೆಯಲಿಲ್ಲ. ಅದರಿಂದ ಶಿಖಂಡಿ ಭೀಷ್ಮನನ್ನು ನಿರಾತಂಕವಾಗಿ ಪೀಡಿಸತೊಡಗಿದ.

ಶಿಖಂಡಿನಂ ವಾರಯಾಮಾಸ ಬಾಣೈ-
ರ್ದುರ್ಮರ್ಷಣೋಽಕಮರ್ಷಣವಿಹ್ವಲೇಕ್ಷಣಃ।
ನಾತ್ಯೇತುಮೇನಮಶಕಚ್ಛಿಖಂಡೀ
ದುಃಶಾಸನಃ ಪಾರ್ಥಮವಾರಯತ್ ತದಾ ॥೧೨೬॥

ದುರ್ಮರ್ಷಣ ಕೋಪದಿಂದ ಕಣ್ಣು ತಿರುಗಿಸುತ್ತ ಬಾಣಗಳಿಂದ ಶಿಖಂಡಿಯನ್ನು ತಡೆದ. ಅವನನ್ನು ದಾಟಿ ಹೋಗಲು ಶಿಖಂಡಿ ಶಕ್ತನಾಗಲಿಲ್ಲ. ಅರ್ಜುನನನ್ನೂ ದುಃಶಾಸನ ತಡೆದ.

ದುರ್ಮರ್ಷಣ ನೂರುಮಂದಿ ಕೌರವರಲ್ಲಿ ಒಬ್ಬ, ಮಹಾರಥಿಕ.

ಸ ಲೋಕವೀರೋಽಪಿ ದುರಾತ್ಮನಾಕಮುನಾ
ರುದ್ಧೋಽಶಕನ್ನೈನಮತೀತ್ಯ ಯಾತುಮ್ ।
ಭೀಷ್ಮಂ ಪಾರ್ಥಃ ಸಾಯಕಾಶ್ಚಾಸ್ಯ ತಸ್ಮಿನ್
ಸಸಜ್ಜಿರೇ ಪರ್ವತೇಷ್ವಪ್ಯಸಕ್ತಾಃ ॥೧೨೭॥

ದುರಾತ್ಮನಾದ ದುಃಶಾಸನ ತಡೆದಾಗ ಅವನನ್ನು ದಾಟಿ ಭೀಷ್ಮನ ಬಳಿಗೆ ಹೋಗಲು ಲೋಕೈಕ ವೀರನಾದ ಅರ್ಜುನನೂ ಶಕ್ತನಾಗಲಿಲ್ಲ. ಪರ್ವತವನ್ನೂ ಭೇದಿಸಿಕೊಂಡು ಹೋಗಬಲ್ಲ ಅವನ ಬಾಣಗಳೂ ದುಃಶಾಸನನ ಮೈಗೆ ತಾಗಿ ನಿಂತುವು ಹೊರತು ಭೇದಿಸಲಿಲ್ಲ.

ಅಮರ್ಷಯುಕ್ತೌ ಚಿರಮೇವ ವೀರಾ-
ವಯುದ್ಧ್ಯತಾಮರ್ಜುನಧಾರ್ತರಾಷ್ಟ್ರೌ ।
ಸಮಂ ತದಾಸೀನ್ಮಹದದ್ಭುತಂ ಚ
ದಿವೌಕಸಾಂ ಪಶ್ಯತಾಂ ಭೂಭೃತಾಂ ಚ ॥೧೨೮॥

ವೀರರಾದ ಅರ್ಜುನ ದುಃಶಾಸನರು ಕೋಪಯುಕ್ತರಾಗಿ ದೀರ್ಘಕಾಲ ಯುದ್ಧ ಮಾಡಿದರು. ಯುದ್ಧ ಸಮವಾಗಿಯೆ ಇದ್ದಿತು. ನೋಡುವ ದೇವತೆಗಳಿಗೂ ರಾಜರಿಗೂ ಅದು ಮಹಾ ಅದ್ಭುತವೆನಿಸಿತು.

ತದಾ ವಿರಾಟದ್ರುಪದೌ ಕುಂತಿಭೋಜಂ
ಕೃಷ್ಣಾಸುತಾನ್ ಕೈಕಯಾಂಶ್ಚೇಕಿತಾನಮ್ ।
ಭೂರಿಃ ಶಲಃ ಸೋಮದತ್ತೋ ವಿಕರ್ಣಃ
ಸಕೈಕಯಾ ವಾರಯಾಮಾಸುರುಚ್ಚೈಃ ॥೧೨೯॥

ಆಗಲೆ ವಿರಾಟ ದ್ರುಪದ ಕುಂತಿಭೋಜ ದ್ರೌಪದಿಪುತ್ರರು ಕೈಕಯರು ಚೇಕಿತಾನ ಇವರನ್ನು ಭೂರಿ ಶಲ ಸೋಮದತ್ತ ವಿಕರ್ಣ ಕೈಕಯರು ಬಲವಾಗಿ ತಡೆದರು.

ಜಿತ್ವೈವ ತಾಂಸ್ತೇಽಭಿಯಯುಶ್ಚ ಭೀಷ್ಮಂ
ತದಾರ್ಜುನೋಽತೀತ್ಯ ದುಃಶಾಸನಂ ಚ ।
ಭೀಷ್ಮಂ ಶರೈರಾರ್ಚ್ಛದರಿಪ್ರಮಾಥಿಭಿಃ
ಶಿಖಂಡಿನಂ ಧಾರ್ತರಾಷ್ಟ್ರಾದ್ ವಿಮುಚ್ಯ ॥೧೩೦॥

ಅವರನ್ನು ಪರಾಭವಗೊಳಿಸಿ ವಿರಾಟ ಮುಂತಾದವರು ಭೀಷ್ಮನ ಬಳಿಗೆ ಬಂದರು. ಆಗಲೆ ಅರ್ಜುನನೂ ದುಃಶಾಸನನನ್ನು ದಾಟಿ ಬಂದು ಶಿಖಂಡಿಯನ್ನು ದುರ್ಮರ್ಷಣನಿಂದ ಬಿಡಿಸಿ ಶತ್ರುನಾಶಕವಾದ ಬಾಣಗಳಿಂದ ಭೀಷ್ಮನನ್ನು ಪೀಡಿಸಿದ.

ಸ ತೈಃ ಸಮಸ್ತೈರ್ಬಹುಶಸ್ತ್ರಪೂಗೈ-
ರ್ಭೃಶಂ ಮರ್ಮಸ್ವರ್ದಿತಶಾಪಮುಕ್ತೈಃ ।

ಶರೈಃ ಸಮಸ್ತಾನ್ ವಿರಥಾಂಶ್ಚಕಾರ
ಶೈನ್ಯೇಯಪಾಂಚಾಲ್ಯಯುಧಿಷ್ಠಿರಾದ್ಯಾನ್ ॥೧೩೧॥

ಯುಧಿಷ್ಠಿರಾದಿ ಸಮಸ್ತ ವೀರರ ನಾನಾ ಬಗೆಯ ಆಯುಧ ಸಮೂಹಗಳಿಂದ ಭೀಷ್ಮ ಮರ್ಮಸ್ಥಳಗಳಲ್ಲಿ ಪೀಡಿತನಾದರೂ ಬಿಲ್ಲಿನಿಂದ ಬಾಣಗಳನ್ನೆಸೆದು ಸಾತ್ಯಕಿ ದ್ರುಪದ ಯುಧಿಷ್ಠಿರ ಮುಂತಾದ ಎಲ್ಲರನ್ನೂ ವಿರಥರನ್ನಾಗಿ ಮಾಡಿದ.

ಸ ಚೇದಿಪಾಂಚಾಲಕರೂಶಮುಖ್ಯಾನ್
ರಥೋದಾರಾನ್ ಪಂಚವಿಂಶತ್ಸಹಸ್ರಾನ್ ।
ಸಂಪ್ರೇಷಯಾಮಾಸ ಯಮಾಯ ಬಾಣೈ
ರ್ಯುಗಾಂತಕಾಲಾಗ್ನಿರಿವ ಪ್ರವೃದ್ಧಃ ॥೧೩೨॥

ಭೀಷ್ಮ ಧಗಧಗಿಸುವ ಪ್ರಳಯಕಾಲದ ಅಗ್ನಿಯಂತಾಗಿ ಚೇದಿ ಪಾಂಚಾಲ ಕರೂಷರಲ್ಲಿ ಮುಖ್ಯರಾದ ಇಪ್ಪತ್ತೈದು ಸಾವಿರ ಶ್ರೇಷ್ಠ ರಥಿಕರನ್ನು ಬಾಣಗಳಿಂದ ಯಮನಿಗೆ ಕಳಿಸಿಕೊಟ್ಟ.

ಭೀಷ್ಮ ತಾನಿನ್ನು ವೀರರನ್ನು ಕೊಂದುದು ಸಾಕು ಬೇಗನೆ ಶರೀರ ತ್ಯಾಗ ಮಾಡಬೇಕು ಎಂದು ಬಯಸಿ ಹತ್ತಿರದಲ್ಲಿಯೆ ಇದ್ದ ಧರ್ಮರಾಜನನ್ನು ಕರೆದು ಹೇಳಿದ. 'ನನಗೆ ಈ ಶರೀರದಲ್ಲಿ ವೈರಾಗ್ಯ ಉಂಟಾಗಿದೆ. ಬಹು ದೀರ್ಘಕಾಲ ವೀರಜನರ ವಧೆ ಮಾಡುತ್ತ ಬಂದಿದ್ದೇನೆ. ಇನ್ನು ಸಾಕು. ಅದರಿಂದ ಪಾಂಚಾಲರ ಸೈನ್ಯವನ್ನು ಮುಂದೆ ಮಾಡಿಕೊಂಡು ಬಂದು ನನ್ನ ವಧೆಗೆ ಪ್ರಯತ್ನ ಮಾಡು ಹೀಗೆ ಮಾಡಿದರೆ ಅದು ನನಗೆ ಪ್ರಿಯವಾಗುವುದು' (ಭೀಷ್ಮ 115.15) ಇದನ್ನು ಕೇಳಿ ಧೃಷ್ಟದ್ಯುಮ್ನ ನಿರ್ಭಯವಾಗಿ ಭೀಷ್ಮನೊಡನೆ ಯುದ್ಧ ಮಾಡಲು ತೊಡಗಿದ. ಪಾಂಡವರೂ ನಿಃಸಂಕೋಚವಾಗಿ ಉತ್ಸಾಹದಿಂದ ತಾತನೊಡನೆ ಯುದ್ಧ ಮಾಡಿದರು. ಮೇಲೆ ಆಕಾಶದಲ್ಲಿ ಮುನಿಗಳೂ ವಸುಗಳೂ 'ನಿನ್ನ ಈ ನಿರ್ಧಾರ ನಮಗೂ ಪ್ರಿಯ' ಎಂದರು. ಭೀಷ್ಮನಿಗೆ ಮತ್ತು ವ್ಯಾಸರ ಅನುಗ್ರಹದಿಂದ ಸಂಜಯನಿಗೆ ಮಾತ್ರ ಅದು ಕೇಳಿಸಿತು.

ನಿರೀಕ್ಷ್ಯ ತಂ ಸೂರ್ಯಮಿವಾತಪಂತಂ
ಸಂಚೋದಿತೋ ವಾಸುದೇವೇನ ಪಾರ್ಥಃ ।
ಚಿಚ್ಛೇದ ತತ್ಕಾರ್ಮುಕಂ ಲೋಕವೀರೋ
ರಣೇಽರ್ಧ ಚಂದ್ರೇಣ ಸ ಚಾನ್ಯದಾದದೇ ॥೧೩೩॥

ಭೀಷ್ಮ ರಣರಂಗದಲ್ಲಿ ಸೂರ್ಯನಂತೆ ಉರಿಯುತ್ತಿದ್ದುದನ್ನು ಕಂಡು ಶ್ರೀಕೃಷ್ಣನಿಂದ ಪ್ರೇರಿತನಾದ ಲೋಕವೀರ ಅರ್ಜುನ ಅವನ ಬಿಲ್ಲನ್ನು ಒಂದು ಅರ್ಧಚಂದ್ರ ಬಾಣದಿಂದ ಕತ್ತರಿಸಿದ. ಒಡನೆ ಅವನು ಇನ್ನೊಂದು ಬಿಲ್ಲನೆತ್ತಿಕೊಂಡ.

ಚಿಚ್ಛೇದ ತಚ್ಚೈವಮಷ್ಟೌ ಧನೂಂಷಿ
ಶಕ್ತಿಂ ಚ ಚರ್ಮಾಸಿವರಂ ಪರಾಣೆ ।
ಧನೂಂಷಿ ದತ್ತಾನಿ ನೃಭಿರ್ನೃಪಸ್ಯ
ಸರ್ವಾಣಿ ಚಿಚ್ಛೇದ ಸ ಪಾಕಶಾಸನಿಃ ॥೧೩೪॥

ಆ ಬಿಲ್ಲನ್ನೂ ಅರ್ಜುನ ಕತ್ತರಿಸಿದ. ಹೀಗೇ ಎಂಟು ಬಿಲ್ಲುಗಳನ್ನೂ ಶಕ್ತ್ಯಾಯುಧವನ್ನೂ ಶ್ರೇಷ್ಠವಾದ ಖಡ್ಗ ಚರ್ಮಗಳನ್ನೂ ಕತ್ತರಿಸಿದ. ದುರ್ಯೋಧನನ ಭೃತ್ಯರು ಕೊಟ್ಟ ಬೇರೆ ಎಲ್ಲ ಬಿಲ್ಲುಗಳನ್ನೂ ಕತ್ತರಿಸಿದ.

ತತಃ ಶರೈಃ ಸೂರ್ಯಕರಪ್ರಕಾಶೈ-
ರ್ವಿವ್ಯಾಧ ಸರ್ವೇ ಚ ಯುಧಿಷ್ಠಿರಾದ್ಯಾಃ ।
ತೈರರ್ದಿತೋ ನ್ಯಪತದ್ ಭೂತಲೇ ಸ
ಪ್ರಾಣಾನ್ ದಧಾರಾಪಿ ತಥೋತ್ತರಾಯಣಾತ್ ॥೧೩೫॥

ಬಳಿಕ ಸೂರ್ಯಕಿರಣಗಳಂತೆ ಹೊಳೆವ ಬಾಣಗಳಿಂದ ಅರ್ಜುನ ಭೀಷ್ಮನನ್ನು ಹೊಡೆದ. ಯುಧಿಷ್ಠಿರ ಮುಂತಾದವರೆಲ್ಲರೂ ಹೊಡೆದರು. ಅವರಿಂದ ಪೀಡಿತನಾದ ಭೀಷ್ಮ ನೆಲದ ಮೇಲೆ ಬಿದ್ದ. ಉತ್ತರಾಯಣದವರೆಗೆ ಪ್ರಾಣಧಾರಣ ಮಾಡಿದ.

ಶಿಖಂಡಿಯ ಅತಿ ಉಗ್ರವಾದ ಬಾಣಗಳೂ ಮೈಗೆ ಬಿದ್ದಾಗ ಭೀಷ್ಮನಿಗೆ ಸುಖವಾಗುತ್ತಿತ್ತು. ಕಡುಸೆಖೆಯಿಂದ ಬಳಲುವಾತ ತಂಪಾದ ನೀರ ಸೇಕವನ್ನು ಬಯಸುವಂತೆ ಭೀಷ್ಮ ಶಿಖಂಡಿಯ ಬಾಣದ ಸುಖಸ್ಪರ್ಶ ಅನುಭವಿಸಿದ (ಭೀಷ್ಮ 117.24) ಅರ್ಜುನನ ಬಾಣಗಳಿ ಗಾಯ ಮಾಡಿ ಮೈಯಲ್ಲಿ ನೆಟ್ಟು ಹೋಗುತ್ತಿದ್ದುವು. ಹಾಗೆ ಮೈಯಲ್ಲಿ ಬಾಣಗಳಿಲ್ಲದ ಭಾಗ ಎರಡು ಅಂಗುಲದಷ್ಟೂ ಇರಲಿಲ್ಲ. ಸೂರ್ಯಾಸ್ತಕ್ಕೆ ಸ್ವಲ್ಪ ಮುಂಚೆ ಅವನು ಪೂರ್ವಕ್ಕೆ ತಲೆ ಇರುವಂತೆ ನೆಲದ ಮೇಲೆ ಬಿದ್ದ. ಮೈಯೆಲ್ಲ ಬಾಣಗಳಿ ನೆಟ್ಟಿದ್ದರಿಂದ ಭೂ ಸ್ಪರ್ಶವಾಗಲಿಲ್ಲ. ಹೀಗಾಗಿ ಬಾಣಗಳಿ ಹಾಸಿಗೆಯಾಯಿತು.

'ದಕ್ಷಿಣಾಯನದಲ್ಲಿ ಭೀಷ್ಮ ಹೇಗೆ ಮರಣ ಹೊಂದುತ್ತಾನೆ?' ಎಂದು ಅಂತರಿಕ್ಷದಲ್ಲಿ ದೇವತೆಗಳು ಕೇಳಿದರು. ಗಂಗೆ ಹಂಸರೂಪದಿಂದ ಮುನಿಗಳನ್ನು ಕಳಿಸಿದಳು. ಅವರೂ ಬಂದು ಭೀಷ್ಮನಿಗೆ ಪ್ರದಕ್ಷಿಣೆ ಬಂದು ದಕ್ಷಿಣಾಯನದಲ್ಲಿ ಸಾಯಬೇಡ ಎಂದರು. ಎಲ್ಲರಿಗೂ 'ಉತ್ತರಾಯಣ ಬರುವವರೆಗೂ ಬದುಕಿರುತ್ತೇನೆ' ಎಂದು ಉತ್ತರಿಸಿದ ಭೀಷ್ಮ. ಏಕಾಗ್ರಚಿತ್ತದಿಂದ ಪ್ರಣವ ಮಹೋಪನಿಷತ್ತು ಜಪ ಮಾಡತೊಡಗಿದ. ತಂದೆ ಶಂತನು ಅವನಿಗೆ ಅವಧ್ಯತ್ವ ಇಚ್ಛಾಮರಣಗಳ ವರ ಕೊಟ್ಟಿದ್ದ. ಅದರ ಪ್ರಭಾವ ಇದು.

ನಿಪಾತಿತೇಽಸ್ಮಿನ್ ಮಾರುತಿದ್ರೋಣಮುಖ್ಯಾನ್
ವಿದ್ರಾವ್ಯ ತತ್ರಾಽಗಮದಾಶು ತೇಽಪಿ ।
ತದಾಯುಧಾನಿ ಪ್ರಣಿಧಾಯ ವೀರಾಃ
ಪಾರ್ಥಾಃ ಪರೇ ಚೈನಮುಪಾಸದನ್ ಸ್ಮ ॥೧೩೬॥

ಭೀಷ್ಮ ಪತನ ಹೊಂದಿದಾಗ ಭೀಮಸೇನ ದ್ರೋಣಾದಿಗಳನ್ನು ಓಡಿಸಿ ಭೀಷ್ಮ ಬಿದ್ದ ಸ್ಥಳಕ್ಕೆ ಬೇಗನೆ ಬಂದ. ಆಯುಧಗಳನ್ನು ಕೆಳಗಿಟ್ಟು ಅವರೂ ಅಲ್ಲಿಗೆ ಬಂದರು. ಪಾಂಡವರೂ ಕೌರವರೂ ಎಲ್ಲ ವೀರರೂ ಭೀಷ್ಮನ ಬಳಿ ಬಂದು ಸೇರಿದರು.

ಪ್ರಣಮ್ಯ ತಂ ತದ್ವಚನಾತ್ ಸಮೀಯು-
ಸ್ತಸ್ಮಿನ್ ದಿನೇ ಶಿಬಿರಾಣ್ಯೇವ ಸರ್ವೇ ।
ಪರೇ ದಿನೇ ಸರ್ವ ಏವೋಪತಸ್ಥು-
ರ್ಭೀಷ್ಮಂ ಯದೂನಾಂ ಪತಿನಾ ಸಹೈವ ॥೧೩೭॥

ಎಲ್ಲರೂ ಭೀಷ್ಮನನ್ನು ನಮಸ್ಕರಿಸಿ ಅವನ ಮಾತಿನಿಂದ ಆ ದಿನದಲ್ಲಿ ಶಿಬಿರಕ್ಕೆ ಹಿಂತಿರುಗಿದರು. ಮರುದಿನ ಶ್ರೀಕೃಷ್ಣನೊಂದಿಗೆ ಎಲ್ಲರೂ ಭೀಷ್ಮನ ಬಳಿಗೆ ಬಂದರು.

ಸ ಪೂರ್ವದಿವಸೇ ಪಾರ್ಥದತ್ತಬಾಣೋಪಬರ್ಹಣಃ ।
ತದಾऽಪಿ ತೃಟ್ಪರೀತಾತ್ಮಾ ಯೋಗ್ಯಂ ಪೇಯಮಯಾಚತ ॥೧೩೮॥

ಭೀಷ್ಮ ಹಿಂದಿನ ದಿನ ಅರ್ಜುನ ನೀಡಿದ ಬಾಣಗಳ ತಲೆದಿಂಬನ್ನು ಸ್ವೀಕರಿಸಿದ್ದ. ಈಗಲೂ ತೃಷೆಯಿಂದ ಪೀಡಿತನಾಗಿ ಯೋಗ್ಯವಾದ ಪಾನೀಯವನ್ನು ಬೇಡಿದ.

ಭೀಷ್ಮನ ತಲೆ ಆಧಾರವಿಲ್ಲದೆ ಜೋಲಾಡುತ್ತಿತ್ತು 'ದಿಂಬು!' ಎಂದ. ಕೌರವರು ಮಿದುವಾದ ತಲೆದಿಂಬುಗಳನ್ನು ತರಿಸಿದರು. ಭೀಷ್ಮ ಬೇಡವೆಂದ. ನನಗೆ ವೀರಶಯ್ಯೆಗೆ ಯೋಗ್ಯವಾದ ದಿಂಬು ಕೊಡೆಂದು ಅರ್ಜುನನಿಗೆ ಹೇಳಿದ. ಅರ್ಜುನ ಮೂರು ಬಾಣ ಪ್ರಯೋಗ ಮಾಡಿ ತಲೆದಿಂಬಾಗಿ ಮಾಡಿಕೊಟ್ಟ, 'ನೀನು ಹೀಗೆಮಾಡದಿರುತ್ತಿದ್ದರೆ ಶಪಿಸುತ್ತಿದ್ದೆ' ಎಂದ, ಭೀಷ್ಮ. ದುರ್ಯೋಧನ ಮೈಯ ಬಾಣಗಳನ್ನು ತೆಗೆದು ಚಿಕಿತ್ಸೆ ಮಾಡುವಲ್ಲಿ ಕುಶಲರಾದ ವೈದ್ಯರನ್ನು ಕರೆಸಿದ. 'ಅವರಿಗೆ ಯಥೇಷ್ಟ ಧನವಿತ್ತು ಕಳಿಸು, ನನ್ನನ್ನು ಬಾಣಗಳ ಸಮೇತ ಸುಡಬೇಕು' ಎಂದ ಭೀಷ್ಮ.

ರಾತ್ರಿ ಕಳೆಯಿತು. ಬೆಳಿಗ್ಗೆ ನಾನಾ ದೇಶದ ಜನರು ಸಾಲಾಗಿ ಸಂದರ್ಶನಕ್ಕೆ ಬಂದರು. ಅಭಿವಾದನಮಾಡಿಸುತ್ತಲೂ ನಿಂತರು. ಕನ್ಯೆಯರು ಅರಳು ಹೂಮಾಲೆ ಚಂದನ ಚೂರ್ಣಗಳನ್ನು ಮೈಗೆ ಚೆಲ್ಲಿದರು. ವಾದ್ಯ ನೃತ್ಯಗೀತೆ ನಡೆಸಿದರು.

ಧಾರ್ತರಾಷ್ಟ್ರೈರವಿಜ್ಞಾತಂ ತದಾ ವಿಜ್ಞಾಯ ವಾಸವಿಃ ।
ವಾರುಣಾಸ್ತ್ರೇಣ ಭಿತ್ತ್ವಾ ಸ ಭೂಮಿಂ ವಾರಿ ಸುಗಂಧಿ ಚ ।
ಊರ್ಧ್ವಧಾರಮದಾದಾಸ್ಯೇ ತರ್ಪಿತೋಽನೇನ ಸೋಽವದತ್ ॥೧೩೯॥

ಭೀಷ್ಮನಿಗೆ ಯೋಗ್ಯವಾದ ನೀರು ಯಾವುದೆಂದು ಕೌರವರಿಗೆ ತಿಳಿಯಲಿಲ್ಲ. ಅರ್ಜುನ ತಿಳಿದು ವಾರುಣಾಸ್ತ್ರದಿಂದ ಭೂಮಿಯನ್ನು ಭೇದಿಸಿ ಮೇಲ್ಮುಖ ಧಾರೆಯಾಗಿ ಬಂದ ಸುಗಂಧಯುಕ್ತವಾದ ನೀರನ್ನು ಮೇಲಿಂದ ಧಾರಾಕಾರವಾಗಿ ಭೀಷ್ಮನ ಬಾಯಿಯಲ್ಲಿ ಬೀಳಿಸಿದ. ಅದರಿಂದ ತೃಪ್ತನಾದ ಭೀಷ್ಮ ನುಡಿದ.

ಭೀಷ್ಮ ಆಗಾಗ ಮೂರ್ಛೆಹೋಗುತ್ತಿದ್ದ. ಒಮ್ಮೆ 'ನೀರು!' ಎಂದ. ಕೌರವರು ನೀರು ತಂದರೆ ಬೇಡವೆಂದ. 'ಅರ್ಜುನ, ನಿನ್ನ ಬಾಣಗಳಿಂದ ನನ್ನ ಮೈಸುಡುತ್ತಿದೆ. ಬಾಯಿ ಒಣಗುತ್ತಿದೆ!' ಎಂದ. ಅರ್ಜುನ ರಥದಲ್ಲಿ ಕುಳಿತೇ ಭೀಷ್ಮನಿಗೆ ಪ್ರದಕ್ಷಿಣೆ ಮಾಡಿ ಪರ್ಜನ್ಯಾಸ್ತ್ರದಿಂದ ಭೀಷ್ಮನ ಬಲಭಾಗದಲ್ಲಿ ನೆಲವನ್ನು ಭೇದಿಸಿದ. ನೆಲದಡಿಯಿಂದ ನೀರು ಕಾರಂಜಿ ಪುಟಿದು ಭೀಷ್ಮನ ಬಾಯಿಗೆ ಧಾರೆಯಾಗಿ ಸುರಿದು ತೃಪ್ತಿಪಡಿಸಿತು. ಕೌರವರು ಅರ್ಜುನನ ಈ ಅಮಾನುಷ ಕಾರ್ಯಕಂಡು ಚಳಿಯಿಂದ ನಡುಗುವಂತೆ ನಡುಗಿದರು.

ಯಾದೃಶ್ಯಸ್ತ್ರಜ್ಞತಾ ಪಾರ್ಥೇ ದೃಷ್ಟಾಽತ್ರ ಕುರುನಂದನಾಃ ।
ಯಾದೃಗ್ ಬಾಹ್ವೋರ್ಬಲಂ ಭೀಮೇ ಸಂಯುಗೇಷು ಪುನಃಪುನಃ ।೧೪೦।
ಯಾದೃಶಂ ಚೈವ ಮಾಹಾತ್ಮ್ಯಮನಂತಮಜರಂ ಹರೇಃ ।
ವಿಜ್ಞಾತಂ ಸರ್ವಲೋಕಸ್ಯ ಸಭಾಯಾಂ ದೃಷ್ಟಮೇವ ಚ ॥೧೪೧॥

ಕೌರವರೆ, ಅರ್ಜುನನಲ್ಲಿ ಎಂಥ ಅಸ್ತ್ರಜ್ಞಾನವಿದೆ ಎಂಬುದನ್ನು ನೀವು ಈಗ ಕಂಡಿರಿ. ಯುದ್ಧಗಳಲ್ಲಿ ಭೀಮನ ಬಾಹುಬಲ ಎಂಥದೆಂಬುದನ್ನೂ ಹೆಜ್ಜೆಹೆಜ್ಜೆಗೂ ಕಂಡಿರುವಿರಿ. ಶ್ರೀಕೃಷ್ಣನ ಅಮಿತವಾದ ಮುಪ್ಪಿಲ್ಲದ ಮಾಹಾತ್ಮ್ಯವೂ ಎಂಥದೆಂಬುದನ್ನು ತಿಳಿದಿರುವಿರಿ. ಸಭೆಯಲ್ಲಿ ಎಲ್ಲ ಜನರ ಮಧ್ಯದಲ್ಲಿ ಅದನ್ನು ಪ್ರತ್ಯಕ್ಷವಾಗಿಯೂ ಕಂಡಿರುವಿರಿ.

ಉಪಾರಮತ ತದ್ ಯುದ್ಧಂ ಸುಖಿನಃ ಸಂತು ಭೂಮಿಪಾಃ ।
ಯಥೋಚಿತವಿಭಕ್ತಾಂ ಚ ಭುಜ್ಯಧ್ವಂ ಭೂಪಾಃ ಸದಾ ಭುವಮ್ ॥೧೪೨॥

ಅದರಿಂದ ರಾಜರುಗಳೆ, ಇನ್ನಾದರೂ ಈ ಯುದ್ಧವನ್ನು ನಿಲ್ಲಿಸಿರಿ. ಸುಖಿಗಳಾಗಿರಿ. ನೆಲವನ್ನು ಯಥೋಚಿತವಾಗಿ ಭಾಗಮಾಡಿ ನಿಮ್ಮ ಪಾಲಿಗೆ ಬಂದುದನ್ನು ನೀವು ಅನುಭವಿಸಿರಿ ಎಂದ ಭೀಷ್ಮ.

ಇತ್ಯುಕ್ತಃ ಸ ಯಯೌ ತೂಷ್ಣೀಂ ಧಾರ್ತರಾಷ್ಟ್ರಃ ಸ್ವಕಂ ಗೃಹಮ್ ॥೧೪೩॥

ಭೀಷ್ಮ ಹೀಗೆ ಹೇಳಿದಾಗ ದುರ್ಯೋಧನ ಏನೂ ಆಡದೆ ತನ್ನ ಮನೆಗೆ ಹೊರಟು ಹೋದ.

ಆಯುಷ್ಯ ತೀರಿದ ರೋಗಿಗೆ ಔಷಧ ಹೇಗೆ ರುಚಿಸುವುದಿಲ್ಲವೋ ಹಾಗೆ ದುರ್ಯೋಧನನಿಗೆ ಭೀಷ್ಮನ ಹಿತವಚನ ಪಥ್ಯವೆನಿಸಲಿಲ್ಲ (ಭೀಷ್ಮ 121.58)

ವ್ಯಾಸದತ್ತೋರುವಿಜ್ಞಾನಾತ್ ಸಂಜಯಾದಖಿಲಂ ಪಿತಾ ।
ಶ್ರುತ್ವಾ ತದಾ ಪರ್ಯತಪ್ಯತ್ ಪಾಂಡವಾಃ ಕೃಷ್ಣದೇವತಾಃ ।
ಮುಮುದುಃ ಶಿಬಿರಂ ಪ್ರಾಪ್ಯ ಸರ್ವೇ ಕೃಷ್ಣಾನುಮೋದಿತಾಃ ॥೧೪೪॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಭೀಷ್ಮಪಾತೋ ನಾಮ ಪಂಚವಿಂಶೋಽಧ್ಯಾಯಃ

ವೇದವ್ಯಾಸರು ನೀಡಿದ ದಿವ್ಯ ಜ್ಞಾನ ಶಕ್ತಿಯುಳ್ಳ ಸಂಜಯನಿಂದ ಈ ಎಲ್ಲ ವೃತ್ತಾಂತವನ್ನೂ ಕೇಳಿ ತಂದೆಯಾದ ಧೃತರಾಷ್ಟ್ರ ಪರಿತಪಿಸಿದ. ಕೃಷ್ಣನನ್ನೇ ದೇವತೆ ಎಂದು ಬಗೆದು ಅವನಿಂದಲೆ ಮಾರ್ಗದರ್ಶನ ಪಡೆದ ಪಾಂಡವರು ಎಲ್ಲರೂ ಶಿಬಿರಕ್ಕೆ ಹೋಗಿ ಆನಂದಪಟ್ಟರು.

ಶೀಘ್ರದಲ್ಲಿಯೆ ಕುಲನಾಶವಾಗಲಿದೆ. ಈ ಯುದ್ಧವನ್ನು ನೋಡುವಿಯಾದರೆ ನಿನಗೆ ದೃಷ್ಟಿಶಕ್ತಿ ಕೊಡುವೆನೆಂದರು ವೇದವ್ಯಾಸರು. ಧೃತರಾಷ್ಟ್ರ ಕುಲನಾಶವನ್ನು ಕಣ್ಣಾರೆ ಕಾಣಲಾರೆ. ಕೇಳಬಲ್ಲೆ ಎಂದ. ಅದಕ್ಕೆ ಸಂಜಯನಿಗೆ ದಿವ್ಯದೃಷ್ಟಿ ನೀಡಿದರು. ಅವನು ಕುರುಕ್ಷೇತ್ರದಲ್ಲಿ ಕೌರವರ ಪರವಾಗಿ ಯುದ್ಧ ಮಾಡುತ್ತಲೆ ಸಂಚರಿಸಿ ಎಲ್ಲವನ್ನೂ ಕಂಡು ಸಂಜೆ ಹಸ್ತಿನಾವತಿಗೆ ಬರುತ್ತಿದ್ದ. ಧೃತರಾಷ್ಟ್ರ ಹತ್ತುದಿನಗಳ ಕಾಲ ಕೇಳಲಿಲ್ಲ. ಸಂಜಯ ಹೇಳಲೂ ಇಲ್ಲ. ಹತ್ತನೆ ದಿನ ಬಂದು ಭೀಷ್ಮ ಪಾತದ ಸುದ್ದಿ ಹೇಳಿದಾಗ ಧೃತರಾಷ್ಟ್ರನಿಗೆ ನಂಬಲಾಗಲಿಲ್ಲ. ಏನಾಯಿತು ಹೇಳು ಎಂದ. ಸಂಜಯ ಹೇಳತೊಡಗಿದ. ದುರ್ಯೋಧನಪಾತದ ವರೆಗೂ ಸಂಜಯನಿಗೆ ಈ ದಿವ್ಯದೃಷ್ಟಿಶಕ್ತಿ ಇದ್ದಿತು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಭೀಷ್ಮಪಾತ ಎಂಬ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 26

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ದ್ರೋಣೇ ಯುಧ್ಯತಿ ಪಾಂಡವೈರ್ವಿನಿಹತಂ ಪ್ರಾಗ್ಜ್ಯೋತಿಷಂ ಪಾರ್ಥತಃ
ಕೃತ್ವಾ ತಸ್ಯ ಸುತೇ ಹತೇ ನಿಶಿ ಶಿವಂ ನೀತ್ವಾರ್ಜುನಂ ಸೈಂಧವಮ್ ।
ತದ್ದತ್ತಾಸ್ತ್ರಬಲಾದಜೀಘನದತೋ ದ್ರೋಣೇ ಹತೇ ದ್ರೌಪದೇ-
ರ್ಯೋ ಭೀಮಂ ಚ ನಿಜಾಸ್ತ್ರನಮ್ರಮಕರೋತ್ ತಂ ನೌಮಿ ನಾರಾಯಣಂ ॥೨೬॥

ದ್ರೋಣ ಪಾಂಡವರೊಂದಿಗೆ ಯುದ್ಧ ಮಾಡುತ್ತಿದ್ದಾಗ ಶ್ರೀಕೃಷ್ಣ ಅರ್ಜುನನಿಂದ ಭಗದತ್ತನನ್ನು ಕೊಲ್ಲಿಸಿ, ಅಭಿಮನ್ಯು ಹತನಾದಾಗ ರಾತ್ರಿ ಸ್ವಪ್ನದಲ್ಲಿ ಅರ್ಜುನನನ್ನು ಶಿವನ ಬಳಿಗೊಯ್ದು ಶಿವನಿತ್ತ ಅಸ್ತ್ರದ ಬಲದಿಂದ ಜಯದ್ರಥನನ್ನು ಕೊಲ್ಲಿಸಿದ. ಬಳಿಕ ಧೃಷ್ಟದ್ಯುಮ್ನನಿಂದ ದ್ರೋಣ ಹತನಾದಾಗ ಭೀಮನನ್ನು ನಾರಾಯಣಾಸ್ತ್ರಕ್ಕೆ ತಲೆಬಾಗುವಂತೆ ಮಾಡಿದ. ಅಂಥ ನಾರಾಯಣನನ್ನು ಸ್ತುತಿಸುವೆನು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೬

ದ್ರೋಣಪರ್ವ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಕರ್ಣನಿಗೆ ಭೀಷ್ಮನ ಅನುಮತಿ

ಓಂ ॥ ಅಥಾಖಿಲಾನಾಂ ಪೃಥಿವೀಪತೀನಾ-
ಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ।
ರಾಮಸ್ಯ ವಿಶ್ವಾಧಿಪತೇಃ ಸುಶಿಷ್ಯಂ
ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥೧॥

ಭೀಷ್ಮಪಾತವಾದ ಅನಂತರ ಎಲ್ಲ ರಾಜರಿಗೂ ಅಸ್ತ್ರವಿದ್ಯಾಚಾರ್ಯನೂ ರಥಿಕರಲ್ಲಿ ಶ್ರೇಷ್ಠನೂ ಒಳ್ಳೆಯ ವಿದ್ಯಾಸಂಪನ್ನನೂ ಜಗದೀಶ್ವರನಾದ ಶ್ರೀಪರಶುರಾಮನ ಶಿಷ್ಯವರೇಣ್ಯನೂ ಆದ ದ್ರೋಣನನ್ನು ದುರ್ಯೋಧನ ಸೇನಾಧಿಪತಿಯನ್ನಾಗಿ ಮಾಡಿದ.

ಇತ್ತ ಪಾಂಡವ ಸೈನ್ಯಕ್ಕೆ ಧೃಷ್ಟದ್ಯುಮ್ನ ಸೇನಾಧಿಪತಿಯಾದ. ಅವನಿಗೆ ಭೀಮನ ರಕ್ಷಣೆ. (ಆಶ್ವ. 60.15) ಹಿಂದೆ ಹತ್ತು ದಿನಗಳ ಕಾಲ ಶಿಖಂಡಿ ಸೇನಾಧಿಪತಿ. ಅವನಿಗೆ ಅರ್ಜುನನ ರಕ್ಷಣೆ (ಆಶ್ವ. 60.9)

ಕರ್ಣೋಽಪಿ ಭೀಷ್ಮಾನುಮತೋ ಧನುಷ್ಮಾನ್
ಯುದ್ಧೋದ್ಯತೋಽಭೂತ್ ತದಸತ್ಕೃತಃ ಪುರಾ ।
ತಸ್ಮಿನ್ ಸ್ಥಿತೇಽನಾತ್ತಧನುಸ್ತದೈವ
ರಥಂ ಸಮಾಸ್ಥಾಯ ಗುರುಂ ಸಮನ್ವಯಾತ್ ॥೨॥

ಹಿಂದೆ ಭೀಷ್ಮ ಸೇನಾಧಿಪತಿಯಾಗಿದ್ದಾಗ ಅವನಿಂದ ನಿಂದಿತನಾದ ಕರ್ಣ ಬಿಲ್ಲನ್ನು ಎತ್ತದಿದ್ದರೂ ಭೀಷ್ಮ ಪಾತವಾದಾಗ ಭೀಷ್ಮನ ಅನುಮತಿ ಪಡೆದು ಯುದ್ಧಕ್ಕೆ ಉದ್ಯತನಾಗಿ ಬಿಲ್ಲನ್ನು ಧರಿಸಿದ. ರಥವನ್ನೇರಿ ದ್ರೋಣನನ್ನು ಹಿಂಬಾಲಿಸಿದ.

ಕರ್ಣ ಕಣ್ಣೀರಿಡುತ್ತ 'ನಾನು ರಾಧೆಯ ಪುತ್ರ ಬಂದಿದ್ದೇನೆ' ಎನ್ನುತ್ತ ಭೀಷ್ಮನ ಬಳಿಗೆ ಬಂದಾಗ ಭೀಷ್ಮ ತಂದೆ ಮಗನನ್ನು ಅಪ್ಪುವಂತೆ ಒಂದು

ಕೈಯಿಂದ ಆಲಿಂಗಿಸಿ 'ನೀನು ಕುಂತೀಪುತ್ರನೆಂದು ನನಗೆ ನಾರದರೂ ವೇದವ್ಯಾಸರೂ ಅಂದೇ ಹೇಳಿದ್ದರು. ಅಧರ್ಮದಿಂದ ಕನ್ಯಾಪುತ್ರನಾಗಿ ಜನಿಸಿದ್ದರಿಂದ ನೀಚ ದುರ್ಯೋಧನನನ್ನು ಆಶ್ರಯಿಸಿ ಧರ್ಮಿಷ್ಠರಾದ ಪಾಂಡವರಲ್ಲಿ ಮತ್ಸರ ಪಡುವಿ. ಅದರಿಂದ ನಿನ್ನ ತೇಜೋವಧೆಗಾಗಿಯೆ ತೆಗಳಿದೆ. ನಿನ್ನ ಶೌರ್ಯಪರಾಕ್ರಮ ನನಗೆ ಗೊತ್ತು. ಬ್ರಾಹ್ಮಣಭಕ್ತಿ ದಾನ ಶೌರ್ಯಗಳಲ್ಲಿ ನಿನಗೆ ಸಮರಿಲ್ಲ. ಆದರೆ ನಿನ್ನ ಪ್ರೇರಣೆಯಿಂದ ಕುರುಕುಲ ನಾಶವಾಗುತ್ತಿದೆ ಎಂದು ಬೈದೆ' ಎಂದ. ಕರ್ಣನೆಂದ 'ನಾನು ಕೌರವನಿಗೆ ಋಣಿ. ಅವನ ಸಹವಾಸದಿಂದ ಪಾಂಡವರಿಗೆ ಬಹಳ ಕಷ್ಟ ಕೊಟ್ಟೆ, ನಿನ್ನನ್ನು ಅವಮಾನಿಸಿದೆ. ಕ್ಷಮಿಸು. ನಾನು ಪಾಂಡವರಿಗೆ ಕೋಪ ಉಂಟುಮಾಡಿ ಯುದ್ಧದಲ್ಲಿ ಕ್ಷತ್ರಿಯನಾಗಿ ಶಸ್ತ್ರದಿಂದಲೆ ಸಾಯಬೇಕು ವ್ಯಾಧಿಯಿಂದ ಸಾಯಬಾರದೆಂದೇ ಪಾಂಡವರಲ್ಲಿ ದ್ವೇಷಮಾಡಿದೆ (ಭೀಷ್ಮ 122.26) ಮತ್ತು ದುರ್ನಿಮಿತ್ತದಿಂದ ಕುಲನಾಶ ಮೊದಲೆ ಅನಿವಾರ್ಯವೆಂದು ನಿಶ್ಚಿತವಾಗಿದೆ. ಅದನ್ನು ತಪ್ಪಿಸಲು ಯತ್ನಿಸುವುದು ವ್ಯರ್ಥ. ಅದರಿಂದ ನಾನು ಅರ್ಜುನನೊಡನೆ ಹೋರಾಡಬೇಕು ಅನುಜ್ಞಿನೀಡು' ಎಂದ. ಭೀಷ್ಮ ತಥಾಸ್ತು ಎಂದ. ಬಳಿಕ ಕರ್ಣ ದ್ರೋಣನನ್ನು ಸೇನಾಧಿಪತಿಯನ್ನಾಗಿ ಮಾಡೆಂದು ದುರ್ಯೋಧನನಿಗೆ ಹೇಳಿ ಮಾಡಿಸಿ ದ್ರೋಣನ ಸೇನಾಧಿಪತ್ಯದಲ್ಲಿ ಅವನನ್ನು ಹಿಂಬಾಲಿಸಿದ.

ಹನ್ನೊಂದನೆ ದಿನದ ಯುದ್ಧ - ದ್ರೋಣನ ಪ್ರತಿಜ್ಞೆ

ದ್ರೋಣೋ ವೃತೋ ಧಾರ್ತರಾಷ್ಟ್ರೇಣ ಧರ್ಮ
ಸುತಗ್ರಹೇ ತೇನ ಕೃತೇ ಪ್ರತಿಶ್ರವೇ ।
ಜ್ಞಾತ್ವಾ ಯತ್ತಾಃ ಪಾಂಡವಾಸ್ತಂ ಸಮೀಯು
ರ್ಯುದ್ಧಾಯ ತತ್ರಾಭವದುಗ್ರಯುದ್ಧಮ್ ॥೩॥

ಯುಧಿಷ್ಠಿರನನ್ನು ಸೆರೆ ಹಿಡಿಯುವಂತೆ ದ್ರೋಣನನ್ನು ದುರ್ಯೋಧನ ಆಗ್ರಹಪಡಿಸಿದ. ದ್ರೋಣ ಒಪ್ಪಿ ಪ್ರತಿಜ್ಞೆ ಮಾಡಿದಾಗ ಅದನ್ನು ತಿಳಿದು ಯುಧಿಷ್ಠಿರನ ರಕ್ಷಣೆಗೆ ಸಿದ್ಧರಾಗಿಯೆ ಪಾಂಡವರು ಯುದ್ಧಕ್ಕೆ ಬಂದರು. ಅಲ್ಲಿ ಘೋರವಾದ ಯುದ್ಧ ನಡೆಯಿತು.

ಯುಧಿಷ್ಠಿರನನ್ನು ಜೀವಂತ ಸೆರೆ ಹಿಡಿದು ತನ್ನಿ ಎಂದು ದುರ್ಯೋಧನ ಹೇಳಿದಾಗ ದ್ರೋಣನಿಗೆ ಬಹಳ ಸಂತೋಷವಾಯಿತು. 'ಏಕೆ? ಕೊಲ್ಲಕೂಡದೆ? ನಿನಗಿಂಥ ಒಳ್ಳೆಯ ಬುದ್ಧಿ ಬಂದಿತೆ? ಧರ್ಮರಾಜನನ್ನು ಗೆದ್ದು ಅವನಿಗೆ ರಾಜ್ಯ ನೀಡಿ ಸೋದರಸ್ನೇಹ ಉಳಿಸಿಕೊಳ್ಳುವೆಯ? ನಿನಗೂ ಸ್ನೇಹಪಾತ್ರನೆಂದ ಮೇಲೆ ಅವನು ನಿಜವಾಗಿ 'ಅಜಾತಶತ್ರು' ಎಂದ. ಆಗ

ದುರ್ಯೋಧನನೆಂದ, 'ಪುನಃ ಜೂಜಾಡಿ ಅವನನ್ನು ಕಾಡಿಗೇ ಶಾಶ್ವತವಾಗಿ ಕಳಿಸುವುದು ನನ್ನ ಉದ್ದೇಶ!' ದ್ರೋಣ ನಿರಾಶೆಯಿಂದ ನುಡಿದ, 'ಧರ್ಮರಾಜ ಅರ್ಜುನನ ರಕ್ಷಣೆಯಲ್ಲಿಲ್ಲದಿದ್ದರೆ ನಾನು ಸೆರೆ ಹಿಡಿಯುವೆ'.

ಪತತ್ರಿಭಿಸ್ತತ್ರ ದುಧಾವ ಶಾತ್ರವಾನ್
ದ್ರೋಣೋ ಧನುರ್ಮಂಡಲಮಂತ್ರನಿಸ್ಸೃತೈಃ ।
ತಮಾಸಸಾದಾಕಶು ವೃಕೋದರೋ ನದಂ-
ಸ್ತಮಾಸದನ್ ದ್ರೌಣಿಕೃಪೌ ಚ ಮದ್ರರಾಟ್ ॥೪॥

ದ್ರೋಣ ಬಿಲ್ಲನ್ನು ವೃತ್ತಾಕಾರವಾಗಿ ಬಗ್ಗಿಸಿ ಮಂತ್ರಪೂರ್ವಕವಾಗಿ ಬಾಣಗಳನ್ನೆಸೆದು ಶತ್ರುಗಳನ್ನು ನಡುಗಿಸಿದ. ಆಗ ಬೇಗನೆ ಭೀಮ ಸಿಂಹನಾದ ಮಾಡುತ್ತ ಅವನ ಮೇಲೇರಿಹೋದ. ಭೀಮನನ್ನು ಅಶ್ವತ್ಥಾಮ ಕೃಪರೂ ಶಲ್ಯನೂ ಆಕ್ರಮಿಸಿದರು.

ಸ ತಾನ್ ವಿಧೂಯಾಭ್ಯಪತದ್ ರಣೇಽಗ್ರಣೀ-
ರ್ದ್ರೋಣಂ ತಮನ್ವಾರ್ಜುನಿರಭ್ಯಯಾತ್ ಪರಾನ್ ।
ವವಾರ ತಂ ಮದ್ರಪತಿಸ್ತಯೋರಭೂದ್
ರಣೋ ಮಹಾಂಸ್ತತ್ರ ಗದಾಂ ಸಮಾದದೇ ।
ಶಲ್ಯೋಽಥ ಭೀಮೋಽಭಿಯಯೌ ಗದಾಧರ-
ಸ್ತಮೇತಯೋರತ್ರ ಬಭೂವ ಸಂಗರಃ ॥೫॥

ಯುದ್ಧದಲ್ಲಿ ಅಗ್ರೇಸರನಾದ ಭೀಮ ಅವರನ್ನು ದೂರ ಸರಿಸಿ ದ್ರೋಣರನ್ನು ಆಕ್ರಮಿಸಿದ. ಅವನನ್ನು ಅನುಸರಿಸಿ ಅಭಿಮನ್ಯು ಶತ್ರುಗಳನ್ನು ಆಕ್ರಮಿಸಿದ. ಅಭಿಮನ್ಯುವನ್ನು ಶಲ್ಯ ಇದಿರಿಸಿದ. ಅಭಿಮನ್ಯು ಶಲ್ಯರಿಗೆ ದೊಡ್ಡ ಯುದ್ಧ ನಡೆಯಿತು. ಶಲ್ಯ ಗದೆಯನ್ನೆತ್ತಿದ. ಆಗ ಭೀಮ ಗದಾಧಾರಿಯಾಗಿ ಶಲ್ಯನನ್ನು ಇದಿರಿಸಿದ. ಅವರೊಳಗೆ ದೊಡ್ಡ ಯುದ್ಧ ನಡೆಯಿತು.

ಉಭಾವಜೇಯೌ ಗದಿನಾಮನುತ್ತಮಾ-
ವತುಲ್ಯವೀರ್ಯೌ ಪ್ರವರೌ ಬಲೀಯಸಾಮ್ ।
ವಿಚೇರತುಶ್ಚಿತ್ರತಮಂ ಪ್ರಪಶ್ಯತಾಂ
ಮನೋಹರಂ ತಾವಭಿನರ್ದಮಾನೌ ॥೬॥

ಭೀಮ ಶಲ್ಯರಿಬ್ಬರೂ ಅಜೇಯರು, ಗದಾಧಾರಿಗಳಲ್ಲಿ ಅವರನ್ನು ಮೀರಿಸುವವರಿಲ್ಲ. ಅವರಿಗೆ ಸಮಾನ ವೀರ್ಯಶಾಲಿಗಳೂ ಇಲ್ಲ. ಬಲಿಷ್ಠರಲ್ಲೆಲ್ಲ ಅತ್ಯುತ್ತಮರು. ಅವರು ಸಿಂಹನಾದ ಮಾಡುತ್ತ ನೋಡುವವರ ಮನಸೆಳೆಯುತ್ತ ಅತ್ಯಾಶ್ಚರ್ಯಕರವಾಗುವಂತೆ ಹೋರಾಡಿದರು.

ಗದಾಪ್ರಪಾತಾಂಕಿತವಜ್ರಗಾತ್ರೌ
ದದರ್ಶ ಲೋಕೋಽಖಿಲ ಏವ ತೌ ರಣೇ ।
ಗದಾಭಿಘಾತೇನ ವೃಕೋದರಸ್ಯ
ವಿಚೇತನಃ ಪ್ರಾಪತದತ್ರ ಮದ್ರರಾಟ್ ॥೭॥

ಭೀಮೋಽಪಿ ಕೋಪಾತ್ ಪ್ರಚಲತ್ಪದಃ ಕ್ಷಿತೌ
ನಿಧಾಯ ಜಾನುಂ ಸಹಸೋತ್ಥಿತಃ ಕ್ಷಣಾತ್ ॥೮॥

ಗದಾಘಾತದ ಚಿಹ್ನೆಯಿಂದ ಕೂಡಿದ ವಜ್ರಶರೀರಿಗಳಾದ ಅವರಿಬ್ಬರನ್ನು ಯುದ್ಧದಲ್ಲಿ ಸಮಸ್ತ ಲೋಕವೆ ವೀಕ್ಷಿಸಿತು. ಭೀಮನ ಗದೆಯ ಏಟಿನಿಂದ ಶಲ್ಯ ಮೂರ್ಛೆಹೊಂದಿ ಬಿದ್ದ. ಭೀಮನಿಗೂ ಕೋಪದಿಂದ ಕಾಲುಗಳು ಚಲಿಸಿದವು. ನೆಲಕ್ಕೆ ಮೊಣಕಾಲೂರಿ ಕ್ಷಣದಲ್ಲಿ ಕೂಡಲೆಮೇಲೆದ್ದ.

ಶಲ್ಯನಲ್ಲಿಯೂ ಮುಖ್ಯಪ್ರಾಣನ ಆವೇಶವಿದ್ದುದರಿಂದ ಸ್ವಲ್ಪಮಟ್ಟಿಗೆ ಭೀಮಬಲದ ಸಾಮ್ಯ ಅವನಲ್ಲಿ ಕಂಡುಬಂದಿತ್ತು ಎಂದು ಪ್ರಮಾಣ ಸಂಗ್ರಹಕಾರರ ಅಭಿಪ್ರಾಯ. ಭೀಮನ ಕಾಲು ನಡುಗಿದುದು ಅಶಕ್ತಿಯಿಂದಲ್ಲ, ಕೋಪದಿಂದ ಎಂದು ಫಲಾರೀಯದ ಅಭಿಪ್ರಾಯ.

ವಿಚೇತನಂ ಪತಿತಂ ಮದ್ರರಾಜಂ
ವಿಲೋಕ್ಯ ಭೀಮಂ ಚ ತಮಾಹ್ವಯಂತಮ್ ।
ರಥಂ ಸಮಾರೋಪ್ಯ ಜನಸ್ಯ ಪಶ್ಯತಃ
ಪುರಶ್ಚ ಭೀಮಸ್ಯ ಕೃಪೋಽಪಜಗ್ಮಿವಾನ್ ॥೯॥

ಶಲ್ಯ ಮೂರ್ಛಿತನಾಗಿ ಬಿದ್ದುದನ್ನೂ ಭೀಮ ಅವನನ್ನು ಕರೆಯುತ್ತಿದ್ದುದನ್ನೂ ಕಂಡು ಕೃಪ, ಜನರು ನೋಡುತ್ತಿದ್ದಂತೆಯೆ, ಭೀಮನ ಇದಿರಲ್ಲಿಯೆ, ಶಲ್ಯನನ್ನು ತನ್ನ ರಥಕ್ಕೆ ಏರಿಸಿಕೊಂಡು ಹೋರಟುಹೋದ.

. ಮಹಾಭಾರತದಲ್ಲಿ (ದ್ರೋ. 15.32) ಕೃತವರ್ಮ ಶಲ್ಯನನ್ನು ಒಯ್ಯುತ್ತಾನೆ. 'ಕೃತ-ವರ್ಮ' ಎಂದರೆ ಒಳ್ಳೆಯ ಕವಚ ಧರಿಸಿದ್ದ ಕೃಪ ಎಂದು ಗ್ರಹಿಸಬಹುದು. ಅಥವಾ ಇದು ಪುಂವ್ಯತ್ಯಾಸ.

ವಿಜಿತ್ಯ ಮದ್ರಾಧಿಪಮೋಜಸಾಕರಿಹಾ
ನದನ್ ರಥಂ ಪ್ರಾಪ್ಯ ನಿಜಂ ಸ ಮಾರುತಿಃ ।
ವ್ಯದ್ರಾವಯದ್ ಬಾಣಗಣೈಃ ಪರೇಷಾ-
ಮನೀಕಿನೀಂ ದ್ರೋಣಸಮಕ್ಷಮೇವ ॥೧೦॥

ಶತ್ರು ಸಂಹಾರಕನಾದ ಭೀಮ ಬಲದಿಂದ ಶಲ್ಯನನ್ನು ಗೆದ್ದು ಸಿಂಹನಾದ ಮಾಡುತ್ತ ತನ್ನ

ರಥವನ್ನೇರಿ ದ್ರೋಣನ ಸಮಕ್ಷಮದಲ್ಲಿಯೆ ಶತ್ರು ಸೈನ್ಯವನ್ನು ಬಾಣ ಸಮೂಹಗಳಿಂದ ಓಡಿಸಿದ.

ವಿದ್ರಾವಯತ್ಯಾಶು ಕುರೂನ್ ವೃಕೋದರೇ
ವಿಧೂಯ ಸೌಭದ್ರಮುಖಾನ್ ಸಸಾತ್ಯಕೀನ್ ।
ದ್ರೋಣೋಽಭಿಪೇದೇ ನೃಪತಿಂ ಗ್ರಹೀತುಂ
ತಮಾಸಸಾದಾಽಶು ಧನಂಜಯೋ ರಥೀ ॥೧೧॥

ಭೀಮ ಕೌರವರನ್ನು ಬೇಗನೆ ಓಡಿಸುತ್ತಿದ್ದಾಗ ದ್ರೋಣ ಸಾತ್ಯಕಿಅಭಿಮನ್ಯು ಮುಂತಾದವರನ್ನು ಓಡಿಸಿ ಧರ್ಮರಾಜನನ್ನು ಸೆರೆಹಿಡಿಯಲು ಇದಿರಾಗಿ ಬಂದ. ಅವನನ್ನು ರಥಿಕನಾದ ಅರ್ಜುನ ಬೇಗನೆ ಇದಿರಿಸಿದ.

ಸ ವಾಸುದೇವಪ್ರಯತೇ ರಥೇ ಸ್ಥಿತಃ
ಶರೈಃ ಶರೀರಾಂತಕರೈಃ ಸಮಂತತಃ ।
ನಿಹತ್ಯ ನಾಗಾಶ್ವರಥಾನ್ ಪ್ರವರ್ತಯ-
ನ್ನದೃಶ್ಯತಾಽಶ್ವೇವ ಚ ಶೋಣಿತಾಪಗಾಃ ॥೧೨॥

ಕೃಷ್ಣ ನಡೆಸುವ ರಥದಲ್ಲಿ ನಿಂತು ಅರ್ಜುನ ಶರೀರನಾಶಕರವಾದ ಬಾಣಗಳಿಂದ ಸುತ್ತಲೂ ಆನೆ ಕುದುರೆ ರಥಗಳನ್ನು ನಾಶಪಡಿಸಿ ರಕ್ತದ ಹೊಳೆ ಹರಿಸುತ್ತ ಲೋಕಕ್ಕೆ ದೃಷ್ಟಿಗೋಚರನಾದ.

ನಿಹನ್ಯಮಾನಾಸು ಕಿರೀಟಿನಾ ಚಮೂ-
ಷ್ವಾರಕ್ಷಿತೇ ಧರ್ಮಸುತೇ ತಥಾಽಽಪದಃ ।
ಚಮೂಂ ಚ ಭೀಮಾರ್ಜುನಬಾಣಭಗ್ನಾಂ
ದ್ರೋಣೋಽಪಹೃತ್ಯಾಪಯಯೌ ನಿಶಾಗಮೇ ॥೧೩॥

ಸೇನೆಗಳು ಅರ್ಜುನನಿಂದ ಹತವಾಗುತ್ತಿದ್ದಾಗ, ಯುಧಿಷ್ಠಿರನೂ ಆಪತ್ತಿನಿಂದ ರಕ್ಷಿತನಾದಾಗ, ಭೀಮಾರ್ಜುನರ ಬಾಣಗಳಿಂದ ಜರ್ಜರಿತವಾದ ಸೈನ್ಯವನ್ನು, ರಾತ್ರಿಕಾಲ ಬರುತ್ತಿದ್ದಂತೆ ದ್ರೋಣ ಹಿಂದೆ ಕರೆಸಿಕೊಂಡು ಹೊರಟುಹೋದ.

ಹನ್ನೆರಡನೆ ದಿನದ ಯುದ್ಧ - ಸಂಶಪ್ತಕರ ಶಪಥ

ಸ ಧಾರ್ತರಾಷ್ಟ್ರೇಣ ಯುಧಿಷ್ಠಿರಾಗ್ರಹಾತ್
ಸಂಶ್ರಾವಿತಃ ಕ್ರೂರವಚೋ ನಿಶಾಯಾಮ್ ।
ಜಗಾದ ದೂರಂ ಸಮರಾದ್ ವಿನೀಯತಾಂ
ಪಾರ್ಥಸ್ತತೋ ಧರ್ಮಸುತಂ ಗ್ರಹೀಷ್ಯೇ ॥೧೪॥

ರಾತ್ರಿಯಲ್ಲಿ ದುರ್ಯೋಧನ ದ್ರೋಣನನ್ನು ಅವನು ಯುಧಿಷ್ಠಿರನನ್ನು ಸೆರೆಹಿಡಿಯದಿದ್ದುದಕ್ಕೆ ಕಟುವಾಗಿ ಆಕ್ಷೇಪಿಸಿದ. ಆಗ ದ್ರೋಣನೆಂದ, 'ಅರ್ಜುನನನ್ನು ಯುದ್ಧದಿಂದ ದೂರಕ್ಕೆ ಒಯ್ಯಿ. ಆಗ ನಾನು ಯುಧಿಷ್ಠಿರನನ್ನು ಸೆರೆ ಹಿಡಿಯುವೆನು.'

ತತಃ ಸುಶರ್ಮಾ ಸಹಿತೋ ಮಹಾರಥೈಃ
ಸಂಶಪ್ತಕೈರ್ದೂರತರಂ ಪ್ರಣೇತುಮ್ ।
ಯುದ್ಧಾಯ ಭೀಮಾನುಜಮಾಶು ಕ್ಲೃಪ್ತೋ
ದುರ್ಯೋಧನೇನೋಮಿತಿ ಸೋಽಪ್ಯವಾದೀತ್ ॥೧೫॥

ಆಗ ದುರ್ಯೋಧನ ಅರ್ಜುನನನ್ನು ಯುದ್ಧಕ್ಕೆ ದೂರ ಒಯ್ಯಲು ಮಹಾರಥರಾದ ಸಂಶಪ್ತಕರೊಂದಿಗೆ ಸುಶರ್ಮನನ್ನು ಆಜ್ಞಾಪಿಸಿದ. ಅವನೂ 'ಆಗಲಿ' ಎಂದ.

ಅರ್ಜುನ ಕೃಷ್ಣರು ನನಗೆ ಅಜೇಯರು. ಅವರನ್ನು ದೂರ ಒಯ್ದರೆ ಮಾತ್ರ ನಾನು ಧರ್ಮರಾಜನನ್ನು ಸೆರೆಹಿಡಿಯಬಲ್ಲೆನೆಂದು ದ್ರೋಣ ಹೇಳಿದಾಗ ತ್ರಿಗರ್ತರಾಜ ಸುಶರ್ಮನೆಂದ, 'ನಿರಪರಾಧಿಗಳಾದ ನಮ್ಮಲ್ಲಿ ಅಪರಾಧಗೈದಿರುವ ಆ ಅರ್ಜುನನನ್ನು ನಾನು ಕೊಲ್ಲುತ್ತೇನೆ, ಇಲ್ಲವೆ, ನಾನು ಸಾಯುತ್ತೇನೆ'. ದುರ್ಯೋಧನ ಅವನನ್ನೇ ಆ ಕಾರ್ಯಕ್ಕೆ ನೇಮಿಸಿದ.

ಸತ್ಯರಥ ಸತ್ಯವರ್ಮ ಸತ್ಯವ್ರತ ಸತ್ಯೇಷು ಸತ್ಯಕರ್ಮ ಈ ಐದು ಮಂದಿ ಸೋದರರು ಕೂಡಿ ಅಗ್ನಿಪ್ರತಿಷ್ಠೆ ಮಾಡಿ ಮೃಗೆತುಪ್ಪ ಬಳಿದುಕೊಂಡು ಕವಚ ಧರಿಸಿ ದರ್ಭೆ ಹಿಡಿದು ಯಜ್ಞ ಮಾಡಿದರು. ಆ ಅಗ್ನಿಯ ಮುಂದೆ ಅರ್ಜುನನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದರು. ಕೊಲ್ಲದಿದ್ದರೆ ಪಂಚ ಮಹಾಪಾತಕಿಗಳ ಎಲ್ಲ ನರಕಗಳೂ ನಮಗಾಗಲಿ ಎಂದರು. 'ಸಂ-ಶಪ್ತ-ಕ' ಚೆನ್ನಾಗಿ ದುಷ್ಟ ಶಪಥಗೈದು ನರಕಭಾಜನರಾದರು ಎಂಬ ಅರ್ಥದಲ್ಲಿ ಸಂಶಪ್ತಕರೆನಿಸಿದರು. ಸುಶರ್ಮ ಅವರೊಂದಿಗೆ ಸೇರಿದ. ಸುರಥ ಸುಧರ್ಮ ಸುಧನ್ವ ಸುಬಾಹುಗಳೂ ಸೇರಿದರು. ನಾರಾಯಣ ಸೇನೆಯೂ ಇವರೊಂದಿಗೆ ಸೇರಿತು. ಸಂಶಪ್ತಕರ ಸೈನ್ಯದಲ್ಲಿಯೆ ಒಂದು ಸಾವಿರ ರಥಗಳು, ಮುನ್ನೂರು ಆನೆಗಳು, ಹದಿನಾಲ್ಕು ಸಾವಿರ ಕುದುರೆಗಳು, ಎರಡು ಲಕ್ಷ ಪದಾತಿಗಳಿದ್ದರು.

ಸಮಾಹ್ವಯಾಮಾಸುರಥಾರ್ಜುನಂ ತೇ
ಪ್ರಾತರ್ಹುತಾಶಸ್ಯ ದಿಶಂ ರಣಾಯ ।
ಅಯೋಧಯತ್ ತಾನ್ ಸ ಚ ತತ್ರ ಗತ್ವಾ
ಭೀಮೋ ಗಜಾನೀಕಮಥಾತ್ರ ಚಾವಧೀತ್ ॥೧೬॥

ಬಳಿಕ ಬೆಳಿಗ್ಗೆ ಸಂಶಪ್ತಕರು ಅರ್ಜುನನನ್ನು ಆಗ್ನೇಯ ದಿಕ್ಕಿನಲ್ಲಿ ಯುದ್ಧಕ್ಕೆ ಕರೆದರು. ಅರ್ಜುನ ಅಲ್ಲಿಗೆ ಹೋಗಿ ಅವರೊಡನೆ ಯುದ್ಧ ಮಾಡಿದ. ಇತ್ತ ಭೀಮ ಗಜಸೇನೆಯನ್ನು ಸಂಹರಿಸಿದ.

ಅರ್ಜುನ ಧರ್ಮರಾಜನಿಂದ ಅನುಮತಿ ಪಡೆದು ಸಂಶಪ್ತಕರೊಡನೆ ಯುದ್ಧ ಮಾಡಿದ.

ಭಗದತ್ತನ ವೈಷ್ಣವಾಸ್ತ್ರ

ನಿಹನ್ಯಮಾನೇಷು ಗಜೇಷು ಸರ್ವಶೋ
ವಿದ್ರಾವ್ಯಮಾಣೇಷ್ವಖಿಲೇಷು ರಾಜಸು ।
ಪ್ರಾಗ್ಜ್ಯೋತಿಷೋ ಧಾರ್ತರಾಷ್ಟ್ರಾರ್ಥಿತಸ್ತಂ
ಸಮಾಸದತ್ ಸುಪ್ರತೀಕೇನ ಧನ್ವೀ ॥೧೭॥

ಭೀಮ ಎಲ್ಲೆಡೆ ಆನೆಗಳನ್ನು ಸಂಹರಿಸಿ ಎಲ್ಲ ರಾಜರನ್ನೂ ಓಡಿಸುತ್ತಿದ್ದಾಗ ದುರ್ಯೋಧನನ ಕೋರಿಕೆಯಂತೆ ಧನುರ್ಧಾರಿಯಾದ ಭಗದತ್ತ ಸುಪ್ರತೀಕ ಆನೆಯ ಮೇಲೇರಿ ಬಂದ.

ವಿಭೀಷಿತಾಃ ಸುಪ್ರತೀಕೇನ ಭೀಮ
ಹಯಾ ನ ತಸ್ಥುಸ್ತದನು ಸ್ಮ ಸಾತ್ಯಕಿಃ ।
ಸೌಭದ್ರಮುಖ್ಯಾಶ್ಚ ಗಜಂ ತಮಭ್ಯಯು
ಶ್ಚಿಕ್ಷೇಪ ತೇಷಾಂ ಸ ರಥಾನಥಾಂಬರೇ ॥೧೮॥

ಸುಪ್ರತೀಕ ಆನೆಗೆ ಬೆದರಿದ ಭೀಮನ ಕುದುರೆಗಳು ವಶದಲ್ಲಿ ನಿಲ್ಲಲಿಲ್ಲ. ಬಳಿಕ ಸಾತ್ಯಕಿ ಮತ್ತು ಅಭಿಮನ್ಯು ಮುಂತಾದವರು ಆ ಆನೆಯನ್ನು ಇದಿರಿಸಿದರು. ಆನೆ ಅವರ ರಥಗಳನ್ನು ಆಕಾಶಕ್ಕೆ ಹಾರಿಸಿತು.

ಭೀಮ ರಥದಿಂದ ಕೆಳಗೆ ಹಾರಿ ಆನೆಯ ಹೊಟ್ಟೆಯ ಕೆಳಗಡೆ ಸೇರಿ ಕೈಯಿಂದ ಹೊಟ್ಟೆಯನ್ನು ತಟ್ಟಿ ಶಾಂತಗೊಳಿಸಲು ಯತ್ನಿಸುತ್ತಿದ್ದಂತೆ ಸಾತ್ಯಕಿ ಅಭಿಮನ್ಯುಗಳು ಬಂದು ಭಗದತ್ತನನ್ನು ಇದಿರಿಸಿದರು. ಆನೆ ಸಿಟ್ಟಾಗಿ ಅವರ ರಥಗಳನ್ನು ಎತ್ತಿ ಆಕಾಶದಲ್ಲಿ ತೂರಿತು.

ಶೈನೇಯಪೂರ್ವೇಷು ರಥೋಜ್ಝಿತೇಷು
ಭೂಮಾವವಪ್ಲುತ್ಯ ಕಥಂಚಿದೇವ ।
ಸ್ಥಿತೇಷು ಭೀಮೇ ಚ ವಿಭೀಷಿತಾಶ್ವಾನ್
ಸಂಯಮ್ಯ ಯುದ್ಧ್ಯತ್ಯಪಿ ಕೃಷ್ಣ ಐಕ್ಷತ್ ॥೧೯॥

ಸಾತ್ಯಕಿ ಮುಂತಾದವರು ರಥಗಳನ್ನು ಕಳೆದುಕೊಂಡು ಹಾರಿ ನೆಲದಲ್ಲಿ ಕಷ್ಟದಿಂದ ನಿಂತಿರಲು, ಭೀಮನೂ ಹೆದರಿದ ಕುದುರೆಗಳನ್ನು ಹತೋಟಿಗೆ ತಂದು ಯುದ್ಧ ಮಾಡುತ್ತಿರಲು ಕೃಷ್ಣ ಹೀಗೆ ಆಲೋಚಿಸಿದ.

ಸಂಕ್ಲೇಶಿತೋ ವೈಷ್ಣವಾಸ್ತ್ರಂ ಪ್ರಮುಂಚೇತ್
ಪ್ರಾಗ್ಜ್ಯೋತಿಷೋ ಭೀಮಸೇನೇ ತತೋಽಹಮ್ ।

ಯಾಮ್ಯರ್ಜುನೇನೈವ ತದಸ್ತ್ರಮಾತ್ಮನಃ
ಸ್ವೀಕರ್ತುಮನ್ಯೇನ ವರಾದಧಾರ್ಯಮ್ ॥೨೦॥

ಭೀಮನಿಂದ ಬಹಳ ಪೀಡಿತನಾದ ಭಗದತ್ತ ಅವನ ಮೇಲೆ ವೈಷ್ಣವಾಸ್ತ್ರವನ್ನು ಎಸೆಯಬಹುದು. ಅದರಿಂದ ನನ್ನ ವರದಿಂದ ಬೇರೆಯವರಿಗೆ ಧರಿಸಲಾಗದ ಆ ಅಸ್ತ್ರವನ್ನು ಸ್ವೀಕರಿಸಲು ಅರ್ಜುನನೊಂದಿಗೆ ನಾನೇ ಹೋಗುತ್ತೇನೆ.

ಇತಿ ಸ್ಮ ಸಂಚಿಂತ್ಯ ಸಹಾರ್ಜುನೇನ
ತತ್ರಾಕಯಯಾವಥ ಪಾರ್ಥಂ ತ್ರಿಗರ್ತಾಃ।
ನ್ಯವಾರಯಂಸ್ತ್ವಾಷ್ಟ್ರಮಸ್ತ್ರಂ ಸ ತೇಷು
ವ್ಯವಾಸೃಜನ್ಮೋಹನಾಯಾಕಶು ವೀರಃ ॥೨೧॥

ಹೀಗೆ ಆಲೋಚಿಸಿ ಕೃಷ್ಣ ಅರ್ಜುನನೊಂದಿಗೆ ಭಗದತ್ತನಲ್ಲಿಗೆ ಹೊರಟ. ಆಗ ಅರ್ಜುನನನ್ನು ಸಂಶಪ್ತಕರು ತಡೆದರು. ವೀರ ಅರ್ಜುನ ಬೇಗನೆ ಅವರನ್ನು ಮೋಹಗೊಳಿಸುವುದಕ್ಕಾಗಿ ಅವರ ಮೇಲೆ ತ್ವಾಷ್ಟ್ರ ಅಸ್ತ್ರವನ್ನು ಪ್ರಯೋಗಿಸಿದ.

ತ್ವಾಷ್ಟ್ರ ಅಸ್ತ್ರ ಒಂದು ಸಂಮೋಹನಾಸ್ತ್ರ. ತ್ವಷ್ಟ್ರ ಎಂಬ ಆದಿತ್ಯ ಇದಕ್ಕೆ

!!" ದೇವತೆ.

ತದಸ್ತ್ರವೀರ್ಯೇಣ ವಿಮೋಹಿತಾಸ್ತೇ
ಪರಸ್ಪರಂ ಕೃಷ್ಣಪಾರ್ಥಾವಿತಿ ಸ್ಮ।
ಜಘ್ನುಸ್ತದಾ ವಾಸವಿಸ್ತಾನ್ ವಿಸೃಜ್ಯ
ಪ್ರಾಗ್ಜ್ಯೋತಿಷಂ ಹಂತುಮಿಹಾಭ್ಯಗಾದ್ ದ್ರುತಮ್ ॥೨೨॥

ಆ ಅಸ್ತ್ರದ ಪ್ರಭಾವದಿಂದ ಸಂಶಪ್ತಕರು ಪರಸ್ಪರ ತಾವೇ ಕೃಷ್ಣಾರ್ಜುನರೆಂಬ ಭ್ರಮೆಗೊಳಗಾಗಿ ಒಬ್ಬರಿಗೊಬ್ಬರು ಹೊಡೆದುಕೊಂಡರು. ಆಗ ಅರ್ಜುನ ಅವರನ್ನು ಬಿಟ್ಟು ಭಗದತ್ತನನ್ನು ಕೊಲ್ಲುವುದಕ್ಕಾಗಿ ಬೇಗನೆ ಅಲ್ಲಿಗೆ ಎದುರಾಗಿ ಬಂದ.

ಅರ್ಜುನ ಸಂಶಪ್ತಕರೊಡನೆ ಯುದ್ಧ ಮಾಡುತ್ತಿರಲಿ. ಅತ್ತ ದ್ರೋಣ ಯುಧಿಷ್ಠಿರನನ್ನು ಸೆರೆಹಿಡಿಯಲಿ. ಅರ್ಜುನ ತನ್ನನ್ನು ಕಾಪಾಡಲಿಲ್ಲವೆಂದು ಯುಧಿಷ್ಠಿರ ಕೋಪಗೊಳ್ಳಲಿ. ಆಗ ಅಣ್ಣತಮ್ಮಂದಿರಲ್ಲಿ ಒಡಕು ಮೂಡುವುದು ಎಂಬುದು ದುರ್ಯೋಧನನ ಎಣಿಕೆಯಾಗಿದ್ದಿತು. ಆದರೆ ಅರ್ಜುನ ಸುಲಭವಾಗಿ ಸಂಶಪ್ತಕರನ್ನು ಸಂಮೋಹನಾಸ್ತ್ರದಿಂದಲೆ ನಾಶಪಡಿಸಿ ಈಚೆಗೆ ಬಂದ. ದುರ್ಯೋಧನನ ಎಣಿಕೆ ಸುಳ್ಳಾಯಿತು. (ದ್ರೋಣ 27.17)

ವಿಸೃಜ್ಯ ಭೀಮಂ ಸ ಚ ಪಾರ್ಥಮೇವ
ಯಯೌ ಗಜಸ್ಕಂಧಗತೋ ಗಜಂ ತಮ್।

ಸಂಚೋದಯಾಮಾಸ ರಥಾಯ ತಸ್ಯ
ಚಕ್ರೇಽಪಸವ್ಯಂ ಹರಿರೇನಮಾಶು ॥೨೩॥

ಭಗದತ್ತ ಭೀಮನನ್ನು ಬಿಟ್ಟು ಅರ್ಜುನನನ್ನೆ ಸಮೀಪಿಸಿದ. ಆನೆಯ ಹೆಗಲ ಮೇಲೆ ಕುಳಿತಿದ್ದ ಆತ ಆನೆಯನ್ನು ಅರ್ಜುನನ ರಥದ ಕಡೆಗೆ ನಡೆಸಿದ. ಕೃಷ್ಣ ರಥವನ್ನು ಆನೆಯ ಸುತ್ತಲೂ ವೇಗವಾಗಿ ಚಲಿಸಿದ.

ಮನೋಜವೇನೈವ ರಥೇ ಪರೇಣ
ಸಂಭ್ರಾಮ್ಯಮಾಣೇ ನ ತು ತಂ ಗಜಃ ಸಃ ।
ಪ್ರಾಪ್ತುಂ ಶಶಾಕಾಥ ಶರೈಃ ಸುತೀಕ್ಷ್ಣೈ-
ರಭ್ಯರ್ದಯಾಮಾಸ ನೃಪಂ ಸ ವಾಸವಿಃ ॥೨೪॥

ಶ್ರೀಕೃಷ್ಣ ರಥವನ್ನು ಮನೋವೇಗದಿಂದ ಸುತ್ತಲೂ ತಿರುಗಿಸುತ್ತಿದ್ದುದರಿಂದ ಆನೆ ರಥವನ್ನು ಹಿಡಿಯಲು ಶಕ್ತವಾಗಲಿಲ್ಲ. ಅರ್ಜುನ ಅತಿ ತೀಕ್ಷ್ಣವಾದ ಬಾಣಗಳಿಂದ ಭಗದತ್ತನನ್ನು ಪೀಡಿಸಿದ.

ಅಸ್ತ್ರೈಶ್ಚ ಶಸ್ತ್ರೈಃ ಸುಚಿರಂ ನೃವೀರಾ-
ವಯುದ್ಧ್ಯತಾಂ ತೌ ಬಲಿನಾಂ ಪ್ರಬರ್ಹೌ ।
ಅಥೋ ಚಕರ್ತಾಸ್ಯ ಧನುಃ ಸ ಪಾರ್ಥಃ
ಸ ವೈಷ್ಣವಾಸ್ತ್ರಂ ಚ ತದಾಽಂಕುಶೇಽಕರೋತ್ ॥೨೫॥

ಬಲಿಷ್ಠರಲ್ಲಿ ಮೊದಲಿಗರಾದ ಆ ಅರ್ಜುನ ಭಗದತ್ತರು ದೀರ್ಘಕಾಲ ಅಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಯುದ್ಧ ಮಾಡಿದರು. ಬಳಿಕ ಅರ್ಜುನ ಭಗದತ್ತನ ಬಿಲ್ಲನ್ನು ತುಂಡರಿಸಿದ. ಭಗದತ್ತ ಅಂಕುಶದಲ್ಲಿ ವೈಷ್ಣವಾಸ್ತ್ರವನ್ನು ಅಭಿಮಂತ್ರಿಸಿದ.

ತಸ್ಮಿನ್ನಸ್ತ್ರೇ ತೇನ ತದಾ ಪ್ರಮುಕ್ತೇ
ದಧಾರ ತದ್ ವಾಸುದೇವೋಽಮಿತೌಜಾಃ ।
ತದಂಸದೇಶೇಽಸ್ಯ ತು ವೈಜಯಂತೀ
ಬಭೂವ ಮಾಲಾಽಖಿಲಲೋಕಭರ್ತುಃ ॥೨೬॥

ಭಗದತ್ತ ವೈಷ್ಣವಾಸ್ತ್ರವನ್ನು ಪ್ರಯೋಗಿಸಿದಾಗ ಅಮಿತ ಶಕ್ತಿಯುಳ್ಳ ಶ್ರೀಕೃಷ್ಣ ಅದನ್ನು ಧರಿಸಿದ. ಅದು ಸಕಲ ಲೋಕದೊಡೆಯನಾದ ಕೃಷ್ಣನ ಹೆಗಲಲ್ಲಿ ವೈಜಯಂತೀ ಮಾಲೆಯಾಯಿತು.

ಭಗದತ್ತ ಕೃಷ್ಣನ ಮೇಲೆ ಬಾಣಗಳ ಮಳೆಗರೆದಾಗ ಅರ್ಜುನ ಅವನ ಬಿಲ್ಲನ್ನು ಕತ್ತರಿಸಿದ. ಕೃಷ್ಣನ ಮೇಲೆ ಶಕ್ತ್ಯಾಯುಧವನ್ನು ಎಸೆದಾಗ ಅದನ್ನೂ ಅರ್ಜುನ ತುಂಡರಿಸಿದ. ಅರ್ಜುನನ ಮೇಲೇ ವೈಷ್ಣವಾಸ್ತ್ರವನ್ನೆಸೆದಾಗ ಕೃಷ್ಣನೆದ್ದು ಅಡ್ಡನಿಂತು ತಾನೆ ಅದನ್ನು ಎದೆಯಲ್ಲಿ ಧರಿಸಿದ. ಆಗ ಅದು ವೈಜಯಂತೀಮಾಲೆಯಾಯಿತು.

ವೈಜಯಂತೀ ಮಾಲೆ ಎಂದರೆ ನೀಲ ಮುತ್ತು ಮಾಣಿಕ್ಯ ವೈಢೂರ್ಯ ರತ್ನಗಳಿಂದಲೂ ತುಲಸೀ ದಲಗಳಿಂದಲೂ ಯುಕ್ತವಾಗಿದ್ದು ನಾಲ್ಕು ದಂಡೆ ಹೂಗಳಿಂದ ಕೂಡಿದ ಮಾಲೆ.

ಅನೇಕ ರತ್ನಸಂಯುಕ್ತಾ ತುಲಸೀದಲಮಿಶ್ರಿತಾ।
ವಿಷ್ಣುವಕ್ಷಸ್ಥಿತಾ ಮಾಲಾ ವೈಜಯಂತೀತ್ಯುದಾಹೃತಾ॥
ಪುಷ್ಪೈಶ್ಚತುರ್ಗುಣೈರ್ಮಾಲಾಂ ವೈಜಯಂತೀಂ ವಿದುರ್ಬುಧಾಃ।
ಪಂಚ ಸ್ವರೂಪಾ ಯಾ ಮಾಲಾ ವೈಜಯಂತೀ ಗದಾಭೃತಃ।
ಸಾ ಭೂತಹೇತು ಸಂಭೂತಾ ಭೂತಮಾಲಾ ಚ ವೈ ದ್ವಿಜ॥

ವಿಷ್ಣುಪುರಾಣ ವೈಜಯಂತೀಮಾಲೆಯನ್ನು ಭೂತಮಾಲೆ ಎಂದು ಕರೆದಿದೆ. ಏಕೆಂದರೆ ಮೇಲೆ ಹೇಳಿದ ಐದು ಮಣಿಗಳು ಕ್ರಮವಾಗಿ ಪಂಚಭೂತಗಳಿಂದ ಉದಿಸಿದವುಗಳು-

ಭುವೋ ನೀಲಂ, ಅಪಾಂ ಮುಕ್ತಾ, ಮಾಣಿಕ್ಯಂ ತೇಜಸಾನ್ವಿತಂ
ವೈಡೂರ್ಯಂ ವಾಯುಜಂ ಪ್ರೋಕ್ತಂ, ರತ್ನಮಾಕಾಶ ಸಂಭವಂ॥

ಹೀಗೆ ಪ್ರಮಾಣ ಸಂಗ್ರಹಕಾರರು ವೈಜಯಂತೀ ಮಾಲೆಯನ್ನು ವರ್ಣಿಸಿದ್ದಾರೆ.

ವೈಷ್ಣವಾಸ್ತ್ರ ಶ್ರೀವರಾಹ ನರಕಾಸುರನಿಗೆ ಕೊಟ್ಟಿರುವುದು. ಅವನಿಂದ ಮಗನಾದ ಭಗದತ್ತನಿಗೆ ಲಭ್ಯವಾಗಿತ್ತು. ಅದೊಂದು ವಿಷ್ಣುಮಂತ್ರ. ಅದನ್ನು ಆನೆಯ ಮೇಲಿದ್ದ ಭಗದತ್ತ ಅಂಕುಶದಲ್ಲಿ ಅಭಿಮಂತ್ರಿಸಿ ಎಸೆದಿದ್ದ. ಅದನ್ನು ಶ್ರೀಕೃಷ್ಣ ವೈಜಯಂತೀಮಾಲೆಯನ್ನಾಗಿ ಮಾಡಿಕೊಂಡು ಧರಿಸಿದ. ಕುಮಾರವ್ಯಾಸ ಶ್ರೀವರಾಹನ ದಾಡೆ ವೈಷ್ಣವಾಸ್ತ್ರ ಎನ್ನುತ್ತಾನೆ-

ಇದು ವರಾಹನ ದಾಡೆ ಇದನಾ
ತ್ರಿದಶ ವೈರಿಗೆ ಕೊಟ್ಟೆನವನಿಂ
ದಿದುವೆ ಭಗದತ್ತನಿಗೆ ಬಂದುದು ವೈಷ್ಣವಾಸ್ತ್ರವಿದು॥
(ದ್ರೋಣ 3.72)

ಈ ವೈಷ್ಣವಾಸ್ತ್ರ ಕೃಷ್ಣನ ಎದೆಯಲ್ಲಿ ಕೌಸ್ತುಭಮಣಿಯಂತೆ ಶೋಭಿಸಿತು ಎಂದೂ ಹೇಳುತ್ತಾನೆ.

ಮೆರೆದುದುರದಲಿ ಕೌಸ್ತುಭದ ಮಣಿ
ಮರಿಯನಿಳುಹಿದ ವೋಲು (ದ್ರೋಣ 3.61)

ದೃಷ್ಟೈವ ತದ್ ಧಾರಿತಮಚ್ಯುತೇನ
ಪಾರ್ಥಃ ಕಿಮರ್ಥಂ ವಿಧೃತಂ ತ್ವಯೇತಿ।

ಊಚೇ ತಮಾಹಾಽಶು ಜಗನ್ನಿವಾಸೋ
ಮಯಾಽಖಿಲಂ ಧಾರ್ಯತೇ ಸರ್ವದೈವ ॥ ೨೭ ॥

ವೈಷ್ಣವಾಸ್ತ್ರವನ್ನು ಶ್ರೀಕೃಷ್ಣ ಧರಿಸಿದುದನ್ನು ನೋಡಿ ಅರ್ಜುನ 'ನೀನೇಕೆ ಅದನ್ನು ಧರಿಸಿದೆ?' ಎಂದ. ಆಗ ಜಗದಾಶ್ರಯನಾದ ಕೃಷ್ಣನೆಂದ, 'ಯಾವಾಗಲೂ ಎಲ್ಲವನ್ನೂ ನಾನೇ ಧರಿಸುತ್ತೇನೆ'.

ನ ಮಾದೃಶೋಽನ್ಯೋಽಸ್ತಿ ಕುತಃ ಪರೋ ಮತ್
ಸೋಽಹಂ ಚತುರ್ಧಾ ಜಗತೋ ಹಿತಾಯ ।
ಸ್ಥಿತೋಽಸ್ಮಿ ಮೋಕ್ಷಪ್ರಲಯ ಸ್ಥಿತೀನಾಂ
ಸೃಷ್ಟೇಶ್ಚ ಕರ್ತಾ ಕ್ರಮಶಃ ಸ್ವಮೂರ್ತಿಭಿಃ ।
ಸ ವಾಸುದೇವಾದಿಚತುಃಸ್ವರೂಪಃ
ಸ್ಥಿತೋಽನಿರುದ್ಧೋ ಹೃದಿ ಚಾಖಿಲಸ್ಯ ॥ ೨೮ ॥

ನನಗೆ ಸಮಾನ ಇನ್ನೊಬ್ಬನಿಲ್ಲ. ನನಗಿಂತ ಮಿಗಿಲು ಇನ್ನೆಲ್ಲಿ? ಜಗತ್ತಿನ ಹಿತಕ್ಕಾಗಿ ನಾಲ್ಕು ರೂಪದವನಾಗಿದ್ದೇನೆ. ನನ್ನ ರೂಪಗಳಿಂದ ಕ್ರಮವಾಗಿ ಮೋಕ್ಷ ಪ್ರಲಯ ಸ್ಥಿತಿ ಸೃಷ್ಟಿಗಳಿಗೆ ಕರ್ತನಾಗಿದ್ದೇನೆ. ವಾಸುದೇವ ಮುಂತಾದ ನಾಲ್ಕುರೂಪದವನಾದ ನಾನೇ ಅನಿರುದ್ಧನಾಗಿ ಎಲ್ಲರ ಹೃದಯದಲ್ಲಿರುತ್ತೇನೆ.

ಮಹಾಭಾರತದಲ್ಲಿ (ದ್ರೋಣ 29-33, 34, 35) ಶ್ರೀಕೃಷ್ಣ ತನ್ನ ಚತುರ್ಮೂರ್ತಿಗಳ ವಿವರವನ್ನು ತಿಳಿಸುತ್ತಾನೆ. ನನ್ನ ಒಂದು ರೂಪ ತಪಶ್ಚರ್ಯೆ ಮಾಡುತ್ತದೆ. ಎರಡನೆ ರೂಪ ಜಗತ್ತಿನಲ್ಲಿ ಸತ್ಕರ್ಮ ದುಷ್ಕರ್ಮಾಚರಣೆಗಳನ್ನು ನೋಡುತ್ತದೆ. ಮೂರನೆ ರೂಪ ಕರ್ಮಮಾಡುತ್ತದೆ. ನಾಲ್ಕನೆ ರೂಪ ಸಾವಿರ ವರ್ಷ ನಿದ್ದೆ ಮಾಡಿ ಕೊನೆಗೆ ಎದ್ದು ಯೋಗ್ಯರಿಗೆ ಉತ್ತಮ ವರಗಳನ್ನು ನೀಡುತ್ತದೆ.

ಪ್ರಮಾಣ ಸಂಗ್ರಹಕಾರರು ಹೇಳುವಂತೆ ಮನಸ್ಸಿನ ಚಟುವಟಿಕೆಗಳನ್ನು ಮನಸ್ಸು, ಬುದ್ಧಿ, ಅಹಂಕಾರ ಚಿತ್ತ ಚೇತನ ಎಂದು ಐದು ವಿಭಾಗ ಮಾಡಬಹುದು. ಧ್ಯಾನರೂಪವಾದ ಚಿತ್ತವು ಮಹತ್ತತ್ವದಿಂದ ನಿಯಂತ್ರಿತವಾಗುವುದರಿಂದ ಅದಕ್ಕೆ ಮಹತ್ತತ್ವದಲ್ಲಿರುವ ವಾಸುದೇವ ನಿಯಾಮಕ. ನಾನು ಎಂಬ ಅಭಿಮಾನ ರೂಪವಾದ ಅಹಂಕಾರಕ್ಕೆ ಸೂಕ್ಷ್ಮಸ್ಥೂಲ ಅಹಂಕಾರ ತತ್ವಗಳಲ್ಲಿರುವ ಸಂಕರ್ಷಣ ಪ್ರದ್ಯುಮ್ನರು ನಿಯಾಮಕರು. ಮನಸಿಗೆ ಅಂದರೆ ಸಂಕಲ್ಪ ವಿಕಲ್ಪ ರೂಪದ ಮನಸ್ಸಿನ ಚಟುವಟಿಕೆಗೆ ಮನಸ್ತತ್ವದಲ್ಲಿರುವ ಅನಿರುದ್ಧ ನಿಯಾಮಕ, ಸ್ಥೂಲದೇಹಾಂತರ್ಯಾಮಿಯಾಗಿ ಹೃದಯದಲ್ಲಿರುವ ರೂಪವೂ

ಅನಿರುದ್ಧ. ಇದನ್ನು ಮಹಾಭಾರತ ಭಂಗ್ಯಂತರದಿಂದ ಹೇಳುತ್ತಿದೆ. ವಾಸುದೇವ ತಪಶ್ಚರ್ಯೆ ಮಾಡಿ ಮಾಡಿಸುತ್ತಾನೆ. ತಪ ಎಂದರೆ ಧ್ಯಾನ, ಚಿತ್ತದ ಕಾರ್ಯ. ಅದರಿಂದ ವಾಸುದೇವ ಚಿತ್ತನಿಯಾಮಕ. ಅನಿರುದ್ಧರೂಪ ಸತ್ಕರ್ಮ ದುಷ್ಕರ್ಮಗಳನ್ನು ನೋಡುತ್ತದೆ. ಅಂದರೆ, ಸಂಕಲ್ಪವಿಕಲ್ಪಾತ್ಮಕ ಮನಸ್ಸಿನಿಂದ ಆಲೋಚನೆ ಮಾಡಿಸುತ್ತದೆ. ಪ್ರದ್ಯುಮ್ನ ಕರ್ಮ ಮಾಡುತ್ತ ಮಾಡಿಸುತ್ತಾನೆ. ಅಂದರೆ ಸ್ಥೂಲಾಹಂಕಾರಸ್ಥನಾಗಿ ನಾನು ಎಂಬ ಕರ್ತೃತ್ವಪ್ರಜ್ಞೆಯ ಮೂಲಕ ಕರ್ಮ ಮಾಡಿಸುತ್ತಾನೆ. ಸಂಕರ್ಷಣ ಸಾವಿರ ವರ್ಷ ಅಂದರೆ ದೇವಮಾನದ ಸಾವಿರಾರು ವರ್ಷಗಳು, ಬ್ರಹ್ಮಮಾನದ ನೂರು ವರ್ಷ ನಿದ್ದೆ ಮಾಡುತ್ತಾನೆ. ಅಂದರೆ ಲಯಕಾಲದಲ್ಲಿ ಜೀವರಿಗೆ ನಿದ್ರೆ ಮಾಡಿಸುತ್ತಾನೆ. ಎದ್ದ ಬಳಿಕ, ಸೃಷ್ಟಿಯ ಪ್ರಾರಂಭದಲ್ಲಿ ವೈಕುಂಠಾದಿ ಮುಕ್ತಲೋಕಗಳಲ್ಲಿ ಪ್ರವೇಶವೆಂಬ ವರ ನೀಡುತ್ತಾನೆ.

ನೀಲಕಂಠೀ ಪ್ರಕಾರ ತಪಸ್ಸು ಮಾಡುವುದು ಬದರೀನಾರಾಯಣ ರೂಪ. ಕರ್ಮಸಾಕ್ಷಿ ಪರಮಾತ್ಮರೂಪ. ಕರ್ಮ ಮಾಡುವುದು ರಾಮಕೃಷ್ಣಾದಿರೂಪ. ನಿದ್ದೆ ಮಾಡುವುದು ಜಲಶಾಯಿ ರೂಪ. ಆದರೆ ಚತುರ್ಮೂರ್ತಿ ಎಂಬ ಪ್ರಸಿದ್ಧಿ ವಾಸುದೇವಾದಿ ರೂಪಗಳಿಗೆ ಮಾತ್ರ.

ಸ ಏವ ಚ ಕ್ರೋಡತನುಃ ಪುರಾಽಹಂ
ಭೂಮಿಪ್ರಿಯಾರ್ಥಂ ನರಕಾಯ ಚಾದಾಮ್ ।
ಅಸ್ತ್ರಂ ಮದೀಯಂ ವರಮಸ್ಯ ಚಾದಾ-
ಮವಧ್ಯತಾಂ ಯಾವದಸ್ತ್ರಂ ಸಸೂನೋಃ ॥ ೨೯ ॥

ಚತುರ್ಮೂರ್ತಿ ಸ್ವರೂಪನಾದ ನಾನೇ ವರಾಹರೂಪನಾಗಿ ಹಿಂದೆ ಭೂದೇವಿಗೆ ಪ್ರಿಯ ಉಂಟುಮಾಡುವುದಕ್ಕಾಗಿ ನರಕಾಸುರನಿಗೆ ನನ್ನ ಅಸ್ತ್ರವನ್ನಿತ್ತೆ. ಅವನಿಗೂ ಅವನ ಮಗನಿಗೂ ಅಸ್ತ್ರವಿರುವಷ್ಟು ಕಾಲ ಅವಧ್ಯತ್ವವನ್ನೂ ವರವಾಗಿ ನೀಡಿದೆ.

ಮೊದಲಿಗೆ ಚತುರ್ಮೂರ್ತಿಯಾಗಿ ಅವತರಿಸಿದ ಹರಿಯೆ ಬಳಿಕ ದಶಾವತಾರ ತಾಳಿದ. ಆಗ ವರಾಹನಾಗಿ ಧರಾದೇವಿಯಲ್ಲಿ ಆವಿಷ್ಟಳಾದ ಭೂರೂಪಳಾದ ಲಕ್ಷ್ಮ್ಯಾಯ ಅಂಗಸಂಗ ಮಾಡಿ ನರಕಾಸುರನನ್ನು ಹುಟ್ಟಿಸಿದ. ಅವನಿಗೂ ಅವನ ಮಗನಾದ ಭಗದತ್ತನಿಗೂ ವೈಷ್ಣವಾಸ್ತ್ರವನ್ನಿತ್ತು ಆ ಅಸ್ತ್ರವಿರುವಷ್ಟು ಕಾಲ ತನಗೆ ಹೊರತು ಇತರರಿಗೆ ಅವಧ್ಯನಾಗುವಂತೆ ವರ ನೀಡಿದ. ನರಕಾಸುರನಲ್ಲಿ ಅಸ್ತ್ರವಿದ್ದುದರಿಂದ ಹರಿ ತಾನೇ ಕೃಷ್ಣನಾಗಿ ಬಂದು ಸಂಹರಿಸಿದ. ಭಗದತ್ತನಲ್ಲಿ ಈಗ ಅಸ್ತ್ರವಿಲ್ಲದಂತೆ ಮಾಡಿ ಅರ್ಜುನನಿಂದ ಕೊಲ್ಲಿಸಲು ಸಂಕಲ್ಪಿಸಿದ್ದರಿಂದ ತಾನೆ ಅಸ್ತ್ರವನ್ನು ಧರಿಸಿದ.

ಅಸ್ತ್ರಸ್ಯ ಚಾನ್ಯೋ ನ ತು ಕಶ್ಚಿದಸ್ತಿ
ಯೋಽವಧ್ಯ ಏತಸ್ಯ ಕುತಶ್ಚ ಮತ್ತಃ।
ಇತಿ ಸ್ಮ ತೇನೈವ ಮಯಾ ಧೃತಂ ತ-
ದಸ್ತ್ರಂ ತದೇನಂ ಜಹಿ ಚಾಸ್ತ್ರಹೀನಮ್ ॥೩೦॥

ಈ ಅಸ್ತ್ರಕ್ಕೆ ಅವಧ್ಯನು ನಾನೇ ಹೊರತು ಇನ್ನಾರೂ ಯಾವ ಕಾರಣದಿಂದಲೂ ಅಲ್ಲ. ಅದರಿಂದಲೆ ನಾನು ಆ ಅಸ್ತ್ರವನ್ನು ಧರಿಸಿದೆ. ಅದರಿಂದ ಈಗ ಅಸ್ತ್ರಹೀನನಾಗಿರುವ ಈ ಭಗದತ್ತನನ್ನು ನೀನು ಕೊಲ್ಲು.

ಇತ್ಯುಕ್ತಮಾಕರ್ಣ್ಯ ಸ ಕೇಶವೇನ
ಸಮ್ಮಂತ್ರ್ಯ ಬಾಣಂ ಹೃದಯೇ ಮುಮೋಚ।
ಪ್ರಾಗ್ಜ್ಯೋತಿಷಸ್ಯಾಪರಮುತ್ತಮಂ ಶರಂ
ಗಜೇಂದ್ರಕುಂಭಸ್ಥಲ ಆಶ್ವಮಜ್ಜಯತ್ ॥೩೧॥

ಶ್ರೀಕೃಷ್ಣ ಹೀಗೆ ಹೇಳಿದ್ದನ್ನು ಕೇಳಿ ಅರ್ಜುನ ಅವನೊಡನೆ ವಿಚಾರಮಾಡಿ ಭಗದತ್ತನ ಎದೆಯ ಮೇಲೆ ಬೇಗನೆ ಒಂದು ಬಾಣವನ್ನೆಸೆದ. ಗಜೇಂದ್ರನ ಕುಂಭಸ್ಥಳದಲ್ಲಿಯೂ ಇನ್ನೊಂದು ಉತ್ತಮವಾದ ಬಾಣವನ್ನು ನೆಟ್ಟ.

ಉಭೌ ಚ ತೌ ಪೇತತುರದ್ರಿಸನ್ನಿಭೌ
ಮಹೇಂದ್ರವಜ್ರಾಭಿಹತಾವಿವಾಕಶು।
ನಿಹತ್ಯ ತೌ ವಾಸವಿರುಗ್ರಪೌರುಷೋ
ಮುಮೋದ ಸಾಧು ಸ್ವಜನಾಭಿಪೂಜಿತಃ ॥೩೨॥

ಭಗದತ್ತ ಮತ್ತು ಸುಪ್ರತೀಕ ಆನೆ ಇಬ್ಬರೂ ಮಹೇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಬೆಟ್ಟಗಳಂತೆ ಬೇಗನೆ ನೆಲಕ್ಕೆ ಉರುಳಿದರು. ಉಗ್ರಪ್ರತಾಪಿ ಅರ್ಜುನ ಅವರಿಬ್ಬರನ್ನು ಕೊಂದು ಚೆನ್ನಾಗಿ ತನ್ನವರ ಪ್ರಶಂಸೆಗೆ ಪಾತ್ರನಾಗಿ ಆನಂದಪಟ್ಟ.

ಭಗದತ್ತ ಮಹಾಸುರ ಬಹಳ ವೃದ್ಧನಾಗಿದ್ದು ಅವನ ಕಣ್ಣಿನ ಮೇಲೆ ಚರ್ಮದ ಪೊರೆ ಇಳಿದು ಬಿದ್ದಿತ್ತು. ಅದನ್ನು ಎತ್ತಿ ಬಟ್ಟೆಯಿಂದ ಕಟ್ಟಿಕೊಂಡಿದ್ದ. ಕೃಷ್ಣನ ಮಾತಿನಂತೆ ಅರ್ಜುನ ಬಾಣದಿಂದ ಬಟ್ಟೆಯನ್ನು ಕತ್ತರಿಸಿದಾಗ ಕಣ್ಣಿಗೆ ಪೊರೆ ಆವರಿಸಿ ಏನೂ ಕಾಣದಂತಾಯಿತು. ಆಗ ಅರ್ಜುನ ಅವನೆದೆಗೆ ಅರ್ಧಚಂದ್ರ ಬಾಣವನ್ನೆಸೆದು ಕೊಂದ. (ದ್ರೋಣ 29.55)

ಅಥಾಚಲಂ ವೃಷಕಂ ಚೈವ ಹತ್ವಾ
ಕನೀಯಸೌ ಶಕುನೇಸ್ತಂ ಚ ಬಾಣೈಃ।

ವಿವ್ಯಾಧ ಮಾಯಾಮಸೃಜತ್ ಸ ತಾಂ ಚ
ವಿಜ್ಞಾನಾಸ್ತ್ರೇಣಾಕಶು ನಾಶಾಯ ಚಕ್ರೇ ॥೩೩॥

ಬಳಿಕ ಅರ್ಜುನ ಶಕುನಿಯ ತಮ್ಮಂದಿರಾದ ಅಚಲನನ್ನೂ ವೃಷಕನನ್ನೂ ಕೊಂದು ಶಕುನಿಯನ್ನೂ ಬಾಣಗಳಿಂದ ಹೊಡೆದ. ಶಕುನಿ ಮಾಯೆಯನ್ನು ಸೃಜಿಸಿದ. ಅದನ್ನೂ ಅರ್ಜುನ ವಿಜ್ಞಾನಾಸ್ತ್ರದಿಂದ ನಾಶಪಡಿಸಿದ.

ನಿರ್ಣಯದಲ್ಲಿ 'ವೃಷಭ' ಎಂಬ ಪಾಠ ಸರಿಯಲ್ಲ. ವೃಷಭನೆಂಬ ಶಕುನಿಯ ಸೋದರನನ್ನು ಹಿಂದೆಯೆ ಇರಾವಂತ ಕೊಂದಿದ್ದಾನೆ. 'ವೃಷಕ' ಎಂಬ ಪಾಠ ವರದರಾಜೀಯಕ್ಕೆ ಅನುಸಾರಿಯಾಗಿದ್ದು ಮಹಾಭಾರತಕ್ಕೂ ಅನುಗುಣವಾಗಿದೆ- 'ಭ್ರಾತರೌ ವೃಷಕಾಚಲೌ' (ದ್ರೋಣ 30.2)

ವೃಷಕ ಮತ್ತು ಅಚಲ ಇಬ್ಬರೂ ಶಕುನಿಯ ಸೋದರರು. ರಾಜರು, ಮಹಾರಥರು. ಅರ್ಜುನ ವೃಷಕನ ರಥವನ್ನು ಪುಡಿಮಾಡಿದಾಗ ಅವನು ಅಚಲನ ರಥವೇರಿದ. ಇಬ್ಬರೂ ಒಂದೇ ರಥದಲ್ಲಿ ಮೈಗೆಮೈತಾಕಿಸಿಕೊಂಡು ನಿಂತು ಹೋರಾಡಿದರು. ಅದರಿಂದ ಒಂದೇ ಬಾಣದಿಂದ ಇಬ್ಬರನ್ನೂ ಕೊಂದ ಅರ್ಜುನ.

ಬಳಿಕ ಶಕುನಿಯ ಮಾಯೆಯಿಂದ ಅರ್ಜುನನ ಮೇಲೆ ಎಲ್ಲ ದಿಕ್ಕುಗಳಿಂದಲೂ ಎಲ್ಲ ಬಗೆಯ ಆಯುಧಗಳ ಮಳೆಯಾಯಿತು. ಮೃಗಪಕ್ಷಿಗಳೂ ರಾಕ್ಷಸರೂ ಆಕ್ರಮಿಸಿದರು. ಅವೆಲ್ಲವನ್ನೂ ಬಾಣಗಳಿಂದಲೆ ನಾಶಮಾಡಿದ, ಅರ್ಜುನ. ಆಗ ಕತ್ತಲು ಆವರಿಸಿತು. ಅದನ್ನು ಜ್ಯೌತಿಷ ಅಸ್ತ್ರದಿಂದ, ಅಂದರೆ ನಿರ್ಣಯ ಹೇಳುವಂತೆ ವಿಜ್ಞಾನಾಸ್ತ್ರದಿಂದ ನಾಶಪಡಿಸಿದ. ಬಳಿಕ ಭಯಾನಕ ಜಲಪ್ರವಾಹ ಬಂದಿತು. ಅದನ್ನು ಆದಿತ್ಯಾಸ್ತ್ರದಿಂದ ಒಣಗಿಸಿದ. ಬಳಿಕ 'ಶಕುನಿ! ನೋಡು. ನನ್ನ ಗಾಂಡೀವ ಜೂಜಿನ ದಾಳಗಳನ್ನು ಹಾಕುವುದಿಲ್ಲ. ಸಮರ್ಪಕವಾದ ಆಯುಧಗಳನ್ನೆ ಎಸೆಯುತ್ತವೆ' ಎಂದ. ತನ್ನ ಮಾಯೆ ಎಲ್ಲ ಹೀಗೆ ನಷ್ಟವಾದಾಗ ಶಕುನಿ ಪಲಾಯನ ಮಾಡಿದ.

ಸ ನಷ್ಟಮಾಯಃ ಪ್ರಾದ್ರವತ್ ಪಾಪಕರ್ಮಾ
ತತಃ ಪಾರ್ಥಃ ಶರಪೂಗೈಶ್ಚಮೂಂ ತಾಮ್ ।
ವಿದ್ರಾವಯಾಮಾಸ ತದಾ ಗುರೋಃ ಸುತೋ
ಮಾಹಿಷ್ಮತೀಪತಿಮಾಜೌ ಜಘಾನ ॥೩೪॥

ಪಾಪಕರ್ಮಿಯಾದ ಶಕುನಿ ತನ್ನ ಮಾಯೆ ನಾಶವಾದೊಡನೆ ಪಲಾಯನ ಮಾಡಿದ. ಬಳಿಕ

ಅರ್ಜುನ ಬಾಣ ಸಮೂಹಗಳಿಂದ ಕೌರವ ಸೇನೆಯನ್ನು ಅಟ್ಟಿದ. ಆಗ ಅಶ್ವತ್ಥಾಮ ಮಾಹಿಷ್ಮತಿಯ ಅರಸನಾದ ನೀಲನನ್ನು ಕೊಂದ.

ಮಹಾಭಾರತದಲ್ಲಿ (ದ್ರೋಣ 31.19) ಅಶ್ವತ್ಥಾಮ ನೀಲನನ್ನು ಕೊಂದನೆಂದಿದೆ. ಯಾವ ನೀಲ? ಮಾಹಿಷ್ಮತಿಯ ದೊರೆಯೆ? ಅನೂಪದ ದೊರೆಯೆ? ಮಾಹಿಷ್ಮತಿಯ ದೊರೆ ಎಂದು ನಿರ್ಣಯ ಹೇಳಿದೆ. ಆದರೆ ಭೀಷ್ಮಪರ್ವ (94.36)ದಲ್ಲಿ 'ಅನೂಪಾಧಿಪತಿಃ ಶೂರೋ ಭೀಮಸ್ಯ ದಯಿತಃ ಸಖಾ' ಅನೂಪದ ದೊರೆ ನೀಲ ಭೀಮನ ಮಿತ್ರ, ಅಶ್ವತ್ಥಾಮನಿಂದ ಮೂರ್ಛಿತನಾಗುತ್ತಾನೆ. ಮಾಹಿಷ್ಮತೀ ದೊರೆ ದುರ್ಯೋಧನನ ಪಕ್ಷಕ್ಕೆ ಸೇರಿದನೆಂದು ಉದ್ಯೋಗಪರ್ವ (19-23,24) ಮತ್ತು (166-4) ಹೇಳಿದೆ.

ಆದರೆ ಉದ್ಯೋಗಪರ್ವ (19-23)ದಲ್ಲಿ 'ದಕ್ಷಿಣಾಪಥ' ಸ್ಥಾನದಲ್ಲಿ 'ದಕ್ಷಿಣಾನೂಪ'ವೆಂದು ಪಾಠಾಂತರವಿರುವುದರಿಂದ ದಕ್ಷಿಣಾನೂಪದ ಮಾಹಿಷ್ಮತೀಪತಿ ನೀಲ ದುರ್ಯೋಧನನ ಕಡೆಯವನು. ಉತ್ತರಾನೂಪದ ಮಾಹಿಷ್ಮತೀಪತಿ ಪಾಂಡವರ ಕಡೆಯವನು ಅಶ್ವತ್ಥಾಮನಿಂದ ಹತನಾಗುತ್ತಾನೆ ಎನ್ನಬಹುದು. ದಕ್ಷಿಣಾನೂಪವೆಂದರೆ ದಕ್ಷಿಣಾಪಥದ ಅನೂಪ. ಅಲ್ಲಿ ಒಂದು ಮಾಹಿಷ್ಮತೀನಗರವಿದೆ. ಅದರ ದೊರೆ ಕೌರವರ ಕಡೆಯವನು. ಉತ್ತರಾಪಥದಲ್ಲಿ ಒಂದು ಅನೂಪವಿದೆ. ಅಲ್ಲಿ ಒಂದು ಮಾಹಿಷ್ಮತಿ ನಗರವಿದೆ. ಅದು ಪಾಂಚಾಲ ರಾಜ್ಯದಲ್ಲಿ ಸೇರಿದೆ. ಅದರ ದೊರೆ ಭೀಮನ ಮಿತ್ರ ಅಶ್ವತ್ಥಾಮನಿಂದ ಹತನಾಗುತ್ತಾನೆ. ಲಕ್ಷಾಲಂಕಾರದಲ್ಲಿ ಹಾಗೇ ಹೇಳಿದೆ-

'ತತೋ ನೀಲೋಽನಲಪ್ರಖ್ಯ ಇತ್ಯತ್ರ ನೀಲೋ
ನೀಲನಾಮಕಃ ಪಾಂಚಾಲ್ಯೋ ರಾಜಾ'
ತದಾ ಭೀಮಸ್ತಸ್ಯ ನಿಹತ್ಯ ವಾಹಾನ್
ವ್ಯದ್ರಾವಯದ್ ಧಾರ್ತರಾಷ್ಟ್ರೀಂ ಚಮೂಂ ಚ।
ಭೀಮಾರ್ಜುನಾಭ್ಯಾಂ ಹನ್ಯಮಾನಾಂ ಚಮೂಂ ತಾಂ
ದೃಷ್ಟ್ವಾ ದ್ರೋಣಃ ಕ್ಷಿಪ್ರಮಪಾಜಹಾರ ॥೩೫॥

ಆಗ ಭೀಮ ಅಶ್ವತ್ಥಾಮನ ಕುದುರೆಗಳನ್ನು ಕೊಂದು ಕೌರವ ಸೇನೆಯನ್ನು ಓಡಿಸಿದ. ಭೀಮಾರ್ಜುನರಿಂದ ಆ ಸೈನ್ಯ ಹತವಾಗುತ್ತಿದ್ದುದನ್ನು ಕಂಡು ದ್ರೋಣ ಬೇಗನೆ ಅದನ್ನು ಹಿಂದೆ ಕರೆಸಿಕೊಂಡ.

ಹದಿಮೂರನೆ ದಿನದ ಯುದ್ಧ - ಅಭಿಮನ್ಯು ವಧ

ಪ್ರಾಗ್ಜ್ಯೋತಿಷೇ ನಿಹತೇಽಥಾಗ್ರಹಾಚ್ಚ
ಯುಧಿಷ್ಠಿರಸ್ಯಾತಿವಿಷಣ್ಣರೂಪಃ ।
ದುರ್ಯೋಧನೋಽಶ್ರಾವಯದ್ ದೀನವಾಕ್ಯಾ-
ನ್ಯತ್ರ ದ್ರೋಣಂ ಸೋಽಪಿ ನೃಪಂ ಜಗಾದ ॥೩೬॥

ಭಗದತ್ತ ಹತನಾದಾಗ ಯುಧಿಷ್ಠಿರನನ್ನೂ ಸೆರೆ ಹಿಡಿಯಲಾಗದಿದ್ದುದರಿಂದ ದುರ್ಯೋಧನ ಬಹಳ ವಿಷಣ್ಣನಾಗಿ ಶಿಬಿರದಲ್ಲಿ ದ್ರೋಣನಿಗೆ ಬಹಳ ಕಟುವಾದ ಮಾತುಗಳನ್ನಾಡಿದ. ಆಗ ದ್ರೋಣ ಅವನಿಗೆ ಹೀಗೆ ಹೇಳಿದ.

ಭಗದತ್ತ ಮಾತ್ರವಲ್ಲದೆ ದುರ್ಯೋಧನನ ಸೋದರ ಮಾವಂದಿರಾದ ವೃಷಕ ಅಚಲರೂ ಅರ್ಜುನನಿಂದ ಹತರಾದರು. ಕೌರವರು ಅದಕ್ಕೆ ಬಹಳ ಕಣ್ಣೀರು ಸುರಿಸಿದರಂತೆ (ದ್ರೋಣ 30.14) ಕರ್ಣನ ಮೂವರು ಸೋದರರನ್ನೂ ಅರ್ಜುನ ಕೊಂದ. ಚಂದ್ರವರ್ಮ ಬೃಹತ್‌ಕ್ಷತ್ರರನ್ನು ಧೃಷ್ಟದ್ಯುಮ್ನ ಕೊಂದ. ಅರ್ಜುನ ಧೃಷ್ಟದ್ಯುಮ್ನ ಭೀಮ ಅಭಿಮನ್ಯುಗಳ ರಕ್ಷಣೆಯಲ್ಲಿ ಸಾತ್ಯಕಿ ಕರ್ಣನನ್ನು ಪರಾಭವಗೊಳಿಸಿದ. ದುರ್ಯೋಧನ ಜಯದ್ರಥ ದ್ರೋಣರು ಕರ್ಣನನ್ನು ರಕ್ಷಿಸಿ ಹಿಂದೆ ಕರೆಸಿಕೊಂಡರು. ಹೀಗಾಗಿ ದುರ್ಯೋಧನನಿಗೆ ಕೋಪ ಬಂದಿತು. 'ನೀವು ಮನಸ್ಸು ಮಾಡಿದ್ದರೆ ಧರ್ಮರಾಜನನ್ನು ಸೆರೆಹಿಡಿಯಬಹುದಾಗಿತ್ತು. ನೀವು ಅವನನ್ನು ಹಿಡಿಯದೆ ನನಗೆ ನೀವು ಕೊಟ್ಟ ಮಾತಿಗೆ ತಪ್ಪಿದಿರಿ!'

ಪಾರ್ಥೇ ಗತೇ ಶ್ವೋ ನೃಪತಿಂ ಗ್ರಹೀಷ್ಯೇ
ನಿಹನ್ಮಿ ವಾ ತತ್ಸದೃಶಂ ತದೀಯಮ್ ।
ಇತಿ ಪ್ರತಿಜ್ಞಾಂ ಸ ವಿಧಾಯ ಭೂಯಃ
ಪ್ರಾತರ್ಯಯೌ ಯುದ್ಧಮಾಕಾಂಕ್ಷಮಾಣಃ ॥೩೭॥

ನಾಳೆ ಅರ್ಜುನ ದೂರ ಹೋದಾಗ ನಾನು ಧರ್ಮರಾಜನನ್ನು ಸೆರೆ ಹಿಡಿಯುವೆನು. ಅಥವಾ ಅವನಿಗೆ ಸಮಾನನಾದ ಅವನ ಕಡೆಯ ಒಬ್ಬನನ್ನು ಕೊಲ್ಲುವೆನು. ಹೀಗೆ ದ್ರೋಣ ಪುನಃ ಪ್ರತಿಜ್ಞೆಮಾಡಿ ಬೆಳಿಗ್ಗೆ ಯುದ್ಧವನ್ನು ಇಚ್ಛಿಸಿ ಹೊರಟ.

'ಧರ್ಮರಾಜ ಅರ್ಜುನನ ರಕ್ಷಣೆಯಲ್ಲಿದ್ದರೆ ದೇವ ಅಸುರ ಗಂಧರ್ವ ಮುಂತಾದವರು ಯಾರೂ ಅವನನ್ನು ಸೆರೆ ಹಿಡಿಯಲಾರರು. ಜಗಜ್ಜನಕನಾದ ಶ್ರೀಕೃಷ್ಣನ ಮತ್ತು ಅರ್ಜುನನ ಮುಂದೆ ಯಾರು ಹೋರಾಡಬಲ್ಲರು? ನೀವು ನಾಳೆ ಅರ್ಜುನನನ್ನು ಹೇಗಾದರೂ ದೂರ ಒಯ್ಯಿರಿ. ಬೇರೆ ಯಾರಿಗೂ

ತಿಳಿಯದಂಥ ಒಂದು ವ್ಯೂಹವನ್ನು ರಚಿಸುತ್ತೇನೆ ಮತ್ತು ಧರ್ಮರಾಜನನ್ನು ಸೆರೆ ಹಿಡಿಯುತ್ತೇನೆ ಅಥವಾ ಒಬ್ಬ ಪ್ರಧಾನ ಮಹಾರಥನನ್ನಾದರೂ ಕೊಲ್ಲುತ್ತೇನೆ. ಅರ್ಜುನನಿಗೆ ತಿಳಿಯದ, ಭೇದಿಸಲಾಗದ ಒಂದು ವ್ಯೂಹ ಲೋಕದಲ್ಲಿಯೆ ಇಲ್ಲ,' ಎಂದ ದ್ರೋಣ.

ಪದ್ಮವ್ಯೂಹಂ ವ್ಯೂಹ್ಯ ಪರೈರಭೇದ್ಯಂ
ವರಾದ್ ವಿಷ್ಣೋಸ್ತಸ್ಯ ಮಂತ್ರಂ ಹ್ಯಜಪ್ತ್ವಾ ।
ಪಾರ್ಥಾಶ್ಚ ತಂ ಪ್ರಾಪುರ್ಯತೇಽರ್ಜುನೇನ
ಸಂಶಪ್ತಕೈರ್ಯುಯುಧೇ ಸೋಽಪಿ ವೀರಃ ॥೩೮॥

ವಿಷ್ಣುವಿನ ವರದಿಂದ, ವಿಷ್ಣುಮಂತ್ರ ಜಪಿಸದೆ ಅನ್ಯರಿಂದ ಭೇದಿಸಲಾಗದ ಪದ್ಮವ್ಯೂಹವನ್ನು ದ್ರೋಣ ರಚಿಸಿ ಯುದ್ಧಕ್ಕೆ ನಿಂತ. ಅರ್ಜುನ ಹೊರತು ಎಲ್ಲ ಪಾಂಡವರೂ ವ್ಯೂಹವನ್ನು ಸಮೀಪಿಸಿದರು. ವೀರ ಅರ್ಜುನ ಸಂಶಪ್ತಕರೊಡನೆ ಹೋರಾಡಿದ.

'ವಿಷ್ಣುಮಂತ್ರಂ ಚ ಜಪ್ತ್ವಾ' 'ವಿಷ್ಣುಮಂತ್ರ ಹಿ ಜಪ್ತ್ವಾ' ಎಂದು ಜನಾರ್ದನೀಯ ವರದರಾಜೀಯ ಪಾಠಗಳಿವೆ. ಈ ಪಾಠಾನುಸಾರ 'ವಿಷ್ಣುಮಂತ್ರ ಜಪಿಸಿ ವಿಷ್ಣುವರದಿಂದ ಅಭೇದ್ಯವಾದ ಪದ್ಮವ್ಯೂಹವನ್ನು ದ್ರೋಣ ರಚಿಸಿದ' ಎಂದು ಅರ್ಥೈಸಬೇಕಾಗುತ್ತದೆ. ವಿಷ್ಣುಮಂತ್ರ ಜಪಿಸಿ ವ್ಯೂಹ ರಚಿಸಿದರೆ ವಿಷ್ಣುವರದಿಂದ ಅದು ಅಭೇದ್ಯವಾಗಿರುತ್ತದೆ ಎಂದು ಭಾವ-

'ವೈಷ್ಣವಮಂತ್ರಜಪೇನ ವ್ಯೂಹೇ ಕೃತೇ ವ್ಯೂಹೋಽಭೇದ್ಯೋ
ಭವತ್ವಿತ್ಯೇವಂ ವಿಷ್ಣೋರ್ವರಸ್ಯ ಸತ್ವಾತ್ ಪರೈರಭೇದ್ಯಂ'

ಎನ್ನುತ್ತದೆ ಜನಾರ್ದನೀಯ. ಆದರೆ ನಿರ್ಣಯದಲ್ಲಿ ಮುಂದೆ 'ಸರ್ವಜ್ಞನಾದ ಭೀಮನಿಗೆ ವಿಷ್ಣುಮಂತ್ರ ಗೊತ್ತಿದ್ದರೂ ಕಾಮ್ಯವೆಂದು ಜಪಿಸಲಿಲ್ಲ' 'ಮಂತ್ರವನ್ನು ತಿಳಿದಿದ್ದ ಅಭಿಮನ್ಯುವಿಗೆ ಧರ್ಮರಾಜ ವ್ಯೂಹವನ್ನು ಭೇದಿಸಲು ಆದೇಶಿಸಿದ' ಎಂದಿದೆ. ಇದರಿಂದ ವಿಷ್ಣುಮಂತ್ರ ಜಪಿಸದೆ ವ್ಯೂಹವನ್ನು ಭೇದಿಸುವುದು ಅಶಕ್ಯವೆಂದಂತಾಗುವುದು. 'ವಿಷ್ಣುಮಂತ್ರ ಹ್ಯಜಪ್ತ್ವಾ' ಎಂದು ಹೃಷಿಕೇಶತೀರ್ಥೀಯ ಪಾಠ ಸಂಗತವಾಗುವುದು. ವೇದಾಂಗ ತೀರ್ಥೀಯ ವ್ಯಾಖ್ಯಾನವೂ ಇದಕ್ಕೆ ಅನುಸಾರಿಯಾಗಿದೆ.

ಪಾರ್ಥಾ ವ್ಯೂಹಂ ತು ತಂ ಪ್ರಾಪ್ಯ ನಾಶಕನ್ ಭೇತ್ತುಮುದ್ಯತಾಃ ।
ಜಾನಂಶ್ಚ ಪ್ರತಿಭಾಯೋಗಾತ್ ಕಾಮ್ಯಂ ನೈವಾಜಪನ್ಮನುಮ್ ॥೩೯॥

ಭೀಮೋ ಯುಧಿಷ್ಠಿರಸ್ತತ್ರ ತಜ್ಜ್ಞಂ ಸೌಭದ್ರಮಬ್ರವೀತ್ ।
ಭಿಂಧಿ ವ್ಯೂಹಮಿಮಂ ತಾತ ವಯಂ ತ್ವಾಮನುಯಾಮಹೇ ॥೪೦॥

ಪಾಂಡವರು ವ್ಯೂಹದ ಬಳಿಗೆ ಹೋಗಿ ಅದನ್ನು ಭೇದಿಸಲು ಯತ್ನಿಸಿದರೂ ಶಕ್ತರಾಗಲಿಲ್ಲ. ಭೀಮ ಪ್ರತಿಭಾ ಬಲದಿಂದ ತಿಳಿದಿದ್ದರೂ ಕಾಮ್ಯವಾದ್ದರಿಂದ ಮಂತ್ರವನ್ನು ಜಪಿಸಲೇ ಇಲ್ಲ. ಅದನ್ನು ತಿಳಿದಿದ್ದ ಅಭಿಮನ್ಯುವಿಗೆ ಯುಧಿಷ್ಠಿರ ಹೇಳಿದ, 'ಮಗು, ನೀನು ಈ ವ್ಯೂಹವನ್ನು ಭೇದಿಸು, ನಾವು ನಿನ್ನ ಬೆನ್ನ ಹಿಂದೆ ಬರುತ್ತೇವೆ.'

ಪಾಂಡವರು ವ್ಯೂಹವನ್ನು ಭೇದಿಸಲು ಶಕ್ತರಾಗಲಿಲ್ಲ. ಏಕೆಂದರೆ ವಿಷ್ಣುಮಂತ್ರವನ್ನು ಜಪಿಸದೆ ವ್ಯೂಹವನ್ನು ಭೇದಿಸಲಾಗದೆಂದು ವಿಷ್ಣುವಿನ ವರವಿದೆ. ಜಪಿಸಲು ಪಾಂಡವರಿಗೆ ಆ ಮಂತ್ರದ ಉಪದೇಶವಿರಲಿಲ್ಲ. ದ್ರೋಣ ಅರ್ಜುನನಿಗೊಬ್ಬನಿಗೇ ಉಪದೇಶಿಸಿದ್ದ. ಅರ್ಜುನ ಅಭಿಮನ್ಯುವಿಗೆ ಉಪದೇಶಿಸಿದ್ದ. ಸ್ವತಃ ಕೃಷ್ಣನಿಗೆ ಅದು ಗೊತ್ತು. ಅವನ ಉಪದೇಶದಿಂದ ಪ್ರದ್ಯುಮ್ನನಿಗೂ ಗೊತ್ತು. ಹೀಗೆ ಈ ನಾಲ್ವರೇ ಬಲ್ಲರೆಂದು ಹೇಳುತ್ತಾನೆ ಧರ್ಮರಾಜ (ದ್ರೋಣ 35.15) ಭೀಮನಿಗೆ

ಸ್ವಪ್ರತಿಭೆಯಿಂದಲೆ ಗೊತ್ತು. ಆದರೂ ಕಾಮ್ಯಕರ್ಮವೆಂದು ಅದನ್ನು ಜಪಿಸುವುದಿಲ್ಲ ಎಂದುಕೊಂಡು ಧರ್ಮರಾಜ ಅಭಿಮನ್ಯುವನ್ನೇ ಆದೇಶಿಸುತ್ತಾನೆ. ಮಂತ್ರ ಜಪಿಸದೆಯೆ ವ್ಯೂಹವನ್ನು ಭೀಮ ಭೇದಿಸಬಲ್ಲ. ಆದರೆ ವಿಷ್ಣುವಿನ ವರವನ್ನು ವ್ಯರ್ಥಮಾಡಬಾರದೆಂದು ಸುಮ್ಮನಿದ್ದ.

ಸ ಏವಮುಕ್ತೋ ರಥಿನಾಂ ಪ್ರಬರ್ಹೋ
ವಿವೇಶ ಭಿತ್ತ್ವಾ ದ್ವಿಷತಾಂ ಚಮೂಂ ತಾಮ್ ।
ಅನ್ವೇವ ತಂ ವಾಯುಸುತಾದಯಶ್ಚ
ವಿವಿಕ್ಷವಃ ಸೈಂಧವೇನೈವ ರುದ್ಧಾಃ ॥೪೧॥
ವರೇಣ ರುದ್ರಸ್ಯ ನಿರುದ್ಧ್ಯಮಾನೋ
ಜಯದ್ರಥೇನಾತ್ರ ವೃಕೋದರಸ್ತು ।
ವಿಷ್ಣೋರಭೀಷ್ಟಂ ವಧಮಾರ್ಜುನೇಸ್ತದಾ
ವಿಜ್ಞಾಯ ಶಕ್ತೋಽಪಿ ನ ಚಾತ್ಯವರ್ತತ ॥೪೨॥

ಧರ್ಮರಾಜ ಹೀಗೆ ಹೇಳಿದಾಗ ರಥಿಕರಲ್ಲಿ ಶ್ರೇಷ್ಠನಾದ ಅಭಿಮನ್ಯು ಶತ್ರು ಸೈನ್ಯವನ್ನು ಭೇದಿಸಿ ಹೊಕ್ಕ. ಅವನ ಹಿಂದಿನಿಂದಲೆ ಪ್ರವೇಶಿಸಲು ಬಯಸಿದ್ದ ಭೀಮ ಮುಂತಾದವರನ್ನು ರುದ್ರನ ವರದಿಂದ ಸೈಂಧವ ತಡೆದ. ಜಯದ್ರಥ ತಡೆದಾಗ ಭೀಮ ಅಭಿಮನ್ಯುವಿನ ವಧೆಯಾಗುವುದು ಶ್ರೀಕೃಷ್ಣನ ಸಂಕಲ್ಪವೆಂದು ಅರಿತು, ಶಕ್ತನಾಗಿದ್ದರೂ ಜಯದ್ರಥನನ್ನು ಅತಿಕ್ರಮಿಸಿ ಒಳಗೆ ಹೋಗಲಿಲ್ಲ.

ಅಭಿಮನ್ಯುವಿನ ವಧೆಯಾಗುವುದು ಕೃಷ್ಣನ ಸಂಕಲ್ಪವಾಗಿತ್ತು.
ಕುಮಾರವ್ಯಾಸ ಹೇಳುತ್ತಾನೆ-

ಅಳಿಯನೀ ಮೋಹರದೊಳಲ್ಲದೆ
ಫಲುಗುಣನ ಮಗನಿವನು ಬಲುಗೈ
ಯುಳುಹಬಾರದು ಕಾಯಿದರೆ ಕಲಿಯುಗಕೆ ಗತಿಯಿಲ್ಲ।
ಫಲುಗುಣನ ನಾವಿತ್ತಲೊಯ್ದರೆ
ಬಳಿಕ ನಿರ್ಜಯವೆಂದು ಮನದಲಿ
ತಿಳಿದು ಪಾರ್ಥಂಗೆಂದನ ಸುರಾರಾತಿ ನಸುನಗುತ॥

(ದ್ರೋಣ 4.27)

ಜಯದ್ರಥಸ್ಥೇನ ವೃಷಧ್ವಜೇನ
ಪ್ರಯುದ್ಧ್ಯಮಾನೇಷು ವೃಕೋದರಾದಿಷು ।
ಪ್ರವಿಶ್ಯ ವೀರಃ ಸ ಧನಂಜಯಾತ್ಮಜೋ
ವಿತೋಡಯಾಮಾಸ ಪರೋರುಸೇನಾಮ್ ॥೪೩॥

ಜಯದ್ರಥನಲ್ಲಿ ಆವಿಷ್ಟನಾದ ರುದ್ರ ಭೀಮ ಮುಂತಾದವರನ್ನು ಯುದ್ಧದಲ್ಲಿ ತೊಡಗಿಸಿದಾಗ ವೀರ ಅಭಿಮನ್ಯು ವ್ಯೂಹದ ಒಳಗೆ ಪ್ರವೇಶಿಸಿ ಶತ್ರುಗಳ ಮಹಾಸೈನ್ಯವನ್ನು ಕದಡಿದ.

ಶಿವನ ವರದಿಂದಲೂ ಜಯದ್ರಥನಿಗೆ ಅವನ ಆವೇಶವಿಲ್ಲದೆ ಭೀಮಾದಿಗಳೊಡನೆ ಯುದ್ಧಮಾಡುವ ಸಾಮರ್ಥ್ಯವಿಲ್ಲ. ಅದರಿಂದ ಅವನೊಳಗಿದ್ದು ಶಿವನೆ ಯುದ್ಧಮಾಡಿದ.

ಸ ದ್ರೋಣದುರ್ಯೋಧನಕರ್ಣಶಲ್ಯ
ದ್ರೌಣ್ಯಗ್ರಣೀಭಿಃ ಕೃತವರ್ಮಯುಕ್ತೈಃ।
ರುದ್ಧಶ್ಚಚಾರಾರಿಬಲೇಷ್ವಭೀತಃ
ಶಿರಾಂಸಿ ಕೃಂತಂಸ್ತದನುವ್ರತಾನಾಮ್ ॥೪೪॥

ದ್ರೋಣ ದುರ್ಯೋಧನ ಕರ್ಣ ಶಲ್ಯ ಅಶ್ವತ್ಥಾಮ ಕೃತವರ್ಮ ಮುಂತಾದವರು ತಡೆದರೂ ಅಭಿಮನ್ಯು ನಿರ್ಜಯವಾಗಿ ಶತ್ರುಸೈನ್ಯಗಳಲ್ಲಿ ಅವರ ಕಡೆಯವರ ರುಂಡಗಳನ್ನು ಕತ್ತರಿಸುತ್ತ ಸಂಚರಿಸಿದ.

ಷಡ್ ರಥಿಕರು ಅಭಿಮನ್ಯುವನ್ನು ಸುತ್ತುವರಿದರು- ದ್ರೋಣ ಕೃಪ ಕರ್ಣ ಅಶ್ವತ್ಥಾಮ ಬೃಹದ್ಬಲ (ಶಕುನಿಯ ಒಬ್ಬ ಸೋದರ) ಮತ್ತು ಕೃತವರ್ಮ ಇವರೆ ಆರು ಮಂದಿ ಆ ರಥಿಕರು (ದ್ರೋಣ 73.10)

ಸ ಲಕ್ಷಣಂ ರಾಜಸುತಂ ಪ್ರಸಹ್ಯ
ಪಿತುಃ ಸಮೀಪೇಽನಯದಾಶು ಮೃತ್ಯವೇ ।

ಬೃಹದ್ಬಲಂ ಚೋತ್ತಮವೀರ್ಯಕರ್ಮಾ
ವರಂ ರಥಾನಾಮಯುತಂ ಚ ಪತ್ರಿಭಿಃ ॥೪೫॥

ಉತ್ತಮ ವೀರ್ಯಕರ್ಮಗಳುಳ್ಳ ಅಭಿಮನ್ಯು ದುರ್ಯೋಧನನ ಮಗನಾದ ಲಕ್ಷಣನನ್ನು ದುರ್ಯೋಧನನ ಸಮಕ್ಷಮದಲ್ಲಿಯೆ ಬಲಾತ್ಕಾರವಾಗಿ ಯಮನಿಗೆ ಕಳಿಸಿಕೊಟ್ಟ. ಹಾಗೇ ಬೃಹದ್ಬಲನನ್ನೂ ಮಹಾಬಲಿಷ್ಠರಾದ ಹತ್ತು ಸಾವಿರ ಶ್ರೇಷ್ಠರಥಿಕರನ್ನೂ ಬಾಣಗಳಿಂದ ಯಮನಿಗೆ ಕಳಿಸಿಕೊಟ್ಟ.

ದ್ರೋಣಾದಯಸ್ತಂ ಹರಿಕೋಪಭೀತಾಃ
ಪ್ರತ್ಯಕ್ಷತೋ ಹಂತುಮಶಕ್ನುವಂತಃ ।
ಸಮ್ಮಂತ್ರ್ಯ ಕರ್ಣಂ ಪುರತೋ ನಿಧಾಯ
ಚಕ್ರುರ್ವಿಚಾಪಾಶ್ವರಥಂ ಕ್ಷಣೇನ ॥೪೬॥

ದ್ರೋಣ ಮುಂತಾದವರು ಕೃಷ್ಣನ ಕೋಪಕ್ಕೆ ಹೆದರಿ ಅಭಿಮನ್ಯುವನ್ನು ಪ್ರತ್ಯಕ್ಷ ಕೊಲ್ಲಲು ಶಕ್ತರಾಗದೆ ಕರ್ಣನನ್ನು ಮುಂದೆ ಮಾಡಿಕೊಂಡು ವಿಚಾರಮಾಡಿ ಕ್ಷಣದಲ್ಲಿ ಅವನನ್ನು ಧನುಸ್ಸು ಕುದುರೆ ರಥಗಳಿಂದ ರಹಿತನನ್ನಾಗಿ ಮಾಡಿದರು.

ಕರ್ಣೋ ಧನುಸ್ತಸ್ಯ ಕೃಪಶ್ಚ ಸಾರಥಿಂ
ದ್ರೋಣೋ ಹಯಾನಾಶು ವಿಧೂಯ ಸಾಯಕೈಃ ।
ಸಚರ್ಮಖಡ್ಗಂ ರಥಚಕ್ರಮಸ್ಯ
ಪ್ರಣುದ್ಯ ಹಸ್ತಸ್ಥಿತಮೇವ ಚಕ್ರುಃ ॥೪೭॥

ಅಭಿಮನ್ಯುವಿನ ಧನುಸ್ಸನ್ನು ಕರ್ಣನೂ ಸಾರಥಿಯನ್ನು ಕೃಪನೂ ಕುದುರೆಗಳನ್ನು ದ್ರೋಣನೂ ಬೇಗನೆ ನಾಶಮಾಡಿ ಮೂವರೂ ಬಾಣಗಳಿಂದ ಅವನ ಕತ್ತಿ ಗುರಾಣಿಗಳನ್ನೂ ಚಕ್ರವನ್ನೂ ಛೇದಿಸಿ ಅವನನ್ನು ಬರಿ ಗೈಯಲ್ಲಿ ನಿಲ್ಲುವಂತೆ ಮಾಡಿದರು.

ಕರ್ಣ ದ್ರೋಣನಿಗೆ ಹೇಳಿದ, 'ನಾನು ಈತನ ಬಾಣಗಳನ್ನು ಸಹಿಸಿಕೊಳ್ಳಲಾರೆ. ಏನು ಮಾಡಲಿ?' ದ್ರೋಣ ನಕ್ಕು ಹೇಳಿದ 'ಅವನ ಕವಚವನ್ನು ನಾವೇನೂ ನಾಶಮಾಡಲಾರೆವು. ನಾನು ಅರ್ಜುನನಿಗೆ ಹೇಳಿ ಕೊಟ್ಟಂತೆಯೇ ಈತನೂ ಕವಚ ಧರಿಸಿದ್ದಾನೆ. ನನಗೆ ಅವನು ಬಾಣದಿಂದ ಎಷ್ಟು ನೋವು ಉಂಟುಮಾಡುತ್ತಾನೆ! ಎಂದು ನನಗೆ ಸಂತೋಷವಾಗುತ್ತಿದೆ. ಈಗ ನೀನು ಬಯಸುವಿಯಾದರೆ ಹೀಗೆ ಮಾಡಬಹುದು. ಹಿಂದಿನಿಂದ ಅವನ ಬಿಲ್ಲನ್ನು ಕತ್ತರಿಸು. ಅವನಲ್ಲಿ ಬಿಲ್ಲು ರಥಗಳಿದ್ದರೆ ಯಾರೂ ಅವನನ್ನು ಗೆಲ್ಲಲಾರರು. ಮುಂದೆ ಯಾರು ನಿಂತರೂ ಉಳಿಯಲಾರರು'. ದ್ರೋಣನ ಸಲಹೆಯಂತೆ ಎಲ್ಲರೂ ಹಿಂದಿನಿಂದ ಹೊಡೆದರು.

ಭೀತೇಷು ಕೃಷ್ಣಾದಥ ತದ್ವಧಾಯ
ತೇಷ್ವಾಸಸಾದಾಽಶು ಗದಾಯುಧಂ ಗದೀ ।
ದೌಃಶಾಸನಿಸ್ತೌ ಯುಗಪಚ್ಚ ಮಮ್ರತು
ರ್ಗದಾಭಿಘಾತೇನ ಮಿಥೋಽತಿಪೌರುಷೌ ॥ ೪೮ ॥

ದ್ರೋಣ ಮುಂತಾದವರು ಅಭಿಮನ್ಯುವನ್ನು ಕೊಲ್ಲಲು ಕೃಷ್ಣನಿಗೆ ಹೆದರಿದಾಗ ಗದಾಧಾರಿಯಾದ ದುಃಶಾಸನ ಪುತ್ರ ಗದಾಧಾರಿ ಅಭಿಮನ್ಯುವನ್ನು ಇದಿರಿಸಿದ. ಅತ್ಯಂತ ಪೌರುಷಶಾಲಿಗಳಾದ ಅವರಿಬ್ಬರೂ ಪರಸ್ಪರರ ಗದೆ ಏಟಿನಿಂದ ಜೊತೆಗೇ ಮಡಿದರು.

ದ್ರೋಣ ಮುಂತಾದವರು ಎಲ್ಲರೂ ಸೇರಿ ಅಭಿಮನ್ಯುವಿನ ಕೈಯಲ್ಲಿದ್ದ ಚಕ್ರಾಯುಧವನ್ನು ಕತ್ತರಿಸಿದೊಡನೆ ಅಭಿಮನ್ಯು ಗದೆಯನ್ನೆತ್ತಿಕೊಂಡ. ಅಶ್ವತ್ಥಾಮನನ್ನು ಹಿಮ್ಮೆಟ್ಟಿಸಿದ. ಶಕುನಿಯ ಒಬ್ಬ ಸೋದರನಾದ ಕಾಲಿಕೇಯನನ್ನೂ ಅವನ ಎಪ್ಪತ್ತೇಳು ಮಂದಿ ಸೈನಿಕರನ್ನೂ ಕೊಂದ. ದುಃಶಾಸನ ಪುತ್ರನ ರಥವನ್ನೂ ಕುದುರೆಗಳನ್ನೂ ನಾಶಪಡಿಸಿದ. ಬಳಿಕ ದುಃಶಾಸನ ಪುತ್ರನೂ ಗದೆ ಎತ್ತಿಕೊಂಡ. ಇಬ್ಬರೂ ಗದೆಯಿಂದ ಹತರಾದರು.

ಕುಮಾರವ್ಯಾಸ 'ತಿರುಗಿ ಗಾಲಿಯ ತೆಗೆದು ಮುಂಗೈಗೊಂಡ ನಡೆನಡೆದು' (ದ್ರೋಣ 6.55) ಎನ್ನುತ್ತ ರಥದ ಗಾಲಿಯನ್ನು ಅಭಿಮನ್ಯು ಎತ್ತಿಕೊಂಡನೆನ್ನುತ್ತಾನೆ.

ತಸ್ಮಿನ್ ಹತೇ ಶತ್ರುರವಂ ನಿಶಮ್ಯ
ಹರ್ಷೋದ್ಭವಂ ಮಾರುತಿರುಗ್ರವಿಕ್ರಮಃ ।
ವಿಜಿತ್ಯ ಸರ್ವಾನಪಿ ಸೈಂಧವಾದೀನ್
ಯುಧಿಷ್ಠಿರಸ್ಯಾನುಮತೇ ನ್ಯಷೀದತ್ ॥ ೪೯ ॥

ಅಭಿಮನ್ಯು ಹತನಾದಾಗ ಶತ್ರುಗಳ ಹರ್ಷಧ್ವನಿಯನ್ನು ಕೇಳಿ ಭಯಂಕರ ಪರಾಕ್ರಮಿಯಾದ ಭೀಮ ಸೈಂಧವಾದಿಗಳೆಲ್ಲರನ್ನೂ ಪರಾಭವಗೊಳಿಸಿ ಧರ್ಮರಾಜನ ಬಳಿಯಲ್ಲಿ ಕುಳಿತ.

ಅರ್ಜುನ ಪ್ರತಿಜ್ಞೆ – ಕೈಲಾಸ ಯಾತ್ರೆ

ವ್ಯಾಸಸ್ತದಾ ತಾನಮಿತಾತ್ಮವೈಭವೋ
ಯುಧಿಷ್ಠಿರಾದೀನ್ ಗ್ಲಪಿತಾನಬೋಧಯತ್ ।
ವಿಜಿತ್ಯ ಸಂಶಪ್ತಕಪೂಗಮುಗ್ರೋ
ನಿಶಾಗಮೇ ವಾಸವಿರಾಪ ಸಾಚ್ಯುತಃ ॥ ೫೦ ॥

ಅಮಿತ ಸ್ವರೂಪಭೂತ ಜ್ಞಾನಾನಂದಾದಿ ಸಂಪತ್ತುಳ್ಳ ವೇದವ್ಯಾಸರು ಆಗ ದುಃಖಿತರಾಗಿದ್ದ ಧರ್ಮರಾಜ ಮುಂತಾದವರನ್ನು ಸಂತೈಸಿದರು. ಉಗ್ರಪ್ರತಾಪಿ ಅರ್ಜುನ ಸಂಶಪ್ತಕರ ಸಮೂಹವನ್ನು ಗೆದ್ದು ರಾತ್ರಿಸಮಯ ಬಂದಾಗ ಕೃಷ್ಣನೊಂದಿಗೆ ಹಿಂತಿರುಗಿ ಬಂದ.

ವೇದವ್ಯಾಸರು ಧರ್ಮರಾಜ ಮುಂತಾದವರನ್ನು ಸಮಾಧಾನ ಮಾಡುತ್ತ ಹೇಳಿದರು - ಹಿಂದೆ ಅಕಂಪನನೆಂಬ ರಾಜ ತನ್ನ ಮಗ ಹರಿ ಯುದ್ಧದಲ್ಲಿ ಹೋರಾಡಿ ಮಡಿದಾಗ ಪುತ್ರಶೋಕತಪ್ತನಾದ. ನಾರದರು ಬಂದು ಮೃತ್ಯು ಎಲ್ಲರನ್ನೂ ಸೆಳೆಯುತ್ತಾಳೆ ಎಂದು ಮೃತ್ಯುವಿನ ಉತ್ಪತ್ತಿಯ ಕಥೆ ಹೇಳಿದರು. ಬ್ರಹ್ಮ ತಾನು ಸೃಜಿಸಿದ ಪ್ರಾಣಿಗಳು ಸಾಯದೆ ಎಲ್ಲೆಡೆ ತುಂಬಿಕೊಂಡಾಗ ಕ್ರೋಧದಿಂದ ಮೃತ್ಯು ದೇವತೆಯನ್ನು ಹುಟ್ಟಿಸಿ 'ಪ್ರಾಣಿಗಳನ್ನು ಕೊಲ್ಲು' ಎಂದ.

'ನನಗೆ ಈ ಅಮಂಗಲಕಾರ್ಯ ಒಪ್ಪಿಸಬೇಡ ' ಎಂದು ಅವಳು ಕಣ್ಣೀರು ಹಾಕಿದಾಗ 'ನಿನ್ನ ಕಣ್ಣೀರಿಂದ ವ್ಯಾಧಿಗಳು ಹುಟ್ಟಿ ಪ್ರಾಣಿಗಳನ್ನು ಕೊಲ್ಲುವುವು. ಕಾಮ ಕ್ರೋಧಾದಿ ದೋಷಗಳಿಂದಲೂ ಅವು ಪರಸ್ಪರ ಹಿಂಸೆಗೊಳಗಾಗುವುವು. ಪ್ರಾಣಗಳೂ ಹೊರಟುಹೋಗುವುವು. ಮುಖ್ಯಪ್ರಾಣ ಶರೀರ ತೊರೆದು ಹೋಗುವಾಗ ಜೀವನನ್ನು ಹೊರಗೆ ಒಯ್ಯುವನು. ನಿನಗೆ ಪ್ರಾಣಿವಧೆಯ ಪಾಪಲೇಪವಾಗದು', ಎಂದ. ಈ ಸಂದರ್ಭದಲ್ಲಿ ಮಹಾಭಾರತದಲ್ಲಿ ಮುಖ್ಯಪ್ರಾಣನ ಮಹಿಮೆ ಉಕ್ತವಾಗಿದೆ-

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಭೇತ್ತಾ ದೇಹಾನ್ ಪ್ರಾಣಿನಾಂ ಸರ್ವಗೋಽಸೌ
ನೋ ವಾಽಽವೃತ್ತಿಂ ನೈವ ವೃತ್ತಿಂ ಕದಾಚಿತ್
ಪ್ರಾಪ್ನೋತ್ಯಗ್ರೋಽನಂತತೇಜೋವಿಶಿಷ್ಟಃ (ದ್ರೋಣ 54.47)

'ಭಯಂಕರ ನಾದ ಮಾಡುವ ಮಹಾಬಲಿಷ್ಠನಾದ ಸರ್ವವ್ಯಾಪಿ ಭೀಮರೂಪಿ ಮುಖ್ಯಪ್ರಾಣ ಜೀವನಿಗೆ ಮರಣಕಾಲ ಬಂದಾಗ(ದೇಹಾನ್ ಭೇತ್ತಾ) ಶರೀರವಿಯೋಗ ಉಂಟುಮಾಡಿ (ಕದಾಚಿತ್ ನೈವ ವೃತ್ತಿಂ ಪ್ರಾಪ್ನೋತಿ ಪ್ರಾಪಯತಿ) ತಿರುಗಿ ಎಂದೂ ಆ ಶರೀರದಲ್ಲಿ ಜೀವನಿಗೆ ಅಭಿಮಾನವಿಲ್ಲದಂತೆ ಮಾಡುತ್ತಾನೆ. ಮೋಕ್ಷಕಾಲ ಬಂದಾಗ (ನೋ ವಾಽಽವೃತ್ತಿಂ ಪ್ರಾಪಯತಿ) ತಿರುಗಿ ಸಂಸಾರಕ್ಕೆ ಪುನರಾವೃತ್ತಿ ಇಲ್ಲದಂತೆ ಮಾಡುತ್ತಾನೆ. ಆದರಿಂದ ಅನಂತತೇಜರಾದ ದೇವತೆಗಳಲ್ಲಿ ವಿಶಿಷ್ಟ, ಶ್ರೇಷ್ಠ ವಾಯುವೆ'. ಆದರೆ ಇದು ಪ್ರಚಲಿತಪಾಠ. ಲಕ್ಷ್ಮಾಲಂಕಾರಪಾಠ ಹೀಗಿದೆ-

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ॥

ವಾಯು ಸರ್ವಶಕ್ತ. ಎಲ್ಲ ಪ್ರಾಣಿಗಳಿಗೂ ಚೇಷ್ಟಾಪ್ರದ. ಪ್ರಾಣಿಗಳು ಸಾಯಲು 'ಅನ ಅವೃತ್ತಿ' ಅಂದರೆ ಮುಖ್ಯಪ್ರಾಣ ಶರೀರದಲ್ಲಿ ನಿಲ್ಲದಿರುವುದೇ ಕಾರಣ 'ಅನಾವೃತ್ತಿ' ಪುನರಾವೃತ್ತಿ ರಹಿತವಾದ ಮೋಕ್ಷಕ್ಕೂ ಅವನೆ ಕಾರಣ. ಅದರಿಂದ ಅವನೆ ದೇವದೇವೋತ್ತಮ.

ಹೀಗೆ ಮೃತ್ಯುವಿನ ಉಪಾಖ್ಯಾನವನ್ನು ಹೇಳಿ ನಾರದರು ಸೃಂಜಯ ರಾಜನ ಕಥೆಯನ್ನು ಹೇಳುತ್ತಾರೆ. ಸೃಂಜಯನಿಗೆ ಸುವರ್ಣಷ್ಠೀವಿ ಎಂಬ ಮಗನಿದ್ದ. ಅವನ ಉಗುಳು ಮಲ ಮೂತ್ರ ಬೆವರು ಎಲ್ಲವೂ ಬಂಗಾರವಾಗುತ್ತಿತ್ತು. ಅತ್ತರೆ ಕಣ್ಣೀರೂ ಬಂಗಾರ. ಕಳ್ಳರು ಬಂಗಾರಕ್ಕಾಗಿ ಅವನನ್ನು ಒಯ್ದು ಕೊಂದರು. ಪುತ್ರಶೋಕ ತಪ್ತನಾದ ರಾಜನಿಗೆ ನಾರದರು ಮರುತ್ತ ಸುಹೋತ್ರ ಪೌರವ ಶಿಬಿ ರಾಮ ಭಗೀರಥ ದಿಲೀಪ ಮಾಂಧಾತ ಯಯಾತಿ ಅಂಬರೀಷ ಶಶಬಿಂದು ಗಯ ರಂತಿದೇವ ಭರತ ಪೃಥು ಪರಶುರಾಮ ಎಂದು ಹದಿನಾರು ರಾಜರ ಚರಿತ್ರೆಗಳನ್ನು ಹೇಳಿ ಸಂತೈಸಿದರು. ಕೊನೆಗೆ ಕುಮಾರನನ್ನು ಪುನಃ ಬದುಕಿಸಿಕೊಟ್ಟರು. ಕುಮಾರ ಅಕೃತಾರ್ಥನಾಗಿ ದುರ್ಮರಣ ಹೊಂದಿ ನರಕಗತಿಗೆ ಹೋಗುತ್ತಿದ್ದುದರಿಂದ ನಾರದರು ತಿರುಗಿ ಬದುಕಿಸಿ ಕೊಟ್ಟರು. ಅಭಿಮನ್ಯು ಕೃತಾರ್ಥ. ರಣರಂಗದಲ್ಲಿ ಶತ್ರುಗಳನ್ನು ಕೊಂದು ಮಡಿದ. ವೀರಸ್ವರ್ಗ ಹೊಂದಿದ. ಅದರಿಂದ ತಿರುಗಿ ಬದುಕಿಸುವುದು ಸರಿಯಲ್ಲ ಎಂದರು ವೇದವ್ಯಾಸರು.

ನಿಶಮ್ಯ ಪುತ್ರಸ್ಯ ವಧಂ ಭೃಶಾರ್ತಃ ಪ್ರತಿಶ್ರವಂ
ಸೋಽಥ ಚಕಾರ ವೀರಃ।
ಜಯದ್ರಥಸ್ಯೈವ ವಧೇ ನಿಶಾಯಾಂ
ಸ್ವಪ್ನೇಽನಯತ್ ತಂ ಗಿರಿಶಾಂತಿಕಂ ಹರಿಃ ॥೫೧॥

ಮಗನ ಹತ್ಯೆಯನ್ನು ಕೇಳಿ ಬಹಳ ದುಃಖಿತನಾದ ವೀರ ಅರ್ಜುನ ಜಯದ್ರಥನ ಸಂಹಾರದ ಪ್ರತಿಜ್ಞೆ ಮಾಡಿದ. ರಾತ್ರಿಯಲ್ಲಿ ಸ್ವಪ್ನದಲ್ಲಿ ಶ್ರೀಕೃಷ್ಣ ಅರ್ಜುನನನ್ನು ರುದ್ರನ ಬಳಿಗೆ ಒಯ್ದ.

'ನಾಳೆ ಸೂರ್ಯಾಸ್ತವಾಗುವುದರೊಳಗೆ ಜಯದ್ರಥನನ್ನು ಕೊಲ್ಲುವೆ.
ಇಲ್ಲದಿದ್ದರೆ ಅಗ್ನಿಪ್ರವೇಶ ಮಾಡುವೆ' ಎಂದು ಅರ್ಜುನ ಪ್ರತಿಜ್ಞೆ ಮಾಡಿದ.

ಅಭಿಮನ್ಯು ವಧೆಗೆ ಮಡಿದ ದುಃಶಾಸನಪುತ್ರ ಸಾಕ್ಷಾತ್ ಕಾರಣ. ದ್ರೋಣ ಮುಂತಾದ ಷಡ್ ರಥಿಕರೂ ಕಾರಣರು. ಆದರೂ ಪುತ್ರವಧೆಗೆ ಶೋಕಿಸುತ್ತಿಲ್ಲ ಅರ್ಜುನ. ಅವನ ರಕ್ಷಣೆಗೆ ಧರ್ಮರಾಜ ಮುಂತಾದವರು ಯಾರೂ ಬಾರದಂತೆ ತಡೆದು, ಅನಾಥನಂತೆ ಏಕಾಂಗಿಯಾಗಿ ಮೋಸದಿಂದ ಮಡಿವಂತೆ ಮಾಡಿದ ಮಹಾ ಅಪರಾಧಿ ಜಯದ್ರಥನೆಂದು ಅವನನ್ನೇ ಕೊಲ್ಲುವ ಪ್ರತಿಜ್ಞೆ ಮಾಡಿದ.

ರಾತ್ರಿಯಲ್ಲಿ ಶ್ರೀಕೃಷ್ಣ ಅರ್ಜುನನಿಂದ ಶಿವಪೂಜೆ ಮಾಡಿಸಿ ತನ್ನ ಶಿಬಿರಕ್ಕೆ ಹೋಗಿ ಮಲಗಿದ. ಇತ್ತ ಅರ್ಜುನ ಶಿಬಿರದಲ್ಲಿ ಮಲಗಿ ಬೆಳಗಿನ ಜಾವ ಬ್ರಾಹ್ಮ ಮುಹೂರ್ತದಲ್ಲಿ ಸ್ವಪ್ನಕಂಡ. ಸ್ವಪ್ನದಲ್ಲಿ ಶ್ರೀಕೃಷ್ಣ ಬಂದು ಅರ್ಜುನನನ್ನು ಆಕಾಶಮಾರ್ಗವಾಗಿ ಕೈಲಾಸಕ್ಕೆ ಕರೆದೊಯ್ದ. ಶಿವ ಒಂದು ಸರೋವರವನ್ನು ತೋರಿಸಿ ಅದರೊಳಗೆ ನನ್ನ ಬಿಲ್ಲು ಬಾಣಗಳಿವೆ, ಎತ್ತಿತಾ ಎಂದು ಅರ್ಜುನನಿಗೆ ಹೇಳಿದ. ಅರ್ಜುನ ನೋಡುತ್ತಾನೆ ಸಾವಿರ ಹೆಡೆಗಳ ಎರಡು ಸರ್ಪಗಳಿದ್ದುವು. ಶತರುದ್ರೀಯ ಪಠಿಸಿದಾಗ ಅವು ಬಿಲ್ಲು ಬಾಣಗಳಾದುವು. ಅವನ್ನು ಎತ್ತಿ ತಂದು ಶಿವನಿಗಿತ್ತ. ಅವುಗಳ ಸ್ಪರ್ಶ ಮಾತ್ರದಿಂದ ಅರ್ಜುನನ ಕೈಗೆ ಅವನ ಬಿಲ್ಲು ಬಾಣಗಳು ಬಂದವು. ಅವನು ಹೆದೆಯೇರಿಸಿ ಬಾಣವನ್ನು ಹೂಡಿದ. ಶಿವನು ಆಗ ಎರಡನೆ ಬಾರಿ ಉಪದೇಶಿಸಿದ ಪಾಶುಪತಾಸ್ತ್ರ ಮಂತ್ರವನ್ನೂ ಸ್ವೀಕರಿಸಿದ. ಬಳಿಕ ಶಿವನ ಬಿಲ್ಲು ಬಾಣಗಳನ್ನು ತಿರುಗಿ ಸರೋವರಕ್ಕೆ ಹಾಕಿದ. ಇಷ್ಟು ಸ್ವಪ್ನ ವೃತ್ತಾಂತವನ್ನು ಬೆಳಿಗ್ಗೆ ಅರ್ಜುನ ಧರ್ಮರಾಜ ಮುಂತಾದವರಿಗೆ ಹೇಳಿ ಸಂತೋಷಪಡಿಸಿದ.

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ।
ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ॥ ೫೨ ॥
ಜ್ಞಾಪಯನ್ ಫಲ್ಗುನಸ್ಯಾಸ್ತ್ರಗುರುಂ ಗಿರಿಶಮಂಜಸಾ ।
ಪ್ರಾಪಯಿತ್ವೈನಮೇವೈತ ತ್ಪ್ರಸಾದಾದಸ್ತ್ರಮುಲ್ಬಣಮ್ ।
ಚಕ್ರೇ ತದರ್ಥಮೇವಾಸ್ಯ ರಕ್ಷಾಂ ಚಕ್ರೇ ತದಾತ್ಮಿಕಾಮ್ ॥ ೫೩ ॥

ಶ್ರೀಕೃಷ್ಣ ತಾನೆ ಸಕಲ ಲೋಕ ರಕ್ಷಣೆ ಮುಂತಾದ ವಿಷಯಗಳಲ್ಲಿ ಅಮಿತಶಕ್ತಿ ಉಳ್ಳವನಾದರೂ ತಾನು ಗುರುವಿನ ಮೂಲಕವೇ ಅನುಗ್ರಹ ಮಾಡುವವನೆಂದು ತೋರುವುದಕ್ಕಾಗಿ ಅರ್ಜುನನನ್ನು ಅವನ ಅಸ್ತ್ರಗುರುವಾದ ಶಿವನ ಬಳಿಗೇ ಒಯ್ದು ಶಿವನ ಅನುಗ್ರಹದಿಂದ ಅವನ ಪಾಶುಪತಾಸ್ತ್ರ ಬಲಿಷ್ಠವಾಗುವಂತೆ ಮಾಡಿದ. ಅವನಿಗೆ ಶಿವನ ರಕ್ಷೆಯೂ ಸಿಗುವಂತೆ ಮಾಡಿದ.

ಎರಡನೆ ಬಾರಿ ಉಪದೇಶದಿಂದ ಅಸ್ತ್ರ ಸೈಂಧವನ ರುಂಡವನ್ನು ಅವನ ತಂದೆಯ ಕೈಗೆ ಹಾಕುವಷ್ಟು ಬಲಿಷ್ಠವಾಯಿತು. ಇದು ಸ್ವಪ್ನದಲ್ಲಿ ನಡೆಯಿತು.

ಈ ಸ್ವಾಪ್ನ ವೃತ್ತಾಂತವನ್ನು ತಾಮ್ರಪರ್ಣೀಯದಲ್ಲಿ ಹೀಗೆ ಚರ್ಚಿಸಲಾಗಿದೆ-[1]

'ಸ್ವಪ್ನದಲ್ಲಿ ಅರ್ಜುನನನ್ನು ಶ್ರೀಕೃಷ್ಣ ಕೈಲಾಸಕ್ಕೆ ಕರೆದೊಯ್ದನೆಂದರೆ ಇದು ಎಲ್ಲ ಸ್ವಪ್ನಗಳಂತೆ ಮಾನಸ ವಾಸನಾ ಮಯವೆ, ಅಥವಾ ಅರ್ಜುನನ ಚೈತನ್ಯ ವಾಸ್ತವದಲ್ಲಿ ಕೈಲಾಸಕ್ಕೆ ಪ್ರಯಾಣ ಮಾಡಿದೆಯೆ? ಕೇವಲ ವಾಸನಾಮಯ ಪ್ರಯಾಣವೆಂದರೆ ಅದರಿಂದ ವಾಸ್ತವವಾಗಿ ರುದ್ರನ ವರ ಮುಂತಾದುದು ಆಗದು. ಚೈತನ್ಯ ವಾಸ್ತವದಲ್ಲಿ ಪ್ರಯಾಣ ಮಾಡಿದೆ ಎಂದರೆ ಅದು ಸ್ವಪ್ನವೆ ಅಲ್ಲ. ಈ ಆಕ್ಷೇಪಕ್ಕೆ ಸಮಾಧಾನ -ಸ್ವಪ್ನದಲ್ಲಿ ಎಲ್ಲವೂ ವಾಸನಾಮಯವೇ ಕಾಣುತ್ತದೆ ಎನ್ನುವುದು ಸಾಮಾನ್ಯವಾದ ನಿಯಮ. ಕೆಲಮೊಮ್ಮೆ ಮಲಗಿದವನ ಚೈತನ್ಯ ಒಂದು ಅಂಶದಿಂದ ಹಾಗೇ ಮಲಗಿದ್ದು ಇನ್ನೊಂದು ಅಂಶದಿಂದ ಸ್ವಪ್ನದಲ್ಲಿ ಹೊರಗೆ ಹೋಗಬಹುದು. ಹೀಗೇ ಅರ್ಜುನ ಕನಸು ಕಂಡ. ಅದರಿಂದಲೆ 'ಬಹಿಃ ಕುಲಾಯಾದಮೃತಶ್ಚರಿತ್ವಾ' ಎಂಬ ಬೃಹದಾರಣ್ಯಕವಾಕ್ಯದ ಭಾಷ್ಯದಲ್ಲಿ,

ಅಂಶೇನ ಜೀವಮಾದಾಯ ಕ್ವಚಿದೀಶೋ ಬಹಿರ್ನಯೇತ್।
ಸ್ವಪ್ನೇಷು ಫಲ್ಗುನಂ ಯದ್ವತ್ ಕೃಷ್ಣಃ ಕೈಲಾಸಮಾನಯತ್ ॥
ಎಂದು ಭಗವತ್ಪಾದರು ಇದನ್ನೇ ದೃಷ್ಟಾಂತವಾಗಿ ತೋರಿಸಿರುವರು.'

ಹದಿನಾಲ್ಕನೆ ದಿನದ ಹಗಲು ಯುದ್ಧ - ಅಲಂಬುಸ ವಧ

ಸಾಂತ್ವಯಿತ್ವಾ ಸುಭದ್ರಾಂ ಚ ಗತ್ವೋಪಪ್ಲಾವ್ಯಮಚ್ಯುತಃ ।
ಯೋಜಯಿತ್ವಾ ರಥಂ ಪ್ರಾತಃ ಸಾರ್ಜುನೋ ಯುದ್ಧಮಭ್ಯಯಾತ್ ॥೫೪॥

ಶ್ರೀಕೃಷ್ಣ ಬೆಳಿಗ್ಗೆ ಉಪಪ್ಲಾವ್ಯಕ್ಕೆ ಹೋಗಿ ಸುಭದ್ರೆಯನ್ನು ಸಂತೈಸಿ ರಥವನ್ನು ಕಟ್ಟಿ ಯುದ್ಧ ಮಾಡಲು ಅರ್ಜುನನೊಂದಿಗೆ ತೆರಳಿದ.

---

1. ನನು ಸ್ವಪ್ನೇ ಆನಯನಂ ನಾಮ ಕಿಂ ವಾಸನಾಮಯಮುತ ಚೈತನ್ಯಸ್ಯ ತತ್ರಾಗಮನಂ ವಿವಕ್ಷಿತಂ? ನಾದ್ಯಃ ತಾವತಾ ರುದ್ರವರಾದೇರವಾಸನಾಮಯತ್ವಾಯೋಗಾತ್। ನ ದ್ವಿತೀಯಃ। ಸ್ವಪ್ನತ್ವಾಯೋಗಾದಿತಿ ಚೇನ್ನ। ಸ್ವಪ್ನೇ ವಾಸನಾಮಯ ದರ್ಶನಸ್ಯೈತ್ಸರ್ಗಿಕತ್ವೇನಾಂಶೇನ ದೇಹೇಽವಸ್ಥಾನಮಂಶೇನ ರುದ್ರಸಮೀಪಗಮನಂ ಚೇತ್ಯಂಗೀಕಾರಾತ್। ಅತ ಏವ ಬಹಿಃ ಕುಲಾಯಾದಮೃತಶ್ಚರಿತ್ವೇತಿ ಬೃಹದಾರಣ್ಯಕಸ್ಯ ಭಾಷ್ಯೇ ಅಂಶೇನ ಜೀವಮಾದಾಯ ಕ್ವಚಿದಿಶೋ ಬಹಿರ್ನಯೇತ್।ಸ್ವಪ್ನೇಷು ಫಲ್ಗುನಂ ಯದ್ವತ್ ಕೃಷ್ಣಃ ಕೈಲಾಸಮಾನಯದಿತಿ ಭಗವತಾಚಾರ್ಯೇಣೇದಮೇವ ದೃಷ್ಟಾಂತೀಕೃತಮಿತಿ ರಹಸ್ಯಂ॥
-ತಾಮ್ರಪರ್ಣೀಯ

ಶ್ರುತ್ವಾ ಪ್ರತಿಜ್ಞಾಂ ಪುರುಹೂತಸೂನೋ
ರ್ದುರ್ಯೋಧನೇನಾರ್ಥಿತಃ ಸಿಂಧುರಾಜಮ್ ।
ತ್ರಾತಾಸ್ಮ್ಯಹಂ ಸರ್ವಥೇತಿ ಪ್ರತಿಜ್ಞಾಂ
ಕೃತ್ವಾ ದ್ರೋಣೋ ವ್ಯೂಹಮಭೇದ್ಯಮಾತನೋತ್ ॥ ೫೫ ॥

ಅರ್ಜುನನ ಪ್ರತಿಜ್ಞೆಯನ್ನು ಕೇಳಿ ದುರ್ಯೋಧನನಿಂದ ಪ್ರಾರ್ಥಿತನಾದ ದ್ರೋಣ ನಾನು ಎಲ್ಲ ರೀತಿಯಿಂದಲೂ ಜಯದ್ರಥನನ್ನು ರಕ್ಷಿಸುವೆನೆಂದು ಪ್ರತಿಜ್ಞೆ ಮಾಡಿ ಅಭೇದ್ಯವಾದ ವ್ಯೂಹವನ್ನು ರಚಿಸಿದ.

ಸ ದಿವ್ಯಮಗ್ರ್ಯಂ ಶಕಟಾಬ್ಜಚಕ್ರಂ
ಕೃತ್ವಾ ಸ್ವಯಂ ವ್ಯೂಹಮುಖೇ ವ್ಯವಸ್ಥಿತಃ
ಪೃಷ್ಠೇ ಕರ್ಣದ್ರೌಣಿಕೃಪೈಃ ಸಶಲ್ಯೈ
ರ್ಜಯದ್ರಥಂ ಗುಪ್ತಮಧಾತ್ ಪರೈಶ್ಚ ॥೫೭॥

ದಿವ್ಯವಾದ ಉತ್ತಮವಾದ ಶಕಟಾಬ್ಜ ಚಕ್ರವ್ಯೂಹವನ್ನು ಮಾಡಿ ದ್ರೋಣ ಸ್ವತಃ ವ್ಯೂಹದ ದ್ವಾರದಲ್ಲಿ ನಿಂತ. ಬೆನ್ನ ಹಿಂದೆ ಕರ್ಣ ಅಶ್ವತ್ಥಾಮ ಕೃಪ ಶಲ್ಯರ ಮತ್ತು ಇತರ ರಕ್ಷಣೆಯಲ್ಲಿ ಜಯದ್ರಥನನ್ನು ನಿಲ್ಲಿಸಿದ.

ಹೊರಗೆ ಬಂಡಿಯ ಆಕಾರದ ಶಕಟವ್ಯೂಹ, ಒಳಗೆ ಚಕ್ರಾಕಾರದ ಚಕ್ರವ್ಯೂಹ, ಬಂಡಿ ಚಕ್ರಗಳ ನಡುವೆ ಪದ್ಮಾಕಾರದ ಪದ್ಮವ್ಯೂಹ ಹೀಗೆ ಒಂದೇ ಕಡೆ ಮೂರು ವ್ಯೂಹಗಳು ಸೇರಿರುವಂತೆ ಸೈನ್ಯವನ್ನು ದ್ರೋಣ ನಿಲ್ಲಿಸಿದ. ಇದೇ ಶಕಟಾಬ್ಜ ಚಕ್ರವ್ಯೂಹ. ದ್ವಾರದಲ್ಲಿ ದ್ರೋಣ ಮತ್ತು ಕರ್ಣ, ಭೂರಿಶ್ರವ, ಅಶ್ವತ್ಥಾಮ, ವೃಷಸೇನ, ಕೃಪ, ಶಲ್ಯ ಈ ಆರು ಮಂದಿ-

ಕರ್ಣೋ ಭೂರಿಶ್ರವಾ ದ್ರೌಣಿರ್ವೃಷಸೇನಶ್ಚ ದುರ್ಜಯಃ।
ಕೃಪಶ್ಚ ಮದ್ರರಾಜಶ್ಚ ಷಡೇತೇಽಸ್ಯ ಪುರೋಗಮಾಃ ॥
(ದ್ರೋಣ ೭೫.೨೬)

ಅಥಾರ್ಜುನೋ ದಿವ್ಯರಥೋಪರಿಸ್ಥಿತಃ
ಸುರಕ್ಷಿತಃ ಕೇಶವೇನಾವ್ಯಯೇನ ।
ವಿಜಿತ್ಯ ದುರ್ಮರ್ಷಣಮಗ್ರತೋಽಭ್ಯಯಾದ್
ದ್ರೋಣಂ ಸುಧನ್ವಾ ಗುರುಮುಗ್ರಪೌರುಷಃ ॥೫೭॥

ಬಳಿಕ ಭಯಂಕರ ಪೌರುಷಶಾಲಿ ಉತ್ತಮ ಧನುರ್ಧಾರಿ ಅರ್ಜುನ ದಿವ್ಯ ರಥದ ಮೇಲೆ

1. ಬಹಿಃಶಕಟಾಕಾರೋಽಂತಶ್ಚಕ್ರಾಕಾರಸ್ತಯೋರ್ಮಧ್ಯೇ ಪದ್ಮಾಕಾರ ಇತಿ ವ್ಯೂಹತ್ರಯೇಣೈಕತ್ರೈವ ನಿರ್ಮಿತಮಿತಿ ಜ್ಞೇಯಂ। -ವಾದಿರಾಜೀಯ

ನಿಂತು ಅವ್ಯಯನಾದ ಶ್ರೀಕೃಷ್ಣನಿಂದ ರಕ್ಷಿತನಾಗಿ ಮೊದಲಿಗೆ ದುರ್ಮರ್ಷಣನನ್ನು ಪರಾಭವಗೊಳಿಸಿ ಗುರುದ್ರೋಣನನ್ನು ಸಮೀಪಿಸಿದ.

ದುರ್ಮರ್ಷಣ ದುರ್ಯೋಧನನ ಒಬ್ಬ ತಮ್ಮ. ಅರ್ಜುನ ಅವನನ್ನೂ ಅವನ ಸೈನ್ಯವನ್ನೂ ಓಡಿಸಿದ. ಬಳಿಕ ದುಃಶಾಸನನೂ ಅರ್ಜುನನ್ನು ಇದಿರಿಸಿ ಸೋತು ಪಲಾಯನ ಮಾಡಿದ.

ಪ್ರದಕ್ಷಿಣೀಕೃತ್ಯ ತಮಾಶ್ವಗಾತ್ ತತಃ
ಕಾಲಾತ್ಯಯಂ ತ್ವೇವ ವಿಶಂಕಮಾನಃ ।
ರಥಂ ಮನೋವೇಗಮಥಾನಯದ್ಧರಿ-
ರ್ಯಥಾ ಶರಾಃ ಪೇತುರಮುಷ್ಯ ಪೃಷ್ಠತಃ ॥ ೫೮ ॥

ಕಾಲಾತಿಕ್ರಮವನ್ನು ಶಂಕಿಸುತ್ತ ಅರ್ಜುನ ಬೇಗನೆ ದ್ರೋಣನಿಗೆ ಪ್ರದಕ್ಷಿಣೆಮಾಡಿ ಅಲ್ಲಿಂದ ಹೊರಟು ಹೋದ. ಶ್ರೀಕೃಷ್ಣ ಅವನ ಮನೋವೇಗದ ರಥವನ್ನು ಅವನ ಬಾಣಗಳು ಅವನ ಬೆನ್ನ ಹಿಂದೆ ಹಾರಿಬರುವಂತೆ ವೇಗವಾಗಿ ನಡೆಸಿದ.

ಅರ್ಜುನ ದ್ರೋಣನಿಗೆ ಕೈಮುಗಿದು 'ನೀವು ನನಗೆ ತಂದೆಯ ಸಮಾನ. ನನ್ನ ಪ್ರತಿಜ್ಞೆ ಈಡೇರುವಂತೆ ಅನುಗ್ರಹಿಸಿ ದಾರಿಬಿಡಿ' ಎಂದರೆ ದ್ರೋಣನೆಂದ, 'ನನ್ನನ್ನು ಸೋಲಿಸದೆ ನೀನು ವ್ಯೂಹವನ್ನು ಪ್ರವೇಶಿಸಲಾರೆ.' ಅದಕ್ಕೆ ಅರ್ಜುನ ದ್ರೋಣನ ಪಾದಗಳಿಗೆ ನಮಸ್ಕಾರ ರೂಪವಾಗಿ ಎರಡು ಬಾಣಗಳನ್ನೆಸೆದ. ದ್ರೋಣ ಅವುಗಳನ್ನು ತುಂಡರಿಸಿ ಯುದ್ಧ ಮಾಡಿದ. ಶ್ರೀಕೃಷ್ಣನೆಂದ, 'ಅರ್ಜುನ! ಕಾಲಾತಿಕ್ರಮವಾಗುತ್ತಿದೆ. ದ್ರೋಣನನ್ನು ಬಿಟ್ಟುಬಿಡು'. ದ್ರೋಣನಿಗೆ ಅರ್ಜುನ ಪ್ರದಕ್ಷಿಣೆ ಮಾಡಿ ಹೊರಟ. 'ಯುದ್ಧದಲ್ಲಿ ಶತ್ರುವನ್ನು ಪರಾಭವಗೊಳಿಸದೆ ಎಲ್ಲಿಗೆ ಹೋಗುವೆ?' ಎಂದು ದ್ರೋಣ ಆಕ್ಷೇಪಿಸಿದರೆ 'ನೀವು ನನಗೆ ಶತ್ರುವಲ್ಲ, ಗುರುಗಳು!' ಎನ್ನುತ್ತ ಹೊರಟೇ ಬಿಟ್ಟ ಅರ್ಜುನ.

[1]ಶ್ರೀಕೃಷ್ಣ ಎಷ್ಟು ವೇಗದಿಂದ ರಥವನ್ನು ಓಡಿಸಿದನೆಂದರೆ ಅರ್ಜುನನೆಸೆದ ಬಾಣಗಳನ್ನು ವೇಗದಲ್ಲಿ ಹಿಂದೆ ಹಾಕಿ ಅವನ ರಥವೆ ಮುಂದೆ ಹೋಗಿರುತ್ತಿತ್ತು. ಆ ಬಾಣಗಳು ಅರ್ಜುನನ ಬೆನ್ನ ಹಿಂದೆ ಹಾರಿ ಬರುತ್ತಿದ್ದುವು. ಅದರಿಂದ ಶರವೇಗವನ್ನೂ ಮೀರಿಸಿ ಮನೋವೇಗದಿಂದ ರಥ ಚಲಿಸುತ್ತಿತ್ತು.

---

1. ಅಮುಷ್ಯಾರ್ಜುನಸ್ಯ ಪ್ರಯುಕ್ತಾಃ ಶರಾಃ ಪೃಷ್ಠತೋಽರ್ಜುನಸ್ಯ ಪೃಷ್ಠತೋ ಯಥಾ ಪೇತುಸ್ತಥಾ ರಥಮನಯದಿತಿ ಯೋಜನಾ। -ವಾದಿರಾಜೀಯ
ಪಾರ್ಥಮುಕ್ತಶರಾದಪ್ಯಗ್ರೇ ರಥೋಽಗಾದಿತಿ ಭಾವಃ। -ಜನಾರ್ದನೀಯ

ವಿಜಿತ್ಯ ಹಾರ್ದಿಕ್ಯಮಥಾಪ್ರಯತ್ನತಃ
ಸ ಇಂದ್ರಸೂನುಃ ಪ್ರವಿವೇಶ ತದ್ ಬಲಮ್ ।
ವಿಲೋಡಯಾಮಾಸ ಚ ಸಾಯಕೋತ್ತಮೈ-
ರ್ಯಥಾ ಗಜೇಂದ್ರೋ ನಲಿನೀಂ ಬಲೋದ್ಧತಃ ॥೫೯॥

ಅರ್ಜುನ ಅಪ್ರಯತ್ನವಾಗಿ ಕೃತವರ್ಮನನ್ನು ಗೆದ್ದು ಕೌರವ ಸೈನ್ಯವನ್ನು ಪ್ರವೇಶಿಸಿದ. ಬಲದಿಂದ ಉದ್ಧತವಾದ ಮದ್ದಾನೆ ಕೊಳವನ್ನು ಹೇಗೋ ಹಾಗೆ ಉತ್ತಮ ಬಾಣಗಳಿಂದ ಶತ್ರುಸೈನ್ಯವನ್ನು ಕದಡಿದ.

ಕೃತವರ್ಮನಲ್ಲಿ ಸಂಬಂಧಿ ಎಂದು ದಯೆ ತೋರಬೇಡವೆಂದು ಶ್ರೀಕೃಷ್ಣ ಹೇಳುತ್ತಿದ್ದರೂ ಅರ್ಜುನ ಅವನನ್ನು ಕೊಲ್ಲಲು ಮನಸ್ಸಿಲ್ಲದೆ ಮೂರ್ಛೆಗೊಳಿಸಿದ.

ನಾವಧೀತ್ ಕೃತವರ್ಮಾಣಂ ಪ್ರಾಪ್ತಮಪ್ಯರಿಸೂದನಃ
(ದ್ರೋಣ ೯೨.೩೫)

ಕೃತವರ್ಮನೆದ್ದು ಅರ್ಜುನನ ಚಕ್ರರಕ್ಷಕರಾದ ಯುಧಾಮನ್ಯು ಉತ್ತಮೌಜರ ಮೇಲೆ ಆಕ್ರಮಿಸಲು ತೊಡಗಿದಾಗ ಈ ಅವಕಾಶವನ್ನು ಉಪಯೋಗಿಸಿಕೊಂಡು ಅರ್ಜುನ ಹೊರಟು ಹೋಗಿ ಕೌರವ ಸೈನ್ಯವನ್ನು ಪ್ರವೇಶಿಸಿದ. ಇದನ್ನು ಆಚಾರ್ಯರು 'ಅಪ್ರಯತ್ನವಾಗಿ ಗೆದ್ದು' ಎಂದಿದ್ದಾರೆ.

ಮದ್ದಾನೆ ಕೊಳವನ್ನು ಕದಡುವ ದೃಷ್ಟಾಂತ ಭಾರತದಲ್ಲಿ ಉಕ್ತವಾಗಿದೆ-
ಲೋಡಯಂತಮನೀಕಾನಿ ದ್ವಿಪಂ ಪದ್ಮಸರೋ ಯಥಾ।
ನಾಶಕ್ನುವನ್ ವಾರಯಿತುಂ ಪಾರ್ಥಂ ಕ್ಷತ್ರಿಯಪುಂಗವಾಃ॥
(ದ್ರೋಣ ೯೩.೩೦)

ಸ ಉಚ್ಚಕಾಶೇಽತಿರಥೋ ರಥೋತ್ತಮೇ
ಸವಾಸುದೇವೋ ಹರಿಣಾ ಯಥೇಂದ್ರಃ ।
ಚಕರ್ತ ಚೋರ್ವ್ಯೋ ದ್ವಿಷತಾಂ ಶಿರಾಂಸಿ
ಶರೈಃ ಶರೀರಾಂತಕರೈಃ ಸಮಂತತಃ ॥೬೦॥

ಅತಿರಥನಾದ ಅರ್ಜುನ ಉತ್ತಮ ರಥದಲ್ಲಿ ಶ್ರೀಕೃಷ್ಣನೊಂದಿಗೆ ಉಪೇಂದ್ರನ ಜೊತೆಗಿರುವ ಇಂದ್ರನಂತೆ ಶೋಭಿಸಿದ. ಶತ್ರುಭಯಂಕರನಾದ ಆತ ಶರೀರ ನಾಶಕರವಾದ ಬಾಣಗಳಿಂದ ಎಲ್ಲೆಡೆ ಶತ್ರುಗಳ ರುಂಡಗಳನ್ನು ಕತ್ತರಿಸಿದ.

ದೃಢಾಯುಮಚ್ಯುತಾಯುಂ ಚ ಹತ್ವಾ ವಿಂದಾನುವಿಂದಕೌ ।
ಶರಾಭ್ಯಾಂ ಪ್ರೇಷಯಾಮಾಸ ಯಮಾಯ ವಿಜಯೋ ಯುಧಿ ॥೬೧॥

ಅರ್ಜುನ ಯುದ್ಧದಲ್ಲಿ ದೃಢಾಯು ಅಚ್ಯುತಾಯುಗಳನ್ನೂ ವಿಂದ ಅನುವಿಂದರನ್ನೂ ಎರಡೆರಡು ಬಾಣಗಳಿಂದ ಹೊಡೆದು ಯಮನಿಗೆ ಕಳಿಸಿಕೊಟ್ಟ.

ಭಾರತದಲ್ಲಿ ಶ್ರುತಾಯು ಅಶ್ರುತಾಯುಗಳು ಅರ್ಜುನನಿಂದ ಹತರಾದರು ಎಂದಿದೆ-

ಶ್ರುತಾಯುಶ್ಚಾಚ್ಯುತಾಯುಶ್ಚ ಧನಂಜಯಮಯುಧ್ಯತಾಂ।
(ದ್ರೋಣ೯೩.೭)

'ಅಶ್ರುತಾಯು' ಎಂಬ ಪಾಠ ತಪ್ಪು. ಔತ್ತರೇಯ ಪಾಠದಲ್ಲಿ 'ಅಚ್ಯುತಾಯು' ಎಂದೇ ಇದೆ. 'ಶ್ರುತಾಯು' ಎಂಬುದೂ ನಿರ್ಣಯ ಹೇಳುವಂತೆ 'ದೃಢಾಯು' ಎಂದಾಗಬೇಕು. ಶ್ರುತಾಯುವಿಗೇ ದೃಢಾಯು ಎಂದು ಇನ್ನೊಂದು ಹೆಸರಿನ್ನುವಂತಿಲ್ಲ. ಏಕೆಂದರೆ ಭಾರತದಲ್ಲಿ ಹಿಂದೆ ಅವರಿಬ್ಬರು ಬೇರೆ ಎಂದೇ ಹೇಳಿದೆ-

ಶ್ರುತಾಯುಶ್ಚ ದೃಢಾಯುಶ್ಚ ಸಾಲ್ವಪುತ್ರಶ್ಚ ವೀರ್ಯವಾನ್
(ಉದ್ಯೋ.೪.೨೩)

ಶ್ರುತಾಯು ಎಂಬ ಪಾಠವನ್ನೇ ಇಟ್ಟುಕೊಂಡರೆ ಮುಂದೆ ಭಾರತದಲ್ಲಿಯೆ ಶ್ರುತಾಯು ಅಚ್ಯುತಾಯುಗಳ ಮಕ್ಕಳಾದ ನಿಯುತಾಯು ದೀರ್ಘಾಯುಗಳು ಅರ್ಜುನನಿಂದ ಹತರಾದ ಬಳಿಕ (ದ್ರೋಣ ೯೩.೨೫-೨೯) ತಿರುಗಿ ಅಂಬಷ್ಠನೊಂದಿಗೆ ಶ್ರುತಾಯು ಅರ್ಜುನನ ಮೇಲೆ ಆಕ್ರಮಣ ಮಾಡುತ್ತಾನೆ (ದ್ರೋಣ ೯೩.೬೩) ಇದು ಹೇಗೆ ಸಾಧ್ಯ? ಅದರಿಂದ ಈಗ ಹತನಾದವನು ದೃಢಾಯು.

ಇಲ್ಲಿ ವಿಂದ ಅನುವಿಂದರು ದುರ್ಯೋಧನನ ತಮ್ಮಂದಿರಲ್ಲ. ಅವರನ್ನು ಭೀಮನೇ ಸಂಹರಿಸಬೇಕು. ಕೇಕಯರೂ ಅಲ್ಲ, ಅವರನ್ನು ಮುಂದೆ (ನಿರ್ಣಯ ೨೭.೨೦) ಸಾತ್ಯಕಿ ಕೊಲ್ಲುತ್ತಾನೆ. ಅದರಿಂದ ಅವಂತೀದೇಶದ ರಾಜರು ಎಂದಿಟ್ಟುಕೊಳ್ಳಬೇಕು.

ಸುದಕ್ಷಿಣಂ ಚ ಕಾಂಬೋಜಂ ನಿಹತ್ಯಾಂಬಷ್ಠಮೇವ ಚ।
ಶ್ರುತಾಯುಧಂ ನದೀಜಾತಂ ವರುಣಾದಾಸಸಾದ ಹ ॥೬೨॥

ಅರ್ಜುನ ಕಾಂಬೋಜದ ರಾಜಕುಮಾರನಾದ ಸುದಕ್ಷಿಣನನ್ನೂ ಅಂಬಷ್ಠರಾಜನನ್ನೂ ಕೊಂದು ವರುಣನಿಂದ ಪರ್ಣಾಶಾ ನದಿಯಲ್ಲಿ ಜನಿಸಿದ ಶ್ರುತಾಯುಧನನ್ನೂ ಇದಿರಿಸಿದ-

॥೬೨॥

ಸುದಕ್ಷಿಣ ಕಾಂಬೋಜದ ರಾಜಕುಮಾರನೆಂದು ಮಹಾಭಾರತ ಹೇಳಿದೆ-

ತತಃ ಕಾಂಬೋಜ ರಾಜಸ್ಯ ಪುತ್ರಃ ಶೂರಃ ಸುದಕ್ಷಿಣಃ ।
(ದ್ರೋಣ ೯೨.೬೨)

ಕಲಿಂಗ ದೇಶದ ದೊರೆ ಶ್ರುತಾಯುಧ ಭೀಷ್ಮಪರ್ವದಲ್ಲಿ ಭೀಮನಿಂದ ಹತನಾಗಿದ್ದಾನೆ. ಈಗ ಅರ್ಜುನನೊಡನೆ ಯುದ್ಧಕ್ಕೆ ನಿಂತ ಶ್ರುತಾಯುಧ ಬೇರೆ, ವರುಣನಿಂದ ಪಣಾರ್ಶಾ ನದೀ ದೇವತೆಯಲ್ಲಿ ಹುಟ್ಟಿದವನು.

ಯಸ್ಮಾದಾದ್ ವರುಣೋ ದಿವ್ಯಮಮೋಘಾಂ ಮಹತೀಂ ಗದಾಮ್ ।
ಸ ತು ತೇನ ಶರೈಸ್ತೀಕ್ಷ್ಣೈರರ್ಪಿತೋ ವಿರಥಂ ಕ್ಷಣಾತ್ ॥೬೩॥
ಚಕಾರ ಪಾರ್ಥಸ್ಯ ರಥಮಾರುಹ್ಯಾರಿಧರಾಯ ತಾಮ್ ।
ಗದಾಂ ಚಿಕ್ಷೇಪ ಸಾ ತಸ್ಯ ವಾರುಣೇಃ ಶಿರ ಏವ ತು ।
ಬಿಭೇದ ಶತಧಾ ಶೀರ್ಣಮಸ್ತಿಷ್ಕಃ ಸೋಽಪತದ್ ಭುವಿ ॥೬೪॥

ಶ್ರುತಾಯುಧನಿಗೆ ವರುಣ ದಿವ್ಯವೂ ಅಮೋಘವೂ ಆದ ಮಹಾಗದೆಯನ್ನು ಕೊಟ್ಟಿದ್ದ. ಆ ಶ್ರುತಾಯುಧ ಅರ್ಜುನನನ್ನು ತೀಕ್ಷ್ಣವಾದ ಬಾಣಗಳಿಂದ ಪೀಡಿಸಿದಾಗ ಅರ್ಜುನ ಅವನನ್ನು ಕ್ಷಣದಲ್ಲಿ ವಿರಥನನ್ನಾಗಿ ಮಾಡಿದ. ಕೂಡಲೆ ಅವನು ಅರ್ಜುನನ ರಥವೇರಿ ಕೃಷ್ಣನ ಮೇಲೆ ಗದೆಯನ್ನು ಹಾಕಿದ. ಆದರೆ ಆ ಗದೆ ಅವನ ತಲೆಯನ್ನೇ ಭೇದಿಸಿತು. ನೂರು ಹೋಳುಗಳಾಗಿ ತಲೆ ಒಡೆದು ಸತ್ತು ನೆಲದ ಮೇಲೆ ಬಿದ್ದ, ಆತ.

ಶ್ರುತಾಯುಧ ಗದೆಯನ್ನು ಬೀಸುತ್ತಿದ್ದಾಗ ಅರ್ಜುನ ಅವನ ಎರಡು ತೋಳುಗಳನ್ನೂ ಎರಡು ಬಾಣಗಳಿಂದ ಕತ್ತರಿಸಿದ. ಗದೆಯೂ ಕೃಷ್ಣನ ಹೆಗಲಿಗೆ ಬಿದ್ದು ಹಿಂತಿರುಗಿ ಶ್ರುತಾಯುಧನನ್ನೇ ಹೊಡೆಯಿತು. ತಲೆ ಒಡೆಯಿತು. ತಲೆಯನ್ನೂ, ಎರಡು ತೋಳುಗಳನ್ನೂ ಕಳೆದುಕೊಂಡು ಆತ ಬಿದ್ದ.

ಅಯುದ್ಧ್ಯಂತಂ ಸ್ವಗದಯಾ ಯದಿ ತಾಡಯಸಿ ಸ್ವಯಮ್ ।
ತಯಾ ವಿಶೀರ್ಣಮಸ್ತಿಷ್ಕೋ ಮರಿಷ್ಯಸಿ ನ ಸಂಶಯಃ ॥೬೫॥

ಯುದ್ಧ ಮಾಡದಿರುವವನನ್ನು ನಿನ್ನ ಗದೆಯಿಂದ ಹೊಡೆದಿಯಾದರೆ ಆ ಗದೆಯಿಂದ ನಿನ್ನ ತಲೆಯೆ ಒಡೆದು, ಸಾಯುವಿ. ಸಂದೇಹವಿಲ್ಲ.

ಅಮೋಘಾ ಚಾನ್ಯಥಾ ಸೇಯಂ ಗದಾ ತವ ಭವಿಷ್ಯತಿ ॥೬೬॥

ಇಲ್ಲದಿದ್ದರೆ ನಿನ್ನ ಈ ಗದೆ ಅಮೋಘವಾಗಿರುವುದು.

ಇತ್ಯಬ್ರವೀತ್ ತಂ ವರುಣಃ ಪುರಾ ತೇನ ಸ ಕೇಶವೇ ।
ಅಯುದ್ಧ್ಯತಿ ಗದಾಕ್ಷೇಪಾತ್ ತಯಾ ಶೀರ್ಣಶಿರಾ ಅಭೂತ್ ॥೬೭॥

ಹೀಗೆ ವರುಣ ಹಿಂದೆ ಅವನಿಗೆ ಹೇಳಿದ್ದ. ಅದರಿಂದ ಯುದ್ಧ ಮಾಡದಿದ್ದ ಕೃಷ್ಣನ

ಮೇಲೆ ಗದೆಯನ್ನು ಎಸೆದುದರಿಂದ ಆ ಗದೆಯಿಂದಲೆ ಅವನ ತಲೆಯೊಡೆಯಿತು.

ತನ್ನ ಮಗ ಶ್ರುತಾಯುಧ ಅವಧ್ಯನಾಗಲೆಂದು ಪರ್ಣಾಶಾನದಿ ವರುಣನಲ್ಲಿ ಬೇಡಿದ್ದಳು. ವರುಣನೆಂದ, 'ಒಂದು ದಿವ್ಯವಾದ ಗದೆಯನ್ನು ಮಂತ್ರಪೂರ್ವಕವಾಗಿ ಕೊಡುತ್ತೇನೆ. ಅದರಿಂದ ಯುದ್ಧದಲ್ಲಿ ಶತ್ರುಗಳಿಂದ ಆತ ಹತನಾಗುವುದಿಲ್ಲ. ಅದರಿಂದಲೆ ಪ್ರಸಿದ್ಧವಾದ ಆಯುಧ ಉಳ್ಳವನಾಗಿ 'ಶ್ರುತಾಯುಧ' ನಾಮ ಸಾರ್ಥಕಪಡಿಸಿಕೊಳ್ಳುವನು. ಆದರೆ ಯುದ್ಧ ಮಾಡದವನ ಮೇಲೆ ಎಸೆದರೆ ಆ ಗದೆ ತಿರುಗಿ ತನ್ನ ಮೇಲೆಯೆ ಬೀಳುವುದು.' ಅರ್ಜುನ ಶ್ರುತಾಯುಧನ ಸಾರಥಿಯನ್ನು ಕೊಂದಿದ್ದಕ್ಕೆ ಶ್ರುತಾಯುಧ ಅರ್ಜುನನ ಸಾರಥಿಯನ್ನು ಕೊಲ್ಲುವ ಭರದಲ್ಲಿ ವರುಣನ ಮಾತನ್ನು ಮರೆತುಬಿಟ್ಟ.

ಹತೇಷು ವೀರೇಷು ನಿಜೇಷು ಸಂಘಶೋ
ವಿದ್ರಾವಿತೇಷ್ವಾಲುಲಿತೇ ಚ ಸೈನ್ಯೇ।
ದುರ್ಯೋಧನೋ ದ್ರೋಣಮುಪೇತ್ಯ ದೀನ-
ಮುವಾಚ ಹಾ ಪಾರ್ಥ ಉಪೇಕ್ಷಿತಸ್ತ್ವಯಾ ॥೬೮॥

ತನ್ನ ಕಡೆಯ ವೀರರು ಹತರಾದಾಗ, ಗುಂಪುಗುಂಪಾಗಿ ಓಡಿಸಲ್ಪಟ್ಟಾಗ, ಸೈನ್ಯ ಚೂರು ಚೂರಾದಾಗ, ದುರ್ಯೋಧನ ದ್ರೋಣನ ಬಳಿಗೆ ಬಂದು ದೈನ್ಯದಿಂದ ಹೇಳಿದ, 'ಅಯ್ಯೋ, ನೀನು ಅರ್ಜುನನನ್ನು ತಡೆಯದೆ ಉಪೇಕ್ಷೆ ಮಾಡಿದಿ'

ನಿನಗೆ ನಮ್ಮನ್ನು ಕಂಡರಾಗದು. ಸದಾ ಪಾಂಡವರನ್ನೆ ಪ್ರೀತಿಸುವಿ. ಅದರಿಂದ ಅರ್ಜುನನನ್ನು ವ್ಯೂಹ ದ್ವಾರದಲ್ಲಿ ತಡೆಯದೆ ಸುಮ್ಮನೆ ನಿಂತೆ. ನಮ್ಮ ಅನ್ನ ಉಂಡು ನಮಗೆ ದ್ರೋಹ ಮಾಡುವಿ. ಕಪ್ಪೆಯಂತೆ ಕೂಗುವ ಹಾವು ನೀನೆಂಬುದನ್ನು ನಾನು ತಿಳಿಯದೆ ಹೋದೆ. ಜಯದ್ರಥ ತಾನು ಯುದ್ಧವನ್ನು ಬಿಟ್ಟು ಮನೆಗೆ ಹೋಗಿ ಅಡಗುವೆನೆಂದಾಗ ಬುದ್ಧಿಹೀನನಾದ ನಾನು ನೀನು ಕೊಟ್ಟ ಆಶ್ವಾಸನೆಯನ್ನು ನಂಬಿ ಅವನನ್ನು ಸೈನ್ಯದಲ್ಲಿ ನಿಲ್ಲಿಸಿಕೊಂಡೆ. ಅದರಿಂದ ನಾನೆ ಅವನನ್ನು ಮೃತ್ಯುವಿಗೆ ಕೊಟ್ಟಂತಾಯಿತು. ಯಮನ ಕೋರೆದಾಡೆಯಿಂದಲೂ ಪಾರಾಗಬಹುದು, ಅರ್ಜುನನ ಕೈಗೆ ಸಿಕ್ಕಿದರೆ ಜಯದ್ರಥ ಉಳಿಯುವುದಿಲ್ಲ.' ಹೀಗೆ ಹೇಳಿ ದುರ್ಯೋಧನ ಮತ್ತೆ ದೈನ್ಯ ನಟಿಸುತ್ತ ಹೇಳಿದ, 'ನಾನು ದುಃಖ ತಡೆಯದೆ ಏನೋ ಅಂದೆ, ಕೋಪಿಸಿಕೊಳ್ಳಬೇಡ. ಜಯದ್ರಥನನ್ನು ಕಾಪಾಡು.'

ಇತೀರಿತೋಽಭೇದ್ಯಮಮುಷ್ಯ ವರ್ಮ
ಬದ್ಧ್ವಾ ಮಹಾಮಂತ್ರಬಲಾತ್ ಸ ವಿಪ್ರಃ।

ಜಗಾದ ಯೇನೈವ ಬಲೇನ ಪಾರ್ಥೈ-
ರ್ವಿರುದ್ಧ್ಯಸೇ ತೇನ ಹಿ ಯಾಹಿ ಫಲ್ಗುನಮ್ ॥೬೯॥

ದುರ್ಯೋಧನ ಹೀಗೆ ಹೇಳಿದಾಗ ದ್ರೋಣ ಅವನಿಗೆ ಮಹಾಮಂತ್ರಬಲದಿಂದ ಅಭೇದ್ಯವಾದ ಕವಚವನ್ನು ತೊಡಿಸಿ ಹೇಳಿದ, 'ಎಲ್ಲ ಪಾಂಡವರೊಡನೆ ಎಷ್ಟು ಬಲದಿಂದ ಹೋರಾಡುವಿಯೋ ಅಷ್ಟು ಬಲದಿಂದ ಒಬ್ಬ ಅರ್ಜುನನೊಡನೆ ಹೋರಾಡು.'

ಎಲ್ಲ ಪಾಂಡವರೂ ಒಮ್ಮೆಲೆ ನಿನ್ನ ಮೇಲೆ ಆಕ್ರಮಣ ನಡೆಸಿದರೆ ನೀನು ಎಷ್ಟು ಶಕ್ತಿಯನ್ನು ಉಪಯೋಗಿಸುವೆಯೊ ಅಷ್ಟು ಶಕ್ತಿಯನ್ನು, ಅಂದರೆ ನಿನ್ನ ಪೂರ್ಣ ಶಕ್ತಿಯನ್ನು ಉಪಯೋಗಿಸಿ ಅರ್ಜುನನೊಡನೆ ಹೋರಾಡು ಎನ್ನುವುದು ತಾತ್ಪರ್ಯವೆಂದು ಜನಾರ್ದನೀಯ ಹೇಳಿದೆ.

ಎಲ್ಲ ಪಾಂಡವರೂ ಒಮ್ಮೆಲೆ ನಿನ್ನ ಮೇಲೆ ಆಕ್ರಮಣ ನಡೆಸಿದರೂ ನೀನು ಈ ಕವಚದ ಬಲದಿಂದ ಸಮರ್ಥವಾಗಿ ಹೋರಾಡಬಲ್ಲೆ. ಒಬ್ಬ ಅರ್ಜುನನೊಡನೆ ಹೋರಾಡುವುದರಲ್ಲಿ ಏನು ಸಂಶಯವೆಂದು ವಾದಿರಾಜೀಯದಲ್ಲಿ ಹೇಳಿದೆ.[1]

ಇತೀರಿತೋ ಧಾರ್ತರಾಷ್ಟ್ರಃ ಸ ಚಾಪ-
ಮಾದಾಯ ಸೌವರ್ಣರಥೋಪರಿಸ್ಥಃ।
ಜಗಾಮ ಪಾರ್ಥಂ ತಮವಾರಯಚ್ಚ
ಶರೈರನೇಕೈರನಲಪ್ರಕಾಶೈಃ ॥೭೦॥

ದ್ರೋಣ ಹೀಗೆ ಹೇಳಿದಾಗ ದುರ್ಯೋಧನ ಬಿಲ್ಲನ್ನೆತ್ತಿಕೊಂಡು ಬಂಗಾರದ ರಥದ ಮೇಲೆ ಹತ್ತಿ ನಿಂತ. ಅರ್ಜುನನ ಬಳಿಗೆ ಹೋದ. ಬೆಂಕಿಯಂತೆ ಹೊಳೆವ ಅನೇಕ ಬಾಣಗಳಿಂದ ಅವನನ್ನು ತಡೆದ.

ವಿವ್ಯಾಧ ಪಾರ್ಥೋಽಪಿ ತಮುಗ್ರವೇಗೈಃ
ಶರೈರ್ನ ತೇ ತಸ್ಯ ಚ ವರ್ಮಭೇದನಮ್ ।
ಚಕ್ರುಸ್ತತೋ ವಾಸವಿರ್ದಿವ್ಯಮಸ್ತ್ರಂ
ತದ್ವರ್ಮಭೇದಾಯ ಸಮಾದದೇ ರುಷಾ ॥೭೧॥

---

1. ಯೇನೈವ ಯಾವತಾ ಬಲೇನ ಪಾರ್ಥೈರ್ಧರ್ಮಾದಿಚತುರ್ಭಿರ್ವಿರುಧ್ಯಸೇ ವಿರೋಧಂ ಕರಿಷ್ಯಸಿ ತೇನ ತಾವತಾ ಬಲೇನ ಫಲ್ಗುನಂ ಪ್ರತಿ ಯಾಹಿ । -ಜನಾರ್ದನೀಯ
ಯೇನ ಬಲೇನ ಮಯಾಽಭಿಮಂತ್ರ್ಯ ನಿಬದ್ಧಕವಚಬಲೇನ ಪಾರ್ಥೈರಪಿ ಸಕಲ ಪಾರ್ಥೈರಪಿ ವಿರುಧ್ಯಸೇ ವಿರೋಧಂ ಕರ್ತುಂ ಶಕ್ನೋಷೀತಿ ಯಾವತ್ ತೇನ ಕವಚ ಬಲೇನ ಬಲಿನಮೇಕಮರ್ಜುನಂ ಯಾಹಿ। ಏತದ್ವರ್ಮ ಬಲೇನ ಸರ್ವಾನ್ ಪಾರ್ಥಾನಪಿ ಜೇತುಂ ಶಕ್ತಸ್ಯ ತವೈಕೋಽರ್ಜುನಃ ಕಿಮು ವಕ್ತವ್ಯ ಇತಿ ಭಾವಃ। -ವಾದಿರಾಜೀಯ

ಅರ್ಜುನನೂ ಭಯಂಕರ ವೇಗಉಳ್ಳ ಬಾಣಗಳಿಂದ ದುರ್ಯೋಧನನನ್ನು ಹೊಡೆದ. ಆದರೆ ಆ ಬಾಣಗಳು ಅವನ ಕವಚ ಭೇದನ ಮಾಡಲಿಲ್ಲ. ಬಳಿಕ ಅರ್ಜುನ ಕೋಪದಿಂದ ಅವನ ಕವಚ ಭೇದನಕ್ಕಾಗಿ ದಿವ್ಯಾಸ್ತ್ರವನ್ನು ಎತ್ತಿಕೊಂಡ.

ಹಿಂದೆ ವೃತ್ರಾಸುರನಿಂದ ಪೀಡಿತರಾದ ದೇವತೆಗಳು ಬ್ರಹ್ಮನ ಬಳಿಗೆ ಹೋದಾಗ ಆತ 'ಶಿವನ ಅನುಗ್ರಹದಿಂದ ತ್ವಷ್ಟ್ರ ವೃತ್ರನನ್ನು ಹುಟ್ಟಿಸಿದ್ದಾನೆ, ಶಿವನ ಬಳಿಗೆ ಹೋಗಿರಿ' ಎಂದ. ದೇವತೆಗಳು ಮಂದರ ಪರ್ವತದಲ್ಲಿ ಶಿವನನ್ನು ಮೊರೆಹೊಕ್ಕರು. ಶಿವ ತನ್ನ ಶರೀರದಿಂದ ಕವಚವನ್ನು ತೆಗೆದುಕೊಟ್ಟು ಅದನ್ನು ಕಟ್ಟಿಕೊಳ್ಳಲು ಇಂದ್ರನಿಗೆ ಮಂತ್ರೋಪದೇಶ ನೀಡಿದ. ಆ ಮಂತ್ರವನ್ನೂ ಕವಚವನ್ನೂ ಇಂದ್ರನಿಂದ ಅಂಗಿರಸ ಪಡೆದ. ಅವನಿಂದ ಬೃಹಸ್ಪತಿಯ ಮೂಲಕ ಅಗ್ನಿವೇಶ್ಯ ಪಡೆದು ದ್ರೋಣನಿಗೆ ಕೊಟ್ಟ. ಆ ಕವಚ ಮಂತ್ರ ಪ್ರಭಾವದಿಂದ ದುರ್ಯೋಧನ ಅರ್ಜುನನನ್ನು ತಡೆದಿದ್ದ. ಇದು ಅರ್ಜುನನಿಗೆ ತಿಳಿದಿತ್ತು. ಯಾವ ಬಾಣವೂ ಇಂದ್ರನ ವಜ್ರಾಯುಧವೂ ಅದನ್ನು ಭೇದಿಸಲಾರದು. ಆದರೆ ಮಾನವಾಸ್ತ್ರ ಅದನ್ನೂ ಭೇದಿಸಬಲ್ಲುದು. ಅದನ್ನು ದೇವೇಂದ್ರ ನನಗೆ ಉಪದೇಶಿಸಿದ್ದಾನೆ ಎನ್ನುತ್ತ ಅರ್ಜುನ ಆ ಅಸ್ತ್ರವನ್ನು ಎತ್ತಿಕೊಂಡ.

ಸಂಧೀಯಮಾನಂ ತು ಗುರೋಃ ಸುತಸ್ತ-
ಚ್ಚಿಚ್ಛೇದ ಪಾರ್ಥೋ ಽಥ ಸುಯೋಧನಾಶ್ವಾನ್ ।
ಹತ್ವಾ ತಲೇಽವಿಧ್ಯದಥೈನಮುಗ್ರೈ-
ರ್ದ್ರೋಣಿಃ ಶರೈಃ ಪಾರ್ಥಮವಾರಯದ್ ಯುಧಿ ॥೭೨॥

ಅರ್ಜುನ ಬಾಣದಲ್ಲಿ ಆ ದಿವ್ಯಾಸ್ತ್ರವನ್ನು ಹೂಡುವಷ್ಟರಲ್ಲಿ ಅದನ್ನು ಅಶ್ವತ್ಥಾಮ ಕತ್ತರಿಸಿದ. ಅರ್ಜುನ ದುರ್ಯೋಧನನ ಕುದುರೆಗಳನ್ನು ಕೊಂದು ಅವನನ್ನು ನೆಲದ ಮೇಲೆ ನಿಲ್ಲಿಸಿ ಅಂಗೈಗೆ ಬಾಣಗಳಿಂದ ಹೊಡೆದ. ಅಶ್ವತ್ಥಾಮ ಭಯಂಕರ ಬಾಣಗಳಿಂದ ಯುದ್ಧದಲ್ಲಿ ಅರ್ಜುನನನ್ನು ತಡೆದ.

ಸಕಲ ದಿವ್ಯಾಸ್ತ್ರಗಳನ್ನು ಛೇದಿಸಬಲ್ಲ ಬಾಣದಿಂದ ಅಶ್ವತ್ಥಾಮ ಅರ್ಜುನನ ಮಾನವಾಸ್ತ್ರವನ್ನು ಛೇದಿಸಿದ. ಅರ್ಜುನನೀಗ ಆ ಅಸ್ತ್ರವನ್ನು ಎರಡನೆ ಬಾರಿ ಪ್ರಯೋಗಿಸುವಂತಿಲ್ಲ. ಪ್ರಯೋಗಿಸಿದರೆ ಅದು ತನಗೇ ಮಾರಕವಾಗುವುದು. ದುರ್ಯೋಧನನ ಮೈಯಲ್ಲಿ ಕವಚದಿಂದ ರಕ್ಷಿತವಾಗದ ಭಾಗ ಒಂದನ್ನೂ ಕಾಣದೆ ಅರ್ಜುನ ಅವನ ಕುದುರೆಗಳನ್ನೂ ಸಾರಥಿಯನ್ನೂ ರಥವನ್ನೂ ಪುಡಿಮಾಡಿ ಅವನನ್ನು ನೆಲದ ಮೇಲೆ ನಿಲ್ಲಿಸಿ ಅಂಗೈಗೆ ಹೊಡೆದ. ಅಂಗೈಗೆ ಕವಚ ರಕ್ಷಣೆ ಇರಲಿಲ್ಲ!

'ತಲೇಽವಿಧ್ಯತ್' ಎಂಬುದಕ್ಕೆ ವರದರಾಜೀಯದಲ್ಲಿ 'ರಥವಿಲ್ಲದುದರಿಂದ ನೆಲದ ಮೇಲೆ ನಿಂತಿದ್ದ ದುರ್ಯೋಧನನನ್ನು ಹೊಡೆದ' ಎಂದು ಅರ್ಥ ಹೇಳಿದೆ. ಜನಾರ್ದನೀಯದಲ್ಲಿ 'ಅಂಗೈಗೆ ಹೊಡೆದ' ಎಂದಿದೆ.[1] ಎರಡೂ ಸರಿ. 'ಅರ್ಜುನ ಕುದುರೆಗಳನ್ನೂ ಸಾರಥಿಗಳನ್ನೂ ಕೊಂದು ರಥವನ್ನು ಪುಡಿಮಾಡಿ ಅಂಗೈಗಳಿಗೆ ಬಾಣಗಳಿಂದ ಹೊಡೆದ' ಎಂದು ಭಾರತದಲ್ಲಿ ಹೇಳಿದೆ (ದ್ರೋಣ ೧೦೩.೩೦) ಆದರಿಂದ 'ತಲೇ' ಎಂದರೆ, ಏಕವಚನವಿರುವುದರಿಂದ ಭೂತಲವೂ ಆಗಬಹುದು. ಭಾರತದಲ್ಲಿ ಸ್ಪಷ್ಟ ಹೇಳಿದ್ದರಿಂದ ಹಸ್ತತಲವೂ ಆಗಬಹುದು.

ಸ ದ್ರೌಣಿಕರ್ಣಪ್ರಮುಖೈರ್ಧನಂಜಯೋ
ಯುಯೋಧ ತೇ ಚೈನಮವಾರಯನ್ ಶರೈಃ।
ಬಭೂವ ಯುದ್ಧಂ ತದತುಲ್ಯಮದ್ಭುತಂ
ಜಯದ್ರಥಾರ್ಥೇಽದ್ಭುತವೀರ್ಯಕರ್ಮಣಾಮ್ ॥೭೩॥

ಅರ್ಜುನ ಅಶ್ವತ್ಥಾಮಕರ್ಣ ಮುಂತಾದವರೊಡನೆ ಯುದ್ಧ ಮಾಡಿದ. ಅವರು ಅರ್ಜುನನನ್ನು ಬಾಣಗಳಿಂದ ತಡೆದರು. ಅದ್ಭುತ ವೀರ್ಯ ಕರ್ಮಗಳುಳ್ಳ ಅಶ್ವತ್ಥಾಮ ಮುಂತಾದವರು ಅರ್ಜುನನೊಡನೆ ಜಯದ್ರಥನ ಸಲುವಾಗಿ ಮಾಡಿದ ಆ ಯುದ್ಧ ಅಸದೃಶವಾಗಿತ್ತು, ಅದ್ಭುತವಾಗಿತ್ತು.

ಪಾರ್ಥೇ ಪ್ರವಿಷ್ಟೇ ಕುರುಸೈನ್ಯಮಧ್ಯಂ
ದ್ರೋಣೋಽವಿಶತ್ ಪಾಂಡವಸೈನ್ಯಮಾಶು।
ಸ ತದ್ರಥಾನೀಕಮುದಾರವೇಗೈಃ
ಶರೈರ್ವಿಧೂಯ ನ್ಯಹನಚ್ಚ ವೀರಾನ್ ॥೭೪॥

ಅರ್ಜುನ ಕೌರವ ಸೈನ್ಯವನ್ನು ಪ್ರವೇಶಿಸಿದಾಗ ದ್ರೋಣ ಪಾಂಡವ ಸೈನ್ಯವನ್ನು ಪ್ರವೇಶಿಸಿದ. ಮಹಾ ವೇಗಗಳುಳ್ಳ ಬಾಣಗಳಿಂದ ಪಾಂಡವರ ರಥಸೈನ್ಯವನ್ನು ಓಡಿಸಿ ವೀರರನ್ನು ಸಂಹರಿಸಿದ.

ಸ ವೀರವರ್ಯಃ ಸ್ಥವಿರೋಽಪಿ ಯೂನಾಂ
ಯುವೇವ ಮಧ್ಯೇ ಪ್ರಚಚಾರ ಧನ್ವಿನಾಮ್।
ಪ್ರಪಾತಯನ್ ವೀರಶಿರಾಂಸಿ ಬಾಣೈ-
ರ್ಯುಧಿಷ್ಠಿರಂ ಚಾಕಸದದುಗ್ರವೀರ್ಯಃ ॥೭೫॥

ವೀರರಲ್ಲಿ ಅಗ್ರಗಣ್ಯನಾದ ದ್ರೋಣ ವೃದ್ಧನಾದರೂ ಯುವಕರಿಗೆ ಯುವಕನಂತೆ ಆ

---

1. ವಿರಥತ್ವಾತ್ ತಲೇ ಭೂತಲೇ ವಿದ್ಯಮಾನಂ ದುರ್ಯೋಧನಮವಿಧ್ಯತ್। -ವರದರಾಜೀಯ
   ತಲೇಹಸ್ತತಲೇಽವಿಧ್ಯತ್। -ಜನಾರ್ದನೀಯ

ಧನುರ್ಧಾರಿಗಳ ಮಧ್ಯದಲ್ಲಿ ಸಂಚರಿಸಿದ. ಭಯಂಕರ ಪರಾಕ್ರಮಿಯಾದ ಆತ ವೀರರ ರುಂಡಗಳನ್ನು ಬಾಣಗಳಿಂದ ಉರುಳಿಸುತ್ತ ಯುಧಿಷ್ಠಿರನನ್ನು ಇದಿರಿಸಿದ.

ನೃಪಗ್ರಹೇಚ್ಛುಂ ತಮವೇತ್ಯ ಸತ್ಯಜಿ-
ನ್ನ್ಯವಾರಯದ್ ದ್ರೌಪದಿರಾಶು ವೀರ್ಯವಾನ್ ।
ನಿವಾರಿತಸ್ತೇನ ಶಿರಃ ಶರೇಣ
ಚಕರ್ತ ಪಾಂಚಾಲಸುತಸ್ಯ ವಿಪ್ರಃ ॥ ೭೬ ॥

ದ್ರೋಣ ಯುಧಿಷ್ಠಿರನನ್ನು ಸೆರೆ ಹಿಡಿಯಲು ಬಯಸಿದುದನ್ನು ತಿಳಿದು ಪರಾಕ್ರಮಿಯಾದ ದ್ರುಪದಪುತ್ರ ಸತ್ಯಜಿತ್ ಬೇಗನೆ ಅವನನ್ನು ತಡೆದ. ಅವನು ತಡೆದಾಗ ದ್ರೋಣ ಬಾಣದಿಂದ ಅವನ ತಲೆಯನ್ನು ಕತ್ತರಿಸಿದ.

ನಿಹತ್ಯ ತಂ ವೀರತಮೋ ರಣೋತ್ಕಟಂ
ಯುಧಿಷ್ಠಿರಂ ಬಾಣಗಣೈಃ ಸಮಾರ್ದಯತ್ ॥ ೭೭ ॥

ಮಹಾವೀರನಾದ ದ್ರೋಣ ಯುದ್ಧನಿಪುಣನಾದ ಸತ್ಯಜಿತನನ್ನು ಸಂಹರಿಸಿ ಬಾಣ ಸಮೂಹಗಳಿಂದ ಯುಧಿಷ್ಠಿರನನ್ನು ಪೀಡಿಸಿದ.

ಸ ಶಕ್ತಿತಸ್ತೇನ ವಿಧಾಯ ಸಂಗರಂ
ನಿರಾಯುಧೋ ವ್ಯಶ್ವರಥಃ ಕೃತಃ ಕ್ಷಣಾತ್ ।
ಸ ಊರ್ಧ್ವಬಾಹುರ್ಭುವಿ ಸಂಸ್ಥಿತೋಽಪಿ
ಗ್ರಹೀತುಮಾಜೌ ಗುರುಣಾಽಭಿಪನ್ನಃ ।
ಮಾದ್ರೀಸುತಸ್ಯಾವರಜಸ್ಯ ಯಾನ
ಮಾರುಹ್ಯ ವೇಗಾದಪಜಗ್ಮಿವಾಂಸ್ತತಃ ॥ ೭೮ ॥

ಯುಧಿಷ್ಠಿರ ದ್ರೋಣನೊಡನೆ ತನ್ನ ಶಕ್ತಿ ಇದ್ದಷ್ಟೂ ಯುದ್ಧಮಾಡಿ ಕ್ಷಣದಲ್ಲಿ ಆಯುಧ ಕುದುರೆ ರಥಗಳನ್ನು ಕಳೆದುಕೊಂಡು ನೆಲದ ಮೇಲೆ ಕೈಗಳೆತ್ತಿ ನಿಂತ. ಆದರೂ ಅವನನ್ನು ಯುದ್ಧದಲ್ಲಿ ಸೆರೆ ಹಿಡಿಯಲು ದ್ರೋಣ ಮುಂದೆ ಬಂದ. ಒಡನೆ ಯುಧಿಷ್ಠಿರ ಸಹದೇವನ ರಥವನ್ನೇರಿ ವೇಗವಾಗಿ ಅಲ್ಲಿಂದ ದೂರ ಹೊರಟುಹೋದ.

ಧರ್ಮರಾಜ ತನ್ನ ಬಿಲ್ಲು ಕಡಿದುಬಿದ್ದಾಗ ಶಕ್ತ್ಯಾಯುಧವನ್ನೆಸೆದ. ದ್ರೋಣ ಬ್ರಹ್ಮಾಸ್ತ್ರದಿಂದ ಅದನ್ನು ಸುಟ್ಟ. ಧರ್ಮರಾಜನ ಕುದುರೆಗಳನ್ನು ಕೊಂದ. ಧರ್ಮರಾಜ ರಥದಿಂದ ಕೆಳಗೆ ಹಾರಿ ನೆಲದ ಮೇಲೆ ಎರಡು ಕೈಗಳನ್ನೆತ್ತಿ ನಿಂತ. ಹಾಗೆ ನಿಂತ ವೀರನನ್ನು ಸೆರೆಹಿಡಿಯುವುದು ಯುದ್ಧ ಧರ್ಮವಲ್ಲ. ಆದರೂ ದ್ರೋಣ ಪ್ರತಿಜ್ಞೆ ಮಾಡಿದ್ದರಿಂದ ಸೆರೆಹಿಡಿಯಲು

ಬಂದ. ಅಷ್ಟರಲ್ಲಿ ಧರ್ಮರಾಜ ಸಹದೇವನ ರಥವನ್ನೇರಿ ಪಲಾಯನ ಮಾಡಿದ.

ದ್ರೋಣಂ ತತಃ ಶೈಶುಪಾಲಿಃ ಸಪುತ್ರೋ
ಜಾರಾಸಂಧಿಃ ಕಾಶಿರಾಜಃ ಸಶೈಬ್ಯಃ।
ಸಮಾಸದನ್ ಕೇಕಯಾಶ್ಚೈವ ಪಂಚ
ಸಮಾರ್ದಯನ್ ಬಾಣಗಣೈಶ್ಚ ಸರ್ವಶಃ ॥೭೯॥

ಬಳಿಕ ಶಿಶುಪಾಲ ಪುತ್ರನಾದ ಧೃಷ್ಟಕೇತು ಅವನ ಮಕ್ಕಳು, ಜರಾಸಂಧಪುತ್ರ, ಕಾಶಿರಾಜ, ಶೈಬ್ಯ, ಬೃಹತ್‌ಕ್ಷತ್ರ ಮುಂತಾದ ಕೈಕಯರು ಎಲ್ಲರೂ ದ್ರೋಣನನ್ನು ಮುತ್ತಿದರು. ಬಾಣ ಸಮೂಹಗಳಿಂದ ಎಲ್ಲೆಡೆಗಳಿಂದ ಪೀಡಿಸಿದರು.

ಸ ತಾನ್ ಕ್ರಮೇಣೈವ ನಿಕೃತ್ತಕಂಧರಾನ್
ಶರೋತ್ತಮೈರತ್ರ ವಿಧಾಯ ವಿಪ್ರಃ।
ನಿನಾಯ ಲೋಕಂ ಪರಮರ್ಕಮಂಡಲಂ
ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥೮೦॥

ದ್ರೋಣ ಉತ್ತಮ ಬಾಣಗಳಿಂದ ಕ್ರಮವಾಗಿ ಅವರೆಲ್ಲರ ಶಿರಶ್ಛೇದ ಮಾಡಿ ಅವರನ್ನು ನೈಷ್ಠಿಕ ಬ್ರಹ್ಮಚರ್ಯನಿಷ್ಠರು ಸೂರ್ಯಮಂಡಲವನ್ನು ಭೇದಿಸಿ ಯಾವ ಉತ್ತಮ ಲೋಕವನ್ನು ಹೊಂದುವರೋ ಆ ಲೋಕಕ್ಕೆ ಕಳಿಸಿದ.

'ನಿನಾಯ ಲೋಕಂ ಪರಮರ್ಕ ಮಂಡಲಂ
ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ' ॥

ಎಂಬುದು ಭಾಗವತಪದ್ಯ(೪.೧೧.೫) ಪ್ರಾರಬ್ಧವನ್ನು ತೀರಿಸಿಕೊಂಡ ಅಪರೋಕ್ಷ ಜ್ಞಾನಿಗಳಿಗೆ ಸೂರ್ಯಮಂಡಲ ತಡೆಯಾಗುವುದಿಲ್ಲ. ಅವರು ಸೂರ್ಯಮಂಡಲವನ್ನು ದಾಟಿ ಸತ್ಯಲೋಕದ ಕಡೆಗೆ ಹೋಗುತ್ತಾರೆ. ದ್ರೋಣನಿಂದ ಹತರಾದ ರಾಜರೂ ಹೀಗೆ ಅಪರೋಕ್ಷ ಜ್ಞಾನಿಗಳು, ಪ್ರಾರಬ್ಧ ತೀರಿಸಿಕೊಂಡವರು. ಅಥವಾ ಯೋಗಿಗಳು ಯೋಗಾಭ್ಯಾಸ ಮಾಡುತ್ತ ಸುಷುಮ್ನಾನಾಡಿಯಲ್ಲಿರುವ ಸೂರ್ಯಮಂಡಲವೆಂಬ ಬೆಳಕಿನ ಗೋಲದ ನಡುವೆ ದೀಪದಂಥ ಜ್ಯೋತಿಯಲ್ಲಿ ಪರಮಾತ್ಮನನ್ನು ಸೇರಿ ಸುಷುಮ್ನಾ ದ್ವಾರದಿಂದ ಉತ್ಕ್ರಮಣ ಹೊಂದುತ್ತಾರೆ. ಅದೇರೀತಿ ರಾಜರೂ ಕೂಡ ಯೋಗಮಾರ್ಗದಿಂದ ಊರ್ಧ್ವಲೋಕಕ್ಕೆ ಹೋದರು.[1]

---

1. ಸೂರ್ಯ ದ್ವಾರೇಣ ವಿರಜಾಃ ಪ್ರಯಾಂತಿ ದೇವತಾ ವಾ ಸೂರ್ಯ ಏವ ಚೇತ್ಯುಕ್ತೇರಧಿಕಾರಿಣಾಂ ಕ್ಷೀಣ ಪ್ರಾರಬ್ಧಾನಾಂ ಸೂರ್ಯಮಂಡಲಂ ನ ಪ್ರತಿಬಂಧಕಮಿತಿ ಭಾವಃ। ಆದಿತ್ಯಮಂಡಲಾಕಾರಂ

ವಿಧೂಯಮಾನೇ ಗುರುಣೋರುಸೈನ್ಯೇ
ಪೃಥಾಸುತಾನಾಂ ಪೃತನಾಃ ಪರೇಷಾಮ್ ।
ಪ್ರಾಯೋ ರಣೇ ಮಾರುತಸೂನುನೈವ
ಹತಪ್ರವೀರಾ ಮೃದಿತಾಃ ಪರಾದ್ರವನ್ ॥೮೧॥

ಪಾಂಡವರ ಮಹಾಸೈನ್ಯ ದ್ರೋಣನಿಂದ ನಾಶವಾಗುತ್ತಿದ್ದಾಗ ಕೌರವ ಸೇನೆಯ ಮಹಾವೀರರು ಪ್ರಾಯಃ ಎಲ್ಲರೂ ರಣದಲ್ಲಿ ಭೀಮನಿಂದ ಹತರಾದರು. ಕೌರವರ ಸೇನೆಗಳು ಪರಾಭವಗೊಂಡು ಓಡಿಹೋದುವು.

ಅಲಂಬುಸೋ ನಾಮ ತದೈವ ರಾಕ್ಷಸಃ
ಸಮಾಸದನ್ಮಾರುತಿಮುಗ್ರಪೌರುಷಮ್ ।
ಸ ಪೀಡಿತಸ್ತೇನ ಶರೈಃ ಸುತೇಜಸೈಃ
ಕ್ಷಣಾದದೃಶ್ಯತ್ವಮವಾಪ ಮಾಯಯಾ ॥೮೨॥

ಆಗಲೆ ಅಲಂಬುಸನೆಂಬ ರಾಕ್ಷಸ ಮಹಾಪೌರುಷಶಾಲಿಯಾದ ಭೀಮನನ್ನು ಇದಿರಿಸಿದ. ಒಳ್ಳೆಯ ತೇಜಸ್ಸುಳ್ಳ ಭೀಮನ ಬಾಣಗಳಿಂದ ಪೀಡಿತನಾಗಿ ಕ್ಷಣದಲ್ಲಿ ಮಾಯೆಯಿಂದ ಅದೃಶ್ಯನಾದ.

ಸೋಽದೃಶ್ಯರೂಪೋಽನುಚರಾನಪೀಡಯದ್
ಭೀಮಸ್ಯ ತದ್ ವೀಕ್ಷ್ಯ ಚುಕೋಪ ಮಾರುತಿಃ ।
ಅಸ್ತ್ರಜ್ಞತಾಮಾತ್ಮನಿ ಕೇಶವಾಜ್ಞಯಾ
ಸಂದರ್ಶಯನ್ನಾಗತಧರ್ಮಸಂಕಟಃ ॥೮೩॥

ತ್ವಾಷ್ಟ್ರಾಸ್ತ್ರಮಾದತ್ತ ಸ ಕಾಮ್ಯಕರ್ಮ
ಹೀನೋಽಪಿ ಭೀಮಸ್ತತ ಉತ್ಥಿತಾಃ ಶರಾಃ ।
ತೇ ಬಾಣವರ್ಷಾಸ್ತದದೃಶ್ಯವೇಧಿನೋ
ರಕ್ಷೋ ವಿದಾರ್ಯಾಕವಿವಿಶುರ್ಧರಾತಳಮ್ ॥೮೪॥

ಅಲಂಬುಸ ಅದೃಶ್ಯರೂಪನಾಗಿ ಭೀಮನ ಅನುಚರರನ್ನು ಪೀಡಿಸಿದ. ಅದನ್ನು ಕಂಡು ಭೀಮ ಕುಪಿತನಾದ. ಅವನಿಗೆ ಧರ್ಮಸಂಕಟ ಒದಗಿ ಬಂದಿತು. ತಾನು ಕಾಮ್ಯಕರ್ಮ ಮಾಡದವನಾಗಿದ್ದರೂ ಭಗವಂತನ ಇಚ್ಛೆಯಿಂದ ತನ್ನ ಅಸ್ತ್ರಜ್ಞಾನವನ್ನು ತೋರುವುದಕ್ಕಾಗಿ

ಚಾಸ್ಮಿನ್ ಜ್ವಾಲಾ ಸಮಾಕುಲಂ। ತಸ್ಯ ಮಧ್ಯಗತೋ ವಹ್ನಿಃ ಪ್ರಜ್ವಲೇದ್ ದೀಪವರ್ತಿವತ್। ದೀಪ ಶಿಖಾ ತು ಯಾ ಮಾತ್ರಾ, ಸಾ ಮಾತ್ರಾ ಪರಮೇಷ್ಠಿನ ಇತಿ, ವದಂತಿ ಯೋಗಿನಃ ಸೂರ್ಯಂ ಯೇ ಯೋಗಾಭ್ಯಾಸ ನೈಪುಣಾಃ। ದ್ವಿತೀಯಂ ಸುಷುಮ್ನಾದ್ವಾರಂ ಪರಿಶುಭ್ರಂ ಸಮರ್ಪಿತಂ। ಕಪೋತ ಸಂಪುಟಂ ಪೀತ್ವಾ ತತಃ ಪತತಿ ತತ್ವಥಂ ಇತಿ ವಚನೋಕ್ತ ಪ್ರಕಾರೇಣ ಸೂರ್ಯಮಂಡಲಭೇದೋ ಜ್ಞೇಯ ಇತ್ಯೇಕೇ।
-ತಾಮ್ರಪರ್ಣೀಯ

ತ್ವಾಷ್ಟ್ರ ಅಸ್ತ್ರವನ್ನು ಎತ್ತಿಕೊಂಡ. ಆ ಅಸ್ತ್ರದಿಂದ ಬಾಣಗಳು ಎದ್ದು ಬಂದುವು. ಆ ಉತ್ತಮ ಬಾಣಗಳು ಅದೃಶ್ಯವಾಗಿಯೆ ಹಿಂಸಿಸುತ್ತ ಅಲಂಬುಸ ರಾಕ್ಷಸನನ್ನು ಸೀಳಿ ಭೂತಲವನ್ನು ಹೊಕ್ಕವು.

ತನ್ನ ತಮ್ಮನಾದ ಬಕಾಸುರನನ್ನು ಕೊಂದವನು ಭೀಮನೆಂದು ಅಲಂಬುಸನಿಗೆ ಕೋಪ. ಅದರಿಂದ ಅದೃಶ್ಯನಾಗಿ ಹೋರಾಡುತ್ತ ಆಕಾಶದಿಂದ ನಾನಾ ಬಗೆಯ ಆಯುಧಗಳ ಮಳೆಸುರಿಸಿ ಭೀಮನ ಸೈನಿಕರನ್ನು ನಾಶಗೊಳಿಸಿದ. ಕೌರವಸೇನೆ ಉತ್ಸಾಹದಿಂದ ರಣವಾದ್ಯ ಮೊಳಗಿಸಿತು. ಈಗ ಭೀಮನಿಗೆ ಧರ್ಮಸಂಕಟ. ಅಸ್ತ್ರದೇವತೆಗಳಲ್ಲಿ ನೀವು ನನ್ನ ಶತ್ರುಗಳನ್ನು ಸಂಹರಿಸಿರೆಂದು ಕೇಳಿಕೊಳ್ಳುವುದು ಕಾಮ್ಯ ಕರ್ಮ. ಅದು ಶುದ್ಧ ಭಾಗವತ ಧರ್ಮವಾಗುವುದಿಲ್ಲ. ಅಸ್ತ್ರಪ್ರಯೋಗ ಮಾಡದೇ ಇದ್ದರೆ ತನ್ನ ಸೈನಿಕರನ್ನು ರಾಕ್ಷಸನಿಗೆ ಬಲಿಕೊಟ್ಟಂತಾಗುವುದು. ಮತ್ತು ಲೋಕ ಭೀಮನಿಗೆ ಅಸ್ತ್ರಜ್ಞಾನವಿಲ್ಲ ಎಂದೂ ತಪ್ಪು ತಿಳಿಯುವುದು. ಭಗವದಿಚ್ಛೆಯಿಂದಲೆ ಇಂಥ ಧರ್ಮಸಂಕಟ ಒದಗಿ ಬಂದುದರಿಂದ ಭಗವದಿಚ್ಛೆಯಿಂದಲೆ ಭೀಮ ಅಸ್ತ್ರಪ್ರಯೋಗ ಮಾಡಿದ.

ಹರಿಯಾಜ್ಞೆಯಿಂದ ಅಸ್ತ್ರಜ್ಞಾನವನ್ನು ಪ್ರದರ್ಶಿಸುವುದು ಪರಮಧರ್ಮವಾದ್ದರಿಂದ ಭೀಮನಿಗೆ ಧರ್ಮಸಂಕಟವಿಲ್ಲ. ಅಲಂಬುಸನಿಗೆ ದೃಶ್ಯನಾಗಿ ಧರ್ಮಯುದ್ಧಮಾಡದೆ ಅದೃಶ್ಯನಾಗಿ ಅಧರ್ಮಯುದ್ಧ ಮಾಡಿದ್ದರಿಂದ ಧರ್ಮಸಂಕಟ ಬಂದಿತ್ತು. ಅದನ್ನೆ ನಿರ್ಣಯ ಹೇಳಿದೆ ಎಂದು ಸತ್ಯಾಭಿನವೀಯದಲ್ಲಿ ಹೇಳಿದೆ.

ಭೀಮ ತ್ವಾಷ್ಟ್ರ ಅಸ್ತ್ರವನ್ನು ಪ್ರಯೋಗಿಸಿ ತಾನು ಅಸ್ತ್ರಜ್ಞನೆಂಬುದನ್ನು ತೋರಿಸಿಕೊಟ್ಟ. ಇಲ್ಲದಿದ್ದರೆ 'ಅಸ್ತ್ರೇ ದ್ರೋಣಾರ್ಜುನಸಮಂ' (ಉದ್ಯೋ ೫೧.೧೪) ಭೀಮಸೇನ ಅಸ್ತ್ರಜ್ಞಾನದಲ್ಲಿ ದ್ರೋಣಾರ್ಜುನರಿಗೆ ಸಮಾನ. ಅಥವಾ ಅವನಿಗೇ ದ್ರೋಣಾರ್ಜುನರು ಸಮಾನರು ಎಂದು ಧೃತರಾಷ್ಟ್ರ ಭೀಮನನ್ನು ಹೊಗಳುವುದು ಅಸಂಗತವೆನಿಸುತ್ತಿತ್ತು.

ತದ್ಧನ್ಯಮಾನಂ ಪ್ರವಿಹಾಯ ಭೀಮ-
ಮಪಾದ್ರವದ್ ದೂರತರಂ ಸುಭೂತಮ್ ।
ತತಸ್ತು ಭೀಮೋ ದ್ವಿಷತಾಂ ವರೂಥಿನೀಂ
ವಿದ್ರಾವಯಾಮಾಸ ಶರೈಃ ಸುಮುಕ್ತೈಃ ॥೮೫॥

ಭೀಮ ಅಲಂಬುಸರಾಕ್ಷಸನನ್ನು ತ್ವಾಷ್ಟ್ರಾಸ್ತ್ರದ ಬಾಣಗಳಿಂದ ಹೊಡೆಯುತ್ತಿದ್ದಂತೆಯೆ ಆ ರಾಕ್ಷಸ ಬಲು ಭೀತನಾಗಿ ಭೀಮನನ್ನು ಬಿಟ್ಟು ಬಹಳ ದೂರಕ್ಕೆ ಪಲಾಯನ ಮಾಡಿದ. ಬಳಿಕ

ಭೀಮ ಚೆನ್ನಾಗಿ ಬಾಣಪ್ರಯೋಗ ಮಾಡಿ ಶತ್ರುಗಳ ಸೈನ್ಯವನ್ನು ಓಡಿಸಿದ.

ತದೈವ ಕೃಷ್ಣಾತನಯಾಃ ಸಮೇತಾ
ಜಘ್ನುಃ ಶಲಂ ಸಂಯತಿ ಸೌಮದತ್ತಿಮ್ ।
ಅಲಂಬುಸಂ ಪ್ರಾಪ ತದಾ ಘಟೋತ್ಕಚಃ
ಪರಸ್ಪರಂ ತೌ ರಥಿನಾವಯುದ್ಧ್ಯತಾಮ್ ॥೮೬॥

ಆಗಲೆ ದ್ರೌಪದೀಪುತ್ರರು ಯುದ್ಧದಲ್ಲಿ ಸೋಮದತ್ತನ ಮಗನಾದ ಶಲನನ್ನು ಸುತ್ತುವರಿದು ಸಂಹರಿಸಿದರು. ಆಗಲೆ ಘಟೋತ್ಕಚ ಅಲಂಬುಸನನ್ನು ಇದಿರಿಸಿದ. ರಥವನ್ನೇರಿ ಅವರು ಇಬ್ಬರೂ ಪರಸ್ಪರ ಯುದ್ಧ ಮಾಡಿದರು.

ಸೋಮದತ್ತನ ಮಗನಾದ ಶಲನನ್ನು ದ್ರೌಪದೀಪುತ್ರರು ಐವರೂ ಸುತ್ತುವರಿದರು. ಅರ್ಜುನಪುತ್ರ, ಕುದುರೆಗಳನ್ನೂ ಭೀಮಪುತ್ರ, ಬಿಲ್ಲನ್ನೂ ಯುಧಿಷ್ಠಿರ ಪುತ್ರ, ಧ್ವಜವನ್ನೂ ನಕುಲಪುತ್ರ, ಸೂತನನ್ನೂ ನಾಶಮಾಡಿದರು. ಸಹದೇವ ಪುತ್ರ, ಶಿರಶ್ಛೇದ ಮಾಡಿದ.

ಘಟೋತ್ಕಚಸ್ತಂ ವಿರಥಂ ವಿಧಾಯ
ಖಸ್ಥಂ ಖ ಏವಾಭಿಯುಯೋಧ ಸಂಸ್ಥಿತಃ ।
ತತಸ್ತು ತಂ ಭೀಮಸುತೋ ನಿಗೃಹ್ಯ
ನಿಪಾತ್ಯ ಭೂಮೌ ಪ್ರದದೌ ಪ್ರಹಾರಮ್ ॥೮೭॥
ಪದಾ ಶಿರಸ್ಯೇವ ಸ ಪಿಷ್ಟಮಸ್ತಕೋ
ಮಮಾರ ಮಧ್ಯೇ ಪೃಥಿವೀಪತೀನಾಮ್ ।
ತಸ್ಮಿನ್ ಹತೇ ಭೈಮಸೇನಿಃ ಕುರೂಣಾಂ
ವ್ಯದ್ರಾವಯದ್ ರಥವೃಂದಂ ಸಮಂತಾತ್ ॥೮೮॥

ಘಟೋತ್ಕಚ ಅಲಂಬುಸನನ್ನು ವಿರಥನನ್ನಾಗಿ ಮಾಡಿ ಅವನು ಆಕಾಶದಲ್ಲಿ ನಿಂತಾಗ ತಾನೂ ಆಕಾಶದಲ್ಲಿ ನಿಂತೇ ಯುದ್ಧ ಮಾಡಿದ. ಬಳಿಕ ಅವನನ್ನು ಪರಾಭವಗೊಳಿಸಿ ನೆಲದಲ್ಲಿ ಕೆಡವಿ ತಲೆಗೆ ಪಾದ ಪ್ರಹಾರ ನೀಡಿದ. ಅವನ ತಲೆ ಪುಡಿಯಾಯಿತು ಆತ ಸತ್ತ. ರಾಜರುಗಳ ನಡುವೆ ಹೀಗೆ ಅಲಂಬುಸ ಹತನಾದ ಬಳಿಕ ಘಟೋತ್ಕಚ ಕೌರವರ ರಥ ಸೈನ್ಯವನ್ನು ಎಲ್ಲೆಡೆಗೂ ಓಡಿಸಿದ.

ತದಾಕಸದತ್ ಕೃತವರ್ಮಾ ರಥೇನ
ಸೇನಾಂ ಪಾಂಡೂನಾಂ ಶರವರ್ಷಂ ಪ್ರಮುಂಚನ್ ।
ದದೌ ವರಂ ತಸ್ಯ ಹಿ ಪೂರ್ವಮಚ್ಯುತಃ
ಪ್ರೀತಃ ಸುತ್ಯಾ ಸರ್ವಜಯಂ ಮುಹೂರ್ತೇ ॥೮೯॥

ಆಗ ಕೃತವರ್ಮ ಬಾಣಗಳ ಮಳೆಗರೆಯುತ್ತ ರಥದಿಂದ ಪಾಂಡವರ ಸೈನ್ಯವನ್ನು

ಇದಿರಿಸಿದ. ಹಿಂದೆ ಶ್ರೀಕೃಷ್ಣ ಅವನ ಸ್ತೋತ್ರಕ್ಕೆ ಮೆಚ್ಚಿ ಅವನಿಗೆ ಒಂದು ಮುಹೂರ್ತಕಾಲ ಎಲ್ಲರನ್ನೂ ಪರಾಭವಗೊಳಿಸುವಂತೆ ವರ ನೀಡಿದ್ದ.

ಜಿತ್ವಾ ಪಾಂಡುಸುತಾನ್ ಯುದ್ಧೇ ಭೀಮಸೇನ ಪುರೋಗಮಾನ್।
ಹಾರ್ದಿಕ್ಯಃ ಸಮರೇಽತಿಷ್ಠತ್ ವಿಧೂಮ ಇವ ಪಾವಕಃ
(ದ್ರೋಣ ೧೧೪.೧೦೨)

'ಭೀಮ ಮುಂತಾದ ಪಾಂಡವರನ್ನು ಕೃತವರ್ಮ ಪರಾಭವಗೊಳಿಸಿ ಹೊಗೆಯಿಲ್ಲದೆ ಉರಿವ ಬೆಂಕಿಯಂತೆ ಬೆಳಗಿದ' ಎಂಬ ಭಾರತವಚನಕ್ಕೆ ಹಿನ್ನೆಲೆ ಏನಿದ್ದಿತೆಂದು ನಿರ್ಣಯ ಇಲ್ಲಿ ಹೇಳುತ್ತಿದೆ.

ಸ ತೇನ ಪಾಂಚಾಲಗಣಾನ್ ವಿಜಿಗ್ಯೇ
ಯಮೌ ಚ ಭೀಮಸ್ಯ ಪುರೋಽಥ ತಂ ಚ।
ವಿವ್ಯಾಧ ಬಾಣೇನ ಸ ವಾಸುದೇವ
ವರಂ ವಿಜಾನನ್ ನ ತದಾ ಸಮಭ್ಯಯಾತ್ ॥೯೦॥

ಅದರಿಂದ ಕೃತವರ್ಮ ಭೀಮನ ಎದುರಿನಲ್ಲಿಯೆ ಪಾಂಚಾಲ ಸೇನೆಗಳನ್ನು ಪರಾಭವಗೊಳಿಸಿದ. ನಕುಲ ಸಹದೇವರನ್ನೂ ಗೆದ್ದ. ಬಳಿಕ ಭೀಮನನ್ನೂ ಬಾಣಗಳಿಂದ ಹೊಡೆದ. ಶ್ರೀಕೃಷ್ಣನ ವರವನ್ನು ತಿಳಿದಿದ್ದ ಭೀಮ ಆಗ ಕೃತವರ್ಮನನ್ನು ಇದಿರಿಸಲಿಲ್ಲ.

ಕೃತವರ್ಮ ಭೀಮನ ಬಿಲ್ಲನ್ನೂ ಧ್ವಜವನ್ನೂ ಕಡಿದು ಭೀಮನೆಡೆಗೆ ಎಪ್ಪತ್ತು ಬಾಣಗಳನ್ನೆಸೆದ. ಭೀಮ ಮೂರ್ಛಿತನಾದಂತೆ ನಿಂತು ಮರುಕ್ಷಣದಲ್ಲಿ ಕೃತವರ್ಮನ ರಥದ ಕಡೆಗೆ ಶಕ್ತ್ಯಾಯುಧವನ್ನೆಸೆದ. ಅದನ್ನು ಕೃತವರ್ಮ ಬಾಣಗಳಿಂದ ತುಂಡರಿಸಿದ. ಭೀಮ ಬೇರೆ ಬಿಲ್ಲನ್ನೆತ್ತಿಕೊಂಡು ಕೃತವರ್ಮನ ಸರ್ವಾಂಗವನ್ನು ಗಾಯಗೊಳಿಸಿದ. ಬಳಿಕ ಶಿಖಂಡಿ ಕೃತವರ್ಮನೊಡನೆ ಬಹಳ ಯುದ್ಧವಾಡಿ ಮೂರ್ಛಿತನಾಗಿ ಹೊರಟುಹೋದ.

ಏನೈವ ವೃಷ್ಣೀನ್ ವಿಜಯೇ ವರೋ ಯ-
ದಮುಷ್ಯ ತೇನಾಸ್ಯ ಹಯಾನ್ ಸ ಸಾತ್ಯಕಿಃ।
ನಿಹತ್ಯ ಬಾಣೈರತುದತ್ ಸ ಯಾನ-
ಮನ್ಯತ್ ಸಮಾಸ್ಥಾಯ ತತೋಽಪಜಗ್ಮಿವಾನ್ ॥೯೧॥

ಯಾದವರನ್ನು ಹೊರತುಪಡಿಸಿಯೆ ಸರ್ವತ್ರ ಜಯಗಳಿಸುವ ವಿಷಯದಲ್ಲಿ ಕೃತವರ್ಮನಿಗೆ ಕೃಷ್ಣನ ವರವಿದ್ದುದರಿಂದ ಸಾತ್ಯಕಿ ಕೃತವರ್ಮನ ಕುದುರೆಗಳನ್ನು ಕೊಂದು ಅವನನ್ನು ಬಾಣಗಳಿಂದ ಪೀಡಿಸಿದ. ಕೃತವರ್ಮ ಬೇರೆ ರಥವನ್ನೇರಿ ಅಲ್ಲಿಂದ ಹೊರಟುಹೋದ.

ಸಾತ್ಯಕಿಯ ಬಾಣ ಕೃತವರ್ಮನ ಕವಚವನ್ನು ಭೇದಿಸಿ ಮೈಗೆ ಚೆನ್ನಾಗಿ ಗಾಯಮಾಡಿ ನೆಲಕ್ಕೆ ಬಿದ್ದಿತು. ಕೃತವರ್ಮ ವಿಹ್ವಲನಾಗಿ ಧನುರ್ಬಾಣಗಳನ್ನು ಕೆಳಗೆ ಚೆಲ್ಲಿ ರಥದಿಂದ ಕೆಳಗೆ ಬಿದ್ದ. ಅರ್ಜುನನನ್ನು ಸೇರುವ ತವಕದಿಂದ ಸಾತ್ಯಕಿ ಹೊರಟುಹೋದ. ಇತ್ತ ಕೃತವರ್ಮ ಸಾವರಿಸಿಕೊಂಡು ಬೇರೆ ರಥವೇರಿ ಪಾಂಡವರ ಕಡೆಗೆ ಹೊರಟುಹೋದ.

ತದಾ ಹರಿಃ ಪಾಂಚಜನ್ಯಂ ಸುಘೋಷ-
ಮಾಪೂರಯಾಮಾಸ ಜಯೇಽಭಿಯುದ್ಧ್ಯತಿ।
ಕರ್ಣಾದಿಭಿರ್ಘೋರಮುಖೈ ರಿಪೂಣಾಂ
ಬಲಪ್ರಹಾಣಾಯ ಪರಃ ಪರೇಭ್ಯಃ ॥೯೨॥

ಕರ್ಣ ಮುಂತಾದವರೊಡನೆಯೂ ಅಶ್ವತ್ಥಾಮ ಮುಂತಾದವರೊಡನೆಯೂ ಅರ್ಜುನ ಯುದ್ಧಮಾಡುತ್ತಿದ್ದಾಗ ಸರ್ವೋತ್ತಮ ಶ್ರೀಕೃಷ್ಣ ಶತ್ರುಗಳ ಬಲವನ್ನು ಕುಂದಿಸುವುದಕ್ಕಾಗಿ ಉತ್ತಮ ಧ್ವನಿಉಳ್ಳ ಪಾಂಚಜನ್ಯ ಶಂಖವನ್ನು ಮೊಳಗಿಸಿದ.

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ
ಭೃಶಂ ಸುಪೂರ್ಣೋದರನಿಸ್ಸೃತಧ್ವನಿಃ।
ಜಗದ್ ವಿರಿಂಚೇಶಸುರೇಂದ್ರಪೂರ್ವಕಂ
ಪ್ರಕಮ್ಪಯಾಮಾಸ ಯುಗಾತ್ಯಯೇ ಯಥಾ ॥೯೩॥

ಆ ಪಾಂಚಜನ್ಯ ಶ್ರೀಕೃಷ್ಣನ ಬಾಯಿಯ ಗಾಳಿಯಿಂದ ಒಳಗೆ ತುಂಬಿಕೊಂಡಾಗ ಜೋರಾಗಿ ಧ್ವನಿಯನ್ನು ಹೊರಡಿಸಿ ಪ್ರಲಯಕಾಲದಲ್ಲಿ ಹೇಗೋ ಹಾಗೆ ಬ್ರಹ್ಮ ರುದ್ರ ಇಂದ್ರಾದಿ ಲೋಕವನ್ನು ನಡುಗಿಸಿತು.

ಗಾಂಡೀವಘೋಷೇ ಚ ತದಾಽಭಿಭೂತೇ
ಯುಧಿಷ್ಠಿರೋ ಭೀತಭೀತಸ್ತದೇತ್ಯ।
ಶೈನೇಯಮೂಚೇ ಪರಸೈನ್ಯಮಗ್ನೇ
ಪಾರ್ಥೇ ಸ್ವಯಂ ಯುದ್ಧ್ಯತಿ ಕೇಶವಃ ಸ್ಮ ॥೯೪॥

ಆಗ ಗಾಂಡೀವಧ್ವನಿ ಕೇಳಿಸದಂತಾಗಲು ಧರ್ಮರಾಜ ಬಹಳ ಭಯಗೊಂಡು ಸಾತ್ಯಕಿಯ ಬಳಿಗೆ ಹೋಗಿ 'ಏನು, ಶತ್ರು ಸೈನ್ಯದಲ್ಲಿ ಅರ್ಜುನ ಮುಳುಗಿಹೋಗಿರಲು ಕೃಷ್ಣನೆ ಸ್ವತಃ ಯುದ್ಧಮಾಡುತ್ತಿರುವನೆ?' ಎಂದು ಕೇಳಿದ.

ನ ಶ್ರೂಯತೇ ಗಾಂಡಿವಸ್ಯಾದ್ಯ ಘೋಷಃ
ಸಂಶ್ರೂಯತೇ ಪಾಂಚಜನ್ಯಸ್ಯ ಘೋಷಃ।
ತದ್ ಯಾಹಿ ಜಾನೀಹಿ ತಮದ್ಯ ಪಾರ್ಥಂ
ಯದಿ ಸ್ಮ ಜೀವತ್ಯಸಹಾಯ ಏಷಃ ॥೯೫॥

ಈಗ ಗಾಂಡೀವದ ಧ್ವನಿ ಕೇಳಿಬರುತ್ತಿಲ್ಲ. ಪಾಂಚಜನ್ಯ ಧ್ವನಿಯೆ ಕೇಳಿಬರುತ್ತಿದೆ. ಅದರಿಂದ ನೀನು ಈಗಲೆ ಕೃಷ್ಣನ ಬಳಿಗೆ ಹೋಗು. ಅರ್ಜುನ ಬದುಕಿರುವನೊ ಎಂದು ತಿಳಿದುಕೊಳ್ಳು. ಬದುಕಿದ್ದರೆ ಅಸಹಾಯಕನಾಗಿದ್ದರೆ ನೀನು ಸಹಾಯಕನಾಗು.

ಇತೀರಿತಃ ಸಾತ್ಯಕಿರತ್ರ ವಿಪ್ರಾನ್
ಸಂಪೂಜ್ಯ ವಿತ್ತೈಃ ಪರಮಾಶಿಷಶ್ಚ।
ಜಯಾಯ ತೇಭ್ಯಃ ಪ್ರತಿಗೃಹ್ಯ ಸೇನಾ
ಮುಖಂ ಯಯೌ ಭೀಮಸೇನಾನುಯಾತಃ ॥೯೬॥

ಧರ್ಮರಾಜ ಹೀಗೆ ಹೇಳಿದಾಗ ಸಾತ್ಯಕಿ ಬ್ರಾಹ್ಮಣರನ್ನು ದ್ರವ್ಯಗಳಿಂದ ಚೆನ್ನಾಗಿ ಸತ್ಕರಿಸಿ ಯುದ್ಧದಲ್ಲಿ ಜಯಕ್ಕಾಗಿ ಅವರಿಂದ ಉತ್ತಮ ಆಶೀರ್ವಾದಗಳನ್ನು ಹೊಂದಿ ಸೈನ್ಯದ ದ್ವಾರಕ್ಕೆ ಹೋದ. ಅವನಿಗೆ ತಡೆ ಉಂಟಾಗದಿರಲೆಂದು ಭೀಮ ಅವನನ್ನು ಹಿಂಬಾಲಿಸಿದ.

ಒಂದು ಸಾವಿರ ಬ್ರಾಹ್ಮಣರಿಗೆ ಬಂಗಾರದ ನಾಣ್ಯಗಳನ್ನು ದಕ್ಷಿಣೆಯಾಗಿ ನೀಡಿ ಜಯಾಶೀರ್ವಾದ ಪಡೆದು ಧರ್ಮರಾಜನಿಗೆ ಪಾದಾಭಿವಂದನೆ ಮಾಡಿ ದಾರುಕನ ತಮ್ಮನ ಸಾರಥ್ಯದಲ್ಲಿ ಸಿಂಹಧ್ವಜ ರಥವೇರಿ ಮೂರು ಯೋಜನ ದೂರದಲ್ಲಿ ಯುದ್ಧಮಾಡುತ್ತಿದ್ದ ಅರ್ಜುನನನ್ನು ಕೂಡಿಕೊಳ್ಳಲು ಹೊರಟಿದ್ದಾನೆ ಸಾತ್ಯಕಿ.

ಭೀಮಸ್ತು ಸೇನಾಮುಖಮಾಶು ಭಿತ್ತ್ವಾ
ಪ್ರಾವೇಶಯದ್ ಯುಯುಧಾನಂ ಚಮೂಂ ತಾಮ್।
ಸ ಯುಧ್ಯಮಾನೋ ಗುರುಣಾಽಭ್ಯುಪೇಕ್ಷಿತಃ
ಸೂತಂ ನಿಹತ್ಯ ದ್ರಾವಯಾಮಾಸ ಚಾಶ್ವಾನ್ ॥೯೭॥

ಭೀಮ ಬೇಗನೆ ಸೈನ್ಯದ ದ್ವಾರವನ್ನು ಭೇದಿಸಿ ಸಾತ್ಯಕಿಯನ್ನು ಸೈನ್ಯದೊಳಗೆ ಪ್ರವೇಶ ಮಾಡಿಸಿದ. ಸಾತ್ಯಕಿ ದ್ರೋಣನೊಡನೆ ಯುದ್ಧ ಮಾಡಿದ. ದ್ರೋಣ ಉಪೇಕ್ಷೆ ಮಾಡಿ ಬಿಟ್ಟಿದ್ದರಿಂದ ಸಾತ್ಯಕಿ ಅವನ ಸಾರಥಿಯನ್ನು ಕೊಂದು ಕುದುರೆಗಳನ್ನು ಓಡಿಸಿದ.

ದ್ರೋಣ ಸಾತ್ಯಕಿಯೊಡನೆ ಮೃದುವಾಗಿಯೆ ಯುದ್ಧ ಮಾಡಿದ. ಏಕೆಂದರೆ ಅವನು ತನ್ನ ಅತ್ಯಂತ ಪ್ರಿಯ ಶಿಷ್ಯನಾದ ಅರ್ಜುನನಿಗೆ ಅಷ್ಟೇ ಪ್ರಿಯನಾದ ಶಿಷ್ಯ. ಅದರಿಂದ ಜೋರಾಗಿ ಹೋಡೆಯದೆ ಉಪೇಕ್ಷೆ ಮಾಡಿ ಬಿಟ್ಟಿದ್ದರಿಂದ ಸಾತ್ಯಕಿ ದ್ರೋಣನ ಸಾರಥಿಯನ್ನು ಕೊಂದು ಕುದುರೆಗಳನ್ನೂ ಓಡಿಸಲು ಶಕ್ತನಾದ. ಒಡನೆ ದ್ರೋಣನೆಂದ 'ನಿನ್ನ ಗುರು ಅರ್ಜುನ ಯುದ್ಧ ಮಾಡದೆ ನನಗೆ ಪ್ರದಕ್ಷಿಣೆ ಬಂದು ಹೊರಟುಹೋದ. ನೀನೂ ಹಾಗೇ ಮಾಡದೆ ಯುದ್ಧ ಮಾಡುವಿಯಾದರೆ ಜೀವಸಹಿತ ಹಿಂತಿರುಗುವುದಿಲ್ಲ.' ಆಗ ಸಾತ್ಯಕಿ ಹೇಳಿದ, 'ನಾನು ಈಗ ಧರ್ಮರಾಜನ ಆದೇಶದಂತೆ ಅರ್ಜುನನ

ಯೋಗಕ್ಷೇಮ ನೋಡಿಕೊಳ್ಳಲು ಅವಸರವಾಗಿ ಹೋಗುತ್ತಿದ್ದೇನೆ. ನನ್ನ ಗುರು ಅರ್ಜುನ ಏನು ಮಾಡಿದನೋ ಶಿಷ್ಯನಾದ ನಾನೂ ಅದನ್ನೇ ಮಾಡುವೆ. ನಿನಗೆ ಶುಭವಾಗಲಿ' ಹೀಗೆ ಹೇಳುತ್ತಲೆ ಸಾತ್ಯಕಿ ಹೊರಟುಬಿಟ್ಟ.

ಬಲಂ ವಿವೃದ್ಧಂ ಚ ತದಾಽಸ್ಯ ಸಾತ್ಯಕೇ-
ರ್ವಿಪ್ರಾಶೀರ್ಭಿಃ ಕೃಷ್ಣವರಾದಪಿ ಸ್ಮ।
ಬಲಸ್ಯ ವೃದ್ಧಿರ್ಹಿ ಪುರಾಽಸ್ಯ ದತ್ತಾ
ಕೃಷ್ಣೇನ ತುಷ್ಟೇನ ದಿನೇ ಹಿ ತಸ್ಮಿನ್ ॥೯೮॥

ಆಗ ಸಾತ್ಯಕಿಯ ಬಲ ಬ್ರಾಹ್ಮಣರ ಆಶೀರ್ವಾದಗಳಿಂದಲೂ ಕೃಷ್ಣನ ವರದಿಂದಲೂ ವೃದ್ಧಿ ಹೊಂದಿತ್ತು. ಆ ದಿನದಲ್ಲಿ ಸಾತ್ಯಕಿಗೆ ಬಲ ವೃದ್ಧಿಯಾಗಲೆಂದು ಸಂತುಷ್ಟನಾದ ಶ್ರೀಕೃಷ್ಣನಿಂದ ಹಿಂದೆ ವರ ನೀಡಲ್ಪಟ್ಟಿತ್ತು.

ಸಾತ್ಯಕಿಗೆ ಅನಾಯಾಸವಾಗಿ ಜಯ ಲಭಿಸಲು ಭೀಮ ಸೈನ್ಯದ ದ್ವಾರವನ್ನು ಭೇದಿಸಿ ಅವನಿಗೆ ಸುಲಭವಾಗಿ ದಾರಿ ಮಾಡಿಕೊಟ್ಟಿದ್ದು ಒಂದು ಕಾರಣ. ದ್ರೋಣ ಪ್ರೀತಿಯಿಂದ ಹೋಗಲು ಬಿಟ್ಟಿದ್ದೂ ಕಾರಣ. ಬ್ರಾಹ್ಮಣರ ಆಶೀರ್ವಾದವೂ ಕಾರಣ. ಎಲ್ಲಕ್ಕೂ ಮಿಗಿಲಾಗಿ, ಶ್ರೀಕೃಷ್ಣ ಹಿಂದೆ ಸಂತುಷ್ಟನಾಗಿ ಸಾತ್ಯಕಿಗೆ ವರ ನೀಡಿದ್ದ. 'ನೀನು ಅರ್ಜುನನ ಸಹಾಯಕ್ಕೆ ಹೋಗುವಾಗ ನಿನ್ನ ಶಕ್ತಿ ವೃದ್ಧಿ ಹೊಂದಲಿ' ಎಂದು.

ತತೋ ವಿವೃದ್ಧೋರುಬಲಾತ್ ಸ ಸಾತ್ಯಕಿಃ
ಸಂಸ್ಥಾಪ್ಯ ಭೀಮಂ ಪ್ರಯಯೌ ರಥೇನ।
ತಂ ಬಾಣವರ್ಷೈಃ ಪೃತನಾಂ ಸಮಂತಾ-
ನ್ನಿಘ್ನಂತಮಾಜೌ ಹೃದಿಕಾತ್ಮಜೋಽಭ್ಯಯಾತ್ ॥೯೯॥

ಅದರಿಂದ ವೃದ್ಧಿಹೊಂದಿದ ಮಹಾಬಲದಿಂದ ಸಾತ್ಯಕಿ ಭೀಮನನ್ನು ಸೇನೆಯ ದ್ವಾರದಲ್ಲಿ ನಿಲ್ಲಿಸಿ, ರಥದಿಂದ ಒಳಗೆ ಪ್ರವೇಶಿಸಿದ. ಯುದ್ಧದಲ್ಲಿ ಬಾಣಗಳ ಮಳೆಗಳಿಂದ ಸೈನ್ಯಗಳನ್ನು ಎಲ್ಲೆಡೆಗಳಲ್ಲಿ ನಾಶಮಾಡತೊಡಗಿದ. ಆಗ ಕೃತವರ್ಮ ಎದುರಾದ.

ತಯೋರಭೂದ್ ಯುದ್ಧಮತೀವ ದಾರುಣಂ
ತತ್ರಾಕರೋತ್ ತಂ ವಿರಥಂ ಸ ಸಾತ್ಯಕಿಃ।
ವಿಜಿತ್ಯ ತಂ ಸಾತ್ಯಕಿರುಗ್ರಧನ್ವಾ
ಯಯಾವತೀತ್ಯೈವ ಶಿರಾಂಸಿ ಯೂನಾಮ್ ॥೧೦೦॥
ಕೃಂತನ್ ಶರೈಸ್ತಂ ಜಲಸಂಧ ಆಗಮದ್
ರಣೇ ಗಜಸ್ಕಂಧಗತೋಽಭಿಯೋದ್ಧುಮ್।

ನಿವಾರಯಂತಂ ತಮಸಹ್ಯವಿಕ್ರಮಂ
ನಿಹತ್ಯ ಬಾಣೈಃ ಸಮರೇ ಸ ಸಾತ್ಯಕಿಃ ॥೧೦೧॥
ವಿಲೋಲಯಾಮಾಸ ಬಲಂ ಕುರೂಣಾಂ
ನಿಘ್ನನ್ ಗಜಸ್ಯಂದನವಾಜಿಪತ್ತಿನಃ ॥೧೦೨॥

ಸಾತ್ಯಕಿ ಕೃತವರ್ಮರಿಗೆ ಅತ್ಯಂತ ಭೀಕರವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಸಾತ್ಯಕಿ ಕೃತವರ್ಮನನ್ನು ವಿರಥನನ್ನಾಗಿ ಮಾಡಿದ. ಅವನನ್ನು ಪರಾಭವಗೊಳಿಸಿ ದಾಟಿ ಯುವಕರ ತಲೆಗಳನ್ನು ಕತ್ತರಿಸುತ್ತ ನಡೆದ, ಭಯಂಕರ ಧನುರ್ಧಾರಿ ಸಾತ್ಯಕಿ. ಅವನೊಡನೆ ಹೋರಾಡಲು ಆನೆಯ ಹೆಗಲನ್ನೇರಿದ ಜಲಸಂಧ ಬಂದ. ತನ್ನನ್ನು ತಡೆಯುತ್ತಿದ್ದ ಅಸಹನೀಯ ಪರಾಕ್ರಮಿಯಾದ ಆ ಜಲಸಂಧನನ್ನು ಸಾತ್ಯಕಿ ಯುದ್ಧದಲ್ಲಿ ಬಾಣಗಳಿಂದ ಕೊಂದು ಕೌರವರ ಆನೆ ರಥ ಕುದುರೆ ಕಾಲಾಳು ಚತುರಂಗ ಸೇನೆಯ ಬಲವನ್ನು ಹೊಡೆಯುತ್ತ ನಾಶಮಾಡಿದ.

ಕೃತವರ್ಮ ರಥದಿಂದ ಕೆಳಗೆ ಬಿದ್ದು ಸಾವರಿಸಿಕೊಂಡು ಏಳುವಷ್ಟರಲ್ಲಿ ಸಾತ್ಯಕಿ ಅರ್ಜುನನ ಕಡೆಗೆ ಹೊರಟುಹೋದ. ದಾರಿಯಲ್ಲಿ ಗಜಾರೂಢನಾದ ಜಲಸಂಧ ಎದುರಾದ. ಸಾತ್ಯಕಿ ಅವನ ಎರಡೂ ತೋಳುಗಳನ್ನು ಕಡಿದ. ಶಿರಶ್ಛೇದ ಮಾಡಿದ. ಅವನ ಆನೆ ಅವನ ಕಡೆಯ ಸೈನ್ಯವನ್ನೇ ತುಳಿಯುತ್ತ ಪಲಾಯನ ಮಾಡಿತು.

ಭೂರಿಶ್ರವ ವಧ

ಸ ಪಾರ್ವತೀಯಾಂಶ್ಚ ಶಿಲಾಭಿವರ್ಷಿಣೋ
ನಿಹತ್ಯ ವಿದ್ರಾವ್ಯ ಚ ಸರ್ವಸೈನಿಕಾನ್ ।
ಸಮಾಸದತ್ ಕೇಶವಫಲ್ಗುನೌ ಚ
ಬಲೀ ತಮಾರಾತ್ಶು ಚ ಯೂಪಕೇತುಃ ॥೧೦೩॥
ತಯೋರಭೂದ್ ಯುದ್ಧಮತೀವ ಘೋರಂ
ಚಿರಂ ವಿಚಿತ್ರಂ ಚ ಮಹದ್ ವಿಭೀಷಣಮ್ ॥೧೦೪॥

ಸಾತ್ಯಕಿ ಕಲ್ಲಿನ ಮಳೆ ಸುರಿಸುತ್ತಿದ್ದ ಗುಡ್ಡಗಾಡಿನವರನ್ನು ಸಂಹರಿಸಿ ಎಲ್ಲ ಸೈನಿಕರನ್ನು ಓಡಿಸಿ ಕೃಷ್ಣಾರ್ಜುನರ ಕಡೆಗೆ ಮುಂದುವರಿದ. ಆಗ ಬಲಿಷ್ಠನಾದ ಭೂರಿಶ್ರವ ಸಾತ್ಯಕಿಯನ್ನು ತಡೆದ. ಅವರಿಬ್ಬರಿಗೆ ಅತ್ಯಂತ ಘೋರ ಮಹಾ ಭಯಂಕರ ವಿಚಿತ್ರವಾದ ಯುದ್ಧ ಬಹುಕಾಲ ನಡೆಯಿತು.

ಗುಡ್ಡಗಾಡುಗಳಲ್ಲಿ ವಾಸವಾಡಿದ ಸಾವಿರಾರು ಮಂದಿ ಮ್ಲೇಚ್ಛಯೋಧರು ದುಃಶಾಸನನ ನಾಯಕತ್ವದಲ್ಲಿ ಪಾಷಾಣ ಯುದ್ಧ ನಡೆಸಿದ್ದರು. ಸಾತ್ಯಕಿ ಅವರನ್ನೆಲ್ಲ ಕೊಂದಾಗ ದುಃಶಾಸನ ಪಲಾಯನ

ಮಾಡಿದ. ದ್ರೋಣ ಕಂಡು 'ಅಂದು ನೀನು ಸಭೆಯಲ್ಲಿ ದ್ರೌಪದಿಯನ್ನು ದಾಸಿ ಎಂದು ಕರೆದು ಅವಮಾನಿಸಿದಾಗ, ಪಾಂಡವರನ್ನು ಜೊಳ್ಳು, ಎಳ್ಳು ಕಾಳುಗಳೆಂದು ನಕ್ಕಾಗ ನೀನು ತೋರಿದ ಆ ದರ್ಪ, ಆ ಗರ್ಜನೆ ಎಲ್ಲ ಈಗ ಎಲ್ಲಿಗೆ ಹೋದುವು? ಈಗೇಕೆ ಪಲಾಯನ ಮಾಡುವಿ? ನೀನು ಓಡಿದರೆ ನಮ್ಮ ಸೈನ್ಯವೂ ಭಯದಿಂದ ಓಡುತ್ತದೆ. ಈಗ ಹೀಗೆ ಓಡುವುದಕ್ಕಿಂತ ಮೊದಲೇ ಸಂಧಿಮಾಡಿಕೊಳ್ಳಬಹುದಿತ್ತು! ಒಬ್ಬ ಸಾತ್ಯಕಿಗೆ ಹೆದರಿ ಓಡುತ್ತಿರುವ ನೀನು ಭೀಮಾರ್ಜುನರು ಎದುರಾದಾಗ ಏನು ಮಾಡುವಿ?' ಎಂದು ಮುಂತಾಗಿ ಆಕ್ಷೇಪಿಸುವುದು ಈ ಸಂದರ್ಭದಲ್ಲಿ ಮಹಾಭಾರತದಲ್ಲಿ ಕಂಡುಬರುತ್ತದೆ.(ಅಧ್ಯಾಯ ೧೨೨)

ಪರಸ್ಪರಂ ತೌ ತುರಗಾನ್ ನಿಹತ್ಯ
ನಿಪಾತ್ಯ ಸೂತೌ ಧನುಷೀ ನಿಕೃತ್ಯ।
ಸಮೀಯತುಶ್ಚರ್ಮವರಾಸಿಧಾರಿಣೌ
ವಿಚಿತ್ರಮಾರ್ಗಾನ್ ಯುಧಿ ದರ್ಶಯಂತೌ ॥೧೦೫॥

ಸಾತ್ಯಕಿ ಭೂರಿಶ್ರವರು ಒಬ್ಬ ಇನ್ನೊಬ್ಬನ ಕುದುರೆಗಳನ್ನು ಕೊಂದು ಸಾರಥಿಗಳನ್ನೂ ಬೀಳಿಸಿ ಬಿಲ್ಲುಗಳನ್ನೂ ಕಡಿದು ಕತ್ತಿ ಗುರಾಣಿಗಳನ್ನು ಹಿಡಿದು ವಿಚಿತ್ರವಾದ ವರಸೆಗಳನ್ನು ಯುದ್ಧದಲ್ಲಿ ತೋರುತ್ತ ಹೋರಾಡಿದರು.

ಸ ಸೌಮದತ್ತಿರ್ಭುವಿ ಸಾತ್ಯಕಿಂ ರಣೇ
ನಿಪಾತ್ಯ ಕೇಶೇಷು ಚ ಸಂಪ್ರಗೃಹ್ಯ।
ಪದಾಽಸ್ಯ ವಕ್ಷಸ್ಯಧಿರುಹ್ಯ ಖಡ್ಗ-
ಮುದಗ್ರಹೀದಾಶು ಶಿರೋಽಪಹರ್ತುಮ್ ॥೧೦೬॥

ಭೂರಿಶ್ರವ ಯುದ್ಧದಲ್ಲಿ ಸಾತ್ಯಕಿಯನ್ನು ನೆಲದಲ್ಲಿ ಕೆಡವಿ ಕೂದಲುಗಳಲ್ಲಿ ಹಿಡಿದು ಎದೆಯ ಮೇಲೆ ಕಾಲಿಂದ ಮೆಟ್ಟಿ ನಿಂತು ಶಿರಶ್ಛೇದ ಮಾಡಲು ಬೇಗನೆ ಖಡ್ಗವನ್ನೆತ್ತಿದ.

ಬಹಳ ಯಜ್ಞಮಾಡಿದ ಪುಣ್ಯಾತ್ಮ ಭೂರಿಶ್ರವನಿಗೆ ಭೂರಿದಕ್ಷಿಣ, ಯಜ್ಞಶೀಲ, ಯೂಪಕೇತು, ಧೂಮಕೇತು ಎಂದು ಮುಂತಾಗಿ ಹೆಸರುಗಳಿದ್ದವು. ಅವನು ಸಾತ್ಯಕಿಯನ್ನು ಕೆಡವಿ ಒಂದು ಕೈಯಿಂದ ಕೂದಲುಗಳಲ್ಲಿ ಹಿಡಿದು ಇನ್ನೊಂದು ಕೈಯಿಂದ ಖಡ್ಗವನ್ನು ಬೀಸುತ್ತಿದ್ದಾಗ ಸಾತ್ಯಕಿ ಅವನ ತೋಳು ಸಮೇತವಾಗಿ ತನ್ನ ತಲೆಯನ್ನು ಗರಗರನೆ ತಿರುಗಿಸುತ್ತ ಖಡ್ಗದ ಏಟನ್ನು ತಪ್ಪಿಸಿಕೊಳ್ಳುತ್ತಿದ್ದ.

ತದ್ ವಾಸುದೇವಸ್ತು ನಿರೀಕ್ಷ್ಯ ವಿಶ್ವತ-
ಶ್ಚಕ್ಷುರ್ಜಗಾದಾಶು ಧನಂಜಯಂ ರಣೇ।

ತ್ರಾಯಸ್ವ ಶೈನೇಯಮಿತಿ ಸ್ಮ ಸೋಽಪಿ
ಭಲ್ಲೇನ ಚಿಚ್ಛೇದ ಭುಜಂ ಪರಸ್ಯ ॥೧೦೭॥

ವಿಶ್ವತಶ್ಚಕ್ಷುವಾದ ಶ್ರೀಕೃಷ್ಣ ಅದನ್ನು ಕಂಡು ಬೇಗನೆ ಅರ್ಜುನನಿಗೆ ಹೇಳಿದ, 'ಯುದ್ಧದಲ್ಲಿ ಸಾತ್ಯಕಿಯನ್ನು ಕಾಪಾಡು' ಎಂದು. ಒಡನೆ ಅರ್ಜುನ ಭಲ್ಲೆಯಿಂದ ಭೂರಿಶ್ರವನ ತೋಳನ್ನು ಕತ್ತರಿಸಿದ.

ಮೂರು ಯೋಜನ ದೂರದಲ್ಲಿ ಅರ್ಜುನನಿಗೆ ಸಾರಥ್ಯ ಮಾಡುತ್ತಿದ್ದ ಶ್ರೀಕೃಷ್ಣ ಸಾತ್ಯಕಿಗೆ ಆದ ಪರಾಭವವನ್ನು ಹೇಗೆ ಕಂಡನೆಂದರೆ ಆತ ''ವಿಶ್ವತಶ್ಚಕ್ಷುರುತ ವಿಶ್ವತೋಮುಖಃ' ಎಂದು ಶ್ರುತಿ ಹೇಳುವಂತೆ ಕುಳಿತಲ್ಲೆ ಎಲ್ಲೆಡೆ ನೋಡಬಲ್ಲವ. ಅದರಿಂದ ಅರ್ಜುನನಿಗೆ ಹೇಳಿ ಸಾತ್ಯಕಿಯ ಬಳಿಗೆ ರಥ ನಡೆಸಿದ. ಅರ್ಜುನ ದೂರದಿಂದಲೆ ಸಾತ್ಯಕಿಯ ಸ್ಥಿತಿ ಕಂಡು ಉದ್ವೇಗ ಪಡುವುದಕ್ಕಿಂತ ಹೆಚ್ಚು ಭೂರಿಶ್ರವನ ಪರಾಕ್ರಮಕ್ಕೆ ಮೆಚ್ಚಿದನಂತೆ. ಬಳಿಕ 'ನನ್ನ ಶಿಷ್ಯ ನನಗಾಗಿ ಯುದ್ಧಮಾಡುತ್ತ ಅಪಾಯಸ್ಥಿತಿಯಲ್ಲಿದ್ದಾನೆ. ಧರ್ಮವಾಗಲಿ ಅಧರ್ಮವಾಗಲಿ ಭೂರಿಶ್ರವನನ್ನು ಹೊಡೆಯುತ್ತೇನೆ' ಎನ್ನುತ್ತ ಅವನ ಎತ್ತಿದ ತೋಳನ್ನು ದೂರದಿಂದಲೆ ಭಲ್ಲೆಯಿಂದ ಕಡಿದ.

ಸ ತೇನ ಚೋತ್ಕೃತ್ತಸವಿಡ್ಗಬಾಹು
ರ್ನಿನಿಂದ್ಯ ಪಾರ್ಥಂ ನಿಷಸಾದ ಭೂಮೌ ।
ಪ್ರಾಯೋಪವಿಷ್ಟಃ ಶರಸಂಸ್ತರೇ ಹರಿಂ
ಧ್ಯಾಯನ್ ನಿನಿಂದನ್ನಸುರಪ್ರವೇಶಾತ್ ॥೧೦೮॥

ಭೂರಿಶ್ರವ ತನ್ನ ಕತ್ತಿ ಎತ್ತಿದ್ದ ಬಾಹು ಕಡಿದು ಹೋದಾಗ ಅರ್ಜುನನನ್ನು ನಿಂದಿಸಿ ನೆಲದ ಮೇಲೆ ಕುಳಿತ. ಅಸುರಾವೇಶದಿಂದ ಶ್ರೀಕೃಷ್ಣನನ್ನು ನಿಂದಿಸುತ್ತ ಶ್ರೀಹರಿಯನ್ನು ಧ್ಯಾನಿಸುತ್ತ ಬಾಣಗಳ ಹಾಸಿನ ಮೇಲೆ ಪ್ರಾಯೋಪವೇಶಕ್ಕೆ ಕುಳಿತ.

ಹಿಂದೆ ಶಿನಿ ದೇವಕೀಸ್ವಯಂವರದಲ್ಲಿ ಎಲ್ಲ ಕ್ಷತ್ರಿಯರನ್ನೂ ಗೆದ್ದು ದೇವಕಿಯನ್ನು ವಸುದೇವನಿಗಾಗಿ ರಥದಲ್ಲಿ ಏರಿಸಿದಾಗ ಸೋಮದತ್ತ ತಡೆದ. ಆಗ ಅವನನ್ನು ಶಿನಿ ಪರಾಭವಗೊಳಿಸಿ ನೆಲದಲ್ಲಿ ಕೆಡವಿ ಕೂದಲಲ್ಲಿ ಹಿಡಿದು ಎದೆಗೆ ಕಾಲಿಂದ ಒದ್ದು 'ಬದುಕಿಕೊಳ್ಳು ಹೋಗು' ಎಂದು ಬಿಟ್ಟಿದ್ದ. ಇದಕ್ಕೆ ಪ್ರತೀಕಾರ ಮಾಡುವುದಕ್ಕೆ ಸೋಮದತ್ತ ಶಿವನನ್ನು ಆರಾಧಿಸಿ 'ಶಿನಿಯ ಮಗನನ್ನು ಕೆಡವಿ ಎದೆಗೆ ಒದೆಯಬಲ್ಲ ಒಬ್ಬ ಮಗನನ್ನು ಕೊಡು' ಎಂದು ಬೇಡಿದ. ಶಿವ 'ಶಿನಿಯ ಮೊಮ್ಮಗನನ್ನು ನಿನ್ನ ಮಗ ಕೆಡವಿ ಕಾಲಿಂದ ತುಳಿಯುತ್ತಾನೆ!' ಎಂದು ವರ ನೀಡಿದ. ಅದರಿಂದ ಸೋಮದತ್ತನ ಮಗನಾದ ಭೂರಿಶ್ರವ ಶಿನಿಯ ಮೊಮ್ಮಗನಾದ ಸಾತ್ಯಕಿಯನ್ನು ಕೆಡವಿ ಎದೆಗೆ

ಮೆಟ್ಟಿದ್ದಾನೆ. ಆ ಒಂದು ದಿನದ ಮಟ್ಟಿಗೆ ಸಾತ್ಯಕಿಗೆ ಸರ್ವಜಯ ವರವನ್ನು ಕೃಷ್ಣ ಕೊಟ್ಟಿದ್ದರೂ ಭೂರಿಶ್ರವ ಸಾತ್ಯಕಿ ನಿಗ್ರಹಕ್ಕಾಗಿ ಶಿವವರದಿಂದ ಹುಟ್ಟಿದವನೆಂದು ಸರ್ವಜ್ಞನಾದ ಕೃಷ್ಣನಿಗೆ ಗೊತ್ತಿದ್ದುದರಿಂದ ಭೂರಿಶ್ರವನನ್ನು ಹೊರತು ಸರ್ವರನ್ನೂ ಸಾತ್ಯಕಿ ಗೆಲ್ಲಲಿ ಎಂದೇ ವರ ನೀಡಿದ್ದ. ಈ ಅಂಶ ಮಹಾಭಾರತದಲ್ಲಿ (ದ್ರೋಣ ೧೪೫.೨೫) ಕಂಡುಬರುತ್ತದೆ. ಜನಾರ್ದನೀಯದಲ್ಲಿಯೂ ಪ್ರಮಾಣ ಸಂಗ್ರಹದಲ್ಲಿಯೂ ಉದ್ಧೃತವಾಗಿದೆ.

ಭೂರಿಶ್ರವ ಅರ್ಜುನನನ್ನು ನಿಂದಿಸಿದ. ತನಗೆ ಅದೃಶ್ಯನಾಗಿ ದೂರದಲ್ಲಿ ನಿಂತು ಹೊಡೆದುದು ಅಧರ್ಮ. ತಾನು ಇನ್ನೊಬ್ಬರೊಡನೆ ಹೋರಾಡುತ್ತಿದ್ದಾಗ ತನ್ನ ಮೇಲೆ ಆಕ್ರಮಣ ಮಾಡಿದ್ದೂ ಅಧರ್ಮ. ಈ ಅಧರ್ಮ ಕಾರ್ಯಕ್ಕೆ ಕೃಷ್ಣನ ಒಪ್ಪಿಗೆ ಇದೆ ಎಂದರೆ ಮಾನವನೇ ಆದ ಶ್ರೀಕೃಷ್ಣನೂ ಅವನ ಕಡೆಯ ಎಲ್ಲ ಯಾದವರೂ ಅಧರ್ಮಿಗಳೆ. ಅರ್ಜುನ ವಸ್ತುತಃ ದ್ರೋಣ ಕೃಪರಿಂದಲೂ ಸಾಕ್ಷಾತ್ ಶಿವ ಇಂದ್ರಾದಿ ದೇವತೆಗಳಿಂದಲೂ ಅಸ್ತ್ರೋಪದೇಶ ಪಡೆದವನು. ಅಂಥವನು ಅಧರ್ಮ ಮಾಡಲು ಕೃಷ್ಣನ ಪ್ರೇರಣೆ ಕಾರಣ ಎಂದು ಅಸುರಾವೇಶದಿಂದ ನಿಂದಿಸಿದ. ಸ್ವತಃ ಭಕ್ತನೇ ಆದ್ದರಿಂದ ಹರಿಧ್ಯಾನ ಮಾಡುತ್ತ ಬಾಣಗಳ ಹಾಸಿಗೆ ಮೇಲೆ ಪ್ರಾಯೋಪವೇಶ ವ್ರತ ತೊಟ್ಟುಕುಳಿತ.

ಗತೇಽಸುರಾವೇಶ ಉತಾತಿಭಕ್ತ್ಯಾ
ಧ್ಯಾಯತ್ಯಮುಷ್ಮಿನ್ ಗರುಡಧ್ವಜಂ ತಮ್ ।
ಶೈನೇಯ ಉತ್ಥಾಯ ನಿವಾರ್ಯಮಾಣಃ
ಕೃಷ್ಣಾರ್ಜುನಾದ್ಯೈರಹರಚ್ಛಿರೋಽಸ್ಯ ॥೧೦೯॥

ಅಸುರಾವೇಶ ಹೋದ ಬಳಿಕ ಒಳ್ಳೆಯ ಭಕ್ತಿಯಿಂದಲೆ ಭೂರಿಶ್ರವ ಶ್ರೀಕೃಷ್ಣನನ್ನು ಧ್ಯಾನಿಸುತ್ತಿದ್ದಾಗ ಸಾತ್ಯಕಿ ಎದ್ದು, ಶ್ರೀಕೃಷ್ಣ ಅರ್ಜುನ ಮುಂತಾದವರು ತಡೆಯುತ್ತಿದ್ದಂತೆಯೆ, ಭೂರಿಶ್ರವನ ತಲೆಯನ್ನು ಕಡಿದುಹಾಕಿದ.

ಭೂರಿಶ್ರವ ನಿಂದಿಸಿದಾಗ ಅರ್ಜುನನೆಂದ, 'ನನಗಾಗಿ ಯುದ್ಧಮಾಡುತ್ತ ಅಪಾಯ ಸ್ಥಿತಿಯಲ್ಲಿದ್ದ ನನ್ನ ಶಿಷ್ಯನಾದ ಸಾತ್ಯಕಿಯನ್ನು ನಾನು ಕಾಪಾಡದಿದ್ದರೆ ತಪ್ಪಾಗುತ್ತದೆ. ಯುದ್ಧದಲ್ಲಿ ಒಬ್ಬನೆ ಇನ್ನೊಬ್ಬರೊಡನೆ ಹೋರಾಡಬೇಕೆಂದು ನಿಯಮ ಮಾಡಲು ಶಕ್ಯವಿಲ್ಲ. ಅದರಿಂದ ನಾನು ಅದೃಶ್ಯನಾಗಿಯಾದರೂ ನಿನ್ನನ್ನು ಹೊಡೆಯಬೇಕಾಯಿತು.

ನೀನು ಕೃಷ್ಣನನ್ನೂ ನನ್ನನ್ನೂ ತಿಳಿದು ತಿಳಿದು ನಿಂದಿಸುವಿ. ನಾವೆಂದೂ

ಯುದ್ಧ ಧರ್ಮವನ್ನು ಉಲ್ಲಂಘಿಸುವುದಿಲ್ಲ. ಒಬ್ಬ ಸಾತ್ಯಕಿ ಬಹುಮಂದಿ ವೀರರೊಡನೆ ಹೋರಾಡಿ ಆಯಾಸಗೊಂಡಿದ್ದಾಗ ನೀನು ಅವನೊಡನೆ ಸೆಣಸಾಡಿ ಗೆದ್ದೆನೆಂದು ತಿಳಿದುದು ಸರಿಯೆ? ನಿರಾಯುಧನಾದ ಸಾತ್ಯಕಿಯ ತಲೆ ಕಡಿಯಲು ನೀನು ಖಡ್ಗ ಎತ್ತಿದ್ದು ಸರಿಯೆ? ಅಭಿಮನ್ಯುವಿನ ವಧೆ ಮಾಡುವಾಗ ನಿಮಗೆ ಈ ಧರ್ಮಪ್ರಜ್ಞೆ ಎಲ್ಲಿಗೆ ಹೋಗಿತ್ತು?' ಈಗ ಭೂರಿಶ್ರವನಿಗೆ ಅಸುರಾವೇಶ ಕಳೆದು ಜ್ಞಾನೋದಯವಾಯಿತು. ಕೃಷ್ಣಾರ್ಜುನರನ್ನು ತಲೆಬಾಗಿ ನಮಿಸಿ ಮೌನವಾಗಿ ತಲೆತಗ್ಗಿಸಿ ಕುಳಿತ. ಅರ್ಜುನನೆಂದ 'ನಿನಗೆ ಪುಣ್ಯಲೋಕ ಲಭಿಸಲಿ' ಶ್ರೀಕೃಷ್ಣನೆಂದ, 'ನಿನಗೆ ಸಾರೂಪ್ಯಮೋಕ್ಷ ನೀಡುವೆನು'.

ಅಷ್ಟರಲ್ಲಿ ಸಾತ್ಯಕಿ ಭೂರಿಶ್ರವನ ಶಿರಶ್ಛೇದಗೈದ. ಅಂತ್ಯಕಾಲದಲ್ಲಿ ಶುದ್ಧಭಕ್ತಿಯಿಂದ ಶ್ರೀಕೃಷ್ಣನನ್ನು ಧ್ಯಾನಿಸುತ್ತ ಶಸ್ತ್ರದಿಂದ ಮರಣ ಹೊಂದಿದ್ದರಿಂದ ಭೂರಿಶ್ರವನಿಗೆ ಮುಕ್ತಿದೊರಕಿತು.

ನಿರಾಯುಧನಾಗಿ ಪ್ರಾಯೋಪವೇಶ ವ್ರತತೊಟ್ಟು ಕುಳಿತ ಒಬ್ಬ ಧಾರ್ಮಿಕನಾದ ಕ್ಷತ್ರಿಯ ವೀರನನ್ನು ಶಿರಶ್ಛೇದ ಮಾಡಿದ್ದು ಅಧರ್ಮವಲ್ಲವೆ? ಎಂದು ಎಲ್ಲರೂ ಆಕ್ಷೇಪಿಸಿದಾಗ ಸಾತ್ಯಕಿ ಹೇಳುತ್ತಾನೆ. ಈತ ನಿರಾಯುಧನಾದ ನನ್ನನ್ನು ಕೊಲ್ಲಲು ಯತ್ನಿಸಿದುದು ಸರಿಯೆ? ಬಾಲಕ ಅಭಿಮನ್ಯುವನ್ನು ಎಲ್ಲರೂ ಸೇರಿ ಹೊಡೆದುದು ಸರಿಯೆ? ನಾನು ಪ್ರತಿಜ್ಞೆ ಮಾಡಿದ್ದೇನೆ. 'ನನ್ನನ್ನು ಕೆಡವಿ ಕಾಲಿಂದ ಮೆಟ್ಟುವವನನ್ನು ಅವನು ಮುನಿವ್ರತ ಧಾರಿಯಾದರೂ ಸರಿಯೆ ಕೊಲ್ಲದೆ ಬಿಡಲಾರೆ' ಎಂದು. ಈ ನನ್ನ ಪ್ರತಿಜ್ಞಾಪಾಲನೆಗಾಗಿ ಈತನನ್ನು ಕೊಂದೆನೆನ್ನುತ್ತಾನೆ.

ಕುದುರೆಗಳ ಕಾಲು ತೊಳೆದ ಕೃಷ್ಣ

ತದಾ ಸ್ವಕೀಯಂ ರಥಮೇತದರ್ಥಂ
ಕ್ಲೃಪ್ತಂ ದದೌ ಸಾತ್ಯಕಯೇ ಸಸೂತಮ್ ।
ಕೃಷ್ಣೋಽಥ ಪಾರ್ಥಸ್ಯ ಹಯಾಸ್ತ್ವಪಾಕರ್ದಿತಾ
ಸ್ತದಾಕಸೃಜದ್ ವಾರುಣಾಸ್ತ್ರಂ ಸ ಪಾರ್ಥಃ ॥೧೧೦॥

ಸಾತ್ಯಕಿಗಾಗಿಯೆ ಸಿದ್ಧಗೊಳಿಸಲ್ಪಟ್ಟ ತನ್ನ ರಥವನ್ನು ಶ್ರೀಕೃಷ್ಣ ಆಗ ಸಾರಥಿ ಸಮೇತವಾಗಿ ಸಾತ್ಯಕಿಗೆ ಕೊಟ್ಟ. ಆಗ ಅರ್ಜುನನ ಕುದುರೆಗಳು ಬಾಯಾರಿದ್ದುವು. ಅರ್ಜುನ ವಾರುಣಾಸ್ತ್ರವನ್ನು ಪ್ರಯೋಗಿಸಿದ.

ಶಕ್ತ್ಯಾಯುಧಧಾರಿಯಾದ ಕರ್ಣನೊಡನೆ ಇನ್ನು ಸಾತ್ಯಕಿ ಹೋರಾಡಬೇಕು. ಅದಕ್ಕೆ ತನ್ನ ದಿವ್ಯರಥವೇ ಅವನಿಗೆ ಬೇಕೆಂದು ಕೃಷ್ಣ ಕೊಟ್ಟ

ಅರ್ಜುನ ಕೃಷ್ಣನನ್ನು ಕೇಳಿದ, 'ಕುದುರೆಗಳಿಗೆ ಆಯಾಸವಾಗಿದೆ. ಜಯದ್ರಥನಿನ್ನೂ ದೂರದಲ್ಲಿದ್ದಾನೆ. ಏನು ಮಾಡಲಿ?' ಹೀಗೆ ಹೇಳುತ್ತ ರಥದಿಂದ ಇಳಿದ. ಒಡನೆ ಎಲ್ಲ ಸೈನಿಕರೂ ಅವನನ್ನು ಮುತ್ತಿದರು. ಅರ್ಜುನ ಒಬ್ಬನೆ ಎಲ್ಲರನ್ನೂ ತಡೆದ. ಕೃಷ್ಣ ಕುದುರೆಗಳ ಮೈಯಿಂದ ಬಾಣಗಳನ್ನು ತೆಗೆದು ಮೈಸವರಿ ನೋವು ಕಳೆದ. ಕುದುರೆಗಳು ಬಾಯಾರಿವೆ ಎಂದ.

ತೇನೈವ ತೀರ್ಥಂ ಪರಮಂ ಚಕಾರ
ತಥಾಽಶ್ವಶಾಲಾಮಪಿ ಬಾಣರೂಪಾಮ್ ।
ತತೋ ವಿಮುಚ್ಯಾತ್ರ ಹಯಾನಪಾಯಯ-
ದ್ಧರಿಸ್ತದಾ ವಾಸವಿರಾರ್ದಯತ್ ಪರಾನ್ ॥೧೧೧॥

ವಾರುಣಾಸ್ತ್ರದಿಂದ ಅರ್ಜುನ ಉತ್ತಮವಾದ ಜಲಾಶಯವನ್ನು ನಿರ್ಮಿಸಿದ. ಮತ್ತು ಬಾಣರೂಪದ ಅಶ್ವಶಾಲೆಯನ್ನೂ ನಿರ್ಮಿಸಿದ. ಶ್ರೀಕೃಷ್ಣ ಕುದುರೆಗಳನ್ನು ರಥದಿಂದ ಬಿಚ್ಚಿ ನೀರು ಕುಡಿಸಿದ. ಅರ್ಜುನ ಆಗ ನೆಲದ ಮೇಲೆ ನಿಂತೇ ಶತ್ರುಗಳೊಡನೆ ಹೋರಾಡುತ್ತಲೇ ಇದ್ದ.

ಅರ್ಜುನ ವಾರುಣಾಸ್ತ್ರದಿಂದ ಭೂಮಿಯನ್ನು ಭೇದಿಸಿ ವಾಜಿಪಾನ ಸರೋವರವನ್ನು ನಿರ್ಮಿಸಿದ. ಅದರ ಸುತ್ತಲೂ ಬಾಣಗಳಿಂದ ಗೋಡೆಗಳನ್ನೂ ಕಂಬಗಳನ್ನೂ ಮಾಡನ್ನೂ ನಿರ್ಮಿಸಿ ಬಾಣಾಗಾರವನ್ನೂ ಮಾಡಿಕೊಟ್ಟ. ಮಯನಿರ್ಮಿತವಾದ ಭವನದಂತಿದ್ದ ಈ ಅಶ್ವಶಾಲೆಯನ್ನು ನೋಡಲು ನಾರದರು ಕೆಳಗಿಳಿದು ಬಂದರು. (ದ್ರೋಣ ೯೯.೬೨)

ಯುಯೋಜ ಕೃಷ್ಣಸ್ತುರಗಾನ್ ರಥೇ ಪುನ-
ರ್ಗತಶ್ರಮಾನುದ್ಧೃತಸಾಯಕಾನ್ ಪ್ರಭುಃ ।
ಪ್ರಚೋದಿತೇ ತೇನ ರಥೇ ಸ್ಥಿತಃ ಪುನ-
ಸ್ತಥೈವ ಬೀಭತ್ಸುರರೀನಯೋಧಯತ್ ॥೧೧೨॥

ಪ್ರಭು ಶ್ರೀಕೃಷ್ಣ ಕುದುರೆಗಳ ಮೈಯಲ್ಲಿ ನೆಟ್ಟಿದ್ದ ಬಾಣಗಳನ್ನು ಕಿತ್ತು ತೆಗೆದು ಹಾಕಿ ಮೈದಡವಿ ಅವುಗಳ ಆಯಾಸವನ್ನು ಪರಿಹರಿಸಿ ತಿರುಗಿ ರಥಕ್ಕೆ ಕಟ್ಟಿದ. ಬಳಿಕ ಅವನು ರಥವನ್ನು ನಡೆಸಲು ಸಿದ್ಧನಾದಾಗ ಅರ್ಜುನ ಅದನ್ನೇರಿ ಪುನಃ ಹಿಂದಿನಂತೆಯೆ ಜಯದ್ರಥನ ಕಡೆಗೆ ಮುನ್ನುಗ್ಗುತ್ತ ಶತ್ರುಗಳೊಡನೆ ಹೋರಾಡಿದ.

ಭೀಮಸೇನ ದ್ರೋಣರ ಸಮರ

ಶಿನಿಪ್ರವೀರೇ ತು ಗತೇ ಯುಧಿಷ್ಠಿರಃ
ಪುನಶ್ಚ ಚಿಂತಾಕುಲಿತೋ ಬಭೂವ ಹ ।

ಜಗಾದ ಭೀಮಂ ಚ ನ ಗಾಂಡಿವಧ್ವನಿಃ
ಸಂಶ್ರೂಯತೇ ಪಾಂಚಜನ್ಯಸ್ಯ ರಾವಃ ॥೧೧೩॥

ಸಾತ್ಯಕಿ ಅತ್ತ ಹೋದ ಬಳಿಕ ಪುನಃ ಧರ್ಮರಾಜ ಚಿಂತಾಗ್ರಸ್ತನಾದ. ಭೀಮನಿಗೆ ಹೇಳಿದ 'ಗಾಂಡೀವ ಧ್ವನಿ ಇಲ್ಲ. ಪಾಂಚಜನ್ಯ ಧ್ವನಿ ಮಾತ್ರ ಕೇಳಿ ಬರುತ್ತಿದೆ.'

ಮಯಾ ನಿಯುಕ್ತಶ್ಚ ಗತಃ ಸ ಸಾತ್ಯಕಿ-
ರ್ಭಾರಂ ಚ ತಸ್ಯಾಧಿಕಮೇವ ಮನ್ಯೇ ।
ತತ್ ಪಾಹಿ ಪಾರ್ಥಂ ಯುಯುಧಾನಮೇವ
ತ್ವಂ ಭೀಮ ಗತ್ವಾ ಯದಿ ಜೀವತಸ್ತೌ ॥೧೧೪॥

'ನನ್ನ ಆದೇಶ ಪಡೆದು ಸಾತ್ಯಕಿ ಅರ್ಜುನನಿಗೆ ಸಹಾಯ ಮಾಡಲು ಹೋಗಿದ್ದಾನೆ. ಆದರೆ ಆತನಿಗೆ ಆ ಕಾರ್ಯಭಾರ ಪ್ರಾಯಃ ಅಧಿಕವಾಯಿತೆಂದು ನನಗೆ ತೋರುತ್ತಿದೆ. ಅದರಿಂದ, ಭೀಮ! ನೀನೆ ಹೋಗಿ ಅರ್ಜುನನನ್ನೂ ಸಾತ್ಯಕಿಯನ್ನೂ ಅವರು ಬದುಕಿದ್ದರೆ ಕಾಪಾಡು.'

ಇತೀರಿತಃ ಪ್ರಾಹ ವೃಕೋದರಸ್ತಂ
ನ ರಕ್ಷಿತಂ ವಾಸುದೇವೇನ ಪಾರ್ಥಮ್ ।
ಬ್ರಹ್ಮೇಶಾನಾವಪಿ ಜೇತುಂ ಸಮರ್ಥೌ
ಕಿಂ ದ್ರೌಣಕರ್ಣಾದಿಧನುರ್ಭೃತೋಽತ್ರ ॥೧೧೫॥

ಹೀಗೆ ಧರ್ಮರಾಜ ಹೇಳಿದಾಗ ಭೀಮ ಅವನಿಗೆ ಹೇಳಿದ, 'ಕೃಷ್ಣನಿಂದ ರಕ್ಷಿತನಾದ ಅರ್ಜುನನನ್ನು ಬ್ರಹ್ಮರುದ್ರರೂ ಕೂಡ ಗೆಲ್ಲಲು ಸಮರ್ಥರಲ್ಲ. ಇನ್ನು ಈ ಅಶ್ವತ್ಥಾಮ ಕರ್ಣ ಮುಂತಾದ ಧನುರ್ಧಾರಿಗಳ ಬಗ್ಗೆ ಏನು ಹೇಳಬೇಕು?

ಅತೋ ಭಯಂ ನಾಸ್ತಿ ಧನಂಜಯಸ್ಯ
ನ ಸಾತ್ಯಕೇಶ್ಚಾಪಿ ಹರೇಃ ಪ್ರಸಾದಾತ್ ।
ರಕ್ಷ್ಯಸ್ತ್ವಮೇವಾತ್ರ ಮತೋ ಮಮಾದ್ಯ
ದ್ರೋಣೋ ಹ್ಯಯಂ ಯತತೇ ತ್ವಾ ಗೃಹೀತುಮ್ ॥೧೧೬॥

ಅದರಿಂದ ಅರ್ಜುನನಿಗೂ ಸಾತ್ಯಕಿಗೂ ಕೃಷ್ಣನ ಅನುಗ್ರಹದಿಂದ ಏನೂ ಭಯವಿಲ್ಲ. ನಿನ್ನ ರಕ್ಷಣೆಯೊಂದೇ ನಾನು ಮಾಡಬೇಕಾಗಿರುವ ಕಾರ್ಯವೆಂದು ನಾನು ಈಗ ಭಾವಿಸಿದ್ದೇನೆ. ಏಕೆಂದರೆ ದ್ರೋಣ ನಿನ್ನನ್ನು ಸೆರೆ ಹಿಡಿಯಲು ಯತ್ನಿಸುತ್ತಿದ್ದಾನೆ.

ಇತೀರಿತಃ ಪ್ರಾಹ ಯುಧಿಷ್ಠಿರಸ್ತಂ
ನ ಜೀವಮಾನೇ ಯುಧಿ ಮಾಂ ಘಟೋತ್ಕಚೇ ।
ಧೃಷ್ಟದ್ಯುಮ್ನೇ ಚಾಸ್ತ್ರವಿದಾಂ ವರಿಷ್ಠೇ
ದ್ರೋಣೋ ವಶಂ ನೇತುಮಿಹ ಪ್ರಭುಃ ಕ್ವಚಿತ್ ॥೧೧೭॥

ಭೀಮ ಹೀಗೆ ಹೇಳಿದಾಗ ಧರ್ಮರಾಜನೆಂದ, 'ಘಟೋತ್ಕಚನೂ ಅಸ್ತ್ರವೇತ್ತರಲ್ಲಿ ಅಗ್ರಗಣ್ಯನಾದ ಧೃಷ್ಟದ್ಯುಮ್ನನೂ ಬದುಕಿರುವಾಗ ದ್ರೋಣ ನನ್ನನ್ನು ವಶಪಡಿಸಿಕೊಳ್ಳಲು ಎಂದೂ ಶಕ್ತನಲ್ಲ.

ಯದಿ ಪ್ರಿಯಂ ಕರ್ತುಮಿಹೇಚ್ಛಸಿ ತ್ವಂ
ಮಮ ಪ್ರಯಾಹ್ಯಾಶುಚ ಪಾರ್ಥಸಾತ್ಯಕೀ ।
ರಕ್ಷಸ್ವ ಸಂಜ್ಞಾಮಪಿ ಸಿಂಹನಾದಾತ್
ಕುರುಷ್ವ ಮೇ ಪಾರ್ಥಶೈನೇಯದೃಷ್ಟೌ ॥೧೧೪॥

'ನೀನು ನನಗೆ ಇಷ್ಟವಾದುದನ್ನು ಮಾಡಲು ಬಯಸುವಿಯಾದರೆ ಅರ್ಜುನ ಸಾತ್ಯಕಿಯರ ಬಳಿಗೆ ಹೋಗು. ಅವರನ್ನು ರಕ್ಷಿಸು. ಅವರನ್ನು ಕಂಡೊಡನೆ ಸಿಂಹನಾದದಿಂದ ಅದರ ಬಗ್ಗೆ ನನಗೆ ಸೂಚನೆ ನೀಡು.

ತಥಾ ಹತೇ ಚೈವ ಜಯದ್ರಥೇ ಮೇ
ಕುರುಷ್ವ ಸಂಜ್ಞಾಮಿತಿ ತೇನ ಚೋಕ್ತಃ ।
ಭೀಮಸ್ತು ಹೈಡಿಂಬಮಮುಷ್ಯ ರಕ್ಷಣೇ
ವ್ಯಧಾಚ್ಚ ಸೇನಾಪತಿಮೇವ ಸಮ್ಯಕ್ ॥೧೧೯॥

'ಹಾಗೇ ಜಯದ್ರಥ ಹತನಾದಾಗಲೂ ನನಗೆ ಸೂಚನೆ ನೀಡು' ಹೀಗೆ ಧರ್ಮರಾಜ ಹೇಳಿದಾಗ ಭೀಮ ಅವನ ರಕ್ಷಣೆಯ ಕಾರ್ಯದಲ್ಲಿ ಘಟೋತ್ಕಚನನ್ನೂ ಸೇನಾಪತಿ ಧೃಷ್ಟದ್ಯುಮ್ನನನ್ನೂ ಚೆನ್ನಾಗಿ ನೇಮಿಸಿದ.

ಸ ಚಾಽಹ ಸೇನಾಪತಿರತ್ರ ಭೀಮಂ
ಪ್ರಯಾಹಿ ತೌ ಯತ್ರ ಚ ಕೇಶವಾರ್ಜುನೌ ।
ನ ಜೀವಮಾನೇ ಮಯಿ ಧರ್ಷಿತುಂ ಕ್ಷಮೋ
ದ್ರೋಣೋ ನೃಪಂ ಮೃತ್ಯುರಹಂ ಚ ತಸ್ಯ ॥೧೨೦॥

ಸೇನಾಪತಿ ಧೃಷ್ಟದ್ಯುಮ್ನನೂ ಭೀಮನಿಗೆ ಹೇಳಿದ. 'ನೀನು ಕೃಷ್ಣಾರ್ಜುನರಿರುವಲ್ಲಿಗೇ ಹೋಗು. ನಾನು ಬದುಕಿರುವಾಗ ನನ್ನ ಬಳಿ ಇರುವ ಯುಧಿಷ್ಠಿರನನ್ನು ಬಲಾತ್ಕರಿಸಲು ದ್ರೋಣ ಸಮರ್ಥನಾಗುವುದಿಲ್ಲ. ಏಕೆಂದರೆ ನಾನು ಅವನಿಗೆ ಮೃತ್ಯು.

ಇತಿ ಬ್ರುವಾಣೇ ಪ್ರಣಿಧಾಯ ಭೀಮಃ
ಪುನಃಪುನಸ್ತಂ ನೃಪತಿಂ ಗದಾಧರಃ ।
ಯಯೌ ಪರಾನೀಕಮಧಿಜ್ಯಧನ್ವಾ
ನಿರಂತರಂ ಪ್ರವಮನ್ ಬಾಣಪೂಗಾನ್ ॥೧೨೧॥

ಹೀಗೆ ಧೃಷ್ಟದ್ಯುಮ್ನ ಮತ್ತೆ ಮತ್ತೆ ಹೇಳಿದಾಗ ಗದಾಧಾರಿ ಭೀಮ ಧರ್ಮರಾಜನನ್ನು

ಅವನ ರಕ್ಷಣೆಯಲ್ಲಿರಿಸಿ ಬಿಲ್ಲಿಗೆ ಹೆದೆಯೇರಿಸಿ ಒಂದೇ ಸವನೆ ಬಾಣ ಸಮೂಹಗಳನ್ನು ಚೆಲ್ಲುತ್ತ ಶತ್ರು ಸೈನ್ಯವನ್ನು ಹೊಕ್ಕ.

ಭೀಮ ಬ್ರಾಹ್ಮಣರಿಗೆ ಸತ್ಕಾರ ನೀಡಿ ಪ್ರದಕ್ಷಿಣೆ ಮಾಡಿ ಅಗ್ನಿ, ಗೋವು, ಬಂಗಾರ, ದೂರ್ವೆ, ಗೋರೋಚನ, ಹಾಲು, ಅಕ್ಷತೆಕಾಳು, ಮೊಸರು ಈ ಮಂಗಲಾಷ್ಟಕವನ್ನು ಸ್ಪರ್ಶಿಸಿ ಮಧುಪಾನಗೈದು ಅನುಕೂಲ ವಾಯುವಿನಿಂದ ವಿಜಯದ ಸೂಚನೆ ಪಡೆದು ಕವಚಧರಿಸಿ ಹೊರಟ. ಆಗಲೆ ಇನ್ನೊಮ್ಮೆ ಪಾಂಚಜನ್ಯ ಮೊಳಗಿತು. ಧರ್ಮರಾಜ ಭೀಮನನ್ನು ಅವಸರಪಡಿಸಿದ.

ನ್ಯವಾರಯತ್ ತಂ ಶರವರ್ಷಧಾರೋ
ದ್ರೋಣೋ ವಚಶ್ಚೇದಮುವಾಚ ಭೀಮಮ್ ।
ಶಿಷ್ಯಸ್ನೇಹಾದ್ ವಾಸವಿಃ ಸಾತ್ಯಕಿಶ್ಚ
ಮಯಾ ಪ್ರಮುಕ್ತೌ ಭೃಶಮಾನತೌ ಮಯಿ ॥೧೨೨॥

ಭೀಮನನ್ನು ದ್ರೋಣ ಬಾಣಗಳ ಮಳೆಗರೆಯುತ್ತ ತಡೆದ. ಭೀಮನಿಗೆ ಈ ಮಾತನ್ನು ಹೇಳಿದ. "ಶಿಷ್ಯ ವಾತ್ಸಲ್ಯದಿಂದ ನಾನು ಅರ್ಜುನನನ್ನೂ ಸಾತ್ಯಕಿಯನ್ನೂ ಬಿಟ್ಟೆ. ಏಕೆಂದರೆ ಅವರು ನನ್ನಲ್ಲಿ ಬಹಳ ವಿನೀತರಾಗಿದ್ದಾರೆ.

ಸ್ವೀಯಾ ಪ್ರತಿಜ್ಞಾಽಪಿ ಹಿ ಸೈಂಧವಸ್ಯ
ಗುಪ್ತೌ ಮಯಾ ಪಾರ್ಥಕೃತೇ ವಿಸೃಷ್ಟಾ ।
ದಾಸ್ಯೇ ನ ತೇ ಮಾರ್ಗಮಹಂ ಕಥಂಚಿದ್
ಪಶ್ಯಾಸ್ತ್ರವೀರ್ಯಂ ಮಮ ದಿವ್ಯಮದ್ಭುತಮ್ ॥೧೨೩॥

ಸೈಂಧವನ ರಕ್ಷಣೆಯ ವಿಷಯದಲ್ಲಿ ನಾನು ಮಾಡಿದ್ದ ಪ್ರತಿಜ್ಞೆಯನ್ನೂ ಕೂಡ ಅರ್ಜುನನಿಗಾಗಿ ಬಿಟ್ಟುಬಿಟ್ಟೆ. ಆದರೆ ನಿನಗೆ ನಾನು ಯಾವ ರೀತಿಯಿಂದಲೂ ದಾರಿ ಕೊಡಲಾರೆ. ನನ್ನ ಅಲೌಕಿಕ ಅದ್ಭುತ ಅಸ್ತ್ರ ಸಾಮರ್ಥ್ಯವನ್ನು ನೋಡು.

ಇತ್ಯುಕ್ತವಾಕ್ಯಃ ಸ ಗದಾಂ ಸಮಾದದೇ
ಚಿಕ್ಷೇಪ ತಾಂ ದ್ರೋಣರಥಾಯ ಭೀಮಃ ।
ಉವಾಚ ಚಾಹಂ ಪಿತೃವನ್ಮಾನಯೇ ತ್ವಾಂ
ಸದಾ ಮೃದುಸ್ತ್ವಾಂ ಪ್ರತಿ ನಾನ್ಯಥಾ ಕ್ವಚಿತ್ ॥೧೨೪॥

ದ್ರೋಣ ಹೀಗೆ ಹೇಳಿದಾಗ ಭೀಮ ಗದೆಯನ್ನೆತ್ತಿಕೊಂಡ. ಅದನ್ನು ದ್ರೋಣನ ರಥಕ್ಕೆ ಎಸೆದ. ಮತ್ತು ಹೇಳಿದ- 'ನಾನು ನಿನ್ನನ್ನು ತಂದೆಯಂತೆ ಕಾಣುತ್ತೇನೆ. ಅದರಿಂದ ನಿನ್ನೆದುರಿನಲ್ಲಿ ನಾನು ಸದಾ ಮೃದುವಾಗಿ ಹೋರಾಡುತ್ತೇನೆ ಹೊರತು ಎಂದೂ ಕಠಿಣವಾಗಿ ಹೋರಾಡುವುದಿಲ್ಲ.

ಅರ್ಜುನನಂತೆಯೆ ಭೀಮನೂ ತನ್ನನ್ನು ಗೌರವಿಸಿ ಹಾಗೇ ಹೊರಟುಹೋಗುತ್ತಾನೆ ಬಿಡಬಾರದು ಎಂದುಕೊಂಡ, ದ್ರೋಣ. ಭೀಮನೆಂದ, ನೀನು ಬಿಟ್ಟಿದ್ದರಿಂದ ಅವರು ಹೋದುದಲ್ಲ. ಇಂದ್ರನ ಸೈನ್ಯವನ್ನೂ ಅವರು ಭೇದಿಸಿ ಪ್ರವೇಶಿಸಬಲ್ಲರು ಎನ್ನುತ್ತ ಗದೆಯನ್ನೆತ್ತಿದ.

ಅಮಾರ್ದವೇ ಪಶ್ಯ ಚ ಯಾದೃಶಂ ಬಲಂ
ಮಮೇತಿ ತಸ್ಯಾಽಶು ವಿಚೂರ್ಣಿತೋ ರಥಃ ।
ಗದಾಭಿಪಾತೇನ ವೃಕೋದರಸ್ಯ
ಸಸೂತವಾಜಿಧ್ವಜಯನ್ತ್ರಕೂಬರಃ ॥೧೨೫॥

'ಮೃದುವಾಗಿ ಅಲ್ಲದಿದ್ದರೆ, ನೋಡು ನನ್ನ ಬಲ ಯಾವ ರೀತಿಯದು ಎಂದು' ಹೀಗೆ ಹೇಳಿದ ಭೀಮ. ಒಡನೆ ಭೀಮನ ಗದೆ ಏಟಿನಿಂದ ದ್ರೋಣನ ರಥ ಸಾರಥಿ ಕುದುರೆ ಧ್ವಜ ಚಕ್ರ ನೊಗಗಳಿಂದ ಸಹಿತವಾಗಿ ಪುಡಿಪುಡಿಯಾಯಿತು.

ದ್ರೋಣೋ ಗದಾಮಾಪತತೀಂ ನಿರೀಕ್ಷ್ಯ
ತ್ವವಪ್ಲುತೋ ಲಾಘವತೋ ಧರಾತಲೇ ।
ತದೈವ ದುರ್ಯೋಧನಯಾಪಿತಂ ರಥಂ
ಪರಂ ಸಮಾಸ್ಥಾಯ ಶರಾನ್ ವವರ್ಷ ಹ ॥೧೨೬॥

ಭೀಮನ ಗದೆ ತನ್ನೆಡೆಗೆ ಬರುತ್ತಿದ್ದುದನ್ನು ಕಂಡೇ ದ್ರೋಣ ತ್ವರಿತದಿಂದ ನೆಲದಲ್ಲಿ ಹಾರಿ ನಿಂತಿದ್ದ. ತಕ್ಷಣವೆ ದುರ್ಯೋಧನ ಕಳಿಸಿದ ಇನ್ನೊಂದು ರಥವನ್ನೇರಿ ಬಾಣಗಳ ಮಳೆಗರೆದ.

ಶರೈಸ್ತದೀಯೈಃ ಪರಮಾಸ್ತ್ರಮಂತ್ರಿತೈಃ
ಪ್ರವೃಷ್ಯಮಾಣೋ ಜಗದೀರಣಾತ್ಮಜಃ ।
ಶಿರೋ ನಿಧಾಯಾಽಶು ಪುರೋ ವೃಷೋ ಯಥಾ
ತಮಭ್ಯಯಾದೇವ ರಥಾದವಪ್ಲುತಃ ॥೧೨೭॥

ಮಹಾ ಅಸ್ತ್ರಮಂತ್ರಗಳಿಂದ ಅಭಿಮಂತ್ರಿತವಾದ ದ್ರೋಣನ ಬಾಣಗಳ ಮಳೆ ತನ್ನ ಮೇಲೆ ಬೀಳುತ್ತಿದ್ದಂತೆಯೆ ಭೀಮ ಬೇಗನೆ ರಥದಿಂದ ಕೆಳಗೆ ಹಾರಿ ತಲೆಯನ್ನು ಮುಂದೆ ಮಾಡಿಕೊಂಡು ಗೂಳಿಯಂತೆ ದ್ರೋಣನ ಕಡೆಗೆ ಧಾವಿಸಿದ.

ಕಣ್ಣುಮುಚ್ಚಿ ಕೈಗಳನ್ನು ಎದೆಯ ಮೇಲಿರಿಸಿಕೊಂಡು ತಲೆ ಬಗ್ಗಿಸಿಕೊಂಡು ಮಳೆಯನ್ನು ಇದಿರಿಸುತ್ತ ಮುನ್ನಡೆವ ಗೂಳಿಯಂತೆ ಭೀಮ ದ್ರೋಣ ರಥಕ್ಕೆ ಧಾವಿಸಿದ. ಅವನ ವಜ್ರಕಾಯಕ್ಕೆ ಬಾಣಗಳ ಮಳೆ, ನೀರಿನ ಮಳೆಯಂತಾಯಿತು.

ಮನೋಜವಾದೇವ ತಮಾಪ್ಯ ಭೀಮೋ
ರಥಂ ಗೃಹೀತ್ವಾಽಂಬರ ಆಕ್ಷಿಪತ್ ಕ್ಷಣಾತ್ ।
ಶಕ್ತೋಽಪ್ಯಹಂ ತ್ವಾಂ ನ ನಿಹನ್ಮಿ ಗೌರವಾ
ದಿತ್ಯೇವ ಸಂಜ್ಞಾಪಯಿತುಂ ತದಸ್ಯ ॥೧೨೮॥

ನಾನು ಶಕ್ತನಾದರೂ ಗೌರವ ಭಾವನೆಯಿಂದಲೆ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ ಎಂದು ದ್ರೋಣನಿಗೆ ತಿಳಿಸುವುದಕ್ಕಾಗಿ ಭೀಮ ಮನೋವೇಗದಿಂದ ದ್ರೋಣನ ಬಳಿಗೆ ಬಂದು ಕ್ಷಣದಲ್ಲಿ ರಥವನ್ನೆತ್ತಿ ಆಕಾಶಕ್ಕೆ ಹಾರಿಸಿದ.

ಸವಾಜಿಸೂತಃ ಸ ರಥಃ ಕ್ಷಿತೌ ಪತನ್
ವಿಚೂರ್ಣಿತೋಽಸ್ಮಾದ್ ಗುರುರಪ್ಯವಪ್ಲುತಃ ।
ತದಾ ವಿಶೋಕೋಽಸ್ಯ ರಥಂ ಸಮಾನಯತ್
ತಮಾರುಹದ್ ಭೀಮ ಉದಾರವಿಕ್ರಮಃ ॥೧೨೯॥

ಕುದುರೆ ಸಾರಥಿ ಸಹಿತವಾಗಿ ದ್ರೋಣನ ರಥ ನೆಲದಲ್ಲಿ ಬಿದ್ದು ಪುಡಿಪುಡಿಯಾಯಿತು. ಹಾಗಾಗುವುದರೊಳಗೆ ದ್ರೋಣ ನೆಲಕ್ಕೆ ಹಾರಿದ್ದ. ಆಗ ವಿಶೋಕ ಭೀಮನ ಬಳಿಗೆ ರಥವನ್ನು ತಂದ. ಮಹಾಪರಾಕ್ರಮಿ ಭೀಮ ಅದನ್ನೇರಿದ.

ನೆಲಕ್ಕೆ ಹಾರಿದ ದ್ರೋಣ ತಿರುಗಿ ಇನ್ನೊಂದು ರಥವನ್ನೇರಿದ. ಅದನ್ನೂ ಮೇಲೆ ಹಾರಿಸಿದ ಭೀಮ. ಹೀಗೆ ಎಂಟು ಬಾರಿ ದ್ರೋಣನ ರಥವನ್ನು ಹಾರಿಸಿದ ಬಳಿಕ ತನ್ನ ರಥವನ್ನೇರಿದ.

ದ್ರೋಣೋಽಪಿ ದುರ್ಯೋಧನದತ್ತಮನ್ಯಂ
ರಥಂ ಸಮಾಸ್ಥಾಯ ಯುಧಿಷ್ಠಿರಂ ಯಯೌ ।
ಗೃಹೀತುಕಾಮಂ ನೃಪತಿಂ ಪ್ರಯಾಂತಂ
ನ್ಯವಾರಯತ್ ಸಂಯತಿ ವಾಹಿನೀಪತಿಃ ॥೧೩೦॥

ದ್ರೋಣನೂ ದುರ್ಯೋಧನನಿತ್ತ ಇನ್ನೊಂದು ರಥವನ್ನೇರಿ ಯುಧಿಷ್ಠಿರನ ಕಡೆಗೆ ಹೊರಟು ಹೋದ. ಯುಧಿಷ್ಠಿರನನ್ನು ಸೆರೆ ಹಿಡಿಯಲು ಬಯಸಿದ್ದ ಆತನನ್ನು ಯುದ್ಧದಲ್ಲಿ ಧೃಷ್ಟದ್ಯುಮ್ನ ತಡೆದ.

ವಿದ್ರಾವಿತಾಂ ದ್ರೋಣಶರೈಃ ಸ್ವಸೇನಾಂ
ಸಂಸ್ಥಾಪ್ಯ ಭೂಯೋ ದ್ರುಪದಾತ್ಮಜಃ ಶರೈಃ ।
ದ್ರೋಣಂ ನಿವಾರ್ಯೈವ ಚಮೂಂ ಪರೇಷಾಂ
ವಿದ್ರಾವಯಮಾಸ ಚ ತಸ್ಯ ಪಶ್ಯತಃ ॥೧೩೧॥

ಧೃಷ್ಟದ್ಯುಮ್ನ ದ್ರೋಣನ ಬಾಣಗಳಿಂದ ಓಡಿಸಲ್ಪಡುತ್ತಿದ್ದ ತನ್ನ ಸೈನ್ಯವನ್ನು ತಡೆದುನಿಲ್ಲಿಸಿ

ಪುನಃ ಬಾಣಗಳಿಂದ ದ್ರೋಣನನ್ನು ತಡೆದು ಅವನು ನೋಡುತ್ತಿದ್ದಂತೆಯೆ ಕೌರವರ ಸೈನ್ಯವನ್ನು ಓಡಿಸಿದ.

ತಯೋರಭೂದ್ ಯುದ್ಧಮತೀವ ರೌದ್ರಂ
ಜಯೈಷಿಣೋಃ ಪಾಂಡವಧಾರ್ತರಾಷ್ಟ್ರಯೋಃ ।
ಅತ್ಯದ್ಭುತಂ ಸಂತತಬಾಣವರ್ಷ-
ಮನಾರತಂ ಸುಚಿರಂ ನಿರ್ವಿಶೇಷಮ್ ॥೧೩೨॥

ಪಾಂಡವ-ಕೌರವರ ಜಯೇಚ್ಛುಗಳಾದ ಧೃಷ್ಟದ್ಯುಮ್ನ-ದ್ರೋಣರಿಗೆ ಅತ್ಯಂತ ಭೀಕರವಾದ ಯುದ್ಧ ನಡೆಯಿತು. ಅದು ಅತ್ಯಂತ ಅದ್ಭುತವಾಗಿತ್ತು. ಸತತವಾದ ಬಾಣಗಳ ಮಳೆಯಿಂದ ಕೂಡಿದ್ದು ತಡೆಯೆ ಇಲ್ಲದೆ ಬಹುಕಾಲ ನಡೆಯಿತು. ಯಾರು ಹೆಚ್ಚು ಯಾರು ಕಡಿಮೆ ಎನ್ನಲಾಗದಂತಿತ್ತು.

ತತಃ ಪ್ರಾಯಾದ್ ಭೀಮಸೇನೋಽಮಿತೌಜಾ
ಮೃದ್ನನ್ ಶರೈಃ ಕೌರವರಾಜಸೇನಾಮ್ ।
ವಿಂದಾನುವಿಂದಪ್ರಮುಖಾ ಧಾರ್ತರಾಷ್ಟ್ರಾ-
ಸ್ತಮಾಸೇದುರ್ದ್ವಾದಶ ವೀರಮುಖ್ಯಾಃ ॥೧೩೩॥

ಆಗ ಅಮಿತ ಪರಾಕ್ರಮಿ ಭೀಮಸೇನ ಬಾಣಗಳಿಂದ ದುರ್ಯೋಧನನ ಸೈನ್ಯವನ್ನು ನಾಶಪಡಿಸುತ್ತ ಮುಂದೆ ನಡೆದ. ಅವನನ್ನು ವಿಂದ ಅನುವಿಂದರನ್ನು ಮುಂದೆ ಮಾಡಿಕೊಂಡು ವೀರರಲ್ಲಿ ಮುಖ್ಯರಾದ ಹನ್ನೆರಡುಮಂದಿ ಧೃತರಾಷ್ಟ್ರ ಪುತ್ರರು ಇದಿರಿಸಿದರು.

ಕುಂಡಭೇದಿ ಸುಷೇಣ ದೀರ್ಘನೇತ್ರ ವೃಂದಾರಕ ಅಭಯ ರೌದ್ರಕರ್ಮ ದುರ್ವಿಮೋಚನ ವಿಂದ ಅನುವಿಂದ ಸುವರ್ಮ ಸುದರ್ಶನ ಸುಹಸ್ತ- ಈ ಹನ್ನೆರಡು ಮಂದಿ ಧೃತರಾಷ್ಟ್ರಪುತ್ರರು ವಿಂದಾನುವಿಂದರನ್ನು ಮುಂದೆ ಮಾಡಿಕೊಂಡು ಬಂದರು. (ದ್ರೋಣ ೧೨೭.೩೩)

ವಿದ್ಧಃ ಶರೈಸ್ತೈರ್ಬಹುಭಿರ್ವೃಕೋದರಃ
ಶಿರಾಂಸಿ ತೇಷಾಂ ಯುಗಪಚ್ಚಕರ್ತ ।
ಹತೇಷು ತೇಷು ಪ್ರವರೇಷು ಧನ್ವಿನಾಂ
ಸತ್ಯವ್ರತಃ ಪುರುಮಿತ್ರೋ ಜಯಶ್ಚ ॥೧೩೪॥
ವೃಂದಾರಕಃ ಪೌರವಶ್ಚೇತ್ಯಮಾತ್ಯಾಃ
ಸಮಾಸೇದುರ್ಧಾರ್ತರಾಷ್ಟ್ರಸ್ಯ ಭೀಮಮ್ ॥೧೩೫॥

ಅವರು ಬಹುಬಾಣಗಳಿಂದ ಹೊಡೆಯುತ್ತಿದ್ದಂತೆಯೆ ಭೀಮ ಅವರೆಲ್ಲರ ತಲೆಗಳನ್ನೂ ಒಮ್ಮೆಲೆ ಕತ್ತರಿಸಿದ. ಬಿಲ್ಲುಗಾರರಲ್ಲಿ ಶ್ರೇಷ್ಠರಾದ ಅವರು ಮಡಿದಾಗ ಸತ್ಯವ್ರತ ಪುರುಮಿತ್ರ ಜಯ ವೃಂದಾರಕ ಪೌರವ ಎಂಬ ದುರ್ಯೋಧನನ ಮಂತ್ರಿಗಳು ಭೀಮನನ್ನು ಇದಿರಿಸಿದರು.

ಸ ತೈಃ ಪೃಷತ್ಕೈರವಕೀರ್ಯಮಾಣಃ
ಶಿತಾನ್ ವಿಪಾಠಾನ್ ಯುಗಪತ್ ಸಮಾದದೇ ।
ಜಹಾರ ತೈರೇವ ಶಿರಾಂಸಿ ತೇಷಾಂ
ಹತೇಷು ತೇಷ್ವೇವ ಪರೇ ಪ್ರದುದ್ರುವುಃ ॥೧೩೬॥

ಅವರು ಬಾಣಗಳಿಂದ ಭೀಮನನ್ನು ಮುಚ್ಚುತ್ತಿದ್ದಂತೆಯೇ ಅವನು ಹರಿತವಾದ ಬಾಣಗಳನ್ನು ಒಮ್ಮೆಲೆ ಹೂಡಿದ. ಅವುಗಳಿಂದಲೆ ಅವರ ತಲೆಗಳನ್ನು ಹಾರಿಸಿದ. ಅವರು ಹತರಾದಾಗ ಉಳಿದವರು ಪಲಾಯನಗೈದರು.

ದುಃಶಾಸನ, ಚಿತ್ರಸೇನ, ವಿವಿಂಶತಿ, ದುರ್ಮುಖ, ದುಃಸಹ, ವಿಕರ್ಣ, ಶಲ, ಸುಮುಖ, ದೀರ್ಘಬಾಹು- ಎಂಬ ಬೇರೆ ಧೃತರಾಷ್ಟ್ರಪುತ್ರರೂ ಆಗ ಬಂದಿದ್ದರು. ಅವರು ಪಲಾಯನ ಮಾಡಿದರು.

ಸ ಸಿಂಹವತ್ ಕ್ಷುದ್ರಮೃಗಾನ್ ಸಮಂತತೋ
ವಿದ್ರಾವ್ಯ ಶತ್ರೂನ್ ಹೃದಿಕಾತ್ಮಜಂ ರಣೇ ।
ಅಭ್ಯಾಗಮತ್ ತೇನ ನಿವಾರಿತಃ ಶರೈಃ
ಕ್ಷಣೇನ ಚಕ್ರೇ ವಿರಥಾಶ್ವಸೂತಮ್ ॥೧೩೭॥

ಸಿಂಹ ಕ್ಷುದ್ರ ಮೃಗಗಳನ್ನು ಓಡಿಸುವಂತೆ ಭೀಮ ಶತ್ರುಗಳನ್ನು ಎಲ್ಲ ಕಡೆಗೂ ಓಡಿಸಿ ಯುದ್ಧರಂಗದಲ್ಲಿ ಕೃತವರ್ಮನ ಕಡೆಗೆ ಮುಂದುವರಿದ. ಕೃತವರ್ಮ ಬಾಣಗಳಿಂದ ತಡೆದಾಗ ಅವನನ್ನು ಕ್ಷಣದಲ್ಲಿ ರಥ ಅಶ್ವಸಾರಥಿಗಳಿಂದ ರಹಿತನನ್ನಾಗಿ ಮಾಡಿದ.

ಸ ಗಾಢವಿದ್ಧಸ್ತು ವೃಕೋದರೇಣ
ರಣಂ ವಿಸೃಜ್ಯಾಪಯಯೌ ಕ್ಷಣೇನ ।
ವಿಜಿತ್ಯ ಹಾರ್ದಿಕ್ಯಮಥಾऽಶು ಭೀಮೋ
ವಿದ್ರಾವಯಾಮಾಸ ವರೂಥಿನೀಂ ತಾಮ್ ।
ಸಂಪ್ರೇಷಯನ್ ಸರ್ವನರಾಶ್ವಕುಂಜರಾನ್
ಯಮಾಯ ಯಾತೋ ಹರಿಪಾರ್ಥಪಾರ್ಶ್ವಮ್ ॥೧೩೮॥

ಕೃತವರ್ಮ ಭೀಮನಿಂದ ಗಾಢವಾಗಿ ಹೊಡೆಸಿಕೊಂಡು ಕ್ಷಣದಲ್ಲಿ ಯುದ್ಧವನ್ನು ತೊರೆದು ಪಲಾಯನ ಮಾಡಿದ. ಭೀಮ ಬೇಗನೆ ಕೃತವರ್ಮನನ್ನು ಗೆದ್ದು ಒಡನೆ ಆ ಸೈನ್ಯವನ್ನು ಓಡಿಸಿದ. ಎಲ್ಲ ಕಾಲಾಳುಗಳನ್ನೂ ಕುದುರೆಗಳನ್ನೂ ಆನೆಗಳನ್ನೂ ಯಮನಿಗೆ ಕಳಿಸುತ್ತ ಕೃಷ್ಣಾರ್ಜುನರ ಬಳಿಗೆ ನಡೆದ.

ದೃಷ್ಟೈವ ಕೃಷ್ಣವಿಜಯೌ ಪರಮಪ್ರಹೃಷ್ಟ-
ಸ್ತಾಭ್ಯಾಂ ನಿರೀಕ್ಷಿತ ಉತ ಪ್ರತಿಭಾಷಿತಶ್ಚ ।

ಸಂಜ್ಞಾಂ ನೃಪಸ್ಯ ಸ ದದಾವಪಿ ಸಿಂಹನಾದಾತ್
ಶ್ರುತ್ವಾ ಪರಾಂ ಮುದಮವಾಪ ಸ ಚಾಗ್ರ್ಯಬುದ್ಧಿಃ ॥೧೩೯॥

ಭೀಮಸೇನ ಕೃಷ್ಣಾರ್ಜುನರನ್ನು ಕಂಡೊಡನೆ ಬಹಳ ಆನಂದಿತನಾದ. ಅವರೂ ಭೀಮಸೇನನನ್ನು ಕಂಡರು. ಸಂಭಾಷಣೆ ನಡೆಸಿದರು. ಈ ಬಗ್ಗೆ ಸಿಂಹನಾದದಿಂದ ಧರ್ಮರಾಜನಿಗೆ ಸೂಚನೆಯನ್ನು ನೀಡಿದ ಭೀಮ. ಉತ್ತಮ ಬುದ್ಧಿಶಾಲಿಯಾದ ಧರ್ಮರಾಜ ಅದನ್ನು ಕೇಳಿ ಬಹಳ ಆನಂದ ಹೊಂದಿದ.

ಭೀಮಕರ್ಣರ ಯುದ್ಧ

ಭೀಮಸ್ಯ ನಾನದತ ಏವ ಮಹಾಸ್ವನೇನ
ವಿಣ್ಮೂತ್ರಶೋಣಿತಮಥೋ ಮೃತಿಮಾಪುರೇಕೇ ।
ಭೀತೇಷು ಸರ್ವನೃಪತಿಷ್ವಮುಮಾಪ ತೂರ್ಣಂ
ಕರ್ಣೋ ವಿಕರ್ಣಮುಖಿರಾ ಅಪಿ ಧಾರ್ತರಾಷ್ಟ್ರಾಃ ॥೧೪೦॥

ಭೀಮಸೇನ ಸಿಂಹನಾದ ಮಾಡುತ್ತಿದ್ದಂತೆ ಆ ಮಹಾನಾದದಿಂದ ಹಲವು ಕೌರವ ಸೈನಿಕರು ಮಲಮೂತ್ರ ವಿಸರ್ಜನೆ ಮಾಡಿದರು. ರಕ್ತಕಾರಿದರು. ಮರಣವನ್ನೂ ಹೊಂದಿದರು. ಎಲ್ಲ ರಾಜರೂ ಭಯಗೊಂಡಿದ್ದಾಗ ಭೀಮನ ಇದಿರಿಗೆ ಬೇಗನೆ ಕರ್ಣ ಬಂದ. ವಿಕರ್ಣ ಮುಂತಾದ ಧೃತರಾಷ್ಟ್ರ ಪುತ್ರರೂ ಬಂದರು.

ದುರ್ಯೋಧನನ ಸೈನಿಕರಿಗೆ ಭೀಮನ ಸಿಂಹನಾದ ಕೇಳಿ ಭಯದಿಂದ ಮಲಮೂತ್ರ ದ್ವಾರಗಳಲ್ಲಿ ಮಲಮೂತ್ರಗಳು ಮಾತ್ರವಲ್ಲದೆ ರಕ್ತವೂ ಸ್ರಾವಗೊಂಡಿತೆಂದು ಜನಾರ್ದನೀಯದಲ್ಲಿ ಹೇಳಿದೆ.

ಹತ್ವಾ ವಿಕರ್ಣಮುತ ತತ್ರ ಚ ಚಿತ್ರಸೇನಂ
ಸಂಚೂರ್ಣಿತಂ ಚ ವಿದಧೇ ರಥಮರ್ಕಸೂನೋಃ ।
ಘೋರೈಃ ಶರೈಃ ಪುನರಪಿ ಸ್ಮ ಸಮರ್ದ್ಯಮಾನಃ
ಕರ್ಣೋಽಪಯಾನಮಕರೋದ್ ದ್ರುತಮೇವ ಭೀಮಾತ್ ॥೧೪೧॥

ಭೀಮಸೇನ ಆ ಯುದ್ಧದಲ್ಲಿ ವಿಕರ್ಣನನ್ನೂ ಚಿತ್ರಸೇನನನ್ನೂ ಕೊಂದು ಕರ್ಣನ ರಥವನ್ನು ಪುಡಿಪುಡಿ ಮಾಡಿದ. ಕರ್ಣ ಭೀಮನ ಭಯಂಕರ ಬಾಣಗಳಿಂದ ಮತ್ತೆ ಮತ್ತೆ ಜರ್ಜರಿತನಾಗಿ ಭೀಮನ ಇದಿರಿನಿಂದ ಕೂಡಲೆ ಪಲಾಯನವನ್ನೇ ಮಾಡಿದ.

ಆಶ್ವಾಸ್ಯ ಚೈವ ಸುಚಿರಂ ಪುನರೇವ ಭೀಮಂ
ಯುದ್ಧಾಯ ಯಾತಿ ಧೃತರಾಷ್ಟ್ರಸುತೈಸ್ತಥಾಽನ್ಯೈಃ ।
ತಾಂಶ್ಚೈವ ತತ್ರ ವಿನಿಹತ್ಯ ತಥೈವ ಕರ್ಣೋ
ವ್ಯಶ್ವಾಯುಧಃ ಕೃತ ಉತಾಪಯಯೌ ಕ್ಷಣೇನ ॥೧೪೨॥

ಕರ್ಣ ದೀರ್ಘಕಾಲ ವಿಶ್ರಾಂತಿ ಪಡೆದು ಧೃತರಾಷ್ಟ್ರನ ಇತರ ಮಕ್ಕಳನ್ನು ಕೂಡಿಕೊಂಡು ಪುನಃ ಭೀಮನೊಡನೆ ಯುದ್ಧಕ್ಕೆ ಬಂದ. ಭೀಮ ಧೃತರಾಷ್ಟ್ರನ ಮಕ್ಕಳನ್ನು ಕೊಂದು ಹಿಂದಿನಂತೆಯೆ ಕರ್ಣನ ಕುದುರೆಗಳನ್ನೂ ಆಯುಧಗಳನ್ನೂ ನಾಶಪಡಿಸಿದ. ಕರ್ಣ ಕ್ಷಣದಲ್ಲಿ ಪಲಾಯನ ಮಾಡಿದ.

ವಿಕರ್ಣಚಿತ್ರಸೇನಾದ್ಯಾ ವಿವಂ ವೀರತಮಾಃ ಸುತಾಃ ।
ಕರ್ಣಸ್ಯ ಪಶ್ಯತೋ ಭೀಮಬಾಣಕೃತ್ತಶಿರೋಧರಾಃ ॥೧೪೩॥
ನಿಪೇತುರ್ಧೃತರಾಷ್ಟ್ರಸ್ಯ ರಥೇಭ್ಯಃ ಪೃಥಿವೀತಲೇ ।
ತ್ರಯೋವಿಂಶತಿರೇವಾತ್ರ ಕರ್ಣಸಾಹಾಯ್ಯಕಾರಿಣಃ ॥೧೪೪॥

ಹೀಗೆ ಕರ್ಣ ನೋಡುತ್ತಿದ್ದಂತೆಯೆ ಕರ್ಣನಿಗೆ ಸಹಾಯ ಮಾಡಲು ಬಂದಿದ್ದ ವಿಕರ್ಣ ಚಿತ್ರಸೇನ ಮುಂತಾದ ಇಪ್ಪತ್ತಮೂರು ಮಂದಿ ಮಹಾವೀರರಾದ ಧೃತರಾಷ್ಟ್ರನ ಮಕ್ಕಳೂ ಕೂಡ ಭೀಮನ ಬಾಣಗಳಿಂದ ಶಿರಶ್ಛೇದ ಹೊಂದಿ ರಥಗಳಿಂದ ನೆಲದಲ್ಲಿ ಬಿದ್ದರು.

ವಿಕರ್ಣ,. ಚಿತ್ರಸೇನ, ದುರ್ಮುಖ, ದುರ್ಜಯ, ದುರ್ಮರ್ಷಣ, ದುಃಸಹ, ದುರ್ಮದ, ದುರ್ಧರ, ಜಯ, ಚಿತ್ರ, ಉಪಚಿತ್ರ, ಚಿತ್ರಾಕ್ಷ, ಚಾರುಚಿತ್ರ, ಶರಾಸನ, ಚಿತ್ರಾಯುಧ, ಚಿತ್ರವರ್ಮ, ಶತ್ರುಂಜಯ, ಶತ್ರುಸಹ, ಚಿತ್ರಬಾಣ, ಅಗ್ರಾಯುಧ, ದೃಢವರ್ಮ, ದುಷ್ಕರ್ಣ, ದುರ್ಮದ- ಈ ಇಪ್ಪತ್ತಮೂರು ಮಂದಿ ಕೌರವರು ಭೀಮನಿಂದ ಕರ್ಣನ ಕಣ್ಣೆದುರಿನಲ್ಲಿಯೆ ಹತರಾದರು.

ಏಕವಿಂಶತಿವಾರಂ ಚ ವ್ಯಶ್ವಸೂತರಥಧ್ವಜಃ ।
ಗಾಢಮಭ್ಯರ್ದಿತಸ್ತೀಕ್ಷ್ಣೈಃ ಶರೈರ್ಭೀಮೇನ ಸಂಯುಗೇ ॥೧೪೫॥
ಪ್ರಾಣಸಂಶಯಮಾಪನ್ನಃ ಸರ್ವಲೋಕಸ್ಯ ಪಶ್ಯತಃ ।
ರಣಂ ತ್ಯಕ್ತ್ವಾ ಪ್ರದುದ್ರಾವ ರುದನ್ ದುಃಖಾತ್ ಪುನಃಪುನಃ ॥೧೪೬॥

ಇಪ್ಪತ್ತೊಂದು ಬಾರಿ ಯುದ್ಧದಲ್ಲಿ ಭೀಮನಿಂದ ತೀಕ್ಷ್ಣವಾದ ಬಾಣಗಳಿಂದ ಗಾಢವಾಗಿ ಪೀಡಿತನಾದ ಕರ್ಣ ಕುದುರೆ ಸಾರಥಿ ರಥ ಧ್ವಜಗಳನ್ನು ಕಳೆದುಕೊಂಡು ಪ್ರಾಣಕ್ಕೇ ಅಪಾಯ ಬಂದಾಗ ಎಲ್ಲ ಜನ ನೋಡುತ್ತಿದ್ದಂತೆಯೆ ದುಃಖದಿಂದ ಮತ್ತೆ ಮತ್ತೆ ಅಳುತ್ತ ಯುದ್ಧವನ್ನು ಬಿಟ್ಟು ಓಡಿಹೋದ.

ದ್ವಾವಿಂಶತಿಮಯುದ್ಧೇ ತು ರಾಮದತ್ತಂ ಸುಭಾಸ್ವರಮ್ ।
ಅಭೇದ್ಯಂ ರಥಮಾರುಹ್ಯ ವಿಜಯಂ ಧನುರೇವ ಚ ॥೧೪೭॥
ತದ್ದತ್ತಮೇವ ಸಂಗೃಹ್ಯ ತೂಣೇ ಚಾಕ್ಷಯಸಾಯಕೌ ।
ಆಸಸಾದ ರಣೇ ಭೀಮಂ ಕರ್ಣೋ ವೈಕರ್ತನೋ ರುಷಾ ॥೧೪೮॥

ಇಪ್ಪತ್ತೆರಡನೆ ಯುದ್ಧದಲ್ಲಿ ಕರ್ಣ ಚೆನ್ನಾಗಿ ಹೊಳೆಯುವ ಅಭೇದ್ಯವಾದ ಪರಶುರಾಮನಿತ್ತ ರಥವನ್ನೇರಿ ಪರಶುರಾಮ ನೀಡಿದ್ದ ವಿಜಯ ಎಂಬ ಬಿಲ್ಲನ್ನೂ ಅಕ್ಷಯ ಬಾಣಗಳ ಬತ್ತಳಿಕೆಗಳನ್ನೂ ಹಿಡಿದು ಯುದ್ಧರಂಗದಲ್ಲಿ ಕೋಪದಿಂದ ಭೀಮನನ್ನು ಇದಿರಿಸಿದ.

ಇಂದ್ರನಿಗಾಗಿ ವಿಶ್ವಕರ್ಮ ನಿರ್ಮಿತವಾದ ವಿಜಯ ಎಂಬ ಬಿಲ್ಲು ಇಂದ್ರನಿಂದ ಪರಶುರಾಮನಿಗೆ ಬಂದಿತ್ತು. ಅದರಿಂದಲೆ ಅವನು ಕ್ಷತ್ರಿಯರ ಸಂಹಾರ ಮಾಡಿದ್ದ. (ಕರ್ಣ ೨೨.೫೦) ಅದನ್ನೆ ಕರ್ಣನಿಗೆ ಕೊಟ್ಟಿದ್ದ ಪರಶುರಾಮ.

ಸುಘೋರ ಆಸೀತ್ ಸ ತಯೋರ್ವಿಮರ್ದೋ
ಭೀಮಸ್ಯ ಕರ್ಣಸ್ಯ ಚ ದೀರ್ಘಕಾಲಮ್ ।
ಆಕಾಶಮಾಚ್ಛಾದಯತೋಃ ಶರೌಘೈಃ
ಪರಸ್ಪರಂ ಚೈವ ಸುರಕ್ತನೇತ್ರಯೋಃ ॥೧೪೯॥

ಬಲು ಕೆಂಪಾದ ಕಣ್ಣುಗಳುಳ್ಳ ಆ ಭೀಮಕರ್ಣರೊಳಗೆ ಪರಸ್ಪರವಾಗಿ ದೀರ್ಘಕಾಲದ ವರೆಗೆ ಬಲು ಘೋರವಾದ ಕಾಳಗ ನಡೆಯಿತು. ಅವರು ಬಾಣ ಸಮೂಹಗಳಿಂದ ಆಕಾಶವನ್ನು ಮುಚ್ಚಿದರು.

ತತೋ ಭೀಮೋ ಮಹಾಬಾಹುಃ ಸಹಜಾಭ್ಯಾಂ ಚ ಸಂಯುತಮ್ ।
ತ್ವಾಂ ತು ಕುಂಡಲವರ್ಮಭ್ಯಾಂ ಶಕ್ನುಯಾಂ ಹಂತುಮಂಜಸಾ ॥೧೫೦॥
ಇತಿ ಜ್ಞಾಪಯಿತುಂ ತಸ್ಯ ಕುಂಡಲೇ ಕವಚಂ ತಥಾ ।
ಶರೈರುತ್ಕೃತ್ಯ ಸಮರೇ ಪಾತಯಾಸ ಭೂತಲೇ ॥೧೫೧॥

ಆಗ ಮಹಾಬಾಹುವಾದ ಭೀಮ 'ಕರ್ಣ! ನೀನು ಸಹಜವಾದ ಕುಂಡಲ ಕವಚಗಳಿಂದ ಯುಕ್ತನಾಗಿದ್ದರೂ ನಿನ್ನನ್ನು ಕೊಲ್ಲಲು ನಾನು ಬಲು ಸಮರ್ಥನಾಗಿದ್ದೇನೆ' ಎಂದು ತಿಳಿಸುವುದಕ್ಕಾಗಿ ಯುದ್ಧದಲ್ಲಿ ಅವನ ಕುಂಡಲಗಳನ್ನೂ ಕವಚವನ್ನೂ ಬಾಣಗಳಿಂದ ಕತ್ತರಿಸಿ ನೆಲದಲ್ಲಿ ಬೀಳಿಸಿದ.

ಅರ್ಜುನನಿಗೆ ನಿನ್ನ ಸಹಜ ಕವಚಕುಂಡಲಗಳನ್ನು ಭೇದಿಸುವ ಸಾಮರ್ಥ್ಯವಿಲ್ಲ. ಅದರಿಂದಲೆ ಇಂದ್ರ ಭೀತನಾಗಿ ಅವನ್ನು ನಿನ್ನಲ್ಲಿ ದಾನ ಕೇಳಿ ಪಡೆಯಬೇಕಾಯಿತು. ನನಗೆ ಹಾಗಲ್ಲ. ನಿನ್ನ ಸಹಜ ಕವಚಕುಂಡಲಗಳನ್ನೂ ಭೇದಿಸುವ ಸಾಮರ್ಥ್ಯ ನನಗುಂಟು ಎಂದು ತೋರಿಸಲು ಭೀಮ ಕರ್ಣನ ಬೇರೆ ಹೊಸ ಕವಚಕುಂಡಲಗಳನ್ನು ಬಾಣಗಳಿಂದ ಪುಡಿಗೈದನೆಂದು ವಾದಿರಾಜೀಯ ಜನಾರ್ದನೀಯ ವರದರಾಜೀಯಗಳಲ್ಲಿ ಹೇಳಿದೆ.

ಏವಂ ತಾನ್ಯಪಕೃಷ್ಯಾಹಂ ಹನ್ಯಾಂ ತ್ವಾಮಿತಿ ವೇದಯನ್ ।
ಪುನಶ್ಚ ಬಹುಭಿಸ್ತೀಕ್ಷ್ಣೈಃ ಶರೈರೇನಂ ಸಮಾರ್ದಯತ್ ॥೧೫೨॥

ನಿನ್ನ ಆ ಸಹಜ ಕವಚಕುಂಡಲಗಳನ್ನೂ ಕೂಡ ಕಿತ್ತು ಹೀಗೆಯೆ ನಿನ್ನನ್ನು ಕೊಲ್ಲಬಲ್ಲೆ ಎಂದು ತಿಳಿಸಲು ಭೀಮ ಪುನಃ ತೀಕ್ಷ್ಣವಾದ ಅನೇಕ ಬಾಣಗಳಿಂದ ಕರ್ಣನನ್ನು ಪೀಡಿಸಿದ.

*** ತತಸ್ತು ಭೀಮಸ್ಯ ಬಭೂವ ಬುದ್ಧಿ-**
ರಸ್ಪರ್ಧಿನಃ ಸರ್ವಜಯೋ ಹಿ ದತ್ತಃ ।
ಅಮುಷ್ಯ ರಾಮೇಣ ನಚ ಸ್ಪೃಧಾಕಯಂ
ಕರ್ಣೋ ಮಯಾ ಯುದ್ಧ್ಯತಿ ಕೃಚ್ಛ್ರಗೋ ಹ್ಯಯಮ್ ॥೧೫೩॥

ಒಳಿಕ ಭೀಮನಿಗೆ ಹೀಗೆ ಆಲೋಚನೆಯುಂಟಾಯಿತು. 'ಕರ್ಣನಿಗೆ ಪರಶುರಾಮ ವರನೀಡಿದ್ದಾನೆ. 'ಸ್ಪರ್ಧೆ ಮಾಡದಿದ್ದರೆ ಎಲ್ಲರನ್ನೂ ಗೆಲ್ಲುತ್ತಿ' ಎಂದು. ಈಗ ಕರ್ಣ ಸ್ಪರ್ಧೆಯಿಂದ ನನ್ನೊಡನೆ ಯುದ್ಧ ಮಾಡುತ್ತಿಲ್ಲ. ಏಕೆಂದರೆ ಅವನು ಪ್ರಾಣಾಪಾಯಕ್ಕೆ ಒಳಗಾಗಿದ್ದಾನೆ.

ತನಗೆ ಪ್ರಾಣಾಪಾಯ ಸ್ಥಿತಿ ಒದಗಿದುದದನ್ನು ಕಂಡು ಕರ್ಣ ತಾನು ಅಶಕ್ತನೆಂದು ತಿಳಿದುದರಿಂದ ಸ್ಪರ್ಧೆಯಿಂದ ಶಕ್ತಿಪ್ರದರ್ಶನಕ್ಕೆ ತೊಡಗುತ್ತಿಲ್ಲ.

ತಥಾಽಪಿ ಮೇ ಭಗವಾನತ್ಯನುಗ್ರಹಾ-
ಜ್ಜಯಂ ದದಾತ್ಯಾತ್ಮವಚೋ ವಿಹಾಯ ।
ಮಯಾ ತು ಮಾನ್ಯಂ ವಚನಂ ಹರೇಃ ಸದಾ
ತಸ್ಮಾದ್ ದಾಸ್ಯೇ ವಿವರಂ ತ್ವದ್ಯ ಶತ್ರೋಃ ॥೧೫೪॥

ಆದರೂ ಭಗವಾನ್ ಪರಶುರಾಮ ನನ್ನ ಮೇಲಿನ ಪರಮಾನುಗ್ರಹದಿಂದ ತನ್ನ ವರವನ್ನೂ ಬಿಟ್ಟುಕೊಟ್ಟು ನನಗೆ ಜಯ ನೀಡುತ್ತಾನೆ. ಆದರೂ ನಾನು ಹರಿಯ ವರವನ್ನು ಸದಾ ಗೌರವಿಸಲೇಬೇಕು. ಆದರಿಂದ ನಾನು ಈಗ ಕರ್ಣನಿಗೆ ಅವಕಾಶ ನೀಡುವೆನು.

[1]ಶ್ರೀಕೃಷ್ಣ ತನ್ನ ಪ್ರತಿಜ್ಞೆಯನ್ನೂ ಮುರಿದು ಭೀಷ್ಮನ ಪ್ರತಿಜ್ಞೆಯನ್ನು ನಡೆಸಿಕೊಡಲು ಚಕ್ರವನ್ನು ಧರಿಸಿದ. ಹೀಗೆ ಒಬ್ಬ ಸಾಮಾನ್ಯ ಭಕ್ತನಿಗಾಗಿ ತನ್ನ ಮಾತನ್ನು ಬಿಟ್ಟುಕೊಡಬಲ್ಲ ಹರಿ ನನ್ನಂಥ ಉತ್ತಮ ಭಕ್ತನ ವಿಷಯದಲ್ಲಿ

---

1. ಭಗವಾನತ್ಯನುಗ್ರಹಾದಿತ್ಯತ್ರ ಅತಿಪದೇನ ಸ್ವನಿಯಮಮಪಹಾಯ ಮತ್ಪ್ರತಿಜ್ಞಾಮೃತಮಧಿಕರ್ತುಮವಪ್ಲುತೋ ರಥಸ್ಥ ಇತಿ ಭಾಗವತೋಕ್ತೇಃ ಕಂಚಿದನುಗ್ರಹವತೋ ಭೀಷ್ಮಸ್ಯಾಪ್ಯರ್ಥೇ ಸ್ವನಿಯಮಂ ತ್ಯಕ್ತವತೋ ಹರೇರತ್ಯನುಗ್ರಹ ಪಾತ್ರೇ ಮಯಿ ಸ್ವನಿಯಮ ಪರಿತ್ಯಾಗಃ ಕಿಮು ವಾಚ್ಯ ಇತಿ ಸೂಚಯತಿ। ಮಯಾ ತು ಮಾನ್ಯಮಿತ್ಯತ್ರ ವಿಶೇಷವಾಚಿನಾ ತುಶಬ್ದೇನ ಭಕ್ತಿವಿಶೇಷವತೋ ಮಮಾಲ್ಪಭಕ್ತ ಭೀಷ್ಮವತ್ ಪ್ರಭೋರ್ನಿಯಮತ್ಯಾಜನಂ ನ ಧರ್ಮ ಇತಿ ಸೂಚಯತಿ। -ವಾದಿರಾಜೀಯ

ಹಾಗೆ ಮಾಡದಿರಲಾರ. ಆದರೂ ಭೀಷ್ಮ ಕೃಷ್ಣನ ಮಾತನ್ನು ವ್ಯರ್ಥಗೊಳಿಸಿದಂತೆ ನಾನು ಪರಶುರಾಮನ ಮಾತನ್ನು ವ್ಯರ್ಥಗೊಳಿಸಬಾರದು ಎಂದು ಆಲೋಚಿಸಿ ಭೀಮ ಕರ್ಣನಿಗೆ ಜಯಾವಕಾಶ ನೀಡಬೇಕೆಂದು ಬಗೆದ.

ಏವಂ ಸ್ಮೃತ್ವಾ ತೇನ ರಂಧ್ರೇ ಪ್ರದತ್ತೇ
ಕರ್ಣೋಽಸ್ತ್ರವೀರ್ಯೇಣ ಧನುರ್ಯಕೃಂತತ್ ।
ರಶ್ಮೀನ್ ಹಯಾನಾಂ ಚ ತತೋ ರಥಂ ಸ
ತತ್ಯಾಜ ನೈಜಂ ಬಲಮೇವ ವೇದಯನ್ ॥೧೫೫॥

ಹೀಗೆ ಆಲೋಚಿಸಿ ಭೀಮ ಅವಕಾಶ ಕೊಟ್ಟೊಡನೆ ಕರ್ಣ ತನ್ನ ಅಸ್ತ್ರ ಸಾಮರ್ಥ್ಯದಿಂದ ಭೀಮನ ಬಿಲ್ಲನ್ನು ಕತ್ತರಿಸಿದ. ಕುದುರೆಗಳ ಹಗ್ಗವನ್ನೂ ತುಂಡರಿಸಿದ. ಆಗ ಭೀಮ ತನ್ನ ನೈಜವಾದ ಬಲವನ್ನು ತೋರುವುದಕ್ಕಾಗಿ ರಥವನ್ನು ಬಿಟ್ಟುಬಿಟ್ಟ.

ಭೀಮ, ರಥ ಆಯುಧ ಸೈನ್ಯ ಮುಂತಾದ ಯಾವುದರ ಅಪೇಕ್ಷೆಯೂ ಇಲ್ಲದೆ ಕೇವಲ ಭುಜಬಲದಿಂದಲೆ ಸಕಲ ಶತ್ರುಗಳನ್ನು ನಿಗ್ರಹಿಸಬಲ್ಲ. ಇದನ್ನು ತೋರುವುದಕ್ಕಾಗಿ ಆತ ರಥವನ್ನು ಬಿಟ್ಟ. ಕರ್ಣ ಕುದುರೆಗಳ ಹಗ್ಗವನ್ನು ಕತ್ತರಿಸಿದುದು ಭೀಮನಿಗೆ ಈ ಉದ್ದೇಶ ನೆರವೇರಿಸಲು ಅನುಕೂಲವಾಯಿತು.

ನ ಮೇ ರಥಾದ್ಯೈರ್ಧನುಷಾಽಪಿ ಕಾರ್ಯ-
ಮಿತ್ಯೇವ ಸಂಜ್ಞಾಪಯಿತುಂ ವೃಕೋದರಃ ।
ಖಮುತ್ಪಪಾತೋತ್ತಮವೀರ್ಯತೇಜಾ
ರಥಂ ಚ ಕರ್ಣಸ್ಯ ಸಮಾಸ್ಥಿತಃ ಕ್ಷಣಾತ್ ॥೧೫೬॥

ರಥ ಮುಂತಾದವುಗಳಿಂದಾಗಲಿ ಬಿಲ್ಲಿನಿಂದಲಾಗಲಿ ನಾನು ಯಾವುದೇ ಕಾರ್ಯ ಸಾಧಿಸಬೇಕಾಗಿಲ್ಲ ಎಂದು ತಿಳಿಸಲು ಉತ್ತಮ ವೀರ್ಯ ಪರಾಕ್ರಮವುಳ್ಳ ಭೀಮ ಆಕಾಶಕ್ಕೆ ನೆಗೆದ. ಕ್ಷಣದಲ್ಲಿ ಕರ್ಣನ ರಥದ ಮೇಲೆಯೆ ಬಂದು ನಿಂತ.

ಭೀತಸ್ತು ಕರ್ಣೋ ರಥಕೂಬರೇ ತದಾ
ವ್ಯಲೀಯತಾತಃ ಸ ವೃಕೋದರೋ ರಥಾತ್ ।
ಅವಪ್ಲುತೋ ಜ್ಞಾಪಯಿತುಂ ಸ್ವಶಕ್ತಿಂ
ನಿರಾಯುಧತ್ವೇಽಪ್ಯರಿನಿಗ್ರಹಾದೌ ॥೧೫೭॥

ಕರ್ಣ ಭೀತನಾಗಿ ರಥದ ನೊಗದ ಕೆಳಗೆ ಅಡಗಿ ನಿಂತ. ಭೀಮ ತಾನು ನಿರಾಯುಧನಾದರೂ ಶತ್ರುನಿಗ್ರಹಾದಿಗಳಲ್ಲಿ ತನಗೆ ಶಕ್ತಿ ಇದೆ ಎಂಬುದನ್ನು ತೋರುವುದಕ್ಕಾಗಿ ಕರ್ಣನ ರಥವೇರಿದ್ದ. ಈಗ ರಥದಿಂದ ಕೆಳಗೆ ಹಾರಿದ.

ಆಗದಸ್ಯಾಪ್ಯಧನುಷೋ ವಿರಥಸ್ಯ ವಿವರ್ಮಣಃ।
ಬಾಹುಭ್ಯಾಂ ಯುದ್ಯಮಾನಸ್ಯ ಕಸ್ತಿಷ್ಠೇದಗ್ರತಃ ಪುಮಾನ್।
ಉದ್ಯೋ.೫೧.೪೪)

ಎಂದು ಭೀಮ ತನ್ನ ನೈಜಬಲವನ್ನು ಹೇಳಿಕೊಂಡಿದ್ದ. ಅದನ್ನು ಈಗ ತೋರಿದ. ಇಲಿ ಬಿಲವನ್ನು ಹೊಕ್ಕು ಅಡಗಿರುವಂತೆ ಕರ್ಣ ರಥದ ನೊಗದ ಕೆಳಗೆ ಕುದುರೆಗಳ ಮತ್ತು ಚಕ್ರಗಳ ನಡುವೆ ಅಡಗಿ ನಿಂತಿರುವಾಗ ಅವನನ್ನು ಈಚೆಗೆ ಎಳೆದು ತಂದು ಒಂದೇ ಏಟಿಗೆ ಮುಗಿಸುವುದು ಜರಾಸಂಧನನ್ನು ಕುಟ್ಟಿ ಪುಡಿಗೈದ ಭೀಮನಿಗೆ ಏನೂ ಕಷ್ಟವಿರಲಿಲ್ಲ. ಆದರೆ ಅದು ಸರ್ವ ಶಕ್ತನಾದ ತನಗೆ ತನ್ನ ವೀರ್ಯ ಪರಾಕ್ರಮಗಳಿಗೆ ಶೋಭೆ ತರುವುದಿಲ್ಲವೆಂದು ಬಿಟ್ಟುಬಿಟ್ಟ, ನಿರಾಯುಧನಾದರೂ ತಾನು ಶಕ್ತನೆಂದು ತಿಳಿಸುವುದಕ್ಕಾಗಿಯೆ ಕರ್ಣನ ಆಯುಧವನ್ನು ಅಪಹರಿಸಲಿಲ್ಲ. ವಿರಥನಾದರೂ ಕರ್ಣನ ರಥಕ್ಕೆ ಬಂದವನು ಆ ರಥವನ್ನು ಅಪಹರಿಸಲು ಬಯಸಲಿಲ್ಲ.[1]

ನೈಚ್ಛದ್ ಗೃಹೀತುಂ ವಿನಿಹಂತುಮೇವ ವಾ
ರಥಂ ಧನುರ್ವಾಕಸ್ಯ ರಣೇಽಪಹರ್ತುಮ್।
ದ್ರೋಣಸ್ಯ ಯದ್ವತ್ ಪೂರ್ವಮತೀವ ಶಕ್ತೋಽ
ಪ್ಯಮಾನಯದ್ ರಾಮವಚೋಽಸ್ಯ ಭಕ್ತ್ಯಾ ॥೧೫೮॥

ಭೀಮ ಅತ್ಯಂತ ಶಕ್ತನಾದರೂ ಶಕ್ತಿಯನ್ನು ಮೆರೆಸುವುದಕ್ಕಾಗಿಯೇ ಕರ್ಣನನ್ನು ಸೆರೆಹಿಡಿಯುವುದಕ್ಕಾಗಲಿ ಕೊಲ್ಲುವುದಕ್ಕಾಗಲಿ ಬಯಸಲಿಲ್ಲ. ರಥ ಆಯುಧ ರಹಿತನಾದರೂ

---

1. ನಿರಾಯುಧತ್ವೇಽಪ್ಯರಿ ನಿಗ್ರಹಾದಾವಿತ್ಯತ್ರ ನಿರಾಯುಧತ್ವೇಽಪೀತ್ಯುಪಲಕ್ಷಣಂ। ವಿರಥತ್ವೇಽಪೀತ್ಯಪಿ ಗ್ರಾಹ್ಯಂ। ಏವಂ ಚ ವಿರಥತ್ವೇಽಪಿ ಸ್ವಶಕ್ತಿಂ ದ್ಯೋತಯಿತುಂ ರಥಮಪಹರ್ತುಂ ನೈಚ್ಛತ್, ನಿರಾಯುಧತ್ವೇಽಪಿ ಸ್ವಶಕ್ತಿಂ ದ್ಯೋತಯಿತುಂ ಧನುರಪ್ಯಪಹರ್ತುಂ ನೈಚ್ಛದಿತಿ ಯುಕ್ತಂ। ಕರ್ಣಂ ಗೃಹೀತುಂ ವಿನಿಹಂತುಂ ವಾ ನೈಚ್ಛದಿತಿ ಕಥಂ ಸಂಗತಂ? ನಿರಾಯುಧೇನ ಕರ್ಣಸ್ಯ ಗ್ರಹಣೇ ಹನನೇ ಚ ಸ್ವಶಕ್ತೇ ರತಿಸ್ಪಷ್ಟತಯಾ ಜ್ಞಾಪನೇನ ತದೇವ ಕುತೋ ನ ಕೃತಮಿತಿ ಚೇತ್। ಸತ್ಯಂ। ಭೀತ್ಯಾ ಕೂಬರೇ ವಿಲೀನಸ್ಯ ಗ್ರಹಣಹನನಯೋರಪಿ ಸ್ವಾಸಾಧಾರಣಶಕ್ತಿ ಪ್ರಖ್ಯಾಪನವಿರೋಧಿತ್ವಾತ್ ವೀರಶಿರೋಮಣೇರ್ಮಮ ನಾಯಂ ಧರ್ಮ ಇತಿ ತದಪಿ ತ್ಯಕ್ತವಾನಿತ್ಯೇಕವಾಕ್ಯತಾ ಸಂಭವಾತ್। ಅತ ಏವ ಭೀತಸ್ತು ಕರ್ಣೋ ರಥಕೂಬರೇ ತದಾ ವ್ಯಲೀಯತೇತ್ಯುಕ್ತಂ। ನಹಿ ಭೀತ್ಯಾ ಬಿಲೇ ಪ್ರವಿಷ್ಟಸ್ಯ ಮೂಷಿಕಸ್ಯ ಗ್ರಹಣಾಯ ಪ್ರೇಕ್ಷಾವಾನ್ ಶಕ್ತಃ ಪ್ರಯತತೇ। ಜರಾಸಂಧ ನಿರ್ಬಂಧಕರ ಮುಷ್ಟಿ ಸದ್ಭಾವೇಽಪಿ ಕರ್ಣಾಹನನೇ ನಿಮಿತ್ತಾಂತರಂ ಚಾಹ ಸತ್ಯಾಂ ಕರ್ತುಮಿತಿ। ತದುಕ್ತಂ ಭಾರತೇ- ಭೀಮೋಽಪಿ ಮುಷ್ಟಿಮುದ್ಯಮ್ಯ ವಜ್ರಗರ್ಭಂ ಸುದಾರುಣಂ। ಹಂತುಮೈಚ್ಛತ್ ಸೂತಪುತ್ರಂ ಸಂಸ್ಮರನ್ನರ್ಜುನಂ ಕ್ಷಣಾತ್। ಶಕ್ತೋಽಪಿ ನಾವಧೀತ್ ಕರ್ಣಂ ಸಮರ್ಥಃ ಪಾಂಡುನಂದನಃ। ರಕ್ಷಮಾಣಃ ಪ್ರತಿಜ್ಞಾಂ ತಾಂ ಯಾ ಕೃತಾ ಸವ್ಯಸಾಚಿನೇತಿ। -ವಾದಿರಾಜೀಯ

ರಥವನ್ನಾಗಲಿ ಧನುಸ್ಸನ್ನಾಗಲಿ ಅಪಹರಿಸುವುದಕ್ಕೆ ಬಯಸಲಿಲ್ಲ. ಅತ್ಯಂತ ಶಕ್ತನಾದರೂ ಹಿಂದೆ ದ್ರೋಣನ ವಿಷಯದಲ್ಲಿ ಹೇಗೋ ಹಾಗೇ ಕರ್ಣನ ವಿಷಯದಲ್ಲಿಯೂ ಪರಶುರಾಮನ ವಚನವನ್ನು ಭಕ್ತಿಯಿಂದ ಮಾನಿಸಿದ.

ಸತ್ಯಾಂ ಕರ್ತುಂ ವಾಸವೇಶ್ಚ ಪ್ರತಿಜ್ಞಾಂ
ಸಮ್ಮಾನಯನ್ ವೈಷ್ಣವತ್ವಾಚ್ಚ ಕರ್ಣಮ್ ।
ದಾತುಂ ರಂಧ್ರಂ ಸೂರ್ಯಜಸ್ಯ ಪ್ರಯಾತಃ
ಶರಕ್ಷೇಪಾರ್ಥಂ ದೂರಮತಿಷ್ಠದತ್ರ ॥೧೫೯॥

ಅರ್ಜುನನ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡುವುದಕ್ಕೂ, ಕರ್ಣ ವಿಷ್ಣುಭಕ್ತನಾದ್ದರಿಂದ ಅವನನ್ನು ಮಾನಿಸುವುದಕ್ಕೂ ಭೀಮ ಕರ್ಣನನ್ನು ಕೊಲ್ಲದೆ ಬಿಟ್ಟ. ಅವನಿಗೆ ತನ್ನ ಮೇಲೆ ಬಾಣಬಿಡಲು ಅವಕಾಶ ನೀಡುವುದಕ್ಕಾಗಿ ರಥದಿಂದ ಸ್ವಲ್ಪದೂರಕ್ಕೆ ಹೋಗಿ ಅಲ್ಲಿ ನಿಂತ.

ಕರ್ಣನನ್ನು ಕೊಲ್ಲುವೆನೆಂದು ಅರ್ಜುನ ಪ್ರತಿಜ್ಞೆ ಮಾಡಿದ್ದ. ಅದರಿಂದ ಭೀಮ ಕರ್ಣನ ರಥಕ್ಕೆ ಬಂದರೂ ಅವನನ್ನು ಕೊಲ್ಲದೆ ಬಿಟ್ಟ

ಶಕ್ತೋಽಪಿ ನಾವಧೀತ್ ಕರ್ಣಂ ಸಮರ್ಥಃ ಪಾಂಡುನಂದನಃ।
ರಕ್ಷಮಾಣಃ ಪ್ರತಿಜ್ಞಾಂ ತಾಂ ಯಾ ಕೃತಾ ಸವ್ಯಸಾಚಿನಾ॥
(ದ್ರೋಣ ೧೩೯.೮೯)

ಕರ್ಣ ಅಸುರಾವೇಶದಿಂದ ಪಾಂಡವರಿಗೆ ಎಷ್ಟು ವಿರೋಧ ಮಾಡಿದರೂ ಸ್ವಭಾವತಃ ಅವನು ವಿಷ್ಣುಭಕ್ತ ಎಂಬುದು ಭೀಮನಿಗೆ ಗೊತ್ತು. ಅದರಿಂದಲೂ ಕೊಲ್ಲದೆ ಬಿಟ್ಟ

ತತಃ ಕರ್ಣೋ ದೂರಗತಂ ವೃಕೋದರಂ
ಸಮ್ಮಾನಯಂತಂ ರಾಮವಾಕ್ಯಂ ವಿಜಾನನ್ ।
ಶರೈರವಿಧ್ಯತ್ ಸ ಚ ತಾನವಾರಯದ್
ಗಜೈರ್ಮೃತೈಸ್ತಾಂಶ್ಚ ಚಕರ್ತ ಕರ್ಣಃ ॥೧೬೦॥

ಭೀಮ ಪರಶುರಾಮನ ವರವನ್ನು ಮಾನಿಸುವುದಕ್ಕಾಗಿ ದೂರದಲ್ಲಿ ನಿಂತಿದ್ದಾನೆ ಎಂಬುದನ್ನು ಕರ್ಣ ತಿಳಿದು ಅವನನ್ನು ಬಾಣಗಳಿಂದ ಹೊಡೆದ. ಭೀಮ ಅರ್ಜುನನ ಬಾಣಗಳಿಂದ ಸತ್ತಿದ್ದ ಆನೆಗಳನ್ನು ಎತ್ತಿ ಎಸೆದು ಆ ಬಾಣಗಳನ್ನು ತಡೆದ. ಆ ಸತ್ತ ಆನೆಗಳನ್ನು ಕರ್ಣ ಕತ್ತರಿಸಿ ಹಾಕಿದ.

ಭೀಮ ಪರಶುರಾಮನ ವರವನ್ನು ಮಾನಿಸುತ್ತಿದ್ದಾನೆ. ಅದಕ್ಕೇ ದೂರದಲ್ಲಿ ನಿಂತಿದ್ದಾನೆ. ಅದರಿಂದ ನಾನು ಈಗ ಬಾಣಪ್ರಯೋಗ ಮಾಡಿದರೆ ಗೆಲ್ಲುವೆನೆಂದು ತಿಳಿದೇ ಕರ್ಣ ಬಾಣಪ್ರಯೋಗ ಮಾಡಿದ.

ಇಲ್ಲದಿದ್ದರೆ ಕಾಲುನಡಿಗೆಯಿಂದ ಭೀಮನ ಮುಂದೆ ಬರಲು ಧೈರ್ಯ ಬರುತ್ತಿರಲಿಲ್ಲ. ಭೀಮ ನಿರಾಯುಧನಾದ್ದರಿಂದ ಕೈಗೆ ಸಿಕ್ಕ ಆನೆಯ ಶವವನ್ನೆ ಎತ್ತಿ ಎಸೆದ. ಬಳಿಕ ಕುದುರೆ, ರಥ ಚಕ್ರ ಏನೆಲ್ಲ ಕೈಗೆ ಸಿಗುವುದೋ ಅದನ್ನು ಎಸೆದ. ಇದು ಯುದ್ಧವಲ್ಲ ಎಂದು ನಕ್ಕ ಕರ್ಣ.

ವ್ಯಸೂನ್ ಗಜಾನ್ ಪ್ರಕ್ಷಿಪಂತಂ ಸಮೇತ್ಯ
ಸಂಸ್ಪೃಶ್ಯ ಚಾಪೇನ ವಚಶ್ಚ ದುಷ್ಟಮ್ ।
ಸಂಶ್ರಾವಯಾಮಾಸ ಸುಯೋಧನಸ್ಯ
ಪ್ರೀತ್ಯೈ ಪ್ರಜಾನನ್ನಪಿ ತಸ್ಯ ವೀರ್ಯಮ್ ॥೧೬೧॥

ಸತ್ತ ಆನೆಗಳನ್ನು ಎಸೆಯುತ್ತಿದ್ದ ಭೀಮನ ಬಳಿಗೆ ಕರ್ಣ ಬಂದು ಬಿಲ್ಲಿನ ಕೊನೆಯಿಂದ ತಿವಿದು ಅವನ ಪರಾಕ್ರಮವನ್ನು ತಿಳಿದೂ ದುರ್ಯೋಧನನ ಸಂತೋಷಕ್ಕಾಗಿ ಕೆಟ್ಟ ಮಾತನ್ನಾಡಿದ.

ಕೆಟ್ಟ ಮಾತೆಂದರೆ, ತೂಬರಕ! ಮೂಢ! ಔದರಿಕ! ಎಂದು ಕರೆಯುವುದು. ಗಡ್ಡಮೀಸೆಗಳನ್ನು ಹೊತ್ತ ಗಂಡಸು ನೀನಲ್ಲ, ವಿದ್ಯೆಕಲಿಯದ ಶುಂಠ, ಹೊಟ್ಟೆಬಾಕ ನೀನು ಯುದ್ಧರಂಗಕ್ಕೆ ಯೋಗ್ಯನಲ್ಲ, ಭಕ್ಷ್ಯ ಭೋಜ್ಯಗಳ ರಾಶಿ ಇರುವ ಭೋಜನಶಾಲೆಗೆ ಯೋಗ್ಯ ಅಥವಾ ಕಂದಮೂಲಾದಿ ತಿನ್ನುತ್ತ ಕಾಡಿನಲ್ಲಿ ವಾಸಮಾಡಲು ಯೋಗ್ಯ ಇತ್ಯಾದಿ ಮಾತು. 'ಯಥೇಚ್ಛ ಅನ್ನ ಭಕ್ಷ್ಯ ನೀಡದವರೊಡನೆ ಜಗಳ ಮಾಡು, ರಣರಂಗದಲ್ಲಿ ಶಸ್ತ್ರಾಸ್ತ್ರಗಳ ಯುದ್ಧ ಮಾಡಲು ಬರಬೇಡ' ಎನ್ನುವ ಮಾತು. (ದ್ರೋಣ ೧೩೯-೯೪) ಬಲಭೀಮನ ಮುಂದೆ ಕರ್ಣ ಇಂಥ ತುಚ್ಛವಾದ ಮಾತನ್ನಾಡುವನೆ? ಇದು ಅವನ ಗಾಂಭೀರ್ಯಕ್ಕೆ ಕುಂದಲ್ಲವೆ? ಅದರಿಂದ ಈ ಭಾಗ ಪ್ರಕ್ಷಿಪ್ತವೆಂದು ಕೆಲವರು ಭಾವಿಸುತ್ತಾರೆ. ಆದರೆ ನಿರ್ಣಯ ಹೇಳುವ ಪ್ರಕಾರ ದುರ್ಯೋಧನನ ಸಂತೋಷಕ್ಕಾಗಿ ಕರ್ಣ ನಾಡುವ ಮಾತು ಇದು. ಅವನ ಸಂತೋಷಕ್ಕಾಗಿ ಎಷ್ಟು ತುಚ್ಛವಾದ ಮಾತನ್ನೂ ಆತ ಆಡಬಲ್ಲ.

ಈ ಮಾತನ್ನು ಕೇಳಿ ಭೀಮ ಕುಪಿತನಾಗಿ 'ನಾನೀಗ ಒಂದು ಬಾರಿ ಸೋತೆನೆಂದರೂ ನೀನು ಅದೆಷ್ಟು ಬಾರಿ ಸೋತಿಲ್ಲ? ಸುಮ್ಮನೆ ಏಕೆ ಬಡಾಯಿ ಕೊಚ್ಚಿಕೊಳ್ಳುವೆ'? ಎಂದ. ಅವನ ಬಿಲ್ಲನ್ನು ಸೆಳೆದು ಅದರಿಂದ ಅವನ ತಲೆಯ ಮೇಲೇ ಹೊಡೆದ. ಮಲ್ಲಯುದ್ಧಕ್ಕೆ ಕರೆದ. ಆದರೆ ಕರ್ಣ ಬರಲಿಲ್ಲ.

ಸಂಶ್ರಾವಯಂತಂ ವಚನಾನಿ ರೂಕ್ಷಾ-
ಣ್ಯಪಾಹನದ್ ಬಾಣವರೈಸ್ತದಾಽರ್ಜುನಃ ।
ಸ ವರ್ಮಹೀನಃ ಪಾರ್ಥಬಾಣಾಭಿತಪ್ತೋ
ವ್ಯಪಾಗಮದ್ ಭೀಮ ಆಪಾತ್ಮಯಾನಮ್ ॥೧೬೨॥

ಭೀಮನ ಮುಂದೆ ಕೆಟ್ಟ ಮಾತುಗಳನ್ನಾಡುತ್ತಿದ್ದ ಕರ್ಣನನ್ನು ಅರ್ಜುನ ಬಾಣ ಸಮೂಹಗಳಿಂದ ಹೊಡೆದ. ಆಗ ಕವಚರಹಿತನಾಗಿದ್ದ ಕರ್ಣ ಅರ್ಜುನನ ಬಾಣಗಳಿಂದ ಬಹಳ ನೋವನ್ನು ಅನುಭವಿಸಿ ಪಲಾಯನ ಮಾಡಿದ. ಭೀಮ ತನ್ನ ರಥವನ್ನೇರಿದ.

ಕರ್ಣೋ೯ ಭೀಮೇ ವಾಸವೀಂ ನೈವ ಶಕ್ತಿಂ
ವಿಮೋಕ್ತುಮೈಚ್ಛನ್ನೈವ ಬೀಭತ್ಸುತೋಽನ್ಯಾನ್ ।
ಹನ್ಯಾಮಿತಿ ಪ್ರಾಹ ಯತಃ ಸ ಕುಂತ್ಯೈ
ಯದ್ಯಪ್ಯವಧ್ಯಃ ಸ ತಯಾಽಪಿ ಭೀಮಃ ॥೧೬೩॥

ಭೀಮನನ್ನು ಶಕ್ತ್ಯಾಯುಧದಿಂದಲೂ ಕೊಲ್ಲಲು ಸಾಧ್ಯವಿರಲಿಲ್ಲ. ಆದರೂ ಅರ್ಜುನನ್ನು ಹೊರತು ಬೇರೆ ಪಾಂಡವರನ್ನು ಕೊಲ್ಲುವುದಿಲ್ಲವೆಂದು ಕರ್ಣ ಕುಂತಿಗೆ ಮಾತುಕೊಟ್ಟಿದ್ದರಿಂದ ಇಂದ್ರನ ಶಕ್ತ್ಯಾಯುಧವನ್ನು ಭೀಮನಲ್ಲಿ ಪ್ರಯೋಗಿಸಲು ಅವನು ಬಯಸಲಿಲ್ಲ.

ನಾರಾಯಣಾಸ್ತ್ರಂ ಶಿರಸಿ ಪ್ರಪಾತಿತಂ
ನ ಯಸ್ಯ ರೋಮಾಪ್ಯದಹಚ್ಚಿರಸ್ಥಿತಮ್ ।
ಕಿಂ ತಸ್ಯ ಶಕ್ತಿಃ ಪ್ರಕರೋತಿ ವಾಸವೀ
ತಥಾಽನ್ಯದಪ್ಯಸ್ತ್ರಶಸ್ತ್ರಂ ಮಹಚ್ಚ ॥೧೬೪॥

ಅಶ್ವತ್ಥಾಮ ಹಾಕಿದ ನಾರಾಯಣಾಸ್ತ್ರವೂ ಕೂಡ ಭೀಮನ ತಲೆಯ ಮೇಲೆ ಬಹಳ ಹೊತ್ತು ನಿಂತೂ ಅವನ ಒಂದು ರೋಮವನ್ನೂ ಸುಡಲಿಲ್ಲ. ಅವನಿಗೆ ಇಂದ್ರನ ಶಕ್ತ್ಯಾಯುಧ ಏನು ಮಾಡಬಲ್ಲದು? ಇದೇ ರೀತಿ ಬೇರೆ ಮಹಾಶಸ್ತ್ರಾಸ್ತ್ರವೂ ಕೂಡ ಭೀಮನ ಮೇಲೆ ಏನು ಪರಿಣಾಮ ಮಾಡಬಲ್ಲದು?

ಭೀಮಃ ಕರ್ಣರಥಂ ಪ್ರಾಪ್ತಃ ಶಕ್ತಿಂ ನಾಽದಾತುಮೈಚ್ಛತ ।
ಅಭಿಪ್ರಾಯಂ ಕೇಶವಸ್ಯ ಜಾನನ್ ಹೈಡಿಂಬಮೃತ್ಯವೇ ॥೧೬೫॥

ಭೀಮ ಕರ್ಣನ ರಥಕ್ಕೆ ಬಂದೂ ಅವನ ಶಕ್ತ್ಯಾಯುಧವನ್ನು ಅಪಹರಿಸಲು ಬಯಸಲಿಲ್ಲ. ಏಕೆಂದರೆ ಅದು ಮುಂದೆ ಘಟೋತ್ಕಚನ ವಧೆಗೆ ಕಾರಣವಾಗಲೆಂಬ ಕೃಷ್ಣನ ಸಂಕಲ್ಪವನ್ನು ಅವನು ತಿಳಿದಿದ.

ತತಃ ಕರ್ಣೋಽನ್ಯಮಾಸ್ಥಾಯ ರಥಮರ್ಜುನಮಭ್ಯಯಾತ್ ।
ದಿವ್ಯಂ ರಥಂ ಧನುಶ್ಚೈವ ಕೃಷ್ಣಬುದ್ಧ್ಯಾಽರ್ಜುನೋ ಹರೇತ್ ॥೧೬೬॥
ಇತಿ ಭೀತಸ್ತು ತಾಂ ಶಕ್ತಿಮಾದಾಯಾರ್ಜುನಮೃತ್ಯವೇ ।
ಯುದ್ಧಾಯಾಯಾದ್ ರಥಂ ಚಾಪಂ ಶಕ್ತಿಂ ಚೈಕತ್ರ ನಾಕರೋತ್ ।
ಏಕಂ ಹೃತಂ ಚೇದನ್ಯತ್ ಸ್ಯಾದಿತಿ ಮತ್ವಾ ಭಯಾಕುಲಃ ॥೧೬೭॥
ಬಿಭೇತಿ ಸರ್ವದಾ ನೀತೇಃ ಕೃಷ್ಣಸ್ಯಾಮಿತತೇಜಸಃ ॥೧೬೮॥

ಬಳಿಕ ಕರ್ಣ ಬೇರೆ ಸಾಮಾನ್ಯ ರಥವನ್ನೇರಿ ಅರ್ಜುನನ್ನು ಇದಿರಿಸಿದ. ಪರಶುರಾಮನಿತ್ತ

ದಿವ್ಯರಥವನ್ನೂ ದಿವ್ಯ ಧನುಸ್ಸನ್ನೂ ತಂದರೆ ಅವುಗಳನ್ನು, ಕೃಷ್ಣ ಹೇಳಿಕೊಡುವ ಉಪಾಯದಿಂದ, ಅರ್ಜುನ ಅಪಹರಿಸಬಹುದೆಂದು ಭಯಪಟ್ಟ ಕರ್ಣ ಶಕ್ತ್ಯಾಯುಧವನ್ನು ಮಾತ್ರವೇ ಅರ್ಜುನನ ವಧೆಗಾಗಿ ಯುದ್ಧಕ್ಕೆ ಹಿಡಿದು ಬಂದಿದ್ದ. ಮೂರರಲ್ಲಿ ಒಂದನ್ನು ಅರ್ಜುನ ಅಪಹರಿಸಿದರೂ ಇನ್ನೆರಡಾದರೂ ತನಗೆ ಉಳಿದೀತೆಂದು ಭಯಾಕುಲನಾಗಿದ್ದ ಕರ್ಣ ದಿವ್ಯ ರಥ, ದಿವ್ಯಬಿಲ್ಲು ಶಕ್ತ್ಯಾಯುಧ ಈ ಮೂರನ್ನೂ ಒಂದು ಕಡೆ ಎಂದೂ ತರುತ್ತಿರಲಿಲ್ಲ. ಅಪರಿಮಿತಶಕ್ತನಾದ ಕೃಷ್ಣನ ಯುದ್ಧನೀತಿಗೆ ಅವನು ಸದಾ ಭಯಪಡುತ್ತಿದ್ದ.

ನಿಶ್ಚಿತೋ ಮರಣಾಯೈವ ಮೃತಿಕಾಲೇ ತು ತಂ ರಥಮ್ ।
ಆರುಹ್ಯಾಗಾದ್ಧಿ ಪೂರ್ವಂ ತು ನ ಕಾಲಂ ಮನ್ಯತೇ ಮೃತೇಃ ॥೧೬೯॥

ಮರಣಕಾಲದಲ್ಲಿ ಮಾತ್ರ ಕರ್ಣ ಮರಣ ಹೊಂದಲು ನಿಶ್ಚಯಿಸಿಕೊಂಡೇ ಆ ದಿವ್ಯ ರಥವೇರಿ ಬಂದ. ಅದಕ್ಕಿಂತ ಪೂರ್ವದಲ್ಲಿ ಆ ಕಾಲವನ್ನು ತನ್ನ ಮರಣಕಾಲವೆಂದು ಆತ ನಿಶ್ಚಯಿಸಿರಲಿಲ್ಲ.

ಮುಂದೆ ಕರ್ಣಪರ್ವದಲ್ಲಿ ಕರ್ಣ ದಿವ್ಯರಥವೇರಿ ದಿವ್ಯಧನುಸ್ಸನ್ನು ಹಿಡಿದೇ ಅರ್ಜುನನೊಡನೆ ಯುದ್ಧಕ್ಕೆ ನಿಂತ. ಆಗ ಆ ರಥಧನುಸ್ಸುಗಳನ್ನು ಅರ್ಜುನ ಅಪಹರಿಸುವನೆಂಬ ಭಯ ಇರಲಿಲ್ಲವೆ? ಎಂದರೆ, 'ಇದು ನನ್ನ ಮರಣಕಾಲ. ನನ್ನ ಮರಣಾನಂತರ ಈ ರಥಧನುಸ್ಸುಗಳನ್ನು ಯಾರು ಅಪಹರಿಸಿದರೆ ಏನು? ಎಂದು ಆಗ ಅವನ ವಿಚಾರವಿದ್ದಿತು. ಈಗ ದ್ರೋಣಪರ್ವದ ಯುದ್ಧಗಳಲ್ಲಿ ತಾನು ಮರಣ ಹೊಂದುವೆನೆಂದು ಅವನು ಭಾವಿಸಿರಲಿಲ್ಲ. ಆದರಿಂದ ರಥ ಧನುಸ್ಸುಗಳನ್ನು ಉಳಿಸಿಕೊಳ್ಳುವ ಆಸೆ. ಪ್ರಬಲವಾದ ಒಂದು ಶಕ್ತ್ಯಾಯುಧವನ್ನೂ ತರದಿದ್ದರೆ ಅರ್ಜುನ ತನ್ನನ್ನು ತುಚ್ಛನನ್ನಾಗಿ ಮಾಡಿಯಾನೆಂದು ಭಯವಿದ್ದಿತು. -ವಾದಿರಾಜೀಯ

ಶಕ್ತಿಂ ತು ತದ್ರಥಗತಾಂ ಪ್ರಸಮೀಕ್ಷ್ಯ ಕೃಷ್ಣಃ
ಸಂಸ್ಥಾಪ್ಯ ಪಾರ್ಥಮಪಿ ಸಾತ್ಯಕಿಮೇವ ಯೋದ್ಧುಮ್ ।
ದತ್ತ್ವಾ ಸ್ವಕೀಯರಥಮೇವ ವಿರೋಚನಸ್ಯ
ಪುತ್ರೇಣ ಸೋಽದಿಶದಮುಷ್ಯ ಬಲಂ ಪ್ರದಾಯ ॥೧೭೦॥

ಕರ್ಣನ ರಥದಲ್ಲಿ ಶಕ್ತ್ಯಾಯುಧವಿದ್ದುದನ್ನು ಕಂಡು ಕೃಷ್ಣ ಅರ್ಜುನನನ್ನು ತಡೆದು ಸಾತ್ಯಕಿಗೆ ತನ್ನ ರಥವನ್ನು ಕೊಟ್ಟು ಬಲವನ್ನೂ ನೀಡಿ ಕರ್ಣನೊಡನೆ ಹೋರಾಡಲು ಅವನಿಗೆ ಆದೇಶ ನೀಡಿದ.

ಕರ್ಣ ಈಗ ಶಕ್ತ್ಯಾಯುಧ ತಂದಿದ್ದಾನೆ. ಅವನೊಡನೆ ಅರ್ಜುನ ಹೋರಾಡಿದರೆ ಅವನು ಶಕ್ತ್ಯಾಯುಧವನ್ನೆಸೆಯುವುದು ನಿಶ್ಚಿತ. ನಾನು

ಅರ್ಜುನನನ್ನು ಕಾಪಾಡಿ ಶಕ್ತ್ಯಾಯುಧವನ್ನು ವ್ಯರ್ಥಗೊಳಿಸಬೇಕಾಗುತ್ತದೆ. ಘಟೋತ್ಕಚನಿಗೆ ಶಕ್ತ್ಯಾಯುಧದಿಂದ ಮರಣವಾಗಬೇಕೆಂಬ ನನ್ನ ಸಂಕಲ್ಪವೂ ನಡೆಯದೆ ಹೋದೀತು ಎಂದು ಶ್ರೀಕೃಷ್ಣ ಆಲೋಚಿಸಿ ಅರ್ಜುನನನ್ನು ತಡೆದು ಸಾತ್ಯಕಿಗೇ ಆದೇಶಿಸಿದ.

'ಕೃಷ್ಣ ಅರ್ಜುನ ಸಾತ್ಯಕಿ ಈ ಮೂವರೇ ಧನುರ್ಧಾರಿಗಳು. ನಾಲ್ಕನೆಯವನಿಲ್ಲ' (ದ್ರೋಣ ೧೪೫.೬೧) ಎನ್ನುವಂತೆ ಸಾತ್ಯಕಿ ಬಲವಾಗಿ ಹೋರಾಡಲು ಕಾರಣ ಆತ ದಾರುಕನ ಸಾರಥ್ಯದಲ್ಲಿ ಶ್ರೀಕೃಷ್ಣನ ದಿವ್ಯ ಗರುಡಧ್ವಜ ರಥದಲ್ಲಿ ಕುಳಿತಿದ್ದ ಮತ್ತು ಶ್ರೀಕೃಷ್ಣನ ಆವೇಶದಿಂದ ಅವನಲ್ಲಿ ವಿಶೇಷ ಬಲ ವ್ಯಕ್ತವಾಗಿತ್ತು. 'ಬಲಂ ಸ್ವಾವೇಶೇನ ಸಾಮರ್ಥ್ಯಾತಿಶಯಂ' ಎನ್ನುತ್ತದೆ-ವಾದಿರಾಜೀಯ.

ಶಿಷ್ಯಂ ತ್ವಶಕ್ತಮಿಹ ಮೇ ಪ್ರತಿಯೋಧನಾಯ
ಪಾರ್ಥೋ ಹ್ಯದಾದಿತಿ ಸ ಸಾತ್ಯಕಿಮೀಕ್ಷಮಾಣಃ।
ಸಂಸ್ಪರ್ಧಯೈವ ಯುಯುಧೇ ವಿರಥಂ ಚಕಾರ
ತೇನೈವ ಸಾತ್ಯಕಿರಮುಂ ಹರಿಯಾನಸಂಸ್ಥಃ ॥೧೭೧॥

ಅರ್ಜುನ ನನ್ನೊಡನೆ ಹೋರಾಡಲು ದುರ್ಬಲನಾದ ತನ್ನ ಶಿಷ್ಯನನ್ನು ಕಳಿಸಿಕೊಟ್ಟಿದ್ದಾನೆ ಎಂದು ಕರ್ಣ ಸಾತ್ಯಕಿಯನ್ನು ದಿಟ್ಟಿಸುತ್ತ ಸ್ಪರ್ಧೆಯಿಂದಲೆ ಯುದ್ಧಮಾಡಿದ. ಅದರಿಂದ ಕೃಷ್ಣನ ರಥದಲ್ಲಿ ಕುಳಿತಿದ್ದ ಸಾತ್ಯಕಿ ಅವನನ್ನು ವಿರಥನನ್ನಾಗಿ ಮಾಡಿದ.

ಅರ್ಜುನನ ಶಿಷ್ಯ ಸಾತ್ಯಕಿ. ದುರ್ಬಲನೆಂದು ಲೋಕಕ್ಕೆ ತೋರಿಸುವುದಕ್ಕೆ ತಾನು ಹೆಚ್ಚು ಪರಾಕ್ರಮ ತೋರಬೇಕೆಂದು ಅರ್ಜುನನೊಂದಿಗೆ ಸ್ಪರ್ಧೆ ಮಾಡಿದ್ದರಿಂದಲೂ ಕರ್ಣ ಪರಶುರಾಮನ ಶಾಪದಿಂದ ಜಯಗಳಿಸಲಾರದೆ ಹೋದ. ಕೃಷ್ಣನ ರಥದಲ್ಲಿದ್ದುದರಿಂದ ಸಾತ್ಯಕಿ ಸುಲಭವಾಗಿ ಗೆದ್ದ. ಅವನು ಕರ್ಣನ ಸಾರಥಿಯನ್ನೂ ನಾಲ್ಕು ಬಿಳಿ ಕುದುರೆಗಳನ್ನೂ ಕೊಂದ. ಆಗ ಶಲ್ಯ ಅಶ್ವತ್ಥಾಮ ದುಃಶಾಸನ ವೃಷಸೇನ ಎಲ್ಲರೂ ಸಾತ್ಯಕಿಯನ್ನು ಸುತ್ತುವರಿದರು. ಕರ್ಣ ದುರ್ಯೋಧನನ ರಥವೇರಿದ. ಏಕೆಂದರೆ ಭೀಮಾರ್ಜುನರ ಪ್ರತಿಜ್ಞೆಯನ್ನು ನೆನೆದು ಸಾತ್ಯಕಿ ಕರ್ಣನನ್ನು ಕೊಲ್ಲದೆ ಬಿಟ್ಟಿದ್ದ.

ನ ಕೇಶವರಥೇ ಕಶ್ಚಿತ್ ಸ್ಥಿತೋ ಯಾತಿ ಪರಾಜಯಮ್।
ಅತಶ್ಚ ಸಾತ್ಯಕಿರ್ನಾऽಪ ಕರ್ಣೇನಾತ್ರ ಪರಾಜಯಮ್ ॥೧೭೨॥

ಶ್ರೀಕೃಷ್ಣನ ರಥದಲ್ಲಿ ಕುಳಿತವನು ಯಾರೂ ಯುದ್ಧದಲ್ಲಿ ಪರಾಜಯ ಹೊಂದುವುದಿಲ್ಲ. ಅದರಿಂದಲೂ ಸಾತ್ಯಕಿ ಕರ್ಣನಿಂದ ಪರಾಜಯ ಹೊಂದಲಿಲ್ಲ.

ಭೀಮನ ರಹಸ್ಯ ಪ್ರತಿಜ್ಞೆ

ಶಸ್ತ್ರಸಂಗ್ರಹಕಾಲೇ ತು ಕುಮಾರಾಣಾಂ ವ್ರತಂ ಭವೇತ್ ।
ಇತ್ಯುಕ್ತಂ ಜಾಮದಗ್ನ್ಯೇನ ಧನುರ್ವಿದ್ಯಾಪುರಾಕೃತಾ ॥೧೭೩॥

ಧನುರ್ವಿದ್ಯೆಯ ಪ್ರಥಮ ಆಚಾರ್ಯನಾದ ಪರಶುರಾಮ ಶಿಷ್ಯರಿಗೆ ಹೇಳಿದ್ದ 'ಶಿಷ್ಯರಿಗೆ ಶಸ್ತ್ರವಿದ್ಯಾಭ್ಯಾಸ ಮಾಡಿಸುವ ಕಾಲದಲ್ಲಿ ನೀವು ಕುಮಾರರಿಂದ ಒಂದು ವ್ರತವನ್ನು ಸ್ವೀಕಾರ ಮಾಡಿಸಬೇಕು.

ತಚ್ಛತ್ರುವಧರೂಪಂ ಚ ಪೂರ್ವಾಸಿದ್ಧಂ ಚ ಗೂಹಿತಮ್ ।
ಅವಿರುದ್ಧಂ ಚ ಧರ್ಮಸ್ಯ ಕಾರ್ಯಂ ರಾಮಸ್ಯ ತುಷ್ಟಿದಮ್ ।
ಅನುಪದ್ರವಂ ಚ ಲೋಕಸ್ಯೇತ್ಯತೋ ಭೀಮೋ ವ್ರತಂ ತ್ವಿದಮ್ ॥೧೭೪॥
ಚಕಾರ ತೂಬರೇತ್ಯುಕ್ತೇ ಹನ್ಯಾಮಿತಿ ರಹಃ ಪ್ರಭುಃ ॥೧೭೫॥

'ಆ ವ್ರತ ಶತ್ರುವಧದ ವ್ರತವಾಗಿರಬೇಕು. ಹಿಂದೆ ಯಾರೂ ಮಾಡದಿದ್ದುದಾಗಿರಬೇಕು. ಗೋಪ್ಯವಾಗಿರಬೇಕು. ಧರ್ಮಕ್ಕೆ ಅವಿರುದ್ಧವಾಗಿರಬೇಕು. ನನಗೆ ಸಂತೋಷದಾಯಕವಾಗಿರಬೇಕು. ಲೋಕಕ್ಕೆ ಉಪದ್ರವವಾಗದಂತಿರಬೇಕು' ಎಂದು. ಅದರಿಂದ ಸರ್ವಶಕ್ತನಾದ ಭೀಮಸೇನ ರಹಸ್ಯವಾಗಿ ಈ ಒಂದು ವ್ರತವನ್ನು ತೊಟ್ಟ 'ನನ್ನನ್ನು ಯಾರು ತೂಬರ, ಹರಕುಗಡ್ಡದವನೆನ್ನುವನೋ ಅವನನ್ನು ಕೊಲ್ಲುವೆ' ಎಂದು.

ಅನುಪದ್ರವಾಯ ಲೋಕಸ್ಯ ಸುವ್ಯಕ್ತಶ್ಮಶ್ರುಮಂಡಲಃ ।
ಸುಶ್ಮಶ್ರುಂ ಮಾಂ ನ ಕಶ್ಚಿದ್ಧಿ ತಥಾ ಬ್ರೂಯಾದಿತಿ ಸ್ಫುಟಮ್ ।
ತದರ್ಜುನೋ ವಿಜಾನಾತಿ ಸ್ನೇಹಾದ್ ಭೀಮೋದಿತಂ ರಹಃ ॥೧೭೬॥

ಸೊಂಪಾಗಿ ಬೆಳೆದ ಗಡ್ಡ ಉಳ್ಳ ಭೀಮ ಲೋಕಕ್ಕೆ ಉಪದ್ರವವಾಗದಂತೆ ಈ ಪ್ರತಿಜ್ಞೆಗೈದ. ಏಕೆಂದರೆ ಒಳ್ಳೆಯ ಗಡ್ಡಉಳ್ಳ ನನ್ನನ್ನು ಯಾರೂ ಹರಕಲು ಗಡ್ಡದವನೆಂದು ಹೇಳಲಾರರು ಎಂದು. ಭೀಮ ಏಕಾಂತದಲ್ಲಿ ಸ್ವೀಕರಿಸಿದ ಈ ಪ್ರತಿಜ್ಞೆಯನ್ನು ಅರ್ಜುನ ಸೋದರ ಸ್ನೇಹ ಪ್ರಯುಕ್ತ ತಿಳಿದುಕೊಂಡಿದ್ದಾನೆ.

ಭೀಮ ತನ್ನ ಪ್ರತಿಜ್ಞೆಯನ್ನು ರಹಸ್ಯವಾಗಿ ಇಟ್ಟಿದ್ದ. ಇಲ್ಲದಿದ್ದರೆ ಹಾಸ್ಯಕ್ಕಾಗಿ ಎಲ್ಲರೂ ಅವನನ್ನು ತೂಬರ ಹರಕುಗಡ್ಡದವನೆಂದು ಕರೆದು ತಮ್ಮ ಮೃತ್ಯುವನ್ನು ತಾವೇ ಬರಮಾಡಿಕೊಳ್ಳುತ್ತಿದ್ದರು. ಇದು ಲೋಕ್ಕೆ ಮಹಾ ಉಪದ್ರವಕಾರಕವಾಗಿದ್ದು ಪರಶುರಾಮನಿಗೆ ಅಸಂತೋಷಕಾರಣ ವಾಗುತ್ತಿತ್ತು.

ಈ ರಹಸ್ಯ ಪ್ರತಿಜ್ಞೆಯನ್ನರಿಯದೆ 'ಭೀಮ ವಾಸ್ತವದಲ್ಲಿ ಗಡ್ಡಮೀಸೆಗಳಿಲ್ಲದವನಾಗಿದ್ದ. ಅದರಿಂದ ಹಾಗೆ ಹೇಳಿದರೆ ಸಿಟ್ಟಾಗುತ್ತಿದ್ದ'

ಎಂದು ನೀಲಕಂಠೀ ಮುಂತಾದ ವ್ಯಾಖ್ಯಾನಗಳು ಹೇಳುತ್ತಿವೆ. ಆದರೆ ಹೀಗೆ ಇದ್ದುದನ್ನು ಹೇಳಿದಾಗ ಭೀಮ ಸಿಟ್ಟಾಗಿ ಕೊಲ್ಲಲು ಹೊರಟಿದ್ದರೆ ಲೋಕೋಪದ್ರವವಾಗುತ್ತಿತ್ತು. ವಸ್ತುತಃ ತ್ರಿಲೋಕ ಸುಂದರಿ ದ್ರೌಪದೀ ರಮಣನಾದ ಭೀಮ ಸರ್ವಥಾ ಮೀಸೆ ಇಲ್ಲದವನಲ್ಲ.

'ತೂಬರ' ಎಂದು ಕರೆದವರೆಲ್ಲ ಭೀಮನಿಗೆ ಶತ್ರುಗಳೆನಿಸುವರೆ? ಇದು ಶತ್ರುವಧದ ವ್ರತ ಹೇಗಾದೀತು? ಈ ಪ್ರಶ್ನೆಗೆ ವಾದಿರಾಜರು ಹೇಳುತ್ತಾರೆ– ನನ್ನನ್ನು 'ತೂಬರ' ನೆಂದು ಯಾರೂ ಹೇಳಬಾರದು ಎನ್ನುವ ಭೀಮನ ಇಚ್ಛೆಗೆ ವಿರೋಧವಾಗಿ ವರ್ತಿಸುವವರು ಇಲ್ಲಿ 'ಶತ್ರು' ಪದದಿಂದ ವಿವಕ್ಷಿತರಾಗಿದ್ದಾರೆ. ಹೊರತು ಅವರು ಶತ್ರುಗಳೇ ಆಗಬೇಕಾಗಿಲ್ಲ.[1]

ಅರ್ಜುನಸ್ಯಾಪಿ ಗಾಂಡೀವಂ ದೇಹೀತ್ಯುಕ್ತೇ ನಿಹನ್ಮಿ ತಮ್ ।
ಗಾಂಡೀವಸ್ಯಾಽಗಮಂ ಪೂರ್ವಂ ಜಾನಾತ್ಯೇವ ಹಿ ನಾರದಾತ್ ॥೧೭೭॥

'ನಿನ್ನ ಗಾಂಡೀವವನ್ನು ಬೇರೆಯವರಿಗೆ ಕೊಡು' ಎಂದು ಹೇಳಿದರೆ ಅವನನ್ನು ಕೊಲ್ಲುವೆನೆಂದು ಅರ್ಜುನನದೂ ಪ್ರತಿಜ್ಞೆ ಇದ್ದಿತು. ಗಾಂಡೀವ ಪ್ರಾಪ್ತಿಯ ಬಗ್ಗೆ ನಾರದರ ಮಾತಿನಿಂದ ಅರ್ಜುನ ಮೊದಲೇ ತಿಳಿದಿದ್ದ.

ಶಸ್ತ್ರಾಭ್ಯಾಸ ಕಾಲದಲ್ಲಿ, ಇನ್ನೂ ಗಾಂಡೀವಧನುಸ್ಸು ಸಿಕ್ಕದಿದ್ದಾಗ ಅರ್ಜುನ ಈ ಪ್ರತಿಜ್ಞೆಯನ್ನು ಹೇಗೆ ಮಾಡಿದನೆಂದರೆ ನಿನಗೆ ಮುಂದೆ ದಿವ್ಯವಾದ ಗಾಂಡೀವ ಧನುಸ್ಸು ಲಭಿಸುತ್ತದೆ ಎಂದು ನಾರದರು ಭವಿಷ್ಯ ನುಡಿದಿದ್ದರು. ಅದಕ್ಕನುಸಾರವಾಗಿ ಅರ್ಜುನ ಮೊದಲೇ ಪ್ರತಿಜ್ಞೆ ಮಾಡಿದ.

ಇತಿ ತಚ್ಚ ವಿಜಾನಾತಿ ಭೀಮ ಏಕೋ ನ ಚಾಪರಃ ॥೧೭೮॥

ಹೀಗೆ ಅರ್ಜುನ ಪ್ರತಿಜ್ಞೆ ಮಾಡಿದ್ದನ್ನು ಭೀಮನೊಬ್ಬನೇ ತಿಳಿದಿದ್ದ. ಇನ್ನಾರೂ ತಿಳಿದಿರಲಿಲ್ಲ.

---

1. ತೂಬರೇತಿ ವದಂತಂ ಹನ್ಮೀತಿ ವ್ರತಕರ್ತುಃ 'ತೂಬರೇತಿ ಕೇನಾಪಿ ನ ವಕ್ತವ್ಯಂ' ಇತಿ ಯನ್ಮನೀಷಿತಂ ತಸ್ಯ ಯಃ ಶತ್ರುಃ ವಿಪರೀತಕಾರೀ, ತೂಬರೇತಿ ವಕ್ತೇತ್ಯರ್ಥಃ। ಗೂಹಿತಂ ಕೇನಾಪ್ಯಜ್ಞಾತಂ। ಗೂಹನಾಭಾವೇ ಯಃಕೋಽಪಿ ವದಿಷ್ಯತಿ ಚೇತ್ ಸ ಸರ್ವೋಽಪಿ ಮಾರಣೀಯಃ ಸ್ಯಾದಿತ್ಯತೋ ಗೂಹನಂ ಕಾರ್ಯಂ। ಧರ್ಮಸ್ಯಾವಿರುದ್ಧಮಿತಿ ವದತಾ ಏಕಾದಶೀ ಭೋಜನಾದಿ ವ್ರತಂ ನ ಕಾರ್ಯಮಿತಿ ಸೂಚಿತಂ। ಅನುಪದ್ರವಂ ಪ್ರಾಯಶಃ ಉಪದ್ರವಾಜನಕಂ। ವಿದ್ಯಮಾನ ದೋಷ ಕಥನೇ ಹನ್ಮೀತಿ ಪ್ರತಿಜ್ಞಾಯಾಂ ಸರ್ವೇಽಪಿ ಬ್ರೂಯುಃ ಸರ್ವೇಷಾಮಪಿ ಹನನಂ ಸ್ಯಾತ್। ಅವಿದ್ಯಮಾನ ದೋಷಕಥನೇ ತಸ್ಯ ಹನನ ಪ್ರತಿಜ್ಞಾಯಾಂ ಅವಿದ್ಯಮಾನತ್ವಾದೇವ ಕೋಽಪಿ ನಬ್ರೂಯಾತ್, ಹನನಂ ಚ ಕಸ್ಯಾಪಿ ನ ಭವೇತ್ ಇತಿ ಭಾವೇನ ಅನುಪದ್ರವ ಮಿತ್ಯುಕ್ತಂ। ಚುಬುಕಾಗ್ರ ಶ್ಮಶ್ರುಮಾನ್ ಹಿ ತೂಬರ ಇತ್ಯುಚ್ಯತೇ। ಲೋಕೋತ್ತರ ಸೌಂದರ್ಯವತ್ಯಾ ದ್ರೌಪದ್ಯಾಶ್ಚಿತ್ತಾಕರ್ಷಣ ಸಮರ್ಥೇ ಮಯಿ ತಚ್ಚಾಸಂಭಾವಿತಮಿತಿ ಭಾವಃ। –ವಾದಿರಾಜೀಯ

ಅದರಿಂದಲೆ ಧರ್ಮರಾಜ ತಿಳಿಯದೆ ಅರ್ಜುನನನ್ನು ಬೈದು 'ನಿನಗೇಕೆ ಗಾಂಡೀವ? ಕೃಷ್ಣನಿಗೆ ಕೊಡು, ಅವನು ಕರ್ಣನನ್ನು ಕೊಲ್ಲುತ್ತಾನೆ' ಎಂದುಬಿಟ್ಟ, ಅರ್ಜುನ ಅವನನ್ನು ಕೊಲ್ಲಲು ಹೊರಟ. ಶ್ರೀಕೃಷ್ಣ ತಡೆದನೆಂದು ಮುಂದೆ ಕಥೆ ಬರುತ್ತದೆ.

ಪ್ರತಿಜ್ಞಾಂ ಭೀಮಸೇನಸ್ಯ ಬ್ರುವತಃ ಫಲ್ಗುನೇ ರಹಃ ।
ದುರ್ಯೋಧನಸ್ತು ಶುಶ್ರಾವ ತಾಂ ಚ ಕರ್ಣಾಯ ಸೋಽಬ್ರವೀತ್ ೧೭೯॥

ಭೀಮಸೇನ ತನ್ನ ಪ್ರತಿಜ್ಞೆಯನ್ನು ಗೋಪ್ಯವಾಗಿ ಅರ್ಜುನನಿಗೆ ಹೇಳುತ್ತಿದ್ದಾಗ ದುರ್ಯೋಧನ ಅದನ್ನು ಕದ್ದಾಲಿಸಿದ. ಅವನು ಅದನ್ನು ಕರ್ಣನಿಗೆ ಹೇಳಿದ.

ಅದರಿಂದಲೆ ಉಲೂಕನನ್ನು ದೂತನನ್ನಾಗಿ ಕಳಿಸುವಾಗ ದುರ್ಯೋಧನ 'ಆ ತೂಬರನಿಗೆ ಹೀಗೆ ಹೇಳು' ಎಂದು ಮುಂತಾಗಿ ಹೇಳಿ ಕಳಿಸುತ್ತಾನೆ. ಕರ್ಣನೂ 'ತೂಬರ' ಎಂದು ಗೇಲಿ ಮಾಡುತ್ತಾನೆ. ಇದರಿಂದ ಭೀಮ ತನ್ನ ಪ್ರತಿಜ್ಞೆಯಂತೆ ಅವರನ್ನು ಕೊಲ್ಲಲು ಬಯಸಬೇಕು. ಕೊಲ್ಲಲಾಗದೆ ಪರಿತಪಿಸಬೇಕೆನ್ನುವುದು ಅವರಿಬ್ಬರ ಮನೋರಥವಾಗಿತ್ತು.

ಅತೂಬರೋಽಪಿ ತೇನಾಸೌ ತಸ್ಮಾತ್ ತೂಬರ ಇತ್ಯಲಮ್ ।
ಉಕ್ತಃ ಪ್ರಕೋಪನಾಯೈವ ತಸ್ಮಾದರ್ಜುನಮಬ್ರವೀತ್ ॥೧೮೦॥

ಭೀಮನಿಗೆ ಕೋಪ ಬರಿಸಲೆಂದೇ ಕರ್ಣ ತೂಬರನಲ್ಲದವನನ್ನು ತೂಬರ ಎಂದು ನಿಂದಿಸಿದ. ಅದರಿಂದ ಭೀಮ ಅರ್ಜುನನಿಗೆ ಹೇಳಿದ.

ಜಾನಾಸಿ ಮತ್ಪ್ರತಿಜ್ಞಾಂ ತ್ವಂ ತ್ವತ್ಪ್ರತಿಜ್ಞಾಮಹಂ ತಥಾ ।
ತತ್ರ ಹಂತವ್ಯತಾಂ ಪ್ರಾಪ್ತೋ ಮಮ ವೈಕರ್ತನೋಽತ್ರಹಿ ॥೧೮೧॥
ಪ್ರತಿಜ್ಞಾತೋ ವಧಶ್ಚಾಸ್ಯ ತ್ವಯಾಽಪಿ ಮದನುಜ್ಞಯಾ ।
ಅತಸ್ತ್ವಯಾ ಮಯಾ ವಾಯಂ ಹಂತವ್ಯಃ ಸೂತನಂದನಃ ॥೧೮೨॥

ನನ್ನ ಪ್ರತಿಜ್ಞೆಯನ್ನು ನೀನು ತಿಳಿದಿರುವಿ. ನಿನ್ನ ಪ್ರತಿಜ್ಞೆಯನ್ನು ನಾನು ತಿಳಿದಿದ್ದೇನೆ. ಈಗ ಕರ್ಣ ನನಗೆ ವಧ್ಯನೆನಿಸಿದ್ದಾನೆ. ನೀನೂ ಅವನನ್ನು ವಧಿಸುವ ಪ್ರತಿಜ್ಞೆ ಮಾಡಿರುವಿ, ಅದು ನನ್ನ ಅನುಜ್ಞೆಯಿಂದ. ಹೀಗಾಗಿ ನೀನು ಅಥವಾ ನಾನು ಕರ್ಣನನ್ನು ಕೊಲ್ಲಬೇಕಾಗಿದೆ.

'ಕರ್ಣ ಈಗ ನನ್ನನ್ನು ನಿಂದಿಸಿ ನನ್ನ ಪ್ರತಿಜ್ಞಾನುಸಾರ ನನಗೆ ವಧ್ಯನೆನಿಸಿದ್ದಾನೆ. ನಿನಗೆ ಹಿಂದೆಯೆ ದ್ಯೂತಪ್ರಸಂಗದಲ್ಲಿ ಪ್ರತಿಜ್ಞೆ ಮಾಡಿದ್ದಂತೆ ವಧ್ಯನಾಗಿದ್ದಾನೆ. ಆದರೆ ನೀನು 'ಸ್ಪಷ್ಟವಾಗಿ ಕರ್ಣನನ್ನು ಕೊಲ್ಲುತ್ತೇನೆ' ಎಂದೇ ಪ್ರತಿಜ್ಞೆ ಮಾಡಿರುವಿ. ನಾನಾದರೊ 'ಯಾರು ನನ್ನನ್ನು ತೂಬರನೆನ್ನುವನೋ ಅವನನ್ನು ಕೊಲ್ಲುವೆನೆ'ಂದು ಸಾಮಾನ್ಯವಾಗಿ ಪ್ರತಿಜ್ಞೆ ಮಾಡಿದ್ದೆ. ಅದರಿಂದ ನನ್ನ ಪ್ರತಿಜ್ಞೆಗಿಂತ ನಿನ್ನದೇ ಹೆಚ್ಚಿನದು. ನೀನು ಪ್ರತಿಜ್ಞೆ

ಮಾಡಿರುವುದು ನನ್ನ ಆದೇಶಾನುಸಾರವಾದ್ದರಿಂದ ಅದು ವಸ್ತುತಃ ನನ್ನ ಪ್ರತಿಜ್ಞೆಯೆ ಆಗಿದೆ. ನೀನು ನನ್ನ ಅಂಶದಿಂದ ಆವಿಷ್ಟನೂ ಹೌದು. ಅದರಿಂದ ಅದನ್ನು ನೀನು ಪೂರೈಸಿದರೆ ನಾನೂ ಪೂರೈಸಿದಂತೆ ಆಗುವುದು. ಹೀಗೆ ಮೂರು ಕಾರಣಗಳಿಂದ ನಾನು ಕರ್ಣನನ್ನು ಕೊಲ್ಲುವುದಕ್ಕಿಂತ ನೀನು ಕೊಲ್ಲುವುದೇ ಹೆಚ್ಚು ಉಚಿತ. ನಿನ್ನ ಅಭಿಪ್ರಾಯವೇನು ಹೇಳು' ಎನ್ನುತ್ತಿದ್ದಾನೆ ಭೀಮ ಎಂದು ವಾದಿರಾಜೀಯದಲ್ಲಿ ಹೇಳಿದೆ.

ಇತ್ಯುಕ್ತೋ ವಾಸವಿಃ ಪ್ರಾಹ ಹಂತವ್ಯೋಽಯಂ ಮಯ್ಯೈವ ಹಿ ।
ತ್ವದೀಯೋಽಹಂ ಯತಸ್ತೇನ ಮತ್ಕೃತಂ ತ್ವತ್ಕೃತಂ ಭವೇತ್ ॥೧೮೩॥
ನ ತ್ವತ್ಕೃತಂ ಮತ್ಕೃತಂ ಸ್ಯಾದ್ ಗುರುರ್ಮಮ ಯತೋ ಭವಾನ್ ’।
ಅತೋ ಮಯ್ಯೈವ ಹಂತವ್ಯ ಇತ್ಯುಕ್ತ್ವಾ ಕರ್ಣಮಬ್ರವೀತ್ ॥೧೮೪॥

ಭೀಮ ಹೀಗೆ ಹೇಳಿದಾಗ ಅರ್ಜುನನೆಂದ 'ನಾನೇ ಕರ್ಣನನ್ನು ಕೊಲ್ಲುವುದು ಉಚಿತ. ಏಕೆಂದರೆ ನಾನು ನಿನ್ನವನು. ನಾನು ಮಾಡಿದರೆ ನೀನು ಮಾಡಿದಂತೆಯೆ ಆಗುತ್ತದೆ. ನೀನು ಮಾಡಿದರೆ ನಾನು ಮಾಡಿದಂತಾಗುವುದಿಲ್ಲ. ಏಕೆಂದರೆ ನೀನು ನನಗೆ ಹಿರಿಯ. ಅದರಿಂದ ನಾನೇ ಕರ್ಣನನ್ನು ಕೊಲ್ಲಬೇಕು' ಹೀಗೆ ಹೇಳಿ ಅರ್ಜುನ ಕರ್ಣನಿಗೆ ಹೇಳಿದ.

'ನಾನು ನಿನ್ನವನು' ಎಂದರೆ ನಿನ್ನ ಶಿಷ್ಯ ಎಂದು ವರದರಾಜೀಯ ಜನಾರ್ದನೀಯಗಳ ಅಭಿಪ್ರಾಯ.

'ನಿನ್ನವನು ಅಂದರೆ ಉಪಲಕ್ಷಣಯಾ ಮುಖ್ಯಪ್ರಾಣನ ಒಂದು ಅಂಶದಿಂದ ಆವಿಷ್ಟನಾದವನು' ಎಂದು ವಾದಿರಾಜೀಯ ಹೇಳಿದೆ. ನಿರ್ಣಯದಲ್ಲಿ (೧೨.೧೨೯) 'ವೀರೇಣ ರೂಪೇಣ ಧನಂಜಯೇಽಸೌ' ಎಂದು ಹೇಳಿದೆ.

ರೂಕ್ಷಾ ವಾಚಃ ಶ್ರಾವಿತೋಽಯಂ ಭೀಮಃ ಕೃಷ್ಣಸ್ಯ ಶೃಣ್ವತಃ ।
ಯಚ್ಚಾಭಿಮನ್ಯುರ್ಯುಷ್ಮಾಭಿರೇಕಃ ಸಂಭೂಯ ಪಾತಿತಃ ॥೧೮೫॥

'ಕರ್ಣ, ನೀನು ಕೃಷ್ಣ ಕೇಳುತ್ತಿರುವಂತೆಯೆ ಭೀಮನಿಗೆ ಕೆಟ್ಟ ಮಾತುಗಳನ್ನಾಡಿರುವಿ. ಮತ್ತು ನೀವೆಲ್ಲರೂ ಸೇರಿ ಒಬ್ಬ ಅಭಿಮನ್ಯುವನ್ನು ಕೊಂದಿರುವಿರಿ.

ಅತಸ್ತ್ವಾಂ ನಿಹನಿಷ್ಯಾಮಿ ತ್ವತ್ಪುತ್ರಂ ಚ ತವಾಗ್ರತಃ ।
ಇತ್ಯುಕ್ತೋಽನ್ಯರಥಂ ಪ್ರಾಪ್ಯ ಕರ್ಣ ಆವೀಜ್ಜಯದ್ರಥಮ್ ॥೧೮೬॥

'ಅದರಿಂದ ನಾನು ನಿನ್ನನ್ನು ಕೊಲ್ಲುತ್ತೇನೆ. ನಿನ್ನ ಸಂಮುಖದಲ್ಲಿಯೆ ನಿನ್ನ ಮಗನಾದ ವೃಷಸೇನನನ್ನೂ ಕೊಲ್ಲುತ್ತೇನೆ.' ಎಂದು ಅರ್ಜುನ ಹೇಳಿದಾಗ ಕರ್ಣ ಇನ್ನೊಂದು ರಥವನ್ನೇರಿ ಜಯದ್ರಥನ ರಕ್ಷಣೆಗೆ ಹೊರಟು ಹೋದ.

ಭಾರತದರ್ಶನ ಪ್ರಕಾಶನದ ಮಹಾಭಾರತ ಕನ್ನಡಾನುವಾದ (ಸಂಪುಟ ೧೭ ಪುಟ ೩೨೦ಳರಲ್ಲಿ) ಹೀಗೆ ಹೇಳಿದೆ- 'ಭೀಮಸೇನನು ಅರ್ಜುನನೊಡನೆ ಕರ್ಣನ ಮೇಲೆ ಚಾಡಿ ಹೇಳುತ್ತಾನೆ. ಈ ಚಾಡಿಯ ಮಾತನ್ನು ಕೇಳಿ ಕುಪಿತನಾದ ಅರ್ಜುನನು ಕರ್ಣನ ಹತ್ತಿರಕ್ಕೆ ಹೋಗಿ ಅದೇ ಧಾಟಿಯಲ್ಲಿಯೆ ಕರ್ಣನನ್ನು ನಿಂದಿಸುತ್ತಾನೆ. ಅಭಿಮನ್ಯುವಿನ ಧನುಸ್ಸನ್ನು ಕತ್ತರಿಸಿದುದಕ್ಕಾಗಿ ಬಂಧುಮಿತ್ರರೊಡನೆ ನಿನ್ನನ್ನು ಸಂಹರಿಸುತ್ತೇನೆ ನಿನ್ನ ಮಗನನ್ನೂ ಸಂಹರಿಸುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾನೆ. ಚಾಡಿಯ ಮಾತನ್ನು ಕೇಳಿ ಹೀಗೆ ನಿಂದಿಸುವುದು ಮತ್ತು ಹೀಗೆ ಪ್ರತಿಜ್ಞೆ ಮಾಡುವುದು ಅರ್ಜುನನ ಸ್ವಭಾವ ಜನ್ಯವಾದ ಗುಣವಲ್ಲ...'

ಮುಂದೆ (ಪುಟ ೩೨೦ಕ್ಕೆ) ತಿರುಗಿ ಹೀಗೆ ಹೇಳಿದೆ- 'ಧೀರೋದಾತ್ತನಾದ ನಾಯಕನೊಬ್ಬ ಚಾಡಿಯ ಮಾತನ್ನು ಕೇಳಿ ತನಗೆ ಸಮಾನನಾದ ಮತ್ತೊಬ್ಬನನ್ನು ನಿಂದಿಸುವುದು, ನಿಂದೆಗೆ ಗುರಿಯಾದವನು ಪ್ರತೀಕಾರ ಮಾಡುವ ಸಾಮರ್ಥ್ಯದಿಂದ ಕೂಡಿದ್ದರೂ ಮಾತನಾಡದೆಯೆ ಇರುವುದು. ಅಕಾಲಿಕವಾದ ಅನುಚಿತವಾದ ಪ್ರತಿಜ್ಞೆ...'

'ಕರ್ಣ, ನೀನು ಅನೇಕ ಬಾರಿ ಭೀಮನಿಗೆ ಸೋತು ನಾಚಿಕೆ ಇಲ್ಲದೆ ಪಲಾಯನ ಮಾಡಿರುವೆ. ಆಗ ಭೀಮ ನಿನ್ನನ್ನು ನಿಂದಿಸಿದನೆ? ಒಮ್ಮೆ ಭೀಮ ವಿರಥನಾದ ಮಾತ್ರಕ್ಕೆ ನೀನು ಗೇಲಿ ಮಾಡುತ್ತಿರುವೆ. ಒಮ್ಮೊಮ್ಮೆ ದೇವೇಂದ್ರನೂ ಸೋಲುತ್ತಾನೆ. ಅಷ್ಟಕ್ಕೇ ಕ್ಷತ್ರಿಯನಿಗೆ ಅಪಮಾನ ಮಾಡಕೂಡದು. ಸಾತ್ಯಕಿಯೂ ನಿನ್ನನ್ನು ಕೊಲ್ಲದೆ ಬಿಟ್ಟ ಅದು ನಾನು ನಿನ್ನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದೇನೆ ಎಂದು. ಅದರಿಂದ ಭೀಮನನ್ನು ನಿಂದಿಸಿದ್ದಕ್ಕಾಗಿ ಮತ್ತು ನನ್ನ ಪ್ರತಿಜ್ಞೆ ಈಡೇರಿಸುವುದಕ್ಕಾಗಿ ನಾನು ನಿನ್ನನ್ನು ಕೊಲ್ಲುತ್ತೇನೆ. ಅಭಿಮನ್ಯು ವಧೆ ಮಾಡಿದ್ದಕ್ಕಾಗಿ ನಿನ್ನ ಮಗನನ್ನೂ ಕೊಲ್ಲುತ್ತೇನೆ' ಎನ್ನುತ್ತಾನೆ ಅರ್ಜುನ. ಇದರಿಂದ ಅರ್ಜುನನ ಧೀರೋದಾತ್ತತೆಗೆ ಕುಂದು ಬಂದಿಲ್ಲ. ಅವನು ನೇರವಾಗಿ ಕರ್ಣನಾಡಿದ ಮಾತನ್ನು ಕೇಳುತ್ತಿದ್ದ. ಕೃಷ್ಣನೂ ಕೇಳುತ್ತಿದ್ದ. ಚಾಡಿ ಮಾತನ್ನು ಕೇಳಿದ್ದಲ್ಲ. ಭೀಮನೂ ಚಾಡಿ ಹೇಳಲಿಲ್ಲ. 'ಕರ್ಣನನ್ನು ನೀನೇ ಕೊಲ್ಲುವಿಯೋ, ನಾನು ಕೊಲ್ಲಲೊ' ಎಂದು ಕೇಳಿದನಷ್ಟೆ

ಹಗಲಲ್ಲಿ ರಾತ್ರಿ

ದ್ರೌಣಕರ್ಣಾಭಿಗುಪ್ತಂ ತಂ ನಾಶಕದ್ಧಂತುಮರ್ಜುನಃ ।
ತತ್ರ ವೇಗಂ ಪರಂ ಚಕ್ರೇ ದ್ರೌಣಿಃ ಪಾರ್ಥನಿವಾರಣೇ ॥೧೮೭॥

ಅಶ್ವತ್ಥಾಮ ಮತ್ತು ಕರ್ಣರಿಂದ ರಕ್ಷಿತನಾಗಿದ್ದ ಜಯದ್ರಥನನ್ನು ಕೊಲ್ಲಲು ಅರ್ಜುನ ಶಕ್ತನಾಗಲಿಲ್ಲ. ಆಗ ಅಶ್ವತ್ಥಾಮ ಅರ್ಜುನನನ್ನು ತಡೆಯಲು ಬಹಳ ಪರಾಕ್ರಮ ತೋರಿದ.

ನ ಚೈನಮಶಕತ್ ತರ್ತುಂ ಯತ್ನವಾನಪಿ ಫಲ್ಗುನಃ 1
ತಯೋರಾಸೀಚ್ಚಿರಂ ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ॥೧೪೪॥

ಅರ್ಜುನ ಎಷ್ಟು ಪ್ರಯತ್ನ ಮಾಡಿದರೂ ಅಶ್ವತ್ಥಾಮನನ್ನು ಅತಿಕ್ರಮಿಸಿ ಹೋಗಲು ಶಕ್ತನಾಗಲಿಲ್ಲ. ಅವರಿಬ್ಬರೊಳಗೆ ಹಸ್ತ ಚಮತ್ಕಾರದಿಂದ ಕೂಡಿದ ಉತ್ತಮವಾದ ಯುದ್ಧ ಬಹುಕಾಲದವರೆಗೆ ನಡೆಯಿತು.

ತದ್ ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ 1
ಅಜಿತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ 1
ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್ ॥೧೪೫॥

ಅದನ್ನು ನೋಡಿ ಭಗವಾನ್ ಶ್ರೀಕೃಷ್ಣ ಸೂರ್ಯಕೆಂಪಾಗುತ್ತಿರುವಾಗ ಇನ್ನೂ ಅಶ್ವತ್ಥಾಮ ಹಿಮ್ಮೆಟ್ಟದಿರುವಾಗ ಜಯದ್ರಥ ಹತನಾಗದಿದ್ದಾಗ ಅರ್ಜುನನ ಜಯಾಕಾಂಕ್ಷಿಯಾಗಿ ಶಕ್ತಿಶಾಲಿಯಾದ ಕತ್ತಲನ್ನು ಸೃಷ್ಟಿಸಿದ.

ಎಷ್ಟೇ ಕತ್ತಲು ಬಂದರೂ ಅದನ್ನು ನುಂಗಬಲ್ಲ ಸೂರ್ಯನನ್ನು ಕತ್ತಲು ಆವರಿಸೀತೆ? ಎಂದರೆ ಶ್ರೀಕೃಷ್ಣ ಸರ್ವಶಕ್ತ. ಶಕ್ತಿಶಾಲಿಯಾದ ಕತ್ತಲನ್ನೇ ಸೃಷ್ಟಿಸಿದ. ಅದರಿಂದ ಅದು ಸೂರ್ಯನನ್ನೂ ಮರೆಮಾಡಿತು ಎಂದು ಲಕ್ಷಾಲಂಕಾರ ಹೇಳಿದೆ.

ಗದಗು ಭಾರತದಲ್ಲಿ ಶ್ರೀಕೃಷ್ಣ ಸೂರ್ಯನಿಗೆ ಸುದರ್ಶನ ಚಕ್ರವನ್ನು ಅಡ್ಡವಾಗಿ ಹಿಡಿಯುತ್ತಾನೆ-

ಸಲಿಸಬೀಹುದು ಬಕುತ ಮಾಡಿದ
ಛಲದ ಭಾಷೆಯನೆನುತ ರವಿಮಂ
ಡಲಕೆ ಮರೆಯೊಡ್ಡಿದನು ಮುರರಿಪು ವರ ಸುದರ್ಶನವ
(ದ್ರೋಣ ೧೪೪.೩೫)

ಮರೆಯ ಚಕ್ರವ ತೆಗೆದನಸುರಾರಿ (ದ್ರೋಣ ೧೪೪.೪೫)

ಮಹಾಭಾರತ ದಾಕ್ಷಿಣಾತ್ಯಪಾಠದಲ್ಲಿ-

ಜನಾರ್ದನೇನ ಸೃಷ್ಟಂ ವೈ ತಮ ಆದಿತ್ಯನಾಶನಂ
(ದ್ರೋಣ ೧೪೨.೬೭)

ಎಂದು ಶ್ರೀಕೃಷ್ಣ ಕತ್ತಲನ್ನು ಸೃಷ್ಟಿಸಿದನೆಂದಿದ್ದರೂ ಔತ್ತರೇಯ ಪಾಠದಲ್ಲಿ-

ಸಸ್ಮಾರ ಚಕ್ರಂ ದೈತ್ಯಾರಿರ್ಹರಿಶ್ಚಕ್ರಂ ಸುದರ್ಶನಂ।
ತದಾದಿದೇಶ ಭಗವಾನ್ ಸ್ಮೃತಮಾತ್ರಮುಪಸ್ಥಿತಂ
ಅಸ್ತಂಗತಮಿವಾದಿತ್ಯಂ ತಮಸಾ ಛಾದಯೇತಿ ಚ।
ತತ್ತಥೋಕ್ತಂ ಭಗವತಾ ತಮೋ ಭೂತ್ವಾ ವಿಶಾಂಪತೇ।
ಅಂಧಂ ತಮ ಇವಾಜ್ಞಾನಾಮಾದಿತ್ಯಸ್ಯಾಹರತ್ ಪ್ರಭಾಂ।

ಎಂದು ಚಕ್ರ ಸೂರ್ಯನನ್ನು ಮರೆಮಾಡಿದ ಅಂಶ ವರ್ಣಿತವಾಗಿದೆ. ಅದು ಪ್ರಕ್ಷಿಪ್ತವಿರಬಹುದು. ಅಥವಾ ಸುದರ್ಶನ ಚಕ್ರಕ್ಕೆ ಅಭಿಮಾನಿನಿ ದುರ್ಗೆ ತಮಸ್ಸಿಗೂ ಅಭಿಮಾನಿನಿಯಾದ್ದರಿಂದ ಅವಳಿಗೆ ಆಜ್ಞೆಮಾಡಿ ಕತ್ತಲನ್ನು ಸೃಷ್ಟಿಮಾಡಿಸಿದನೆಂದಿಟ್ಟುಕೊಂಡರೆ ನಿರ್ಣಯವಿರೋಧ ಬರಲಾರದು.

ತಮೋವ್ಯಾಪ್ತೇ ಗಗನೇ ಸೂರ್ಯಮಸ್ತಂ
ಗತಂ ಮತ್ವಾ ದ್ರೋಣಪೂರ್ವಾಃ ಸಮಸ್ತಾಃ।
ವಿಶಶ್ರಮುಃ ಸೈಂಧವಶ್ಚಾರ್ಜುನಸ್ಯ
ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ ॥೧೯೦॥

ಆಕಾಶದಲ್ಲಿ ಕತ್ತಲು ಹರಡಿದಾಗ ದ್ರೋಣ ಮೊದಲಾದವರೆಲ್ಲರೂ ಸೂರ್ಯಾಸ್ತವಾಯಿತೆಂದು ತಿಳಿದು ಯುದ್ಧ ನಿಲ್ಲಿಸಿ ವಿಶ್ರಾಂತಿ ಪಡೆದರು. ಅರ್ಜುನ ತನ್ನ ಪ್ರತಿಜ್ಞೆಯನ್ನು ಪೂರೈಸಲಿಲ್ಲ ಎಂದು ಭಾವಿಸಿ ಅವನ ಮುಖವನ್ನು ಜಯದ್ರಥ ನೋಡಲು ತೊಡಗಿದ.

ತದಾ ಹರೇರಾಜ್ಞಯಾ ಶಕ್ರಸೂನು-
ಶ್ಚಕರ್ತ ಬಾಣೇನ ಜಯದ್ರಥಸ್ಯ।
ವಹ್ನಿಂ ವಿವಿಕ್ಷನ್ನಿವ ದರ್ಶಿತಃ ಶಿರ-
ಸ್ತದಾ ವಚಃ ಪ್ರಾಹ ಜನಾರ್ದನಸ್ತಮ್ ॥೧೯೧॥

ವಹ್ನಿಪ್ರವೇಶ ಮಾಡಲು ಹೊರಟಂತೆ ಕಾಣಿಸಿಕೊಂಡ ಅರ್ಜುನ ಕೃಷ್ಣನ ಆದೇಶದಂತೆ ಜಯದ್ರಥನ ಶಿರವನ್ನು ಬಾಣದಿಂದ ತರಿದ. ಆಗ ಕೃಷ್ಣ ಅವನಿಗೆ ಈ ಮಾತನ್ನು ನುಡಿದ.

ಶ್ರೀಕೃಷ್ಣ ಮೊದಲೆ ಅರ್ಜುನನಿಗೆ ಹೇಳಿದ್ದ, 'ನಾನು ಕತ್ತಲನ್ನು ಸೃಷ್ಟಿಸಿ ಸೂರ್ಯಾಸ್ತವಾದಂತೆ ಮಾಡುವೆನು. ನೀನು ಆಗ ಅಗ್ನಿಪ್ರವೇಶಕ್ಕೆ ಹೊರಟಂತೆ ತೋರಿಕೊಳ್ಳು, ಜಯದ್ರಥ ಬರುತ್ತಾನೆ, ಕೊಲ್ಲು' ಎಂದು. ಅದರಂತೆ ಅರ್ಜುನ ಅಗ್ನಿಪ್ರವೇಶಕ್ಕೆ ಹೊರಟಂತೆ ಕಾಣಿಸಿಕೊಂಡ.

ಜಯದ್ರಥ ವಧ

ನೈತಚ್ಛಿರಃ ಪಾತಯ ಭೂತಲೇ ತ್ವ-
ಮಿತೀರಿತಃ ಪಾಶುಪತಾಸ್ತ್ರತೇಜಸಾ।

ದಧಾರ ಬಾಣೈರನುಪುಂಖಪುಂಖೈಃ
ಪುನಸ್ತಮೂಚೇ ಗರುಡಧ್ವಜೋ ವಚಃ ॥೧೯೨॥

'ನೀನು ಈ ಶಿರವನ್ನು ನೆಲದಲ್ಲಿ ಬೀಳಗೊಡಬೇಡ' ಕೃಷ್ಣ ಹೀಗೆ ಹೇಳಿದಾಗ ಅರ್ಜುನ ಪಾಶುಪತಾಸ್ತ್ರದ ಪ್ರಭಾವದಿಂದ ಪುಂಖಾನುಪುಂಖವಾಗಿ ಬಾಣಗಳನ್ನು ಹೊರಡಿಸಿ ಶಿರಸ್ಸು ನೆಲಕ್ಕೆ ಬೀಳದಂತೆ ತಡೆ ಹಿಡಿದ. ಆಗ ಪುನಃ ಕೃಷ್ಣ ನುಡಿದ.

ಮಹಾಭಾರತದಲ್ಲಿ (ದ್ರೋಣ ೧೪೭.೭೫) ಅರ್ಜುನ ಅಸ್ತ್ರಮಾಯೆಯಿಂದ, ಅಂದರೆ ನಿರ್ಣಯ ಹೇಳುವಂತೆ ಮತ್ತು ಮಹಾಭಾರತವೆ ಮುಂದೆ (ದ್ರೋಣ ೧೪೮.೨೮) ಹೇಳುವಂತೆ ಪಾಶುಪತಾಸ್ತ್ರ ಮಾಯೆಯಿಂದ –ಇಲ್ಲದಿದ್ದರೆ ರಾತ್ರಿ ಸ್ವಪ್ನದಲ್ಲಿ ಅರ್ಜುನ ಕೈಲಾಸಕ್ಕೆ ಹೋಗಿ ಶಿವನಿಂದ ಎರಡನೇ ಬಾರಿಗೆ ಪಾಶುಪತಾಸ್ತ್ರೋಪದೇಶ ಪಡೆದುದು ವ್ಯರ್ಥವಾದೀತು– ಜಯದ್ರಥನ ಶಿರವನ್ನು ಬಾಣದಿಂದ ಆಕಾಶದಲ್ಲಿ ಚೆಂಡಿನಂತೆ ಮೇಲೆ ಕೆಳಗೆ ಹಾರಿಸುತ್ತ ನೆಲಕ್ಕೆ ಬೀಳದಂತೆ ಮಾಡಿ ಎಲ್ಲರಿಗೂ ಅದ್ಭುತ ದೃಶ್ಯವನ್ನು ತೋರಿದ, ಜೊತೆಗೆ ಅದೇ ಸಮಯದಲ್ಲಿ ಶತ್ರುಗಳೊಡನೆ ಯುದ್ಧವನ್ನೂ ಮಾಡಿದ. ನಿಧಾನವಾಗಿ ಸಮಂತ ಪಂಚಕಕ್ಕಿಂತಲೂ ಹೊರಗೆ ಆ ಶಿರವನ್ನು ಬಾಣಗಳಿಂದ ಒಯ್ದ. ಬಳಿಕ ಕೃಷ್ಣನನ್ನು ಕೇಳಿದ, 'ಎಷ್ಟು ದೂರಕ್ಕೆ ಒಯ್ಯಬೇಕು? ಏಕೆ?'

ಇದಂ ಪಿತುಸ್ತಸ್ಯ ಕರೇ ನಿಪಾತ್ಯತಾಂ
ವರೋಽಸ್ಯ ದತ್ತೋ ಹಿ ಪುರಾಽಮುನಾಽಯಮ್ ।
ಶಿರೋ ನಿಕೃತ್ತಂ ಭುವಿ ಪಾತಯೇದ್ ಯ–
ಸ್ತವಾಸ್ಯ ಭೂಯಾಚ್ಚ ಶಿರಃ ಸಹಸ್ರಧಾ ॥೧೯೩॥

'ಈ ಶಿರಸ್ಸನ್ನು ಜಯದ್ರಥನ ತಂದೆಯ ಕೈಯಲ್ಲಿ ಬೀಳಿಸು. ಏಕೆಂದರೆ ಅವನು ಜಯದ್ರಥನಿಗೆ ವರ ನೀಡಿದ್ದಾನೆ, 'ಯಾರು ಛಿನ್ನವಾದ ನಿನ್ನ ಶಿರವನ್ನು ನೆಲದಲ್ಲಿ ಬೀಳಿಸುವನೋ ಅವನ ಶಿರ ಸಾವಿರ ಹೋಳಾಗಲಿ' ಎಂದು.

ಜಯದ್ರಥನ ಜನ್ಮಕಾಲದಲ್ಲಿ ಅವನ ತಂದೆ ವೃದ್ಧಕ್ಷತ್ರ ಹೀಗೆ ವರ ನೀಡಿದ್ದ. ಬಳಿಕ ಪ್ರಾಯಕ್ಕೆ ಬಂದ ಜಯದ್ರಥನನ್ನು ಸಿಂಹಾಸನದಲ್ಲಿ ಕೂಡಿಸಿ ಸಮಂತ ಪಂಚಕದ ಬಳಿ ತಪಸ್ಸಿಗೆ ತೊಡಗಿದ..

ಇತಿ ಸ್ಮ ವಧ್ಯಃ ಸ ಪಿತಾಽಪಿ ತೇನೇ–
ತ್ಯುದೀರಿತೇ ತಸ್ಯ ಸಮಾಧ್ಯಾಕ್ರಿಯಸ್ಯ ।
ಅಂಕೇ ವ್ಯಧಾತ್ ತಚ್ಛಿರ ಆಶು ವಾಸವಿಃ
ಸ ಸಂಭ್ರಮಾತ್ ತದ್ ಭುವಿ ಚ ನ್ಯಪಾತಯತ್ ॥೧೯೪॥

'ಈ ರೀತಿ ವರ ನೀಡಿದ್ದರಿಂದ ಜಯದ್ರಥನ ತಂದೆಯೂ ಕೂಡ ವಧಾರ್ಹನಾಗಿದ್ದಾನೆ' ಎಂದು ಶ್ರೀಕೃಷ್ಣ ಹೇಳಿದಾಗ ಸಂಧ್ಯಾವಂದನೆ ಮಾಡುತ್ತಿದ್ದ ತಂದೆಯ ತೊಡೆಯ ಮೇಲಿದ್ದ ಕೈಯಲ್ಲಿ ಜಯದ್ರಥನ ಶಿರವನ್ನು ಬೇಗನೆ ಅರ್ಜುನ ಹಾಕಿದ. ತಂದೆ ಗಾಬರಿಯಿಂದ ಆ ಶಿರವನ್ನು ನೆಲದಲ್ಲಿ ಬೀಳಿಸಿದ.

ಗದುಗ ಭಾರತದಲ್ಲಿ ಹೇಳಿದೆ-

ಕುಡಿತೆಯೆರಡರೊಳರ್ಘ್ಯ ಜಲವನು
ಹಿಡಿದು ಹಾಯ್ಕುವ ಸಮಯದಲಿ ತಲೆ
ನಡುವೆ ಬಿದ್ದುದು ಅರ್ಘ್ಯ ಜಲ ನವರಕ್ತಮಯವಾಗೆ

(ದ್ರೋಣ ೧೪.೪೩)

'ಜಯದ್ರಥನ ತಂದೆ ಸರೋವರದಲ್ಲಿ ಅರ್ಘ್ಯಪ್ರದಾನ ಮಾಡುತ್ತಿದ್ದಾಗ ಬೊಗಸೆಯಲ್ಲಿ ಜಯದ್ರಥನ ಶಿರಸ್ಸು ಬಿದ್ದಿತು, ಅದನ್ನು ಕೆಳಗೆ ಬಿಟ್ಟ. ನೀರು ರಕ್ತಮಯವಾಯಿತು.' ನಿರ್ಣಯದಲ್ಲಿ ಜಯದ್ರಥನ ತಂದೆಯ 'ಕೈಯಲ್ಲಿ' ಬೀಳಿಸೆಂದು ಕೃಷ್ಣ ಹೇಳಿದ್ದಕ್ಕೆ ಅನುಗುಣವಾಗಿದೆ ಈ ಹೇಳಿಕೆ.

ಮಹಾಭಾರತದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳುತ್ತಾನೆ- 'ಉತ್ಸಂಗೇ ಪಾತಯಸ್ವ' (ದ್ರೋಣ ೧೪೮.೧೩) ತೊಡೆಯಲ್ಲಿ ಹಾಕು' ಎಂದು. 'ಸಿಂಧುರಾಜಸ್ಯ ಮೂರ್ಧಾನಮುತ್ಸಂಗೇ ಸಮಪಾತಯತ್' (ದ್ರೋಣ ೧೪೮.೨೦) ಅರ್ಜುನ ಶಿರಸ್ಸನ್ನು ತೊಡೆಯಲ್ಲಿ ಹಾಕಿದ, ಎಂದೂ ಅಲ್ಲಿ ಹೇಳಿದೆ. ವೃದ್ಧಕ್ಷತ್ರ ಧ್ಯಾನಮಗ್ನನಾಗಿ ಕುಳಿತಿದ್ದ. ಅವನ ತೊಡೆಯಲ್ಲಿ ಜಯದ್ರಥನ ತಲೆ ಬಿದ್ದಿದ್ದು ಅವನಿಗೆ ಗೋಚರವಾಗಿರಲಿಲ್ಲ. ಧ್ಯಾನಬಿಟ್ಟು ಎದ್ದಾಗ ತಲೆ ನೆಲದಲ್ಲಿ ಬಿದ್ದಿತು ಎಂದು ವಿವರಣೆಯೂ ಇದೆ. ಇದೂ ನಿರ್ಣಯದಲ್ಲಿ 'ಅಂಕೇ ವ್ಯಧಾತ್ ತಚ್ಛಿರ ಆಶು' 'ತೊಡೆಯಲ್ಲಿ ಆ ತಲೆಯನ್ನು ಹಾಕಿದ' ಎಂಬ ಹೇಳಿಕೆಗೆ ಅನುಗುಣವಾಗಿದೆ.

ಗದಗು ಭಾರತದಲ್ಲಿ ಹೇಳಿದ್ದು ಮಹಾಭಾರತಕ್ಕೆ ಅನುಗುಣವಾಗಿಲ್ಲ. ನಿರ್ಣಯದಲ್ಲಿ 'ಕೈಯಲ್ಲಿ 'ಬೀಳಿಸೆಂದರೆ ಕೈಗೆ ಸಮೀಪವಿರುವ ತೊಡೆಯಲ್ಲಿ ಬೀಳಿಸೆಂದು ಹೇಳುವುದೇ ವಿವಕ್ಷಿತವಾಗಿದೆ. ಅದರಿಂದ ವೃದ್ಧಕ್ಷತ್ರ ಅರ್ಘ್ಯಪ್ರದಾನ ಮಾಡುತ್ತಿರಲಿಲ್ಲ. ಧ್ಯಾನಕ್ಕೆ ಕುಳಿತಿದ್ದ. ಆಗ ತೊಡೆಯಲ್ಲಿಯೇ ಬಿದ್ದಿದೆ. ಅಥವಾ 'ತೊಡೆಯಲ್ಲಿ' ಎಂದರೂ ಅದೇ ಅರ್ಥ- 'ತೊಡೆಯ ಮೇಲಿದ್ದ ಕೈಯಲ್ಲಿ' ಎಂದು. ಹೀಗೆ ಜನಾರ್ದನೀಯ ಹೇಳಿದೆ.

ಕುರುಕ್ಷೇತ್ರದಲ್ಲಿ ಯುದ್ಧ ಮಾಡುತ್ತಿದ್ದ ಅರ್ಜುನನಿಗೆ ದೂರದ

ಸಮಂತ ಪಂಚಕದ ಹೊರಗಿನ ಪ್ರದೇಶದಲ್ಲಿ ಕುಳಿತಿದ್ದ ವೃದ್ಧಕ್ಷತ್ರನ ತೊಡೆ ಅದರ ಮೇಲಿರುವ ಕೈ ಹೇಗೆ ಕಾಣಿಸೀತು? ಎಂಬ ಪ್ರಶ್ನೆಗೆ ವಾದಿರಾಜೀಯದಲ್ಲಿ ಸಮಾಧಾನ ಹೇಳಿದೆ- ಶಬ್ದವೇಧಿ ಬಾಣದಿಂದ ಕಣ್ಣಿಗೆ ಕಾಣದ ಲಕ್ಷ್ಯವನ್ನೂ ಭೇದಿಸಬಹುದು. ಆದರೆ ಶಬ್ದ ಶ್ರವಣವಾಗಬೇಕು. ಪ್ರಕೃತದಲ್ಲಿ ಅದೂ ಇಲ್ಲ. ಮಂತ್ರ ಬಲದಿಂದ ಮನಸ್ಸಿಗೆ ಗೋಚರವಾದ ಲಕ್ಷ್ಯವನ್ನೂ ಬಾಣದಿಂದ ಹೊಡೆಯುತ್ತಾನೆ ಅರ್ಜುನ. ಕೃಷ್ಣ ನೀಡಿದ ವಿವರಣೆಯಿಂದ ಅವನ ಮನಸ್ಸಿಗೆ ವೃದ್ಧಕ್ಷತ್ರನಿದ್ದ ಸ್ಥಳ, ಅವನು ಕುಳಿತಿದ್ದ ಭಂಗಿ ಎಲ್ಲವೂ ಗೋಚರವಾಗಿದೆ. ಅದರಿಂದ ಮಂತ್ರಪೂರ್ವಕವಾದ ಆ ಬಾಣ ಶಿರಸ್ಸನ್ನು ಅವನ ತೊಡೆಗೇ ಹಾಕಿದೆ- 'ಶಬ್ದಪಾತಿ ಬಾಣದಂತೆ ಮಂತ್ರಬಲದಿಂದ ಮನಃಪಾತಿಯಾಗುವ ಬಾಣವೂ ಇದೆ.'

'ಶಬ್ದಪಾತಿ ಶರವತ್ ಮಂತ್ರಬಲಾತ್ ಮನಃ ಪಾತಿಶರೋಽ-
ಪ್ಯಸ್ತೀತಿ ಜ್ಞೇಯಂ'

ತತೋಽಭವತ್ ತಸ್ಯ ಶಿರಃ ಸಹಸ್ರಧಾ
ಹರಿಶ್ಚ ಚಕ್ರೇ ತಮಸೋ ಲಯಂ ಪುನಃ ।
ತದೈವ ಸೂರ್ಯೇ ಸಕಲೈಶ್ಚ ದೃಷ್ಟೇ
ಹಾಹೇತಿ ವಾದಃ ಸುಮಹಾನಥಾಕಸೀತ್ ॥೧೯೫॥

ಆಗ ತಂದೆಯ ಶಿರಸ್ಸು ಸಾವಿರ ಹೋಳಾಯಿತು. ಬಳಿಕ ಕೃಷ್ಣ ಕತ್ತಲನ್ನು ಕರಗಿಸಿದ. ಒಡನೆಯೆ ಸೂರ್ಯ ಎಲ್ಲರಿಗೂ ಕಾಣಿಸಿಕೊಂಡಾಗ ಕೌರವ ಸೈನ್ಯದಲ್ಲಿ ಬಲು ದೊಡ್ಡ ಹಾಹಾಕಾರ ಉಂಟಾಯಿತು.

ಭೀಮಸ್ತದಾ ಶಲ್ಯದುರ್ಯೋಧನಾದೀನ್
ಕೃಪಂ ಚ ಜಿತ್ವಾ ವ್ಯನದತ್ ಸುಭೈರವಮ್ ।
ಕುರ್ವನ್ ಸಾಹಾಯ್ಯಂ ಫಲ್ಗುನಸ್ಯೈವ ತುಷ್ಟೋ
ಬಭೂವ ಶೈನೇಯಯುತೋ ಹತೇ ರಿಪೌ ॥೧೯೬॥

ಆಗಲೆ ಭೀಮಸೇನ ಶಲ್ಯದುರ್ಯೋಧನ ಮುಂತಾದವರನ್ನೂ ಕೃಪನನ್ನೂ ಗೆದ್ದು ಭಯಂಕರವಾಗಿ ಸಿಂಹನಾದ ಗೈದ. ಅರ್ಜುನನಿಗೆ ಸಹಾಯ ಮಾಡಲು ಬಂದಿದ್ದ ಭೀಮನೂ ಸಾತ್ಯಕಿಯೂ ಶತ್ರು ಹತನಾದನೆಂದು ಸಂತುಷ್ಟರಾದರು.

ಅಪೂರಯತ್ ಪಾಂಚಜನ್ಯಂ ಚ ಕೃಷ್ಣೋ
ಮುದಾ ತದಾ ದೇವದತ್ತಂ ಚ ಪಾರ್ಥಃ ।
ಭೀಮಸ್ಯ ನಾದಂ ಸಹಪಾಂಚಜನ್ಯ
ಘೋಷಂ ಶ್ರುತ್ವಾ ನಿಹತಂ ಸಿಂಧುರಾಜಮ್ ।

ಜ್ಞಾತ್ವಾ ರಾಜಾ ಧರ್ಮಸುತೋ ಮುಮೋದ
ದುರ್ಯೋಧನಶ್ಚಾಕಸ ಸುದುಃಖಿತಸ್ತದಾ ॥೧೯೭॥

ಶ್ರೀಕೃಷ್ಣ ಸಂತೋಷದಿಂದ ಪಾಂಚಜನ್ಯ ಶಂಖವನ್ನು ಮೊಳಗಿಸಿದ. ಅರ್ಜುನನೂ ದೇವದತ್ತ ಶಂಖವನ್ನು ಮೊಳಗಿಸಿದ. ಪಾಂಚಜನ್ಯನಾದದೊಂದಿಗೆ ಭೀಮನ ಸಿಂಹನಾದವನ್ನೂ ಕೇಳಿ ಧರ್ಮರಾಜ ಜಯದ್ರಥ ಹತನಾದನೆಂದು ತಿಳಿದು ಆನಂದಗೊಂಡ. ದುರ್ಯೋಧನ ಬಹಳ ದುಃಖಿತನಾದ.

ತತೋ ದ್ರೌಣಮುಖಾಂ ಸೇನಾಂ
ಸರ್ವಾಂ ಭೀಮೋಽಭ್ಯವರ್ತತ।
ಪಾರ್ಥಃ ಕರ್ಣಮುಖಾಂ ಶಿಷ್ಟಾಂ
ತತೋಽಭಜ್ಯತ ತದ್ ಬಲಮ್ ॥೧೯೮॥

ಬಳಿಕ ಅಶ್ವತ್ಥಾಮನ ನೇತೃತ್ವದಲ್ಲಿ ಇದಿರಾದ ಸಮಸ್ತ ಸೈನ್ಯವನ್ನು ಭೀಮ ಇದಿರಿಸಿದ. ಕರ್ಣನ ನೇತೃತ್ವದಲ್ಲಿ ಬಂದ ಉಳಿದ ಸೈನ್ಯವನ್ನು ಅರ್ಜುನ ಇದಿರಿಸಿದ. ಆಗ ಕರ್ಣ ಅಶ್ವತ್ಥಾಮರ ಸೈನ್ಯವೆ ಸೋತಿತು.

ಶೀರ್ಣಾಂ ಸೇನಾಂ ಪ್ರವಿವಿಶುರ್ಧೃಷ್ಟದ್ಯುಮ್ನಪುರೋಗಮಾಃ।
ತತಸ್ತಂ ದೇಶಮಾಪುಸ್ತೇ ಯತ್ರ ಭೀಮಧನಂಜಯೌ ॥೧೯೯॥

ಹೀಗೆ ಸೋತ ಕೌರವ ಸೈನ್ಯವನ್ನು ಧೃಷ್ಟದ್ಯುಮ್ನ ಮುಂತಾದವರೂ ಹೊಕ್ಕರು. ಭೀಮಾರ್ಜುನರಿದ್ದಲ್ಲಿಗೆ ಬಂದರು.

ತತ ಏಕೀಕೃತಾಃ ಸರ್ವೇ ಪಾಂಡವಾಃ ಸಹಸೋಮಕಾಃ।
ಪರಾನ್ ವಿದ್ರಾವಯಾಮಾಸುಸ್ತೇ ಭೀತಾಃ ಪ್ರಾದ್ರವನ್ ದಿಶಃ ॥೨೦೦॥

ಬಳಿಕ ಪಾಂಡವರೂ ಪಾಂಚಾಲರೂ ಎಲ್ಲರೂ ಒಂದಾಗಿ ಶತ್ರುಗಳನ್ನು ಓಡಿಸಿದರು. ಶತ್ರುಗಳು ಹೆದರಿ ಎಲ್ಲ ದಿಕ್ಕುಗಳಿಗೆ ಪಲಾಯನ ಮಾಡಿದರು.

ವಿದ್ರಾವ್ಯಮಾಣಂ ಸೈನ್ಯಂ ತದ್ ದೃಷ್ಟ್ವಾ ದುರ್ಯೋಧನೋ ನೃಪಃ।
ಜಯದ್ರಥವಧಾಚ್ಚೈವ ಕುಪಿತೋಽಭ್ಯದ್ರವತ್ ಪರಾನ್ ॥೨೦೧॥

ತನ್ನ ಸೈನ್ಯ ಹೀಗೆ ಓಡಿಸಲ್ಪಡುವುದನ್ನು ಕಂಡು ರಾಜಾ ದುರ್ಯೋಧನ ಕುಪಿತನಾದ. ಜಯದ್ರಥನ ವಧೆಯಿಂದ ಮೊದಲೆ ಕುಪಿತನಾಗಿದ್ದ ಆತ ಶತ್ರುಗಳಿಗೆ ಇದಿರಾದ.

ಸ ಭೀಮಸೇನಂ ಚ ಧನಂಜಯಂ ಚ
ಯುಧಿಷ್ಠಿರಂ ಮಾದ್ರವತೀಸುತೌ ಚ।
ಧೃಷ್ಟದ್ಯುಮ್ನಂ ಸಾತ್ಯಕಿಂ ದ್ರೌಪದೇಯಾನ್
ಸರ್ವಾನೇಕಃ ಶರವರ್ಷೈರ್ವವರ್ಷ ॥೨೦೨॥

ಭೀಮಸೇನ, ಅರ್ಜುನ, ಯುಧಿಷ್ಠಿರ, ನಕುಲ, ಸಹದೇವ, ಧೃಷ್ಟದ್ಯುಮ್ನ, ಸಾತ್ಯಕಿ, ದ್ರೌಪದೀಪುತ್ರರು ಇವರೆಲ್ಲರ ಮೇಲೆ ದುರ್ಯೋಧನನೊಬ್ಬನೆ ಬಾಣಗಳ ಮಳೆಗರೆದ-

ತಂ ವಿವ್ಯಧುಸ್ತೇ ಬಹುಭಿಃ ಶಿಲೀಮುಖೈಃ
ಸ ತಾನನಾದೃತ್ಯ ಚಕರ್ತ ಬಾಣೈಃ।
ಧನೂಂಷಿ ಚಿತ್ರಾಣಿ ಮಹಾರಥಾನಾಂ
ಚಕಾರ ಸಂಖ್ಯೇ ವಿರಥೌ ಯಮೌ ಚ ॥೨೦೩॥

ಭೀಮ ಅರ್ಜುನ ಮುಂತಾದವರು ಬಹಳ ಬಾಣಗಳಿಂದ ದುರ್ಯೋಧನನನ್ನು ಹೊಡೆದರು. ಅವನು ಅವುಗಳನ್ನು ಲೆಕ್ಕಿಸದೆ ಬಾಣಗಳಿಂದ ಮಹಾರಥರ ನಾನಾ ಬಗೆಯ ಧನುಸ್ಸುಗಳನ್ನೂ ಕತ್ತರಿಸಿದ. ನಕುಲ ಸಹದೇವರನ್ನು ವಿರಥರನ್ನಾಗಿ ಮಾಡಿದ.

ಆದಾಯ ಚಾಪಾನಿ ಪರಾಣಿ ತೇಽಪಿ
ದುರ್ಯೋಧನಂ ವವೃಷುಃ ಸಾಯಕೌಘೈಃ।
ಅಚಿಂತಯಿತ್ವೈವ ಶರಾಂಸ್ ಸ ಏಕೋ
ನ್ಯವಾರಯತ್ ತಾನಖಿಲಾಂಶ್ಚ ಬಾಣೈಃ ॥೨೦೪॥

ಮಹಾರಥರೂ ಕೂಡ ಬೇರೆ ಬಿಲ್ಲುಗಳನ್ನೆತ್ತಿಕೊಂಡು ದುರ್ಯೋಧನನ ಮೇಲೆ ಬಾಣಗಳ ಮಳೆಗರೆದರು. ಒಬ್ಬನೆ ದುರ್ಯೋಧನ ಅವುಗಳನ್ನೂ ಲೆಕ್ಕಿಸದೆ ಎಲ್ಲವನ್ನೂ ಬಾಣಗಳಿಂದ ತಡೆದ.

ತಂ ಗಾಹಮಾನಂ ದ್ವಿಷತಾಂ ಬಹೂನಾಂ
ಮಧ್ಯೇ ದ್ರೋಣದ್ರೌಣಿಕೃಪಪ್ರಧಾನಾಃ।
ದೃಷ್ಟ್ವಾಸರ್ವೇ ಜುಗುಪುಶ್ಚಾತ್ತಚಾಪಾ
ಅನಾರತಂ ಬಾಣಗಣಾನ್ ಸೃಜಂತಃ ॥೨೦೫॥

ಬಹುಮಂದಿ ಶತ್ರುಗಳ ನಡುವೆ ದುರ್ಯೋಧನ ಮುಳುಗುತ್ತಿದ್ದುದನ್ನು ಕಂಡು ದ್ರೋಣ ಅಶ್ವತ್ಥಾಮ ಕೃಪ ಮುಂತಾದವರೆಲ್ಲರೂ ಬಿಲ್ಲನ್ನು ಧರಿಸಿ ಎಡೆಬಿಡದೆ ಬಾಣ ಸಮೂಹಗಳನ್ನೆಸೆಯುತ್ತ ದುರ್ಯೋಧನನನ್ನು ಕಾಪಾಡಿಕೊಂಡರು.

ಸುಯೋಧನಃ ಕರ್ಣಮಾಹ ಜಹಿ ಭೀಮಮಿಮಂ ಯುಧಿ।
ಸ ಆಹ ನೈಷ ಶಕ್ಯೋ ಹಿ ಜೇತುಂ ದೇವೈಃ ಸವಾಸವೈಃ ॥೨೦೬॥

ದುರ್ಯೋಧನ ಕರ್ಣನಿಗೆ ಹೇಳಿದ, 'ಈ ಭೀಮನನ್ನು ಯುದ್ಧದಲ್ಲಿ ಸಂಹರಿಸು'. ಕರ್ಣನೆಂದ, 'ಭೀಮನನ್ನು ಗೆಲ್ಲಲು ಇಂದ್ರಾದಿ ದೇವತೆಗಳಿಂದಲೂ ಶಕ್ಯವಿಲ್ಲ'.

ದೈವಾಜ್ಜೀವಾಮ್ಯಹಂ ರಾಜನ್ ಯುಧ್ಯನೇನಾತಿಪೀಡಿತಃ।
ಅತೋ ಘಟಾಮಹೇ ಶಕ್ತ್ಯಾ ಜಯೋ ದೈವ ಸಮಾಹಿತಃ ॥೨೦೭॥

'ರಾಜನೆ ನಾನು ಭೀಮನೊಡನೆ ಯುದ್ಧ ಮಾಡುತ್ತ ಬಹಳ ಪೀಡಿತನಾಗಿ ದೈವಾತ್ ಬದುಕಿ ಉಳಿದಿದ್ದೇನೆ. ಅದರಿಂದ ಇನ್ನು ಮುಂದೆ ಶಕ್ತ್ಯಾಯುಧದಿಂದ ಹೋರಾಡುತ್ತೇನೆ. ಜಯ ದೈವಾಧೀನ' ಎಂದ ಕರ್ಣ.

ದುರ್ಯೋಧನೋ ದ್ರೋಣಮಾಹ ಸೈಂಧವಸ್ತ್ವದುಪೇಕ್ಷಯಾ ।
ಪಾರ್ಥೇನ ನಿಹತೋ ಭೀಮಸಾತ್ಯಕಿಭ್ಯಾಂ ಚ ಮೇ ಬಲಮ್ ॥ ೨೦೮ ॥

ದುರ್ಯೋಧನ ದ್ರೋಣನಿಗೆ ಹೇಳಿದ 'ನಿನ್ನ ಉಪೇಕ್ಷೆಯಿಂದಾಗಿ ಜಯದ್ರಥ ಅರ್ಜುನನಿಂದ ಹತನಾದ. ಭೀಮ ಸಾತ್ಯಕಿಯರಿಂದ ನನ್ನ ಸೈನ್ಯವೂ ಪುಡಿಯಾಯಿತು.

ಪ್ರತಿಜ್ಞಾ ಚ ಪರಿತ್ಯಕ್ತಾ ಪಾಂಡವಸ್ನೇಹತಸ್ತ್ವಯಾ ।
ಇತ್ಯುಕ್ತಃ ಕುಪಿತೋ ದ್ರೋಣಃ ಪ್ರತಿಜ್ಞಾಮಕರೋತ್ ತತಃ ॥ ೨೦೯ ॥

'ಪಾಂಡವರ ಮೇಲಿನ ಪ್ರೀತಿಯಿಂದ ನೀನು ನಿನ್ನ ಪ್ರತಿಜ್ಞೆಯನ್ನು ಕೈಬಿಟ್ಟಿರುವಿ' ಹೀಗೆ ದುರ್ಯೋಧನ ಹೇಳಿದಾಗ ದ್ರೋಣ ಕುಪಿತನಾಗಿ ಪುನಃ ಪ್ರತಿಜ್ಞೆ ಮಾಡಿದ.

ಇತಃ ಪರಂ ನೈವ ರಣಾದ್ ರಾತ್ರ್ಯಾವಹನಿ ವಾ ಕ್ವಚಿತ್ ।
ಗಚ್ಛೇಯಂ ನೈವ ಮೋಕ್ಷ್ಯಾಮಿ ವರ್ಮ ಬದ್ಧಂ ಕಥಂಚನ ॥ ೨೧೦ ॥

'ಇನ್ನು ಮುಂದೆ ನಾನು ರಾತ್ರಿಯಲ್ಲಾಗಲಿ ಹಗಲಲ್ಲಿಯಾಗಲಿ ಯುದ್ಧವನ್ನು ಬಿಟ್ಟು ಶಿಬಿರಕ್ಕೆ ಹಿಂತಿರುಗಲಾರೆ. ತೊಟ್ಟ ಕವಚವನ್ನು ಯಾವ ಕಾರಣಕ್ಕಾಗಿಯಾಗಲಿ ಬಿಚ್ಚಿಕೊಳ್ಳಲಾರೆ.

ಮತ್ಪುತ್ರಶ್ಚ ತ್ವಯಾ ವಾಚ್ಯಃ ಪಾಂಚಾಲಾನ್ ನೈವ ಶೇಷಯೇಃ ।
ಸದೌಹಿತ್ರಾನಿತೀತ್ಯುಕ್ತ್ವಾ ವಿಜಗಾಹೇ ನಿಶಾಗಮೇ ॥ ೨೧೧ ॥
ಚಮೂಂ ಪರೇಷಾಮಭ್ಯಾಗಾದ್ ಧೃಷ್ಟದ್ಯುಮ್ನಸ್ತಮಾಶು ಚ ।
ದ್ರೌಣಿದುರ್ಯೋಧನೌ ತತ್ರ ವಿರಥೀಕೃತ್ಯ ಮಾರುತಿಃ ।
ದ್ರಾವಯಾಮಾಸ ತತ್ ಸೈನ್ಯಂ ಪಶ್ಯತಾಂ ಸರ್ವಭೂಭೃತಾಮ್ ॥ ೨೧೨ ॥

'ನನ್ನ ಮಗನಿಗೂ ನೀನು ಹೇಳು. ಪಾಂಚಾಲರನ್ನೂ ದ್ರೌಪದಿಯ ಮಕ್ಕಳನ್ನೂ ಯಾರನ್ನೂ ಉಳಿಸಬೇಡ ಎಂದು.' ಹೀಗೆ ಹೇಳಿ ದ್ರೋಣ ರಾತ್ರಿಯಾದಾಗಲೂ ಪಾಂಡವರ ಸೈನ್ಯವನ್ನು ಹೊಕ್ಕ. ಅವನನ್ನು ಬೇಗನೆ ಧೃಷ್ಟದ್ಯುಮ್ನ ಇದಿರಿಸಿದ. ಅಶ್ವತ್ಥಾಮ ದುರ್ಯೋಧನರನ್ನು ಭೀಮ ವಿರಥರನ್ನಾಗಿ ಮಾಡಿ ಅವರ ಸೈನ್ಯವನ್ನು ಎಲ್ಲ ರಾಜರು ನೋಡುತ್ತಿದ್ದಂತೆಯೆ ಓಡಿಸಿದ.

ಅಕ್ಷೌಹಿಣ್ಯಸ್ತು ಸಪ್ತೈವ ಸೇನಯೋರುಭಯೋರಪಿ ।
ಹತಾಸ್ತಾಸಾಂ ಚ ಭೀಮೇನ ತಿಸ್ರೋ ದ್ವೇ ಫಲ್ಗುನೇನ ಚ ॥ ೨೧೩ ॥

ಎರಡೂ ಸೈನ್ಯಗಳಲ್ಲಿ ಒಟ್ಟು ಏಳು ಅಕ್ಷೌಹಿಣಿ ಸೈನ್ಯಗಳು ಹತವಾದುವು. ಅವುಗಳಲ್ಲಿ ಭೀಮನಿಂದ ಮೂರು, ಅರ್ಜುನನಿಂದ ಎರಡು ಹತವಾದುವು.

ಸೌಭದ್ರಸಾತ್ಯಕಿಮುಖೈಸ್ತನ್ಮಧ್ಯೇ ಷೋಡಶಾಂಶಕಃ ।
ಹೈಡಿಂಬಪಾರ್ಷತಮುಖೈಸ್ತ್ರಯಾಚ್ಚ ದಶಮಾಂಶಕಃ ॥ ೨೧೪ ॥

ಅವುಗಳಲ್ಲಿ ಅರ್ಜುನನಿಂದ ಹತವಾದ ಸೈನ್ಯದಲ್ಲಿ ಹದಿನಾರನೆ ಒಂದಂಶದಷ್ಟು ಅಭಿಮನ್ಯು ಸಾತ್ಯಕಿ ಮುಂತಾದವರಿಂದ ಹತವಾಯಿತು. ಭೀಮನಿಂದ ಹತವಾದ ಮೂರು ಅಕ್ಷೌಹಿಣಿಯಲ್ಲಿ ಹತ್ತನೆ ಒಂದಂಶ ಘಟೋತ್ಕಚ ಧೃಷ್ಟದ್ಯುಮ್ನರಿಂದ ಹತವಾದುವು.

ಇದು ಜನಾರ್ದನೀಯ ಪ್ರಕಾರ ವಿಭಾಗ. ವಾದಿರಾಜೀಯದಲ್ಲಿ ಒಟ್ಟು ಐದು ಅಕ್ಷೌಹಿಣಿಯಲ್ಲಿ ಹದಿನಾರನೆ ಒಂದಂಶವನ್ನು ಅಭಿಮನ್ಯು ಸಾತ್ಯಕಿಯರೂ ಮೂರು ಅಕ್ಷೌಹಿಣಿಯಲ್ಲಿ ಹತ್ತನೆ ಒಂದಂಶವನ್ನು ಘಟೋತ್ಕಚ ಧೃಷ್ಟದ್ಯುಮ್ನರೂ ಕೊಂದರೆಂದು ಹೇಳಿದೆ.

ಭೀಷ್ಮದ್ರೋಣದ್ರೌಣಿಭಿಶ್ಚ ದ್ವೇ ಸಮಂ ನಿಹತೇ ತದಾ ।
ತದನ್ಯೈರ್ಮಿಲಿತೈಃ ಸರ್ವೈಸ್ತಚ್ಚತುರ್ಥಾಂಶ ಏವ ಚ ॥ ೨೧೫॥

ಭೀಷ್ಮ ದ್ರೋಣ ಅಶ್ವತ್ಥಾಮರಿಂದ ಒಟ್ಟು ಎರಡು ಅಕ್ಷೌಹಿಣಿ ಸೈನ್ಯಗಳು ಹತವಾದುವು. ಅವರು ಪರಸ್ಪರ ಸಮಾನವಾಗಿಯೆ ಸೈನ್ಯಗಳನ್ನು ನಾಶಮಾಡಿದರು. ಉಳಿದವರೆಲ್ಲರೂ ಸೇರಿ ಅದರ ನಾಲ್ಕನೆ ಒಂದಂಶವನ್ನು ನಾಶಮಾಡಿದರು.

ಹದಿನಾಲ್ಕನೆ ದಿನದ ರಾತ್ರಿ ಯುದ್ಧ - ಕರ್ಣನಿಗೆ ಭೀಮನ ಸಂಕೇತ

ತತೋ ರಾತ್ರೌ ಪಂಚಭಿಶ್ಚ ಪಾರ್ಥಾಃ ಷಡ್ಭಿಶ್ಚ ಕೌರವಾಃ ।
ಅಕ್ಷೌಹಿಣೀಭಿಃ ಸಂವ್ಯೂಹ್ಯ ಯುದ್ಧಂ ಚಕ್ರುಃ ಸುದಾರುಣಮ್ ॥ ೨೧೬ ॥

ಬಳಿಕ ರಾತ್ರಿಯಲ್ಲಿ ಪಾಂಡವರು ಐದು ಅಕ್ಷೌಹಿಣಿ ಸೈನ್ಯದಿಂದಲೂ ಕೌರವರು ಆರು ಅಕ್ಷೌಹಿಣಿ ಸೈನ್ಯದಿಂದಲೂ ವ್ಯೂಹರಚನೆ ಮಾಡಿ ಬಲು ಭಯಂಕರವಾದ ಯುದ್ಧವನ್ನು ನಡೆಸಿದರು.

ಭೀಮಂ ಸೇನಾಂ ದ್ರಾವಯಂತಂ ಪುನಃ ಕರ್ಣಃ ಸಮಾಸದತ್ ।
ಸ ಕರ್ಣಪುರತೋ ಭೀಮೋ ದುಷ್ಕರ್ಣಂ ಕರ್ಣಮೇವ ಚ ॥ ೨೧೭ ॥
ದುರ್ಯೋಧನಸ್ಯಾವರಜೌ ನಿಷ್ಪಿಪೇಷ ಪದಾ ಕ್ಷಣಾತ್ ।
ರಥಾಶ್ವಧ್ವಜಸೂತೈಶ್ಚ ಸಹಿತೌ ನ ವ್ಯದೃಶ್ಯತಾಮ್ ॥ ೨೧೮॥

ಭೀಮ ಸೈನ್ಯವನ್ನು ಓಡಿಸುತ್ತಿದ್ದಾಗ ಪುನಃ ಕರ್ಣ ಬಂದ. ಭೀಮ ಕರ್ಣನ ಮುಂದೆಯೆ ದುರ್ಯೋಧನನ ತಮ್ಮಂದಿರಾದ ದುಷ್ಕರ್ಣ ಕರ್ಣರನ್ನು ಕಾಲಿಂದ ತುಳಿದು ಕ್ಷಣದಲ್ಲಿ ಪುಡಿಮಾಡಿದ. ಅವರಿಬ್ಬರೂ ರಥ ಕುದುರೆ ಧ್ವಜಸಾರಥಿಗಳಿಂದ ಸಮೇತರಾಗಿ ನಾಶ ಹೊಂದಿದರು.

ನಿರಾಯುಧೋಽಹಮಿತಿ ಮಾಂ ತ್ವಮಾತ್ಥ ಪರುಷಂ ವಚಃ ।
ನಿರಾಯುಧಃ ಪದೈವಾಹಂ ತ್ವಾಂ ಹಂತುಮಶಕಂ ತದಾ ॥ ೨೧೯ ॥

'ಕರ್ಣ! ನಿರಾಯುಧನೆಂದು ತಿಳಿದು ನನಗೆ ಅಂದು ನೀನು ನಿಷ್ಠುರವಾದ ಮಾತನ್ನಾಡಿರುವಿ. ಆದರೆ ನಿರಾಯುಧನಾದರೂ ನಾನು ನಿನ್ನನ್ನು ಆಗ ಕಾಲಿಂದ ತುಳಿದೇ ಕೊಲ್ಲಲು ಶಕ್ತನಾಗಿದ್ದೆ.'

ಇತಿ ಕರ್ಣಸ್ಯ ತೌ ಭೀಮಃ ಸಂಜ್ಞಯಾ ಜ್ಞಾಪಯನ್ ಭುವಿ ।
ಪದಾ ಪಿಪೇಷ ಕಾಲಿಂಗಂ ಮುಷ್ಟಿನೈವ ಜಘಾನ ಹ ॥ ೨೨೦ ॥

ಹೀಗೆ ಕರ್ಣನಿಗೆ ಸೂಚನೆ ನೀಡುವುದಕ್ಕಾಗಿ ಭೀಮ ದುಷ್ಕರ್ಣ ಕರ್ಣರನ್ನು ನೆಲದ ಮೇಲೆ ಕಾಲಿಂದ ತುಳಿದು ಪುಡಿಗೈದ. ಕಾಲಿಂಗನನ್ನು ಮುಷ್ಟಿಯಿಂದಲೆ ಹೊಡೆದು ಕೊಂದ.

ಮುಷ್ಟಿನಾ ತ್ವದ್ವಧಾಯಾಹಂ ಸಮರ್ಥ ಇತಿ ಕಿಂ ವದೇ ॥ ೨೨೧ ॥
ತಸ್ಮಾನ್ನಯಾ ರಕ್ಷಿತಸ್ತ್ವಮಿತಿ ಜ್ಞಾಪಯಿತುಂ ಪ್ರಭುಃ ।
ಸಾಶ್ವಸೂತಧ್ವಜರಥಃ ಕಾಲಿಂಗೋ ಮುಷ್ಟಿಚೂರ್ಣಿತಃ ॥ ೨೨೨ ॥

'ಮುಷ್ಟಿಯಿಂದಲೂ ನಿನ್ನ ವಧೆ ಮಾಡಲು ನಾನು ಸಮರ್ಥನೆಂದು ಬೇರೇನು ಹೇಳಬೇಕು? ಅದರಿಂದ ಅಂದು ನಾನು ನಿನ್ನನ್ನು ಕೊಲ್ಲದೆ ಬಿಟ್ಟೆನಷ್ಟೆ' ಎಂದು ತಿಳಿಸಲು ಸರ್ವಶಕ್ತನಾದ ಭೀಮ ಕುದುರೆ ಸಾರಥಿ ಧ್ವಜ ರಥಗಳಿಂದ ಸಮೇತನಾದ ಕಾಲಿಂಗನನ್ನು ಮುಷ್ಟಿಯಿಂದ ಪುಡಿ ಮಾಡಿದ.

ಕೇತುಮಾಂಶ್ಚ ಪಿತಾ ತಸ್ಯ ಶಕ್ರದೇವಃ ಶ್ರುತಾಯುಧಃ ।
ಅಕ್ಷೌಹಿಣ್ಯಾ ಸೇನಯಾ ಚ ಸಹ ಭೀಮೇನ ಪಾತಿತಾಃ ॥ ೨೨೩ ॥
ಖಡ್ಗಯುದ್ಧೇ ಪುರಾ ಭೀಷ್ಮೇ ಸೇನಾಪತ್ಯಂ ಪ್ರಕುರ್ವತಿ ।
ಕರ್ಣಾನುಜಾನ್ ಧ್ರುವಾದ್ಯಾಂಶ್ಚ ಬಹೂನ್ ಜಘ್ನೇ ಸ ವೈ ನಿಶಿ ॥ ೨೨೪ ॥

ಹಿಂದೆ ಭೀಷ್ಮ ಸೇನಾಪತ್ಯ ಮಾಡುತ್ತಿದ್ದಾಗ ಖಡ್ಗಯುದ್ಧದಲ್ಲಿ ಕಾಲಿಂಗನ ತಂದೆಯಾದ ಕೇತುಮಾನ್ ಶಕ್ರದೇವ ಶ್ರುತಾಯುಧ ಇವರನ್ನು ಅಕ್ಷೌಹಿಣೀ ಸೈನ್ಯದೊಂದಿಗೆ ಭೀಮನೇ ಸಂಹರಿಸಿದ್ದ. ಈಗ ರಾತ್ರಿಯುದ್ಧದಲ್ಲಿ ಕಾಲಿಂಗನನ್ನೂ ಕೊಂದ. ಬಳಿಕ ಕರ್ಣನ ತಮ್ಮಂದಿರಾದ ಧ್ರುವ ಮುಂತಾದ ಅನೇಕ ವೀರರನ್ನೂ ಸಂಹರಿಸಿದ.

ಹಿಂದೆ ಭೀಷ್ಮಪರ್ವದ ಖಡ್ಗಯುದ್ಧದಲ್ಲಿ ಕಾಲಿಂಗನ ತಂದೆಯ ವಧೆ ಭೀಮನಿಂದಲೆ ಆಗಿತ್ತು. ಈಗ ದ್ರೋಣಪರ್ವದ ರಾತ್ರಿಯುದ್ಧದಲ್ಲಿ ಕಾಲಿಂಗನ ವಧೆ ಮಾಡುತ್ತಿದ್ದಾನೆ.

— ಭೀಷ್ಮಪರ್ವದ ಕಥೆ ಇಲ್ಲಿ ಏಕೆ ಪ್ರಸ್ತುತವಾಯಿತು ಎಂದರೆ ಪ್ರಮಾಣ ಸಂಗ್ರಹಕಾರರ ಅಭಿಪ್ರಾಯ ಹೀಗಿದೆ- ಕಾಲಿಂಗನ ತಂದೆಯನ್ನು ಭೀಮ

ಕೊಂದನೆಂದು ಕೋಪದಿಂದ ಕಾಲಿಂಗ ಯುದ್ಧಕ್ಕೆ ಬಂದನೆಂದು ಮಹಾಭಾರತ ಹೇಳಿದೆ-

ಕಲಿಂಗಾನಾಮನೀಕೇನ ಕಾಲಿಂಗಸ್ಯ ಸುತೋ ರಣೇ।
ಪೂರ್ವಂ ಪಿತೃವಧಾತ್ ಕ್ರುದ್ಧೋ ಭೀಮಸೇನಮುಪಾದ್ರವತ್
(ದ್ರೋಣ ೧೫೬.೨೧)

ವಾದಿರಾಜೀಯದಲ್ಲಿ ಹೀಗೆ ಹೇಳಿದೆ- ಇದು ರಾತ್ರಿ ಯುದ್ಧದ ಪ್ರಸಂಗ, ಭೀಷ್ಮಪರ್ವದಲ್ಲಿಯೂಒಂದು ರಾತ್ರಿ ಸ್ವಲ್ಪಹೊತ್ತು ಯುದ್ಧ ನಡೆದಿತ್ತು. ಅದರಲ್ಲಿ ಕಲಿಂಗನ ತಂದೆ ಖಡ್ಗಯುದ್ಧದಲ್ಲಿ ಭೀಮನಿಂದ ಹತನಾಗಿದ್ದ. ಅದನ್ನು ಅಲ್ಲಿಯೆ ಏಕೆ ಹೇಳಲಿಲ್ಲ ಎಂದರೆ, ವನಪರ್ವದಲ್ಲಿ ಬ್ರಾಹ್ಮಣವೇಷದಿಂದ ಬಂದ ಜಟಾಸುರನನ್ನು ಭೀಮ ವಧಿಸಿದುದು ಹೆಚ್ಚು ಮಹತ್ವದ್ದಲ್ಲವೆಂದು ಉದ್ಯೋಗಪರ್ವದಲ್ಲಿ ಅದನ್ನು ದ್ರುಪದನ ಪುರೋಹಿತನ ಮೂಲಕ ಹೇಳಿಸಿದಂತೆ ಇದನ್ನೂ ತಿಳಿಯಬೇಕು. ಆಗ ಇಡೀ ರಾತ್ರಿ ಯುದ್ಧವಾಗಿರಲಿಲ್ಲ. ಸ್ವಲ್ಪಕಾಲ ಮಾತ್ರ ಎಂದು ಇಡೀರಾತ್ರಿ ನಡೆದ ದ್ರೋಣಪರ್ವದ ಯುದ್ಧಪ್ರಸಂಗದಲ್ಲಿ ಜೊತೆಗೆ ಹೇಳಿದ್ದಾರೆ.

ವಾದಿರಾಜರ ಈ ಅಭಿಪ್ರಾಯವನ್ನು ವ್ಯಾಸತೀರ್ಥೀಯ ಅನಂತ ಭಟ್ಟೀಯಗಳೂ ಸಂಮತಿಸುತ್ತವೆ. ಭಾರತ ಭೀಷ್ಮಪರ್ವದಲ್ಲಿ ಮೂರನೆ ದಿನ ಸೈನಿಕರು ಸಾವಿರಾರು ಪಂಜುಗಳನ್ನೂ ಪ್ರಕಾಶಮಾನವಾದ ದೀಪಗಳನ್ನೂ ಹಿಡಿದು ತಮ್ಮ ಶಿಬಿರಗಳನ್ನು ಸೇರಿದರೆಂದಿದೆ. (ಅಧ್ಯಾಯ ೫೯)

ಸಂಜ್ಞಾಂ ಭೀಮಕೃತಾಂ ಜ್ಞಾತ್ವಾ ಶಕ್ತಿಂ ಚಿಕ್ಷೇಪ ಚಾಪರಾಮ್ ।
ಕರ್ಣಃ ಶಕ್ತಿರ್ಮಯಾ ದಿವ್ಯಾ ನ ಮುಕ್ತಾ ತೇನ ಜೀವಸಿ ॥ ೨೨೫ ॥
ಇತಿ ಜ್ಞಾಪಯಿತುಂ ತಾಂ ತು ಜ್ಞಾತ್ವಾ ಭೀಮಃ ಕ್ಷಣಾತ್ ತದಾ ।
ಖಮುತ್ಪತ್ಯ ಗೃಹೀತ್ವಾ ಚ ಕರ್ಣೇ ಚಿಕ್ಷೇಪ ಸತ್ವರಃ ॥ ೨೨೬ ॥

,ಭೀಮ ನೀಡಿದ ಸೂಚನೆಯನ್ನು ಗ್ರಹಿಸಿ ಕರ್ಣ ಬೇರೆ ಸಾಮಾನ್ಯವಾದ ಒಂದು ಶಕ್ತ್ಯಾಯುಧವನ್ನು ಭೀಮನಮೇಲೆಎಸೆದ. 'ನಾನು ನಿನ್ನಮೇಲೆಇಂದ್ರನ ದಿವ್ಯ ಶಕ್ತ್ಯಾಯುಧವನ್ನು ಪ್ರಯೋಗಿಸಲಿಲ್ಲ. ಅದರಿಂದ ನೀನು ಬದುಕಿರುವಿ' ಎಂದು ಸೂಚಿಸುವ ಅಭಿಪ್ರಾಯ ಕರ್ಣನಿಗಿದ್ದಿತು. ಅದನ್ನು ತಿಳಿದು ಭೀಮ ಕ್ಷಣದಲ್ಲಿ ಆಕಾಶಕ್ಕೆ ನೆಗೆದು ಶಕ್ತ್ಯಾಯುಧವನ್ನು ಹಿಡಿದು ಕರ್ಣನಮೇಲೆಯೆ ಬೀಳಿಸಿದ.

ಯದಿ ತ್ವಯಾ ತದಾ ಮುಕ್ತಾ ಶಕ್ತಿಸ್ತ್ವಾಂ ಸಾ ಹನಿಷ್ಯತಿ ।
ಇತಿ ಜ್ಞಾಪಯಿತುಂ ಸಾ ಚ ಕರ್ಣರಕ್ಷಣಕಾಂಕ್ಷಿಣಾ ॥ ೨೨೭ ॥

ಮುಕ್ತಾ ದಕ್ಷಭುಜೇ ಸಾಽಥ ವಿದಾರ್ಯ ಧರಣೀಂ ತಥಾ ।
ಭಿತ್ತ್ವಾ ವಿವೇಶ ಕರ್ಣಸ್ಯ ದರ್ಶಯಂತೀ ನಿದರ್ಶನಮ್ ॥ ೨೨೮ ॥

'ನೀನು ಆಗ ದಿವ್ಯಶಕ್ತ್ಯಾಯುಧವನ್ನು ಪ್ರಯೋಗಿಸಿದ್ದರೂ ಅದು ನಿನ್ನನ್ನೆ ಕೊಲ್ಲುತ್ತಿತ್ತು' ಎಂದು ಸೂಚಿಸಲು ಭೀಮ ಹಾಗೆ ಮಾಡಿದ. ಆಗ ಆ ಶಕ್ತ್ಯಾಯುಧವನ್ನು ಕರ್ಣನ ರಕ್ಷಣೆಯನ್ನು ಬಯಸಿದ್ದ ಭೀಮ ಅವನ ಬಲಭುಜಕ್ಕೇ ಹಾಕಿದ್ದ. ಅದು ಭುಜವನ್ನು ಸೀಳಿ ನೆಲವನ್ನೂ ಸೀಳಿ ಒಳಗೆ ಪ್ರವೇಶಿಸಿತು. ಕರ್ಣನಿಗೆ ನಿದರ್ಶನವನ್ನು ತೋರಿತು.

ಅರ್ಜುನನ ಪ್ರತಿಜ್ಞೆ ನಡೆಯಬೇಕಾದರೆ ಕರ್ಣ ಉಳಿಯಬೇಕು. ಅದಕ್ಕೆ ಭೀಮ ಶಕ್ತ್ಯಾಯುಧವನ್ನು ಎದೆಗೆ ಎಸೆಯದೆ ಬಲಭುಜಕ್ಕೆ ಎಸೆದಿದ್ದ. ಅದು ಭುಜವನ್ನು ಸೀಳಿತು. ಅದರಿಂದ ಸಾಮಾನ್ಯಶಕ್ತ್ಯಾಯುಧವೆ ಕರ್ಣನನ್ನು ಕೊಲ್ಲುತ್ತಿತ್ತೆಂದರೆ ದಿವ್ಯಾಶಕ್ತ್ಯಾಯುಧವನ್ನು ಅವನು ಪ್ರಯೋಗಿಸಿದ್ದರೆ ಅದು ಸರ್ವಥಾ ಕೊಲ್ಲುತ್ತಿತ್ತೆನ್ನಲು ಇದು ಸರಿಯಾದ ನಿದರ್ಶನವಾಯಿತು.

ತತೋ ಭೀಮಃ ಪುನಃ ಸ್ವಂ ತು ರಥಮಾಸ್ಥಾಯ ಚಾಪಭೃತ್ ।
ಕರ್ಣಸ್ಯ ಪುರತಃ ಶತ್ರೂನ್ ದ್ರಾವಯಾಮಾಸ ಸರ್ವತಃ ॥ ೨೨೯ ॥

ಪುನಃ ಭೀಮ ತನ್ನ ರಥವನ್ನೇರಿ ಬಿಲ್ಲನ್ನು ಹಿಡಿದು ಕರ್ಣನ ಕಣ್ಣಮುಂದೆಯ ಶತ್ರುಗಳನ್ನು ಎಲ್ಲೆಡೆ ಓಡಿಸಿದ.

ತಂ ಕರ್ಣೋ ವಾರಯಾಮಾಸ ಶರೈಃ ಸನ್ನತಪರ್ವಭಿಃ ।
ಭೀಮಃ ಕರ್ಣರಥಾಯೈವ ಗದಾಂ ಚಿಕ್ಷೇಪ ವೇಗಿತಃ ॥ ೨೩೦ ॥

ಕರ್ಣ ಭೀಮನನ್ನು ಬಾಗಿದ ಗಂಟುಗಳುಳ್ಳ ಬಾಣಗಳಿಂದ ತಡೆದ. ಭೀಮ ಕರ್ಣನ ರಥಕ್ಕೇ ವೇಗವಾಗಿ ಗದೆ ಎಸೆದ.

ಸ ತದ್ಗದಾವಿಘಾತಾಯ ಸ್ಥೂಣಾಕರ್ಣಾಸ್ತ್ರಮಾಸೃಜತ್ ।
ತೇನಾಸ್ತ್ರೇಣ ಪ್ರತಿಹತಾ ಸಾ ಗದಾ ಭೀಮಮಾವ್ರಜತ್ ॥ ೨೩೧॥

ಕರ್ಣ ಆ ಗದೆಯನ್ನು ತುಂಡರಿಸಲು ಸ್ಥೂಣಾಕರ್ಣವೆಂಬ ಬಾಣವನ್ನು ಪ್ರಯೋಗಿಸಿದ. ಆ ಬಾಣದಿಂದ ತಡೆಯಲ್ಪಟ್ಟ ಭೀಮನ ಗದೆ ಭೀಮನ ಬಳಿಗೇ ಹಿಂತಿರುಗಿ ಬಂದಿತು.

ಭೀಮೋ ಗದಾಂ ಸಮಾದಾಯ ಕರ್ಣಸ್ಯ ರಥಮಾರುಹತ್ ।
ತಯಾ ಸಂಚೂರ್ಣಯಾಮಾಸ ಕರ್ಣಸ್ಯ ರಥಕೂಬರಮ್ ॥೨೩೨॥

ಭೀಮ ಗದೆಯನ್ನು ಹಿಡಿದು ಕರ್ಣನ ರಥವನ್ನೇರಿದ. ಗದೆಯಿಂದ ಕರ್ಣನ ರಥದ ನೊಗವನ್ನು ಪುಡಿ ಮಾಡಿದ.

ಏವಂ ತ್ವಚ್ಚೂರ್ಣನೇ ಶಕ್ತೋ ಮತ್ಕಾಮಾತ್ ತ್ವಂ ಹಿ ಜೀವಸಿ ।
ಏವಂ ನಿದರ್ಶಯಿತ್ವೈವ ಪುನಃ ಸ್ವಂ ರಥಮಾವ್ರಜತ್ ॥ ೨೩೩॥

ಹೀಗೇ ನಿನ್ನನ್ನೂ ಪುಡಿಮಾಡಬಲ್ಲೆ. ಆದರೆ ನನ್ನಿಚ್ಛೆಯಿಂದಲೆ ನೀನು ಬದುಕಿರುವಿ' ಎಂಬುದಕ್ಕೆ ನಿದರ್ಶನವನ್ನು ತೋರಿಸಿ ಭೀಮ ಪುನಃ ತನ್ನ ರಥಕ್ಕೆ ಬಂದ.

ಪುನಃ ಕರ್ಣಪುರಃ ಸೇನಾಂ ಜಘಾನ ಬಹುಶೋ ರಣೇ ।
ಕರ್ಣಸ್ತು ತಂ ಪರಿತ್ಯಜ್ಯ ಸಹದೇವಮುಪಾದ್ರವತ್ ॥ ೨೩೪ ॥

ಭೀಮ ಪುನಃ ಕರ್ಣನ ಎದುರಿನಲ್ಲಿಯೆ ಯುದ್ಧದಲ್ಲಿ ಬಹಳ ಸೈನ್ಯವನ್ನು ನಾಶಮಾಡಿದ. ಕರ್ಣ ಅವನನ್ನು ಬಿಟ್ಟು ಸಹದೇವನ ಕಡೆಗೆ ನಡೆದ.

ಸ ತು ತಂ ವಿರಥೀಕೃತ್ಯ ಧನುಃ ಕಂಠೇಽವಸಜ್ಯ ಚ ।
ಕುತ್ಸಯಾಮಾಸ ಬಹುಶಃ ಸ ತು ನಿರ್ವೇದಮಾಗಮತ್ ॥ ೨೩೫ ॥

ಸಹದೇವನನ್ನು ಕರ್ಣ ವಿರಥನನ್ನಾಗಿ ಮಾಡಿ ಕುತ್ತಿಗೆಗೆ ಬಿಲ್ಲು ಸಿಕ್ಕಿಸಿ ಬಹಳ ಗೇಲಿ ಮಾಡಿದ. ಸಹದೇವ ಬಹಳ ವ್ಯಥೆಪಟ್ಟ.

ಸಹದೇವನನ್ನು ವಿರಥನನ್ನಾಗಿಮಾಡಿ ಕರ್ಣ ತಾನೂ ರಥದಿಂದ ಕೆಳಗೆ ಹಾರಿದ. ಸಹದೇವ ರಥದ ಗಾಲಿ ನೊಗ ಆನೆಯ ಅಂಗಗಳು ಕುದುರೆಗಳು ಸೈನಿಕರ ಶವಗಳು ಹೀಗೆ ಕೈಗೆ ಸಿಕ್ಕಿದ್ದನ್ನೆಲ್ಲ ಕರ್ಣನ ಮೇಲೆ ಎಸೆದು ಓಡಿದ. ಕರ್ಣ ಬೆನ್ನಟ್ಟಿದ. ನಿರಾಯುಧನಾಗಿ ಓಡುವವನನ್ನು ಬೆನ್ನಟ್ಟುವುದು ಯುದ್ಧ ಧರ್ಮವಲ್ಲ, ನಿಜ. ಆದರೂ ಇದೀಗ ಯುದ್ಧವಲ್ಲ. ಅಪಹಾಸ ಮಾಡಲು ಬೆನ್ನಟ್ಟುತ್ತಿದ್ದಾನೆ ಕರ್ಣ. ಕೊಲ್ಲುವುದಕ್ಕೆ ಅಲ್ಲ. ಬಳಿಕ ಕುತ್ತಿಗೆಗೆ ಬಿಲ್ಲು ಸಿಕ್ಕಿಸಿ ಹೇಳುತ್ತಾನೆ. 'ಬಲಿಷ್ಠರೊಡನೆ ಯುದ್ಧಕ್ಕೆ ಹೋಗಬೇಡ. ಸಮಾನಿಕರನ್ನು ಅರಸಿಕೊಳ್ಳು'. ಭೀಮ ಕರ್ಣನಿಗೆಮಾಡಿದ ಅಪಮಾನಕ್ಕೆ ಕರ್ಣ ಸಹದೇವನಲ್ಲಿ ಸೇಡು ತೀರಿಸಿಕೊಂಡ. ಮುಂದೆ ನಕುಲನನ್ನೂ ಧರ್ಮರಾಜನನ್ನೂ ಅಪಮಾನಿಸುತ್ತಾನೆ. ಬಳಿಕ ರಥವೇರಿ ಹೊರಟುಹೋದ. ಸಹದೇವನೂ ವಿರಾಟನ ಮಗನಾದ ಜನಮೇಜಯನ ರಥವನ್ನೇರಿದ.

ನ ಹಂತುಮೈಚ್ಛತ್ ತಂ ಕರ್ಣಃ ಪೃಥಾಯೈ ಸ್ವಂ ವಚಃ ಸ್ಮರನ್ ।
ತಂ ವಿಜಿತ್ಯ ರಣೇ ಕರ್ಣೋ ಜಘ್ನೇ ಪಾರ್ಥವರೂಥಿನೀಮ್ ॥ ೨೩೬ ॥

ಕರ್ಣ ಸಹದೇವನನ್ನು ಕೊಲ್ಲಲು ಬಯಸಲಿಲ್ಲ. ಏಕೆಂದರೆ ಅವನು ಕುಂತಿಗೆ ಕೊಟ್ಟ ತನ್ನ ಮಾತನ್ನು ನೆನೆದುಕೊಂಡ. ಅದರಿಂದ ಸಹದೇವನನ್ನು ಗೆದ್ದು ರಣದಲ್ಲಿ ಪಾಂಡವರ ಸೈನ್ಯವನ್ನು ಕೊಲ್ಲತೊಡಗಿದ.

ಘಟೋತ್ಕಚ ಅಶ್ವತ್ಥಾಮರ ಸಮರ

ತತೋ ದ್ರೌಣಿರ್ವಿವ್ಯಧೈರ್ಬಾಣಸಂಘೈ-
ರ್ಜಘಾನ ಪಾರ್ಥಸ್ಯ ಚಮೂಂ ಸಮಂತತಃ ।

ಸಾ ಹನ್ಯಮಾನಾ ರಣಕೋವಿದೇನ
ನ ಶಂ ಲೇಭೇ ಮೃತ್ಯುನಾಽರ್ತಾ ಪ್ರಜೇವ ॥೨೩೭॥

ಅಶ್ವತ್ಥಾಮ ನಾನಾ ವಿಧವಾದ ಬಾಣ ಸಮೂಹಗಳಿಂದ ಪಾಂಡವ ಸೈನ್ಯವನ್ನು ಎಲ್ಲೆಡೆ ಕೊಲ್ಲಲು ತೊಡಗಿದ. ಯುದ್ಧವಿಶಾರದನಾದ ಆತನಿಂದ ಹತವಾಗುತ್ತಿದ್ದ ಆ ಸೈನ್ಯಕ್ಕೆ ಮೃತ್ಯುವಿನಿಂದ ಪೀಡಿತವಾಗುವ ಆರ್ತ ಜಂತುವಿನಂತೆ ನೆಮ್ಮದಿಯಿಲ್ಲದಂತಾಯಿತು.

ದೃಷ್ಟ್ವಾಽಽಸೇನಾಂ ದ್ರೌಣಬಲಾಭಿಭೂತಾಂ
ತಮಾಹ್ವಯಾಮಾಸ ಘಟೋತ್ಕಚೋ ಯುಧೇ ।
ದ್ರೌಣಿಸ್ತಮಾಹಾಽಲಮಲಂ ನ ವತ್ಸ
ಪುತ್ರಸ್ತಾತಂ ಯೋಧಯಸ್ವಾದ್ಯ ಮಾಂ ತ್ವಮ್ ॥೨೩೮॥

ಪಾಂಡವ ಸೈನ್ಯ ಅಶ್ವತ್ಥಾಮನ ಬಲಕ್ಕೆ ಮಣಿಯುತ್ತಿದ್ದುದನ್ನು ಕಂಡು ಘಟೋತ್ಕಚ ಅವನನ್ನು ಯುದ್ಧಕ್ಕೆ ಆಹ್ವಾನಿಸಿದ. ಆಗ ಅಶ್ವತ್ಥಾಮ 'ಮಗು, ಬೇಡ ಬೇಡ, ಮಗ ತಂದೆಯೊಡನೆ ಯುದ್ಧ ಮಾಡಬಾರದು' ಎಂದ.

ಇತ್ಯುಕ್ತ ಊಚೇ ನ ಪಿತಾ ಮಮ ತ್ವಂ
ಸಖಾ ಪಿತುರ್ಯದ್ಯಪಿ ಶತ್ರುಸಂಶ್ರಯಾತ್ ।
ಅರಿಶ್ಚ ಮೇಽಸೀತಿ ತಮಾಹ ಯದ್ಯರಿಂ
ಮಾಂ ಮನ್ಯಸೇ ತದ್ವದಹಂ ಕರೋಮಿ ತೇ ॥೨೩೯॥

ಅಶ್ವತ್ಥಾಮ ಹೀಗೆ ಹೇಳಿದಾಗ ಘಟೋತ್ಕಚನೆಂದ, 'ನೀನು ನನ್ನ ತಂದೆಯಲ್ಲ. ನನ್ನ ತಂದೆಯ ಸ್ನೇಹಿತನನ್ನೆವುದು ನಿಜವೆ. ಆದರೆ ಈಗ ನೀನು ಶತ್ರು ಪಕ್ಷದಲ್ಲಿರುವುದರಿಂದ ಶತ್ರುವೆ ಆಗಿರುವಿ.' ಆಗ ಅಶ್ವತ್ಥಾಮನೆಂದ, 'ನೀನು ನನ್ನನ್ನು ಶತ್ರುವೆಂದು ತಿಳಿಯುವಿಯಾದರೆ ನಿನಗೆ ಶತ್ರುವಿನಂತೆಯೆ ವರ್ತಿಸುತ್ತೇನೆ.'

ಇತ್ಯೂಚಿವಾನ್ ಶಕ್ರಧನುಃಪ್ರಕಾಶಂ
ವಿಷ್ಫಾರ್ಯ ಚಾಪಂ ಪ್ರಕಿರನ್ ಶರೌಘಾನ್ ।
ಅಭ್ಯಾಗಮದ್ ರಾಕ್ಷಸಮುಗ್ರವೇಗಃ
ಸ್ವಸೇನಯಾ ಸೋಽಪಿ ತಮಭ್ಯವರ್ತತ ॥೨೪೦॥

ಅಶ್ವತ್ಥಾಮ ಹೀಗೆ ಹೇಳಿ ಇಂದ್ರಧನುಸ್ಸಿನಂತೆ ಹೊಳೆವ ಬಿಲ್ಲನ್ನು ಹೆದೆಯೇರಿಸಿ ಬಾಣ ಸಮೂಹಗಳನ್ನು ಚೆಲ್ಲುತ್ತ ಭಯಂಕರ ವೇಗಯುಕ್ತನಾಗಿ ಘಟೋತ್ಕಚನ ಬಳಿಗೆ ಬಂದ. ಘಟೋತ್ಕಚನೂ ತನ್ನ ಸೇನೆಯೊಂದಿಗೆ ಅಶ್ವತ್ಥಾಮನನ್ನು ಇದಿರಿಸಿದ.

ಸ ರಕ್ಷಸಾಂ ಲಕ್ಷಸಮಾವೃತೋ ಬಲೀ
ನೃಭಿಶ್ಚ ವೀರೈರ್ಬಹುಭಿಃ ಸುಶಿಕ್ಷಿತೈಃ ।

ಅಕ್ಷೌಹಿಣೀ ಮಾತ್ರಬಲೇನ ರಾಕ್ಷಸಃ
ಸಂಕ್ಷೋಭಯಾಮಾಸ ಗುರೋಃ ಸುತಂ ಶರೈಃ ॥೨೪೧॥

ಬಲಿಷ್ಠನಾದ ಘಟೋತ್ಕಚ ಒಂದು ಲಕ್ಷ ರಾಕ್ಷಸರಿಂದ ಪರಿವೃತನಾಗಿರುವವನು. ಯುದ್ಧ ವಿದ್ಯೆಯಲ್ಲಿ ಸುಶಿಕ್ಷಿತರಾದ ಬಹುಮಂದಿ ಮನುಷ್ಯ ವೀರರಿಂದಲೂ ಕೂಡಿದ್ದಾನೆ. ಒಟ್ಟು ಒಂದು ಅಕ್ಷೌಹಿಣಿ ಪರಿಮಾಣದ ಸೈನ್ಯದೊಂದಿಗೆ ಆತ ಅಶ್ವತ್ಥಾಮನನ್ನು ಬಾಣಗಳಿಂದ ಕ್ಷೋಭೆಗೊಳಿಸಿದ.

ಸ ತೇನ ಬಾಣೈರ್ಬಹುಭಿಃ ಪ್ರಪೀಡಿತೋ
ವಿಭಿನ್ನಗಾತ್ರಃ ಕ್ಷತಜಾಪ್ಲುತಾಂಗಃ ।
ವ್ಯಾವೃತ್ಯ ನೇತ್ರೇ ಕುಪಿತೋ ಮಹದ್ ಧನು
ರ್ವಿಷ್ಫಾರ್ಯ ಬಾಣೈ ರಜನೀಂ ಚಕಾರ ॥೨೪೨॥

ಅಶ್ವತ್ಥಾಮ ಅವನ ಬಹುಬಾಣಗಳಿಂದ ಬಹಳ ಪೀಡಿತನಾಗಿ ಮೈಯೆಲ್ಲ ಗಾಯಗೊಂಡು ನೆತ್ತರಿಂದ ತೊಯ್ದು ಕೋಪಗೊಂಡು ಕಣ್ಣುತಿರುಗಿಸುತ್ತ ಮಹಾಧನುಸ್ಸನ್ನು ಸೆಳೆದು ಬಾಣಗಳಿಂದ ಕತ್ತಲನ್ನು ನಿರ್ಮಿಸಿದ.

ರಾತ್ರಿ ಯುದ್ಧ ಇದು. ಅದರಿಂದ ರಾತ್ರಿಯನ್ನೇ ಘೋರ ಅಂಧಕಾರಮಯವಾಗುವಂತೆ ದೀಪ ಪ್ರಕಾಶವೂ ಮರೆಯಾಗುವಂತೆ ಮಾಡಿದನೆಂದರ್ಥ.

ಸೋಽಕ್ಷೌಹಿಣೀಂ ತಾಂ ಕ್ಷಣಮಾತ್ರತಃ ಕ್ಷರನ್
ಮಹಾಶರಾಂಸ್ತಾನಪಿ ರಾಕ್ಷಸಾನ್ ಕ್ಷಯಮ್ ।
ನಿನಾಯ ಪುತ್ರಂ ಚ ಘಟೋತ್ಕಚಸ್ಯ
ನಿಷ್ಠ್ಯಂ ಪುರಾ ಯೋಽಂಜನವರ್ಮನಾಮಕಃ ॥೨೪೩॥

ಅಶ್ವತ್ಥಾಮ ಮಹಾಬಾಣಗಳನ್ನೆಸೆದು ಕ್ಷಣಮಾತ್ರದಲ್ಲಿ ಆ ಅಕ್ಷೌಹಿಣಿ ಸೈನ್ಯವನ್ನೂ ಆ ರಾಕ್ಷಸರನ್ನೂ ನಾಶಗೊಳಿಸಿದ. ಹಿಂದೆ ಅಂಜನವರ್ಮನಾಗಿದ್ದು ನಿಷ್ಠ್ಯನೆಂದೂ ಹೆಸರು ಪಡೆದ ಘಟೋತ್ಕಚನ ಮಗನನ್ನೂ ಕೊಂದ.

ಮಹಾಭಾರತದಲ್ಲಿ (ದ್ರೋಣ ೧೫೭.೮೧, ೮೨) ಅಂಜನಪರ್ವ ಎಂದು ಮಾತ್ರ ಹೆಸರು ಕಾಣುತ್ತದೆ. ನಿರ್ಣಯದಲ್ಲಿ ಈತ ಹಿಂದೆ ಅಂಜನವರ್ಮ, ಈಗ ನಿಷ್ಠ್ಯ

ನಿರೀಕ್ಷ್ಯ ಸೇನಾಂ ಸ್ವಸುತಂ ಚ ಪಾತಿತಂ
ಘಟೋತ್ಕಚೋ ದ್ರೋಣಸುತಂ ಶರೇಣ ।
ವಿವ್ಯಾಧ ಗಾಢಂ ಸ ತು ವಿಹ್ವಲೋ ಧ್ವಜಂ
ಸಮಾಶ್ರಿತಶ್ಚಾಽಶು ಸಸಂಜ್ಞಕೋಽಭವತ್ ॥೨೪೪॥

ಸೈನ್ಯವೂ ತನ್ನ ಮಗನೂ ನಾಶಹೊಂದಿದ್ದನ್ನು ಕಂಡು ಘಟೋತ್ಕಚ ಅಶ್ವತ್ಥಾಮನನ್ನು ಬಾಣದಿಂದ ಬಲವಾಗಿ ಹೊಡೆದ. ಅಶ್ವತ್ಥಾಮ ಬಹಳ ವಿಹ್ವಲನಾಗಿ ಧ್ವಜವನ್ನು ಹಿಡಿದು ನಿಂತು ಬೇಗನೆ ಚೇತರಿಸಿಕೊಂಡ.

ಉತ್ಥಾಯ ಬಾಣಂ ಯಮದಂಡಕಲ್ಪಂ
ಸಂಧಾಯ ಚಾಪೇ ಪ್ರವಿಕೃಷ್ಯ ರಾಕ್ಷಸೇ ।
ಮುಮೋಚ ತೇನಾಭಿಹತಃ ಪಪಾತ
ವಿನಷ್ಟಸಂಜ್ಞಃ ಸ್ವರಥೇ ಘಟೋತ್ಕಚಃ ॥೨೪೫॥

ಅಶ್ವತ್ಥಾಮ ಎದ್ದು ಯಮದಂಡಕ್ಕೆ ಸಮಾನವಾದ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಚೆನ್ನಾಗಿ ಸೆಳೆದು ಘಟೋತ್ಕಚನಿಗೆ ಎಸೆದ. ಆ ಬಾಣದ ಏಟಿಗೆ ಘಟೋತ್ಕಚ ಎಚ್ಚರತಪ್ಪಿ ತನ್ನ ರಥದಲ್ಲಿ ಬಿದ್ದು ಬಿಟ್ಟ.

ವಿಮೂರ್ಛಿತಂ ಸಾರಥಿರಸ್ಯ ದೂರಂ
ನಿನಾಯ ಯುದ್ಧಾಜ್ಜಗತೋ ಽಭಿಪಶ್ಯತಃ ।
ದ್ರೌಣಶ್ಚ ಸೇನಾಂ ನಿಶಿತೈಃ ಶರೋತ್ತಮೈ
ರ್ವ್ಯದ್ರಾವಯತ್ ಪಾಂಡವಸೋಮಕಾನಾಮ್ ॥೨೪೬॥

ಮೂರ್ಛಿತನಾದ ಘಟೋತ್ಕಚನನ್ನು ಲೋಕವೆಲ್ಲ ನೋಡುತ್ತಿದ್ದಂತೆ ಅವನ ಸಾರಥಿ ರಣರಂಗದಿಂದ ದೂರಕ್ಕೊಯ್ದ. ಅಶ್ವತ್ಥಾಮ ಹರಿತವಾದ ಶ್ರೇಷ್ಠ ಬಾಣಗಳಿಂದ ಪಾಂಡವರ ಮತ್ತು ಪಾಂಚಾಲರ ಸೇನೆಯನ್ನು ಓಡಿಸಿದ.

ಸಂಜ್ಞಾಮವಾಪ್ಯಾಥ ಘಟೋತ್ಕಚೋ ಽಪಿ
ಕ್ರುದ್ಧೋ ಽವಿಶತ್ ಕೌರವಸೈನ್ಯಮಾಶು ।
ವಿದ್ರಾವಯಾಮಾಸ ಸ ಬಾಣವರ್ಷೈಃ
ಪ್ರಕಮ್ಪಯಾಮಾಸ ಮಹಾರಥಾಂಸ್ತಥಾ ॥೨೪೭॥

ಘಟೋತ್ಕಚ ಎಚ್ಚರಗೊಂಡು ಕ್ರುದ್ಧನಾಗಿ ಕೌರವಸೈನ್ಯವನ್ನು ಬೇಗನೆ ಹೊಕ್ಕ. ಬಾಣಗಳ ಮಳೆಗಳಿಂದ ಓಡಿಸಿದ. ಮಹಾರಥರನ್ನು ನಡುಗಿಸಿದ.

ಘಟೋತ್ಕಚ ವಧ

ತದೈವ ಪಾರ್ಥಂ ಪ್ರತಿ ಯೋದ್ಧುಮಾಗತಂ
ವೈಕರ್ತನಂ ವೀಕ್ಷ್ಯ ಜಗತ್ಪತಿರ್ಹರಿಃ ।
ಘಟೋತ್ಕಚಂ ಪ್ರಾಹಿಣೋಚ್ಛಕ್ತಿಮುಗ್ರಾಂ
ತಸ್ಮಿನ್ ಮೋಕ್ತುಂ ಪಾರ್ಥರಕ್ಷಾರ್ಥಮೇವ ॥೨೪೮॥

ಆಗಲೆ ಅರ್ಜುನನೊಡನೆ ಹೋರಾಡಲು ಕರ್ಣ ಬಂದುದನ್ನು ಕಂಡು ಜಗನ್ನಾಥನಾದ

ಶ್ರೀಕೃಷ್ಣ ಅರ್ಜುನನ ರಕ್ಷಣೆಗಾಗಿ ಉಗ್ರವಾದ ಶಕ್ತ್ಯಾಯುಧವನ್ನು ಘಟೋತ್ಕಚನಲ್ಲಿ ಬೀಳಿಸುವ ಉದ್ದೇಶದಿಂದ ಅವನನ್ನು ಕರ್ಣನ ಇದಿರಿಗೆ ಕಳಿಸಿದ.

'ರಾತ್ರಿ ಹೊತ್ತು ರಾಕ್ಷಸರಿಗೆ ಹೆಚ್ಚು ಬಲ. ಮಕ್ಕಳು ತಂದೆ ತಾಯಿಗಳ ಸೇವೆ ಮಾಡಬೇಕು. ಅದರಿಂದ ನೀನೇ ಈ ರಾತ್ರಿಯಲ್ಲಿ ಮಾಯೆಯ ಬಲದಿಂದ ಕರ್ಣನೊಡನೆ ಯುದ್ಧ ಮಾಡು, ಪಾಂಡವರಿಗೆ ರಾತ್ರಿ ಕಾಲದಲ್ಲಿ ಅವನೊಡನೆ ಯುದ್ಧ ಮಾಡುವುದು ಕಷ್ಟ' ಎಂದು ಮನವೊಲಿಸಿ ಕೃಷ್ಣ ಘಟೋತ್ಕಚನನ್ನು ಕರ್ಣನ ಬಳಿಗೆ ಕಳಿಸಿದ. ಅರ್ಜುನನೂ ಹಾಗೇ ಹೇಳಿ, ನಿನ್ನ ಸಹಾಯಕ್ಕೆ ಸಾತ್ಯಕಿ ಬರುತ್ತಾನೆ ಹೋಗು ಎಂದ.

ಸ ಕರ್ಣಮಾಹೂಯ ಯುಯೋಧ ತೇನ
ತಸ್ಯಾನು ದುರ್ಯೋಧನಪೂರ್ವಕಾಶ್ಚ ಯೇ ।
ದ್ರೋಣೇನ ಚೈತಾನ್ ಸಮರೇ ಸ ಏಕೋ
ನಿವಾರಯಾಮಾಸ ಮಮರ್ದ ಚಾಧಿಕಮ್ ॥೨೪೯॥

ಘಟೋತ್ಕಚ ಕರ್ಣನನ್ನು ಆಹ್ವಾನಿಸಿ ಅವನೊಡನೆ, ಅವನ ಹಿಂದೆ ಸಹಾಯಕ್ಕೆ ನಿಂತಿದ್ದ ದುರ್ಯೋಧನ ಮುಂತಾದವರೊಡನೆ ಮತ್ತು ದ್ರೋಣನೊಡನೆ ಹೋರಾಡಿದ. ಯುದ್ಧದಲ್ಲಿ ಅವರೆಲ್ಲರನ್ನೂ ಒಬ್ಬನೆ ತಡೆದ. ಬಹಳ ಪೀಡಿಸಿದ.

ತೇ ಬಾಧ್ಯಮಾನಾ ಬಹುಶೋ ಬಲೀಯಸಾ
ಕರ್ಣಂ ಪುರೋಧಾಯ ತಮಭ್ಯಯೋಧಯನ್ ।
ನ ವಿವ್ಯಥೇ ತತ್ರ ರಣೇ ಸ ಕರ್ಣಃ
ಸ್ವವೀರ್ಯಮಾಸ್ಥಾಯ ಮಹಾಸ್ತ್ರವೇತ್ತಾ ॥೨೫೦॥

ಬಲಿಷ್ಠನಾದ ಘಟೋತ್ಕಚನಿಂದ ಬಹಳ ಪೀಡಿತರಾದ ದುರ್ಯೋಧನ ಮುಂತಾದವರು ಕರ್ಣನನ್ನು ಮುಂದೆ ಮಾಡಿಕೊಂಡು ಹೋರಾಡಿದರು. ಮಹಾ ಅಸ್ತ್ರಜ್ಞನಾದ ಕರ್ಣ ತನ್ನ ಪರಾಕ್ರಮವನ್ನು ತೋರುತ್ತ ಯುದ್ಧದಲ್ಲಿ ವ್ಯಥಿತನಾಗದೆ ನಿಂತ.

ನಿವಾರಯಾಮಾಸ ಗುರೋಃ ಸುತಂ ತದಾ
ಭೀಮಸ್ತ್ರಿಗರ್ತಾನ್ ಶತಮನ್ಯುನಂದನಃ ।
ಅಲಂಬಲೋ ನಾಮ ತದೈವ ರಾಕ್ಷಸಃ
ಸಮಾಗಮದ್ ಭೀಮಸುತಂ ನಿಹಂತುಮ್ ॥೨೫೧॥

ಆಗ ಭೀಮ ಅಶ್ವತ್ಥಾಮನನ್ನು ತಡೆದ. ಅರ್ಜುನ ತ್ರಿಗರ್ತರನ್ನು ತಡೆದ. ಆಗಲೆ ಅಲಂಬಲನೆಂಬ ರಾಕ್ಷಸ ಘಟೋತ್ಕಚನನ್ನು ಕೊಲ್ಲಲು ಬಂದ.

ಅಲಂಬಲ ಜಟಾಸುರನ ಮಗ. ತಂದೆಯನ್ನು ಭೀಮ ಕೊಂದಿದ್ದರಿಂದ

ಪ್ರತೀಕಾರಕ್ಕೆ ಬಂದಿದ್ದವ. ಘಟೋತ್ಕಚ ಕರ್ಣನ ಬಳಿಗೆ ಬಂದಾಗ ಭೀತನಾದ ದುರ್ಯೋಧನ ದುಃಶಾಸನನನ್ನು ಕರೆದು ಕರ್ಣನ ರಕ್ಷಣೆಗೆ ಹೋಗೆನ್ನುವಾಗ ಈ ಅಲಂಬಲ 'ನನಗೆ ಭೀಮನಲ್ಲಿ ದ್ವೇಷವಿದೆ. ನಾನೇ ಹೋಗುತ್ತೇನೆ' ಎಂದು ಹೇಳಿ ಬಂದ.

ವರದರಾಜೀಯ ಪ್ರಕಾರ ನಿರ್ಣಯದಲ್ಲಿಯೂ ಮಹಾಭಾರತ ಔತ್ತರೇಯ ಪಾಠದಲ್ಲಿಯೂ ಅವನ ಹೆಸರು ಅಲಂಬುಸ. ದಾಕ್ಷಿಣಾತ್ಯ ಪಾಠದಲ್ಲಿ ಅಲಂಬಲ.

ಯುದ್ಧ್ವಾ ಪ್ರಗೃಹ್ಯೈನಮಥೋ ನಿಪಾತ್ಯ
ಘಟೋತ್ಕಚೋ ಭೂಮಿತಲೇಽಸಿನಾಽಸ್ಯ।
ಉತ್ಕೃತ್ಯ ಶೀರ್ಷಂ ತು ಸುಯೋಧನೇಽಕ್ಷಿಪದ್
ವಿಷೇದುರತ್ಯಾಖಿಲಭೂಮಿಪಾಲಾಃ ॥೨೫೨॥

ಅಲಂಬಲನೊಡನೆ ಘಟೋತ್ಕಚ ಹೋರಾಡಿ ಅವನನ್ನು ಹಿಡಿದು ನೆಲದಲ್ಲಿ ಕೆಡವಿ ಖಡ್ಗದಿಂದ ತಲೆಯನ್ನು ಕಡಿದು ಆ ತಲೆಯಿಂದಲೆ ದುರ್ಯೋಧನನನ್ನು ಹೊಡೆದ. ಆಗ ಎಲ್ಲ ರಾಜರೂ ಕಳವಳಗೊಂಡರು.

ಅಲಾಯುಧೋಽಥಾಽಗಮದುಗ್ರವೀರ್ಯೋ
ನರಾಶನಸ್ತಂ ಸ ಘಟೋತ್ಕಚೋಽಭ್ಯಯಾತ್।
ಯುದ್ಧ್ವಾ ಮುಹೂರ್ತಂ ಸ ತು ತೇನ ಭೂಮೌ
ನಿಪಾತ್ಯ ತಂ ಯಜ್ಞಪಶುಂ ಚಕಾರ ॥೨೫೩॥

ಆಮೇಲೆ ಉಗ್ರಪರಾಕ್ರಮಿಯಾದ ಅಲಾಯುಧನೆಂಬ ನರಭಕ್ಷಕ ರಾಕ್ಷಸ ಬಂದ. ಅವನನ್ನೂ ಘಟೋತ್ಕಚ ಇದಿರಿಸಿದ. ಅವನೊಡನೆ ಒಂದು ಮುಹೂರ್ತಕಾಲ ಯುದ್ಧಮಾಡಿ ಅವನನ್ನು ನೆಲದಲ್ಲಿ ಕೆಡವಿ ಯಜ್ಞಪಶುವನ್ನಾಗಿ ಮಾಡಿದ.

ಘಟೋತ್ಕಚ ಕರ್ಣನನ್ನು ಪೀಡಿಸದಂತೆ ಈ ಅಲಾಯುಧನನ್ನು ದುರ್ಯೋಧನ ಕಳಿಸುತ್ತಾನೆ. ಅಲಾಯುಧ ಘಟೋತ್ಕಚನನ್ನು ಪೀಡಿಸುವುದನ್ನು ಕಂಡು ಭೀಮ ನಡುವೆ ಬಂದ. ಆಗ ಅಲಾಯುಧ ಭೀಮನನ್ನು ಪೀಡಿಸಿದ. ಅವನ ರಥದ ಕುದುರೆಗಳನ್ನು ಕೊಂದು ಸಾರಥಿ ವಿಶೋಕನಿಗೂ ಚೆನ್ನಾಗಿ ಹೊಡೆದ. ಬಳಿಕ ಇಬ್ಬರಿಗೂ ಮುಷ್ಟಿಯುದ್ಧ ನಡೆಯಿತು. ಆಗ ಕೃಷ್ಣ ಘಟೋತ್ಕಚನನ್ನು ಅಲಾಯುಧನ ಕಡೆಗೆ ಕಳಿಸಿದ.

ಅಲಾಯುಧ ಭೀಮನ ಬಿಲ್ಲನ್ನು ಕಡಿದು ಕುದುರೆಗಳನ್ನೂ ಸಾರಥಿಯನ್ನೂ ಕೊಂದ (ದ್ರೋಣ ೧೭೮.೪೧) ಎಂದಿದೆ ಮಹಾಭಾರತ.

ಆದರೆ ಮುಂದೆ ಕರ್ಣಪರ್ವದಲ್ಲಿ ಭೀಮ ವಿಶೋಕರ ಸಂವಾದವಿದೆ. (ಕರ್ಣ ೮೦ ಅಧ್ಯಾಯ) ಆದರಿಂದ ಸಾರಥಿಯನ್ನು 'ಜಘಾನ' ಎಂದರೆ ಹಿಂಸಿಸಿದ, ಕೊಲ್ಲಲಿಲ್ಲ.

ಅಥಾಸ್ಯ ಶಿರ ಉದ್ಧೃತ್ಯ ಕ್ರೋಧಾದ್ ದುರ್ಯೋಧನೋರಸಿ ।
ಚಿಕ್ಷೇಪ ತೇನ ಸಂಭ್ರಾಂತಾಃ ಸರ್ವೇ ದುರ್ಯೋಧನಾದಯಃ ॥೨೫೪॥

ಘಟೋತ್ಕಚ ಅಲಾಯುಧನ ಶಿರಸ್ಸನ್ನು ಕತ್ತರಿಸಿ ಅದನ್ನು ಕೋಪದಿಂದ ದುರ್ಯೋಧನನ ಎದೆಗೆ ಎಸೆದ. ಅದರಿಂದ ದುರ್ಯೋಧನ ಮುಂತಾದವರೆಲ್ಲರೂ ಕಳವಳಗೊಂಡರು.

ಘಟೋತ್ಕಚಬಲಖ್ಯಾತ್ಯೈ ಸಮರ್ಥೋನಾಪಿ ಯೋ ರಣೇ ।
ನ ಹತೋ ಭೀಮಸೇನೇನ ಹತೋಽಸ್ಮಿನ್ ಭೈಮಸೇನಿನಾ ।
ಸರ್ವೇ ಸಂಚೋದಯಾಮಾಸುಃ ಕರ್ಣಂ ಶಕ್ತಿವಿಮೋಕ್ಷಣೇ ॥೨೫೫॥
ಅಸ್ಮಿನ್ ಹತೇ ಹತಂ ಸರ್ವಂ ಕಿಂ ನಃ ಪಾರ್ಥಃ ಕರಿಷ್ಯತಿ ॥೨೫೬॥

ಅಲಾಯುಧನನ್ನು ಕೊಲ್ಲಲು ಭೀಮ ಸಮರ್ಥನಾಗಿದ್ದರೂ ಘಟೋತ್ಕಚನ ಬಲ ಹೀಗೆ ಪ್ರಕಟವಾಗಲೆಂದೇ ತಾನು ಕೊಲ್ಲದೆ ಬಿಟ್ಟಿದ್ದ. ಘಟೋತ್ಕಚ ಅವನನ್ನು ಕೊಂದಾಗ ಎಲ್ಲರೂ ಶಕ್ತ್ಯಾಯುಧ ಪ್ರಯೋಗಕ್ಕೆ ಕರ್ಣನನ್ನು ಒತ್ತಾಯಿಸಿದರು- 'ಈತನೊಬ್ಬ ಹತನಾದರೂ ಎಲ್ಲ ಹತರಾದಂತೆ. ಬಳಿಕ ಅರ್ಜುನ ನಮ್ಮನ್ನೇನು ಮಾಡಬಲ್ಲ?' ಎಂದು.

ಏವಂ ಸಂಚೋದ್ಯಮಾನಃ ಸ ಧಾರ್ತರಾಷ್ಟ್ರೈಃ ಪುನಃಪುನಃ ।
ಹೈಡಿಂಬೇನಾರ್ದ್ಯಮಾನೈಸ್ತು ಸ್ವಯಂ ಚ ಭೃಶಪೀಡಿತಃ
ಆದತ್ತ ಶಕ್ತಿಂ ವಿಪುಲಾಂ ಪಾಕಶಾಸನಸಮ್ಮತಾಮ್ ॥೨೫೭॥

ಹೀಗೆ ಘಟೋತ್ಕಚನಿಂದ ಪೀಡಿತರಾಗುತ್ತಿದ್ದ ಕೌರವರು ಮತ್ತೆ ಮತ್ತೆ ಒತ್ತಾಯ ಮಾಡಿದಾಗ, ತಾನೂ ಬಹಳ ಪೀಡಿತನಾದ್ದರಿಂದ ಇಂದ್ರನ ಪ್ರೀತಿಪಾತ್ರವಾದ ಮಹತ್ತಾದ ಶಕ್ತ್ಯಾಯುಧವನ್ನು ಕರ್ಣ ಎತ್ತಿಕೊಂಡ.

ತಾಮಂಬರಸ್ಥಾಯ ಘಟೋತ್ಕಚಾಯ
ಶೈಲೋಪಮಾಯಾತುಲವಿಕ್ರಮಾಯ ।
ಚಿಕ್ಷೇಪ ಮೃತ್ಯೋ ರಸನೋಪಮಾಮಲಂ
ಪ್ರಕಾಶಯಂತೀಂ ಪ್ರದಿಶೋ ದಿಶಶ್ಚ ॥೨೫೮॥

ಅತುಲ ಪರಾಕ್ರಮಿ ಘಟೋತ್ಕಚ ಆಕಾಶದಲ್ಲಿ ನಿಂತಿದ್ದ. ಬೆಟ್ಟದಂತೆ ಕಾಣುತ್ತಿದ್ದ. ಅವನ ಮೇಲೆ ಕರ್ಣ ಮೃತ್ಯುವಿನ ನಾಲಗೆಯಂತಿದ್ದು ದಿಕ್ಕು ವಿದಿಕ್ಕುಗಳನ್ನು ಚೆನ್ನಾಗಿ ಬೆಳಗಿಸುತ್ತಿದ್ದ ಶಕ್ತ್ಯಾಯುಧವನ್ನು ಎಸೆದ.

ನಿರ್ಭಿಣ್ಣವಕ್ಷಾಃ ಸ ತಯಾ ಪಪಾತ
ವಿಚೂರ್ಣಯನ್ ಶತ್ರುಬಲಂ ಹತೋಽಪಿ ।
ತಸ್ಮಿನ್ ಹತೇ ಜಹೃಷುರ್ಧಾರ್ತರಾಷ್ಟ್ರಾ
ಉಚ್ಚುಕ್ರುಶುರ್ದುದ್ರುವುಶ್ಚಾಂಬರಾಣಿ ॥೨೫೯॥

ಶಕ್ತ್ಯಾಯುಧದಿಂದ ಘಟೋತ್ಕಚ ಎದೆ ಒಡೆದು ಕೆಳಗೆ ಬಿದ್ದ. ತಾನು ಹತನಾದರೂ ಬಿದ್ದು ಶತ್ರುಸೈನ್ಯವನ್ನು ಪುಡಿಮಾಡುತ್ತ ಬಿದ್ದ. ಅವನು ಹತನಾದಾಗ ಕೌರವರು ಹರ್ಷಪಟ್ಟರು. ಕೇಕೇ ಹಾಕಿದರು, ವಸ್ತ್ರಗಳನ್ನು ಹಾರಿಸಿದರು.

ಮಹಾಭಾರತದಲ್ಲಿ ಘಟೋತ್ಕಚ ಶಕ್ತ್ಯಾಯುಧ ಬರುವುದನ್ನು ಕಂಡು ಹೆದರಿ ವಿಂಧ್ಯಪರ್ವತದಷ್ಟು ಗಾತ್ರದ ಶರೀರ ಮಾಡಿಕೊಂಡು ಓಡಿದ. ಆಗ ಶಕ್ತ್ಯಾಯುಧ ಅವನ ಬೆನ್ನಲ್ಲಿ ಇರಿಯಬೇಕು. ಎದೆಯನ್ನು ಹೇಗೆ ಸೀಳಿತು? ಎಂದು ಕೇಳಕೂಡದು. ಇದು ದಿವ್ಯವಾದ ಶಕ್ತ್ಯಾಯುಧ.

ಘಟೋತ್ಕಚ ಸಾಯುವಾಗಲೂ ಬೆಟ್ಟದಂತೆ ಮೇಲಿಂದ ಬಿದ್ದು ಶತ್ರು ಸೈನ್ಯವನ್ನು ಪುಡಿ ಮಾಡಿದ. 'ವೈಜಯಂತೀ' ಎಂಬ ಹೆಸರಿನ ಈ ಶಕ್ತ್ಯಾಯುಧ ಘಟೋತ್ಕಚನನ್ನು ಕೊಂದು ಮೇಲೆ ಅಂತರಿಕ್ಷವನ್ನು ಪ್ರವೇಶಿಸಿ ನಕ್ಷತ್ರ ಪುಂಜದ ನಡುವೆ ಮರೆಯಾಯಿತು.

ತದಾ ನನರ್ತ ಕೇಶವಃ ಸಮಾಶ್ಲಿಷಚ್ಚ ಫಲ್ಗುನಮ್ ।
ನನಾದ ಶಂಖಮಾಧಮಜ್ಜಹಾಸ ಚೋರುನಿಸ್ವನಃ ॥೨೬೦॥

ಆಗ ಶ್ರೀಕೃಷ್ಣನೂ ಕುಣಿದಾಡಿದ. ಅರ್ಜುನನನ್ನು ತಬ್ಬಿಕೊಂಡ. ಶಂಖನಾದ ಮಾಡುತ್ತ ಸಿಂಹನಾದವನ್ನು ಮಾಡಿದ. ದೊಡ್ಡ ಧ್ವನಿಯಿಂದ ನಕ್ಕ.

ತಮಪೃಚ್ಛದ್ ಗುಡಾಕೇಶಃ ಕಿಮೇತದಿತಿ ದುರ್ಮನಾಃ ।
ಹತೇ ಸುತೇಽಗ್ರಜೇಽಸ್ಮಾಕಂ ವೀರೇ ಕಿಂ ನಂದಸಿ ಪ್ರಭೋ ॥೨೬೧॥

ದುಃಖಿತನಾದ ಅರ್ಜುನ ಶ್ರೀಕೃಷ್ಣನನ್ನು ಕೇಳಿದ 'ಪ್ರಭು, ಇದೇನು? ವೀರನಾದ ನಮ್ಮ ಜ್ಯೇಷ್ಠಪುತ್ರ ಹತನಾದಾಗ ಏಕೆ ಸಂತೋಷಪಡುವಿ?'

ತಮಾಹ ಭಗವಾನ್ ಕೃಷ್ಣೋ ದಿಷ್ಟ್ಯಾ ಜೀವಸಿ ಫಲ್ಗುನ ।
ತ್ವದರ್ಥಂ ನಿಹಿತಾ ಶಕ್ತಿರ್ವಿಮುಕ್ತಾಽಸ್ಮಿನ್ ಹಿ ರಾಕ್ಷಸೇ ॥೨೬೨॥

ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ, 'ಅರ್ಜುನ, ಅದೃಷ್ಟವಶದಿಂದ ನೀನು ಬದುಕಿಕೊಂಡೆ. ನಿನಗಾಗಿ ಕಾದಿರಿಸಿದ್ದ ಶಕ್ತ್ಯಾಯುಧವನ್ನು ಕರ್ಣ ಘಟೋತ್ಕಚನ ಮೇಲೆ ಎಸೆದುಬಿಟ್ಟ.

ತತೋ ಯುಧಿಷ್ಠಿರೋ ದುಃಖಾದಮರ್ಷಾಚ್ಚಾಭ್ಯವರ್ತತ ।
ಕರ್ಣಂ ಪ್ರತಿ ತಮಾಹಾಥ ಕೃಷ್ಣದ್ವೈಪಾಯನಃ ಪ್ರಭುಃ ॥೨೬೩॥

ಆಗ ಯುಧಿಷ್ಠಿರ ಕೋಪದಿಂದ ಮತ್ತು ದುಃಖದಿಂದ ಕರ್ಣನ ಮುಂದೆ ಯುದ್ಧಕ್ಕೆ ಹೊರಟ. ಆಗ ವೇದವ್ಯಾಸರು ಬಂದು ಹೇಳಿದರು.

ಅಭಿಮನ್ಯು ವಧೆಗೆ ಮುಖ್ಯಕಾರಣ ಕರ್ಣದ್ರೋಣರು. ಅವರನ್ನು ಬಿಟ್ಟು ಜಯದ್ರಥನನ್ನು ಕೊಂದಿದ್ದು ನನಗೆ ಆಷ್ಟೇನೂ ಇಷ್ಟವಾಗಲಿಲ್ಲ. ಈಗ ನಮಗೆ ವನವಾಸದಲ್ಲಿ ಸದಾ ಸೇವೆ ಮಾಡುತ್ತಿದ್ದ ಘಟೋತ್ಕಚನನ್ನು ಕರ್ಣಕೊಂದಿದ್ದಾನೆ. ನೀವೆಲ್ಲ ಉಪೇಕ್ಷೆ ಮಾಡುತ್ತಿದ್ದೀರಿ. ನಾನೇ ಕೊಲ್ಲುತ್ತೇನೆ ಎಂದು ಒಬ್ಬನೆ ಹೊರಟುಬಿಟ್ಟ ಯುಧಿಷ್ಠಿರ. ಕೃಷ್ಣ ತಡೆದರೂ ಕೇಳಲಿಲ್ಲ. ಕೊನೆಗೆ ಕೃಷ್ಣನೂ ಅವನ ಹಿಂದೆ ಹೊರಟ. ಆಗ ಎದುರಿಗೆ ವೇದವ್ಯಾಸರು ಬಂದು ಸಮಾಧಾನ ಹೇಳಿದರು.

ಯಯಾಽರ್ಜುನೋ ನಿಹಂತವ್ಯಸ್ತಯಾಽಸೌ ರಾಕ್ಷಸೋ ಹತಃ।
ತನ್ಮಾ ಶುಚಸ್ತ್ವಂ ರಾಜೇಂದ್ರ ದಿಷ್ಟ್ಯಾ ಜೀವತಿ ಫಲ್ಗುನಃ।
ಇತ್ಯುಕ್ತ್ವಾ ಪ್ರಯಯೌ ವ್ಯಾಸಸ್ತತೋ ಯುದ್ಧಮವರ್ತತ ॥ ೨೬೪ ॥

'ಯಾವ ಶಕ್ತ್ಯಾಯುಧದಿಂದ ಅರ್ಜುನ ಹತನಾಗಬೇಕಿತ್ತೋ ಅದರಿಂದ ಘಟೋತ್ಕಚ ಹತನಾಗಿದ್ದಾನೆ. ಅದರಿಂದ, ಮಹಾರಾಜ, ಶೋಕಿಸಬೇಡ, ಅದೃಷ್ಟವಶಾತ್ ಅರ್ಜುನ ಬದುಕಿದ್ದಾನೆ.' ಹೀಗೆ ಹೇಳಿ ವೇದವ್ಯಾಸರು ಹೊರಟುಹೋದರು. ಬಳಿಕ ಯುದ್ಧ ಮುಂದುವರಿಯಿತು.

ಹುಟ್ಟಿದವರು ಸಾಯಲಿಬೇಕು. ಘಟೋತ್ಕಚ ಸತ್ತಿದ್ದಕ್ಕೆ ದುಃಖಿಸಬೇಡ. ಅರ್ಜುನ ಬದುಕಿದ್ದಕ್ಕೆ ಸಂತೋಷಪಡು. ಅವನು ಸತ್ತಿದ್ದರೆ ಆ ದುಃಖ ಘೋರವಾಗಿರುತ್ತಿತ್ತು. ದುಡುಕಬೇಡ, ಎಲ್ಲ ಸೋದರರ, ಮತ್ತೆ ಎಲ್ಲ ರಾಜರ ಸಹಕಾರದಿಂದ ಜಯಸಂಪಾದಿಸು. ಇಂದಿಗೆ ಐದನೆ ದಿನ ರಾಜ್ಯ ನಿನ್ನದಾಗುತ್ತದೆ. ಧರ್ಮವನ್ನೇ ಸೇವಿಸು. 'ಯತೋ ಧರ್ಮಸ್ತತೋ ಜಯಃ' ಧರ್ಮವಿದ್ದಲ್ಲಿ ಜಯ ಎಂದು ವ್ಯಾಸರು ಉಪದೇಶಿಸಿ ಅಲ್ಲಿಯೆ ಅಂತರ್ಧಾನರಾದರು.

ಭೀಮಾರ್ಜುನಾಭ್ಯಾಮಿಹ ಹನ್ಯಮಾನೇ
ಬಲೇ ಕುರೂಣಾಮಿತರೈಶ್ಚ ಪಾಂಡವೇ।
ಪ್ರದೀಪಹಸ್ತಾ ಅಥ ಯೋಧಕಾಶ್ಚ
ಸರ್ವೇಽಪಿ ನಿದ್ರಾವಶಗಾ ಬಭೂವುಃ ॥ ೨೬೫ ॥

ಕೌರವರ ಸೈನ್ಯವನ್ನು ಭೀಮಾರ್ಜುನರೂ ಪಾಂಡವರ ಸೈನ್ಯವನ್ನು ಕೌರವರೂ ನಾಶಮಾಡುತ್ತಿದ್ದಾಗ ದೀಪಗಳನ್ನು ಹಿಡಿದವರೂ ಯೋಧರೂ ಎಲ್ಲರೂ ನಿದ್ರಾಪರವಶರಾದರು.

ಕೆಲವರು ರಥ ಆನೆ ಕುದುರೆಗಳಲ್ಲಿ ಕುಳಿತೇ ನಿದ್ದೆ ಮಾಡತೊಡಗಿದರು. ಇನ್ನು ಕೆಲವರು ಯುದ್ಧ ಮಾಡುತ್ತಿದ್ದರೂ ನಿದ್ದೆಗಣ್ಣಿನಲ್ಲಿ ಯಾರು ಶತ್ರುಗಳು ಯಾರು ತಮ್ಮವರೆನ್ನುವ ವಿವೇಕವಿಲ್ಲದೆ ಸಿಕ್ಕವರನ್ನು ಕೊಂದರು.

ದೃಷ್ಟ್ವೈವ ತಾನಾಹ ಧನಂಜಯಸ್ತದಾ
ಸ್ವಪ್ಸ್ಯಂತು ಯಾವಚ್ಛಶಿನಃ ಪ್ರಕಾಶಃ ।
ಇತೀರಿತಾ ಆಶಿಷಃ ಫಲ್ಗುನಾಯ
ಪ್ರಯುಜ್ಯ ಸರ್ವೇ ಸುಷುಪುರ್ಯಥಾಸ್ಥಿತಾಃ ॥ ೨೬೬ ॥

ಸೈನಿಕರು ನಿದ್ರಾಪರವಶರಾದುದನ್ನು ಕಂಡು ಅರ್ಜುನ ಹೇಳಿದ, 'ಚಂದ್ರನ ಪ್ರಕಾಶ ಹರಡುವವರೆಗೆ ಎಲ್ಲರೂ ನಿದ್ದೆಮಾಡಿರಿ' ಹೀಗೆ ಹೇಳಿದಾಗ ಎಲ್ಲರೂ ಅವನಿಗೆ ಆಶೀರ್ವಾದ ಮಾಡಿ, ಹೇಗಿದ್ದರೋ ಹಾಗೇ ಮಲಗಿ ನಿದ್ದೆ ಹೋದರು.

ರಥದಲ್ಲಿದ್ದವರು ರಥದಲ್ಲಿ, ಆನೆಯ ಮೇಲಿದ್ದವರು ಆನೆಯ ಮೇಲೆ, ಕೈಯಲ್ಲಿ ಹಿಡಿದಿದ್ದ ಆಯುಧಗಳನ್ನು ಹಾಗೇ ಹಿಡಿದುಕೊಂಡೇ ಯೋಧರು ನಿದ್ದೆ ಮಾಡಿದರು.

ಪುನಶ್ಚ ಚಂದ್ರೇಕ್ಷ್ಯುದಿತೇ ಯುಧೇ ತೇ
ಸಮಾಯಯುಃ ಶಸ್ತ್ರಮಹಾಸ್ತ್ರವರ್ಷಾಃ ।
ತತ್ರಾಕಯಾತಃ ಸಾತ್ಯಕಿಂ ಸೋಮದತ್ತೋ
ಭೂರಿಶ್ಚ ತಾಭ್ಯಾಂ ಯುಯುಧೇ ಸ ಏಕಃ ॥ ೨೬೭ ॥

ಚಂದ್ರನುದಿಸಿದಾಗ ಪುನಃ ಅವರು ಶಸ್ತ್ರ ಮಹಾಸ್ತ್ರಗಳ ಮಳೆ ಸುರಿಸುತ್ತ ಯುದ್ಧಕ್ಕೆ ಬಂದರು. ಭೂರಿ ಮತ್ತು ಸೋಮದತ್ತರು ಸಾತ್ಯಕಿಯ ಎದುರಿಗೆ ಬಂದರು. ಸಾತ್ಯಕಿಯೊಬ್ಬನೆ ಅವರಿಬ್ಬರೊಡನೆ ಹೋರಾಡಿದ.

ಹತೌ ಚ ತೌ ಪೇತತುಸ್ತೇನ ಭೂಮೌ
ಬಾಹ್ಲೀಕ ಏನಂ ಸಮರೇ ತ್ವಯೋಧಯತ್ ।
ಸ ಸಾತ್ಯಕಿಂ ವಿರಥೀಕೃತ್ಯ ಬಾಣಂ
ವಧಾಯ ತಸ್ಯಾಕ್ಷು ಮುಮೋಚ ವೀರಃ ॥ ೨೬೮ ॥

ಸಾತ್ಯಕಿಯಿಂದ ಭೂರಿ ಸೋಮದತ್ತರು ಹತರಾಗಿ ನೆಲದಲ್ಲಿ ಬಿದ್ದರು. ಬಾಹ್ಲೀಕ ಸಾತ್ಯಕಿಯೊಡನೆ ಯುದ್ಧದಲ್ಲಿ ಹೋರಾಡಿದ. ವೀರನಾದ ಅವನು ಸಾತ್ಯಕಿಯನ್ನು ವಿರಥನನ್ನಾಗಿ ಮಾಡಿ ಅವನ ವಧೆಗಾಗಿ ಬಾಣವನ್ನೆಸೆದ.

ಬಾಹ್ಲೀಕ ವಧ

ಚಿಚ್ಛೇದ ತಂ ಭೀಮಸೇನಸ್ತ್ರಿಧೈವ
ತಸ್ಮೈ ಶತಘ್ನೀಂ ಪ್ರಜಹಾರ ಬಾಹ್ಲಿಕಃ ।

ತಯಾ ಹತೋ ವಿಹ್ವಲಿತೋ ವೃಕೋದರೋ
ಜಘಾನ ತಂ ಗದಯಾ ಸೋಽಪತಚ್ಚ ॥ ೨೬೯ ॥

ಆ ಬಾಣವನ್ನು ಭೀಮ ಮೂರಾಗಿ ತುಂಡರಿಸಿದ. ಭೀಮನಿಗೆ ಬಾಹ್ಲೀಕ ಶತಘ್ನಿಯನ್ನು ಪ್ರಯೋಗಿಸಿದ. ಅದರಿಂದ ಹೊಡೆಸಿಕೊಂಡ ಭೀಮ ವಿಹ್ವಲನಾದವನಂತೆ ತೋರಿಕೊಂಡು ಅವನನ್ನು ಗದೆಯಿಂದ ಹೊಡೆದ. ಅವನು ಸತ್ತು ಬಿದ್ದ.

ನಿರ್ಣಯದಲ್ಲಿ ವಿಹ್ವಲನಾದನೆಂದಿದೆ. ವಿಹ್ವಲನಾಗಲಿಲ್ಲ. ಆದಂತೆ ತೋರಿಕೊಂಡ ಎಂದು ಅಭಿಪ್ರಾಯವಿಟ್ಟುಕೊಳ್ಳಬೇಕೆಂದು ಸತ್ಯಾಭಿನವೀಯ ಹೇಳಿದೆ. ಭೀಮ ಹಾಗೆ ಏಕೆ ತೋರಿಕೊಂಡನೆಂದರೆ ಶತಘ್ನಿ ಎಂಬುದು ಬ್ರಹ್ಮನಿತ್ತ ಗದೆ. ಅದಕ್ಕೆ ಮರ್ಯಾದೆ ನೀಡಬೇಕೆಂದು ಭೀಮ ಹಾಗೆಮಾಡಿದ.

ಬಾಹ್ಲೀಕಃ ಪ್ರಾರ್ಥಯಾಮಾಸ ಪೂರ್ವಂ ಸ್ನೇಹಪುರಸ್ಸರಮ್ ।
ಭೀಮ ತ್ವಯೈವ ಹಂತವ್ಯೋ ರಣೇಽಹಂ ಪ್ರೀತಿಮಿಚ್ಛತಾ ।
ತದಾ ಯಶಶ್ಚ ಧರ್ಮಂ ಚ ಲೋಕಂ ಚ ಪ್ರಾಪ್ನುಯಾಮಹಮ್ ॥ ೨೭೦ ॥

ಹಿಂದೆ ಬಾಹ್ಲೀಕ ಭೀಮನಲ್ಲಿ ಸ್ನೇಹಪುರಃಸರವಾಗಿ ಕೇಳಿಕೊಂಡಿದ್ದ 'ಭೀಮ! ನೀನು ನನಗೆ ಸಂತೋಷವನ್ನು ಬಯಸುವಿಯಾದರೆ ನೀನೆ ನನ್ನನ್ನು ಯುದ್ಧದಲ್ಲಿ ಕೊಲ್ಲಬೇಕು. ಆಗಲೆ ನಾನು ಕೀರ್ತಿಯನ್ನೂ ಪುಣ್ಯವನ್ನೂ ಉತ್ತಮ ಲೋಕವನ್ನೂ ಪಡೆಯಬಲ್ಲೆ.'

ಕರ್ಣ ವಿಷ್ಣುಭಕ್ತ ಅವನನ್ನು ವಧಿಸಲಾರೆ ಎಂದವನು ಭೀಮ. ಪ್ರಹ್ಲಾದಾಂಶಸಂಭೂತನಾದ ವಿಷ್ಣುಭಕ್ತನಾದ ಬಾಹ್ಲೀಕನನ್ನು ಏಕೆ ವಧಿಸಿದ ಎಂದರೆ ಅದು ಅವನಿಗೆ ಇಷ್ಟವಾಗಿತ್ತು. ಭೀಮನ ಗದಾಸ್ಪರ್ಶದಿಂದ ಪಾವಿತ್ರ್ಯ ಹೊಂದಿ ಪುಣ್ಯಲೋಕ ಪಡೆಯಬೇಕು. ಭೀಮನಿಗೆ ವಿಹ್ವಲತೆ ಉಂಟು ಮಾಡುವಷ್ಟು ಚೆನ್ನಾಗಿ ಯುದ್ಧಮಾಡಿ ಅವನ ಗದೆಯಿಂದ ಮಡಿದನೆಂಬ ಕೀರ್ತಿ ಬರಬೇಕು ಎಂದು ಅವನ ಆಸೆ. ವಯಸ್ಸಿನಲ್ಲಿ ಆತ ಭೀಷ್ಮಪಿತಾಮಹನಿಗೂ ದೊಡ್ಡಪ್ಪ. ತರುಣನಾದ ಮಹಾಬಲಿಷ್ಠನಾದ ಭೀಮನೊಡನೆ ಕಾದಿ ಮಡಿದನೆಂದು ಕೀರ್ತಿ ಪಡೆಯಬಯಸಿದ್ದ.

ಇತ್ಯುಕ್ತ ಆಹ ತಂ ಭೀಮೋ ನಿತರಾಂ ವ್ಯಥಿತಸ್ತದಾ ।
ಹನ್ಯಾಂ ನೈವಾನ್ಯಥಾ ಯುದ್ಧೇ ತತ್ ತೇ ಶುಶ್ರೂಷಣಂ ಭವೇತ್ ॥ ೨೭೧ ॥
ಇತಿ ತೇನ ಹತಸ್ತತ್ರ ಭೀಮಸೇನೇನ ಬಾಹ್ಲಿಕಃ ॥ ೨೭೨ ॥

ಬಾಹ್ಲೀಕ ಹೀಗೆ ಹೇಳಿದಾಗ ಭೀಮನೆಂದ, 'ಯುದ್ಧದಲ್ಲಿ ನಾನು ಬಹಳ ಹೊಡೆಸಿಕೊಂಡರೆ ಮಾತ್ರ, ನಿನ್ನಾಜ್ಞೆಯಿಂದ ನಿನ್ನನ್ನು ಕೊಲ್ಲುವುದು ನಿನಗೆ ಸೇವೆಯಾಗುವುದಿದ್ದರೆ ಮಾತ್ರ, ನಿನ್ನನ್ನು ಕೊಲ್ಲುವೆ ಇಲ್ಲದಿದ್ದರೆ ಇಲ್ಲ' ಎಂದು. ಅದರಿಂದ ಭೀಮ ಬಾಹ್ಲೀಕನನ್ನು ಕೊಂದ.

ಹತೇ ಬಾಹ್ಲೀಕೇ ಕೌರವಾ ಭೀಮಸೇನ-
ಮಭ್ಯಾಜಗ್ಮುಃ ಕರ್ಣದುರ್ಯೋಧನಾದ್ಯಾಃ ।
ದ್ರೌಣಿಂ ಪುರಸ್ಕೃತ್ಯ ಗುರುಂ ಚ ಪಾರ್ಷತಃ
ಸಭ್ರಾತೃಕಃ ಸಾತ್ಯಕಿನಾ ಸಮಭ್ಯಯಾತ್ ॥೨೭೩॥

ಬಾಹ್ಲೀಕ ಹತನಾದಾಗ ಕರ್ಣ ದುರ್ಯೋಧನ ಮುಂತಾದ ಕೌರವ ಯೋಧರು ಅಶ್ವತ್ಥಾಮನನ್ನು ಮುಂದೆ ಮಾಡಿಕೊಂಡು ಭೀಮಸೇನನ ಮುಂದೆ ಬಂದರು. ಅತ್ತ ಧೃಷ್ಟದ್ಯುಮ್ನ ಸೋದರರೊಂದಿಗೆ ಮತ್ತು ಸಾತ್ಯಕಿಯೊಂದಿಗೆ ದ್ರೋಣನ ಬಳಿಗೆ ಬಂದ.

ಸಂಶಪ್ತಕೈರೇವ ಪಾರ್ಥೋ ಯುಯೋಧ
ತದ್ ಯುದ್ಧಮಾಸೀದತಿರೌದ್ರಮದ್ಭುತಮ್ ।
ಅಕ್ಷೌಹಿಣೀ ತತ್ರ ಭೀಮಾರ್ಜುನಾಭ್ಯಾಂ
ನಿಸೂದಿತಾ ರಾತ್ರಿಯುದ್ಧೇ ಸಮಸ್ತಾ ॥೨೭೪॥

ಅರ್ಜುನ ಸಂಶಪ್ತಕರೊಡನೆ ಹೋರಾಡಿದ. ಆ ಯುದ್ಧ ಅತಿ ಭೀಕರ ಮತ್ತು ಅದ್ಭುತವಾಗಿತ್ತು. ಅಂದು ರಾತ್ರಿ ಯುದ್ಧದಲ್ಲಿ ಸಂಪೂರ್ಣ ಒಂದು ಅಕ್ಷೌಹಿಣಿ ಕೌರವರ ಸೈನ್ಯ ಭೀಮಾರ್ಜುನರಿಂದ ಹತವಾಯಿತು.

ಹದಿನೈದನೆ ದಿನದ ಯುದ್ಧ - ದ್ರೋಣ ವಧ

ತತಃ ಸೂರ್ಯಶ್ಚಾಭ್ಯುದಿತಸ್ತದಾಽತಿ
ಘೋರಂ ದ್ರೋಣಃ ಕರ್ಮ ಯುದ್ಧೇ ಚಕಾರ ।
ಸ ಪಾಂಚಾಲಾನಾಂ ರಥವೃಂದಂ ಪ್ರವಿಶ್ಯ
ಜಘಾನ ಹಸ್ತ್ಯಶ್ವರಥಾನ್ ನರಾಂಶ್ಚ ॥೨೭೫॥

ಬಳಿಕ ಸೂರ್ಯ ಉದಿಸಿದ. ಆಗ ಯುದ್ಧದಲ್ಲಿ ಪಾಂಚಾಲರ ರಥ ಸಮೂಹವನ್ನು ಹೊಕ್ಕು ದ್ರೋಣ ಅತಿಘೋರವಾದ ಹೋರಾಟ ನಡೆಸಿದ. ಆನೆ ಕುದುರೆ ರಥ ಕಾಲಾಳುಗಳನ್ನು ಸಂಹರಿಸಿದ.

ವಿದ್ರಾವಿತಾಸ್ತೇನ ಮಹಾರಥಾಶ್ಚ
ನೈವಾವಿಂದನ್ ಶರ್ಮ ಬಾಣಾಂಧಕಾರೇ ।
ಯುವೇವ ವೃದ್ಧೋಽಪಿ ಚಚಾರ ಯುದ್ಧೇ
ಸ ಉಗ್ರಧನ್ವಾ ಪರಮಾಸ್ತ್ರವೇತ್ತಾ ॥೨೭೬॥

ದ್ರೋಣ ಮಹಾರಥರನ್ನು ಓಡಿಸಿದ. ಬಾಣಗಳ ಕತ್ತಲಲ್ಲಿ ಯಾರಿಗೂ ನೆಮ್ಮದಿಯಿಲ್ಲದಂತೆ ಮಾಡಿದ. ಮಹಾ ಅಸ್ತ್ರಜ್ಞಾನಿಯಾದ ಆತ ವೃದ್ಧನಾದರೂ ಯುವಕನಂತೆ ಭಯಂಕರವಾದ ಧನುಸ್ಸನ್ನು ಹಿಡಿದು ರಣರಂಗದಲ್ಲಿ ಸಂಚರಿಸಿದ.

ಆ ಕರ್ಣ ಪಲಿತಃ ಶ್ಯಾಮೋ ವಯಸಾಶೀತಿ ಪಂಚಕಃ।
ತ್ವತ್ ಕೃತೇ ವ್ಯಚರತ್ ಸಂಖ್ಯೇ ಸ ತು ಷೋಡಶ ವರ್ಷವತ್ ॥
(ದ್ರೋಣ ೧೨೫.೭೩)

ಅಶೀತಿ ಪಂಚಕಃ ಅಶೀತೀನಾಂ ಪಂಚಕಂ ಯಸ್ಯ ಸ ತಥೋಕ್ತಃ
– ಲಕ್ಷ್ಮಾಲಂಕಾರ.

'ನಾನ್ನೂರು ವರ್ಷಗಳ ವೃದ್ಧ ದ್ರೋಣ ರಣರಂಗದಲ್ಲಿ ಹದಿನಾರರ ತರುಣನಂತೆ ಓಡಾಡಿದ.'

ರಥಾರ್ಬುದಂ ತೇನ ಹತಂ ಚ ತತ್ರ
ತತಃ ಸಹಸ್ರಂ ಗುಣಿತಂ ನರಾಣಾಮ್ ।
ತತೋ ದಶಾಂಶೋ ನಿಹತೋ ಹಯಾನಾಂ
ಗಜಾರ್ಬುದಂ ಚೈವ ರಣೋತ್ಕಟೇನ ॥ ೨೭೭ ॥

ಯುದ್ಧದಲ್ಲಿ ಅಪ್ರತಿಮನಾದ ದ್ರೋಣ ಆ ಯುದ್ಧದಲ್ಲಿ ಇಪ್ಪತ್ತುಸಾವಿರ ರಥ ಸೈನಿಕರನ್ನು ನಾಶಪಡಿಸಿದ. ಅದಕ್ಕೆ ಸಹಸ್ರಪಟ್ಟು ಕಾಲಾಳುಗಳನ್ನು ಕೊಂದ. ಅವರ ಹತ್ತನೆ ಒಂದಂಶದಷ್ಟು ಅಶ್ವ ಸೈನಿಕರನ್ನು ವಧಿಸಿದ. ಇಪ್ಪತ್ತು ಸಾವಿರ ಗಜ ಸೈನಿಕರನ್ನು ಕೊಂದ.

ಹತ್ವಾ ವಿಂಶತಿ ಸಾಹಸ್ರಾಸ್ ಪಾಂಚಾಲಾನಾಂ ರಥವ್ರಜಾನ್
ಅತಿಷ್ಠದಾಹವೇ ದ್ರೋಣೋ ವಿಧೂಮೋಽಗ್ನಿರಿವ ಜ್ವಲನ್
(ದ್ರೋಣ ೧೯೧.೨೮)

ಎಂದು ಮಹಾಭಾರತದಲ್ಲಿ ದ್ರೋಣ ಇಪ್ಪತ್ತುಸಾವಿರ ರಥಿಕರನ್ನು ಕೊಂದನೆಂದಿದೆ. ನಿರ್ಣಯದಲ್ಲಿ 'ಅರ್ಬುದ' ಶಬ್ದಕ್ಕೆ ಇದೇ ಅಭಿಪ್ರಾಯ. ಅದು ಬೇರೆ ಕಡೆ ಹತ್ತು ಕೋಟಿ ಎಂಬ ಮಹಾಸಂಖ್ಯೆಯನ್ನು ಹೇಳಬಲ್ಲುದು. ಆದರೆ ಇಲ್ಲಿ ಬಹಳ. ಅಂದರೆ ಇಪ್ಪತ್ತುಸಾವಿರ ವಿವಕ್ಷಿತ ಎಂದು ವಾದಿರಾಜೀಯ ಹೇಳಿದೆ.

ತಥಾ ವಿರಾಟದ್ರುಪದೌ ಶರಾಭ್ಯಾಂ
ನಿನಾಯ ಲೋಕಂ ಪರಮಾಜಿಮಧ್ಯೇ ।
ತತೋ ವಿಜಿತ್ಯೈವ ಗುರೋಃ ಸುತಾದೀನ್
ಧೃಷ್ಟದ್ಯುಮ್ನಂ ಭೀಮಸೇನೋ ಜುಗೋಪ ॥ ೨೭೮ ॥

ದ್ರೋಣ ರಣರಂಗದಲ್ಲಿ ಎರಡು ಬಾಣಗಳಿಂದ ವಿರಾಟ ದ್ರುಪದರನ್ನು ಪರಲೋಕಕ್ಕೆ ಕಳಿಸಿದ. ಆಗ ಭೀಮ ಅಶ್ವತ್ಥಾಮ ಮುಂತಾದವರನ್ನು ಗೆದ್ದು ಧೃಷ್ಟದ್ಯುಮ್ನನನ್ನು ರಕ್ಷಿಸಿದ.

ದ್ರೋಣ ದ್ರುಪದನ ಮೂವರು ಮೊಮ್ಮಕ್ಕಳನ್ನು ಮೂರು ಬಾಣಗಳಿಂದ ಕೊಂದು ಎರಡು ಬಾಣಗಳಿಂದ ವಿರಾಟದ್ರುಪದರನ್ನು ಕೊಂದ.
(ದ್ರೋಣ ೧೮೭-೩೩.೪೨)

ಧೃಷ್ಟದ್ಯುಮ್ನೋ ಭೀಮಸೇನಾಭಿಗುಪ್ತೋ
ದ್ರೋಣಂ ಹಂತುಂ ಯತ್ನಮುಚ್ಚೈಶ್ಚಕಾರ ।
ನಿವಾರಯಾಮಾಸ ಗುರುಃ ಶರೌಘೈ-
ರ್ಧೃಷ್ಟದ್ಯುಮ್ನಂ ಸೋಽಪಿ ತಂ ಸಾಯಕೇನ ॥೨೭೯॥
ವಿವ್ಯಾಧ ತೇನಾಭಿಹತಃ ಸ ಮೂರ್ಚ್ಛಾ-
ಮವಾಪ ವಿಪ್ರೋ ನಿಷಸಾದ ಚಾಽಶು ॥೨೮೦॥

ಭೀಮನ ರಕ್ಷಣೆಯಲ್ಲಿದ್ದ ಧೃಷ್ಟದ್ಯುಮ್ನ ದ್ರೋಣನನ್ನು ಕೊಲ್ಲಲು ಬಹಳ ಪ್ರಯತ್ನಮಾಡಿದ. ದ್ರೋಣ ಬಾಣಸಮೂಹಗಳಿಂದ ಅವನನ್ನು ತಡೆದ. ಅವನೂ ದ್ರೋಣನನ್ನು ಬಾಣದಿಂದ ಹೊಡೆದ. ದ್ರೋಣ ಕೂಡಲೆ ಆ ಏಟಿಗೆ ಮೂರ್ಛೆ ಹೊಂದಿದ ಮತ್ತು ಕುಳಿತುಬಿಟ್ಟ.

ಧೃಷ್ಟದ್ಯುಮ್ನಃ ಸತ್ವರಂ ಖಡ್ಗಚರ್ಮಣೇ
ಆದಾಯ ತಸ್ಯಾಽರುರುಹೇ ರಥೋತ್ತಮಮ್ ।
ಸಂಜ್ಞಾಮವಾಪ್ಯಾಥ ಗುರುಃ ಶರೌಘೈಃ
ಪ್ರಾದೇಶಮಾತ್ರೈರ್ವ್ಯಥಯಾಮಾಸ ತಂ ಚ ॥೨೮೧॥

ಧೃಷ್ಟದ್ಯುಮ್ನ ಬೇಗನೆ ಕತ್ತಿಗುರಾಣಿ ಹಿಡಿದು ದ್ರೋಣನ ಉತ್ತಮವಾದ ರಥವೇರಲು ತೊಡಗಿದ. ಒಡನೆ ದ್ರೋಣ ಎಚ್ಚೆತ್ತು ಗೇಣುದ್ದದ ಬಾಣಸಮೂಹಗಳಿಂದ ಅವನನ್ನು ಪೀಡಿಸಿದ.

ಈ ಬಾಣಗಳಿಗೆ 'ವೈತಸ್ತಿ' 'ಗೇಣುದ್ದದವುಗಳು' ಎಂದೇ ಹೆಸರು. ದ್ರೋಣನೆ ಈ ರೀತಿಯ ಬಾಣವನ್ನು ಸಿದ್ಧಪಡಿಸಿದವನು. ದ್ರೋಣ ಕೃಪ ಕರ್ಣ ಅಶ್ವತ್ಥಾಮ ಅರ್ಜುನ ಪ್ರದ್ಯುಮ್ನ ಸಾತ್ಯಕಿ ಅಭಿಮನ್ಯು ಈ ಎಂಟು ಜನರಲ್ಲಿ ಮಾತ್ರ ವೈತಸ್ತಿ ಬಾಣಗಳಿದ್ದವು. ಸಮೀಪದಲ್ಲಿ ನಿಂತವರಿಗೆ ಹೊಡೆಯಲು ಈ ಬಗೆಯ ಬಾಣಗಳೆ ಬೇಕು. (ದ್ರೋಣ ೧೯೨.೪೨)

ಸ ತೈರತಿವ್ಯಥಿತಸ್ತದ್ರಥಾಚ್ಚ
ಪರಾವೃತ್ತಃ ಸ್ವಂ ರಥಮಾರುರೋಹ ।
ಸುಸಂರಬ್ಧೌ ತೌ ಪುನರೇವ ಯುದ್ಧಂ
ಸಂಚಕ್ರತುರ್ವೃಷ್ಟಶರಾಂಬುಧಾರೌ ॥೨೮೨॥

ಧೃಷ್ಟದ್ಯುಮ್ನ ಆ ಬಾಣಗಳಿಂದ ಬಹಳ ವೇದನೆ ಹೊಂದಿ ದ್ರೋಣನ ರಥದಿಂದ ಹಿಂದೆ ಬಂದು ತನ್ನ ರಥವನ್ನೇರಿದ. ಇಬ್ಬರೂ ಬಹಳ ಯತ್ನಿಸುತ್ತ ಬಾಣಗಳ ಜಲಧಾರೆ ಸುರಿಸುತ್ತ ಪುನಃ ಯುದ್ಧಮಾಡಿದರು.

ಬಳಿಕ ಸಾರಥಿಯನ್ನು ಕಳೆದುಕೊಂಡು ಧೃಷ್ಟದ್ಯುಮ್ನ ಹಿಂದೆ ಸರಿದ.

ನಿವಾರ್ಯ ಶತ್ರುಂ ಸ ಶರೈರ್ಬ್ರಹ್ಮಾಸ್ತ್ರಮಸೃಜದ್ ದ್ವಿಜಃ ।
ತೇನ ಸಂದಾಹಯಾಮಾಸ ಪಾಂಚಾಲಾನ್ ಸುಬಹೂನ್ ರಣೇ ।
ಪುರುಜಿತ್ ಕುಂತಿಭೋಜಶ್ಚ ತೇನಾನ್ಯೇ ಚ ಹತಾಸ್ತದಾ ॥ ೨೮೩ ॥

ದ್ರೋಣ ಬಾಣಗಳಿಂದ ಧೃಷ್ಟದ್ಯುಮ್ನನನ್ನು ತಡೆದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಅದರಿಂದ ಬಹುಮಂದಿ ಪಾಂಚಾಲರನ್ನು ಸುಡಿಸಿದ. ಪುರುಜಿತ್ ಕುಂತಿಭೋಜ ಮತ್ತು ಇನ್ನಿತರರು ಆಗ ಯುದ್ಧದಲ್ಲಿ ಅವನಿಂದ ಹತರಾದರು.

ಭೀಮೋಽರ್ಜುನಃ ಸಾತ್ಯಕಿಶ್ಚ ಪರ್ಯಾಯೇಣ ಗುರೋಃ ಸುತಮ್ ।
ದೂರತೋ ವಾರಯಾಮಾಸುರ್ಮಹತ್ಯಾ ಸೇನಯಾ ಸಹ ॥ ೨೮೪॥

ಭೀಮ ಅರ್ಜುನ ಸಾತ್ಯಕಿಯರು ಒಬ್ಬರಾದ ಬಳಿಕ ಒಬ್ಬರಂತೆ ಅಶ್ವತ್ಥಾಮನನ್ನು ಮಹತ್ತಾದ ಸೈನ್ಯದೊಂದಿಗೆ ದೂರದಲ್ಲಿಯೆ ತಡೆದು ನಿಲ್ಲಿಸಿದರು.

ಕರ್ಣದುರ್ಯೋಧನಾದೀಂಶ್ಚ ಶಲ್ಯಂ ಭೋಜಂ ಕೃಪಂ ತಥಾ ।
ಭೀಮಾರ್ಜುನೌ ಶರೌಘೇಣ ವಾರಯಾಮಾಸತೂ ರಣೇ ॥ ೨೮೫ ॥

ಕರ್ಣದುರ್ಯೋಧನ ಮುಂತಾದವರನ್ನೂ ಶಲ್ಯಕೃತವರ್ಮಕೃಪರನ್ನೂ ಭೀಮಾರ್ಜುನರು ಬಾಣ ಸಮೂಹದಿಂದ ಯುದ್ಧದಲ್ಲಿ ತಡೆದರು.

ತತ್ರ ಭೀಮೋ ಗಜಾನೀಕಂ ಜಯತ್ಸೇನಂ ಚ ಮಾಗಧಮ್ ।
ಜಘಾನ ಸುಬಹೂಂಶ್ಚೈವ ಮಾಗಧಾನಾಂ ರಥವ್ರಜಾನ್ ॥ ೨೮೬ ॥

ಆಗ ಭೀಮ ಗಜಸೇನೆಯನ್ನೂ ಜಯತ್ಸೇನನನ್ನೂ ಕೊಂದ. ಮಗಧ ದೇಶದ ರಾಜನ್ನೂ ಮಗಧ ದೇಶದವರ ಬಹಳ ರಥ ಸಮೂಹಗಳನ್ನೂ ನಾಶಪಡಿಸಿದ.

ಅಥ ಮಾಲವರಾಜಸ್ಯ ತ್ವಶ್ವತ್ಥಾಮಾಭಿಧಂ ಗಜಮ್ ।
ಭೀಮಸೇನಹತಂ ದೃಷ್ಟ್ವಾ ವಾಸುದೇವಪ್ರಚೋದಿತಃ ।
ಅಶ್ವತ್ಥಾಮಾ ಹತ ಇತಿ ಪ್ರಾಹ ರಾಜಾ ಯುಧಿಷ್ಠಿರಃ ॥ ೨೮೭ ॥

ಮಾಲವರಾಜನ ಅಶ್ವತ್ಥಾಮ ಎಂಬ ಆನೆ ಭೀಮನಿಂದ ಹತವಾದುದನ್ನು ಕಂಡು ಕೃಷ್ಣನ ಪ್ರೇರಣೆಯಂತೆ ರಾಜಾ ಯುಧಿಷ್ಠಿರ ಅಶ್ವತ್ಥಾಮ ಹತನಾದನೆಂದ.

ಶ್ರೀಕೃಷ್ಣ ಅರ್ಜುನನಿಗಿಹೇಳಿದ, 'ದ್ರೋಣನೊಡನೆ ನೀನು ಸರಿಯಾಗಿ ಯುದ್ಧ ಮಾಡುವುದಿಲ್ಲ. (ದ್ರೋಣ ೧೯೧.೮) ದ್ರೋಣನಿಂದ ಶಸ್ತ್ರಸನ್ಯಾಸ ಮಾಡಿಸಲು ಅಶ್ವತ್ಥಾಮ ಹತನಾದನೆಂದು ಯಾರಾದರೂ ಹೇಳಲೇಬೇಕು.' ಅರ್ಜುನ ಒಪ್ಪಲಿಲ್ಲ. ಭೀಮ ಮಾಳವರಾಜ ಇಂದ್ರವರ್ಮನ ಅಶ್ವತ್ಥಾಮ ಎಂಬ ಆನೆಯನ್ನು ಗದೆಯಿಂದ ಕೊಂದು ದ್ರೋಣನ ಬಳಿಗೆ ಬಂದು

ಗಟ್ಟಿಯಾಗಿ ಅಶ್ವತ್ಥಾಮ ಹತನಾದನೆಂದ. ಒಮ್ಮೆ ದ್ರೋಣನಿಗೆ ಆಘಾತವಾಯಿತು. ಮರುಕ್ಷಣ ಇದು ಸುಳ್ಳಿರಬೇಕೆಂದುಕೊಂಡು ಯುದ್ಧ ಮುಂದುವರಿಸಿದ. ಆಗ ಸಪ್ತರ್ಷಿಗಳು ವಾಲಖಿಲ್ಯರು ಭೃಗು ಅಂಗಿರಸರು ಮುಂತಾದ ಋಷಿಗಳು ಬಂದು ಸಾಕು ಈ ಹತ್ಯಾಕಾಂಡ, ಬ್ರಹ್ಮಲೋಕಕ್ಕೆ ಬಾ ಎಂದರು. ಆಗ ಭೀಮನಾಡಿದ ಮಾತನ್ನು ನೆನೆದು, ಎದುರಿಗೆ ತನ್ನ ಮೃತ್ಯುವಾದ ಧೃಷ್ಟದ್ಯುಮ್ನನಿರುವುದನ್ನೂ ನೋಡಿ ಯುದ್ಧದಲ್ಲಿ ಸ್ಥೈರ್ಯ ಕಳೆದುಕೊಂಡ, ದ್ರೋಣ.

ಅಶ್ವತ್ಥಾಮವಧಂ ಶ್ರುತ್ವಾ ನಾಹಂ ಯೋತ್ಸ್ಯ ಇತಿ ಸ್ವಯಮ್ ।
ಪುರೋಕ್ತಂ ಧರ್ಮಜಾಯೈವ ತೇನ ದ್ರೋಣೋ ಯುಧಿಷ್ಠಿರಮ್ ೨೮೮
ಬ್ರೂಹಿ ಸತ್ಯಮಿತಿ ಪ್ರಾಹ ಸತ್ಯಮಿತ್ಯೇವ ಸೋಽಬ್ರವೀತ್ ।
ಉಪಾಂಶು ಕುಂಜರಶ್ಚೇತಿ ದ್ರೋಣೋಽತೋ ವ್ಯಥಿತೋಽಭವತ್ ೨೮೯॥

ಅಶ್ವತ್ಥಾಮನ ವಧೆಯನ್ನು ಕೇಳಿದ ಬಳಿಕ ನಾನು ಯುದ್ಧ ಮಾಡುವುದಿಲ್ಲ ಎಂದು ದ್ರೋಣ ತಾನೆ ಯುಧಿಷ್ಠಿರನಿಗೆ ಹಿಂದೆ ಹೇಳಿದ್ದ. ಅದರಿಂದ ದ್ರೋಣ ಯುಧಿಷ್ಠಿರನನ್ನು 'ಸತ್ಯವೆ? ಹೇಳು' ಎಂದ. ಯುಧಿಷ್ಠಿರ ಸತ್ಯ ಎಂದೇ ಹೇಳಿದ. ಜೊತೆಗೆ ಅಸ್ಪಷ್ಟವಾಗಿ ಆನೆ ಎಂದೂ ಹೇಳಿದ. ಅದರಿಂದ ದ್ರೋಣ ಬಹಳ ವ್ಯಥೆಗೊಂಡ.

ದ್ರೋಣ ಧರ್ಮರಾಜನನ್ನು ಕೇಳಿದ, 'ಅಶ್ವತ್ಥಾಮ ಹತನಾದುದು ಸತ್ಯವೆ ಅಥವಾ ಸುಳ್ಳಿ?' ಎಂದು. ಅವನು ಧರ್ಮರಾಜನೆಂದೂ ಸುಳ್ಳು ಹೇಳುವವನಲ್ಲವೆಂದು ದೃಢವಾಗಿ ನಂಬಿದ್ದ. ಶ್ರೀಕೃಷ್ಣ ಧರ್ಮರಾಜನಿಗೆ ಹೇಳಿದ, 'ಇನ್ನೊಂದು ಅರ್ಧದಿನ ದ್ರೋಣ ಯುದ್ಧ ಮಾಡಿದರೆ ನಿನ್ನ ಸೈನ್ಯವೆಲ್ಲ ನಾಶವಾದೀತು. ಈಗ ಸತ್ಯಕ್ಕಿಂತ ಸುಳ್ಳು ಹೆಚ್ಚು ಉಚಿತವಾಗುವುದು. ಸುಳ್ಳನ್ನೆ ಹೇಳು' ಹೀಗೆ ಇಬ್ಬರು ಮಾತನಾಡಿಕೊಳ್ಳುತ್ತಿದ್ದಾಗ ಭೀಮ ಬಂದು ಹೇಳಿದ, 'ನಾನು ಅಶ್ವತ್ಥಾಮ ಎಂಬ ಆನೆಯನ್ನು ಕೊಂದೆ. ದ್ರೋಣನ ಮುಂದೆ 'ಅಶ್ವತ್ಥಾಮ ಹತನಾದ. ಯುದ್ಧ ನಿಲ್ಲಿಸು' ಎಂದು ಹೇಳಿದೆ. ನಂಬಲಿಲ್ಲ. ನೀನೀಗ ಕೃಷ್ಣನ ಮಾತಿಗೆ ಒಪ್ಪು. ನೀನು ಆ ಮಾತನ್ನಾಡಿದರೆ ದ್ರೋಣ ನಂಬುತ್ತಾನೆ.' ಹೀಗೆ ಕೃಷ್ಣ ಭೀಮರಿಬ್ಬರ ಒತ್ತಾಯಕ್ಕೆ ಮಣಿದು ಯುಧಿಷ್ಠಿರ 'ಅಶ್ವತ್ಥಾಮ ಹತನಾದುದು ಸತ್ಯ' ಎಂದ. ಸುಳ್ಳು ಮಾತಾಗುವುದೆಂಬ ಭಯದಿಂದ ಅಸ್ಪಷ್ಟವಾಗಿ 'ಸತ್ತಿದ್ದು ಆನೆ' ಎಂದ. ದ್ರೋಣನಿಗೆ ಅದು ಕೇಳಿಸಲಿಲ್ಲ. ಅದರಿಂದ ಅವನ ಮನಸ್ಸಿಗೆ ತುಂಬ ಕಳವಳವಾಯಿತು. ಶಕ್ತಿ ಉಡುಗಿತು. ಅಸ್ತ್ರದೇವತೆಗಳೂ ಅಪ್ರಸನ್ನರಾಗಿ ಕರೆದಾಗ ಬರಲಿಲ್ಲ.

ತಸ್ಯ ಭೀಮೋ ರಥೇಷಾಂ ಚ ಗೃಹೀತ್ವಾ ನ ತವೇದೃಶಮ್ ।
ಯೋಗ್ಯಂ ಗುಣವತೋ ನಿತ್ಯಂ ಪರಧರ್ಮೋಪಜೀವನಮ್ ॥೨೯೦॥
ಇತ್ಯಾಹ ಖಸ್ಥಾ ಮುನಯಶ್ಚಾಲಮೇಹೀತಿ ತಂ ತದಾ ।
ಊಚುಸ್ತದಖಿಲಂ ಜ್ಞಾತ್ವಾ ದ್ರೋಣಃ ಶಸ್ತ್ರಮವಾಸೃಜತ್ ॥೨೯೧॥

ಭೀಮ ದ್ರೋಣನ ರಥದ ಕಂಬವನ್ನು ಹಿಡಿದು ನಿಮ್ಮಂಥ ಗುಣವಂತರಿಗೆ ಈ ರೀತಿ ಪರಧರ್ಮದಿಂದ ಜೀವಿಸುವುದು ಒಪ್ಪುವುದಿಲ್ಲ ಎಂದ. ಆಕಾಶದಲ್ಲಿ ವಸಿಷ್ಠಾದಿ ಮುನಿಗಳು 'ಕ್ಷತ್ರಿಯರ ನಾಶಮಾಡಿದ್ದು ಇನ್ನು ಸಾಕು. ಬಾ', ಎಂದರು. ಅದೆಲ್ಲವನ್ನೂ ಆಲೋಚಿಸಿ ದ್ರೋಣ ಶಸ್ತ್ರವನ್ನು ಪರಿತ್ಯಾಗಮಾಡಿದ.

ಬ್ರಾಹ್ಮಣ, ತನ್ನ ಧರ್ಮವನ್ನು ಬಿಟ್ಟು ಹೀಗೆ ಕ್ಷತ್ರಿಯಧರ್ಮ ಹಿಡಿದು ಹೆಂಡತಿ ಮಕ್ಕಳನ್ನು ಸಾಕಲು ತೊಡಗಿರುವಿ, ಕ್ಷತ್ರಿಯರನ್ನು ನಾಶಮಾಡಿ ಹಣ ಸಂಪಾದಿಸುವಿ, ನಿನಗೆ ನಾಚಿಕೆಯಾಗಬೇಕು. ಯಾರಿಗಾಗಿ ನೀನು ಕ್ಷಾತ್ರಧರ್ಮ ಹಿಡಿದೆಯೋ ಆ ನಿನ್ನ ಮಗ ಸತ್ತಿದ್ದಾನೆ. ಧರ್ಮರಾಜ ಹೇಳಿದ್ದರಲ್ಲಿ ನಿನಗೆ ಅಪನಂಬಿಕೆ ಬೇಡ. (ದ್ರೋಣ ೧೯೩.೪೩) - ಹೀಗೆ ಭೀಮ ಹೇಳಿದಾಗ 'ಕರ್ಣ ಕೃಪ ದುರ್ಯೋಧನರೆ! ಇನ್ನು ನೀವೆ ಯುದ್ಧದಲ್ಲಿ ಪ್ರಯತ್ನ ಮಾಡಿರಿ. ಪಾಂಡವರೆ, ನಿಮಗೆ ಶುಭವಾಗಲಿ. ನಾನು ಶಸ್ತ್ರ ಕೆಳಗಿಡುತ್ತಿದ್ದೇನೆ' ಎಂದು ಹೇಳಿ ದ್ರೋಣ ರಥದಲ್ಲಿ ಕುಳಿತುಬಿಟ್ಟ

ಸ ನ್ಯಸ್ಯ ಕರ್ಮಾಣಿ ತದಾಽಖಿಲಾನಿ
ಯೋಗಾರೂಢಃ ಪರಮಂ ವಾಸುದೇವಮ್ ।
ಸರ್ವೇಶ್ವರಂ ನಿತ್ಯನಿರಸ್ತದೋಷಂ
ಧ್ಯಾಯನ್ ಮುಕ್ತ್ವಾ ದೇಹಮಗಾತ್ ಸ್ವಧಾಮ ॥೨೯೨॥

ದ್ರೋಣ ಆಗ ಸಕಲ ಕರ್ಮಗಳನ್ನೂ ಹರಿಗೆ ಅರ್ಪಿಸಿ ಯೋಗಾರೂಢನಾಗಿ ಸರ್ವೇಶ್ವರನಾದ ನಿತ್ಯನಿರ್ದೋಷನಾದ ಸರ್ವೋತ್ತಮ ವಾಸುದೇವನನ್ನು ಧ್ಯಾನಿಸುತ್ತ ಶರೀರವನ್ನು ತೊರೆದು ತನ್ನ ಲೋಕಕ್ಕೆ ಹೊರಟುಹೋದ.

ದ್ರೋಣ ಶಸ್ತ್ರವನ್ನು ಕೆಳಗಿಟ್ಟು ಸರ್ವಭೂತಗಳಿಗೆ ಅಭಯನೀಡಿ ಪ್ರಣವಮಂತ್ರದಿಂದ ವಿಷ್ಣುಧ್ಯಾನ ಮಾಡುತ್ತ ಮುಖವನ್ನು ಸ್ವಲ್ಪಮೇಲೆ ಎತ್ತಿ ಎದೆಯನ್ನು ಮುಂದೆ ಮಾಡಿ ಯೋಗಸಮಾಧಿಯಲ್ಲಿ ಕಣ್ಣುಮುಚ್ಚಿ ಕುಳಿತ. ತಲೆಯ ಬ್ರಹ್ಮರಂಧ್ರದಿಂದ ಉತ್ಕ್ರಮಣ ಹೊಂದಿ ಸೂರ್ಯನಂತೆ ಬೆಳಗುವ ಜ್ಯೋತಿರೂಪದಿಂದ ಮುನಿಗಳೊಂದಿಗೆ ಮೇಲೆ ತನ್ನ ಲೋಕಕ್ಕೆ ಹೋಗಿ ತನ್ನ ಮೂಲರೂಪವಾದ ಬೃಹಸ್ಪತಿಯಲ್ಲಿ ಸೇರಿ ಐಕ್ಯಹೊಂದಿದ.

ತಂ ಕೇಶವಃ ಪಾಂಡವಾ ಗೌತಮಶ್ಚ
ಯಾಂತಂ ಸ್ವಲೋಕಂ ದದೃಶುರ್ವಿಹಾಯಸಾ ।
ಧೃಷ್ಟದ್ಯುಮ್ನಃ ಪಾಂಡವೈರ್ವಾರ್ಯಮಾಣೋಽ
ಪ್ಯಗಾತ್ ಖಡ್ಗಂ ಚರ್ಮ ಚಾಽದಾಯ ತತ್ರ ॥೨೯೩॥

ಶ್ರೀಕೃಷ್ಣ ಪಾಂಡವರು ಮತ್ತು ಕೃಪ ಇವರು ಆಕಾಶಮಾರ್ಗದಿಂದ ದ್ರೋಣ ತನ್ನ ಲೋಕಕ್ಕೆ ಹೋಗುವುದನ್ನು ಕಂಡರು. ಪಾಂಡವರು ತಡೆಯುತ್ತಿದ್ದರೂ ಧೃಷ್ಟದ್ಯುಮ್ನ ಕತ್ತಿಗುರಾಣಿಗಳನ್ನು ಹಿಡಿದು ದ್ರೋಣನಿದ್ದಲ್ಲಿಗೆ ಬಂದ.

ಛಿತ್ವಾಽಸಿನಾ ತಸ್ಯ ಶಿರಃ ಪುನಶ್ಚ
ರಥಂ ಸ್ವಕೀಯಂ ತ್ವರಯಾ ಸಮಾಸ್ಥಿತಃ ।
ದೃಷ್ಟ್ವಾಽಥ ಕೃಪಸ್ತಂ ಸುಭೃಶಂ ಭಯಾರ್ದಿತಃ
ಸಂಪ್ರಾದ್ರವದ್ ವಾಜಿನಮೇಕಮಾಸ್ಥಿತಃ ॥೨೯೪॥

ಧೃಷ್ಟದ್ಯುಮ್ನ ದ್ರೋಣನ ಶಿರವನ್ನು ತರಿದು ಪುನಃ ಬೇಗನೆ ತನ್ನ ರಥವನ್ನೇರಿದ. ಕೃಪ ನೋಡಿ ಬಹಳ ಭಯಾರ್ತನಾಗಿ ಒಂದು ಕುದುರೆಯನ್ನೇರಿ ಪಲಾಯನ ಮಾಡಿದ.

ಧೃಷ್ಟದ್ಯುಮ್ನನನ್ನು ಅರ್ಜುನ ತಡೆಯುತ್ತಿದ್ದರೂ ಅವನು ಕತ್ತಿಹಿಡಿದು ದ್ರೋಣನ ರಥಕ್ಕೆ ಹಾರಿ ಅವನನ್ನು ಕೂದಲಲ್ಲಿ ಹಿಡಿದು ಶಿರಶ್ಛೇದ ಮಾಡಿದ. ಆ ತಲೆಯನ್ನು ಕೌರವರೆದುರಿಗೆ ಚೆಲ್ಲಿ ಖಡ್ಗವನ್ನು ತಿರುಗಿಸುತ್ತ ಸಿಂಹನಾದ ಮಾಡಿ ತನ್ನ ರಥವನ್ನೇರಿದ.

ಸಂಛಿನ್ನೇ ದ್ರೋಣಶಿರಸಿ ಗರ್ಹಯಾಮಾಸ ವಾಸವಿಃ।
ಯುಧಿಷ್ಠಿರಂ ಚ ಪಾಂಚಾಲ್ಯಂ ಸಾತ್ಯಕಿಶ್ಚಾಪಿ ಕೋಪಿತಃ ॥೨೯೫॥

ದ್ರೋಣನ ಶಿರಶ್ಛೇದವಾದಾಗ ಅರ್ಜುನ ಧರ್ಮರಾಜನನ್ನೂ ಧೃಷ್ಟದ್ಯುಮ್ನನನ್ನೂ ಆಕ್ಷೇಪಿಸಿದ. ಸಾತ್ಯಕಿಯೂ ಕುಪಿತನಾದ.

ಅರ್ಜುನ ಧರ್ಮರಾಜರಿಬ್ಬರೂ ಧೃಷ್ಟದ್ಯುಮ್ನನನ್ನು ಆಕ್ಷೇಪಿಸಿದರು ಎಂಬ ಅರ್ಥಬರುವಂತೆ 'ಯುಧಿಷ್ಠಿರಶ್ಚ' ಎಂದು ಪ್ರಚಲಿತ ಪಾಠವಿದೆ. ಆದರೆ ಮಹಾಭಾರತದಲ್ಲಿ ಅರ್ಜುನ ಮಾತ್ರ ಆಕ್ಷೇಪಿಸುತ್ತಾನೆ. ಧರ್ಮರಾಜ ಸುಮ್ಮನಿರುತ್ತಾನೆ, ಭೀಮ ಧೃಷ್ಟದ್ಯುಮ್ನರು ಪರಸ್ಪರ ಆಲಿಂಗಿಸಿಕೊಂಡು ರಣರಂಗದಲ್ಲಿ ನರ್ತನಮಾಡುತ್ತಾರೆ. ಮುಂದೆ ಅಶ್ವತ್ಥಾಮ ನಾರಾಯಣಾಸ್ತ್ರ ಪ್ರಯೋಗಿಸಿದಾಗ ಅರ್ಜುನ ಧರ್ಮರಾಜನನ್ನೆ, ಸುಳ್ಳು ಹೇಳಿ ದ್ರೋಣನನ್ನು ಕೊಲ್ಲಿಸಿದ್ದಕ್ಕೆ, ಆಕ್ಷೇಪಿಸುತ್ತಾನೆ. ಅದರಿಂದ 'ಯುಧಿಷ್ಠಿರಂಚ' ಎಂಬ ಹೃಷೀಕೇಶತೀರ್ಥೀಯ ಪಾಠ ಉತ್ತಮ.

ಧೃಷ್ಟದ್ಯುಮ್ನಸ್ತು ತಾವಾಹ ಕಥಂ ಭೂರಿಶ್ರವಾ ಹತಃ ।
ಇತಿ ತಂ ಸಾತ್ಯಕಿಃ ಕ್ರುದ್ಧೋ ಗದಾಪಾಣಿಃ ಸಮಭ್ಯಯಾತ್ ॥೨೯೬॥

ಧೃಷ್ಟದ್ಯುಮ್ನ ಅರ್ಜುನ ಸಾತ್ಯಕಿಯರನ್ನು ಕೇಳಿದ. 'ಭೂರಿಶ್ರವ ನಿಮ್ಮಿಂದ ಹೆಗೆ ಹತನಾದ?' ಸಾತ್ಯಕಿ ಕ್ರುದ್ಧನಾಗಿ ಗದಾಪಾಣಿಯಾಗಿ ಧೃಷ್ಟದ್ಯುಮ್ನನ ಮೇಲೇರಿ ಬಂದ.

ಇದು ಬ್ರಹ್ಮಹತ್ಯೆ ಗುರುದ್ರೋಹವೆಂದು ಸಾತ್ಯಕಿಯ ಆಕ್ಷೇಪ.

ದುಷ್ಟಪಕ್ಷದಮನದಲ್ಲಿ ಪಾಪವಿಲ್ಲ ಎಂದು ಧೃಷ್ಟದ್ಯುಮ್ನ.

ಆಹ್ವಯಾಮಾಸ ಪಾಂಚಾಲ್ಯಸ್ತಂ ಧೃತಾಸಿರವಿಸ್ಮಯಃ ।
ತದಾ ಜಗ್ರಾಹ ಶೈನೇಯಂ ಭೀಮಃ ಕೃಷ್ಣಪ್ರಚೋದಿತಃ ।
ಶಮಯಾಮಾಸ ಪಾರ್ಥಂ ಚ ಪಾಂಚಾಲ್ಯಸ್ನೇಹಯಂತ್ರಿತಃ ॥೨೯೭॥

ಧೃಷ್ಟದ್ಯುಮ್ನ ನಿರ್ಭೀತನಾಗಿ ಖಡ್ಗ ಹಿರಿದು ಸಾತ್ಯಕಿಯನ್ನು ಯುದ್ಧಕ್ಕೆ ಕರೆದ. ಆಗ ಕೃಷ್ಣನ ಮಾತಿನಂತೆ ಭೀಮ ಸಾತ್ಯಕಿಯನ್ನು ಗಟ್ಟಿಯಾಗಿ ಹಿಡಿದ. ಧೃಷ್ಟದ್ಯುಮ್ನನ ಮೇಲಿನ ಪ್ರೀತಿಯಿಂದ ಬದ್ಧನಾಗಿ ಅರ್ಜುನನನ್ನು ಸಮಾಧಾನಪಡಿಸಿದ.

ತೇ ವಾಸುದೇವೇನ ತದಾಽನುಶಿಕ್ಷಿತಾಃ
ಸ್ನೇಹಂ ಪುನಃ ಪೂರ್ವವದಾಪುರುತ್ತಮಮ್ ।
ಯತ್ತಾಶ್ಚ ಯುದ್ಧಾಯ ಸಮುದ್ಯತಾಶ್ಚ
ತದಾಽಽಗಮದ್ ದ್ರೌಣಿರಪ್ಯಾತ್ತ ಧನ್ವಾ ॥೨೯೮॥

ಶ್ರೀಕೃಷ್ಣ ಆಗ ಅವರಿಗೆ ಚೆನ್ನಾಗಿ ತಿಳಿಯಹೇಳಿದ. ಅವರು ಹಿಂದಿನಂತೆ ಅನ್ಯೋನ್ಯವಾಗಿ ಒಳ್ಳೆಯ ಪ್ರೀತಿಯನ್ನು ಹೊಂದಿದರು. ಯುದ್ಧಕ್ಕೆ ಆಯುಧ ಹಿಡಿದು ಸನ್ನದ್ಧರಾದರು. ಅಷ್ಟರಲ್ಲಿ ಧನುರ್ಧಾರಿಯಾಗಿ ಅಶ್ವತ್ಥಾಮ ಬಂದ.

ನಾರಾಯಣಾಸ್ತ್ರ

ಆಶ್ರುತ್ಯ ತಾತಂ ನಿಹತಂ ಪ್ರತಿಜ್ಞಾಂ
ಚಕಾರ ನಿಃಶೇಷರಿಪುಪ್ರಮಾಥನೇ ।
ನಾರಾಯಣಾಸ್ತ್ರಂ ವಿಸಸರ್ಜ ಕೋಪಾತ್
ತದಾ ಭೀತಾ ಭೀಮಮೃತೇ ಸಮಸ್ತಾಃ ॥೨೯೯॥

ತನ್ನ ತಂದೆ ಹತನಾದನೆಂದು ಕೇಳಿ ತಿಳಿದು ಅಶ್ವತ್ಥಾಮ ಶತ್ರುಗಳನ್ನು ನಿಃಶೇಷವಾಗಿ ಕೊಲ್ಲುವ ಪ್ರತಿಜ್ಞೆಮಾಡಿದ. ಕೋಪದಿಂದ ನಾರಾಯಣಾಸ್ತ್ರವನ್ನು ಪ್ರಯೋಗಿಸಿದ. ಆಗ ಭೀಮ ಹೊರತು ಎಲ್ಲರೂ ಭೀತರಾದರು.

ಯುಧಿಷ್ಠಿರಃ ಪ್ರಾಹ ವಿಷಣ್ಣಚೇತನಃ
ಶೈನೇಯಪೂರ್ವಾಃ ಪ್ರತಿಯಾಂತು ಸರ್ವೇ ।
ಸಭ್ರಾತೃಕೋಽಹಂ ದ್ರೌಣಿವರಾಸ್ತ್ರಮಗ್ನೇ
ಭವೇಯಮಿತ್ಯತ್ರ ಜಗಾದ ಕೇಶವಃ ॥೩೦೦॥

ಧರ್ಮರಾಜ ವಿಷಾದಪೂರ್ಣವಾದ ಮನಸಿನವನಾಗಿ ಹೇಳಿದ, 'ಸಾತ್ಯಕಿ ಮುಂತಾದವರೆಲ್ಲರೂ ಹೊರಟು ಹೋಗಿರಿ. ನಾನು ಸೋದರರ ಸಮೇತವಾಗಿ ಅಶ್ವತ್ಥಾಮನ ಉತ್ತಮ ಅಸ್ತ್ರದಿಂದ ಕಣ್ಮರೆಯಾಗಿ ಹೋಗುವೆನು.' ಆಗ ಕೃಷ್ಣನುಡಿದ.

ನಮಧ್ವಮಸ್ತ್ರಸ್ಯ ತತೋ ವಿಮೋಕ್ಷ್ಯತೇ-
ತ್ಯಥ ಪ್ರಣೇಮುಶ್ಚ ಧನಂಜಯಾದಿಕಾಃ ।
ಸರ್ವೇ ನ ಭೀಮಸ್ತದಮುಷ್ಯ ಮೂರ್ಧ್ನಿ
ಪಪಾತ ಸೋಽಗ್ನಾವಿವ ಸಂಸ್ಥಿತೋಽಗ್ನಿಃ ॥೩೦೧॥

'ಎಲ್ಲರೂ ಅಸ್ತ್ರಕ್ಕೆ ನಮಿಸಿರಿ. ಆಗ ಅಸ್ತ್ರದಿಂದ ವಿಮುಕ್ತರಾಗುವಿರಿ' ಕೃಷ್ಣ ಹೀಗೆ ಹೇಳಿದಾಗ ಅರ್ಜುನ ಮುಂತಾದವರೆಲ್ಲರೂ ನಮಿಸಿದರು. ಭೀಮ ಮಾತ್ರ ನಮಿಸಲಿಲ್ಲ. ಅದರಿಂದ ಅಸ್ತ್ರ ಎಲ್ಲರನ್ನೂ ಬಿಟ್ಟು ಭೀಮನ ತಲೆಯ ಮೇಲೆ ಬಿದ್ದಿತು. ಆದರೆ ಬೆಂಕಿಯ ನಡುವೆ ಬೆಂಕಿಯಂತೆ ಅಸ್ತ್ರದ ನಡುವೆ ಭೀಮ ನಿಂತ.

'ಅಸ್ತ್ರದಿಂದ ಪ್ರಾಣಾಪಾಯ ತಪ್ಪಿಸಿಕೊಳ್ಳಲು ಎಲ್ಲರೂ ನಮಿಸಿರಿ' ಎಂದು ಕೃಷ್ಣನ ಆಜ್ಞೆ ಇದ್ದಿತು. ಇದು ಪ್ರಾಣಾಪಾಯ ಉಳ್ಳವರಿಗೆ ಅನ್ವಯಿಸುತ್ತದೆ. ಇಲ್ಲದ ಭೀಮನಿಗೆ ಅಲ್ಲ. ಅದರಿಂದ ಕೃಷ್ಣನಾಜ್ಞೆಯ ಉಲ್ಲಂಘನವಾಗಿಲ್ಲ. ಕೃಷ್ಣ ಭೀಮನನ್ನು ಮುಂದೆ 'ಭೀಮ, ನಾನು ಬೇಡವೆಂದರೂ ಏಕೆ ಯುದ್ಧವನ್ನು ನೀನು ನಿಲ್ಲಿಸುತ್ತಿಲ್ಲ?' ಎಂದು ಆಕ್ಷೇಪಿಸುವಂತೆ ಕಾಣುತ್ತದೆ. ಆದರೆ ಇದು ಆಕ್ಷೇಪವಲ್ಲ. ಭೀಮನ ಭಾಗವತಧರ್ಮನಿಷ್ಠೆ ಲೋಕಕ್ಕೆ ತಿಳಿಯಲಿ ಎಂದು ಪರೀಕ್ಷೆಗಾಗಿ ಹಾಕಿದ ಪ್ರಶ್ನೆ. ಆಗಲಿ ಪರೀಕ್ಷೆಯಲ್ಲಿ ಭೀಮ ಉತ್ತೀರ್ಣನಾಗಿದ್ದ. ಅದರಿಂದ ಅವನೇನೂ ಉತ್ತರಿಸಲಿಲ್ಲ.

'ಯಾರೂ ಶಸ್ತ್ರಗಳನ್ನು ಕೆಳಗಿಳಿಸತಕ್ಕದ್ದಲ್ಲ ಎಂದು ಎಲ್ಲರಿಗೂ ಗಟ್ಟಿಯಾಗಿ ಅಪ್ಪಣೆ ಮಾಡುವ ಭೀಮನನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? 'ಏನಯ್ಯಾ! ನಾನು ಹೇಳಿದರೂ ಕೇಳಬಾರದೆ?' ಎಂಬ ಶ್ರೀಕೃಷ್ಣನ ಪ್ರಶ್ನೆಗೆ ಭೀಮ ಉತ್ತರಿಸುವುದಿಲ್ಲ. ಇದೊಂದು ಮೊಂಡತನ ಭೀಮನಲ್ಲಿತ್ತು. ಒಮ್ಮೊಮ್ಮೆ ಹೀಗೆ ಅದು ಕಾಣಿಸಿಕೊಳ್ಳುತ್ತಿತ್ತು!' ಹೀಗೆ ಟೀಕಿಸುವವರಿಗೆ ನಿರ್ಣಯವೆ ಮುಂದೆ ಸಮಾಧಾನ ಹೇಳುತ್ತದೆ.

ಅದಹ್ಯಮಾನೇ ಭೀಮೇಽಪಿ ವಹ್ನೌ ವಹ್ನಿರಿವ ಸ್ಥಿತೇ ।
ಅವೇಷ್ಟಯದ್ ವಾರುಣೇನ ಪಾರ್ಥೋಽಕಾತ್ಮಪ್ರಪತ್ತಯೇ ॥೩೦೨॥

ಭೀಮ ಬೆಂಕಿಯ ನಡುವೆ ಬೆಂಕಿಯಂತೆ ಅಸ್ತ್ರದಿಂದ ಸುಡದೆ ನಿಂತಾಗ ಅರ್ಜುನ ಭಕ್ತಿಯಿಂದ ತನ್ನ ಪಾಲಿನ ಸೇವೆ ಸಲ್ಲಿಸುವುದಕ್ಕಾಗಿ ವಾರುಣಾಸ್ತ್ರದಿಂದ ಭೀಮನನ್ನು ಆವರಿಸಿದ.

ಅಗ್ನಾವಗ್ನಿರಿವ ನ್ಯಸ್ತೋ ಜ್ವಾಲಾಮಾಲೀ ಸುದುರ್ದೃಶಃ (ದ್ರೋಣ ೨೦೧.೩)

ಬೆಂಕಿಯಲ್ಲಿ ಉರಿವ ಬೆಂಕಿ ಭೀಮ. ಆದರೂ 'ಆತ್ಮಪ್ರಪತ್ತಯೇ' 'ಸ್ವವಿಹಿತ ಪೂಜಾರ್ಥಂ' - ಎಂದು ಜನಾರ್ದನೀಯ ಹೇಳುವಂತೆ ಅರ್ಜುನ ತನ್ನ ಪಾಲಿನ ಸೇವೆಯನ್ನು ಮಾಡಿದ್ದಾನೆ.

ಪ್ರಕರ್ಷೇಣ ಪತ್ತಿಃ ಪ್ರಪತ್ತಿಃ। ಭೀಮಸೇನೋಪರಿ ಮನಸ ಆಸಕ್ತಿಃ ಸ್ನೇಹ ಇತ್ಯರ್ಥಃ

- ಎಂದು ಇಲ್ಲಿ ವಾದಿರಾಜೀಯ ಹೇಳುವಂತೆ ಭೀಮನ ಮೇಲಿನ ಭಕ್ತಿಗಾಗಿ ಭಕ್ತಿಯಿಂದ ಅಸ್ತ್ರಪ್ರಯೋಗ ಮಾಡಿದ್ದಾನೆ. ಏಕೆಂದರೆ ಅದಕ್ಕೆ ಮೊದಲು ಭೀಮನ ಹುಂಕಾರದಿಂದ ಅಸ್ತ್ರ ದೂರ ಹೋಗುತ್ತಿತ್ತು, ತಿರುಗಿ ಬರುತ್ತಿತ್ತು, ತಿರುಗಿ ಹುಂಕಾರದಿಂದ ಹೋಗುತ್ತಿತ್ತೆಂದು ಭಾರತ ಹೇಳಿದೆ. (ದ್ರೋಣ ೨೦೧.೮)

'ಹರಿಕೃಪೆಯ ಪಡೆದಿದ್ದ ಭೀಮ ಹುಂಕಾರದಲಿ
ಹರಿಯ ದಿವ್ಯಾಸ್ತ್ರವನು ನೆರೆಯಟ್ಟಿದ'

-ಎನ್ನುತ್ತಾರೆ ಶ್ರೀಪಾದರಾಜರು.

ನ ದೇಹೇ ಪತಿತಾಸ್ತ್ರಸ್ಯ ಬಹಿರ್ವೇಷ್ಟನತಃ ಫಲಮ್ ।
ತಥಾಽಪಿ ಸ್ನೇಹವಶಗೋ ವೇಷ್ಟಯಾಮಾಸ ಫಲ್ಗುನಃ ॥೩೦೩॥

ದೇಹದಲ್ಲಿ ಬಿದ್ದ ಅಸ್ತ್ರಕ್ಕೆ ಹೊರಗಿಂದ ನೀರು ಆವರಿಸುವುದರಿಂದ ಫಲವಿಲ್ಲ. ಆದರೂ ಅಣ್ಣನೆಂದು ಪ್ರೀತಿಯಿಂದ ಅರ್ಜುನ ವಾರುಣಾಸ್ತ್ರವನ್ನು ಸುತ್ತುವರಿಸಿದ.

ಅಮೋಘತ್ವಂ ನಿಜಾಸ್ತ್ರಸ್ಯ ಭೀಮಸ್ಯಾವಧ್ಯತಾಮಪಿ ।
ಸಾಧಯನ್ ಸಾರ್ಜುನಃ ಕೃಷ್ಣೋ ಭೀಮಸ್ಯ ರಥಮಾರುಹತ್ ॥೩೦೪॥

ನಾರಾಯಣಾಸ್ತ್ರ ಅಮೋಘವೆಂಬುದನ್ನೂ ಭೀಮ ಅವಧ್ಯನೆಂಬುದನ್ನೂ ತೋರುತ್ತ ಶ್ರೀಕೃಷ್ಣ ಅರ್ಜುನ ಸಮೇತನಾಗಿ ಭೀಮನ ರಥವನ್ನೇರಿದ.

ವೇಷ್ಟಿತಂ ವಾರುಣಾಸ್ತ್ರೇಣ ಪ್ರವಿಷ್ಟಂ ಬಾಹ್ಯತಸ್ತದಾ ।
ಸಹಿತತ್ವಾತ್ ಕೇಶವೇನ ನರತ್ವಾದಥ ಫಲ್ಗುನಮ್ ॥೩೦೫॥
ತದಸ್ತ್ರಂ ನಾದಹತ್ ತಾಭ್ಯಾಂ ಸ್ವರಥಾದವರೋಪಿತೇ ।
ಭೀಮ ಆಚ್ಛಿನ್ನಹೇತೌ ಚ ತದಸ್ತ್ರಂ ಶಾಂತಿಮಾಗಮತ್ ॥೩೦೬॥

ಹೊರಗೆ ವಾರುಣಾಸ್ತ್ರದಿಂದ ಸುತ್ತುವರಿದಿದ್ದ ನಾರಾಯಣಾಸ್ತ್ರ ಒಳಗಿದ್ದ ಭೀಮನನ್ನು ಸುಡಲಿಲ್ಲ, ಅರ್ಜುನನ್ನೂ ಸುಡಲಿಲ್ಲ, ಏಕೆಂದರೆ ಅವನು ಶ್ರೀಕೃಷ್ಣನ ಜೊತೆಗಿದ್ದ, ನರಾವೇಶವನ್ನೂ ಹೊಂದಿದ್ದ, ಅಸ್ತ್ರಕ್ಕೆ ನಮಸ್ಕಾರವನ್ನೂ ಮಾಡಿದ್ದ. ಅದರಿಂದ ಕೃಷ್ಣಾರ್ಜುನರು ಭೀಮನನ್ನು ಅವನ ರಥದಿಂದ ಇಳಿಸಿದರು. ಅವನ ಆಯುಧವನ್ನು ಸೆಳೆದರು. ಅದರಿಂದ ಅಸ್ತ್ರ ಶಾಂತವಾಯಿತು.

ಹೊರಗೆ ವಾರುಣಾಸ್ತ್ರದಿಂದ ಸುತ್ತುವರಿದ ನಾರಾಯಣಾಸ್ತ್ರ ತಣ್ಣೀರು ಬೆರೆಸಿದ ಸುಡುಬಿಸಿನೀರಿನಂತೆ ಒಳಗೆ ಅಸ್ತ್ರಜ್ವಾಲೆಯ ನಡುವಿನಲ್ಲಿದ್ದ ಭೀಮನನ್ನು ಸುಡಲಿಲ್ಲ. ಅಂದರೆ ಕೇವಲ ನಾರಾಯಣಾಸ್ತ್ರವೂ ಭೀಮನನ್ನು ಸುಡುವುದಿಲ್ಲ. ವಾರುಣಾಸ್ತ್ರ ಸೇರಿದರೆ ಸರ್ವಥಾ ಸುಡುವುದಿಲ್ಲ. ಅತ್ಯಂತ ಸುಖಸ್ಪರ್ಶವನ್ನೇ ನೀಡುತ್ತದೆ. ಅದರಿಂದ ಭೀಮನನ್ನು ಸುಡಲಿಲ್ಲ. ಅರ್ಜುನ ಕೃಷ್ಣನ ಜೊತೆಗಿದ್ದುದು, ನರಾವೇಶ ಹೊಂದಿದ್ದುದು ಮತ್ತು ನಮಸ್ಕಾರ ಮಾಡಿದ್ದುದು ಈ ಮೂರೂ ಅವನನ್ನು ಅಸ್ತ್ರ ಸುಡದಿರಲು ಕಾರಣವಾಯಿತು ಎಂದು ವಾದಿರಾಜೀಯ ಹೇಳಿದೆ.[1]

ಆದರೆ ಇಲ್ಲಿ ಮಹಾಭಾರತ ಮತ್ತು ಅದರ ವ್ಯಾಖ್ಯಾನವಾದ ಲಕ್ಷಾಲಂಕಾರಗಳ ವಿರೋಧ ಕಾಣುತ್ತದೆ-

ನಾಲಕ್ಷಯತ ತಂ ಕಶ್ಚಿತ್ ವಾರುಣಾಸ್ತ್ರೇಣ ಸಂವೃತಂ॥

(ದ್ರೋಣ ೨೦೧.೨)

ಎಂಬ ಮಹಾಭಾರತ ಶ್ಲೋಕಕ್ಕೆ-

ಅಂತರ್ವಾರುಣಾಸ್ತ್ರೇಣ ಸಂವೃತಂ ತಂ ಭೀಮಂ

ಬಹಿಸ್ತೇಜಸಾ ಸಂವೃತತ್ವಾತ್ ಕಶ್ಚಿದಪಿ ನಾಲಕ್ಷಯತ॥

"ಭೀಮ ಒಳಗೆ ವಾರುಣಾಸ್ತ್ರದಿಂದ ಆವೃತನಾಗಿದ್ದರೂ ಹೊರಗೆ ನಾರಾಯಣಾಸ್ತ್ರದ ತೇಜಸ್ಸಿದ್ದುದರಿಂದ ಭೀಮ ವಾರುಣಾಸ್ತ್ರದಿಂದ ಆವೃತನಾದುದು ಯಾರಿಗೂ ಗೋಚರವಾಗಲಿಲ್ಲ' ಎನ್ನುತ್ತದೆ ಲಕ್ಷಾಲಂಕಾರ.

ಇದಕ್ಕೆ ಸಮಾಧಾನ- ನಾರಾಯಣಾಸ್ತ್ರ ಬೆಂಕಿಯಂತಿದ್ದು ಅದರ ಮೇಲೆ, ಹೊರಗೆ, ವಾರುಣಾಸ್ತ್ರ ಸುತ್ತುವರಿದಿದ್ದರೂ ಆ ಬೆಂಕಿಯ ಪ್ರಕಾಶ ಇನ್ನೂ ಹೊರಗೆ ಸುತ್ತುವರಿದಿತ್ತು. ಹೀಗಾಗಿ ಅಸ್ತ್ರಜ್ವಾಲೆಯ ಪ್ರಕಾಶದ ಒಳಗೆ ವಾರುಣಾಸ್ತ್ರವಿದ್ದುದರಿಂದ ಹೊರಗೆ ನೋಡುವವರಿಗೆ ಅದು ಗೋಚರವಾಗಲಿಲ್ಲ. ಪ್ರಕಾಶ ಮಾತ್ರವೆ ಗೋಚರವಾಯಿತು. ಅದರಿಂದ 'ಬಹಿಸ್ತೇಜಸಾ ಸಂವೃತತ್ವಾತ್' ಎಂದಿದೆ, 'ಬಹಿಃ ನಾರಾಯಣಾಸ್ತ್ರೇಣ ಸಂವೃತತ್ವಾತ್' ಎಂದಲ್ಲ.

---

1. ವಾರುಣಾಸ್ತ್ರೇಣ ಬಾಹ್ಯತಃ ವೇಷ್ಟಿತಂ ತದಸ್ತ್ರಂ, ಪ್ರವಿಷ್ಟಂ ಸ್ವಜ್ವಾಲಾಮಧ್ಯೇ ಪ್ರವಿಷ್ಟಮಪಿ ಭೀಮಂ ಶೀತಲೋದಕಮಿಲಿತೋಷ್ಣೋದಕವತ್ ನಾದಹತ್। ಕೇಶವೇನ ಸಹಿತತ್ವಾನ್ನರತ್ವಾಚ್ಚ, ಇದಂ ಚೋಪಲಕ್ಷಣಂ, ಕೃತ ನಮಸ್ಕಾರತ್ವಾಚ್ಚೇತ್ಯಪಿ ದ್ರಷ್ಟವ್ಯಂ, ಫಲ್ಗುನಂ ಚ ನಾದಹತ್।

-ವಾದಿರಾಜೀಯ

ಶುದ್ಧಕ್ಷತ್ರಿಯಧರ್ಮೇಷು ನಿರತೋ ಯದ್ ವೃಕೋದರಃ ।
ವಾಹನಾದವತೀರ್ಯಾನ್ಯೈಃ ಪ್ರಣತೇಽಪಿ ನಿರಾಯುಧೈಃ ।
ಸಾಯುಧಃ ಸರಥೋಽಯುದ್ಧ್ಯದವಿಷಹ್ಯಮಪೀಶ್ವರೈಃ ॥೩೦೭॥

ಶುದ್ಧ ಕ್ಷತ್ರಿಯ ಧರ್ಮದಲ್ಲಿ ಭೀಮ ನಿರತನಾಗಿದ್ದ. ಅದರಿಂದ ಉಳಿದವರು ನಿರಾಯುಧರಾಗಿ ವಾಹನದಿಂದ ಕೆಳಗಿಳಿದು ನಮಿಸಿದರೂ ಭೀಮ ಆಯುಧ ಸಹಿತನಾಗಿ ರಥದಲ್ಲಿ ನಿಂತೇ ಬ್ರಹ್ಮಾದಿಗಳಿಂದಲೂ ಸಹಿಸಲಾಗದಂಥ ಆ ನಾರಾಯಣಾಸ್ತ್ರದ ಮುಂದೆ ಯುದ್ಧ ಮಾಡಿದ.

ಸ್ವಧರ್ಮಹಾನೌ ಮಿತ್ರಾಣಾಂ ಕರ್ತವ್ಯಂ ಯನ್ನಿಷೇಧನಮ್ ।
ಅತಃ ಸೋಽನ್ಯಾನಪಿ ಪ್ರಾಹ ಮಾ ನಮಧ್ವಮಿತಿ ಸ್ವಯಮ್ ॥೩೦೮॥

ಸ್ವಧರ್ಮಕ್ಕೆ ಚ್ಯುತಿ ಬರುವಾಗ ಮಿತ್ರರಿಗೆ ಅದನ್ನು ನಿಷೇಧ ಮಾಡುವುದು ಕರ್ತವ್ಯವಾಗುತ್ತದೆ. ಅದರಿಂದ ಭೀಮ ಅನ್ಯರಿಗೂ ಹೇಳಿದ, 'ನಮಸ್ಕರಿಸಬೇಡಿ' ಎಂದು.

ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।
ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತನ್ನ ಚಕಾರ ಸಃ ॥೩೦೯॥

ನಾರಾಯಣಾಸ್ತ್ರ ಎಲ್ಲರಿಗೂ ನಮಸ್ಕಾರಯೋಗ್ಯವೆ. ಆದರೂ ಯುದ್ಧದಲ್ಲಿ ಶತ್ರು ಅದನ್ನು ಪ್ರಯೋಗಿಸಿದಾಗ ಬದುಕಿನಾಸೆಯಿಂದ ನಮಿಸಕೂಡದು. ಅದರಿಂದ ಭೀಮ ನಮಸ್ಕಾರ ಮಾಡಲಿಲ್ಲ.

ಅಸ್ತ್ರಾಭಿಮಾನೀ ವಾಯುರ್ಹಿ ದೇವತಾಽಸ್ಯ ಹರಿಃ ಸ್ವಯಮ್ ।
ತಸ್ಮಾದ್ ಬೀಮಂ ಸ್ವರೂಪತ್ವಾನ್ನಾದಹಚ್ಚಾಗ್ನಿಮಗ್ನಿವತ್ ॥೩೧೦॥

ನಾರಾಯಣಾಸ್ತ್ರಕ್ಕೆ ಅಭಿಮಾನಿ ವಾಯು. ದೇವತೆ ಸ್ವತಃ ನಾರಾಯಣ. ಅದರಿಂದ ಅಗ್ನಿಯನ್ನು ಅಗ್ನಿ ಹೇಗೆ ಸುಡುವುದಿಲ್ಲವೋ ಹಾಗೆ ಭೀಮನಿಂದ ಅಭಿಮನ್ಯಮಾನವಾದ ಆ ಅಸ್ತ್ರ ಭೀಮನನ್ನು ಸುಡಲಿಲ್ಲ.

ಮನಸೈವಾಽದರಂ ಚಕ್ರೇ ಭೀಮೋಽಸ್ತ್ರೇ ಚ ಹರೌ ತದಾ ।
ಕ್ಷತ್ರಧರ್ಮಾನುಸಾರೇಣ ನ ನನಾಮ ಚ ಬಾಹ್ಯತಃ ॥೩೧೧॥

ಭೀಮ ಅಸ್ತ್ರಕ್ಕೂ ಅಸ್ತ್ರದೇವತೆಯಾದ ಹರಿಗೂ ಮನಸಿನಿಂದಲೆ ಆದರ ತೋರಿದ ಹೊರತು ಬಾಹ್ಯದಲ್ಲಿ ಕ್ಷತ್ರಧರ್ಮಾನುಸಾರವಾಗಿ ತಲೆಬಾಗಿ ನಮಿಸಲಿಲ್ಲ.

ವಾಸುದೇವಃ ಸ್ವಕೀಯಾಸ್ತ್ರಂ ಭೀಮಂ ಚಾಮೋಘಮೇವ ತು ।
ಸಾಧಯಿತ್ವಾಽನಂತಶಕ್ತಿಃ ಪುನರಶ್ವಾನಚೋದಯತ್ ॥೩೧೨॥

ಅನಂತಶಕ್ತಿ ಉಳ್ಳ ಶ್ರೀಕೃಷ್ಣ ತನ್ನ ಅಸ್ತ್ರವನ್ನು ಅಮೋಘವೆಂದೂ ಭೀಮನನ್ನು ಅವಧ್ಯನೆಂದೂ ತೋರಿಸಿ ಪುನಃ ಕುದುರೆಗಳನ್ನು ನಡೆಸಿದ.

ಪುನಃ ಪ್ರಯೋಕ್ತುಮಸ್ತ್ರಂ ತದ್ ಧಾರ್ತರಾಷ್ಟ್ರೋಕಭ್ಯಚೋದಯತ್ ।
ದ್ರೌಣಿರ್ನ ಶಕ್ಯಮಿತ್ಯುಕ್ತ್ವಾ ಧೃಷ್ಟದ್ಯುಮ್ನಂ ಸಮಭ್ಯಯಾತ್ ॥೩೧೩॥

ಪುನಃ ನಾರಾಯಣಾಸ್ತ್ರವನ್ನು ಪ್ರಯೋಗಿಸುವಂತೆ ಅಶ್ವತ್ಥಾಮನನ್ನು ದುರ್ಯೋಧನ ಒತ್ತಾಯಿಸಿದ. 'ಅದು ಶಕ್ಯವಿಲ್ಲ' ಎಂದು ಹೇಳಿ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಇದಿರಿಸಿದ.

ಆಯಾಂತಮೀಕ್ಷ್ಯೈವ ಗುರೋಃ ಸುತಂ ತಂ
ಧೃಷ್ಟದ್ಯುಮ್ನಂ ಸಾತ್ಯಕಿರನ್ವಯಾದ್ ರಣೇ ।
ಉಭೌ ಚ ತೌ ಸಾಯಕಾಭ್ಯಾಮವಿಧ್ಯ-
ನ್ನಿಪೇತತುಸ್ತೌ ಚ ವಿಮೂರ್ಛಿತೌ ರಣೇ ॥೩೧೪॥

ಅಶ್ವತ್ಥಾಮ ಧೃಷ್ಟದ್ಯುಮ್ನನ ಕಡೆಗೆ ಬರುವುದನ್ನು ಕಂಡು ಸಾತ್ಯಕಿ ಯುದ್ಧದಲ್ಲಿ ಅಶ್ವತ್ಥಾಮನ ಇದಿರಿಗೆ ಬಂದ. ಅವರಿಬ್ಬರೂ ಬಾಣಗಳಿಂದ ಹೊಡೆದುಕೊಂಡರು. ಯುದ್ಧದಲ್ಲಿ ಇಬ್ಬರೂ ಮೂರ್ಛಿತರಾಗಿ ಬಿದ್ದರು.

ಭೀಮಸ್ಯಾಭ್ಯಾಗತಸ್ಯಾಶ್ವಾನ್ ದ್ರೌಣಿರ್ವ್ಯದ್ರಾವಯದ್ ರಣೇ ।
ಸಂಸ್ಥಾಪಯತಿ ತಾನ್ ಭೀಮೇ ದದರ್ಶ ದ್ರೌಣಿಮರ್ಜುನಃ ॥೩೧೫॥

ಭೀಮ ಬಂದಾಗ ಅವನ ಕುದುರೆಗಳನ್ನು ಯುದ್ಧದಲ್ಲಿ ಅಶ್ವತ್ಥಾಮ ಓಡಿಸಿದ. ಆ ಕುದುರೆಗಳನ್ನು ಭೀಮ ತಡೆಯುತ್ತಿದ್ದಾಗ ಅರ್ಜುನ ಅಶ್ವತ್ಥಾಮನನ್ನು ಕಂಡ.

ಅಶ್ವತ್ಥಾಮ ಭೀಮನ ಸಾರಥಿಯಾದ ವಿಶೋಕನ ಹಣೆಗೆ ಬಾಣ ಎಸೆದು ಮೂರ್ಛೆಗೊಳಿಸಿದ. ಆಗ ಕುದುರೆಗಳು ಓಡತೊಡಗಿದುವು. ಭೀಮ ಅವುಗಳನ್ನು ಹತೋಟಿಗೆ ತರಲು ಯತ್ನಿಸಿದ. ಆಗ ಅರ್ಜುನ ಸಹಾಯಕ್ಕೆ ಬಂದ.

ತತೋಕರ್ಜುನಸ್ತಂ ಪ್ರತಿ ಯೋದ್ಧುಮಾಗಮದ್
ರೂಕ್ಷಾ ವಾಚಃ ಶ್ರಾವಯನ್ ಕ್ರುದ್ಧರೂಪಃ ।
ತತ್ರಾಕಗ್ನೇಯಂ ದ್ರೌಣಿರಮುಂಚದಸ್ತ್ರಂ
ತೇನ ವ್ಯಾಪ್ತಾ ಪೃತನಾ ಪಾಂಡವಾನಾಮ್ ॥೩೧೬॥

ಅರ್ಜುನ ಕ್ರೂರವಾದ ಮಾತುಗಳನ್ನಾಡುತ್ತ ಅಶ್ವತ್ಥಾಮನೊಡನೆ ಯುದ್ಧಕ್ಕೆ ಬಂದ. ಅಶ್ವತ್ಥಾಮ ಕ್ರುದ್ಧನಾಗಿ ಆಗ್ನೇಯಾಸ್ತ್ರ ಪ್ರಯೋಗಿಸಿದ. ಆ ಅಸ್ತ್ರ ಪಾಂಡವರ ಸೈನ್ಯವನ್ನು ಎಲ್ಲೆಡೆ ಆವರಿಸಿತು.

'ಅಶ್ವತ್ಥಾಮ, ನಿನಗೆ ನಮ್ಮ ಮೇಲಿರುವ ದ್ವೇಷವನ್ನೂ ನಿನ್ನ ಬಲ ಪೌರುಷವನ್ನೂ ಪೂರ್ತಿಯಾಗಿ ತೋರು, ನಿನ್ನ ದರ್ಪವನ್ನು ನಾವು ಮುರಿಯುವೆವು' ಎಂದು ಅರ್ಜುನ ನಿಷ್ಠುರವಾಗಿ ನುಡಿದ. ವಸ್ತುತಃ ಅಶ್ವತ್ಥಾಮನಿಗೆ ಅರ್ಜುನನಲ್ಲಿ ಬಹಳ ಪ್ರೀತಿ. ಅರ್ಜುನ ಮಾತ್ರ ಕೋಪಾವೇಶದಲ್ಲಿ ವಿವೇಕವನ್ನು ಮರೆತು ಗುರುಪುತ್ರನಿಗೆ ನಿಷ್ಠುರವಾಗಿ ನುಡಿದಿದ್ದ.

ಅಕ್ಷೌಹಿಣೀ ನಿಹತಾ ಚಾತ್ರ ಸೇನಾ
ಪಾರ್ಥಂ ಸಯಾನಂ ಹರಿರುಜ್ಜಹಾರ ॥೩೧೭॥
ಜೀವಂತಮಾಲೋಕ್ಯ ಸುರೇಂದ್ರನಂದನಂ
ದ್ರೌಣಿಃ ಕೋಪಾತ್ ಕಾರ್ಮುಕಂ ಚಾಪಹಾಯ ।
ಯಯೌ ತಮಾಗತ್ಯ ಜಗಾದ ಕೃಷ್ಣೋ
ವೇದಾಂತಕೃತ್ ಪೂರ್ಣಷಾಡ್ಗುಣ್ಯದೇಹಃ ॥೩೧೮॥

ಅಶ್ವತ್ಥಾಮನ ಆಗ್ನೇಯಾಸ್ತ್ರದಿಂದ ಒಂದು ಅಕ್ಷೌಹಿಣಿ ಸೈನ್ಯ ಸುಟ್ಟುಹೋಯಿತು. ಆದರೆ ಅರ್ಜುನನನ್ನು ರಥ ಸಮೇತವಾಗಿ ಕೃಷ್ಣ ಪಾರುಮಾಡಿದ. ಅರ್ಜುನ ಬದುಕಿ ಉಳಿದುದನ್ನು ಕಂಡು ಅಶ್ವತ್ಥಾಮ ಕೋಪದಿಂದ ಬಿಲ್ಲನ್ನೆಸೆದು ಹೊರಟುಹೋದ. ಆಗ ವೇದಾಂತಕರ್ತರಾದ ಪೂರ್ಣ ಷಡ್ಗುಣಶರೀರಿಯಾದ ವೇದವ್ಯಾಸರು ಅವನ ಬಳಿಗೆ ಬಂದು ಹೇಳಿದರು.

ಶ್ರೀಕೃಷ್ಣ ಅರ್ಜುನನ ರಥವನ್ನು ಅಸ್ತ್ರಕ್ಕಿಂತಲೂ ಮೇಲೆ ಅಂತರಿಕ್ಷಕ್ಕೆ ಹಾರಿಸಿ ಸುಟ್ಟುಹೋಗದಂತೆ ಕಾಪಾಡಿದ್ದ. ಅಶ್ವತ್ಥಾಮ ನಿರಾಶೆಯಿಂದ 'ಹಾಧಿಕ್! ಧಿಕ್! ಸರ್ವಮಿದಂ ಮಿಥ್ಯಾ! 'ಈ ಅಸ್ತ್ರಗಳಿಗೆಲ್ಲ ಧಿಕ್ಕಾರ! ಏನೂ ಕೆಲಸಕ್ಕೆ ಬಾರದವುಗಳು!' ಎನ್ನುತ್ತ ಬಿಲ್ಲನ್ನೆಸೆದು ವೈರಾಗ್ಯದಿಂದ ಹೊರಟುಹೋದ. ಆದರೆ ಬ್ರಹ್ಮಸೂತ್ರಗಂಥಕರ್ತರಾದ ವೇದವ್ಯಾಸರು ಎದುರಿಗೆ ಬಂದು ಸಮಾಧಾನ ಮಾಡಿದರು.

ಮಾ ಯಾಹಿ ಸಾಕ್ಷಾದ್ ಗಿರಿಶಃ ಸುರಾಣಾಂ
ಕಾರ್ಯಾಯ ಭೂಮೌ ಬಲವಾನಜಾಯಥಾಃ ।
ಮಹಚ್ಚ ಕಾರ್ಯಂ ಪುನರಸ್ತಿ ದೃಷ್ಟಂ
ತವಾಶು ತಚ್ಚ ಪ್ರತಿಪಾದಯೇತಿ ॥೩೧೯॥

'ಹೋಗಬೇಡ, ನೀನು ಸಾಕ್ಷಾತ್ ರುದ್ರಾವತಾರ. ದೇವಕಾರ್ಯಕ್ಕಾಗಿ ಭೂಮಿಯಲ್ಲಿ ಬಲಿಷ್ಠನಾಗಿ ಅವತರಿಸಿರುವಿ. ನಿನ್ನ ಮಹತ್ತಾದ ಕಾರ್ಯವನ್ನು ನಾವು ಕಂಡಿದ್ದೇವೆ. ಇನ್ನೂ ಅಂಥ ಕಾರ್ಯವನ್ನು ನೀನು ಮಾಡಬೇಕಾಗಿದೆ. ಅದನ್ನೂ ಬೇಗನೆ ಮಾಡು' ಎಂದು.

ಈಗ ಕಂಡಿರುವ ಅಶ್ವತ್ಥಾಮನ ಮಹತ್ತಾದ ಕಾರ್ಯ ನಾರಾಯಣಾಸ್ತ್ರ ಆಗ್ನೇಯಾಸ್ತ್ರಪ್ರಯೋಗಗಳು. ಇನ್ನೂ ಮಾಡಬೇಕಾಗಿರುವ ಮಹತ್ತಾದ ಕಾರ್ಯ ಸೌಪ್ತಿಕದ ಹತ್ಯಾಕಾಂಡ. ಅದೂ ಒಂದು ದೇವಕಾರ್ಯವೆ. ಅದಕ್ಕೇ ವೇದವ್ಯಾಸರ ಆಜ್ಞೆ ಇದ್ದಿತು. ಅದಕ್ಕೇ ಅಶ್ವತ್ಥಾಮ ತಿರುಗಿ ಶಸ್ತ್ರಸ್ವೀಕಾರ ಮಾಡಿದ.

ತಥೋದಿತಃ ಪ್ರಾತರಿತಿ ಬ್ರುವಾಣೋ
ಯಯೌ ಪ್ರಣಮ್ಯಾಖಿಲವೇದಯೋನಿಮ್ ।
ಯಯುಸ್ತಮನ್ವೇವ ಸುಯೋಧನಾದಯೋ
ದುಃಖಾನತಾಸ್ತೇ ಶಿಬಿರಾಯ ಭೀತಾಃ ॥ ೩೨೦ ॥

ವೇದವ್ಯಾಸರು ಹೀಗೆ ಹೇಳಿದಾಗ ಅಶ್ವತ್ಥಾಮ 'ಬೆಳಿಗ್ಗೆ' ಎನ್ನುತ್ತ ಸಕಲ ವೇದಪ್ರತಿಪಾದ್ಯರಾದ ಆ ವ್ಯಾಸರಿಗೆ ನಮಿಸಿ ಶಿಬಿರಕ್ಕೆ ಹೊರಟುಹೋದ. ದುರ್ಯೋಧನಾದಿಗಳು ಭೀತರಾಗಿ ದುಃಖದಿಂದ ತಲೆತಗ್ಗಿಸಿ ಅವನ ಹಿಂದಿನಿಂದ ಶಿಬಿರಕ್ಕೆ ತೆರಳಿದರು.

ಅಶ್ವತ್ಥಾಮ ವ್ಯಾಸರನ್ನು ಕೇಳಿದ, 'ಅಮೋಘವಾದ ನನ್ನ ಆಗ್ನೇಯಾಸ್ತ್ರ ಕೃಷ್ಣಾರ್ಜುನರ ರಥವನ್ನೇಕೆ ಸುಡಲಿಲ್ಲ? ನನ್ನಿಂದ ಏನು ಅಪರಾಧವಾಗಿತ್ತು?' ವೇದವ್ಯಾಸರು ಹೇಳಿದರು. 'ಕೃಷ್ಣ ಮಾನವನಲ್ಲ. ಸಾಕ್ಷಾತ್ ಜಗನ್ನಾಥನಾದ ನಾರಾಯಣ. ಶಿವ ಅವನನ್ನು ಪ್ರಾರ್ಥಿಸಿದ, ನೀನು ಅವತರಿಸಿ ನನಗಿಂತ ಬಲದಲ್ಲಿ ಮಿಗಿಲೆನಿಸಬೇಕು (ದ್ರೋಣ ೨೦೨.೮೯) ಎಂದು. ಅದಕ್ಕೆ ರುದ್ರಾವತಾರನಾದ ನಿನ್ನ ಅಸ್ತ್ರದಿಂದ ರಥವನ್ನು ಆತ ಪಾರು ಮಾಡಿದ್ದಾನೆ.' ಇದನ್ನು ಕೇಳಿ ಅಶ್ವತ್ಥಾಮ ಸಮಾಧಾನಗೊಂಡು ನಾಳೆ ಬೆಳಿಗ್ಗೆ ತಿರುಗಿ ಯುದ್ಧ ಪ್ರಾರಂಭವಾಗುವ ಹಾಗೆ ಮಾಡುತ್ತೇನೆ ಎಂದು ಹೇಳಿ ನಮಿಸಿ ಹಿಂತಿರುಗಿ ಹೋದ. ಸೈನ್ಯವನ್ನು ಶಿಬಿರಕ್ಕೆ ಕಳಿಸಿದ. ಆಗ ದುರ್ಯೋಧನಾದಿಗಳು ದುಃಖದಿಂದ ಶಿಬಿರವನ್ನು ಸೇರಿಕೊಂಡರು.

ಪಾರ್ಥಾಶ್ಚ ಸರ್ವೇ ಮುದಿತಾ ಜನಾರ್ದನಂ
ಪರಂ ಸ್ತುವಂತಃ ಶಿಬಿರಾಯ ಜಗ್ಮುಃ ।
ತತ್ರಾಪಿ ರಾತ್ರಾವಮಿತಾನ್ ಹರೇರ್ಗುಣಾ-
ನನುಸ್ಮರಂತೋ ಮುಮುದುಃ ಸಮೇತಾಃ ॥ ೩೨೧ ॥

ಇತಿಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ದ್ರೋಣಪರ್ವನಿರ್ಣಯೋ ನಾಮ ಪಞ್ಚವಿಂಶೋಽಧ್ಯಾಯಃ

ಪಾಂಡವರೆಲ್ಲರೂ ಸಂತುಷ್ಟರಾಗಿ ಸರ್ವೋತ್ತಮನಾದ ಕೃಷ್ಣನನ್ನು ಹೊಗಳುತ್ತ ಶಿಬಿರಕ್ಕೆ ನಡೆದರು. ಅಲ್ಲಿಯೂ ರಾತ್ರಿಯಲ್ಲಿ ಎಲ್ಲರೂ ಕೂಡಿ ಹರಿಯ ಗುಣಗಳನ್ನು ನೆನೆಯುತ್ತ ಆನಂದಪಟ್ಟರು.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ದ್ರೋಣಪರ್ವನಿರ್ಣಯ ಎಂಬ
ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 27

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯತ್ಸಾಮರ್ಥ್ಯಬಲೇನ ಸೂರ್ಯತನುಜೇ ಪಾರ್ಥೇನ ಯುದ್ಧೇ ಜಿತೇ
ಪಶ್ಚಾಚ್ಛಲ್ಯಮವಾಪ್ಯ ಸಾರಥಿವರಂ ಧರ್ಮಾತ್ಮಜಂ ಸಾಯಕೈಃ।
ಶೀರ್ಣಾಂಗಂ ಕೃತವತ್ಯಮುಂ ಶಿಬಿರಗಂ ಪಾರ್ಥಂ ಚ ಮೃತ್ಯೋರಪಾತ್
ಯಃ ಪಾರ್ಥೇನ ಹತೇಽರ್ಕಜೇ ನೃಪನುತಃ ಪಾಯಾತ್ ಸ ನಃ ಕೇಶವಃ ॥ ೨೭ ॥

ಶ್ರೀಕೃಷ್ಣ ನೀಡಿದ ಸಾಮರ್ಥ್ಯದ ಬಲದಿಂದ ಅರ್ಜುನ ಯುದ್ಧದಲ್ಲಿ ಕರ್ಣನನ್ನು ಪರಾಭವಗೊಳಿಸಿದ. ಕರ್ಣ ಶಲ್ಯನನ್ನು ಉತ್ತಮ ಸಾರಥಿಯನ್ನಾಗಿ ಮಾಡಿಕೊಂಡು ಬಾಣಗಳಿಂದ ಧರ್ಮರಾಜನನ್ನು ಮೈಯಲ್ಲಿ ಗಾಯಗೊಳಿಸಿದಾಗ ಧರ್ಮರಾಜ ಶಿಬಿರಕ್ಕೆ ಹಿಂತಿರುಗಿದ. ಬಳಿಕ ಧರ್ಮರಾಜನನ್ನು ಅರ್ಜುನನಿಂದಲೂ, ಅರ್ಜುನನನ್ನು ಆತ್ಮಹತ್ಯೆಯಿಂದಲೂ ಕರ್ಣನ ಸರ್ಪಾಸ್ತ್ರದಿಂದಲೂ ಮೃತ್ಯುವಿನಿಂದ ಪಾರು ಮಾಡಿದ. ಅರ್ಜುನನಿಂದ ಕರ್ಣ ಹತನಾದಾಗ ಧರ್ಮರಾಜ ಶ್ರೀಕೃಷ್ಣನನ್ನು ಕೊಂಡಾಡಿದ. ಆ ಕೇಶವ ನಮ್ಮನ್ನು ಕಾಪಾಡಲಿ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೭

ಕರ್ಣವಧ ಪರ್ವ

॥ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಹದಿನಾರನೆ ದಿನದ ಯುದ್ಧ

ಓಂ ॥ ಅಥಾನುಜ್ಞಾಮುಪಾದಾಯ ದ್ರೌಣೇರ್ದುರ್ಯೋಧನೋ ನೃಪಃ ।
ಕರ್ಣಂ ಸೇನಾಪತಿಂ ಚಕ್ರೇ ಸೋಽಗಾದ್ ಯುದ್ಧಾಯ ದಂಶಿತಃ ॥೧॥

ಬಳಿಕ ರಾಜ ದುರ್ಯೋಧನ ಅಶ್ವತ್ಥಾಮನ ಅನುಜ್ಞೆ ಪಡೆದು ಕರ್ಣನನ್ನು ಸೇನಾಧಿಪತಿಯನ್ನಾಗಿ ಮಾಡಿದ. ಕರ್ಣ ಕವಚವನ್ನು ತೊಟ್ಟು ಯುದ್ಧಕ್ಕೆ ಹೊರಟ.

ತತ್ರಾಭವದ್ ಯುದ್ಧಮತೀವ ದಾರುಣಂ
ಪಾಂಡೋಃ ಸುತಾನಾಂ ಧೃತರಾಷ್ಟ್ರಜೈರ್ಗಜೇ ।
ತತ್ರೋದಯಾದ್ರಿಪ್ರತಿಮೇ ಪ್ರದೃಶ್ಯತೇ
ಭೀಮೋ ಯಥೋದ್ಯನ್ ಸವಿತಾಽತಿನಿರ್ಮಲಃ ॥೨॥

ಕರ್ಣನ ಸೇನಾಧಿಪತ್ಯದಲ್ಲಿ ಪಾಂಡವರಿಗೆ ಕೌರವರೊಡನೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ರಣರಂಗದಲ್ಲಿ ಉದಯಾಚಲದಂಥ ಆನೆಯ ಮೇಲೆ ಅತಿನಿರ್ಮಲನಾದ ಉದಿಸುವ ಸೂರ್ಯನಂತೆ ಕಾಣಿಸಿಕೊಂಡ, ಭೀಮ.

ಮಧ್ಯೇ ವೃಕೋದರೋಽಭ್ಯಾಯಾತ್ ತ್ವದೀಯಾನ್ನಾಗಧೂರ್ಗತಃ।
ಸ ನಾಗ ಪ್ರವರೋಽತ್ಯುಗ್ರೋ ವಿಧಿವತ್ ಕಲ್ಪಿತೋ ಬಭೌ।
ಉದಯಾಗ್ರಾದ್ರಿ ಭವನಂ ಯಥಾಭ್ಯುದಿತ ಭಾಸ್ಕರಂ॥
(ಕರ್ಣ ೯.೨೨)

'ಭೀಮನು ಕುಳಿತ ಆನೆ ಉದಿಸುವ ಸೂರ್ಯನಿಂದ ಕೂಡಿದ ಉದಯಾಚಲದಂತಿತ್ತು' ಎಂದು ಮಹಾಭಾರತ ಹೇಳಿದೆ. ಉದಿಸುವ ಸೂರ್ಯನಂತೆ ಭೀಮನಿದ್ದ ಎನ್ನುವುದು ಅದರ ಅಭಿಪ್ರಾಯ.

ತಂ ಕಾಲಯಂತಂ ನೃಪತೀನ್ ಕ್ಷೇಮಧೂರ್ತಿ-
ರಭ್ಯಾಗಮತ್ ತಸ್ಯ ಗಜಂ ಜಘಾನ ಚ ।

ತಂ ವೀರ್ಯಮತ್ತಂ ಪ್ರತಿಲಭ್ಯ ಭೀಮೋ
ನಿನಾಯ ಮೃತ್ಯೋಃ ಸದನಾಯ ಶೀಘ್ರಮ್ ॥೩॥

ರಾಜರನ್ನೆಲ್ಲ ಪುಡಿಮಾಡುತ್ತಿದ್ದ ಭೀಮನನ್ನು ಕ್ಷೇಮಧೂರ್ತಿ ಇದಿರಿಸಿದ. ಭೀಮನ ಆನೆಯನ್ನು ಕ್ಷೇಮಧೂರ್ತಿ ಕೊಂದ. ಕ್ಷೇಮಧೂರ್ತಿಯ ಆನೆಯನ್ನು ಭೀಮ ಕೊಂದ. ಬಳಿಕ ಬಲದಿಂದ ದರ್ಪಿತನಾದ ಆ ಕ್ಷೇಮಧೂರ್ತಿಯನ್ನು ಆಕ್ರಮಿಸಿ ಭೀಮ ಬೇಗನೆ ಯಮಲೋಕಕ್ಕೆ ಅಟ್ಟಿದ.

ಕ್ಷೇಮಧೂರ್ತಿ ಬಾಣಗಳ ಮಳೆಯಿಂದ ಭೀಮನ ಆನೆಯನ್ನು ಕೊಂದಾಗ ಭೀಮ ನೆಲಕ್ಕೆ ಹಾರಿ ಗದೆಯಿಂದ ಅವನ ಆನೆಯನ್ನು ಕೊಂದ, ಆಗ ಕೆಳಗೆ ಹಾರಿದ ಕ್ಷೇಮಧೂರ್ತಿಯನ್ನೂ ಗದೆಯಿಂದ ಕೊಂದ.

ನಿಹತ್ಯ ತಂ ಮಾರುತಿರಭ್ಯಕೃಂತ-
ಚ್ಛಿರಾಂಸಿ ಯೂನಾಂ ಪರಪಕ್ಷಪಾತಿನಾಮ್
ವಿಕ್ಷೋಭಯಾಮಾಸ ಚ ಶತ್ರುಸೈನ್ಯಂ
ಸಿಂಹೋ ಯಥೈವ ಶ್ವಸೃಗಾಲಯೂಥಂ ॥೪॥

ಕ್ಷೇಮಧೂರ್ತಿಯನ್ನು ಕೊಂದ ಬಳಿಕ ಭೀಮ ಶತ್ರುಪಕ್ಷದಲ್ಲಿ ಹೋರಾಡುತ್ತಿದ್ದ ಯುವಕರ ಶಿರಗಳನ್ನು ತರಿದ. ಮತ್ತು ನಾಯಿನರಿಗಳ ಹಿಂಡನ್ನು ಸಿಂಹ ಹೇಗೋ ಹಾಗೆ ಶತ್ರುಸೈನ್ಯವನ್ನು ಕ್ಷೋಭೆಗೊಳಿಸಿದ.

ಸಂಕ್ಷೋಭ್ಯಮಾಣಂ ತದನೀಕಮೀಕ್ಷ್ಯ
ದ್ರೌಣೇ ರಥೇನ ಪ್ರತಿಜಗ್ಮಿವಾಂಸ್ತಮ್ ।
ತದ್ ಯುದ್ಧಮಾಸೀದತಿಘೋರಮದ್ಭುತಂ
ಪುರಾ ಯಥಾ ನಾಽಸ ಚ ಕಸ್ಯಚಿತ್ ಕ್ವಚಿತ್ ॥೫॥

ಭೀಮನಿಂದ ತನ್ನ ಸೇನೆ ಕ್ಷೋಭೆಗೊಳ್ಳುವುದನ್ನು ಕಂಡು ಅಶ್ವತ್ಥಾಮ ರಥದಿಂದ ಭೀಮನನ್ನು ಇದಿರಿಸಿದ. ಅವರ ಯುದ್ಧ ಬಲು ಘೋರ, ಅದ್ಭುತವಾಗಿತ್ತು. ಹಿಂದೆ ಯಾರಿಗೂ ಎಲ್ಲಿಯೂ ನಡೆದಿರಲಾದಂಥದ್ದಾಗಿತ್ತು.

ದೃಷ್ಟ್ವೈವ ತದ್ ದೇವಗಂಧರ್ವವಿಪ್ರಾ
ಊಚುರ್ನೇದೃಗ್ ದೃಷ್ಟಪೂರ್ವಂ ಸುಯುದ್ಧಮ್ ।
ನ ಚೋತ್ತರಂ ವಾಽಪಿ ಭವಿಷ್ಯತೀದೃಕ್
ಕಲಾಂ ಚ ಸರ್ವಾಣಿ ನ ಷೋಡಶೀಮಿಯುಃ ॥೬॥

ದೇವತೆಗಳೂ ಗಂಧರ್ವರೂ ಮುನಿಗಳೂ ನೋಡಿದೊಡನೆ ಹೇಳಿದರು. 'ಇಂಥ ಒಳ್ಳೆಯ ಯುದ್ಧವನ್ನು ಹಿಂದೆ ಎಂದೂ ನಾವು ಕಂಡಿರಲಿಲ್ಲ. ಮುಂದೆ ಇಂಥ ಯುದ್ಧ

ನಡೆಯಲಾರದು. ಹಿಂದು ಮುಂದಿನ ಎಲ್ಲ ಯುದ್ಧಗಳೂ ಈ ಯುದ್ಧದ ಹದಿನಾರನೆ ಒಂದಂಶಕ್ಕೆ ಸಮವಾಗಲಾರವು' ಎಂದು.

ನೈತಾದೃಶೀ ಜ್ಞಾನಸಂಪದ್ ಬಲಂ ವಾ
ದ್ವಯಂ ಕುತೋ ವಾಯುಮೃತೇ ಶಿವಂ ತಥಾ ।
ದ್ವಯೋಃ ಸಮಾಹಾರ ಇಹ ದ್ವಯೋರಪಿ
ಜ್ಞಾನಸ್ಯ ಬಾಹ್ವೋಶ್ಚ ಬಲಸ್ಯ ಸೂರ್ಜಿತಃ ॥೭॥

'ಇಂಥ ಜ್ಞಾನಸಂಪತ್ತಾಗಲಿ ಇಂಥ ಬಲವಾಗಲಿ ವಾಯುವಿನಲ್ಲಿ ಮತ್ತು ಶಿವನಲ್ಲಿ ಹೊರತು ಇನ್ನೆಲ್ಲಿಯೂ ಇಲ್ಲ. ಈ ಎರಡೂ ಸೇರಿರುವುದು ಇನ್ನೆಲ್ಲಿ? ಇವರಿಬ್ಬರ ಜ್ಞಾನ ಮತ್ತು ಬಾಹುಗಳ ಬಲ ಈ ಎರಡರ ಉತ್ತಮವಾದ ಮೇಲನ ಇವರಿಬ್ಬರಲ್ಲಿ ಮಾತ್ರವಿದೆ.'

ಸರ್ವಯುದ್ಧಾನಿ ಚೈತಸ್ಯ ಕಲಾಂ ನಾರ್ಹಂತಿ ಷೋಡಶೀಂ।
ನೇದೃಶಂ ಚ ಪುನರ್ಯುದ್ಧಂ ಭವಿಷ್ಯತಿ ಕದಾಚನ।
ಅಹೋ ಜ್ಞಾನೇನ ಸಂಪನ್ನಾವುಭೌ ಬ್ರಾಹ್ಮಣಕ್ಷತ್ರಿಯೌ।
ಅಹೋ ಶೌರ್ಯೇಣ ಸಂಪನ್ನಾವುಭೌ ಚೋಗ್ರ ಪರಾಕ್ರಮೌ।
ಅಹೋ ಭೀಮಬಲೋ ಭೀಮ ಏತಸ್ಯ ಚ ಕೃತಾಸ್ತ್ರತಾ
(ಕರ್ಣ ೧೨-೨೮, ೨೯, ೩೦)

ಈ ಭಾರತ ವಚನಗಳ ಅರ್ಥವನ್ನೇ ನಿರ್ಣಯ ಸಂಗ್ರಹಿಸಿ ಕೊಟ್ಟಿದೆ.

ಇತೀರ್ಯಮಾಣೇ ವಿಬುಧೈರ್ನರೋತ್ತಮೌ
ದಿಶಃ ಸಮಸ್ತಾ ಗಗನಂ ಚ ಪತ್ರಿಭಿಃ ।
ನಿರಂತರಂ ಚಕ್ರತುರುತ್ತಮೌಜಸೌ
ದೃಷ್ಟೈವ ತತ್ ಪ್ರೀತಿಮಗುರ್ಮಹಾರಥಾಃ ॥೮॥

ಹೀಗೆ ದೇವತೆಗಳು ಮಾತನಾಡಿಕೊಳ್ಳುತ್ತಿದ್ದಾಗ ಮಹಾಬಲಶಾಲಿಗಳಾದ ಪುರುಷ ಶ್ರೇಷ್ಠರಾದ ಆ ಭೀಮ ಅಶ್ವತ್ಥಾಮರು ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ಆಕಾಶವನ್ನೂ ಪೂರ್ತಿ ತುಂಬಿಸಿದರು. ಅದನ್ನು ನೋಡಿದ ಮಾತ್ರಕ್ಕೆ ಮಹಾರಥಿಕರು ಆನಂದಪಟ್ಟರು.

ಶರಾಸನೇ ಮಾರುತಿನಾ ನಿರಾಕೃತೇ
ದ್ರೌಣಿರ್ಮಹಾಸ್ತ್ರಾಣಿ ಮುಮೋಚ ತಸ್ಮಿನ್ ।
ತಾನ್ಯಸ್ತ್ರವರ್ಯೈರ್ಬಲವಾನವಿಸ್ಮಯಃ
। ಸಂಶಾಮಯಾಮಾಸ ಸುತೋಽನಿಲಸ್ಯ ॥೯॥

ಅಶ್ವತ್ಥಾಮನ ಬಿಲ್ಲನ್ನು ಭೀಮ ತುಂಡರಿಸಿದಾಗ ಅಶ್ವತ್ಥಾಮ ಅವನ ಮೇಲೆ ಬೇರೆ ಮಹಾ ಅಸ್ತ್ರಗಳನ್ನು ಪ್ರಯೋಗಿಸಿದ. ಬಲಿಷ್ಠನಾದ ಭೀಮ ಏನೂ ಶಂಕೆಪಡದೆ ಅವುಗಳನ್ನು ಶ್ರೇಷ್ಠ ಅಸ್ತ್ರಗಳಿಂದ ಶಮನಗೊಳಿಸಿದ.

ಭೀಮ ಅಶ್ವತ್ಥಾಮನ ಬಿಲ್ಲನ್ನು ಕಡಿದಾಗ ಅಶ್ವತ್ಥಾಮ ಬೇರೆ ಬಿಲ್ಲನ್ನೆತ್ತಿಕೊಳ್ಳದೆ ಶಕ್ತಿ ಪ್ರಾಸ ಖಡ್ಗ ಪರಶು ಶತಘ್ನಿ ಮುಂತಾದ ಬೇರೆ ಆಯುಧಗಳನ್ನೆ ಮಂತ್ರಪೂರ್ವಕವಾಗಿ ಭೀಮನ ಮೇಲೆಸೆದ. ಅವುಗಳನ್ನೂ ಭೀಮ ಉತ್ತಮವಾದ ಪ್ರತ್ಯಸ್ತ್ರಗಳಿಂದ ಶಮನಗೊಳಿಸಿದ.

ಪುನಃ ಶರೈರೇವ ಪರಸ್ಪರಂ ತಾ-
ವಯುಧ್ಯತಾಂ ಚಿತ್ರಮಲಂ ಚ ಸುಷ್ಠು ।
ತದಾ ತು ಭೀಮಸ್ಯ ಶರೈರ್ಭೃಶಾರ್ದಿತೋ
ದ್ರೌಣಿಃ ಪಪಾತಾಽಶು ದೃಢಂ ವಿಚೇತನಃ ॥೧೦॥

ಪುನಃ ಬಾಣಗಳಿಂದಲೆ ಅವರು ಇಬ್ಬರೂ ಬಲು ಆಶ್ಚರ್ಯಕರವಾಗಿ ಚೆನ್ನಾಗಿ ಪರಸ್ಪರ ಹೋರಾಡಿದರು. ಆಗ ಭೀಮನ ಬಾಣಗಳಿಂದ ಬಹಳ ಪೀಡಿತನಾದ ಅಶ್ವತ್ಥಾಮ ಬೇಗನೆ ಚೆನ್ನಾಗಿ ಮೂರ್ಛಿತನಾಗಿ ಬಿದ್ದ.

ಭೀಮಶ್ಚ ವಿಹ್ವಲತನುಃ ಸ ತು ಕಿಂಚಿದೇವ
ಪೂರ್ವಂ ಗತೇ ಗುರುಸುತೇ ಪ್ರಯಯೌ ಕ್ಷಣೇನ ।
ನಿರ್ಧೂತಯುದ್ಧಶ್ರಮ ಆತ್ತಧನ್ವಾ
ಯೋದ್ಧುಂ ಗಜೌಘಂ ಪ್ರತಿನಾದಿತಾಶಃ ॥೧೧॥

ಅಶ್ವತ್ಥಾಮ ಮೂರ್ಛಿತನಾಗಿ ಹೊರಟು ಹೋದಾಗ ಮೊದಲು ಸ್ವಲ್ಪ ಮಾತ್ರ ಆಯಾಸಗೊಂಡಿದ್ದ ಭೀಮ ಕ್ಷಣದಲ್ಲಿ ಯುದ್ಧದ ಆಯಾಸವನ್ನು ಪರಿಹರಿಸಿಕೊಂಡು ಬಿಲ್ಲನ್ನೆತ್ತಿ ಸಿಂಹ ಗರ್ಜನೆಯಿಂದ ದಿಕ್ಕುಗಳಲ್ಲಿ ಪ್ರತಿಧ್ವನಿ ಉಂಟುಮಾಡುತ್ತ ಗಜಸೇನೆಯೊಡನೆ ಯುದ್ಧ ಮಾಡಲು ಹೊರಟ.

'ತತಸ್ತು ಸಾರಥಿರ್ಜ್ಞಾತ್ವಾ ದ್ರೋಣಪುತ್ರಮಚೇತನಂ'

(ಕರ್ಣ ೧೨.೪೩)

'ಅಶ್ವತ್ಥಾಮ ಅಚೇತನವಾದ ಶವದಂತೆ ಬಹಳ ಮೂರ್ಛಿತನಾದ.'

ತಥೈವ ಪಾಂಡವಂ ರಾಜನ್ ವಿಹ್ವಲಂತಂ ಮುಹುರ್ಮುಹುಃ

(ಕರ್ಣ ೧೨.೪೪)

'ಭೀಮ, ವಿಹ್ವಲನಾದ, ಆಯಾಸಗೊಂಡ' ಎಂದು ಮಹಾಭಾರತ ಇಬ್ಬರ ಸ್ಥಿತಿಗಳನ್ನು ವರ್ಣಿಸಿದೆ.

ತಸ್ಮಿನ್ ಗಜಾನ್ ಮರ್ದಯತಿ ಧಾರ್ತರಾಷ್ಟ್ರೋ ಯುಧಿಷ್ಠಿರಮ್ ।
ಆಗಾದ್ ಯುದ್ಧಾಯ ತೌ ಯುದ್ಧಂ ರಾಜಾನೌ ಚಕ್ರತುಶ್ಚಿರಮ್ ॥೧೨॥

ಭೀಮ ಆನೆಗಳನ್ನು ಮರ್ದಿಸುತ್ತಿದ್ದಾಗ ದುರ್ಯೋಧನ ಧರ್ಮರಾಜನೊಡನೆ ಯುದ್ಧಕ್ಕೆ ಬಂದ. ಅವರಿಬ್ಬರೂ ಬಹುಕಾಲ ಯುದ್ಧ ಮಾಡಿದರು.

ತತ್ರ ತಂ ವಿರಥಂ ಚಕ್ರೇ ಸಹಸೈವ ಯುಧಿಷ್ಠಿರಃ ।
ಸ ಗದಾಮಾದದೇ ಗುರ್ವೀಂ ತಂ ಭೀಮೋಽಭ್ಯಪತದ್ ಗದೀ ॥೧೩॥

ಆ ಯುದ್ಧದಲ್ಲಿ ಧರ್ಮರಾಜ ದುರ್ಯೋಧನನನ್ನು ತಕ್ಷಣವೆ ವಿರಥನನ್ನಾಗಿ ಮಾಡಿದ. ದುರ್ಯೋಧನ ದೊಡ್ಡ ಗದೆಯನ್ನೆತ್ತಿಕೊಂಡ. ಆಗ ಗದಾಧಾರಿಯಾದ ಭೀಮ ಅವನನ್ನು ಆಕ್ರಮಿಸಿದ.

ದೃಷ್ಟ್ವಾ ಕೃಪಸ್ತಂ ಸ್ವರಥಮಾರೋಪ್ಯಾಪಯಯೌ ತತಃ ।
ತದೈವ ಕರ್ಣನಕುಲೌ ಭೃಶಂ ಬಾಣೈರಯುಧ್ಯತಾಮ್ ॥೧೪॥

ಭೀಮನನ್ನು ಕಂಡು ಕೃಪ ದುರ್ಯೋಧನನನ್ನು ತನ್ನ ರಥದ ಮೇಲೆ ಹತ್ತಿಸಿಕೊಂಡು ಅಲ್ಲಿಂದ ಪಲಾಯನ ಮಾಡಿದ. ಆಗಲೆ ಕರ್ಣ ನಕುಲರೂ ಬಾಣಗಳಿಂದ ಚೆನ್ನಾಗಿ ಯುದ್ಧ ಮಾಡಿದರು.

ನಕುಲಂ ವಿರಥಂ ಕೃತ್ವಾ ಕರ್ಣೋಽಥ ಪ್ರಪಲಾಯಿನಮ್ ।
ಅನುದ್ರುತ್ಯ ಚ ವೇಗೇನ ಕಂಠೇ ಧನುರವಾಸೃಜತ್ ॥೧೫॥

ಕರ್ಣ ನಕುಲನನ್ನು ವಿರಥನನ್ನಾಗಿ ಮಾಡಿ, ಅವನು ಪಲಾಯನ ಮಾಡತೊಡಗಿದಾಗ ವೇಗದಿಂದ ಬೆನ್ನಟ್ಟಿ ಕುತ್ತಿಗೆಗೆ ಬಿಲ್ಲಿಂದ ತಿವಿದ.

ಉಕ್ತ್ವಾ ಚ ಪರುಷಾ ವಾಚಃ ಕುಂತ್ಯಾ ವಚನಗೌರವಾತ್ ।
ನ ಜಘಾನೈವ ನಕುಲಂ ವಿಸೃಜ್ಯ ಚ ಪರಾನ್ ಯಯೌ ॥೧೬॥

ಕರ್ಣ ಕುಂತಿಗೆ ಕೊಟ್ಟ ಮಾತಿಗೆ ಗೌರವ ಕೊಟ್ಟು ನಕುಲನನ್ನು ಕೊಲ್ಲದೆ ಬಿಟ್ಟ. ಅವನಿಗೆ ಕಟುವಾದ ನಿಂದೆಯ ಮಾತುಗಳನ್ನಾಡಿ ಕಳಿಸಿ ಬೇರೆ ಯೋಧರೊಡನೆ ಯುದ್ಧಕ್ಕೆ ಹೊರಟುಹೋದ.

'ಮಗು, ನೀನು ಬೇರೆ ಮಕ್ಕಳೊಡನೆ ಆಟವಾಡು. ವೀರ ಯೋಧರೊಡನೆ ಹೋರಾಡಬೇಡ. ಮನೆಗೇ ಹೋಗು, ಅಥವಾ ಕೃಷ್ಣಾರ್ಜುನರ ಬಳಿಯಲ್ಲಿಯೆ ಯುದ್ಧ ಮಾಡುತ್ತಿರು, ಅವರು ನಿನ್ನನ್ನು ಕಾಪಾಡುತ್ತಾರೆ! - ಇದು ಕರ್ಣನಾಡಿದ ನಿಂದೆಯ ಮಾತು.

ವಿಂದಾನುವಿಂದಾವಥ ಕೈಕಯೌ ರಣೇ
ಸಮಾಸದತ್ ಸಾತ್ಯಕಿರುಗ್ರವಿಕ್ರಮಃ ।
ತಯೋರಮುಷ್ಯಾಭವದುಗ್ರವೈಶಸಂ
ಪ್ರವರ್ಷತೋರುತ್ತಮಸಾಯಕಾನ್ ಬಹೂನ್ ॥೧೭॥

ಕೇಕಯ ದೇಶದ ವಿಂದ ಅನುವಿಂದರನ್ನು ಯುದ್ಧದಲ್ಲಿ ಉಗ್ರ ಪರಾಕ್ರಮಿ ಸಾತ್ಯಕಿ ಇದಿರಿಸಿದ. ಅವರಿಗೂ ಸಾತ್ಯಕಿಗೂ ಭಯಂಕರ ಯುದ್ಧ ನಡೆಯಿತು. ಅವರು ಒಳ್ಳೆಯ ಬಹಳ ಬಾಣಗಳನ್ನು ಮಳೆಗರೆದರು.

ಅವಂತೀದೇಶದ ವಿಂದ ಅನುವಿಂದರನ್ನು ಹಿಂದೆ (ನಿರ್ಣಯ ೨೬.೬೧) ಅರ್ಜುನ ವಧಿಸಿದ್ದಾನೆ. ಧೃತರಾಷ್ಟ್ರ ಪುತ್ರರಾದ ವಿಂದ ಅನುವಿಂದರನ್ನು ಭೀಮ ವಧಿಸಿದ್ದಾನೆ (ನಿರ್ಣಯ ೨೬.೧೩೪) ಇದೀಗ ಕೇಕಯ ದೇಶದ ವಿಂದ ಅನುವಿಂದರು ಬಂದಿದ್ದಾರೆ.

ತಾಭ್ಯಾಂ ನಿರುದ್ಧಃ ಸಹಸಾ ಜಹಾರ
ತತ್ರಾನುವಿಂದಸ್ಯ ಶಿರೋಽಥ ವಿಂದಃ ।
ಯುಯೋಧ ಶೈನೇಯಮಥಾರಥಾವುಭೌ
ಪರಸ್ಪರಂ ಚಕ್ರತುರುತ್ತಮಾಹವೇ ॥೧೮॥

ವಿಂದ ಅನುವಿಂದರಿಂದ ತಡೆಯಲ್ಪಟ್ಟ ಸಾತ್ಯಕಿ ತಕ್ಷಣವೆ ಅನುವಿಂದನ ತಲೆಯನ್ನು ಕತ್ತರಿಸಿದ. ಬಳಿಕ ವಿಂದ ಸಾತ್ಯಕಿಯೊಡನೆ ಹೋರಾಡಿದ. ಉತ್ತಮವಾದ ಯುದ್ಧದಲ್ಲಿ ಅವರು ಒಬ್ಬರನ್ನೊಬ್ಬರು ವಿರಥರನ್ನಾಗಿ ಮಾಡಿದರು.

ತತಶ್ಚ ಚರ್ಮಾಸಿಧರೌ ಪ್ರಚೇರತುಃ
ಶ್ಯೇನೌ ಯಥಾಽಕಾಶತಲೇ ಕೃತಶ್ರಮೌ ।
ನಿಕೃತ್ಯ ಚಾನ್ಯೋನ್ಯಮುಭೌ ಚ ಚರ್ಮಣೇ
ವರಾಸಿಪಾಣೇ ಯುಗಪತ್ ಸಮೀಯತುಃ ॥೧೯॥

ಒಳ್ಳೆಯ ಶಸ್ತ್ರಾಭ್ಯಾಸ ಮಾಡಿದ್ದ ವಿಂದ ಸಾತ್ಯಕಿಗಳು ಕತ್ತಿ ಗುರಾಣಿ ಹಿಡಿದು ಆಕಾಶದಲ್ಲಿ ಗಿಡುಗಗಳು ಹೇಗೋ ಹಾಗೆ ಸಂಚರಿಸಿದರು. ಇಬ್ಬರೂ ಪರಸ್ಪರ ಗುರಾಣಿಗಳನ್ನು ತುಂಡರಿಸಿಕೊಂಡು ಉತ್ತಮ ಖಡ್ಗವನ್ನು ಕೈಯಲ್ಲಿ ಹಿಡಿದು ಒಮ್ಮೆಲೆ ಮುಂದೆ ಬಂದರು.

ಕೈಕೇಯಸ್ಯ ದ್ವಿಧಾ ಚರ್ಮ ತತಶ್ಚಿಚ್ಛೇದ ಸಾತ್ವತಃ।
ಸಾತ್ಯಕೇಸ್ತು ತಥೈವಾಸೌ ಚರ್ಮ ಚಿಚ್ಛೇದ ಪಾರ್ಥಿವಃ
(ಕರ್ಣ ೧೦.೩೩)

ಪರಸ್ಪರ ಗುರಾಣಿಗಳನ್ನು ಕತ್ತರಿಸಿಕೊಂಡರೆಂದು ಮಹಾಭಾರತ ಹೇಳುವುದರಿಂದ ನಿರ್ಣಯದಲ್ಲಿ 'ಚರ್ಮಣೇ' ಎಂಬ ವರದರಾಜೀಯ ಹೃಷಿಕೇಶತೀರ್ಥೀಯ ಪಾಠವೆ ಸರಿ. 'ವರ್ಮಣೇ' ಎಂದಲ್ಲ.

ತತ್ರಾಪಹಸ್ತೇನ ಶಿರಃ ಸಕುಂಡಲಂ
ಜಹಾರ ವಿಂದಸ್ಯ ಮೃಧೇ ಸ ಸಾತ್ಯಕಿಃ ।
ನಿಹತ್ಯ ತೌ ಬಂಧುಜನೈಃ ಸುಪೂಜಿತೋ
ಜಗಾಮ ಶತ್ರೂನಪರಾನ್ ಪ್ರಕಂಪಯನ್ ॥೨೦॥

ಸಾತ್ಯಕಿ ಯುದ್ಧದಲ್ಲಿ ವಿಂದನ ಕುಂಡಲಯುಕ್ತವಾದ ತಲೆಯನ್ನು ಅಂಗೈಯ

ಪಾರ್ಶ್ವದಿಂದಲೆ ಹಾರಿಸಿದ. ಹೀಗೆ ವಿಂದ ಅನುವಿಂದ ಇಬ್ಬರನ್ನೂ ಕೊಂದು ಸಾತ್ಯಕಿ ಬಂಧು ಜನರಿಂದ ಹೊಗಳಿಸಿಕೊಂಡು ಇತರ ಶತ್ರುಗಳನ್ನು ನಡುಗಿಸುತ್ತ ಮುಂದೆ ನಡೆದ.

ಕೃಪಮಾಯಾಂತಮೀಕ್ಷ್ಯೈವ ತಪಸಾ ಮಾಂ ಪ್ರಪೀಡಯೇತ್ ।
ಇತಿ ಮತ್ವಾ ಪಾರ್ಷತಸ್ತು ಭೀಮಂ ಶರಣಮೇಯಿವಾನ್ ॥ ೨೧ ॥

ಧೃಷ್ಟದ್ಯುಮ್ನ ತನಗೆ ಇದಿರಾಗಿ ಕೃಪ ಬರುತ್ತಿದ್ದುದನ್ನು ಕಂಡು ಅವನು ತನ್ನನ್ನು ತಪೋಬಲದಿಂದ ಬಹಳ ಪೀಡಿಸಬಹುದೆಂದು ಬಗೆದು ಭೀಮನನ್ನು ಮೊರೆಹೊಕ್ಕ.

ಕರ್ಣಂ ಸಮಂತಾತ್ ಪ್ರತಿಕಾಲಯಂತಂ
ವರೂಥಿನೀಮಿಂದ್ರಸುತಃ ಸಮಭ್ಯಯಾತ್ ।
ಕ್ಷಣಾತ್ ತಮಾಜೌ ವಿರಥಂ ಚ ಚಕ್ರೇ
ತತೋಽಪಹಾರಂ ಸ ಚಕಾರ ಚಮ್ವಾಃ ॥ ೨೨ ॥

ಸೈನ್ಯವನ್ನು ಯುದ್ಧದಲ್ಲಿ ಎಲ್ಲೆಡೆಯೂ ಮರ್ದಿಸುತ್ತಿದ್ದ ಕರ್ಣನನ್ನು ಅರ್ಜುನ ಇದಿರಿಸಿದ. ಕ್ಷಣದಲ್ಲಿ ಅವನನ್ನು ವಿರಥನನ್ನಾಗಿ ಮಾಡಿದ. ಆಗ ಕರ್ಣ ಸೈನ್ಯವನ್ನು ಹಿಂದೆ ಕರೆಸಿಕೊಂಡ.

ಹದಿನೇಳನೆ ದಿನದ ಯುದ್ಧ

ಪರಾಜಿತಃ ಸಂಯತಿ ಸೂರ್ಯಸೂನುಃ
ಸುತೇನ ಶಕ್ರಸ್ಯ ಸ ಧಾರ್ತರಾಷ್ಟ್ರಮ್ ।
ಜಗಾದ ಬಾಹುಂ ಪ್ರತಿಗೃಹ್ಯ ಪಾರ್ಥೋ
ಜಿಗಾಯ ಮಾಮನ್ಯಮನಸ್ಕಮಾಜೌ ॥ ೨೩ ॥
ಕಾಮಂ ರಥೋ ಮೇ ಧನುರಪ್ಯಭೇದ್ಯಂ
ದತ್ತಂ ಭೃಗೂಣಾಮಧಿಪೇನ ದಿವ್ಯಮ್ ।
ಯಂತಾ ನ ತಾದೃಙ್ ಮಮ ಯಾದೃಶೋ ಹರಿಃ
ಶಲ್ಯೋ ಯದಿ ಸ್ಯಾತ್ ತ್ವದರಿಂ ನಿಹನ್ಯಾಮ್ ॥ ೨೪ ॥

ಯುದ್ಧದಲ್ಲಿ ಅರ್ಜುನನಿಂದ ಪರಾಜಿತನಾದ ಕರ್ಣ ದುರ್ಯೋಧನನ ಕೈಹಿಡಿದು ಹೇಳಿದ, 'ನನ್ನ ಲಕ್ಷ್ಯ ಬೇರೆ ಕಡೆ ಇದ್ದಾಗ ಅರ್ಜುನ ನನ್ನನ್ನು ಪರಾಭವಗೊಳಿಸಿದ. ಪರಶುರಾಮ ನನಗೆ ಯಥೇಚ್ಛವಾಗಿ ರಥವನ್ನೂ ದಿವ್ಯವೂ ಅಭೇದ್ಯವೂ ಆದ ಧನುಸ್ಸನ್ನೂ ಕೊಟ್ಟಿದ್ದಾನೆ. ಆದರೂ ನನಗೆ ಕೃಷ್ಣನಂಥ ಸಾರಥಿ ಇಲ್ಲ. ಶಲ್ಯ ನನಗೆ ಸಾರಥಿಯಾದರೆ ನಾನು ನಿನ್ನ ಶತ್ರುವನ್ನು ನಿಶ್ಚಯವಾಗಿ ಕೊಲ್ಲಬಲ್ಲೆ.'

ಇತೀರಿತೇ ಸೌತ್ಯಕೃತೇ ಸ ಶಲ್ಯಂ
ಪ್ರೋವಾಚ ಸ ಕ್ರುದ್ಧ ಇವಾಭವತ್ ತದಾ ।

ದುರ್ಯೋಧನೋ ರಥಿನಃ ಸಾರಥೇಸ್ತು
ವ್ಯಾವರ್ಣಯನ್ನುತ್ತಮತಾಮಶಾಮಯತ್ ॥೨೫॥

ಕರ್ಣ ಹೀಗೆ ಹೇಳಿದಾಗ ದುರ್ಯೋಧನ ಶಲ್ಯನಲ್ಲಿ ಕರ್ಣನಿಗೆ ಸಾರಥಿಯಾಗಲು ಕೇಳಿಕೊಂಡ. ಆಗ ಶಲ್ಯ ಕೋಪಗೊಂಡವನಂತೆ ತೋರಿಕೊಂಡ. ರಥಿಕನಿಗಿಂತ ಸಾರಥಿ ಉತ್ತಮನಾಗಿರಬೇಕೆಂದು ಹೇಳುತ್ತ ದುರ್ಯೋಧನ ಅವನನ್ನು ಸಮಾಧಾನಪಡಿಸಿದ.

ಶಲ್ಯ ತಾನು ಕ್ಷತ್ರಿಯ, ಮಹಾರಥ. ಇನ್ನೊಬ್ಬನಿಗೆ ಸಾರಥಿಯಾಗುವುದು ಅದರಲ್ಲಿಯೂ ಸೂತಪುತ್ರನಾದ ಕರ್ಣನಿಗೆ ಸಾರಥಿಯಾಗುವುದು ತನ್ನ ಘನತೆಗೆ ಕುಂದು ಎಂದು ಭಾವಿಸಿದಂತೆ ತೋರಿಕೊಂಡ. ವಸ್ತುತಃ ಅವನಿಗೆ ಅದೇ ಬೇಕಾಗಿತ್ತು. ಧರ್ಮರಾಜನಿಗೆ ಮಾತು ಕೊಟ್ಟಿದ್ದಂತೆ ಕರ್ಣನ ತೇಜೋವಧೆ ಮಾಡಬೇಕಾಗಿತ್ತು.

ಬುದ್ಧ್ಯಾ ಬಲೇನ ಜ್ಞಾನೇನ ಧೈರ್ಯಾದ್ಯೈರಪಿ ಯೋಽಧಿಕಃ ।
ರಥಿನಃ ಸಾರಥಿಃ ಸ ಸ್ಯಾದರ್ಜುನಸ್ಯ ಯಥಾ ಹರಿಃ ।
ಯಥಾ ಶಿವಸ್ಯ ಬ್ರಹ್ಮಾಽಭೂದ್ ದಹತಸ್ತ್ರಿಪುರಂ ಪುರಾ ॥೨೬॥
ಇತ್ಯಾದಿವಾಕ್ಯೈಃ ಸಂಶಾಂತ ಇವ ಶಲ್ಯೋಽಸ್ಯ ಸಾರಥಿಃ ।
ಬಭೂವ ತೇನ ಸಹಿತಃ ಸೇನಾಂ ವ್ಯೂಹ್ಯ ರವೇಃ ಸುತಃ ॥೨೭॥
ಗಚ್ಛನ್ ಯುದ್ಧಾಯ ದರ್ಪೇಣ ಪ್ರಾಹ ಯೋ ಮೇಽರ್ಜುನಂ ಪುಮಾನ್ ।
ದರ್ಶಯೇತ್ ತಸ್ಯ ದಾಸ್ಯಾಮಿ ಪ್ರೀತೋ ವಿತ್ತಮನರ್ಗಲಮ್ ॥೨೮॥

ಬುದ್ಧಿ ಬಲ ಜ್ಞಾನ ಧೈರ್ಯ ಮುಂತಾದವುಗಳಿಂದ ಯಾರು ರಥಿಕನಿಗಿಂತ ಶ್ರೇಷ್ಠನಾಗಿರುವನೋ ಅವನೇ ಸಾರಥಿಯಾಗಬೇಕು. ಅರ್ಜುನನಿಗೆ ಕೃಷ್ಣ ಹೇಗೋ ಹಾಗೆ. ಹಿಂದೆ ತ್ರಿಪುರ ದಹನಕ್ಕೆ ಹೊರಟ ಶಿವನಿಗೆ ಬ್ರಹ್ಮ ಹೇಗೆ ಸಾರಥಿಯಾದನೋ ಹಾಗೆ, ನೀನೂ ಕರ್ಣನಿಗೆ ಸಾರಥಿಯಾಗಬೇಕು, ಎಂದು ಮುಂತಾದ ಮಾತುಗಳಿಂದ ಸಮಾಧಾನಗೊಂಡವನಂತೆ ತೋರಿಕೊಂಡು ಶಲ್ಯ ಕರ್ಣನಿಗೆ ಸಾರಥಿಯಾದ. ಅವನೊಡನೆ ಕೂಡಿ ಕರ್ಣ ಸೈನ್ಯವನ್ನು ವ್ಯೂಹವಾಗಿ ನಿಲ್ಲಿಸಿ ದರ್ಪದಿಂದ ಯುದ್ಧಕ್ಕೆ ಹೊರಟು ಹೇಳಿದ, 'ಯಾವ ಮನುಷ್ಯ ನನಗೆ ಅರ್ಜುನನನ್ನು ತೋರಿಸುವನೋ ಅವನಿಗೆ ನಾನು ಸಂತುಷ್ಟನಾಗಿ ಅಮಿತ ಧನಸಂಪತ್ತನ್ನು ನೀಡುವೆನು' ಎಂದ.

ಬುದ್ಧಿ ಎಂದರೆ ಸ್ವಾಭಾವಿಕವಾದ ಬುದ್ಧಿವಂತಿಕೆ. ಜ್ಞಾನ ಎಂದರೆ ಸೂತಶಾಸ್ತ್ರಾಧ್ಯಯನದಿಂದ ಪಡೆದ ಜ್ಞಾನ. ಅದರಿಂದ ಪುನರುಕ್ತಿ ಇಲ್ಲ. ಧೈರ್ಯ ನಿರಾಯುಧನಾಗಿ ರಣಾಂಗಣದಲ್ಲಿ ಸಂಚರಿಸಲು ಬೇಕು. ಅಷ್ಟು ಧೈರ್ಯ ಬರಬೇಕಾದರೆ ಬಲವೂ ಬೇಕು. ಈ ಎಲ್ಲ ಗುಣಗಳಲ್ಲಿ ನೀನು ಕರ್ಣನಿಗಿಂತ ಮಿಗಿಲು. ಕರ್ಣ ಸೂತಪುತ್ರನೆಂದು ನಾವು ನಂಬುವುದಿಲ್ಲ.

ಅವನೊಬ್ಬ ದೇವಪುತ್ರನಿರಬೇಕು. ಅವನ ಆಕಾರ ಬಲ ಪರಾಕ್ರಮಗಳು ಹಾಗೇ ಇವೆ. ಆಶ್ವಹೃದಯ ಬಲ್ಲವರಲ್ಲಿ ನೀನು ಶ್ರೇಷ್ಠ. ಕೃಷ್ಣನಿಗಿಂತಲೂ ಇಮ್ಮಡಿ ಮಿಗಿಲು. (ಕರ್ಣ ೨೩.೬೮) ಎಂದು ಮುಂತಾಗಿ ದುರ್ಯೋಧನ ಹೇಳಿದಾಗ ಶಲ್ಯ ಸಮಾಧಾನಗೊಂಡವನಂತೆ ತೋರಿಕೊಂಡ. ನಾನು ಹಿತೈಷಿಯಾಗಿ ಪ್ರಿಯವನ್ನೋ ಅಪ್ರಿಯವನ್ನೋ ಆಡಬಹುದು. ಅದನ್ನು ನೀನೂ ಕರ್ಣನೂ ಸಹಿಸಿಕೊಳ್ಳಬೇಕು ಎಂಬ ಶರ್ತದ ಮೇಲೆ ಶಲ್ಯ ಒಪ್ಪಿಗೆ ನೀಡಿದ. (ಕರ್ಣ ೨೯.೪೩)

ಇತಿ ಬ್ರುವಾಣಂ ಬಹುಶಃ ಪ್ರಾಹ ಶಲ್ಯಃ ಪ್ರಹಸ್ಯ ಚ ।
ನಿವಾತಕವಚಾ ಯೇನ ಹತಾ ದಗ್ಧಂ ಹಿ ಖಾಂಡವಮ್ ॥ ೨೯ ॥
ಕೋ ನಾಮ ತಂ ಜಯೇನ್ಮರ್ತ್ಯೋ ದೃಷ್ಟ್ವಾ ವೋಽಪಿ ಸ ಗೋಗ್ರಹೇ ।
ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ॥ ೩೦ ॥
ಮಾ ಯಾಹಿ ಪಾರ್ಥಂ ಮಾ ಯಾಹಿ ಹತೋಽನೇನ ಯಮಕ್ಷಯಮ್ ।
ಇತ್ಯುಕ್ತೋ ರವಿಜೋ ಮದ್ರಾನ್ ನಿತರಾಂ ಪರ್ಯಕುತ್ಸಯತ್ ॥ ೩೧ ॥

ಹೀಗೆ ಮತ್ತೆ ಮತ್ತೆ ಕರ್ಣ ಹೇಳಲು ತೊಡಗಿದಾಗ ಶಲ್ಯ ನಕ್ಕು ಹೇಳಿದ. 'ಅರ್ಜುನ ನಿವಾತಕವಚರನ್ನು ಕೊಂದವನು ಖಾಂಡವವನವನ್ನು ಸುಟ್ಟವನು: ಅವನನ್ನು ಯಾವ ಮಾನವ ಗೆಲ್ಲಬಲ್ಲ? ಗೋಗ್ರಹಣಕಾಲದಲ್ಲಿ ನೀವೂ ಅವನನ್ನು ನೋಡಿರುವಿರಿ ತಾನೆ? ಕಾಗೆ ನರಿಗಳಂತಿರುವ ನೀನು ಹಂಸ ಸಿಂಹಗಳಂತಿರುವ ಅರ್ಜುನನನ್ನು ಯುದ್ಧದಲ್ಲಿ ಇದಿರಿಸಲು ಹೋಗಬೇಡ. ಅವನಿಂದ ಹತನಾಗಿ ಯಮಲೋಕಕ್ಕೆ ಹೋಗಬೇಡ'. ಹೀಗೆ ಶಲ್ಯ ಹೇಳಿದಾಗ ಕರ್ಣ ಮದ್ರದೇಶದ ಜನರನ್ನು ಬಹಳ ಹೀನಾಯವಾಗಿ ತೆಗಳಿದ.

ಮೊಲಗಳ ಹಿಂಡಿನಲ್ಲಿ ನರಿ ತನ್ನನ್ನು ಸಿಂಹವೆಂದು ತಿಳಿಯುತ್ತದೆ. ಸಿಂಹವನ್ನು ನೋಡುವವರೆಗೆ ಮಾತ್ರ (ಕರ್ಣ ೩೩.೩೧) ಹಾಗೇ ನೀನು. ನೀನು ಯಾವಾಗಲೂ ನರಿಯೆ, ಅರ್ಜುನ ಸಿಂಹವೆ (ಕರ್ಣ ೩೩.೩೬) ವೈಶ್ಯಬಾಲಕರ ಎಂಜಲು ತಿಂದು ಪುಷ್ಟವಾದ ಕಾಗೆ ಹಂಸದೊಡನೆ ಸಮುದ್ರ ಹಾರುವ ಸ್ಪರ್ಧೆಗೆ ಇಳಿದು ನಡುನೀರಲ್ಲಿ ಮುಳುಗುತ್ತಿದ್ದಾಗ ಹಂಸವೆ ಎತ್ತಿಕೊಂಡು ಬಂದು ದಡ ಸೇರಿಸಿತು. ನೀನೂ ಹಾಗೇ ದುರ್ಯೋಧನ ಎಂಜಲುಂಡ ಕಾಗೆ (ಕರ್ಣ ೩೫.೭೧) ಘೋಷಯಾತ್ರೆ, ಗೋಗ್ರಹಣ ಕಾಲಗಳಲ್ಲಿ ನಿನ್ನ ಬಣ್ಣ ಬಯಲಾಗಿತ್ತು ಎಂದು ಶಲ್ಯ ನುಡಿದ. ಆಗ ಕರ್ಣ ಶಲ್ಯನ ಮದ್ರದೇಶವನ್ನೆ ಅನಾಚಾರಿಗಳ ದೇಶವೆಂದು ತೆಗಳಿದ.

ಶಲ್ಯೋಽಪಿ ಸರ್ವದೇಶೇಷು ನೀಚಮಧ್ಯೋತ್ತಮಾ ನರಾಃ ।
ಸಂತೀತ್ಯುಕ್ತ್ವಾಽಸ್ಯ ಸಾರಥ್ಯಂ ಚಕ್ರೇ ಪಾರ್ಥಹಿತೇಪ್ಸಯಾ ॥ ೩೨ ॥

ಶಲ್ಯ 'ಎಲ್ಲ ದೇಶಗಳಲ್ಲಿಯೂ ನೀಚರು ಮಧ್ಯಮರು ಉತ್ತಮರೆಂದು ಎಲ್ಲ ಬಗೆಯ ಜನರಿರುತ್ತಾರೆ' ಎಂದು ಹೇಳಿ ಪಾಂಡವರ ಹಿತದ ಬಯಕೆಯಿಂದ ಕರ್ಣನಿಗೆ ಸಾರಥ್ಯವನ್ನು ಮಾಡಿದ.

'ಒಂದು ದೇಶದ ಜನರೆಲ್ಲರೂ ಪಾಪಿಗಳಾಗಿರುವುದಿಲ್ಲ. ಎಲ್ಲ ದೇಶಗಳಲ್ಲಿಯೂ ಧಾರ್ಮಿಕರಿರುತ್ತಾರೆ' ಎನ್ನುತ್ತಾನೆ, ಶಲ್ಯ

(ಕರ್ಣ ೩೮.೪೪)

ಕರ್ಣೋಽಥ ಶಲ್ಯನಿಯತೇನ ರಥೇನ ಪಾರ್ಥ
ಸೇನಾಮವಾಪ್ಯ ವಿದುಧಾವ ಶರೈಃ ಸಮಂತಾತ್ ।
ಸಂರಕ್ಷಿತೋ ಯುಧಿ ಸುಯೋಧನಗೌತಮಾದ್ಯೈ-
ರಾಚಾರ್ಯಜೇನ ಚ ಮಹಾಸ್ತ್ರವಿದಾಂ ವರೇಣ ॥ ೩೩ ॥

ದುರ್ಯೋಧನಕೃಪ ಮುಂತಾದವರಿಂದಲೂ ಮಹಾ ಅಸ್ತ್ರವೇತ್ತರಲ್ಲಿಯೆ ಅಗ್ರಗಣ್ಯನಾದ ಅಶ್ವತ್ಥಾಮನಿಂದಲೂ ಯುದ್ಧದಲ್ಲಿ ರಕ್ಷಿತನಾದ ಕರ್ಣ ಶಲ್ಯ ನಡೆಸುತ್ತಿದ್ದ ರಥದಿಂದ ಪಾಂಡವರ ಸೈನ್ಯವನ್ನು ಹೊಕ್ಕು ಎಲ್ಲೆಡೆ ಬಾಣಗಳಿಂದ ಮರ್ದಿಸಿದ.

ತಂ ಭೀಮಪಾರ್ಷತಶಿನಿಪ್ರವರಾಭಿಗುಪ್ತಾ
ಸಾ ಪಾಂಡವೇಯಪೃತನಾಽಭಿವವರ್ಷ ಬಾಣೈಃ ।
ತಾಂ ಸೂರ್ಯಸೂನುರಥ ಬಾಣವರೈರ್ವಿದಾರ್ಯ
ಸಂಪ್ರಾರ್ದಯಚ್ಛಿತಶರೈರಪಿ ಧರ್ಮಸೂನುಮ್ ॥ ೩೪ ॥

ಭೀಮ ಧೃಷ್ಟದ್ಯುಮ್ನ ಸಾತ್ಯಕಿಯರಿಂದ ರಕ್ಷಿತವಾದ ಪಾಂಡವರ ಸೈನ್ಯ ಕರ್ಣನ ಮೇಲೆ ಬಾಣಗಳ ಮಳೆಗರೆಯಿತು. ಆ ಸೈನ್ಯವನ್ನು ಕರ್ಣ ಉತ್ತಮ ಬಾಣಗಳಿಂದ ಕಂಗೆಡಿಸಿ ಧರ್ಮರಾಜನನ್ನು ಹರಿತವಾದ ಬಾಣಗಳಿಂದ ಚೆನ್ನಾಗಿ ಪೀಡಿಸಿದ.

ಧರ್ಮರಾಜನ ಬಾಣಕ್ಕೆ ಕರ್ಣ ಮೂರ್ಛೆಗೊಂಡು ಶವದಂತೆ ಬಿದ್ದ. ಆದರೆ ಅರ್ಜುನನ ಪ್ರತಿಜ್ಞೆಯನ್ನು ನೆನೆದು ಧರ್ಮರಾಜ ಮುಂದೆ ಹೆಚ್ಚು ಪೀಡಿಸಲಿಲ್ಲ. ಕರ್ಣ ಎದ್ದು ಧರ್ಮರಾಜನ ಚಕ್ರರಕ್ಷಕರಾದ ಚಂದ್ರದೇವ ದಂಡಧಾರರನ್ನು ಕೊಂದು, ನಾಲ್ಕೂ ಕುದುರೆಗಳನ್ನೂ ಸಾರಥಿಯನ್ನೂ ಕೊಂದ. ಧರ್ಮರಾಜ ಪಲಾಯನ ಮಾಡತೊಡಗಿದ.

ಕೃತ್ವಾ ತಮಾಶು ವಿರಥಂ ಧನುರಸ್ಯ ಕಂಠೇ
ಸಜ್ಯಂ ನಿಧಾಯ ಪರುಷಾ ಗಿರ ಆಹ ಚೋಚ್ಚೈಃ ।
ದೃಷ್ಟೈವ ಮಾರುತಿರಮುಂ ಭೃಶಮಾತುತೋದ
ದುರ್ಯೋಧನಂ ವಿರಥಕಾರ್ಮುಕಮತ್ರ ಕೃತ್ವಾ ॥ ೩೫ ॥

ಕರ್ಣ ಧರ್ಮರಾಜನನ್ನು ಬೇಗನೆ ವಿರಥನನ್ನಾಗಿ ಮಾಡಿ ಹೆದೆಯೇರಿಸಿದ ಬಿಲ್ಲನ್ನು ಅವನ ಕುತ್ತಿಗೆಗೆ ಹಾಕಿ ಗಟ್ಟಿಯಾಗಿ ಕಟುವಾದ ಮಾತುಗಳನ್ನಾಡಿದ. ಅವನನ್ನು ಕಂಡು ಭೀಮ ಬೇಗನೆ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಅವನ ಬಿಲ್ಲನ್ನು ಮುರಿದು ಬಹಳವಾಗಿ ಪೀಡಿಸಿದ.

'ಧರ್ಮರಾಜ, ನೀನು ಕ್ಷತ್ರಿಯನಂತೆ ಯುದ್ಧ ಮಾಡಲು ಯೋಗ್ಯನಲ್ಲ. ಬ್ರಾಹ್ಮಣನಂತೆ ವೇದಾಧ್ಯಯನ ಯಜ್ಞಗಳನ್ನು ಮಾಡು. ಅಥವಾ ಕೃಷ್ಣಾರ್ಜುನರ ಬಳಿಗೆ ಹೋಗಿ ಅಲ್ಲಿಯೆ ಯುದ್ಧ ಮಾಡು. ಅವರು ಕಾಪಾಡುತ್ತಾರೆ. ನಿನ್ನಂಥ ಹೇಡಿಯನ್ನು ಕರ್ಣ ಕೊಲ್ಲುವುದಿಲ್ಲ' ಈ ಕಟು ನುಡಿಗಳನ್ನು ಹತ್ತಿರದಲ್ಲಿಯೆ ಹೋರಾಡುತ್ತಿದ್ದ ಭೀಮ ದುರ್ಯೋಧನರು ಕೇಳಲಿ ಎಂದೇ ಗಟ್ಟಿಯಾಗಿ ಹೇಳಿದ್ದ. ಆಗ ಭೀಮ 'ಒಂದು ತಕ್ಕಡಿ ಮೇಲೆ ಹೋದರೆ ಇನ್ನೊಂದು ಕೆಳಗೆ ಬರಲೇ ಬೇಕು, ದುರ್ಯೋಧನನಿಗೆ ಪ್ರಾಣಸಂಕಟ ಉಂಟು ಮಾಡಿದರೆ ಕರ್ಣ ತಾನಾಗಿಯೆ ಧರ್ಮರಾಜನನ್ನು ಬಿಟ್ಟು ಬಿಡುತ್ತಾನೆ. ಹೆಚ್ಚು ಪೀಡಿಸುವುದಿಲ್ಲ.' ಎನ್ನುವ ಅಭಿಪ್ರಾಯದಿಂದ ದುರ್ಯೋಧನನಿಗೆ ಪ್ರಾಣಸಂಕಟ ನೀಡಿದ. ಇದರಿಂದ ಕರ್ಣನನ್ನು ಧರ್ಮರಾಜನಿಂದ ದೂರಮಾಡಿದಂತೆಯೂ ಆಯಿತು. ದುರ್ಯೋಧನನಿಗೆ ಪೀಡೆ ನೀಡಿದಂತೆಯೂ ಆಯಿತೆಂದು ಭೀಮ ಕರ್ಣನ ಬಳಿಗೆ ಹೋಗಲಿಲ್ಲ.[1]

ತಂ ಪ್ರಾಣಸಂಶಯಗತಂ ನೃಪತಿಂ ನಿರೀಕ್ಷ್ಯ
ಕರ್ಣಂ ಜಗಾದ ಯುಧಿ ಮದ್ರಪತಿಃ ಪ್ರದರ್ಶ್ಯ ।
ಯಸ್ಯಾರ್ಥ ಏವ ಸಮರಸ್ತ್ವಮಿಯಂ ಚ ಸೇನಾ
ತಂ ತ್ವಂ ಯಮಸ್ಯ ಸದನಂ ಪ್ರಯಿಯಾಸುಮದ್ಯ ॥೩೬॥
ಭೀಮೇನ ಪೀಡಿತಮಮುಂ ಪರಿಪಾಹಿ ಶೀಘ್ರಂ
ಕಿಂ ತೇ ಯುಧಿಷ್ಠಿರಮಿಮಂ ಹಿ ಮುಧಾಽಭಿಪೀಡ್ಯ ।
ಶ್ರುತ್ವಾಽಸ್ಯ ವಾಕ್ಯಮತಿಹಾಯ ಯುಧಿಷ್ಠಿರಂ ತಂ
ಕರ್ಣೋ ಯಯೌ ನೃಪತಿರಕ್ಷಣತತ್ಪರೋಽಲಮ್ ॥೩೭॥

ಯುದ್ಧದಲ್ಲಿ ದುರ್ಯೋಧನ ಪ್ರಾಣಸಂಕಟದಲ್ಲಿ ಬಿದ್ದುದನ್ನು ಕಂಡು ಶಲ್ಯ ಕರ್ಣನಿಗೆ ಅವನನ್ನು ತೋರಿಸಿ ಹೇಳಿದ. 'ಈ ಯುದ್ಧವನ್ನು ನೀನು ಯಾರಿಗಾಗಿ ಮಾಡುತ್ತಿರುವೆಯೋ,

1. ಭಾರೇಣೈಕತುಲೋನ್ನಮನೇಽಪರತುಲಾವನಮನವದ್ ದುರ್ಯೋಧನಸ್ಯ ಪ್ರಾಣಸಂಕಟೇ ಕಾರಿತೇ ಕರ್ಣೋ ಯುಧಿಷ್ಠಿರಂ ವಿಹಾಯ ಸ್ವಯಮೇವಾಯಾಸ್ಯತೀತಿ ಬುದ್ಧ್ಯಾ ದುರ್ಯೋಧನಸ್ಯೈವ ಪ್ರಾಣಸಂದೇಹಂ ಕಾರಿತವಾನಿತಿ ಭಾವಃ। ಕರ್ಣಾಪಸರಣ ದುರ್ಯೋಧನ ಪ್ರಾಣಸಂಕಟಾಖ್ಯ ಕಾರ್ಯದ್ವಯ ಲಾಭಾತ್ ಕೇವಲ ಕರ್ಣಾಪಸರಣಾಯ ನ ಗತವಾನಿತಿ ಭಾವಃ।-ವಾದಿರಾಜೀಯ

ನೀನೂ ಈ ಸೇನೆಯೂ ಯಾರಿಗಾಗಿ ಇವೆಯೊ ಆ ದುರ್ಯೋಧನ ಭೀಮನಿಂದ ಪೀಡಿತನಾಗಿ ಈಗ ಯಮ ಲೋಕಕ್ಕೆ ಹೋಗಲು ಸಿದ್ಧನಾಗಿದ್ದಾನೆ. ಅವನನ್ನು ಬೇಗನೆ ಕಾಪಾಡು ಈ ಧರ್ಮರಾಜನನ್ನು ವ್ಯರ್ಥವಾಗಿ ಪೀಡಿಸಿ ನಿನಗೇನು ಲಾಭ? ಎಂದು. ಶಲ್ಯನ ಮಾತನ್ನು ಕೇಳಿ ಕರ್ಣ ಧರ್ಮರಾಜನನ್ನು ಬಿಟ್ಟು ದುರ್ಯೋಧನನ ರಕ್ಷಣೆಯಲ್ಲಿ ತತ್ಪರನಾಗಿ ಧಾವಿಸಿದ.

ದೃಷ್ಟ್ವೈವ ತಂ ಪವನಸೂನುರಭಿ ತ್ವಿಯಾಯ
ಕ್ರೋಧಾದ್ ದಿಧಕ್ಷುರಿವ ಕರ್ಣಮಮೇಯಧಾಮಾ ।
ರಾಜಾವನಾಯ ಶಿನಿಪುಂಗವಪಾರ್ಷತೌ ಚ
ಸಂದಿಶ್ಯ ಕರ್ಣಮಭಿಗಚ್ಛತ ಆಸ ರೂಪಮ್ ॥೩೮॥
ಅಂತೇ ಕೃತಾಂತನರಸಿಂಹತನೋರ್ಯಥೈವ
ವಿಷ್ಣೋರ್ಹರಂ ಗ್ರಸತ ಆತ್ತಸಮಸ್ತವಿಶ್ವಮ್ ।
ತದ್ವೇಗತಃ ಪ್ರತಿಚಚಾಲ ಧರಾ ಸಮಸ್ತಾ
ವಿದ್ರಾವಿತಾ ಚ ಸಕಲಾ ಪ್ರತಿವೀರಸೇನಾ ॥೩೯॥

ಅಪರಿಮಿತ ಪರಾಕ್ರಮಿಯಾದ ಭೀಮ ಕರ್ಣನನ್ನು ನೋಡಿದೊಡನೆ ಕೋಪದಿಂದ ಸುಡಲು ಬಯಸಿದಂತೆ ಮೇಲೇರಿ ಹೋದ. ಧರ್ಮರಾಜನ ರಕ್ಷಣೆಗೆ ಸಾತ್ಯಕಿ ಧೃಷ್ಟದ್ಯುಮ್ನರನ್ನು ಕಳಿಸಿ ಕರ್ಣನ ಮೇಲೆರಗಿದ ಆ ಭೀಮನ ರೂಪ ಪ್ರಲಯಕಾಲದಲ್ಲಿ ಸಮಸ್ತ ಪ್ರಪಂಚ ಲಯಗೈದ ಹರನನ್ನು ನುಂಗಲು ಬರುವ ಲಯಮೂರ್ತಿ ನರಸಿಂಹರೂಪನಾದ ಹರಿಯ ರೂಪದಂತಿತ್ತು. ಅವನ ವೇಗದಿಂದ ಇಡಿ ಭೂಮಿಯೆ ಕಂಪಿಸಿತು. ಶತ್ರುಸೇನೆ ಎಲ್ಲವೂ ಪಲಾಯನಗೈದಿತು.

ವೈಕರ್ತನೇನ ಶರಸಂಚಯತಾಡಿತಃ ಸ
ಬಾಣಂ ಚ ವಜ್ರಸದೃಶಂ ಪ್ರಮುಮೋಚ ತಸ್ಮಿನ್ ।
ತೇನಾಽಹತೋ ಮೃತಕವತ್ ಸ ಪಪಾತ ಕರ್ಣೋರ್ವ್ಯಾಂ
ಭೀಮಃ ಕ್ಷುರಂ ಚ ಜಗೃಹೇಽಭಿಯಯೌ ಚ ಪದ್ಭ್ಯಾಮ್ ॥೪೦॥

ಕರ್ಣ ಭೀಮನನ್ನು ಬಾಣ ಸಮೂಹಗಳಿಂದ ಹೊಡೆದಾಗ ಭೀಮ ಅವನ ಮೇಲೆ ವಜ್ರ ಸಮಾನವಾದ ಬಾಣವನ್ನು ಎಸೆದ. ಅದರ ಆಘಾತದಿಂದ ಕರ್ಣ ಶವದಂತೆ ಬಿದ್ದ. ಭೀಮ ಕತ್ತಿಯನ್ನು ಎತ್ತಿಕೊಂಡ. ಕಾಲು ನಡೆಯಿಂದ ಕರ್ಣನ ಬಳಿಗೆ ನಡೆದ.

ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋಽಪಿ
ಯಸ್ತಂ ಪ್ರಗೃಹ್ಯ ಕರವಾಣಿ ವಿಜಿಹ್ವಮೇವ ।
ಏವಂ ಹಿ ವಾಯುತನಯಸ್ಯ ಸದಾಪ್ರತಿಜ್ಞಾ
ಛೇತ್ತುಂ ಸ ತೇನ ರವಿಜಸ್ಯ ಸಸಾರ ಜಿಹ್ವಾಮ್ ॥೪೧॥

ಹಿಂದಿನಿಂದಾಗಲಿ ಹರಿಯ ಬಗ್ಗೆ ಹೀನಾಯವಾಗಿ ಆಡಿಕೊಳ್ಳುವವನನ್ನು ಹಿಡಿದು ಅವನ

ನಾಲಿಗೆ ಕೊಯ್ಯುತ್ತೇನೆ ಎಂಬುದು ಭೀಮನ ಸಾರ್ವಕಾಲಿಕ ಪ್ರತಿಜ್ಞೆಯಾಗಿತ್ತು. ಅದರಿಂದ ಕರ್ಣನ ನಾಲಿಗೆ ಕೊಯ್ಯಲು ಭೀಮ ಅವನ ಬಳಿಗೆ ನಡೆದ.

'ಈಗ ಎಲ್ಲಿ ನಿಮ್ಮ ರಕ್ಷಕನಾದ ಕೃಷ್ಣ?' ಎಂದು ಮುಂತಾಗಿ ಹರಿಯ ನಿಂದೆಯನ್ನು ಕರ್ಣ ಭೀಮನ ಎದುರಿನಲ್ಲಿಯೆ ಅವನಿಗೆ ಕೇಳಿಸುವಂತೆ ಮಾಡಿದ್ದಾನೆ. ಮತ್ತು ಪರಮವೈಷ್ಣವನಾದ ಅಣ್ಣ ಧರ್ಮರಾಜನ ನಿಂದೆ ಮಾಡಿದ್ದೂ 'ತದ್ಭಕ್ತದ್ವೇಷ ಏವ ಚ' ಎಂಬಂತೆ ಹರಿನಿಂದೆಯೆ ಆಗುತ್ತದೆ. ಹೀಗೆ ಎರಡು ಬಗೆಯಿಂದಲೂ ಹರಿನಿಂದೆಯನ್ನು ಕರ್ಣ ಮಾಡಿದ್ದರಿಂದ ಭೀಮನಿಗೆ ಮಹಾಕೋಪ.[1]

ಆಯಾಂತಮಂತಿಕಮಮುಂ ಪ್ರಸಮೀಕ್ಷ್ಯ ಶಲ್ಯೋ
ನೇತ್ಯಾಹ ಹೇತುಭಿರಹೋ ನ ಮೃಷಾ ಪ್ರತಿಜ್ಞಾ।
ಕಾರ್ಯಾ ತ್ವಯೈವ ಪುರೂಹೂತಸುತಸ್ಯ ಜಿಹ್ವಾಂ
ಮಾ ತೇನ ಪಾತಯ ಮರುತ್ಸುತ ಸೂತಸೂನೋಃ ॥೪೨॥

ಭೀಮಸೇನ ಸಮೀಪಕ್ಕೆ ಬರುತ್ತಿದ್ದುದನ್ನು ಕಂಡು ಶಲ್ಯ ಯುಕ್ತಿಯುಕ್ತವಾಗಿ ನುಡಿದ.

'ಬೇಡ ಭೀಮ, ನೀನೆ ಅರ್ಜುನನ ಪ್ರತಿಜ್ಞೆಯನ್ನು ಸುಳ್ಳು ಮಾಡುವುದು ಯುಕ್ತವಲ್ಲ. ಅದರಿಂದ ಕರ್ಣನ ನಾಲಿಗೆಯನ್ನು ಕತ್ತರಿಸಬೇಡ.'

'ನಾಲಿಗೆಯನ್ನು ಕತ್ತರಿಸಿದರೆ ಅಭಿಮಾನಿಯಾದ ಕರ್ಣ ಬದುಕಿರಲಾರ. ಬದುಕಿದರೂ ಅಂಗವಿಕಲನಾದ ಆತನನ್ನು ಅರ್ಜುನ ಕೊಂದರೆ ಅದು ವೀರರಿಗೆ ಶೋಭೆ ತರುವುದಿಲ್ಲ. ಅರ್ಜುನನ ಪ್ರತಿಜ್ಞೆ ಚೆನ್ನಾಗಿ ಈಡೇರುವಂತೆ ಮಾಡಬೇಕಾದವನು ಅಣ್ಣನಾದ ನೀನೆ. ನೀನೆ ಕರ್ಣನ ನಾಲಿಗೆ ಕತ್ತರಿಸಿ ಅರ್ಜುನನ ಪ್ರತಿಜ್ಞೆಯನ್ನು ಹಾಳಾಗುವಂತೆ

---

1. ಉಚ್ಚೈಃ ಪರುಷಾ ವಾಚ ಇತಿ ವದತಾ ಕ್ವೇದಾನೀಂ ಭವತಾಂ ರಕ್ಷಕಃ ಕೃಷ್ಣ ಇತ್ಯಾದಿ ಹರ್ಯವಜ್ಞಾರೂಪ ವಾಕ್ಯಮಪ್ಯುಕ್ತಂ ಇತಿ ಸೂಚಿತಂ। ಇದಮೇವ ಹ್ಯೇಕಾಂತಭಕ್ತಾನಾಂ ಶ್ರೋತ್ರಯೋರುಚ್ಚೈಃ ಪರುಷರೂಪಂ ವಚನಂ।

ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ
ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ।
ಪ್ರಾದುರ್ಭಾವ ವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ।

ಇತಿ ವಚನಾತ್ ಪರಮವೈಷ್ಣವ ಸ್ಯಾಗ್ರಜ ನಿಂದಾಪಿ ವಿಷ್ಣುನಿಂದೈವ। ಏವಂ ಚೋಭಯಥಾಪಿ ವಿಷ್ಣುನಿಂದಾಯಾ ಅಧುನೈವ ಕರ್ಣೇನ ಕೃತತ್ವಾತ್ ಭೀಮಸ್ಯ ಮಹಾನ್ ಕೋಪೋಽ ಭೂದಿತಿ ಭಾವೇನಾಹ ನಿಂದಾಂ ಹರೇಸ್ತ್ವಿತಿ। -ವಾದಿರಾಜೀಯ

ಮಾಡಬಹುದೆ?' ಎಂದು ಶಲ್ಯ ಯುಕ್ತಿಯುಕ್ತವಾಗಿ ನುಡಿದ.[1]

ಇತ್ಯುಕ್ತ್ವಪ್ರಮುಖಾತ್ ತಸ್ಯ ರಥೇನೈವ ತು ಮದ್ರರಾಟ್ ।
ವೈಕರ್ತನಮಪೋವಾಹ ಸರ್ವಲೋಕಸ್ಯ ಪಶ್ಯತಃ ॥ ೪೩ ॥

ಹೀಗೆ ಹೇಳಿ ಶಲ್ಯ ಎಲ್ಲ ಜನರು ನೋಡುತ್ತಿದ್ದಂತೆಯೆ ಕರ್ಣನನ್ನು ರಥದಿಂದ ಭೀಮನ ಇದಿರಿನಿಂದ ಆಚೆಗೆ ಒಯ್ದ.

ಜಿತ್ವಾ ಸೂರ್ಯಸುತಂ ಭೀಮಃ ಕೌರವಾಣಾಮನೀಕಿನೀಮ್ ।
ಸರ್ವಾಂ ವಿದ್ರಾವಯಾಮಾಸ ದ್ರೌಣಿದುರ್ಯೋಧನಾವೃತಾಮ್ ॥ ೪೪ ॥

ಭೀಮ ಹೀಗೆ ಕರ್ಣನನ್ನು ಗೆದ್ದು ಅಶ್ವತ್ಥಾಮ ದುರ್ಯೋಧನರಿಂದ ಯುಕ್ತವಾದ ಕೌರವರ ಸೈನ್ಯವೆಲ್ಲವನ್ನೂ ಓಡಿಸಿದ.

ಅರ್ಜುನ ಅಶ್ವತ್ಥಾಮರ ಯುದ್ಧ

ಅಕ್ಷೌಹಿಣೀತ್ರಯಂ ತೇನ ತದಾ ವಿಲುಲಿತಂ ಕ್ಷಣಾತ್ ।
ತದೈವ ಗುರುಪುತ್ರೋಽಯಾತ್ ಪಾಂಡವಾನಾಮನೀಕಿನೀಮ್ ॥ ೪೫ ॥

ಭೀಮ ಆಗ ಕ್ಷಣದಲ್ಲಿ ಮೂರು ಅಕ್ಷೌಹಿಣಿ ಸೈನ್ಯವನ್ನು ನಾಶಪಡಿಸಿದ್ದ. ಆಗಲೆ ಅಶ್ವತ್ಥಾಮ ಪಾಂಡವ ಸೈನ್ಯವನ್ನು ಹೊಕ್ಕ.

ವಿಮೃದ್ಯ ಸಕಲಾಂ ಸೇನಾಂ ಕೃತ್ವಾ ಚ ವಿರಥಂ ನೃಪಮ್ ।
ಧೃಷ್ಟದ್ಯುಮ್ನಂ ಯಮೌ ಚೈವ ಸಾತ್ಯಕಿಂ ದ್ರೌಪದೀಸುತಾನ್ ।
ಕ್ಷಣೇನ ವಿರಥೀಕೃತ್ಯ ಸರ್ವಾಂಶ್ಚಕ್ರೇ ನಿರಾಯುಧಾನ್ ॥ ೪೬ ॥

ಅಶ್ವತ್ಥಾಮ ಎಲ್ಲ ಸೈನ್ಯವನ್ನೂ ಮರ್ದಿಸಿ ಯುಧಿಷ್ಠಿರನನ್ನು ವಿರಥನನ್ನಾಗಿ ಮಾಡಿ ಧೃಷ್ಟದ್ಯುಮ್ನ ನಕುಲ ಸಹದೇವ ಸಾತ್ಯಕಿ ದ್ರೌಪದೀಪುತ್ರರೆಲ್ಲರನ್ನೂ ಕ್ಷಣದಲ್ಲಿ ವಿರಥರನ್ನಾಗಿ ಮಾಡಿ ನಿರಾಯುಧರನ್ನಾಗಿಯೂ ಮಾಡಿದ.

ತಾನ್ ಭಗ್ನದರ್ಪಾನ್ ರಣತೋಽಪಯಾತಾ-
ನನ್ವೇವ ಬಾಣಾವೃತಮಂತರಿಕ್ಷಮ್ ।
ಕುರ್ವನ್ ಯಯೌ ಧರ್ಮರಾಜಸ್ತಮಾಹ
ಕಿಂ ನಃ ಸ್ವಧರ್ಮೇ ನಿರತಾನ್ ವಿಹಂಸಿ ॥ ೪೭ ॥

ದರ್ಪವನ್ನು ಕಳೆದುಕೊಂಡು ಪಲಾಯನ ಮಾಡುತ್ತಿದ್ದ ಧೃಷ್ಟದ್ಯುಮ್ನಾದಿಗಳನ್ನು

---

1. ಜಿಹ್ವಾಚ್ಛೇದೇಽಭಿಮಾನೀ ಕರ್ಣೋ ನ ಜೀವೇತ್। ಛಿನ್ನಜಿಹ್ವಸ್ಯಾಂಗ ಹೀನತ್ವೇನ ತದ್ವಧೋಽಪಿ ವೀರಾಣಾಮನುಚಿತಃ। ಏವಂ ಚತ್ವಯೈವ ಕರ್ಣಸ್ಯ ಜಿಹ್ವಾಚ್ಛೇದೇ ದ್ವೇಧಾಽಪ್ಯರ್ಜುನಪ್ರತಿಜ್ಞಾ ವ್ಯರ್ಥಾ ಸ್ಯಾತ್। ತೇನ ಕಾರಣೇನ ಸೂರ್ಯಸುತಸ್ಯ ಜಿಹ್ವಾಂ ಮಾ ಪಾತಯೇತಿ ಯೋಜನಾ।
-ವಾದಿರಾಜೀಯ

ಅಶ್ವತ್ಥಾಮ ಬೆನ್ನಟ್ಟಿ ಅಂತರಿಕ್ಷವನ್ನು ಬಾಣಗಳಿಂದ ಮುಚ್ಚುತ್ತ ನಡೆದ. ಆಗ ಧರ್ಮರಾಜ ಅವನಿಗೆ ಹೇಳಿದ. 'ಸ್ವಧರ್ಮನಿರತರಾದ ನಮ್ಮನ್ನು ಏಕೆ ಹಿಂಸಿಸುವಿ?'

ಕ್ಷತ್ರಿಯಾನ್ ಪರಧರ್ಮಸ್ಥೋ ಮಾ ಹಿಂಸೀರಿತಿ ಚೋದಿತಃ ।
ಪ್ರಹಸ್ಯ ತಾನ್ ವಿಹಾಯೈವ ಯಯೌ ಯತ್ರಾಚ್ಯುತಾರ್ಜುನೌ ॥ ೪೮ ॥

'ಪರಧರ್ಮದಲ್ಲಿದ್ದು ಕ್ಷತ್ರಿಯರನ್ನು ಹಿಂಸಿಸಬೇಡ' ಎಂದು ಧರ್ಮರಾಜ ಹೇಳಿದಾಗ ಅಶ್ವತ್ಥಾಮ ನಕ್ಕು ಅವರನ್ನು ಬಿಟ್ಟು ಕೃಷ್ಣಾರ್ಜುನರಿದ್ದಲ್ಲಿಗೆ ನಡೆದ.

ವೇದವ್ಯಾಸರ ಆಜ್ಞೆಯಿರುವುದರಿಂದ ಪರಧರ್ಮವೂ ನನಗೆ ಸ್ವಧರ್ಮವೇ ಎಂದು ನಕ್ಕ.

ಸಂಶಪ್ತಕೈಸ್ತತ್ರ ಸಂಯುದ್ಧ್ಯಮಾನಂ
ಸಮಾಹ್ವಯಾಮಾಸ ಸುರೇಶಸೂನುಮ್ ।
ಸ ಬಾಣಯುಕ್ತಂ ಭುಜಗೇಂದ್ರಕಲ್ಪ-
ಮುನ್ನಮ್ಯ ಬಾಹುಂ ಯುಧಯೇ ಸುಶೂರಮ್ ॥ ೪೯ ॥

ಬಾಣಯುಕ್ತವಾದ, ದೊಡ್ಡ ಹಾವಿನಂಥ ತೋಳನ್ನೆತ್ತಿಕೊಂಡು ಸಂಶಪ್ತಕರೊಡನೆ ಅಶ್ವತ್ಥಾಮ ಯುದ್ಧ ಮಾಡುತ್ತಿದ್ದ ಮಹಾಶೂರ ಅರ್ಜುನನನ್ನು ಯುದ್ಧಕ್ಕೆ ಕರೆದ.

ಪಾರ್ಥಃ ಸಂಶಪ್ತಕಗಣೈಃ ಸಂಸೃಷ್ಟಃ ಸಮರಾರ್ಥಿಭಿಃ ।
ಆಹೂತೋ ದ್ರೌಣಿನಾ ಚೈವ ಕಾರ್ಯಂ ಕೃಷ್ಣಮಪೃಚ್ಛತ ।
ಚೋದಯಾಮಾಸ ಚ ಹಯಾನ್ ಕೃಷ್ಣೋ ದ್ರೌಣಿರಥಂ ಪ್ರತಿ ॥ ೫೦ ॥

ಯುದ್ಧಾರ್ಥಿಗಳಾದ ಸಂಶಪ್ತಕರೊಡನೆ ಅರ್ಜುನ ಯುದ್ಧ ನಿರತನಾಗಿದ್ದ. ಅಶ್ವತ್ಥಾಮನಿಂದಲೂ ಕರೆಬಂದಾಗ ಕೃಷ್ಣನನ್ನು ಕೇಳಿದ. 'ಈಗ ನಾನೇನು ಮಾಡಲಿ?' ಎಂದು. ಶ್ರೀಕೃಷ್ಣ ಅಶ್ವತ್ಥಾಮನ ರಥದ ಕಡೆಗೆ ರಥವನ್ನು ನಡೆಸಿದ.

ಉಭೌ ಚ ತಾವಸ್ತ್ರವಿದಾಂ ಪ್ರಧಾನೌ
ಮಹಾಬಲೌ ಸಂಯತಿ ಜಾತದರ್ಪೌ ।
ಶರೈಃ ಸಮಸ್ತಾಃ ಪ್ರದಿಶೋ ದಿಶಶ್ಚ
ದ್ರೌಣೇಂದ್ರಸೂನೂ ತಿಮಿರಾಃ ಪ್ರಚಕ್ರತುಃ ॥ ೫೧ ॥

ಅಶ್ವತ್ಥಾಮ ಅರ್ಜುನರು ಇಬ್ಬರೂ ಅಸ್ತ್ರವೇತ್ತರಲ್ಲಿ ಅಗ್ರಗಣ್ಯರು. ಮಹಾಬಲಿಷ್ಠರು. ಯುದ್ಧದಲ್ಲಿ ದರ್ಪಹೊಂದಿದವರು. ಬಾಣಗಳಿಂದ ಎಲ್ಲ ದಿಕ್ಕು ವಿದಿಕ್ಕುಗಳನ್ನೂ ಕತ್ತಲು ಕವಿಸಿದರು.

ದ್ರೌಣಿಸ್ತದಾ ಸ್ಯಂದನವಾಜಿರೋಮ
ಸ್ವರೋಮಕೂಪಧ್ವಜಕಾರ್ಮುಕೇಭ್ಯಃ ।

ಶರಾನಮೋಘಾನ್ ಸತತಂ ಸೃಜಾನೋ
ಬಬಂಧ ಪಾರ್ಥಂ ಶರಪಂಜರೇಣ ॥ ೫೨ ॥

ಅಶ್ವತ್ಥಾಮ ತನ್ನ ರಥ, ಕುದುರೆಗಳ ರೋಮಕೂಪ ತನ್ನ ರೋಮಕೂಪ ಧ್ವಜಬಿಲ್ಲು ಈ ಎಲ್ಲೆಡೆಗಳಿಂದಲೂ ಅಮೋಘವಾದ ಬಾಣಗಳನ್ನು ಸತತವಾಗಿ ಪ್ರಯೋಗಿಸುತ್ತ ಅರ್ಜುನನನ್ನು ಬಾಣಗಳ ಪಂಜರದಲ್ಲಿ ಬಂಧಿಸಿದ.

ತಸ್ಮಿನ್ ನಿಬದ್ಧೇ ಹರಿರಪ್ರಮೇಯೋ
ವಿಬೋಧಯಾಮಾಸ ಸುರೇಂದ್ರಸೂನುಮ್ ।
ಆಲಿಂಗನೇನಾಸ್ಯ ದದೌ ಬಲಂ ಚ
ಸ ಉತ್ಥಿತೋಽಸ್ತ್ರಾಣ್ಯಮುಚನ್ಮಹಾಂತಿ ॥ ೫೩ ॥

ಅರ್ಜುನ ಹೀಗೆ ಬಾಣಗಳ ಪಂಜರದಲ್ಲಿ ಬದ್ಧನಾದಾಗ ಅಪ್ರಮೇಯನಾದ ಶ್ರೀಕೃಷ್ಣ ಅವನನ್ನು ಎಚ್ಚರಿಸಿದ. ಆಲಿಂಗನದಿಂದ ಅವನಿಗೆ ಬಲವನ್ನಿತ್ತ. ಅವನು ಎದ್ದು ಮಹಾ ಅಸ್ತ್ರಗಳನ್ನು ಪ್ರಯೋಗಿಸಿದ.

ನಿವಾರ್ಯ ತಾನ್ಯಸ್ತ್ರವರೈರ್ಗುರೋಃ ಸುತ-
ಶ್ಚಿಚ್ಛೇದ ಚ ಜ್ಯಾಂ ಯುಧಿ ಗಾಂಡಿವಸ್ಯ ।
ವವರ್ಷ ಪಾರ್ಥಂ ಚ ಶರೈರಥಾಕನ್ಯಾ
ಜ್ಯಾಕಕಸೀತ್ ತಯಾ ಗಾಂಡಿವಂ ಸೋಽಪ್ಯಯುಂಕ್ತ ॥ ೫೪ ॥

ಅಶ್ವತ್ಥಾಮ ಆ ಅಸ್ತ್ರಗಳನ್ನು ಉತ್ತಮ ಅಸ್ತ್ರಗಳಿಂದ ತಡೆದು ಗಾಂಡೀವದ ಹೆದೆಯನ್ನು ಕತ್ತರಿಸಿದ ಮತ್ತು ಅರ್ಜುನನ ಮೇಲೆ ಬಾಣಗಳ ಮಳೆಯನ್ನೂ ಸುರಿಸಿದ. ಆಗ ಕಡಿದ ಹೆದೆ ಮೊದಲಿನಂತೆಯೇ ಆಯಿತು. ಅರ್ಜುನ ಹೆದೆಯನ್ನು ತಿರುಗಿ ಗಾಂಡೀವಕ್ಕೆ ಏರಿಸಿದ.

ಗಾಂಡೀವ ದಿವ್ಯವಾದ ಧನುಸ್ಸು. ಅದರ ಹೆದೆಯೂ ದಿವ್ಯ. ಬಳ್ಳಿಯ ತುದಿಯನ್ನು ಕತ್ತರಿಸಿದರೆ ಅದು ತಿರುಗಿ ಚಿಗುರುವಂತೆ ಹೆದೆಯೂ ಒಮ್ಮೆ ಕಡಿದರೆ ತಿರುಗಿ ಚಿಗುರಿ ಬೆಳೆದು ಮೊದಲಿನಂತಾಗುತ್ತದೆ. 'ಅನ್ಯಾ ಜ್ಯಾ' ಎಂದರೆ ಬೇರೆ ಹೆದೆ ತಂದನೆಂದರ್ಥವಲ್ಲ. ಕಡಿದ ಹೆದೆ 'ಬೇರೆ' ಆಗಿ, ಅಂದರೆ ಪೂರ್ಣ ಮೊದಲಿನಂತೇ ಆಗಿ ಪ್ರಾದುರ್ಭವಿಸುತ್ತದೆ ಎಂದರ್ಥ. ಅದರಿಂದಲೇ ಮುಂದೆ (58ನೇ ಶ್ಲೋಕದಲ್ಲಿ) 'ಅರ್ಜುನ ಅದನ್ನು ಪುನಃ ಕಟ್ಟಿ' ಎನ್ನುತ್ತಾರೆ.

---

1. ಚಾಪವತ್ ಗಾಂಡೀವ ಜ್ಯಾಯಾ ಅಚ್ಛೇದ್ಯತ್ವಾತ್ ಛಿನ್ನಾಗ್ರಲತಾವತ್ ಸೈವ ಜ್ಯಾ ಪುನರಂಕುರಿತಾ ಽಽಸೀದಿತಿ ಭಾವೇನಾಹ ಅಥಾನ್ಯಾ ಜ್ಯಾಸೀದಿತಿ। ಅನ್ಯಾ ಛಿನ್ನಾದನ್ಯಾ, ಅಚ್ಛಿನ್ನೇತ್ಯರ್ಥಃ। ಅತ ಏವ ಸಂಧಾಯ ತಾಂ ಪುನರಿತಿ ಗ್ರಂಥಕಾರಃ ಸ್ವಯಮೇವ ವಕ್ಷ್ಯತಿ। ತಾಮೇವ ಸಂಧಾಯೇತ್ಯರ್ಥಃ ಅತ ಏವ ಛಿನ್ನಾಗ್ರಲತಾವದಿತಿ ಪ್ರಾಗಸ್ಮಾಭಿ ರ್ನಿದರ್ಶನ ಮದರ್ಶಿ। -ವಾದಿರಾಜೀಯ

ತತಃ ಶರೇಣ ಕುಪಿತಃ ಶಿತೇನ ದ್ರೌಣಿಸಾರಥೇಃ ।
ಶಿರೋ ಜಹಾರ ಕೌಂತೇಯಃ ಸಾರಥ್ಯಂ ಸೋಽಕರೋತ್ ಸ್ವಯಮ್ ॥ ೫೫ ॥

ಬಳಿಕ ಕುಪಿತನಾದ ಅರ್ಜುನ ಹರಿತವಾದ ಬಾಣದಿಂದ ಅಶ್ವತ್ಥಾಮನ ಸಾರಥಿಯ ತಲೆಯನ್ನು ಕತ್ತರಿಸಿದ. ಅಶ್ವತ್ಥಾಮ ತಾನೇ ಸಾರಥ್ಯವನ್ನೂ ಮಾಡತೊಡಗಿದ.

ಶರಾನ್ ವಿಸೃಜತಾ ತೇನ ಸಾರಥ್ಯಮಪಿ ಕುರ್ವತಾ ।
ಶರಕೂಟೇನ ಪಾರ್ಥಃ ಸ ಪುನರ್ಬದ್ಧೋ ದ್ವಿಜನ್ಮನಾ ॥ ೫೬ ॥

ಅಶ್ವತ್ಥಾಮ ಬಾಣ ಪ್ರಯೋಗವನ್ನೂ ಮಾಡುತ್ತ ತಾನೇ ಸಾರಥ್ಯವನ್ನೂ ಮಾಡುತ್ತ ಬಾಣ ಸಮೂಹದಿಂದ ಅರ್ಜುನನನ್ನು ಇನ್ನೊಮ್ಮೆ ಬಂಧಿಸಿದ.

ಪುನರಾಲಿಂಗ್ಯ ಕೃಷ್ಣಸ್ತಮಧಾಚ್ಛತ್ರುವಿಘಾತಕಮ್ ।
ಬಲಮಸ್ಮಿಂಸ್ತತಃ ಪಾರ್ಥ ಉತ್ತಸ್ಥೌ ಶರಚಾಪಭೃತ್ ॥ ೫೭ ॥
ವವರ್ಷ ಚ ಶರಾನ್ ಭೂಯೋ ದ್ರೋಣಪುತ್ರೇಽರಿಮರ್ದನಃ ।
ಪುನಸ್ತಸ್ಯ ನುನೋದ ಜ್ಯಾಂ ದ್ರೌಣಿಃ ಸಂಧಾಯ ತಾಂ ಪುನಃ ॥ ೫೮ ॥
ಪಾರ್ಥೋ ದ್ರೋಣಸುತಸ್ಯಾಶ್ವರಶ್ಮೀಂಶ್ಚಿಚ್ಛೇದ ಸಾಯಕೈಃ ।
ವಿರಥ್ಯೋ ಹಯಾ ದ್ರೌಣೇಃ ಪುನಃ ಪಾರ್ಥಶರಾಹತಾಃ ॥ ೫೯ ॥
ಅಪೋಹುರ್ದೂರಮೇತಸ್ಮಾತ್ ಸೋಽಪಿ ಸಂಸ್ಥಾಪ್ಯ ತಾನ್ ಪುನಃ ।
ಚಿಂತಯಾಮಾಸ ನೈತಸ್ಮಾದಧಿಕಂ ಶಕ್ಯತೇಽರ್ಜುನೇ ॥ ೬೦ ॥
ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾದ್ಧನೂಮತಃ ।
ಗಾಂಡೀವತ್ವಾತ್ ಕಾರ್ಮುಕಸ್ಯ ಚೇಷುಧ್ಯೋರಕ್ಷಯತ್ವತಃ ॥ ೬೧ ॥
ಅವಧ್ಯತ್ವಾತ್ ತಥಾಽಶ್ವಾನಾಮಭೇದ್ಯತ್ವಾದ್ ರಥಸ್ಯ ಚ ।
ಅತೋ ಯೋದ್ಧುಂ ಸಮರ್ಥೋಽಪಿ ನಾದ್ಯ ಯಾಮಿ ಧನಂಜಯಮ್
॥ ೬೨ ॥

ಶ್ರೀಕೃಷ್ಣ ಪುನಃ ಅರ್ಜುನನನ್ನು ಆಲಿಂಗಿಸಿ ಅವನಲ್ಲಿ ಶತ್ರುಘಾತಕವಾದ ಬಲವನ್ನು ತುಂಬಿಸಿದ. ಆಗ ಶತ್ರುಮರ್ದನನಾದ ಅರ್ಜುನ ಎದ್ದು ಬಾಣಬಿಲ್ಲುಗಳನ್ನು ಧರಿಸಿ ಪುನಃ ಅಶ್ವತ್ಥಾಮನ ಮೇಲೆ ಬಾಣಗಳ ಮಳೆಗರೆದ. ಅಶ್ವತ್ಥಾಮ ಪುನಃ ಗಾಂಡೀವದ ಹೆದೆಯನ್ನು ಕತ್ತರಿಸಿದ. ಅದು ಮತ್ತೆ ಬೆಳೆಯಿತು. ಅರ್ಜುನ ಪುನಃ ಅದನ್ನು ಕಟ್ಟಿ ಅಶ್ವತ್ಥಾಮನ ಕುದುರೆಗಳ ಹಗ್ಗಗಳನ್ನು ಬಾಣಗಳಿಂದ ಕತ್ತರಿಸಿದ. ಹಗ್ಗವಿಲ್ಲದ ಆ ಕುದುರೆಗಳನ್ನು ಬಾಣಗಳಿಂದ ಹೊಡೆದ. ಅವುಗಳು ಅರ್ಜುನನ ಇದಿರಿನಿಂದ ದೂರಕ್ಕೆ ಓಡಿದವು. ಅವುಗಳನ್ನು ಅಶ್ವತ್ಥಾಮ ಹಿಡಿದು ತಂದು ತಿರುಗಿ ರಥಕ್ಕೆ ಹೂಡಿ ಆಲೋಚಿಸಿದ. ಅರ್ಜುನನಿಗೆ ಶ್ರೀಕೃಷ್ಣ ಸಾರಥಿಯಾದ್ದರಿಂದ, ಧ್ವಜದಲ್ಲಿ ಹನುಮಂತನಿರುವುದರಿಂದ, ಬಿಲ್ಲು ಗಾಂಡೀವವಾದ್ದರಿಂದ, ಬತ್ತಳಿಕೆಗಳು ಅಕ್ಷಯವಾದ್ದರಿಂದ, ಕುದುರೆಗಳು ಅವಧ್ಯವಾದ್ದರಿಂದ, ರಥವೂ ಅಭೇದ್ಯವಾದ್ದರಿಂದ, ನಾನು

ಅವನಿಗೆ ಹೆಚ್ಚಿಗೆ ಇನ್ನೇನೂ ಮಾಡಲಾರೆ, ಅದರಿಂದ ಅವನೊಡನೆ ಯುದ್ಧಮಾಡಲು ನಾನು ಸಮರ್ಥನಾದರೂ ಈಗ ಅವನನ್ನು ಇದಿರಿಸುವುದಿಲ್ಲ ಎಂದು.

ಏವಂ ಸ ಮತ್ವಾ ಪ್ರವಿವೇಶ ಸೇನಾಂ
ಪಾಂಡೋಃ ಸುತಾನಾಮಥ ತಂ ಸಮಭ್ಯಯಾತ್ ।
ಪಾಂಡ್ಯಸ್ತಯೋರಾಸ ಸುಯುದ್ಧಮದ್ಭುತಂ
ಪ್ರವರ್ಷತೋಃ ಸಾಯಕಪೂಗಮುಗ್ರಮ್ ॥೬೩॥

ಹೀಗೆ ಅಶ್ವತ್ಥಾಮ ಆಲೋಚಿಸಿ ಪಾಂಡವರ ಸೈನ್ಯವನ್ನು ಹೊಕ್ಕ. ಆಗ ಪಾಂಡ್ಯದೇಶದ ರಾಜ ಅವನನ್ನು ಇದಿರಿಸಿದ. ಅವರೊಳಗೆ ಅದ್ಭುತವಾದ ಒಳ್ಳೆಯ ಯುದ್ಧ ನಡೆಯಿತು. ಅವರಿಬ್ಬರೂ ಭಯಂಕರ ಬಾಣಸಮೂಹದ ಮಳೆಗರೆದರು.

ಈ ಪಾಂಡ್ಯರಾಜನ ಹೆಸರು ವೀರಸೇನ. ಚಿತ್ರಾಂಗದೆಯ ತಂದೆ. ಈತನಿಗೆ ಪ್ರವೀರ, ಚಿತ್ರವಾಹನ, ಮಲಯಧ್ವಜನೆಂದೂ ಹೆಸರುಗಳು. ಭೀಷ್ಮ ದ್ರೋಣಾದಿಗಳೂ ಯುದ್ಧದಲ್ಲಿ ತನಗೆ ಸಮರಲ್ಲ. ಕೃಷ್ಣಾರ್ಜುನರಿಗೆ ತಾನು ಕಡಿಮೆಯವನಲ ಎಂದುಕೊಂಡವ.

ಅಷ್ಟಾವಷ್ಟಗವಾನ್ಯೂಹುಃ ಶಕಟಾನಿ ಯದಾಯುಧಮ್ ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ತತ್ರ ಹ ॥೬೪॥

ಎಂಟು ಎತ್ತುಗಳು ಎಳೆಯುವ ಎಂಟು ಬಂಡಿಗಳು ಎಷ್ಟು ಆಯುಧಗಳನ್ನು ಹೊರಬಲ್ಲುವೋ ಅಷ್ಟು ಆಯುಧಗಳನ್ನು ಅಶ್ವತ್ಥಾಮ ಆ ಯುದ್ಧದಲ್ಲಿ ಹಗಲಿನ ಎಂಟನೆ ಒಂದು ಭಾಗ ಕಾಲದಲ್ಲಿ ಎಸೆದ.

ಮಹಾಭಾರತದಲ್ಲಿ ಹೇಳಿದೆ-
ಅಷ್ಟಾವಷ್ಟಗವಾನ್ಯೂಹುಃ ಶಕಟಾನಿ ಯದಾಯುಧಂ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ಮಾರಿಷ॥ (ಕರ್ಣ ೫೬.೩೦)
ಅದರಿಂದ ನಿರ್ಣಯದಲ್ಲಿ 'ಅಷ್ಟಾವಷ್ಟಗವಾನ್ಯೂಹುಃ' ಎಂಬ ಪಾಠವನ್ನಿಟ್ಟುಕೊಂಡು ವಾದಿರಾಜೀಯದಲ್ಲಿ ವ್ಯಾಖ್ಯಾನಿಸಲಾಗಿದೆ. 'ಅಷ್ಟಾವಷ್ಟಶತಾನ್ಯೂಹುಃ' ಎಂದು ಜನಾರ್ದನೀಯ ವರದರಾಜೀಯ ಮತ್ತು ಹೃಷೀಕೇಶತೀರ್ಥೀಯ ಪಾಠ. ಎಂಟುನೂರೆಂಟು ಬಂಡಿಗಳಷ್ಟು ಆಯುಧಗಳೆಂದು ವ್ಯಾಖ್ಯಾನಿಸಲಾಗಿದೆ.

ನಿರ್ಣಯದಲ್ಲಿ 'ಚಿಕ್ಷೇಪ' ಎಂದು ಹೃಷೀಕೇಶ ತೀರ್ಥೀಯ ಪಾಠ ಸ್ವೀಕರಿಸಿದೆ. 'ಚಿಚ್ಛೇದ' ಎಂಬ ಪಾಠ ಮಹಾಭಾರತಕ್ಕೆ ಅನುಗುಣವಾಗಿ ಇಲ್ಲ. ಪಾಂಡ್ಯರಾಜನ ಬಾಣಗಳನ್ನು ಅಶ್ವತ್ಥಾಮ ಕಡಿದನೆಂದು. ಅಲ್ಲಿ ಹೇಳಿಲ್ಲ,

'ಚಿಕ್ಷೇಪ' ಅವನ ಮೇಲೆ ಎಸೆದನೆಂದಿದೆ. ಮತ್ತು ಪರ್ಜನ್ಯ ನೀರಿನ ಮಳೆಗರೆವಂತೆ ಅಶ್ವತ್ಥಾಮ ಬಾಣಗಳ ಮಳೆಗರೆದನೆಂದು ಹೇಳುವಾಗಿನ ಸಂದರ್ಭ ಇದು.

ಅಥ ತಂ ವಿರಥಂ ಕೃತ್ವಾ ಛಿತ್ವಾ ಕಾರ್ಮುಕಮಾಹವೇ ।
ಸಕುಂಡಲಂ ಶಿರೋ ದ್ರೌಣಿರ್ಜಹಾರ ಮಕುಟೋಜ್ಜ್ವಲಮ್ ॥೬೫॥

ಅಶ್ವತ್ಥಾಮ ಯುದ್ಧದಲ್ಲಿ ಪಾಂಡ್ಯರಾಜನನ್ನು ವಿರಥನನ್ನಾಗಿ ಮಾಡಿ ಅವನ ಬಿಲ್ಲನ್ನು ಕಡಿದು ಕುಂಡಲಸಹಿತವಾದ, ಕಿರೀಟದಿಂದ ಶೋಭಿಸುತ್ತಿದ್ದ ಅವನ ಶಿರಸ್ಸನ್ನು ಕಡಿದ.

ಪಾಂಡ್ಯ ಮೊದಲಿಗೆ ಅಶ್ವತ್ಥಾಮನ ಎಂಟು ಬಂಡಿಬಾಣಗಳ ಮಳೆಗಳನ್ನು ವಾಯವ್ಯಾಸ್ತ್ರದಿಂದ ದೂರ ಮಾಡಿದ. ಅದರಿಂದ ಅಶ್ವತ್ಥಾಮ ಎಂಟು ನೂರೆಂಟು ಬಂಡಿ ಬಾಣಗಳನ್ನು ಎಸೆಯುವುದು ವ್ಯರ್ಥ ಎಂದು, ಎಸೆದಿರಲಿಕ್ಕಿಲ್ಲ.ಪಾಂಡ್ಯನ ಕುದುರೆಗಳನ್ನೂ ಸಾರಥಿಯನ್ನೂ ಕೊಂದು ಬಿಲ್ಲನ್ನು ಕಡಿದ. ಇನ್ನೂ ಯುದ್ಧಮಾಡುವ ಆಸೆಯಿಂದ ಅವನನ್ನು ಕೊಲ್ಲಲಿಲ್ಲ. ಬಳಿಕ ಪಾಂಡ್ಯ ಆನೆಯನ್ನೇರಿ ತೋಮರದಿಂದ ಅಶ್ವತ್ಥಾಮನ ಕಿರೀಟವನ್ನು ಬೀಳಿಸಿದ. ಆಗ ಅಶ್ವತ್ಥಾಮ ಅವನ ಕಿರೀಟ ಸಹಿತವಾದ ತಲೆಯನ್ನೇ ಉರುಳಿಸಿದ.

ಅಥ ವಿದ್ರಾವಯಾಮಾಸ ಪೃತನಾಂ ಪಾಂಡವೀಂ ಶರೈಃ ।
ತದಾ ಜಘಾನ ಪಾರ್ಥೋಽಪಿ ದಂಡಧಾರಾಖ್ಯಮಾಗಧಮ್ ॥೬೬॥

ಬಳಿಕ ಅಶ್ವತ್ಥಾಮ ಪಾಂಡವ ಸೇನೆಯನ್ನು ಬಾಣಗಳಿಂದ ಓಡಿಸಿದ. ಆಗ ಅರ್ಜುನನೂ ದಂಡಧಾರನೆಂಬ ಮಗಧರಾಜನನ್ನು ಕೊಂದ.

ದಂಡಧಾರ ಗಿರಿವ್ರಜದ ರಾಜ. ಆನೆಯನ್ನೇರಿ ಬಂದು ತೋಮರದಿಂದ ಕೃಷ್ಣ ಅರ್ಜುನರಿಬ್ಬರನ್ನೂ ಹೊಡೆಯಲು ತೊಡಗಿದ. ಅರ್ಜುನ ಅವನ ಬಾಹುಗಳನ್ನೂ ಶಿರವನ್ನೂ ತರಿದ. ಆಗ ಅವನ ಸೋದರನೂ ಆನೆಯನ್ನೇರಿ ಬಂದು ತೋಮರವನ್ನೆಸೆದ. ಅರ್ಜುನ ಅವನ ಬಾಹುಶಿರಗಳನ್ನೂ ತರಿದ.

ಧೃಷ್ಟದ್ಯುಮ್ನ ಅಶ್ವತ್ಥಾಮರ ಯುದ್ಧ

ವಿದ್ರಾವ್ಯಮಾಣಾಂ ಪೃತನಾಂ ನಿರೀಕ್ಷ್ಯ
ಗುರೋಃ ಸುತೇನಾಭ್ಯಗಮತ್ ತ್ವರಾವಾನ್ ।
ಧೃಷ್ಟದ್ಯುಮ್ನಸ್ತಂ ಸ ಊಚೇ ಸುಪಾಪಂ
ಹನಿಷ್ಯೇ ತ್ವಾಮದ್ಯ ಯುದ್ಧೇ ಗುರುಘ್ನಮ್ ॥೬೭॥

ಧೃಷ್ಟದ್ಯುಮ್ನ ತನ್ನ ಸೇನೆಯನ್ನು ಅಶ್ವತ್ಥಾಮ ಓಡಿಸುತ್ತಿರುವುದನ್ನು ಕಂಡು ತ್ವರೆಯಿಂದ

ಅವನೆದುರಿಗೆ ಬಂದ. 'ಗುರುವನ್ನು ಕೊಂದ ಮಹಾಪಾಪಿಯಾದ ನಿನ್ನನ್ನು ಯುದ್ಧದಲ್ಲಿ ಈಗಲೆ ಸಂಹರಿಸುವೆನು' ಎಂದ, ಅಶ್ವತ್ಥಾಮ.

ಇತ್ಯುಕ್ತೋ ದರ್ಶಯಾಮಾಸ ಪಾರ್ಷತಃ ಖಡ್ಗಮುತ್ತಮಮ್ ।
ಅಯಂ ತವ ಪಿತುರ್ಹಂತಾ ವದಿಷ್ಯತಿ ತವೋತ್ತರಮ್ ॥೬೮॥

ಅಶ್ವತ್ಥಾಮ ಹೀಗೆ ಹೇಳಿದಾಗ ಧೃಷ್ಟದ್ಯುಮ್ನ ತನ್ನ ಉತ್ತಮವಾದ ಖಡ್ಗವನ್ನು ಎತ್ತಿತೋರಿದ. 'ಇದು ನಿನ್ನ ತಂದೆಯನ್ನು ಕೊಂದ ಖಡ್ಗ. ಇದೇ ನಿನಗೆ ಉತ್ತರ ಹೇಳುವುದು' ಎಂದ.

ಇತ್ಯುಕ್ತ್ವಾ ಧನುರಾದಾಯ ವವರ್ಷ ಚ ಶರಾನ್ ಬಹೂನ್ ।
ತಯೋಃ ಸಮಭವದ್ ಯುದ್ಧಂ ತುಮುಲಂ ರೋಮಹರ್ಷಣಮ್ ॥೬೯॥

ಧೃಷ್ಟದ್ಯುಮ್ನ ಹೀಗೆ ಹೇಳಿ ಬಿಲ್ಲನ್ನೆತ್ತಿಕೊಂಡು ಬಹಳ ಬಾಣಗಳ ಮಳೆಗರೆದ. ಅವರಿಬ್ಬರೊಳಗೆ ರೋಮಾಂಚಕವಾದ ತುಮುಲ ಯುದ್ಧ ನಡೆಯಿತು.

ತತ್ರ ತಂ ಪಾರ್ಷತಂ ದ್ರೌಣಿಃ ಕ್ಷಣೇನ ವಿರಥಾಯುಧಮ್ ।
ಕೃತ್ವಾಽಂತಾಯ ಶರಾಂಸ್ತೀಕ್ಷ್ಣಾನ್ ಮುಮೋಚ ನ ಚ ತಸ್ಯ ತೇ ॥೭೦॥
ತ್ವಚಂ ಚ ಚಿಚ್ಛೇದ ದ್ರೌಣಿಃ ಖಡ್ಗಹಸ್ತೋಽಭಿಜಗ್ಮಿವಾನ್ ।
ಖಡ್ಗೇನ ಸೋಽಸ್ತ್ರಶಸ್ತ್ರೈರಪ್ಯನಿರ್ಭಿಣ್ಣತ್ವಚಂ ತದಾ ॥೭೧॥
ಮೌರ್ವ್ಯಾ ಮಮಂಥ ಧನುಷಃ ಪಾತಯಿತ್ವಾ ಧರಾತಲೇ ।
ಆಕೃಷ್ಯಮಾಣಂ ಪಾರ್ಷತಂ ತಂ ದೃಷ್ಟ್ವಾ ಕೃಷ್ಣಪ್ರಚೋದಿತಃ ।
ಪಾರ್ಥೌ ಭೀಮಶ್ಚೋಭಯತಃ ಶರೈರಭಿನಿಜಘ್ನತುಃ ॥೭೨॥

ಆ ಯುದ್ಧದಲ್ಲಿ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಕ್ಷಣದಲ್ಲಿ ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿ ಅವನ ನಾಶಕ್ಕಾಗಿ ತೀಕ್ಷ್ಣವಾದ ಬಾಣಗಳನ್ನೆಸೆದ. ಆದರೆ ಅವು ಅವನ ಚರ್ಮವನ್ನೂ ಗಾಯಗೊಳಿಸಲಿಲ್ಲ. ಬಳಿಕ ಅಶ್ವತ್ಥಾಮ ಖಡ್ಗ ಹಿರಿದು ಅವನ ಮೇಲೇರಿ ಹೋದ. ಆದರೆ ಖಡ್ಗದಿಂದಾಗಲಿ ಅಸ್ತ್ರಶಸ್ತ್ರಗಳಿಂದಾಗಲಿ ಅವನ ಚರ್ಮದಲ್ಲಿಯೂ ಒಂದಿಷ್ಟೂ ಗಾಯವಾಗದಿದ್ದಾಗ ಬಿಲ್ಲಿನ ಹೆದೆಯಿಂದ ಸೆಳೆದು ನೆಲದಲ್ಲಿ ಕೆಡವಿ ಹಿಂಸಿಸಿದ. ಧೃಷ್ಟದ್ಯುಮ್ನನನ್ನು ಅಶ್ವತ್ಥಾಮ ಸೆಳೆಯುತ್ತಿದ್ದುದನ್ನು ನೋಡಿ ಭೀಮಾರ್ಜುನರು ಕೃಷ್ಣನಿಂದ ಪ್ರೇರಿತರಾಗಿ ಅಶ್ವತ್ಥಾಮನನ್ನು ಎರಡೂ ಪಾರ್ಶ್ವಗಳಲ್ಲಿ ಬಾಣಗಳಿಂದ ಹೊಡೆದರು.

ಸ ತಾಭ್ಯಾಂ ವಜ್ರಸದೃಶೈಃ ಶರೈರಭಿಹತೋ ಭೃಶಮ್ ।
ವಿಸೃಜ್ಯ ಪಾರ್ಷತಂ ಸ್ವೀಯಮಾರುರೋಹ ರಥಂ ಪುನಃ ॥೭೩॥
ಜಗಾಮ ಚ ತತೋಽನ್ಯತ್ರ ಪಾಂಚಾಲ್ಯೋಽಪಿ ರಥಂ ಪುನಃ ।
ಆರುಹ್ಯಾನ್ಯಂ ಸಾಪ್ತತಧನ್ವಾ ಕೃತವರ್ಮಾಣಮಭ್ಯಯಾತ್ ॥೭೪॥

ಭೀಮಾರ್ಜುನರಿಂದ ವಜ್ರ ಸದೃಶವಾದ ಬಾಣಗಳಿಂದ ಚೆನ್ನಾಗಿ ಹೊಡೆಸಿಕೊಂಡ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಬಿಟ್ಟು ಪುನಃ ತನ್ನ ರಥವನ್ನೇರಿದ. ಮತ್ತು ಅಲ್ಲಿಂದ ಬೇರೆ ಕಡೆಗೆ ಹೊರಟುಹೋದ. ಧೃಷ್ಟದ್ಯುಮ್ನನೂ ಪುನಃ ಬೇರೆ ರಥವನ್ನೇರಿ ಬಿಲ್ಲನ್ನೆತ್ತಿಕೊಂಡು ಕೃತವರ್ಮನನ್ನು ಇದಿರಿಸಿದ.

ತಯೋರಾಸೀತ್ ಸುತುಮುಲಂ ಯುದ್ಧಮದ್ಭುತದರ್ಶನಮ್ ।
ತತ್ರ ನಾತಿಪ್ರಯತ್ನೇನ ಪಾಂಚಾಲ್ಯೋ ವಿರಥಾಯುಧಮ್ ॥ ೭೫ ॥
ಚಕಾರ ಕೃತವರ್ಮಾಣಂ ತಮಪೋವಾಹ ಗೌತಮಃ ।
ಅಥ ದುರ್ಯೋಧನೋ ರಾಜಾ ಮಾದ್ರೇಯಾವಭ್ಯಯಾದ್ ರಣೇ॥ ೭೬ ॥

ಧೃಷ್ಟದ್ಯುಮ್ನ ಕೃತವರ್ಮರಿಗೆ ಅತಿ ತೀಕ್ಷ್ಣವಾದ, ನೋಡಲು ಆಶ್ಚರ್ಯಕರವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ಹೆಚ್ಚಿನ ಪ್ರಯತ್ನವಿಲ್ಲದೆಯೆ ಕೃತವರ್ಮನನ್ನು ವಿರಥನನ್ನಾಗಿಯೂ ಆಯುಧ ರಹಿತನನ್ನಾಗಿಯೂ ಮಾಡಿದ. ಆಗ ಕೃಪ ಅವನನ್ನು ಬೇರೆ ಕಡೆಗೆ ಒಯ್ದ. ಅತ್ತ ರಾಜಾ ದುರ್ಯೋಧನ ನಕುಲ ಸಹದೇವರನ್ನು ಯುದ್ಧದಲ್ಲಿ ಇದಿರಿಸಿದ.

ಯುಧಿಷ್ಠಿರ ಪರಾಭವ

ತಾಭ್ಯಾಂ ತಸ್ಯಾಭವದ್ ಯುದ್ಧಂ ಘೋರ ಮದ್ಭುತದರ್ಶನಮ್ ।
ತತ್ರ ನಾತಿಪ್ರಯತ್ನೇನ ತೇನ ತೌ ವಿರಥೀಕೃತೌ ॥ ೭೭ ॥

ನಕುಲ ಸಹದೇವರೊಡನೆ ದುರ್ಯೋಧನನಿಗೆ ಘೋರವಾದ ನೋಡಲು ಆಶ್ಚರ್ಯಕರವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿ ದುರ್ಯೋಧನ ಹೆಚ್ಚು ಪ್ರಯಾಸವಿಲ್ಲದೆಯೆ ನಕುಲ ಸಹದೇವರನ್ನು ವಿರಥರನ್ನಾಗಿ ಮಾಡಿದ.

ಸ್ವಯಂ ಯುಧಿಷ್ಠಿರೋ ರಾಜಾ ತದಾ ತಂ ಸಮವಾರಯತ್ ।
ವ್ಯಶ್ವಸೂತಧ್ವಜಂ ಚಕ್ರೇ ತಂ ಚ ದುರ್ಯೋಧನೋ ರಣೇ ॥ ೭೮ ॥

ಆಗ ರಾಜಾ ಯುಧಿಷ್ಠಿರ ಸ್ವಯಂ ದುರ್ಯೋಧನನನ್ನು ತಡೆದ. ದುರ್ಯೋಧನ ಅವನನ್ನೂ ಯುದ್ಧದಲ್ಲಿ ಕುದುರೆ ಸಾರಥಿ ಧ್ವಜಗಳಿಂದ ರಹಿತನನ್ನಾಗಿ ಮಾಡಿದ.

ಅಥಾಽಗತಂ ಸೂರ್ಯಸುತಂ ಪುನಶ್ಚ
ಜಗಾಮ ಭೀಮೋ ರಭಸೋ ರಥೇನ ।
ದುರ್ಯೋಧನಂ ಚಾಸ್ಯ ಸಮಕ್ಷಮೇವ
ಚಕಾರ ವೀರೋ ವಿರಥಂ ಕ್ಷಣೇನ ॥ ೭೯ ॥

ಬಳಿಕ ಬಂದ ಕರ್ಣನನ್ನು ಪುನಃ ವೀರನಾದ ಭೀಮ ರಥದಿಂದ ವೇಗದಿಂದ ಇದಿರಿಸಿದ. ಮತ್ತು ಅವನ ಎದುರಿನಲ್ಲಿಯೆ ದುರ್ಯೋಧನನನ್ನು ಕ್ಷಣದಲ್ಲಿ ವಿರಥನನ್ನಾಗಿ ಮಾಡಿದ.

ನಿವಾರ್ಯ ಕರ್ಣಂ ಚ ಶರೈರಮುಷ್ಯ
ಸೂನೋಃ ಸುಷೇಣಸ್ಯ ಶಿರಶ್ಚಕರ್ತ ।
ಪಪಾತ ಭೂಮೌ ಸ ಪಿತುಃ ಸಮೀಪೇ
ಯಥಾ ಹತಃ ಸತ್ಯಸೇನೋಽಮುನೈವ
ಯಥೈವ ಕರ್ಣಾವರಜೌ ಪುರೈವ
ನಿಶಾಯುದ್ಧೇ ಕರ್ಣಪುರಃ ಪ್ರಪಾತಿತೌ ॥೮೦॥

ಭೀಮ ಕರ್ಣನನ್ನು ಬಾಣಗಳಿಂದ ತಡೆದು ಅವನ ಮಗನಾದ ಸುಷೇಣನ ಶಿರವನ್ನು ಕತ್ತರಿಸಿದ. ಹಿಂದೆ ಭೀಮನಿಂದಲೆ ಹತನಾದ ಸತ್ಯಸೇನ ಹೇಗೆ ಕರ್ಣನ ಬಳಿಯಲ್ಲಿಯೆ ಬಿದ್ದನೋ ಹಿಂದೆ ರಾತ್ರಿ ಯುದ್ಧದಲ್ಲಿ ಭೀಮನಿಂದಲೆ ಕರ್ಣನ ಇಬ್ಬರು ತಮ್ಮಂದಿರು ಕರ್ಣನ ಎದುರಿಗೇ ನೆಲದಲ್ಲಿ ಹೇಗೆ ಬೀಳಿಸಲ್ಪಟ್ಟರೋ ಹಾಗೇ ಈ ಸುಷೇಣನೂ ತಂದೆಯ ಬಳಿಯಲ್ಲಿಯೆ ನೆಲದಲ್ಲಿ ಬಿದ್ದ.

ಹತಂ ತಮೀಕ್ಷ್ಯೈವ ವಿಕರ್ತನಾತ್ಮಜಃ
ಕ್ರೋಧಾನ್ವಿತೋ ಭೀಮಸೇನಂ ವಿಹಾಯ ।
ಯಯೌ ಪ್ರಮೃದ್ಯೈವ ಚಮೂಂ ಯುಧಿಷ್ಠಿರಂ
ರಥೇಽಪರೇ ಸ್ವಸ್ಥಯುತೇ ವ್ಯವಸ್ಥಿತಮ್ ॥೮೧॥

ಸುಷೇಣ ಹತನಾದುದನ್ನು ಕಂಡು ಕರ್ಣ ಕುಪಿತನಾಗಿ ಭೀಮನನ್ನು ಬಿಟ್ಟು ಸೈನ್ಯವನ್ನು ಮರ್ದಿಸಿ ಒಳ್ಳೆಯ ಕುದುರೆಗಳಿಂದ ಯುಕ್ತವಾದ ಇನ್ನೊಂದು ರಥದಲ್ಲಿ ಕುಳಿತಿದ್ದ ಯುಧಿಷ್ಠಿರನನ್ನು ಇದಿರಿಸಿದ.

ನ್ಯವಾರಯೇತಾಂ ಶಿನಿಪೌತ್ರಪಾರ್ಷತೌ
ಕೃಷ್ಣಾಸುತಾಃ ಸೋಮಕಸಂಘಯುಕ್ತಾಃ ।
ಸ ತಾನ್ ಸಮಸ್ತಾನ್ ವಿರಥಾನ್ ವಿಧಾಯ
ಯುಧಿಷ್ಠಿರಂ ಪ್ರಾಪ ಯುತಂ ಯಮಾಭ್ಯಾಮ್ ॥೮೨॥

ಆಗ ಕರ್ಣನನ್ನು ಸಾತ್ಯಕಿ ಧೃಷ್ಟದ್ಯುಮ್ನರು ತಡೆದರು. ಪಾಂಚಾಲ ಸೇನೆಯಿಂದ ಯುಕ್ತರಾದ ದ್ರೌಪದೀ ಪುತ್ರರೂ ತಡೆದರು. ಕರ್ಣ ಅವರೆಲ್ಲರನ್ನೂ ವಿರಥರನ್ನಾಗಿ ಮಾಡಿ ನಕುಲಸಹದೇವರಿಂದ ಕೂಡಿದ ಯುಧಿಷ್ಠಿರನನ್ನೆ ಆಕ್ರಮಿಸಿದ.

ನಿಹತ್ಯ ಸೋಽಶ್ವಾನ್ ಯುಧಿ ಧರ್ಮಸೂನೋ-
ರ್ನಿರಾಯುಧೌ ತೌ ಚ ಯಮೌ ಚಕಾರ ।
ತಾನೇಕಯಾನೋಪಗತಾನ್ ಪುನಶ್ಚ
ಮಮರ್ದ ಬಾಣೈಶ್ಚ ವಚೋಭಿರುಗ್ರೈಃ ॥೮೩॥

ಕರ್ಣ ಯುದ್ಧದಲ್ಲಿ ಯುಧಿಷ್ಠಿರನ ಕುದುರೆಗಳನ್ನು ಕೊಂದು ನಕುಲ ಸಹದೇವರನ್ನೂ

ನಿರಾಯುಧರನ್ನಾಗಿ ಮಾಡಿದ. ಒಂದೇ ರಥವನ್ನೇರಿ ನಿಂತ ಆ ಮೂವರನ್ನೂ ಕ್ರೂರವಾದ ಬಾಣಗಳಿಂದಲೂ ಮಾತುಗಳಿಂದಲೂ ಪೀಡಿಸಿದ.

ತದೈವ ಮೋಕ್ಷಾಯ ನೃಪಸ್ಯ ಭೀಮೋ
ದುರ್ಯೋಧನಂ ವಿರಥಂ ಸಂವಿಧಾಯ।
ವಿವ್ಯಾಧ ಮರ್ಮಸ್ಥತಿತೀಕ್ಷ್ಣಸಾಯಕೈ-
ಸ್ತಂ ದರ್ಶಯಾಮಾಸ ರವೇಃ ಸುತಾಯ ॥೮೪॥
ಶಲ್ಯಸ್ತದಾ ಧರ್ಮಸುತಂ ವಿಹಾಯ
ಕರ್ಣೋ ಯಯೌ ತತ್ರ ಯುಧಿಷ್ಠಿರೋಽಪಿ।
ಗತ್ವಾ ಶನೈಃ ಶಿಬಿರಂ ತತ್ರ ಶಿಶ್ಯೇ
ಕರ್ಣೋಯದಾ ರಾಜಗೃಧ್ನೀ ಜಗಾಮ ॥೮೫॥

ಆಗಲೆ ಯುಧಿಷ್ಠಿರನ ಬಿಡುಗಡೆಗಾಗಿ ಭೀಮ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಅತ್ಯಂತತೀಕ್ಷ್ಣವಾದಬಾಣಗಳಿಂದಮರ್ಮಗಳಲ್ಲಿಹೊಡೆದ. ಶಲ್ಯ ಅವನನ್ನು ಕರ್ಣನಿಗೆ ತೋರಿಸಿದ. ಆಗ ಕರ್ಣ ಯುಧಿಷ್ಠಿರನನ್ನು ಬಿಟ್ಟು ಹೊರಟುಹೋದ. ಅವನು ದುರ್ಯೋಧನನ ರಕ್ಷಣೆ ಮಾಡಲು ಬಯಸಿ ಅತ್ತಹೋದಾಗ ಯುಧಿಷ್ಠಿರ ಮೆಲ್ಲನೆ ಶಿಬಿರಕ್ಕೆ ಹೋಗಿ ಅಲ್ಲಿ ಮಲಗಿದ.

ದ್ರೌಣಿಃ ಕೃಪಶ್ಚಾತ್ರ ತದೈವ ಜಗ್ಮತು-
ಸ್ತದಾ ಭೀಮೋ ದ್ರೌಣಿಕರ್ಣೌ ಜಗಾಮ।
ಕೃಪೋ ನೃಪಂ ರಥಮಾರೋಪಯಚ್ಚ
ವಿದ್ಧಂ ಶರೈರ್ಭೀಮಬಾಹುಪ್ರಮುಕ್ತೈಃ ॥೮೬॥

ಆಗಲೆ ಅಶ್ವತ್ಥಾಮನೂ ಕೃಪನೂ ದುರ್ಯೋಧನನ ಬಳಿಗೆ ಹೋದರು. ಭೀಮ ಅಶ್ವತ್ಥಾಮಕರ್ಣರನ್ನು ಇದಿರಿಸಿದ. ಕೃಪ ಭೀಮನ ಬಾಹುಗಳಿಂದ ಬಿಡಲ್ಪಟ್ಟ ಬಾಣಗಳಿಂದ ಹೊಡೆಸಿಕೊಂಡ ದುರ್ಯೋಧನನನ್ನು ತನ್ನ ರಥದಲ್ಲಿ ಏರಿಸಿಕೊಂಡ.

ನೃಪಂ ಸಮಾದಾಯ ಕೃಪೇಽಪಯಾತೇ
ಭೀಮಾರ್ದಿತೌ ದ್ರೌಣಿಕರ್ಣೌ ಶರೌಘೈಃ।
ವಿಹಾಯ ತಂ ಜಗ್ಮತುಃ ಸೋಮಕಾನಾಂ
ಚಮೂಂ ಶರೌಘೈರಭಿಪಾತಯಂತೌ ॥೮೭॥

ದುರ್ಯೋಧನನನ್ನು ಕರೆದುಕೊಂಡು ಕೃಪ ಹೊರಟುಹೋದಾಗ ಭೀಮನಿಂದ ಬಾಣಸಮೂಹಗಳಿಂದ ಪೀಡಿತರಾದ ಅಶ್ವತ್ಥಾಮ ಕರ್ಣರು ಅವನನ್ನು ಬಿಟ್ಟು ಪಾಂಚಾಲ ಸೇನೆಯನ್ನು ಬಾಣಸಮೂಹಗಳಿಂದ ಕೆಡವುತ್ತ ನಡೆದರು.

ಅರ್ಜುನ ಅಶ್ವತ್ಥಾಮರ ಯುದ್ಧ

ಅಥಾತ್ರ ರಾಜಾನಮಚಕ್ಷಮಾಣೋ
ಧನಂಜಯೋ ವಾಸುದೇವಪ್ರಣುನ್ನಃ ।
ಅಭ್ಯಾಯಯೌ ಪಾರ್ಷತಃ ಸ್ವಾಂ ತು ಸೇನಾಂ
ಕರ್ಣಾಹತಾಂ ವೀಕ್ಷ್ಯ ಕುರೂನಪೀಡಯತ್ ॥೮೮॥

ರಣರಂಗದಲ್ಲಿ ಯುಧಿಷ್ಠಿರನನ್ನು ಕಾಣದೆ ಅರ್ಜುನ ಶ್ರೀಕೃಷ್ಣನಿಂದ ಪ್ರೇರಿತನಾಗಿ ಶಿಬಿರದ ಕಡೆಗೆ ಹೊರಟ. ಧೃಷ್ಟದ್ಯುಮ್ನ ತನ್ನ ಸೇನೆಯನ್ನು ಕರ್ಣ ನಾಶ ಮಾಡುವುದನ್ನು ಕಂಡು ಕೌರವರನ್ನು ಪೀಡಿಸಿದ.

ನ್ಯವಾರಯತ್ ಸಮಾಯಾತಂ ಕಪಿಪ್ರವರಕೇತನಮ್ ।
ದ್ರೌಣಿರ್ದುಃಶಾಸನಶ್ಚೈವ ಧೃಷ್ಟದ್ಯುಮ್ನಮವಾರಯತ್ ॥೮೯॥

ಅಶ್ವತ್ಥಾಮ ತನಗೆ ಎದುರಾಗಿ ಬರುತ್ತಿದ್ದ ಅರ್ಜುನನನ್ನು ತಡೆದ. ದುಃಶಾಸನ ಧೃಷ್ಟದ್ಯುಮ್ನನನ್ನು ತಡೆದ.

ಉಭಾವತಿರಥೌ ತೌ ತು ಶಸ್ತ್ರಾಸ್ತ್ರೈರಭ್ಯವರ್ಷತಾಮ್ ।
ದುಃಶಾಸನಃ ಪಾರ್ಷತಶ್ಚ ಕುರ್ವಂತೌ ಬಾಣಜಂ ತಮಃ ॥೯೦॥

ದುಃಶಾಸನ ಧೃಷ್ಟದ್ಯುಮ್ನರಿಬ್ಬರೂ ಅತಿರಥರು. ಅವರು ಪರಸ್ಪರ ಶಸ್ತ್ರಾಸ್ತ್ರಗಳ ಮಳೆಗರೆದುಕೊಂಡರು. ಬಾಣಗಳಿಂದ ಕತ್ತಲನ್ನು ಉಂಟುಮಾಡಿದರು.

ತತ್ರ ದುಃಶಾಸನೇನಾಕಜೌ ಸ್ತಂಭಿತೋ ದ್ರುಪದಾತ್ಮಜಃ ।
ಯತಮಾನೋಽಪಿ ನಿರ್ಯತ್ನಃ ಕೃತೋ ಯುದ್ಧೇ ನಿರಾಯುಧಃ ॥೯೧॥

ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ದುಃಶಾಸನನಿಂದ ಸ್ತಂಭೀಭೂತನಾಗಿ ಮಾಡಲ್ಪಟ್ಟ. ಯತ್ನ ಮಾಡಿದರೂ ಯತ್ನವಿಲ್ಲದವನಾಗಿ ನಿರಾಯುಧನಾಗಿ ಮಾಡಲ್ಪಟ್ಟ.

ತದಾಽಭವದ್ ಯುದ್ಧಮತೀವ ದಾರುಣಂ
ದ್ರೌಣೇಸ್ತನೂಜೇನ ತು ವಜ್ರಪಾಣೇಃ ।
ತತ್ರಾಪಿ ಬದ್ಧಃ ಶರಪಂಜರೇಣ
ಪಾರ್ಥೋಽಪನುತ್ತ್ರಾಽಪಿ ಚ ಗಾಂಡಿವಜ್ಯಾ ॥೯೨॥

ಆಗ ಅಶ್ವತ್ಥಾಮ ಅರ್ಜುನರಿಗೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿಯೂ ಅರ್ಜುನ ಶರಪಂಜರದಲ್ಲಿ ಬದ್ಧನಾದ ಮತ್ತು ಗಾಂಡೀವದ ಹೆದೆಯೂ ಕಡಿಯಲ್ಪಟ್ಟಿತು.

ಪಾರ್ಥೋಽಥ ಕೃಷ್ಣೇಧಿತಬಾಹುವೀರ್ಯೋ
ನಿಹತ್ಯ ಸೂತಂ ಗುರುಪುತ್ರಕಸ್ಯ ।

ಛಿತ್ವಾ ಚ ರಶ್ಮೀಂಸ್ತುರಗಾನಮುಷ್ಯ
ವಿದ್ರಾವಯಾಮಾಸ ಶರೈಃ ಸುದೂರಮ್ ॥೯೩॥

ಬಳಿಕ ಅರ್ಜುನನ ಬಾಹು ಪರಾಕ್ರಮವನ್ನು ಶ್ರೀಕೃಷ್ಣ ಹೆಚ್ಚಿಸಿದ. ಅರ್ಜುನ ಅಶ್ವತ್ಥಾಮನ ಸಾರಥಿಯನ್ನು ಕೊಂದು ಅವನ ಕುದುರೆಗಳ ಹಗ್ಗಗಳನ್ನೂ ಕತ್ತರಿಸಿ ಕುದುರೆಗಳನ್ನು ಬಾಣಗಳಿಂದ ಬಲು ದೂರಕೆ ಓಡಿಸಿದ.

ಅತೀತ್ಯ ಪುತ್ರಂ ತು ಗುರೋಃ ಸಮಾಗತೇ
ಪಾರ್ಥೇ ಕರ್ಣೋ ದ್ರಾವಯಾಮಾಸ ಸೇನಾಮ್ ।
ಪಾಂಡೋಃ ಸುತಾನಾಂ ಶರವರ್ಷಧಾರೋ
ದುರ್ಯೋಧನಶ್ಚಾನು ಯಯೌ ತಮೇವ ॥೯೪॥

ಅಶ್ವತ್ಥಾಮನನ್ನು ದಾಟಿ ಅರ್ಜುನ ಬಂದಾಗ ಅತ್ತ ಕರ್ಣ ಬಾಣಗಳ ಮಳೆ ಸುರಿಸುತ್ತ ಪಾಂಡವ ಸೇನೆಯನ್ನು ಓಡಿಸಿದ. ದುರ್ಯೋಧನ ಅವನನ್ನೆ ಹಿಂಬಾಲಿಸಿದ.

ಕರ್ಣಮಾಯಾಂತಮಾಲೋಕ್ಯ ದ್ರಾವಯಂತಂ ನಿಜಾಂ ಚಮೂಮ್ ।
ಧನುರನ್ಯತ್ ಸಮಾದಾಯ ಧೃಷ್ಟದ್ಯುಮ್ನೋ ನ್ಯವಾರಯತ್ ॥೯೫॥

ಕರ್ಣ ತನ್ನ ಸೈನ್ಯವನ್ನು ಓಡಿಸುತ್ತ ತನ್ನ ಕಡೆಗೇ ಬರುತ್ತಿದ್ದುದನ್ನು ಕಂಡು ಧೃಷ್ಟದ್ಯುಮ್ನ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಅವನನ್ನು ತಡೆದ.

ತಯೋರಾಸೀನ್ಮಹದ್ ಯುದ್ಧಂ ಚಿರಂ ಸಮಮವಿಶ್ರಮಮ್ ।
ತದೈವ ಸಾತ್ಯಕಿರ್ವೀರೋ ದುರ್ಯೋಧನಮವಾರಯತ್ ॥೯೬॥

ಅವರಿಬ್ಬರಿಗೆ ದೀರ್ಘಕಾಲ ವಿಶ್ರಾಂತಿ ಇಲ್ಲದ ದೊಡ್ಡ ಯುದ್ಧ ನಡೆಯಿತು. ಅದು ಸಮವೇ ಆಗಿತ್ತು. ಆಗಲೆ ವೀರ ಸಾತ್ಯಕಿ ದುರ್ಯೋಧನನನ್ನು ತಡೆದ.

ನಿವಾರಿತಃ ಸಾತ್ಯಕಿನಾ ರಣೇ ದುರ್ಯೋಧನೋ ನೃಪಃ ।
ನಿಹತ್ಯ ಸಾತ್ಯಕೇರಶ್ವಾನ್ ದ್ರೌಪದೇಶ್ಚಾಪಮಚ್ಛಿನತ್ ॥೯೭॥

ಸಾತ್ಯಕಿ ತಡೆದಾಗ ರಾಜಾ ದುರ್ಯೋಧನ ಯುದ್ಧದಲ್ಲಿ ಸಾತ್ಯಕಿಯ ಕುದುರೆಗಳನ್ನು ಕೊಂದು ಧೃಷ್ಟದ್ಯುಮ್ನನ ಧನುಸ್ಸನ್ನು ಕಡಿದ.

ತದಂತರೈವ ಕರ್ಣೋಽಪಿ ಪಾರ್ಷತಾಶ್ವಾನಪಾತಯತ್ ।
ತಯೋರ್ವಿರಥಯೋರೇವ ಭಗ್ನಂ ತತ್ ಪಾಂಡವಂ ಬಲಮ್ ॥೯೮॥

ಈ ನಡುವೆ ಕರ್ಣನೂ ಧೃಷ್ಟದ್ಯುಮ್ನನ ಕುದುರೆಗಳನ್ನು ಕೊಂದ. ಸಾತ್ಯಕಿ ಧೃಷ್ಟದ್ಯುಮ್ನರು ವಿರಥರಾದೊಡನೆ ಪಾಂಡವ ಸೈನ್ಯ ಸೋತಿತು.

ಬಲಂ ಸ್ವಕೀಯಂ ಬಹುಧಾ ವಿಭಿನ್ನಂ
ಸಮೀಕ್ಷ್ಯ ಭೀಮೋ ಮೃಗರಾಜಕೇತುಃ ।

ಕೃತ್ವಾ ಧರಾಕಮ್ಪಕಮುಗ್ರನಾದಂ
ರಣೇಽಭ್ಯಯಾತ್ ಕೌರವರಾಜಸೈನ್ಯಮ್ ॥೯೯॥

ತನ್ನ ಸೇನೆ ಬಹಳ ಸೋತಾಗ ಅದನ್ನು ಕಂಡ ಸಿಂಹಧ್ವಜನಾದ ಭೀಮ ಭೂಮಿಯನ್ನು ನಡುಗಿಸುವಂಥ ಭಯಂಕರ ಸಿಂಹನಾದ ಮಾಡಿ ಯುದ್ಧದಲ್ಲಿ ಕೌರವರಾಜನ ಸೈನ್ಯವನ್ನು ಆಕ್ರಮಿಸಿದ.

ನಾದೇನ ಬಾಣೈಶ್ಚ ವೃಕೋದರೇಣ
ಭಗ್ನಂ ತದಾ ಕೌರವಸೈನ್ಯಮಾಶು ।
ದಿಶೋ ವಿದುದ್ರಾವ ಸುಯೋಧನೋಽಪಿ
ಕೃತೋ ರಣೇ ತೇನ ವಿವಾಹನಾಯುಧಃ ॥೧೦೦॥

ಸಿಂಹನಾದದಿಂದಲೂ ಬಾಣಗಳಿಂದಲೂ ಭೀಮ ಕೌರವಸೈನ್ಯವನ್ನು ಬೇಗನೆ ಪರಾಜಯಗೊಳಿಸಿದಾಗ ಅದು ಎಲ್ಲ ದಿಕ್ಕಿಗೆ ಪಲಾಯನ ಮಾಡಿತು. ದುರ್ಯೋಧನನೂ ಭೀಮನಿಂದ ಯುದ್ಧದಲ್ಲಿ ರಥ ಆಯುಧ ರಹಿತನಾಗಿ ಮಾಡಲ್ಪಟ್ಟ.

ದೃಷ್ಟ್ವೈವ ತತ್ ಪಾಂಡವಾನಾಂ ಚ ಸೇನಾ
ಸಮಾವೃತ್ತಾ ಕ್ಷಿಪ್ರಮವಾರ್ಯವೇಗಾ ।
ತಯಾ ಪುನಃ ಕೌರವಾಣಾಂ ಬಲಂ ತದ್
ಭಗ್ನಂ ದೂರಾದ್ ದೂರತರಂ ಪ್ರದುದ್ರುವೇ ॥೧೦೧॥

ಅದನ್ನು ನೋಡಿದೊಡನೆ ಶತ್ರುಗಳಿಗೆ ತಡೆಯಲಾಗದ ವೇಗವುಳ್ಳ ಪಾಂಡವಸೇನೆ ಬೇಗನೆ ಹಿಂತಿರುಗಿ ಬಂದಿತು. ಅದರಿಂದಲೂ ಪುನಃ ಕೌರವಸೈನ್ಯ ಸೋತು ದೂರದಿಂದ ದೂರಕ್ಕೇ ಓಡಿತು.

ಹನ್ಯಮಾನಂ ದಿಶೋ ಯಾತಂ ಪಾಂಚಾಲೈರ್ಭೀಮಸಂಶ್ರಯಾತ್ ।
ದುರ್ಯೋಧನಬಲಂ ದೃಷ್ಟ್ವಾ ಜಜ್ವಾಲಾಽಧಿರಥಿಃ ಕ್ರುಧಾ ॥೧೦೨॥

ದುರ್ಯೋಧನನ ಸೈನ್ಯ ಭೀಮನ ಆಸರೆಯಲ್ಲಿದ್ದ ಪಾಂಚಾಲ ಸೈನಿಕರಿಂದ ಹೊಡೆಸಿ ಕೊಂಡು ದಿಕ್ಕುಗಳಿಗೆ ಓಡುತ್ತಿದ್ದುದನ್ನು ಕಂಡು ಕರ್ಣ ಕೋಪದಿಂದ ಉರಿಯತೊಡಗಿದ.

ಸೋಽಮೋಘಂ ರಾಮದೈವತ್ಯಮಸ್ತ್ರಂ ಭಾರ್ಗವಸಂಜ್ಞಿತಮ್ ।
ಸರ್ವಾಸ್ತ್ರನಾಶಕಂ ದಿವ್ಯಮಪ್ರತಿದ್ವಂದ್ವಮಾದದೇ ॥೧೦೩॥

ಕರ್ಣ ಪರಶುರಾಮದೇವತಾಕವಾದ ಭಾರ್ಗವ ಎಂಬ ಹೆಸರಿನ ಅಮೋಘ ದಿವ್ಯಾಸ್ತ್ರವನ್ನು ಎತ್ತಿಕೊಂಡ. ಅದು ಎಲ್ಲ ಅಸ್ತ್ರಗಳನ್ನೂ ನಾಶಮಾಡಬಲ್ಲ ಪ್ರತ್ಯಸ್ತ್ರವಾದ ಅಸ್ತ್ರ.

ತಚ್ಚ ಭೀಮಪುರೋಗೇಷು ಸೈನ್ಯೇಷ್ವಮುಚದುಲ್ಬಣಮ್ ।
ತದಸ್ತ್ರಂ ವರ್ಜಯಾಮಾಸ ಭೀಮಂ ರಾಮಪ್ರಸಾದತಃ ॥೧೦೪॥

ಕ್ರೂರವಾದ ಆ ಅಸ್ತ್ರವನ್ನು ಕರ್ಣ ಭೀಮನ ನಾಯಕತ್ವದಲ್ಲಿದ್ದ ಸೈನ್ಯಗಳ ಮೇಲೆ ಪ್ರಯೋಗಿಸಿದ. ಆದರೆ ಆ ಅಸ್ತ್ರ ಪರಶುರಾಮನ ಅನುಗ್ರಹದಿಂದ ಭೀಮನನ್ನು ಬಿಟ್ಟಿತು.

ಅನ್ಯೇ ತು ದುದ್ರುವುಃ ಕೇಚಿಚ್ಛಿಷ್ಟಾಃ ಪ್ರಾಪುರ್ಯಮಕ್ಷಯಮ್ ।
ನ ಹ್ಯಸ್ತ್ರಂ ದ್ರವಮಾಣಾಂಸ್ತದ್ಧಂತಿ ತೇನ ಸಪಾರ್ಷತಾಃ ॥೧೦೫॥
ಪಾಂಚಾಲಾ ದ್ರೌಪದೇಯಾಶ್ಚ ಶೈನೇಯಾದ್ಯಾಶ್ಚ ಸರ್ವಶಃ ।
ಪಲಾಯನೇನೋರ್ವರಿತಾ ಅರ್ಜುನೋಽಪ್ಯಸ್ತ್ರಮುದ್ಯತಮ್ ॥೧೦೬॥
ವೀಕ್ಷ್ಯ ಪ್ರತ್ಯಸ್ತ್ರಹೀನಂ ತದಪ್ರಾಪ್ಯೈವ ರವೇಃ ಸುತಮ್ ।
ವಾಸುದೇವಮಿದಂ ಪ್ರಾಹ ವರ್ಜಯಿತ್ವೈವ ಸೂತಜಮ್ ॥೧೦೭॥
ಅನ್ಯತ್ರ ಯಾಮಿ ನೈವಾಸ್ಮಾದಸ್ತ್ರಾಜ್ಜೀವನಮನ್ಯಥಾ ।
ಇತ್ಯೂಚಿವಾಂಸಂ ಪಾರ್ಥಂ ತಂ ಕೃಷ್ಣೋಽಪ್ರಾಪ್ಯೈವ ಸೂತಜಮ್ ॥೧೦೮॥
ಅನ್ಯೇನೈವ ಪಥಾ ಭೀಮಂ ಪ್ರಾಪಯಾಮಾಸ ವಿಶ್ವಕೃತ್ ।
ತತ್ರಾರ್ಜುನೋಽವದದ್ ಭೀಮಂ ಯಾಹಿ ದ್ರಷ್ಟುಂ ಯುಧಿಷ್ಠಿರಮ್ ೧೦೯
ಪ್ರವೃತ್ತಿಂ ವಿದ್ಧಿ ಭೂಪಸ್ಯ ಮಾಂ ತು ಸಂಶಪ್ತಕಾ ಯುಧೇ ।
ಆಹ್ವಯಂತಿ ಹತೋಚ್ಛೇಷಾಸ್ತಾನಹಂ ಯಾಮಿ ತದ್ ಯುಧೇ ॥೧೧೦॥

ಇತರರು ಪಲಾಯನ ಮಾಡಿದರು. ಉಳಿದವರು ಕೆಲವರು ಯಮಲೋಕವನ್ನು ಸೇರಿದರು. ಪಲಾಯನ ಮಾಡುವವರನ್ನು ಆ ಅಸ್ತ್ರ ಕೊಲ್ಲುವುದಿಲ್ಲ. ಅದರಿಂದ ಧೃಷ್ಟದ್ಯುಮ್ನ ಸಮೇತರಾದ ಪಾಂಚಾಲರೂ ದ್ರೌಪದೀ ಪುತ್ರರೂ ಸಾತ್ಯಕಿ ಮುಂತಾದವರೂ ಎಲ್ಲರೂ ಪಲಾಯನ ಮಾಡಿದ್ದರಿಂದ ಉಳಿದರು. ಅರ್ಜುನ ಆಗ ಬೇರೆಯವರೊಡನೆ ಯುದ್ಧ ಮಾಡುತ್ತ ಪ್ರತ್ಯಸ್ತ್ರವಿಲ್ಲದ ಆ ಅಸ್ತ್ರ ಹೊರಟುದನ್ನು ಕಂಡು ಕರ್ಣನ ಇದಿರಿಗೆ ಹೋಗದೆ ಕೃಷ್ಣನಿಗೆ ಹೇಳಿದ 'ಕರ್ಣನನ್ನು ಬಿಟ್ಟೇ ನಾನು ಬೇರೆ ದಾರಿಯಿಂದ ಹೋಗುವೆನು. ಹಾಗೆ ಮಾಡದಿದ್ದರೆ ಈ ಅಸ್ತ್ರದಿಂದ ನನಗೆ ಉಳಿವಿಲ್ಲ.' ಅರ್ಜುನ ಹೀಗೆ ಹೇಳಿದಾಗ ಸರ್ವಕರ್ತನಾದ ಕೃಷ್ಣ ಅವನನ್ನು ಕರ್ಣನ ಬಳಿಗೆ ಒಯ್ಯದೆಯೆ ಬೇರೆ ಮಾರ್ಗದಿಂದಲೆ ಭೀಮನ ಬಳಿಗೆ ಒಯ್ದ. ಅಲ್ಲಿ ಅರ್ಜುನ ಭೀಮನಿಗೆ ಹೇಳಿದ, 'ಯುಧಿಷ್ಠಿರನನ್ನು ಕಾಣಲು ಹೋಗು. ಅವನ ಸಮಾಚಾರವನ್ನು ತಿಳಿದುಕೊಳ್ಳು, ನನ್ನನ್ನು ಅಳಿದುಳಿದ ಸಂಶಪ್ತಕರು ಯುದ್ಧಕ್ಕೆ ಕರೆಯುತ್ತಿದ್ದಾರೆ. ಅದರಿಂದ ನಾನು ಅವರೊಡನೆ ಯುದ್ಧಕ್ಕೆ ಹೋಗುವೆನು.'

ಇತ್ಯೂಚಿವಾಂಸಂ ತಮುವಾಚ ಭೀಮೋ
ಜಾನನ್ ಸ್ವಬಾಹ್ವೋರ್ಬಲಮಪ್ರಮೇಯಮ್ ।
ಸಂಶಪ್ತಕಾನ್ ಸೂತಜಂ ಕೌರವಾಂಶ್ಚ
ಯೋತ್ಸ್ಯೇಽಹಮೇಕಸ್ತ್ವಮುಪೈಹಿ ಭೂಪಮ್ ॥೧೧೧॥

ಅರ್ಜುನ ಹೀಗೆ ಹೇಳಿದಾಗ ತನ್ನ ಬಾಹುಗಳ ಅಪರಿಮಿತವಾದ ಬಲವನ್ನು ತಿಳಿದಿದ್ದ

ಭೀಮ ಅವನಿಗೆ ಹೇಳಿದ, 'ಸಂಶಪ್ತಕರನ್ನೂ ಕರ್ಣನನ್ನೂ ಕೌರವರನ್ನೂ ನಾನೊಬ್ಬನೆ ಇದಿರಿಸುವೆನು. ನೀನು ಯುಧಿಷ್ಠಿರನ ಬಳಿಗೆ ಹೋಗು.'

ತ್ಯಕ್ತ್ವಾ ರಣಂ ನಾಹಮಿತೋ ವ್ರಜೇಯಂ
ನ ಮಾಂ ವದೇತ್ ಕಶ್ಚನ ಯುದ್ಧಭೀತಮ್ ।
ಇತಿ ಬ್ರುವಾಣಂ ತಮನಂತಶಕ್ತಿಃ
ಪ್ರೀತಃ ಕೃಷ್ಣಃ ಪ್ರಶಶಂಸಾಧಿಕೇಷ್ಟಮ್ ॥೧೧೨॥

'ಯುದ್ಧವನ್ನು ಬಿಟ್ಟು ನಾನು ಇಲ್ಲಿಂದ ಹೋಗಲಾರೆ. ಏಕೆಂದರೆ ಯುದ್ಧಕ್ಕೆ ಹೆದರಿದೆನೆಂದು ಯಾರೂ ನನ್ನ ಬಗ್ಗೆ ಆಡಿಕೊಳ್ಳಬಾರದು.' ಹೀಗೆ ಭೀಮ ಹೇಳಿದಾಗ ಸರ್ವಶಕ್ತನಾದ ಶ್ರೀಕೃಷ್ಣ ಸಂತುಷ್ಟನಾಗಿ ತನಗೆ ಅತ್ಯಂತ ಪ್ರಿಯನಾದ ಭೀಮನನ್ನು ಕೊಂಡಾಡಿದ.

ನೈತತ್ ಚಿತ್ರಂ ತವ ಕರ್ಮಾದ್ಯ ಭೀಮ
ಯಾಸ್ಯಾವಹೇ ಜಹಿ ಪಾರ್ಥಾರಿಸಂಘಾ॥ (ಕರ್ಣ ೬೮.೨೨)

'ಭೀಮ! ಶತ್ರುಗಳನ್ನೆಲ್ಲ ನೀನೆ ಗೆಲ್ಲು. ನಿನಗೆ ಇದೇನೂ ಆಶ್ಚರ್ಯವಲ್ಲ. ನಾವು ಧರ್ಮರಾಜನನ್ನು ನೋಡಲು ಹೋಗುವೆವು' ಎನ್ನುತ್ತಾನೆ ಶ್ರೀಕೃಷ್ಣ.

ಗಾಂಡೀವದ ನಿಂದೆ

ಯಯೌ ಯುಧಿಷ್ಠಿರಂ ದ್ರಷ್ಟುಂ ಶಿಬಿರಂ ಸಾರ್ಜುನೋ ಹರಿಃ ।
ದೃಷ್ಟ್ವಾ ತೌ ನೃಪತಿಃ ಕರ್ಣಂ ಹತಂ ಮತ್ವಾ ಶಶಂಸ ಹ ॥೧೧೩॥
ಅಭಿವಾದ್ಯ ಹನಿಷ್ಯಾಮೀತ್ಯುಕ್ತಃ ಪಾರ್ಥೇನ ಸ ಕ್ರುಧಾ ।
ಭೃಶಂ ವಿನಿಂದ್ಯ ಬೀಭತ್ಸುಮಾಹ ಕೃಷ್ಣಾಯ ಗಾಂಡಿವಮ್ ।
ದೇಹಿ ಪುತ್ರಂ ಸ ರಾಧಾಯಾ ಹನಿಷ್ಯತಿ ನ ಸಂಶಯಃ ॥೧೧೪॥

ಅರ್ಜುನ ಸಮೇತನಾದ ಶ್ರೀಕೃಷ್ಣ ಯುಧಿಷ್ಠಿರನನ್ನು ಕಾಣಲು ಶಿಬಿರಕ್ಕೆ ಹೋದ. ಅವರನ್ನು ಕಂಡು ಯುಧಿಷ್ಠಿರ ಕರ್ಣ ಹತನಾದನೆಂದು ಬಗೆದು ಹೊಗಳಿದ. ಅರ್ಜುನ ಅಭಿವಾದನ ಮಾಡಿ ಇನ್ನು ಮೇಲೆ ಕೊಲ್ಲುವೆನೆಂದಾಗ ಯುಧಿಷ್ಠಿರ ಕೋಪದಿಂದ ಚೆನ್ನಾಗಿ ನಿಂದಿಸಿ ನುಡಿದ 'ಗಾಂಡೀವವನ್ನು ಕೃಷ್ಣನಿಗೆ ಕೊಡು. ಅವನು ಕರ್ಣನನ್ನು ಇನ್ನು ಮೇಲೆ ಕೊಲ್ಲುತ್ತಾನೆ ಇದರಲ್ಲಿ ಸಂಶಯವಿಲ್ಲ.

ಅಥವಾ ಭೀಮ ಏವೈನಂ ನಿವೃತ್ತೇ ತ್ವಯಿ ಪಾತಯೇತ್ ।
ತ್ವಂ ತು ಕುಂತ್ಯಾ ವೃಥಾ ಸೂತಃ ಕ್ಲೀಬೋ ಮಿಥ್ಯಾಪ್ರತಿಶ್ರವಃ ॥೧೧೫॥
ಅಹಂ ಹಿ ಸೂತಪುತ್ರೇಣ ಕ್ಲಿಷ್ಟೋ ಮಾರುತತೇಜಸಾ ।
ಜೀವಾಮೀತ್ಯಗ್ರಜೇನೋಕ್ತ ಉದ್ಬಬರ್ಹಾಸಿಮುತ್ತಮಮ್ ॥೧೧೬॥

ವಾಸುದೇವಸ್ತಮಾಹೇದಂ ಕಿಮೇತದಿತಿ ಸರ್ವವಿತ್ ॥೧೧೭॥

ಅಥವಾ ನೀನು ಯುದ್ಧ ಮಾಡುವುದನ್ನು ಕೈಬಿಟ್ಟಾಗ ಭೀಮನೆ ಕರ್ಣನನ್ನು ಕೊಲ್ಲುತ್ತಾನೆ. ನೀನು ಕುಂತಿಯಿಂದ ವ್ಯರ್ಥವಾಗಿ ಜನಿಸಿರುವಿ. ನೀನು ಷಂಢ. ನಿನ್ನ ಪ್ರತಿಜ್ಞೆ ಸುಳ್ಳು. ನಾನು ಕರ್ಣನಿಂದ ಹಿಂಸೆಪಟ್ಟು ಭೀಮನ ಪರಾಕ್ರಮದಿಂದಾಗಿ ಬದುಕಿ ಉಳಿದಿದ್ದೇನೆ.' ಯುಧಿಷ್ಠಿರ ಹೀಗೆ ಹೇಳಿದಾಗ ಅರ್ಜುನ ಅವನ ಮೇಲೆ ಉತ್ತಮವಾದ ಖಡ್ಗವನ್ನೆತ್ತಿದ. ಸರ್ವಜ್ಞನಾದ ಶ್ರೀಕೃಷ್ಣ ಅವನನ್ನು ಕೇಳಿದ, 'ಇದೇನು ಮಾಡುತ್ತಿರುವೆ? ಏಕೆ?'

'ಇಲ್ಲಿ ಯಾರೂ ನಿನ್ನೊಡನೆ ಯುದ್ಧ ಮಾಡುತ್ತಿಲ್ಲ. ಶತ್ರುಗಳಿಲ್ಲ. ಯುದ್ಧ ಮಾಡದವರನ್ನೂ ಶತ್ರುವಲ್ಲದವರನ್ನೂ ಕೊಲ್ಲಬಾರದು. ಹಿರಿಯನಾದ ಧರ್ಮರಾಜನನ್ನು ಏಕೆ ಕೊಲ್ಲುವಿ?'

ತಮಾಹ ಗಾಂಡಿವಂ ದಾತುಂ ಯೋ ವದೇತ್ ತದ್ವಧೋ ಮಯಾ ।
ಪ್ರತಿಜ್ಞಾತಸ್ತತೋ ಹನ್ಮಿ ನೃಪಮಿತ್ಯಾಹ ತಂ ಹರಿಃ ॥೧೧೮॥
ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯತ್ ಸತಾಂ ಹಿತಮತ್ಯಂತಂ ತತ್ ಸತ್ಯಮಿತಿ ನಿಶ್ಚಯಃ ॥೧೧೯॥
ಧರ್ಮಸ್ಯ ಚರಣಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮ್ ।
ಯಃ ಸತಾಂ ಧಾರಕೋ ನಿತ್ಯಂ ಸ ಧರ್ಮ ಇತಿ ನಿಶ್ಚಯಃ ॥೧೨೦॥

ಅರ್ಜುನ ಕೃಷ್ಣನಿಗೆ ಹೇಳಿದ. 'ಗಾಂಡೀವವನ್ನು ಇನ್ನೊಬ್ಬರಿಗೆ ಕೊಡಲು ಯಾರು ಹೇಳುವನೊ ಅವನ ವಧೆ ಮಾಡುವುದಾಗಿ ನಾನು ಪ್ರತಿಜ್ಞೆ ಮಾಡಿರುವೆನು' ಎಂದು. ಆಗ ಶ್ರೀಕೃಷ್ಣ ನುಡಿದ, 'ಸತ್ಯವನ್ನು ನುಡಿಯುವುದು ಶ್ರೇಯಸ್ಕರವೆ. ಆದರೆ ಸತ್ಯವನ್ನು ತಿಳಿಯುವುದು ದುಷ್ಕರ. ಸಜ್ಜನರಿಗೆ ಅತ್ಯಂತ ಹಿತಕರವಾದುದೆ ಸತ್ಯವೆನ್ನುವುದು ಶಾಸ್ತ್ರಗಳ ನಿಶ್ಚಯ. ಧರ್ಮದ ಆಚರಣೆ ಶ್ರೇಯಸ್ಕರ. ಆದರೆ ಧರ್ಮವನ್ನು ತಿಳಿಯುವುದು ದುಷ್ಕರ. ಸಜ್ಜನರನ್ನು ಸದಾ ಪೋಷಿಸುವುದೇ ಧರ್ಮವೆಂದು ಶಾಸ್ತ್ರಗಳ ನಿಶ್ಚಯ.

ಅರ್ಜುನ ನಿನ್ನ ಪ್ರತಿಜ್ಞಾರೂಪವಾದ ವಚನವನ್ನು ಸತ್ಯವನ್ನಾಗಿ ಮಾಡುವುದು ಶ್ರೇಯಸ್ಕರವೆ. ಆದರೆ ಅದನ್ನು ಸತ್ಯವನ್ನಾಗಿ ಮಾಡುವ ಬಗೆಯನ್ನು ತಿಳಿಯುವುದು ದುಷ್ಕರ. ಪ್ರತಿಜ್ಞಾಪಾಲನವೆಂಬ ಧರ್ಮವನ್ನು ಆಚರಿಸುವುದು ಶ್ರೇಯಸ್ಕರವೆ. ಆದರೆ ಪ್ರತಿಜ್ಞಾಪಾಲನಧರ್ಮವನ್ನು ಹೇಗೆ ಆಚರಿಸಬೇಕೆಂದು ತಿಳಿಯುವುದು ದುಷ್ಕರವೆ' ಎನ್ನುತ್ತಿದ್ದಾನೆ ಶ್ರೀಕೃಷ್ಣ. ಏಕೆಂದರೆ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡುವ ಭರದಲ್ಲಿ ಹಿರಿಯನಾದ ಧರ್ಮರಾಜನನ್ನು ಕೊಂದರೆ ಮಹಾ ಅನರ್ಥ. ಒಂದು ಕವಡೆಯ ಲಾಭಕ್ಕಾಗಿ ಲಕ್ಷ ಹೊನ್ನುಗಳನ್ನು ಕಳೆದುಕೊಂಡಂತಾದೀತು. ಅದರಿಂದ ಸತ್ಯವನ್ನಾಗಿ ಮಾಡುವ ಬಗೆ ಹೇಗೆಂಬುದನ್ನು ಸರಿಯಾಗಿ ತಿಳಿಯಬೇಕು.

ಮಹಾಭಾರತದಲ್ಲಿ ಸತ್ಯದ ಬಗ್ಗೆ ವಿವರಣೆ ಬಂದಿದೆ-

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ಹಿತಂ ಭವೇತ್
ಯದ್ಭೂತಹಿತಮತ್ಯಂತಂ ತದ್ವೈ ಸತ್ಯಂ ಪರಂ ಮತಂ॥
(ವನ ೨೧೩.೩೧)

'ಸತಾಮಿದಂ ಸತ್ಯಂ' ಸಜ್ಜನರಿಗೆ ಯಾವುದು ಹಿತವೋ ಅದು ಸತ್ಯ ಎಂದು ನಿರ್ವಚನ.

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥೧೨೧॥

ಕೌಶಿಕನೆಂಬ ಮುನಿ ಸತ್ಯವಾದಿ ಎಂದು ಪ್ರಸಿದ್ಧನಾಗಿದ್ದ. ಅವನು ಒಂದೆಡೆ ಅಡಗಿ ಕುಳಿತಿದ್ದ ಗ್ರಾಮದ ಜನರನ್ನು ದರೋಡೆಕೋರರಿಗೆ ತಿಳಿಸಿಯೆ ನರಕವನ್ನು ಹೊಂದಿದ.

ಕಶ್ಚಿದ್ ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಽಸೌ ಮೃಗೋ ಯತಃ ॥೧೨೨॥

ತಸ್ಮಾತ್ ಸದ್ಧಾರಕೋ ಧರ್ಮ ಇತಿ ಕೃತ್ವಾ ವಿನಿಶ್ಚಯಮ್ ।
ಮಾ ನೃಪಂ ಜಹಿ ಸತ್ಯಾಂ ತ್ವಂ ಕುರು ವಾಚಂ ತಿರಸ್ಕುರು ॥೧೨೩॥

ಬಲಾಕನೆಂಬ ಒಬ್ಬ ಬೇಡ ಮಾತಾಪಿತೃಗಳ ಸಲುವಾಗಿ ಆಹಾರಕ್ಕಾಗಿ ಮೃಗವನ್ನು ಕೊಂದು ಸ್ವರ್ಗವನ್ನು ಹೊಂದಿದ. ಏಕೆಂದರೆ ಆ ಮೃಗರೂಪದಿಂದ ಬಂದವನು ಒಬ್ಬ ಅಸುರನಾಗಿದ್ದ. ಲೋಕನಾಶಕ್ಕಾಗಿಯೆ ದುರ್ಬುದ್ಧಿಯವನಾದ ಆತ ಬ್ರಹ್ಮನ ಕುರಿತು ತಪಸ್ಸು ಮಾಡುತ್ತಿದ್ದ. ಅದರಿಂದ ಸಜ್ಜನರಿಗೆ ಪೋಷಕವಾದುದೇ ಧರ್ಮ ಎಂದು ನಿಶ್ಚಯ ಮಾಡಿಕೊಂಡು ಯುಧಿಷ್ಠಿರನನ್ನು ಕೊಲ್ಲದಿರು. ಆದರೆ ಅವನನ್ನು 'ನೀನು' ಎನ್ನುತ್ತ ಅವಮಾನಿಸು. ಆ ಮೂಲಕ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡು.

ತ್ವಮಿತ್ಯುಕ್ತೋ ಹಿ ನಿಹತೋ ಗುರುರ್ಭವತಿ ಭಾರತ
'ನೀನು' ಎಂದು ಏಕವಚನದಿಂದ ಅವಮಾನಿಸಿದರೆ ಅದೇ ಹಿರಿಯರಿಗೆ ಕಿರಿಯರು ಮಾಡುವ ವಧೆ ಎನಿಸುತ್ತದೆ. ಅದು ವಧೆ ಇಲ್ಲದ ವಧೆ.

ಅವಧೇನ ವಧಃ ಪ್ರೋಕ್ತೋ ಯದ್ ಗುರುಸ್ತ್ವಮಿತಿ ಪ್ರಭುಃ
(ಕರ್ಣ ೭೨.೮೬)

ಎಂದು ಅಥರ್ವಣವೇದದ ವಚನವಿದೆ. ಹೀಗೆ ಮಾಡದೆ, ಹಿರಿಯರನ್ನು ಕೊಂದರೆ ಮಹಾಪಾಪ. ಪಾಪ ಮಾಡಿದೆನೆಂದು ಆತ್ಮಹತ್ಯೆ ಮಾಡಿಕೊಂಡರಂತೂ ಇಮ್ಮಡಿ ಪಾಪ.[1]

1. ಜ್ಯೇಷ್ಠವಧಾದ್ಧರ್ಮನಾಶೋ ಜಾತ ಇತಿ ಭೀತೇನ ತ್ವಯಾಽಽತ್ಮವಧೇ ಕೃತೇ ಪುನರಪಿ ಧರ್ಮನಾಶ ಏವ ಭವತಿ। -ಲಕ್ಷ್ಮಾಲಂಕಾರ

ಉಪದ್ರವಾಯ ಲೋಕಸ್ಯ ತಪಶ್ಚರತಿ ದುರ್ಮತಿಃ ।
ಇತ್ಯುಕ್ತೋ ಬಹುಧಾಽನಿಂದತ್ ಕ್ರೋಧಾದೇವಾರ್ಜುನೋ ನೃಪಮ್ ।
ತ್ವಂ ನೃಶಂಸಃ ಕೃತಘ್ನಶ್ಚ ನಿರ್ವೀರ್ಯಃ ಪರುಷಂವದಃ ॥೧೨೪॥
ತ್ವತ್ತಃ ಸುಖಂ ನಾಸ್ತಿ ಕಿಂಚಿನ್ನ ಮಾಂ ಗರ್ಹಿತುಮರ್ಹಸಿ ।
ಭೀಮೋ ಮಾಂ ಗರ್ಹಿತುಂ ಯೋಗ್ಯೋ ಯೋ ಹ್ಯಸ್ಮಾಕಂ ಸದಾ ಗತಿಃ॥೧೨೫
ಯೋ ಯುಧ್ಯತೇ ಸರ್ವವೀರೈರದ್ಯಾಪಿ ತ್ವಂ ತು ನಿಂದಕಃ ।
ಇತ್ಯಾದ್ಯುಕ್ತ್ವಾತ್ಮನಾಶಾಯ ವಿಕೋಶಂ ಕೃತವಾನಸಿಮ್ ॥೧೨೬॥

ಕೃಷ್ಣ, ಹೀಗೆ ಹೇಳಿದಾಗ ಅರ್ಜುನ ಧರ್ಮರಾಜನನ್ನು ಸಿಟ್ಟಿನಿಂದಲೆ ಬಹುವಾಗಿ ನಿಂದಿಸಿದ. ನೀನು ಕ್ರೂರ, ಕೃತಘ್ನ, ನಿರ್ವೀರ್ಯ. ಸದಾ ಕಟುನುಡಿಗಳನ್ನಾಡುವವ, ನಿನ್ನಿಂದ ನಮಗೆ ಏನೂ ಸುಖವಿಲ್ಲ. ನಿನಗೆ ನನ್ನನ್ನು ನಿಂದಿಸಲು ಅರ್ಹತೆ ಇಲ್ಲ. ಭೀಮನಾದರೋ ನನ್ನನ್ನು ನಿಂದಿಸಲು ಯೋಗ್ಯ. ಏಕೆಂದರೆ ನಾವು ಸದಾ ಅವನ ರಕ್ಷಣೆಯಲ್ಲಿರುತ್ತೇವೆ. ಅವನು ಈಗಲೂ ಎಲ್ಲ ವೀರರೊಡನೆ ಯುದ್ಧ ಮಾಡುತ್ತಿದ್ದಾನೆ. ನೀನು ಮಾತ್ರ ಎಲ್ಲರನ್ನೂ ನಿಂದಿಸುವವ.' ಎಂದು ಮುಂತಾಗಿ ಹೇಳಿ ಅರ್ಜುನ ಆತ್ಮಹತ್ಯೆಗಾಗಿ ಖಡ್ಗವನ್ನು ಒರೆಯಿಂದ ತೆಗೆದ.

ಪುನಃ ಕೃಷ್ಣೇನ ಪೃಷ್ಟಃ ಸ ಸ್ವಾಭಿಪ್ರಾಯಮುವಾಚ ತಂ ।
ತಚ್ಛ್ರುತ್ವಾ ಗರ್ಹಯಿತ್ವೈನಂ ಪುನರಾಹ ಜನಾರ್ದನಃ ॥೧೨೭॥

ಇದೇನು, ಏಕೆ ಎಂದು ಪುನಃ ಶ್ರೀಕೃಷ್ಣ ಕೇಳಿದಾಗ ಅರ್ಜುನ ತನ್ನ ಅಭಿಪ್ರಾಯವನ್ನು ಹೇಳಿದ. ಅದನ್ನು ಕೇಳಿ ಶ್ರೀಕೃಷ್ಣ ಅವನನ್ನು ಬೈದು ಪುನಃ ಹೇಳಿದ.

ಪರಮಧಾರ್ಮಿಕನಾದ ಅಣ್ಣನನ್ನು ನಿಂದಿಸಿದ್ದರಿಂದ ವಧೆ ಮಾಡಿದಂತಾಯಿತು. ಅದಕ್ಕೆ ದೇಹಾಂತ ಪ್ರಾಯಶ್ಚಿತ್ತವೆಂದು ಆತ್ಮಹತ್ಯೆ ಮಾಡಿಕೊಳ್ಳುವೆನೆಂಬುದು ಅರ್ಜುನನ ಅಭಿಪ್ರಾಯ.

ಮತಿಪೂರ್ವಂ ದೇಹಹಾನಾತ್
ಪಾಪಂ ಮಹದವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ
ಸಾಧನಂ ದೇಹತೋಽಸ್ತಿ ಯತ್ ॥೧೨೮॥

ತಿಳಿದು ತಿಳಿದು ದೇಹನಾಶ ಮಾಡಿಕೊಳ್ಳುವುದರಿಂದ ಮಹಾಪಾಪ ಬರುತ್ತದೆ. ಏಕೆಂದರೆ ಧರ್ಮ ಅರ್ಥ ಕಾಮ ಮೋಕ್ಷಗಳ ಸಾಧನೆ ದೇಹದಿಂದಲೆ ಸಾಧ್ಯವಿರುತ್ತದೆ.

ಅತೋ ಮಾ ತ್ಯಜ ದೇಹಂ ತು ಕುರು ಚಾಽತ್ಮಪ್ರಶಂಸನಮ್ ।
ವಧೋ ಗುರೂಣಾಂ ತ್ವಂಕಾರಃ ಸ್ವಪ್ರಶಂಸೈವ ಚಾಽತ್ಮನಃ ॥೧೨೯॥

ಅದರಿಂದ ದೇಹವನ್ನು ಪರಿತ್ಯಜಿಸಬೇಡ. ದೇಹತ್ಯಾಗಕ್ಕೆ ಸಮವಾದ ಆತ್ಮಪ್ರಶಂಸೆ ಮಾಡಿಕೊಳ್ಳು. ಏಕೆಂದರೆ ನೀನು ಎನ್ನುತ್ತ ಅವಮಾನಿಸುವುದು ಹಿರಿಯರಿಗೆ ವಧೆ. ಆತ್ಮಪ್ರಶಂಸೆಯೇ ತನಗೆ ವಧೆ.

ಇತ್ಯುಕ್ತಃ ಸ ತ್ವಹಂಕಾರಾಚ್ಛಶಂಸ ಸ್ವಗುಣಾನಲಮ್ ॥೧೩೦॥

ಶ್ರೀಕೃಷ್ಣ ಹೀಗೆ ಹೇಳಿದಾಗ ಅರ್ಜುನ ಅಹಂಕಾರದಿಂದ ತನ್ನ ಗುಣಗಳನ್ನು ಬಹಳ ಹೊಗಳಿಕೊಂಡ.

ಗುರುನಿಂದಾಽಽತ್ಮಪೂಜಾ ಚ ನ ಧರ್ಮಾಯ ಭವೇತ್ ಕ್ವಚಿತ್ ।
ತಥಾಽಪ್ಯರ್ಜುನಹಾರ್ದಂ ತತ್ ಸಂಪ್ರಕಾಶ್ಯ ಜನಾರ್ದನಃ ॥೧೩೧॥
ತಸ್ಯ ಲಜ್ಜಾಂ ಸಮುತ್ಪಾದ್ಯ ನಾಶಯಿತ್ವಾ ಚ ತಂ ಮದಮ್ ।
ನಾಹಂ ವೇದ ಪರಂ ಧರ್ಮಂ ಕೃಷ್ಣ ಏವ ಗತಿರ್ಮಮ ॥೧೩೨॥
ಇತಿ ಭಾವಂ ಸಮುತ್ಪಾದ್ಯ ದೋಷಾನ್ ನಾಶಯಿತುಂ ಹರಿಃ ।
ಕಾರಯಾಮಾಸ ತತ್ ಸರ್ವಮರ್ಜುನೇನ ಜಗತ್ಪತಿಃ ॥೧೩೩॥

ಹಿರಿಯರ ನಿಂದೆಯಾಗಲಿ ಆತ್ಮಪ್ರಶಂಸೆಯಾಗಲಿ ಎಂದೂ ಧರ್ಮಕ್ಕೆ ಅನುಕೂಲವಲ್ಲ. ಆದರೂ ಅರ್ಜುನನ ಹೃದ್ಗತ ಪ್ರಕಟವಾಗುವಂತೆ ಮಾಡಿ ತನಗೆ ಧರ್ಮರಹಸ್ಯ ತಿಳಿದಿಲ್ಲವೆಂದು ಅವನಿಗೆ ಲಜ್ಜೆ ಉಂಟುಮಾಡುವ ಮೂಲಕ ತಾನು ಎಲ್ಲ ಧರ್ಮ ತಿಳಿದವನೆಂಬ ಅಹಂಕಾರವನ್ನು ಕಳೆದು 'ಮುಖ್ಯ ಧರ್ಮವನ್ನು ನಾನು ತಿಳಿದಿಲ್ಲ. ನನಗೆ ಕೃಷ್ಣನೆ ಮಾರ್ಗದರ್ಶಕ' ಎಂಬ ಭಾವವನ್ನು ಹುಟ್ಟಿಸಿ ದೋಷಗಳನ್ನು ಕಳೆಯಲು ಜಗದೊಡೆಯ ಜನಾರ್ದನ ಹರಿ ಎಲ್ಲವನ್ನೂ ಅರ್ಜುನನಿಂದ ಮಾಡಿಸಿದ.

ಪ್ರತಿಜ್ಞಾಪಾಲನೆಗಾಗಿ ಧರ್ಮರಾಜನನ್ನು ಹತ್ಯೆ ಮಾಡುವುದು, ಅದಕ್ಕೆ ಪ್ರಾಯಶ್ಚಿತ್ತವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ಎರಡೂ ಧರ್ಮವೆ ಎಂಬುದು ಅರ್ಜುನನ ಹೃದ್ಗತವಾಗಿತ್ತು.

ತತ ಏತದವಿಜ್ಞಾನಾತ್ ಕುಪಿತೋ ನೃಪತಿರ್ಭೃಶಮ್ ।
ಆಹಾಸ್ತ ರಾಜಾ ಭೀಮಸ್ತ್ವಂ ಯುವಾ ಮಾಂ ಜಹಿ ಚ ಸ್ವಯಮ್ ।
ವನಂ ವಾ ವಿಫಲೋ ಯಾಮೀತ್ಯುಕ್ತ್ವೋತ್ತಸ್ಥೌ ಸ್ವತಲ್ಪತಃ ॥೧೩೪॥

ಇದೆಲ್ಲದರ ಅರಿವೇ ಇಲ್ಲದೆ ಧರ್ಮರಾಜ ಬಹಳ ಕುಪಿತನಾದ. ಹೇಳಿದ, 'ಭೀಮನೆ ರಾಜನಾಗಲಿ, ನೀನು ಯುವರಾಜನಾಗು, ನನ್ನನ್ನು ನೀನು ಕೊಂದು ಬಿಡು ಅಥವಾ ಅಪ್ರಯೋಜಕನಾದ ನಾನು ಕಾಡಿಗೆ ಹೋಗುತ್ತೇನೆ.' ಹೀಗೆ ಹೇಳಿ ತನ್ನ ಹಾಸಿಗೆಯಿಂದ ಎದ್ದ.

ತಂ ವಾಸುದೇವಃ ಪ್ರತಿಗೃಹ್ಯ ಹೇತು-
ಮುಕ್ತ್ವಾ ಸರ್ವಂ ಶಮಯಾಮಾಸ ನೇತಾ ।

ಪಾರ್ಥಶ್ಚ ಭೂಪಸ್ಯ ಪಪಾತ ಪಾದಯೋಃ
ಕ್ಷಮಾಪಯನ್ ಸೋಽಪಿ ಸುಪ್ರೀತಿಮಾಪ ॥೧೩೫॥

ಶ್ರೀಕೃಷ್ಣ ಧರ್ಮರಾಜನನ್ನು ಹಿಡಿದು ಎಲ್ಲ ಕಾರಣವನ್ನೂ ತಿಳಿಸಿ ಸಮಾಧಾನಪಡಿಸಿದ. ಅರ್ಜುನನೂ ಧರ್ಮರಾಜನ ಕ್ಷಮೆ ಬೇಡುತ್ತ ಕಾಲುಗಳಿಗೆ ಬಿದ್ದ. ಧರ್ಮರಾಜ ಬಲು ಸಂತೋಷಗೊಂಡ.

ತೌ ಭ್ರಾತರೌ ವಾಸುದೇವಪ್ರಸಾದಾ-
ನ್ಮಹಾಪದೋ ಮುಕ್ತಮಾಪ್ಯಾತಿಹೃಷ್ಟೌ ।
ಭಕ್ತ್ಯಾ ಸಮಸ್ತಾಧಿಪತಿಂ ಶಶಂಸತು-
ಸ್ತ್ವಯಾ ಸಮಃ ಕೋ ನು ಹರೇ ಹಿತೋ ನಃ ॥೧೩೬॥

ಆ ಇಬ್ಬರೂ ಸೋದರರೂ ಕೃಷ್ಣನ ಅನುಗ್ರಹದಿಂದ ದೊಡ್ಡ ಆಪತ್ತಿನಿಂದ ಬಿಡುಗಡೆ ಹೊಂದಿ ಬಹಳ ಸಂತುಷ್ಟರಾದರು. ಭಕ್ತಿಯಿಂದ ಸರ್ವೇಶ್ವರನನ್ನು ಕೊಂಡಾಡಿದರು, 'ಹರಿ! ನಮಗೆ ನಿನ್ನಂಥ ಹಿತಕಾರಿ ಇನ್ನು ಯಾರಿದ್ದಾನೆ?' ಎಂದು.

ತತಃ ಪ್ರಣಮ್ಯ ಬೀಭತ್ಸುರಗ್ರಜಂ ಪರಿರಂಭಿತಃ ।
ತೇನಾಭಿನಂದಿತಃ ಪ್ರೀತ್ಯಾ ಚಾಕಶೀರ್ಭಿಃ ಪ್ರಯಯೌ ಯುಧೇ ॥೧೩೭॥

ಬಳಿಕ ಅರ್ಜುನ ಅಣ್ಣನನ್ನು ನಮಿಸಿ ಅವನ ಆಲಿಂಗನ ಪಡೆದು ಅವನಿಂದ ಪ್ರೀತಿಯ ಆಶೀರ್ವಾದಗಳಿಂದ ಅಭಿನಂದಿತನೂ ಆಗಿ ಯುದ್ಧಕ್ಕೆ ಹೊರಟ.

ತಂ ಶಂಕಿತಂ ಕರ್ಣಜಯೇ ಸ್ವಿನ್ನಗಾತ್ರಂ ಹರಿಸ್ತದಾ ।
ಸಂಕೀರ್ತ್ಯ ಪೂರ್ವಕರ್ಮಾಣಿ ನರಾವೇಶಂ ವಿಶೇಷತಃ ।
ವ್ಯಂಜಯಾಮಾಸ ಧೈರ್ಯಂ ಚ ತಸ್ಯಾಕಸೀತ್ ತೇನ ಸುಸ್ಥಿರಮ್ ॥೧೩೮॥

ಅರ್ಜುನ ಕರ್ಣನನ್ನು ಗೆಲ್ಲುವ ವಿಷಯದಲ್ಲಿ ಸಂದೇಹಪಟ್ಟು ಮೈಬೆವೆತುಕೊಂಡಾಗ ಕೃಷ್ಣ ಅವನ ಹಿಂದಿನ ನಿವಾತಕವಚ ಸಂಹಾರಾದಿ ಸಾಧನೆಗಳನ್ನು ಹೇಳಿ ಅವನಲ್ಲಿ ವಿಶೇಷವಾಗಿ ನರಾವೇಶವನ್ನು ಪ್ರಕಟಗೊಳಿಸಿದ. ಅದರಿಂದ ಅವನಲ್ಲಿ ಸ್ಥಿರವಾದ ಧೈರ್ಯ ಉಂಟಾಯಿತು.

ಭೀಮಸ್ತದಾ ಶತ್ರುಬಲಂ ಸಮಸ್ತಂ
ವಿದ್ರಾವಯಾಮಾಸ ಜಘಾನ ಚಾಽಜೌ ।
ವೀರಾನ್ ರಣಾಯಾಭಿಮುಖಾನ್ ಸ್ವಯಂತ್ರಾ
ಕುರ್ವಂಶ್ಚ ವಾರ್ತಾ ರಮಮಾಣ ಏವ ॥೧೩೯॥

ಭೀಮ ಆಗ ಸಾರಥಿ ವಿಶೋಕನೊಡನೆ ವಿನೋದವಾಗಿ ಮಾತನಾಡುತ್ತ ಆನಂದಿಸುತ್ತಲೆ ಸಮಸ್ತ ಶತ್ರುಸೇನೆಯನ್ನು ಓಡಿಸಿದ. ಯುದ್ಧಕ್ಕೆ ಎದುರಾದ ವೀರರನ್ನು ಕೊಂದ.

ರಥಗಳ ಧ್ವಜ ಚಿಹ್ನೆಗಳಿಂದ ಶತ್ರುಗಳು ಯಾರು, ಮಿತ್ರರು ಯಾರು

ಎಂದು ತಿಳಿ ಇಲ್ಲದಿದ್ದರೆ ನಾನು ತಿಳಿಯದೆ ಎಲ್ಲರನ್ನೂ ಕೊಂದುಬಿಡುವೆ ಎಂದು ಮುಂತಾಗಿ ವಿನೋದದಿಂದ ಭೀಮ ನುಡಿಯುತ್ತಾನೆ.

(ಕರ್ಣ ೮೦.೧೧)

ಶಕುನಿಯ ಪರಾಭವ

ತದಾಽಽಸದತ್ ತಂ ಶಕುನಿಃ ಸಸೈನ್ಯೋ
ದುರ್ಯೋಧನಸ್ಯಾವರಜೈರುಪೇತಃ ।
ತಂ ಭೀಮಸೇನೋ ವಿರಥಂ ನಿರಾಯುಧಂ
ವಿಧಾಯ ಬಾಣೈರ್ಭುವಿ ಚ ನ್ಯಪಾತಯತ್ ॥೧೪೦॥

ಆಗ ಶಕುನಿ ದುರ್ಯೋಧನನ ತಮ್ಮಂದಿರೊಡಗೂಡಿ ಸೈನ್ಯ ಸಮೇತನಾಗಿ ಭೀಮನಿಗೆ ಎದುರಾದ. ಭೀಮ ಅವನನ್ನು ಬಾಣಗಳಿಂದ ವಿರಥನನ್ನಾಗಿ ನಿರಾಯುಧನನ್ನಾಗಿ ಮಾಡಿ ನೆಲದ ಮೇಲೆ ಕೆಡವಿದ.

ನ ಜಘ್ನಿವಾಂಸ್ತಂ ಸಹದೇವಭಾಗಂ
ಪ್ರಕಲ್ಪಿತಂ ಸ್ವೇನ ತದಾಽಕ್ಷಗೋಷ್ಠ್ಯಾಮ್ ।
ತಂ ಮೂರ್ಚ್ಛಿತಂ ಶ್ವಾಸಮಾತ್ರಾವಶೇಷಂ
ದುರ್ಯೋಧನಃ ಸ್ವರಥೇನಾಪನಿನ್ಯೇ ॥೧೪೧॥

ಭೀಮ ಶಕುನಿಯನ್ನು ಕೊಲ್ಲಲಿಲ್ಲ. ಏಕೆಂದರೆ ದ್ಯೂತ ಸಭೆಯಲ್ಲಿ ಶಕುನಿ ವಧೆ ಸಹದೇವನ ಪಾಲಿಗೆ ಎಂದು ತಾನೆ ವ್ಯವಸ್ಥೆ ಮಾಡಿದ್ದ. ಅದರಿಂದ ಮೂರ್ಛಿತನಾಗಿ ಶ್ವಾಸ ಮಾತ್ರ ಉಳಿದಿದ್ದ ಶಕುನಿಯನ್ನು ದುರ್ಯೋಧನ ಎತ್ತಿಕೊಂಡು ತನ್ನ ರಥದಿಂದ ದೂರಕ್ಕೊಯ್ದ.

ದುರ್ಯೋಧನಸ್ಯಾವರಜಾ ದಶಾತ್ರ
ಪ್ರದುದ್ರುವುರ್ಭೀಮಸೇನಂ ವಿಹಾಯ ।
ತದಾಽರ್ಜುನಂ ವಾಸುದೇವಂ ಚ ದೃಷ್ಟ್ವಾ
ಪ್ರೀತಃ ಶ್ರುತ್ವಾ ಧರ್ಮರಾಜಪ್ರವೃತ್ತಿಮ್ ॥೧೪೨॥

ದುರ್ಯೋನನ ಹತ್ತು ಮಂದಿ ತಮ್ಮಂದಿರು ಭೀಮಸೇನನನ್ನು ಬಿಟ್ಟು ದೂರ ಓಡಿದರು. ಆಗ ಭೀಮ ಅರ್ಜುನನನ್ನೂ ಕೃಷ್ಣನನ್ನೂ ಕಂಡು ಧರ್ಮರಾಜನ ಕ್ಷೇಮಸಮಾಚಾರವನ್ನೂ ಕೇಳಿ ಸಂತುಷ್ಟನಾದ.

ದುಃಶಾಸನನ ರಕ್ತಪಾನ

ಪುನಶ್ಚ ನಿಘ್ನಂತಮರಿಪ್ರವೀರಾನ್
ವಿದ್ರಾವಯಂತಂ ಚ ನಿಜಾಂ ವರೂಥಿನೀಮ್ ।

ಸಸಾರ ದುಃಶಾಸನ ಆತ್ತಧನ್ವಾ
ಭೀಮೋಽಪಿ ತಂ ಸಿಂಹ ಇವಾಭಿಪೇದಿವಾನ್ ॥೧೪೩॥

ಪುನಃ ಶತ್ರುವೀರರನ್ನು ಕೊಲ್ಲುತ್ತ ತನ್ನ ಸೇನೆಯನ್ನು ಓಡಿಸುತ್ತಿದ್ದ ಭೀಮನನ್ನು ಧನುರ್ಧಾರಿ ದುಃಶಾಸನ ಸಮೀಪಿಸಿದ. ಭೀಮ ಅವನನ್ನು ಸಿಂಹದಂತೆ ಆಕ್ರಮಿಸಿದ.

ತಂ ರೂಕ್ಷವಾಚೋ ಮುಹುರರ್ಪಯಂತಂ
ವಿಧಾಯ ಭೀಮೋ ವಿರಥಂ ಕ್ಷಣೇನ
ಪ್ರಗೃಹ್ಯ ಭೂಮೌ ನಿಪಾತ್ಯ ವಕ್ಷೋ
ವಿದಾರಯಾಮಾಸ ಗದಾಪ್ರಹಾರತಃ ॥೧೪೪॥

ಪುನಃ ಪುನಃ ಕೆಟ್ಟ ಮಾತುಗಳನ್ನಾಡುತ್ತಿದ್ದ ದುಃಶಾಸನನನ್ನು ಭೀಮ ಕ್ಷಣದಲ್ಲಿ ವಿರಥನನ್ನಾಗಿ ಮಾಡಿ ಹಿಡಿದು ನೆಲದಲ್ಲಿ ಕೆಡವಿ ಗದಾಪ್ರಹಾರದಿಂದ ಎದೆಯನ್ನು ಸೀಳಿದ.

'ದ್ರೌಪದಿ ಅರ್ಜುನನನ್ನು ವರಿಸಿದರೆ ನೀವೆಲ್ಲರೂ ನಾಚಿಕೆಯಿಲ್ಲದೆ ಅವಳನ್ನು-ಕೂಡಿದಿರಿ. ಪಾಪಿಗಳು' ಎಂದು ದುಃಶಾಸನ ಹೇಳಿದೊಡನೆ ಭೀಮ ಅವನ ಸಾರಥಿಯನ್ನು ಕೊಂದ. ಅವನು ತಾನೆ ಕುದುರೆಗಳನ್ನು ನಡೆಸಿ ಯುದ್ಧ ಮಾಡಿದ. ಭೀಮನ ಕುದುರೆಗಳನ್ನು ಕೊಂದ. ಭೀಮ ನೆಲಕ್ಕೆ ಹಾರಿ ಗದೆಯಿಂದ ದುಃಶಾಸನನ ಕುದುರೆಗಳನ್ನು ಕೊಂದ. ಅವನನ್ನು ನೆಲದಲ್ಲಿ ಕೆಡವಿದ. ಗಂಟಲಲ್ಲಿ ಹಿಡಿದು ನಿನ್ನ ರಕ್ತ ಕುಡಿವೆನೆಂದ. ಆತ ತಪ್ಪಿಸಿಕೊಂಡು ಓಡಿದ. ಅವನನ್ನು ಬೆನ್ನಟ್ಟಿ ಸಿಂಹ ಜಿಂಕೆಯನ್ನು ಹಿಡಿಯುವಂತೆ ಹಿಡಿದು ಎತ್ತಿ ಎತ್ತಿ ನೆಲಕ್ಕೆ ಹಾಕಿದ. ಖಡ್ಗ ಹಿರಿದು ಕರ್ಣ ದುರ್ಯೋಧನಾದಿಗಳನ್ನು ಕರೆದು ಸಾರಿ ಹೇಳಿದ 'ನಾನೀತನನ್ನು ಕೊಲ್ಲುತ್ತಿದ್ದೇನೆ ಕಾಪಾಡಿಕೊಳ್ಳಿ' ಗಂಟಲ ಮೇಲೆ ಕಾಲಿಟ್ಟು 'ಯಾವ ಕೈಯಿಂದ ದ್ರೌಪದಿಯನ್ನು ಸೆಳೆದೆ? ಎಂದ. ಅವನು ಕೈಯೆತ್ತಿ' 'ಇದೇ ಕೈಯಿಂದ ದ್ರೌಪದಿಯ ಕೇಶಪಾಶವನ್ನೆಳೆದೆ!' ಎಂದ. ಒಡನೆ ಆ ಕೈಯನ್ನು ಭೀಮ ತನ್ನ ಕೈಯಿಂದ ಕಿತ್ತು ಅದರಿಂದಲೆ ಅವನನ್ನು ಹೊಡೆದ. ಬಳಿಕ ಗದಾಪ್ರಹಾರದಿಂದ ಎದೆಯನ್ನು ಸೀಳಿದ.

ಆಕ್ರಮ್ಯ ಕಂಠಂ ಚ ಪದೋದರೇಽಸ್ಯ
ನಿವಿಶ್ಯ ಪಶ್ಯನ್ ಮುಖಮಾತ್ತರೋಷಃ।
ವಿಕೋಶಮಾಕಾಶನಿಭಂ ವಿಧಾಯ
ಮಹಾಸಿಮಸ್ಯೋರಸಿ ಸಂಚಖಾನ ॥೧೪೫॥

ಭೀಮ ದುಃಶಾಸನನ ಗಂಟಲನ್ನು ಕಾಲುಗಳಿಂದ ಒತ್ತಿ ಹೊಟ್ಟೆಯ ಮೇಲೆ ಕುಳಿತು ಕೋಪಾವಿಷ್ಟನಾಗಿ ಮುಖವನ್ನೆ ನೋಡುತ್ತ ಆಕಾಶದಂತೆ ನೀಲವಾಗಿರುವ ದೊಡ್ಡ ಖಡ್ಗವನ್ನು ಒರೆಯಿಂದ ತೆಗೆದು ಅವನೆದೆಯಲ್ಲಿ ತಿವಿದ.

ಕೃತ್ವಾಽಸ್ಯ ವಕ್ಷಸ್ಯುರುಸತ್ತಟಾಕಂ
ಪಪೌ ನಿಕಾಮಂ ತೃಷಿತೋಽಮೃತೋಪಮಮ್ ।
ತಚ್ಛೋಣಿತಾಂಭೋ ಭ್ರಮದಕ್ಷಮೇನಂ
ಸಂಸ್ಮಾರಯಾಮಾಸ ಪುರಾಕೃತಾನಿ ॥೧೪೬॥

ಭೀಮ ದುಃಶಾಸನನ ಎದೆಯಲ್ಲಿ ದೊಡ್ಡ ನೆತ್ತರ ಮಡುವನ್ನು ನಿರ್ಮಿಸಿ ಬಾಯಾರಿದವ ಅಮೃತವನ್ನೆಂಬಂತೆ ನೆತ್ತರನ್ನು ಯಥೇಚ್ಛಪಾನ ಮಾಡಿದ. ದುಃಶಾಸನನ ಕಣ್ಣು ತಿರುಗುತ್ತಿದ್ದಂತೆಯೆ ಅವನ ಹಿಂದೆ ಮಾಡಿದ್ದ ದುಷ್ಟಕರ್ಮಗಳನ್ನು ನೆನಪಿಸಿದ.

ವಾಕ್ಸಾಯಕಾಂಶ್ಚಾಸ್ಯ ಪುರಾ ಸಮರ್ಪಿತಾನ್
ಸಂಸ್ಮಾರಯಾಮಾಸ ಪುನಃಪುನರ್ಭೃಶಮ್ ।
ದಂತಾಂತರಂ ನ ಪ್ರವಿವೇಶ ತಸ್ಯ
ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥೧೪೭॥

ಭೀಮ ಹಿಂದೆ ದುಃಶಾಸನನಾಡಿದ್ದ ಬಾಣಗಳಂಥ ಚುಚ್ಚು ಮಾತುಗಳನ್ನು ಪುನಃ ಪುನಃ ಚೆನ್ನಾಗಿ ನೆನಪಿಸಿದ. ಮಾನವನ ರಕ್ತ ಪಾನಯೋಗ್ಯವಲ್ಲವೆಂದು ಭೀಮ ತಿಳಿದಿದ್ದುದರಿಂದ ಅವನ ಹಲ್ಲಿನ ಒಳಗೆ ದುಃಶಾಸನನ ರಕ್ತ ಪ್ರವೇಶಿಸಿರಲಿಲ್ಲ.

ತಥಾಽಪಿ ಶತ್ರುಪ್ರತಿಭೀಷಣಾಯ
ಪಪಾವಿವಾಽಸ್ವಾದ್ಯ ಪುನಃಪುನರ್ಭೃಶಮ್ ।
ಸ್ಮರನ್ ನೃಸಿಂಹಂ ಭಗವಂತಮೀಶ್ವರಂ
ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥೧೪೮॥

ಆದರೂ ಶತ್ರುಗಳಿಗೆ ಭಯ ಉಂಟುಮಾಡುವುದಕ್ಕಾಗಿ ಭೀಮ ದುಃಶಾಸನನ ರಕ್ತವನ್ನು ಪುನಃ ಪುನಃ ಆಸ್ವಾದಿಸಿ ಯಥೇಚ್ಛ ಕುಡಿದಂತೆ ತೋರಿಕೊಂಡ. ಜಗದೊಡೆಯನಾದ ಭಗವಾನ್ ನೃಸಿಂಹನನ್ನು ಭಕ್ತಿಯಿಂದ ನೆನೆಯುತ್ತ ಮನ್ಯುಸೂಕ್ತವನ್ನು ಕಂಡುಕೊಂಡ.

ಮುಂದೆ ಗಾಂಧಾರಿ, 'ನನ್ನ ಮಗನ ರಕ್ತವನ್ನು ಹೇಗೆ ಕುಡಿದೆ?' ಎಂದು ಆಕ್ಷೇಪಿಸಿದಾಗ ಭೀಮ ಹೇಳುತ್ತಾನೆ.

ರುಧಿರಂ ನ ವ್ಯತಿಕ್ರಾಮದ್ ದಂತೋಷ್ಠಂ ಮೇಽಂಬ ಮಾಶುಚಃ
(ಸ್ತ್ರೀ ೧೫-೧೬)

'ರಕ್ತ ನನ್ನ ತುಟಿ ಹಲ್ಲುಗಳನ್ನು ದಾಟಿ ಒಳಗೆ ಹೋಗಲಿಲ್ಲ!'

ಪೂರ್ಣಕಾಮೋ ಮದೋದಗ್ರಃ ಸಿಂಹೋ ರುರುಮಿವೋತ್ಕಟಃ
ರುಧಿರಾದ್ರ್ಯೋ ಮಹಾರಾಜ ವ್ಯಶೋಭತ ಪರಂತಪಃ॥
(ಕರ್ಣ ೮೮.೧೧)

ಭೀಮ ನೆತ್ತರಿಂದ ಒದ್ದೆಯಾದ ಸಿಂಹದಂತೆ ಶೋಭಿಸಿದನೆನ್ನುತ್ತದೆ

ಭಾರತ. ಗದಗು ಭಾರತ ನರಸಿಂಹನಂತೆ ಶೋಭಿಸಿದನೆಂದಿದೆ. ಭೀಮ ದ್ರೌಪದಿಯನ್ನು ರಣರಂಗಕ್ಕೆ ಕರೆದು ಅವಳ ಎಡಗಾಲಿಂದ ದುಃಶಾಸನನನ್ನು ತುಳಿಸಿ ಅವಳನ್ನು ತೊಡೆಯ ಮೇಲೆ ಕೂಡಿಸಿಕೊಂಡು ತಲೆಗೂದಲನ್ನು ರಕ್ತದಿಂದ ತೋಯಿಸಿ ದುಃಶಾಸನನ ದಂತಪಂಕ್ತಿಯನ್ನೆ ಕಿತ್ತು ಬಾಚಣಿಗೆಯಂತೆ ಮಾಡಿ ಬಾಚಿ ತೊವಲನ್ನು ಹರಿದು ಮೈಗೆ ಉಡಿಸಿ ಕರುಳನ್ನು ಹೂವಿನಂತೆ ಮುಡಿಸಿ ರಕ್ತದ ತಿಲಕವಿಟ್ಟ ಎಡತೊಡೆಯಲ್ಲಿ ಮಡದಿ. ಬಲತೊಡೆಯಲ್ಲಿ ದುಃಶಾಸನನ ಶರೀರ. ತುದಿಬೆರಳಲ್ಲಿ ಕರುಳಿನ ಮಾಲೆ- ಸಾಕ್ಷಾತ್ ಲಕ್ಷ್ಮೀನರಸಿಂಹನಂತೆ ಕಂಡ ದ್ರೌಪದೀರಮಣ ಭೀಮ! ಮಹಾಭಾರತದ ಬೇರೆ ಪಾಠ ಏನಾದರೂ ನಾರಣಪ್ಪನಿಗೆ ಸಿಕ್ಕಿದೆಯೊ ಏನೊ!

ಯಸ್ತೇ ಮನ್ಯೋ ಇತ್ಯತೋ ನಾರಸಿಂಹಂ
ಸೋಮಂ ತಸ್ಮೈ ಚಾರ್ಪಯಚ್ಛೋಣತಾಖ್ಯಮ್ ।
ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾಽರಿವಕ್ಷ
ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥೧೪೯॥

ಮನ್ಯುನಾಮಕ ನೃಸಿಂಹ ದೇವತಾಕವಾದ 'ಯಸ್ತೇ ಮನ್ಯೋ' ಎಂಬ ಮನ್ಯುಸೂಕ್ತವನ್ನು ಕಂಡು ನೆತ್ತರೆಂಬ ಸೋಮರಸವನ್ನು ಯುದ್ಧಯಜ್ಞದಲ್ಲಿ ಅವನಿಗೆ ಭೀಮ ಅರ್ಪಿಸಿದ. ಆಗ ಶತ್ರುವಿನ ಎದೆಯನ್ನೆ ಸೋಮಲತೆಯೆಂದು ತಿಳಿದು 'ಇಹ' ಎಂಬ ಸಾಮಮಂತ್ರದಿಂದ ಗದೆಯಿಂದ ಜಜ್ಜಿದ.

[1]ಅಂದಿನ ವರೆಗೆ ಮನ್ಯುಸೂಕ್ತ ದೇವಲೋಕದಲ್ಲಿ ಮಾತ್ರ ಅಧ್ಯಯನ ಪರಂಪರೆಯಲ್ಲಿದ್ದಿತು. ಭೂಲೋಕದಲ್ಲಿ ಇರಲಿಲ್ಲ. ಅದರಿಂದ ಭೀಮ ವೇದಾಧ್ಯಯನ ಮಾಡುವಾಗ ಅದರ ಉಚ್ಚಾರಣೆ ಇರಲಿಲ್ಲ. ಸರ್ವಜ್ಞನಾದ್ದರಿಂದ ಜ್ಞಾನವಿದ್ದಿತು. ಈಗ ರಕ್ತಪಾನಕಾಲದಲ್ಲಿ ಉಚ್ಚಾರಣೆ ಮಾಡಿದ. ಹಿಂದೆ ಮನುಷ್ಯರಲ್ಲಿ ಯಾರೂ ಉಚ್ಚಾರಣೆ ಮಾಡದಿದ್ದುದನ್ನು ಭೀಮ ಈಗ ಹೊಸತಾಗಿ ಉಚ್ಚಾರಣೆ ಮಾಡಿದ್ದರಿಂದ ಭೀಮ ಮನ್ಯುಸೂಕ್ತಕ್ಕೆ ದ್ರಷ್ಟಾರನೆನಿಸಿದ. ಹೀಗೆ ಮನ್ಯುಸೂಕ್ತವನ್ನು ಕಂಡು ಮನ್ಯು ಎಂಬ ಹೆಸರಿನಿಂದ ನರಸಿಂಹನನ್ನು ಕರೆದು ರಕ್ತವನ್ನು ಸೋಮರಸವೆಂದು ಭಾವಿಸಿ ತನ್ನ ಬಾಯಿಯೆಂಬ ಆಹವನೀಯಾಗ್ನಿ ಕುಂಡದಲ್ಲಿ ಹೋಮಿಸಿದ.

---

1. ಮನ್ಯುಸೂಕ್ತಸ್ಯೈತದ್ದಿನೇ ಮುನಿ ದೇವೇಷು ಪ್ರಾಪ್ತತ್ವೇಽಪಿ ಇತಃ ಪೂರ್ವಂ ನರೇಷು ಪ್ರವೃತ್ತ್ಯಭಾವಾತ್ ಭೀಮೋನಧೀತಸ್ಯ ಜ್ಞಾತಸ್ಯಾಪಿ ತತ್ಪೂರ್ವಮನುಚ್ಚಾರಿತಸ್ಯ ತದಾನೀಮುಚ್ಚಾರಣೇನ ದದರ್ಶೇತ್ಯರ್ಥಃ। ಸ್ವಾಪೇಯಸ್ಯಾಪಿ ಸುರಾವದ್ ಹೋಮ್ಯತ್ವಂ ಸಂಭವತಿ। ಅತ ಏವೋಕ್ತಂ ಯದ್ ಘ್ರಾಣ ಭಕ್ಷ್ಮೋ ವಿಹಿತಃ ಸುರಾಣಾಮಿತೀತಿ ಜ್ಞೇಯಂ। -ತಾಮ್ರಪರ್ಣೇಯ

ಮಾನವರಕ್ತ ಅಪೇಯವಾದ್ದರಿಂದ ಕುಡಿಯಲಿಲ್ಲ, ಕುಡಿದಂತೆ ತೋರಿಕೊಂಡ. ಅಪೇಯವಾದಹವಿಸ್ಸನ್ನು ಹೋಮಿಸುವುದುಂಟು. ಉದಾ: ವಾಜಪೇಯ ಯಾಗದಲ್ಲಿ ಮದ್ಯವನ್ನು ಹೋಮಿಸುತ್ತಾರೆ. ಬಳಿಕ ಹೋಮಶೇಷವಾದ ಮದ್ಯವನ್ನು ಸೇವಿಸದೆ ಮೂಸಿ ನೋಡಿ ಬಿಟ್ಟು ಬಿಡುತ್ತಾರೆ. ಇದು ಘ್ರಾಣಭಕ್ಷ. ಇದೂ ಅನ್ಯ ಯುಗಗಳಲ್ಲಿ ವಿಹಿತ. ಕಲಿಯುಗದಲ್ಲಿ ಮದ್ಯದ ಸ್ಥಾನದಲ್ಲಿ ಹಾಲನ್ನು ಹೋಮಿಸುತ್ತಾರೆ.

ದುಃಶಾಸನನ ಎದೆಯೆ ಸೋಮಲತೆ. ಅದನ್ನು ಗದೆ ಎಂಬ ಕಲ್ಲಿನಿಂದ ಜಜ್ಜಿ ರಕ್ತವೆಂಬ ಸೋಮರಸವನ್ನು ತೆಗೆದು ಹೋಮಿಸಿದ್ದಾನೆ, ಭೀಮ. ಜಜ್ಜುವಾಗ ಹೇಳಬೇಕಾದ ಸಾಮವೇದದ ಮಂತ್ರ - 'ಇಹ'.

ಉವಾಚ ವಾಚಂ ಪುರುಷಪ್ರವೀರಃ
ಸತ್ಯಾಂ ಪ್ರತಿಜ್ಞಾಂ ಲೋಕಮಧ್ಯೇ ವಿಧಾಯ।
ಯಾಃ ಸಪತಯಸ್ತಾ ಅಪತಯೋ ಹಿ ಜಾತಾ
ಯಾಸಾಽಪತಿಃ ಸಾ ಸಪತಿಶ್ಚ ಜಾತಾ ॥೧೫೦॥

ಜೀವೋತ್ತಮನಾದ ಭೀಮಸೇನ ತನ್ನ ಪ್ರತಿಜ್ಞೆಯನ್ನು ಲೋಕದ ಮಧ್ಯದಲ್ಲಿ ಸತ್ಯವಾಗಿಸಿ ಈ ಮಾತನ್ನು ಆಡಿದ. 'ಯಾವ ಸ್ತ್ರೀಯರು ಹಿಂದೆ ಪತಿಯುಕ್ತರಾಗಿದ್ದರೋ ಅವರಿಂದು ಪತಿರಹಿತರಾದರು. ಯಾರು ಹಿಂದೆ ಪತಿರಹಿತಳೆನಿಸಿದ್ದಳೋ ಅವಳು ಇಂದು ಪತಿಯುಕ್ತಳೆನಿಸಿಕೊಂಡಳು'

ದ್ಯೂತಸಭೆಯಲ್ಲಿ ಕೌರವರು ದ್ರೌಪದಿಯನ್ನು 'ಅಪತಿರ್ಭ್ಯಸಿ ಕಲ್ಯಾಣಿ' ನೀನೀಗ ಪತಿರಹಿತಳು. ದುರ್ಯೋಧನನ ಮನೆ ಸೇರು, ಎಂದಿದ್ದರು. ಭೀಮ ಈಗ ಆ ಕೌರವರ ಹೆಂಡತಿಯರನ್ನೆ ಪತಿರಹಿತರನ್ನಾಗಿಸಿದ್ದಾನೆ.

ಪಶ್ಯಂತು ಚಿತ್ರಾಂ ಪರಮಸ್ಯ ಶಕ್ತಿಂ
ಯೇ ವೈ ತಿಲಾಃ ಷಂಢತಿಲಾ ಬಭೂವುಃ।
ಏನಂ ಗೃಹೀತಂ ಚ ಮಯಾ ಯದೀಹ
ಕಶ್ಚಿತ್ ಪುಮಾನ್ ಮೋಚಯತು ಸ್ವವೀರ್ಯಾತ್ ॥೧೫೧॥

ಸರ್ವೋತ್ತಮನ ವಿಚಿತ್ರ ಶಕ್ತಿಯನ್ನು ಕಾಣಿರಿ. ಯಾರು ಹಿಂದೆ ಗಟ್ಟಿ ಎಳ್ಳು ಕಾಳೆನಿಸಿದ್ದರೋ ಅವರು ಈಗ ಜೊಳ್ಳುಕಾಳು ಎನಿಸಿದ್ದಾರೆ. ಯಾರು ಹಿಂದೆ ಜೊಳ್ಳುಕಾಳು ಎನಿಸಿದ್ದರೋ ಅವರು ಈಗ ಗಟ್ಟಿ ಕಾಳುಗಳೆನಿಸಿದ್ದಾರೆ. ಜೊಳ್ಳು ಎಳ್ಳೆನಿಸಿದ್ದ ನಾನೀಗ ದುಃಶಾಸನನನ್ನು ಹಿಡಿದುಕೊಂಡಿದ್ದೇನೆ. ಗಟ್ಟಿ ಎಳ್ಳು, ಗಂಡು ಮನುಷ್ಯ ಯಾರಾದರೂ ಇರುವುದಾದರೆ ತನ್ನ ಪರಾಕ್ರಮದಿಂದ ಈತನನ್ನು ಬಿಡಿಸಿಕೊಳ್ಳಲಿ.

ಹಿಂದೆ ಪಾಂಡವರನ್ನು ಕೌರವರು 'ಷಂಢತಿಲಾಃ' ಜೊಳ್ಳು ಎಳ್ಳುಕಾಳುಗಳು, ನಪುಂಸಕರು ಎಂದು ಗೇಲಿ ಮಾಡಿದ್ದರು. ಅದಕ್ಕೆ ಇದು ಪ್ರತೀಕಾರ.

ಇತಿ ಬ್ರುವಾಣಃ ಪುನರೇವ ರಕ್ತಂ
ಪಪೌ ಸುಧಾಂ ದೇವವರೋ ಯಥಾ ದಿವಿ ।
ಪುನಶ್ಚ ಸಪ್ರಾಣಮಮುಂ ವಿಸೃಜ್ಯ
ನದನ್ ನನರ್ತಾರಿಬಲೇ ನಿರಾಯುಧಃ ॥೧೫೨॥

ಹೀಗೆ ಹೇಳುತ್ತ ಸ್ವರ್ಗಲೋಕದಲ್ಲಿ ದೇವೇಂದ್ರ ಅಮೃತಪಾನ ಮಾಡುವಂತೆ ಭೀಮ ಪುನಃ ಪುನಃ ರಕ್ತಪಾನ ಮಾಡಿದ. ಇನ್ನೂ ಉಸಿರಾಡುತ್ತಲೆ ಇದ್ದ ದುಃಶಾಸನನನ್ನು ಬಿಟ್ಟು ನಿರಾಯುಧನಾಗಿ ಸಿಂಹನಾದ ಮಾಡುತ್ತ ಶತ್ರುಸೈನ್ಯದ ನಡುವೆ ಕುಣಿದಾಡಿದ.

ಪ್ರತ್ಯನೃತ್ಯನ್ ಪುರಾ ಯೇಽಸ್ಮಾನ್ ಪುನರ್ಗೌರಿತಿ ಗೌರಿತಿ ।
ತಾನ್ ವಯಂ ಪ್ರತಿನೃತ್ಯಾಮಃ ಪುನರ್ಗೌರಿತಿ ಗೌರಿತಿ ॥೧೫೩॥

ಹಿಂದೆ ಯಾರು ನಮ್ಮನ್ನು ಗೂಳಿ ಗೂಳಿ ಎಂದು ಮತ್ತೆ ಮತ್ತೆ ಅಣಕಿಸಿ ಕುಣಿದರೋ ಅವರನ್ನು ಈಗ ನಾವು ಗೂಳಿ ಗೂಳಿ ಎಂದು ಮತ್ತೆ ಮತ್ತೆ ಅಣಕಿಸಿ ಕುಣಿದಾಡುವೆವು.

ದುರ್ಯೋಧನನೂ ಎತ್ತು, ದುಃಶಾಸನನೂ ಎತ್ತು. ನಾವು ಅವರನ್ನು ಮುಗಿಸುವ ಹುಲಿಗಳು ಅಥವಾ ದುರ್ಯೋಧನನೂ ಹುಲ್ಲು, ದುಃಶಾಸನನೂ ಹುಲ್ಲು. ಅವರನ್ನು ಮುಗಿಸುವ ಎತ್ತುಗಳು ನಾವು ಎಂದು ಕುಣಿದಾಡುವೆವು.[1]

ಇತಿ ಬ್ರುವನ್ ನೃತ್ಯಮಾನೋಽರಿಮಧ್ಯ
ಆಸ್ಫೋಟಯನ್ ಶತ್ರುಗಣಾನಜೋಹವೀತ್ ।
ಶಶಾಕ ಚ ದ್ರಷ್ಟುಮಮುಂ ನ ಕಶ್ಚಿದ್
ವೈಕರ್ತನದ್ರೌಣಿಸುಯೋಧನಾದಿಷು ॥೧೫೪॥

ಹೀಗೆ ಹೇಳುತ್ತ ಶತ್ರುಗಳ ನಡುವೆ ಕುಣಿದಾಡುತ್ತ ತೊಡೆ ತಟ್ಟಿಕೊಳ್ಳುತ್ತ ಭೀಮಸೇನ ಶತ್ರು ಸಮೂಹಗಳನ್ನು ಯುದ್ಧಕ್ಕೆ ಕರೆದ. ಕರ್ಣ ಅಶ್ವತ್ಥಾಮ ದುರ್ಯೋಧನ ಮುಂತಾದವರಲ್ಲಿ ಯಾರೊಬ್ಬನೂ ಭೀಮನನ್ನು ನೋಡಲೂ ಶಕ್ತನಾಗಲಿಲ್ಲ.

ಭಯಾಚ್ಚ ಕರ್ಣಸ್ಯ ಪಪಾತ ಕಾರ್ಮುಕಂ
ನಿಮೀಲಯಾಮಾಸ ತದಾಕ್ಷಿಣೀ ಚ ।

---

1. ದುರ್ಯೋಧನೋಽಪಿ ಗೌಃ ದುಃಶಾಸನೋಽಪಿ ಗೌಃ। ವಯಂ ತು ಶಾರ್ದೂಲಾ ಇತಿ ಪ್ರತಿನೃತ್ಯಾಮ ಇತಿ ಭಾವಃ। ಯದ್ವಾ ದುರ್ಯೋಧನೋಽಪಿ ತೃಣಂ। ದುಃಶಾಸನೋಽಪಿ ತೃಣಂ। ಅಹಮಪಿ ಗೌಃ ನಂದೀಶ್ವರಃ। ಅರ್ಜುನೋಽಪಿ ಗೌಃ ನಂದೀಶ್ವರಃ ಇತಿ ಪ್ರತಿನೃತ್ಯಾಮ ಇತ್ಯರ್ಥಃ।
-ವಾದಿರಾಜೀಯ

ಸಂಬೋಧಿತೋ ಮದ್ರರಾಜೇನ ಯುದ್ಧೇ
ಸ್ಥಿತಃ ಕಥಂಚಿತ್ ಸ ತು ಪಾರ್ಥಭಾಗಃ ॥೧೫೫॥

ಆಗ ಭಯದಿಂದ ಕರ್ಣನ ಬಿಲ್ಲು ಬಿದ್ದಿತು. ಆತ ಕಣ್ಣುಗಳನ್ನು ಮುಚ್ಚಿಕೊಂಡ. ಶಲ್ಯ ಎಚ್ಚರಿಸಿದಾಗ ಅರ್ಜುನನ ಪಾಲಿಗೆ ಎಂದೇ ಮೀಸಲಾಗಿದ್ದ ಕರ್ಣ ಬಲು ಕಷ್ಟದಿಂದ ಯುದ್ಧದಲ್ಲಿ ಸ್ಥಿರನಾಗಿ ನಿಂತ.

ಕರ್ಣನಿಗೆ ಅರ್ಜುನನೆ ತನ್ನ ವಧೆಯ ಪ್ರತಿಜ್ಞೆ ಮಾಡಿರುವುದು ಗೊತ್ತು. ಅದರಿಂದ ಅವನಿಗೆ ಭೀಮನ ಭಯವಿಲ್ಲ. ಭೀಮ ಅನೇಕ ಬಾರಿ ಅವನನ್ನು ಕೊಲ್ಲದೇ ಬಿಟ್ಟಿದ್ದ. ಅದರಿಂದ ಭೀಮನ ಭಯಂಕರ ನೃಸಿಂಹಲೀಲೆಯನ್ನು ಕಂಡು ಭಯದಿಂದ ತತ್ತರಿಸಿದರೂ ಹೇಗೋ ಸಾವರಿಸಿಕೊಂಡು ನಿಂತ.

ದ್ರೌಣಿರ್ವಿಹಾಯೈನಮಪಾಜಗಾಮ
ದೂರಂ ತದಾ ಭೀಮಸೇನೋ ಜಗಾದ ।
ಪೀತಃ ಸೋಮೋ ಯುದ್ಧಯಜ್ಞೇ ಮಯಾಽದ್ಯ
ವಧ್ಯಃ ಪಶುರ್ಮೇ ಹರಯೇ ಸುಯೋಧನಃ ॥೧೫೬॥

ಅಶ್ವತ್ಥಾಮ ಭೀಮನನ್ನು ಬಿಟ್ಟೇ ದೂರ ನಡೆದ. ಆಗ ಭೀಮ ನುಡಿದ, 'ಯುದ್ಧ ಯಜ್ಞದಲ್ಲಿ ಸೋಮಪಾನ ಮಾಡಿದ್ದೇನೆ. ಇನ್ನು ಶ್ರೀಹರಿಗಾಗಿ ದುರ್ಯೋಧನನೆಂಬ ಪಶುವನ್ನು ನಾನು ಕೊಲ್ಲಬೇಕು.'

ಸೋಮಯಾಗದಲ್ಲಿ ಅದರ ಅಂಗವಾಗಿ ಸವನೀಯ ಪಶು ಯಾಗವನ್ನೂ ಮಾಡಬೇಕು. ದುಃಶಾಸನನೀಗ ಸೋಮಲತೆಯಾಗಿದ್ದಾನೆ. ಸೋಮಾಹುತಿ ನಡೆದಿದೆ. ಇನ್ನು ಪಶುಯಾಗ. ದುರ್ಯೋಧನ ಸವನೀಯ ಪಶುವಾಗಬೇಕು.

ಇತಿ ಬ್ರುವನ್ ಮೃತಮುತ್ಸೃಜ್ಯ ಶತ್ರುಂ
ದುರ್ಯೋಧನಂ ಚಾಽಶು ರುಷಾಽಭಿದುದ್ರುವೇ ।
ಆಯಾಂತಮೀಕ್ಷ್ಯೈವ ತಮುಗ್ರಪೌರುಷಂ
ದುದ್ರಾವ ಭೀತಃ ಸ ಸುಯೋಧನೋ ಭೃಶಮ್ ॥೧೫೭॥

ಹೀಗೆ ಹೇಳುತ್ತ ಭೀಮ ಮೃತನಾದ ದುಃಶಾಸನನನ್ನು ಬಿಟ್ಟು ದುರ್ಯೋಧನನನ್ನು ಬೇಗನೆ ಕೋಪದಿಂದ ಬೆನ್ನಟ್ಟಿದ. ಭಯಂಕರ ಪೌರುಷಶಾಲಿಯಾದ ಆ ಭೀಮ ಬರುವುದನ್ನು ಕಂಡೇ ದುರ್ಯೋಧನ ಬಲುಭೀತನಾಗಿ ಪಲಾಯನ ಮಾಡಿದ.

ಕುಣಿಯುತ್ತಿದ್ದ ಭೀಮ ದುಃಶಾಸನನಿಗೆ ಇನ್ನೂ ಚಿತ್ರಹಿಂಸೆ ಕೊಡಲೆಂದು ಹಿಂತಿರುಗಿ ಬಂದು ನೋಡಿದಾಗ ನಿರಾಶೆಯಾಯಿತು, ಆತ

ಸತ್ತಿದ್ದ. ಕಿಂ ವಾ ಕುರ್ಯಾಂ? ಮೃತ್ಯುನಾ ರಕ್ಷಿತೋಽಸಿ! ನಾನೇನು ಮಾಡಲಿ? ಮೃತ್ಯು ನಿನ್ನನ್ನು ಪರಲೋಕಕ್ಕೆ ಒಯ್ದು ಕಾಪಾಡಿದಳು. ಇಲ್ಲದಿದ್ದರೆ... ಎಂದು ಗೊಣಗಿದನಂತೆ ಭೀಮ. ಇಂಥ ಕೋಪದ ಸೇಡಿನ ಪ್ರತೀಕಾರದ ಭಾವನೆಯನ್ನು ಭೀಮ ಹದಿಮೂರು ವರ್ಷಕಾಲ ತಡೆದುಕೊಂಡಿದ್ದ. ಇದೂ ಭೀಮ ಬಲವೆ! ಭೀಮನ ಮನೋಬಲ!

ಬಲದ್ವಯಂ ಚಾಪಯಯೌ ವಿಹಾಯ
ಭಯಾದ್ ಭೀಮಂ ಕೃಷ್ಣಪಾರ್ಥೌ ವಿನೈವ।
ಆಯೋಧನಂ ಶೂನ್ಯಮಭೂನ್ಮುಹೂರ್ತಂ
ನನರ್ತ ಭೀಮೋ ವ್ಯಾಘ್ರಪದೇನ ಹರ್ಷಾತ್ ॥೧೫೮॥

ಕೃಷ್ಣಾರ್ಜುನರು ಹೊರತು ಎರಡೂ ಸೈನ್ಯ ಭಯದಿಂದ ಭೀಮನನ್ನು ಬಿಟ್ಟು ಪಲಾಯನ ಮಾಡಿತು. ಒಂದು ಮುಹೂರ್ತಕಾಲ ರಣರಂಗ ಶೂನ್ಯವಾಯಿತು. ಭೀಮ ಆನಂದದಿಂದ ಎರಡೂ ಕೈಗಳನ್ನು ನೆಲಕ್ಕೆ ಊರಿ ಹುಲಿಯಂತೆ ಹೆಜ್ಜೆ ಹಾಕುತ್ತ ಕುಣಿದ.

ಸಂಕಲ್ಪ್ಯ ಶತ್ರೂನ್ ಗೋವದೇವಾಽಜಿಮಧ್ಯೇ
ಶಾರ್ದೂಲವತ್ ತಚ್ಚರಿತಂ ನಿಶಾಮ್ಯ।
ಜಹಾಸ ಕೃಷ್ಣಶ್ಚ ಧನಂಜಯಶ್ಚ
ಶಶಂಸತುಶ್ಚೈನಮತಿಪ್ರಹೃಷ್ಟೌ ॥೧೫೯॥

ಭೀಮ ರಣರಂಗದ ನಡುವೆ ಶತ್ರುಗಳನ್ನು ಪಶುಗಳಂತೆ ಭಾವಿಸಿ ಹುಲಿಯಂತೆ ಕುಣಿದುದನ್ನು ಕಂಡು ಕೃಷ್ಣ ನಕ್ಕ. ಅರ್ಜುನನೂ ನಕ್ಕ. ಇಬ್ಬರೂ ಬಹಳ ಸಂತುಷ್ಟರಾಗಿ ಭೀಮನನ್ನು ಹೊಗಳಿದರು.

ಯದಾ ಸ ರಂಗಃ ಪವಮಾನಸೂನುನಾ
ಶೂನ್ಯಃ ಕೃತಸ್ತತ್ರ ಮುಹೂರ್ತಮಾತ್ರಾತ್।
ದುರ್ಯೋಧನಸ್ಯಾವರಜಾಃ ಶರೌಘೈ-
ರವೀವೃಷನ್ ಭೀಮಮುದಾರಸತ್ತ್ವಮ್ ॥೧೬೦॥

ಹೀಗೆ ರಣರಂಗ ಭೀಮನಿಂದ ಶೂನ್ಯವಾಗಿ ಮಾಡಲ್ಪಟ್ಟಾಗ ಒಂದು ಮುಹೂರ್ತ ಮಾತ್ರ ಕಳೆದೊಡನೆ ದುರ್ಯೋಧನನ ತಮ್ಮಂದಿರು ಮಹಾಬಲಿಷ್ಠನಾದ ಭೀಮನ ಮೇಲೆ ಬಾಣಗಳ ಮಳೆಗರೆದರು.

ತಾನ್ ಮಾರುತಿರ್ಬಾಣವರೈರ್ನಿಕೃತ್ತ
ಶೀರ್ಷಾನ್ ಯಮಾಯಾನಯದಾಶು ವೀರಃ।
ತಸ್ಮಿನ್ ದಿನೇ ವಿಂಶತಿರ್ಹಾರ್ತರಾಷ್ಟ್ರಾ
ಹತಾಸ್ತದನ್ಯೇ ಸಮರಾತ್ ಪ್ರದುದ್ರುವುಃ ॥೧೬೧॥

ಅವರನ್ನು ವೀರನಾದ ಭೀಮ ಬೇಗನೆ ಉತ್ತಮ ಬಾಣಗಳಿಂದ ಶಿರಶ್ಛೇದಗೈದು ಯಮನ ಬಳಿಗೆ ಅಟ್ಟಿದ. ಆ ದಿನದಲ್ಲಿ ಇಪ್ಪತ್ತು ಮಂದಿ ಧೃತರಾಷ್ಟ್ರ ಪುತ್ರರು ಹತರಾದರು. ಉಳಿದವರು ರಣರಂಗದಿಂದ ಪಲಾಯನ ಮಾಡಿದರು.

ದುಃಶಾಸನ ವಿವಿತ್ಸು ವಿಕಟ ಸಮ ಕ್ರಾಥ ನಂದ ಉಪನಂದ ನಿಷಂಗಿ
ಕವಚಿ ಖಡ್ಗಿ ದಂಡಧಾರ ಧನುರ್ಧರ ಅಲೋಲುಪ ಶಲ ಅಲಂಬು ಜಲಸಂಧ
ವಾತವೇಗ ಸುವರ್ಚ - ಮೊದಲಾದ ಇಪ್ಪತ್ತು ಮಂದಿ ಕೌರವರು ಹದಿನೇಳನೆ
ದಿನ ಮಡಿದರು.

ಕರ್ಣಾರ್ಜುನರ ಯುದ್ಧ

ಕರ್ಮಾಣ್ಯನನ್ಯೋಪಯಿಕಾನಿ ಭೀಮೇ
ಕುರ್ವತ್ಯೇವಂ ಭೀತಭೀತೇಽರಿಸಂಘೇ ।
ನಿಮೀಲಿತಾಕ್ಷೇ ಚ ಭಯೇನ ಕರ್ಣೇ
ಕರ್ಣಾತ್ಮಜೋ ನಕುಲಂ ಪ್ರತ್ಯಧಾವತ್ ॥೧೬೨॥

ಹೀಗೆ ಭೀಮ ಇತರರಿಗೆ ಅಸಾಧ್ಯವಾದ ಕರ್ಮಗಳನ್ನು ಮಾಡುತ್ತಿದ್ದಾಗ, ಶತ್ರು ಸಮೂಹ ಬಹಳ ಭಯಗ್ರಸ್ತವಾದಾಗ ಕರ್ಣನೂ ಕೂಡ ಭಯದಿಂದ ಕಣ್ಣುಮುಚ್ಚಿಕೊಂಡಿದ್ದಾಗ ಕರ್ಣನ ಮಗ ವೃಷಸೇನ ನಕುಲನ ಮುಂದೆ ಯುದ್ಧಕ್ಕೆ ಧಾವಿಸಿ ಬಂದ.

ಮಾದ್ರೀಸುತೋ ವೃಷಸೇನಂ ಶರೌಘೈ-
ರವಾರಯತ್ ತಂ ವಿರಥಂ ಚಕಾರ ।
ಕರ್ಣಾತ್ಮಜಃ ಸೋಽಪ್ಯಸಿಚರ್ಮಪಾಣಿ-
ಸ್ತಸ್ಯಾನುಗಾಂಸ್ತ್ರಿಸಹಸ್ರಂ ಜಘಾನ ॥೧೬೩॥

ನಕುಲ ವೃಷಸೇನನನ್ನು ಬಾಣ ಸಮೂಹಗಳಿಂದ ತಡೆದ. ವೃಷಸೇನ ಅವನನ್ನು ವಿರಥನನ್ನಾಗಿ ಮಾಡಿದ. ಆದರೆ ನಕುಲ ಕತ್ತಿ ಗುರಾಣಿಗಳನ್ನು ಹಿಡಿದು ಅವನ ಮೂರು ಸಾವಿರ ಸೈನಿಕರನ್ನು ಕೊಂದ.

ಕರ್ಣಾತ್ಮಜಸ್ತಸ್ಯ ಸಂಛಿದ್ಯ ಚರ್ಮ
ಭೀಮಾರ್ಜುನಾದೀನಪಿ ಬಾಣಸಂಘೈಃ ।
ಅವೀವೃಷತ್ ತಸ್ಯ ಪಾರ್ಥಃ ಶರೇಣ
ಗ್ರೀವಾಬಾಹೂರೂನ್ ಯುಗಪಚ್ಚಕರ್ತ ॥೧೬೪॥

ವೃಷಸೇನ ನಕುಲನ ಗುರಾಣಿಯನ್ನು ಕತ್ತರಿಸಿ ಭೀಮಾರ್ಜುನಾದಿಗಳ ಮೇಲೂ ಬಾಣಸಮೂಹಗಳ ಮಳೆಗರೆದ. ಅರ್ಜುನ ಒಂದೇ ಬಾಣದಿಂದ ಒಮ್ಮೆಗೇ ಅವನ ಕುತ್ತಿಗೆ ಭುಜ ತೊಡೆಗಳನ್ನು ಕತ್ತರಿಸಿದ.

ಅಭಿಮನ್ಯು ವಧೆಗೆ ಪ್ರತೀಕಾರವಾಗಿ ನಾನು ನಿನ್ನ ಮಗ ವೃಷಸೇನನನ್ನು ವಧಿಸುವೆನೆಂದು ಆಂದು ಪ್ರತಿಜ್ಞೆ ಮಾಡಿದಂತೆ ನಿನ್ನ ಕಣ್ಣ ಮುಂದೆಯೆ ಅವನನ್ನು ವಧಿಸುತ್ತಿದ್ದೇನೆ ಎಂದು ಹೇಳುತ್ತ ವಧಿಸಿದ ಅರ್ಜುನ.

ಏಕೇನ ಬಾಣೇನ ಸುತೇ ಹತೇ ಸ್ವೇ
ವೈಕರ್ತನೋ ವಾಸವಿಮಭ್ಯಧಾವತ್ ।
ತಯೋರಭೂದ್ ದ್ವೈರಥಯುದ್ಧಮದ್ಭುತಂ
ಸರ್ವಾಸ್ತ್ರವಿದ್ವರಯೋರುಗ್ರರೂಪಮ್ ॥೧೬೫॥

ಅರ್ಜುನನ ಒಂದೇ ಬಾಣದಿಂದ ತನ್ನ ಮಗ ಹತನಾದಾಗ ಕರ್ಣ ಅರ್ಜುನನ ಇದಿರಿಗೆ ಧಾವಿಸಿ ಬಂದ. ಎಲ್ಲ ಅಸ್ತ್ರಜ್ಞರೊಳಗೆ ಅಗ್ರಗಣ್ಯರಾದ ಅವರಿಬ್ಬರೊಳಗೆ ಭಯಂಕರವಾದ ಅದ್ಭುತ, ದ್ವಂದ್ವರಥ ಯುದ್ಧ ನಡೆಯಿತು.

ಪಕ್ಷಗ್ರಹಾಸತ್ರ ಸುರಾಸುರಾಸ್ತಯೋ-
ರನ್ವೇ ಚ ಜೀವಾ ಗಗನಂ ಸಮಾಶ್ರಿತಾಃ ।
ಮಹಾನ್ ವಿವಾದೋಽಪ್ಯಭವತ್ ತಯೋಃ ಕೃತೇ
ತದಾ ಗಿರೀಶೋಽವದದಬ್ಜಯೋನಿಮ್ ॥೧೬೬॥

ದೇವತೆಗಳೂ ಅಸುರರೂ ಅವರೀರ್ವರ ಪಕ್ಷಗಳನ್ನು ಹಿಡಿದರು. ಇತರ ಚೇತನರೂ ನೋಡಲು ಆಕಾಶದಲ್ಲಿ ನಿಂತರು. ಆ ಈರ್ವರಿಗಾಗಿ ದೊಡ್ಡ ವಿವಾದವೇ ನಡೆಯಿತು. ಆಗ ಶಿವ ಬ್ರಹ್ಮನಿಗೆ ಹೇಳಿದ.

ದೇವತೆಗಳು ಅರ್ಜುನನ ಪಕ್ಷದವರು. ಅಸುರರು ಕರ್ಣನ ಪಕ್ಷದವರು. ಉಳಿದ ಭೂತಪಿಶಾಚಾದಿ ಚೇತನರು ತಟಸ್ಥರಾಗಿ ಆಕಾಶದಲ್ಲಿ ನಿಂತು ನೋಡಿದರು. ಅರ್ಜುನ ಗೆಲ್ಲುವನೆಂದು ದೇವತೆಗಳೂ ಕರ್ಣ ಗೆಲ್ಲುವನೆಂದು ಅಸುರರೂ ಆಗ್ರಹದಿಂದ ವಿವಾದ ಮಾಡಿದರು.

ಸುರಾಸುರಾಣಾಂ ಭೀಮದುರ್ಯೋಧನೌ ದ್ವೌ
ಸಮಾಶ್ರಯೌ ತತ್ಪ್ರಿಯೌ ಕರ್ಣಪಾರ್ಥೌ ।
ಪ್ರಾಣೋಪಮೌ ತೇನ ಚೈತತ್ಕೃತೇ ತೇ
ಸುರಾಸುರಾಃ ಕರ್ತುಮಿಚ್ಛಂತಿ ಯುದ್ಧಮ್ ॥೧೬೭॥

'ದೇವತೆಗಳಿಗೂ ಅಸುರರಿಗೂ ಭೀಮ ಮತ್ತು ದುರ್ಯೋಧನರು ಆಶ್ರಯಭೂತರು. ಆ ಭೀಮ ದುರ್ಯೋಧನರಿಗೆ ಪ್ರಿಯರು ಪ್ರಾಣಕ್ಕೆ ಸಮಾನರು ಅರ್ಜುನ ಕರ್ಣರು. ಅದರಿಂದ ಈ ಇಬ್ಬರಿಗಾಗಿ ದೇವತೆಗಳೂ ಅಸುರರೂ ಪರಸ್ಪರ ಯುದ್ಧಮಾಡಲು ಬಯಸಿದ್ದಾರೆ.

ತದಾ ವಿನಾಶೋ ಜಗತಾಂ ಮಹಾನ್ ಸ್ಯಾತ್
ತೇನಾನಯೋಃ ಸಮಮೇವಾಸ್ತು ಯುದ್ಧಮ್ ।

ಇತೀರಿತೇ ವಾಸವಃ ಪದ್ಮಯೋನಿಂ
ಜಗಾದ ಕೃಷ್ಣೋ ಯತ್ರ ಜಯಶ್ಚ ತತ್ರ ॥೧೬೮॥

ಅದರಿಂದ ಲೋಕಗಳಿಗೆ ಮಹಾವಿನಾಶ ಉಂಟಾದೀತು. ಅದರಿಂದ ಅರ್ಜುನ ಕರ್ಣರಿಗೆ ಯುದ್ಧ ಸಮವೇ ಆಗಲಿ' ಹೀಗೆ ಶಿವ ಹೇಳಿದಾಗ ಇಂದ್ರ ಬ್ರಹ್ಮನಿಗೆ ಹೇಳಿದ- 'ಯಾರ ಪಕ್ಷದಲ್ಲಿ ಕೃಷ್ಣನಿರುವನೋ ಅವನ ಪಕ್ಷದಲ್ಲಿ ಜಯ ನಿಶ್ಚಿತ.

ಕಾಮೋ ನ ಕೃಷ್ಣಸ್ಯ ಮೃಷಾ ಭವೇದ್ಧಿ
ಕಾಮೋಽಸ್ಯ ಪಾರ್ಥಸ್ಯ ಜಯಂ ಪ್ರದಾತುಮ್ ।
ಇತ್ಯೂಚಿವಾನ್ ವಾಸವಃ ಫಲ್ಗುನಸ್ಯ
ಜಯೋಽಸ್ತು ಕರ್ಣಸ್ಯ ವಧಸ್ತಥೇತಿ ।
ಉಕ್ತ್ವೈವಮತ್ ಕಂಜಭವಸ್ತಥೇತಿ
ಪ್ರಾಹಾಸುರಾನ್ ದೇವತಾಶ್ಚಾಽಬಭಾಷೇ ॥೧೬೯॥

ಶ್ರೀಕೃಷ್ಣನ ಸಂಕಲ್ಪ ಎಂದೂ ಹುಸಿಯಾಗುವುದಿಲ್ಲ. ಅವನು ಅರ್ಜುನನಿಗೆ ಜಯ ನೀಡಲು ಸಂಕಲ್ಪ ಮಾಡಿದ್ದಾನೆ. ಹೀಗೆ ಹೇಳಿದ ದೇವೇಂದ್ರ ಅರ್ಜುನನಿಗೆ ಜಯವಾಗಲಿ ಕರ್ಣನ ವಧೆಯಾಗಲಿ ಎಂದು ಹೇಳಿ ಬ್ರಹ್ಮನನ್ನು ನಮಸ್ಕರಿಸಿದ. ಬ್ರಹ್ಮನೂ 'ಹಾಗೇ ಆಗಲಿ' ಎಂದ. ಬಳಿಕ ಅಸುರರಿಗೂ ದೇವತೆಗಳಿಗೂ ಹೀಗೆ ಹೇಳಿದ.

ನ ಕರ್ಣಾರ್ಜುನಯೋರರ್ಥೇ ವಿರೋಧಂ ಕುರುತ ಕ್ವಚಿತ್ ।
ಭೀಮದುರ್ಯೋಧನಾರ್ಥೇ ವಾ ಪಶ್ಯಂತ್ವೇವ ಚ ಸಂಯುಗಮ್ ।
ಇತ್ಯುಕ್ತೇ ಶಾಂತಿಮಾಪನ್ನಾ ದದೃಶುಃ ಸಂಯುಗಂ ತಯೋಃ ॥೧೭೦॥

'ಕರ್ಣಾರ್ಜುನರಿಗಾಗಲಿ ಭೀಮ ದುರ್ಯೋಧನರಿಗಾಗಲಿ ಎಂದೂ ಜಗಳಾಡಬೇಡಿ. ಅವರ ಯುದ್ಧವನ್ನು ಮಾತ್ರ ನೋಡಿರಿ' ಎಂದು ಬ್ರಹ್ಮ ನುಡಿದಾಗ ಎಲ್ಲರೂ ಶಾಂತರಾಗಿ ಕರ್ಣಾರ್ಜುನ ಯುದ್ಧವನ್ನು ವೀಕ್ಷಿಸಲು ತೊಡಗಿದರು.

ಮಹಾಭಾರತದಲ್ಲಿ (ಕರ್ಣ ೯೨.೧) ಪ್ರಜಾಪತಿ ಬ್ರಹ್ಮನಲ್ಲಿ 'ಕರ್ಣಾರ್ಜುನರ ಯುದ್ಧ ಸಮವಾಗಲಿ' ಎಂದು ಹೇಳಲು ಕೇಳಿಕೊಳ್ಳುತ್ತಾನೆ. ಪ್ರಜಾಪತಿ ಎಂದರೆ ಶಿವ ಎಂದು ನಿರ್ಣಯ ಹೇಳುತ್ತಿದೆ. ಇಂದ್ರ 'ಅರ್ಜುನನಿಗೆ ಜಯವಾಗಲಿ' ಎಂದು ನುಡಿಯಲು ಕೇಳಿಕೊಳ್ಳುತ್ತಾನೆ. ಆಗ ಬ್ರಹ್ಮ 'ಅರ್ಜುನನಿಗೆ ಜಯವಾಗಲಿ' ಎಂದೇ ಹೇಳುತ್ತಾನೆ. ಆದರೆ ಯಾರೂ ಇಲ್ಲಿ ಜಗಳಾಡಬೇಡಿ. ಯುದ್ಧವನ್ನು ನೋಡುತ್ತಿರಿ ಎಂದು ಆಜ್ಞೆ ಮಾಡುತ್ತಾನೆ. ಆದರಿಂದ ಶಿವ ಹೇಳುವಂತೆ ಲೋಕಕ್ಷಯವಾಗುವ ಸಂಭವವಿರಲಿಲ್ಲ.

ವವರ್ಷತುಸ್ತೌ ಚ ಮಹಾಸ್ತ್ರಶಸ್ತ್ರೈ-
ರ್ಭೀಮೋ ರಥಸ್ಥೋಽವರಜಂ ಜುಗೋಪ ।
ಶೈನೇಯಪಾಂಚಾಲಮುಖಾಶ್ಚ ಪಾರ್ಥ-
ಮಾವಾರ್ಯ ತಸ್ಥುಃ ಪ್ರಸಭಂ ನದಂತಃ ॥೧೭೦॥

ಕರ್ಣಾರ್ಜುನರು ಮಹಾ ಅಸ್ತ್ರಶಸ್ತ್ರಗಳ ಸುರಿಮಳೆ ಸುರಿಸಿದರು. ರಥಾರೂಢನಾದ ಭೀಮ ಅರ್ಜುನನ ರಕ್ಷಣೆಗೆ ನಿಂತ. ಸಾತ್ಯಕಿ ದ್ರುಪದ ಮುಂತಾದವರೂ ಕೂಡ ಅರ್ಜುನನ ರಕ್ಷಣೆಗಾಗಿ ಸುತ್ತುವರಿದು ಗಟ್ಟಿಯಾಗಿ ಗರ್ಜನೆ ಮಾಡುತ್ತ ನಿಂತರು.

ದುರ್ಯೋಧನ ದ್ರೌಣಿಮುಖಾಶ್ಚ ಕರ್ಣಂ
ರರಕ್ಷುರಾವಾರ್ಯ ತದಾಽಽಸ ಯುದ್ಧಮ್ ।
ತತ್ರಾರ್ಜುನಂ ಬಾಣಗಣೈಃ ಸ ಕರ್ಣಃ
ಸಮರ್ದಯಾಮಾಸ ವಿಶೇಷಯನ್ ರಣೇ ।
ತದಾ ನದನ್ ಭೀಮಸೇನೋ ಜಗಾದ
ಗದಾಂ ಸಮಾದಾಯ ಸಮಾತ್ತರೋಷಃ ॥೧೭೨॥

ದುರ್ಯೋಧನ ಅಶ್ವತ್ಥಾಮ ಮುಂತಾದವರು ಕರ್ಣನನ್ನು ಸುತ್ತುವರಿದು ರಕ್ಷಿಸತೊಡಗಿದರು. ಆಗ ಯುದ್ಧ ನಡೆಯಿತು. ಕರ್ಣ ಬಾಣ ಸಮೂಹಗಳಿಂದ ಯುದ್ಧದಲ್ಲಿ ಮೇಲುಗೈ ಸಾಧಿಸುತ್ತ ಅರ್ಜುನನನ್ನು ಪೀಡಿಸತೊಡಗಿದ. ಆಗ ಭೀಮಸೇನ ಕೋಪಾವಿಷ್ಟನಾಗಿ ಗದೆಯನ್ನು ಹಿಡಿದು ಗರ್ಜಿಸುತ್ತ ನುಡಿದ.

ಅಹಂ ಚೈನಂ ಗದಯಾ ಪೋಥಯಾಮಿ
ತ್ವಂ ವಾ ಜಹೀಮಂ ಸಮುಪಾತ್ತವೀರ್ಯಃ ।
ಕೃಷ್ಣೋಽಪಿ ತಂ ಬೋಧಯಾಮಾಸ ಸಮ್ಯಙ್
ನರಾವೇಶಂ ವ್ಯಂಜಯನ್ ಭೂಯ ಏವ ॥೧೭೩॥

'ಅರ್ಜುನ, ನಾನೇ ಕರ್ಣನನ್ನು ಗದೆಯಿಂದ ವಧಿಸುತ್ತೇನೆ. ಅಥವಾ ನೀನು ಪರಾಕ್ರಮತೋರಿ ಇವನನ್ನು ವಧಿಸಬೇಕು.' ಹೀಗೆ ಭೀಮ ನುಡಿದಾಗ ಕೃಷ್ಣ ಅರ್ಜುನನಲ್ಲಿ ನರಾವೇಶವನ್ನು ಇನ್ನೂ ಅಧಿಕವಾಗಿ ಪ್ರಕಟಪಡಿಸುತ್ತ ಚೆನ್ನಾಗಿ ಹುರಿದುಂಬಿಸಿದ.

ಸಮೃದ್ಧವೀರ್ಯಃ ಸ ತದಾ ಧನಂಜಯಃ
ಸುಯೋಧನದ್ರೌಣಿಕೃಪಾನ್ ಸಭೋಜಾನ್ ।
ಸಾಕಂ ಚ ಬಾಣೈರ್ವಿರಥಾಂಶ್ಚಕಾರ
ವಿವ್ಯಾಧ ತಾನಪ್ಯರಿಹಾ ಸುಪುಂಖೈಃ ॥೧೭೪॥

ಆಗ ಶತ್ರುನಾಶಕನಾದ ಅರ್ಜುನ ಶಕ್ತಿ ತುಂಬಿಕೊಂಡು ದುರ್ಯೋಧನ ಅಶ್ವತ್ಥಾಮ

ಕೃಪ ಕೃತವರ್ಮರನ್ನು ಏಕಕಾಲದಲ್ಲಿ ವಿರಥರನ್ನಾಗಿ ಮಾಡಿದ. ಮತ್ತು ಒಳ್ಳೆಯ ಗರಿಯಿಂದ ಕೂಡಿದ ಬಾಣಗಳಿಂದ ಹೊಡೆದ.

ತೇ ಕಿಂಚಿದ್ ದೂರತಸ್ತಸ್ಥುಃ ಪಶ್ಯಂತೋ ಯುದ್ಧಮದ್ಭುತಮ್।
ಅಮಾನುಷಂ ತತ್ ಪಾರ್ಥಸ್ಯ ದೃಷ್ಟ್ವಾ ಕರ್ಮ ಗುರೋಃ ಸುತಃ।
ಗೃಹೀತ್ವಾ ಪಾಣಿನಾ ಪಾಣಿಂ ದುರ್ಯೋಧನಮಭಾಷತ ॥೦೭೫॥

ದುರ್ಯೋಧನಾದಿಗಳು ಅದ್ಭುತವಾದ ಆ ಯುದ್ಧವನ್ನು ನೋಡುತ್ತ ಸ್ವಲ್ಪ ದೂರದಲ್ಲಿ ನಿಂತರು. ಅಶ್ವತ್ಥಾಮ ಅರ್ಜುನನ ಅತಿಮಾನುಷವಾದ ಯುದ್ಧವನ್ನು ನೋಡಿ ಕೈಯಿಂದ ದುರ್ಯೋಧನನ ಕೈಹಿಡಿದು ನುಡಿದ.

ದೃಷ್ಟಂ ಹಿ ಭೀಮಸ್ಯ ಬಲಂ ತ್ವಯಾಽದ್ಯ
ತಥೈವ ಪಾರ್ಥಸ್ಯ ಯಥಾ ಜಿತಾ ವಯಮ್
ಅಲಂ ವಿರೋಧೇನ ಸಮೇತ್ಯ ಪಾಂಡವೈಃ
ಪ್ರಶಾಧಿ ರಾಜ್ಯಂ ಚ ಮಯಾ ಸಮೇತಃ ॥೦೭೬॥

ಇಂದು ನೀನು ಭೀಮನ ಬಲವನ್ನು ಕಂಡಿರುವೆ. ಹಾಗೇ ಅರ್ಜುನನ ಬಲವನ್ನೂ ಕಂಡಿರುವೆ. ನಾವು ಸೋತಿದ್ದೇವೆ. ಇನ್ನು ಈ ವಿರೋಧ ಸಾಕು. ಪಾಂಡವರೊಡನೆ ಸಂಧಿ ಮಾಡಿಕೊಂಡು ರಾಜ್ಯವಾಳು. ನಾನು ನಿನ್ನ ಜೊತೆಗಿರುತ್ತೇನೆ.

ಧನಂಜಯಸ್ತಿಷ್ಠತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಛತಿ।
ವೃಕೋದರಸ್ತದ್ವಚನೇ ಸ್ಥಿತಃ ಸದಾ
ಯುಧಿಷ್ಠಿರಃ ಶಾಂತಮನಾಸ್ತಥಾ ಯಮೌ ॥೦೭೭॥

ನಾನು ತಡೆದರೆ ಅರ್ಜುನ ಸುಮ್ಮನಾಗುತ್ತಾನೆ. ಕೃಷ್ಣ ವಿರೋಧವನ್ನು ಸರ್ವಥಾ ಬಯಸುವುದಿಲ್ಲ. ಭೀಮ ಸದಾ ಕೃಷ್ಣನ ಮಾತಿನಂತೆ ನಡೆಯುವವ. ಯುಧಿಷ್ಠಿರ ಶಾಂತ ಸ್ವಭಾವದವನು. ನಕುಲಸಹದೇವರೂ ಹಾಗೇ.

ಹಿತಾರ್ಥಮೇತತ್ ತವ ವಾಕ್ಯಮೀರಿತಂ
ಗೃಹಾಣ ಮೇ ನೈವ ಭಯಾದುದೀರಿತಮ್।
ಅಹಂ ಹ್ಯವಧ್ಯೋ ಮಮ ಚೈವ ಮಾತುಲೋ
ನ ಶಂಕಿತುಂ ಮೇ ವಚನಂ ತ್ವಮರ್ಹಸಿ ॥೦೭೮॥

ನಿನ್ನ ಹಿತಕ್ಕಾಗಿ ನಾನೀ ಮಾತನ್ನು ಹೇಳಿದ್ದೇನೆ. ತಿಳಿದುಕೊಳ್ಳು; ನಾನೇನೂ ಭಯದಿಂದ ನುಡಿಯಲಿಲ್ಲ. ನಾನಾಗಲಿ ನನ್ನ ಸೋದರ ಮಾವ ಕೃಪನಾಗಲಿ ಅವಧ್ಯರೆ. ನನ್ನ ಮಾತಿನಲ್ಲಿ ಅನುಮಾನ ಪಡಬೇಡ.

ಇತೀರಿತಃ ಪ್ರಾಹ ಸುಯೋಧನಸ್ತಂ
ದುಃಶಾಸನಸ್ಯಾದ್ಯ ಪಪೌ ಹಿ ಶೋಣಿತಮ್ ।
ಶಾರ್ದೂಲಚೇಷ್ಟಾಮಕರೋಚ್ಚ ಭೀಮೋ
ನ ಮೇ ಕಥಂಚಿತ್ ತದನೇನ ಸಂಧಿಃ ॥೧೭೯॥

ಅಶ್ವತ್ಥಾಮ ಹೀಗೆ ಹೇಳಿದಾಗ ದುರ್ಯೋಧನನೆಂದ, ಭೀಮ ಈಗ ದುಃಶಾಸನನ ನೆತ್ತರನನ್ನು ಕುಡಿದಿದ್ದಾನೆ. ಹುಲಿಯಂತೆ ಕುಣಿದಿದ್ದಾನೆ. ಅದರಿಂದ ನನಗೆ ಅವನೊಡನೆ ಸಂಧಿ ಯಾವ ರೀತಿಯಿಂದಲೂ ಶಕ್ಯವಿಲ್ಲ.

ಇತ್ಯುಕ್ತೋ ದ್ರೌಣಿರಾಸೀತ್ ಸ ತೂಷ್ಣೀಂ ಕರ್ಣಧನಂಜಯೌ ।
ಮಹಾಸ್ತ್ರಶಸ್ತ್ರವರ್ಷೇಣ ಚಕ್ರತುಃ ಖಮನಂತರಮ್ ॥೧೮೦॥

ದುರ್ಯೋಧನ ಹೀಗೆ ಹೇಳಿದಾಗ ಅಶ್ವತ್ಥಾಮ ಸುಮ್ಮನಾದ. ಕರ್ಣಾರ್ಜುನರು ಮಹಾ ಅಸ್ತ್ರಶಸ್ತ್ರಗಳಿಂದ ಆಕಾಶವನ್ನು ನಿಬಿಡವಾಗಿ ತುಂಬಿದರು.

ಆಗ್ನೇಯವಾರುಣ್ಯೈಂದ್ರಾದೀನ್ಯೇತಾನ್ಯನ್ಯೋನ್ಯಮೃತ್ಯವೇ ।
ಬ್ರಹ್ಮಾಸ್ತ್ರಮಪ್ಯುಭೌ ತತ್ರ ಪ್ರಯುಜ್ಯಾನದತಾಂ ರಣೇ ।
ಅನ್ಯೋನ್ಯಾಸ್ತ್ರಪ್ರತೀಘಾತಂ ಕೃತ್ವೋಭೌ ಚ ವಿರೇಜತುಃ ॥೧೮೧॥

ಕರ್ಣಾರ್ಜುನರು ಪರಸ್ಪರ ವಧೆಗಾಗಿ ಆಗ್ನೇಯ ವಾರುಣ ಐಂದ್ರ ಮುಂತಾದ ಅಸ್ತ್ರಗಳನ್ನೂ ಬ್ರಹ್ಮಾಸ್ತ್ರವನ್ನೂ ಪ್ರಯೋಗಿಸಿ ಗರ್ಜಿಸಿದರು. ಪರಸ್ಪರ ಅಸ್ತ್ರಗಳ ಉಪಶಮನವನ್ನೂ ಮಾಡಿ ಇಬ್ಬರೂ ಶೋಭಿಸಿದರು.

ಸರ್ಪಾಸ್ತ್ರ ಗುರಿ ತಪ್ಪಿತು

ಕ್ರಮೇಣ ವೃದ್ಧೋರುಬಲೇನ ತತ್ರ
ಸುರೇಂದ್ರಪುತ್ರೇಣ ವಿರೋಚನಾತ್ಮಜಃ ।
ನಿರಾಕೃತೋ ನಾಗಮಯಂ ಶರೋತ್ತಮಂ
ಬ್ರಹ್ಮಾಸ್ತ್ರಯುಕ್ತಂ ವಿಸಸರ್ಜ ವಾಸವೌ ॥೧೮೨॥

ಅರ್ಜುನ ಕ್ರಮವಾಗಿ ಹೆಚ್ಚು ಹೆಚ್ಚು ಶಕ್ತಿ ತುಂಬಿಕೊಂಡವನಾಗಿ ಕರ್ಣನನ್ನು ಪರಾಭವಗೊಳಿಸಿದಾಗ ಕರ್ಣ ಬ್ರಹ್ಮಾಸ್ತ್ರಯುಕ್ತವಾದ ನಾಗಮಯವಾದ ಬಾಣವನ್ನು ಅರ್ಜುನನ ಮೇಲೆಸೆದ.

ತಂ ವಾಸುದೇವೋ ರಥಮಾನಮಯ್ಯ
ಮೋಘಂ ಚಕಾರಾರ್ಜುನತಃ ಕಿರೀಟಮ್ ।
ಚೂರ್ಣೇಕೃತಂ ತೇನ ಸುರೇಂದ್ರಸೂನೋ
ರ್ದಿವ್ಯಂ ಯಯೌ ಬಾಣಗತಶ್ಚ ನಾಗಃ ॥೧೮೩॥

ಆಗ ಕೃಷ್ಣ ರಥವನ್ನು ನೆಲದಲ್ಲಿ ತಗ್ಗಿಸಿ ಆ ಬಾಣವನ್ನು ಅರ್ಜುನನಲ್ಲಿ ವ್ಯರ್ಥಗೊಳಿಸಿದ. ಅರ್ಜುನನ ದಿವ್ಯ ಕಿರೀಟ ಮಾತ್ರ ಆ ಬಾಣದಿಂದ ಚೂರು ಚೂರಾಯಿತು. ಬಾಣದಲ್ಲಿದ್ದ ಅಶ್ವಸೇನ ನಾಗ ಹೊರಟು ಹೋದ.

ನಮಿತೇ ವಾಸುದೇವೇನ ರಥೇ ಪಂಚಾಂಗುಲಂ ಭುವಿ ।
ಅಪಾಂಗದೇಶಮುದ್ದಿಶ್ಯ ಮುಕ್ತೇ ನಾಗೇ ಕಿರೀಟಿನಃ ॥೧೮೪॥
ಭಂಕ್ತ್ವಾ ಕಿರೀಟಂ ವಿಯತಿ ಗಚ್ಛತಿ ಪ್ರಭುಣೋದಿತಃ ।
ಬಾಣೈಸ್ತಕ್ಷಕಪುತ್ರಂ ತಂ ವಾಸವಿಃ ಪೂರ್ವವೈರಿಣಮ್ ॥೧೮೫॥
ಹತ್ವಾ ನಿಪಾತಯಾಮಾಸ ಭೂಮೌ ಕರ್ಣಸ್ಯ ಪಶ್ಯತಃ ।
ಬ್ರಹ್ಮಾಸ್ತ್ರಸ್ಯಾತಿವೇಗಿತ್ವಂ ಪ್ರಾಪ್ತಂ ಕರ್ಣೇನ ಭಾರ್ಗವಾತ್ ॥೧೮೬॥

ಅರ್ಜುನನ ಕಡೆಗಣ್ಣ ಪ್ರದೇಶಕ್ಕೆ ಎಸೆದಿದ್ದ ನಾಗಾಸ್ತ್ರ ಕೃಷ್ಣನಿಂದ ರಥ ಐದು ಅಂಗುಲದಷ್ಟು ನೆಲದಲ್ಲಿ ತಗ್ಗಿಸಲ್ಪಟ್ಟಾಗ, ಅರ್ಜುನನ ದಿವ್ಯವಾದ ಕಿರೀಟವನ್ನು ಪುಡಿ ಮಾಡಿ ಆಕಾಶದಲ್ಲಿ ಹಾರಿಹೋಗುತ್ತಿತ್ತು. ಕೃಷ್ಣನ ಮಾತಿನಂತೆ ಅರ್ಜುನ ತನ್ನ ಹಿಂದಿನ ವೈರಿಯಾದ ಆ ತಕ್ಷಕ ಪುತ್ರ ಅಶ್ವಸೇನನನ್ನು ಕರ್ಣ ನೋಡುತ್ತಿದ್ದಂತೆಯೇ ಬಾಣಗಳಿಂದ ಕೊಂದು ನೆಲದಲ್ಲಿ ಕೆಡವಿದ. ಬ್ರಹ್ಮಾಸ್ತ್ರ ಪ್ರಯೋಗದಲ್ಲಿ ಅತಿವೇಗವನ್ನು ಕರ್ಣ ಪರಶುರಾಮನಿಂದ ಪಡೆದಿದ್ದ.

ಬಹುವರ್ಷಗಳಿಂದ ಸರ್ಪಮುಖದ ಒಂದು ಕಬ್ಬಿಣದ ಬಾಣವನ್ನು ಶ್ರೀಗಂಧದ ಪುಡಿಯಲ್ಲಿ ಇಟ್ಟು ಪೂಜಿಸುತ್ತ ಚಿನ್ನದ ಬತ್ತಳಿಕೆಯಲ್ಲಿ ಜೋಪಾನವಾಗಿಡುತ್ತಿದ್ದ, ಕರ್ಣ. 'ಅರ್ಜುನ! ನೀನೀಗ ಹತನಾದೆ' ಎಂದು ಗರ್ಜಿಸುತ್ತ ಅದನ್ನು ಅವನ ಹಣೆಗೆ ಗುರಿಇಟ್ಟ. ಶಲ್ಯ 'ಬೇಡ, ಕುತ್ತಿಗೆಗೆ ಗುರಿ ಇಡು' ಎಂದ. 'ಕರ್ಣ ಎರಡು ಬಾರಿ ಒಂದು ಬಾಣವನ್ನು ಗುರಿ ಇಡುವವನಲ್ಲ. ಅವನ ಗುರಿ ಎಂದೂ ತಪ್ಪುವುದಿಲ್ಲ' ಎಂದ ಕರ್ಣ.

ಆ ಬಾಣದಲ್ಲಿ ಯೋಗಬಲದಿಂದ ಪ್ರವಿಷ್ಟನಾಗಿದ್ದ ಅಶ್ವಸೇನ ನಾಗ ಕರ್ಣನಿಗೆ ಗೋಚರನಾಗಿರಲಿಲ್ಲ. ಇಂದ್ರ ನೋಡಿ ಅರ್ಜುನ ಹತನಾದನೆಂದು ಕಳವಳಗೊಂಡ. ಬ್ರಹ್ಮ ಅವನನ್ನು 'ಹೆದರದಿರು ಅರ್ಜುನನಿಗೆ ಜಯವಾಗುವುದು' ಎಂದು ಸಮಾಧಾನಪಡಿಸಿದ.

ಆ ಬಾಣ ಆಕಾಶದಲ್ಲಿ ಬೆಂಕಿ ಉಗುಳಲು ತೊಡಗಿದಾಗ ಕೃಷ್ಣ ರಥವನ್ನು ಐದು ಅಂಗುಲದಷ್ಟು ನೆಲದಲ್ಲಿ ಒತ್ತಿದ. ರಥ ನೆಲದಲ್ಲಿ ಹೂತಿತು. ಆಕಾಶದಲ್ಲಿ ಪುಷ್ಪವೃಷ್ಟಿಯೊಂದಿಗೆ ದೇವತೆಗಳ ಜಯಕಾರ ಧ್ವನಿ ಕೇಳಿಸಿತು. ಬಾಣ ಅರ್ಜುನನ ಕಿರೀಟವನ್ನು ಪುಡಿಮಾಡಿತು.

ಆ ಕಿರೀಟ ದಿವ್ಯವಾದುದು 'ದಿವ್ಯಂ' ಎಂದು ವರದರಾಜೀಯಪಾಠ.

ಬ್ರಹ್ಮನಿರ್ಮಿತವಾದುದು ಅಭೇದ್ಯ ಸ್ವಯಂ ಇಂದ್ರ ಅರ್ಜುನನಿಗೆ ತೊಡಿಸಿ ಅಸುರರನ್ನು ಕೊಲ್ಲಲು ಅವನನ್ನು ಕಳಿಸಿದ್ದ. ಬಾಣ ಅದನ್ನು ಪುಡಿ ಮಾಡಿದಾಗ ಅರ್ಜುನ ಕೂದಲನ್ನು ಕಟ್ಟಿಕೊಂಡು ಬಿಳಿಬಟ್ಟೆಯಿಂದ ಆಚ್ಛಾದಿಸಿಕೊಂಡ.

ಅಶ್ವಸೇನ ಹಿಂತಿರುಗಿ ಬಂದು ಕರ್ಣನನ್ನು 'ಇನ್ನೊಮ್ಮೆ ಪ್ರಯೋಗಿಸು, ನಿನ್ನ ಶತ್ರು ಅರ್ಜುನನಗೂ ಶತ್ರು' ಎಂದಾಗ ಕರ್ಣನೆಂದ 'ನಾನು ಅನ್ಯರ ಬಲವನ್ನು ಆಶ್ರಯಿಸಲಾರೆ ಎರಡುಬಾರಿ ಒಂದು ಬಾಣ ಪ್ರಯೋಗಿಸಲಾರೆ' ಹಾಗೆ ಕುಂತಿಗೆ ಮಾತು ಕೊಟ್ಟಿದ್ದನೆಂದು ಗದುಗಭಾರತ ಹೇಳುವುದು ಮಹಾಭಾರತದಲ್ಲಿ ಇಲ್ಲ. ಸರ್ಪ ತಾನೇ ಅರ್ಜುನನನ್ನು ಕೊಲ್ಲಲು ಬಂದ. ಕೃಷ್ಣನ ಮಾತಿನಿಂದ ಅರ್ಜುನ ಅವನನ್ನು ವಧಿಸಿದ.

ಕರ್ಣನ ಬ್ರಹ್ಮಾಸ್ತ್ರಕ್ಕೆ ಪ್ರತಿಯಾಗಿ ಅರ್ಜುನ ಏಕೆ ಬ್ರಹ್ಮಾಸ್ತ್ರ ಪ್ರಯೋಗಿಸಲಿಲ್ಲ ಎಂದರೆ ಅರ್ಜುನನಿಗೆ ಅಷ್ಟು ವ್ಯವಧಾನವಿರಲಿಲ್ಲ. ಪರಶುರಾಮನ ಅನುಗ್ರಹದಿಂದ ಕರ್ಣನ ಅಸ್ತ್ರಪ್ರಯೋಗ ಬಹಳ ವೇಗಯುಕ್ತವಾಗಿತ್ತು.

ವಸ್ತುತಃ ಲಕ್ಷಾಲಂಕಾರ ಪ್ರಕಾರ ಕರ್ಣನಲ್ಲಿ ಬ್ರಹ್ಮಾಸ್ತ್ರವಿರಲಿಲ್ಲ-

ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇತ್ ಶಸ್ತ್ರಪೂತಮಿತಿ ಪ್ರಭೋ
ಸಂಘರ್ಷ ಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ।

(ಶಾಂತಿ ೨.೪)

ನಾರದರು ಹೇಳುತ್ತಾರೆ. 'ಕ್ಷತ್ರಿಯರು ಶಸ್ತ್ರದಿಂದ ಮಡಿದರೆ ಸ್ವರ್ಗಕ್ಕೆ ಹೋಗುವರೆಂಬ ನಿಯಮಸಿದ್ಧಿಗಾಗಿ ಶ್ರೀಹರಿ ಕರ್ಣನನ್ನು ಅವಿವಾಹಿತ ಕ್ಷತ್ರಿಯ ಕನ್ಯೆಯಾದ ಕುಂತಿಯಲ್ಲಿ ಹುಟ್ಟಿಸಿದ. ಇಲ್ಲದಿದ್ದರೆ ಅವನಿಗೆ ಬ್ರಹ್ಮಾಸ್ತ್ರ ಲಭಿಸುತ್ತಿತ್ತು. ಬ್ರಹ್ಮಾಸ್ತ್ರದಿಂದ ಅವನೆ ಇತರರನ್ನು ಕೊಲ್ಲುತ್ತಿದ್ದ. ತಾನು ಅದರಿಂದ ಮಡಿಯುತ್ತಿರಲಿಲ್ಲ. ಅದರಿಂದ ಅವಿವಾಹಿತ ಕನ್ಯೆಯಲ್ಲಿ ಹುಟ್ಟಿಸಿ ಬ್ರಹ್ಮಾಸ್ತ್ರ ಸಿಗದಂತೆ ಮಾಡಿ ಅರ್ಜುನನ ಶಸ್ತ್ರದಿಂದ ಅವನಿಗೆ ಸ್ವರ್ಗ ಲಾಭವಾಗುವಂತೆ ಮಾಡಿದ್ದ ಶ್ರೀಹರಿ.'

ಕರ್ಣ ತಾನು ಬ್ರಾಹ್ಮಣನೆಂದು ಪರಶುರಾಮನಲ್ಲಿ ಹೇಳಿಕೊಂಡರೂ ಕೀಟ ಅವನ ತೊಡೆಯನ್ನು ಕೊರೆದಾಗ ಪರಶುರಾಮ ಅವನನ್ನು ಕನ್ಯಾಪುತ್ರನೆಂದು ತಿಳಿದು ಮುಂದೆ ಬ್ರಹ್ಮಾಸ್ತ್ರ ಉಪದೇಶ ನೀಡಲಿಲ್ಲ. ನಿರ್ಣಯದಲ್ಲಿ ಬ್ರಹ್ಮಾಸ್ತ್ರವೆಂದರೆ ಅದಕ್ಕೆ ತುಲ್ಯವಾದ ಪಂಚಮ ವೇದೋಕ್ತ ಮಂತ್ರವೆಂದಿಟ್ಟುಕೊಳ್ಳಬಹುದು.

ಕರ್ಣಾವಸಾನ

ಪುನಶ್ಚ ಪಾರ್ಥೇನ ಮಹಾಸ್ತ್ರಯುದ್ಧಂ
ಪ್ರಕುರ್ವತಃ ಸೂರ್ಯಸುತಸ್ಯ ಚಕ್ರಮ್ ।
ರಥಸ್ಯ ಭೂಮಿರ್ಗ್ರಸತಿ ಸ್ಮ ಶಾಪಾ-
ದಸ್ತ್ರಾಣಿ ದಿವ್ಯಾನಿ ಚ ವಿಸ್ಮೃತಿಂ ಯಯುಃ ॥೧೮೭॥

ಪುನಃ ಕರ್ಣ ಅರ್ಜುನನೊಡನೆ ಮಹಾಅಸ್ತ್ರಗಳಿಂದ ಯುದ್ಧ ಮಾಡುತ್ತಿದ್ದಾಗ ಬ್ರಾಹ್ಮಣಶಾಪದಿಂದ ಅವನ ರಥವನ್ನು ನೆಲ ನುಂಗಿತು. ಹಾಗೇ ಪರಶುರಾಮನ ಶಾಪದಿಂದ ದಿವ್ಯಾಸ್ತ್ರಗಳೂ ಅವನಿಗೆ ಮರೆತು ಹೋದುವು.

ಒಮ್ಮೆ ಒಬ್ಬ ಬ್ರಾಹ್ಮಣನ ಹೋವು ಧೇನುವಿನ ಕರುವನ್ನು ಪ್ರಮಾದವಶಾತ್ ಕರ್ಣ ಕೊಂದ. ಬ್ರಾಹ್ಮಣ ಆಗ ಶಾಪ ಕೊಟ್ಟಿದ್ದ. ನೀನು ಯಾರಲ್ಲಿ ಸದಾ ತೀವ್ರಸ್ಪರ್ಧೆ ಮಾಡುವಿ ಅಂಥ ಶತ್ರುವಿನೊಡನೆ ಯುದ್ಧಮಾಡುವಾಗ ನಿನ್ನ ರಥ ಚಕ್ರ ಭೂಮಿಯಲ್ಲಿ ಹೂತು ಹೋಗಲಿ. ಶತ್ರು ಆಗ ನಿನ್ನ ಶಿರಶ್ಛೇದಗೈಯಲಿ ಎಂದು. ಪರಶುರಾಮನೂ ತನ್ನಲ್ಲಿ ಸುಳ್ಳಾಡಿದ್ದ ಕರ್ಣನಿಗೆ ಅಂತ್ಯಕಾಲದಲ್ಲಿ ದಿವ್ಯಾಸ್ತ್ರಗಳು ಮರೆತು ಹೋಗಲೆಂದು ಶಪಿಸಿದ್ದ. ಅದರಂತೆ ಅವನ ರಥದ ಎಡಚಕ್ರ ನೆಲದಲ್ಲಿ ಹೂತುಹೋಯಿತು. ಕರ್ಣ ಇಳಿದು ಅದನ್ನು ಎತ್ತಿದರೆ ಆಗ ನೆಲವೆ ನಾಲ್ಕು ಅಂಗುಲ ಮೇಲೆ ಬಂದಿತು ಹೊರತು ನೆಲ ಚಕ್ರವನ್ನು ಬಿಡಲಿಲ್ಲ.

ಉದ್ಧರ್ತುಕಾಮೋ ರಥಚಕ್ರಮೇವ
ಪಾರ್ಥಂ ಯಯಾಚೇಕವಸರಂ ಪ್ರದಾತುಮ್ ।
ನೇತ್ಯಾಹ ಕೃಷ್ಣೋಽಂಜಲಿಕಂ ಸುಘೋರಂ
ತ್ರಿನೇತ್ರದತ್ತಂ ಜಗೃಹೇ ಚ ಪಾರ್ಥಃ ॥೧೮೮॥

ಕರ್ಣ ರಥದ ಚಕ್ರವನ್ನು ಎತ್ತಲು ಬಯಸಿ ಅದಕ್ಕೆ ಕಾಲಾವಕಾಶ ನೀಡಲು ಅರ್ಜುನನನ್ನು ಕೇಳಿಕೊಂಡ. 'ಇಲ್ಲ' ಎಂದ ಕೃಷ್ಣ. ಅರ್ಜುನ ಶಿವನಿಂದ ದತ್ತವಾದ ಬಲು ಘೋರವಾದ ಅಂಜಲಿಕಾಸ್ತ್ರವನ್ನೆತ್ತಿಕೊಂಡ.

ಅರ್ಜುನ! ನಿನಗೆ ಯುದ್ಧಧರ್ಮ ಗೊತ್ತು. ನೆಲದಲ್ಲಿ ನಿಂತವನೊಡನೆ ರಥದಲ್ಲಿ ನಿಂತು ಯುದ್ಧಮಾಡುವುದು ಧರ್ಮವಲ್ಲ ಎಂದ ಕರ್ಣ. ಕೃಷ್ಣನೆಂದ ಜೂಜಾಡುವಾಗ ದ್ರೌಪದಿಯನ್ನು ಸಭೆಗೆ ಎಳೆದು ತಂದಾಗ ನಿನ್ನ ಧರ್ಮ ಎಲ್ಲಿ ಇತ್ತು? ಅಭಿಮನ್ಯು ವಧೆಯಲ್ಲಿ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?' ಕರ್ಣ ಲಜ್ಜೆಯಿಂದ ತಲೆತಗ್ಗಿಸಿದ. ಬಳಿಕ ಅರ್ಜುನ ಕರ್ಣನ ಬಾಣ ಭುಜಕ್ಕೆ

ತಾಗಿದಾಗಸ್ವಲ್ಪ ಕಾಲವಿಚಲಿತನಾದ. ಆಗ ಕರ್ಣ ರಥಚಕ್ರವನ್ನೆತ್ತಲು ತಿರುಗಿ ಯತ್ನಿಸಿದ. ಅಷ್ಟರಲ್ಲಿ ಅರ್ಜುನ ಸಾವರಿಸಿಕೊಂಡು ಅಂಜಲಿಕಾಸ್ತ್ರ ಎತ್ತಿಕೊಂಡ. ಪಾಶುಪತಾಸ್ತ್ರದೊಂದಿಗೆ ಶಿವನಿಂದ ಬಂದಿದ್ದ ಅಸ್ತ್ರ ಇದು.

ಈ ನಡುವೆ ಕೃಷ್ಣ ಕರ್ಣನ ಬಳಿಗೆ ಬ್ರಾಹ್ಮಣ ವೇಷದಿಂದ ಬಂದು ಕುಂಡಲಗಳನ್ನು ದಾನ ಕೇಳಿದ್ದು ಕರ್ಣ ತನ್ನೆದೆ ಬಗಿದು ಒಳಗಿರುವ ಅಮೃತಕಲಶದ ನೀರಿಂದ ಧಾರೆಯೆರೆದು ದಾನಮಾಡಿದುದು ಅದರಿಂದ ಆತ ಅರ್ಜುನನ ಬಾಣದಿಂದ ಹತನಾಗುವಂತಾದುದು ಗದಗು ಭಾರತದಲ್ಲಿ (ಕರ್ಣ ೨೭.೧೮) ವರ್ಣಿತವಾಗಿದೆ.

ಸತ್ಯೇನ ಧರ್ಮೇಣ ಚ ಸನ್ನಿಯೋಜ್ಯ
ಮುಮೋಚ ಕರ್ಣಸ್ಯ ವಧಾಯ ಬಾಣಮ್ ।
ಚಿಚ್ಛೇದ ತೇನೈವ ಚ ತಸ್ಯ ಶೀರ್ಷಂ
ಸಂಧಿತ್ಸತೋ ಬಾಣವರಂ ಸುಘೋರಮ್ ॥೧೮೯॥

ಬಲುಘೋರವಾದ ಶ್ರೇಷ್ಠ ಬಾಣವನ್ನು ಹೂಡಬೇಕೆಂದು ಕರ್ಣ ಯತ್ನಿಸುವಷ್ಟರಲ್ಲಿ ಅರ್ಜುನ ಅವನ ವಧಕ್ಕಾಗಿ ಅಂಜಲಿಕಾಸ್ತ್ರವನ್ನು ತನ್ನ ಸತ್ಯಧರ್ಮಗಳಿಂದ ಜೊತೆಗೂಡಿಸಿ ಪ್ರಯೋಗಿಸಿದ. ಅದರಿಂದಲೆ ಕರ್ಣನ ಶಿರವನ್ನು ತರಿದ.

ಸತ್ಯಧರ್ಮಗಳಿಂದ ಜೊತೆಗೂಡಿಸಿ ಎಂದರೆ ಸತ್ಯವಚನ ಧರ್ಮಾನುಷ್ಠಾನಗಳ ಪುಣ್ಯಗಳ ಸಹಕಾರದಿಂದ ಈ ಅಸ್ತ್ರ ಶತ್ರುವನ್ನು ಸಂಹರಿಸಲಿ ಎಂದು ಶ್ರೀಹರಿಯನ್ನು ಪ್ರಾರ್ಥಿಸಿ ಅಸ್ತ್ರಪ್ರಯೋಗಿಸಿದ ಎಂದರ್ಥ.

ಅಪರಾಹ್ಣೇಽಪರಾಹ್ಣಸ್ಯ ಸೂರ್ಯಜಸ್ಯೇಂದ್ರಸೂನುನಾ ।
ಛಿನ್ನಮಂಜಲಿಕೇನಾಽಜೌ ಸೋತ್ಸೇಧಮಪತಚ್ಛಿರಃ ॥೧೯೦॥

ಎರಡನೆ ದಿನದ ಅಪರಾಹ್ಣಕಾಲದಲ್ಲಿ ಯುದ್ಧದಲ್ಲಿ ಅಂಜಲಿಕಾಸ್ತ್ರದಿಂದ ಅರ್ಜುನ ಕಡಿದ ಕರ್ಣನ ಶಿರಸ್ಸು ಬಾಣದ ವೇಗದಿಂದ ಸ್ವಲ್ಪ ಮೇಲೆ ಹಾರಿ ಕೆಳಗೆ ಬಿದ್ದಿತು.

ಅಪರಾಹ್ಣೇಽಪರಾಹ್ಣಸ್ಯ ಸೂತಪುತ್ರಸ್ಯ ಮಾರಿಷ।
ಛಿನ್ನ ಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ॥ (ಕರ್ಣ ೯೮.೬೪)

ಎಂದು ಭಾರತ ಹೇಳಿದಂತೆ ನಿರ್ಣಯವೂ 'ಅಪರಾಹ್ಣೇಽಪರಾಹ್ಣಸ್ಯ' ಎಂದಿದೆ. 'ಅಪರಾಹ್ಣ'ನಾದ ಅಂದರೆ ಅಪರ ವಯಸ್ಸಿನವನಾದ ವೃದ್ಧನಾದ ಕರ್ಣನ ಶಿರಶ್ಛೇದ ಅಪರಾಹ್ಣ ಕಾಲದಲ್ಲಾಯಿತೆಂದು ವಾದಿರಾಜೀಯ ಹೇಳಿದೆ. ಕರ್ಣ ಸೇನಾಧಿಪತ್ಯದ ಎರಡನೆ ದಿನ 'ಅಪರಾಹ್ಣ'ವೆಂದು

ವಿವಕ್ಷಿತವೆನ್ನುತ್ತದೆ ಜನಾರ್ದನೀಯ. ಪ್ರಾತಃಸಂಗವ ಮಧ್ಯಾಹ್ನ ಅಪರಾಹ್ಣ ಸಾಯಾಹ್ನ ಎಂಬ ದಿನದ ಐದು ಭಾಗಗಳಲ್ಲಿ ನಾಲ್ಕನೆಯದಾದ ಅಪರಾಹ್ಣದಲ್ಲಿ ತನ್ನ ಆಯುಷ್ಯದ ಶತಮಾನದ ನಾಲ್ಕನೆ ಭಾಗ ಕಳೆದಿದ್ದ ಅಂದರೆ ಎಂಬತ್ತರ ವಯಸ್ಸಿನವನಾದ ಕರ್ಣ ಮಡಿದನೆಂದು ಪ್ರಮಾಣಸಂಗ್ರಹ ಹೇಳಿದೆ. ಅಪರಾಹ್ಣವೆಂದರೆ ತನ್ನ ಆಯುಷ್ಯದ ಕೊನೆಯ ದಿನ ಎಂದು ನೀಲಕಂಠೀಯ ಹೇಳಿದೆ.

'ಉತ್ಸೇಧ' ಎಂದರೆ ದೇಹ. ರುಂಡ ಮುಂಡಗಳೆರಡೂ ಒಂದು ಅತ್ತ ಇನ್ನೊಂದು ಇತ್ತ ಬಿದ್ದುವು ಎಂದು ವರದರಾಜೀಯ. 'ಸೋತ್ಸೇಧ' ಎಂದರೆ ಚೆಂಡಿನಂತೆ ಮೇಲೆ ಹಾರಿ ರುಂಡ ಬಿದ್ದಿತೆಂದು ವಾದಿರಾಜೀಯ.

ತಸ್ಮಿನ್ ಹತೇ ದೀನಮುಖಃ ಸುಯೋಧನೋ
ಯಯೌ ಸಮಾಹೃತ್ಯ ಬಲಂ ಸಶಲ್ಯಃ।
ಯುಧಿಷ್ಠಿರಃ ಕರ್ಣವಧಂ ನಿಶಮ್ಯ
ತದಾ ಸಮಾಗತ್ಯ ದದರ್ಶ ತತ್ತನುಮ್ ॥೧೯೦॥

ಕರ್ಣ ಹತನಾದಾಗ ದುರ್ಯೋಧನ ಬಾಡಿದ ಮುಖದವನಾಗಿ ತನ್ನ ಸೈನ್ಯವನ್ನು ಹಿಂತೆಗೆದುಕೊಂಡು ಶಲ್ಯನೊಡನೆ ಹೊರಟುಹೋದ. ಯುಧಿಷ್ಠಿರ ಕರ್ಣನ ವಧೆಯಾದುದನ್ನು ಕೇಳಿ ಬಂದು ಅವನ ಶವವನ್ನು ಕಂಡ.

ಶಶಂಸ ಕೃಷ್ಣಂ ಚ ಧನಂಜಯಂ ಚ
ಭೀಮಂ ಚ ಯೇಽನ್ಯೇಽಪಿ ಯುಧಿ ಪ್ರವೀರಾಃ।
ಗತ್ವಾ ಚ ತೇ ಶಿಬಿರಂ ಮೋದಮಾನಾ
ಊಷುಃ ಸಕೃಷ್ಣಾಸ್ತದನುವ್ರತಾಃ ಸದಾ ॥೧೯೨॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ
ಕರ್ಣವಧೋ ನಾಮ ಸಪ್ತವಿಂಶೋಽಧ್ಯಾಯಃ

ಧರ್ಮರಾಜ ಕೃಷ್ಣನನ್ನೂ ಅರ್ಜುನನನ್ನೂ ಭೀಮನನ್ನೂ ಹೊಗಳಿದ. ಬೇರೆ ವೀರರೂ ಹೊಗಳಿದರು. ಎಲ್ಲರೂ ಕೃಷ್ಣನೊಂದಿಗೆ ಶಿಬಿರಕ್ಕೆ ಹೋಗಿ ಕೃಷ್ಣನಿಗೆ ಪ್ರಿಯರಾಗಿದ್ದು ಆನಂದದಿಂದ ವಾಸ ಮಾಡಿದರು.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ಕರ್ಣವಧಪರ್ವ ಎಂಬ
ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 28

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಶಲ್ಯೇ ಧರ್ಮಸುತಾದ್ಧತೇ, ಕುರುಬಲೇ ಪಾರ್ಥೈಃ ಸಮಸ್ತೇ, ಹತೇ,
ಭೀಮೇನಾರ್ಜುನ ಸಂಯುತೇನ, ನಿಹತೇ ದುರ್ಯೋಧನೇ, ದ್ರೌಣಿನಾ ।
ಸುಪ್ತಾನಾಂ ನಿಧನೇ ಕೃತೇ ನಿಶಿ, ತತೋ ಮುಕ್ತಾದ್ ವಿಧೇರಸ್ತ್ರತಃ
ಪಾರ್ಥಾನ್ ರಾಜ್ಯಮಿತಾಂಶ್ಚ ತತ್ಸುತಸುತಂ ಯೋಽಪಾತ್ ಸ
ನೋಽವ್ಯಾದ್ಧರಿಃ ॥೨೮॥

ಶಲ್ಯ ಧರ್ಮರಾಜನಿಂದ ಹತನಾದಾಗ, ಕೌರವಸೈನ್ಯ ಪಾಂಡವರಿಂದ ಪರಾಜಿತವಾದಾಗ ಮತ್ತು ಅರ್ಜುನ ಸಹಿತನಾದ ಭೀಮನಿಂದ ಹತವಾದಾಗ, ಭೀಮನಿಂದ ದುರ್ಯೋಧನ ಹತನಾದಾಗ, ಅಶ್ವತ್ಥಾಮನಿಂದ ರಾತ್ರಿ ಮಲಗಿದ್ದವರ ಹತ್ಯೆ ನಡೆದಾಗ, ಅವನಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರದಿಂದ ಪಾಂಡವರನ್ನೂ ಅವರ ಮೊಮ್ಮಗ ಪರೀಕ್ಷಿತನನ್ನೂ ಕಾಪಾಡಿದ, ಪಾಂಡವರಿಗೆ ರಾಜ್ಯ ದೊರಕಿಸಿದ, ಆ ಹರಿ ನಮ್ಮನ್ನು ಕಾಪಾಡಲಿ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೮

ಪಾಂಡವರಾಜ್ಯಲಾಭ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಹದಿನೆಂಟನೆ ದಿನದ ಯುದ್ಧ - ಶಲ್ಯ ವಧ

ಓಂ ॥ ಪ್ರಭಾತಾಯಾಂ ತು ಶರ್ವರ್ಯಾಂ ಗುರುಪುತ್ರಾನುಮೋದಿತಃ ।
ಶಲ್ಯಂ ಸೇನಾಪತಿಂ ಕೃತ್ವಾ ಯೋದ್ಧುಂ ದುರ್ಯೋಧನೋಽಭ್ಯಯಾತ್ ॥ ೧ ॥

ಆ ರಾತ್ರಿ ಬೆಳಗಾದಾಗ ದುರ್ಯೋಧನ ಅಶ್ವತ್ಥಾಮನ ಸಮ್ಮತಿ ಪಡೆದು ಶಲ್ಯನನ್ನು ಸೇನಾಧಿಪತಿಯನ್ನಾಗಿ ಮಾಡಿ ಯುದ್ಧ ಮಾಡಲು ಹೊರಟ.

ತಮಭ್ಯಯುಃ ಪಾಂಡವಾಶ್ಚ ಹೃಷ್ಟಾ ಯುದ್ಧಾಯ ದಂಶಿತಾಃ ।
ತತ್ರಾಕಸೀತ್ ಸುಮಹದ್ ಯುದ್ಧಂ ಪಾಂಡವಾನಾಂ ಪರೈಃ ಸಹ ॥ ೨ ॥

ಪಾಂಡವರೂ ಯುದ್ಧಕ್ಕೆ ಸನ್ನದ್ಧರಾಗಿ ಉತ್ಸಾಹಗೊಂಡು ಅವನನ್ನು ಇದಿರಿಸಿದರು. ಆಗ ಅವರಿಗೆ ಕೌರವರೊಡನೆ ಬಲು ದೊಡ್ಡ ಯುದ್ಧ ನಡೆಯಿತು.

ಅಗ್ರೇ ಭೀಮಃ ಪಾಂಡವಾನಾಂ ಮಧ್ಯೇ ರಾಜಾ ಯುಧಿಷ್ಠಿರಃ ।
ಪೃಷ್ಠೇ ಗಾಂಡೀವಧನ್ವಾಽಽಸೀದ್ ವಾಸುದೇವಾಭಿರಕ್ಷಿತಃ ॥ ೩ ॥
ಚಕ್ರರಕ್ಷೌ ಯಮೌ ರಾಜ್ಞೋ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ನೃಪಸ್ಯ ಪಾರ್ಶ್ವಯೋರಾಸ್ತಾಮಗ್ರೇಽನ್ಯೇಷಾಂ ಗುರೋಃ ಸುತಃ ॥ ೪ ॥
ಮಧ್ಯೇ ಶಲ್ಯಃ ಪೃಷ್ಠತೋಽಭೂದ್ ಭ್ರಾತೃಭಿಶ್ಚ ಸುಯೋಧನಃ ।
ಚಕ್ರರಕ್ಷೌ ತು ಶಲ್ಯಸ್ಯ ಶಕುನಿಸ್ತತ್ಸುತಸ್ತಥಾ ।
ಕೃಪಶ್ಚ ಕೃತವರ್ಮಾ ಚ ಪಾರ್ಶ್ವಯೋಃ ಸಮವಸ್ಥಿತೌ ॥ ೫ ॥

ಪಾಂಡವರ ಸೈನ್ಯಕ್ಕೆ ಮುಂಭಾಗದಲ್ಲಿ ಭೀಮನೂ ಮಧ್ಯದಲ್ಲಿ ರಾಜಾ ಯುಧಿಷ್ಠಿರನೂ ಹಿಂಭಾಗದಲ್ಲಿ ಕೃಷ್ಣನ ರಕ್ಷಣೆಯಲ್ಲಿ ಗಾಂಡೀವಧಾರಿ ಅರ್ಜುನನೂ ಇದ್ದ. ಯುಧಿಷ್ಠಿರನಿಗೆ ಚಕ್ರರಕ್ಷಕರಾಗಿ ನಕುಲ ಸಹದೇವರಿದ್ದರು. ಧೃಷ್ಟದ್ಯುಮ್ನ ಸಾತ್ಯಕಿಯರು ಅವನ ಪಾರ್ಶ್ವದಲ್ಲಿದ್ದರು. ಕೌರವರ ಸೈನ್ಯಕ್ಕೆ ಮುಂಭಾಗದಲ್ಲಿ ಅಶ್ವತ್ಥಾಮ. ಮಧ್ಯದಲ್ಲಿ ಶಲ್ಯ. ಹಿಂಭಾಗದಲ್ಲಿ ಸೋದರರೊಂದಿಗೆ ದುರ್ಯೋಧನ ನಿಂತಿದ್ದ. ಶಲ್ಯನಿಗೆ ಚಕ್ರರಕ್ಷಕರಾಗಿ ಶಕುನಿ ಮತ್ತು ಅವನ ಮಗ, ಪಾರ್ಶ್ವಗಳಲ್ಲಿ ಕೃಪ ಮತ್ತು ಕೃತವರ್ಮ ಇದ್ದರು.

ತತ್ರಾಭವನ್ಮಹದ್ ಯುದ್ಧಂ ಭೀಮಸ್ಯ ದ್ರೌಣಿನಾ ಸಹ ।
ರಾಜ್ಞಃ ಶಲ್ಯೇನ ಚ ತಥಾ ಘೋರರೂಪಂ ಭಯಾನಕಮ್ ॥೬॥

ಆಗ ಭೀಮನಿಗೆ ಅಶ್ವತ್ಥಾಮನೊಡನೆ ದೊಡ್ಡ ಯುದ್ಧ ನಡೆಯಿತು. ಧರ್ಮರಾಜನಿಗೂ ಶಲ್ಯನಿಗೂ ಹಾಗೇ ಭಯಾನಕವಾದ ಘೋರ ರೂಪದ ಯುದ್ಧ ನಡೆಯಿತು.

ತತ್ರ ನಾತಿಪ್ರಯತ್ನೇನ ದ್ರೌಣಭೀರ್ಮೇನ ಸಾಯಕೈಃ ।
ವಿರಥೀಕೃತಸ್ತಥಾ ಧರ್ಮಸೂನುಃ ಶಲ್ಯೇನ ತತ್ಕ್ಷಣಾತ್ ॥೭॥

ಭೀಮ ಹೆಚ್ಚು ಪ್ರಯತ್ನವಿಲ್ಲದೆ ಅಶ್ವತ್ಥಾಮನನ್ನು ಬಾಣಗಳಿಂದ ವಿರಥನನ್ನಾಗಿ ಮಾಡಿದ. ಇತ್ತ ಶಲ್ಯನೂ ಧರ್ಮರಾಜನನ್ನು ಕ್ಷಣದಲ್ಲಿ ವಿರಥನನ್ನಾಗಿ ಮಾಡಿದ.

ಆಸಸಾದ ತದಾ ಶಲ್ಯಂ ಕಪಿಪ್ರವರಕೇತನಃ ।
ತಯೋರಾಸೀನ್ಮಹದ್ ಯುದ್ಧಮದ್ಭುತಂ ರೋಮಹರ್ಷಣಮ್ ॥೮॥

ಆಗ ಶಲ್ಯನನ್ನು ಅರ್ಜುನ ಇದಿರಿಸಿದ. ಅವರೊಳಗೆ ಅದ್ಭುತ ರೋಮಾಂಚಕರ ಮಹಾಯುದ್ಧವಾಯಿತು.

ರಥಮನ್ಯಂ ಸಮಾಸ್ಥಾಯ ದ್ರೌಣಭೀರ್ಮಂ ಸಮಭ್ಯಯಾತ್ ।
ದುರ್ಯೋಧನಶ್ಚ ಭೀಮಸ್ಯ ಶರೈರಾವಾರಯದ್ ದಿಶಃ ॥೯॥

ಅಶ್ವತ್ಥಾಮ ಇನ್ನೊಂದು ರಥವನ್ನೇರಿ ಭೀಮನನ್ನು ಇದಿರಿಸಿದ. ದುರ್ಯೋಧನನೂ ಬಾಣಗಳಿಂದ ಭೀಮನ ಸುತ್ತ ಎಲ್ಲ ದಿಕ್ಕುಗಳನ್ನು ಆವರಿಸಿದ.

ತಾವುಭೌ ಶರವರ್ಷೇಣ ವಾರಯಾಮಾಸ ಮಾರುತಿಃ ।
ತಾಭ್ಯಾಂ ತಸ್ಯಾಭವದ್ ಯುದ್ಧಂ ಸುಘೋರಮತಿಮಾನುಷಮ್ ॥೧೦॥

ಅಶ್ವತ್ಥಾಮದುರ್ಯೋಧನರಿಬ್ಬರನ್ನೂ ಭೀಮ ಬಾಣಗಳ ಮಳೆಯಿಂದ ತಡೆದ. ಅವರೊಡನೆ ಭೀಮನಿಗೆ ಬಲು ಘೋರವಾದ ಅತಿ ಮಾನುಷವಾದ ಯುದ್ಧ ನಡೆಯಿತು.

ದುರ್ಯೋಧನಸ್ಯಾವರಜಾನ್ ದ್ರೌಪದೇಯಾ ಯುಯುತ್ಸುನಾ ।
ಶಿಖಂಡ್ಯಾದ್ಯೈರ್ಮಾತುಲೈಶ್ಚ ಸಹ ಸರ್ವಾನ್ ನ್ಯವಾರಯನ್ ॥೧೧॥

ದುರ್ಯೋಧನನ ತಮ್ಮಂದಿರೆಲ್ಲರನ್ನೂ ದ್ರೌಪದೀಪುತ್ರರು ಯುಯುತ್ಸುವಿನೊಡನೆ ಮತ್ತು ಶಿಖಂಡಿ ಮುಂತಾದ ಸೋದರ ಮಾವಂದಿರೊಡನೆ ಕೂಡಿ ಇದಿರಿಸಿದರು.

ಯುಯುತ್ಸು ಧೃತರಾಷ್ಟ್ರನ ವೈಶ್ಯಾಪುತ್ರ. ಕೌರವಸೈನ್ಯದಿಂದ ಪಾಂಡವ ಸೈನ್ಯಕ್ಕೆ ಬಂದಿದ್ದ.

ಸಹದೇವಸ್ತು ಶಕುನಿಮುಲೂಕಂ ನಕುಲಸ್ತಥಾ ।
ಧೃಷ್ಟದ್ಯುಮ್ನಶ್ಚ ಹಾರ್ದಿಕ್ಯಂ ಸಾತ್ಯಕಿಃ ಕೃಪಮೇವ ಚ ॥೧೨॥

ಸಹದೇವ ಶಕುನಿಯನ್ನೂ ನಕುಲ ಉಲೂಕನನ್ನೂ ಧೃಷ್ಟದ್ಯುಮ್ನ ಕೃತವರ್ಮನನ್ನೂ ಸಾತ್ಯಕಿ ಕೃಪನನ್ನೂ ಇದಿರಿಸಿದರು.

ತೇಷಾಂ ತದಭವದ್ ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ।
ಶಲ್ಯಸ್ತು ಶರಸಂಘಾತೈಃ ಪಾರ್ಥಸ್ಯಾವಾರಯದ್ ದಿಶಃ ॥೧೩॥

ಅವರಿಗೆ ವಿಚಿತ್ರ ವೇಗಪೂರ್ಣವಾದ ಒಳ್ಳೆಯ ಯುದ್ಧ ನಡೆಯಿತು. ಶಲ್ಯ ಬಾಣಸಮೂಹಗಳಿಂದ ಅರ್ಜುನನ ಸುತ್ತ ಎಲ್ಲ ದಿಕ್ಕುಗಳನ್ನು ಆವರಿಸಿದ.

ಸೋಽಪಿ ವಿವ್ಯಾಧ ವಿಶಿಖೈಃ ಶಲ್ಯಮಾಹವಶೋಭಿನಮ್ ।
ತಯೋಸ್ತು ಸಮಮೇವಾಽಸೀಚ್ಚಿರಂ ದೇವಾಸುರೋಪಮಮ್ ॥೧೪॥

ಅರ್ಜುನ ಯುದ್ಧದಲ್ಲಿ ಮೆರೆಯುತ್ತಿದ್ದ ಶಲ್ಯನನ್ನು ಬಾಣಗಳಿಂದ ಹೊಡೆದ. ಅವರೊಳಗೆ ಯುದ್ಧ ದೇವಾಸುರ ಯುದ್ಧದಂತೆ ಬಹುಕಾಲ ಸಮವೇ ಆಯಿತು.

ತತಃ ಶರಂ ವಜ್ರನಿಭಂ ಮದ್ರರಾಜಃ ಸಮಾದದೇ ।
ತೇನ ವಿವ್ಯಾಧ ಬೀಭತ್ಸುಂ ಹೃದಯೇ ಸ ಮುಮೋಹ ಚ ॥೧೫॥

ಬಳಿಕ ಶಲ್ಯ ವಜ್ರಾಯುಧದಂಥ ಬಾಣವನ್ನೆತ್ತಿಕೊಂಡ. ಅದರಿಂದ ಅರ್ಜುನನನ್ನು ಎದೆಯಲ್ಲಿ ಹೊಡೆದ. ಅರ್ಜುನ ಮೂರ್ಛಿತನಾದ.

ಉಪಲಭ್ಯ ಪುನಃ ಸಂಜ್ಞಾಂ ವಾಸವಿಃ ಶತ್ರುತಾಪನಃ ।
ಚಿಚ್ಛೇದ ಕಾರ್ಮುಕಂ ಸಂಖ್ಯೇ ಮದ್ರರಾಜಸ್ಯ ಧೀಮತಃ ॥೧೬॥

ಶತ್ರುತಾಪಕನಾದ ಅರ್ಜುನ ಪುನಃ ಎಚ್ಚೆತ್ತು ಯುದ್ಧದಲ್ಲಿ ಬುದ್ಧಿವಂತನಾದ ಶಲ್ಯನ ಬಿಲ್ಲನ್ನು ಕಡಿದ.

ಸೋಽನ್ಯತ್ ಕಾರ್ಮುಕಮಾದಾಯ ಮುಮೋಚಾಸ್ತ್ರಾಣಿ ಫಲ್ಗುನೇ ।
ಸೌರಂ ಯಾಮ್ಯಂ ಚ ಪಾರ್ಜನ್ಯಂ ತಾನ್ಶಕ್ರೇಣ ಜಘಾನ ಸಃ ॥೧೭॥

ಶಲ್ಯ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಸೂರ್ಯ ಯಮ ಪರ್ಜನ್ಯ ಅಸ್ತ್ರಗಳನ್ನು ಅರ್ಜುನನ ಮೇಲೆ ಎಸೆದ. ಅರ್ಜುನ ಅವುಗಳನ್ನು ಇಂದ್ರಾಸ್ತ್ರದಿಂದ ಪರಿಹರಿಸಿದ.

ಪುನರ್ಮೃಕೃನ್ತತ್ ತಚ್ಚಾಪಮಿಂದ್ರಸೂನುರಮರ್ಷಿತಃ ।
ಶಲ್ಯೋ ಗದಾಂ ಸಮಾದಾಯ ಚಿಕ್ಷೇಪಾರ್ಜುನವಕ್ಷಸಿ ॥೧೮॥

ಅರ್ಜುನ ಪುನಃ ಕುಪಿತನಾಗಿ ಶಲ್ಯನ ಬಿಲ್ಲನ್ನು ಕತ್ತರಿಸಿದ. ಶಲ್ಯ ಗದೆಯನ್ನು ಎತ್ತಿಕೊಂಡು ಅರ್ಜುನನ ಎದೆ ಮೇಲೆ ಎಸೆದ.

ತದಾ ಮುಮೋಹ ಬೀಭತ್ಸುಸ್ತತ ಉಚ್ಚುಕ್ರುಶುಃ ಪರೇ ।
ಪ್ರಾಪ್ಯ ಸಂಜ್ಞಾಂ ಪುನಃ ಪಾರ್ಥಃ ಶಲ್ಯಂ ವಿವ್ಯಾಧ ವಕ್ಷಸಿ ।
ಸ ವಿಹ್ವಲಿತಸರ್ವಾಂಗಃ ಶಿಶ್ರಿಯೇ ಧ್ವಜಮುತ್ತಮಮ್ ॥೧೯॥

ಆಗ ಅರ್ಜುನ ಮೂರ್ಛಿತನಾದ. ಶತ್ರುಗಳು ಜಯಘೋಷ ಮಾಡಿದರು. ಪುನಃ ಅರ್ಜುನ ಎಚ್ಚೆತ್ತು ಶಲ್ಯನನ್ನು ಎದೆಯಲ್ಲಿ ಪ್ರಹರಿಸಿದ. ಶಲ್ಯನ ಮೈ ಎಲ್ಲ ನಡುಗಿತು. ಆತ ಉತ್ತಮವಾದ ತನ್ನ ಧ್ವಜವನ್ನು ಆಧರಿಸಿ ನಿಂತ.

ಸಮಾಶ್ವಸ್ತಃ ಪುನರ್ಬಾಣಂ ಯಮದಂಡನಿಭಂ ರಣೇ ॥೨೦॥
ಮುಮೋಚ ಪಾರ್ಥಸ್ಯ ಸ ಚ ನಿರ್ಬಿಭೇದ ಸ್ತನಾಂತರಮ್
ತೇನ ವಿಹ್ವಲಿತಃ ಪಾರ್ಥೋ ಧ್ವಜಯಷ್ಟಿಂ ಸಮಾಶ್ರಿತಃ । ॥೨೧॥

ಶಲ್ಯ ಸಾವರಿಸಿಕೊಂಡು ಪುನಃ ಯಮದಂಡಕ್ಕೆ ಸಮಾನವಾದ ಬಾಣವನ್ನು ಯುದ್ಧದಲ್ಲಿ ಅರ್ಜುನನಿಗೆ ಎಸೆದ. ಆ ಬಾಣ ಅರ್ಜುನನ ಎದೆಯನ್ನು ಒಡೆಯಿತು. ಅದರಿಂದ ನಡುಗಿದ ಅರ್ಜುನ ಧ್ವಜಸ್ತಂಭವನ್ನು ಆಧರಿಸಿ ನಿಂತ.

ಸಮಾಶ್ವಸ್ತಃ ಪ್ರಚಿಚ್ಛೇದ ಮದ್ರರಾಜಸ್ಯ ಕಾರ್ಮುಕಮ್ ।
ಛತ್ರಂ ಧ್ವಜಂ ಚ ತರಸಾ ಸಾರಥಿಂ ಚ ನ್ಯಪಾತಯತ್ ॥೨೨॥

ಅರ್ಜುನ ಸಾವರಿಸಿಕೊಂಡು ಶಲ್ಯನ ಬಿಲ್ಲನ್ನು ಕಡಿದ. ಅವನ ಛತ್ರವನ್ನೂ ಧ್ವಜವನ್ನೂ ಸಾರಥಿಯನ್ನೂ ವೇಗದಿಂದ ಉರುಳಿಸಿದ.

ತದಾಽನ್ಯಂ ರಥಮಾಸ್ಥಾಯ ಧರ್ಮರಾಜಃ ಶರೋತ್ತಮೈಃ ।
ಚತುರ್ಭಿಶ್ಚತುರೋ ವಾಹಾನ್ ಶಲ್ಯಸ್ಯ ನಿಜಘಾನ ಹ ॥೨೩॥

ಅಷ್ಟರಲ್ಲಿ ಧರ್ಮರಾಜ ಇನ್ನೊಂದು ರಥವನ್ನೇರಿ ನಾಲ್ಕು ಉತ್ತಮ ಬಾಣಗಳಿಂದ ಶಲ್ಯನ ನಾಲ್ಕು ಕುದುರೆಗಳನ್ನು ಸಂಹರಿಸಿದ.

ಶಲ್ಯೋಽನ್ಯಂ ರಥಮಾಸ್ಥಾಯ ಸರ್ವಾಂಸ್ತಾನ್ ಶರವೃಷ್ಟಿಭಿಃ ।
ಛಾದಯಾಮಾಸ ರಾಜಾನಂ ವಿರಥಂ ಚ ಚಕಾರ ಹ ॥೨೪॥

ಶಲ್ಯ ಇನ್ನೊಂದು ರಥವನ್ನೇರಿ ಅವರೆಲ್ಲರನ್ನೂ ಬಾಣಗಳ ಮಳೆಗಳಿಂದ ಆವರಿಸಿದ ಮತ್ತು ಧರ್ಮರಾಜನನ್ನು ವಿರಥನನ್ನಾಗಿ ಮಾಡಿದ.

ನಿಹತ್ಯಾಶ್ವಾನ್ ಸಾತ್ಯಕೇಶ್ಚ ಧೃಷ್ಟದ್ಯುಮ್ನಸ್ಯ ಚಾಭಿಭೂಃ ।
ಚಾಪೇ ಚ್ಛಿತ್ತ್ವಾ ಚ ಯಮಯೋರ್ದಧ್ಮೌ ಶಂಖಿಂ ಮಹಾಸ್ವನಮ್ ॥೨೫॥

ಶತ್ರುಗಳನ್ನು ಪರಾಭವಗೊಳಿಸುವ ಶಲ್ಯ, ಸಾತ್ಯಕಿ ಧೃಷ್ಟದ್ಯುಮ್ನರ ಕುದುರೆಗಳನ್ನು ಕೊಂದು, ನಕುಲಸಹದೇವರ ಬಿಲ್ಲುಗಳನ್ನು ಕಡಿದು, ದೊಡ್ಡ ಧ್ವನಿಯ ಶಂಖವನ್ನು ಮೊಳಗಿಸಿದ.

ತತಸ್ತು ಶಲ್ಯಂ ಸಮುದೀರ್ಯಮಾಣಂ ದೃಷ್ಟ್ವಾ ರಣೇ ಭೀಮಸೇನಸ್ತರಸ್ವೀ।
ನ್ಯವಾರಯದ್ ಬಾಣವರೈರನೇಕೈಶ್ಚಕಾರ ಚೈನಂ ವಿರಥಂ ಕ್ಷಣೇನ ॥೨೬॥

ಬಳಿಕ ಯುದ್ಧದಲ್ಲಿ ದುರ್ಯೋಧನಾದಿಗಳು ಶಲ್ಯನನ್ನು ಅತಿಯಾಗಿ

ಹೊಗಳುತ್ತಿದ್ದುದನ್ನು ಕಂಡು ವೇಗಶಾಲಿಯಾದ ಭೀಮಸೇನ ಅನೇಕ ಉತ್ತಮ ಬಾಣಗಳಿಂದ ಅವನನ್ನು ತಡೆದ. ಕ್ಷಣದಲ್ಲಿ ಅವನನ್ನು ವಿರಥನನ್ನಾಗಿ ಮಾಡಿದ.

ಆಸ್ಥಾಯ ಚಾನ್ಯಂ ರಥಮಾಪತಂತಂ
ಪುನಶ್ಚ ಶಲ್ಯಂ ಭೃಶಮೇವ ಮರ್ಮಸು।
ನಿರ್ಭಿದ್ಯ ಬಾಣೈರ್ವಿರಥಂ ಚಕಾರ
ಪುನಸ್ತೃತೀಯಂ ಚ ರಥಂ ರುರೋಜ ॥ ೨೭ ॥

ಇನ್ನೊಂದು ರಥವನ್ನೇರಿ ಪುನಃ ಬಂದ ಶಲ್ಯನನ್ನು ಭೀಮಸೇನ ಬಾಣಗಳಿಂದ ಮರ್ಮಗಳಲ್ಲಿ ಚೆನ್ನಾಗಿ ಹೊಡೆದು ವಿರಥನನ್ನಾಗಿ ಮಾಡಿದ. ತಿರುಗಿ ಅವನ ಮೂರನೆಯ ರಥವನ್ನೂ ಮುರಿದ.

ಆತ್ತಾನ್ಯಾತ್ತಾನ್ಯಾಯುಧಾನ್ಯಸ್ಯ ಭೀಮಃ
ಸರ್ವಾಣಿ ಚಚ್ಛೇದ ಬಿಭೇದ ಚಾಸ್ಯ।
ಮರ್ಮಾಣಿ ಬಾಣೈರ್ನಿತರಾಂ ಪುನಶ್ಚ
ಸ ಮುಷ್ಟಿಮುದ್ಯಮ್ಯ ಜಗಾಮ ಧರ್ಮಜಮ್ ॥ ೨೮ ॥

ಶಲ್ಯ ಎತ್ತಿಕೊಂಡ ಎಲ್ಲ ಆಯುಧಗಳನ್ನೂ ಭೀಮಸೇನ ಕಡಿದ. ಪುನಃ ಬಾಣಗಳಿಂದ ಅವನ ಮರ್ಮಗಳನ್ನು ಬಹಳ ಗಾಯಗೊಳಿಸಿದ. ಶಲ್ಯ ಮುಷ್ಟಿಯನ್ನೆತ್ತಿ ಧರ್ಮರಾಜನ ಬಳಿಗೆ ಹೊರಟ.

ತಂ ಭೀಮಭಿನ್ನಮರ್ಮಾಣಂ ವಿವರ್ಮಾಣಂ ನಿರಾಯುಧಮ್ ।
ಶ್ವಾಸಮಾತ್ರಾವಶಿಷ್ಟಂ ಚ ಮರಣಾಯೈವ ಕೇವಲಮ್ ॥ ೨೯ ॥
ಆತ್ಮಾನಮಭಿಗಚ್ಛಂತಂ ದೃಷ್ಟ್ವಾನ್ಯಂ ರಥಮಾಸ್ಥಿತಃ ।
ಹಂತುಕಾಮೋ ರಣೇ ವೀರಮಮೋಘಾಂ ಶಕ್ತಿಮಾದದೇ ॥ ೩೦ ॥

ಶಲ್ಯನ ಮರ್ಮಸ್ಥಾನಗಳನ್ನು ಮೊದಲೇ ಭೀಮ ಹೊಡೆದಿದ್ದ. ಅವನು ಈಗ ಕವಚರಹಿತ, ನಿರಾಯುಧ. ಶ್ವಾಸಮಾತ್ರ ಉಳಿದಿತ್ತು. ಕೇವಲ ಮರಣ ಹೊಂದುವುದಕ್ಕಾಗಿಯೆ ಧರ್ಮರಾಜನೆದುರಿಗೆ ಬರುತ್ತಿದ್ದ. ಅಂಥ ವೀರ ಶಲ್ಯನನ್ನು ಕಂಡು ಅವನನ್ನು ಯುದ್ಧದಲ್ಲಿ ಕೊಲ್ಲಲು ಬಯಸಿ ಧರ್ಮರಾಜ ಇನ್ನೊಂದು ರಥವೇರಿ ಅಮೋಘವಾದ ಶಕ್ತ್ಯಾಯುಧವನ್ನೆತ್ತಿಕೊಂಡ.

ಭೀಷ್ಮ ದ್ರೋಣ ಕರ್ಣಾದಿಗಳನ್ನು ನೀವೆಲ್ಲರೂ ಸಂಹಾರ ಮಾಡಿರುವಿರಿ. ನನಗೂ ಒಬ್ಬ ಮಹಾವೀರನನ್ನು ವಧಿಸಲು ಅವಕಾಶ ಕೊಡಿ. ನಾನು ಈ ಶಲ್ಯನನ್ನು ಕೊಲ್ಲುತ್ತೇನೆ ಎಂದು ಧರ್ಮರಾಜ ಪ್ರತಿಜ್ಞೆ ಮಾಡಿದ. ಏಕೆಂದರೆ ಕೃಷ್ಣ ಹೇಳಿದ್ದ- ನೀನೆ ಶಲ್ಯನನ್ನು ವಧಿಸಬೇಕು. ಸೋದರ ಮಾವನೆಂದು ಸಂಕೋಚ ಪಡಬೇಡ. ನಿನ್ನ ಯುದ್ಧಪರಾಕ್ರಮವನ್ನು ತೋರು

ಎಂದು. ಹೀಗೆ ಕೃಷ್ಣನಾಜ್ಞೆಯಂತೆ ಸ್ವೀಕರಿಸಿದ ಪ್ರತಿಜ್ಞೆ ಇದು ಎಂದ. ಅದನ್ನು ನಡೆಸಲು ಭೀಮ ಅವಕಾಶ ಮಾಡಿಕೊಟ್ಟ. ಶಲ್ಯನನ್ನು ಶ್ವಾಸಮಾತ್ರ ಉಳಿಸಿ ಧರ್ಮರಾಜನ ಮುಂದೆ ಬರುವಂತೆ ಮಾಡಿದ.

ದಿವ್ಯಾಸ್ತ್ರೈರಭಿ ಸಂಯೋಜ್ಯ ತಾಂ ತದಾ ಧರ್ಮನಂದನಃ ।
ಸತ್ಯಧರ್ಮಫಲೈಶ್ಚೈವ ಚಿಕ್ಷೇಪಾಸ್ಯ ಹೃದಿ ತ್ವರನ್ ॥೩೦॥

ಸ ಭಿನ್ನಹೃದಯೋ ಭೂಮೌ ಪಪಾತಾಭಿಮುಖೋ ನೃಪಮ್ ।
ಸತ್ಯಧರ್ಮರತಃ ಶಲ್ಯ ಇಂದ್ರಸ್ಯಾತಿಥಿತಾಮಗಾತ್ ॥೩೨॥

ಧರ್ಮರಾಜ ಶಕ್ತ್ಯಾಯುಧವನ್ನು ದಿವ್ಯ ಅಸ್ತ್ರಗಳಿಂದಲೂ ಸತ್ಯ ಧರ್ಮಗಳ ಪುಣ್ಯಗಳಿಂದಲೂ ಕೂಡಿಸಿ ಶಲ್ಯನ ಎದೆಯ ಮೇಲೆ ವೇಗವಾಗಿ ಎಸೆದ. ಶಲ್ಯ ಎದೆ ಒಡೆದು ಧರ್ಮರಾಜನೆದುರಿನಲ್ಲಿ ನೆಲದ ಮೇಲೆ ಬಿದ್ದ. ಹೀಗೆ ಸತ್ಯಧರ್ಮರತನಾದ ಶಲ್ಯ ಸ್ವರ್ಗದಲ್ಲಿ ಇಂದ್ರನಿಗೆ ಅತಿಥಿಯಾದ.

ಸತ್ಯಧರ್ಮಗಳ ಪುಣ್ಯಗಳಿಂದ ಶಕ್ತ್ಯಾಯುಧವನ್ನು ಕೂಡಿಸುವುದೆಂದರೆ ನನ್ನ ಸತ್ಯವಚನ ಧರ್ಮಾನುಷ್ಠಾನಗಳಿಂದ ಬಂದ ಪುಣ್ಯಗಳ ಸಹಕಾರದಿಂದ ~~ಈ~~ ಶಕ್ತ್ಯಾಯುಧ ಶಲ್ಯನನ್ನು ಸಂಹರಿಸಲೆಂದು ಶ್ರೀಹರಿಯನ್ನು ಪ್ರಾರ್ಥಿಸುವುದೆ ಹೊರತು ಬೇರೆ ಏನಲ್ಲವೆಂದು ಸತ್ಯಾಭಿನವೀಯದಲ್ಲಿ ಹೇಳಿದೆ.[1]

ಈ ಶಕ್ತ್ಯಾಯುಧವನ್ನು ವಿಶ್ವಕರ್ಮ ಶಿವನಿಗೆ ಮಾಡಿಕೊಟ್ಟಿದ್ದು ಪಾಂಡವರು ಅದನ್ನು ನಿತ್ಯವೂ ಗಂಧಮಾಲ್ಯ ಆಸನ ಪಾನ ಭೋಜನಗಳಿಂದ ಪೂಜಿಸುತ್ತಿದ್ದರು. ಧರ್ಮರಾಜ ಆ ಶಕ್ತಿಯನ್ನೆತ್ತಿಕೊಂಡು ಕೋಪದಿಂದ ಕಣ್ಣುತೆರೆದು ನೋಡುತ್ತ ಎಸೆದ. ಅವನ ಆ ನೋಟದಿಂದ ಶಲ್ಯ ಭಸ್ಮವಾಗ ಬೇಕಿತ್ತು. ಆಗದಿದ್ದುದೇ ಆಶ್ಚರ್ಯ. ಶಕ್ತ್ಯಾಯುಧದ ಏಟಿಗೆ ನೆಲಕ್ಕೆ ಬಿದ್ದ.

ದುರ್ಯೋಧನನ ಪಲಾಯನ

ಮದ್ರರಾಜೇ ಹತೇ ವೀರೇ ಸುಶರ್ಮಾಽರ್ಜುನಮಭ್ಯಯಾತ್ ।
ಸಂಶಪ್ತಕಾವಶಿಷ್ಟೈಸ್ತಮನಯನ್ಮೃತ್ಯವೇಽರ್ಜುನಃ ॥೩೩॥

ವೀರನಾದ ಶಲ್ಯ ಹತನಾದಾಗ ಸುಶರ್ಮ ಸಂಶಪ್ತಕರಲ್ಲಿ ಉಳಿದುಳಿದವರೊಡನೆ ಬಂದು ಅರ್ಜುನನನ್ನು ಇದಿರಿಸಿದ. ಅವನನ್ನು ಅರ್ಜುನ ಮೃತ್ಯುವಿಗೆ ಕಳಿಸಿಕೊಟ್ಟ.

---

೧. ಕ್ರಿಯಾರೂಪ ಧರ್ಮಜನ್ಯಾದೃಷ್ಟಾನಾಂ ಶಕ್ತ್ಯಾಸಂಯೋಜನಂ ನಾಮ ಕ್ರಿಯಾರೂಪ ಧರ್ಮಜನ್ಯಾದೃಷ್ಟ ಸಹಕೃತ ಶಕ್ತ್ಯಾ ಶಲ್ಯೋ ಹತೋ ಭವತ್ವಿತಿ ಭಗವತ್ ಪ್ರಾರ್ಥನಾ।

– ಸತ್ಯಾಭಿನವೀಯ

ದುರ್ಯೋಧನಸ್ಯಾವರಜಾನವಶಿಷ್ಟಾನ್ ವೃಕೋದರಃ ।
ಸರ್ವಾನ್ ಜಘಾನ ಸೇನಾಂ ಚ ನಿಶ್ಶೇಷಾಮಕರೋದ್ ರಣೇ ॥೩೪॥

ಅಳಿದುಳಿದ ದುರ್ಯೋಧನನ ಎಲ್ಲ ತಮ್ಮಂದಿರನ್ನೂ ಭೀಮ ಕೊಂದ. ಅವನ ಸೈನ್ಯವನ್ನು ಯುದ್ಧದಲ್ಲಿ ನಿಃಶೇಷಗೊಳಿಸಿದ.

ಶ್ರುತರ್ವ, ಸಂಜಯ, ಶ್ರುತಾಂತ, ದುರ್ವಿಮೋಚನ, ದುರ್ವಿಷಹ, ದುಷ್ಪ್ರಧರ್ಷ, ಬಲಿ, ದುರ್ಮರ್ಷಣ, ಸುಜಾತ, ಜೈತ್ರ, ಭೂರಿ, ಬಲ, ರವಿ, ಸುದರ್ಶನ - ಈ ಹದಿಮೂರು ಮಂದಿ ಕೌರವರು ಭೀಮನ ಬಾಣಗಳಿಗೆ ತುತ್ತಾಗಿ ಅಸುನೀಗಿದರು.

ಉಲೂಕಂ ಸಹದೇವೋಽಥ ಶಕುನಿಂ ಚಾತಿಪಾಪಿನಮ್ ।
ಜಘಾನ ದ್ರೌಣಹಾರ್ದಿಕ್ಯಕೃಪಾನ್ ಭೀಮಾರ್ಜುನೌ ತತಃ ॥೩೫॥
ಬಹುಶೋ ವಿರಥೀಕೃತ್ಯ ಪೀಡಯಿತ್ವಾ ಪುನಃಪುನಃ ।
ದ್ರಾವಯಾಮಾಸತುಸ್ತೇ ತು ಭೀಷಿತಾ ವಿವಿಶುರ್ವನಮ್ ॥೩೬॥

ಸಹದೇವ ಉಲೂಕನನ್ನು ವಧಿಸಿದ. ಬಳಿಕ ಅತಿಪಾಪಿಯಾದ ಶಕುನಿಯನ್ನೂ ಕೊಂದ. ಭೀಮಾರ್ಜುನರು ಅಶ್ವತ್ಥಾಮ ಕೃತವರ್ಮ ಕೃಪರನ್ನು ಬಹುಬಾರಿ ವಿರಥರನ್ನಾಗಿ ಮಾಡಿ ಪುನಃ ಪುನಃ ಪೀಡಿಸಿ ಓಡಿಸಿದರು. ಅವರು ಭಯಪಟ್ಟು ಅರಣ್ಯವನ್ನು ಪ್ರವೇಶಿಸಿದರು.

ನಕುಲ ತಾನು ಉಲೂಕನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ್ದ. ಆದರೆ ಸಹದೇವ ಕೊಂದ. ತಮ್ಮನಾದ ಸಹದೇವ ಕೊಂದುದರಿಂದ ಅಣ್ಣನಾದ ನಕುಲನ ಪ್ರತಿಜ್ಞೆ ಈಡೇರಿತು. ಇದೇರೀತಿ ಭೀಮ ಕರ್ಣನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದರೂ ಅರ್ಜುನನ ಮೂಲಕ ಅದನ್ನು ಪೂರೈಸಿದ.

ಶೈನೇಯೇನ ಗೃಹೀತೋಽಥ ಸಂಜಯೋಽನಂತಶಕ್ತಿನಾ ।
ವ್ಯಾಸೇನ ಮೋಚಿತೋಽಥೈಕಃ ಪಾರ್ಥಾನ್ ದುರ್ಯೋಧನೋಽಭ್ಯಯಾತ್ ॥೩೭॥

ಸಂಜಯನನ್ನು ಸಾತ್ಯಕಿ ಸೆರೆಹಿಡಿದ. ಆದರೆ ಸರ್ವಶಕ್ತರಾದ ವೇದವ್ಯಾಸರು ಬಂದು ಅವನನ್ನು ಬಿಡಿಸಿದರು. ಬಳಿಕ ಏಕಾಕಿಯಾದ ದುರ್ಯೋಧನ ಪಾಂಡವರನ್ನು ಇದಿರಿಸಿದ.

ಅಶ್ವತ್ಥಾಮ ಕೃಪ ಕೃತವರ್ಮ ದುರ್ಯೋಧನ ಸಂಜಯರು ಐದುಮಂದಿ ಮಾತ್ರ, ಉಳಿದಿದ್ದಾಗ ಅಶ್ವತ್ಥಾಮ ಕೃಪ ಕೃತವರ್ಮರು ಪಲಾಯನ ಮಾಡಿದರು. ಸಂಜಯ ಧೃಷ್ಟದ್ಯುಮ್ನನಿಗೆ ಸೋತು ಅವನಿಂದ ಮುಕ್ತನಾದರೂ ಸಾತ್ಯಕಿಯ ಕೈಗೆ ಸಿಕ್ಕಿದ. ನೆಲದಲ್ಲಿ ಮೂರ್ಛಿತನಾಗಿ ಬಿದ್ದ ಆತನನ್ನು ಸಾತ್ಯಕಿ ಸೆರೆಹಿಡಿದ. ಧೃಷ್ಟದ್ಯುಮ್ನನೆಂದ "ಇವನನ್ನು ಜೀವಂತ ಸೆರೆ ಹಿಡಿದು ಏನು

ಪ್ರಯೋಜನ?'' ಹಾಗಾದರೆ ಕೊಂದು ಬಿಡುವೆನೆಂ'ದು ಸಾತ್ಯಕಿ ಖಡ್ಗವನ್ನೆತ್ತಿದ. ಅದೇ ಕ್ಷಣದಲ್ಲಿ ಸರ್ವಶಕ್ತರಾದ ವೇದವ್ಯಾಸರು ಬಂದು ತಡೆದರು. (ಶಲ್ಯ ೨೯.೨) ಸಾತ್ಯಕಿ ಅವರಿಗೆಕ್ಕೈಮುಗಿದು 'ಸಂಜಯ, ಹೋಗು ನಿನಗೆ ಒಳ್ಳೆಯದಾಗಲಿ' ಎಂದು ಕಳುಹಿಸಿದ. ಕವಚವನ್ನು ಕಳೆದುಕೊಂಡು ನಿರಾಯುಧನಾಗಿ ಮೈಯೆಲ್ಲ ನೆತ್ತರಿಂದ ತೊಯ್ದು ಎಂದಿನಂತೆ ಯುದ್ಧ ವೃತ್ತಾಂತವನ್ನು ಹೇಳಲು ಸಂಜೆ ಧೃತರಾಷ್ಟ್ರನ ಬಳಿಗೆ ಬರುತ್ತಾನೆ ಸಂಜಯ. ಅವನು ಕೇವಲ ಯುದ್ಧ ವಾರ್ತೆಯ ವರದಿಗಾರನಲ್ಲ.

ಆತ್ಮನಾ ಪಂಚಮೋಽಯುಧ್ಯಂ (ಶಲ್ಯ ೨೪.೫೦)

'ದುರ್ಯೋಧನ ಕೃಪ ಕೃತವರ್ಮ ಅಶ್ವತ್ಥಾಮ ಮತ್ತು ತಾನು ಎಂದು ಐವರು ಯುದ್ಧ ಮಾಡಿದೆವು' ಎಂದು ಸಂಜಯ ತಾನೆ ಹೇಳುತ್ತಾನೆ.

ತೇಷಾಮಭೂತ್ ತಸ್ಯ ಚ ಘೋರರೂಪಂ
ಯುದ್ಧಂ ಸ ಬಾಣೈರ್ಬಹುಶೋಽರ್ಜುನಂ ಚ।
ಚಕಾರ ಮೂರ್ಚ್ಛಾಭಿಗತಂ ಯುಧಿಷ್ಠಿರಂ
ಯಮಾವಯತ್ನಾದ್ ವಿರಥಾಂಶ್ಚಕಾರ ॥೩೮॥

ಪಾಂಡವರಿಗೂ ದುರ್ಯೋಧನನಿಗೂ ಘೋರರೂಪದ ಯುದ್ಧ ನಡೆಯಿತು. ದುರ್ಯೋಧನ ಬಾಣಗಳಿಂದ ಅನೇಕ ಬಾರಿ ಅರ್ಜುನನನ್ನು ಮೂರ್ಛೆಗೊಳಿಸಿದ. ಯುಧಿಷ್ಠಿರನನ್ನೂ ನಕುಲ ಸಹದೇವರನ್ನೂ ಪ್ರಯಾಸವಿಲ್ಲದೆ ವಿರಥರನ್ನಾಗಿ ಮಾಡಿದ.

ತಂ ಭೀಮಸೇನೋ ವಿರಥಂ ಚಕಾರ
ಗಜಂ ಸಮಾರುಹ್ಯ ಪುನಃ ಸಮಭ್ಯಯಾತ್।
ಪುನಶ್ಚ ಶೈನೇಯಶಿಖಂಡಿಪಾರ್ಷತಾನ್
ಯಮೌ ನೃಪಂ ಚ ವ್ಯದಧಾನ್ನಿರಾಯುಧಾನ್ ॥೩೯॥

ದುರ್ಯೋಧನನನ್ನು ಭೀಮಸೇನ ವಿರಥನನ್ನಾಗಿ ಮಾಡಿದ. ದುರ್ಯೋಧನ ಆನೆಯನ್ನೇರಿ ಪುನಃ ಎದುರಿಗೆ ಬಂದ. ಪುನಃ ಸಾತ್ಯಕಿ ಶಿಖಂಡಿ ಧೃಷ್ಟದ್ಯುಮ್ನರನ್ನೂ ನಕುಲ ಸಹದೇವರನ್ನೂ ಧರ್ಮರಾಜನನ್ನೂ ನಿರಾಯುಧರನ್ನಾಗಿ ಮಾಡಿದ.

ಗಜೇ ತು ಭೀಮೇನ ಶರೈರ್ನಿಪಾತಿತೇ
ಸಮಾರುಹದ್ ವಾಜಿವರಂ ಸುನಿರ್ಭಯಃ।
ಸ ತೇನ ಚ ಪ್ರಾಸಕರೋ ರಣೇಽರಿಹಾ
ಚಚಾರ ಶೈನೇಯಮತಾಡಯಚ್ಚ ॥೪೦॥

ಆನೆಯನ್ನು ಭೀಮ ಬಾಣಗಳಿಂದ ಕೆಡವಿದಾಗ, ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲಬಲ್ಲ

ದುರ್ಯೋಧನ ಭಯಭೀತನಾಗದೆ ಒಳ್ಳೆಯ ಕುದುರೆಯನ್ನೇರಿದ. ಪ್ರಾಸಾಯುಧವನ್ನು ಧರಿಸಿ ರಣರಂಗದಲ್ಲಿ ಓಡಾಡಿದ, ಸಾತ್ಯಕಿಯನ್ನು ಹೊಡೆದ.

ಮುಮೋಹ ತೇನಾಭಿಹತಃ ಸ ಸಾತ್ಯಕಿ-
ರ್ಯಮಾವಪಿ ಪ್ರಾಸನಿಪೀಡಿತೌ ರಥೇ।
ನಿಷೀದತುರ್ಧರ್ಮಸುತಂ ಪ್ರಯಾಂತಂ
ಸಮೀಕ್ಷ್ಯ ಭೀಮೋಽಸ್ಯ ಜಘಾನ ವಾಜಿನಮ್ ॥೪೧॥

ದುರ್ಯೋಧನ ಹೊಡೆದಾಗ ಸಾತ್ಯಕಿ ಮೂರ್ಛೆ ಹೊಂದಿದ. ನಕುಲ ಸಹದೇವರೂ ಪ್ರಾಸಾಯುಧದಿಂದ ಪೀಡಿತರಾಗಿ ರಥದಲ್ಲಿ ಕುಳಿತು ಬಿಟ್ಟರು. ದುರ್ಯೋಧನ ಧರ್ಮರಾಜನ ಬಳಿಗೆ ಹೋಗುತ್ತಿದ್ದುದನ್ನು ಕಂಡು ಭೀಮ ಅವನ ಕುದುರೆಯನ್ನೂ ಸಂಹರಿಸಿದ.

ಪ್ರಾಸೇ ನಿಕೃತ್ತೇ ಚ ವೃಕೋದರೇಣ
ವಿವಾಹನಃ ಸೋಽಪಯಯೌ ಸುಯೋಧನಃ।
ಆದಾಯ ಗುರ್ವೀಂ ಚ ಗದಾಂ ಪ್ರಯಾತೋ
ದ್ವೈಪಾಯನಸ್ಯೋರುಸರೋ ವಿವೇಶ ॥೪೨॥

ಪ್ರಾಸಾಯುಧವನ್ನೂ ಭೀಮ ಕಡಿದಾಗ ದುರ್ಯೋಧನ ವಾಹನ ರಹಿತನಾಗಿ ಭಾರದ ಗದೆಯನ್ನು ಹಿಡಿದು ಹೊರಟುಹೋದ. ಪ್ರಯಾಣ ಮಾಡಿ ದ್ವೈಪಾಯನರ ದೊಡ್ಡ ಸರೋವರವನ್ನು ಪ್ರವೇಶಿಸಿದ.

ಏವಮಕ್ಷೌಹಿಣೀಷಟ್ಕಂ ಭೀಮೇನ ನಿಹತಂ ರಣೇ।
ಪಂಚ ಪಾರ್ಥೇನ ನಿಹತಾ ಅರ್ದ್ಧಂ ಕಾಲಿಂಗಕಾನೃತೇ ॥೪೩॥

ಹೀಗೆ ಆರು ಅಕ್ಷೌಹಿಣಿ ಸೈನ್ಯವನ್ನು ಯುದ್ಧದಲ್ಲಿ ಭೀಮ ಕೊಂದ. ಐದು ಅಕ್ಷೌಹಿಣಿಯನ್ನು ಅರ್ಜುನ ಕೊಂದ. ಕೌರವರ ಸೈನ್ಯದಲ್ಲಿ ಅರ್ಜುನ ಅರ್ಧಾಂಶವನ್ನು ಕೊಂದನೆಂದು ಭಾರತದಲ್ಲಿ ಹೇಳಿದುದು ಭೀಮ ಕೊಂದ ಒಂದು ಅಕ್ಷೌಹಿಣಿ ಕಲಿಂಗ ಸೈನ್ಯವನ್ನು ಹೊರತುಪಡಿಸಿ ಹತ್ತು ಅಕ್ಷೌಹಿಣಿಯಲ್ಲಿ ಅರ್ಧಾಂಶವೆಂಬ ಅಭಿಪ್ರಾಯದಿಂದ.[1]

ಏಕಾದಶಾಕ್ಷೌಹಿಣೀಭ್ಯಃ ಶಿಷ್ಟಮನ್ಯೈರ್ನಿಸೂದಿತಮ್ ।
ಅಕ್ಷೌಹಿಣೀಚತುಷ್ಕಂ ಚ ಪಾರ್ಥಾನಾಂ ದ್ರೌಣಿನಾ ಹತಮ್ ॥೪೪॥

ಹನ್ನೊಂದು ಅಕ್ಷೌಹಿಣಿಯಲ್ಲಿಯೆ ಭೀಮಾರ್ಜುನರು ಕೊಂದು ಉಳಿದ ಕೆಲವು ಅಂಶಗಳನ್ನು ಅಭಿಮನ್ಯು ಸಾತ್ಯಕಿ ಮುಂತಾದವರು ಕೊಂದರು. ಪಾಂಡವರ ಸೈನ್ಯದಲ್ಲಿ ನಾಲ್ಕು ಅಕ್ಷೌಹಿಣಿ ಅಶ್ವತ್ಥಾಮನಿಂದ ಹತವಾಯಿತು.

---

1. ನನು ಪಾರ್ಥೇನ ಕೌರವ ಸೇನಾರ್ಧಂ ಹತಮಿತಿ ಭಾರತೇಽಸ್ತಿ। ತತ್ಕಥಂ ಪಂಚೇತ್ಯುಕ್ತಿಃ? ಕಥಂ ಚಾಕ್ಷೌಹಿಣೀ ಷಟ್ಕಂ ಭೀಮೇನೇತ್ಯುಕ್ತಿಶ್ಚೇತ್ಯತೋ ಭಾರತ ವಾಕ್ಯಸ್ಯ ತಾತ್ಪರ್ಯಮಾಹ ಅರ್ಧಮಿತಿ।
-ವರದರಾಜೀಯ

ಅನ್ಯೈರನ್ಯಾಃ ಸಮಸ್ತೈಶ್ಚ ದ್ರೋಣಕರ್ಣಮಹಾವ್ರತಾಃ ।
ದುರ್ಯೋಧನೋ ಭೌಮಸೂನುಃ ಪ್ರಾಯಃ ಸೇನಾಹನಃ ಕ್ರಮಾತ್ ॥೫೫॥

ಬೇರೆ ದ್ರೋಣ ಕರ್ಣ ಮುಂತಾದವರೆಲ್ಲರಿಂದ ಉಳಿದ ಮೂರು ಅಕ್ಷೌಹಿಣಿ ಸೈನ್ಯ ಹತವಾಯಿತು. ದ್ರೋಣ ಕರ್ಣ ಭೀಷ್ಮ ದುರ್ಯೋಧನ ಭಗದತ್ತ ಇವರು ಮುಖ್ಯವಾಗಿ ಕ್ರಮವಾಗಿ ಸೈನ್ಯ ನಾಶಕರು.

ಪಾಂಡವರ ಮೂರು ಅಕ್ಷೌಹಿಣಿಯಲ್ಲಿ ಎಲ್ಲರಿಗಿಂತ ಹೆಚ್ಚಿನದು ದ್ರೋಣರ ಪಾಲು. ಅವರಿಗಿಂತ ಕಡಿಮೆ ಕರ್ಣನದು. ಅವನಿಗಿಂತಲೂ ಕಡಿಮೆ ಭೀಷ್ಮನದು ಇತ್ಯಾದಿ. ಕ್ರಮ ವ್ಯಾಖ್ಯಾನಗಳಲ್ಲಿ ಉಕ್ತವಾಗಿದೆ.

ಗದಾಯುದ್ಧ

ಜಯಂ ಲಬ್ಧ್ವಾ ನದತ್ಸ್ವಚ್ಚೈಃ ಪಾಂಡವೇಷು ಮಹಾತ್ಮಸು ।
ದುರ್ಯೋಧನೋ ಜಲಸ್ತಂಭಂ ಕೃತ್ವಾ ಮಂತ್ರಾನ್ ಜಜಾಪ ಹ ॥೪೬॥

ಮಹಾತ್ಮರಾದ ಪಾಂಡವರು ಜಯ ಹೊಂದಿ ಜೋರಾಗಿ ಸಿಂಹನಾದ ಮಾಡುತ್ತಿರಲು ಇತ್ತ ದುರ್ಯೋಧನ ಜಲಸ್ತಂಭವನ್ನು ಮಾಡಿ ಮಂತ್ರಗಳನ್ನು ಜಪಿಸತೊಡಗಿದ.

ಮಂತ್ರಾ ದುರ್ವಾಸಸಾ ದತ್ತಾ ಮೃತಸಂಜೀವನಪ್ರದಾಃ ॥೪೭॥
ಜಲೇ ಸ್ಥಿತ್ವಾ ಜಪನ್ ಸಪ್ತದಿನೈಃ ಸರ್ವಾನ್ ಮೃತಾನಪಿ ।
ಉದ್ಧರೇದ್ ಧಾರ್ತರಾಷ್ಟ್ರೋಽಯಂ ಸ್ಯುರವಧ್ಯಾಶ್ಚ ತೇ ಪುನಃ ॥೪೮॥

ಆ ಮಂತ್ರಗಳು ದುರ್ವಾಸರಿಂದ ಉಪದೇಶ ಪಡೆದವುಗಳು. ಮೃತರಾದವರನ್ನು ಪುನಃ ಬದುಕಿಸಬಲ್ಲವುಗಳು. ನೀರಲ್ಲಿದ್ದು ಏಳು ದಿವಸಗಳ ಕಾಲ ದುರ್ಯೋಧನ ಮಂತ್ರ ಜಪಿಸಿದರೆ ಸತ್ತವರೆಲ್ಲ ಪುನಃ ಬದುಕಿ ಬರುತ್ತಾರೆ. ಹಾಗೆ ಬದುಕಿ ಬಂದವರು ಮುಂದೆ ಅವಧ್ಯರೆನಿಸುತ್ತಾರೆ.

ಇತಿ ವಿದ್ಯಾಬಲಂ ತಸ್ಯ ಜ್ಞಾತ್ವಾ ಪಾಂಡುಸುತಾಸ್ತತಃ ।
ಅನ್ವಿಷ್ಯಂತಃ ಶುಶ್ರುವುಶ್ಚ ವ್ಯಾಧೇಭ್ಯಸ್ತಂ ಜಲೇ ಸ್ಥಿತಮ್ ॥೪೯॥

ಹೀಗೆ ದುರ್ಯೋಧನನ ಮಂತ್ರ ಬಲವನ್ನು ತಿಳಿದು ಪಾಂಡವರು ಅವನನ್ನು ಹುಡುಕುತ್ತ ಬೇಡರಿಂದ ಅವನು ನೀರಲ್ಲಿ ಅಡಗಿದ್ದುದನ್ನು ಕೇಳಿ ತಿಳಿದರು.

ರಣರಂಗದಿಂದ ಒಂದು ಕ್ರೋಶ ದೂರದಲ್ಲಿ ಏಕಾಕಿಯಾಗಿ ನಡೆಯುತ್ತಿದ್ದ ದುರ್ಯೋಧನನನ್ನು ಸಂಜಯ ದಾರಿಯಲ್ಲಿ ಕಂಡು ಎಲ್ಲ ಕೌರವರೂ ಭೀಮನಿಂದ ಹತರಾದುದನ್ನು ತಿಳಿಸಿದ. ದುರ್ಯೋಧನ ಸಂಜಯನಿಗೆ ತಾನು ನೀರಲ್ಲಿ ಅಡಗಿರುವುದಾಗಿ ಧೃತರಾಷ್ಟ್ರನಿಗೆ ತಿಳಿಸಲು ಹೇಳಿ ನೀರನ್ನು ಹೊಕ್ಕ. ಬಳಿಕ ಸಂಜಯನಿಂದ ದುರ್ಯೋಧನನಿದ್ದ ಸ್ಥಳವನ್ನು

ಅಶ್ವತ್ಥಾಮಾದಿಗಳು ಕೇಳಿ ತಿಳಿದು ಕೊಳದ ಬಳಿ ಬಂದು 'ಎದ್ದೇಳು, ನಮ್ಮ ಸಹಾಯದಿಂದ ಯುದ್ಧ ಮಾಡು' ಎಂದರು. ಆತ 'ಇಂದು ರಾತ್ರಿ ಶ್ರಮಪರಿಹಾರಮಾಡಿಕೊಂಡು ನಾಳೆ ಯುದ್ಧಮಾಡೋಣ' ಎಂದ. ಅವರು ಪುನಃ ಪುನಃ 'ಎದ್ದೇಳು ' ಎಂದರು. ಈ ಸಂಭಾಷಣೆಯನ್ನು ನೀರು ಕುಡಿಯಲು ಬಂದ ಬೇಡರು ಕದ್ದಾಲಿಸಿ ಭೀಮನಿಗೆ ತಿಳಿಸಿದರು. ಅವರು ಪ್ರತಿದಿನ ಭೀಮನಿಗೆ ಮಾಂಸ ತಂದು ಕೊಡುತ್ತಿದ್ದ ಬೇಡರು. ಒಡನೆ ಎಲ್ಲ ಪಾಂಡವರು ಸೈನ್ಯ ಸಮೇತರಾಗಿ ಕೊಳದ ಬಳಿಗೆ ಬಂದರು.

ಅಗಚ್ಛಂಶ್ಚ ತತಸ್ತತ್ರ ಪುರಸ್ಕೃತ್ಯ ಜನಾರ್ದನಮ್ ।
ತದಾ ಜಲಾತ್ ಸಮುನ್ಮಜ್ಜ್ಯ ತ್ರಿಭಿರ್ಘ್ರೋಣಿಪುರಸ್ಸರೈಃ ।
ಮಂತ್ರಯಂತಂ ಸ್ಮ ದದೃಶುಸ್ತಾನ್ ದೃಷ್ಟ್ವಾ ತೇ ಪ್ರದುದ್ರುವುಃ ॥೫೦॥
ದುರ್ಯೋಧನೋಽವಿಶತ್ ತೋಯಂ ದೃಷ್ಟ್ವಾ ತಂ ಕೇಶವಾಜ್ಞಯಾ ।
ಯುಧಿಷ್ಠಿರಃ ಸುಪರುಷೈರ್ವಾಕ್ಶರೈನಮಥಾಕಹ್ವಯತ್ ॥೫೧॥

ಬಳಿಕ ಪಾಂಡವರು ಕೃಷ್ಣನನ್ನು ಮುಂದೆ ಮಾಡಿಕೊಂಡು ದ್ವೈಪಾಯನ ಸರೋವರಕ್ಕೆ ಹೋದರು. ದುರ್ಯೋಧನ ಆಗ ನೀರಿನಿಂದ ಮೇಲೆ ಬಂದು ಅಶ್ವತ್ಥಾಮ ಮುಂತಾದ ಮೂವರೊಡನೆ ಮಂತ್ರಾಲೋಚನೆ ಮಾಡುತ್ತಿದ್ದುದನ್ನು ಕಂಡರು. ಅವರನ್ನು ಕಂಡು ಅಶ್ವತ್ಥಾಮ ಮುಂತಾದವರು ಪಲಾಯನ ಮಾಡಿದರು. ದುರ್ಯೋಧನ ನೀರನ್ನು ಹೊಕ್ಕ. ಅದನ್ನು ಕಂಡು ಯುಧಿಷ್ಠಿರ ಕೃಷ್ಣನ ಆಜ್ಞೆಯಿಂದ ದುರ್ಯೋಧನನನ್ನು ನಿಷ್ಠುರವಾದ ನುಡಿಗಳಿಂದ ಕರೆದ.

ಪುನಃ ಪುನಃ ಅಶ್ವತ್ಥಾಮ ಮುಂತಾದವರು 'ನೀರಿಂದ ಮೇಲೆ ಬಾ' ಎಂದು ನಿರ್ಬಂಧ ಮಾಡಿದಾಗ ದುರ್ಯೋಧನ ಮೇಲೆ ಬಂದು ಮೂವರೊಡನೆ ಮಂತ್ರಾಲೋಚನೆ ಮಾಡಿದ. ಆಗ ಪಾಂಡವರು ಬಂದರು. ಅಶ್ವತ್ಥಾಮಾದಿಗಳು ಪಲಾಯನ ಮಾಡಿದರು. ದುರ್ಯೋಧನ ನೀರೊಳಗೆ ಹೊಕ್ಕ. ಇದನ್ನು ಪಾಂಡವರು ಕಂಡರು. ಕೃಷ್ಣನ ಆಜ್ಞೆಯಂತೆ ಧರ್ಮರಾಜ 'ದುರ್ಯೋಧನ, ಎಲ್ಲ ಕ್ಷತ್ರಿಯರನ್ನೂ ಕೊಲ್ಲಿಸಿ ಒಬ್ಬನೇ ಜೀವದಾಸೆಯಿಂದ ಹೆದರಿ ಹೇಡಿಯಾಗಿ ಏಕೆ ನೀರಲ್ಲಿ ಅಡಗಿದೆ?' ಎಂದು ಮುಂತಾಗಿ ನಿಷ್ಠುರವಾದ ನುಡಿಗಳಿಂದ ಕರೆದ.

ಅಮರ್ಷಿತೋಽಸೌ ಧೃತರಾಷ್ಟ್ರಪುತ್ರಃ
ಶ್ವಸಂಸ್ತದಾ ದಂಡಹತೋ ಯಥಾಽಹಿಃ ।
ಉವಾಚ ಶಾಠ್ಯಾತ್ ತಪಸೇ ವನಾಯ
ಯಾಯಾಂ ಭವಾನ್ ಶಾಸತು ಸರ್ವಪೃಥ್ವೀಮ್ ॥೫೨॥

ದುರ್ಯೋಧನ ಆಗ ಕುಪಿತನಾಗಿ ಕೋಲಿಂದ ಹೊಡೆದ ಹಾವಿನಂತೆ ಬುಸುಗುಟ್ಟುತ್ತ

ಕಪಟದಿಂದ ನುಡಿದ. 'ನಾನು ತಪಸ್ಸಿಗಾಗಿ ಕಾಡಿಗೆ ಹೋಗುವೆನು. ನೀನೆ ಎಲ್ಲ ಭೂಮಿಯನ್ನಾಳಬಹುದು' ಎಂದು.

'ಬಾಂಧವರೆಲ್ಲ ಮಡಿದ ಮೇಲೆ ವಿಧವೆ ಹೆಣ್ಣಿನಂತೆ ಕಾಣುವ ಈ ಭೂಮಿಯನ್ನು ನಾನು ಒಲ್ಲೆ, ನೀನೆ ಆಳು. ನಾನು ಕಾಡಿಗೆ ಹೋಗುತ್ತೇನೆ' ಎನ್ನುತ್ತಾನೆ ದುರ್ಯೋಧನ. ಇದು ಕಪಟ. ಹೇಗಾದರೂ ಪಾಂಡವರನ್ನು ಅಲ್ಲಿಂದ ಹೊರಡಿಸಿ ನಿರಾತಂಕವಾಗಿ ಮಂತ್ರ ಜಪಿಸಿ ಸತ್ತವರನ್ನು ಬದುಕಿಸುವ ಸಂಕಲ್ಪ ಆತನದು.

ತಮಾಹ ಧರ್ಮಜೋ ರಾಜಾ ಯಸ್ತ್ವಂ ಕೃಷ್ಣೇ ಸಮಾಗತೇ ।
ಸೂಚ್ಯಗ್ರವೇಧ್ಯಾಂ ಪೃಥಿವೀಂ ದಾತುಂ ನೈಚ್ಛಃ ಕಥಂ ಪುನಃ ॥೫೩॥
ಘಾತಯಿತ್ವಾ ಸರ್ವಪೃಥ್ವೀಂ ಭೀಷ್ಮದ್ರೋಣಮುಖಾನಪಿ ।
ದಾತುಮಿಚ್ಛಸಿ ಸರ್ವಾಂ ತ್ವಂ ಪೃಥ್ವೀಂ ನಾದ್ಯ ವಯಂ ಪುನಃ ॥೫೪॥
ಅಹತ್ವಾ ಪ್ರತಿಗೃಹ್ಣೀಮ ಏಹಿ ಯುದ್ಧೇ ಸ್ಥಿರೋ ಭವ ।
ನ ಕುರೂಣಾಂ ಕುಲೇ ಜಾತಸ್ತ್ವಂ ಯೋ ಭೀತೋ ಹ್ಯಪೋಕವಿಶಃ ॥೫೫॥

ರಾಜಾ ಯುಧಿಷ್ಠಿರ ನುಡಿದ, 'ಕೃಷ್ಣ ಸಂಧಾನಕ್ಕೆ ಬಂದಾಗಲೂ ನೀನು ಸೂಜಿಮೊನೆಯೂರುವಷ್ಟೂ ನೆಲವನ್ನು ಕೊಡಲು ಒಪ್ಪಲಿಲ್ಲ. 'ಎಲ್ಲ ಭೂಮಿಯನ್ನೂ ಭೀಷ್ಮದ್ರೋಣಾದಿಗಳನ್ನೂ ನಾಶಪಡಿಸಿ ಈಗ ಎಲ್ಲ ಭೂಮಿಯನ್ನೂ ನಮಗೆ ಕೊಡಲು ಹೇಗೆ ಒಪ್ಪುವಿ? ನಾವು ನಿನ್ನನ್ನು ಕೊಲ್ಲದೆ ಭೂಮಿಯನ್ನು ಸ್ವೀಕರಿಸಲಾರೆವು. ಬಾ, ಯುದ್ಧದಲ್ಲಿ ಸ್ಥಿರನಾಗಿ ನಿಲ್ಲು, ಭಯದಿಂದ ನೀರನ್ನು ಹೊಕ್ಕಿರುವೆ. ಅದರಿಂದ ನೀನು ಕುರುಕುಲದಲ್ಲಿ ಹುಟ್ಟಿದವನೆ ಅಲ್ಲ.

'ನಿನ್ನ ಭೂದಾನವನ್ನು ಕ್ಷತ್ರಿಯನಾದ ನಾನು ಸ್ವೀಕರಿಸಲಾರೆ. ಮತ್ತು ಯುದ್ಧದಲ್ಲಿ ಜಯಗಳಿಸದೆ ಭೂಮಿಯ ಮೇಲೆ ಅಧಿಕಾರವಿಲ್ಲದ ನಿನಗೆ ಅದನ್ನು ದಾನಮಾಡುವ ಅಧಿಕಾರವೂ ಇಲ್ಲ. ದಾನ ಮಾಡುವುದಿದ್ದರೆ ಅಂದೇ ಶ್ರೀಕೃಷ್ಣ ನಿನ್ನ ಬಳಿ ಬಂದಾಗ ಐದು ಗ್ರಾಮಗಳನ್ನಾದರೂ ಕೊಡಬಹುದಾಗಿತ್ತು. ಸೂಜಿಮೊನೆ ಊರುವಷ್ಟೂ ನೆಲ ಕೊಡಲಾರೆ ಎಂದೆ. ಈಗ ಹೇಗೆ ಕಾಡಿಗೆ ಹೋಗುವೆನೆಂದೆ? ಕಾಡಿಗೆ ಹೋದರೂ ನೀನು ಬದುಕಲಾರೆ. ನಮ್ಮನ್ನು ಬಾಲ್ಯದಿಂದಲೂ ಕೊಲ್ಲಿಸಲು ಯತ್ನಿಸಿದ ನಿನಗೆ ಬದುಕುವ ಅಧಿಕಾರವಿಲ್ಲ. ಅದರಿಂದ ಎದ್ದೇಳು. ಯುದ್ಧಮಾಡು. ಗೆದ್ದರೆ ನಿನಗೆ ರಾಜ್ಯ ಉಂಟು. ಮಡಿದರೆ ಸ್ವರ್ಗ. ಹೇಡಿಯಾಗಿ ಬದುಕಲು ಯತ್ನಿಸಿದರೆ ಏನೂ ಇಲ್ಲವಾಗುವುದು' ಎಂದ ಧರ್ಮರಾಜ.

ಇತ್ಯಾದಿ ರೂಕ್ಷವಚನಂ ಶ್ರುತ್ವಾ ದುರ್ಯೋಧನೋ ರುಷಾ ।
ಜಲಸ್ತಂಭಾತ್ ಸಮುತ್ತಸ್ಥೌ ಶ್ವಸನ್ನಾಶೀವಿಷೋ ಯಥಾ ॥ ೫೬ ॥

ಇವೇ ಮೊದಲಾದ ಬಿರುನುಡಿಗಳನ್ನು ಆಲಿಸಿ ದುರ್ಯೋಧನ ಕೋಪದಿಂದ ಹಾವಿನಂತೆ ಬುಸುಗುಟ್ಟುತ್ತ ಜಲಸ್ತಂಭ ಬಿಟ್ಟು ಎದ್ದುನಿಂತ.

ಕೋಪಾವೇಶದಲ್ಲಿ ದುರ್ಯೋಧನನಿಗೆ ಮಂತ್ರ ಮರೆತು ಹೋಯಿತು. ಅದರಿಂದ ಬೇರೆ ಉಪಾಯವಿಲ್ಲದೆ ನೀರಿನಿಂದ ಎದ್ದು ಬಂದನೆಂದು ಗದಗುಭಾರತ ಹೇಳುತ್ತದೆ-

ಅಧಿಕ ಕ್ರೋಧಶಿಖಿ ಕರಣೇಂದ್ರಿಯಗಳ ತುರುಗಿದಂತಃ ಖೇದ
ಮಂತ್ರಾಕ್ಷರಕೆ ಜವನಿಕೆಯಾದುದ್ಕೈ(ಗದಾ ೫-೩೧)
ಮರೆದುದುದಕಸ್ತಂಭ (ಗದಾ ೫-೩೨)

ಉವಾಚ ಚೈಕ ಏವಾಹಮಕಿರೀಟೋ ವಿವರ್ಮಕಃ ।
ಭವಂತೋ ಬಹವೋ ವರ್ಮಶಿರಸ್ತ್ರಾಣಯುತಾ ಅಪಿ ॥ ೫೭ ॥

ದುರ್ಯೋಧನ ನುಡಿದ, 'ನಾನು ಏಕಾಕಿ, ಶಿರಸ್ತ್ರಾಣ ಕವಚಗಳಿಲ್ಲದವನು. ನೀವು ಬಹುಮಂದಿ. ಕವಚ ಶಿರಸ್ತ್ರಾಣಗಳಿಂದ ಯುಕ್ತರೂ ಆಗಿರುವಿರಿ.

ಯದ್ಯೇವಮಪಿ ಮೇ ಯುದ್ಧಂ ಭವದ್ಭಿರ್ಮನ್ಯಸೇ ಸಮಮ್ ।
ಸರ್ವೈರೇಕೇನ ವಾ ಯುದ್ಧಂ ಕರಿಷ್ಯೇ ನ ಚ ಭೀರ್ಮಮ ॥ ೫೮॥

'ಹೀಗಿದ್ದರೂ ನನಗೆ ನಿಮ್ಮೊಡನೆ ಯುದ್ಧ ಸಮ ಎಂದು ನೀನು ಭಾವಿಸುವುದಾದರೆ ನಿಮ್ಮಲ್ಲಿ ಎಲ್ಲರೊಡನೆ ಅಥವಾ ಒಬ್ಬನೊಡನೆ ಯುದ್ಧ ಮಾಡುವೆನು. ನನಗೆ ಭಯವಿಲ್ಲ.

ಇತ್ಯುಕ್ತ ಆಹ ಧರ್ಮಾತ್ಮಾ ವರ್ಮಾದ್ಯಂ ಚ ದದಾಮಿ ತೇ ।
ವೃಣೀಷ್ವ ಪ್ರತಿಯೋದ್ಧಾರಂ ಪಂಚಾನಾಂ ಯಂ ತ್ವಮಿಚ್ಛಸಿ ॥ ೫೯ ॥

ದುರ್ಯೋಧನ ಹೀಗೆ ಹೇಳಿದಾಗ ಧರ್ಮಾತ್ಮನಾದ ಯುಧಿಷ್ಠಿರನೆಂದ 'ನಿನಗೆ ಕವಚ ಮುಂತಾದುವನ್ನು ಕೊಡುತ್ತೇವೆ. ನಿನ್ನೊಡನೆ ಪ್ರತಿಯಾಗಿ ಯುದ್ಧಮಾಡಲು ಐವರಲ್ಲಿ ನೀನು ಯಾರನ್ನು ಬಯಸುವಿಯೊ ಅವನನ್ನು ಆರಿಸಿಕೊಳ್ಳು.

ಬಹುಮಂದಿ ಏಕಾಕಿಯೊಡನೆ ಹೋರಾಡುವುದು ಅನ್ಯಾಯವೆಂದು ನಿನಗೆ ಅಭಿಮನ್ಯು ವಧೆಯ ಕಾಲದಲ್ಲಿ ತಿಳಿದಿರಲಿಲ್ಲ. ಈಗ ತಿಳಿಯಿತೆ?

ಸರ್ವೋ ವಿಮೃಶತೇ ಜಂತು:
ಕೃಚ್ಛ್ರಾಸ್ಥೋ ಧರ್ಮದರ್ಶನಂ (ಶಲ್ಯ ೩೨.೫೯)
'ತಾವು ಕಷ್ಟದಲ್ಲಿದ್ದರೆ ಮಾತ್ರ ಧರ್ಮವಿಚಾರ ಮಾಡುತ್ತಾರೆ

ಎಲ್ಲರೂ'. ಆದರೂ ನಾನು ನಿನಗೆ ಅನ್ಯಾಯ ಮಾಡಲಾರೆ. ನಮ್ಮಲ್ಲಿ ಯಾರಾದರೊಬ್ಬರೊಡನೆಯೆ ನೀನು ಯುದ್ಧ ಮಾಡಬಹುದು. ಗೆದ್ದರೆ ನಿನಗೇ ರಾಜ್ಯ' ಎನ್ನುತ್ತಾನೆ ಯುಧಿಷ್ಠಿರ.

ಹತ್ವೈಕಂ ತ್ವಂ ಭುಂಕ್ಷ್ವ ರಾಜ್ಯಮನ್ಯೇ ಯಾಮ ವಯಂ ವನಮ್ ।
ಹತೇ ವಾ ತ್ವಯಿ ತೇನೈವ ಭುಂಜೀಮಶ್ಚಾಖಿಲಾಂ ಭುವಮ್ ।
ಆದತ್ಸ್ವ ಚಾನ್ಯಮಾಯುಧಂ ಯೇನ ಜೇತುಮಿಚ್ಛಸಿ ಶಾತ್ರವಾನ್ ॥೬೦॥

ಒಬ್ಬನನ್ನು ನೀನು ಕೊಂದೆಯಾದರೆ ನೀನೇ ರಾಜ್ಯವಾಳು. ಉಳಿದವರು ನಾವು ಕಾಡಿಗೆ ಹೋಗುವೆವು. ಅವನಿಂದ ನೀನೇ ಹತನಾದರೆ ಎಲ್ಲ ಭೂಮಿಯನ್ನೂ ನಾವು ಅನುಭವಿಸುವೆವು. ನೀನು ಶತ್ರುಗಳನ್ನು ಯಾವ ಆಯುಧದಿಂದ ಗೆಲ್ಲಲು ಬಯಸುವಿಯೋ ಆ ಆಯುಧವನ್ನು ತೆಗೆದುಕೊಳ್ಳು.

ಇತ್ಯುಕ್ತ ಊಚೇ ನಹಿ ದುರ್ಬಲೈರಹಂ
ಯೋತ್ಸ್ಯೇ ಚತುರ್ಭಿರ್ಭವದರ್ಜುನಾದಿಭಿಃ ।
ಭೀಮೇನ ಯೋತ್ಸ್ಯೇ ಗದಯಾ ಸದಾ ಹಿ ಮೇ
ಪ್ರಿಯಾ ಗದಾ ನಾನ್ಯದಥಾಽಯುಧಂ ಸ್ಪೃಶೇ ॥೬೧॥

ಧರ್ಮರಾಜ ಹೀಗೆ ಹೇಳಿದಾಗ ದುರ್ಯೋಧನನೆಂದ 'ನೀನು, ಅರ್ಜುನ ಮುಂತಾದ ನಾಲ್ವರು ದುರ್ಬಲರೊಡನೆ ನಾನು ಯುದ್ಧ ಮಾಡಲಾರೆ. ಭೀಮನೊಂದಿಗೆ ಗದೆಯಿಂದ ಯುದ್ಧ ಮಾಡುವೆ. ನನಗೆ ಸದಾ ಗದೆಯೆ ಪ್ರಿಯ. ಬೇರೆ ಆಯುಧವನ್ನು ನಾನು ಮುಟ್ಟಲಾರೆ.

ದುರ್ಬಲನಾದ ಒಬ್ಬನನ್ನು ಕೊಂದು ರಾಜ್ಯವನ್ನು ಹೊಂದಲು ಬಯಸದಿದ್ದ ದುರ್ಯೋಧನ ನಿಜವಾಗಿ ವೀರನೆಂದು ಮೇಲುನೋಟಕ್ಕೆ ಕಾಣಬಹುದು. ಕೃಷ್ಣ ಯುಧಿಷ್ಠಿರನನ್ನು ಕೇಳುತ್ತಾನೆ, ಒಂದುವೇಳೆ ದುರ್ಯೋಧನ ಭೀಮನನ್ನು ಆರಿಸಿಕೊಳ್ಳದೆ ನಿಮ್ಮಲ್ಲಿ ಯಾರಾದರೊಬ್ಬರನ್ನು ಆರಿಸಿದ್ದರೆ ಪರಿಣಾಮ ಏನಾಗಿರುತ್ತಿತ್ತು? ಎಂದು,

ವಸ್ತುತಃ ದುರ್ಯೋಧನ ಕೃಷ್ಣನ ಭಯದಿಂದಲೆ ಅರ್ಜುನ ಧರ್ಮರಾಜಾದಿಗಳನ್ನು ಆರಿಸಿಕೊಳ್ಳಲಿಲ್ಲ. ಅವನು ದ್ರೋಣನಲ್ಲಿ ಯುಧಿಷ್ಠಿರನನ್ನು ಸೆರೆ ಹಿಡಿಯಲು ಕೇಳಿಕೊಳ್ಳುವಾಗಲೆ ಹೇಳಿದ್ದ 'ಪಾಂಡವರಲ್ಲಿ ಒಬ್ಬನನ್ನು ಕೊಂದರೂ, ಎಲ್ಲರನ್ನೂ ಕೊಂದರೂ ಕೃಷ್ಣ ತನಗೆ ರಾಜ್ಯ ದಕ್ಕದಂತೆ ಮಾಡುತ್ತಾನೆ, ದ್ರೌಪದಿಗೋ ಕುಂತಿಗೋ ಕೊಟ್ಟಾನು ತನಗೆ ಬಿಡಲಾರ' ಎಂದು. ಭೀಮನನ್ನು ಅವನು ತನ್ನ ತೊಡೆ ಮುರಿಯದಿದ್ದ ಪಕ್ಷದಲ್ಲಿ, ಗೆಲ್ಲಬಹುದು, ರಾಜ್ಯ ದಕ್ಕಿಸಿಕೊಳ್ಳಬಹುದೆಂದು ಆಸೆ ಇದ್ದಿತ್ತು

ಆತನಿಗೆ. ಕೃಷ್ಣ ಧರ್ಮರಾಜನನ್ನು ಕೇಳಿದ ಪ್ರಶ್ನೆ ಭೀಮ ಪರಾಕ್ರಮದ ಪ್ರಶಂಸೆಗಾಗಿ, ಹೊರತು ದುರ್ಯೋಧನನ ಉದಾತ್ತ ಗುಣ ತೋರುವುದಕ್ಕಲ್ಲ.

ಶ್ರುತ್ವಾವಸ್ಯ ವಾಕ್ಯಂ ರಭಸೋ ವೃಕೋದರೋ
ಗದಾಂ ತದಾಽಧ್ಯರ್ಧಭರಾಧಿಕಾಂ ಮುದಾ ।
ರಾಜ್ಞೋ ಗದಾಯಾಃ ಪರಿಗೃಹ್ಯ ವೀರಃ
ಸಮುತ್ಥಿತೋ ಯುದ್ಧಮನಾಃ ಸಮುನ್ನದನ್ ॥೬೨॥

ದುರ್ಯೋಧನನ ಈ ಮಾತನ್ನು ಕೇಳಿ ವೀರನಾದ ಭೀಮ ದುರ್ಯೋಧನನ ಗದೆಗಿಂತ ಒಂದೂವರೆಪಟ್ಟು ಹೆಚ್ಚು ಭಾರದ ಶ್ರೇಷ್ಠ ಗದೆಯನ್ನು ಸಂತೋಷದಿಂದ ಹಿಡಿದು ಯುದ್ಧಾರ್ಥಿಯಾಗಿ ರಭಸದಿಂದ ಸಿಂಹನಾದ ಮಾಡುತ್ತ ಎದ್ದುನಿಂತ.

ಆಪದ್ಧರ್ಮ

ಅಥಾಽಹ ನಾರಾಯಣ ಆದಿದೇವೋ
ಯುಧಿಷ್ಠಿರಂ ಕಷ್ಟಮಿದಂ ಕೃತಂ ತ್ವಯಾ ।
ನ ಹ್ಯೇಷ ರಾಜಾ ಗದಯಾ ರಣೇ ಚರನ್
ಶಕ್ಯೋ ವಿಜೇತುಂ ನಿಖಿಲೈಃ ಸುರಾಸುರೈಃ ॥೬೩॥
ಸ ನಿಶ್ಚಯಾದ್ ವಶ್ಚತುರೋ ನಿಹನ್ಯಾತ್
ಸಹಾರ್ಜುನಾನ್ ಭೀಮಸೇನಃ ಕಥಂಚಿತ್ ।
ಹಂತೈನಮಾಜೌ ನಹಿ ಭೀಮತುಲ್ಯೋ
ಬಲೇ ಕ್ವಚಿದ್ ಧಾರ್ತರಾಷ್ಟ್ರಃ ಕೃತೀ ಚ ॥೬೪॥

ಬಳಿಕ ಆದಿದೇವನಾದ ಶ್ರೀಹರಿ ಯುಧಿಷ್ಠಿರನಿಗೆ ಹೇಳಿದ. 'ನೀನು ಮಾಡಿದ ಕೆಲಸ ಅಪಾಯಕಾರಿಯಾಗಿತ್ತು. ಏಕೆಂದರೆ ದುರ್ಯೋಧನ ಗದೆಯಿಂದ ಯುಕ್ತನಾಗಿ ರಣರಂಗದಲ್ಲಿ ಓಡಾಡಿದರೆ ಸಕಲ ಸುರಾಸುರರುಗಳಿಂದಲೂ ಗೆಲ್ಲಲು ಶಕ್ಯನಾಗಲಾರ. ಅವನು ನಿಶ್ಚಯವಾಗಿ ಅರ್ಜುನ ಸಮೇತ ನಾಲ್ವರನ್ನೂ ಕೊಲ್ಲಬಲ್ಲ. ಭೀಮಸೇನನೂ ಯಾವುದಾದರೊಂದು ಉಪಾಯದಿಂದಲೆ ಅವನನ್ನು ಯುದ್ಧದಲ್ಲಿ ಕೊಲ್ಲಬೇಕು. ಬಲದಲ್ಲಿ ಭೀಮನಿಗೆ ಎಲ್ಲಿಯೂ ಸಮಾನನಿಲ್ಲ. ಆದರೆ ದುರ್ಯೋಧನನೂ ಕೂಡ ಬಲಿಷ್ಠನೆ ಆಗಿದ್ದು ಹೆಚ್ಚು ಪ್ರಯತ್ನಶೀಲನೂ ಆಗಿದ್ದಾನೆ.'

ಊರೂ ಭೀಮೇನ ಭೇತ್ತವ್ಯೌ ಪ್ರತಿಜ್ಞಾಂ ರಕ್ಷತಾ ರಿಪೋಃ ।
ನಾಭೇರಧಸ್ತಾದ್ಧನನಂ ಜನಾ ಆಹುರ್ಗದಾಮೃಧೇ ॥೬೫॥
ಅಧರ್ಮ ಇತಿ ತತ್ ಕೃಷ್ಣೋ ಲೋಕನಿಂದಾನಿವೃತ್ತಯೇ ।
ಆಪದ್ಧರ್ಮಂ ದರ್ಶಯಿತುಂ ಕಿಂಚಿದ್ವ್ಯಾಜೇನ ಸಂಯುತಃ ॥೬೬॥

ಭೀಮೋ ಹನ್ಯಾದ್ ಧಾರ್ತರಾಷ್ಟ್ರಮಿತ್ಯೂಚೇ ಯದ್ಯಪಿ ಸ್ಫುಟಮ್ ।
ಅವ್ಯಾಜೇನಾಪಿ ಶಕ್ತೋಽಸೌ ಬಲಂ ನಿಸ್ಸೀಮಮಾಹ ಚ ॥೬೭॥
ಆಹ ಶಿಕ್ಷಾಮಪ್ಯನೂನಾಂ ಯತ್ನಂ ದುರ್ಯೋಧನೇಽಧಿಕಮ್ ।
ನಹಿ ಭೀಮೋಽತಿಪ್ರಯತ್ನಂ ಕುರ್ಯಾದಿತಿ ಗುಣೋ ಹ್ಯಯಮ್ ॥೬೮॥

ಭೀಮ ತನ್ನ ಪ್ರತಿಜ್ಞೆಯನ್ನು ಕಾಪಾಡುವುದಕ್ಕಾಗಿ ಶತ್ರುವಿನ ತೊಡೆಗಳನ್ನು ಭೇದಿಸಬೇಕು. ಆದರೆ ನಾಭಿಯಿಂದ ಕೆಳಗೆ ಹೊಡೆಯುವುದನ್ನು ಗದಾಯುದ್ಧದಲ್ಲಿ ಅಧರ್ಮವೆಂದು ಜನರು ಹೇಳುತ್ತಾರೆ. ಅದರಿಂದ ಲೋಕನಿಂದೆಗೆ ಅವಕಾಶವಿಲ್ಲದಂತೆ ಮಾಡುವುದಕ್ಕಾಗಿ ಆಪದ್ಧರ್ಮವನ್ನು ತೋರುತ್ತ 'ಏನಾದರೂ ಉಪಾಯದಿಂದ ಭೀಮ ದುರ್ಯೋಧನನನ್ನು ಕೊಲ್ಲಬೇಕು' ಎಂದಿದ್ದಾನೆ, ಶ್ರೀಕೃಷ್ಣ. ವಸ್ತುತಃ ಯಾವ ಉಪಾಯವನ್ನೂ ಆಶ್ರಯಿಸದೆ ಕೊಲ್ಲಲು ಭೀಮ ಶಕ್ತನೆ. ಅವನ ಬಲ ಅಪರಿಮಿತವೆಂದು ಶ್ರೀಕೃಷ್ಣನೆ ಹೇಳಿದ್ದಾನೆ. ಗದಾ ವಿದ್ಯಾಭ್ಯಾಸವೂ ಅವನಲ್ಲಿ ಪೂರ್ಣವಾಗಿ ಇದೆ ಎಂದಿದ್ದಾನೆ. ದುರ್ಯೋಧನನಲ್ಲಿ ಪ್ರಯತ್ನಶೀಲತೆ ಅಧಿಕ ಎಂದಿದ್ದಾನಷ್ಟೆ. ಸರ್ವಶಕ್ತನಾದ ಭೀಮ ಅಲ್ಪಕಾರ್ಯದಲ್ಲಿ ಹೆಚ್ಚಿನ ಪ್ರಯತ್ನ ಮಾಡುವುದಿಲ್ಲ. ಅದು ಒಂದು ಗುಣವೆ.

ಮಹಾಭಾರತದಲ್ಲಿ ಕೃಷ್ಣ ಅರ್ಜುನನಿಗೆ ಹೇಳುತ್ತಾನೆ-

ಭೀಮಸೇನಸ್ತು ಧರ್ಮೇಣ ಯುಧ್ಯಮಾನೋ ನ ಜೇಷ್ಯತಿ
ಅನ್ಯಾಯೇನ ತು ಯುಧ್ಯನ್ವೈ ಹನ್ಯಾದೇವ ಸುಯೋಧನಂ
(ಶಲ್ಯ ೫೯.೪).

ಯುಧಿಷ್ಠಿರನಿಗೂ ಹಾಗೇ ಹೇಳುತ್ತಾನೆ (ಶಲ್ಯ ೩೩.೧೩)

ಅದರಂತೆ ಭೀಮ ಏನಾದರೂ ಉಪಾಯ ಮಾಡಿಯೆ ದುರ್ಯೋಧನನನ್ನು ಗೆಲ್ಲಬೇಕು, ಕೇವಲ ಬಲದಿಂದ ಗೆಲ್ಲಲಾರನೆಂದರೆ ಆತನ ಬಲ ಕಡಿಮೆ ಎಂದಂತಾಯಿತು. ಬಲದಲ್ಲಿ ಭೀಮನಿಗೆ ಸಮಾನನಿಲ್ಲ ಎಂದೂ ಶ್ರೀಕೃಷ್ಣ ಹೇಳಿದ್ದಾನೆ. ಈ ವಿರೋಧಕ್ಕೆ ಪರಿಹಾರ ಹೀಗೆ- ಭೀಮ ತನ್ನಲ್ಲಿ ಬಲಕಡಿಮೆ ಎಂದು ಉಪಾಯವನ್ನು ಆಶ್ರಯಿಸುತ್ತಿಲ್ಲ. ಸೋಲುವ ಪ್ರಸಂಗವೆಂದು ಆಪದ್ಧರ್ಮವನ್ನೂ ಅನುಸರಿಸುತ್ತಿಲ್ಲ. ಅವನು ಕೌರವನ ತೊಡೆ ಮುರಿವ ಪ್ರತಿಜ್ಞೆಮಾಡಿದ್ದಾನೆ. ತೊಡೆಗೆ ಹೊಡೆಯುವುದು ಗದಾಯುದ್ಧದಲ್ಲಿ ಲೋಕದೃಷ್ಟಿಯಿಂದ ಅನ್ಯಾಯವೆನಿಸುತ್ತದೆ. ಅದಕ್ಕೆ ಹೆದರಿ ಪ್ರತಿಜ್ಞೆಪೂರೈಸದಿರುವುದು ಇನ್ನೂ ಹೆಚ್ಚಿನ ಅಧರ್ಮವಾಗುತ್ತದೆ. ಜೂಜಿನಲ್ಲಿ ಸೋತರೆ ಹದಿಮೂರು ವರ್ಷ ವನವಾಸ ಮಾಡುವೆನೆಂದು ಧರ್ಮರಾಜ ಮಾತು ಕೊಟ್ಟು ಆ ಪ್ರತಿಜ್ಞಾಪಾಲನೆಗಾಗಿ ವನವಾಸ ಮಾಡಿದ್ದಾನೆ. ಇದೇ ಆಪತ್ತು. ಆಪದ್ಧರ್ಮ ಪ್ರಕಾರ ಒಂದು ಉಪಾಯವನ್ನು ಆಶ್ರಯಿಸಬೇಕು.

ಗದಾಯುದ್ಧ ನಿಯಮಪಾಲನೆ ಸಣ್ಣಧರ್ಮ. ಪ್ರತಿಜ್ಞಾಪಾಲನೆ ದೊಡ್ಡ ಧರ್ಮ. ದೊಡ್ಡಧರ್ಮದ ಸಲುವಾಗಿ ಸಣ್ಣಧರ್ಮವನ್ನು ಕೈಬಿಡುವುದು ಆಪದ್ಧರ್ಮ. ಹುಲಿಯನ್ನು ಕೊಲ್ಲುವುದು ಪ್ರಾಣಹಿಂಸೆಯಾದ್ದರಿಂದ ಅದೂ ಒಂದು ಸಣ್ಣ ಅಧರ್ಮವೆ. ಅದನ್ನು ಸಹಿಸಿಕೊಂಡು ಗೋರಕ್ಷಣದಂಥ ದೊಡ್ಡ ಧರ್ಮವನ್ನು ಕಾಪಾಡಬೇಕು ತಾನೆ? ವಸ್ತುತಃ ಗದಾಯುದ್ಧ ನಿಯಮವನ್ನೂ ಉಲ್ಲಂಘಿಸದೆ, ನಾಭಿಯಿಂದ ಕೆಳಗೆ ಹೊಡೆಯದೆಯೆ ಭೀಮ ಕೌರವನ ತೊಡೆ ಮುರಿಯಬಲ್ಲ. ಹಾಗೇ ಮುರಿದಿದ್ದಾನೆ ಎಂದೂ ಮುಂದೆ ಸ್ಪಷ್ಟವಾಗುತ್ತದೆ. ಅವನ ಬಲ ಅಪರಿಮಿತ. ಗದಾವಿದ್ಯೆಯೂ ಅವನಲ್ಲಿ ಪೂರ್ಣಪ್ರಮಾಣದಲ್ಲಿ ಇದೆ. ಪ್ರಯತ್ನಶೀಲತೆ ಬೇಕಾಗಿಲ್ಲ. ಅದರಿಂದ ಹೆಚ್ಚು ಪ್ರಯತ್ನ ಮಾಡದಿರುವುದೂ ಒಂದು ಗುಣವೆ. ದುರ್ಯೋಧನ ದುರ್ಬಲನಾದ್ದರಿಂದ ಹೆಚ್ಚು ಪ್ರಯತ್ನಶೀಲನಾಗಲೇಬೇಕು. ಅದು ದೋಷವೆ.

ಬಲೀ ಭೀಮಃ ಸಮರ್ಥಶ್ಚ ಕೃತೀ ರಾಜಾ ಸುಯೋಧನಃ।
ಬಲವಾಂಶ್ಚ ಕೃತೀ ಚೇತಿ ಕೃತೀ ರಾಜನ್ ವಿಶಿಷ್ಯತೇ (ಶಲ್ಯ ೩೩-೮)

'ಭೀಮ ಬಲಿಷ್ಠ, ನಿಜ. ಆದರೆ ದುರ್ಯೋಧನ ಸಮರ್ಥನೂ, ಜೊತೆಗೆ ಒಳ್ಳೆಯ ಗದಾಭ್ಯಾಸ ಕೌಶಲ್ಯ ಉಳ್ಳವನೂ ಆಗಿದ್ದಾನೆ. ಅದರಿಂದ ಅವನೆ ಮಿಗಿಲು' ಎಂದು ಮಹಾಭಾರತ ಹೇಳಿದಂತೆ ಕಾಣುತ್ತದೆ. ಆದರೆ ದುರ್ಯೋಧನನ ಗುರುವಾದ ಬಲರಾಮನಲ್ಲಿಯೆ ಭೀಮನೂ ಅಭ್ಯಾಸ ಮಾಡಿದ್ದಾನೆ, ಮತ್ತು ಶ್ರೀಕೃಷ್ಣನಲ್ಲಿಯೂ ಅಭ್ಯಾಸಮಾಡಿದ್ದಾನೆ. ಅದರಿಂದ ಅಭ್ಯಾಸಕೌಶಲ್ಯ ಭೀಮನಲ್ಲಿ ಕಡಿಮೆ ಎಂದು ಶ್ರೀಕೃಷ್ಣ ಹೇಳುವ ಸಂಭವವಿಲ್ಲ. ಅದರಿಂದ 'ಕೃತೀ' ಎಂದರೆ ಕುಶಲ ಎಂದರ್ಥವಲ್ಲ. 'ಕೃತೀ ಪ್ರಯತ್ನೇ' ಎಂಬ ಧಾತುನಿಷ್ಪನ್ನವಾದ್ದರಿಂದ ಪ್ರಯತ್ನಶೀಲ ಎಂದರ್ಥ. ಭೀಮ ಸರ್ವಶಕ್ತನಾದ್ದರಿಂದ ಪ್ರಯತ್ನ ಮಾಡಬೇಕಾಗಿಲ್ಲ. ಒಂದು ಇಲಿಯನ್ನು ಕೊಲ್ಲಬೇಕೆಂದರೆ ಬಲಿಷ್ಠವಾದ ಸಿಂಹ ತನ್ನ ಕಠಿಣವಾದ ನಖಗಳಿಂದ ಯತ್ನಿಸಬೇಕಾಗಿಲ್ಲ.[1]

1. ಪ್ರತಿಜ್ಞಾತಸ್ಯಾಕರಣೇಽಪಿ ನೃಪಸ್ಯಾಧರ್ಮಃ, ಗದಾಯುದ್ಧ ಧರ್ಮಾತಿಕ್ರಮಣೇಽಪ್ಯಧರ್ಮ ಇತ್ಯುಭಯಥಾಪಿ ಧರ್ಮಾತಿಕ್ರಮರೂಪಾಪದಿ ಪ್ರಾಪ್ತಾಯಾಂ ಯೋ ಧರ್ಮಃ, ಅಲ್ಪಾಧರ್ಮಂ ಸೋಢ್ವಾಪಿ ಮಹಾನಧರ್ಮ ಏವ ಪರಿರಕ್ಷಣೀಯ ಇತಿ ಧರ್ಮಃ, ತಂ ದರ್ಶಯಿತುಮಿತ್ಯರ್ಥಃ। ಯಥಾ ವ್ಯಾಘ್ರೇಣ ಗೋವಧೇ ಕ್ರಿಯಮಾಣೇ ಶಕ್ತಸ್ಯ ಕ್ಷತ್ರಿಯಸ್ಯ ತದುಪೇಕ್ಷಾಯಾಮಪ್ಯಧರ್ಮಃ, ನ ಹಿಂಸ್ಯಾದಿತಿ ಶ್ರುತೇಃ ವ್ಯಾಘ್ರ ವಧೋಽಪ್ಯಧರ್ಮಃ, ಏವಮುಭಯಥಾಪ್ಯಧರ್ಮೇ ಪ್ರಾಪ್ತೇ ಸತಿ 'ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾಮಿ' ತಿ ವಚನೇನ ದುಷ್ಟವಧ ರೂಪತ್ವಾತ್ ಅಲ್ಪೀಯಾಂಸಂ ವ್ಯಾಘ್ರ ವಧರೂಪಮಧರ್ಮಂ ಸೋಢ್ವಾಪಿ ವ್ಯಾಘ್ರಂ ಹತ್ವಾ ಕೃತ್ವಂಗ ದುಗ್ಧ ದೋಗ್ಧೃ ಗೋರಕ್ಷಣರೂಪ

ಪ್ರತಿಜ್ಞಾಪಾಲನಂ ಧರ್ಮೋ ದುಷ್ಟೇಷು ತು ವಿಶೇಷತಃ ।
ಇತಿ ಧರ್ಮರಹಸ್ಯಂ ತು ವಿತ್ತಃ ಕೃಷ್ಣವೃಕೋದರೌ ॥೬೯॥
ನಾನ್ಯಸ್ತತೋ ಲೋಕನಿಂದಾಂ ವ್ಯಪನೇತುಮುಭಾವಪಿ ।
ಅನಾಪದ್ಯಾಪದಿವ ಚ ದರ್ಶಯೇತಾಂ ಜನಸ್ಯ ತು ॥೭೦॥

ಪ್ರತಿಜ್ಞಾಪಾಲನೆ ಧರ್ಮವೆನಿಸುತ್ತದೆ. ಅದರಲ್ಲಿಯೂ ದುಷ್ಟರಲ್ಲಿ ಪ್ರತಿಜ್ಞಾಪಾಲನೆ ವಿಶೇಷವಾಗಿ ಧರ್ಮವೆನಿಸುತ್ತದೆ ಎಂದು ಧರ್ಮರಹಸ್ಯವನ್ನು ಕೃಷ್ಣ ಭೀಮರು ತಿಳಿದಿದ್ದಾರೆ. ಮತ್ತೆ ಯಾರೂ ತಿಳಿದಿಲ್ಲ. ಅದರಿಂದ ಲೋಕನಿಂದೆಯನ್ನು ಬಾರದಂತೆ ಮಾಡಲು ಆಪತ್ತಿಲ್ಲದಿದ್ದರೂ ಆಪತ್ತು ಇರುವಂತೆ ಇಬ್ಬರೂ ಲೋಕಕ್ಕೆ ತೋರಿಕೊಳ್ಳುತ್ತಿದ್ದಾರೆ.

ಗಾಂಡೀವವನ್ನು ನಿಂದಿಸಿದರೆ ವಧಿಸುವೆನೆಂದು ಅರ್ಜುನ ಪ್ರತಿಜ್ಞೆ ಮಾಡಿದ್ದರಿಂದ ಧರ್ಮರಾಜ ವಧ್ಯನೆನಿಸಿದ. ಆದರೆ ಸಜ್ಜನರಲ್ಲಿ ಇಂಥ ಪ್ರತಿಜ್ಞೆಯನ್ನು ಪಾಲಿಸುವುದು ಮುಖ್ಯವಲ್ಲ. ಅದರಿಂದ ಶ್ರೀಕೃಷ್ಣ ಉಪಾಯದಿಂದ ಪ್ರತಿಜ್ಞಾಪಾಲನೆ ಮಾಡಿಸಿದ. ಆದರೆ ದುಷ್ಟನಾದ ಕೌರವನಲ್ಲಿ ಪ್ರತಿಜ್ಞಾಪಾಲನೆ ವಿಶೇಷವಾಗಿ ಮುಖ್ಯಧರ್ಮ. ಅದರ ಮುಂದೆ ಗದಾಯುದ್ಧ ನಿಯಮಪಾಲನೆ ಏನೂ ಅಲ್ಲ. ಆದರಿಂದ ಸಮಬಲವಾದ ಎರಡು ಧರ್ಮಗಳಿಗೆ ವಿರೋಧ ಬಂದಿಲ್ಲ. ಬಂದಿದ್ದರೆ ಅದು ಆಪತ್ತೆನಿಸುತ್ತಿತ್ತು. ಆದರೂ ಇದನ್ನರಿಯದ ಜನರು ಗದಾಯುದ್ಧದಲ್ಲಿ ಭೀಮ ಅನ್ಯಾಯ ಮಾಡಿದನೆಂದು ಆಡಿಕೊಳ್ಳಬಾರದೆಂದು, ಆಪತ್ತಿಲ್ಲದಿದ್ದರೂ ಇದೆ

ಧರ್ಮ ಏವ ಕ್ಷತ್ರಿಯೇಣ ರಕ್ಷಣೀಯಃ, ತಥಾ ದುಷ್ಟದುರ್ಯೋಧನ ವಧಾಯ ಗದಾಯುದ್ಧ ಧರ್ಮಾತಿಕ್ರಮ ರೂಪಮಲ್ಪಾಧರ್ಮಂ ಸೋಢ್ವಾಪಿ ಸತ್ಯಂ ವದೇತಿ ಶ್ರುತಿವಿಹಿತಸತ್ಯ ತ್ಯಾಗರೂಪಃ ಸ್ವಪ್ರತಿಜ್ಞೋಲ್ಲಂಘನಾಖ್ಯೋ ಮಹಾನಧರ್ಮ ಏವ ಪರಿಹರಣೀಯಃ। ಕಥಮನ್ಯಥಾ ಸ್ವೋಕ್ತ ಸತ್ಯ ಪರಿರಕ್ಷಣಾಯ ತ್ರಯೋದಶವರ್ಷ ಪರ್ಯಂತಂ ರಾಜ್ಯತ್ಯಾಗೋ ಧರ್ಮರಾಜಸ್ಯೇತಿ ಹೇತೋಃ ಕಿಂಚಿದ್ ವ್ಯಾಜೇನ ಅಲ್ಪಧರ್ಮಾತಿಕ್ರಮಾಖ್ಯೇನಾಲ್ಪೇನ ವ್ಯಾಜೇನ ಅಲ್ಪಧರ್ಮಪ್ರತಿಪಾದಕ ವಾಕ್ಯತ್ಯಾಗರೂಪತ್ವಾತ್ ವ್ಯಾಜವದ್ ವರ್ತಮಾನೇನೇಷದಧರ್ಮೇಣೇತ್ಯರ್ಥಃ।

ತರ್ಹಿ ಧಾರ್ತರಾಷ್ಟ್ರಃ ಕೃತೀ ಚೇತಿ ಕೃಷ್ಣೇನೈವೋಕ್ತತ್ವಾತ್ ಭೀಮಸೇನಸ್ಯ ಶಿಕ್ಷಾ ಕೌಶಲಂ ನಾಸ್ತೀತಿ ದೋಷಃ ಪ್ರಾಪ್ನುಯಾದಿತ್ಯತಃ ಕೃಷ್ಣವಾಕ್ಯಾಭಿಪ್ರಾಯಮಾಹ ಶಿಕ್ಷಾಮಪೀತಿ। ಅನೂನಾಂ ಶಿಕ್ಷಾಮಪ್ಯಾಹ। ದುರ್ಯೋಧನ ಗುರೋ ರಾಮಾತ್ ಗದಾಪಾಣೇಃ ಸ್ವಸ್ಮಾಚ್ಚ ಯಸ್ಯ ಭೀಮಸ್ಯ ಗದಾಭ್ಯಾಸಃ ತಸ್ಯ ಗದಾಭ್ಯಾಸ ಕೌಶಲಾಭಾವಂ ಕೃಷ್ಣಏವ ಕಥಂ ಬ್ರೂಯಾದಿತಿ ಭಾವಃ। ತರ್ಹಿ ಕೋರ್ಥಃ ಕೃತಿಪದಸ್ಯೇತ್ಯತ ಆಹ ಯತ್ನವಿತಿ। ಕೃತೀ ಪ್ರಯತ್ನ ಇತಿಧಾತೋಃ ಯತ್ನಂ ದುರ್ಯೋಧನೇಽಧಿಕ ಯತ್ನಂ ಚಾಹ ಕೃತಿಪದೇನಾಹ। ನತು ಕೌಶಲಂ। ತರ್ಹಿ ಯತ್ನಾಭಾವ ಏವ ಭೀಮಸ್ಯ ದೋಷಃ ಸ್ಯಾದಿತ್ಯತ ಆಹ ನಹೀತಿ। ಅತಿ ಪ್ರಯತ್ನಮಲ್ಪೇ ಕಾರ್ಯೇ ಮಹಾ ಪ್ರಯತ್ನಂ ನ ಕುರ್ಯಾದಿತ್ಯಯಂ ಸ್ವಭಾವೋ ಭೀಮಸ್ಯ ಗುಣೋ ಹಿ। ಹಿಶಬ್ದೇನ ಪ್ರಬಲಃ ಸಿಂಹೋ ದುರ್ಬಲ ಮೂಷಿಕ ವಧಾಯ ಸ್ವಕಠೋರ ನಖರೈರ್ನ ಪ್ರಯತತ ಇತಿ ಪ್ರಸಿದ್ಧಿಂ ಸೂಚಯತಿ। -ವಾದಿರಾಜೀಯ

ಎಂಬಂತೆ ಕೃಷ್ಣಭೀಮರು ತೋರಿಕೊಂಡರು. ನಾಭಿಯಿಂದ ಮೇಲ್ಗಡೆ ಹೊಡೆಯದೆ ನಾಭಿಪ್ರದೇಶದಲ್ಲಿಯೆ ಹೊಡೆದು, ಮಾತಿನಲ್ಲಿ ಕೃಷ್ಣನೂ ಕೃತಿಯಲ್ಲಿ ಭೀಮನೂ ಆಪದ್ಧರ್ಮವನ್ನು ತೋರಿದರು.

ಊರುಭಂಗ

ತತೋ ಭೀಮಃ ಸರ್ವಲೋಕಸ್ಯ ಧರ್ಮಂ
ಪ್ರಕಾಶಯನ್ ವಾಕ್ಯಮಿದಂ ಜಗಾದ।
ಊರೂ ತವಾಹಂ ಹಿ ಯಥಾಪ್ರತಿಜ್ಞಂ
ಭೇತ್ತಾಸ್ಮಿ ನೈವಾತ್ರ ವಿಚಾರಣೀಯಮ್ ॥೭೧॥

ಬಳಿಕ ಭೀಮ ಎಲ್ಲ ಲೋಕಕ್ಕೂ ಮುಖ್ಯಧರ್ಮವನ್ನು ತೋರುತ್ತ ಈ ಮಾತನ್ನು ನುಡಿದ. ನಾನು ನಿನ್ನ ಎರಡೂ ತೊಡೆಗಳನ್ನು ಪ್ರತಿಜ್ಞಾನುಸಾರವಾಗಿ ಮುರಿಯುತ್ತೇನೆ. ಇದರಲ್ಲಿ ಸಂಶಯಪಡಬೇಕಾದುದೇನಿಲ್ಲ.

ಇತ್ಯುಕ್ತವಂತಂ ಪ್ರಸಸಾರ ಚಾಽಜೌ
ದುರ್ಯೋಧನಸ್ತತ್ರ ಬಭೂವ ಯುದ್ಧಮ್।
ಭೀಮಸ್ತದಾಽಗ್ರ್ಯಪ್ರಕೃತಿಂ ವಿಧಿತ್ಸು-
ರ್ಮಂದಃ ಸ ಆಜೌ ವ್ಯಚರಜ್ಜನಾರ್ಥೇ ॥೭೨॥

ಭೀಮ ಹೀಗೆ ಹೇಳಿದಾಗ ದುರ್ಯೋಧನ ಅವನನ್ನು ಯುದ್ಧದಲ್ಲಿ ಇದಿರಿಸಿದ. ಯುದ್ಧ ನಡೆಯಿತು. ಭೀಮ ಆಗ ದೊಡ್ಡವರ ಸ್ವಭಾವವನ್ನು ತೋರಿಸಲು ಬಯಸಿ ಲೋಕಶಿಕ್ಷಣಕ್ಕಾಗಿ ಮಂದಗತಿಯಿಂದ ಯುದ್ಧದಲ್ಲಿ ಸಂಚರಿಸಿದ.

ಮೊದಲಿಗೆ ಹಂಸದಂತೆ ದೊಡ್ಡವರು ಮಂದಗತಿಯನ್ನೇ ತೋರುತ್ತಾರೆ. ಕೊನೆಯಲ್ಲಿ ಕ್ಷಿಪ್ರಗತಿ. ಸ್ವಲ್ಪಕಾಲ ಕಾಗೆಯಂತೆ ಮೊದಲಿಗೇ ವೇಗವಾಗಿ ಹಾರಾಡಿ ಸೋತುಹೋಗುವುದು ಕ್ಷುದ್ರರ ಸ್ವಭಾವವೆಂದು ವಾದಿರಾಜೀಯ ಹೇಳಿದೆ.[1]

ದರ್ಶಯಂತೌ ಗದಾಮಾರ್ಗಂ ಚಿತ್ರಂ ತೌ ಪ್ರವಿಚೇರತುಃ।
ಬಲಭದ್ರೋಽಪ್ಯಾಜಗಾಮ ತದಾ ತೌ ಪ್ರತಿವಾರಿತುಮ್ ॥೭೩॥

ಭೀಮ ದುರ್ಯೋಧನರು ಗದಾಯುದ್ಧದ ವರಸೆಯನ್ನು ತೋರುತ್ತ ಆಶ್ಚರ್ಯಕರವಾಗಿ ಸಂಚರಿಸಿದರು. ಆಗ ಅವರನ್ನು ತಡೆಯಲು ಬಲರಾಮ ಬಂದ.

---

೧. ಮಹಾಂತೋ ಹಿ ಹಂಸವಚ್ಛನೈಃ ಶನೈಃ ಕಾರ್ಯಂ ಕುರ್ವಂತಿ। ನೀಚಾಸ್ತು ಕಾಕವದಾದೌ ಕಿಂಚಿತ್‌ಕಾಲ ಪರ್ಯಂತಂ ತ್ವರಯಾ ಕಾರ್ಯಂ ಕುರ್ವಂತೀತಿ ಭಾವಃ। -ವಾದಿರಾಜೀಯ

ಕೌರವರಿಗೂ ನೀನು ಸಹಾಯ ಮಾಡು ಎಂದು ಬಲರಾಮ ಹೇಳಿದರೂ ಕೃಷ್ಣ ಒಪ್ಪಲಿಲ್ಲ. ಅದಕ್ಕೆ ಬೇಸರಗೊಂಡು ಬಲರಾಮ ಯಾತ್ರೆಗೆ ಹೊರಟ. ೪೨ ದಿನಗಳ ಯಾತ್ರೆಯಾಯಿತು. ಸರಸ್ವತೀ ನದಿ ಉದಿಸುವ ಹಿಮಾಲಯದ ಪ್ಲಕ್ಷಪ್ರಸ್ರವಣವೆಂಬ ಶಿಖರದಲ್ಲಿ ಋಷಿಮುನಿಗಳನ್ನು ಸತ್ಕರಿಸಿ ಜೊತೆಯಲ್ಲಿ ಕುಳಿತಿದ್ದಾಗ ನಾರದರು ಬಂದು ನಿನ್ನ ಶಿಷ್ಯರು ಭೀಮ ದುರ್ಯೋಧನರು ಗದಾಯುದ್ಧಕ್ಕೆ ತೊಡಗಿದ್ದಾರೆ. ನೋಡಬೇಕೆನಿಸಿದರೆ ಹೋಗೆಂದರು. ಬಲರಾಮ ಹೊರಟುಬಂದ.

ವಾರಿತಾವಪಿ ತೇನೋಭೌ ನೈವ ಯುದ್ಧಂ ವ್ಯಮುಂಚತಾಮ್ ।
ತತೋ ದದರ್ಶ ತದ್ ಯುದ್ಧಂ ಮಾನಿತಃ ಕೃಷ್ಣಪೂರ್ವಕೈಃ ॥ ೭೪ ॥

ಬಲರಾಮ ತಡೆದರೂ ಭೀಮ ದುರ್ಯೋಧನರು ಇಬ್ಬರೂ ಹೋರಾಟವನ್ನು ನಿಲ್ಲಿಸಲಿಲ್ಲ. ಬಳಿಕ ಕೃಷ್ಣ ಮುಂತಾದವರಿಂದ ಸತ್ಕೃತನಾಗಿ ಬಲರಾಮ ಆ ಯುದ್ಧವನ್ನು ವೀಕ್ಷಿಸಿದ.

ತೌ ಶಿಕ್ಷಾಬಲಸಂಯುಕ್ತೌ ಮಂಡಲಾನಿ ವಿಚೇರತುಃ ।
ತತೋ ಭೀಮಂ ವಂಚಯಿತುಂ ಧಾರ್ತರಾಷ್ಟ್ರಃ ಶಿರಃ ಕ್ಷಿತೌ ॥ ೭೫ ॥

ನ್ಯಧಾದುಚ್ಛ್ರಿತಸಕ್ಥೀಕಸ್ತದಾ ಕೃಷ್ಣಾಭ್ಯನುಜ್ಞಯಾ ।
ಪೃಷ್ಠಮೂಲೇಽಹನದ್ ಭೀಮೋ ಭಿನ್ನಸಕ್ಥಿಶ್ಚ ಸೋಽಪತತ್ ॥ ೭೬ ॥

ಪ್ರತಿಜ್ಞಾಪಾಲನಾರ್ಥಾಯ ನಾಭೇರ್ನೋರ್ಧ್ವಮಧಸ್ತದಾ ॥ ೭೭ ॥

ಭೀಮ ದುರ್ಯೋಧನರಿಬ್ಬರೂ ಶಿಕ್ಷಣ ಮತ್ತು ಬಲಗಳಿಂದ ಕೂಡಿರುವವರು ಗದಾಯುದ್ಧದ ವರಸೆಗಳನ್ನು ತೋರುತ್ತ ಸಂಚರಿಸಿದರು. ಆಗ ಭೀಮನನ್ನು ವಂಚಿಸುವುದಕ್ಕಾಗಿ ದುರ್ಯೋಧನ ನೆಲದಲ್ಲಿ ತಲೆ ಕೆಳಗು ಮಾಡಿದ. ತೊಡೆ ಮೇಲು ಮಾಡಿದ. ಆಗ ಕೃಷ್ಣನ ಅನುಜ್ಞೆಯಿಂದ ಪ್ರತಿಜ್ಞಾಪಾಲನೆಗಾಗಿ ಭೀಮ ಬೆನ್ನಿನ ಬುಡಕ್ಕೆ ಹೊಡೆದ, ನಾಭಿಯಿಂದ ಮೇಲ್ಗಡೆಯಾಗಲಿ ಕೆಳಗಾಗಲಿ ಅಲ್ಲ. ದುರ್ಯೋಧನ ಆಗ ತೊಡೆ ಮುರಿದು ಬಿದ್ದ.

ಒಮ್ಮೆ ಭೀಮ ದುರ್ಯೋಧನನಿಗೆ ಅವಕಾಶ ಕೊಟ್ಟಾಗ ಅವನು ಬಲವಾಗಿ ಹೊಡೆದ. ಭೀಮನಿಗೆ ಮೂರ್ಛೆ ಬಂದಂತಾಯಿತು. ಅದು ದುರ್ಯೋಧನನಿಗೆ ಗೊತ್ತಾಗದಿದ್ದುದರಿಂದ (ಶಲ್ಯ ೫೯.೩೯) ಭೀಮ ಯಾವುದೋ ವರಸೆಗೆ ಸಿದ್ಧನಾಗುತ್ತಿದ್ದಾನೆ ಎಂದು ಭಾವಿಸಿ ಸುಮ್ಮನೆ ನಿಂತ. ಶ್ರೀಕೃಷ್ಣನ ಸೂಚನೆಯಂತೆ ಅರ್ಜುನ ತೊಡೆ ತಟ್ಟಿ ತೋರಿಸಿದ. ಹೀಗೆ ಕೃಷ್ಣನ ಅನುಜ್ಞೆ ಸಿಕ್ಕಿತು.

[1]ದುರ್ಯೋಧನ ಭೀಮನನ್ನು ವಂಚಿಸಲು ಕಾಲುತಲೆಗಳನ್ನು ನೆಲದಲ್ಲಿಟ್ಟು ಸಿಂಹದಂತೆ ಸೊಂಟ ಮೇಲೆ ಮಾಡಿ ಎರಡು ತೊಡೆಗಳನ್ನು ಆಚ್ಛಾದಿಸಿ ನಿಂತು, ಇನ್ನೇನು, ಹಾರಬೇಕೆಂದು ಯೋಚಿಸುತ್ತಿದ್ದಾಗ ಭೀಮ ಅವನ ಬೆನ್ನಿನ ಬುಡಕ್ಕೇ ನಾಭಿಗೆ ಸರಿಯಾಗಿ ಎಲುಬಿನ ಮೇಲೆ ಗದೆಬೀಸಿದ. ಆತ ಬಿದ್ದ. ಒಡನೆ ಉಲ್ಕಾಪಾತವಾಯಿತು. ದೂಳಿನಿಂದ ಕೂಡಿದ ರಕ್ತದ ಮಳೆಯಾಯಿತು. ಯಕ್ಷ ರಾಕ್ಷಸ ಪಿಶಾಚಗಳ ಕರ್ಕಶನಾದಗಳುಂಟಾದುವು. ಸ್ತ್ರೀಯರು ಪುರುಷರಂತೆ ಪುರುಷರು ಸ್ತ್ರೀಯರಂತಾದರು.

ಗದಾಯುದ್ಧಸ್ಯ ಮರ್ಯಾದಾಂ ಯಶಶ್ಚಾಪ್ಯಭಿರಕ್ಷಿತುಮ್ ।
ನಾಧಸ್ತಾನ್ನಾಭ್ಯ ವಾಕಸೌ ನಿಜಘ್ನೇ ತಂ ವೃಕೋದರಃ ॥೭೮॥
ಏವಂ ಪ್ರತಿಜ್ಞಾಯುಗ್ಮಾರ್ಥಂ ಭಗ್ನಂ ಸಕ್ಥಿಯುಗಂ ರಣೇ ।
ಕೃಷ್ಣಂ ದ್ಯೂತೇ ನಿಧೇಹೀತಿ ಯದವಾದೀತ್ ಸುಯೋಧನಃ ।
ತತ್ಪ್ರತಿಜ್ಞಾನುಸಾರೇಣ ಭೀಮೋ ಮೂರ್ದ್ಧಾನಮಕ್ರಮೀತ್ ॥೭೯॥

ಗದಾಯುದ್ಧದ ನಿಯಮವನ್ನೂ ಯಶಸ್ಸನ್ನೂ ಪಾಲಿಸುವುದಕ್ಕಾಗಿ ಭೀಮ ದುರ್ಯೋಧನನನ್ನು ನಾಭಿಯಿಂದ ಕೆಳಗೆ ಹೊಡೆಯಲಿಲ್ಲ. ಮಧ್ಯದಲ್ಲಿಯೆ ಹೊಡೆದ. ಎರಡು ಪ್ರತಿಜ್ಞೆಗಳನ್ನು ಪಾಲಿಸುವುದಕ್ಕಾಗಿ ಎರಡು ತೊಡೆಗಳನ್ನು ಮುರಿದ. ಜೂಜಿನಲ್ಲಿ ಅವನು ಕೃಷ್ಣನನ್ನೂ ಪಣವಾಗಿ ಇಡೆಂದು ಹೇಳಿದ್ದರಿಂದ ಆಗ ಮಾಡಿದ್ದ ಪ್ರತಿಜ್ಞೆಗೆ ಅನುಸಾರವಾಗಿ ಭೀಮ ಅವನ ತಲೆಯನ್ನು ತುಳಿದ.

ದ್ರೌಪದಿಗೆ ಎಡತೊಡೆಯನ್ನು ತೋರಿದಾಗ ಅದನ್ನು ಮುರಿವೆನೆಂದು ಒಂದು ಪ್ರತಿಜ್ಞೆ ಮಾಡಿದ್ದ ಭೀಮ. ಬಳಿಕ ಪಾಂಡವರು ಕಾಡಿಗೆ ಹೊರಡುತ್ತಿದ್ದಾಗ ಇನ್ನೊಂದು ತೊಡೆಯನ್ನೂ ಮುರಿಯುತ್ತೇನೆ ಎಂದು ಇನ್ನೊಂದು ಪ್ರತಿಜ್ಞೆ ಮಾಡಿದ್ದ.

'ಮೂರ್ಧಾನಮಕ್ರಮೀತ್' ಎಂಬುದು ಋಷಭಸೂಕ್ತ (ಋಗ್ವೇದ 10.166.1-5) ದಲ್ಲಿ ಬರುವ,

'ಯೋಗಕ್ಷೇಮಂ ವ ಆದಾಯಾಹಂ ಭೂಯಾಸಮುತ್ತಮ
ಆ ವೋ ಮೂರ್ಧಾನಮಕ್ರಮೀಂ' ಎಂಬ ವಚನದ ಅನುಕರಣೆ.

ಋಷಭ ಸೂಕ್ತ (ವಾದಿರಾಜೀಯಾನುಸಾರಿ ಅರ್ಥಾನುವಾದ, ವಿವರಣೆ)

ಋಷಭಂ ಮಾ ಸಮಾನಾನಾಂ ಸಪತ್ನಾನಾಂ ವಿಷಾಸಹಿಂ ।
ಹಂತಾರಂ ಶತ್ರೂಣಾಂ ಕೃಧಿ ವಿರಾಜಂ ಗೋಪತಿಂ ಗವಾಂ ॥೧॥

---

1. **ಪಾದಯುಗ್ಮಂ ಭೂಮೌ ನಿಧಾಯ ಶಿರಶ್ಚ ಭೂಮೌ ನಿಧಾಯ ಕಟಿಮುಪರಿಕೃತ್ವಾ ಸ್ಥಿತಃ। ಭೀಮ ಪ್ರತಿಜ್ಞಾಭಂಗಾರ್ಥಮೂರೂ ಆಚ್ಛಾದಿತವಾನಿತಿ ಭಾವಃ ।** -ಫಲಾರೀಯ

ಶ್ರೀಹರಿ! ಸಮಾನರಾದ ಶತ್ರುಗಳಲ್ಲಿ ವಿಶೇಷ ಸಹನೆಉಳ್ಳ ಉತ್ತಮ ನಾದ ನನ್ನನ್ನು ಶತ್ರು ನಾಶಕನನ್ನಾಗಿ ಮಾಡು. ನನ್ನನ್ನು ವಿಶೇಷವಾಗಿ ರಾರಾಜಿಸುವಂತೆ ಮಾಡು. ವಿದ್ಯೆಗಳ ನಡುವೆ ವಿದ್ಯಾಧಿಪತಿಯನ್ನಾಗಿ ಮಾಡು.

ಧೃತರಾಷ್ಟ್ರ ಪಾಂಡು ಎಂಬ ಇಬ್ಬರು ಸಮಾನರಾದ ಅಣ್ಣತಮ್ಮಂದಿರ ಗಾಂಧಾರೀ ಕುಂತಿ ಎಂಬ ಇಬ್ಬರು ಸಮಾನರಾದ ಪತ್ನಿಯರಲ್ಲಿ ಜನಿಸಿದವರಾದ್ದರಿಂದ ಕೌರವರೂ ಪಾಂಡವರೂ ಸಮಾನವಾಗಿ ಅರ್ಧರಾಜ್ಯಕ್ಕೆ ಅರ್ಹರು. ಆದರೂ ಕೌರವರು ಅಸುರರು, ಪಾಂಡವರು ದೇವತೆಗಳು. ಸ್ವಾಭಾವಿಕವಾಗಿ ಪರಸ್ಪರ ಶತ್ರುಗಳು. ಶತ್ರುಗಳಾದ ಕೌರವರಲ್ಲಿ ಭೀಮಸೇನ ವಿಶೇಷ ಸಹನೆ ತೋರಿದ. ತುಂಬಿದ ಸಭೆಯಲ್ಲಿ ದುಃಶಾಸನ ದ್ರೌಪದಿಯ ಸಿರಿಮುಡಿಗೆ ಕೈಹಾಕುವುದು ಮುಂತಾದ ಮಹಾಅಪರಾಧಗಳನ್ನು ಮಾಡಿದರೂ ಅದು ಶ್ರೀಹರಿಯ ಸಂಕಲ್ಪವೆಂದು ತಿಳಿದಿದ್ದ ಭೀಮ ಬಲದಲ್ಲಿ ಉತ್ತಮನಾಗಿದ್ದೂ ತತ್ಕಾಲದಲ್ಲಿ ಸಹನೆ ಮಾಡಿ ಕುಳಿತ. ಇದು ವಿಶೇಷ. ಈ ಸಹನೆ ಅಶಕ್ತಿಯಿಂದ ಅಲ್ಲ. ಅದರಿಂದ ಅದು ಶತ್ರುಗಳಿಗೆ ವಿಷದಂತಾಯಿತು ಎಂದು ಸೂಚಿಸುತ್ತಿದೆ 'ವಿ ಸಾಸಹಿ' ಎಂಬ ಎರಡು ಶಬ್ದಗಳು ಜೊತೆಗೂಡಿ ಉಂಟಾದ 'ವಿಷಾಸಹಿ' ಎಂಬ ಶಬ್ದ. 'ಹೀಗೆ ಶ್ರೀಹರಿ! ನಿನ್ನ ಸಂಕಲ್ಪದಂತೆ ಆಗ ನಾನು ಸಹನ ಮಾಡಿದೆ. ಇದೀಗ ಪ್ರತೀಕಾರ ಮಾಡುವ ಕಾಲ. ನನ್ನ ಕೈಯಿಂದ ಶತ್ರುನಾಶವಾಗುವಂತೆ ಮಾಡು. ನಾನು ವಿಜಯಿಯಾಗಿ ರಾರಾಜಿಸುವಂತೆ ಮಾಡು. ಸಕಲ ವಿದ್ಯೆಗಳಿಗೆ ಅಭಿಮಾನಿಯಾಗಿ ಅಧಿಪತಿಯಾಗಿರುವಂತೆ ಮಾಡು' ಎಂದು ಭೀಮಸೇನ ಶ್ರೀವೇದವ್ಯಾಸರಲ್ಲಿ ಕೇಳಿಕೊಳ್ಳುತ್ತಾನೆ. ವಾಯುದೇವ ಸಕಲ ವಿದ್ಯೆಗಳಿಗೆ ಅಧಿಪತಿಯೆಂಬುದನ್ನು ಹರಿವಾಯುಸ್ತುತಿಯಲ್ಲಿ ಪಂಡಿತಾಚಾರ್ಯರು 'ಪೀಠೇ ರತ್ನೋಪಕಲ್ಪಿತೇ' ಎಂಬ ಶ್ಲೋಕದಲ್ಲಿ ಬಣ್ಣಿಸಿದ್ದಾರೆ.

ಅಹಮಸ್ಮಿ ಸಪತ್ನಹೇಂದ್ರ ಇವಾರಿಷ್ಟೋ ಅಕ್ಷತಃ।
ಅಧಃ ಸಪತ್ನಾ ಮೇ ಪದೋರಿಮೇ ಸರ್ವೇ ಅಭಿಷ್ಠಿತಾಃ ॥೨॥

ನಾನು ಯುದ್ಧದಲ್ಲಿ ಇಂದ್ರನಂತೆ ಮರಣರಹಿತನಾಗಿ ಗಾಯವೂ ಇಲ್ಲದವನಾಗಿದ್ದು ಶತ್ರುಗಳನ್ನು ನಾಶಪಡಿಸುತ್ತೇನೆ. ಈ ಎಲ್ಲ ಶತ್ರುಗಳೂ ನನ್ನ ಕಾಲುಗಳ ತುಳಿತಕ್ಕೆ ಸಿಲುಕಲಿ.

ಈ ಮಂತ್ರ ತನ್ನ ಮಹಿಮೆಯನ್ನೆ ವರ್ಣಿಸುತ್ತಿದೆ ಎಂದು ತೋರುವುದ ಕ್ಕಾಗಿ ಭೀಮ ಅದನ್ನು ಉಚ್ಚರಿಸುತ್ತ ದುರ್ಯೋಧನನ ತಲೆಯ ಮೇಲೆ ಎರಡೂ ಕಾಲುಗಳಿಂದ ಮತ್ತೆ ಮತ್ತೆ ತುಳಿದು ಕುಣಿದ. ಇದರಿಂದ ನಿರ್ಣಯ

ದಲ್ಲಿ 'ಕಾಲಿಂದ' ಎಂಬ ಏಕವಚನ ಜಾತ್ಯೇಕ ವಚನ ಎಂದಿಟ್ಟುಕೊಳ್ಳಬೇಕು.

ಅತ್ಕೈವ ವೋಽಪಿ ನಹ್ಯಾಮ್ಯುಭೇ ಆಕ್ಷ್ಣೀ ಇವ ಜ್ಯಯಾ।
ವಾಚಸ್ಪತೇ ನಿಷೇಧೇಮಾನ್ ಯಥಾ ಮದಧರಂ ವದಾನ್ ॥೩॥

ಒಂದೇ ಹೆದೆ ಬಿಲ್ಲಿನ ಎರಡು ತುದಿಗಳನ್ನು ಕಟ್ಟಿ ನಿಲ್ಲಿಸುವಂತೆ ನಾನೊಬ್ಬನೇ ನಿಮ್ಮ ಎರಡೂ ಸೈನ್ಯಗಳನ್ನು ನನ್ನ ಕಾಲುಗಳ ಕೆಳಗೇ ಭಯದಿಂದ ಈ ಕಡೆ ಆ ಕಡೆ ಮಿಸುಕಾಡದಂತೆ ನಿಲ್ಲಿಸುತ್ತೇನೆ. ಸಕಲ ವಿದ್ಯಾಧಿಪತಿಯಾದ ಶ್ರೀವೇದವ್ಯಾಸರೆ, ಇವರೆಲ್ಲರೂ ನನ್ನ ಕಾಲುಗಳ ಕೆಳಗೇ ನುಡಿಯುವಂತೆ ಮಾಡಿರಿ.

ಒಬ್ಬನೇ ವ್ಯಕ್ತಿ ಪರಸ್ಪರ ವಿರುದ್ಧವಾಗಿ ಹೋರಾಡುವ ಎರಡು ಸೈನ್ಯಗಳನ್ನೂ ಸ್ತಂಭಿತಗೊಳಿಸಿ ನಿಲ್ಲಿಸುವುದು ಸಾಧ್ಯವೆ? ಎಂದು ಆಕ್ಷೇಪಿಸಕೂಡದು. ಬಿಲ್ಲಿನ ಎರಡು ತುದಿಗಳು ಪರಸ್ಪರ ವಿರುದ್ಧವಾಗಿದ್ದರೂ ಒಂದೇ ಹೆದೆ ಅವೆರಡನ್ನೂ ಕಟ್ಟಿ ನಿಲ್ಲಿಸುವುದಿಲ್ಲವೆ? ಹಾಗೇ ನಿಮ್ಮ ಎರಡೂ ಸೈನ್ಯಗಳನ್ನು ನಾನೊಬ್ಬನೆ ಕಟ್ಟಿದಂತೆ ಭಯದಿಂದ ಸ್ತಂಭಿತವಾಗಿ ನಿಲ್ಲುವಂತೆ ಮಾಡುತ್ತೇನೆ ಎನ್ನುತ್ತಾನೆ ಭೀಮಸೇನ. ದುಃಶಾಸನನ ಎದೆ ಒಡೆದು ರಕ್ತಪಾನ ಮಾಡುವಾಗ ಪಾಂಡವರ ಕೌರವರ ಎರಡೂ ಸೇನೆಗಳನ್ನು ನೋಡುತ್ತ ತಾನು ಹೇಳಿದ ಮಾತನ್ನು ಈಗ ನೆನಪಿಸುತ್ತಿದ್ದಾನೆ. ಬಳಿಕ ವಿದ್ಯಾಧಿಪತಿ ಶ್ರೀವೇದವ್ಯಾಸರಲ್ಲಿ ಬೇಡುತ್ತಾನೆ, 'ನನ್ನ ಈ ಭೀಮರೂಪದಲ್ಲಾಗಲಿ ಮುಂದಿನ ಮಧ್ವರೂಪದಲ್ಲಾಗಲಿ ನನಗೆ ಸಮನಾಗಿ ಇದಿರಿಗೆ ನಿಂತು ವಾದಿಸುವವನು ಒಬ್ಬನೂ ಇಲ್ಲದಂತೆ, ನನ್ನ ಕಾಲಕೆಳಗೇ ನುಡಿವಂತೆ ಮಾಡಿರಿ' ಎಂದು.

ಅಭಿಭೂರಹಮಾಗಮಂ ವಿಶ್ವಕರ್ಮೀಣ ಧಾಮ್ನಾ।
ಆ ವಶ್ಚಿತ್ತಮಾ ವೋ ವ್ರತಮಾ ವೋಽಹಂ ಸಮಿತಿಂ ದದೇ ॥೪॥

ಸಕಲ ಪ್ರಪಂಚ ಸೃಷ್ಟಿಕರ್ತನೂ ಸರ್ವಧಾರಕನೂ ಆದ ನಾರಾಯಣನ ಆಜ್ಞೆಯಿಂದ ನಾನು ಸರ್ವವಿಜಯಿಯಾಗಿ ಈ ಲೋಕದಲ್ಲಿ ಅವತರಿಸಿದ್ದೇನೆ. ಅದರಿಂದ ನಾನು ನಿಮ್ಮೆಲ್ಲರ ಚಿತ್ತವನ್ನೂ ಪುಣ್ಯವನ್ನೂ ಜ್ಞಾನವನ್ನೂ ಅದರ ಫಲವಾದ ಸದ್ಗತಿಯನ್ನೂ ಸೆಳೆದು ನನ್ನ ವಶಕ್ಕೆ ತಂದುಕೊಂಡಿರುವೆನು.

ಈ ಮಂತ್ರ ಮಧ್ವಾವತಾರವನ್ನೂ ವರ್ಣಿಸುತ್ತದೆ. ಅದರಿಂದಲೆ ಪಂಡಿತಾಚಾರ್ಯರು 'ಆಜ್ಞಾಮನ್ಯೈರಧಾರ್ಯಾಂ' 'ಭೂಮಾವಾಗತ್ಯ ಭೂಮನ್' 'ದುರ್ಭಾಷ್ಯಂ ವ್ಯಸ್ಯ ದಸ್ಯೋಃ' ಎಂದು ಹರಿವಾಯುಸ್ತುತಿಯಲ್ಲಿ ಹೇಳಿದ್ದಾರೆ.

ಯೋಗಕ್ಷೇಮಂ ವ ಆದಾಯಾಹಂ ಭೂಯಾಸಮುತ್ತಮ

ಆ ವೋ ಮೂರ್ಧಾನಮಕ್ರಮೀಂ।
ಅಧಸ್ಪದಾನ್ಮ ಉದ್ವದತ ಮಂಡೂಕಾ ಇವೋದಕಾ-
ನ್ಮಂಡೂಕಾ ಉದಕಾದಿವ। ॥ ೫ ॥

ನಿಮ್ಮ ಪುಣ್ಯವನ್ನು ಅಪಹರಿಸಿ ನಾನು ಉತ್ತಮನೆನಿಸಿದ್ದೇನೆ. ನಿಮ್ಮೆಲ್ಲರ ತಲೆಗಳನ್ನು ಮೆಟ್ಟಿ ನಿಂತಿದ್ದೇನೆ. ನೀವೆಲ್ಲರೂ ನನ್ನ ಕಾಲ ಕೆಳಗೇ ಗಟ್ಟಿಯಾಗಿ ಕೂಗಾಡುತ್ತಿರಿ. ನೀರ ಕೆಳಗೆ ಕೆಸರಲ್ಲಿರುವ ಕಪ್ಪೆಗಳಂತೆ ಒದರುತ್ತಿರಿ, ಕಪ್ಪೆಗಳಂತೆ ಒದರುತ್ತಿರಿ.

ಕೌರವರ ಯೋಗಕ್ಷೇಮವನ್ನು ಅಂದರೆ ಅವರು ಕಾಮ್ಯಕರ್ಮದಿಂದ ಸಂಪಾದಿಸಿ ಉತ್ತಮ ಲೋಕಪ್ರಾಪ್ತಿಗಾಗಿ ಸುರಕ್ಷಿತವಾಗಿ ಇರಿಸಿಕೊಂಡಿದ್ದ ಪುಣ್ಯವನ್ನು ಅಪಹರಿಸಿ ಆ ಪುಣ್ಯದಿಂದಲೂ ತಾನು ಸಂಪಾದಿಸಿದ ಪುಣ್ಯದಿಂದಲೂ ಉತ್ತಮನೆನಿಸುತ್ತೇನೆ ಎನ್ನುತ್ತಾನೆ ಭೀಮ. ನಿಮ್ಮೆಲ್ಲರ ತಲೆಗಳನ್ನು ಮೆಟ್ಟಿ ನಿಂತಿದ್ದೇನೆ. ಈಗ ಭೀಮಾವತಾರದಲ್ಲಿ ಯುದ್ಧದಲ್ಲಿ ಮಾತ್ರವಲ್ಲದೆ ಮುಂದೆ ಮಧ್ವಾವತಾರದಲ್ಲಿ ವಾದದಲ್ಲಿಯೂ ನಿಮ್ಮ ತಲೆ ಮೆಟ್ಟಿ ನಿಲ್ಲುತ್ತೇನೆ. ನೀವು ನನ್ನ ಕಾಲುಗಳ ಕೆಳಗೇ ಗಟ್ಟಿಯಾಗಿ ಹಾಹಾಕಾರ ಮಾಡುತ್ತಿರಿ. ನೀರ ಕೆಳಗೆ ಕೆಸರಲ್ಲಿರುವ ಕಪ್ಪೆ ಗಟ್ಟಿಯಾಗಿ ವಟಗುಟ್ಟುವಂತೆ ಒದರುತ್ತಿರಿ ಎನ್ನುತ್ತಾನೆ. 'ಕಪ್ಪೆಗಳಂತೆ ಒದರುತ್ತಿರಿ, ಕಪ್ಪೆಗಳಂತೆ ಒದರುತ್ತಿರಿ' ಎಂದು ಎರಡು ಬಾರಿ ಹೇಳಿದುದು ಈ ಪರಾಭವ ಶತ್ರುಗಳಿಗೆ ಎಂದೂ ಅಪರಿಹಾರ್ಯ ಎಂದು ಸೂಚಿಸುವುದಕ್ಕಾಗಿ. ಪಂಡಿತಾಚಾರ್ಯರು ಇದನ್ನು 'ಆಕ್ರೋಶಂತೋ ನಿರಾಶಾಃ' ಎಂದು ಮುಂತಾಗಿ ಹರಿವಾಯುಸ್ತುತಿಯಲ್ಲಿ ವರ್ಣಿಸಿದ್ದಾರೆ.

ಹೀಗೆ ಸೂಕ್ತ ಹೇಳಿದ ವಿಷಯಕ್ಕೂ ಭೀಮನ ಚರಿತ್ರೆಗೂ ಸ್ವಲ್ಪವೂ ವೈಲಕ್ಷಣ್ಯವಿಲ್ಲದಿರುವುದರಿಂದ ಭೀಮನ ಕುರಿತೇ ಹೊರಟಿದೆ ಈ ಸೂಕ್ತ ಎನ್ನುವುದೇ ಸೂಕ್ತ.

ದುಃಶಾಸನನ ವಧೆ ಭೀಮ ಮಾಡಿದ ಸೋಮಯಾಗವೆಂದೂ ದುರ್ಯೋಧನ ವಧೆ ಪಶುಯಾಗವೆಂದೂ ಹಿಂದೆ ಹೇಳಿದೆ. ಗದಗು ಭಾರತದಲ್ಲಿ ದುರ್ಯೋಧನನ ವಧೆಯನ್ನು ಇಷ್ಟಿಯಾಗವೆಂದೂ ವರ್ಣಿಸಲಾಗಿದೆ. ಇಷ್ಟಿ-ಪಶು-ಸೋಮ ಮೂರೂ ಸೇರಬೇಕು. ಅದರಿಂದ ನಾರಣಪ್ಪನ ಈ ವರ್ಣನೆಯೂ ಸುಂದರವಾಗಿದೆ-

ಸೆರೆ ನರಂಗಳ ದರ್ಭೆ; ಮಿದುಳಿನ
ಚರು, ಕಪಾಲದ ಪಾತ್ರೆ, ಎಲುಬಿನ

ಬೆರಳ ಸಮಿಧೆ, ವಿಶಾಲ ದನುಮಜ್ಜಿಗಳ ಪೃಷದಾಜ್ಯ।
ಅರುಣ ಜಲದಾಜ್ಯಾಹುತಿ ವಿ
ಸ್ತರವ ವಿರಚಿಸಿ ನಿಗಮ ಮಂತ್ರೋ
ಚ್ಚರಣೆಯಲಿ ಪೂರ್ಣಾಹುತಿಗೆ ತನ್ನೊಡಲನೊಪ್ಪಿಸಿದ॥
(ಗದಾ ೯.೨೨)

ಋಷಭಂ ಮಾ ಸಮಾನಾನಾಮ್ ಇತಿ ಸೂಕ್ತಂ ದದರ್ಶ ಹ ।
ತೇಷಾಂ ಪುಣ್ಯಾನಿ ವಿದ್ಯಾಶ್ಚ ಸಮಾದಾಯೈವ ಸರ್ವಶಃ ।
ತಾಂಶ್ಚಕಾರ ತಮೋಗಂತ್ಲಾಂಸ್ತಸ್ಯ ಮೂರ್ಧ್ನಿ ಪದಾಽಽಕ್ರಮನ್ ॥೮೦॥

ಭೀಮಸೇನ ದುರ್ಯೋಧನನ ತಲೆಯನ್ನು ಮೆಟ್ಟುತ್ತ 'ಋಷಭಂ ಮಾ ಸಮಾನಾನಾಂ' ಎಂಬ ಸೂಕ್ತವನ್ನು ಕಂಡುಕೊಂಡ. ಕೌರವರ ಪುಣ್ಯಗಳನ್ನೂ ಜ್ಞಾನಗಳನ್ನೂ ಪೂರ್ತಿಯಾಗಿ ಕಸಿದು ಅವರನ್ನು ತಮೋಗಾಮಿಗಳನ್ನಾಗಿ ಮಾಡಿದ.

ಒಬ್ಬ ದುರ್ಯೋಧನನ ತಲೆಯನ್ನು ಮೆಟ್ಟಿದ್ದರಿಂದ ಅವನ ಎಲ್ಲ ತಮ್ಮಂದಿರ ತಲೆ ಮೆಟ್ಟಿದಂತಾಗಿ ಅವರೆಲ್ಲರ ಪುಣ್ಯಗಳನ್ನೂ ಜ್ಞಾನಗಳನ್ನೂ ಭೀಮ ಕಸಿದಂತಾಯಿತೆಂಬ ಅಭಿಪ್ರಾಯದಿಂದ 'ಕೌರವರೆಲ್ಲರ ಪುಣ್ಯಜ್ಞಾನಗಳನ್ನು' ಎಂದಿದೆ. ಇದು ಹಿಂದೆ ಹೇಳಿದ 'ಯೋಗಕ್ಷೇಮಂ ವ ಆದಾಯ' ಎಂಬ ವಚನದ ಅರ್ಥಾನುವಾದವಾಗಿದೆ.

'ಸುಹೃದಃ ಸಾಧುಕೃತ್ಯಾಂ ದ್ವಿಷಂತಃ ಪಾಪಕೃತ್ಯಾಂ' ಎಂಬ ಶ್ರುತಿಯಂತೆ ಸಜ್ಜನರ ಅಪ್ರಾರಬ್ಧ ಪುಣ್ಯಪಾಪಗಳೂ ದುರ್ಜನರ ಪಾಪ ಪುಣ್ಯಗಳೂ ಕ್ರಮವಾಗಿ ಮಿತ್ರಶತ್ರುಗಳಿಗೆ ಹೋಗುತ್ತವೆ. ಭೀಮ ಶತ್ರುವಾದ್ದರಿಂದ ಕೌರವರ ಪುಣ್ಯಗಳಿಗೆ ಭಾಗಿಯಾಗಿದ್ದಾನೆ. - ಪ್ರಮಾಣ ಸಂಗ್ರಹ

ಸ್ಮಾರಯಾಮಾಸ ಕರ್ಮಾಣಿ ಯಾನಿ ತಸ್ಯ ಕೃತಾನಿ ಚ ।
ಕೃಷ್ಣಬಂಧೇ ಕೃತೋ ಮಂತ್ರ ಇತಿ ಮೂರ್ಧ್ನಿ ಪದಾಽಹನತ್ ॥೮೧॥

ದುರ್ಯೋಧನ ಹಿಂದೆ ಏನೇನು ಮಾಡಿದ್ದನೋ ಆ ಎಲ್ಲ ಕರ್ಮಗಳನ್ನೂ ಅವನಿಗೆ ಭೀಮ ನೆನಪಿಸಿದ. ಕೃಷ್ಣನನ್ನು ಸೆರೆಹಿಡಿಯಲು ಈ ತಲೆಯಿಂದಲೆ ಮಂತ್ರಾಲೋಚನೆ ಮಾಡಿದಿ ಎಂದು ಇನ್ನೊಮ್ಮೆ ತಲೆಯನ್ನು ಕಾಲಿಂದ ತುಳಿದ.

ಭೀಮ ಅಧರ್ಮ ಮಾಡಲಿಲ್ಲ

ಪುನಃಪುನಶ್ಚ ತದ್ ವೀಕ್ಷ್ಯ ಚುಕ್ರೋಧ ಮುಸಲಾಯುಧಃ ।
ಚುಕ್ರೋಶ ನೈವ ಧರ್ಮೋಽಯಮಿತ್ಯಸಾವೂರ್ಧ್ವಬಾಹುಕಃ ॥೮೨॥
ಪುನಃ ಕ್ರೋಧಾಭಿತಾಮ್ರಾಕ್ಷ ಆದಾಯ ಮುಸಲಂ ಹಲಮ್ ।

ಅಭಿದುದ್ರಾವ ಭೀಮಂ ತಂ ನ ಚಚಾಲ ವೃಕೋದರಃ ॥ ೮೩ ॥

ಹೀಗೆ ಪುನಃ ಪುನಃ ಭೀಮ ತುಳಿದುದನ್ನು ಕಂಡು ಬಲರಾಮ ಕುಪಿತನಾದ. ಕೈಗಳನ್ನೆತ್ತಿ ಇದು ಧರ್ಮವಲ್ಲ ಎಂದು ಕೂಗಿದ. ಕೋಪದಿಂದ ಕಣ್ಣು ಕೆಂಪಗೆ ಮಾಡಿಕೊಂಡು ಒನಕೆ ನೇಗಿಲುಗಳನ್ನೆತ್ತಿ ಭೀಮನ ಬಳಿಗೆ ಧಾವಿಸಿದ. ಭೀಮ ವಿಚಲಿತನಾಗಲಿಲ್ಲ.

ಅಭಯೇ ಸಂಸ್ಥಿತೇ ಭೀಮೇ ರಾಮಂ ಜಗ್ರಾಹ ಕೇಶವಃ ।
ಆಹ ಧರ್ಮೇಣ ನಿಹತೋ ಭೀಮೇನಾಯಂ ಸುಯೋಧನಃ ॥ ೮೪ ॥

ಭೀಮ ನಿರ್ಭಯನಾಗಿ ನಿಂತಾಗ ಕೃಷ್ಣ ಬಲರಾಮನನ್ನು ಹಿಡಿದು ನಿಲ್ಲಿಸಿದ, ಮತ್ತು ಹೇಳಿದ, 'ಭೀಮ ಧರ್ಮದಿಂದಲೆ ದುರ್ಯೋಧನನನ್ನು ಹೊಡೆದಿದ್ದಾನೆ.

ನ ಮಂಡಲೇಽಭಿಸಾರೇ ವಾ ನಾಪಸಾರೇ ಚ ನಾಭಿತಃ ।
ಅಧೋ ಹನ್ಯಾದ್ ವಂಚಯಂತಮಧೋ ಹತ್ವಾ ನ ದುಷ್ಯತಿ ॥ ೮೫ ॥

'ಮಂಡಲಾಕಾರವಾಗಿ ಸಂಚರಿಸುವ ಸಮಯದಲ್ಲಿ ಎದುರಿಗೆ ಬರುವಾಗಲೂ ದೂರ ಸರಿವಾಗಲೂ ನಾಭಿಯಿಂದ ಕೆಳಗೆ ಹೊಡೆಯಬಾರದು. ಆದರೆ, ವಂಚನೆ ಮಾಡುವಾಗ ಕೆಳಗೆ ಹೊಡೆದರೆ ದೋಷವಿಲ್ಲ.

ಕೃತಾ ಪ್ರತಿಜ್ಞಾ ಚ ವೃಕೋದರೇಣ
ಭೇತ್ಸ್ಯೇ ತವೋರೂ ಇತಿ ಯುಕ್ತಿಪೂರ್ವಮ್ ।
ಸಂಶ್ರಾವಯಾನೇನ ತದೇಷ ಧರ್ಮತೋ
ಜಘಾನ ದುರ್ಯೋಧನಮಗ್ರ್ಯಕರ್ಮಾ ॥ ೮೬ ॥

'ಪರಸ್ತ್ರೀಗೆ ತೊಡೆ ತೋರಿದರೆ ಅದನ್ನು ಮುರಿಯಬೇಕು. ಅದರಿಂದ ನಾನು ನಿನ್ನ ತೊಡೆಯನ್ನು ಮುರಿಯುವೆನೆಂದು ಹಿಂದೆ ಭೀಮ ಯುಕ್ತಿಯುಕ್ತವಾಗಿಯೆ ಪ್ರತಿಜ್ಞೆ ಮಾಡಿದ್ದಾನೆ. ಈಗಲೂ ಅದನ್ನು ಹೇಳಿ ನಿನ್ನ ತೊಡೆ ಮುರಿವೆನೆಂದು ಪುನಃ ಪ್ರತಿಜ್ಞೆ ಮಾಡಿದ್ದಾನೆ. ಭೀಮ ನಿನ್ನ ತೊಡೆ ಮುರಿವನೆಂದು ಮೈತ್ರೇಯ ಶಾಪವೂ ಇದೆ. ಕಣ್ವಮುನಿಯ ಶಾಪವೂ ಇದೆ. ಅದರಿಂದ ಧರ್ಮದಿಂದಲೆ ಉತ್ತಮ ಕರ್ಮಶೀಲನಾದ ಭೀಮ ದುರ್ಯೋಧನನನ್ನು ಹೊಡೆದಿದಾನೆ.'

ವಾಸುದೇವವಚಃ ಶ್ರುತ್ವಾ ಧರ್ಮಚ್ಛಲಮಿತಿ ಬ್ರುವನ್ ।
ರೌಹಿಣೇಯೋ ಜಗಾಮಾಽಶು ಸ್ವಪುರೀಮೇವ ಸಾನುಗಃ ॥ ೮೭ ॥

ಕೃಷ್ಣನ ಈ ಮಾತನ್ನು ಕೇಳಿ ಇದು ಧರ್ಮದಲ್ಲಿ ವಂಚನೆ ಎನ್ನುತ್ತ ಬಲರಾಮ ಬೇಗನೆ ಪರಿವಾರದೊಂದಿಗೆ ತನ್ನ ಪಟ್ಟಣಕ್ಕೇ ತೆರಳಿದ.

ಪ್ರತಿಜ್ಞಾಪಾಲನೆಗಾಗಿಯಾದರೂ ಗದಾಯುದ್ಧದ ನಿಯಮವನ್ನು ಮೀರಬಾರದಿತ್ತು ಎನ್ನುತ್ತಾನೆ ಬಲರಾಮ. ಅಭಿಮನ್ಯುವನ್ನು ವಂಚನೆ

ಯಿಂದಲೆ ವಧಿಸಿದರು. ಹಿಂದೆಯೂ ಸದಾ ವಂಚನೆ ಮಾಡಿದರು ಕೌರವರು. ಅವರನ್ನು ಅಧರ್ಮದಿಂದ ಕೊಂದರೆ ಪಾಪವಿಲ್ಲ ಎಂದೂ ಶ್ರೀಕೃಷ್ಣ ಹೇಳಿದ. ಆದರೂ ಬಲರಾಮ ಈ ಗದಾಯುದ್ಧದಲ್ಲಿ ಭೀಮ ಅನ್ಯಾಯ ಮಾಡಿದನೆಂದು ಜನರು ಹೇಳಿಕೊಳ್ಳುತ್ತಾರೆ. ದುರ್ಯೋಧನನಿಗೆ ವೀರಸ್ವರ್ಗ ಲಭಿಸುತ್ತದೆ ಎಂದು ಹೇಳುತ್ತ ದ್ವಾರಕೆಗೆ ಹೊರಟುಹೋದ.

ತಸ್ಮಿನ್ ಗತೇ ವಾಸುದೇವಂ ಸಮಪೃಚ್ಛದ್ ಯುಧಿಷ್ಠಿರಃ ।
ಧರ್ಮೋಽಯಮಥವಾಽಧರ್ಮ ಇತಿ ತಂ ಪ್ರಾಹ ಕೇಶವಃ ॥೮೮॥

ಬಲರಾಮ ಹೋದ ಬಳಿಕ ಯುಧಿಷ್ಠಿರ ಶ್ರೀಕೃಷ್ಣನನ್ನು ಕೇಳಿದ, 'ಇದು ಧರ್ಮವೆ? ಅಥವಾ ಅಧರ್ಮವೆ? ಎಂದು. ಅವನಿಗೆ ಕೃಷ್ಣ ಬೋಧಿಸಿದ.

ನ ಸಾಕ್ಷಾದ್ ಧರ್ಮತೋ ವಧ್ಯಾ ಯೇ ತು ಪಾಪತಮಾ ನರಾಃ ।
ದೇವೈರ್ಹಿ ವಂಚಯಿತ್ವೈವ ಹತಾಃ ಪೂರ್ವಂ ಸುರಾರಯಃ ॥೮೯॥
ಅತೋಽಯಮಪ್ಯಧರ್ಮೇಣ ಹತೋ ನಾತ್ರಾಸ್ತಿ ದೂಷಣಮ್ ।
ಭೀಷ್ಮದ್ರೋಣೌ ಚ ಕರ್ಣಶ್ಚ ಯದ್ದೈವೋಪಧಿನಾ ಹತಾಃ ॥೯೦॥
ಕೋ ನು ದುರ್ಯೋಧನೇ ಪಾಪೇ ಹತೇ ದೋಷಃ ಕಥಂಚನ ।
ಪ್ರತಿಜ್ಞಾಪಾಲನಾಯಾಪಿ ಬಿಭೇದೋರೂ ವೃಕೋದರಃ ॥೯೧॥

ಮಹಾಪಾಪಿಗಳಾದ ಜನರನ್ನು ಶುದ್ಧ ಧರ್ಮದಿಂದ ಕೊಲ್ಲ ಕೂಡದು. ದೇವತೆಗಳೂ ಹಿಂದೆ ಅಸುರರನ್ನು ವಂಚಿಸಿಯೆ ಕೊಂದರು. ಅದರಿಂದ ಈ ದುರ್ಯೋಧನನೂ ಕೂಡ ಅಧರ್ಮದಿಂದ ಹತನಾಗಿದ್ದಾನೆ. ಅದರಲ್ಲಿ ದೋಷವಿಲ್ಲ. ಸಜ್ಜನರಾದ ಭೀಷ್ಮ ದ್ರೋಣರೂ ಕರ್ಣನೂ ವಂಚನೆಯಿಂದ ಹತರಾಗಿರುವಾಗ ಪಾಪಿ ದುರ್ಯೋಧನ ಯಾವ ರೀತಿಯಿಂದ ಹತನಾದರೆ ಏನು ದೋಷ? ಮತ್ತು ಪ್ರತಿಜ್ಞಾಪಾಲನೆಗಾಗಿಯೂ ಭೀಮ ತೊಡೆಗಳನ್ನು ಮುರಿದ.

ಧರ್ಮತಶ್ಚ ಪ್ರತಿಜ್ಞೇಯಂ ಕೃತಾ ತೇನಾನುರೂಪತಃ ।
ಲೋಕತೋಽಪಿ ನ ಧರ್ಮಸ್ಯ ಹಾನಿರತ್ರ ಕಥಂಚನ ॥೯೨॥

'ಪಾಪಿಗಳಿಗೆ ಅಧರ್ಮದಿಂದ ವಧೆ ಅನುರೂಪವಾಗಿರುವುದರಿಂದ ಭೀಮ ಮಾಡಿದ ಪ್ರತಿಜ್ಞೆಯೂ ಧರ್ಮದಿಂದಲೆ ಮಾಡಿದ್ದಾಗಿದೆ. ಅಜ್ಞಲೋಕದ ದೃಷ್ಟಿಯಿಂದಲೂ ಇಲ್ಲಿ ಧರ್ಮಕ್ಕೆ ಸರ್ವಥಾ ಚ್ಯುತಿ ಬಂದಿಲ್ಲ.

ಯೇ ಭೀಮಸ್ಯಾಪ್ರಭಾವಜ್ಞಾ ಆಪದ್ಧರ್ಮಂ ಚ ಮನ್ವತೇ ।
ಅವಧ್ಯತ್ವೇ ಶಿವವರಾದ್ ಗದಾಶಿಕ್ಷಾಬಲಾದಪಿ ।
ಜರಾಸಂಧೋಪಮೋ ಯಸ್ಮಾದ್ ಧಾರ್ತರಾಷ್ಟ್ರಃ ಸುವಿಶ್ರುತಃ ॥೯೩॥

'ಭೀಮನ ಬಲವನ್ನು ತಿಳಿಯದವರು ಭೀಮನ ಕೃತ್ಯವನ್ನು ಇಲ್ಲಿ ಆಪದ್ಧರ್ಮ ಎಂದೇ ತಿಳಿಯುತ್ತಾರೆ. ಏಕೆಂದರೆ ದುರ್ಯೋಧನನಿಗೆ ಅವಧ್ಯತ್ವ ವಿಷಯದಲ್ಲಿ ಶಿವನ ವರವಿರುವುದರಿಂದಲೂ ಬಲರಾಮನಿಂದ ಪಡೆದ ಯುದ್ಧ ಶಿಕ್ಷಣ ಬಲದಿಂದಲೂ ಅವನು ಜರಾಸಂಧನಿಗೆ ಸಮಾನ ಎಂದು ಬಹಳ ಪ್ರಸಿದ್ಧನೆ ಆಗಿದ್ದಾನೆ.

ಅಜ್ಞರ ದೃಷ್ಟಿಯಲ್ಲಿ ಪ್ರಾಣಾಪಾಯವೆ ಆಪತ್ತು. ಇಂಥ ಆಪತ್ತು ಬಂದಾಗ ಪ್ರಾಣರಕ್ಷಣೆಗಾಗಿ ಏನು ಮಾಡಿದರೂ ಧರ್ಮವೆ. ದುರ್ಯೋಧನ ಬಲದಲ್ಲಿ ಜರಾಸಂಧನಿಗೆ ಸಮಾನ. ಅವನೊಡನೆ ಹೋರಾಡುವಾಗ ಅಪಾಯ ಸಂಭಾವಿತ. ಆಗ ವಂಚನೆ ಧರ್ಮ ಎಂದು ಅಜ್ಞರೂ ತಿಳಿಯುತ್ತಾರೆ. ಇದರಿಂದ ಹಿಂದೆ 'ಉಪಾಯದಿಂದ ಭೀಮ ಕೊಲ್ಲುತ್ತಾನೆ' ಎಂದುದು ಅಜ್ಞರಿಗೆ ಇದು ಆಪದ್ಧರ್ಮವೆಂದು ತೋರುವುದಕ್ಕಾಗಿ ಎಂದು ಸೂಚಿಸಲು ಎಂದಂತಾಯಿತು. ವಸ್ತುತಃ ಸರ್ವಶಕ್ತನಾದ ಭೀಮ ಉಪಾಯವನ್ನು ಆಶ್ರಯಿಸಬೇಕಾಗಿಲ್ಲ.

'ಜರಾಸಂಧನಿಗೆ ಸಮಾನ' ಎಂಬ ಮಾತಿನಿಂದ 'ದುರ್ಯೋಧನ! ಹಿಂದೆ ಭೀಮ ಬ್ರಾಹ್ಮಣವೇಷದಿಂದ ಹೋಗಿ ಜರಾಸಂಧನನ್ನು ಕೊಂದಿದ್ದರೂ ಅಧರ್ಮವೆಂದು ನೀನು ಅದನ್ನು ಆಕ್ಷೇಪಿಸಲಿಲ್ಲ. ಈಗ ನಿನ್ನನ್ನು ಉಪಾಯದಿಂದ ಕೊಂದರೆ ಅಧರ್ಮ ಎಂದೇಕೆ ಆಕ್ಷೇಪಿಸುವಿ? ಎಂದು ಕೇಳುತ್ತಿದ್ದಾನೆ ಕೃಷ್ಣ.

'ಅವಧ್ಯನಾಗೆಂದು ಶಿವನ ವರವಿದ್ದಿತು' ಎಂಬ ಮಾತಿನಿಂದ ಜರಾಸಂಧನಂತೆ ದುರ್ಯೋಧನ ಭಸ್ಮ ತ್ರಿಪುಂಡ ಧಾರಣಾದಿಗಳನ್ನು ಮಾಡದಿದ್ದರೂ ಕಲಿರೂಪನಾದ್ದರಿಂದ ಶಿವಭಕ್ತನಾದ ಜರಾಸಂಧನಿಗಿಂತಲೂ ಸ್ವಾಭಾವಿಕವಾಗಿ ಅಧಮಾಧಮನಾಗಿದ್ದಾನೆ. ಅದರಿಂದಲೂ ಅವನನ್ನು ಉಪಾಯದಿಂದ ಕೊಂದುದು ಅಧರ್ಮವಾಗುವುದಿಲ್ಲ ಎಂದು ಸೂಚಿತವಾಯಿತು.[1]

ತಸ್ಮಾತ್ ಸಧರ್ಮ ಏವಾಯಂ ಭೀಮಚೀರ್ಣ ಇತಿ ಬ್ರುವನ್ ।

---

1. 'ಯೇ ಭೀಮಸ್ಯಾಪ್ರಭಾವಜ್ಞಾ' ಇತಿ ವದತಾ ಭಗವತಾ ಪ್ರಾಕ್ ಕಿಂಚಿದ್ ವ್ಯಾಜೇನ ಸಂಯುತ ಇತಿ ಸ್ವವಚನಂ ಲೋಕಾನಾಮಾಪದ್ಧರ್ಮಂ ದರ್ಶಯಿತುಮೇವೋಕ್ತಂ, ನತು ಭೀಮೇ ಕಿಂಚಿದ್ ವ್ಯಾಜಸದ್ಭಾವಾಭಿಪ್ರಾಯೇಣೇತಿ ಸ್ಪಷ್ಟೀಕೃತಂ। ಜರಾಸಂಧೋಪಮ ಇತಿ ವದತಾ ವಿಪ್ರಚ್ಛದ್ಮನಾ ಗತ್ವಾ ಜರಾಸಂಧೇ ಹತೇ ಸತಿ ಅಧರ್ಮಶಂಕಾಮಕುರ್ವನ್ ತ್ವಂ ಕುತ ಇದಾನೀಂ ಶಂಕಸ ಇತಿ ಸೂಚಿತಂ। ಭಸ್ಮನಾ ತ್ರಿಪುಂಡಧಾರಣಾದಿಕಮಕುರ್ವನ್ನಪ್ಯಯಂ ಕಲಿರೂಪತ್ವಾತ್ ಸ್ವಭಾವೇನ ಜರಾಸಂಧಾದಪ್ಯಧಮಾಧಮಃ। ಅತೋಽತ್ರಾಧರ್ಮ ಶಂಕಾ ನ ಕಾರ್ಯೇತಿ ಸೂಚನಾಯ ಚ ಶಿವವರಾದವಧ್ಯತ್ವಮಿತ್ಯಾದಿಕಮುಕ್ತಂ॥ -ವಾದಿರಾಜೀಯ

ಅಪಿ ಸಂಶಯಿನಂ ಚಕ್ರೇ ಧರ್ಮರಾಜಂ ಜಗತ್ಪತಿಃ ॥೯೪॥

'ಅದರಿಂದ ಭೀಮ ಮಾಡಿದ ಈ ದುರ್ಯೋಧನ ವಧೆ ಧರ್ಮವೆ.' ಹೀಗೆ ಜಗದೊಡೆಯ ಶ್ರೀಕೃಷ್ಣ ಧರ್ಮರಾಜನಿಗೆ ಸ್ಪಷ್ಟವಾಗಿ ಬೋಧಿಸುತ್ತಿದ್ದರೂ ಅವನನ್ನು ಇನ್ನೂ ಸಂಶಯದಲ್ಲಿಯೆ ಇರಿಸಿದ.

ಭೂಭಾರಕ್ಷತಿಜೋ ಧರ್ಮೋ ಮಚ್ಛುಶ್ರೂಷಾತ್ಮಕಶ್ಚ ಯಃ।
ಭೀಮಸ್ಯೈವ ಭವೇತ್ ಸಮ್ಯಗಿತಿ ಬುದ್ಧ್ಯಾ ಪರಃ ಪ್ರಭುಃ ॥೯೫॥

'ನನ್ನ ಸೇವಾ ರೂಪವಾದ ಈ ಭೂಭಾರಹರಣದಿಂದ ಉಂಟಾದ ಪುಣ್ಯ ಪೂರ್ತಿಯಾಗಿ ಭೀಮನಿಗೇ ಸಿಗಬೇಕೆ' ಂಬ ಅಭಿಪ್ರಾಯದಿಂದ ಆ ಮಹಾಪ್ರಭು ಹೀಗೆ ಮಾಡಿದ.

ಶಿಷ್ಯನಾದ ಭೀಮ ಮಾಡಿದ ದುರ್ಯೋಧನನ ವಧೆಯ ಪುಣ್ಯ ಗುರುವಾದ ಬಲರಾಮನಿಗೆ ಸಿಗಬಾರದೆಂದು ಅವನನ್ನೂ ವಿರೋಧಿಸಲು ಪ್ರೇರಿಸಿದನೆಂದಿಟ್ಟುಕೊಳ್ಳಬೇಕು.

ಸ್ವೇನೈವ ಬಲಭದ್ರಾಯ ಜನಾಯ ಚ ಪುನಃಪುನಃ।
ಶ್ರುತ್ವಾಽಪ್ಯುಕ್ತಂ ನ ತತ್ಯಾಜ ಸಂಶಯಂ ಧರ್ಮಜೋ ಯತಃ ॥೯೬॥

ತತೋಽಪ್ಯಸಂಶಯಂ ಕೃಷ್ಣೋ ನ ಚಕಾರ ಯುಧಿಷ್ಠಿರಮ್ ।
ಮುಖ್ಯಂ ಧರ್ಮಂ ಹಿ ಭಗವಾನ್ ಬಲಾಯಾಽಹ ಜನಾಯ ಚ ॥೯೭॥

ಶ್ರೀಕೃಷ್ಣ ಬಲರಾಮನಿಗೂ ಬೇರೆ ಜನರಿಗೂ ಪುನಃ ಪುನಃ ಹೇಳಿದ್ದನ್ನು ಧರ್ಮರಾಜ ಕೇಳಿಯೂ ಸಂಶಯವನ್ನು ಬಿಡಲೇ ಇಲ್ಲ. ಅದರಿಂದ ತಿಳಿಯುತ್ತದೆ- 'ಶ್ರೀಕೃಷ್ಣ ಅವನೊಳಗೆ ಕುಳಿತು ಅವನಿಗೆ ಸಂಶಯ ಪರಿಹಾರವಾಗಗೊಡಲಿಲ್ಲ' ಎಂದು. ಏಕೆಂದರೆ ಮುಖ್ಯ ಧರ್ಮವನ್ನೇ ಭಗವಾನ್ ಕೃಷ್ಣ ಬಲರಾಮನಿಗೂ ಬೇರೆ ಜನರಿಗೂ ಹೇಳಿದ್ದ.

ಧರ್ಮೇಣೈವ ಹತೋ ರಾಜಾ ಧಾರ್ತರಾಷ್ಟ್ರಃ ಸುಯೋಧನಃ।
ಇತಿ ಯದ್ ವಕ್ಷ್ಯತಿ ಪುನರ್ನಿಶ್ಚಯಾರ್ಥೇಽರ್ಜುನಾಯ ಚ ॥೯೮॥

ಮುಂದೆಯೂ ಅರ್ಜುನನಿಗೆ ಸಂಶಯ ಪರಿಹಾರವಾಗಲಿ, ನಿಶ್ಚಯವಾಗಲಿ ಎಂಬ ಉದ್ದೇಶದಿಂದ 'ಧೃತರಾಷ್ಟ್ರಪುತ್ರ ರಾಜಾ ದುರ್ಯೋಧನ ಧರ್ಮದಿಂದಲೇ ಹತನಾದನೆಂ' ದು ಶ್ರೀಕೃಷ್ಣ ಪುನಃ ಹೇಳುತ್ತಾನೆ.

ಧರ್ಮರಾಜನನ್ನು ಶ್ರೀಕೃಷ್ಣ ಆಕ್ಷೇಪಿಸುತ್ತಾನೆ. ಏಕೆ ಈ ದುರ್ಯೋಧನ ವಧೆಯನ್ನು ಅಧರ್ಮವೆನ್ನುತ್ತಿರುವೆ? ಎಂದು. ಆತ ಹೇಳುತ್ತಾನೆ, 'ನನಗೆ ಇದು ಇಷ್ಟವಾಗಿಲ್ಲ. ತಲೆಯನ್ನು ತುಳಿದುದೂ ಸರ್ವಥಾ ಇಷ್ಟವಾಗಲಿಲ್ಲ. ಹೇಗಾದರೂ ಅವನು ಮಾಡಿದ ಅನ್ಯಾಯಕ್ಕೆ ಭೀಮ ಪ್ರತೀಕಾರ ಮಾಡಿದ್ದಾನೆ. ಅವನ ದುಃಖ ಅಷ್ಟು ತೀವ್ರವಾಗಿತ್ತು. ಧರ್ಮದಿಂದಾಗಲಿ ಅಧರ್ಮದಿಂದಾ

ಗಲಿ ಪ್ರತೀಕಾರ ಮಾಡಿ ಅವನು ಇನ್ನು ನೆಮ್ಮದಿಯಿಂದಿರಲಿ ಎಂದು ನಾನು ಎಲ್ಲವನ್ನೂ ಉಪೇಕ್ಷೆ ಮಾಡುತ್ತಿದ್ದೇನೆ' ಶ್ರೀಕೃಷ್ಣ 'ಇವನಿಗೆ ಇನ್ನು ಹೇಳಿಫಲವಿಲ್ಲ' ಎಂದುಕೊಂಡು 'ಆಗಲಿ, ಹಾಗೇ ಮಾಡು' ಎಂದುಬಿಟ್ಟ. ಅದೇ ಸಮಯದಲ್ಲಿ ಅರ್ಜುನನಿಗೂ ಬೇಸರವೆ ಇದ್ದಿತು. ಅದರಿಂದ ಅವನಿಗೆ ಯಥಾರ್ಥ ಜ್ಞಾನ ಮೂಡಲಿ, ಸಂಶಯ ಪರಿಹಾರವಾಗಲಿ ಎಂಬ ಅಭಿಪ್ರಾಯದಿಂದ ಧೃಷ್ಟದ್ಯುಮ್ನ ಮುಂತಾದವರ ಮುಂದೆ ತಿರುಗಿ ಶ್ರೀಕೃಷ್ಣ 'ಈ ಪಾಪಿ ಹೇಗಾದರೂ ಹತನಾದನಲ್ಲ! ಅದೇ ಮಹಾ ಸಂತೋಷಕರ' ಎಂದು ಮುಂತಾಗಿ ಹೇಳುತ್ತಾನೆ. ಹೀಗೆ ಪುನಃ ಪುನಃ ದುರ್ಯೋಧನನನ್ನು 'ಪಾಪಿ' ಎನ್ನುತ್ತಿದ್ದುದು ಅರ್ಜುನನಿಗೆ ಜ್ಞಾನೋದಯವಾಗಲಿ, ಜೊತೆಗೆ ದುರ್ಯೋಧನನಿಗೆ ಅಸಹನೆ ಉಂಟಾಗಲಿ ಎಂಬ ಅಭಿಪ್ರಾಯದಿಂದ. ಬಳಿಕ ದುರ್ಯೋಧನನೊಡನೆ ವಾದ ಮಾಡಿ ಕೊನೆಗೆ ಶ್ರೀಕೃಷ್ಣ ಹೇಳುತ್ತಾನೆ. 'ದೇವತೆಗಳು ಅಸುರರನ್ನು ಕೊಂದ ಮಾರ್ಗ ಇದು- ಅನ್ಯಾಯದಿಂದ ಪಾಪಿಗಳನ್ನು ಕೊಲ್ಲುವುದು' ಎಂದು.

''ದೇವದತ್ತಂ ಪ್ರಹೃಷ್ಟಾತ್ಮಾ ಶಂಖಪ್ರವರಮರ್ಜುನಃ'

ಶ್ರೀಕೃಷ್ಣನ ಶಂಖನಾದವೂ, ಸಂತುಷ್ಟನಾದ ಅರ್ಜುನನ ದೇವದತ್ತ ಶಂಖನಾದವೂ ಕೇಳಿಬಂದಿತು.

ಪುನಃ ಪುನರ್ಧರ್ಮತ ಏವ ಭೀಮೋ
ಜಘಾನ ರಾಜಾನಮಿತಿ ಬ್ರುವಂತಮ್ ।
ಜಗಾದ ಕೃಷ್ಣಂ ಸ್ಫುರಿತಾಧರೋಷ್ಠಃ
ಕ್ರೋಧಾತ್ ಸುಪಾಪೋ ಧೃತರಾಷ್ಟ್ರಸೂನುಃ ॥೯೯॥

ಪುನಃ ಪುನಃ ಧರ್ಮದಿಂದಲೆ ಭೀಮ ದುರ್ಯೋಧನನನ್ನು ಹೊಡೆದನೆಂದು ಕೃಷ್ಣ ಹೇಳಿದಾಗ ಮಹಾಪಾಪಿ ದುರ್ಯೋಧನ ಕೋಪದಿಂದ ತುಟಿ ಅದುರಿಸುತ್ತ ಕೃಷ್ಣನಿಗೆ ಹೇಳಿದ.

ತ್ವಯ್ಯೇವ ಪಾಪೇ ನಿಹಿತಾ ಹಿ ಪಾರ್ಥಾಃ
ಪಾಪಾಧಿಕಸ್ತ್ವಂ ಹಿ ಸದೈಕ ಏವ ।
ಇತ್ಯೂಚಿವಾಂಸಂ ಪ್ರಜಗಾದ ಕೃಷ್ಣೋ
ನ ತ್ವತ್ಸಮಃ ಪಾಪತಮಃ ಕದಾಚಿತ್ ॥೧೦೦॥

'ನೀನೇ ಪಾಂಡವರನ್ನು ಪಾಪಮಾರ್ಗಕ್ಕೆ ಹಚ್ಚಿದವನು, ಮಹಾಪಾಪಿ ಸದಾ ನೀನೊಬ್ಬನೆ' ಹೀಗೆ ದುರ್ಯೋಧನ ಹೇಳಿದಾಗ, ಕೃಷ್ಣನೆಂದ, 'ನಿನ್ನಂಥ ಮಹಾಪಾಪಿ ಎಲ್ಲಿಯೂ ಎಂದೂ ಇಲ್ಲ'.

ಭೀಷ್ಮಾದಿಹತ್ಯಾಽಪಿ ತವೈವ ಪಾಪಂ
ಯದನ್ವಯುಸ್ತ್ವಾಮತಿ ಪಾಪನಿಶ್ಚಯಮ್ ।
ಪಾಪಂ ಚ ಪಾಪಾನುಗತಂ ಚ ಹತ್ವಾ
ಕಥಂಚನಾಪ್ಯಸ್ತಿ ನ ಚೈವ ಪಾಪಮ್ ॥೧೦೦॥

'ಭೀಷ್ಮಾದಿಗಳನ್ನು ಕೊಂದ ಪಾಪವೂ ನಿನ್ನನ್ನೇ ಸೇರುತ್ತದೆ. ಏಕೆಂದರೆ ಅತಿಪಾಪ ಬುದ್ಧಿಯ ನಿನ್ನನ್ನು ಅನುಸರಿಸಿ ಅವರು ಹತರಾದರು. ಪಾಪಿಯನ್ನೂ ಅವನ ಕಡೆಯವರನ್ನೂ ಕೊಂದರೆ ಅದರಿಂದ ಸರ್ವಥಾ ಪಾಪವಿಲ್ಲ.

ನ ಪಾಂಡವೇಷ್ವಸ್ತಿ ತತೋ ಹಿ ಕಿಂಚಿತ್
ಪಾಪಂ ಪ್ರಯತ್ನಾಚ್ಚ ನಿಸರ್ಗತೋಽಪಿ ।
ಗುಣಾಧಿಕಾಸ್ತೇ ಮದುಪಾಶ್ರಯಾಶ್ಚ
ಕೋ ನಾಮ ತೇಷ್ವಣ್ವಪಿ ಪಾಪಮಾಹ ॥೧೦೨॥

'ಅದರಿಂದ ಪಾಂಡವರಿಗೆ ಸ್ವಲ್ಪವೂ ಪಾಪವಿಲ್ಲ. ಪ್ರಯತ್ನದಿಂದಲೂ ಸ್ವಭಾವದಿಂದಲೂ ಅವರು ಅಧಿಕ ಗುಣವಂತರು. ನನ್ನನ್ನಾಶ್ರಯಿಸಿದವರು. ಯಾರು ತಾನೆ ಅವರಲ್ಲಿ ಸ್ವಲ್ಪವಾದರೂ ಪಾಪವಿದೆ ಎನ್ನುತ್ತಾನೆ?

ನಿಸರ್ಗತಃ ಪಾಪತಮಸ್ತ್ವಮನ್ಯಾನ್
ಧರ್ಮಸ್ಥಿತಾನ್ ಪಾಪಪಥೇ ನಿಧಾಯ ।
ಸ್ವಯಂ ಚ ಪಾಪೇ ನಿರತಃ ಸದೈವ ಪಾಪಾತ್
ಸುಪಾಪಾಂ ಗತಿಮೇವ ಯಾಸಿ ॥೧೦೩॥

'ಸ್ವಭಾವದಿಂದ ಮಹಾಪಾಪಿ ನೀನು. ಧರ್ಮದಲ್ಲಿರುವ ಅನ್ಯರನ್ನೂ ಪಾಪಮಾರ್ಗಕ್ಕೆ ಹಚ್ಚಿ, ತಾನೂ ಸದಾ ಪಾಪನಿರತನಾಗಿ, ಪಾಪಕ್ಕಿಂತ ಅತಿ ಪಾಪದ ಗತಿಯನ್ನು ಹೊಂದುವಿ.'

ಇತಿ ಬ್ರುವಂತಂ ಪುನರಾಹ ಕೃಷ್ಣಂ
ದುರ್ಯೋಧನಃ ಪಾಪಕೃತಾಂ ಪ್ರಧಾನಃ ।
ಸ್ವಂತೋತ್ತಮೋ ನಾಮ ಕ ಏವ ಮತ್ತಃ
ಕೋ ನಾಮ ದೋಷೋಽಸ್ತಿ ಮಯಾ ಕೃತೋಽತ್ರ ॥೧೦೪॥

ಕೃಷ್ಣ ಹೀಗೆ ಹೇಳಿದಾಗ ಪಾಪಕಾರಿಗಳಲ್ಲಿ ಮುಖ್ಯನಾದ ದುರ್ಯೋಧನ ಪುನಃ ನುಡಿದ 'ಒಳ್ಳೆಯ ಮನಸ್ಸುಳ್ಳವರಲ್ಲಿ ಮತ್ತು ಒಳ್ಳೆಯ ಮರಣ ಹೊಂದುವವರಲ್ಲಿ ಉತ್ತಮನೆಂದರೆ ನನಗಿಂತ ಬೇರೆ ಯಾರು ತಾನೆ ಇದ್ದಾನು? ಅದರಿಂದ ನಾನು ಈ ಜನ್ಮದಲ್ಲಿ ಮಾಡಿದ ಪಾಪ ಯಾವುದು?

ಕ್ಷತ್ರಿಯನಿಗೆ ರಣರಂಗದಲ್ಲಿ ಧರ್ಮದಿಂದ ಯುದ್ಧಮಾಡಿ ಶಸ್ತ್ರದಿಂದ

ಮರಣ ಹೊಂದುವುದೇ ಒಳ್ಳೆಯ ಮರಣ. ಅದರಿಂದ ವೀರಸ್ವರ್ಗ ಬರುತ್ತದೆ. ನಾನು ಪಾಪಿಯಾಗಿರುವುದಾದರೆ ವೀರಸ್ವರ್ಗವನ್ನು ನೀಡುವ ಇಂಥ ಒಳ್ಳೆಯ ಮರಣ ನನಗೆ ಹೇಗೆ ಬಂದಿತು? ಎನ್ನುವುದು ದುರ್ಯೋಧನನ ದುರ್ಭಾವ.[1]

ಇಷ್ಟಂ ಚ ಯಜ್ಞೈಶ್ವರಿತಂ ಚ ಪೂರ್ತೈಃ
ಪದಂ ರಿಪೂಣಾಂ ನಿಹಿತಂ ಚ ಮೂರ್ಧ್ನಿ ।
ಮೃತ್ಯುಶ್ಚ ಸಂಗ್ರಾಮಶಿರಸ್ಯವಾಪ್ತೋ
ರಣೋನ್ಮುಖೇನೈವ ಮಯಾ ಕಿಮನ್ಯತ್ ॥೧೦೫॥

'ನಾನು ಯಜ್ಞಗಳನ್ನು ಮಾಡಿದೆ, ಕೆರೆ ಬಾವಿಗಳನ್ನು ಕಟ್ಟಿಸಿದೆ. ಯುದ್ಧದಲ್ಲಿ ಶತ್ರುಗಳ ತಲೆ ಮೇಲೆ ತುಳಿದೆ. ಯುದ್ಧೋನ್ಮುಖನಾಗಿದ್ದೇ ಕೊನೆಯಲ್ಲಿ ಮರಣ ಹೊಂದುತ್ತಿದ್ದೇನೆ. ನನಗಿನ್ನೇನು ಬೇಕು?

ಇಷ್ಟಾ ಭೋಗಾ ಮಯಾ ಭುಕ್ತಾಃ ಪ್ರಾಪ್ತಾ ಚ ಪರಮಾ ಗತಿಃ ।
ದುಃಖಿನೋ ದುಃಖಿಮಾಪ್ಸ್ಯಂತಿ ಪಾರ್ಥಾಸ್ತೇ ಕೂಟಯೋಧಿನಃ ॥೧೦೬॥

'ಇಷ್ಟವಾದ ಭೋಗಗಳನ್ನು ಇಂದಿನವರೆಗೆ ಅನುಭವಿಸಿದ್ದೇನೆ. ಮುಂದೆ ಉತ್ತಮವಾದ ವೀರಸ್ವರ್ಗವನ್ನು ಹೊಂದುತ್ತಿದ್ದೇನೆ. ಇಂದಿನವರೆಗೆ ದುಃಖಿಗಳಾದ ಪಾಂಡವರು ಕಪಟ ಯುದ್ಧಮಾಡಿ ಮುಂದೆಯೂ ದುಃಖವನ್ನೇ ಹೊಂದುತ್ತಾರೆ.

ರಣರಂಗದಲ್ಲಿ ಕಾದಿ ಮಡಿದವರಿಗೆ ಕೆಲಕಾಲದ ಸುಖಭೋಗಕ್ಕಾಗಿ ಸ್ವರ್ಗಕ್ಕಿಂತ ಕೆಳಗೆ ಅಂತರಿಕ್ಷಕ್ಕಿಂತ ಮೇಲೆ ದೇವೇಂದ್ರ ನಿರ್ಮಿಸಿರುವ ಲೋಕ ವೀರಸ್ವರ್ಗ ಎನ್ನುತ್ತದೆ ಲಕ್ಷಾಲಂಕಾರ.

ಚಂದ್ರಸೂರ್ಯನಿಭೈಃ ಶೂರೈರ್ಧಾರ್ಮಿಕೈಃ ಸದ್ಭಿರುಜ್ಝಿತಾ ।
ಕೇವಲಾ ರತ್ನಹೀನೇಯಂ ಪಾಂಡವೈರ್ಭುಜ್ಯತಾಂ ಮಹೀ ॥೧೦೭॥

ಚಂದ್ರ ಸೂರ್ಯರಂತಿದ್ದ ಶೂರಧಾರ್ಮಿಕ ಸಜ್ಜನರಿಂದ ರಹಿತವಾದ ರತ್ನಹೀನವಾದ ಕೇವಲ ಮಣ್ಣಾಗಿ ಉಳಿದ ಈ ಭೂಮಿಯನ್ನು ಪಾಂಡವರು ಅನುಭವಿಸಲಿ.

ಇತ್ಯುಕ್ತವತ್ಯೇವ ನೃಪೇ ಸುರೇಶೈಃ
ಪ್ರಸೂನವೃಷ್ಟಿರ್ವಿಹಿತಾ ಪಪಾತ ।
ತಾಮೇವ ಬುದ್ಧಿಂ ಧೃತರಾಷ್ಟ್ರಸೂನೋಃ
ಕೃತ್ವಾ ದೃಢಾಂ ಪಾತಯಿತುಂ ತಮೋಽಂಧೇ ॥೧೦೮॥

ದುರ್ಯೋಧನ ಹೀಗೆ ಹೇಳಿದೊಡನೆ ದೇವೋತ್ತಮರು ಮಾಡಿದ ಹೂಮಳೆ ಬಿದ್ದಿತು.

---

1. ಧರ್ಮೇಣ ಯುದ್ಧೇ ಮೃತತ್ವಾತ್ ಶೋಭನಮರಣವತಾಂ ಪುಂಸಾಂ ಅಹಮೇವೋತ್ತಮಃ। ಮಯಿ ಚೇತ್ ಪಾಪಮಸ್ತಿ ತರ್ಹಿ ವೀರ ಸ್ವರ್ಗೋಚಿತಂ ಮರಣಂ ಕಥಂ ಸ್ಯಾದಿತಿ ದುರ್ಭಾವಃ।
–ವಾದಿರಾಜೀಯ

ಇದು ದುರ್ಯೋಧನನಿಗೆ ಅದೇ ಪಾಪ ಬುದ್ಧಿಯನ್ನು ಇನ್ನೂ ದೃಢವಾಗಿಸಿ ಅಂಧಂತಮಸ್ಸಿನಲ್ಲಿ ಬೀಳಿಸುವ ಉದ್ದೇಶದಿಂದ ಕೂಡಿತ್ತು.

ದುರ್ಯೋಧನನ ಮೇಲೆ ಪ್ರೀತಿಯಿಂದ ದೇವತೆಗಳು ಪುಷ್ಪವೃಷ್ಟಿ ಮಾಡಿಲ್ಲ. ಅವನು ಕೃಷ್ಣನನ್ನು ಪಾಪಿ ಎಂದು ನಿಂದಿಸಿದಾಗ ಅವನಿಗೆ ಇದೇ ಬುದ್ಧಿ ಸದಾ ಇರಲಿ ಎಂಬ ಉದ್ದೇಶವಿದ್ದಿತು. ಹೀಗೆ ಹೇಳದಿದ್ದರೆ ದುರ್ಯೋಧನ ತೊಡೆಮುರಿದು ಬಿದ್ದು ವೀರಸ್ವರ್ಗ ಭಾಗಿಯಾಗುವ ಸಮಯದಲ್ಲಿ ಪುಷ್ಪವೃಷ್ಟಿ ಮಾಡದೆ ರಕ್ತದ ಮಳೆ ಧೂಳಿನ ಸುರಿಮಳೆ ಉಲ್ಕಾಪಾತಗಳನ್ನು ಏಕೆ ಮಾಡಿದರು? ಭೂ ಭಾರಭೂತನಾದ ದುರ್ಯೋಧನನ ನಾಶಕ್ಕಾಗಿ ದೇವತೆಗಳು ಶ್ವೇತದ್ವೀಪಕ್ಕೆ ಹೋಗಿ ಕೃಷ್ಣಾವತಾರಕ್ಕಾಗಿ ಪ್ರಾರ್ಥಿಸಿದರು. ಅಂದರೆ ಅವರಿಗೆ ದುರ್ಯೋಧನನಲ್ಲಿ ಮಹಾದ್ವೇಷವಿರುವುದು ಸ್ಪಷ್ಟ, ಪುನಃ ಅವನಲ್ಲಿಯೆ ಪುಷ್ಪವೃಷ್ಟಿಯಿಂದ ಪ್ರೀತಿಯನ್ನು ತೋರುವುದು ಅಸಂಭಾವಿತವೆಂದು ಲಕ್ಷಾಲಂಕಾರ ಹೇಳಿದೆ.[1]

[2]'ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ' 'ನಿಂದಾಂ ಭಗವತಃ ಶೃಣ್ವನ್ ಯಾತ್ಯಧಃಸುಕೃತಾಚ್ಚ್ಯುತಃ' ಇತ್ಯಾದಿ ಭಾಗವತವಚನಗಳಿರುವಾಗ ಅದಕ್ಕೆ ವಿರುದ್ಧವಾಗಿ ಭೂಭಾರಭೂತನಾದ ಸಕಲ ದೇವತೆಗಳಿಗೆ ಆದಿಶತ್ರುವಾದ ದುರ್ಯೋಧನ ಸಾಕ್ಷಾತ್ ಶ್ರೀಹರಿಯನ್ನೇ ಬಹಳ ನಿಂದಿಸಿದಾಗ ಅವನ ಮೇಲೆ ದೇವತೆಗಳು ಪುಷ್ಪವೃಷ್ಟಿ ಕರೆವರೆ? ಮತ್ತು ಈ ದೇವತೆಗಳು ದುರ್ಯೋಧನ ಮುಂತಾದ ದುರ್ಜನರ ನಾಶಕ್ಕಾಗಿ ಅವತರಿಸಿ

---

1. ದುರ್ಯೋಧನೇ ಕೃಷ್ಣಂ ನಿಂದತಿ ಸತಿ ದೇವೈಃ ಕೃತಂ ಪುಷ್ಪವರ್ಷಾದಿಕಂ ಪುನರಪಿ ತಸ್ಯ ಕೃಷ್ಣ ದ್ವೇಷಾತಿಶಯಂ ದೃಢೀಕರ್ತುಮೇವ। ನ ತು ದುರ್ಯೋಧನೇ ಪ್ರೀತ್ಯಾ। ತಥಾ ಸತೀಂದ್ರಕೃತ ಶೋಣಿತ ಪಾಂಸು ವರ್ಷಾದೇರ್ವಿರೋಧಾತ್। ಭೂಭಾರಭೂತ ದುರ್ಯೋಧನ ಹರಣಾಯ ಶ್ವೇತದ್ವೀಪಂ ಗತ್ವಾ ಕೃಷ್ಣಾವತಾರಾಯ ಕೃತ ಪ್ರಯತ್ನಾನಾಂ ದುರ್ಯೋಧನೇ ಮಹಾದ್ವೇಷವತಾಂ ದೇವಾನಾಂ ಪುನಸ್ತಸ್ಮಿನ್ನೇವ ಪ್ರೀತೇರಸಂಭಾವಿತತ್ವಾಚ್ಚ। -ಲಕ್ಷಾಲಂಕಾರ

2. ಕಥಮನ್ಯಥಾ 'ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ' 'ನಿಂದಾಂ ಭಗವತಃ ಶೃಣ್ವನ್ ಯಾತ್ಯಧಃ ಸುಕೃತಾತ್ ಚ್ಯುತಃ' ಇತ್ಯಾದಿ ಸ್ಮೃತಿ ವಿರುದ್ಧಂ ಭೂಭಾರ ಭೂತಸ್ಯ ಸಕಲ ಸುರಾಣಾಮಾದಿವೈರಿಣಃ ಸಾಕ್ಷಾದ್ ಭಗವಂತಂ ಬಹುಧಾ ನಿಂದತೋ ದುರ್ಯೋಧನಸ್ಯ ಶಿರಸಿ ದುರ್ಯೋಧನಾದಿ ದುರ್ಜನ ಹನನಾಯೈವ ಕೃತಾವತಾರಾ, ಅದ್ಯಾಪಿ ದುರ್ಯೋಧನ ಪರಾಭವಮರ್ಥಯಮಾನಾಃ ಪಾಂಡವ ಪಕ್ಷಪಾತೇನ ದುರ್ಯೋಧನ ಪಕ್ಷಪಾತಿನೋ ದೈತ್ಯಾನ್ ಪ್ರತಿ ಕಲಹಂ ಕುರ್ವಾಣಾಃ ಪರಮವೈಷ್ಣವಾ ದೇವಾಃ ಸ್ಮೃತಿಯುಕ್ತಿವಿರುದ್ಧಾಂ ಪುಷ್ಪವೃಷ್ಟಿಂ ಚ ಕುರ್ಯುಃ। ಕಥಂಚ ಶೈವಮತ ಪ್ರವರ್ತಕೇಷು ವಿಷ್ಣು ವೈಷ್ಣವ ದ್ವೇಷಿಣಾಂ ಅಗ್ರೇಸರೇಷು ಶಿಶುಪಾಲ ಜರಾಸಂಧ ಕಂಸ ದುಃಶಾಸನಾದಿಷು ಮ್ರಿಯಮಾಣೇಷು ಸತ್ಸು ಕದಾಚಿತ್ ಕ್ವಚಿದಪ್ಯಕೃತಾಂ ಪುಷ್ಪವೃಷ್ಟಿಂ ತತ್ಸಮಾನ ಯೋಗಕ್ಷೇಮೇ ದುರ್ಯೋಧನೇ ಚ ಕುರ್ಯುಃ? ತಸ್ಮಾತ್ ಸರ್ವಜ್ಞ ಶಿಖಾಮಣಿನಾ ಯೌಕ್ತಿಕಾಗ್ರೇಸರೇಣ ತಾತ್ಪರ್ಯಕಾರೇಣೋಕ್ತಮೇವ ತಾತ್ಪರ್ಯಂ ಯುಕ್ತಮಿತ್ಯರ್ಥಃ। -ವಾದಿರಾಜೀಯ

ದವರು. ದುರ್ಯೋಧನನಿಗೆ ಪರಾಜಯವಾಗಲೆಂದು ಪ್ರಾರ್ಥಿಸುತ್ತ ಪಾಂಡವಪಕ್ಷ ಹಿಡಿದು ದುರ್ಯೋಧನ ಪಕ್ಷದ ದೈತ್ಯರೊಡನೆ ಜಗಳಕ್ಕೆ ನಿಂತವರು. ಪರಮ ವೈಷ್ಣವರು. ಅವರು ದುರ್ಯೋಧನನ ಮೇಲೆ ಪ್ರೀತಿಯಿಂದ ಪುಷ್ಪವೃಷ್ಟಿ ಮಾಡಿದರೆಂದರೆ ಅದು ಯುಕ್ತಿ ಯುಕ್ತವಾಗುವುದಿಲ್ಲ. ಶೈವಮತ ಪ್ರವರ್ತಕರಾದ ವಿಷ್ಣು ವೈಷ್ಣವ ದ್ವೇಷಿಗಳಲ್ಲಿ ಅಗ್ರೇಸರರಾದ ಶಿಶುಪಾಲ ಜರಾಸಂಧ ಕಂಸ ನರಕಾಸುರ ದುಃಶಾಸನ ಮೊದಲಾದವರು ಸಾಯುತ್ತಿದ್ದಾಗ ಎಂದೂ ಮಾಡದಿರುವ ಪುಷ್ಪವೃಷ್ಟಿಯನ್ನು ಈ ದುರ್ಜನರ ಸಾಲಿಗೇ ಸೇರುವ ದುರ್ಯೋಧನನ ಮೇಲೆ ಸುರಿಸುವರೆ? ಅದರಿಂದ ನಿರ್ಣಯಕಾರರು ಕೊಟ್ಟ ನಿರ್ಣಯವೆ ಯುಕ್ತ. -ವಾದಿರಾಜೀಯ

ಸಂಭಾವಯತ ಆತ್ಮಾನಂ ವಾಸುದೇವಂ ವಿನಿಂದತಃ ।
ತತ್ಪರಾಂಶ್ಚ ಕಥಂ ನ ಸ್ಯಾತ್ ತಮೋಽಂತೇ ಚ ವಿಶೇಷತಃ ॥೧೦೯॥

ದುರ್ಯೋಧನ ವಿಶೇಷವಾಗಿ ಮರಣಕಾಲದಲ್ಲಿ ತನ್ನನ್ನೇ ಹೊಗಳಿಕೊಳ್ಳುತ್ತಿದ್ದಾನೆ. ಕೃಷ್ಣನನ್ನೂ ಕೃಷ್ಣಭಕ್ತರನ್ನೂ ಚೆನ್ನಾಗಿ ನಿಂದಿಸುತ್ತಿದ್ದಾನೆ. ಅಂಥವನಿಗೆ ತಮಸ್ಸು ಹೇಗೆ ಆಗದಿದ್ದೀತು?

ಕೈಗಳಿಂದ ನೆಲವನ್ನು ಆಧರಿಸಿ ಪೃಷ್ಠ ಊರಿ ಅರ್ಧ ಎತ್ತಿದ ಶರೀರ ಹುಬ್ಬುಗಂಟಿಕ್ಕಿ ಕ್ರೂರದೃಷ್ಟಿಯಿಂದ ಕೃಷ್ಣನನ್ನು ದುರ್ಯೋಧನ ನೋಡುತ್ತಿದ್ದಾನೆ. ಬಾಲಕಡಿದ ಕ್ರುದ್ಧವಾದ ಹಾವಿನಂತೆ ಕಾಣುತ್ತಿದ್ದಾನೆ. ಪ್ರಾಣಾಂತಕಾರಿಯಾದ ಘೋರವೇದನೆಯನ್ನೂ ಸಹಿಸಿಕೊಂಡು ಕೃಷ್ಣನನ್ನು ಪಾಪಿ, ಪಾಪಕ್ಕೆ ಹೇಸದವ ಲಜ್ಜೆಗೆಟ್ಟವ ಸ್ವಧರ್ಮನಿಷ್ಠರಾದ ನಮ್ಮನ್ನೂ ಬೇರೆ ರಾಜರನ್ನೂ ಮೋಸದಿಂದ ಕೊಲ್ಲಿಸಿದವನೆಂದು ನಿಂದಿಸುತ್ತಿದ್ದಾನೆ. ಮರಣಕಾಲದಲ್ಲಿ ತಾನು ಧಾರ್ಮಿಕನೆಂದು ಆತ್ಮಪ್ರಶಂಸೆ ಮಾಡುತ್ತಾನೆ, ವಿಷ್ಣುವೈಷ್ಣವ ನಿಂದೆ ಮಾಡುತ್ತಿದ್ದಾನೆ. ಅದಕ್ಕೆ ಕೃಷ್ಣ 'ನೀನು ಎಲ್ಲ ಅಕಾರ್ಯಗಳನ್ನೂ ಮಾಡಿದವ. ಅವುಗಳ ಫಲವನ್ನು ಉಣ್ಣುವೆ' (ಶಲ್ಯ ೬೨.೫೮) ಎನ್ನುತ್ತಾನೆ.

ಯದೈಕೈಕಮಲಂ ತತ್ರ ದುಃಖಾಧಿಕ್ಯಂ ಸಮುಚ್ಚಯಾತ್ ।
ಇತಿ ತತ್ ಕಾರಯಿತ್ವೇಶ ಆಹ ಮೋಘಂ ತವಾಖಿಲಮ್ ॥೧೧೦॥

ಆತ್ಮಪ್ರಶಂಸೆ, ಕೃಷ್ಣನಿಂದೆ, ಕೃಷ್ಣಭಕ್ತರ ನಿಂದೆಗಳಲ್ಲಿ ಒಂದೊಂದೂ ತಮಃ ಪ್ರಾಪ್ತಿಗೆ ಸಾಕಾಗಿರುವಾಗ ಮೂರೂ ಸೇರಿದರೆ ಏನು ಹೇಳಬೇಕು? ತಮಸ್ಸಿನಲ್ಲಿ ದುಃಖ ಹೆಚ್ಚುವುದು ಎಂಬ ಅಭಿಪ್ರಾಯದಿಂದ ಕೃಷ್ಣ ದುರ್ಯೋಧನನಿಂದ ಮೂರನ್ನೂ ಮಾಡಿಸಿ ಹೇಳುತ್ತಾನೆ- ನೀನು ಮಾಡಿದ ಯಜ್ಞಾದಿಗಳೆಲ್ಲವೂ ವ್ಯರ್ಥ.

ನೃಶಂಸಸ್ಯ ಕೃತಘ್ನಸ್ಯ ಗುಣವದ್‌ದ್ವೇಷಿಣಃ ಸದಾ ।
ಯದಿ ಧರ್ಮಫಲಂ ಧ್ವಾಂತಂ ಸೂರ್ಯವತ್ ಸ್ಯಾತ್ ಪ್ರಕಾಶಕಮ್ ೧೧೧ ।

ಹಿಂಸಕನೂ ಕೃತಘ್ನನೂ ಗುಣವಂತರನ್ನು ದ್ವೇಷಿಸುವವನೂ ಆದ ನಿನಗೆ ಪುಣ್ಯಫಲ ದೊರಕುವುದಾದರೆ ಕತ್ತಲು ಸೂರ್ಯನಂತೆ ಪ್ರಕಾಶಕವಾಗಬೇಕಾದೀತು.

ವಿಷಭಕ್ಷ್ಯ, ಲಾಕ್ಷಾಗೃಹಗಳಿಂದ ಹಿಂಸೆ ಮಾಡಿದ್ದಾನೆ. ಕಲಿಂಗ ಚಿತ್ರಸೇನರ ಬಂಧನದಿಂದ ವಿಮೋಚನ ಮಾಡಿದ ಭೀಮಾರ್ಜುನರ ಉಪಕಾರ ಮರೆತ ಕೃತಘ್ನ. ಗುಣವಂತರಾದ ಪಾಂಡವರನ್ನೂ ವಿದುರನನ್ನೂ ದ್ವೇಷಿಸಿದವ.

ವದನ್ ಪುನಃಪುನರಿದಂ ಧರ್ಮತೋ ಹತ ಇತ್ಯಪಿ ।
ಖ್ಯಾಪಯಾಮಾಸ ಭಗವಾನ್ ಜನೇ ನಿಜಜನೇಷ್ಟದಃ ॥೧೧೨॥

ಭಕ್ತಜನರಿಗೆ ಇಷ್ಟವನ್ನು ನೀಡುವ ಭಗವಾನ್ ಶ್ರೀಕೃಷ್ಣ ಹಿಂದೆ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತ ದುರ್ಯೋಧನ ಧರ್ಮದಿಂದಲೆ ಹತನಾಗಿದ್ದಾನೆ ಎನ್ನುವುದನ್ನು ಲೋಕದಲ್ಲಿ ಎಲ್ಲರಿಗೂ ತಿಳಿಸಿದ.

ಪ್ರಖ್ಯಾಪಿತೇ ವಾಸುದೇವೇನ ಧರ್ಮೇ
ಸತಾಂ ಸರ್ವೇಷಾಂ ಹೃದ್ಯಮಾಸೀತ್ ಸಮಸ್ತಮ್ ।
ಹತಂ ಚ ಧರ್ಮೇಣ ನೃಪಂ ವ್ಯಜಾನನ್
ಪಾಪೋಽಯಮಿತ್ಯೇವ ಚ ನಿಶ್ಚಿತಾರ್ಥಾಃ ॥೧೧೩॥

ಶ್ರೀಕೃಷ್ಣ ಧರ್ಮವನ್ನು ತಿಳಿಸಿದಾಗ ಸಜ್ಜನರಿಗೆ ಎಲ್ಲರಿಗೂ ಎಲ್ಲವೂ ಹೃದ್ಯವಾಯಿತು. ದುರ್ಯೋಧನ ಪಾಪಿ ಎಂದು ವಿಶೇಷವಾಗಿ ನಿಶ್ಚಯವಾಗಿ ತಿಳಿದಿದ್ದ ಸಜ್ಜನರು ಅವನು ಧರ್ಮದಿಂದಲೆ ಹತನಾದನೆಂದು ತಿಳಿದರು.

ಯುಧಿಷ್ಠಿರೋಽಪಾಪದರ್ಶೀ ಸದೈವ
ಸಸಂಶಯೋಽಭೂತ್ ಸುಮನೋಽಭಿವೃಷ್ಟ್ಯಾ ।
ಸ್ನೇಹಾದ್ ದ್ರೌಣಿಃ ಸಂಜಯೋ ರೌಹಿಣೇಯೋ
ದೌರ್ಯೋಧನಾತ್ ಪಾಪಮಿತ್ಯೇವ ಚೋಚುಃ ॥೧೧೪॥

ಯುಧಿಷ್ಠಿರ ದುರ್ಯೋಧನನಲ್ಲಿ ಪಾಪವನ್ನು ಕಾಣದವನು. ಅದರಿಂದ, ಪುಷ್ಪವೃಷ್ಟಿಯೂ ಆದ ಪ್ರಯುಕ್ತ ಸದಾ ಸಂಶಯ ಯುಕ್ತನೇ ಆದ. ದುರ್ಯೋಧನನ ಮೇಲಿನ ಪ್ರೀತಿಯಿಂದ ಅಶ್ವತ್ಥಾಮನೂ ಸಂಜಯನೂ ಬಲರಾಮನೂ ದುರ್ಯೋಧನ ವಧೆಯನ್ನು ಅಧರ್ಮವೆಂದೇ ಹೇಳಿದರು.

ತತಃ ಕೃಷ್ಣಃ ಪಾಂಡುಪಾಂಚಾಲಕೈಸ್ತೈ-
ರ್ಭೃಶಂ ನದದ್ಭಿರ್ಹರ್ಷಿತೈಃ ಸಮೇತಃ ।

ಯಯೌ ವಿರಿಂಚೇಶಸುರೇಂದ್ರಮುಖ್ಯೈಃ
ಸಂಪೂಜಿತಸ್ತ್ವಶ್ವರಣಾಂಗಣಾತ್ ಸ್ಮಯನ್ ॥೧೧೫॥

ಬಳಿಕ ಶ್ರೀಕೃಷ್ಣ ಬಹಳ ಆನಂದಿತರಾಗಿ ಗರ್ಜನ ಮಾಡುತ್ತಿದ್ದ ಪಾಂಡವ ಪಾಂಚಾಲ ಸೈನಿಕರೊಡಗೂಡಿ ಬ್ರಹ್ಮರುದ್ರ ಇಂದ್ರಾದಿಗಳಿಂದ ಹೊಗಳಿಸಿಕೊಳ್ಳುತ್ತ ನಸುನಗುತ್ತ ರಣಾಂಗಣದಿಂದ ಹೊರಟ.

ಕೌರವರ ಶಿಬಿರವನ್ನು ಶ್ರೀಕೃಷ್ಣ ಪಾಂಡವರು ಹೊಕ್ಕರು. ಅಲ್ಲಿ ಇದ್ದ ಎಲ್ಲ ಧನಸಂಪತ್ತನ್ನೂ ವಶಪಡಿಸಿಕೊಂಡು ಆ ರಾತ್ರಿಯನ್ನು ಅಲ್ಲಿಯೆ ಹೊರಗೆ ನದೀತೀರದಲ್ಲಿ ಕಳಿದರು. ಧೃಷ್ಟದ್ಯುಮ್ನ ಮುಂತಾದ ಸೈನಿಕರು ತಮ್ಮ ಶಿಬಿರಗಳಲ್ಲಿ ವಾಸಮಾಡಿದರು.

ತತಃ ಶ್ರುತ್ವಾ ಸಂಜಯಾದ್ ದುಃಖಿತಪ್ತಂ
ಸಂಬೋಧಯಿಷ್ಯನ್ ಪಿತರಂ ಯುಯುತ್ಸುಃ।
ಕೃಷ್ಣಸ್ಯ ರಾಜ್ಞಶ್ಚ ಮತೇನ ಯಾತೋ
ಜಗಾಮ ಚಾನ್ವೇವ ಜನಾರ್ದನಶ್ಚ ॥೧೧೬॥

ಬಳಿಕ ಸಂಜಯನಿಂದ ಎಲ್ಲ ವೃತ್ತಾಂತವನ್ನೂ ಕೇಳಿ ದುಃಖಿತಪ್ತನಾದ ತಂದೆ ಧೃತರಾಷ್ಟ್ರನನ್ನು ಸಂತೈಸಲು ಕೃಷ್ಣ ಮತ್ತು ಧರ್ಮರಾಜನ ಅನುಮತಿಯಿಂದ ಯುಯುತ್ಸು ಹಸ್ತಿನಾವತಿಗೆ ನಡೆದ. ಅವನನ್ನು ಹಿಂಬಾಲಿಸಿ ಶ್ರೀಕೃಷ್ಣನೂ ನಡೆದ.

ಧರ್ಮರಾಜನಿಗೆ ಧೃತರಾಷ್ಟ್ರ ಕುಪಿತನಾಗುವನೆಂದು ಭಯ. ಗಾಂಧಾರಿ ಮಹಾಪತಿವ್ರತೆ. ತನ್ನ ತಪೋಬಲದಿಂದ ಜಗತ್ತನ್ನೇ ಸುಡಬಲ್ಲಳು. ಅದರಿಂದ ಇಬ್ಬರನ್ನೂ ತಾನೇ ಮೊದಲಿಗೆ ಕಾಣಲು ಹೋದರೆ ಶಾಪ ಕೊಡುವುದು ನಿಶ್ಚಯ. ಅದರಿಂದ ಯುಯುತ್ಸುವೂ ಶ್ರೀಕೃಷ್ಣನೂ ಮೊದಲಿಗೆ ಹೋಗಿ ಸಮಾಧಾನಪಡಿಸಲಿ ಎಂದು ಬಯಸಿದ. ಇದು ಗದಾಪರ್ವದಲ್ಲಿ ಸ್ಪಷ್ಟ.

-ಪ್ರಮಾಣ ಸಂಗ್ರಹ

ಧರ್ಮಯುಕ್ತೈಶ್ಚ ತತ್ತ್ವಾರ್ಥೈರ್ಲೋಕವೃತ್ತಾನುದರ್ಶಕೈಃ।
ವಾಕ್ಯೈ ರಾಜಾನಮಾಶ್ವಾಸ್ಯ ಪ್ರಾಯಾತ್ ಪಾರ್ಥಾನ್ ಪುನರ್ಹರಿಃ ॥೧೧೭॥

ಶ್ರೀಕೃಷ್ಣ ಧರ್ಮಶಾಸ್ತ್ರಾನುಸಾರಿಯಾದ, ತತ್ತ್ವಾರ್ಥಗರ್ಭಿತವಾದ, ಲೋಕದಲ್ಲಿ ಕೆಲವೊಮ್ಮೆ ತಂದೆತಾಯಿಗಳಿಗಿಂತ ಮೊದಲು ಮಕ್ಕಳು ಸಾಯುವುದುಂಟು ಎಂದು ಮುಂತಾಗಿ ಲೋಕರೀತಿಯ ಉದಾಹರಣೆಗಳನ್ನು ತೋರುವ ಮಾತುಗಳಿಂದ ಧೃತರಾಷ್ಟ್ರನನ್ನು ಸಮಾಧಾನಪಡಿಸಿ ಪುನಃ ಪಾಂಡವರ ಬಳಿಗೆ ನಡೆದ.

'ಸಂಧಿ ಮಾಡದೆ ಇದ್ದುದು ನಿಮ್ಮದೇ ತಪ್ಪು. ಪಾಂಡವರಲ್ಲಿ ಯಾವ ತಪ್ಪೂ ಇಲ್ಲ. ಅವರನ್ನು ನೀವು ಶಪಿಸಬೇಡಿ, ಅವರಿಂದಲೆ ನಿಮಗೆ ಮುಂದೆ ಶ್ರಾದ್ಧಾದಿಕರ್ಮಗಳು ನಡೆಯಬೇಕು' ಎಂದು ಮುಂತಾಗಿ ಸಮಾಧಾನ ಮಾಡಿ 'ಅಶ್ವತ್ಥಾಮ ಪಾಂಡವರನ್ನು ಕೊಲ್ಲಲು ಉದ್ಯುಕ್ತನಾಗಿದ್ದಾನೆ. ಅವರ ರಕ್ಷಣೆಗೆ ಈಗ ನಾನು ಹೋಗುತ್ತಿದ್ದೇನೆ' ಎನ್ನುತ್ತ ಹೊರಟ ಶ್ರೀಕೃಷ್ಣ.

ಕಾಲಾನುಸಾರತೋ ದೈವಾಂಶೋತ್ಪಸಂಹರ್ತುಮಚ್ಯುತಃ ।
ಯಯೌ ಸಪಾರ್ಥಶೈನೇಯಃ ಕುರೂಣಾಂ ಶಿಬಿರಂ ನಿಶಿ ॥೧೧೮॥

ಕಾಲಾನುಸಾರವಾಗಿ ದೇವಾಂಶಸಂಭೂತರನ್ನೂ ಸಂಹರಿಸುವುದಕ್ಕಾಗಿ ಶ್ರೀಕೃಷ್ಣ ಅರ್ಜುನ ಸಾತ್ಯಕಿಗಳಿಂದೊಡಗೂಡಿ ರಾತ್ರಿಯಲ್ಲಿ ಕೌರವರ ಶಿಬಿರಕ್ಕೆ ನಡೆದ.

ಕಲಿಕಾಲಾನುಸಾರವಾಗಿ ಭೂಮಿಯಲ್ಲಿ ಧೃಷ್ಟದ್ಯುಮ್ನ ಮುಂತಾದ ದೇವಾಂಶ ಸಂಭೂತರು ಇರಕೂಡದು. ಕೌರವರ ವಧಕಾರ್ಯ ಮುಗಿದಿರುವುದರಿಂದ ಅವರು ಇನ್ನು ಸಾಯಬೇಕು. ಅಶ್ವತ್ಥಾಮನಿಂದ ಅವರನ್ನು ಕೊಲ್ಲಿಸಬೇಕು. ಆದರೆ ಪಾಂಡವರನ್ನು ಉಳಿಸಬೇಕು. ಅದಕ್ಕೆ ಶ್ರೀಕೃಷ್ಣ ಪಾಂಡವರೊಂದಿಗೆ ಕೌರವರ ಶಿಬಿರದಲ್ಲಿ ರಾತ್ರಿಯನ್ನು ಕಳೆದ. ಇತ್ತ ಪಾಂಡವರ ಶಿಬಿರವನ್ನು ಅಶ್ವತ್ಥಾಮನ ಖಡ್ಗಕ್ಕೆ ಬಲಿಯಿತ್ತ. ಅವನೂ ಪಾಂಡವರ ಶಿಬಿರದಲ್ಲಿರುತ್ತಿದ್ದರೆ ಅಶ್ವತ್ಥಾಮನಿಗೆ ಈ ಹತ್ಯಾಕಾಂಡ ಮಾಡಲು ಶಕ್ಯವಾಗುತ್ತಿರಲಿಲ್ಲ.

ಅಶ್ವತ್ಥಾಮನಿಗೆ ಸೇನಾಧಿಪತ್ಯ

ತದೈವ ಹಾರ್ದಿಕ್ಯಕೃಪಾನ್ವಿತೋಽಯಾತ್
ಸುಯೋಧನಂ ದ್ರೌಣಿರಮುಂ ಶಯಾನಮ್ ।
ಪ್ರಭಗ್ನಸಕ್ಥಂ ಚ ಸೃಗಾಲಭೂತೈಃ
ಸಂಭಕ್ಷ್ಯಮಾಣಂ ದದೃಶೇ ಶ್ವಸಂತಮ್ ॥೧೧೯॥

ಆಗಲೆ ಕೃತವರ್ಮ ಕೃಪರಿಂದೊಡಗೂಡಿದ ಅಶ್ವತ್ಥಾಮ ದುರ್ಯೋಧನನ ಬಳಿಗೆ ಹೋದ. ಆಗ ದುರ್ಯೋಧನ ತೊಡೆ ಮುರಿದುಕೊಂಡು ನಾಯಿನರಿ ಮುಂತಾದ ಪ್ರಾಣಿಗಳಿಂದ ಕಚ್ಚಿಸಿಕೊಳ್ಳುತ್ತ ಉಸಿರಾಡುತ್ತ ನೆಲದಲ್ಲಿ ಬಿದ್ದಿದ್ದುದನ್ನು ಕಂಡ.

ಸ ದುಃಖಶೋಕಾಭಿಹತೋ ವಿನಿಂದ್ಯ
ಪಾರ್ಥಾನ್ ಮಯಾ ಭೂಪ ಕಿಮತ್ರ ಕಾರ್ಯಮ್ ।
ಇತ್ಯಾಹ ನಿಷ್ಪಾಂಡವತಾಂ ಕುರುಷ್ವೇ-
ತ್ಯಮುಂ ವ್ಯಧಾತ್ ಪಾಂಸ್ವಭಿಷೇಕಿಣಂ ನೃಪಃ ॥೧೨೦॥

ದುಃಖಶೋಕಗಳಿಂದ ಸಂತಪ್ತನಾದ ಅಶ್ವತ್ಥಾಮ ಪಾಂಡವರನ್ನು ಚೆನ್ನಾಗಿ ನಿಂದಿಸಿ 'ರಾಜನೆ, ನಾನೀಗ ಏನು ಮಾಡಲಿ?' ಎಂದ. 'ಪಾಂಡವರು ಭೂಮಿಯ ಮೇಲೆ ಇಲ್ಲದಂತೆ ಮಾಡೆಂ' ದು ಹೇಳಿ ದುರ್ಯೋಧನ ಅವನ ಮೇಲೆ ದೂಳಿನ ಅಭಿಷೇಕಗೈದ.

ಉಚ್ಛಿದ್ಯ ಸಂತತಿಂ ಪಾಂಡೋಃ ಕೃತ್ವಾ ಸ್ವಕ್ಷೇತ್ರಸಂತತಿಮ್ ।
ತಯಾ ಭೂರಕ್ಷಣಹೃದಾ ಸೋಽಭಿಷಿಕ್ತಸ್ತಥೇತ್ಯಗಾತ್ ॥೧೨೧॥

ಪಾಂಡುವಿನ ಸಂತತಿಯನ್ನು ಅಳಿಸಿ ತನ್ನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಿ ಆ ಸಂತತಿಯಿಂದ ರಾಜ್ಯಭಾರ ಮಾಡಿಸಬೇಕೆನ್ನುವ ಅಭಿಪ್ರಾಯದಿಂದ ದುರ್ಯೋಧನ ಅಶ್ವತ್ಥಾಮನಿಗೆ ದೂಳಿನಿಂದ ಅಭಿಷೇಕ ಮಾಡಿದ. ಅಶ್ವತ್ಥಾಮ 'ಹಾಗೇ ಆಗಲಿ' ಎಂದು ಹೇಳಿಹೊರಟು ಹೋದ.

ಇಲ್ಲಿಗೆ ಶಲ್ಯಪರ್ವ ಮತ್ತು ಅದರೊಳಗಿನ ಗದಾಪರ್ವ ಗಳು ಮುಗಿದವು. ಮುಂದೆ ಸೌಪ್ತಿಕಪರ್ವ ಪ್ರಾರಂಭ. ಗೀತಾವಿವೃತ್ತಿಯಲ್ಲಿ ಸ್ತ್ರೀಪರ್ವ ಆಶ್ರಮವಾಸಿಕ ಪರ್ವಗಳನ್ನು ಬಿಟ್ಟು ಗದಾಪರ್ವ ಭವಿಷ್ಯತ್ಪರ್ವಗಳನ್ನು ಸೇರಿಸಿ ಹದಿನೆಂಟುಪರ್ವಗಳೆಂದಿದೆ.

ಸೌಪ್ತಿಕ ಪರ್ವ

ಸ ಕೃಷ್ಣಭೀಮಪಾರ್ಥಾನಾಂ ಭಯಾದೇವ ಪುನರ್ವನಮ್ ।
ಕೃಪಸಾತ್ವತಸಂಯುಕ್ತೋ ವಿವೇಶ ಗಹನಂ ರಥೀ ॥೧೨೨॥

ಅಶ್ವತ್ಥಾಮ ಶ್ರೀಕೃಷ್ಣಭೀಮಾರ್ಜುನರ ಭಯದಿಂದಲೆ ಕೃಪ ಕೃತವರ್ಮರೊಡಗೂಡಿ ರಥವೇರಿ ಪುನಃ ದಟ್ಟವಾದ ಅರಣ್ಯವನ್ನು ಪ್ರವೇಶಿಸಿದ.

ತಸ್ಯ ಚಿಂತಯತೋ ದ್ರೋಣವಧಂ ದುರ್ಯೋಧನಸ್ಯ ಚ ।
ನಾಽಗಾನ್ನಿದ್ರಾ ನಿಶೀಥೇ ಚ ಧ್ವಾಂಕ್ಷಾನ್ ನ್ಯಗ್ರೋಧವಾಸಿನಃ ॥೧೨೩॥

ಹತಾನ್ ಸುಬಹುಸಾಹಸ್ರಾನೇಕೇನಾತಿಬಲೇನ ತು ।
ಕೌಶಿಕೇನ ನಿರೀಕ್ಷ್ಯೈವ ಪ್ರಾಹ ತೌ ಕೃಪಸಾತ್ವತೌ ॥೧೨೪॥

ನಿದರ್ಶನೇನ ಹ್ಯೇನೇನ ಪ್ರೇರಿತಃ ಪರಮಾತ್ಮನಾ ।
ಯಾಮಿ ಪಾಂಡುಸುತಾನ್ ಹಂತುಮಿತ್ಯುಕ್ತ್ವೋತ್ಥಾಯ ರುರುಹೇ ರಥಮ್ ।
ನಿವಾರಿತೋಽಪಿ ತಾಭ್ಯಾಂ ಸ ಪ್ರಾದ್ರವಚ್ಛಿಬಿರಂ ಪ್ರತಿ ॥೧೨೫॥

ಅಶ್ವತ್ಥಾಮ ದ್ರೋಣವಧವನ್ನೂ ದುರ್ಯೋಧನ ವಧವನ್ನೂ ಆಲೋಚಿಸುತ್ತಿದ್ದು ದರಿಂದ ರಾತ್ರಿ ನಿದ್ದೆ ಬರಲಿಲ್ಲ. ಅತಿ ಬಲಿಷ್ಠವಾದ ಒಂದು ಗೂಗೆ ಅರ್ಧರಾತ್ರಿಯಲ್ಲಿ ಆಲದಮರದ ಮೇಲೆ ವಾಸಮಾಡುತ್ತಿದ್ದ ಅನೇಕ ಸಾವಿರ ಕಾಗೆಗಳನ್ನು ಕೊಂದುದನ್ನು ಕಂಡು

ಅಶ್ವತ್ಥಾಮ ಕೃಪ ಕೃತವರ್ಮರಿಗೆ ಹೇಳಿದ, 'ಈ ನಿದರ್ಶನದ ಮೂಲಕ ಪರಮಾತ್ಮನಿಂದ ಪ್ರೇರಿತನಾದ ನಾನು ಪಾಂಡವರನ್ನು ಕೊಲ್ಲಲು ಹೋಗುತ್ತೇನೆ' ಹೀಗೆ ಹೇಳಿ ಅಶ್ವತ್ಥಾಮ ರಥವನ್ನೇರಿದ. ಅವರು ತಡೆದರೂ ನಿಲ್ಲದೆ ಪಾಂಡವರ ಶಿಬಿರದ ಕಡೆಗೆ ತೆರಳಿದ.

ಶಿಬಿರದ್ವಾರದಲ್ಲಿ ಭೂತ

ಅನುಜಗ್ಮತುಸ್ತಾವಪಿ ತಂ ಶಿಬಿರದ್ವಾರಿ ಚೈಕ್ಷತ ।
ಉಗ್ರರೂಪಧರಂ ರುದ್ರಂ ಸ್ವಕೀಯಾಂ ತನುಮೇವ ಸಃ ॥೧೨೬॥
ಪರೀತಂ ವಾಸುದೇವೇನ ಬಹುಕೋಟಿಸ್ವರೂಪಿಣಾ ।
ದೃಷ್ಟ್ವೈವ ವಾಸುದೇವಂ ತಮತ್ರಸದ್ ಗೌತಮೀಸುತಃ ॥೧೨೭॥

ಕೃಪ ಕೃತವರ್ಮರೂ ಅಶ್ವತ್ಥಾಮನನ್ನು ಹಿಂಬಾಲಿಸಿದರು. ಅಶ್ವತ್ಥಾಮ ಶಿಬಿರದ ದ್ವಾರದಲ್ಲಿ ತನ್ನ ಸ್ವರೂಪನೇ ಆದ ರುದ್ರನನ್ನು ಕಂಡ. ರುದ್ರ ಆಗ ಉಗ್ರರೂಪ ಧರಿಸಿದ್ದ. ಬಹುಕೋಟಿ ರೂಪನಾದ ಕೃಷ್ಣನಿಂದ ಸುತ್ತುವರಿಯಲ್ಪಟ್ಟಿದ್ದ. ಅಶ್ವತ್ಥಾಮ ಕೃಷ್ಣನನ್ನು ಕಂಡೇ ಭಯಗ್ರಸ್ತನಾದ.

ವಾಸುದೇವಾಜ್ಞಯೈವಾತ್ರ ಸ್ವಾತ್ಮನಾಽಪಿ ಸದಾಶಿವಃ ।
ಅಯುದ್ಧ್ಯದಗ್ರಸಚ್ಚಾಽಶು ದ್ರೌಣೇಃ ಸರ್ವಾಯುಧಾನ್ಯಪಿ ॥೧೨೮॥
ಅಚಿಂತ್ಯಾ ಹರಿಶಕ್ತಿರ್ಯದ್ ದೃಶ್ಯಂತೇ ತ್ಮಹನೋಽಪಿ ಹಿ ।
ಅತಸ್ತಯಾ ಪ್ರೇರಿತೇನ ಸ್ವಾತ್ಮನೈವಾಖಿಲೇಷ್ವಪಿ ॥೧೨೯॥
ಆಯುಧೇಷು ನಿಗೀರ್ಣೇಷು ದ್ರೌಣಿರ್ಯಜ್ಞಂ ತು ಮಾನಸಮ್ ।
ಚಕ್ರೇತ್ಮಾನಂ ಪಶುಂ ಕೃತ್ವಾ ಸ್ವಾತ್ಮಸ್ಥಾಯೈವ ವಿಷ್ಣವೇ ॥೧೩೦॥

ಶ್ರೀಕೃಷ್ಣನ ಸಂಕಲ್ಪದಿಂದಲೆ ಸದಾಶಿವ ತನ್ನ ಸ್ವರೂಪನೆ ಆದ ಅಶ್ವತ್ಥಾಮನ್ನೊಡನೆ ಕಾದಿದ. ಅಶ್ವತ್ಥಾಮನ ಎಲ್ಲ ಆಯುಧಗಳನ್ನೂ ಬೇಗನೆ ನುಂಗಿದ. ಹರಿಯ ಶಕ್ತಿ ಅಚಿಂತ್ಯ. ಏಕೆಂದರೆ ಅದರಿಂದ ಪ್ರೇರಿತರಾಗಿ ಆತ್ಮಹತ್ಯೆಯನ್ನೂ ಮಾಡಿಕೊಳ್ಳುವವರು ಕಂಡುಬರುತ್ತಾರೆ. ಅದರಿಂದ ಹರಿಶಕ್ತಿಯಿಂದ ಪ್ರೇರಿತನಾದ, ತನ್ನ ಸ್ವರೂಪನೆ ಆದ ರುದ್ರ ತನ್ನೆಲ್ಲ ಆಯುಧಗಳನ್ನೂ ನುಂಗಿದಾಗ ಅಶ್ವತ್ಥಾಮ ತನ್ನೊಳಗಿರುವ ವಿಷ್ಣುವಿಗೆ ತನ್ನನ್ನು ಪಶುವೆಂದು ಚಿಂತಿಸಿ ಮಾನಸಯಜ್ಞ ನಡೆಸಿದ.

'ಭಗವದ್ಗೀತೆಯಲ್ಲಿ ಹೇಳಿದ ಕ್ಷಮೆಶಾಂತಿ ಮೊದಲಾದ ಬ್ರಾಹ್ಮಣರಲ್ಲಿಯ ಯಾವ ಲಕ್ಷಣವೂ ದ್ರೋಣನಲ್ಲಿರಲಿಲ್ಲ. ಆತನ ಮಗ ಬ್ರಾಹ್ಮಣತ್ವದ ಎಲ್ಲ ನಿಯಮಗಳನ್ನೂ ಬಿಸುಟುಹಾಕಿದ್ದ. ಈ ಹೀನ ಕೆಲಸವನ್ನು ಮಾಡಬೇಡವೆಂದು ಕೃಪನು ಪರಿಪರಿಯಾಗಿ ಹೇಳಿದನು. ಅಶ್ವತ್ಥಾಮನು ಹೇಳುತ್ತಾನೆ, 'ನನಗೆ ನೀವು ಬ್ರಾಹ್ಮಣನಂತೆ ವರ್ತಿಸಲು ಹೇಳುತ್ತಿದ್ದರೂ

ನಾನು ಅದನ್ನು ಅರಿತುಕೊಂಡೇ ಇಲ್ಲ. ಬಾಲ್ಯದಿಂದ ಅಸ್ತ್ರವಿದ್ಯೆಯಲ್ಲಿಯೆ ನನ್ನ ಇಡೀ ಜನ್ಮವು ಕಳೆಯಿತು. ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಮಂದ ಭಾಗ್ಯನಾದ ನಾನು ಕ್ಷಾತ್ರಧರ್ಮದಲ್ಲಿ ಬೆಳೆದೆ. ಈಗ ನಾನು ಅದನ್ನೆ ಆಚರಿಸುವೆನು' ಎಂದು (ಯುಗಾಂತ) ಹೀಗೆ ಮೇಲುನೋಟಕ್ಕೆ ಕಾಣಬಹುದು. ಆದರೆ ಹೀಗೆ ಅಶ್ವತ್ಥಾಮನ ವ್ಯಕ್ತಿತ್ವದ ಬಗ್ಗೆ ತಪ್ಪು ತಿಳಿಯಬಾರದು. ಅವನ ತಂದೆ ದ್ರೋಣ ಮಹಾಭಾರತ ಹೇಳುವಂತೆ,

ಬ್ರಾಹ್ಮಣಾನಾಂ ಪ್ರತಿಷ್ಠಾಕಸೀತ್ ಸ್ರೋತಸಾಮಿವ ಸಾಗರಃ
(ದ್ರೋಣ ೯.೩೦)

'ನದಿಗಳಿಗೆ ಸಮುದ್ರದಂತೆ ದ್ರೋಣ ಬ್ರಾಹ್ಮಣ ಜಾತಿಗೇ ನೇತಾರನಾಗಿದ್ದ, ಆಶ್ರಯನಾಗಿದ್ದ.'

ಬ್ರಾಹ್ಮೇ ದೈವೇ ತಥೇಷ್ವಸ್ತ್ರೇ ಯಮುಪಾಸನ್ ಗುಣಾರ್ಥಿನಃ।
ಬ್ರಾಹ್ಮಣಾ ರಾಜಪುತ್ರಾಶ್ಚ..॥(ದ್ರೋಣ ೯.೧೧) (ವಿರಾಟ ೫೧.೯)

'ಬ್ರಹ್ಮವಿದ್ಯೆ, ದೈವೀಮೀಮಾಂಸೆ, ಬಾಣ ಅಸ್ತ್ರಗಳ ವಿದ್ಯೆಗಳಲ್ಲಿ ಬ್ರಾಹ್ಮಣರೂ ರಾಜಕುಮಾರರೂ ವಿಶೇಷ ಅಧ್ಯಯನಗಳಿಗಾಗಿ ದ್ರೋಣರ ಬಳಿಗೇ ಬರುತ್ತಿದ್ದರು'

ಆದರಿಂದ ಅಶ್ವತ್ಥಾಮ ತನ್ನ ಇಡೀ ಜನ್ಮ ಅಸ್ತ್ರವಿದ್ಯೆಯಲ್ಲಿಯೆ ಕಳೆಯಿತೆನ್ನುವುದಿಲ್ಲ. ಅವನು ತಂದೆಯಂತೆಯೇ. ಬ್ರಾಹ್ಮಣ್ಯವನ್ನು ಬಿಡಲಿಲ್ಲ. ಕ್ಷತ್ರಿಯನಾಗಲು ಯತ್ನಿಸಲಿಲ್ಲ. ಹದಿನೆಂಟು ದಿನಗಳ ಯುದ್ಧಕಾಲದಲ್ಲಿ ದುರ್ಯೋಧನನ ಪ್ರೀತಿಗಾಗಿ ದ್ರೋಣನ ಆದೇಶದಂತೆ ತಾತ್ಕಾಲಿಕವಾಗಿ ರಣರಂಗಕ್ಕೆ ಧುಮುಕಿದೆನೆನ್ನುತ್ತಾನೆ. ಇದು ನನ್ನ ದುರದೃಷ್ಟ ಎನ್ನುತ್ತಾನೆ-

ಮಂದಭಾಗ್ಯತಯಾಸ್ಮೈೀತಂ ಕ್ಷತ್ರಧರ್ಮಮನುಷ್ಠಿತಃ।
(ಸೌಪ್ತಿಕ ೩.೨೧)

ರಣರಂಗಕ್ಕೆ ಧುಮುಕಿದ ಕಾಲದಲ್ಲಿ ಅಸಹನೆ ಸಹಜ. ಕ್ಷಮೆಯೆ ಅಸಹಜ. ಆದರಿಂದ ಪಾಂಡವರನ್ನು ರಾತ್ರಿ ಶಿಬಿರದೊಳಗೇ ಕಗ್ಗೊಲೆ ಮಾಡಲು ಬಯಸಿದ. ಇದು ಅಧರ್ಮವೆ. ಆದರೂ ಲೋಕದೃಷ್ಟಿಯಿಂದ ಅಧರ್ಮವಾಗಿದ್ದ ದ್ರೋಣವಧೆ ದುರ್ಯೋಧನವಧೆಗಳಿಗೆ ಪ್ರತೀಕಾರವಾಗಿ ಶಿಬಿರನಾಶದಂಥ ಅಧರ್ಮ ಮಾಡಲು ಮುಂದಾಗುತ್ತಾನೆ ಅಶ್ವತ್ಥಾಮ. ಶ್ರೀಕೃಷ್ಣನ ಸಂಕಲ್ಪವೂ ಅದಕ್ಕೆ ಅನುಕೂಲವಾಗೇ ಇದ್ದಿತು. ಆದರಿಂದ ಅವನು ಆ ಅಧರ್ಮವನ್ನೂ ಧರ್ಮವನ್ನಾಗಿಸುತ್ತಾನೆ.

ಅಶ್ವತ್ಥಾಮ ರುದ್ರನ ಅವತಾರ. ಆದರೂ ರುದ್ರ ತಾನೆ ಶಿಬಿರದ್ವಾರ

ದಲ್ಲಿ ಭೂತಾಕಾರವಾಗಿ ನಿಂತು ತಡೆದು ಅವನೊಡನೆ ಹೋರಾಡುತ್ತಾನೆ. ಅವನ ಆಯುಧಗಳನ್ನೆಲ್ಲ ನುಂಗುತ್ತಾನೆ. ಅವನನ್ನೆ ಕೊಲ್ಲಲು ಯತ್ನಿಸುತ್ತಾನೆ. ಇದು ಆತ್ಮಹತ್ಯೆ. ಆದರೂ ಅಚಿಂತ್ಯವಾದ ಶ್ರೀಹರಿಯ ಶಕ್ತಿ ಹಾಗೆ ಪ್ರೇರಿಸಿದೆ. ಶ್ರೀಕೃಷ್ಣ ಬಹುಕೋಟಿ ರೂಪಗಳಿಂದ ರುದ್ರನ ಸುತ್ತಲೂ ನಿಂತು ಪ್ರೇರಿಸುತ್ತಾನೆ. ಅದಕ್ಕೆ ಅಶ್ವತ್ಥಾಮ ತನ್ನೊಳಗಿರುವ ಆ ಶ್ರೀಹರಿಗೇ ತನ್ನನ್ನು ಸಮರ್ಪಿಸುವ ಮಾನಸ ಯಜ್ಞಸಂಕಲ್ಪ ನಡೆಸುತ್ತಾನೆ. [1]ನನ್ನ ಮರಣಕಾಲದಲ್ಲಿ ನನ್ನ ಶರೀರವನ್ನು ನಿನಗೆ ಅರ್ಪಿಸುತ್ತೇನೆ. ಆಗ ನೀನು ನನ್ನನ್ನು ಕೊಲ್ಲು. ಈಗ ಶಿಬಿರವಾಸಿಗಳೆಲ್ಲರ ಶರೀರಗಳನ್ನು ನಿನಗೆ ಅರ್ಪಿಸುತ್ತೇನೆ. ನೀನು ಸುಪ್ರೀತನಾಗಿ ನನ್ನಿಂದ ಅವರನ್ನು ಕೊಲ್ಲಿಸು ಎಂದು ಎರಡು ಮಾನಸ ಯಜ್ಞಗಳನ್ನು ಸಂಕಲ್ಪ ಮಾಡುತ್ತಾನೆ. ಅದರಿಂದ ಹರಿ ಪ್ರಸನ್ನನಾಗುತ್ತಾನೆ. ಹರ ಅವನನ್ನು ಶಿಬಿರದೊಳಗೆ ಹೋಗಲು ಬಿಡುತ್ತಾನೆ. ಅವನೊಳಗೆ ಆವೇಶಗೊಳ್ಳುತ್ತಾನೆ. ಉತ್ತಮವಾದ ಖಡ್ಗವನ್ನೂ ನೀಡುತ್ತಾನೆ ಹೊರತು ತನ್ನ ಯಜ್ಞಕ್ಕೆ ತಾನು ವಿಘ್ನ ಮಾಡುವುದಿಲ್ಲ. ಅದರಿಂದ ಅಶ್ವತ್ಥಾಮ ನಡೆಸಿದುದು ಕಗ್ಗೊಲೆಯಲ್ಲ. ಪವಿತ್ರವಾದ ಯಜ್ಞ.

[2]ಮಹಾಭಾರತದಲ್ಲಿ ಅಶ್ವತ್ಥಾಮ ರುದ್ರನಿಗೆ ಆತ್ಮಸಮರ್ಪಣೆ ಮಾಡಿದನೆಂದಿದೆ. ಆದರೆ ಅಶ್ವತ್ಥಾಮನಿಗೆ ರುದ್ರ ಅನ್ಯನಲ್ಲ. ತನ್ನ ಸ್ವರೂಪನೆ, ತನಗೆ ತಾನೆ ತನ್ನನ್ನು ಅರ್ಪಿಸುವುದು ಅರ್ಥಹೀನ. ಅದರಿಂದ ತನ್ನೊಳಗಿರುವ ಹರಿಗೆ ತನ್ನನ್ನು ಅರ್ಪಿಸಿಕೊಂಡನೆಂದೇ ಅಭಿಪ್ರಾಯ ಹೇಳಬೇಕು. 'ಗುಹಾಶಯಾಯೈವ ನ ದೇಹಮಾನಿನೇ' ಎಂದು ಭಾಗವತದಲ್ಲಿ ರುದ್ರನೇ ಹಾಗೆ ಹೇಳಿದ್ದಾನೆ.

ಯಜ್ಞತುಷ್ಟೇನ ಹರಿಣಾ ಪ್ರೇರಿತಃ ಶಂಕರಃ ಸ್ವಯಮ್ ।
ಆತ್ಮನೇ ದ್ರೋಣಪುತ್ರಾಯ ದದೌ ಸರ್ವಾಯುಧಾನಿ ಚ ॥೧೩೧॥

---

1. ಮಮ ಮರಣಕಾಲೇಽಯಂ ಮದ್ದೇಹೋ ವಿಷ್ಣವೇ ಸ್ವಾಹೇತಿ ಮಯಾ ದತ್ತೇ ತದಾ ತವ ಭಕ್ಷಣಾರ್ಹಃ ಇತಿ ಸಸ್ಮಾರ, ಅಯಮೇವ ಮಾನಸೋಯಜ್ಞ ಇತಿ ಭಾವಃ। ಉಪಲಕ್ಷಣಂ ಚೈತತ್। ಶಿಬಿರಾಂತಃ ಪ್ರವಿಶ್ಯ ಯೇ ಮಯಾ ಹನಿಷ್ಯಂತೇ ತೇ ಸರ್ವೇ ಪಶವಃ। ತೇಷಾಂ ನಿಖಿಲಾ ದೇಹಾಅಪಿ ವಿಷ್ಣವೇ ಸ್ವಾಹೇತಿ ಮಯಾ ದತ್ತೇ ಇದಾನೀಮೇವ ತವ ಭಕ್ಷಾಭವಂತಿ। ಅತಸ್ತ್ವದ್ಯಜ್ಞ ವಿಘ್ನಂ ತ್ವಮೇವ ನ ಕುರ್ವಿತಿ ಚ ನ್ಯಾಯ ಸಾಮ್ಯಾತ್ ಸ್ಮೃತವಾನಿತ್ಯೂಹ್ಯತೇ। ಯಜ್ಞತುಷ್ಟೇನ ಉಕ್ತವಿಧಯಾ ದ್ವಿವಿಧಯಜ್ಞತುಷ್ಟೇನ॥ -ವಾದಿರಾಜೀಯ

2. ಆತ್ಮನಸ್ತನುಮಿತ್ಯುಕ್ತ್ಯಾ ರುದ್ರಸ್ಯ ದ್ರೌಣೇಶ್ಚೈಕತ್ವೋಕ್ತ್ಯಾ ಪೂಜ್ಯ ಪೂಜಕಭಾವಾಯೋಗಾತ್ ಅಶ್ವತ್ಥಾಮಕೃತಾತ್ಮೋಪಹಾರಾದಿಕಂ ರುದ್ರಾಂತರ್ಗತ ಶ್ರೀಮಹಾವಿಷ್ಣುವಿಷಯಮಿತಿ ಜ್ಞೇಯಂ। ಅತ ಏವಾತ್ಮ ಸ್ಥಾಯೈವ ವಿಷ್ಣವೇ ಇತಿ ಪ್ರಾಚಾಂ ವಾಚಃ। ಗುಹಾಶಯಾಯೈವ ನ ದೇಹಮಾನಿನ ಇತಿ ಶ್ರೀ ಭಾಗವತೇ ರುದ್ರೋಕ್ತಶ್ಚ। -ಲಕ್ಷಾಲಂಕಾರ

ಉವಾಚ ಚಾಹಮಾದಿಷ್ಟೋ ವಿಷ್ಣುನಾ ಪ್ರಭವಿಷ್ಣುನಾ ।
ಅರಕ್ಷಂ ಪಾರ್ಥಶಿಬಿರಮಿಯಂತಂ ಕಾಲಮೇವ ತು ॥೧೩೨॥
ತದಿಚ್ಛಯೈವ ನಿರ್ದಿಷ್ಟೋ ದಾಸ್ಯೇ ಮಾರ್ಗಂ ತವಾದ್ಯ ಚ ।
ಆಯುಧಾನಿ ಚ ಸರ್ವಾಣಿ ಹಂತುಂ ಸರ್ವಾನಿಮಾನ್ ಜನಾನ್ ॥೧೩೩॥

ಯಜ್ಞದಿಂದ ಸಂತುಷ್ಟನಾದ ಹರಿಯ ಪ್ರೇರಣೆಯಿಂದ ರುದ್ರ ತನ್ನ ಸ್ವರೂಪಭೂತನಾದ ಅಶ್ವತ್ಥಾಮನಿಗೆ ಎಲ್ಲ ಆಯುಧಗಳನ್ನೂ ಹಿಂತಿರುಗಿಸಿದ. ಮತ್ತು ಹೇಳಿದ 'ನಾನು ಇಷ್ಟು ಕಾಲದವರೆಗೆ ಸರ್ವರಕ್ಷನಾದ ಹರಿಯ ಆಜ್ಞೆಯಿಂದ ಪಾಂಡವರ ಶಿಬಿರವನ್ನು ರಕ್ಷಿಸಿದ್ದೇನೆ. ಈಗ ಅವನ ಆಜ್ಞೆಯಿಂದಲೆ ಪ್ರೇರಿತನಾಗಿ ನಾನು ನಿನಗೆ ಮಾರ್ಗಕೊಡುತ್ತೇನೆ. ಈ ಎಲ್ಲ ಜನರನ್ನು ಕೊಲ್ಲಲು ಎಲ್ಲ ಆಯುಧಗಳನ್ನೂ ಕೊಡುತ್ತೇನೆ.'

ಇತ್ಯುದೀರ್ಯ ಪ್ರದಾಯಾಕಶು ಸರ್ವಾ ಹೇತೀರ್ವ್ಯಷಧ್ವಜಃ ।
ತತ್ರೈವಾಂತರ್ದಧೇ ಸೋಽಪಿ ಪ್ರೋವಾಚ ಕೃಪಸಾತ್ವತೌ ॥೧೩೪॥

ರುದ್ರ ಹೀಗೆ ಹೇಳಿ ಬೇಗನೆ ಎಲ್ಲ ಆಯುಧಗೆಳನ್ನೂ ಅಶ್ವತ್ಥಾಮನಿಗೆ ಕೊಟ್ಟು ಅಲ್ಲಿಯೆ ಅದೃಶ್ಯನಾದ. ಬಳಿಕ ಅಶ್ವತ್ಥಾಮ ಕೃಪಕೃತವರ್ಮರಿಗೆ ಹೇಳಿದ.

ಯೇ ನಿರ್ಯಾಸ್ಯಂತಿ ಶಿಬಿರಾಜ್ಜಹಿತಂ ತಾಂಸ್ತು ಸರ್ವಶಃ ।
ಇತ್ಯುಕ್ತ್ವಾ ಪ್ರವಿವೇಶಾಂತರ್ಧನ್ವೀ ಖಡ್ಗೀ ಕೃತಾಂತವತ್ ॥೧೩೫॥

'ಯಾರು ಶಿಬಿರದಿಂದ ಹೊರಗೆ ಹೋಗುವರೋ ಅವರನ್ನು ಎಲ್ಲರನ್ನೂ ಕೊಲ್ಲಿರಿ' ಅಶ್ವತ್ಥಾಮ ಹೀಗೆಹೇಳಿ ಬಿಲ್ಲು ಖಡ್ಗಗಳನ್ನು ಹಿಡಿದು ಯಮನಂತೆ ಶಿಬಿರದೊಳಗೆ ಪ್ರವೇಶಿಸಿದ.

ವೀರಯೋಧರ ಮಾರಣ ಹೋಮ

ಪಾರಾವತಾಶ್ವಂ ಸ ತದಾ ಶಯಾನ-
ಮುಪೇತ್ಯ ಪದ್ಭ್ಯಾಂ ಸಮತಾಡಯಚ್ಚ ।
ವಕ್ಷಸ್ಯಸಾವವದದ್ ವೀತನಿದ್ರೋ
ಜಾನೇ ಭವಂತಂ ಹಿ ಗುರೋಸ್ತನೂಜಮ್ ॥೧೩೬॥
ಸಮುತ್ಥಿತಂ ಮಾಂ ಜಹಿ ಶಸ್ತ್ರಪಾಣಿಂ
ಶಸ್ತ್ರೇಣ ವೀರೋಽಸಿ ಸ ವೀರಧರ್ಮಃ ।
ಲೋಕಾಶ್ಚ ಮೇ ಸಂತ್ವಥ ಶಸ್ತ್ರಪೂತಾ
ಇತಿ ಬ್ರುವಾಣಂ ಸ ರುಷಾ ಜಗಾದ ॥೧೩೭॥

ಅಶ್ವತ್ಥಾಮ ಆಗ ಮಲಗಿದ ಧೃಷ್ಟದ್ಯುಮ್ನನ ಬಳಿಗೆ ಹೋಗಿ ಅವನೆದೆಗೆ ಕಾಲುಗಳಿಂದ ಒದ್ದ. ಧೃಷ್ಟದ್ಯುಮ್ನ ಎಚ್ಚೆತ್ತು ನುಡಿದ. 'ನನಗೆ ಗೊತ್ತು ನೀನು ಗುರುಪುತ್ರನೆಂದು. ನಾನು ಎದ್ದು ಶಸ್ತ್ರವನ್ನು ಕೈಗೆತ್ತಿಕೊಂಡ ಬಳಿಕ, ಶಸ್ತ್ರದಿಂದ ನನ್ನನ್ನು ಕೊಲ್ಲು, ನೀನು ವೀರನಾಗಿರುವಿ. ವೀರನ

ಧರ್ಮವಿದು. ಶಸ್ತ್ರದಿಂದ ಪವಿತ್ರರಾಗಿ ಹತರಾಗುವವರ ಪುಣ್ಯಲೋಕಗಳು ನನಗಾಗಲಿ' ಹೀಗೆ ಧೃಷ್ಟದ್ಯುಮ್ನ ಹೇಳಿದಾಗ ಅಶ್ವತ್ಥಾಮ ಕೋಪದಿಂದ ನುಡಿದ.

ನ ಸಂತಿ ಹಿ ಬ್ರಹ್ಮಹಣಾಂ ಸುಲೋಕಾ
ವಿಶೇಷತಶ್ಚೈವ ಗುರುದ್ರುಹಾಂ ಪುನಃ ।
ನ ಧರ್ಮಯುದ್ಧೇನ ವಧಾರ್ಹಕಾಶ್ಚ
ಯೇ ತ್ವದ್ವಿಧಾಃ ಪಾಪತಮಾಃ ಸುಪಾಪ ॥೧೩೮॥

'ಮಹಾಪಾಪಿಯೆ, ಬ್ರಹ್ಮಹತ್ಯೆ ಮಾಡುವವರಿಗೆ ಪುಣ್ಯಲೋಕಗಳಿಲ್ಲ. ವಿಶೇಷವಾಗಿ ಗುರುದ್ರೋಹಿಗಳಿಗೆ ಸರ್ವಥಾ ಇಲ್ಲ. ಅದರಿಂದ ನಿನ್ನಂಥ ಮಹಾಪಾಪಿಗಳು ಧರ್ಮಯುದ್ಧದಿಂದ ವಧೆಗೆ ಅರ್ಹರಲ್ಲ.

ಯುದ್ಧದಲ್ಲಿ ಶತ್ರುವಧೆ ಪುಣ್ಯಕರವೆ. ಆದರೆ ಗುರುಹತ್ಯೆ ಪುಣ್ಯಕರವಲ್ಲ. ಆದರಿಂದ 'ಮಹಾಪಾಪಿ' ಎನ್ನಲಾಗಿದೆ. ವಸ್ತುತಸ್ತು ಧೃಷ್ಟದ್ಯುಮ್ನ ಮಂತ್ರಬಲದಿಂದ ದ್ರೋಣವಧೆಗಾಗಿಯೆ ಹುಟ್ಟಿದವನಾದ್ದರಿಂದ ಅವನು ಗುರುವಧೆ ಮಾಡಿದ್ದು ಮಹಾಪಾಪವಲ್ಲ. ಆದರೆ ಶಸ್ತ್ರವಧೆಗೆ ಯೋಗ್ಯತೆ ತರುವಂಥ ಪುಣ್ಯಕರ್ಮವೂ ಅಲ್ಲ ಎನ್ನುವುದು ಅಶ್ವತ್ಥಾಮನ ಅಭಿಪ್ರಾಯ.

ಅವಶ್ಯಭಾವಿನಂ ಮೃತ್ಯುಂ ಧೃಷ್ಟದ್ಯುಮ್ನೋ ವಿಚಿಂತ್ಯ ತಮ್ ।
ತೂಷ್ಣೀಂ ಬಭೂವ ಸ್ವಪ್ನೇಽಪಿ ನಿತ್ಯಂ ಪಶ್ಯತಿ ತಾಂ ಮೃತಿಮ್ ॥೧೩೯॥

ಇದು ಅವಶ್ಯ ಉಂಟಾಗಲಿರುವ ಮರಣವೆಂದು ಧೃಷ್ಟದ್ಯುಮ್ನ ಆಲೋಚಿಸಿ ಸುಮ್ಮನಾದ. ಏಕೆಂದರೆ ಆ ಮರಣವನ್ನು ಆತ ನಿತ್ಯವೂ ಸ್ವಪ್ನದಲ್ಲಿ ಕಾಣುತ್ತಿದ್ದ.

ದ್ರೌಣಿಂ ಚ ಕಾಲರಾತ್ರಿಂ ಚ ದ್ರೋಣಪಾತಾದನಂತರಮ್ ।
ವಿಶಸಂತಂ ಕೃಷಂತೀಂ ಚ ಸ್ವಪ್ನೇಽಪಶ್ಯದ್ಧಿ ಪಾರ್ಷತಃ ॥೧೪೦॥

ದ್ರೋಣನ ಪತನವಾದ ಬಳಿಕ ಧೃಷ್ಟದ್ಯುಮ್ನ ತನ್ನನ್ನು ಅಶ್ವತ್ಥಾಮ ಕೊಲ್ಲುವಂತೆ, ಕಾಲರಾತ್ರಿ ದುರ್ಗೆ ಸೆಳೆಯುವಂತೆ ಸ್ವಪ್ನದಲ್ಲಿ ಕಾಣುತ್ತಿದ್ದ.

ಮಹಾಭಾರತದಲ್ಲಿ ಧೃಷ್ಟದ್ಯುಮ್ನನೊಬ್ಬನೆ ಅಲ್ಲ, ಎಲ್ಲ ಪ್ರಧಾನ ಪಾಂಡವ ಯೋಧರೂ ಇದೇ ಸ್ವಪ್ನವನ್ನು ಕಾಣುತ್ತಿದ್ದರು. ಏಕೆಂದರೆ ದ್ರೋಣನನ್ನು ಅನ್ಯಾಯದಿಂದ ಕೊಂದೆವೆಂದು ಅಪರಾಧಪ್ರಜ್ಞೆ ಎಲ್ಲರಿಗೂ ಇದ್ದಿತು. ಇದು ಕೇವಲ ಭೀತಿಯಿಂದಲ್ಲ. ಮುಂದೆ ಬರಲಿರುವ ಮರಣಕ್ಕೆ ಸೂಚಕವಾಗಿಯೂ ಇದ್ದಿತು.

ಸಮಾಕ್ಷಿಪದ್ ದ್ರೋಣಸುತೋಽಸ್ಯ ಕಂಠೇ

ನಿಬದ್ಧ್ಯ ಮೌರ್ವೀಂ ಧನುಷೋಽಪ್ಯುರಸ್ಥಃ ।
ಮಮಂಥ ಕೃಚ್ಛ್ರೇಣ ವಿಹಾಯ ದೇಹಂ
ಯಯೌ ನಿಜಂ ಸ್ಥಾನಮಸೌ ಚ ವಹ್ನಿಃ ॥೧೪೧॥

ಅಶ್ವತ್ಥಾಮ ಧೃಷ್ಟದ್ಯುಮ್ನನ ಎದೆಯಲ್ಲಿ ಕುಳಿತು ಕೊರಳಿಗೆ ಬಿಲ್ಲಿನ ಹಗ್ಗವನ್ನು ಕಟ್ಟಿ ಸೆಳೆದ. ಮಥನ ಮಾಡಿದ. ಅಗ್ನಿಯ ಅವತಾರನಾದ ಆ ಧೃಷ್ಟದ್ಯುಮ್ನ ಕಷ್ಟದಿಂದ ಶರೀರವನ್ನು ತೊರೆದು ತನ್ನ ಲೋಕಕ್ಕೆ ತೆರಳಿದ.

ಗುರುಹತ್ಯಾ ಪಾಪ ಮಾಡಿದ್ದರೂ ಶಸ್ತ್ರದಿಂದ ಮಡಿಯದಿದ್ದರೂ ಅಗ್ನಿಯ ಅವತಾರನಾದ ಧೃಷ್ಟದ್ಯುಮ್ನನಿಗೆ ಅದು ಲೇಪವಾಗಲಿಲ್ಲ. ತನ್ನ ಲೋಕವನ್ನು ಸೇರಲು ಅಡ್ಡಿಯಾಗಲಿಲ್ಲ. ಏಕೆಂದರೆ ಭೀಮನ ಅನುಗ್ರಹ ವಿತ್ತು!

ತತಃ ಶಿಖಂಡಿನಂ ಹತ್ವಾ ಯುಧಾಮನ್ಯೂತ್ತಮೌಜಸೌ ।
ಜನಮೇಜಯಂ ಚ ಪಾಂಚಾಲೀಸುತಾನಭಿಯಯೌ ಜ್ವಲನ್ ॥೧೪೨॥

ಬಳಿಕ ಅಶ್ವತ್ಥಾಮ ಶಿಖಂಡಿಯನ್ನೂ ಯುಧಾಮನ್ಯು ಉತ್ತಮೌಜರನ್ನೂ ಜನಮೇಜಯನನ್ನೂ ಕೊಂದು ದ್ರೌಪದಿಯ ಮಕ್ಕಳ ಬಳಿಗೂ ಜ್ವಲಿಸುತ್ತ ನಡೆದ.

ತೈರುತ್ಥಿತೈರಸ್ಯಮಾನಃ ಶರೈಃ ಖಡ್ಗೇನ ಜಘ್ನಿವಾನ್ ।
ಸರ್ವಾನ್ ಸವ್ಯಾಪಸವ್ಯೇನ ತಥಾಽನ್ಯಾನ್ ಪಾಂಡವಾತ್ಮಜಾನ್ ॥೧೪೩॥
ಯುತ ಏಕಂ ಭೈಮಸೇನಿಂ ಕಾಶಿರಾಜಾತ್ಮಜಾತ್ಮಜಮ್ ।
ತಂ ತದಾಽಂತರ್ಹಿತಃ ಶರ್ವಃ ಕೈಲಾಸಮನಯತ್ ಕ್ಷಣಾತ್ ॥೧೪೪॥
ಸ ಶರ್ವತ್ರಾತನಾಮಾಽಽಸೀದತಸ್ತತ್ರೈವ ಸೋಽವಸತ್ ।
ಪುರಾಽರ್ಥಿತಃ ಸ್ವದೌಹಿತ್ರಸ್ಯಾಮರತ್ವಾಯ ಶಂಕರಃ ।
ಕಾಶಿರಾಜೇನ ತೇನಾಸೌ ಜುಗೋಪೈನಂ ಕೃಪಾಯುತಃ ॥೧೪೫॥

ದ್ರೌಪದೀ ಪುತ್ರರು ಎದ್ದು ಬಾಣಗಳಿಂದ ಅಶ್ವತ್ಥಾಮನನ್ನು ತಡೆದರೂ ಅವನು ಎಲ್ಲರನ್ನೂ ಖಡ್ಗದಿಂದ ಸಂಹರಿಸಿದ. ಭೀಮಸೇನನಿಗೆ ಕಾಶಿರಾಜನ ಮಗಳಾದ ಕಾಳಿದೇವಿಯಲ್ಲಿ ಹುಟ್ಟಿದ ಶರ್ವತ್ರಾತನೆಂಬ ಒಬ್ಬ ಮಗನನ್ನು ಹೊರತು ಇನ್ನೆಲ್ಲ ಪಾಂಡವಪುತ್ರರನ್ನೂ ಎಡಕ್ಕೂ ಬಲಕ್ಕೂ ಹೊಡೆದು ಕೊಂದ. ಶರ್ವತ್ರಾತನನ್ನು ಆಗ ಅದೃಶ್ಯನಾಗಿ ನಿಂತಿದ್ದ ರುದ್ರ ಕ್ಷಣದಲ್ಲಿ ಕೈಲಾಸಕ್ಕೆ ಒಯ್ದ. ಅದರಿಂದ ಶರ್ವತ್ರಾತನಿಗೆ ಆ ಹೆಸರು ಅನ್ವರ್ಥಕವಾಯಿತು. ಬಳಿಕ ಅವನು ಕೈಲಾಸದಲ್ಲಿಯೆ ವಾಸ ಮಾಡಿದ. ಹಿಂದೆ ಕಾಶಿರಾಜ ತನ್ನ ಮಗಳ ಮಗ ಅಮರನಾಗಬೇಕೆಂದು ರುದ್ರನನ್ನು ಬೇಡಿದ್ದ. ಅದರಿಂದ ರುದ್ರ ಈಗ ಕೃಪಾಯುಕ್ತನಾಗಿ ಶರ್ವತ್ರಾತನನ್ನು ರಕ್ಷಿಸಿದ್ದ.

ವಾಸುದೇವಮತಂ ಜ್ಞಾತ್ವಾ ಸಾಮ್ರಾಜ್ಯಾಯ ಪರೀಕ್ಷಿತಃ ।
ವಾರಯಾಮಾಸ ಭೂಲೋಕಂ ನೈವ ಯಾಹೀತ್ಯಮುಂ ಶಿವಃ ॥೧೪೬॥

ಪರೀಕ್ಷಿತನಿಗೇ ಸಾಮ್ರಾಜ್ಯ ನೀಡಬೇಕೆನ್ನುವ ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದು ರುದ್ರ 'ನೀನು ಭೂಲೋಕಕ್ಕೆ ಹೋಗಲೇಬೇಡವೆ' ಂದು ಶರ್ವತ್ರಾತನನ್ನು ತಡೆದ.

ಪಾಂಡವರ ರಾಜ್ಯಭಾರ ಕಾಲದಲ್ಲಿಯೂ ಶರ್ವತ್ರಾತ ಕೈಲಾಸದಿಂದ ಭೂಲೋಕಕ್ಕೆ ಬರಲಿಲ್ಲ. ಬಂದಿದ್ದರೆ ಜ್ಯೇಷ್ಠ ಪುತ್ರನಾದ್ದರಿಂದ ಪಾಂಡವರಿಗೆ ಉತ್ತರಾಧಿಕಾರಿಯಾಗುತ್ತಿದ್ದ. ಆದರೆ ಪರೀಕ್ಷಿತನಿಗೆ ಪಟ್ಟಕಟ್ಟುವ ಅಭಿಪ್ರಾಯ ಕೃಷ್ಣನದು. ಅದಕ್ಕೆ ರುದ್ರ ಶರ್ವತ್ರಾತನನ್ನು ತಡೆದು ಕೈಲಾಸದಲ್ಲಿಯೆ ಇರಿಸಿಕೊಂಡ.

ಸಾಮಾನ್ಯತೋಽಪಾಂಡವಾಯ ದ್ರೌಣಿನಾಽಪ್ಯಭಿಸಂಧಿತಮ್ ।
ತದ್ರೂಪೇಣೈವ ರುದ್ರೇಣ ವಿನೈನಮಿತಿ ಚಿಂತಿತಮ್ ॥೧೪೭॥

ಬ್ರಹ್ಮಾಸ್ತ್ರಪ್ರಯೋಗಕಾಲದಲ್ಲಿ ಸಾಮಾನ್ಯವಾಗಿ 'ಪಾಂಡವರ ಸಂತತಿ ನಾಶವಾಗಲಿ' ಂದು ಅಶ್ವತ್ಥಾಮ ಬಯಸಿದ್ದ. ಆದರೂ ಅಶ್ವತ್ಥಾಮನ ಸ್ವರೂಪಭೂತನಾದ ರುದ್ರ 'ಶರ್ವತ್ರಾತನನ್ನು ಹೊರತುಪಡಿಸಿ' ಎಂದು ಸಂಕಲ್ಪಿಸಿದ್ದ.

ಅಸ್ತ್ರಂ ಬ್ರಹ್ಮಶಿರಶ್ಚೈನಂ ನ ಜಘಾನೈಕ್ಯತಸ್ತಯೋಃ ।
ಚೇಕಿತಾನಾದಿಕಾಂಶ್ಚೈವ ಜಘಾನಾನ್ಯಾನ್ ಸ ಸರ್ವಶಃ ॥೧೪೮॥

ಅಶ್ವತ್ಥಾಮ-ರುದ್ರರು ಒಬ್ಬರೆ ಆದ್ದರಿಂದ ಬ್ರಹ್ಮಾಸ್ತ್ರವೂ ಶರ್ವತ್ರಾತನನ್ನು ಕೊಲ್ಲಲಿಲ್ಲ. ಅಶ್ವತ್ಥಾಮ ಈಗ ಶಿಬಿರದಲ್ಲಿ ಚೇಕಿತಾನ ಮುಂತಾದ ಎಲ್ಲರನ್ನೂ ಕೊಂದ.

ಮುಂದೆ ಭೀಮ ಬೆನ್ನಟ್ಟಿ ಬಂದಾಗ ಅಶ್ವತ್ಥಾಮ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಪಾಂಡವ ಸಂತತಿ ನಾಶವಾಗಲಿ ಎಂದೇ ಆಗ ಆತ ಸಂಕಲ್ಪಿಸಿದ್ದ. ಆದರೆ ಅದೇ ಸಮಯದಲ್ಲಿ ಅಶ್ವತ್ಥಾಮನ ಮೂಲರೂಪನಾದ ರುದ್ರ 'ಶರ್ವತ್ರಾತನನ್ನು ಹೊರತು' ಎಂದು ಸೇರಿಸಿದ. ಹೀಗಾಗಿ ರುದ್ರ ಅಶ್ವತ್ಥಾಮರು ಒಬ್ಬರೆ ಆದ್ದರಿಂದ ಒಂದೇ ಸಂಕಲ್ಪವಾಯಿತು. 'ಶರ್ವತ್ರಾತನನ್ನು ಹೊರತು ಬೇರೆ ಎಲ್ಲ ಪಾಂಡವ ಸಂತತಿ ನಾಶವಾಗಲಿ' ಎಂದು. ಅದರಿಂದ ಶರ್ವತ್ರಾತ ಉಳಿದುಕೊಂಡ.

ಶಿಬಿರ ದಾಹ

ಸ ಚೇದಿಪಾಂಚಾಲಕರೂಶಕಾಶೀ-
ನನ್ಯಾಂಶ್ಚ ಸರ್ವಾನ್ ವಿನಿಹತ್ಯ ವೀರಃ ।

ಶಿಶೂನ್ ಸ್ತ್ರಿಯಶ್ಚೈವ ನಿಹಂತುಮುಗ್ರಃ
ಪ್ರಾಜ್ವಾಲಯತ್ ತಚ್ಛಿಬಿರಂ ಸಮಂತಾತ್ ॥೧೪೯॥

ಚೇದಿ ಪಾಂಚಾಲ ಕರೂಶ ಕಾಶಿ ರಾಜರುಗಳ ಸಂಬಂಧಿಗಳನ್ನೂ ಇತರ ಎಲ್ಲರನ್ನೂ ಸಂಹಾರ ಮಾಡಿ ಕ್ರೂರನಾದ ವೀರ ಅಶ್ವತ್ಥಾಮ ಮಕ್ಕಳನ್ನೂ ಹೆಂಗಸರನ್ನೂ ಕೊಲ್ಲಲು ಶಿಬಿರವನ್ನು ಎಲ್ಲಕಡೆ ಸುಟ್ಟುಬಿಟ್ಟ.

ಜಿಜೀವಿಷೂಂಸ್ತತ್ರ ಪಲಾಯಮಾನಾನ್
ದ್ವಾರಿ ಸ್ಥಿತೋ ಗೌತಮಃ ಸಾತ್ವತಶ್ಚ।
ನಿಜಘ್ನತುಃ ಸರ್ವತಃ ಪಾರ್ಷತಸ್ಯ
ಸೂತಸ್ತ್ವೇಕಃ ಶೇಷಿತೋ ದೈವಯೋಗಾತ್ ॥೧೫೦॥

ಬದುಕುವಾಸೆಯಿಂದ ಪಲಾಯನ ಮಾಡತೊಡಗಿದವರನ್ನು ಎಲ್ಲರನ್ನೂ ಶಿಬಿರದ್ವಾರದಲ್ಲಿ ನಿಂತಿದ್ದ ಕೃಪಕೃತವರ್ಮರು ಕೊಂದರು. ಧೃಷ್ಟದ್ಯುಮ್ನನ ಸಾರಥಿಯೊಬ್ಬನೆ ದೈವ ಯೋಗದಿಂದ ಉಳಿದುಕೊಂಡ.

ಖಡ್ಗೇನ ಪ್ರಹೃತಂ ದೃಷ್ಟ್ವಾ ಹಾರ್ದಿಕ್ಯೇನ ಪಪಾತ ಹ।
ಭೂಮೌ ಪ್ರಾಗೇವ ಸಂಸ್ಪರ್ಶಾನ್ನ ಜ್ಞಾತಸ್ತಮಸಾಕಮುನಾ ॥೧೫೧॥

ಕೃತವರ್ಮ ಖಡ್ಗವನ್ನು ಬೀಸಿದಾಗ ಅದನ್ನು ಕಂಡು ಖಡ್ಗ ಮೈಗೆ ತಗಲುವ ಮುನ್ನವೆ ಧೃಷ್ಟದ್ಯುಮ್ನನ ಸಾರಥಿ ನೆಲಕ್ಕೆ ಬಿದ್ದ. ಕತ್ತಲು ಇದ್ದುದರಿಂದ ಕೃತವರ್ಮನಿಗೆ ಇದು ತಿಳಿಯಲಿಲ್ಲ.

ಅನ್ಯಾಸಕ್ತೇ ಸಮುತ್ಥಾಯ ಪ್ರಾದ್ರವದ್ ಯತ್ರ ಪಾರ್ಷತೀ ।
ತಸ್ಯಾ ಅಕಥಯತ್ ಸರ್ವಂ ಸಾ ಭೀಮಾಯಾಕಹ ದುಃಖಿತಾ ।
ಪ್ರಾದ್ರವದ್ ರಥಮಾರುಹ್ಯ ಸ ಧನ್ವೀ ಗೌತಮೀಸುತಮ್ ॥೧೫೨॥

ಕೃತವರ್ಮ ಅನ್ಯರನ್ನು ಕೊಲ್ಲುವುದರಲ್ಲಿ ಉದ್ಯುಕ್ತನಾಗಿದ್ದಾಗ ಧೃಷ್ಟದ್ಯುಮ್ನನ ಸಾರಥಿ ಎದ್ದು ಉಪಪ್ಲಾವ್ಯದಲ್ಲಿ ದ್ರೌಪದಿ ಇದ್ದಲ್ಲಿಗೆ ಧಾವಿಸಿದ. ಅವಳಿಗೆ ಎಲ್ಲವನ್ನೂ ಹೇಳಿದ. ಅವಳು ದುಃಖಿತಳಾಗಿ ಕೌರವ ಶಿಬಿರಕ್ಕೆ ಬಂದು ಭೀಮನಿಗೆ ಹೇಳಿದಳು. ಭೀಮ ಬಿಲ್ಲು ಹಿಡಿದು ರಥವೇರಿ ಅಶ್ವತ್ಥಾಮನ ಕಡೆಗೆ ಧಾವಿಸಿದ.

ತದಂತರೇ ದ್ರೌಣರಪಿ ಪ್ರಯಾತಃ
ಕೃಷ್ಣಾಸುತಾನಾಂ ಮುದಿತಃ ಶಿರಾಂಸಿ ।
ಆದಾಯ ಹಾರ್ದಿಕ್ಯಕೃಪಾನುಯಾತೋ
ದುರ್ಯೋಧನಂ ಸನ್ನಿಕೃಷ್ಟಪ್ರಯಾಣಮ್ ॥೧೫೩॥

ಆಷ್ಟರಲ್ಲಿ ಅಶ್ವತ್ಥಾಮ ದ್ರೌಪದೀ ಪುತ್ರರ ತಲೆಗಳನ್ನು ಎತ್ತಿಕೊಂಡು ಆನಂದದಿಂದ ದುರ್ಯೋಧನನ ಬಳಿಗೆ ನಡೆದಿದ್ದ. ಕೃಪಕೃತವರ್ಮರೂ ಅವನನ್ನು ಹಿಂಬಾಲಿಸಿದ್ದರು. ದುರ್ಯೋಧನ ಆಗ ಮರಣವನ್ನು ಸಮೀಪಿಸಿದ್ದ.

ದೃಷ್ಟ್ವಾ ತದುಕ್ತಂ ಚ ನಿಶಮ್ಯ ಪಾಪ-
ಸ್ತುಷ್ಟೋಕತ್ಯಜತ್ ಸಾಧ್ವಿತಿ ದೇಹಮಾಶು ।
ಭೀಮಾರ್ಜುನಾಭ್ಯಾಮಥ ಕೇಶವಾಚ್ಚ
ಭೀತಾಃ ಪೃಥಗ್ ದ್ರೌಣಿಮುಖಾಃ ಪ್ರಯಾತಾಃ ॥೧೫೪॥

ಪಾಪಿ ದುರ್ಯೋಧನ ದ್ರೌಪದೀ ಪುತ್ರರ ತಲೆಗಳನ್ನು ನೋಡಿ ಅಶ್ವತ್ಥಾಮನ ಮಾತನ್ನೂ ಕೇಳಿ ಸಂತೋಷಪಟ್ಟು ಒಳ್ಳೆಯದನ್ನೇ ಮಾಡಿರುವೆ ಎಂದು ಹೇಳಿ ಬೇಗನೆ ಶರೀರವನ್ನು ತೊರೆದ. ಒಡನೆ ಭೀಮಾರ್ಜುನರಿಗೂ ಕೃಷ್ಣನಿಗೂ ಹೆದರಿ ಅಶ್ವತ್ಥಾಮ ಮುಂತಾದವರು ಮೂವರೂ ಬೇರೆ ಬೇರೆಯಾಗಿ ಹೊರಟು ಹೋದರು.

ಬ್ರಹ್ಮಾಸ್ತ್ರ ಪ್ರಯೋಗ

ತತ್ಸೈಕಲಂ ದ್ರೋಣಸುತಂ ರಥೇನ
ಯಾಂತಂ ರಥೀ ಮಾರುತಿರನ್ವಧಾವತ್ ।
ತಮಾದ್ರವಂತಂ ಪ್ರಸಮೀಕ್ಷ್ಯ ಭೀತಃ
ಪರಾದ್ರವದ್ ದ್ರೌಣಿರತಿದ್ರುತಾಶ್ವಃ ॥೧೫೫॥

ಅಶ್ವತ್ಥಾಮ ಏಕಾಕಿಯಾಗಿ ರಥದಿಂದ ಹೋಗುತ್ತಿದ್ದುದನ್ನು ಕಂಡು ಭೀಮಸೇನ ರಥದಿಂದ ಬೆನ್ನಟ್ಟಿದ. ಅವನು ಅಟ್ಟಿಸಿಕೊಂಡು ಬರುವುದನ್ನು ಕಂಡು ಹೆದರಿದ ಅಶ್ವತ್ಥಾಮ ಬಲು ವೇಗದಿಂದ ಓಡುವ ಕುದುರೆಗಳಿದ್ದ ಆ ರಥದಿಂದ ಪಲಾಯನ ಮಾಡಿದ.

ಆದ್ರವಂತಂ ಪುನರ್ದೃಷ್ಟ್ವಾ ಭೀಮಂ ದ್ರೋಣಾತ್ಮಜೋ ರುಷಾ ।
ಆವೃತ್ಯ ಯುಧ್ಯನ್ ವಿಜಿತೋಕಸ್ತ್ರಂ ಬ್ರಹ್ಮಶಿರ ಆದದೇ ॥೧೫೬॥

ಭೀಮ ಪುನಃ ಅಟ್ಟಿಸಿಕೊಂಡು ಬರುವುದನ್ನು ಕಂಡು ಅಶ್ವತ್ಥಾಮ ಕೋಪದಿಂದ ಹಿಂತಿರುಗಿ ನಿಂತು ಯುದ್ಧಮಾಡಿ ಸೋತು ಬ್ರಹ್ಮಾಸ್ತ್ರವನ್ನು ಎತ್ತಿಕೊಂಡ.

ಏತಸ್ಮಿನ್ನಂತರೇ ಕೃಷ್ಣೋ ಧರ್ಮಜೇನಾರ್ಜುನೇನ ಚ ।
ತತ್ರಾಗಮತ್ ತದಸ್ತ್ರಂ ಚ ಭೀಮಂ ಚಾವ್ಯರ್ಥತಾಂ ನಯನ್ ॥೧೫೭॥

ಅಷ್ಟರಲ್ಲಿ ಬ್ರಹ್ಮಾಸ್ತ್ರವನ್ನೂ ಭೀಮನ ಬಲವನ್ನೂ ಅಮೋಘವೆಂದೆನಿಸುವ ಉದ್ದೇಶದಿಂದ ಶ್ರೀಕೃಷ್ಣ ಧರ್ಮರಾಜಅರ್ಜುನರೊಂದಿಗೆ ಅಲ್ಲಿಗೆ ಬಂದ.

ಅವಧ್ಯೋ ಭೀಮಸೇನಸ್ತದಸ್ತ್ರಂ ಚಾಮೋಘಮೇವ ಯತ್ ।
ವಿಷ್ಣುನೈವೋಭಯಂ ಯಸ್ಮಾತ್ ಕ್ಲೃಪ್ತಂ ಭೀಮೋಕಸ್ತ್ರಮೇವ ತತ್ ॥೧೫೮॥
ಗಾಯತ್ರೀ ತತ್ರ ಮಂತ್ರೋ ಯದ್ ಬ್ರಹ್ಮಾ ತದ್ಧ್ಯಾನದೇವತಾ ।
ಧ್ಯೇಯೋ ನಾರಾಯಣೋ ದೇವೋ ಜಗತ್ಪ್ರಸವಿತಾ ಸ್ವಯಮ್ ॥೧೫೯॥

ಏಕೆಂದರೆ ಭೀಮಸೇನ ಅವಧ್ಯ. ಬ್ರಹ್ಮಾಸ್ತ್ರವೂ ಅಮೋಘ. ವಿಷ್ಣುವೆ ಹಾಗೆ ಎರಡನ್ನೂ ಸಂಕಲ್ಪಿಸಿದ್ದಾನೆ. ಮತ್ತು ಭಾವಿ ಬ್ರಹ್ಮನಾದ ಭೀಮಸೇನ ಬ್ರಹ್ಮಾಸ್ತ್ರಕ್ಕೆ ಅಭಿಮಾನಿಯೂ ಹೌದು.

ಏಕೆಂದರೆ ಅದಕ್ಕೆ ಗಾಯತ್ರಿಯೆ ಮಂತ್ರ. ಬ್ರಹ್ಮ ಅದನ್ನು ಧ್ಯಾನ ಮಾಡುವ ದೇವತೆ. ದೇವನಾದ ಸ್ವತಃ ಜಗತ್ತಿನ ಸೃಷ್ಟಿಕರ್ತನಾದ ಸವಿತೃನಾಮಕ ನಾರಾಯಣ ಧ್ಯೇಯ. ಸೂರ್ಯನಲ್ಲ.

ಅದರಿಂದ ಬ್ರಹ್ಮಾಸ್ತ್ರ ಅದರ ಸಾಧಕ ಋಷಿಯೂ ಅಭಿಮಾನಿಯೂ ಆದ ಭಾವಿಬ್ರಹ್ಮನಾದ ಭೀಮನನ್ನು ಸುಡಲಾರರು.

ಊಚೇ ಚ ಪಾರ್ಥಯೋಃ ಕೃಷ್ಣೋ ಯತ್ ಕೃತಂ ದ್ರೌಣಿನಾ ಪುರಾ ।
ಸ್ವಾಯುಧಾನಾಂ ಯಾಚನಂ ಚಾಪ್ಯಶಕ್ತೇನ ತದುದ್ಧೃತೌ ॥೧೬೦॥
ಪೃಷ್ಟೇನೋಕ್ತಂ ತ್ವಯಾ ಹೀನಾಂ ಕೃತ್ವಾ ದುರ್ಯೋಧನಾಯ ಗಾಮ್ ।
ದಾತುಂ ತ್ವದಾಯುಧಂ ಮೇಽದ್ಯೇತ್ಯೇವಮುಕ್ತೇ ತ್ಮನೋದಿತಮ್ ।
ಮೈವಂ ಕಾರ್ಷೀಃ ಪುನರಿತಿ ಧ್ಯಾಯತಾಽಬ್ಧೇಸ್ತಟೇ ಸ್ವಮು ॥೧೬೧॥

ಹಿಂದೊಮ್ಮೆ ಅಶ್ವತ್ಥಾಮ ಏನು ಮಾಡಿದ್ದನೆಂಬುದನ್ನು ಶ್ರೀಕೃಷ್ಣ ಧರ್ಮರಾಜ ಅರ್ಜುನರಿಗೆ ಹೇಳಿದ. ಅಶ್ವತ್ಥಾಮ ಸಮುದ್ರತೀರದಲ್ಲಿ ತನ್ನನ್ನು ಧ್ಯಾನಮಾಡುತ್ತ ನನ್ನ ಆಯುಧಗಳನ್ನು ಎತ್ತಲು ಅಶಕ್ತನಾಗಿದ್ದರೂ ಅವುಗಳನ್ನು ಬೇಡಿದ. ಈ ಆಯುಧಗಳು ನಿನಗೇಕೆ ಎಂದು ಕೇಳಿದಾಗ ಅವನೆಂದ, ಭೂಮಿಯಲ್ಲಿ ನಿನ್ನನ್ನು ಇಲ್ಲದಂತೆ ಮಾಡಿ ದುರ್ಯೋಧನನಿಗೆ ರಾಜ್ಯವನ್ನು ಕೊಡಲು ನಿನ್ನ ಆಯುಧ ನನಗೆ ಈಗ ಬೇಕು ಎಂದು. ಆಗ ನಾನು ಹೇಳಿದೆ, 'ಇನ್ನು ಮುಂದೆ ಹೀಗೆ ಮಾಡಬೇಡ' ಎಂದು.

ಅಶ್ವತ್ಥಾಮನೊಮ್ಮೆ ದ್ವಾರಕೆಯ ಬಳಿ ಸಮುದ್ರ ತೀರದಲ್ಲಿ ತನ್ನ ಮೂಲರೂಪನಾದ ಶಿವನನ್ನು ಧ್ಯಾನಿಸುತ್ತ ಕುಳಿತಿದ್ದಾಗ ಕೃಷ್ಣ ಬಂದು ಸ್ನೇಹದಿಂದ ಮಾತನಾಡಿಸಿದ. ಒಡನೆ ಅಶ್ವತ್ಥಾಮ ನಾನು ನಿನಗೆ ಬ್ರಹ್ಮಾಸ್ತ್ರ ಉಪದೇಶಿಸುತ್ತೇನೆ. ಅದಕ್ಕೆ ಪ್ರತಿಯಾಗಿ ನೀನು ನಿನ್ನ ಸುದರ್ಶನ ಚಕ್ರಾದಿ ಆಯುಧಗಳನ್ನು ನೀಡು ಎಂದ. ನನ್ನ ಆಯುಧಗಳನ್ನು ಇಂದಿನವರೆಗೆ ಇತರರು ಯಾರೂ ಎತ್ತಲು ಯತ್ನಿಸಲಿಲ್ಲ. ಅಣ್ಣ ಬಲರಾಮನಾಗಲಿ ಪ್ರಾಣ ಸ್ನೇಹಿತನಾದ ಅರ್ಜುನನಾಗಲಿ ಕೇಳಲಿಲ್ಲ. ನೀನು ಕೇಳಿದೆ, ಆಗಲಿ ಎತ್ತಲು ಯತ್ನಿಸು ಎಂದ ಶ್ರೀಕೃಷ್ಣ. ಅಶ್ವತ್ಥಾಮ ಚಕ್ರವನ್ನು ಅನಾದರದಿಂದ ಎಡಗೈಯಿಂದ ಎತ್ತಲು ಯತ್ನಿಸಿದ. ಬಲಗೈ ಹಾಕಿದ. ಎರಡೂ ಕೈಗಳಿಂದ. ಸರ್ವಪ್ರಯತ್ನ ಮಾಡಿಯೂ ಸೋತ, ನಾಚಿದ, ಪಶ್ಚಾತ್ತಾಪದಿಂದ ತನ್ನ ಅಭಿಪ್ರಾಯವೇನಿತ್ತೆಂದೂ ಹೇಳಿದ. ನಿನ್ನನ್ನೆ ಇಲ್ಲವಾಗಿಸಿ ರಾಜ್ಯವನ್ನು ದುರ್ಯೋಧನನಿಗೆ ಕೊಡಿಸಬೇಕೆಂದಿದ್ದೆ ಎಂದು. ಇನ್ನು ಮುಂದೆ ಇಂಥ ಆಲೋಚನೆ ಮಾಡಬೇಡವೆಂದ ಕೃಷ್ಣ.

ಹೀಗೆ ನನ್ನನ್ನು ನಾಶ ಮಾಡಲು ನನ್ನ ಆಯುಧಗಳನ್ನು ಬೇಡುವಂಥ ಅವಿವೇಕಿ ಅಶ್ವತ್ಥಾಮ ಎನ್ನುತ್ತಾನೆ ಕೃಷ್ಣ. -ವಾದಿರಾಜೀಯ

ತದಸ್ತ್ರಂ ಪ್ರಜ್ವಲದ್ ದೃಷ್ಟ್ವಾಪಾಂಡವತ್ವವಿಧಿತ್ಸಯಾ ।
ಧರಾಯಾಂ ದ್ರೌಣಿನಾ ಮುಕ್ತಂ ಕೃಷ್ಣೇನ ಪ್ರೇರಿತೋಽರ್ಜುನಃ ॥೧೬೨॥
ಸ್ವಸ್ತ್ಯಸ್ತು ದ್ರೋಣಪುತ್ರಾಯ ಭೂತೇಭ್ಯೋ ಮಹ್ಯಮೇವ ಚ ।
ಇತಿ ಬ್ರುವಂಸ್ತದೇವಾಸ್ತ್ರಮಸ್ತ್ರಶಾಂತ್ಯೈ ವ್ಯಸರ್ಜಯತ್ ॥೧೬೩॥

ಭೂಮಿಯಲ್ಲಿ ಪಾಂಡುವಿನ ಸಂತತಿಯನ್ನು ಇಲ್ಲದಂತೆ ಮಾಡುವ ಉದ್ದೇಶದಿಂದ ಅಶ್ವತ್ಥಾಮ ಪ್ರಯೋಗಿಸಿದ ಬ್ರಹ್ಮಾಸ್ತ್ರ ಜ್ವಲಿಸುವುದನ್ನು ಕಂಡು ಅರ್ಜುನ ಅಶ್ವತ್ಥಾಮನಿಗೂ ಎಲ್ಲ ಪ್ರಾಣಿಗಳಿಗೂ ನನಗೂ ಕ್ಷೇಮವಾಗಲಿ ಎಂದು ಹೇಳುತ್ತ ಬ್ರಹ್ಮಾಸ್ತ್ರ ಶಾಂತಿಗಾಗಿ ಬ್ರಹ್ಮಾಸ್ತ್ರವನ್ನೇ ಶ್ರೀಕೃಷ್ಣನ ಆದೇಶದಂತೆ ಪ್ರಯೋಗಿಸಿದ.

ಭೀಮನೊಬ್ಬ ಹೊರತು ಉಳಿದ ಪಾಂಡವರು ಯಾರೂ ಈಗ ಯುದ್ಧಮಾಡುತ್ತಿಲ್ಲ. ಅದರಿಂದ ಅವರು ಅಶ್ವತ್ಥಾಮನ ಬ್ರಹ್ಮಾಸ್ತ್ರಕ್ಕೆ ವಧ್ಯರಲ್ಲ. ಭೀಮ ಯುದ್ಧ ಮಾಡುತ್ತಿದ್ದರೂ ಅವನು ಸ್ವತಃ ಅವಧ್ಯ. ಹೀಗೆ ಬ್ರಹ್ಮಾಸ್ತ್ರಕ್ಕೆ ಪಧ್ಯರು ಯಾರೂ ಸಿಗದಿದ್ದರೆ ಅದು ಹಿಂತಿರುಗಿ ಪ್ರಯೋಗ ಮಾಡಿದ ಅಶ್ವತ್ಥಾಮನನ್ನೆ ವಧಿಸುತ್ತದೆ. ಅದಕ್ಕೇ ಕೃಪಾಳುವಾದ ಅರ್ಜುನ ಮೊದಲಿಗೇ ಅಶ್ವತ್ಥಾಮನಿಗೆ ಕ್ಷೇಮವಾಗಲಿ ಎನ್ನುತ್ತಾನೆ.[1]

ಅನಸ್ತ್ರಜ್ಞೇಷು ಮುಕ್ತಂ ತದ್ಧನ್ಯಾದಸ್ತ್ರಮುಚಂ ಯತಃ ।
ಗುರುಭಕ್ತ್ಯಾತತೋ ದ್ರೌಣೇಃ ಸ್ವಸ್ತ್ಯಸ್ತ್ವಿತ್ಯಾಹ ವಾಸವಿಃ ॥೧೬೪॥

ಅಸ್ತ್ರ ಜ್ಞಾನವಿಲ್ಲದವರ ಮೇಲೆ ಮತ್ತು ಅಸ್ತ್ರಾಭಿಮಾನಿಯ ಮೇಲೆ ಪ್ರಯೋಗಿಸಿದ ಬ್ರಹ್ಮಾಸ್ತ್ರ ಪ್ರಯೋಗಿಸಿದವನನ್ನೇ ಕೊಂದೀತು. ಅದರಿಂದಲೂ ಗುರುಭಕ್ತಿಯಿಂದ ಅಶ್ವತ್ಥಾಮನಿಗೆ ಕ್ಷೇಮವಾಗಲಿ ಎಂದ ಅರ್ಜುನ.

ಅರ್ಜುನ ಹೊರತು ಉಳಿದವರು ಬ್ರಹ್ಮಾಸ್ತ್ರ ಉಪದೇಶವಿಲ್ಲದವರು ಎಂಬುದೊಂದೇ ಕಾರಣವಲ್ಲ, ಭೀಮ ಅಸ್ತ್ರಾಭಿಮಾನಿ. ಭೀಮ ಹೊರತು ನಾಲ್ವರು ಪಾಂಡವರು ಯುದ್ಧಮಾಡುತ್ತಿಲ್ಲ. ಅವರಮೇಲೆ ಪ್ರಯೋಗಿಸಿದರೆ ಬ್ರಹ್ಮಾಸ್ತ್ರ ಹಿಂತಿರುಗಿ ಬಂದು ಪ್ರಯೋಗಿಸಿದವನನ್ನೇ ಸುಡುವ ಸಂಭವವಿದ್ದಿತು.

ತದಾಽಸ್ತ್ರಯೋಸ್ತು ಸಂಯೋಗೇ ಭೂತಾನಾಂ ಸಂಹೃತಿರ್ಭವೇತ್ ।
ಭೂತಾನಾಂ ಸ್ವಸ್ತಿರಪ್ಯತ್ರ ಕಾಂಕ್ಷಿತಾ ಕರುಣಾತ್ಮನಾ ॥೧೬೫॥

---

1. ಭೀಮವ್ಯತಿರಿಕ್ತಾನಾಂ ಚತುರ್ಣಾಮಯೋದ್ಧೃತ್ವಾತ್ ಭೀಮಸ್ಯಾಸ್ತ್ರಾಭಿಮಾನಿತ್ವೇನಾಸ್ತ್ರಪಾತಾಯೋಗಾಚ್ಚ ಅವಿಷಯೇ ಪ್ರಯುಕ್ತಮಿದಮಸ್ತ್ರಂ ದ್ರೌಣಿಮೇವ ಹನ್ಯಾದಿತಿ ಶಂಕಯಾ ಕೃಪಾಲುರರ್ಜುನಃ ಪ್ರಾಕ್ ಸ್ವಸ್ತ್ಯಸ್ತು ದ್ರೋಣಪುತ್ರಾಯೇತ್ಯುಕ್ತವಾನಿತಿ ಜ್ಞೇಯಂ।

–ವಾದಿರಾಜೀಯ

ಆ ಎರಡು ಬ್ರಹ್ಮಾಸ್ತ್ರಗಳು ಜೊತೆಗೆ ಸೇರಿದರೆ ಪ್ರಾಣಿಗಳ ನಾಶವಾದೀತು. ಅದರಿಂದ ಕೃಪಾಳುವಾದ ಅರ್ಜುನ ಪ್ರಾಣಿಗಳಿಗೂ ಕ್ಷೇಮವನ್ನು ಬಯಸಿದ.

ತಥಾಽಪ್ಯಸ್ತ್ರದ್ವಯಂ ಯುಕ್ತಂ ಭೂತಾನಾಂ ನಾಶಕೃದ್ ಧ್ರುವಮ್ ।
ತಸ್ಮಾನ್ನಿವಾರಯನ್ ಯೋಗಂ ತಯೋರ್ಮಧ್ಯೇಽಭವತ್ ಕ್ಷಣಾತ್ ॥೧೬೬॥

ಅರ್ಜುನ ಕ್ಷೇಮ ಪ್ರಾರ್ಥನೆ ಮಾಡಿದರೂ ಎರಡು ಬ್ರಹ್ಮಾಸ್ತ್ರಗಳು ಜೊತೆಗೆ ಸೇರಿದುವೆಂದರೆ ಅದು ಪ್ರಾಣಿಗಳಿಗೆ ನಾಶಕವಾಗುವುದು ನಿಶ್ಚಿತ. ಅದರಿಂದ ಅಸ್ತ್ರಗಳು ಜೊತೆ ಸೇರುವುದನ್ನು ತಡೆಯಲು ಅವುಗಳ ನಡುವೆ ವೇದವ್ಯಾಸರು ಕ್ಷಣದಲ್ಲಿ ಬಂದು ನಿಂತರು.

ನಿಸ್ಸೀಮಶಕ್ತಿಃ ಪರಮಃ ಕೃಷ್ಣಃ ಸತ್ಯವತೀಸುತಃ ।
ಸಂಸ್ಥಾಪ್ಯಾಸ್ತ್ರದ್ವಯಂ ದೂರೇ ತಾವಾಹ ಪುರುಷೋತ್ತಮಃ ॥೧೬೭॥

ಅನಂತಶಕ್ತಿ ಉಳ್ಳ ಸರ್ವೋತ್ತಮರಾದ ಪುರುಷೋತ್ತಮ ಶ್ರೀವೇದವ್ಯಾಸರು ಎರಡು ಅಸ್ತ್ರಗಳನ್ನೂ ದೂರದಲ್ಲಿ ನಿಲ್ಲಿಸಿ ಅಶ್ವತ್ಥಾಮ ಅರ್ಜುನರಿಗೆ ಹೀಗೆ ಹೇಳಿದರು.

ಸಂತಿ ಹ್ಯಸ್ತ್ರವಿದಃ ಪೂರ್ವಂ ಪ್ರಾಯಶ್ಚೈತನ್ನ ತೈಃ ಕೃತಮ್ ।
ಲೋಕೋಪದ್ರವಕೃತ್ ಕರ್ಮ ಸಂತಃ ಕುರ್ಯುಃ ಕಥಂ ಕ್ವಚಿತ್ ॥೧೬೮॥

ಬ್ರಹ್ಮಾಸ್ತ್ರ ಬಲ್ಲವರು ಪ್ರಾಯಃ ಹಿಂದೆಯೂ ಇದ್ದರು. ಈ ಕೆಲಸ ಅವರು ಯಾರೂ ಮಾಡಲಿಲ್ಲ. ಲೋಕಕ್ಕೆ ಉಪದ್ರವಕಾರಿಯಾದ ಇಂಥ ಕೆಲಸವನ್ನು ಸಜ್ಜನರು ಎಲ್ಲಿಯಾದರೂ ಹೇಗೆ ಮಾಡಬಲ್ಲರು?

ಇತ್ಯುಕ್ತೇ ಫಲ್ಗುನಃ ಪ್ರಾಹ ಮಯಾ ಮುಕ್ತಂ ಮಹಾಪದಿ ।
ಶಾಂತ್ಯರ್ಥಮೇವ ಚ ವಿಭೋ ಕ್ಷಂತವ್ಯಂ ಭವತಾ ತತಃ ॥೧೬೯॥

ವೇದವ್ಯಾಸರು ಹೀಗೆ ಹೇಳಿದಾಗ ಅರ್ಜುನನೆಂದ, 'ಪ್ರಭು, ಮಹಾ ಆಪತ್ತಿನಲ್ಲಿ ಶಾಂತಿಗಾಗಿ ನಾನು ಅಸ್ತ್ರವನ್ನು ಪ್ರಯೋಗಿಸಿದೆ. ಅದರಿಂದ ತಾವು ನನ್ನನ್ನು ಕ್ಷಮಿಸಬೇಕು.'

ದ್ರೌಣಿರಪ್ಯೇವಮೇವಾಽಹ ತೌ ವೇದಪತಿರಬ್ರವೀತ್ ।
ನಿವರ್ತ್ಯತಾಮಸ್ತ್ರಮಿತಿ ಶಕ್ರಸೂನುಸ್ತಥಾಽಕರೋತ್ ॥೧೭೦॥
ನಿವರ್ತನಾಪ್ರಭುಂ ದ್ರೌಣಿಂ ವಾಸುದೇವೋಽಭ್ಯಭಾಷತ ॥೧೭೧॥

ಅಶ್ವತ್ಥಾಮನೂ ಹೀಗೇ ಹೇಳಿದ. ಆಗ ವೇದವ್ಯಾಸರು ಇಬ್ಬರಿಗೂ ಹೇಳಿದರು. 'ನಿಮ್ಮ ನಿಮ್ಮ ಅಸ್ತ್ರಗಳನ್ನು ನೀವು ಹಿಂದೆ ತೆಗೆದುಕೊಳ್ಳಿರಿ.' ಒಡನೆ ಅರ್ಜುನ ಹಾಗೇ ಮಾಡಿದ. ಆದರೆ ಅಶ್ವತ್ಥಾಮ ಬ್ರಹ್ಮಾಸ್ತ್ರವನ್ನು ಹಿಂದೆ ತಿರುಗಿಸಲು ಅಸಮರ್ಥನಾಗಿದ್ದುದನ್ನು ಕಂಡು ಶ್ರೀಕೃಷ್ಣ ಹೇಳಿದ.

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ।
ನಿವರ್ತನೇ ತತಃ ಶಕ್ತೋ ನಾಯಂ ದ್ರೋಣಾತ್ಮಜೋಽಪಿ ಸನ್ ॥೧೭೨॥

ಅಬ್ರಹ್ಮಚರ್ಯಾದಿತ್ಯುಕ್ತೇ ವ್ಯಾಸೋ ದ್ರೌಣಿಮಭಾಷತ ।
ನಿವರ್ತನಾಸಮರ್ಥಸ್ತ್ವಂ ದೇಹಿ ನೈಸರ್ಗಿಕಂ ಮಣಿಮ್ ॥೧೭೩॥

'ಕ್ಷಾತ್ರ ತೇಜಉಳ್ಳ ಅರ್ಜುನ ಬಾಲ್ಯದಿಂದಲೂ ಬ್ರಹ್ಮಚಾರಿ. ಅದರಿಂದ ಬ್ರಹ್ಮಾಸ್ತ್ರವನ್ನು ಉಪಸಂಹರಿಸಲು ಶಕ್ತನಾಗಿದ್ದಾನೆ. ಅಶ್ವತ್ಥಾಮ ದ್ರೋಣಪುತ್ರನಾದರೂ ಬ್ರಹ್ಮಚರ್ಯವಿಲ್ಲದುದರಿಂದ ಅಸ್ತ್ರವನ್ನು ಹಿಂದಿರುಗಿಸಲು ಶಕ್ತನಾಗಲಿಲ್ಲ.'- ಶ್ರೀಕೃಷ್ಣ ಹೀಗೆ ಹೇಳಿದಾಗ ವೇದವ್ಯಾಸರು ಅಶ್ವತ್ಥಾಮನಿಗೆ ಹೇಳಿದರು. 'ಬ್ರಹ್ಮಾಸ್ತ್ರವನ್ನು ತಿರುಗಿಸಲು ಅಸಮರ್ಥನಾದ ನೀನು ನಿನ್ನಲ್ಲಿ ಸ್ವಾಭಾವಿಕವಾಗಿರುವ ಮಣಿಯನ್ನು ಕೊಡು.'

ದುರ್ಯೋಧನನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಲು ಅಶ್ವತ್ಥಾಮ ಒಪ್ಪಿದ್ದರಿಂದ ಅವನ ಬ್ರಹ್ಮಚರ್ಯ ಹಾಳಾಯಿತು. ಅರ್ಜುನ ಉಲೂಪಿ ಸಂಗ ಮಾಡಿದರೂ ಅದು ಹಾಳಾಗಲಿಲ್ಲ. ಏಕೆಂದರೆ ಅಶ್ವತ್ಥಾಮನಿಗೆ ಅಂಥ ಪ್ರಾರಬ್ಧವಿದ್ದಿತು. ಅರ್ಜುನನಿಗೆ ಇರಲಿಲ್ಲ. ಇಲ್ಲಿ ಮೊದಲನೆ ಸಾಲು ಮೂಲಭಾರತ ಶ್ಲೋಕದ್ದು (ಉದ್ಯೋ. ೫೮.೧)

ಜಿತಃ ಪ್ರಾಗೇವ ಭೀಮೇನ ಭೀಮಾಯೈವ ಮಹಾಪ್ರಭಮ್ ।
ಅಪಿ ಕೇವಲಯಾ ವಾಚಾ ಪಾರ್ಥೇಭ್ಯೋಽಸ್ತ್ರಂ ನಿವರ್ತಯ ॥೧೭೪॥
ಇತ್ಯುಕ್ತೋ ಮೂರ್ಧಜಂ ರತ್ನಂ ಜರಾಮರಣನಾಶನಮ್ ।
ಕ್ಲುತ್ತೃಟ್‌ಶ್ರಮಾಪಹಂ ದಿವ್ಯಗಂಧಂ ಧ್ವಾಂತಹರಂ ಶುಭಮ್ ॥೧೭೫॥
ಉತ್ಕೃತ್ಯ ಭೀಮಾಯ ದದೌ ಮುಕ್ತಾಃ ಪಂಚೈವ ಪಾಂಡವಾಃ ।
ಅಸ್ತ್ರಾದಿತಿ ತತೋ ವೇದಭರ್ತಾ ವಾಸವಿಮಬ್ರವೀತ್ ॥೧೭೬॥

'ಮೊದಲೇ ಭೀಮನಿಂದ ಪರಾಭವಗೊಂಡಿರುವಿ. ಅದರಿಂದ ಭೀಮನಿಗೇ ಮಹಾಪ್ರಕಾಶಉಳ್ಳ ಆ ಮಣಿಯನ್ನು ಕೊಡು. ಕೇವಲ ಮಾತಿನಿಂದಲಾದರೂ ಪಾಂಡವರಿಂದ ಆ ಅಸ್ತ್ರವನ್ನು ಹಿಂತಿರುಗಿಸು.' ಎಂದು ವೇದವ್ಯಾಸರು ಹೇಳಿದಾಗ ಅಶ್ವತ್ಥಾಮ ತಲೆಯಲ್ಲಿ ಬೆಳೆದಿದ್ದ ರತ್ನವನ್ನು ಕಿತ್ತು ಭೀಮನಿಗೆ ಕೊಟ್ಟ. ಆ ರತ್ನ ಜರಾಮರಣ ನಾಶಕ. ಹಸಿವು ಬಾಯಾರಿಕೆ ಆಯಾಸಗಳನ್ನು ಕಳೆಯುವುದು. ದಿವ್ಯ ಪರಿಮಳಯುಕ್ತ. ಕತ್ತಲನ್ನು ಓಡಿಸುವಂಥದ್ದು ಮತ್ತು ಮಂಗಳಕರ. 'ಐದು ಮಂದಿ ಪಾಂಡವರನ್ನು ಬಿಟ್ಟು ಬಿಡಲಿ ಅಸ್ತ್ರ' ಎಂದ. ಆಗ ವೇದವ್ಯಾಸರು ಅರ್ಜುನನಿಗೆ ಹೇಳಿದರು.

ತಾತ ಮುಕ್ತಂ ದ್ರೌಣಿನಾಽಪಿ ತ್ವಮೇವಾಸ್ತ್ರಂ ನಿವರ್ತಯ ।
ಇತ್ಯುಕ್ತಸ್ತಂ ಪ್ರಣಮ್ಯಾಽಶು ಸಂಜಹಾರಾರ್ಜುನೋಽಪಿ ತತ್ ॥೧೭೭॥

'ಅರ್ಜುನ, ಅಶ್ವತ್ಥಾಮ ಪ್ರಯೋಗಿಸಿದ ಅಸ್ತ್ರವನ್ನೂ ನೀನೆ ಉಪಸಂಹರಿಸು.' ಹೀಗೆ ವೇದವ್ಯಾಸರು ಹೇಳಿದಾಗ ಅರ್ಜುನ ಅವರನ್ನು ನಮಿಸಿ ಬೇಗನೆ ಆ ಅಸ್ತ್ರವನ್ನೂ ಉಪಸಂಹರಿಸಿದ.

ಪಾಂಡವ ಸಂತತಿಯ ಉಳಿವು

ಯಾದವೇಶೋಽಥ ಗೌತಮ್ಯಾಃ ಸುತಮಾಹೈಕಸಂತತೇಃ ।
ವಾಚಾ ನಿವರ್ತಯಾಸ್ತ್ರಂ ತೇ ಇತ್ಯುಕ್ತೋ ದ್ರೌಣಿರಬ್ರವೀತ್ ॥೧೭೮॥

ಶ್ರೀಕೃಷ್ಣ ಅಶ್ವತ್ಥಾಮನಿಗೆ ಹೇಳಿದ 'ಪಾಂಡವರ ಒಂದು ಸಂತತಿಯಿಂದಲೂ ನಿನ್ನ ಅಸ್ತ್ರವನ್ನು ಮಾತಿನಿಂದ ಹಿಂದಿರುಗಿಸು.' ಕೃಷ್ಣ ಹೀಗೆ ಹೇಳಿದಾಗ ಅಶ್ವತ್ಥಾಮನೆಂದ.

ಪಕ್ಷಪಾತಾದಿಚ್ಛಸಿ ತ್ವಂ ಭಾಗಿನೇಯಸ್ಯ ಸಂತತಿಮ್ ।
ತತ್ರೈವ ಪಾತಯಾಮ್ಯಸ್ತ್ರಮುತ್ತರಾಗರ್ಭಕೃಂತನೇ ॥೧೭೯॥

'ನೀನು ಪಕ್ಷಪಾತದಿಂದ ನಿನ್ನ ತಂಗಿಯ ಮಗನ ಸಂತತಿಯನ್ನು ಉಳಿಸಲು ಬಯಸುತ್ತಿರುವಿ. ನಾನು ಆ ಸಂತತಿಯ ಮೇಲೆಯೆ ಉತ್ತರೆಯ ಗರ್ಭವನ್ನು ನಾಶಪಡಿಸುವುದಕ್ಕಾಗಿ ಅಸ್ತ್ರವನ್ನು ಬೀಳಿಸುತ್ತೇನೆ.'

ವಾಸುದೇವಃ ಪುನಃ ಪ್ರಾಹ ಯದಿ ಹಂತವ್ಯ ಏವ ತೇ ।
ಗರ್ಭಸ್ಥೋಽಪಿ ನೈವಾಸ್ತ್ರಂ ಪಾತಯಾಸ್ಮಿನ್ ಕಥಂಚನ ॥೧೮೦॥

ಅಶ್ವತ್ಥಾಮ ಹೀಗೆ ಹೇಳಿದಾಗ ಶ್ರೀಕೃಷ್ಣನೆಂದ, 'ನಿನಗೆ ಆ ಗರ್ಭವನ್ನು ಕೊಲ್ಲಬೇಕೆಂದೇ ಸಂಕಲ್ಪವಿರಬಹುದು. ಆದರೂ ಅದರ ಮೇಲೆ ಅಸ್ತ್ರವನ್ನು ಸರ್ವಥಾ ಬೀಳಿಸಬೇಡ.

ಅಭಿಮನ್ಯೋರ್ಮೃತಸ್ಯೈವ ದೇಹೇ ಪಾತಯ ಮಾನದ ।
ಏವಂ ತ್ವದಸ್ತ್ರನಿಹತಂ ಗರ್ಭಮುಜ್ಜೀವಯಾಮ್ಯಹಮ್ ॥೧೮೧॥

'ಅಭಿಮಾನಿಯಾದ ಅಶ್ವತ್ಥಾಮನೆ, ನೀನು ಅಭಿಮನ್ಯುವಿನ ಮೃತದೇಹದಲ್ಲಿಯೆ ಅಸ್ತ್ರವನ್ನು ಬೀಳಿಸು. ನಿನ್ನ ಅಸ್ತ್ರದಿಂದ ಹೀಗೆ ಉತ್ತರೆಯ ಗರ್ಭ ಹತವಾದರೂ ನಾನು ಅದನ್ನು ತಿರುಗಿ ಬದುಕಿಸುತ್ತೇನೆ.'

'ಅಭಿಮನ್ಯುವಿನ ಮೃತ ಶರೀರಕ್ಕೆ ಅಸ್ತ್ರವನ್ನು ಬೀಳಿಸು' ಎನ್ನುವ ಶ್ರೀಕೃಷ್ಣನ ಮಾತು ಬಹಳ ಅರ್ಥಗರ್ಭಿತವಾಗಿದೆ- [1]ಅಭಿಮನ್ಯುವಿನ ಮೃತಶರೀರಕ್ಕೆ ಅಸ್ತ್ರ ಬೀಳಿಸುವುದು ಹೇಗೆ ವ್ಯರ್ಥವೋ ಹಾಗೇ ಉತ್ತರೆಯ ಗರ್ಭಕ್ಕೆ ಬೀಳಿಸಿದರೂ ವ್ಯರ್ಥವೆ ಆಗುತ್ತದೆ.

[2]ನೀನು ನನ್ನ ಶಕ್ತಿಯನ್ನು ಪರೀಕ್ಷಿಸಲು ಬಯಸುವಿಯಾದರೆ ಅಸ್ತ್ರವನ್ನು

---

1. ಗರ್ಭೇ ತ್ವದಸ್ತ್ರಪಾತನಂ ಏವಮೇವ, ಮೃತದೇಹೇಽಸ್ತ್ರಪಾತನವತ್ ವ್ಯರ್ಥಮೇವೇತಿ ಭಾವಃ।
-ಜನಾರ್ದನೀಯ

2. ಯದಿ ಮಚ್ಛಕ್ತಿಃ ಪರೀಕ್ಷಣೀಯೇತಿ ಮನ್ಯಸೇ ತರ್ಹಿ ಅಭಿಮನ್ಯೋಃ ಮೃತಸ್ಯ ದೇಹೇ ಪಾತಯ। ತಮುಜ್ಜೀವಯಿಷ್ಯಾಮೀತಿ ಭಾವೇನಾಹ ಅಭಿಮನ್ಯೋರಿತಿ। ಏವಂ ಅಭಿಮನ್ಯು ನಿದರ್ಶನೇನ ತ್ವದಸ್ತ್ರ ನಿಹತಮಪಿ ಪುನರುಜ್ಜೀವಯಿಷ್ಯಾಮಿ। -ಫಲಾರೀಯ

ಅಭಿಮನ್ಯುವಿನ ಮೃತಶರೀರಕ್ಕೇ ಬೀಳಿಸು. ನಾನು ಅವನನ್ನು ತಿರುಗಿ ಬದುಕಿಸಬಲ್ಲೆ. ಅದರಂತೆ ಉತ್ತರೆಯ ಗರ್ಭಕ್ಕೆ ಬೀಳಿಸಿದರೂ ಅದನ್ನು ಬದುಕಿಸಬಲ್ಲೆ.

[3]ಉತ್ತರಾಗರ್ಭವನ್ನು ನಾಶ ಮಾಡುತ್ತೇನೆ ಎಂದು ಪ್ರತಿಜ್ಞೆಯನ್ನು ನೀನು ಮಾಡಿರಬಹುದು. ಆದರೆ 'ಆತ್ಮಾ ವೈ ಪುತ್ರನಾಮಾಸಿ' ಎಂಬ ಶ್ರುತಿಯಂತೆ ಪಿತನ ದೇಹಕ್ಕೆ ಅಸ್ತ್ರ ಬೀಳಿಸಿದರೆ ಪುತ್ರನ ದೇಹಕ್ಕೆ ಬೀಳಿಸಿದಂತೆ ಆಗುವುದರಿಂದ ನಿನ್ನ ಪ್ರತಿಜ್ಞೆಗೆ ಭಂಗ ಬರಲಾರದು. ಅದರಿಂದ ಅಭಿಮನ್ಯುವಿನ ಶರೀರಕ್ಕೇ ಅಸ್ತ್ರವನ್ನು ಬೀಳಿಸು.

[4]ಪಿತನ ದೇಹಕ್ಕೆ ಅಸ್ತ್ರ ಬೀಳಿಸಿದರೆ ಪುತ್ರನ ದೇಹಕ್ಕೆ ಬೀಳಿಸಿದಂತೆಯೆ ಆಗುವುದರಿಂದ ಗರ್ಭವನ್ನು ಉದ್ದೇಶಿಸಿ ಅಭಿಮನ್ಯುವಿನ ಶರೀರಕ್ಕೆ ಬೀಳಿಸು. ಆಗ ಆ ಶರೀರ ಸುಟ್ಟುಹೋಗುತ್ತದೆ. ಅಸ್ತ್ರಪೂರ್ತಿ ವ್ಯರ್ಥವಾಗುವುದಿಲ್ಲ. ಉತ್ತರಾಗರ್ಭಕ್ಕೆ ಬೀಳಿಸಿದರೆ ಸರ್ವಥಾ ವ್ಯರ್ಥವಾಗುವುದು ನಿಶ್ಚಿತ. ಏಕೆಂದರೆ ಅದನ್ನು ನಾನು ಕಾಪಾಡುತ್ತೇನೆ.

ಪಾತಯೇ ಗರ್ಭ ಏವಾಹಮಿತ್ಯೂಚೇ ಗೌತಮೀಸುತಃ ।
ಅಥಾಽಹ ವಾಸುದೇವಸ್ತಮೀಷತ್ ಕ್ರುದ್ಧ ಇವ ಪ್ರಭುಃ ॥೧೮೨॥

'ಆದರೂ ಗರ್ಭದ ಮೇಲೆಯೇ ಅಸ್ತ್ರವನ್ನು ಬೀಳಿಸುತ್ತೇನೆ ಎಂದ ಅಶ್ವತ್ಥಾಮ. ಆಗ ಸರ್ವಶಕ್ತನಾದ ಶ್ರೀಕೃಷ್ಣ ಸ್ವಲ್ಪ ಕೋಪಗೊಂಡವನಂತೆ ತೋರಿಕೊಂಡು ಅವನಿಗೆ ನುಡಿದ.

'ಅಶ್ವತ್ಥಾಮ ಕೃಷ್ಣನಿಗೆ ಪರಮಪ್ರಿಯನಾದ ರುದ್ರನ ಅವತಾರ. ಅಸುರಾವೇಶದಿಂದ ವಿರೋಧಿಸುತ್ತಿದ್ದಾನಷ್ಟೆ, ಅದರಿಂದ ಕೃಷ್ಣನಿಗೆ ಸ್ವಲ್ಪ ಕೋಪವೆಂದರೆ ಅದು ತೋರಿಕೆಗೆಮಾತ್ರ. – ಭಲಾರೀಯ, ಜನಾರ್ದನೀಯ

ದುರ್ಮತೇ ಪಶ್ಯ ಮೇ ವೀರ್ಯಂ ಯತ್ ತೇ ಶಕ್ಯಂ ಕುರುಷ್ವ ತತ್ ।
ಉಜ್ಜೀವಯಾಮ್ಯಹಂ ಗರ್ಭಂ ಯತತಃ ಶಕ್ತಿತೋಽಪಿ ತೇ ॥೧೮೩॥

---

3. ಯದ್ಯಪಿ ತ್ವಯಾ ಗರ್ಭೋ ಹಂತವ್ಯತಯೋದ್ದಿಷ್ಟಃ। ತಥಾಪಿ ಗರ್ಭೇ ತ್ವಂ ನ ಪಾತಯ। ತರ್ಹಿ ಉತ್ತರಾಗರ್ಭೇ ಪಾತಯಾಮೀತಿ ಪ್ರತಿಜ್ಞಾಹಾನಿರಿತ್ಯತ ಆಹ ಅಭಿಮನ್ಯೋರಿತಿ। ಆತ್ಮಾ ವೈ ಪುತ್ರನಾಮಾಸೀತಿ ಶ್ರುತೇಃ ಪಿತೃ ದೇಹೇ ಪಾತಿತಂ ಪುತ್ರದೇಹ ಏವ ಪಾತಿತಂ ಭವೇದಿತಿ ಭಾವಃ।
–ತಾಮ್ರಪರ್ಣೀಯಂ

4. ಯದ್ವಾ ಗರ್ಭಸ್ಯ ಹಂತವ್ಯತ್ವೇಽಪಿ ಗರ್ಭೇ ತ್ವಂ ನ ಪಾತಯ। ಕಿಂತು ಗರ್ಭಮುದ್ದಿಶ್ಯಾಭಿಮನ್ಯು ದೇಹೇ ಪಾತಯ। ಅಸ್ತ್ರಪಾತಸ್ಯಾಮೋಘತ್ವಾತ್ ಅಭಿಮನ್ಯು ದೇಹೇ ಭಸ್ಮೀಭೂತೇ ಅಸ್ತ್ರಸ್ಯ ಸರ್ವಥಾ ನ ವೈಯರ್ಥ್ಯಂ। ಗರ್ಭೇ ಪಾತೇ ತು ವ್ಯರ್ಥಮೇವ ಸ್ಯಾದಿತಿ ಭಾವಃ। –ತಾಮ್ರಪರ್ಣೀಯ

'ದುರ್ಬುದ್ಧಿಯೆ, ನನ್ನ ಶಕ್ತಿಯನ್ನು ನೋಡು. ನಿನಗೇನು ಶಕ್ಯವೋ ಅದನ್ನು ನೀನು ಮಾಡು. ನೀನು ಶಕ್ತಿ ಇದ್ದಷ್ಟೂ ಗರ್ಭವನ್ನು ಕೊಲ್ಲಲು ಯತ್ನಿಸಿದರೂ ನಾನು ಬದುಕಿಸುತ್ತೇನೆ.

ಸಂತತಿರ್ವರ್ಷಸಾಹಸ್ರಂ ಪಾಂಡವಾನಾಂ ಭವೇದ್ ಭುವಿ ।
ಮತ್ಪಾಲಿತಾಂ ನ ಕಶ್ಚಿತ್ ತಾಂ ತಾವದ್ಧಂತುಂ ಕ್ಷಮಃ ಕ್ವಚಿತ್ ॥೧೮೪॥

'ಒಂದು ಸಾವಿರ ವರ್ಷಕಾಲ ಭೂಮಿಯಲ್ಲಿ ಪಾಂಡವರ ಸಂತತಿ ಇರುತ್ತದೆ. ಅಷ್ಟರವರೆಗೆ ನಾನು ರಕ್ಷಿಸುವ ಆ ಸಂತತಿಯನ್ನು ಯಾರೂ ಯಾವ ಕಾಲಕ್ಕೂ ನಾಶಮಾಡಲು ಶಕ್ತನಾಗುವುದಿಲ್ಲ.

ಬ್ರಹ್ಮಾಸ್ತ್ರವನ್ನೂ ಅಮೋಘವೆಂದು ತೋರಿಸಲು ಹುಟ್ಟುವಕಾಲದಲ್ಲಿ ಪರೀಕ್ಷಿತ್ ಅಸ್ತ್ರತೇಜಸ್ಸಿನಿಂದ ಮೃತನಾಗಿ ಹುಟ್ಟುವಂತೆ ಮಾಡಿ, ತಿರುಗಿ ಬದುಕಿಸುತ್ತೇನೆ. ಬಳಿಕ ಕ್ಷೇಮಕ ರಾಜನ ಪರ್ಯಂತ ಈ ಪಾಂಡವ ಸಂತತಿ ಒಂದು ಸಾವಿರ ವರ್ಷಕಾಲ ಭೂಮಿಯಲ್ಲಿ ಕ್ಷೇಮವಾಗಿ ಇರುವಂತೆಯೂ ನೋಡಿಕೊಳ್ಳುತ್ತೇನೆ ಎನ್ನುತ್ತಾನೆ ಶ್ರೀಕೃಷ್ಣ.

ಜಾನಾಮಿ ತೇ ಮತಿಂ ದುಷ್ಟಾಂ ಜಿಘಾಂಸೋಃ ಪಾರ್ಥಸಂತತಿಮ್ ।
ಚಿಕೀರ್ಷೋರ್ಧರ್ತರಾಷ್ಟ್ರಸ್ಯ ತಂತುಂ ಭೂಯಃ ಸುದುಷ್ಕರಮ್ ೧೮೫ ॥

'ನಿನ್ನ ದುಷ್ಟ ಸಂಕಲ್ಪವನ್ನು ನಾನು ಬಲ್ಲೆ. ಪಾಂಡವ ಸಂತತಿಯನ್ನು ನಾಶಪಡಿಸಲು ಬಯಸುತ್ತಿರುವಿ ಮತ್ತು ದುರ್ಯೋಧನನ ಸಂತತಿಯನ್ನು ಪುನಃ ಬೆಳೆಸಲು ಬಯಸುತ್ತಿರುವಿ. ಆದರೆ ಅದು ಅತ್ಯಂತ ದುಷ್ಕರ.

ಮದಾಜ್ಞಯಾ ಸಾ ವಿಫಲಾ ಭವಿತ್ರೀ
ವಾಂಛಾ ಮುಮುಕ್ಷಾ ವಿಮುಖಸ್ಯ ವಿಷ್ಣೋಃ ।
ಯಥೈವ ತೇನೈವ ನರಾಧಿರೂಢೋ
ಗಮ್ಯಸ್ತವ ಸ್ಯಾನ್ನಚ ಭೂಮಿಭಾಗಃ ॥೧೮೬॥

'ವಿಷ್ಣುವಿಗೆ ವಿಮುಖನಾದವನ ಮೋಕ್ಷೇಚ್ಛೆ ವಿಫಲವಾಗುವಂತೆ ನಿನ್ನ ಈ ಬಯಕೆಯೂ ನನ್ನ ಸಂಕಲ್ಪದಿಂದ ವಿಫಲವಾಗುವುದು. ಅದರಿಂದಲೆ ನೀನು ನರಾರೂಢನಾಗುವಿ ಹೊರತು ಭೂಭಾಗ ಯಾವುದೂ ನಿನಗೆ ಗಮ್ಯವಾಗುವುದಿಲ್ಲ.

ನೀನು ಮನುಷ್ಯರ ನಡುವೆ ಓಡಾಡುವಂತಿಲ್ಲ. [1]ಸಾವಿರಾರು ಜನರು ಸೇರುವಲ್ಲಿ ಕೋಲಾಹಲ ರೂಪವಾಗಿ ಶಬ್ದಮಾಡುತ್ತ ಅವರ ತಲೆಯ ಮೇಲೆ ಹತ್ತಿ ನಿಲ್ಲುವೆ ಹೊರತು ಎಲ್ಲಿಯೂ ನೆಲದ ಮೇಲೆ ಇರುವುದಿಲ್ಲ. ಅದರಿಂದ

1. ಸಹಸ್ರಂ ಜನಾ ಯತ್ರ ತಿಷ್ಠಂತಿ ತತ್ರ ಕೋಲಾಹಲ ರೂಪೇಣ ನಾದಂ ಕುರ್ವನ್ ದ್ರೌಣಿಸ್ತೇಷಾಂ ಶಿರಾಂಸ್ಯಾರೂಢಸ್ತಿಷ್ಠತೀತಿ ಪೌರಾಣಿಕೀ ಕಥಾ। -ವಾದಿರಾಜೀಯ

ದುರ್ಯೋಧನನ ಸಂತತಿಯನ್ನು ಬೆಳೆಸಲಾರೆ. ಪರೀಕ್ಷಿತನನ್ನು ನಾನು ಬದುಕಿಸುವುದರಿಂದ ಪಾಂಡವ ಸಂತತಿಯನ್ನೂ ನಾಶಮಾಡಲಾರೆ ಎನ್ನುತ್ತದೆ ವಾದಿರಾಜೀಯ. 'ಮನುಷ್ಯರು ವಾಸ ಮಾಡುವ ಭೂಭಾಗ ನಿನಗೆ ಅಗಮ್ಯವೆನಿಸುತ್ತದೆ' ಎಂದು ಬೇರೆ ವ್ಯಾಖ್ಯಾನಗಳು ಹೇಳುತ್ತವೆ.

ದುರ್ಗಂಧಯುಕ್ತೋ ವ್ರಣಸಂಚಿತಾಂಗಃ
ಸದಾ ಚರಃ ಸ್ಯಾ ವಿಪಿನೇಷು ಮಂದ।
ಯಾವದ್ ಭುವಿ ಸ್ಯಾದಿಹ ಪಾರ್ಥತಂತು-
ರ್ವ್ಯಾಸೋಽಪಿ ತಂ ಪ್ರಾಹ ತಥೇತಿ ದೇವಃ ॥೧೮೭॥

'ಅಜ್ಜನೆ, ನೀನು ಭೂಮಿಯ ಮೇಲೆ ಪಾಂಡವ ಸಂತತಿ ಇರುವಷ್ಟು ಕಾಲ ಮೈಯಲ್ಲಿ ಹುಣ್ಣಿಂದ ಕೂಡಿ ದುರ್ಗಂಧಯುಕ್ತನಾಗಿ ಕಾಡುಗಳಲ್ಲಿ ಸದಾ ಸಂಚರಿಸುವವನಾಗುವಿ.' ಹೀಗೆ ಶ್ರೀಕೃಷ್ಣ ಹೇಳಿದಾಗ ವೇದವ್ಯಾಸರೂ 'ಹಾಗೇ ಆಗಲಿ' ಎಂದರು.

ರೂಪದ್ವಯೇನಾಪಿ ಹರೇಸ್ತಥೋಕ್ತೋ
ಜಗಾದ ಕಾಲೀತನಯಂ ಸ ಕೃಷ್ಣಮ್ ।
ತ್ವಯಾ ಸಹ ಸ್ಯಾನ್ಮಮ ಸಂಗಮೋ ವಿಭೋ
ಯಥೇಷ್ಟತಃ ಸ್ಯಾನ್ನಚ ಮೇಽತ್ರ ವಿಘ್ನಃ ॥೧೮೮॥

ಶ್ರೀಹರಿಯ ವೇದವ್ಯಾಸ ಕೃಷ್ಣ ಎಂಬ ಎರಡೂ ರೂಪಗಳು ಹೀಗೆ ಹೇಳಿದಾಗ ಅಶ್ವತ್ಥಾಮ ವೇದವ್ಯಾಸರಿಗೆ ಹೇಳಿದ, 'ಪ್ರಭು ನಿನ್ನೊಡನೆ ನನಗೆ ಬಯಸಿದಾಗಲೆಲ್ಲ ಸಮಾಗಮವಾಗುತ್ತಿರಲಿ. ಅದಕ್ಕೆ ವಿಘ್ನಬಾರದಿರಲಿ.'

'ಕಾಲೀ' ಎಂದು ಸತ್ಯವತಿಗೆ ಇನ್ನೊಂದು ಹೆಸರು. ಅದರಿಂದ ಕಾಲೀತನಯರೆಂದರೆ ಸತ್ಯವತೀಸುತರಾದ ವೇದವ್ಯಾಸರು.

[1]ಶ್ರೀಕೃಷ್ಣನ ಶಾಪ ಅಪರಿಹಾರ್ಯವಾದ್ದರಿಂದ ಸಾವಿರ ವರ್ಷಗಳಾದ ಬಳಿಕವೆ ತನಗೆ ವೇದವ್ಯಾಸರೊಡನೆ ಸದಾ ಸಮಾಗಮವಾಗುತ್ತಿರಲಿ ಎಂದು ಅಶ್ವತ್ಥಾಮ ಬೇಡುತ್ತಿದ್ದಾನೆ.

ಭಾಗವತ ವಿರೋಧ ಪರಿಹಾರ

ಇತ್ಯುಕ್ತ ಓಮಿತಿ ಪ್ರಾಹ ಭಗವಾನ್ ಬಾದರಾಯಣಃ।
ತಂ ಪ್ರಣಮ್ಯ ಯಯೌ ಸೋಽಪಿ ಸ್ವಪ್ನದೃಷ್ಟಮನುಸ್ಮರನ್ ॥೧೮೯॥

1. ಕೃಷ್ಣ ಶಾಪಸ್ಯಾಪರಿಹಾರ್ಯತ್ವಾತ್ ಸಹಸ್ರಾಬ್ದಾನಂತರಂ ತ್ವಯಾ ಸಹ ಸಂಗಮಃ ಸ್ಯಾದಿತ್ಯರ್ಥಃ।
-ವಾದಿರಾಜೀಯ

ಸ್ವಪ್ನೇ ಹಿ ದ್ರೌಪದೇಯಾನಾಂ ವಧೋ ದೃಷ್ಟೋ ತ್ಮನಾ ನಿಶಿ ।
ಅರ್ಜುನೇನ ಪ್ರತಿಜ್ಞಾನಂ ದ್ರೌಪದ್ಯೈ ಸ್ವವಧಂ ಪ್ರತಿ ॥೧೯೦॥
ನಿಬಧ್ಯಾನಯನಂ ಚೈವ ತೇನೈವ ಶಿಬಿರಂ ಪ್ರತಿ ।
ಮುಂಚೇತಿ ದ್ರೌಪದೀವಾಕ್ಯಂ ನೇತಿ ಭೀಮವಚಸ್ತಥಾ ॥೧೯೧॥
ಕೃಷ್ಣವಾಕ್ಯಾನ್ಮಣಿಂ ಹೃತ್ವಾ ದೇಶಾನ್ನಿರ್ಯಾತನಂ ತಥಾ ।
ಇತ್ಯಾದಿ ಸ್ವಪ್ನದೃಷ್ಟಂ ಯತ್ ಪ್ರಾಯಃ ಸತ್ಯಮಭೂದಿತಿ ।
ಚಿಂತಯನ್ ಪ್ರಯಯೌ ದಾವಂ ದ್ರೌಣಿಃ ಶಸ್ತ್ರಭೃತಾಂ ವರಃ ॥೧೯೨॥

ಅಶ್ವತ್ಥಾಮ ಹೀಗೆ ಹೇಳಿದಾಗ ಭಗವಾನ್ ಬಾದರಾಯಣರು 'ಆಗಲಿ' ಎಂದರು. ಅಶ್ವತ್ಥಾಮ ಅವರನ್ನು ನಮಿಸಿ ಹೊರಟು ಹೋದ. ಹೋಗುವಾಗ ತಾನು ಸ್ವಪ್ನದಲ್ಲಿ ಕಂಡುದನ್ನು ನೆನೆದುಕೊಂಡ. ಸ್ವಪ್ನದಲ್ಲಿ ಅಶ್ವತ್ಥಾಮ ತಾನು ರಾತ್ರಿ ಕಾಲದಲ್ಲಿ ದ್ರೌಪದೀ ಪುತ್ರರನ್ನು ಕೊಂದಂತೆ, ಅದಕ್ಕೆ ಅರ್ಜುನ ತನ್ನನ್ನು ಕೊಲ್ಲಲು ದ್ರೌಪದಿಯ ಮುಂದೆ ಪ್ರತಿಜ್ಞೆ ಮಾಡಿದಂತೆ ತನ್ನನ್ನು ಬಂಧಿಸಿ ಶಿಬಿರಕ್ಕೆ ಒಯ್ದಂತೆ, ಅಲ್ಲಿ ದ್ರೌಪದಿ ತನ್ನನ್ನು ಬಿಟ್ಟುಬಿಡಲು ಹೇಳಿದಂತೆ, ಬಿಡಬೇಡವೆಂದು ಭೀಮ ಹೇಳಿದಂತೆ, ಕೃಷ್ಣನ ಮಾತನ್ನು ಕೇಳಿ ಮಣಿಯನ್ನು ಅಪಹರಿಸಿ ತನ್ನನ್ನು ದೇಶದಿಂದ ಗಡಿಪಾರು ಮಾಡಿದಂತೆ ಇತ್ಯಾದಿ ಸ್ವಪ್ನದಲ್ಲಿ ತಾನು ಏನೇನು ನೋಡಿದೆನೋ ಪ್ರಾಯಃ ಅದೆಲ್ಲ ನಿಜವಾಯಿತೆಂದು ಚಿಂತಿಸುತ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅಶ್ವತ್ಥಾಮ ಅರಣ್ಯಕ್ಕೆ ನಡೆದ.

ಈ ಸ್ವಪ್ನ ವೃತ್ತಾಂತ ಭಾಗವತದಲ್ಲಿ ನಿಜವೆಂಬಂತೆ ವರ್ಣಿತವಾಗಿದೆ. ನಿಜವೆಂದೇ ಗ್ರಹಿಸಿದರೆ ಭಾರತವಿರೋಧ. ಸ್ಕಂದಪುರಾಣ ಭಾಗವತೋಕ್ತ ವೃತ್ತಾಂತವನ್ನು ಸ್ವಪ್ನವೆಂದು ಹೇಳಿ ವಿರೋಧವನ್ನು ಪರಿಹರಿಸಿದೆ. ಎಂದು ಭಾಗವತ ತಾತ್ಪರ್ಯದಲ್ಲಿ ಸ್ಪಷ್ಟವಿದೆ. (ಪ್ರಥಮ ಸ್ಕಂಧ ಸಪ್ತಮಾಧ್ಯಾಯ) ನಿರ್ಣಯವೂ ಸ್ಪಷ್ಟವಾಗಿ ಹೇಳುತ್ತಿದೆ. -ವರದರಾಜೀಯ

ಸ ಕೃಷ್ಣೋಕ್ತಮಪಿ ಪ್ರಾಪ್ಯ ಬಾದರಾಯಣಶಿಷ್ಯತಾಮ್ ।
ಪ್ರಾಪ್ಯೋತ್ತರದ್ವಾಪರೇ ಚ ವೇದಾನ್ ಸಂವಿಭಜಿಷ್ಯತಿ ॥೧೯೩॥

ಒಂದು ಸಾವಿರ ವರ್ಷಕಾಲವಿರುವ ಶ್ರೀಕೃಷ್ಣನ ಶಾಪವನ್ನು ಪಡೆದು ಬಳಿಕ ಬಾದರಾಯಣರ ಶಿಷ್ಯತ್ವವನ್ನೂ ಹೊಂದಿ ಮುಂದಿನ ದ್ವಾಪರದಲ್ಲಿ ವೇದಗಳನ್ನು ವಿಭಾಗ ಮಾಡುತ್ತಾನೆ ಅಶ್ವತ್ಥಾಮ.

ತತಃ ಸಪ್ತಋಷಿಭೂರ್ತ್ವಾ ಪಾರಾಶರ್ಯಪ್ರಸಾದತಃ ।
ಏಕೀಭಾವಂ ಸ್ವರೂಪೇಣ ಯಾಸ್ಯತ್ಯಚ್ಯುತನಿಷ್ಠಯಾ ॥೧೯೪॥

ಬಳಿಕ ವೇದವ್ಯಾಸರ ಅನುಗ್ರಹದಿಂದ ಅಶ್ವತ್ಥಾಮ ಸಪ್ತರ್ಷಿ ಎಂಬ ಋಷಿಯಾಗಿ ಹರಿಭಕ್ತಿಯ ಬಲದಿಂದ ತನ್ನದೆ ಆದ ರುದ್ರ ಸ್ವರೂಪದಲ್ಲಿ ಏಕೀಭಾವವನ್ನು ಹೊಂದುತ್ತಾನೆ.

ಕೃಪೋಽಥ ಪಾಂಡವಾನ್ ಪ್ರಾಪ್ಯ ಗೌರವಾತ್ ಪೂಜಿತಶ್ಚ ತೈಃ ।
ಅಭೂದಾಚಾರ್ಯ ಏವಾಸೌ ರಾಜ್ಞಾಂ ತತ್ತಂತುಭಾವಿನಾಮ್ ॥೧೯೫॥

ಕೃಪ ಪಾಂಡವರ ಬಳಿಗೆ ಬಂದು ಗೌರವದಿಂದ ಸತ್ಕೃತನಾಗಿ ಅವರ ವಂಶದಲ್ಲಿ ಹುಟ್ಟುವ ಕ್ಷೇಮಕ ಪರ್ಯಂತ ರಾಜರಿಗೆ ಆಚಾರ್ಯನೇ ಆದ.

ಬಾದರಾಯಣಶಿಷ್ಯತ್ವಂ ಪುನಃ ಪ್ರಾಪ್ಯ ಭಜನ್ನಮುಮ್ ।
ಸಾಕಂ ಸ್ವಭಾಗಿನೇಯೇನ ಭಾವ್ಯೇಕೋ ಮುನಿಸಪ್ತಕೇ ॥೧೯೬॥
ಕೃತವರ್ಮಾ ದ್ವಾರವತೀಂ ಯಯೌ ಕೃಷ್ಣಾನುಮೋದಿತಃ ॥೧೯೭॥

ಪಾಂಡವರ ವಂಶ ಅಳಿದಾಗ ಪುನಃ ಬಾದರಾಯಣರ ಶಿಷ್ಯತ್ವವನ್ನು ಹೊಂದಿ ಅವರನ್ನು ಸೇವಿಸಿ ಕೃಪ ಮುಂದೆ ತಾನೂ ಅಶ್ವತ್ಥಾಮನೊಂದಿಗೆ ಸಪ್ತರ್ಷಿಗಳಲ್ಲಿ ಒಬ್ಬನೆನಿಸುತ್ತಾನೆ. ಕೃತವರ್ಮ ಕೃಷ್ಣನ ಅನುಮತಿಯಿಂದ ದ್ವಾರಕೆಗೆ ತೆರಳಿದ.

'ಅಶ್ವತ್ಥಾಮ ಬ್ರಾಹ್ಮಣ್ಯವನ್ನು ಮೊದಲೇ ಕಳೆದುಕೊಂಡಿದ್ದ. ಕ್ಷತ್ರಿಯತ್ವವು ಆತನಿಗೆ ಎಂದೂ ಸಾಧ್ಯವಾಗಲಿಲ್ಲ. ಮರಣಕ್ಕಿಂತಲೂ ದುಃಸಹವಾದ ಚಿರಂಜೀವಿತ್ವವನ್ನು ಆತ ಅನುಭವಿಸಬೇಕಾಯಿತು. ಆತ್ಮವಿಸ್ಮೃತಿಯ ಇಂಥ ಅವಿಸ್ಮರಣೀಯ ಉದಾಹರಣೆ ಇನ್ನೊಂದಿಲ್ಲ' (ಯುಗಾಂತ)- ಹೀಗೆ ಹೇಳುವವರಿಗೆ ನಿರ್ಣಯ ಅಶ್ವತ್ಥಾಮನೆಂಥ ಕ್ಷತ್ರಿಯನನ್ನೂ ಮೀರಿಸುವ ಶಸ್ತ್ರಧಾರಿಯಾಗಿ ಮೆರೆದ, ಬಳಿಕ ಚಿರಂಜೀವಿಯಾಗಿ ವೇದವಿಭಾಗಮಾಡಿ ಬ್ರಾಹ್ಮಣ್ಯವನ್ನೆ ಉದ್ಧರಿಸುವ ಸಪ್ತರ್ಷಿಯಾದನೆಂದು ಮುಂತಾಗಿ ಹೇಳಿದೆ. ಮಹಾಭಾರತದಲ್ಲಿಯೂ (ವಿರಾಟ ೫೧.೯) ಭೀಷ್ಮ ಹೇಳುತ್ತಾನೆ-

ಚತ್ವಾರ ಏಕತೋ ವೇದಾಃ ಕ್ಷಾತ್ರಮೇಕತ್ರ ದೃಶ್ಯತೇ
ನೈತತ್ ಸಮಸ್ತಮುಭಯಂ ಕಸ್ಮಿಂಶ್ಚಿದನು ಶುಶ್ರುಮ
ಅನ್ಯತ್ರ ಭಾರತಾಚಾರ್ಯಾತ್ ಸಪುತ್ರಾದಿತಿ ಮೇ ಮತಿಃ॥

'ಕೆಲವರಲ್ಲಿ ನಾಲ್ಕು ವೇದಗಳು ಕಂಡಿದೆ. ಕೆಲವರಲ್ಲಿ ಕ್ಷಾತ್ರ ತೇಜ ಕಂಡಿದೆ. ಎರಡೂ ಪೂರ್ಣವಾಗಿ ಒಬ್ಬನಲ್ಲಿರುವುದನ್ನು ನಾವು ಎಲ್ಲಿಯೂ ಕೇಳಿಲ್ಲ. ದ್ರೋಣನಲ್ಲಿ ಮತ್ತು ಅಶ್ವತ್ಥಾಮನಲ್ಲಿ ಮಾತ್ರ ಅವು ಪೂರ್ಣವಾಗಿ ಕಂಡು ಬರುತ್ತಿವೆ' ಅದರಿಂದ ಅಶ್ವತ್ಥಾಮ ಬ್ರಾಹ್ಮಣ್ಯವನ್ನು ಕಳೆದುಕೊಂಡಿದ್ದನೆನ್ನುವುದು ಭಾರತಕ್ಕೇ ವಿರುದ್ಧ.

ಕೃಷ್ಣಾಯೈ ತಂ ಮಣಿಂ ದತ್ವಾ ಭೀಮಸ್ತಾಂ ಪರ್ಯಸಾಂತ್ವಯತ್ ।
ಏಕೋಪಾ ಭೀಮವಾಕ್ಯೇನ ರಾಜ್ಞೀ ಸಾ ಚ ಮಣಿಂ ದದೌ ॥೧೯೮॥

ರಾಜಾಹೇ೯ ಹಿ ಮಣೌ ದತ್ತೇ ಮಹ್ಯಂ ಭೀಮೇನ ಲೌಕಿಕಾಃ ।
ಸ್ತ್ರೀಪಕ್ಷಪಾತಂ ರಾಜಾ ಚ ಶಂಕೇಯುರ್ಮಾರುತೇರಿತಿ ॥ ೧೯೯ ॥
ಮಣಿಂ ರಾಜ್ಞೇ ದದೌ ಕೃಷ್ಣಾ ಭರ್ತೃಪ್ರಿಯಹಿತೇ ರತಾ ।
ಸೋಽಪ್ಯಾಬಧ್ಯ ಮಣಿಂ ಮೂರ್ಧ್ನಿ ರೇಜೇ ರಾಜಾ ಗವಾಮಿವ ॥ ೨೦೦॥

ಭೀಮ ಅಶ್ವತ್ಥಾಮನ ಶಿರೋರತ್ನವನ್ನು ದ್ರೌಪದಿಗೆ ಕೊಟ್ಟು ಅವಳನ್ನು ಸಂತೈಸಿದ. ದ್ರೌಪದಿ ಭೀಮನ ಮಾತಿನಿಂದ ಕೋಪವನ್ನು ಬಿಟ್ಟಳು. ಅವಳು ರಾಜನಿಗೇ ಯೋಗ್ಯವಾದ ರತ್ನವನ್ನು ಭೀಮ ತನಗೆ ಕೊಟ್ಟಾಗ ಲೌಕಿಕರೂ ಧರ್ಮರಾಜನೂ ಭೀಮನಲ್ಲಿ ಸ್ತ್ರೀಪಕ್ಷಪಾತ ಬುದ್ಧಿ ಇದೆ ಎಂದು ತಿಳಿಯಬಹುದೆಂದುಕೊಂಡು ಆ ರತ್ನವನ್ನು ಧರ್ಮರಾಜನಿಗೆ ನೀಡಿದಳು. ಏಕೆಂದರೆ ಅವಳು ಪತಿಗಳಿಗೆ ಪ್ರಿಯವನ್ನೂ ಹಿತವನ್ನೂ ಮಾಡುವವಳು. ಧರ್ಮರಾಜ ರತ್ನವನ್ನು ತಲೆಯ ಮೇಲೆ ಧರಿಸಿ ಸೂರ್ಯನಂತೆ ಬೆಳಗಿದ.

ವೇದೇಶ್ವರೇಣಾಪಿ ಯದೂತ್ತಮೇನ
ಕೃಷ್ಣೇನ ಯುಕ್ತಾಸ್ತತ ಆಶು ಪಾರ್ಥಾಃ ।
ಯಯುಃ ಸಾರ್ಯಾ ನಿಜರಾಜಧಾನೀಂ
ಹತ್ವೈವ ಸಂತೋಽಂತರರೀನ್ ಸ್ವರಾಜ್ಯಮ್ ॥ ೨೦೧ ॥

ಸಜ್ಜನರು ಕಾಮಕ್ರೋಧಾದಿ ಮನದೊಳಗಿನ ಶತ್ರುಗಳನ್ನು ನಾಶಪಡಿಸಿ ಮೋಕ್ಷಮಂದಿರವನ್ನು ಸೇರುವಂತೆ ಪಾಂಡವರು ತಮ್ಮ ಮನೆಯೊಳಗಿನ ಶತ್ರುಗಳನ್ನು ಸಂಹರಿಸಿ ವೇದವ್ಯಾಸರಿಂದಲೂ ಕೃಷ್ಣನಿಂದಲೂ ಕೂಡಿ ಪತ್ನಿಯರೊಂದಿಗೆ ಬೇಗನೆ ತಮ್ಮ ರಾಜಧಾನಿಯಾದ ಹಸ್ತಿನಾವತಿಯನ್ನು ಸೇರಿದರು.

ಸ್ತ್ರೀಪರ್ವ - ಭೀಮಪ್ರತಿಮೆ ಪುಡಿಯಾಯಿತು

ಯುಧಿಷ್ಠಿರಸ್ಯಾನು ವಿಚಿತ್ರವೀರ್ಯ
ಸುತಸ್ಯ ಪಾದಾವಭಿವಂದಮಾನಮ್ ।
ಆಕೃಷ್ಯ ಭೀಮಂ ಪರಮೇಶ್ವರೋಽಯೋ
ಮಯಾಕೃತಿಂ ಧಾತ್ ಪುರತೋ ನೃಪಸ್ಯ ॥ ೨೦೨ ॥

ಯುಧಿಷ್ಠಿರನ ಅನಂತರ ಭೀಮ ಬಂದು ಧೃತರಾಷ್ಟ್ರನಿಗೆ ಪಾದಾಭಿವಂದನೆ ಮಾಡುವಾಗ ಶ್ರೀಕೃಷ್ಣ ಅವನನ್ನು ಈಚೆಗೆ ಸೆಳೆದು ಅವನ ಸ್ಥಾನದಲ್ಲಿ ಕಬ್ಬಿಣದ ಪ್ರತಿಮೆಯನ್ನು ಧೃತರಾಷ್ಟ್ರನ ಮುಂದೆ ನಿಲ್ಲಿಸಿದ.

ಭೀಮಾಕೃತಿಂ ತಾಂ ಸ ಸುಯೋಧನೇನ
ಕಾರಾಪಿತಾಮಭ್ಯಸನೇ ಗದಾಯಾಃ ।
ಆಶ್ಲಿಷ್ಯ ಚೂರ್ಣೀಕೃತವಾನಸೃಗ್ ವಮನ್
ಹಾ ತಾತ ಭೀಮೇತಿ ವದನ್ ಪಪಾತ ॥ ೨೦೩ ॥

ದುರ್ಯೋಧನ ಗದಾಭ್ಯಾಸಕ್ಕಾಗಿ ಮಾಡಿಸಿದ್ದ ಆ ಭೀಮಪ್ರತಿಮೆಯನ್ನು ಧೃತರಾಷ್ಟ್ರ ಬಿಗಿಯಾಗಿ ಅಪ್ಪಿ ಪುಡಿ ಮಾಡಿದ. ತಾನೂ ನೆತ್ತರು ಕಾರುತ್ತ 'ಹಾ ಮಗು, ಭೀಮ! ಸತ್ತೆಯ?' ಎಂದು ಹೇಳುತ್ತ ಬಿದ್ದ.

ಭೀಮನನ್ನು ಮುಂದೆ ಕೊಲ್ಲಲು ಬೇಕಾಗುವಂಥ ಗದಾಯುದ್ಧ ನೈಪುಣ್ಯವನ್ನು ಹೊಂದುವ ಉದ್ದೇಶದಿಂದ ಅಭ್ಯಾಸಕ್ಕಾಗಿ ದುರ್ಯೋಧನ ಭೀಮನ ಕಬ್ಬಿಣದ ಪ್ರತಿಮೆಯನ್ನೇ ಮಾಡಿಸಿ ಹದಿಮೂರು ವರ್ಷಗಳ ಕಾಲ ನಿರಂತರವಾಗಿ ಅದಕ್ಕೇ ಗದೆಯಿಂದ ಹೊಡೆಯುತ್ತಿದ್ದ-

ಏತೇನ ಹಿ ಕೃತಾ ಯೋಧ್ಯಾ ವರ್ಷಾಣೀಹ ತ್ರಯೋದಶ
ಆಯಸೇ ಪುರುಷೇ ರಾಜನ್ ಭೀಮಸೇನ ಜಿಘಾಂಸಯಾ॥

ಧೃತರಾಷ್ಟ್ರನಿಗೆ ಭೀಮನ ಮೇಲೆ ಸೇಡುತೀರಿಸಿಕೊಳ್ಳುವ ದುಷ್ಟಭಾವನೆ ಇರುವುದನ್ನು ಶ್ರೀಕೃಷ್ಣ ಲೋಕಕ್ಕೆ ತಿಳಿಸುವುದಕ್ಕಾಗಿ ಭೀಮನನ್ನು ಈಚೆಗೆ ಎಳೆದು ಪ್ರತಿಮೆಯನ್ನು ಮುಂದಿಟ್ಟ. ಇದನ್ನು ತಿಳಿಯದ ಕುರುಡ ಧೃತರಾಷ್ಟ್ರ ಹತ್ತುಸಾವಿರ ಆನೆಗಳ ಬಲದಿಂದ ಕೂಡಿದ ಬಾಹುಗಳಿಂದ ಬಿಗಿಯಾಗಿ ಅದನ್ನು ಅಪ್ಪಿ ಪುಡಿಮಾಡಿ ಭೀಮ ಸತ್ತನೆಂದೇ ತಿಳಿದು ಸಂತೋಷದಿಂದ ತೋರಿಕೆಗೆ 'ಹಾ! ಭೀಮ! ಸತ್ತೆಯ? ಎನ್ನುತ್ತ ರಕ್ತಕಾರಿ ನೆಲದಲ್ಲಿ ಬಿದ್ದ. ಇದು ಆತನಲ್ಲಿ ಇನ್ನೂ ಪ್ರಬಲವಾಗಿದ್ದ ಕಲ್ಯಾವೇಶದ ಫಲ.

'ಕಾರಿತಾಂ' ಎನ್ನದೆ 'ಕಾರಾಪಿತಾಂ' ಎಂದು ಅಧಿಕಾಕ್ಷರ ಪ್ರಯೋಗ ಮಾಡಿದುದು ದುರ್ಯೋಧನನಿಗೆ ಭೀಮನ ಬಗ್ಗೆ ಇದ್ದ ದ್ವೇಷ ಬಹಳ ಅಧಿಕವಾಗಿತ್ತೆಂದು ಸೂಚಿಸುವುದಕ್ಕಾಗಿ.[1]

ತಮಾಹ ಕೃಷ್ಣೋ ನ ಹತೋಽದ್ಯ ಭೀಮೋ
ನಚ ತ್ವಯಾಽನ್ಯೈರಪಿ ಶಕ್ಯತೇಽಸೌ ।
ಹಂತುಂ ಸ್ವಬುದ್ಧಿಃ ಪ್ರಥಿತಾ ತ್ವಯಾಽದ್ಯ
ಪಾಪಾ ಹಿ ತೇ ಬುದ್ಧಿರದ್ಯಾಪಿ ರಾಜನ್ ॥೨೦೪॥

ಆಗ ಧೃತರಾಷ್ಟ್ರನಿಗೆ ಶ್ರೀಕೃಷ್ಣನೆಂದ, 'ಭೀಮನೀಗ ಹತನಾಗಿಲ್ಲ. ನಿನಗಾಗಲಿ ಬೇರೆಯವರಿಗಾಗಲಿ ಅವನನ್ನು ಕೊಲ್ಲಲು ಶಕ್ಯವೂ ಇಲ್ಲ. ಆದರೆ ರಾಜನೆ, ನೀನೀಗ ನಿನ್ನ ಹಾಳು ಬುದ್ಧಿಯನ್ನೆ ತೋರಿಕೊಂಡೆ. ಇನ್ನೂ ನಿನ್ನದು ಪಾಪ ಬುದ್ಧಿಯೆ!'

ಸ್ವಬುದ್ಧಿದೋಷಾದತಿಪಾಪಶೀಲ
ಪುತ್ರಾಖ್ಯಪಾಪಾನಿ ವಿವರ್ಧಯಿತ್ವಾ ।

---

1. ಕಾರಾಪಿತಾಮಿತ್ಯತ್ರ ಆಕಾರ ಪಕಾರಲಕ್ಷಣಾಧಿಕವರ್ಣ ದ್ವಯ ಪ್ರಯೋಗಃ ಭೀಮಾಕೃತಿ ಕಾರಯಿತೃತ್ವ ಕಾರಣೇಭೂತೋ ದುರ್ಯೋಧನ ನಿಷ್ಠೋ ಭೀಮದ್ವೇಷಃ ಲಾಕ್ಷಾಗೃಹಾದಿಕಾರಯಿತೃತ್ವ ಕಾರಣೇಭೂತ ದ್ವೇಷಾಪೇಕ್ಷಯಾಧಿಕ ಇತಿ ಜ್ಞಾಪನಾರ್ಥಃ। –ಸತ್ಯಾಭಿನವೀಯ

ನೀತೋ ವಶಂ ತೈಃ ಫಲಮದ್ಯ ಭುಂಜನ್
ನ ಕ್ರೋಧಿತುಂ ಚಾರ್ಹಸಿ ಭೀಮಸೇನೇ ॥೨೦೫॥

ನಿನ್ನ ಈ ಬುದ್ಧಿ ದೋಷದಿಂದಲೆ ಅತಿಪಾಪಶೀಲ ಪುತ್ರರೂಪಿ ಪಾಪಗಳನ್ನೆ ಬೆಳೆಸಿ, ಅವರಿಗೆ ವಶನಾಗಿ, ಪಾಪ ಫಲವನ್ನೇ ಉಣ್ಣುತ್ತಿರುವ ನೀನು ಇನ್ನಾದರೂ ಭೀಮಸೇನನಲ್ಲಿ ಕೋಪ ಮಾಡದಿರು.

ಇತ್ಯುಕ್ತೇ ಶಾಂತಬುದ್ಧೆ್ಯವ ರಾಜ್ಞಾಽಽಹೂತೋ ವೃಕೋದರಃ ।
ಅಭ್ಯವಂದತ ತತ್ಪಾದಾವನುಜಾದ್ಯಾಶ್ಚ ತಸ್ಯ ಯೇ ॥೨೦೬॥

ಕೃಷ್ಣ ಹೀಗೆ ಹೇಳಿದಾಗ ಧೃತರಾಷ್ಟ್ರ ಶಾಂತಬುದ್ಧಿಯಿಂದಲೆ ಭೀಮನನ್ನು ಕರೆದ. ಅವನು ಬಂದು ಧೃತರಾಷ್ಟ್ರನ ಪಾದಗಳನ್ನು ವಂದಿಸಿದ. ಬಳಿಕ ಅವನ ತಮ್ಮಂದಿರು ಮುಂತಾದವರೂ ಅಭಿವಾದನ ಮಾಡಿದರು.

ವಜ್ರಾಚ್ಚ ದೃಢದೇಹತ್ವಾದವಿಕಾರೇ ವೃಕೋದರೇ ।
ನ ದೋಷೋ ವಿವೃತೋಽಸ್ಯ ಸ್ಯಾದಿತಿ ಕೃಷ್ಣೇನ ವಂಚಿತಃ ॥೨೦೭॥

ಭೀಮಸೇನ ವಜ್ರಕ್ಕಿಂತಲೂ ಗಟ್ಟಿಯಾದ ಶರೀರದವನು. ಅವನ ಅಂಗಗಳಲ್ಲಿ ಯಾವ ವಿಕಾರಕ್ಕೂ ಆಸ್ಪದವಿಲ್ಲ. ಆದರೂ ಭೀಮನನ್ನು ಧೃತರಾಷ್ಟ್ರ ಅಪ್ಪಿದ್ದರೆ ಧೃತರಾಷ್ಟ್ರನ ದುಷ್ಟಬುದ್ಧಿ ಪ್ರಕಟವಾಗುತ್ತಿದ್ದಿಲ್ಲ. ಅದರಿಂದ ಕೃಷ್ಣ ಹೀಗೆ ವಂಚಿಸಿದ್ದ.

ಗಾಂಧಾರಿಯ ಕೋಪ

ಸರ್ವಾನಾಶ್ಲಿಷ್ಯ ಚ ಪ್ರೇಮ್ಣಾ ಯುಯೋಜ ನೃಪ ಆಶಿಷಃ ।
ಕುಲನಾಶಕರಃ ಪಾಪಃ ಶಾಪಯೋಗ್ಯಸ್ತವ ಹ್ಯಹಮ್ ॥೨೦೮॥
ಇತ್ಯುಕ್ತೆ್ಯವ ಪ್ರಣಮತೋ ಗಾಂಧಾರೀ ಸುಪದಾಂಗುಲೀಃ ।
ದದರ್ಶ ಧರ್ಮರಾಜಸ್ಯ ಪಟ್ಟಾಂತೇನ ಪ್ರಕೋಪಿತಾ ॥೨೦೯॥
ತಸ್ಯಾಃ ಕ್ರೋಧಾಗ್ನಿನಿರ್ದಗ್ಧನಖಿಃ ಸ ಕುನಖೀಽಭವತ್ ॥೨೧೦॥

ಧೃತರಾಷ್ಟ್ರ ಪ್ರೀತಿಯಿಂದ ಎಲ್ಲರನ್ನೂ ಆಲಿಂಗಿಸಿ ಆಶೀರ್ವಾದ ಮಾಡಿದ. ಆದರೆ ಧರ್ಮರಾಜ 'ನಾನು ಕುಲನಾಶಕರನಾದ ಪಾಪಿ, ನಿನ್ನ ಶಾಪಕ್ಕೆ ಅರ್ಹನಾಗಿದ್ದೇನೆ' ಎಂದು ಹೇಳಿ ಗಾಂಧಾರಿಗೆ ನಮಿಸಿದಾಗ ಅವಳು ಕುಪಿತಳಾಗಿ ಕಣ್ಣಿಗೆ ಕಟ್ಟಿದ ಬಟ್ಟೆಯ ಅಂಚಿನಿಂದ ಧರ್ಮರಾಜನ ಸುಂದರವಾದ ಪಾದದ ಬೆರಳುಗಳನ್ನು ಕಂಡಳು. ಆಗ ಅವಳ ಕ್ರೋಧಾಗ್ನಿಯಿಂದ ಬೆರಳ ಉಗುರುಗಳು ಸುಟ್ಟು ಅವನು ಹಾಳುಗುರಿನವನೆನಿಸಿದ.

ವಂದಮಾನಂ ಪುನರ್ಭೀಮಮಾಹ ಸಾ ಕ್ರೋಧವಿಹ್ವಲಾ ।
ಅಧರ್ಮತಃ ಕಥಂ ಭೀಮ ಸುತಂ ಮೇ ತ್ವಂ ನಿಜಘ್ನಿವಾನ್ ॥೨೧೧॥

ಭೀಮ ಗಾಂಧಾರಿಯನ್ನು ನಮಿಸುವಾಗ ಅವಳು ಪುನಃ ಕ್ರೋಧ ಪರವಶಳಾಗಿ 'ಭೀಮ! ನೀನು ನನ್ನ ಮಗನನ್ನು ಅಧರ್ಮದಿಂದ ಹೇಗೆ ಕೊಂದೆ?' ಎಂದಳು.

ಇತ್ಯುಕ್ತೋಽಸ್ಯಾಃ ಶಮಯಿತುಂ ಕ್ರೋಧಮಗ್ರೇ ವೃಕೋದರಃ ।
ಪ್ರಾಹ ನ ಪ್ರಾಣಸಂದೇಹೇ ಪಾಪಂ ಸ್ಯಾತ್ ಪಾಪಿನೋ ವಧೇ ॥ ೨೧೨ ॥

ಗಾಂಧಾರಿ ಹೀಗೆ ಹೇಳಿದಾಗ ಭೀಮ ಅವಳ ಕೋಪವನ್ನು ತಗ್ಗಿಸಲು ಮೊದಲಿಗೆ ಹೀಗೆ ಹೇಳಿದ. 'ಪ್ರಾಣಾಪಾಯ ಸಂದೇಹ ಬಂದಾಗ ಪಾಪಿಯನ್ನು ಅಧರ್ಮದಿಂದ ಕೊಂದರೂ ಪಾಪವಿಲ್ಲ.'

ಇತ್ಯುಕ್ತ್ವಾ ತಾಂ ಪುನಃ ಪ್ರಾಹ ಪ್ರತಿಜ್ಞಾಹಾನಿಮಂತರಾ ।
ನ ಮೇಽಸ್ತಿ ಪ್ರಾಣಸಂದೇಹ ಇತಿ ಜಾನನ್ ವೃಕೋದರಃ ॥ ೨೧೩॥
ಯಥಾಪ್ರತಿಜ್ಞಂ ಭ್ರಾತೃವ್ಯಾನ್ ರಣೇ ಮಮ ನಿಜಘ್ನುಷಃ ।
ಕ್ವಾಧರ್ಮಃ ಕ್ಷತ್ರಜಾತೇಸ್ತು ತದ್ಧಾನೌ ಜೀವಿತಂ ನಹಿ ॥ ೨೧೪॥

ಹೀಗೆ ಹೇಳಿ, ಪ್ರತಿಜ್ಞಾಹಾನಿ ಪ್ರಸಕ್ತಿ ಹೊರತು ತನಗೆ ಪ್ರಾಣಾಪಾಯ ಸಂದೇಹವೆಂಬುದಿಲ್ಲವೆಂದು ತಿಳಿದಿರುವ ಭೀಮ ತಿರುಗಿ ಗಾಂಧಾರಿಗೆ ಹೇಳಿದ, 'ಪ್ರತಿಜ್ಞಾನುಸಾರವಾಗಿ ಯುದ್ಧದಲ್ಲಿ ಶತ್ರುಗಳನ್ನು ಕೊಂದಿರುವ ಕ್ಷತ್ರಿಯ ಜಾತಿಯವನಾದ ನನಗೆ ಅಧರ್ಮ ಯಾವುದು? ಪ್ರತಿಜ್ಞಾಹಾನಿಯಾದರೆ ಕ್ಷತ್ರಿಯನಿಗೆ ಬದುಕೇ ಇಲ್ಲ ತಾನೆ?

ಪಾಪಾ ನ ಶುದ್ಧಧರ್ಮೇಣ ಹಂತವ್ಯಾ ಇತಿ ಚ ಶ್ರುತಿಃ ।
ಅನ್ಯವತ್ ಪಾಪಹನನಂ ಪಾಪಾಯೇತ್ಯಾಹ ಹಿ ಶ್ರುತಿಃ ।
ಅತೋಽಸುರಾನ್ ನೈಕೃತಿಕಾನ್ ನಿಕೃತ್ಯಾ ಘ್ನಂತಿ ದೇವತಾಃ ॥ ೨೧೫॥

ಪಾಪಿಗಳನ್ನು ಶುದ್ಧ ಧರ್ಮದಿಂದ ಕೊಲ್ಲಕೂಡದೆಂದು ಶ್ರುತಿಯೂ ಹೇಳಿದೆ. ಅನ್ಯರನ್ನು ಧರ್ಮದಿಂದ ಕೊಲ್ಲುವಂತೆ ಪಾಪಿಗಳನ್ನು ಧರ್ಮದಿಂದ ಕೊಲ್ಲುವುದು ಪಾಪಕರವಾಗುತ್ತದೆ ಎಂದೂ ಶ್ರುತಿ ಹೇಳಿದೆ. ಅದರಿಂದಲೆ ವಂಚಕರಾದ ಅಸುರರನ್ನು ದೇವತೆಗಳು ವಂಚನೆಯಿಂದಲೆ ಕೊಲ್ಲುತ್ತಾರೆ.

ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಮ್ ।
ಇತಿ ಶ್ರುತಿರ್ಹಿ ಪರಮಾ ಪಠ್ಯತೇ ಪೈಂಗಿಭಿಃ ಸದಾ ॥ ೨೧೬ ॥

ವಂಚಕನನ್ನು ವಂಚನೆಯಿಂದ ಕೊಲ್ಲಬೇಕು. ಧಾರ್ಮಿಕರನ್ನು ವಂಚನೆಯಿಂದ ಕೊಲ್ಲಬಾರದು ಎಂಬ ಶ್ರುತಿಯನ್ನು ಪೈಂಗಿಶಾಖೆಯವರು ನಿತ್ಯ ಪಠಿಸುತ್ತಾರೆ.

ಇತ್ಯುಕ್ತಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಮ್ ।
ಪೀತಂ ನರೇಣೈವ ಸತಾ ನ ಪೀತಮಿತಿ ಸೋಽಬ್ರವೀತ್ ॥ ೨೧೭॥

ಭೀಮ ಹೀಗೆ ಹೇಳಿದಾಗ ಗಾಂಧಾರಿ ಪುನಃ ಕೇಳಿದಳು. 'ನೀನು ಮನುಷ್ಯನಾಗಿ ಮನುಷ್ಯನ ರಕ್ತವನ್ನು ಹೇಗೆ ಕುಡಿದೆ? ಆಗ ಭೀಮನೆಂದ, ನಾನು ಕುಡಿಯಲಿಲ್ಲ.

ದಂತಾಂತರಂ ನ ಮೇ ಪ್ರಾಪ ಶೋಣಿತಂ ತತ್ ಸುತಸ್ಯ ತೇ ।
ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂ ಚ ತತ್ ಕೃತಮ್ ॥ ೨೧೮ ॥

ನಿನ್ನ ಮಗನ ರಕ್ತ ನನ್ನ ಹಲ್ಲುಗಳಿಂದಾಚೆ ಒಳಗೆ ಹೋಗಲೆ ಇಲ್ಲ. ಪ್ರತಿಜ್ಞಾಪಾಲನೆಗಾಗಿ, ನಿನ್ನ ಮಗನ ಕುಕೃತ್ಯಗಳಿಗೆ ಶಿಕ್ಷೆ ಮಾಡುವುದಕ್ಕಾಗಿ ಕುಡಿದಂತೆ ತೋರಿಕೊಂಡೆ.

ಭೀಷಣಾಯ ಚ ಶತ್ರೂಣಾಂ ಪೀತವಚ್ಚ ಪ್ರದರ್ಶಿತಮ್ ।
ವೇದದೃಷ್ಟಶ್ಚ ಧರ್ಮೋ ಽಯಮತಿಪಾಪಜನಂ ಪ್ರತಿ ॥ ೨೧೯ ॥

ಶತ್ರುಗಳನ್ನು ಹೆದರಿಸುವುದಕ್ಕಾಗಿಯೂ ಕುಡಿದಂತೆ ತೋರಿಕೊಂಡೆ. ಪಾಪಿಗಳ ಬಗ್ಗೆ ವೇದದಲ್ಲಿ ಇಂಥ ಶಿಕ್ಷಾ ವಿಧಾನ ಕಂಡಿದೆ.

ಪತಿವ್ರತೆಯ ಕೇಶಪಾಶವನ್ನು ಸೆಳೆಯುವುದು ವಸ್ತ್ರಾಪಹಾರವನ್ನು ಮಾಡುವುದು ಮುಂತಾದ ಮಹಾಪಾಪಕ್ಕೆ ಮಹಾಶಿಕ್ಷೆಯನ್ನೆ ಮಾಡಬೇಕು. ಸೌಮ್ಯ ಶಿಕ್ಷೆ ನೀಡಿದರೆ ಪಾಪ ಬರುತ್ತದೆ. ಉಗ್ರ ಶಿಕ್ಷೆ ನೀಡುವುದು ವೇದದಲ್ಲಿ ಕಂಡಿದೆ. ಉದಾ: ಅನಧಿಕಾರಿಗಳು ವೇದಾಧ್ಯಯನ ಮಾಡಿದರೆ ಶಿಕ್ಷೆ 'ಅಧ್ಯಯನೇ ಜಿಹ್ವಾಚ್ಛೇದಃ' 'ಅರ್ಥಾವಧಾರಣೇ ಹೃದಯ ವಿದಾರಣಂ' ಇತ್ಯಾದಿ[1]

ಇತ್ಯುಕ್ತೋವಾಚ ನೈವಾಂಧದ್ವಯಸ್ಯಾಸ್ಯ ವೃಕೋದರ ।
ಘ್ನತಾ ಪುತ್ರಶತಂ ಯಷ್ಟಿಮಾತ್ರಂ ಚೋರ್ವರಿತಂ ತ್ವಯಾ ॥ ೨೨೦ ॥

ಭೀಮ ಹೀಗೆ ಹೇಳಿದಾಗ ಗಾಂಧಾರಿ ನುಡಿದಳು, 'ಭೀಮ, ನೀನು ನೂರೂ ಮಕ್ಕಳನ್ನು ಕೊಂದು ಈ ಅಂಧ ದಂಪತಿಗಳಿಗೆ ಒಂದು ಊರುಗೋಲನ್ನಾದರೂ ಬಿಡಲಿಲ್ಲ!'

ತಾಮಾಹ ಭೀಮಃ ಪಾಪಿಷ್ಠಾ ವಧಯೋಗ್ಯಾಪರಾಧಿನಃ ।
ಸರ್ವೇ ಹತಾ ಇತಿ ಪುನಃ ಸಾಽಽಹ ಯೇನಾಕೃತಸ್ತವ ।
ಅಪರಾಧಃ ಸ ಏಕೋಽಪಿ ಕಿಂ ನಾಸ್ತೀತ್ಯವದತ್ ಸ ತಾಮ್ ॥ ೨೨೧ ॥
ಸರ್ವೈಃ ಸಮೇತೈಃ ಕೃಷ್ಣಸ್ಯ ಬಂಧನಾಯ ವಿನಿಶ್ಚಿತಮ್ ॥ ೨೨೨ ॥

ಭೀಮ ಗಾಂಧಾರಿಗೆ ಹೇಳಿದ, 'ನೂರು ಮಂದಿಯೂ ಪಾಪಿಷ್ಠರು. ವಧಶಿಕ್ಷೆಗೆ ಅರ್ಹವಾದ ಅಪರಾಧ ಗೈದವರು. ಅದರಿಂದ ಎಲ್ಲರನ್ನೂ ಕೊಂದೆ.' ಗಾಂಧಾರಿ ಕೇಳಿದಳು

1. ಪ್ರತಿಕರ್ತುಂ ದುಃಶಾಸನೇನ ಕೃತ ಪತಿವ್ರತಾಕೇಶಾಕರ್ಷಣ ವಸ್ತ್ರಾಪಹಾರಾದಿ ಮಹಾಪಾಪಸ್ಯ ಪ್ರತ್ಯಪಕಾರಂ ಕರ್ತುಂ। ಮಹಾಪಾಪಸ್ಯ ಮಹಾಶಿಕ್ಷಾ ಕರ್ತವ್ಯಾ। ಅನ್ಯಥಾ ದೋಷ ಇತಿಭಾವಃ। ವೇದದೃಷ್ಟಶ್ಚ ಧರ್ಮೋ ಽಯಮಿತಿ ವದತಾ ಅಧ್ಯಯನೇ ಜಿಹ್ವಾಚ್ಛೇದಃ, ಅರ್ಥಾವಧಾರಣೇ ಹೃದಯ ವಿದಾರಣಂ ಇತ್ಯಾದಿ ಶ್ರುತಿಂ ಸ್ಮಾರಯತಿ। –ವಾದಿರಾಜೀಯ

'ನಿನಗೆ ಅಪರಾಧ ಮಾಡದಿದ್ದವನು ಒಬ್ಬನೂ ಇರಲಿಲ್ಲವೆ? ಭೀಮನೆಂದ, 'ಎಲ್ಲರೂ ಸೇರಿ ಕೃಷ್ಣನನ್ನು ಸೆರೆ ಹಿಡಿಯಲು ನಿಶ್ಚೈಸಿದ್ದರು'.

ಅನ್ಯಾನಿ ಚ ಸುಪಾಪಾನಿ ಕೃತಾನ್ಯತ್ರ ಪುರಾಽಪಿಚ ।
ವಾಸುದೇವಂ ಸಭಾಸಂಸ್ಥಂ ಬ್ರುವಾಣಂ ಧರ್ಮಸಂಹಿತಮ್ ॥ ೨೨೩ ॥
ಪುನಃಪುನರವಜ್ಞಾಯ ಯಾಂತಂ ದುರ್ಯೋಧನಂ ಬಹಿಃ ।
ಸರ್ವೇಽನ್ವಗಚ್ಛನ್ನಿತ್ಯಾದೀನ್ಯಭಿಪ್ರೇತ್ಯ ವೃಕೋದರಃ ॥ ೨೨೪ ॥
ನೈಕೋಽಪ್ಯನಪರಾಧೀ ಮೇ ಸ್ವಯಂ ತಾನನುಶಿಕ್ಷಿತುಮ್ ।
ಅಸಮರ್ಥಾ ಮಯಿ ಕ್ರೋಧಂ ಕಿಂ ಕರೋಷಿ ನಿರರ್ಥಕಮ್ ॥ ೨೨೫ ॥

ಈ ಯುದ್ಧದಲ್ಲಿಯೂ ಹಿಂದೆ ಬಾಲ್ಯದಿಂದ ತೊಡಗಿಯೂ ಎಲ್ಲರೂ ಬೇರೆ ಮಹಾಪಾಪಗಳನ್ನೂ ಮಾಡಿದ್ದಾರೆ. ಶ್ರೀಕೃಷ್ಣ ಸಭೆಯಲ್ಲಿ ಕುಳಿತು ಧರ್ಮಶಾಸ್ತ್ರಪ್ರಮೇಯ ಗರ್ಭಿತವಾಗಿ ಮಾತನಾಡುತ್ತಿದ್ದಾಗ ದುರ್ಯೋಧನ ಮತ್ತೆಮತ್ತೆ ಅವನನ್ನು ಅವಮಾನಿಸಿ ಸಭಾತ್ಯಾಗ ಮಾಡಿದ. ಆಗ ಎಲ್ಲರೂ ಅವನನ್ನು ಹಿಂಬಾಲಿಸಿದ್ದರು. ಇವೇ ಮೊದಲಾದ ಅಪರಾಧಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಭೀಮನೆಂದ, 'ನನಗೆ ಅಪರಾಧ ಮಾಡದವನೊಬ್ಬನೂ ಇರಲಿಲ್ಲ. ಸ್ವತಃ ನೀನು ಅವರನ್ನು ತಿದ್ದಲು ಅಶಕ್ತಳಾಗಿದ್ದು ನನ್ನಲ್ಲಿ ವ್ಯರ್ಥವಾಗಿ ಏಕೆ ಕೋಪ ಮಾಡುತ್ತಿ?

ಇತ್ಯುಕ್ತ್ವಾ ಸಾಽಭವತ್ ತೂಷ್ಣೀಂ ಕ್ರಮಾತ್ ಸರ್ವೈಶ್ಚ ಪಾಂಡವೈಃ ।
ವಂದಿತಾ ವ್ಯಾಸವಾಕ್ಯಾಚ್ಚ ಕಿಂಚಿಚ್ಛಾಂತಾಽಥ ಸಾಽಭವತ್ ॥ ೨೨೬ ॥

ಭೀಮ ಹೀಗೆ ಹೇಳಿದಾಗ ಗಾಂಧಾರಿ ಸುಮ್ಮನಾದಳು. ಕ್ರಮವಾಗಿ ಎಲ್ಲ ಪಾಂಡವರೂ ಅವಳನ್ನು ವಂದಿಸಿದರು. ಮತ್ತು ವೇದವ್ಯಾಸರ ಉಪದೇಶದಿಂದಲೂ ಅವಳು ಸ್ವಲ್ಪ ಶಾಂತಳಾದಳು.

ಗಾಂಧಾರಿಗೆ ದಿವ್ಯದೃಷ್ಟಿ

ತಸ್ಯಾ ಯಾಶ್ಚ ಸ್ನುಷಾಃ ಸರ್ವಾಸ್ತಾಭಿಃ ಸಹ ಪುರಸ್ಕೃತಾಮ್ ।
ಕೃತ್ವಾ ತಂ ಧೃತರಾಷ್ಟ್ರಂ ಚ ವಿದುರಾದೀಂಶ್ಚ ಸರ್ವಶಃ ॥ ೨೨೭॥
ಪಾಂಡವಾಃ ಪ್ರಧನಸ್ಥಾನಂ ಸಭಾರ್ಯಾಃ ಪೃಥಯಾ ಸಹ ।
ಕೃಷ್ಣಾಭ್ಯಾಂ ಚ ಯಯುಸ್ತತ್ರ ಗಾಂಧಾರ್ಯಾಸ್ತಪಸೋ ಬಲಮ್ ।೨೨೮॥
ಜಾನನ್ ಪಾಂಡವರಕ್ಷಾರ್ಥಂ ಚಿಕೀರ್ಷುಸ್ತತ್ತಪೋವ್ಯಯಮ್ ।
ವೇದೇಶ್ವರೋ ದದೌ ದಿವ್ಯಂ ಚಕ್ಷುಃ ಸತ್ಯವತೀಸುತಃ ॥ ೨೨೯ ॥

ಗಾಂಧಾರಿಯನ್ನು ಅವಳ ಎಲ್ಲ ಸೊಸೆಯರೊಂದಿಗೆ ಮುಂದೆ ಮಾಡಿಕೊಂಡು, ಹಾಗೇ ಧೃತರಾಷ್ಟ್ರನನ್ನೂ ವಿದುರ ಮುಂತಾದವರನ್ನೂ ಎಲ್ಲರನ್ನೂ ಮುಂದೆ ಮಾಡಿಕೊಂಡು

ಪಾಂಡವರು ಪತ್ನೀ ಸಮೇತರಾಗಿ ಕುಂತಿ ಮತ್ತು ವೇದವ್ಯಾಸ ಕೃಷ್ಣರೊಂದಿಗೆ ಒಡಗೂಡಿ ರಣಭೂಮಿಗೆ ಹೋದರು. ಅಲ್ಲಿ ಗಾಂಧಾರಿಯ ತಪೋಬಲವನ್ನು ಅರಿತಿದ್ದ ವೇದವ್ಯಾಸರು ಪಾಂಡವರ ರಕ್ಷಣೆಗಾಗಿ ಅವಳ ತಪಸ್ಸನ್ನು ವ್ಯಯ ಮಾಡಲು ಬಯಸಿ ಅವಳಿಗೆ ದಿವ್ಯ ಚಕ್ಷುಸ್ಸನ್ನು ನೀಡಿದರು.

ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದರಿಂದ ಪ್ರತ್ಯಕ್ಷ ನೋಡ ಲಾರಳು. ನೋಡಿದರೂ ಶವಗಳನ್ನು ನರಿನಾಯಿಗಳು ತಿಂದಿರುವುದರಿಂದ ಗುರುತು ಹಿಡಿಯುವುದೂ ಅಶಕ್ಯವಾಗಿತ್ತು. ಹೀಗಾಗಿ ಗಾಂಧಾರಿ ತನ್ನ ಮಕ್ಕಳ ಶವಗಳನ್ನು ಸ್ಪಷ್ಟ ಕಾಣದಿದ್ದರೆ ಹೆಚ್ಚು ದುಃಖಿತಳಾಗಿ ಕೃಷ್ಣನಿಗೆ ಶಾಪ ಕೊಡಲಾರಳು. ಅವಳ ತಪಸ್ಸು ನಾಶವಾಗಲಾರದು. ಆಗ ಪಾಂಡವರಿಗೆ ಅಪಾಯ ತಪ್ಪಿದ್ದಲ್ಲ. ಅದಕ್ಕೆ ವೇದವ್ಯಾಸರು ದಿವ್ಯದೃಷ್ಟಿ ನೀಡಿದರು. -ವಾದಿರಾಜೀಯ

ತೇನ ದೃಷ್ಟ್ವಾಪ್ರೇತದೇಹಾನ್ ಸರ್ವಾಂಸ್ತತ್ರ ಸಮಾಕುಲಾ ।
ಶಶಾಪ ಯಾದವೇಶಾನಂ ತ್ವಯಾಽಸ್ಮತ್ಕುಲನಾಶನಮ್ ।
ಯತ್ ಕೃತಂ ತತ್ ತವ ಕುಲಂ ಗಚ್ಛತ್ವನ್ಯೋನ್ಯತಃ ಕ್ಷಯಮ್ ॥೨೩೦॥
ಇತ್ಯುಕ್ತೋ ಭಗವಾನ್ ಕೃಷ್ಣಃ ಸ್ವಚಿಕೀರ್ಷಿತಮೇವ ತತ್ ॥
ಅಸ್ತ್ವೇವಮಿತ್ಯಾಹ ವಿಭುರೀಶ್ವರೋಽಪ್ಯನ್ಯಥಾ ಕೃತೌ ॥೨೩೧॥
ತೇನ ತಸ್ಯಾಸ್ತಪೋ ನಷ್ಟಂ ಹೀನಾ ಸಾಽತೋ ಹಿ ಭರ್ತೃತಃ ॥ ೨೩೨॥
ನಾಶಯೇದ್ಧಿ ಸದಾ ವಿಷ್ಣುಃ ಸ್ವಯೋಗ್ಯಾದಧಿಕಾನ್ ಗುಣಾನ್ ॥೨೩೩॥

ಗಾಂಧಾರಿ ದಿವ್ಯದೃಷ್ಟಿಯಿಂದ ರಣಭೂಮಿಯಲ್ಲಿ ಬಿದ್ದಿದ್ದ ಎಲ್ಲ ಶವಗಳನ್ನೂ ಕಂಡು ಶೋಕಾರ್ತಳಾಗಿ ಕೃಷ್ಣನನ್ನು ಶಪಿಸಿದಳು. 'ನೀನು ನಮ್ಮ ಕುಲವನ್ನು ಪರಸ್ಪರ ಕಲಹದಿಂದ ನಾಶ ಮಾಡಿದೆಯಾದ್ದರಿಂದ ನಿನ್ನ ಕುಲವೂ ಪರಸ್ಪರ ಕಲಹದಿಂದ ನಾಶ ಹೊಂದಲಿ.' ಎಂದು. ಗಾಂಧಾರಿ ಹೀಗೆ ಶಪಿಸಿದಾಗ ಆ ಶಾಪವನ್ನು ಹುಸಿ ಮಾಡಲು ಶಕ್ತನಾಗಿದ್ದರೂ ಭಗವಾನ್ ಶ್ರೀಕೃಷ್ಣ 'ನನ್ನ ಕುಲ ನಾಶವನ್ನು ನಾನೇ ಮಾಡಬೇಕೆಂದಿದ್ದೆ. ಅದರಿಂದ ಹಾಗೇ ಆಗಲಿ' ಎಂದ. ಹೀಗೆ ಶಾಪ ಕೊಟ್ಟಿದ್ದರಿಂದ ಗಾಂಧಾರಿಯ ತಪೋಬಲ ನಷ್ಟವಾಯಿತು. ಅದರಿಂದ ತಪೋಬಲ ದಲ್ಲಿ ಅವಳು ತನ್ನ ಪತಿಗಿಂತ ಕಡಿಮೆಯೂ ಆದಳು. ಯಾರೇ ಆಗಲಿ ತಮ್ಮ ಯೋಗ್ಯತೆಗೆ ಮೀರಿದ ಪುಣ್ಯ ಮಾಡಿದರೆ ವಿಷ್ಣು ಸ್ವಯಂ ಅದನ್ನು ನಾಶಮಾಡುತ್ತಾನೆ ಎನ್ನುವುದು ಪ್ರಸಿದ್ಧವಿದೆ.

ಜಾನೇಽಹಮೇತದಪ್ಯೇವಂ ಚೇರ್ಷ್ಯಂ ಚರಸಿ ಕ್ಷತ್ರಿಯೇ।
(ಸ್ತ್ರೀ ೨೫.೪೮)

ಯಾದವ ಕುಲನಾಶಕನು ನಾನೇ ಹೊರತು ಬೇರೆ ಇಲ್ಲ. ನಾನೂ ಅಂತಃಕಲಹದಿಂದ ಕುಲನಾಶವಾಗಲೆಂದೇ ಸಂಕಲ್ಪಿಸಿದ್ದೇನೆ. ಮಹಾಬಲಿಷ್ಠ

ರಾದ ಯಾದವರು ಅನ್ಯರಿಂದ ಸಾಯುವವರಲ್ಲ. ನಾನು ಸಂಕಲ್ಪಿಸಿದ್ದನ್ನೇ ನೀನೂ ಶಾಪದ ಮೂಲಕ ಅನುಮತಿಸಿರುವಿ ಎನ್ನುತ್ತಾನೆ ಶ್ರೀಕೃಷ್ಣ.

ಗಾಂಧಾರಿಯ ಪಾತಿವ್ರತ್ಯ ಪ್ರಭಾವವನ್ನು ಶಾಪದ ಮೂಲಕ ಕಳೆಯಲು ಶ್ರೀಕೃಷ್ಣ ಸಂಕಲ್ಪಿಸಿದ್ದು ಎರಡು ಉದ್ದೇಶದಿಂದ. ಪಾಂಡವರಿಗೆ ಅವಳು ಶಾಪ ಕೊಡದಿರಲಿ ಎಂದು ಮತ್ತು ಪತಿಗಿಂತ ಸತಿ ಹೆಚ್ಚು ಪುಣ್ಯಮಾಡಿದರೆ ಅವಳ ಯೋಗ್ಯತೆಗೆ ಮೀರಿದ್ದಾಗಿರುತ್ತದೆ. ಅದರಿಂದ ಅವಳಿಗೇ ಕ್ಷೇಮವಾಗದು ಎಂದು. 'ಏಧಮಾನದ್ವಿಟ್' ಯಾರೂ ಯೋಗ್ಯತೆ ಮೀರಿ ಪುಣ್ಯಮಾಡುವುದನ್ನೂ ಸಹಿಸದವನು ಎಂದು ಶ್ರೀಹರಿಗೆ ಬಿರುದು ವೇದದಲ್ಲಿಯೇ ಪ್ರಸಿದ್ಧ.

ನಿಯತ ಪತಿಪತ್ನೀ ಭಾವವಿರುವಲ್ಲಿ ಮಾತ್ರ ಪತಿಗಿಂತ ಸತಿ ಯೋಗ್ಯತೆಯಲ್ಲಿ ಕಡಿಮೆ. ಬೇರೆ ಕಡೆ ಹಾಗೆ ಇಲ್ಲ.

ಅಂತ್ಯ ಸಂಸ್ಕಾರ

ತತ ಆಶ್ಲಿಷ್ಯ ಭರ್ತೄಣಾಂ ದೇಹಾನ್ ಪ್ರರುದತೀಃ ಸ್ತ್ರಿಯಃ ।
ಸರ್ವಾ ದುರ್ಯೋಧನಾದೀನಾಂ ದರ್ಶಯಾಮಾಸ ಕೇಶವಃ ॥ ೨೩೪ ॥
ಕೃಷ್ಣಾಯೈ ಸಾ ಚ ತಂ ದೇವಮಸ್ತುವತ್ ಪೂರ್ಣಷಡ್ಗುಣಮ್ ।
ತತೋ ದೇಹಾನ್ ಪ್ರಸಿದ್ಧಾನಾಂ ಪಾರ್ಥಾಃ ಸಮದಹನ್ ಸತಾಮ್ ।
ಅನ್ಯೇಷಾಂ ಧೃತರಾಷ್ಟ್ರಾದೀನ್ ಪುರಸ್ಕೃತ್ಯೈವ ಕಾಂಶ್ಚನ ॥ ೨೩೫ ॥
ಸೂತ್ಯೈಃ ಪಂಚಭಿರೇವ ಸ್ವೈಃ ಸರಸ್ವತ್ಯಾಂ ಪ್ರಚಿಕ್ಷಿಪುಃ ।
ಸ್ನೇಹಾನ್ನೃಪೋ ಯಮೌ ಚ ಸ್ವಾನ್ ಆಜೌ ತಸ್ಮಿನ್ ಹ್ಯಯೋಜಯನ್ ।
ಶವಾಃ ಪ್ರಾಯೋ ಬಹುತ್ವೇನ ತತ್ರತತ್ರೈವ ಸಂಸ್ಥಿತಾಃ ॥ ೨೩೬ ॥

ಬಳಿಕ ದುರ್ಯೋಧನಾದಿಗಳ ಹೆಂಡಂದಿರೆಲ್ಲರೂ ತಮ್ಮ ಪತಿಗಳ ಶರೀರಗಳನ್ನು ಆಲಿಂಗಿಸಿ ಗೋಳಿಡುವುದನ್ನು ಶ್ರೀಕೃಷ್ಣ ದ್ರೌಪದಿಗೆ ತೋರಿಸಿದ. ದ್ರೌಪದಿ ಶ್ರೀಕೃಷ್ಣನನ್ನು ಪೂರ್ಣಷಡ್ಗುಣಶಾಲಿ ಎಂದು ಸ್ತುತಿಸಿದಳು. ಬಳಿಕ ಪಾಂಡವರು ಪ್ರಸಿದ್ಧರಾದ ದ್ರೋಣ ಮುಂತಾದ ಸಜ್ಜನರ ದೇಹಗಳನ್ನು ತಾವೇ ಸುಟ್ಟರು. ಇತರ ದುಷ್ಟರಾದ ಕೆಲವರ ಶರೀರಗಳನ್ನು ಧೃತರಾಷ್ಟ್ರಾದಿಗಳನ್ನು ಮುಂದೆ ಮಾಡಿಕೊಂಡು ತಮ್ಮ ಐದು ಮಂದಿ ಸಾರಥಿಗಳಿಂದಲೆ ಸರಸ್ವತೀ ನದಿಯಲ್ಲಿ ಹಾಕಿಸಿದರು. ವಸ್ತುತಃ ಭೀಮಾರ್ಜುನರು ದುಷ್ಟರ ಶವಸಂಸ್ಕಾರಕ್ಕೆ ಪ್ರವೃತ್ತರಾಗಲಿಲ್ಲ. ಬಂಧುಸ್ನೇಹದಿಂದ ಧರ್ಮರಾಜ ಮತ್ತು ನಕುಲ ಸಹದೇವರು ಮಾತ್ರ ರಣಭೂಮಿಯಲ್ಲಿ ಶವಗಳನ್ನು ನದಿಗೆ ಎಸೆಯುವ ಕಾರ್ಯದಲ್ಲಿ ತಮ್ಮ ಐದು ಮಂದಿ ಸಾರಥಿಗಳನ್ನು ನೇಮಿಸಿದ್ದರು. ಬೇರೆ ಶವಗಳು ಬಹಳ ಇದ್ದುದರಿಂದ ಪ್ರಾಯಃ ಅವು ಇದ್ದಲ್ಲೇ ಉಳಿದುವು.

ಪಾಂಡವರ ಐದು ಮಂದಿ ಸಾರಥಿಗಳೆಂದರೆ ಅವರಲ್ಲಿ ಶ್ರೀಕೃಷ್ಣನೂ ಒಬ್ಬನಲ್ಲವೆ ಎಂದರೆ ಶ್ರೀಕೃಷ್ಣ ಯುದ್ಧದಲ್ಲಿ ಮಾತ್ರ ಸಾರಥ್ಯ ಮಾಡಿದನಷ್ಟೆ, ಬಳಿಕ ಅರ್ಜುನನಿಗೆ ಅವನ ಸಾರಥಿಯೆ ಇದ್ದಾನೆ ಪೂರು (ಸಭಾ 36.30)

[1]ದ್ರೋಣ ಶಲ್ಯ ಮುಂತಾದ ಸಜ್ಜನರಿಗೆ ಪಾಂಡವರು ಸ್ವತಃ ಅಂತ್ಯಕ್ರಿಯೆ ಮಾಡಿದರು. ದುರ್ಯೋಧನಾದಿಗಳ ಶರೀರಗಳಿಗೆ ನದೀನೀರಿನಲ್ಲಿ ವಿಸರ್ಜನೆ ಮಾಡುವ ಸಂಸ್ಕಾರವನ್ನು ಧೃತರಾಷ್ಟ್ರ ಮುಂತಾದವರನ್ನು ಮುಂದೆ ಮಾಡಿಕೊಂಡು ಐದು ಮಂದಿ ಸಾರಥಿಗಳಿಗೆ ಮಾಡುವಂತೆ ಆಜ್ಞೆ ಮಾಡಿದರು. ಆದರೆ ಅಚ್ಛಿನ್ನ ಭಾಗವತ ಧರ್ಮನಿಷ್ಠನಾದ ಭೀಮಸೇನನೂ ಇಂದ್ರಾವತಾರನಾದ ಅರ್ಜುನನೂ ಪಾಪಿಗಳಿಗೆ ಸಂಸ್ಕಾರ ಮಾಡುವಲ್ಲಿ ವಿಶೇಷ ಆಸಕ್ತಿ ತೋರಲಿಲ್ಲ. ಧರ್ಮರಾಜ ನಕುಲ ಸಹದೇವರೆ ನಿಂತು ಐದುಮಂದಿ ಸಾರಥಿಗಳಿಂದಲೂ ಆ ಕೆಲಸ ನಡೆಸಿದರು. ಪಾಪಿಗಳೆ ಅಧಿಕವಿದ್ದುದರಿಂದ ಅವರ ಎಲ್ಲ ಶರೀರಗಳನ್ನು ನದಿಗೆ ಎತ್ತಿ ಹಾಕುವುದು ಅಶಕ್ಯವೂ ಅನಾವಶಕ್ಯವೂ ಆದ್ದರಿಂದ ಅವನ್ನು ಅವು ಇದ್ದಲ್ಲಿ ಹಾಗೇ ಬಿಟ್ಟರು.

ಅರ್ಜುನ ತನ್ನ ಸಾರಥಿ ಪೂರುವನ್ನು ರಣರಂಗಕ್ಕೆ ಒಯ್ಯಲಿಲ್ಲ. ಭೀಮನ ಸಾರಥಿ ವಿಶೋಕ ಮಡಿಯಲಿಲ್ಲ. ಉಳಿದವರ ಸಾರಥಿಗಳು ಮಡಿದಿರಬಹುದು. ಆದರೆ ಆಗಲೆ ತಕ್ಷಣವೇ ಬೇರೆ ಸಾರಥಿಗಳನ್ನು ನೇಮಿಸುವುದು ರೂಢಿ. ಅದರಿಂದ ಐದು ಮಂದಿ ಸಾರಥಿಗಳು ಜೀವಂತರಿರುವರೆನ್ನುವಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಅದರಿಂದ

'ಸ್ವಾನ್ ನಾಜೌ ತಸ್ಮಿನ್ ನ್ಯಯೋಜಯನ್' ಎಂದು,

'ಧರ್ಮರಾಜ ಮತ್ತು ನಕುಲ ಸಹದೇವರು ತಮ್ಮ ಸಾರಥಿಗಳನ್ನು ಯುದ್ಧದಲ್ಲಿ ಸಾರಥ್ಯಕ್ಕೆ ನೇಮಿಸಲಿಇಲ್ಲ. ಅರ್ಜುನ ಶ್ರೀಕೃಷ್ಣನನ್ನು ಹೇಗೋ ಹಾಗೇ ಇವರೂ ಬೇರೆ ಸಾರಥಿಗಳನ್ನು ಮಾಡಿಕೊಂಡರು. ಅದರಿಂದ ಐವರು

---

1. ಪಾರ್ಥಾಃ ಪಂಚಭಿಃ ಸ್ವೈಃ ಸೂತೈರನ್ಯೇಷಾಮಸತಾಂ ದುರ್ಯೋಧನಾದೀನಾಂ ಕಾಂಶ್ಚನ ದೇಹಾನ್ ಸರಸ್ವತ್ಯಾಂ ಪ್ರಚಕ್ಷಿಪುರಿತಿ ಸಾಮಾನ್ಯೇನೋಕ್ತಂ। ತತ್ರಾಚ್ಛಿನ್ನಧರ್ಮಸ್ಯ ಭೀಮಸ್ಯ, ಇಂದ್ರಾವತಾರ ಸ್ಯಾರ್ಜುನಸ್ಯ ಚಾಸತಾಂ ಸಂಸ್ಕಾರೇ ವಿಶಿಷ್ಯ ಮನೋ ನಾಭೂದಿತಿ ಸೂಚನಾಯಾಪವಾದ ಮಾಹ ಸ್ನೇಹಾನ್ನೃಪ ಇತಿ। 'ನೃಪೋ ಧರ್ಮರಾಜೋ ಯಮೌ ಚ ತಸ್ಮಿನ್ ಆಜೌ ಮೃತಾನಾಂ ಶವನಿರಸನಾಯ ಸ್ವಾನ್ ಪಂಚ ಸೂತಾನ್ ನ್ಯಯೋಜಯನ್ನಿತಿ ಯೋಜನಾ। ಭೀಮಾರ್ಜುನೌ ತೂಷ್ಣೀಮೇವ ಸ್ಥಿತೌ। ಅತ ಏವ ಧೃತರಾಷ್ಟ್ರಾದೀನ್ ಪುರಸ್ಕೃತ್ಯೇತ್ಯುಕ್ತಂ। ಉಪಚಾರೋಽಪಿ ತತ್ಪ್ರಿಯಾಯೇತಿ ಭಾವಃ।

-ವಾದಿರಾಜೀಯ

ಸಾರಥಿಗಳಿದ್ದರು' ಎನ್ನುವ ಅಭಿಪ್ರಾಯ ಬರುವಂತೆ ನಿರ್ಣಯದಲ್ಲಿ ಬೇರೆ ಪಾಠವಿಟ್ಟುಕೊಳ್ಳಬೇಕಾಗಿಲ್ಲ. 'ಸ್ವಾನ್ ಆಜೌ' ಎಂದೇ ವಾದಿರಾಜೀಯ ಜನಾರ್ದನಭಟ್ಟೀಯ ವರದರಾಜೀಯ ಫಲಾರೀಯ ವ್ಯಾಸತೀರ್ಥೀಯ ಸತ್ಯಾಭಿನವತೀರ್ಥೀಯ ಪ್ರಮಾಣಸಂಗ್ರಹ ಅನಂತಭಟ್ಟೀಯ ವ್ಯಾಖ್ಯಾನಗಳು ಪಾಠವಿಟ್ಟುಕೊಂಡಿವೆ. ಅನಂತಭಟ್ಟೀಯದಲ್ಲಿ 'ನ್ಯಯೋಜಯತ್' ಎಂದು ಪಾಠವಿಟ್ಟುಕೊಂಡು, ಸ್ವಾನ್ ಪ್ರತಿ- ಕೆಲವು ಬಂಧುಗಳ ಉತ್ತರಕ್ರಿಯೆಗೆ, ಸ್ನೇಹಾತ್-ಬಂಧುಪ್ರೇಮದಿಂದ, ನೃಪಃ-ಧರ್ಮರಾಜನು, ಯಮೌ ನ್ಯಯೋಜಯತ್-ನಕುಲ ಸಹದೇವರನ್ನು ನೇಮಿಸಿದ ಎಂದು ವ್ಯಾಖ್ಯಾನಿಸಲಾಗಿದೆ.

ತತೋ ದದತ್ಸು ಪಾನೀಯಂ ಗಂಗಾಯಾಂ ಸ್ವಜನಸ್ಯ ತು ।
ಪೃಥಾ ಕರ್ಣಾಯ ದತ್ತೇತಿ ಪಾರ್ಥಾನಾಹಾಗ್ರಜಂ ಚ ತಮ್ ॥ ೨೩೭ ॥

ಬಳಿಕ ಪಾಂಡವರು ತಮ್ಮ ಬಾಂಧವರಿಗೆ ಗಂಗಾನದಿಯಲ್ಲಿ ತಿಲಾಂಜಲಿ ಕೊಡುತ್ತಿದ್ದಾಗ ಕುಂತಿ 'ಕರ್ಣನಿಗೂ ಕೊಡಿರಿ' ಎಂದಳು. 'ಕರ್ಣ ನಿಮ್ಮ ಅಣ್ಣ' ಎಂದಳು.

ತತೋ ಹಾಹೇತಿ ವಿಲಪನ್ ರಾಜಾ ಪರಮದುಃಖಿತಃ ।
ಶಶಾಪ ಸರ್ವನಾರೀಣಾಂ ಗುಹ್ಯಂ ಹೃದಿ ನ ತಿಷ್ಠತು ॥ ೨೩೮ ॥

ಆಗ ಪರಮ ದುಃಖಿತನಾದ ಯುಧಿಷ್ಠಿರ 'ಹಾ! ಹಾ!' ಎಂದು ವಿಲಾಪ ಮಾಡುತ್ತ ಎಲ್ಲ ಸ್ತ್ರೀಯರಿಗೂ ಶಾಪನೀಡಿದ, 'ಅವರೆದೆಯಲ್ಲಿ ರಹಸ್ಯ ನಿಲ್ಲದಿರಲಿ' ಎಂದು.

ಹಾ ಮಾತಸ್ತವ ಧೃತ್ಯೈವ ವಯಂ ಸರ್ವೇ ಭೃಶಂ ಹತಾಃ ।
ಜ್ಯೇಷ್ಠಂ ಪಿತೃಸಮಂ ಹತ್ವಾ ಪ್ರತಿಪತ್ಸ್ಯಾಮ ಕಾಂ ಗತಿಮ್ ॥ ೨೩೯ ॥

'ಹಾ! ಮಾತೆ! ನಿನ್ನ ಧೈರ್ಯದಿಂದಲೆ ನಾವೆಲ್ಲ ಹತರಾದೆವು. ತಂದೆಗೆ ಸಮಾನನಾದ ಅಣ್ಣನನ್ನು ಕೊಂದು ನಾವು ಇನ್ನು ಯಾವ ಗತಿಯನ್ನು ಹೊಂದುವೆವು!'

ಏವಂ ವದಂತಂ ಕೌಂತೇಯಂ ವಾಸುದೇವಃ ಸನಾರದಃ ।
ಶಮಯಾಮಾಸ ಸದ್ವಾಕ್ಯೈರ್ಗುಣಾನ್ ಕರ್ಣಸ್ಯ ಚಾಬ್ರವೀತ್ ॥ ೨೪೦ ॥

ಹೀಗೆ ಧರ್ಮರಾಜ ಹೇಳುತ್ತಿದ್ದಾಗ ಶ್ರೀಕೃಷ್ಣನೂ ನಾರದರೂ ಒಳ್ಳೆಯ ಮಾತುಗಳಿಂದ ಸಂತೈಸಿದರು. ಕರ್ಣನ ದುರ್ಗುಣಗಳನ್ನು ಹೇಳಿದರು.

ಪಾಂಡವರಿಗೆಲ್ಲರಿಗೂ ನೀನೆ ಹಿರಿಯಣ್ಣ. ನೀನೆ ರಾಜನಾಗು. ಪಾಂಡವರು ನಿನಗೆ ಪರಿವಾರದವರಾಗುತ್ತಾರೆ ಎಂದು ಎಷ್ಟು ಹೇಳಿದರೂ 'ನಾನು ರಾಜ್ಯವಾಳಲಾರೆ, ದುರ್ಯೋಧನನಿಗಾಗಿ ಪ್ರಾಣಗಳನ್ನು ಬಿಡುತ್ತೇನೆ. ಅವನಿಗಾಗದವರ ಪಕ್ಷವನ್ನು ಸೇರುವುದಿಲ್ಲ' ಎನ್ನುತ್ತ

ಅವೈಷ್ಣವರಲ್ಲಿ ಪ್ರೀತಿ ಮಾಡುವುದು ಮುಂತಾದ ದುರ್ಗುಣಗಳು ಅವನಲ್ಲಿ ಬಹಳ ಇದ್ದುವು ಎಂದು ಶ್ರೀಕೃಷ್ಣನೂ ನಾರದರೂ ಉಪದೇಶ ಮಾಡಿದರು. ಕುಂತಿಯೂ ತಾನು ಸೋದರರನ್ನು ಜೊತೆಗೂಡಿಸಲು ಬಹಳಪ್ರಯತ್ನ ಮಾಡಿ ವಿಫಲಳಾದೆನೆಂದಳು. ಕರ್ಣನ ನಾಶಕ್ಕೆ ನೀವು ಪಾಂಡವರೆ ಹೊಣೆಯಲ್ಲ. ಬ್ರಾಹ್ಮಣ ಶಾಪ, ಪರಶುರಾಮ ಶಾಪ, ಕುಂತಿಗೆ ಕರ್ಣ ಕೊಟ್ಟಿದ್ದ ಮಾತು, ಇಂದ್ರ ಕವಚಕುಂಡಲಗಳನ್ನು ಅಪಹರಿಸಿದುದು, ಭೀಷ್ಮನನ್ನು ಅರ್ಧರಥನೆಂದು ಹೇಳಿ ಕರ್ಣ ಅವಮಾನಿಸಿದುದು, ಶಲ್ಯ ಮಾಡಿದ ತೇಜೋವಧೆ, ಎಲ್ಲಕ್ಕಿಂತ ಶ್ರೀಕೃಷ್ಣನ ಅಮೋಘವಾದ ಯುದ್ಧನೀತಿ ಇವೆಲ್ಲವೂ ಕಾರಣಗಳೆನ್ನುತ್ತ ನಾರದರೂ ಸಮಾಧಾನ ಮಾಡಿದರು. (ಶಾಂತಿ ೫.೧೫)

ತತಸ್ತೇ ಪ್ರೇತಕಾರ್ಯಾಣಿ ಚಕ್ರುಃ ಸರ್ವೇಽಪಿ ಸರ್ವಶಃ ।
ಸರ್ವೇಷಾಮಾಧಿರಾಜ್ಯೇ ಚ ಸ್ಥಿತೋಽಭೂತ್ ಪಾಂಡವಾಗ್ರಜಃ ॥ ೨೪೧ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಪಾಂಡವರಾಜ್ಯಲಾಭೋ ನಾಮ ಅಷ್ಟಾವಿಂಶೋಽಧ್ಯಾಯಃ

ಬಳಿಕ ಎಲ್ಲರೂ ಎಲ್ಲ ಉತ್ತರಕ್ರಿಯೆಗಳನ್ನು ಮಾಡಿದರು. ಪಾಂಡವರಲ್ಲಿ ಅಗ್ರಜನಾದ ಧರ್ಮರಾಜ ಎಲ್ಲ ರಾಜರಿಗೂ ಅಧಿರಾಜನಾಗಿ ಸಿಂಹಾಸನದಲ್ಲಿ ಕುಳಿತ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ಪಾಂಡವರಾಜ್ಯಲಾಭ ಎಂಬ
ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 29

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಕೃಷ್ಣಾಭ್ಯಾಮಪಿ ಭೂಸುರೈರ್ನೃಪಸುತೋ ರಾಜ್ಯೇಽಭಿಷಿಕ್ತೋ, ದ್ವಿಜೈ
ರ್ದಗ್ಧೋ ನಿಂದತಿ ಭಿಕ್ಷುಕೇ ಖಿಲತರೇ ಸ್ವಂ ವಿಪ್ರತೀಸಾರತಃ।
ರಾಜ್ಯಂ ತ್ಯಕ್ತುಮಥೋದ್ಯತೋ, ವಚನತೋ ಯಸ್ಯಾಪ್ತಭೀಷ್ಮಾತ್ ತತಃ
ಶುಶ್ರಾವಾಖಿಲ ಧರ್ಮನಿರ್ಣಯಮದಃ ಕೃಷ್ಣದ್ವಯಂ ಧೀಮಹಿ ॥೨೯॥

ಶ್ರೀಕೃಷ್ಣ ವೇದವ್ಯಾಸರೂ ಮುನಿಗಳೂ ಧರ್ಮರಾಜನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿದರು. ಅವನನ್ನು ನಿಂದಿಸಿದ ಅತಿ ದುಷ್ಟನಾದ ಚಾರ್ವಾಕನೆಂಬ ಯತಿಯನ್ನು ಮುನಿಗಳು ಹುಂಕಾರದಿಂದ ಸುಟ್ಟಾಗ ಧರ್ಮರಾಜ ಪಶ್ಚಾತ್ತಾಪದಿಂದ ತನ್ನ ರಾಜ್ಯವನ್ನು ತ್ಯಾಗ ಮಾಡಲು ಉದ್ಯುಕ್ತನಾದ. ಬಳಿಕ ಶ್ರೀಕೃಷ್ಣ ವೇದವ್ಯಾಸರ ಮಾತಿನಿಂದ ತನಗೆ ಆಪ್ತನಾದ ಭೀಷ್ಮನಿಂದ ಸಮಸ್ತ ಧರ್ಮನಿರ್ಣಯವನ್ನು ಶ್ರವಣ ಮಾಡಿದ. ಅಂಥ ಶ್ರೀಕೃಷ್ಣವೇದವ್ಯಾಸರನ್ನು ಧ್ಯಾನಿಸುವೆವು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೯

ಸಮಸ್ತ ಧರ್ಮಸಂಗ್ರಹ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಚಾರ್ವಾಕ ರಾಕ್ಷಸ

ಓಂ ॥ ಯದೈವ ಕೃಷ್ಣೌ ಸಕಲಾಧಿರಾಜ್ಯೇ
ಯುಧಿಷ್ಠಿರಂ ಯೌವರಾಜ್ಯೇ ಚ ಭೀಮಮ್ ।
ವಿಪ್ರೈರ್ಯುತಾವಭಿಷಿಚ್ಯಾऽಶಿಷಶ್ಚ
ಯುಕ್ತಾ ದತ್ವಾ ಹರ್ಷಯಾಮಾಸತುಸ್ತೌ ॥೦॥
ತದೈವ ಚಾರ್ವಾಕ ಇತಿ ಪ್ರಸಿದ್ಧಂ
ರಕ್ಷಸ್ತ್ರಿದಂಡೀ ಯತಿರೇವ ಭೂತ್ವಾ ।
ಯುಧಿಷ್ಠಿರಂ ಗರ್ಹಯಾಮಾಸ ವಿಪ್ರಾ
ಸ್ತ್ವಂ ಗರ್ಹಯಂತೀತಿ ಸುಪಾಪಶೀಲಮ್ ॥೨॥

ಶ್ರೀವೇದವ್ಯಾಸಕೃಷ್ಣರು ಮುನಿಗಳಿಂದ ಸಮೇತರಾಗಿ ಸಕಲಾಧಿರಾಜಪದವಿಯಲ್ಲಿ ಯುಧಿಷ್ಠಿರನನ್ನೂ ಯುವರಾಜ ಪದವಿಯಲ್ಲಿ ಭೀಮನನ್ನೂ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿ ಯೋಗ್ಯವಾದ ಆಶೀರ್ವಾದಗಳನ್ನೂ ನೀಡಿ ಸಂತೋಷಪಡಿಸಿದಾಗಲೆ ಚಾರ್ವಾಕನೆಂಬ ರಾಕ್ಷಸ ತ್ರಿದಂಡಿ ಸನ್ಯಾಸಿಯಾಗಿ ಯುಧಿಷ್ಠಿರನನ್ನು 'ನಿನ್ನನ್ನು ಮುನಿಗಳು ನಿಂದಿಸುವರು' ಎನ್ನುತ್ತ ನಿಂದಿಸಿದ. ಏಕೆಂದರೆ ಮಹಾಪಾಪ ಮಾಡುವುದು ಅವನ ಸ್ವಭಾವವೆ ಆಗಿತ್ತು.

'ಬಂಧು ಹತ್ಯೆ ಗುರು ಹತ್ಯೆಗಳನ್ನು ಮಾಡಿ ಸಿಂಹಾಸನವೇರಿ ನೀನು ಏನು ಸುಖಪಡುವಿ? ನಿನಗೆ ಧಿಕ್ಕಾರ! ನೀನು ಬದುಕಿರುವುದಕ್ಕಿಂತ ಸಾಯುವುದು ಒಳ್ಳೆಯದು ಎಂದು ಎಲ್ಲ ಮುನಿಗಳು ನಿನ್ನನ್ನು ನಿಂದಿಸುತ್ತಾರೆ' ಎನ್ನುತ್ತಾನೆ, ಚಾರ್ವಾಕ ರಾಕ್ಷಸ

ಶ್ರುತ್ವೈವ ತದ್ ದುಃಖಿತಮಾಶು ಧರ್ಮಜಂ
ದೃಷ್ಟ್ವಾವಿಪ್ರಾಃ ಶೇಷಪುರಮುಂ ಭೃಶಾರ್ತಾಃ ।
ಅಗರ್ಹಿತಂ ನಿತ್ಯಮಸ್ಮಾಭಿರೇನಂ
ಯತೋಽವೋಚೋ ಗರ್ಹಿತಮದ್ಯ ಪಾಪ ।

ಭಸ್ಮೀಭವಾಽಶ್ವೇವ ತತಸ್ತ್ವತೀರಿತೇ
ಕ್ಷಣಾದಭೂತ್ ಪಾಪತಮಃ ಸ ಭಸ್ಮಸಾತ್ ॥೩॥

ಅದನ್ನು ಕೇಳಿದೊಡನೆ ಧರ್ಮರಾಜ ದುಃಖಿತನಾದುದನ್ನು ಕಂಡು ಮುನಿಗಳು ಬಲುದುಃಖಿತರಾಗಿ ಚಾರ್ವಾಕನನ್ನು ಶಪಿಸಿದರು. 'ಪಾಪಿಯೆ! ನಾವು ಎಂದೂ ನಿಂದಿಸದಿದ್ದ ಈ ಧರ್ಮರಾಜನನ್ನು ನೀನೀಗ ನಿಂದಿತನೆಂದು ಹೇಳುತ್ತಿರುವುದರಿಂದ ಬೇಗನೆ ಸುಟ್ಟು ಬೂದಿಯಾಗು' ಎಂದು. ಮುನಿಗಳು ಹಾಗೆ ಹೇಳಿದೊಡನೆ ಆ ಮಹಾಪಾಪಿ ಕ್ಷಣದಲ್ಲಿ ಬೂದಿಯಾದ.

ಭಸ್ಮೀಕೃತೇಽಸ್ಮಿನ್ ಯತಿವೇಷಧಾರಿಣಿ
ಯುಧಿಷ್ಠಿರಂ ದುಃಖಿತಂ ವೃಷ್ಣಿಸಿಂಹಃ ।
ಪ್ರೋವಾಚ ನಾಯಂ ಯತಿರುಗ್ರಕರ್ಮಾ
ಸುಯೋಧನಸ್ಯೈವ ಸಖಾ ಸುಪಾಪಃ ।
ರಕ್ಷೋಽಧಮೋಽಯಂ ನಿಹತೋಽದ್ಯ ವಿಪ್ರೈ
ಸ್ತನ್ಮಾ ಶುಚಃ ಕೃತಕಾರ್ಯೋಽಸಿ ರಾಜನ್ ॥೪॥
ಇತೀರಿತಃ ಶಾಂತಮನಾಃ ಸ ವಿಪ್ರಾನ್
ಸಂತರ್ಪಯಾಮಾಸ ಧನೈಶ್ಚ ಭಕ್ಯೈ ॥೫॥

ಯತಿವೇಷಧಾರಿಯಾದ ರಾಕ್ಷಸ ಬೂದಿಯಾದಾಗ ದುಃಖಿತನಾದ ಧರ್ಮರಾಜನಿಗೆ ಶ್ರೀಕೃಷ್ಣ ಹೇಳಿದ, 'ಈತ ಯತಿಯಲ್ಲ. ಕ್ರೂರಕರ್ಮಿಯಾದ ಮಹಾಪಾಪಿಯಾದ ರಾಕ್ಷಸಾಧಮ. ದುರ್ಯೋಧನನ ಮಿತ್ರ. ಅವನು ಈಗ ಮುನಿಗಳಿಂದ ಹತನಾಗಿದ್ದಾನೆ. ಅದರಿಂದ ರಾಜನೇ ನೀನು ದುಃಖಿಸಬೇಡ. ನೀನು ಮಾಡಬೇಕಾಗಿದ್ದ ರಾಕ್ಷಸವಧವನ್ನು ಮುನಿಗಳೆ ಮಾಡಿದ್ದಾರೆ' ಶ್ರೀಕೃಷ್ಣ ಹೀಗೆ ಹೇಳಿದಾಗ ಧರ್ಮರಾಜ ಶಾಂತಮನಸ್ಕನಾಗಿ ಬ್ರಾಹ್ಮಣರಿಗೆ ಭಕ್ತಿಯಿಂದ ಧನವನ್ನು ನೀಡಿ ಸಂತೃಪ್ತಿಗೊಳಿಸಿದ.

ಚಾರ್ವಾಕ ರಾಕ್ಷಸ ತನ್ನ ಮಿತ್ರನೆಂದು ದುರ್ಯೋಧನನೆ ಹೇಳುತ್ತಾನೆ. ಆತ ತೊಡೆ ಮುರಿತು ಬಿದ್ದು ವಿಲಾಪ ಮಾಡುತ್ತ ಸಂಜಯನಿಗೆ ಹೇಳುತ್ತಾನೆ. 'ನನ್ನ ಸಮಾಚಾರವನ್ನು ಒಳ್ಳೆಯ ವಾಗ್ಮಿಯಾದ ಚಾರ್ವಾಕಯತಿ ಕೇಳಿದರೆ ಅವನು ನಿಶ್ಚಯವಾಗಿ ನನಗೆ ಉಪಕಾರ ಮಾಡುತ್ತಾನೆ' (ಶಲ್ಯ ೬೫.೩೮)

ಈ ರಾಕ್ಷಸ ಕೃತಯುಗದವನು. ಬದರಿಕಾಶ್ರಮದಲ್ಲಿ ಬಹಳ ತೀವ್ರ ತಪಗೈದು ಬ್ರಹ್ಮನಲ್ಲಿ ಅವಧ್ಯತ್ವವರವನ್ನು ಕೇಳಿದ. 'ಬ್ರಾಹ್ಮಣರಿಗೆ ಅವಮಾನ ಮಾಡದಿದ್ದರೆ ನಿನ್ನನ್ನು ಯಾರೂ ಕೊಲ್ಲಲಾರರು' ಎಂದ ಬ್ರಹ್ಮ. ಬಳಿಕ ಅವನ ಪೀಡೆಗೊಳಗಾಗಿ ಬಂದ ದೇವತೆಗಳಿಗೆ ಹೇಳಿದ. 'ಈತ ಮುಂದೆ ದುರ್ಯೋಧನನ ಮಿತ್ರನಾಗುತ್ತಾನೆ. ಅವನ ಮೇಲಿನ ಅಭಿಮಾನದಿಂದ

ಬ್ರಾಹ್ಮಣರನ್ನು ಅವಮಾನಿಸುತ್ತಾನೆ. ಆಗ ಆ ಬ್ರಾಹ್ಮಣರೆ ಅವನನ್ನು ಶಾಪದಿಂದ ಸುಟ್ಟು ಬೂದಿ ಮಾಡುತ್ತಾರೆ' ಎಂದು.

ಅಸಾಂತ್ವಯಚ್ಚ ಬಾಂಧವಾನ್ ಸ ಪೌರಸಂಶ್ರಿತಾದಿಕಾನ್ ।
ದದೌ ಯಥೇಷ್ಟತೋ ಧನಂ ರರಕ್ಷ ಚಾನು ಪುತ್ರವತ್ ॥೬॥

ಧರ್ಮರಾಜ ಬಂಧುಗಳನ್ನೂ ಪಟ್ಟಣಿಗರನ್ನೂ ಭೃತ್ಯರು ಮುಂತಾದವರನ್ನೂ ಸಂತೈಸಿದ. ಯಥೇಚ್ಛ ಧನ ನೀಡಿದ. ಮಕ್ಕಳಂತೆ ಕಾಪಾಡಿದ.

ಭೀಷ್ಮನ ಉಪದೇಶ

ಸ ಭೀಷ್ಮದ್ರೋಣಕರ್ಣಾನಾಂ ವಧಾದ್ ದುರ್ಯೋಧನಸ್ಯ ಚ ।
ಪಾಪಾಶಂಕೀ ತಪ್ಯಮಾನೋ ರಾಜ್ಯತ್ಯಾಗೇ ಮನೋ ದಧೇ ॥೭॥

ಭೀಷ್ಮ ದ್ರೋಣ ಕರ್ಣರ ಮತ್ತು ದುರ್ಯೋಧನನ ವಧೆಯಿಂದ ತನಗೆ ಪಾಪ ಬಂದಿತೆಂದು ಶಂಕಿಸಿ ಸಂತಾಪಗೊಂಡು ಯುಧಿಷ್ಠಿರ ರಾಜ್ಯತ್ಯಾಗ ಮಾಡಲು ಬಯಸಿದ.

ಸೋಽನುಜ್ಞಃ ಕೃಷ್ಣಯಾ ವಿಪ್ರೈರಪ್ಯುಕ್ತೋ ಧರ್ಮಶಾಸನಮ್ ।
ಭೀಮಂ ಸಂಪ್ರಾರ್ಥಯಿತ್ವೈವ ನ ವೇತ್ತೀತ್ಯಾಹ ಫಲ್ಗುನಮ್ ॥೮॥

ಧರ್ಮರಾಜನಿಗೆ ತಮ್ಮಂದಿರೂ ದ್ರೌಪದಿಯೂ ಮುನಿಗಳೂ ಎಷ್ಟು ಧರ್ಮೋಪದೇಶ ಮಾಡಿದರೂ ಕೂಡ ಅವನು ಭೀಮನನ್ನು 'ನೀನು ರಾಜನಾಗು, ನನಗೆ ಉಪದೇಶ ಕೊಡಬೇಡ' ಎಂದು ಕೇಳಿಕೊಂಡು ಅರ್ಜುನನಿಗೆ 'ನೀನು ಕೇವಲ ಶಸ್ತ್ರವನ್ನು ತಿಳಿದವನು. ಶಾಸ್ತ್ರವನ್ನು ಏನೂ ತಿಳಿಯಲಾರೆ' ಎಂದು ಬಿಟ್ಟ.

ತಸ್ಮಿನ್ ಕ್ರುದ್ಧೇ ನೃಪಂ ಪ್ರಾಹುರ್ವಿಪ್ರಾಸ್ತ್ವತ್ತೋಽಪಿ ತತ್ತ್ವವಿತ್ ।
ಶಕ್ರೋಽರ್ಜುನ ಇತಿ ಶ್ರುತ್ವಾಕಪ್ಯೇತದ್ಧರ್ಮೇ ಸಸಂಶಯಮ್ ॥೯॥
ಮತ್ಸ್ನೇಹಾದೇವ ಸರ್ವೇಽಪಿ ಧರ್ಮೋಽಯಮಿತಿ ವಾದಿನಃ ।
ಇತ್ಯೇವಂ ಶಂಕಮಾನಂ ತಮೂಚತುರ್ವಿಪ್ರಯಾದವೌ ॥೧೦॥
ಕೃಷ್ಣೌ ಧರ್ಮೋಽಯಮಿತ್ಯೇವ ಶಾಸ್ತ್ರಯುಕ್ತ್ಯಾ ಪುನಃಪುನಃ ।
ನಾತಿನಿಶ್ಚಿತಬುದ್ಧಿಂ ತಂ ತದಾಽಪಿ ಪುರುಷೋತ್ತಮೌ ॥೧೧॥
ಹತಪಕ್ಷಗತತ್ವೇನ ತ್ವಚ್ಛಂಕಾಯಾ ಅಗೋಚರಃ ।
ಯತೋ ಭೀಷ್ಮಸ್ತತೋ ಯಾಹಿ ತಮಿತ್ಯೂಚತುರವ್ಯಯೌ ॥೧೨॥

ಅರ್ಜುನ ಕೋಪಗೊಂಡಾಗ ಮುನಿಗಳು ಧರ್ಮರಾಜನಿಗೆ ಹೇಳಿದರು, 'ಅರ್ಜುನ ನಿನಗಿಂತ ಹೆಚ್ಚು ತತ್ವವನ್ನು ತಿಳಿದವನು. ಏಕೆಂದರೆ ಅವನು ಇಂದ್ರಾವತಾರ' ಇದನ್ನು ಕೇಳಿಯೂ ಧರ್ಮರಾಜ ಶತ್ರುವಧರೂಪವಾದ ಪುಣ್ಯಕಾರ್ಯದಲ್ಲಿ ಸಂಶಯವನ್ನೆ ಪಟ್ಟ. ಎಲ್ಲರೂ ನನ್ನ ಮೇಲಿನ ಸ್ನೇಹದಿಂದಲೆ 'ಇದು ಪುಣ್ಯಕಾರ್ಯ' ವೆಂದು ಹೇಳುತ್ತಿದ್ದಾರೆ ಎಂದು ಶಂಕಿಸಿದ.

ಆಗ ಅವನಿಗೆ ಶ್ರೀವೇದವ್ಯಾಸ ಕೃಷ್ಣರು ಇದು ಪುಣ್ಯಕಾರ್ಯವೆ ಎಂದು ಶಾಸ್ತ್ರೋಕ್ತ ಯಕ್ತಿಯಿಂದ ಪುನಃ ಪುನಃ ಉಪದೇಶಿಸಿದರು. ಆಗಲೂ ಕೂಡ ಅವನಿಗೆ ಪೂರ್ಣ ನಿಶ್ಚಿತವಾದ ಬುದ್ಧಿ ಬರಲಿಲ್ಲ. ಆಗ ಅವರು ಹೇಳಿದರು, 'ಭೀಷ್ಮ ನಿನ್ನಿಂದ ಹತರಾದ ಕೌರವರ ಪಕ್ಷದವನಾದ್ದರಿಂದ ನಿನ್ನ ಸಂದೇಹಕ್ಕೆ ಪಾತ್ರನಾಗಲಾರ. ಅದರಿಂದ ಅವನ ಬಳಿಗೇ ಹೋಗು.

ಸ ತಾಭ್ಯಾಂ ಭ್ರಾತೃಭಿಶ್ಚೈವ ಮುನಿಭಿಶ್ಚ ಸಮನ್ವಿತಃ ।
ಭೀಷ್ಮಂ ಯಯೌ ಲಜ್ಜಿತೇಽಸ್ಮಿಂಸ್ತಂ ಭೀಷ್ಮಾಯಾಽಹ ಕೇಶವಃ ॥೧೩॥

ಧರ್ಮರಾಜ ವೇದವ್ಯಾಸ ಕೃಷ್ಣರಿಂದಲೂ ಸೋದರರಿಂದಲೂ ಮುನಿಗಳಿಂದಲೂ ಯುಕ್ತನಾಗಿ ಭೀಷ್ಮನ ಬಳಿಗೆ ನಡೆದ. ಅವನು ಲಜ್ಜಿತನಾದಾಗ ಅವನ ಬಗ್ಗೆ ಶ್ರೀಕೃಷ್ಣನೆ ಭೀಷ್ಮನಿಗೆ ಹೇಳಿದ.

ತಾನು ಮೋಸದಿಂದ ಭೀಷ್ಮನನ್ನು ಬೀಳಿಸಿ ಈಗ ಧರ್ಮೋಪದೇಶ ನೀಡೆಂದು ಅವನನ್ನೆ ಹೇಗೆ ಕೇಳಿಕೊಳ್ಳಲಿ ಎಂದು ಸಂಕೋಚ ಧರ್ಮರಾಜನಿಗೆ. ಶ್ರೀಕೃಷ್ಣ ಅವನ ಪರವಾಗಿ ತಾನೆ ಭೀಷ್ಮನ ಮುಂದೆ ಧರ್ಮರಾಜನ ಬಯಕೆಯನ್ನು ಹೇಳಿದ.

ಪೃಚ್ಛೇತ್ಯುಕ್ತಃ ಸ ಭೀಷ್ಮೇಣ ಪಪ್ರಚ್ಛಾಖಿಲಮಂಜಸಾ ।
ತತ್ರೋವಾಚಾಖಿಲಾನ್ ಧರ್ಮಾನ್ ಕೃಷ್ಣೋ ಭೀಷ್ಮಶರೀರಗಃ ॥೧೪॥

ಭೀಷ್ಮ 'ಕೇಳು' ಎಂದಾಗ ಧರ್ಮರಾಜ ಸಂಕೋಚಬಿಟ್ಟು ಎಲ್ಲವನ್ನೂ ಕೇಳಿದ. ಆಗ ಶ್ರೀಕೃಷ್ಣನೆ ಭೀಷ್ಮನ ಶರೀರದಲ್ಲಿ ನಿಂತು ಎಲ್ಲ ಧರ್ಮಗಳನ್ನೂ ಉಪದೇಶಿಸಿದ.

ಸ್ವರೂಪಯೋಗ್ಯತೆಯಲ್ಲಿ ಧರ್ಮರಾಜ ಭೀಷ್ಮನಿಗೇ ಗುರುಸ್ಥಾನದಲ್ಲಿರುವವನು ಏಕೆಂದರೆ ಭೀಷ್ಮ ದ್ಯುನಾಮಕ ವಸು. ತಾರತಮ್ಯದಲ್ಲಿ ಹದಿನೆಂಟನೆಯದಾದ ಶೇಷ ಶತಸ್ಥರ ಕಕ್ಷ್ಯೆಯವನು. ಧರ್ಮರಾಜ ಮೇಲಿನ ಹನ್ನೆರಡನೆ ಕಕ್ಷ್ಯೆಯವನಾದ ಯಮನ ಅವತಾರ. ಅದರಿಂದ ಶ್ರೀಕೃಷ್ಣನೇ ಭೀಷ್ಮನಲ್ಲಿ ನಿಂತು ಅವನಿಗೆ ಉಪದೇಶಿಸಿದ.

– ಫಲಾರೀಯ

ಭೀಷ್ಮೋ ಹ್ಯಾಹ ಹರಿಂ ಪಾರ್ಥಾ ಬೋಧನೀಯಾಸ್ತ್ವಯೈವ ಹಿ ।
ಕಾ ಶಕ್ತಿರ್ಮಮ ದೇವೇಶ ಪಾರ್ಥಾನ್ ಬೋಧಯಿತುಂ ಪ್ರಭೋ ॥೧೫॥

ಭೀಷ್ಮ ಶ್ರೀಕೃಷ್ಣನನ್ನು ಕೇಳಿದ, 'ಪ್ರಭು, ನೀನೆ ಪಾಂಡವರಿಗೆ ಧರ್ಮವನ್ನು ಬೋಧಿಸ ಬೇಕು. ದೇವೋತ್ತಮರಾದ ಅವರಿಗೆ ಧರ್ಮವನ್ನು ಬೋಧಿಸಲು ನನಗೆ ಏನು ಶಕ್ತಿ ಇದೆ?'

ಇತ್ಯುಕ್ತೋ ಭಗವಾನಾಹ ತ್ವತ್ಕೀರ್ತ್ಯೈ ತ್ವಯಿ ಸಂಸ್ಥಿತಃ ।
ಪ್ರವಕ್ಷ್ಯಾಮ್ಯಖಿಲಾನ್ ಧರ್ಮಾನ್ ಸೂಕ್ಷ್ಮಂ ತತ್ತ್ವಮಪೀತಿ ಹ ॥೧೬॥

ಭೀಷ್ಮ ಹೀಗೆ ಕೇಳಿದಾಗ ಕೃಷ್ಣನೆಂದ, 'ನಿನಗೆ ಕೀರ್ತಿ ಬರಲೆಂದು ನಾನು ನಿನ್ನಲ್ಲಿ ನಿಂತು ಎಲ್ಲ ಧರ್ಮಗಳನ್ನೂ ಸೂಕ್ಷ್ಮ ತತ್ವಗಳನ್ನೂ ಉಪದೇಶಿಸುತ್ತೇನೆ.

ನಿನಗೆ ನೋವಾಗದು, ಆಯಾಸ ಮೂರ್ಛೆ ದುಃಖಿಗಳಾಗವು. ಹಸಿವು ಬಾಯಾರಿಕೆಗಳೂ ಆಗವು. ನಿನ್ನ ಪ್ರತಿಭೆಗೆ ಎಲ್ಲ ತತ್ವಗಳೂ ಹೊಳೆಯುವಂತೆ ಮಾಡುವೆನು ಎನ್ನುತ್ತಾನೆ ಶ್ರೀಕೃಷ್ಣ.

ಭಾಗವತ ಧರ್ಮ

ರಾಜ್ಞಃ ಪ್ರಥಮತೋ ಧರ್ಮೋ ಭಗವದ್ಧರ್ಮಪಾಲನಮ್ ।
ತದರ್ಥಂ ಕಂಟಕೋದ್ಧಾರೋ ಧರ್ಮಾ ಭಾಗವತಾ ಅಪಿ ॥೧೭॥

ಭಾಗವತ ಧರ್ಮವನ್ನು ಪಾಲಿಸುವುದೇ ರಾಜನಿಗೆ ವಿಹಿತವಾದ ಮೊದಲನೆಯ ಧರ್ಮ. ಅದಕ್ಕಾಗಿ ದುಷ್ಟ ಸಂಹಾರವೂ ಮುಖ್ಯವಾದ ಧರ್ಮವೆನಿಸುತ್ತದೆ. ಬಳಿಕ ಶಾಸ್ತ್ರೋಕ್ತವಾದ ಬೇರೆ ವೈಷ್ಣವ ಧರ್ಮಗಳೂ ರಾಜನಿಗೆ ವಿಹಿತವಾಗಿವೆ.

ಮನೋವಾಕ್ಕರ್ಮಭಿರ್ವಿಷ್ಣೋರಚ್ಛಿದ್ರತ್ವೇನ ಚಾರ್ಚನಮ್ ।
ಪೂರ್ಣಾಶೇಷಗುಣೋ ವಿಷ್ಣುಃ ಸ್ವತಂತ್ರಶ್ಚೈಕ ಏವ ತು ।
ತದ್ವಶಂ ಸರ್ವಮನ್ಯಚ್ಚ ಸರ್ವದೇತಿ ವಿನಿಶ್ಚಯಃ ॥೧೮॥
ದೇವತಾಕ್ರಮವಿಜ್ಞಾನಮಪೂಜಾಽನ್ಯಸ್ಯ ವೈ ಹರೇಃ ॥೧೯॥
ಪೂಜಾ ಭಾಗವತತ್ವೇನ ದೇವಾದೀನಾಂ ಚ ಸರ್ವಶಃ ।
ವೃಥಾ ಕರ್ಮಾಕೃತಿಃ ಕ್ವಾಪಿ ನಿರಾಶೀಸ್ತ್ವಂ ಸದೈವ ಚ ॥೨೦॥
ವಿಷ್ಣೋರ್ಭಾಗವತಾನಾಂ ಚ ಪ್ರತೀಪಸ್ಯಾಕೃತಿಃ ಸದಾ ।
ಪರಸ್ಪರವಿರೋಧೇ ತು ವಿಶಿಷ್ಟಸ್ಯಾನುಕೂಲತಾ ॥೨೧॥
ಪ್ರಿಯಂ ವಿಷ್ಣೋಸ್ತದೀಯಾನಾಮಪಿ ಸರ್ವಂ ಸಮಾಚರೇತ್ ।
ಧರ್ಮಮಪ್ಯಪ್ರಿಯಂ ತೇಷಾಂ ನೈವ ಕಿಂಚಿತ್ ಸಮಾಚರೇತ್ ॥೨೨॥
ಸಾಮ್ಯೇ ವಿರೋಧೇ ಚ ಬಹೂನನುವರ್ತೇತ ವೈಷ್ಣವಾನ್ ।
ಏತೇ ಸಾಧಾರಣಾ ಧರ್ಮಾ ಜ್ಞೇಯಾ ಭಾಗವತಾ ಇತಿ ॥೨೩॥

ಮನಸ್ಸು ಮಾತು ಕರ್ಮಗಳಿಂದ ವಿಷ್ಣುವನ್ನು ನಿರಂತರ ಪೂಜಿಸಬೇಕು. ಪೂರ್ಣವಾದ ಸಕಲ ಗುಣಗಳುಳ್ಳವನು ವಿಷ್ಣು ಅವನೊಬ್ಬನೆ ಸ್ವತಂತ್ರ, ಅವನ ವಶದಲ್ಲಿಯೆ ಬೇರೆ ಎಲ್ಲವೂ ಸದಾ ಇರುತ್ತದೆ ಎಂಬ ನಿಶ್ಚಯ ಹೊಂದಿರಬೇಕು. ದೇವತಾ ತಾರತಮ್ಯ ಜ್ಞಾನವಿರಬೇಕು. ಹರಿಯನಲ್ಲದೆ ಅನ್ಯರನ್ನು ಪೂಜಿಸದಿರಬೇಕು. ಅನ್ಯದೇವತೆಗಳು ಮುಂತಾದ ಎಲ್ಲ ವೈಷ್ಣವರನ್ನೂ ಭಗವದ್ಭಕ್ತರೆಂದೇ ಆದರಿಸಬೇಕು. ಎಲ್ಲಿಯೂ ವ್ಯರ್ಥಕರ್ಮ ಮಾಡದಿರಬೇಕು. ಕರ್ಮಮಾಡುವಾಗ ಯಾವಾಗಲೂ ಫಲೇಚ್ಛೆಯನ್ನು ಬಿಟ್ಟಿರಬೇಕು. ವಿಷ್ಣು ವೈಷ್ಣವರಿಗೆ

ವಿರೋಧ ಮಾಡದಿರಬೇಕು. ಶಿಷ್ಟ ಅಶಿಷ್ಟರೊಳಗೆ ಪರಸ್ಪರ ವಿರೋಧ ಬಂದಾಗ ಶಿಷ್ಟರಿಗೇ ಅನುಕೂಲನಾಗಿರಬೇಕು. ವಿಷ್ಣುವಿಗೂ ವೈಷ್ಣವರಿಗೂ ಪ್ರಿಯವಾದರೆ ಎಲ್ಲವನ್ನೂ, ಅಂದರೆ ಅಧರ್ಮವನ್ನೂ ಮಾಡಬೇಕು. ಧರ್ಮವನ್ನೂ ಅದು ಅವರಿಗೆ ಅಪ್ರಿಯವಾದರೆ ಸ್ವಲ್ಪವೂ ಮಾಡದಿರಬೇಕು. ಎರಡು ಪಕ್ಷಗಳೂ ಸಮಾನವಾಗಿದ್ದು ಅವುಗಳಲ್ಲಿ ವಿರೋಧವಿದ್ದರೆ ಬಹುಮಂದಿ ವೈಷ್ಣವರ ಪಕ್ಷ ಹಿಡಿಯಬೇಕು. ಇವು ಕ್ಷತ್ರಿಯಾದಿಗಳಿಗೆ ಎಲ್ಲರಿಗೂ ಸಾಧಾರಣವಾದ ಭಾಗವತ ಧರ್ಮಗಳೆಂದು ತಿಳಿಯಬೇಕು.

ಚಾತುರ್ವರ್ಣ್ಯ ಧರ್ಮ

ತತ್ತ್ವವಿಜ್ಞಾಪನಂ ಧರ್ಮೋ ವಿಪ್ರಸ್ಯ ತು ವಿಶೇಷತಃ ।
ಶಾರೀರದಂಡಸಂತ್ಯಾಗಃ ಪುತ್ರಭಾರ್ಯಾದಿಕಾನೃತೇ ॥ ೨೪ ॥
ತತ್ರಾಪಿ ನಾಂಗಹಾನಿಃ ಸ್ಯಾದ್ ವೇದನಾ ವಾ ಚಿರಂ ನತು ।
ನಚಾರ್ಥದಂಡಃ ಕರ್ತವ್ಯೋ ವಿಪ್ರವೈಶ್ಯಾದಿಭಿಃ ಕ್ವಚಿತ್ ॥ ೨೫ ॥
ಶಾರೀರದಂಡವಿಷಯೇ ವೈಶ್ಯಾದೀನಾಂ ಚ ವಿಪ್ರವತ್ ।
ಯಥಾಲಬ್ಧೇನ ವರ್ತೇತ ಭಿಕ್ಷಯಾ ವಾ ದ್ವಿಜೋತ್ತಮಃ ॥ ೨೬ ॥
ಶಿಷ್ಯಯಾಜ್ಯೋಪಲಬ್ಧೈರ್ವಾ ಕ್ಷತ್ರಧರ್ಮೇಣ ವಾಕಟಪದಿ ।
ಮಹಾಪದಿ ವಿಶಾಂ ಧರ್ಮೈಃ ಕ್ಷತ್ರಿಯಃ ಸುರವಿಪ್ರಯೋಃ ॥ ೨೭ ॥
ಅನ್ಯತ್ರ ಸರ್ವವಿತ್ತೇನ ವರ್ತೇತೈತಾಂಶ್ಚ ಪಾಲಯನ್ ।
ವಿರೋಧಿನಃ ಕ್ಷತ್ರಿಯಾಚ್ಚ ಪ್ರಸಹ್ಯೈವ ಹರೇದ್ ಧನಮ್ ॥ ೨೮ ॥

ತತ್ವವನ್ನು ಉಪದೇಶಿಸುವುದು ಬ್ರಾಹ್ಮಣನಿಗೆ ವಿಶೇಷವಾಗಿ ವಿಹಿತವಾದ ಧರ್ಮ. ಮಕ್ಕಳು, ಹೆಂಡತಿ, ಶಿಷ್ಯರು ಮುಂತಾದವರಿಗೆ ಹೊರತು ಅನ್ಯರಿಗೆ ಶಾರೀರಿಕವಾಗಿ ದಂಡನೆ ಮಾಡದಿರುವುದು ಧರ್ಮ. ಮಕ್ಕಳು ಮುಂತಾದವರಿಗೂ ಅಂಗವೈಕಲ್ಯವಾಗಕೂಡದು. ಚಿರಕಾಲವಿರುವಂಥ ವೇದನೆಯನ್ನೂ ಕೊಡಬಾರದು. ಆರ್ಥಿಕವಾಗಿ ದಂಡನೆಯನ್ನು ಕ್ಷತ್ರಿಯರು ಹೊರತು ಬ್ರಾಹ್ಮಣ ವೈಶ್ಯ ಮುಂತಾದವರು ಯಾರೂ ಮಾಡಬಾರದು. ಶಾರೀರಿಕ ದಂಡನೆಯ ವಿಷಯದಲ್ಲಿ ವೈಶ್ಯಾದಿಗಳಿಗೂ ಬ್ರಾಹ್ಮಣನಂತೆಯೆ ನಿಯಮವಿದೆ. ಬ್ರಾಹ್ಮಣ ಪ್ರಯತ್ನವಿಲ್ಲದೆ ಸ್ವಯಂ ಲಬ್ಧವಾದ ದ್ರವ್ಯದಿಂದಾಗಲಿ ಭಿಕ್ಷೆ ಬೇಡಿ ಪಡೆದ ದ್ರವ್ಯದಿಂದಾಗಲಿ ಬದುಕಬೇಕು. ಅಥವಾ ಅಧ್ಯಾಪನ ವೃತ್ತಿಯಲ್ಲಿ ಶಿಷ್ಯನಿಂದ ಮತ್ತು ಪೌರೋಹಿತ್ಯದಲ್ಲಿ ಯಜಮಾನನಿಂದ ಲಬ್ಧವಾದ ದ್ರವ್ಯಗಳಿಂದಲೂ ಬದುಕಬಹುದು. ಆಪತ್ಕಾಲದಲ್ಲಿ ಕ್ಷತ್ರಿಯ ಧರ್ಮದಿಂದ, ಮಹಾ ಆಪತ್ತಿನಲ್ಲಿ ರಸವಿಕ್ರಯ ಒಂದನ್ನು ಹೊರತು ಬೇರೆ ವೈಶ್ಯಧರ್ಮದಿಂದ ಜೀವನ ಮಾಡಬಹುದು. ಕ್ಷತ್ರಿಯನು ದೇವಬ್ರಾಹ್ಮಣರ ಹೊರತು ಬೇರೆ ಎಲ್ಲರ ದ್ರವ್ಯದಿಂದಲೂ ಬದುಕಬಹುದು. ಆದರೆ ಅವರನ್ನು ರಕ್ಷಿಸುವ ಹೊಣೆ ಅವನದು. ವಿರೋಧಿಯಾದ ಕ್ಷತ್ರಿಯನಿಂದ ಆತ ಬಲಾತ್ಕಾರವಾಗಿ ಧನವನ್ನು ಅಪಹರಿಸಬಹುದು.

ಸಾಮಾದಿಕ್ರಮತೋ ಧರ್ಮಾನ್ ವರ್ತಯೇದ್ ದಂಡತೋಽಂತತಃ ।
ಅಪಲಾಯೀ ಸದಾ ಯುದ್ಧೇಽ ಸತಾಂ ಕಾರ್ಯಮೃತೇ ಭವೇತ್ ॥ ೨೯ ॥

ಸಾಮದಾನಾದಿ ಕ್ರಮದಿಂದಲೆ ಧರ್ಮವನ್ನು ರಕ್ಷಿಸಬೇಕು. ಅಂತ್ಯದಲ್ಲಿಯೆ ದಂಡದಿಂದ ಧರ್ಮವನ್ನು ಕಾಪಾಡಬೇಕು. ಕೆಲವೊಮ್ಮೆ ದುಷ್ಟರಾಜರ ಕಾರ್ಯದಲ್ಲಿ ಹೊರತು, ಬೇರೆ ಕಡೆ ಯುದ್ಧದಲ್ಲಿ ಪಲಾಯನ ಮಾಡದಿರಬೇಕು.

ಜರಾಸಂಧಾದಿ ದುಷ್ಟರಾಜರಿಗೆ ವಶರಾದ ಶಲ್ಯ ಬಾಹ್ಲೀಕ ಮುಂತಾದವರು ಆ ರಾಜರಿಗಾಗಿ ಯುದ್ಧ ಮಾಡುವಾಗ ಶ್ರೀಕೃಷ್ಣನಿಗೆ ಸೋತು ಪಲಾಯನ ಮಾಡಿದರು. ಅದು ದೋಷವಲ್ಲ. ಸಜ್ಜನರ ಕಾರ್ಯಕ್ಕಾಗಿ ಯುದ್ಧಮಾಡುವಾಗ ಪಲಾಯನ ಮಾಡಿದರೆ ದೋಷ

ಅಥವಾ 'ಸತಾಂ' ಎಂದು ಪದವಿಭಾಗ. ಸಜ್ಜನರ ಕಾರ್ಯವಾಗುತ್ತಿದ್ದರೆ ಅದಕ್ಕೆ ಅನುಕೂಲವಾಗಿ ಯುದ್ಧದಲ್ಲಿ ಪಲಾಯನ ಮಾಡಬಹುದು. ಶ್ರೀಕೃಷ್ಣ ಕಾಲಯವನನಿಂದ ಪಲಾಯನ ಮಾಡಿದ್ದು ಮುಚುಕುಂದನಿಗೆ ಕೀರ್ತಿ ತರುವುದಕ್ಕಾಗಿ.

ಕೃಷಿವಾಣಿಜ್ಯಗೋರಕ್ಷಾ ಕುಸೀದಂ ವೈಶ್ಯಜೀವನಮ್ ।
ಪರಿಚರ್ಯೈವ ಶೂದ್ರಸ್ಯ ವೃತ್ತಿರನ್ಯೇ ಸ್ವಪೂರ್ವವತ್ ॥ ೩೦ ॥
ವರ್ತೇಯುರ್ಬ್ರಾಹ್ಮಣಾದ್ಯಾಶ್ಚ ಕ್ರಮಾತ್ ಪೂಜ್ಯಾ ಹರಿಪ್ರಿಯಾಃ ।
ಹರಿಭಕ್ತಾವನುಚ್ಚಸ್ತು ವರ್ಣೋಽಚ್ಚೋ ನಾತಿಪೂಜ್ಯತೇ ॥ ೩೧ ॥

ಕೃಷಿ ವ್ಯಾಪಾರ ಗೋರಕ್ಷಣೆ ಬಡ್ಡಿ ವ್ಯವಹಾರಗಳು ವೈಶ್ಯರ ಜೀವನ ವೃತ್ತಿ. ಶೂದ್ರನಿಗೆ ತ್ರೈವರ್ಣಿಕರ ಸೇವೆಯೆ ಜೀವನೋಪಾಯ. ವರ್ಣಬಾಹ್ಯರು ಅವರವರ ಪೂರ್ವಿಕರು ನಡೆದಂತೆ ನಡೆಯಬೇಕು. ಹರಿಪ್ರಿಯರಾದ ಬ್ರಾಹ್ಮಣಾದಿಗಳು ಕ್ರಮವಾಗಿ ಪೂಜ್ಯರು. ಬ್ರಾಹ್ಮಣ ಹೆಚ್ಚು, ಕ್ಷತ್ರಿಯ ಅವನಿಗಿಂತ ಕಡಿಮೆ ಇತ್ಯಾದಿ. ಹರಿಭಕ್ತಿಯಲ್ಲಿ ಶ್ರೇಷ್ಠನಲ್ಲದಿದ್ದರೆ ವರ್ಣದಿಂದ ಶ್ರೇಷ್ಠನಾದರೂ ಹೆಚ್ಚಿನ ಆದರಕ್ಕೆ ಅರ್ಹನಾಗುವುದಿಲ್ಲ.

ವಿನಾ ಪ್ರಣಾಮಂ ಪೂಜ್ಯಸ್ತು ವರ್ಣಹೀನೋ ಹರಿಪ್ರಿಯಃ ।
ಆದರಸ್ತತ್ರ ಕರ್ತವ್ಯೋ ಯತ್ರ ಭಕ್ತಿರ್ಹರೇರ್ವರಾ ॥ ೩೨ ॥

ಹರಿಪ್ರಿಯನಾದ ವರ್ಣಬಾಹ್ಯನೂ ಪ್ರಣಾಮವನ್ನು ಬಿಟ್ಟು ಬೇರೆ ಎಲ್ಲ ಬಗೆಯಿಂದಲೂ ಪೂಜ್ಯನೆನಿಸುತ್ತಾನೆ. ಎಲ್ಲಿ ಉತ್ತಮವಾದ ಹರಿಭಕ್ತಿ ಇರುವುದೋ ಅಲ್ಲಿ ಆದರ ಮಾಡಬೇಕು.

ಜ್ಞಾಪನಂ ಕ್ಷತ್ರಿಯಾಣಾಂ ಚ ಧರ್ಮೋ ವಿಪ್ರಾಭ್ಯನುಜ್ಞಯಾ ।
ತದಭಾವೇ ತು ವೈಶ್ಯಾನಾಂ ಶೂದ್ರಸ್ಯ ಪರಮಾಪದಿ ॥ ೩೩ ॥

ಜ್ಞಾನಿಯಾದ ಬ್ರಾಹ್ಮಣನಿಲ್ಲದಿದ್ದಾಗ ಅಜ್ಞಾನಿ ಬ್ರಾಹ್ಮಣನ ಅನುಜ್ಞೆಯಿಂದ ಕ್ಷತ್ರಿಯರು

ಉಪದೇಶ ಮಾಡಬಹುದು. ಅದು ಧರ್ಮವೆ. ಜ್ಞಾನಿಯಾದ ಕ್ಷತ್ರಿಯನೂ ಇಲ್ಲದಿದ್ದಲೆ ಬ್ರಾಹ್ಮಣಾನುಜ್ಞೆಯಿಂದ ವೈಶ್ಯರಿಗೂ ಉಪದೇಶ ಧರ್ಮವಾಗುತ್ತದೆ. ಜ್ಞಾನಿಯಾದ ವೈಶ್ಯನೂ ಇಲ್ಲದಂಥ ಮಹಾ ಆಪತ್ತಿನಲ್ಲಿ ಬ್ರಾಹ್ಮಣಾನುಜ್ಞೆಯಿಂದ ಶೂದ್ರನಿಗೂ ಉಪದೇಶಾಧಿಕಾರ ವಿದೆ. ಆ ಉಪದೇಶ ತಮ್ಮ ಪರಿವಾರ ಮೊದಲಾದವರಿಗೆ ಮಾತ್ರ ಹೊರತು ಉತ್ತಮ ಜಾತಿಯವರಿಗೆ ಅಲ್ಲ.

ವರ್ಣೇಷ್ವಜ್ಞೇಷ್ವವರ್ಣಸ್ತು ನ ಜ್ಞಾನೀ ಸ್ಯಾತ್ ಕಥಂಚನ ।
ಇತಿ ಶ್ರುತೇರವರ್ಣಸ್ಯ ಜ್ಞಾಪನಪ್ರಾಪ್ತಿರೇವ ನ ॥೩೪॥

ನಾಲ್ಕು ವರ್ಣಗಳು ಜ್ಞಾನ ಹೀನವಾದಾಗ ವರ್ಣ ಬಾಹ್ಯನು ಸರ್ವಥಾ ಜ್ಞಾನಿಯಾಗಲಾರ ಎಂದು ಶ್ರುತಿ ಇರುವುದರಿಂದ ವರ್ಣ ಬಾಹ್ಯನಿಗೆ ಉಪದೇಶಾಧಿಕಾರ ಪ್ರಾಪ್ತಿಯೆ ಇಲ್ಲ.

ಸ್ತ್ರೀಪುರುಷ ಧರ್ಮಗಳು

ಜ್ಞೇಯಂ ಸರ್ವತ್ರಿವರ್ಣೈಃಸ್ತ್ರೀಭಿರ್ವೇದಾನ್ ವಿನಾಽಖಿಲಮ್ ।
ಸ್ತ್ರೀಯಪುನ್ನಿಯತಿಃ ಸ್ತ್ರೀಣಾಂ ಸ್ವದಾರನಿಯತಿರ್ನೃಣಾಮ್ ॥೩೫॥
ಧರ್ಮೋ ಗುಣೋತ್ತಮಾನಾಂ ತು ಸ್ಮೃತ್ಯೈವಾಂಧಂ ತಮೋ ವ್ರಜೇತ್ ।
ಗುಣಸರ್ವಸ್ವಹಾನಿಃ ಸ್ಯಾದುತ್ತರೋತ್ತರತೋಽತ್ರ ಚ ।
ಅಧೋಽಧೋಽಧಿಕದೋಷಃ ಸ್ಯಾತ್ ಸ್ತ್ರೀಣಾಮನ್ಯತ್ರ ಮಧ್ಯತಃ ॥೩೬॥

ವೇದಾದಿಗಳಲ್ಲಿ ಹೇಳಿದ ಎಲ್ಲ ವಿದ್ಯೆಗಳನ್ನೂ ವಿಷ್ಣುಭಕ್ತರಾದ ತ್ರಿವರ್ಣಸ್ಥರು ಅಧ್ಯಯನ ಮಾಡಬೇಕು. ಸ್ತ್ರೀಯರು ವೇದಗಳನ್ನು ಹೊರತು ಪುರಾಣಾದಿಗಳನ್ನು ಮಾತ್ರ ಅಧ್ಯಯನ ಮಾಡಬೇಕು. ಸ್ತ್ರೀಯರಿಗೆ ತಮ್ಮ ಪತಿಗಳನ್ನೇ ಸೇರುವ ವ್ರತ. ಪುರುಷರಿಗೆ ತಮ್ಮ ಪತ್ನಿಯರನ್ನೇ ಸೇರುವ ವ್ರತ ಧರ್ಮವಾಗಿರುತ್ತದೆ. ಹರಿಭಕ್ತಿ ಮುಂತಾದ ಗುಣಗಳಲ್ಲಿ ತನಗಿಂತ ಉತ್ತಮರಾದ ಪುರುಷರ ಸ್ತ್ರೀಯರನ್ನು ಸೇರುವ ಆಲೋಚನೆ ಮಾಡಿದರೂ ತಮೋಯೋಗ್ಯರಿಗೆ ತಮಸ್ಸಾಗುವುದು. ಹೆಚ್ಚು ಹೆಚ್ಚು ಉತ್ತಮರಾದ ಪುರುಷರು ಅಧಮ ಸ್ತ್ರೀಯರನ್ನು ಬಯಸಿದರೆ ಪುಣ್ಯಹಾನಿ ಮಾತ್ರವೆ ಆಗುವುದು ಮಹಾದೋಷವಿಲ್ಲ.[1] ಸ್ತ್ರೀಯರಿಗೆ ತಮ್ಮ ಪತಿಗಳಿಗಿಂತ ಹೆಚ್ಚು ಹೆಚ್ಚು ಅಧಮರಾದ ಪುರುಷರನ್ನು ಬಯಸಿದಂತೆ ಹೆಚ್ಚು ಹೆಚ್ಚು ದೋಷ ಉಂಟಾಗುತ್ತದೆ. ತಮ್ಮ ಪತಿಗಳಿಗಿಂತ ಉತ್ತಮರನ್ನಾಗಲಿ ಸಮಾನರನ್ನಾಗಲಿ ಬಯಸಿದರೆ ಹೆಚ್ಚು ದೋಷವಿಲ್ಲ.[2]

---

1. ಗುಣೋತ್ತಮಾ ಯೇ ಪುಂಸಃ ತೇಷಾಂ ಸ್ತ್ರೀಸ್ಮೃತ್ಯಾ ಭೋಗ್ಯತ್ವಸ್ಮೃತ್ಯೈವ ತಮೋಯೋಗ್ಯಪುರುಷಃ ಅಂಧಂ ತಮೋ ವ್ರಜೇದಿತಿ ಷಷ್ಠ್ಯಂತ ಸ್ತ್ರೀಪದಾವೃತ್ತ್ಯಾ ಯೋಜನಾ। ಮಾನುಷೇಷು ಕ್ವಚಿತ್ ಸ್ತ್ರೀಣಾಂ ಹರಿಭಕ್ತ್ಯಾದಿ ಗುಣಾಧಿಕ್ಯದರ್ಶನಾತ್ ಗುಣಾಧಿಕಾನಾಂ ಪುಂಸಾಂ ಯಾಃ ಸ್ತ್ರಿಯಃ ತಾಸಾಮಿತಿ ವ್ಯಧಿಕರಣ ಷಷ್ಠೀ। ಉತ್ತರೋತ್ತರತಃ ಉತ್ತಮೋತ್ತಮೇಷು, ಅತ್ರಚ ಪುರುಷೇಷು ಸ್ಮೃತ್ಯಾ ಅಧಮಸ್ತ್ರೀಣಾಂ ಭೋಗ್ಯತ್ವಸ್ಮೃತ್ಯಾ ಪುಣ್ಯಹಾನಿಃ ಸ್ಯಾತ್, ನತು ಮಹಾದೋಷಃ। -ವಾದಿರಾಜೀಯ

2. ಅಧೋಽಧಃ ಅಧೋಧೋ ವಿದ್ಯಮಾನಾನಾಂ ಪುಂಸಾಂ, ಸ್ತ್ರೀಣಾಂ ಸ್ವೋತ್ತಮಾನಾಂ ಯಾಃ

ವೇದಾ ಅಪ್ಯುತ್ತಮಸ್ತ್ರೀಭಿಃ ಕೃಷ್ಣಾದ್ಯಾಭಿರಿವಾಖಿಲಾಃ ॥ ೩೭ ॥
ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ।
ಉತ್ತಮಾ ಇತಿ ವಿಜ್ಞೇಯಾಃಸಚ್ಛೂದ್ರೈರಪ್ಯವೈದಿಕಮ್ ।
ಜ್ಞೇಯಮನ್ಯೈರ್ಹರೇರ್ನಾಮ ನಿಜಕರ್ತವ್ಯಮೇವ ಚ ॥ ೩೮ ॥

ಭಾರತೀ ಪಾರ್ವತೀ ಶಚೀ ಮುಂತಾದವರಂತೆ ಉತ್ತಮರಾದ ಸ್ತ್ರೀಯರು ಸಕಲ ವೇದಗಳನ್ನು ಅಧ್ಯಯನ ಮಾಡಬೇಕು. ದೇವತಾಸ್ತ್ರೀಯರೂ ಋಷಿಪತ್ನಿಯರೂ ಮನುಷ್ಯಾದಿ ಕುಲದಲ್ಲಿ ಅವತರಿಸಿದರೂ ಉತ್ತಮಸ್ತ್ರೀಯರೆಂದು ತಿಳಿಯಬೇಕು. ಉತ್ತಮ ಶೂದ್ರರೂ ವೇದ ವ್ಯತಿರಿಕ್ತವಾದ ಸಕಲ ಗ್ರಂಥಗಳನ್ನೂ ತಿಳಿಯಬೇಕು. ಬೇರೆ ವರ್ಣಬಾಹ್ಯರು ಹರಿನಾಮವನ್ನೂ ತಮ್ಮ ಕರ್ತವ್ಯವನ್ನೂ ತಿಳಿಯಬೇಕು.

ತ್ರಿವಿಧ ಜೀವರ ಸಾಧನೆ

ಸರ್ವಥಾಽಂಧಂ ತಮೋ ಯಾತಿ ವರಂ ಸದೃಶಮೇವ ವಾ ।
ಯೋ ವಿಷ್ಣೋರ್ಮನ್ಯತೇ ಕಿಂಚಿದ್ ಗುಣೈಃ ಕೈಶ್ಚಿದಪಿ ಕ್ವಚಿತ್ ॥ ೩೯ ॥
ಬ್ರಹ್ಮೇಶಾನಾದಿಕಮಪಿ ಭೇದಂ ಯೋ ವಾ ನ ಮನ್ಯತೇ ।
ಭೇದದೃಕ್ ತದ್ಗುಣಾದೌ ಚ ಪ್ರಾದುರ್ಭಾವಗತೇಽಪಿ ಯಃ ॥ ೪೦ ॥
ಪ್ರಾಕೃತಂ ದೇಹಮಥವಾ ದುಃಖಾಜ್ಞಾನಶ್ರಮಾದಿಕಮ್ ।
ಮನ್ಯತೇ ತಾರತಮ್ಯಂ ವಾ ತದ್ಭಕ್ತೇಷ್ವನ್ಯಥೈವ ಯಃ ॥ ೪೧ ॥
ಮನೋವಾಕ್ತನುಭಿರ್ಯೋ ವಾ ತಸ್ಮಿಂಸ್ತದ್ಭಕ್ತ ಏವ ವಾ ।
ವಿರೋಧಕೃದ್ ವಿಷ್ಣ್ವಧೀನಾದನ್ಯತ್ ಕಿಂಚಿದಪಿ ಸ್ಮರನ್ ॥ ೪೨ ॥
ಅನ್ಯಾಧೀನತ್ವವಿಜ್ಞಾಸ್ಯ ಸರ್ವಪೂರ್ತ್ಯವಿದೇವ ಚ ।
ಭಕ್ತಿಹೀನಾಶ್ಚ ತೇ ಸರ್ವೇ ತಮೋಽಂಧಂ ಯಾಂತ್ಯಸಂಶಯಮ್ ॥ ೪೩ ॥

ಯಾರು ಬ್ರಹ್ಮರುದ್ರಾದಿಗಳನ್ನು ವಿಷ್ಣುವಿಗಿಂತ ಸ್ವಲ್ಪ ಗುಣದಿಂದ ಕಿಂಚಿತ್ತಾದರೂ ಎಲ್ಲಿಯಾದರೂ ಶ್ರೇಷ್ಠರೆಂದಾಗಲಿ ಸದೃಶರೆಂದಾಗಲಿ ನಂಬುವನೋ, ಅವರಿಂದ ವಿಷ್ಣುವಿಗೆ ಭೇದವನ್ನು ಒಪ್ಪುವುದಿಲ್ಲವೋ, ವಿಷ್ಣುವಿನ ಗುಣಗಳಲ್ಲಿಯೂ ಅವತಾರ ರೂಪಗಳಲ್ಲಿಯೂ ಸೃಷ್ಟ್ಯಾದಿ ಕ್ರಿಯೆಗಳಲ್ಲಿಯೂ ಭೇದವನ್ನು ತಿಳಿಯುವನೋ, ಅವತಾರಗಳಲ್ಲಿ ಹರಿಗೆ ಪಾಂಚಭೌತಿಕ ಶರೀರವನ್ನು ಒಪ್ಪುವನೋ ಹರಿಯ ಅವತಾರಗಳಲ್ಲಿ ದುಃಖ ಅಜ್ಞಾನಶ್ರಮ ಮೊದಲಾದುವನ್ನೂ ತಾರತಮ್ಯವನ್ನೂ ತಿಳಿಯುವನೋ, ವಿಷ್ಣು ಭಕ್ತರಲ್ಲಿ ತಾರತಮ್ಯವಿಲ್ಲ ವೆನ್ನುವನೋ ವಿಷ್ಣುವಿನಲ್ಲಾಗಲಿ ವಿಷ್ಣಭಕ್ತನಲ್ಲಾಗಲಿ ಮನೋ ವಾಕ್ ಕಾಯಗಳಿಂದ ವಿರೋಧ ಮಾಡುವನೋ ಯಾವುದೇ ವಸ್ತುವನ್ನು ವಿಷ್ಣು ಅಧೀನವಲ್ಲ, ಸ್ವತಂತ್ರ ಎಂದು ತಿಳಿಯುವನೋ

ಸ್ತ್ರಿಯಸ್ತಾಸಾಂ, ಸ್ಮೃತ್ಯಾ ಭೋಗ್ಯತ್ವ ಸ್ಮೃತ್ಯಾಧಿಕ ದೋಷಃ ಸ್ಯಾತ್। ಮಧ್ಯತೋಽನ್ಯತ್ರ ಸಮಾತ್ ಪುರುಷಾದನ್ಯತ್ರ। ಮಧ್ಯತ ಇತ್ಯುಪ ಲಕ್ಷಣಂ। ಉತ್ತಮಾದನ್ಯತ್ರೇತಿ ಚ ಗ್ರಾಹ್ಯಂ। –ವಾದಿರಾಜೀಯ

ಹರಿಯನ್ನು ಅನ್ಯಾಧೀನನೆಂದು ತಿಳಿಯುವನೋ ಹರಿಯಲ್ಲಿ ಸಕಲ ಗುಣಪೂರ್ಣತ್ವವನ್ನು ಒಪ್ಪುವುದಿಲ್ಲವೋ ಇವರೆಲ್ಲರೂ ಹರಿಭಕ್ತಿಹೀನರು ನಿಶ್ಚಯವಾಗಿ ಅಂಧಂತಮಸ್ಸನ್ನು ಹೊಂದುವರು.

ತತ್ತ್ವೇ ಸಂಶಯಯುಕ್ತಾ ಯೇ ಸರ್ವೇ ತೇ ನಿರಯೋಪಗಾಃ ।
ದೋಷೇಭ್ಯಸ್ತೇ ಗುಣಾಧಿಕ್ಯೇ ನೈವ ಯಾಂತ್ಯಧಮಾಂ ಗತಿಮ್ ॥೪೪॥

ಹರಿಸರ್ವೋತ್ತಮತ್ವಾದಿ ತತ್ವಗಳಲ್ಲಿ ಯಾರು ಸದಾ ಸಂಶಯಪಡುವರೋ ಅವರು ಮನುಷ್ಯಾಧಮರು ನಿತ್ಯ ನರಕವನ್ನು ಹೊಂದುವರು. ಸಂಶಯಾದಿ ದೋಷಗಳಿಗಿಂತ ಜ್ಞಾನಾದಿ ಗುಣಗಳು ಹೆಚ್ಚಿದ್ದರೆ ಅವರು ಮನುಷ್ಯೋತ್ತಮರು ಸರ್ವಥಾ ನಿತ್ಯ ನರಕಗತಿಯನ್ನು ಹೊಂದುವುದಿಲ್ಲ.

ಗುಣದೋಷಸಾಮ್ಯೇ ಮಾನುಷ್ಯಂ ಸರ್ವದೈವ ಪುನಃಪುನಃ ।
ಯಾವದ್ ದೋಷಕ್ಷಯಶ್ಚೋರ್ಧ್ವಾ ಗತಿಃ ಕ್ರಮಶ ಏವ ತು ॥೪೫॥

ಗುಣದೋಷಗಳು ಸಮವಾಗಿದ್ದರೆ ಮಧ್ಯಮನುಷ್ಯರು ಸರ್ವಕಾಲದಲ್ಲಿಯೂ ಪುನಃ ಪುನಃ ಮನುಷ್ಯತ್ವವನ್ನು ಹೊಂದಿರುತ್ತಾರೆ. ಜ್ಞಾನಾದಿಗುಣ ಅಧಿಕ ಇರುವವರು ಮನುಷ್ಯೋತ್ತಮರು ತಮ್ಮ ದೋಷಗಳನ್ನು ಕಳೆದುಕೊಂಡಂತೆಲ್ಲ ಕ್ರಮವಾಗಿ ಉತ್ತಮೋತ್ತಮ ಲೋಕಗಳನ್ನು ಹೊಂದುತ್ತಾರೆ.

ಸರ್ವದೋಷಕ್ಷಯೇ ಮುಕ್ತಿರಾತ್ಮಯೋಗ್ಯಾನುಸಾರತಃ ।
ಭಕ್ತಿಜ್ಞಾನೋನ್ನತಾವೇವ ಸ್ವರ್ಗಶ್ಚ ಶುಭಕರ್ಮಣಃ ॥೪೬॥

ಸರ್ವದೋಷ ಕ್ಷಯವಾದಾಗ, ತಮ್ಮ ಯೋಗ್ಯತಾನುಸಾರವಾಗಿ ಭಕ್ತಿ ಜ್ಞಾನಗಳು ಪೂರ್ತಿಯಾದಾಗ ಮನುಷ್ಯೋತ್ತಮರು ಮುಕ್ತಿ ಹೊಂದುತ್ತಾರೆ. ಸತ್ಕರ್ಮದಿಂದ ಸ್ವರ್ಗ ಪಡೆಯುತ್ತಾರೆ.

ಪುರುಷಾರ್ಥ ಮೀಮಾಂಸೆ

ವಿಷ್ಣುವೈಷ್ಣವವಾಕ್ಯೇನ ಹಾನಿಃ ಪಾಪಸ್ಯ ಕರ್ಮಣಃ ।
ಇತ್ಯಾದಿ ಧರ್ಮಸರ್ವಸ್ವಂ ಭೀಷ್ಮಸ್ತೇನೈವ ವಿಷ್ಣುನಾ ॥೪೭॥
ಪಾರ್ಥಾನಾಂ ಗದಿತಂ ತಚ್ಚ ಶ್ರುತ್ವಾ ಧರ್ಮಸುತೋಽನುಜಾನ್ ।
ಪಪ್ರಚ್ಛ ವಿದುರಂ ಚೈವ ಸಾರಂ ಧರ್ಮಾದಿಷು ತ್ರಿಷು ॥೪೮॥

ವಿಷ್ಣು ವೈಷ್ಣವರ ಆಶೀರ್ವಾದದಿಂದ ಪಾಪಕರ್ಮಗಳು ಪರಿಹಾರವಾಗುವುವು. ಇವೇ ಮೊದಲಾದ ಧರ್ಮರಹಸ್ಯವನ್ನು ಭೀಷ್ಮನೊಳಗಿದ್ದ ಕೃಷ್ಣ ಪಾಂಡವರಿಗೆ ಹೇಳಿದ. ಅದನ್ನು ಕೇಳಿ ಧರ್ಮರಾಜ ತಮ್ಮಂದಿರನ್ನೂ ವಿದುರನನ್ನೂ ಧರ್ಮ ಮುಂತಾದ ಮೂರು ಪುರುಷಾರ್ಥಗಳಲ್ಲಿ ಯಾವುದು ಶ್ರೇಷ್ಠವೆಂದು ಕೇಳಿದ.

ಸತ್ಕರ್ಮದಿಂದ ಸ್ವರ್ಗವೆನ್ನುವುದು ಹೇಗೆ? ಮೊದಲಿಗೆ ಪಾಪಕರ್ಮ ಮಾಡಿದವನು ಸತ್ಕರ್ಮ ಮಾಡಿದ ಮಾತ್ರಕ್ಕೆ ಹೇಗೆ ಸ್ವರ್ಗ ಹೊಂದುತ್ತಾನೆ? ಎಂದರೆ, ಅವನು ವಿಷ್ಣು ವೈಷ್ಣವರ ಆಶೀರ್ವಾದದಿಂದ ಪಾಪಗಳನ್ನು ಪರಿಹರಿಸಿಕೊಳ್ಳಬೇಕು. ಬಳಿಕವೇ ಸತ್ಕರ್ಮದಿಂದ ಸ್ವರ್ಗ. ಉದಾ: ಧೃಷ್ಟದ್ಯುಮ್ನ ಗುರುವಾದ ಬ್ರಾಹ್ಮಣನಾದ ದ್ರೋಣನನ್ನು ಕೊಂದರೂ ಕೃಷ್ಣವ್ಯಾಸ ಭೀಮಾದಿಗಳ ಆಶೀರ್ವಾದದಿಂದ ಪಾಪ ಪರಿಹಾರವಾಗಿ ಸ್ವಲೋಕಪ್ರಾಪ್ತಿಯಾಯಿತೆಂದು ಥಲಾರೀಯ.

ಆಹ ಕ್ಷತ್ತಾ ಧರ್ಮಮೇವ ಸಾರಮರ್ಥಂ ಚ ಮಧ್ಯಮಮ್ ।
ನೀಚಂ ಕಾಮಂ ನಿಷ್ಫಲತ್ವಾದರ್ಥಮೇವಾರ್ಜುನೋಽಬ್ರವೀತ್ ॥೪೯॥
ಸಾರಂ ಸ ದ್ವಿವಿಧೋ ಜ್ಞೇಯೋ ದೈವೋ ಮಾನುಷ ಏವ ಚ ।
ದೈವೋ ವಿದ್ಯಾ ಹಿರಣ್ಯಾದಿರ್ಮಾನುಷಃ ಪರಿಕೀರ್ತಿತಃ ॥೫೦॥

ವಿದುರನೆಂದ, 'ಧರ್ಮವೇ ಶ್ರೇಷ್ಠ. ಅರ್ಥಮಧ್ಯಮ, ಕಾಮ ನಿಷ್ಫಲವಾದ್ದರಿಂದ ಅಧಮ' ಅರ್ಜುನ ಅರ್ಥವನ್ನೇ ಶ್ರೇಷ್ಠವೆಂದ. ಏಕೆಂದರೆ ಅರ್ಥವನ್ನು ದೈವ, ಮಾನುಷವೆಂದು ಎರಡು ಬಗೆಯಾಗಿ ತಿಳಿಯಬೇಕು. ವಿದ್ಯೆಯೆ ದೈವ ಅರ್ಥ. ಸುವರ್ಣಾದಿ ಮಾನುಷ ಅರ್ಥವೆನಿಸಿದೆ.

ಮಧ್ಯಮೋ ಧರ್ಮ ಏವಾತ್ರ ಸಾಧ್ಯಂ ಸಾಧನಮೇವ ಚ ।
ವಿದ್ಯಾಹ್ವಯೋಽರ್ಥೋ ಧರ್ಮಸ್ಯ ವಿದ್ಯಯೈವ ವಿಮುಚ್ಯತೇ ॥೫೧॥

ಧರ್ಮ ಮಧ್ಯಮ. ಏಕೆಂದರೆ ಧರ್ಮಕ್ಕೆ ವಿದ್ಯೆ ಎಂಬ ಅರ್ಥ ಸಾಧ್ಯವೂ ಆಗಿದೆ. ಸಾಧನವೂ ಆಗಿದೆ. ವಿದ್ಯೆಯಿಂದಲೆ ಮುಕ್ತಿ ಲಭಿಸುತ್ತದೆ.

[1]ದೈವ ಅರ್ಥರೂಪವಾದ ವಿದ್ಯೆಯನ್ನು ಪಡೆಯುವುದೇ ಧರ್ಮಾಚರಣೆಯ ಉದ್ದೇಶ-

'ಕರ್ಮಣಾ ಜ್ಞಾನಮಾತನೋತಿ'

ಮತ್ತು ಧರ್ಮಾಚರಣೆ ಜ್ಞಾನಪೂರ್ವಕವಾಗಿದ್ದರೆ ಮಾತ್ರ ಫಲ ಜನಕವಾಗುತ್ತದೆ-

'ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರ೦ ಭವತಿ'

ಹೀಗೆ ಅರ್ಥ ಧರ್ಮಕ್ಕೆ ಸಾಧ್ಯವೂ ಸಾಧನವೂ ಆಗುವುದರಿಂದ ಅದು ಧರ್ಮಕ್ಕಿಂತ ಶ್ರೇಷ್ಠ. ವಿದ್ಯೆ ಎಂಬ ಅರ್ಥ ಮೋಕ್ಷಸಾಧನವಾಗಿದೆ-

---

1. ವಿದ್ಯಾಪೂರ್ವಕಂ ಯಜ್ಞಾದಿ ಕರ್ಮಕರಣೇ ಧರ್ಮಸ್ಯೋತ್ಪತ್ತ್ಯಾ ವಿದ್ಯಾ ಧರ್ಮಸಾಧನಂ। 'ಕರ್ಮಣಾ ಜ್ಞಾನಮಾತನೋತಿ' 'ತಪಸಾ ಬ್ರಹ್ಮ ವಿಜಿಜ್ಞಾಸಸ್ವೇ'ತಿ ಚ ಶ್ರುತೇಸ್ತಪ ಆದಿ ಕರ್ಮಣಾ ಶುದ್ಧಾಂತಃಕರಣಸ್ಯೈವ ಜ್ಞಾನೋದಯಾತ್ ವಿದ್ಯಾಹ್ವಯೋಽರ್ಥಃ ಧರ್ಮಸ್ಯ ಸಾಧ್ಯಂ ಫಲಂ। -ವಾದಿರಾಜೀಯ

ವಿದ್ಯಯಾಮೃತ ಮಶ್ನುತೇ। ಜ್ಞಾನೇನಾಮೃತೀ ಭವತಿ।

ಅದರಿಂದಲೂ ಅದು ಧರ್ಮಕ್ಕಿಂತ ಶ್ರೇಷ್ಠ ಎಂಬುದು ಅರ್ಜುನನ ಅಭಿಪ್ರಾಯ.

ಮಾನುಷೋಽರ್ಥೋಽಪಿ ವಿದ್ಯಾಯಾಃ ಕಾರಣಂ ಸುಪ್ರಯೋಜಿತಃ।
ತುಷ್ಟೋಽರ್ಥೇನ ಗುರುರ್ಯಸ್ಮಾತ್ ಕೈವಲ್ಯಂ ದಾತುಮಪ್ಯಲಮ್ ॥೫೨॥

ಮಾನುಷ ಅರ್ಥವೂ ಕೂಡ ಸತ್ಪಾತ್ರದಲ್ಲಿ ಸರಿಯಾಗಿ ವಿನಿಯೋಗಿಸಿದಾಗ ವಿದ್ಯೆಗೆ ಕಾರಣವಾಗುತ್ತದೆ. ಏಕೆಂದರೆ ಮಾನುಷ ಅರ್ಥದಿಂದ ಸಂತುಷ್ಟನಾದ ಗುರು ಮೋಕ್ಷವನ್ನೂ ಕೊಡಬಲ್ಲ.

ಧರ್ಮಾರ್ಥತಾಂ ವಿನಾಽಪ್ಯರ್ಥೈಸ್ತುಷ್ಯೇಯುರ್ಗುರುದೇವತಾಃ।
ಯದ್ಯನುದ್ದೇಶಿತೋ ಧರ್ಮೋಽಪ್ಯರ್ಥಮೇವಾನುಸಂವ್ರಜೇತ್ ॥೫೩॥

ಧರ್ಮವನ್ನು ಉದ್ದೇಶಿಸದೆ ಮಾನುಷ ಅರ್ಥವನ್ನು ವಿನಿಯೋಗಿಸಿದಾಗಲೂ ಗುರು ಮತ್ತು ದೇವತೆಗಳು ಸಂತುಷ್ಟರಾಗಬಲ್ಲರು. ಯದ್ಯಪಿ ಫಲವನ್ನು ಉದ್ದೇಶಿಸದೆ ಮಾಡುವ ಧರ್ಮವೂ ಉಂಟು. ಆದರೆ ಅದು ಅರ್ಥವನ್ನು ಅನುಸರಿಸಿಯೇ ಬರುತ್ತದೆ.

[1]ಮಾನುಷ ಅರ್ಥ ಪುಣ್ಯವನ್ನು ತಂದು ಆ ಮೂಲಕವೆ ಗುರುಗಳಿಗೆ ಸಂತೋಷ ಉಂಟುಮಾಡುತ್ತದೆ ಎಂದಿಲ್ಲ. ಪುಣ್ಯವನ್ನು ಬಯಸದೆ ಯಥೇಷ್ಟ ಧನ ನೀಡಿದರೂ ಗುರು ಮತ್ತು ದೇವತೆಗಳು ತುಷ್ಟರಾಗುತ್ತಾರೆ. ಕೌತ್ಸ ವರತಂತುವಿಗೆ ಯಥೇಷ್ಟ ಹಣಕೊಟ್ಟಾಗ ಅವನಿಗೆ ಸಂತೋಷವಾಯಿತು. ನನಗೆ ಈ ಕಾರ್ಯಸಿದ್ಧಿ ಮಾಡಿಕೊಟ್ಟರೆ ಇಷ್ಟು ಕಾಣಿಕೆ ಸಲ್ಲಿಸುವೆನೆಂದು ಬೇಡಿಕೊಂಡರೆ ಹಯಗ್ರೀವ ಮುಂತಾದ ದೇವತೆಗಳು ತುಷ್ಟರಾಗುತ್ತಾರೆ. ಗುರುಗಳಿಗೂ ದೇವತೆಗಳಿಗೂ ಹಣ ನೀಡಿದಾಗ ಸತ್‌ಪಾತ್ರದ ಸಾಮರ್ಥ್ಯದಿಂದ ಸ್ವಲ್ಪ ಪುಣ್ಯವೂ ಉಂಟು. ಆದರೆ ಅದು ಎಮ್ಮೆಯನ್ನು ಕ್ರಯಕ್ಕೆ ಕೊಂಡುಕೊಳ್ಳುವಾಗ ಹಗ್ಗವೂ ಬರುವಂತೆ ಸುಮ್ಮನೆ ಬರುತ್ತದೆ.

---

1. ನನು ಮಾನುಷಾರ್ಥಸ್ಯ ಧರ್ಮದ್ವಾರಾ ಗುರುಪ್ರೀತಿ ಜನಕತ್ವಾತ್ ಕಥಂ ಧರ್ಮಾತ್ ಶ್ರೈಷ್ಠ್ಯ ಮಿತ್ಯತ ಆಹ ಧರ್ಮಾರ್ಥತಾಂ ವಿನೇತಿ। ಧರ್ಮಾರ್ಥತಾಂ ವಿನಾಪಿ ಅರ್ಥೈರ್ಗುರು ದೇವತಾಸ್ತುಷ್ಯೇಯುಃ। ಯಥೇಷ್ಟ ದ್ರವ್ಯದಾನೇ ವರತಂತ್ವಾದಿಗುರೂಣಾಂ ಪ್ರೀತಿ ದರ್ಶನಾತ್। ಮಮ ಕಾರ್ಯಕರಣೇ ಏತಾವದುಪಾಯನಂ ದಾಸ್ಯಾಮೀತಿ ಪ್ರಾರ್ಥನೇ ಹಯಗ್ರೀವಾದಿ ದೇವಾನಾಂ ಪ್ರೀತಿ ದರ್ಶನಾಚ್ಚೇತಿ ಭಾವಃ। ನನು ಗುರೂಣಾಂ ದ್ರವ್ಯದಾನೇ ಹರೇರ್ದ್ರವ್ಯ ದಾನೇ ಚ ಪಾತ್ರ ಸಾಮರ್ಥ್ಯಾತ್ ಈಷತ್ ಪುಣ್ಯಮಪ್ಯಸ್ತಿ ಖಲ್ವಿತ್ಯತ ಆಹ ಯದೀತಿ। ಯದಿ ಯದ್ಯಪಿ ಅನುದ್ದೇಶಿತೋ ಧರ್ಮೋಽಪ್ಯಸ್ತಿ। ಸೋಽಪಿ ಮಹಿಷೀ ವಿಕ್ರಯಣಕಾಲೇ ರಜ್ಜೋರಪ್ಯಾನಯನವತ್ ಅಜಾಗಲಸ್ತನಾಯವಾನಃ ಸನ್ ತೂಷ್ಣೀಮೇವಾಯಾತಿ। ನ ತ್ವರ್ಥಸ್ಯ ಫಲಮಿತಿ ಭಾವಃ। -ವಾದಿರಾಜೀಯ

ಅದು ಹಣದ ಫಲವಲ್ಲ ಎನ್ನುತ್ತದೆ ವಾದಿರಾಜೀಯ

[1]'ಯದ್ಯನುದ್ದೇಶತೋ ಧರ್ಮೋ ಽಪ್ಯರ್ಥಮೇವಾನುಸಂವ್ರಜೇತ್'

ಎಂಬುದಕ್ಕೆ ವ್ಯಾಸತೀರ್ಥೀಯದಲ್ಲಿ ಹೀಗೆ ಅಭಿಪ್ರಾಯ-

ನೇರವಾಗಿ ನಿಷ್ಕಾಮಧರ್ಮದಿಂದಲೂ ತತ್ವಜ್ಞಾನ ಲಭಿಸುವುದರಿಂದ ಮಾನುಷ ಅರ್ಥದಿಂದ ನೇರವಾಗಿ ತತ್ವಜ್ಞಾನ ಲಭಿಸಿದ ಮಾತ್ರಕ್ಕೆ ಆ ಅರ್ಥ ಧರ್ಮಕ್ಕಿಂತ ಹೇಗೆ ಶ್ರೇಷ್ಠ ಎಂದರೆ ನಿಷ್ಕಾಮ ಧರ್ಮ ಯದ್ಯಪಿ ಮಾನುಷ ಅರ್ಥವನ್ನು ಉದ್ದೇಶಿಸದೆ ಮಾಡಿದ್ದಾಗಿದ್ದರೂ ಅದು ಮಾನುಷ ಅರ್ಥವನ್ನು ಕೊಟ್ಟೇ ಕೊಡುತ್ತದೆ. ಅನ್ನಬಟ್ಟೆಗಳನ್ನು ಕೊಟ್ಟೇ ಆ ಮೂಲಕ ತತ್ವಜ್ಞಾನ ಸಾಧನ ಮಾಡಿಸುತ್ತದೆ. ಹೀಗೆ ಅರ್ಥಕ್ಕೆ ಅನುಕೂಲವಾಗಿ ಇರುತ್ತದೆ.

ಗುರುತಾಽರ್ಥಗತೈವ ಸ್ಯಾತ್ ಕಾಮೋ ಽಧಸ್ತಾದ್ಧಿ ನಿಷ್ಫಲಃ।
ಯಮಾವತ್ರ ವಿದಾಂ ಶ್ರೇಷ್ಠಾವರ್ಜುನೋಕ್ತಮನೂಚತುಃ ॥೫೪॥

ಅದರಿಂದ ಅರ್ಥವೆ ಉತ್ತಮ. ಕಾಮ ನಿಷ್ಫಲವಾದ್ದರಿಂದ ಅಧಮ ಎಂಬುದು

ಎಲ್ಲರಿಗೂ ತಿಳಿದಿದೆ ಎಂದು ಅರ್ಜುನ ಪ್ರತಿಪಾದಿಸಿದಾಗ ಉತ್ತಮ ಜ್ಞಾನಿಗಳಾದ ನಕುಲ ಸಹದೇವರೂ ಅರ್ಜುನ ವಿದುರರು ಹೇಳಿದ್ದನ್ನೇ ಅನುಮೋದಿಸಿದರು.

ಕಾಮ ನಿಷ್ಫಲ ಮಾತ್ರವಲ್ಲ ಕೆಲವೊಮ್ಮೆ ಅನರ್ಥ ಫಲವೂ ಆಗುತ್ತದೆ! ಅದರಿಂದ ಪ್ರಹ್ಲಾದ ನರಸಿಂಹನಲ್ಲಿ ಕೇಳಿಕೊಳ್ಳುತ್ತಾನೆ-

ಕಾಮಾನಾಂ ಹೃದ್ಯಸಂರೋಹಂ ಭವತಸ್ತು ವೃಣೇ ವರಂ

'ನನ್ನ ಹೃದಯದಲ್ಲಿ ಬಯಕೆಗಳು ಮೂಡದಿರಲೆಂದು ವರವನ್ನು ನಿನ್ನಲ್ಲಿ ಬೇಡುತ್ತೇನೆ' ಕಾಮದಿಂದ ಅನರ್ಥ ಹೀಗೆ-

ಇಂದ್ರಿಯಾಣಿ ಮನಃ ಪ್ರಾಣಾ ಆತ್ಮಾ ಧರ್ಮೋ ಧೃತಿರ್ಮತಿಃ
ಹ್ರೀಸ್ತ್ರೀಸ್ತೇಜಃ ಸ್ಮೃತಿಃ ಸತ್ವಂ ಯೇಷಾಂ ನಶ್ಯಂತಿ ಜನ್ಮನಾ।

'ಕಾಮೋಪಭೋಗದಿಂದ ಇಂದ್ರಿಯ ಮನಸ್ಸು ಪ್ರಾಣ ಆತ್ಮ ಧರ್ಮ ಧೃತಿ ಮತಿ ಲಜ್ಜಿ ಸಂಪತ್ತು ತೇಜ ಸ್ಮೃತಿ ಬಲ ಎಲ್ಲವೂ ನಾಶವಾಗುತ್ತವೆ'

ಅದರಿಂದ ಕಾಮವೆಂಬ ಪುರುಷಾರ್ಥ ಎಲ್ಲಕ್ಕಿಂತ ಅಧಮ. ಅರ್ಥ ಉತ್ತಮ ಎನ್ನುತ್ತಾನೆ ಅರ್ಜುನ. ನಕುಲ ಸಹದೇವರು ವಿದುರನ ಧರ್ಮಶ್ರೇಷ್ಠತ್ವವನ್ನೂ ಅರ್ಜುನನ ಅರ್ಥಶ್ರೇಷ್ಠತ್ವವನ್ನೂ ಒಪ್ಪಿ ಧರ್ಮ

---

1. ನನು ಸಾಕ್ಷಾದ್ ವಿದ್ಯಾಖ್ಯ ತತ್ವಜ್ಞಾನಸಾಧನತ್ವಂ ನಿಷ್ಕಾಮ ಧರ್ಮಸ್ಯಾಪ್ಯಸ್ತಿ। ಅತಃ ಕಥಮಧಿಕೋ ಮಾನುಷಾರ್ಥೋ ಧರ್ಮಾದಿತ್ಯತ ಆಹ ಯದೀತಿ। ಅರ್ಥಮೇವಾನು ಸಂವ್ರಜೇತ್ ಗ್ರಾಸ ವಸನಾದ್ಯುತ್ಪಾದ್ಯೈಪಾರ್ಥಾನು ಕೂಲ್ಯೇನ ವರ್ತತೇ। -ವ್ಯಾಸತೀರ್ಥೀಯ

ವಿಲ್ಲದೆ ಅರ್ಥವಿಲ್ಲ. ಅರ್ಥವಿಲ್ಲದೆ ಧರ್ಮವಿಲ್ಲ, ಪರಸ್ಪರ ಸಹಕಾರಿಗಳಾದ್ದರಿಂದ ಎರಡೂ ಉತ್ತಮ, ಕಾಮ ಅಧಮ ಎಂದರು.

ಅಥಾಽಹ ಭೀಮಃ ಪ್ರವರಃ ಸುತತ್ತ್ವ
ದೃಶಾಂ ಸಮಸ್ತಾನಭಿಭಾಷ್ಯ ಹರ್ಷಾತ್ ।
ಸ್ಮಯನ್ ನ ಕಾಮಾದತಿರಿಕ್ತಮಸ್ತಿ
ಕಿಂಚಿಚ್ಛುಭಂ ಕ್ವಾವರತಾಂ ಸ ಯಾಯಾತ್ ॥೫೫॥

ಬಳಿಕ ಉತ್ತಮ ತತ್ವಜ್ಞಾನಿಗಳಲ್ಲಿ ಉತ್ತಮನಾದ ಭೀಮ ಎಲ್ಲರನ್ನೂ ಸಂಬೋಧಿಸಿ ಆಶ್ಚರ್ಯಗೊಳಿಸುತ್ತ ಸಂತೋಷದಿಂದ ನುಡಿದ. 'ಕಾಮವೆಂಬ ಪುರುಷಾರ್ಥಕ್ಕಿಂತ ಬೇರೆ ಉತ್ತಮವಾದುದು ಏನೂ ಇಲ್ಲ. ಅದು ಅಧಮತ್ವವನ್ನು ಹೇಗೆ ಹೊಂದುವುದು?

ಕಾಮ್ಯಂ ಹಿ ಕಾಮಾಭಿಧಮಾಹುರಾರ್ಯಾಃ
ಕಾಮ್ಯಾಃ ಪುಮರ್ಥಾಃ ಸಹ ಸಾಧನೈರ್ಯತ್ ।
ಅಕಾಮ್ಯತಾಂ ಯಾತ್ಯಪುಮರ್ಥ ಏವ
ಪುಮರ್ಥಿತತ್ವಾದ್ಧಿ ಪುಮರ್ಥ ಉಕ್ತಃ ॥೫೬॥

ಇಷ್ಟವನ್ನು ಕಾಮ ಎನ್ನುತ್ತಾರೆ ಹಿರಿಯರು. ಪುರುಷಾರ್ಥಗಳೆಲ್ಲವೂ ಅವುಗಳ ಸಾಧನಗಳಿಂದೊಡಗೂಡಿ ಇಷ್ಟವಾಗಿರುವುದರಿಂದ ಕಾಮ ಅಧಮವಾಗುವುದೆಂತು. ಇಷ್ಟವಲ್ಲದ ದುಃಖಾದಿಗಳು ಪುರುಷಾರ್ಥವಾಗಲಾರವು. ಪುರುಷರಿಗೆ ಇಷ್ಟವಾದುದೇ ಪುರುಷಾರ್ಥವೆನಿಸಿದೆ ತಾನೆ?

'ಕಾಮೋ ಹಿ ರಾಜನ್ ಪರಮೋ ಭವೇನ್ನಃ' ಎಂದು ಭೀಮ ಹೇಳಿದಾಗ ಎಲ್ಲರಿಗೂ ಆಶ್ಚರ್ಯವಾಯಿತು. ಅವನ ಅಭಿಪ್ರಾಯ ಹೀಗೆ-

'ಕಾಮ' ಎಂದರೆ ಇಚ್ಛೆ, ಇಷ್ಟ ಎಂದು ಎರಡೂ ಅರ್ಥಗಳಿವೆ. ಅವುಗಳಲ್ಲಿ ಕೇವಲ ಇಚ್ಛೆಯಿಂದ ಏನೂ ಸುಖವಿಲ್ಲ. ಇಷ್ಟವಾದ ಅನ್ನಾದಿಗಳಿಂದಲೆ ಸುಖ. ಆದರಿಂದ ಇಷ್ಟವೆ ಕಾಮ ಎಂಬ ಪುರುಷಾರ್ಥ. ಧರ್ಮ ಅರ್ಥಮೋಕ್ಷಗಳೂ ಇಷ್ಟವಾದ್ದರಿಂದ ಕಾಮದಲ್ಲಿಯೆ ಸೇರಿಹೋಗುತ್ತವೆ. ಅವು 'ಪುರುಷಾರ್ಥ' ಎನಿಸಿದುದು 'ಪುರುಷರಿಗೆ ಇಷ್ಟ' ಎಂಬ ಅರ್ಥದಲ್ಲಿಯೇ ತಾನೆ? ಅದರಿಂದ ಎಲ್ಲ ಪುರುಷಾರ್ಥಗಳೂ ಕಾಮವೇ ಆಗಿರುವಾಗ ಪುರುಷಾರ್ಥಗಳಲ್ಲಿ ಕಾಮ ಅಧಮ ಎನ್ನುವುದು ಹೇಗೆ ಯುಕ್ತವಾದೀತು?

ಕಾಮವಲ್ಲದ ಪುರುಷಾರ್ಥವಿದೆ ಎನ್ನುವುದು ನನ್ನ ತಾಯಿ ಬಂಜೆ ಎಂಬಂತೆ ವ್ಯಾಹತ. ಏಕೆಂದರೆ ಕಾಮವಲ್ಲದುದೆಂದರೆ ಇಷ್ಟವಲ್ಲದ

ದುಃಖಾದಿಗಳು. ಅವು ಪುರುಷರಿಗೆ ಇಷ್ಟವಾಗಿ ಪುರುಷಾರ್ಥವೆನಿಸಲಾರವು.[1]

ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಂ।

(ಶಾಂತಿ ೧೬೭.೩೬)

ಎಂಬ ಭಾರತ ವಚನಕ್ಕೆ ಇಲ್ಲಿ ವಿವರಣೆ ಇದೆ.

ವಿಜ್ಞಾನಭಕ್ತ್ಯಾದಿಕಮಪ್ಯತೀವ
ತತ್ಸಾಧನಂ ಕಾಮಬಹಿಷ್ಕೃತಂ ಚೇತ್ ।
ನ ಸಾಧನಂ ಸ್ಯಾತ್ ಪರಮೋಽಪಿ ಮೋಕ್ಷೋ
ನ ಸಾಧ್ಯತಾಂ ಯಾತಿ ವಿನಾ ಹಿ ಕಾಮಾತ್ ॥೫೭॥

ಜ್ಞಾನಭಕ್ತಿ ಮುಂತಾದವುಗಳು ಮುಖ್ಯವಾಗಿ ಧರ್ಮಾದಿಪುರುಷಾರ್ಥಗಳಿಗೆ ಸಾಧನವಾಗಿರುವವು. ಅವು ಇಷ್ಟವಾಗದೆ ಹೋದರೆ ಸಾಧನವಾಗದೇ ಹೋಗುವುವು. ಆದರಿಂದ ಜ್ಞಾನಭಕ್ತಿ ಮುಂತಾದುವುಗಳೂ ಕಾಮವೆ ಎಂದು ಒಪ್ಪಬೇಕು. ಪರಮ ಪುರುಷಾರ್ಥವಾದ ಮೋಕ್ಷವೂ ಕಾಮವೆ. ಏಕೆಂದರೆ ಅದು ಇಷ್ಟವಾಗದೆ ಹೋದರೆ ಸಾಧ್ಯವೆನಿಸಲಾರದು.

---

[2]'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ' ಎಂದು ಶ್ರುತಿ ಹೇಳುವಂತೆ ಜ್ಞಾನಾದಿಗಳನ್ನು ಬಯಸಿ ಶ್ರವಣಾದಿಗಳನ್ನು ಮಾಡಿದರೆ ಮಾತ್ರ ಫಲ. ಆದರಿಂದ ಮೋಕ್ಷ ಸಾಧನವೂ ಇಷ್ಟವಾಗಿದ್ದು ಕಾಮ ಎಂದೇ ಎನಿಸುತ್ತದೆ. ಮೋಕ್ಷವೂ ಕಾಮವೆ. ಮೋಕ್ಷವನ್ನು ಬಯಸದಿದ್ದರೆ ಅದನ್ನು ಸಾಧಿಸಲು ಯಾರು ಪ್ರಯತ್ನಿಸುತ್ತಾರೆ? ಆದರಿಂದ ಮೋಕ್ಷ ಅಸಾಧ್ಯವಾದೀತು.

ಪರಾತ್ ಪರೋಽಪ್ಯಾದಿಪುಮಾನ್ ಹರಿಶ್ಚ
ಸ್ವಸ್ಯೇತರೇಷಾಮಪಿ ಕಾಮ್ಯ ಏವ ।
ಅಕಾಮಿತೋಽವಾಗ್ಗತಿಮೇವ ದದ್ಯಾತ್
ಕಾಮಃ ಪುಮರ್ಥೋಽಖಿಲ ಏವ ತೇನ ॥೫೮॥

ಪರಾತ್ಪರ ಆದಿ ಪುರುಷನಾದ ಹರಿಯೂ ತನಗೆ ಮತ್ತು ಇತರರಿಗೆ ಇಷ್ಟನೆ. ಅವನು

---

1. ಅನ್ಯಾಕಾಂಕ್ಷಾ ಮಾತ್ರಸ್ಯಾಪುರುಷಾರ್ಥತ್ವಾತ್ ಕಾಮ್ಯಂತ ಇತಿ ವ್ಯುತ್ಪತ್ತ್ಯಾ ಕಾಮ್ಯಾಃ ಪದಾರ್ಥಾ ಏವ ಕಾಮಾಃ। ನ ತು ಕಾಮನೇತಿ ಭಾವಃ। ಕಿಂ ಬಹುನಾ? ಪುರುಷೈರರ್ಥ್ಯಮಾನೋ ಹಿ ಪುರುಷಾರ್ಥಃ। ಅರ್ಥನಾ ಚ ಕಾಮಃ। ಅತಃ ಕಾಮಂ ವಿನಾ ಪುರುಷಾರ್ಥ ಇತ್ಯೇತತ್ ವ್ಯಾಹತಮಿತಿ ಜ್ಞೇಯಂ।
-ವಾದಿರಾಜೀಯ

2. 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ' ಇತಿ ಶ್ರುತೇಃ ಕಾಮನಾಪೂರ್ವಕಂ ಸಾಧಿತಂ ಶ್ರವಣ ಮನನಾದಿ ಫಲದಾಯಕಂ। ನ ತು ತಟಸ್ಥತಯಾ ಕೃತಮಿತಿ ಭಾವೇನಾಹ ವಿಜ್ಞಾನ ಭಕ್ತ್ಯಾದಿಕಮಿತಿ।
-ವಾದಿರಾಜೀಯ

ಇಷ್ಟನೆನಿಸದಿದ್ದರೆ ಅಧಮಗತಿಯನ್ನೆ ಕೊಡುತ್ತಾನೆ. ಅದರಿಂದ ಅವನೂ 'ಕಾಮ' ಎನಿಸುತ್ತಾನೆ. ಹೀಗೆ ಸಕಲ ಪುರುಷಾರ್ಥವೂ ಕಾಮವೆ ಆಗಿದೆ.

[1]'ಶ್ರೀಹರಿ ತಾನು ಬಹುರೂಪಿಯಾಗಬೇಕೆಂದು ಬಯಸಿದ.' 'ತಾನು ಗುಣಪೂರ್ಣನಾದ್ದರಿಂದ ತನಗೇ ಆಶ್ಚರ್ಯಕರನಾಗಿ ಇಷ್ಟನಾಗಿದ್ದಾನೆ.' ಹೀಗೆ ಉಪನಿಷತ್ತು ಮತ್ತು ಭಾಗವತ ವಚನಗಳಿಂದ ಹರಿ ತನಗೆ ತಾನೆ ಪರಮಪ್ರಿಯ ಇಷ್ಟ, ಮತ್ತು ಭಕ್ತರಿಗೆ ಭಗವಂತ ಪ್ರಿಯನಾಗಿದ್ದು ಸಕಲ ಪುರುಷಾರ್ಥಗಳನ್ನು ನೀಡುತ್ತಾನೆ. ದ್ವೇಷಿಗಳಿಗೆ ಪ್ರಿಯನಲ್ಲ. ಅವರಿಗೆ ಅಧಮಗತಿ ನೀಡುತ್ತಾನೆ. ಅದರಿಂದ ಸಕಲ ಪುರುಷಾರ್ಥಗಳಂತೆ ಅವನ್ನು ನೀಡುವ ಹರಿಯೂ ಇಷ್ಟನಾಗಿದ್ದು 'ಕಾಮ' ಎನಿಸುತ್ತಾನೆ ಎಂದಮೇಲೆ ಕಾಮ ಅಧಮ ಹೇಗೆ?

ಇಚ್ಛೈವ ಕಾಮೋಽಸ್ತು ತಥಾಽಪಿ ನೈತಾ-
ಮೃತೇ ಹಿ ಚಿತ್ತ್ವಂ ಘಟಕುಡ್ಯವತ್ ಸ್ಯಾತ್ ।
ಸಾರಸ್ತತಃ ಸೈವ ಚಿದಾತ್ಮಿಕಾಽಪಿ
ಸಾ ಚೇತನಾ ಗೂಢತನುಃ ಸದೈವ ॥೫೯॥

ಇಚ್ಛೆಯೆ ಕಾಮವೆಂದರೂ ಹಾಗೇ ಆಗಲಿ. ಇಚ್ಛೆ ಇಲ್ಲದಿದ್ದರೆ ಚೇತನ ಚೇತನನೆನಿಸಲಾರ. ಗಡಿಗೆ ಗೋಡೆಗಳಂತೆ ಜಡಪದಾರ್ಥವೆನಿಸುತ್ತಾನೆ. ಅದರಿಂದ ಚೇತನ ಸ್ವರೂಪ ಭೂತವಾದ ಇಚ್ಛೆ ಸರ್ವಪುರುಷಾರ್ಥಗಳಿಗೆ ಮೂಲಭೂತವಾಗಿದ್ದು ಉತ್ತಮವೆನಿಸುತ್ತದೆ. ಇಚ್ಛೆ ಚೇತನ ಸ್ವರೂಪ, ಅಚೇತನ ಸ್ವರೂಪ ಎಂದು ಎರಡು ಬಗೆಯಾಗಿದೆ. ಅವುಗಳಲ್ಲಿ ಚೇತನ ಸ್ವರೂಪಭೂತವಾದ ಇಚ್ಛೆ ಸಂಸಾರದಲ್ಲಿ ಸದಾ ಅಜ್ಞಾನಾವೃತವಾಗಿರುತ್ತದೆ. ಅಚೇತನ ಸ್ವರೂಪವಾದ ಇಚ್ಛೆ ಸದಾ ಅನಾವೃತವಾಗಿರುತ್ತದೆ.

ಸಂಸಾರದಲ್ಲಿ ಜೀವಸ್ವರೂಪೇಚ್ಛೆ ಅಜ್ಞಾನಾವೃತವಾಗಿರುವುದರಿಂದ ವ್ಯಕ್ತವಾಗಿರುವುದಿಲ್ಲ. ಅದಕ್ಕೆ ವಿಷಯನಾದ ಭಗವಂತನನ್ನು ಸಂಸಾರಾವಸ್ಥೆಯಲ್ಲಿ ಮರೆಯುತ್ತೇವೆ. ಮನೋವೃತ್ತಿರೂಪವಾದ ಇಚ್ಛೆ ಜಡ, ಅದಕ್ಕೆ ಆವರಣವಿಲ್ಲ. ಮೋಕ್ಷದಲ್ಲಿ ಜಡಅಂತಃಕರಣ ದೂರವಾಗುವುದರಿಂದ ಅಚೇತನಸ್ವರೂಪಭೂತ ಇಚ್ಛೆ ಇರುವುದಿಲ್ಲ. ಚೇತನ ಸ್ವರೂಪೇಚ್ಛೆ ಇರುತ್ತದೆ.

---

1. ಸೋಕಾಮಯತ ಬಹುಸ್ಯಾಂ ಪ್ರಜಾಯೇಯೇತಿ ಶ್ರುತೇಃ ವಿಸ್ಮಾಪನಂ ಸ್ವಸ್ಯಚ ಸೌಭಗರ್ದ್ಧೇರಿತಿ ಭಾಗವತೋಕ್ತೇಶ್ಚ ಭಗವಾನ್ ಸ್ವಯಮಪಿ ಸ್ವೇನ ಕಾಮ್ಯ ಇತಿ ಭಾವೇನೋಕ್ತಂ ಸ್ವಸ್ಯೇತರೇಷಾಮಪಿ ಕಾಮ್ಯ ಏವೇತಿ। ಕಾಮೋಽಖಿಲಃ ಸಂಪೂರ್ಣಃ ಪುಮರ್ಥಃ। ರಾಗಕಲುಷ ಮನೋವೃತ್ತಿರೂಪೇಚ್ಛಾಯಾ ಅಪುರುಷಾರ್ಥತ್ವಾತ್ ಚಿದಾತ್ಮಿಕಾ ಸೈವ ಇಚ್ಛೈವ ಸಾರ ಇತ್ಯುಕ್ತಂ। ಚೇತನೇತಿ ಚಿದ್ರೂಪಾ। ಸೇಚ್ಛಾ ಗೂಢತನುಃ ಸಂಸಾರೇ ಗೂಢತನುಃ।

ಈ ಎರಡು ಬಗೆಯ ಇಚ್ಛೆಯನ್ನು ಹೊಂದಿರುವುದು ಚೇತನರ ಲಕ್ಷಣ. ಇಚ್ಛೆಯೆ ಇಲ್ಲವೆಂದರೆ ಚೇತನ ಅಲ್ಲ, ಜಡ. ಜಡಕ್ಕೆ ಮೋಕ್ಷವಿಲ್ಲ. ಅದರಿಂದ ಇಚ್ಛಾರೂಪವಾದ ಕಾಮ ಪರಮ ಪುರುಷಾರ್ಥವೆನ್ನಲಿಬೇಕು.

'ಸಾಚೇತನಾಗೂಢತನುಃ' ಎಂಬಲ್ಲಿ ಸಾ ಚೇತನಾ ಗೂಢತನುಃ, ಸಾ ಅಚೇತನಾ ಅಗೂಢತನುಃ ಎಂದು ಎರಡು ಬಗೆಯಿಂದ ಪದವಿಭಾಗಮಾಡಿ ಮೇಲಿನಂತೆ ವ್ಯಾಖ್ಯಾನಿಸಲಾಗಿದೆ.

ನ ಪ್ರಶ್ನಯೋಗ್ಯಃ ಪೃಥಗೇವ ಕಾಮ-
ಸ್ತೇನೈಷ ರಾಜನ್ ಯದಿ ತಾರತಮ್ಯಮ್ ।
ಇಚ್ಛಸ್ಯಯಂ ತೇ ತ್ರಿವಿಧೋ ಹಿ ವೇದ್ಯೋ
ಧರ್ಮಾರ್ಥಯುಕ್ತಃ ಪರಮೋ ಮತೋಽತ್ರ ॥೬೦॥
ಏಕಾವಿರೋಧೀ ಯದಿ ಮಧ್ಯಮೋಽಸೌ
ದ್ವಯೋರ್ವಿರೋಧೀ ತು ಸ ಏವ ನೀಚಃ ।
ತಸ್ಮಾತ್ ಸ್ವಬುದ್ಧಿಪ್ರಮದಾಭಿರೇವ
ಕಾಮಂ ರಮೇಥಾ ಅನುರೂಪಕಾಮಃ ॥೬೧॥

ಅದರಿಂದ ಈ ಇಚ್ಛಾರೂಪವಾದ ಕಾಮ ಪ್ರತ್ಯೇಕವಾಗಿ ಪ್ರಶ್ನೆಗೆ ಯೋಗ್ಯವಲ್ಲ. ಆದರೂ ಅದರ ವಿಷಯದಲ್ಲಿಯೇ ತಾರತಮ್ಯವನ್ನು ತಿಳಿಯಲು ಬಯಸುವಿಯಾದರೆ ಅದು ಮೂರು ಬಗೆಯಾಗಿದೆ. ಧರ್ಮ ಅರ್ಥಗಳೆರಡರಿಂದಲೂ ಕೂಡಿದ್ದರೆ ಪುರುಷಾರ್ಥಗಳಲ್ಲಿ ಉತ್ತಮ. ಒಂದಕ್ಕೆ ಮಾತ್ರ ಅವಿರುದ್ಧವಾದರೆ ಮಧ್ಯಮ. ಎರಡಕ್ಕೂ ವಿರೋಧಿಯಾದರೆ ಅಧಮ. ಅದರಿಂದ ರಾಜನೆ ಧರ್ಮಾದಿಗಳಿಗೆ ಅನುಕೂಲವಾಗಿ ಸ್ತ್ರೀಯರಿಂದ ಯಥೇಷ್ಟ ರಮಿಸು ಅಥವಾ ಬುದ್ಧಿಗಳೆಂಬ ಸ್ತ್ರೀಯರಿಂದಲೆ ಯಥೇಚ್ಛ ರಮಿಸು.

ಇಚ್ಛಾರೂಪವಾದ ಕಾಮವನ್ನು ಪುರುಷಾರ್ಥಗಳಲ್ಲಿ ಉತ್ತಮವೆ ಮಧ್ಯಮವೆ ಅಧಮವೆ ಎಂದು ಕೇಳಕೂಡದು. ಏಕೆಂದರೆ ಅದು ಶಾಕಗಳಲ್ಲಿ ಲವಣದಂತೆ ಎಲ್ಲ ಪುರುಷಾರ್ಥಗಳಲ್ಲಿ ಸೇರಿಹೋಗಿದೆ. ಎಲ್ಲ ಪುರುಷಾರ್ಥಗಳೂ ಇಷ್ಟವಾಗಿವೆ. ಆದರೂ ಈ ಕಾಮದ ಬಗ್ಗೆಯೆ ತಾರತಮ್ಯವನ್ನು ಪ್ರಶ್ನೆಮಾಡುವಿಯಾದರೆ ಇದರಲ್ಲಿ ಮೂರು ಬಗೆ ಉಂಟು. ಧರ್ಮಕ್ಕೂ ದೈವ ಮತ್ತು ಮಾನುಷ ಅರ್ಥಗಳಿಗೂ ವಿರೋಧಿಯಾಗದಂತೆ ವೈರಾಗ್ಯ ಪೂರ್ವಕವಾಗಿ ಏಕಾದಶ್ಯುಪವಾಸಾದಿಗಳನ್ನು ವಿರಕ್ತರಾದ ಗುರುಗಳಿಂದ ಶ್ರವಣ ಮನನನಿದಿಧ್ಯಾಸನಾದಿಗಳನ್ನು ಮಾಡಬೇಕೆನ್ನುವ ಕಾಮ ಉತ್ತಮ. ಧರ್ಮಕ್ಕೆ ಅವಿರೋಧಿ ಅರ್ಥಕ್ಕೇ ವಿರೋಧಿಯಾದ, ವಿಶ್ವಜಿತ್ ಮುಂತಾದ ಕಾಮ್ಯಯಾಗದ ಬಯಕೆ ಅಥವಾ ಧರ್ಮಕ್ಕೆ ವಿರೋಧಿ ಅರ್ಥಕ್ಕೆ ಅವಿರೋಧಿ

ಹಣಕ್ಕಾಗಿ ಹೀನ ಜನರ ಸೇವೆ ಮಾಡುವ ಬಯಕೆ ಮಧ್ಯಮ. ಎರಡಕ್ಕೂ ವಿರೋಧಿ, ಪರಸ್ತ್ರೀಸಂಗಮುಂತಾದವುಗಳ ಬಯಕೆ, ಅಧಮ. ಲೋಕದಲ್ಲಿ ಸ್ರಕ್ ಚಂದನ ವನಿತಾದಿ ಭೋಗವನ್ನೆ ಕಾಮ ಎನ್ನುತ್ತಾರೆ. ಅದರಲ್ಲಿಯೂ ಹರಿ ನಿರ್ಮಾಲ್ಯರೂಪವಾದ ಗಂಧ ಮಾಲೆಗಳನ್ನು ಮತ್ತು ಸಂತಾನಕ್ಕಾಗಿ ಧರ್ಮಪತ್ನಿಯನ್ನು ಸೇವಿಸುವುದು ಉತ್ತಮ. ಅಥವಾ 'ಪ್ರ-ಮದೆ' ಉತ್ತಮವಾದ ಸಾತ್ವಿಕ ಆನಂದ ನೀಡುವ ಬುದ್ಧಿಗಳೆ ಪ್ರಮದೆಯರು. ಉದಾ: ಹರಿ ಸಕಲ ಗುಣಪೂರ್ಣನೆಂದು ನಂಬುವ ಬುದ್ಧಿ, ವೈರಾಗ್ಯಬುದ್ಧಿ, ಉಪಾಸನೆ ಮಾಡುವ ಬುದ್ಧಿ ಇವೆಲ್ಲ ಪ್ರಮದೆಯರು. ಅವರೊಡನೆ ಯಥೇಚ್ಛ ರಮಿಸು ಎನ್ನುತ್ತಾನೆ ಭೀಮಸೇನ.[1]

ರಾಜನ್ ನ ಕಾಮಾದಪರಂ ಶುಭಂ ಹಿ
ಪರೋ ಹಿ ಕಾಮೋ ಹರಿರೇವ ಯೇನ।

---

1. ಶಾಕೇಷು ಲವಣಮಿವ ಸರ್ವಪುರುಷಾರ್ಥೇಷು ಕಾಮಸ್ಯ ಮಿಶ್ರಿತತ್ವಾತ್ ಪೃಥಕ್ ಪ್ರಶ್ನಯೋಗ್ಯೋ ನೇತ್ಯಾಹ ನ ಪ್ರಶ್ನಯೋಗ್ಯ ಇತಿ। ಯದಿ ತಾರತಮ್ಯಂ ಕಾಮೇ ತಾರತಮ್ಯಂ ಇಚ್ಛಸಿ ಜ್ಞಾತುಮಿಚ್ಛಸಿ ತರ್ಹ್ಯಯಂ ಕಾಮಃ ಉತ್ತಮಾಧಮ ಮಧ್ಯಮಭೇದೇನ ತ್ರಿವಿಧೋ ವೇದ್ಯೋ ಹಿ। ಅತ್ರ ಧರ್ಮಸ್ಯ ದೈವಮಾನುಷರೂಪಾರ್ಥಸ್ಯ ಚಾವಿರೋಧೀ ಕಾಮಃ ವೈರಾಗ್ಯ ಪೂರ್ವಕಂ ವಿರಕ್ತೇಭ್ಯೋ ಗುರುಭ್ಯಃ ಶ್ರವಣ ಮನನ ನಿದಿಧ್ಯಾಸನಾದಿ ವಿಷಯಕ ಕಾಮಃ ಪರಮೋ ಮತಃ। ಧರ್ಮಾವಿರೋಧೀ ಅರ್ಥಸ್ಯ ಚ ವಿರೋಧೀ ವಿಶ್ವಜಿದ್ಯಾಗಾದಿ ವಿಷಯಕ ಕಾಮೋ ಮಧ್ಯಮಃ। ದ್ವಯೋರ್ವಿರೋಧೀ ಅಗಮ್ಯಾಗಮನ ವಿಷಯಕ ಕಾಮೋ ನೀಚ ಏವ। ತರ್ಹಿ ಸ್ರಕ್ ಚಂದನ ವನಿತಾದಿಕಂ ಕಾಮ ಇತಿ ಲೋಕೇ ವದಂತಿ। ತಸ್ಯ ಕೋಭಿಪ್ರಾಯ ಇತ್ಯಾಶಂಕ್ಯಾರ್ಧಾಂಗೀಕಾರೇಣ ಪರಿಹರತಿ ತಸ್ಮಾತ್ ಸ್ವಬುದ್ಧಿಪ್ರಮದಾಭಿರೇವೇತ್ಯಾದಿನಾ। ಮದೀ ಹರ್ಷ ಇತಿಧಾತೋಃ ಪ್ರಕೃಷ್ಟೋ ಮದೋ ಮೋಕ್ಷಾಖ್ಯ ಹರ್ಷೋ ಯಾಭ್ಯಸ್ತಾಃ ಪ್ರಮದಾಃ। ನತು ಪ್ರಕೃಷ್ಟಮದಕಾರಿಣೀ ಲೌಕಿಕ ವನಿತೇತಿ ಭಾವಃ। ಸುಬುದ್ಧಯಃ ಹರೇರ್ಗುಣ ಪೂರ್ಣತ್ವ ವಿಷಯಾ ಏಕಾ ಬುದ್ಧಿಃ, ವೈರಾಗ್ಯಬುದ್ಧಿಃ, ಉಪಾಸನಾಬುದ್ಧಿರಿತ್ಯಾದ್ಯಾಃ ಸುಬುದ್ಧಯ ಏವ ಪ್ರಮದಾಃ। ತಾಭೀ ರಮೇಥಾಃ। ವನಿತಾಖ್ಯೋ ವಿಷಯೋಽಯಮೇವೇತಿ ಭಾವಃ। ಇದಂ ಚೋಪಲಕ್ಷಣಂ। ಹರೌ ಸಮರ್ಪಿತ ಸ್ರಜಾ ಹರಿನಿರ್ಮಾಲ್ಯಗಂಧೇನ ಚ ಸದಾ ರಮೇಥಾ ಇತ್ಯಪಿ ಗ್ರಾಹ್ಯಂ।

-ವಾದಿರಾಜೀಯ

ಸ್ತ್ರೀಸಂಗಾದಿ ರೂಪಕಾಮಸ್ಯ ನೀಚತ್ವಮಿತಿ ತೃತೀಯ ಪಕ್ಷೇ ಇಷ್ಟಾಪತ್ತಿಃ। ತಸ್ಯಾಪಿ ಧರ್ಮಾಧೋರ್ಭಯ ವಿರುದ್ಧತ್ವಾದಿತ್ಯಾಶಯಃ। ತರ್ಹಿ ಕಥಂ ಪ್ರಮದಾ ಸ್ವೀಕಾರವಿಧಿರಿತಿ ಚೇತ್ ತಸ್ಯ ಪುತ್ರಾರ್ಥತ್ವೇನ ಧರ್ಮ ವಿರುದ್ಧತ್ವಾಭಾವಾತ್। ಬುದ್ಧ್ಯಾಖ್ಯ ಪ್ರಮದಾ ಸ್ವೀಕಾರ ಪರತ್ವಂ ಚೇತ್ಯಭಿಪ್ರೇತ್ಯಾಹ ತಸ್ಮಾದಿತಿ॥

-ಫಲಾರೀಯ

ಅತ್ರ ಸ್ವಬುದ್ಧಿ ಪ್ರಮದಾಭಿರಿತ್ಯನೇನ ಕಾಮಶಬ್ದೇನ ಭೋಗ ಮಾತ್ರಂ ಸ್ವೀಕೃತ್ಯ ತಸ್ಯ ನಿಷೇಧೇ ಸ್ವಬುದ್ಧ್ಯಾಸ್ವ ಸ್ತ್ರಿಯಾ ಚ ರಮಣಂ ನಿಷೇಧ್ಯೇತ। ನ ಚ ತದ್ಯುಜ್ಯತೇ। ಧಿಯಾ ರಮಣಸ್ಯ, ವಿಹಿತ ಕಾಲೇ ಸ್ವಸ್ತ್ರೀರಮಣಸ್ಯ ಚ ವಿಧಾಯಕ ಶಾಸ್ತ್ರ ಪ್ರಾಮಾಣ್ಯಾಪಾಯಾದಿತಿ ಬಾಧಕಂ ಸೂಚಯತೀತಿ ಧ್ಯೇಯಂ।

-ಪ್ರಮಾಣ ಸಂಗ್ರಹ

ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ
ವಿಚಿತ್ರಮಾಲ್ಯಾಭರಣೈರುಪೇತಃ ।
ಇದಂ ವಚೋ ವ್ಯಾಸಸಮಾಸಯುಕ್ತಂ
ಸಂಪ್ರೋಚ್ಯ ಭೀಮೋ ವಿರರಾಮ ವೀರಃ ॥೬೨॥

ರಾಜನೆ, ಕಾಮಕ್ಕಿಂತ ಬೇರೆ ಉತ್ತಮ ಪುರುಷಾರ್ಥವಿಲ್ಲ. ಏಕೆಂದರೆ ಪ್ರಾಜ್ಞನೂ ಎಲ್ಲ ಜೀವರಿಗೆ ಸಖನೂ ಚಂದನ ದ್ರವಲೇಪಯುಕ್ತನೂ ವಿಚಿತ್ರ ಮಾಲ್ಯ ಆಭರಣಗಳಿಂದ ಕೂಡಿದವನೂ ಆದ ಸರ್ವೋತ್ತಮನಾದ ಶ್ರೀಹರಿಯೆ ಕಾಮಗಳಲ್ಲಿ ಉತ್ತಮವಾದ ಕಾಮ. ಹೀಗೆ ವಿಸ್ತಾರ ಸಂಕ್ಷೇಪಗಳಿಂದ ಯುಕ್ತವಾದ ಮಾತನ್ನು ವೀರಭೀಮ ಹೇಳಿ ಸುಮ್ಮನಾದ.

ಪ್ರಾಜ್ಞಃ ಸುಹೃಚ್ಚಂದನ ಸಾರಲಿಪ್ತೋ
ವಿಚಿತ್ರಮಾಲ್ಯಾಭರಣೈರುಪೇತಃ।
ಇದಂ ವಚೋ ವ್ಯಾಸ ಸಮಾಸ ಯುಕ್ತಂ
ಸಂಪ್ರೋಚ್ಯ ಭೀಮೋ ವಿರರಾಮ ವೀರಃ॥

ಎಂದು ಮಹಾಭಾರತ ಶ್ಲೋಕವಿದೆ. ಅಲ್ಲಿ ಪ್ರಾಜ್ಞ ಇತ್ಯಾದಿ ವಿಶೇಷಣಗಳು ಭೀಮನಿಗೆ ಅನ್ವಯಿಸುವವು. ನಿರ್ಣಯದಲ್ಲಿ ಶ್ರೀಹರಿಗೂ ಅನ್ವಯಿಸುವಂತಿದೆ. ಅದರಿಂದ ಹರಿಗೆ ಸಮರ್ಪಿತವಾದ ಗಂಧಮಾಲ್ಯಾದಿ ಸೇವನೆ ವಿಹಿತವೆಂದು ಸೂಚಿತವಾಗುತ್ತಿದೆ. ಏಕೆಂದರೆ ಹರಿಯಂತೆಯೆ ಭೀಮನೂ ಗಂಧಮಾಲ್ಯಾದಿಗಳನ್ನು ಧರಿಸಿದ್ದಾನೆ ಎಂದು ಹೇಳಿದೆ.

ಧರ್ಮರಾಜ ತಾನು ಪಾಪ ಮಾಡಿದ್ದೇನೆ ಎಂಬ ತಪ್ಪುಗ್ರಹಿಕೆಯಿಂದ ಎಲ್ಲ ಉಪಭೋಗವನ್ನು ಬಿಟ್ಟ ಭೀಮ ಬಿಡಲಿಲ್ಲ ಎನ್ನುವುದನ್ನು ಸೂಚಿಸಲು ಭೀಮನ ಗಂಧಮಾಲ್ಯಾದಿಧಾರಣ ಉಕ್ತವಾಗಿದೆ ಎನ್ನುತ್ತದೆ ವರದರಾಜೀಯ.

ನಿಷಿದ್ಧಭೋಗ ತ್ಯಾಜ್ಯವಾದರೂ ವಿಹಿತಭೋಗ ಆವಶ್ಯಕವೆ. ಹರಿಪ್ರೀತಿಕರವೆ. ಅನಿಷಿದ್ಧಸುಖವನ್ನು ತೊರೆಯುವವನು ಪಶುತುಲ್ಯನೆಂದೂ ಹೇಳಿದೆ. ಅದರಿಂದ ಕಾಮೋಪಭೋಗ ಎಲ್ಲವೂ ಅಧಮ ಎನ್ನುವುದು ಅನುಚಿತ.

'ವೀರ' ಭೀಮ'ನೆಂದು ಹೇಳಿದ್ದರಿಂದ ಅವನು ತನ್ನ ಪಕ್ಷವನ್ನು ಸಮರ್ಥಿಸಿಕೊಳ್ಳಲು ಸಮರ್ಥನಾದ, ವಿದುರ ಅರ್ಜುನರು ಸಮರ್ಥರಾಗಲಿಲ್ಲ ಎಂದು ಸೂಚಿತವಾಯಿತು. 'ವೀರ' ಎಂದರೆ

ಸ್ವಕಾರ್ಯಸಾಧನಸಮರ್ಥ ಎಂದೇ ಅರ್ಥ.[1]

ಪ್ರಶಸ್ಯ ಭೀಮಮನ್ಯಾಂಶ್ಚ ರಾಜಾ ಮೋಕ್ಷಮಥಾಸ್ತುವತ್ ।
ಸ್ವಯುಕ್ತೀರಪ್ರತೀಪತ್ವಾನ್ನಿರಾಚಕ್ರೇ ನ ಮಾರುತಿಃ ॥೬೩॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಸಮಸ್ತಧರ್ಮಸಂಗ್ರಹೋ ನಾಮ ಏಕೋನತ್ರಿಂಶೋಽಧ್ಯಾಯಃ

ರಾಜಾ ಯುಧಿಷ್ಠಿರ ಭೀಮನನ್ನೂ ಅರ್ಜುನ ಮುಂತಾದವರನ್ನೂ ಪ್ರಶಂಸೆಮಾಡಿ ಮೋಕ್ಷವೆಂಬ ಪುರುಷಾರ್ಥವನ್ನು ಹೊಗಳಿದ. ತನ್ನ ಯುಕ್ತಿಗಳಿಗೆ ವಿರೋಧಿಯಾಗದಿದ್ದುದರಿಂದ ಅದನ್ನು ಭೀಮ ನಿರಾಕರಿಸಲಿಲ್ಲ.

'ಸಾರಂ ಧರ್ಮಾದಿಷು ತ್ರಿಷು' ಧರ್ಮಾದಿ ತ್ರಿವರ್ಗದಲ್ಲಿ ಶ್ರೇಷ್ಠ ಯಾವುದೆಂದು ವಿಚಾರ ಪ್ರಸಕ್ತವಾದಾಗ ಕಾಮ ಶ್ರೇಷ್ಠವೆಂದು ಭೀಮ ಪ್ರತಿಪಾದಿಸಿದ. ಧರ್ಮರಾಜ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷ ಶ್ರೇಷ್ಠವೆನ್ನುತ್ತಾನೆ. ಇಲ್ಲಿ ವಿರೋಧವಿಲ್ಲ. ಮೋಕ್ಷವೆ ಕಾಮ್ಯಗಳಲ್ಲಿ ಶ್ರೇಷ್ಠವಾದುದರಿಂದ ನಾಲ್ಕು ಪುರುಷಾರ್ಥಗಳಲ್ಲಿ ಶ್ರೇಷ್ಠ ಎಂಬುದು ಭೀಮನಿಗೆಸಂಮತ. ಅದರಿಂದ ಅದನ್ನು ಭೀಮ ನಿರಾಕರಿಸಲಿಲ್ಲ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ಸಮಸ್ತ ಧರ್ಮ ಸಂಗ್ರಹ ಎಂಬ
ಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

---

1. ಚಂದನ ಸಾರಲಿಪ್ತ ಇತ್ಯನೇನ ವಿಚಿತ್ರಮಾಲ್ಯಾಭರಣೈರುಪೇತ ಇತ್ಯನೇನ ಚ ನಿಷಿದ್ಧಭೋಗಸ್ಯ ತ್ಯಾಜ್ಯತ್ವೇಽಪಿ ವಿಹಿತ ಭೋಗಸ್ತ್ವಾವಶ್ಯಕ ಏವ। ಅನಿಷಿದ್ಧ ಸುಖತ್ಯಾಗೀ ಪಶುರೇವ ನ ಸಂಶಯ ಇತಿ ವಚನಾತ್। ಅತಃ ಕಾಮಶಬ್ದೇನ ಭೋಗಮಾತ್ರಂ ಸ್ವೀಕೃತ್ಯ ತಸ್ಯಾಧಮತ್ವ ವರ್ಣನ ಮನುಚಿತಮಿತಿ ಸೂಚಯತಿ। ವೀರ ಇತ್ಯನೇನ ವಿದುರಾದಿವತ್ ಗೃಹೀತ ಪಕ್ಷ ಸಮರ್ಥನಾಸಮರ್ಥೋ ನೇತಿ ಸೂಚಯತಿ। ಆರಬ್ಧಾಂತ ಗಾಮಿತ್ವಸ್ಯೈವ ವೀರತ್ವಾದಿತಿ। -ಪ್ರಮಾಣಸಂಗ್ರಹ

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 30

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಸ್ಮೃತ್ವಾ ಯಂ ದ್ಯುಸರಿತ್ಸುತೋ ವಸುರಭೂದ್ರಾಜಾ ಯದಾಶಾಸಿತೋ
ನಿರ್ದುಃಖೋಽಥ ಜುಗೋಪ ಧರ್ಮನಿರತೋ ಜಿತ್ವಾ ಸ್ವರಾಜ್ಯೇ ಕಲಿಂ।
ಯಃ ಪಾರ್ಥಂ ಸಮಬೋಧಯನ್ಮೃತ ಶಿಶುಂ ಯೋಽಜೀವಯತ್ ಪಾಂಡವೈ-
ರ್ಯೋ ಯಜ್ಞಂ ಸಮಕಾರಯದ್ಬಹುಧನೈರ್ಧ್ಯಾಯಾಮಿ ತಂ ಕೇಶವಂ ॥೩೦॥

ಶ್ರೀಕೃಷ್ಣನನ್ನು ನೆನೆದು ಭೀಷ್ಮ ವಸುರೂಪನಾದ. ಅವನಿಂದ ಉಪದೇಶ ಪಡೆದ ಧರ್ಮರಾಜ ದುಃಖವನ್ನು ಮರೆತು, ತನ್ನ ರಾಜ್ಯದಲ್ಲಿ ಕಲಿಯನ್ನು ನಿಗ್ರಹಿಸಿ, ಧರ್ಮನಿರತನಾಗಿ ರಾಜ್ಯವಾಳಿದ. ಶ್ರೀಕೃಷ್ಣ ಅರ್ಜುನನಿಗೆ ಅನುಗೀತೆಯನ್ನು ಉಪದೇಶಿಸಿದ. ಹುಟ್ಟುವಾಗಲೆ ಸತ್ತಿದ್ದ ಶಿಶು ಪರೀಕ್ಷಿತನನ್ನು ಬದುಕಿಸಿದ. ವಿಪುಲ ಧನವನ್ನು ಹೊಂದಿದ ಪಾಂಡವರಿಂದ ಅಶ್ವಮೇಧಯಾಗ ಮಾಡಿಸಿದ. ಅಂಥ ಕೇಶವನನ್ನು ಧ್ಯಾನಿಸುತ್ತೇನೆ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೩೦

ಯಾಗಸಮಾಪ್ತಿ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಧರ್ಮರಾಜನ ವಿರಕ್ತ ಜೀವನ

ಓಂ ॥ ಅಥ ಕೃಷ್ಣಮನುಸ್ಮೃತ್ಯ ಭೀಷ್ಮೇ ಸ್ವಾಂ ವಸುತಾಂ ಗತೇ ।
ಕೃತ್ವಾ ಕಾರ್ಯಾಣಿ ಸರ್ವಾಣಿ ಗಂಗಾಮಾಶ್ವಾಸ್ಯ ದುಃಖಿತಾಮ್ ॥೧॥
ಆಶ್ವಾಸಿತಶ್ಚ ಕೃಷ್ಣಾಭ್ಯಾಂ ಧರ್ಮಜೋ ದುಃಖಿತಃ ಪುನಃ ।
ಪರಾಶರಸುತೇನೋಕ್ತಃ ಕೃಷ್ಣೇನಾನಂತರಾಧಸಾ ॥೨॥

ಪಾಂಡವರಿಗೆ ಧರ್ಮಗಳನ್ನು ಉಪದೇಶಿಸಿದ ಬಳಿಕ ಭೀಷ್ಮ ಕೃಷ್ಣನನ್ನು ಧ್ಯಾನಿಸಿ ತನ್ನ ವಸುರೂಪವನ್ನು ಸೇರಿದಾಗ ಧರ್ಮರಾಜ ಅವನಿಗೆ ಎಲ್ಲ ಉತ್ತರಕ್ರಿಯೆಗಳನ್ನೂ ಮಾಡಿ ದುಃಖಿತಳಾದ ಗಂಗೆಯನ್ನು ಶ್ರೀವೇದವ್ಯಾಸ ಕೃಷ್ಣರ ಮೂಲಕ ಸಾಂತ್ವನ ಮಾಡಿ ತಾನೂ ಕೂಡ ಶ್ರೀವೇದವ್ಯಾಸ ಕೃಷ್ಣರಿಂದ ಸಾಂತ್ವನ ಪಡೆದ. ಆದರೂ ಪುನಃ ದುಃಖಿತನಾದ. ಆಗ ಪೂರ್ಣ ಕಾಮರಾದ ವೇದವ್ಯಾಸರು ಹೇಳಿದರು.

58 ದಿನಗಳ ಕಾಲ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನಿಗೆ ಅಂತ್ಯಸಂಸ್ಕಾರಕ್ಕಾಗಿ ಅಗ್ನಿ ಸಮೇತವಾಗಿ ಪಾಂಡವರು ಶ್ರೀಕೃಷ್ಣನೊಂದಿಗೆ ಕುರುಕ್ಷೇತ್ರಕ್ಕೆ ಬಂದರು. ಭೀಷ್ಮ ಶ್ರೀಕೃಷ್ಣನಲ್ಲಿ ಶರೀರ ತ್ಯಾಗಕ್ಕೆ ಅನುಜ್ಞೆ ಕೇಳಿದ. ವಸುಲೋಕಕ್ಕೆ ಹೋಗಲೂ ಅನುಜ್ಞೆ ಪಡೆದು ಯೋಗಬಲದಿಂದ ಶರೀರ ತ್ಯಾಗ ಮಾಡಿದ. ಶರೀರ ಒಡನೆ ಎಲ್ಲ ಬಾಣಗಳನ್ನು ಉದರಿಸಿತು.

ನೆತ್ತಿಯಿಂದ ಹೊರಟ ತೇಜಸ್ಸು ಆಕಾಶದಲ್ಲಿ ಏರಿ ಮರೆಯಾಯಿತು. ಭೀಷ್ಮನ ಮೂಲರೂಪವಾದ ದ್ಯುನಾಮಕ ವಸುವಿನಲ್ಲಿ ಸೇರಿ ಒಂದಾಯಿತು. ಹೊರತು ಕೃಷ್ಣನನ್ನು ಧ್ಯಾನಿಸುತ್ತ ಶರೀರದಿಂದ ಉತ್ಕ್ರಮಣ ಮಾಡಿಯೂ ಮೋಕ್ಷ ಹೊಂದಲಿಲ್ಲ.

ಪ್ರಾರಬ್ಧಕರ್ಮವಿರುವಷ್ಟು ಕಾಲ ಶರೀರತ್ಯಾಗದ ಕ್ಷಣದಲ್ಲಿ ಮನಸ್ಸನ್ನು ಶ್ರೀಹರಿ ಬಹಿರ್ಮುಖಗೊಳಿಸುತ್ತಾನೆ, ತನ್ನ ಧ್ಯಾನವನ್ನು ತಪ್ಪಿಸುತ್ತಾನೆ.

ಆದರಿಂದಲೆ ಕೃಷ್ಣನನ್ನು 'ಧ್ಯಾನಿಸಿ' ಎಂದಿದೆ. 'ಧ್ಯಾನಿಸುತ್ತ' ಎನ್ನಲಿಲ್ಲ. ಹಾಗಾದರೆ 'ಭೀಷ್ಮ ಮುಕ್ತಿ ಪ್ರದಾಯಕಃ' ಎಂದು ಪಂಚರಾತ್ರದಲ್ಲಿ ಶ್ರೀಕೃಷ್ಣನಿಗೆ ಬಿರುದನ್ನು ಕೊಟ್ಟಿದ್ದು ಹೇಗೆ ಎಂದರೆ ಪಾಂಡವರಿಗೆ ತತ್ತ್ವೋಪದೇಶ ಕೊಡಿಸಿ ಆ ಮೂಲಕ ಮೋಕ್ಷದಲ್ಲಿ ಆನಂದಾತಿಶಯ ರೂಪವಾದ ಮುಕ್ತಿಕೊಟ್ಟ ಎಂದರ್ಥ. ಅಥವಾ ಕ್ರಮೇಣ ಪ್ರಾರಬ್ಧ ತೀರಿದಾಗ ಮುಕ್ತಿ ಕೊಟ್ಟ ಎಂದರ್ಥ.

ಗಂಗಾದೇವಿಗೆ ತನ್ನ ಮಗನಾದ ಭೀಷ್ಮ ಸ್ತ್ರೀಯಾಗಿದ್ದ ಶಿಖಂಡಿಯಿಂದ ಹತನಾದನೆಂದು ದುಃಖ. ಗಂಗೆಯಲ್ಲಿ ಪಾಂಡವರು ಮೃತರಿಗೆ ತರ್ಪಣ ನೀಡುತ್ತಿದ್ದಾಗ ಅವಳು ಎದ್ದು ಬಂದು ಭೀಷ್ಮನಿಗಾಗಿ ಶೋಕಿಸಿದಳು. ಆಗ ವೇದವ್ಯಾಸ ಕೃಷ್ಣರು ಸಮಾಧಾನ ಮಾಡಿದರು. ಶಿಖಂಡಿಯ ಬಾಣಗಳು ಭೀಷ್ಮನನ್ನು ಬೀಳಿಸಲಿಲ್ಲ. ಅರ್ಜುನನ ಬಾಣಗಳೆ ಬೀಳಿಸಿದುವು. ಕ್ಷತ್ರಿಯನಿಗೆ ಅದು ಪರಮಪವಿತ್ರ ಎಂದು. ಬಳಿಕ ಧರ್ಮರಾಜನಿಗೆ ಉಪದೇಶಿಸಿದರು.

ಅಪಾಪೇ ಪಾಪಶಂಕಿತ್ವಾದಶ್ವಮೇಧೈರ್ಯಜಾಚ್ಯುತಮ್ ।
ಕುರು ರಾಜ್ಯಂ ಚ ಧರ್ಮೇಣ ಪಾಲಯಾಪಾಲಕಾಃ ಪ್ರಜಾಃ ॥೩॥

'ಪಾಪವಲ್ಲದುದನ್ನು ಪಾಪವೆಂದು ನೀನು ಶಂಕಿಸುತ್ತಿರುವುದರಿಂದ ಅಶ್ವಮೇಧ ಯಾಗಗಳಿಂದ ಹರಿಯನ್ನು ಆರಾಧಿಸು. ಧರ್ಮದಿಂದ ರಾಜ್ಯಭಾರ ಮಾಡು. ರಕ್ಷಕರಿಲ್ಲದ ಪ್ರಜೆಗಳನ್ನು ರಕ್ಷಿಸು.'

ಇತ್ಯುಕ್ತಃ ಸ ತಥಾ ಚಕ್ರೇ ತ್ಯಕ್ತ್ವಾ ಭೋಗಾಂಶ್ಚ ಕೃತ್ಸ್ನಶಃ ।
ಗೋವ್ರತಾದಿವ್ರತೈರ್ಯುಕ್ತಃ ಪಾಲಯಾಮಾಸ ಮೇದಿನೀಮ್ ॥೪॥

ವೇದವ್ಯಾಸರು ಹೀಗೆ ಹೇಳಿದಾಗ ಧರ್ಮರಾಜ ಅದರಂತೆಯೆ ಮಾಡಿದ. ಭೋಗಗಳನ್ನು ಪೂರ್ತಿಯಾಗಿ ತೊರೆದು ಗೋವ್ರತ ಮುಂತಾದ ವ್ರತಗಳಿಂದ ಯುಕ್ತನಾಗಿ ಭೂಮಿಯನ್ನಾಳಿದ.

ಪಶುಗಳಂತೆ ಎಲ್ಲೆಂದರಲ್ಲಿ ಮಲಗುವುದು ಯಾರೊಡನಾದರೂ ಕುಳ್ಳಿರುವುದು, ಏನಾದರೂ ಹೊದ್ದುಕೊಳ್ಳುವುದು ಇಂಥ ವೈರಾಗ್ಯದ ಜೀವನವೆ ಗೋವ್ರತ ಎಂದು ಭಾರತ ಹೇಳಿದೆ. ಗೋಮೂತ್ರದಿಂದ ಸ್ನಾನ, ಹಾಲು, ಮೊಸರು ಮುಂತಾದುವನ್ನೇ ಸೇವಿಸಿ ಬದುಕುವುದು. ಹಸು ಎದ್ದಾಗ ಏಳುವುದು, ಕುಳಿತಾಗ ಕುಳ್ಳಿರುವುದು ತನ್ನ ವೈಯಕ್ತಿಕ ರಕ್ಷಣೆಯ ಪರಿವೆ ಇಲ್ಲದೆ ಗೋವನ್ನು ರಕ್ಷಿಸುವುದು ಇದು ಗೋವ್ರತವೆಂದು ವಿಷ್ಣು ಧರ್ಮೋತ್ತರ ಪುರಾಣದಲ್ಲಿದೆ.

ಹಸುವಿಗೆ ಧಾನ್ಯವನ್ನು ತಿನಿಸಿ ಗೋಮಯದಲ್ಲಿ ಬರುವ ಆ

ಧಾನ್ಯಗಳಿಂದ ಜೀವಿಸುವುದು ಗೋವ್ರತವೆಂದು ಜನಾರ್ದನೀಯ ಹೇಳಿದೆ. ಗೋಕ್ಷೀರವನ್ನೇ ಸೇವಿಸಿ ಬದುಕುವುದು ಗೋವ್ರತವೆಂದು ವರದರಾಜೀಯ ಹೇಳಿದೆ. ಗೋಮೂತ್ರದಲ್ಲಿ ಧಾನ್ಯವನ್ನು ಹಾಕಿಟ್ಟು ಸೇವಿಸುವುದು ಗೋವ್ರತವೆಂದು ಪ್ರಮಾಣ ಸಂಗ್ರಹದಲ್ಲಿಯೂ ವಾದಿರಾಜೀಯದಲಿಯೂ ಹೇಳಿದೆ.

ದದೌ ದೇಯಾನಿ ಮುಖ್ಯಾನಿ ಯಥಾಕಾಮಮಖಂಡಿತಮ್ ।
ನೈವಾರ್ಥೀ ವಿಮುಖಃ ಕಶ್ಚಿದಭೂದ್ ಯೋಗ್ಯಃ ಕದಾಚನ ॥೫॥

ಧರ್ಮರಾಜ ನಿರಂತರ ಯಥೇಚ್ಛ ತುಲಾಪುರುಷಾದಿ ಮಹಾದಾನಗಳನ್ನೂ ಮಾಡಿದ. ಯೋಗ್ಯನಾದ ಯಾವ ದ್ರವ್ಯಾರ್ಥಿಯೂ ದ್ರವ್ಯ ಪಡೆಯದೆ ಎಂದೂ ಹಿಂತಿರುಗಿದುದು ಇಲ್ಲ.

ಪ್ರಷ್ಟಾ ಚ ದಾತಾಽಖಿಲರಾಜನಮ್ಯೋ
ಯಷ್ಟಾ ಚ ಧರ್ಮಾತ್ಮಜ ಏವ ತತ್ರ ।
ಬಭೂವ ಪಾಂಡೋರ್ಗೃಹಮಾವಸಂಶ್ಚ
ರಾಜಾಧಿರಾಜೋ ವನಿತಾನಿವೃತ್ತಃ ॥೬॥

ರಾಜಾಧಿರಾಜನಾದ ಧರ್ಮರಾಜ ಪಾಂಡುವಿನ ಮನೆಯಲ್ಲಿ ವಾಸಮಾಡುತ್ತ ಸ್ತ್ರೀಭೋಗದಿಂದ ನಿವೃತ್ತನಾಗಿ ಎಲ್ಲ ರಾಜರುಗಳಿಂದ ನಮಸ್ಕಾರ ಸ್ವೀಕರಿಸುವವನೂ, ಪ್ರಜೆಗಳ ಸುಖದುಃಖಿಗಳನ್ನು ವಿಚಾರಿಸುವವನೂ ದಾನ ಯಾಗ ಮಾಡುವವನೂ ಆದ.

ಭೀಮನ ವೈಭವದ ಜೀವನ - ಪ್ರಜೆಗಳ ಮಹಾಭಾಗ್ಯ

ಭೀಮಸ್ತು ದೌರ್ಯೋಧನಮೇವ ಸದ್ಮ
ಪ್ರಪೇದಿವಾನೂರ್ಜಿತವೀರ್ಯಲಬ್ಧಮ್ ।
ಕೃಷ್ಣಾಸಹಾಯಃ ಸುರರಾಜಯೋಗ್ಯಾ-
ನಭುಂಕ್ತ ಭೋಗಾನ್ ಯುವರಾಜ ಏವ ॥೭॥

ಭೀಮ ಉತ್ಕೃಷ್ಟ ಪರಾಕ್ರಮದಿಂದ ಪ್ರಾಪ್ತವಾದ ದುರ್ಯೋಧನನ ಮನೆಯನ್ನು ಹೊಂದಿದ. ಯುವರಾಜನಾಗಿಯೆ ದ್ರೌಪದಿಯೊಂದಿಗೆ ದೇವೇಂದ್ರನಿಗೆ ಯೋಗ್ಯವಾದ ಭೋಗಗಳನ್ನು ಅನುಭವಿಸಿದ.

ಕೃಷ್ಣಾ ಚ ಪಾರ್ಥಾಂಶ್ಚತುರೋ ವಿಹಾಯ ಸುವ್ಯಕ್ತಸಾರಸ್ವತಶುದ್ಧಭಾವಾ ।
ರರಾಜ ರಾಜಾವರಜೇನ ನಿತ್ಯಮನನ್ಯಯೋಗೇನ ಶಿಖೇವ ವಹ್ನೇಃ ॥೮॥

ದ್ರೌಪದಿ ಆಗ ಭಾರತೀದೇವಿಯ ವ್ಯಕ್ತ ಹಾಗೂ ಶುದ್ಧವಾದ ಸನ್ನಿಧಾನ ಉಳ್ಳವಳಾಗಿ ನಾಲ್ವರು ಪಾಂಡವರನ್ನೂ ಬಿಟ್ಟು ಭೀಮನೊಡನೆಯೆ ಸದಾ ಇದ್ದು ಅನ್ಯರ ಸಂಪರ್ಕವಿಲ್ಲದೆ ಬೆಂಕಿಯ ಜ್ವಾಲೆಯಂತೆ ಬೆಳಗಿದಳು.

ಪ್ರೀತ್ಯೈವ ವಿಜ್ಞಾನಯುಜಾಕನ್ಯಪಾರ್ಥೈಃ
ಸಂವಾದತಃ ಪರಿಹೃತಾ ಗತಭಾವಿಕಾಲೇ ।
ಅಪಿ ಸ್ವಕೀಯಂ ಪತಿಮೇವ ಭೀಮ-
ಮವಾಪ್ಯ ಸಾ ಪರ್ಯಚರನ್ಮುದೈವ ॥೯॥

ಬೇರೆಪಾಂಡವರು ಭೀಮನೊಂದಿಗೆ ಸಹಮತಿಯಿಂದ ದ್ರೌಪದಿ ಭೀಮನಿಗೇ ತಕ್ಕವಳೆಂಬ ವಿಶೇಷ ಜ್ಞಾನಯುಕ್ತವಾದ ಪ್ರೀತಿಯಿಂದಲೆ ದ್ರೌಪದಿಯನ್ನು ಭೀಮನಿಗೆ ಬಿಟ್ಟುಕೊಟ್ಟರು. ಈಗಮಾತ್ರವಲ್ಲ ಭೂತ ಭವಿಷ್ಯ ಕಾಲಗಳಲ್ಲಿಯೂ ದ್ರೌಪದಿ ತನ್ನ ಪತಿಯೇ ಆದ ಭೀಮನನ್ನು ಹೊಂದಿ ಸಂತೋಷದಿಂದಲೆ ಅವನನ್ನು ಸೇವಿಸಿದಳು.

ರರಾಜ ರಾಜಾವರಜಸ್ತಯಾ ಸ
ದ್ವಿರೂಪಯಾ ಸೋಮಕಕಾಶಿಜಾತಯಾ ।
ಶ್ರಿಯಾ ಭುವಾ ಚೈವ ಯಥಾಕಬ್ಜನಾಭೋ
ನಿಹತ್ಯ ಸರ್ವಾನ್ ದಿತಿಜಾನ್ ಪಯೋಬ್ಧೌ ॥೧೦॥

ಶ್ರೀಹರಿ ಎಲ್ಲ ದೈತ್ಯರನ್ನೂ ಕೊಂದು ಕ್ಷೀರಸಾಗರದಲ್ಲಿ ಶ್ರೀಭೂ ಎಂಬ ಎರಡು ರೂಪಗಳ ಲಕ್ಷ್ಮಿಯೊಡನೆ ಶೋಭಿಸುವಂತೆ ಭೀಮನೂ ಎಲ್ಲ ಶತ್ರುಗಳನ್ನೂ ಸಂಹರಿಸಿ

ದ್ರೌಪದಿ ಕಾಳಿ ಎಂಬ ಎರಡು ರೂಪಗಳ ಭಾರತೀದೇವಿಯೊಡಗೂಡಿ ಬೆಳಗಿದ.

ಸರ್ವೋತ್ತುಂಗೋ ನಾಮತಃ ಪ್ರಾಣವಾಯೋ-
ರಂಶೋ ನಿಶಾಯಾಂ ಗುರುಪುತ್ರಸೂದಿತಃ ।
ಮಾತಾಕಸ್ಯ ದೇವೀತಿ ಚ ರೌಹಿಣೇಯೀ
ಭೀಮಪ್ರಿಯಾಕಕಸೀದ್ ಯಾ ಪುರಾಕಸ್ಯೈವ ರಾಕಾ ॥ ೧೧ ॥

ಸರ್ವೋತ್ತುಂಗ ಎಂಬ ಹೆಸರಿನ ಭೀಮಪುತ್ರ, ಮುಖ್ಯಪ್ರಾಣನ ಪುತ್ರನೇ ಆದ ಅಹಂಕಾರಿಕ ಪ್ರಾಣ ಎಂಬ ವಾಯುವಿನ ಅಂಶ. ರಾತ್ರಿಯಲ್ಲಿ ಅಶ್ವತ್ಥಾಮನಿಂದ ಹತನಾದ. ಅವನ ತಾಯಿ ವಸುದೇವನ ಹೆಂಡತಿಯಾದ ರೋಹಿಣಿಯ ಮಗಳು, ದೇವಿ ಎಂದೆ ಅವಳಿಗೆ ಹೆಸರು. ಅವಳು ಹಿಂದೆ ಪೂರ್ಣಿಮೆಗೆ ಅಭಿಮಾನಿನಿಯಾದ ರಾಕಾದೇವಿ. ವಾಯುಪತ್ನಿಯೆ ಆಗಿದ್ದವಳು ಅವಳೂ ಭೀಮನ ಹೆಂಡತಿಯಾಗಿದ್ದಳು.

ಅನ್ಯಾಶ್ಚಾಕಸುರ್ವಾಸುದೇವ್ಯೋ ದಿಶೋ ಯಾ
ಆಪಶ್ಚ ಪೂರ್ವಂ ವಿಂಶತಿರಗ್ರ್ಯರೂಪಾಃ ।
ತಾಭಿರ್ಯುತೋ ದೈವತೈರಪ್ಯಲಭ್ಯಾ-
ನಭುಂಕ್ತ ಭೋಗಾನ್ ವಿಬುಧಾನುಗಾರ್ಚಿತಃ ॥೧೨॥

ಭೀಮನಿಗೆ ಬೇರೆ ಉತ್ತಮರೂಪವತಿಯರಾದ ಇಪ್ಪತ್ತು ವಸುದೇವ ಪುತ್ರಿಯರೂ ಭಾರ್ಯೆಯರಾಗಿದ್ದರು. ಅವರು ಹಿಂದೆ ದಿಗಭಿಮಾನಿನಿಯರೂ ಅಬಭಿಮಾನಿನಿಯರೂ

ಆಗಿದ್ದರು. ಅವರೊಡಗೂಡಿ ದೇವತೆಗಳಿಂದ ಮತ್ತು ಗಂಧರ್ವಾದಿಗಳಿಂದ ಸೇವಿತನಾಗಿ ದೇವತೆಗಳಿಗೂ ಅಲಭ್ಯವಾದ ಭೋಗಗಳನ್ನು ಭೀಮ ಭೋಗಿಸಿದ.

[1]ಭೀಮ ಕಾಳೀದ್ರೌಪದಿಯರೊಡನೆಯೆ ವಿಹರಿಸುತ್ತಿದ್ದ. ಬೇರೆ ಹೆಂಡಂದಿರು ಕೇವಲ ಪರಿಚಾರಿಕೆಯರಾಗಿದ್ದರು. 'ಅವರೊಡಗೂಡಿ' ಎನ್ನುವುದರ ಭಾವವಿದು. 'ಎರಡು ರೂಪಗಳ ಭಾರತಿಯೊಂದಿಗೆ ಬೆಳಗಿದ' ಎಂದುದು ಇದೇ ಅಭಿಪ್ರಾಯದಿಂದ.

ರರಕ್ಷ ಧರ್ಮಾನಖಿಲಾನ್ ಹರೇಃ ಸ
ನಿಧಾಯ ವಿಪ್ರಾನನುಶಾಸ್ಯ ಯುಕ್ತಾನ್ ।
ಸದ್ವೈಷ್ಣವಾನ್ ವಿದುಷಃ ಪಂಚಪಂಚ
ಸವೇತನಾನ್ ಗ್ರಾಮಮನು ಸ್ವಕೀಯಾನ್ ॥೧೩॥

ಸದ್ವೈಷ್ಣವರೂ ಪರಸ್ಪರ ಸೌಹಾರ್ದ ಉಳ್ಳವರೂ ತನ್ನವರೂ ಆದ ವಿದ್ವಾಂಸರಾದ ಐದೈದು ಬ್ರಾಹ್ಮಣರನ್ನು ಭೀಮ ಪ್ರತಿಗ್ರಾಮಗಳಲ್ಲಿಯೂ ವೇತನ ಸಹಿತರಾಗಿ ನೇಮಿಸಿ ಅವರ ಮೂಲಕ ಏಕಾದಶ್ಯಾದಿ ಸಕಲ ವಿಷ್ಣುಧರ್ಮಗಳನ್ನೂ ಕಾಪಾಡಿದ.

ದಧಾರ ದಂಡಂ ತದವರ್ತಿಷು ಸ್ವಯಂ
ಜಗ್ರಾಹ ಚಾನ್ವೇವ ಮುದಾಽಥ ತದ್ಗಾನ್ ।
ತದ್ವೃತ್ತಮನ್ಯೈರಪಿ ವಿಪ್ರವರ್ಯೈಃ
ಸಂಶೋಧಯನ್ ಸರ್ವಮಸೌ ಯಥಾ ವ್ಯಧಾತ್ ॥೧೪॥

ಆ ಬ್ರಾಹ್ಮಣರ ಆದೇಶದಂತೆ ನಡೆಯದವರಿಗೆ ಭೀಮ ತಾನೇ ಶಿಕ್ಷೆ ವಿಧಿಸುತ್ತಿದ್ದ. ಅನುಕೂಲರಾಗಿ ನಡೆದವರನ್ನು ಸಂತೋಷದಿಂದ ಅನುಗ್ರಹಿಸುತ್ತಿದ್ದ. ಆ ಬ್ರಾಹ್ಮಣರ ನಡತೆಗಳನ್ನೂ ಬೇರೆ ಬ್ರಾಹ್ಮಣೋತ್ತಮರಿಂದ ಪರೀಕ್ಷೆ ಮಾಡಿಸುತ್ತ ಎಲ್ಲ ಧರ್ಮವನ್ನೂ ಯಥಾವತ್ತಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ.

ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿ-
ನ್ನೈವಾನ್ಯನಿಷ್ಠೋ ನಚ ಧರ್ಮಹಂತಾ ।
ನ ವಿಧ್ಯವರ್ತೀ ನಚ ದುಃಖಿತೋಽಭೂ-
ನ್ನಾಪೂರ್ಣವಿತ್ತಶ್ಚ ತದೀಯರಾಷ್ಟ್ರೇ ॥೧೫॥

ಭೀಮಸೇನನ ರಾಜ್ಯದಲ್ಲಿ ವಿಷ್ಣುದ್ವೇಷಿ ಯಾರೂ ಎಲ್ಲಿಯೂ ಇರಲಿಲ್ಲ. ಅನ್ಯ ದೇವತೋಪಾಸಕನೂ ಇರಲೇ ಇಲ್ಲ. ಧರ್ಮದ್ರೋಹಿ ಇರಲಿಲ್ಲ. ಶಾಸ್ತ್ರವಿಧಿಯನ್ನು ಉಲ್ಲಂಘಿಸುವವನಿರಲಿಲ್ಲ. ದುಃಖಿತನಿರಲಿಲ್ಲ. ದರಿದ್ರನೂ ಇರಲಿಲ್ಲ.

---

1. ಯುತ ಇತಿ ವದತಾ ರಮಣಂ ತು ದ್ರೌಪದ್ಯೈವ, ತಾಶ್ಚ ಭೀಮ ಪರಿಚರ್ಯಾಮೇವ ಕೃತ್ವಾ ತಿಷ್ಠಂತೀತಿ ಸೂಚಿತಂ। ಅತ ಏವ ದ್ವಿರೂಪಯಾ ಸೋಮಕ ಕಾಶಿಜಾತಯಾ ರರಾಜೇತ್ಯುಕ್ತಂ।- ವಾದಿರಾಜೀಯ

ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ
ತಾಭ್ಯಾಂ ಚ ಭೀಮೇನ ಮುನೀಶ್ವರೈಶ್ಚ ।
ಸಂಶಿಕ್ಷಿತಾನಾಂ ಪ್ರಥಮಾದ್ ಯುಗಾಚ್ಚ
ಗುಣಾಧಿಕಃ ಕಲಿರಾಸೀತ್ ಪ್ರಜಾನಾಮ್ ॥೧೬॥

ಪ್ರಜೆಗಳು ಶ್ರೀವೇದವ್ಯಾಸರನ್ನೂ ಶ್ರೀಕೃಷ್ಣನನ್ನೂ ದರ್ಶನ ಮಾಡುತ್ತಿದ್ದರು. ಅವರಿಬ್ಬರಿಂದಲೂ ಭೀಮನಿಂದಲೂ ಶ್ರೇಷ್ಠ ಮುನಿಗಳಿಂದಲೂ ಉಪದೇಶ ಪಡೆಯುತ್ತಿದ್ದರು. ಅದರಿಂದ ಅವರಿಗೆ ಕಲಿಯುಗ ಕೃತಯುಗಕ್ಕಿಂತಲೂ ಗುಣದಲ್ಲಿ ಮೇಲೆನಿಸಿತು.

ಶುಭಂ ಮಹತ್ ಸ್ವಲ್ಪಫಲಂ ಕೃತೇ ಹಿ
ವಿಪರ್ಯಯೇಣಾಶುಭಮೇಷ ದೋಷಃ ।
ತದ್ಧೀನಮಪ್ಯುಚ್ಚಶುಭಂ ಕೃತಾದ್ ಯುಗಾ-
ಚ್ಚಕ್ರೇ ಕಲಿಂ ಮಾರುತಿರಚ್ಯುತಾಶ್ರಯಾತ್ ॥೧೭॥

ಕೃತಯುಗದಲ್ಲಿ ಮಹಾಪುಣ್ಯ ಕಾರ್ಯಕ್ಕೂ ಅಲ್ಪಪುಣ್ಯಫಲ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಪದುಷ್ಕರ್ಮಕ್ಕೆ ಅಧಿಕ ದುಷ್ಟಫಲ. ಇದು ಆ ಯುಗದ ದೋಷ. ಭೀಮ ಶ್ರೀಕೃಷ್ಣನ ಅನುಗ್ರಹದಿಂದ ಕಲಿಯುಗವನ್ನು ಈ ದೋಷದಿಂದ ಮುಕ್ತಗೊಳಿಸಿ ಕೃತಯುಗಕ್ಕಿಂತ ಹೆಚ್ಚು ಪುಣ್ಯಪ್ರದವನ್ನಾಗಿ ಮಾಡಿದ.

[1]ಸುಭಿಕ್ಷಕಾಲದಲ್ಲಿ ಬಹಳ ಅನ್ನದಾನ ಮಾಡುವುದಕ್ಕಿಂತ ದುರ್ಭಿಕ್ಷದಲ್ಲಿ ಸ್ವಲ್ಪ ಅನ್ನದಾನ ಮಾಡಿದರೂ ಅಧಿಕಫಲ. ಹಾಗೇ ಕಲಿಯುಗದಲ್ಲಿ

---

1. ಕೃತೇ ಯುಗೇ ಮಹಚ್ಛುಭಮಪಿ ಸ್ವಲ್ಪ ಫಲಂ ಭವತಿ। ಸರ್ವೇಷಾಂ ಶುಭಕಾರಿತ್ವಾತ್ ತನ್ಮಧ್ಯೇ ಏಕಸ್ಯ ಶುಭಕಾರಿತ್ವಮಪೂರ್ವಂ ನ। ಅತೋ ಯಥಾ ಸುಭಿಕ್ಷೇಽನ್ನದಾತುಃ ದುರ್ಭಿಕ್ಷೇಽನ್ನದಾತೃವತ್ ಮಹಾಫಲಂ ನಾಸ್ತಿ ತಥಾ ಕೃತಯುಗೇಽಪಿ ಶುಭಸ್ಯ ಫಲಾಧಿಕ್ಯಂ ನಾಸ್ತೀತಿ ಭಾವಃ। ಅಶುಭಂ ವಿಪರ್ಯಯೇಣ। ಅಲ್ಪೇಽಶುಭೇ ಕೃತೇಽಪಿ ಬಹು ಪಾಪಂ ಭವತಿ। ಅಶುಭಕರ್ತೄಣಾಂ ಕ್ವಾಪ್ಯಭಾವಕಾಲೆ ಏಕೋಽಶುಭಕರ್ತಾ ಮಹಾನಿಂದ್ಯೋ ಭವತೀತಿ ಭಾವಃ। ಏಷ ಕೃತಯುಗಸ್ಯ ದೋಷಃ। ತದ್ಧೀನಂ ತೇನ ದೋಷೇಣ ಹೀನಂ ಕಲಿಯುಗಂ। ಉಚ್ಚ ಶುಭಮಪಿ। ಉಚ್ಚಾನಿ ಶುಭಾನಿ ಗ್ರಾಮೇಗ್ರಾಮೇ ಯಸ್ಮಿನ್ ತತ್ ಉಚ್ಚ ಶುಭಂ ಚ। ಅಲ್ಪೇ ಪುಣ್ಯೇ ಕೃತೇಽಪಿ ಯುಗ ಸ್ವಭಾವಾತ್ ಕೃಷ್ಣ ಸಂದರ್ಶನಾದಿನೋಪೋದ್ಬಲಿತತ್ವಾಚ್ಚ ಮಹಾಫಲದಾಯಕಂ। ಬಹ್ವಶುಭೇ ಕೃತೇಽಪಿ ಯುಗ ಸ್ವಭಾವಾತ್ ಕೃಷ್ಣ ಸಂದರ್ಶನಾದಿನಾ ಬಹುತರ ಪಾಪಾನಾಂ ಕ್ಷಣೇ ಕ್ಷಣೇ ನಾಶಾಚ್ಚ ಅಲ್ಪ ಫಲದಾಯಕಮಿತ್ಯರ್ಥಃ। ಅತ್ಯಂತಂ ತೃಷಿತತಯಾ ಕಿಂಚಿಜ್ಜಲಂ ದೇಹೀತಿ ಪ್ರಾರ್ಥಯ ಮಾನಸ್ಯ ಬಹುಜಲದಾನೇ ಕೈಮುತ್ಯೇನ ತೃಟ್‌ಪರಿಹಾರವತ್ ಉಕ್ತವಿಧಯಾಲ್ಪ ಶುಭೇನಾಪಿ ಬಹುಫಲ ಪ್ರದಾತರಿ ಸ್ವರಾಷ್ಟ್ರೇ ಶುಭಾನ್ಯಪಿ ಬಹೂನಿ ಗ್ರಾಮೇ ಗ್ರಾಮೇ ಕಾರಯಾಮಾಸೇತಿ ಭಾವಃ। ಅಲ್ಪ ಪುಣ್ಯೇನಾಪಿ ಬಹುಫಲದಾಯಕೇ ಕಲಿಯುಗೇ ಸ್ವಸ್ಯಾಜ್ಞಾಶಕ್ತ್ಯಾ ಸದಾ ಸರ್ವತ್ರ ಪುಣ್ಯೈಕ ರತಾನೇವ ಸರ್ವಾನ್ ಜನಾನ್ ಚಕಾರ। ತಸ್ಮಾತ್ ಪಾಂಡವ ರಾಜ್ಯಸ್ಥನೃಣಾಂ ಭಾಗ್ಯಂ ಕಿಂ ವರ್ಣನೀಯಮಿತಿ ಹೃದಯಂ। -ವಾದಿರಾಜೀಯ

ಎಲ್ಲ ಕಡೆ ಅಧರ್ಮವಿರುವಾಗ ಒಬ್ಬ ಸ್ವಲ್ಪ ಧರ್ಮ ಮಾಡಿದರೂ ಅದು ಹೆಚ್ಚೇ. ಆದರಿಂದ ಕಲಿಯುಗದಲ್ಲಿ ಬೇರೆ ಎಲ್ಲ ಕಡೆ ಅಧರ್ಮ ನಡೆದಾಗ ಭೀಮನ ರಾಜ್ಯದಲ್ಲಿ ನಡೆದ ಧರ್ಮಕಾರ್ಯಕ್ಕೆ ಹೆಚ್ಚು ಫಲ ಸಿಗುವಂತಾಯಿತು. ಮತ್ತು ಸಾಕ್ಷಾತ್ ಶ್ರೀವೇದವ್ಯಾಸ ಶ್ರೀಕೃಷ್ಣರ ಭೀಮನ ಮತ್ತು ಮುನಿಗಳ ಸಹವಾಸದಿಂದ ಮಾಡಿದ ಎಲ್ಲ ಧರ್ಮಕಾರ್ಯ ಅನಂತಫಲ ಕೊಡುತ್ತಿತ್ತು. ಬಾಯಾರಿ ಕೆಂಗೆಟ್ಟವನಿಗೆ ಬಿಂದು ಗಂಗೋದಕ ಸಿಕ್ಕರೆ ಸಾಕೆಂದಿದ್ದಾಗ ಯಥೇಚ್ಛ ಅಮೃತ ಕೊಟ್ಟಂತಾಯಿತು. ಏಕೆಂದರೆ ಭೀಮ ಪ್ರತಿಗ್ರಾಮದಲ್ಲಿಯೂ ಬ್ರಾಹ್ಮಣರನ್ನು ನೇಮಿಸಿ ಅವರ ಮೂಲಕ ಬಹಳ ಪುಣ್ಯಕಾರ್ಯಗಳನ್ನು ಜನರಿಂದ ಮಾಡಿಸುತ್ತಿದ್ದ. ಹೀಗಾಗಿ ಪಾಂಡವ ರಾಜ್ಯದಲ್ಲಿ ಪ್ರಜೆಗಳ ಭಾಗ್ಯವನ್ನು ಏನು ಹೇಳಬೇಕು. -ವಾದಿರಾಜೀಯ

ಅರ್ಜುನನ ಸಂಯಮಪೂರ್ಣ ಜೀವನ

ಧನಂಜಯಃ ಪ್ರೋದ್ಯತದಂಡ ಆಸೀತ್
ಸದಾಽನ್ಯಚಕ್ರೇಷು ನಿಜಾಗ್ರಜೇರಿತಃ ।
ವಿಭೀಷಯಿತ್ವಾ ನೃಪತೀನ್ ಸರತ್ನಾನ್
ಪದೋರ್ನ್ಯಪಸ್ಯಾಗ್ರಭುವೋ ನ್ಯಪಾತಯತ್ ॥೧೮॥

ಅರ್ಜುನ ಪರರಾಷ್ಟ್ರಗಳಲ್ಲಿ ದಂಡಯಾತ್ರೆ ಮಾಡುವವನಾದ. ಅವನು ಧರ್ಮರಾಜನ ಆದೇಶಕ್ಕನುಸಾರವಾಗಿ ರತ್ನಯುಕ್ತರಾದ ಪರರಾಜರನ್ನು ಹೆದರಿಸಿಯೆ ಧರ್ಮರಾಜನ ಕಾಲುಗಳ ಮೇಲೆ ಬೀಳಿಸುತ್ತಿದ್ದ.

ಪರರಾಜರನ್ನು ಹಿಂಸಿಸಬೇಡ. ಹೆದರಿಸಿಯೆ ನಮ್ಮ ವಶವರ್ತಿಗಳಾಗುವಂತೆ ಮಾಡು ಎಂದು ಧರ್ಮರಾಜನ ಆದೇಶ.

ಸದೈವ ಕೃಷ್ಣಸ್ಯ ಮುಖಾರವಿಂದಾದ್
ವಿನಿಸ್ಸೃತಂ ತತ್ತ್ವವಿನಿರ್ಣಯಾಮೃತಮ್ ।
ಪಿಬನ್ ಸುತಾದ್ಯಾಧಿಮಸೌ ಕ್ರಮೇಣ
ತ್ಯಜಂಶ್ಚ ರೇಮೇ ವಿರತಾತಿಭೋಗಃ ॥೧೯॥

ಸದಾ ಕೃಷ್ಣನ ಮುಖಾರವಿಂದದಿಂದ ಹೊರಡುವ ತತ್ವ ನಿರ್ಣಯವೆಂಬ ಅಮೃತವನ್ನು ಅರ್ಜುನ ಪಾನ ಮಾಡುತ್ತ ಪುತ್ರಾದಿ ಶೋಕಗಳನ್ನು ಕ್ರಮೇಣ ಬಿಟ್ಟು ಅಧಿಕ ಭೋಗಗಳನ್ನು ನಿಲ್ಲಿಸಿ ಸುಖಿಸಿದ.

ದುಃಶಾಸನಸ್ಯಾಽವಸಥಂ ಸುಭದ್ರಾ
ಚಿತ್ರಾಂಗದಾಸಹಿತೋಽಧ್ಯವಸಂಶ್ಚ ।

ಸಚಂದ್ರಿಕಾಕಾಂತಿರನೂನಬಿಂಬೋ
ನಭಸ್ಥಿತಶ್ಚಂದ್ರ ಇವಾತ್ಯರೋಚತ ॥೨೦॥

ಅರ್ಜುನ ಸುಭದ್ರೆ ಮತ್ತು ಚಿತ್ರಾಂಗದೆಯರಿಂದೊಡಗೂಡಿ ದುಃಶಾಸನನ ಮನೆಯಲ್ಲಿ ವಾಸ ಮಾಡುತ್ತ ಚಂದ್ರಿಕೆ ಮತ್ತು ಕಾಂತಿ ಎಂಬ ಇಬ್ಬರು ಪತ್ನಿಯರಿಂದೊಡಗೂಡಿ ಆಕಾಶದಲ್ಲಿ ನಿಂತ ಪೂರ್ಣ ಬಿಂಬನಾದ ಚಂದ್ರನಂತೆ ಬಹಳ ಶೋಭಿಸಿದ.

ಅಶ್ವಮೇಧಯಾಗಕಾಲದಲ್ಲಿ ಪಾಂಡ್ಯದೇಶದಿಂದ ಬಂದ ಚಿತ್ರಾಂಗದೆ ಬಳಿಕ ಅರ್ಜುನನ ಬಳಿಯೆ ಇದ್ದಳು.

ಸಮಸ್ತಭೃತ್ಯಾಶ್ರಿತವೇತನಾನಾಂ
ಮಾದ್ರೇಯ ಆಸೀತ್ ಪ್ರಥಮಃ ಪ್ರದಾತಾ ।
ಸ ದುರ್ಮುಖಸ್ಯಾಕವಸಥೇಕವಸಚ್ಚ
ಸಮದ್ರರಾಜಾತ್ಮಜಯಾಕಗ್ರ್ಯವರ್ತೀ ॥೨೧॥

ಎಲ್ಲ ಭೃತ್ಯರಿಗೂ ಆಶ್ರಿತರಿಗೂ ವೇತನ ನೀಡುವವನು ನಕುಲನಾಗಿದ್ದ. ಅವನು ಅಣ್ಣನ ಆಜ್ಞೆಯಂತೆ ನಡೆಯುತ್ತ ಶಲ್ಯನ ಮಗಳೊಂದಿಗೆ ಧೃತರಾಷ್ಟ್ರ ಪುತ್ರನಾದ ದುರ್ಮುಖನ ಮನೆಯಲ್ಲಿ ವಾಸಮಾಡಿದ.

ಸಂಧಾನಭೇದಾನುಗತಪ್ರವೃತ್ತಿ-
ಸ್ತಿಷ್ಠಂಶ್ಚ ದುರ್ಮರ್ಷಣಶುಭ್ರಸದ್ಮನಿ ।
ನೃಪಾಂಗರಕ್ಷಃ ಪ್ರಗೃಹೀತಖಡ್ಗ-
ಸ್ತಸ್ಯಾನುಜೋ ಮಾಗಧಕನ್ಯಯಾಽಽಸೀತ್ ॥೨೨॥

ಪರರಾಜ್ಯದಲ್ಲಿ ಸಂಧಿ ಭೇದಗಳನ್ನು ನೋಡಿಕೊಳ್ಳುವವನು ಸಹದೇವ. ಅವನು ಖಡ್ಗಧಾರಿಯಾಗಿ ಧರ್ಮರಾಜನಿಗೆ ಅಂಗರಕ್ಷಕನೂ ಆಗಿದ್ದ. ಜರಾಸಂಧನ ಮಗಳೊಂದಿಗೆ ಧೃತರಾಷ್ಟ್ರಪುತ್ರ ದುರ್ಮರ್ಷಣನ ಶುಭ್ರವಾದ ಮನೆಯಲ್ಲಿ ವಾಸ ಮಾಡಿದ.

ಸೇನಾಪತಿಃ ಕೃಪ ಆಸೀದ್ ಯುಯುತ್ಸುಃ
ಸಸಂಜಯೋ ವಿದುರಶ್ಚಾಽಽಂಬಿಕೇಯಮ್ ।
ಪಾರ್ಥೈರಿತಾಃ ಪರ್ಯಚರನ್ ಸ್ವಯಂ ಚ
ಸರ್ವೇ ಯಥಾ ದೈವತಮಾದರೇಣ ॥೨೩॥

ಕೃಪ ಸೇನಾಧಿಪತಿಯಾಗಿದ್ದ. ಯುಯುತ್ಸು ಸಂಜಯ ಮತ್ತು ವಿದುರರು ಪಾಂಡವರ ಆದೇಶದಂತೆ ಧೃತರಾಷ್ಟ್ರನನ್ನು ಸೇವಿಸಿದರು. ಪಾಂಡವರೆಲ್ಲರೂ ತಾವೂ ಕೂಡ ಧೃತರಾಷ್ಟ್ರನನ್ನು ದೇವತೆಯಂತೆ ಆದರದಿಂದ ಸೇವಿಸಿದರು.

ಪಾಂಡವರ ಕೀರ್ತಿನಾರಿ

ದ್ವಿರೂಪಕೃಷ್ಣಪ್ರಹಿತೇಷು ಪಾಂಡುಷು
ಕ್ಷಿತಿಂ ಪ್ರಶಾಸತ್ಸು ನ ಕಶ್ಚನಾತುರಃ।
ನ ಚಾಕ್ರಮಾನ್ಮೃತ್ಯುರಭೂನ್ನ ನಾರ್ಯೋ
ವಿಧವ್ಯಕಾ ನೋ ವಿಧುರಾ ನರಾಶ್ಚ॥ ೨೪॥

ವ್ಯಾಸ ಕೃಷ್ಣರೆಂದು ಎರಡು ರೂಪಗಳ ಕೃಷ್ಣನಿಂದ ಸ್ಥಾಪಿತರಾದ ಪಾಂಡವರು ಭೂಮಿಯನ್ನು ಆಳುತ್ತಿದ್ದಾಗ ರೋಗಿ ಯಾರೂ ಇರಲಿಲ್ಲ. ಅಕ್ರಮದಿಂದ ಮರಣ ಹೊಂದುತ್ತಿರಲಿಲ್ಲ. ನಾರಿಯರು ವಿಧವೆಯರಾಗುತ್ತಿರಲಿಲ್ಲ. ಪುರುಷರೂ ವಿಧುರರಾಗುತ್ತಿರಲಿಲ್ಲ.

ಅಕ್ರಮದಿಂದ ಮರಣವೆಂದರೆ ಹಿರಿಯರಿಗಿಂತ ಮೊದಲು ಕಿರಿಯರು ಮರಣ ಹೊಂದುವುದು.

ಶಬ್ದಾದಯಶ್ಚಾಕಸುರತೀವ ಹೃದ್ಯಾ
ನಿಕಾಮವರ್ಷೀ ಚ ಸುರೇಶ್ವರೋಽಭೂತ್।
ಪ್ರಜಾ ಅನಾಸ್ಪೃಷ್ಟಸಮಸ್ತತಾಪಾ
ಅನನ್ಯಭಕ್ತ್ಯಾಽಚ್ಯುತಮರ್ಚಯಂತಿ॥ ೨೫॥

ಶಬ್ದಾದಿ ವಿಷಯಪದಾರ್ಥಗಳು ಅತ್ಯಂತ ಮನೋಹರವಾಗಿದ್ದವು. ಇಂದ್ರನೂ ಚೆನ್ನಾಗಿ ಮಳೆಗರೆಯುತ್ತಿದ್ದ. ಪ್ರಜೆಗಳು ಯಾವುದೇ ತಾಪತ್ರಯದ ಸ್ಪರ್ಶವೂ ಇಲ್ಲದವರಾಗಿ ಅನನ್ಯ ಭಕ್ತಿಯಿಂದ ಅಚ್ಯುತನನ್ನು ಆರಾಧಿಸುತ್ತಿದ್ದರು.

ಪೃಥ್ವೀ ಚ ಗಾವಃ ಸಸರಸ್ವತೀಕಾ
ನಿಕಾಮದೋಹಾ ಅಭವನ್ ಸದೈವ।
ಅಬ್ದಾಬ್ಧಿನದ್ಯೋ ಗಿರಿವೃಕ್ಷಜಂಗಮಾಃ
ಸರ್ವೇಽಪಿ ರತ್ನಪ್ರಸವಾ ಬಭೂವುಃ॥ ೨೬॥

ಭೂಮಿಯೂ ಗೋವುಗಳೂ ವೇದಗಳೂ ಸದಾ ಯಥೇಚ್ಛ ಹಾಲು ಕೊಡುತ್ತಿದ್ದವು. ಮೋಡ ಸಮುದ್ರ ನದಿ ಬೆಟ್ಟ ಮರ ಜಂಗಮ ಪ್ರಾಣಿಗಳು ಎಲ್ಲವೂ ರತ್ನಗಳ ಬೆಳೆಯನ್ನು ಕೊಡುತ್ತಿದ್ದವು.

ಭೂಮಿ ಧಾನ್ಯಾದಿ ರೂಪದಿಂದ ಹಾಲು ಕೊಡುತ್ತಿತ್ತು. ಗೋವುಗಳು ಸಮೃದ್ಧಿಯಾಗಿ ಹಾಲನ್ನೆ ಕೊಡುತ್ತಿದ್ದವು. ವೇದ, ವೇದೋಕ್ತ ಕರ್ಮಗಳಿಗೆ ವೇದೋಕ್ತ ಫಲಗಳ ರೂಪದಿಂದ ಹಾಲು ಕೊಡುತ್ತಿತ್ತು. ಮೋಡಗಳಿಂದ ಸ್ವಾತೀ ನಕ್ಷತ್ರದಲ್ಲಿ ಬಿದ್ದ ಮಳೆಹನಿ ಮುತ್ತಾಗುತ್ತಿತ್ತು. ಸಮುದ್ರ ರತ್ನಾಕರವೆನ್ನುವುದು ಪ್ರಸಿದ್ಧ. ತಾಮ್ರಪರ್ಣೀ ಮುಂತಾದ ನದಿಗಳು ರತ್ನಗಳನ್ನು ಉತ್ಪಾದಿಸುತ್ತಿದ್ದುವು. ಕೆಲವು ಬೆಟ್ಟಗಳು ಪಂಚರತ್ನಮಯಗಳು.

ಕೃಷ್ಣಾಶ್ರಯಾತ್ ಸರ್ವಮಿದಂ ವಶೇ ತೇ
ವಿಧಾಯ ಸಮ್ಯಕ್ ಪರಿಪಾಲಯಂತಃ।
ದಿವೀವ ದೇವಾ ಮುಮುದುಃ ಸದೈವ
ಮುನೀಂದ್ರಗಂಧರ್ವನೃಪಾದಿಭಿರ್ವೃತಾಃ ॥೨೭॥

ಪಾಂಡವರು ಕೃಷ್ಣನ ಆಶ್ರಯದಿಂದ ಭೂಮಿ ನದಿ ಬೆಟ್ಟ ಮುಂತಾದ ಎಲ್ಲವನ್ನೂ ತಮ್ಮ ವಶದಲ್ಲಿಟ್ಟುಕೊಂಡು ಚೆನ್ನಾಗಿ ರಾಜ್ಯಪಾಲನ ಮಾಡುತ್ತ ಸದಾ ಮುನೀಶ್ವರ ಗಂಧರ್ವ ಚಕ್ರವರ್ತಿ ಮುಂತಾದವರಿಂದೊಡಗೂಡಿ ಸ್ವರ್ಗದಲ್ಲಿ ದೇವತೆಗಳಂತೆ ಆನಂದಿಸಿದರು.

ಸಮುಜ್ಜ್ವಲಾ ಪಾಂಡವಕೀರ್ತಿನಾರೀ
ಪದಂ ನಿಧಾಯಾಸುರಪಕ್ಷಮೂರ್ಧಸು।
ವರಾಭಯೇ ಚೈವ ಸತಾಂ ಕರಾಭ್ಯಾಂ
ಕೃಷ್ಣಪ್ರಸೂತಾ ಜಗದಂಡಮಾವೃಣೋತ್ ॥೨೮॥

ಶ್ರೀವೇದವ್ಯಾಸರ ಮುಖಕಮಲದಿಂದ ಮಹಾಭಾರತ ರೂಪದಲ್ಲಿ ಉದಿಸಿದ ಪಾಂಡವರ ಕೀರ್ತಿನಾರಿ ಉಜ್ವಲವಾಗಿ ಬೆಳಗುತ್ತ ಅಸುರಪಕ್ಷದವರ ತಲೆಮೇಲೆ ಕಾಲಿಟ್ಟು ಸಜ್ಜನರ ತಲೆಗಳ ಮೇಲೆ ಎರಡು ಕೈಗಳಿಂದ ವರ ಅಭಯಗಳನ್ನಿಟ್ಟು ಬ್ರಹ್ಮಾಂಡವನ್ನು ವ್ಯಾಪಿಸಿದಳು.

ಕೀರ್ತಿ ನಾರಿ ಎಂದು ಕೇವಲ ಆಲಂಕಾರಿಕವಾಗಿ ಹೇಳಿದ ಮಾತಲ್ಲ. ಕೀರ್ತಿಗೆ, ಕೀರ್ತಿಯನ್ನು ಹೊಗಳುವ ಮಹಾಭಾರತ ಗ್ರಂಥಕ್ಕೆ ಅಭಿಮಾನಿನಿಯರು ಲಕ್ಷ್ಮೀಸರಸ್ವತಿ ಭಾರತೀ ಮುಂತಾದ ದೇವಿಯರೆ ಕೀರ್ತಿನಾರಿಯರು. ಅವರಿಗೆ ತಂತ್ರಸಾರ ಸಂಗ್ರಹದಲ್ಲಿ ಹೇಳಿದಂತೆ 'ಪದ್ಮದ್ವಯಾಭಯವರೋದ್ಯತ ಪದ್ಮಹಸ್ತಾಂ' ಸ್ವಭರ್ತುರಂಕ ಸ್ಥಿತಾಂ ಅಭಯ ಸದ್ವರ ಪದ್ಮಹಸ್ತಾಂ 'ಗೌರೀವರಾಭಯಕರಾ ಧ್ಯೇಯಾ ಪೀತಾಂಬರಾ ಚ ಸಾ' ಇತ್ಯಾದಿ ವಚನೋಕ್ತವಾದ ಕೈಗಳು ವರಾಭಯಗಳು ಮುಂತಾದುವು ಇವೆ.

ಕಾವ್ಯಭಾಷೆಯನ್ನು ಪರ್ಯಾಲೋಚಿಸಿದರೂ ಅಸುರಪಕ್ಷದವರನ್ನು ಶಿಕ್ಷಿಸಿದಾಗಲೆ ಪಾಂಡವರ ಕೀರ್ತಿ ಉದಿಸಿದುದರಿಂದ ಅವರ ತಲೆಯನ್ನು ಮೆಟ್ಟಿದಂತಾಯಿತು. ಕೀರ್ತಿಯನ್ನು ಶ್ರವಣ ಮಾಡಿದರೆ ಅಭೀಷ್ಟಪ್ರಾಪ್ತಿ ಭಯ ಪರಿಹಾರಗಳು ಆಗುವುದರಿಂದ ವರ ಅಭಯ ಕರಗಳಿವೆ. ದುರ್ಜನರ ಮದವನ್ನು ಒರೆಸಿದ ಕಥೆಯಾದ್ದರಿಂದ ಅಭಯದಾಯಕ ಹಸ್ತವಿದೆ. ಮುನಿಜನರಿಗೆ ಯಥೇಚ್ಛ ಅನ್ನಪಾನ ಧನ ರತ್ನಾದಿಗಳನ್ನು ಕೊಟ್ಟ ಕಥೆಯಾದ್ದರಿಂದ ವರದಾಯಕ ಹಸ್ತವೂ ಇದೆ. ಶ್ರೀಕೃಷ್ಣನ ಅನುಗ್ರಹದಿಂದಲೆ ಎಲ್ಲ ಕೀರ್ತಿ ಬಂದುದರಿಂದ ಕೃಷ್ಣನಿಂದ ಹುಟ್ಟಿತು ಎನ್ನಲಾಗಿದೆ.

ಲಕ್ಷ್ಮೀ ಮುಂತಾದ ದೇವಿಯರಿಗೂ ಪರಾಧೀನ ವಿಶೇಷಪ್ರಾಪ್ತಿ, ದೇಹಪ್ರಾಪ್ತಿ ರೂಪ ಸೃಷ್ಟಿ ಶ್ರೀಕೃಷ್ಣನಿಂದಲೆ ಆಗುವುದರಿಂದ ಕೃಷ್ಣ ಪ್ರಸೂತಳು ಕೀರ್ತಿನಾರಿ.[1]

ಪಾತಾಲಪಾದಾಂ ಪೃಥಿವೀನಿತಂಬಾ-
ಮಾಕಾಶಮಧ್ಯಾಂ ಕರಸಂತತಾಶಾಮ್ ।
ಗ್ರಹರ್ಕ್ಷತಾರಾಭರಣದ್ಯುವಕ್ಷಸಂ
ವಿರಿಂಚಲೋಕಸ್ಥಲಸನ್ಮುಖಾಂಬುಜಾಮ್ ॥೨೯॥

ಕೀರ್ತಿನಾರಿಗೆ ಪಾತಾಲದಲ್ಲಿ ಪಾದಗಳು, ಪೃಥಿವಿಯಲ್ಲಿ ನಿತಂಬ, ಆಕಾಶದಲ್ಲಿ ನಡು, ದಿಕ್ಕುಗಳಲ್ಲೆಲ್ಲ ವ್ಯಾಪಿಸುವ ಕೈಗಳು, ಗ್ರಹನಕ್ಷತ್ರ ತಾರೆಗಳು ಆಭರಣಗಳು. ದ್ಯುಲೋಕದಲ್ಲಿ ಎದೆ. ಬ್ರಹ್ಮಲೋಕದಲ್ಲಿ ಮುಖಕಮಲ.

ವಿಕುಂಠನಾಥಾಭಯಹಸ್ತಮಾದರಾ-
ನ್ಮೂರ್ಧ್ನಾ ವಹಂತೀಂ ವರಭಾರತಾಖ್ಯಾಮ್ ।
ನಿಶಮ್ಯ ತಾಮೀಕ್ಷ್ಯ ಸಮಸ್ತಲೋಕಾಃ
ಪವಿತ್ರತಾ ವೇದಿಭವಾಮಿವಾನ್ಯಾಮ್ ॥೩೦॥

ವೈಕುಂಠಮೂರ್ತಿಯ ಅಭಯಹಸ್ತವನ್ನು ಆದರದಿಂದ ತಲೆಯ ಮೇಲೆ ಹೊತ್ತಿದ್ದಾಳೆ, ಶ್ರೇಷ್ಠವಾದ ಭಾರತ ಎಂಬ ಹೆಸರುಳ್ಳ ಪಾಂಡವರ ಕೀರ್ತಿನಾರಿ. ಸಮಸ್ತ ಲೋಕದ ಜನರು ಯಜ್ಞವೇದಿಕೆಯಿಂದ ಉದಿಸಿದ ದ್ರೌಪದಿಯನ್ನು ನೋಡಿ ಹೇಗೆ ಪವಿತ್ರರಾದರೋ ಹಾಗೇ ಈ ಪಾಂಡವಕೀರ್ತಿನಾರೀ ಸ್ವರೂಪದ ಭಾರತವನ್ನು ಶ್ರವಣಮಾಡಿ ಪವಿತ್ರಿತರಾದರು.

---

1. ಅಸುರ ಪಕ್ಷ ಶಿಕ್ಷಣೇ ಸತಿ ಜಾತತ್ವಾತ್ ಅಸುರ ಪಕ್ಷ ಮೂರ್ಧಸು ಪದಂ ನಿಧಾಯೇತ್ಯುಕ್ತಂ। ಪುಣ್ಯಾತ್ಮನಾಂ ಕೀರ್ತಿಶ್ರವಣಾದಿನಾ ಸಕಲಾಭೀಷ್ಟಪ್ರಾಪ್ತೇಃ ಸಕಲಭಯ ಪರಿಹಾರಾಚ್ಚ ಕರಾಭ್ಯಾಂ ಸತಾಂ ವರಾಭಯೇ ದಧಾನೇತ್ಯುಕ್ತಮಿತಿ ಸಾಹಿತ್ಯ ರಸಃ। ವಸ್ತುಸ್ಥಿತ್ಯಾ ತು ಸತ್ಕೀರ್ತ್ಯಭಿಮಾನಿನ್ಯಃ ಲಕ್ಷ್ಮೀ ಸರಸ್ವತೀ ಭಾರತೀ ಪ್ರಭೃತಯೋ ದೇವ್ಯ ಏವ ಸಂತಿ। ತಾಶ್ಚ 'ಪದ್ಮದ್ವಯಾಭಯ ವರೋದ್ಯತ ಪದ್ಮಹಸ್ತಾಂ' 'ಸ್ವಭರ್ತುರಂಕಸ್ಥಿತಾಂ ಅಭಯ ಸದ್ವರಪದ್ಮಹಸ್ತಾಂ' ಗೌರೀ ವರಾಭಯ ಕರಾ ಧ್ಯೇಯಾ ಪಿತಾಂಬರಾ ಚ ಸಾ' ಇತ್ಯಾದಿನಾ ಅಭಯ ಸದ್ವರ ಹಸ್ತಾಶ್ಚ ಭವಂತೀತ್ಯಾಶಯೇನ ಕರಾಭ್ಯಾಂ ಸತಾಂ ವರಾಭಯೇ ಚೈವ ವಿಧಾಯೇತ್ಯುಕ್ತಂ। ಕೀರ್ತಿ ಪಕ್ಷೇ ತು ಕರಾವಿವ ಕರೌ ದುರ್ಜನಮದ ವಿಭೇದನೋತ್ಥ ಕೀರ್ತ್ಯಂಶಾಖ್ಯಿಕರಃ ಅಭಯದಾಯೀ। ಸ್ವಭಕ್ತಾನಾಂ ವಿಪ್ರಾದೀನಾಂ ಯಥೇಷ್ಟಾನ್ನಪಾನ ಧನರತ್ನಾದಿ ದಾನ ಪರಂಪರೋತ್ಥಕೀರ್ತ್ಯಂಶಾಖ್ಯಿಕರಃ ವರದಾಯೀತಿ ರೂಪಕಾಲಂಕಾರೇಣ ಯೋಜನೀಯಂ। ಸರ್ವೇಷಾಮಪಿ ಕೀರ್ತಿಃ ಶ್ರೀಕೃಷ್ಣಾನುಗ್ರಹಾದೇವ ಭವತೀತಿ ಭಾವೇನ ಕೃಷ್ಣ ಪ್ರಸೂತೇತ್ಯುಕ್ತಮಿತಿ ಸಾಹಿತ್ಯರಸಃ। ವಸ್ತುಗತ್ಯಾ ಸ ಇದಂ ಸರ್ವಮಸೃಜತೇತಿ ಶ್ರುತೇಃ ಪರಾಧೀನ ವಿಶೇಷಾವಾಪ್ತ್ಯಾ ದೇಹೋತ್ಪತ್ತ್ಯಾ ವಾ ಶ್ರೀಪ್ರಭೃತೀನಾಂ ಸರ್ವಾಸಾಂ ದೇವೀನಾಂ ಕೃಷ್ಣೋತ್ಪನ್ನತ್ವಾತ್ ಕೃಷ್ಣಪ್ರಸೂತೇತ್ಯುಕ್ತಂ॥ -ವಾದಿರಾಜೀಯ

ಕೀರ್ತಿನಾರಿ ಬ್ರಹ್ಮಾಂಡವನ್ನು ವ್ಯಾಪಿಸಿದಳಿಂದು ಹೇಳಿ ದ್ರೌಪದಿಯ ಉಪಮಾನವನ್ನು ಕೊಟ್ಟಿದ್ದರಿಂದ ದ್ರೌಪದೀರೂಪಳಾದ ಸರಸ್ವತಿಯೂ ವಿರಾಡ್ರೂಪನಾದ ಚತುರ್ಮುಖನೊಡನೆ ಇರುವಾಗ ಹೀಗೇ ಬ್ರಹ್ಮಾಂಡವನ್ನು ವ್ಯಾಪಿಸಿರುತ್ತಾಳೆ ಎಂದು ಸೂಚಿತವಾಗುತ್ತದೆ.[1]

ಕಲಿ ನಿಗ್ರಹ

ಪ್ರಪಾಲಯತ್ಸ್ವೇವ ಧರಾಂ ಸಕೃಷ್ಣೇ-
ಷ್ವದ್ಧೈವ ಪಾರ್ಥೇಷು ಕಲಿರ್ಬಲಿಶ್ಚ ।
ಸುಪಾಪದೈತ್ಯೌ ಕ್ವಚ ರಾಷ್ಟ್ರವಿಪ್ಲವಂ
ಸಂಚಕ್ರತುಸ್ತಚ್ಛ್ರುತಮಾಶು ಪಾರ್ಥೈಃ ॥೩೧॥

ಪಾಂಡವರು ಕೃಷ್ಣನೊಡಗೂಡಿ ಭೂಮಿಯನ್ನು ಚೆನ್ನಾಗಿ ಪಾಲಿಸುತ್ತಿರುವಾಗಲೆ ಕಲಿ ಮತ್ತು ಬಲಿ ಎಂಬ ಇಬ್ಬರು ಮಹಾಪಾಪಿ ದೈತ್ಯರು ಕೆಲವೆಡೆ ರಾಷ್ಟ್ರವಿಪ್ಲವ ಮಾಡಿದರು. ಪಾಂಡವರು ಅದನ್ನು ಬೇಗನೆ ಕೇಳಿ ತಿಳಿದರು.

ಇಲ್ಲಿ ಕಲಿ ಎಂದರೆ ದುರ್ಯೋಧನನ ಮೂಲರೂಪ. ದುರ್ಯೋಧನನೆಂಬ ಅಂಶ ಕೆಲಕಾಲ ವೀರಸ್ವರ್ಗದಲ್ಲಿ ಇದ್ದು ಮುಂದೆ ತಮಸ್ಸಿಗೆ ಇಳಿಯುತ್ತದೆ. ಬಲಿ ಎಂದರೆ ಪ್ರಹ್ಲಾದನ ಮೊಮ್ಮಗನಾದ ಬಲಿಚಕ್ರವರ್ತಿಯಲ್ಲ. ಅವನು ಒಬ್ಬ ದೇವತೆ. ಅವನಲ್ಲಿ ಆವಿಷ್ಟನಾದ ಬಲಿ ಎಂಬ ಇನ್ನೊಬ್ಬ ದೈತ್ಯ, ಒಂದು ಅಂಶದಿಂದ ಸಾಲ್ವನಾಗಿ ಹುಟ್ಟಿಸತ್ತು ತಮಸ್ಸಿಗೆ ಬಿದ್ದಿದ್ದಾನೆ. ಇನ್ನೊಂದು ಅಂಶವೇ ಈ ಬಲಿ. ಅಸುರರಿಗೆಲ್ಲರಿಗೂ ಒಂದೊಂದು ಅಂಶದಿಂದ ಈಗಲೆ ತಮಃಪ್ರಾಪ್ತಿ ಉಂಟು. ಮೂಲರೂಪಕ್ಕೆ ಮಾತ್ರ ಕಲ್ಪಾಂತ್ಯದಲ್ಲಿ ತಮಸ್ಸಾಗುವುದು. ದೇವತೆಗಳಿಗೆ ಮಾತ್ರ ಎಲ್ಲಾ ಅಂಶಗಳು ಕೂಡಿ ಕಲ್ಪಾಂತ್ಯದಲ್ಲಿ ಮೂಲರೂಪದಿಂದಲೆ ಮುಕ್ತಿಯಾಗುವುದು.

ನೃಪೇಣ ಕೃಷ್ಣೇನ ಚ ಸಾಧು ಚೋದಿತೋ
ಭೀಮಸ್ತದಾ ತೌ ಸಗಣೌ ವಿಜಿತ್ಯ ।
ಬಲಿಂ ಪ್ರವಿದ್ರಾವ್ಯ ಕಲಿಂ ನಿಬದ್ಧ್ಯ
ಸಮಾನಯತ್ ಕೃಷ್ಣನೃಪೇಂದ್ರಯೋಃ ಪುರಃ ॥೩೨॥

---

1. ದ್ರೌಪದೀರೂಪಾಯಾಃ ಸರಸ್ವತ್ಯಾ ವಿರಾಡ್ರೂಪಸ್ವಪತಿನಾ ಸಹಾವಸ್ಥಾನೇ ಪಾತಾಲಪಾದತ್ವಾದಿಕಂ ಸೂಚಿತಂ। ಅಂತರಿಕ್ಷಾದರ್ವಾಕ್ ಪೃಥಿವ್ಯಾ ಉಪರಿತನಾಕಾಶೇ ಕೀರ್ತಿ ಪ್ರಸೋತೄಣಾಂ ಬಹೂನಾಮಭಾವಾತ್ ನಾರ್ಯಾಶ್ಚ ಮಧ್ಯೇ ಕ್ಷಾಮತ್ವಾತ್ ಆಕಾಶಮಧ್ಯಾಮಿತ್ಯುಕ್ತಂ।
-ವಾದಿರಾಜೀಯ

ಧರ್ಮರಾಜನ ಮತ್ತು ಶ್ರೀಕೃಷ್ಣನ ಆದೇಶವನ್ನು ಪಡೆದ ಭೀಮ ಕಲಿಬಲಿಗಳನ್ನು ಪರಿವಾರ ಸಮೇತವಾಗಿ ಪರಾಭವಗೊಳಿಸಿ ಬಲಿಯನ್ನು ಓಡಿಸಿ ಕಲಿಯನ್ನು ಬಂಧಿಸಿ ಶ್ರೀಕೃಷ್ಣ ಯುಧಿಷ್ಠಿರರ ಮುಂದೆ ತಂದು ನಿಲ್ಲಿಸಿದ.

ಪಪ್ರಚ್ಛ ತಂ ಕೃಷ್ಣಪುರೋ ಯುಧಿಷ್ಠಿರ ಉದಾರಧೀಃ ।
ಕಲೇ ಕಿಮಿತಿ ಮೇ ರಾಷ್ಟ್ರಂ ವಿಪ್ಲಾವಯಸಿ ದುರ್ಮತೇ ॥೩೩॥

ಉತ್ತಮ ಬುದ್ಧಿಯುಳ್ಳ ಯುಧಿಷ್ಠಿರ ಶ್ರೀಕೃಷ್ಣನ ಸಮಕ್ಷಮದಲ್ಲಿ ಕಲಿಯನ್ನು ಪ್ರಶ್ನಿಸಿದ. ದುರ್ಬುದ್ಧಿಯವನೆ, ನನ್ನ ರಾಷ್ಟ್ರವನ್ನು ಏಕೆ ವಿಪ್ಲವಗೊಳಿಸುತ್ತಿ? ಎಂದು.

ಇತ್ಯುಕ್ತ ಆಹ ಕಾಲೋಽಯಂ ದುರ್ಯೋಧನನಿಪಾತನಮ್ ।
ಆರಭ್ಯ ಮಮ ತತ್ರ ತ್ವಂ ಬಲಾದಾಕ್ರಮ್ಯ ತಿಷ್ಠಸಿ ॥೩೪॥

ಧರ್ಮರಾಜ ಹೀಗೆ ಹೇಳಿದಾಗ ಕಲಿ ನುಡಿದ, 'ದುರ್ಯೋಧನನ ಪತನವನ್ನಾರಂಭಿಸಿ ಇದು ನನ್ನ ಕಾಲ. ನೀನು ಬಲಾತ್ಕಾರವಾಗಿ ಆಕ್ರಮಿಸಿ ನಿಂತಿರುವೆ.

ತತೋ ಮಯಾ ಕೃತೋ ರಾಷ್ಟ್ರವಿಪ್ಲವಸ್ತೇ ನರಾಧಿಪ ।
ತಮಾಹ ರಾಜಾ ರಾಜ್ಞಾಂ ಹಿ ಬಲಾದ್ ರಾಜ್ಯಂ ಪ್ರವರ್ತತೇ ॥೩೫॥

ಅಪಿ ಕಾಲಭವಂ ರಾಷ್ಟ್ರಂ ತ್ವದೀಯಂ ಮಾದೃಶೈರ್ನರೈಃ ।
ಹ್ರಿಯತೇ ಬಲವದ್ಭಿರ್ಹಿ ರಾಜ್ಯಾಶಾ ತೇ ಕುತಸ್ತದಾ ॥೩೬॥

'ಅದರಿಂದ, ರಾಜನೆ, ನಾನು ನಿನ್ನ ರಾಷ್ಟ್ರದಲ್ಲಿ ವಿಪ್ಲವ ಮಾಡಿದೆ' ಎಂದು ಕಲಿ ನುಡಿದಾಗ ಧರ್ಮರಾಜನೆಂದ, ರಾಜರ ಬಲದಿಂದಲೆ ರಾಜ್ಯ ನಡೆಯುತ್ತದೆ. ಅದರಿಂದ ಈ ಕಾಲದಲ್ಲಿರುವ ರಾಷ್ಟ್ರ ನಿನ್ನದಾಗಿರಬಹುದು. ಆದರೆ ಬಲಿಷ್ಠರಾದ ನನ್ನಂಥ ರಾಜರಿಂದ ಅದು ಅಪಹೃತವಾಗುತ್ತದೆ. ಆಗ ನಿನಗೆ ರಾಜ್ಯದ ಆಸೆ ಎಲ್ಲಿಯದು?

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂದ್ ರಾಜಾ ಕಾಲಸ್ಯ ಕಾರಣಮ್ ॥೩೭॥

'ರಾಜನಿಗೆ ಕಾಲ ಕಾರಣವೋ ಕಾಲಕ್ಕೆ ರಾಜ ಕಾರಣನೋ ಎಂದು ನಿನಗೆ ಸಂಶಯಬೇಡ. ರಾಜನೆ ಕಾಲಕ್ಕೆ ಕಾರಣ.'

ಇದು ಭಾರತ ಶ್ಲೋಕ (ಶಾಂತಿ ೭೦.೫)

ತಮುವಾಚ ಕಲಿಃ ಕಾಲೇ ಮದೀಯೇ ತ್ವಾದೃಶಃ ಕುತಃ ।
ರಾಜಾನಂ ಪೂರ್ವಮಾವಿಶ್ಯ ವಿಪ್ರಾಂಶ್ಚ ಸ್ಯಾಮಹಂ ನೃಪ ॥೩೮॥

ಧರ್ಮರಾಜನಿಗೆ ಕಲಿ ಹೇಳಿದ. 'ರಾಜನೆ, ನನ್ನ ಕಾಲದಲ್ಲಿ ನಿನ್ನಂಥ ರಾಜರೆಲ್ಲಿ? ನಾನು ಮೊದಲಿಗೇ ರಾಜನನ್ನೂ ಬ್ರಾಹ್ಮಣರನ್ನೂ ಪ್ರವೇಶಿಸಿ ಇರುತ್ತೇನೆ.

ವಾಸುದೇವಸಹಾಯೇಷು ತೇಜೋ ಯುಷ್ಮಾಸು ಮೇ ನಹಿ ।
ಕ್ವ ರಾಜಾಽಸಾವೃತೇ ಯುಷ್ಮಾನ್ ಯೋ ಮಯಾ ನಾಭಿಭೂಯತೇ ॥ ೩೯ ॥
ಮದೀಯಕಾಲೇ ಭೂಪಾಲ ವಿಪ್ರವೇದವಿರೋಧಿನಿ ।
ಮದ್ದೃಷ್ಟಿಪಾತೇ ಕ್ವ ಗುಣಾಃ ಕ್ವ ವೇದಾಃ ಕ್ವ ಸುಯುಕ್ತಯಃ ॥ ೪೦ ॥

ಕೃಷ್ಣನ ಸಹಾಯ ಉಳ್ಳವರಾದ್ದರಿಂದ ನಿಮ್ಮ ವಿಷಯದಲ್ಲಿ ನನಗೆ ಸಾಮರ್ಥ್ಯವಿಲ್ಲ. ರಾಜನೆ, ಬ್ರಾಹ್ಮಣರಿಗೂ ವೇದಗಳಿಗೂ ವಿರೋಧಿಯಾದ ನನ್ನ ಕಾಲದಲ್ಲಿ ನಿಮ್ಮನ್ನು ಹೊರತುಪಡಿಸಿದರೆ ನನ್ನ ವಶನಾಗದ ರಾಜನೆಲ್ಲಿದ್ದಾನೆ? ನನ್ನ ದೃಷ್ಟಿ ಬಿದ್ದಾಗ ಎಲ್ಲಿ ಗುಣಗಳು? ಎಲ್ಲಿ ವೇದಗಳು? ಮತ್ತೆಲ್ಲಿ ಒಳ್ಳೆಯ ಯುಕ್ತಿಗಳು?

ಜಗಾದ ನೃಪತಿಃ ಸತ್ಯಂ ಕಲೇ ವಕ್ಷ್ಯನೃತೋಽಪಿ ಸನ್ ।
ಮೋಚಯೇ ತ್ವರ್ತವಚನಾದ್ ಯದಾಽಸ್ಮತ್ಸಂತತೇಃ ಪರಮ್ ॥ ೪೧ ॥
ವಿಲುಂಪಸ್ಯಖಿಲಾನ್ ಧರ್ಮಾನ್ ಕರಂ ತತ್ರಾಪಿ ನೋಽರ್ಪಯ ।
ಸೀಮಾಧಿರ್ಬಹುವಾಕ್ಯಂ ಚ ತುಲಾಮಾನೇ ಚ ಮೇ ಕರಃ ॥ ೪೨ ॥

ಧರ್ಮರಾಜನೆಂದ, ಕಲಿಯೆ, ನೀನು ಅಸತ್ಯರೂಪನಾದರೂ ಸತ್ಯವನ್ನೇ ಹೇಳುತ್ತಿರುವೆ. ಸತ್ಯವನ್ನು ನುಡಿದೆಯಾದ್ದರಿಂದ ನಿನ್ನನ್ನು ಬಿಡುತ್ತೇನೆ. ನಮ್ಮ ಸಂತತಿ ನಿಂತ ಬಳಿಕ ನೀನು ಯಾವಾಗ ಎಲ್ಲ ಧರ್ಮಗಳನ್ನೂ ನಾಶಪಡಿಸುವೆಯೋ ಆಗಲೂ ನಮಗೆ ನೀನು ಕಪ್ಪ ಕೊಡಬೇಕು. ಗ್ರಾಮದ ಗಡಿ, ಅಡವಿಟ್ಟ ವಸ್ತು, ಬಹುಜನರ ಸಾಕ್ಷಿವಚನ, ತಕ್ಕಡಿ, ಅಳತೆ ಪಾತ್ರೆ ಇವೇ ನನಗೆ ಕೊಡಬೇಕಾದ ಕಪ್ಪಗಳು.

ನೈವಾತಿಕ್ರಮಮೇತೇಷಾಂ ಕುರು ಸರ್ವಾತ್ಮನಾ ಕ್ವಚಿತ್ ।
ತಮಾಹ ಭಗವಾನ್ ಕೃಷ್ಣೋ ಯಾವತ್ ಪಾಂಡವಸಂತತಿಃ ॥ ೪೩ ॥
ತಾವನ್ನ ತೇ ಭವೇಚ್ಛಕ್ತಿಃ ಪ್ರವೃತ್ತಸ್ಯಾಪಿ ಭೂತಲೇ ।
ಪಾಂಡವೇಭ್ಯಃ ಪರಂ ಯಾವತ್ ಕ್ಷೇಮಕಃ ಕ್ರಮವರ್ದ್ಧಿತಾ ॥ ೪೪ ॥

'ಇವುಗಳ ಅತಿಕ್ರಮವನ್ನು ಎಲ್ಲಿಯೂ ಸರ್ವಥಾ ಮಾಡಬೇಡ' ಎಂದ ಧರ್ಮರಾಜ. ಶ್ರೀಕೃಷ್ಣನೂ ನುಡಿದ. 'ಪಾಂಡವರ ಸಂತತಿ ಇರುವಷ್ಟು ಕಾಲ ನೀನು ಭೂಮಿಯಲ್ಲಿ ಪ್ರವೃತ್ತಿ ಮಾಡಿದರೂ ನಿನಗೆ ಸಾಮರ್ಥ್ಯ ಬರಲಾರದು. ಪಾಂಡವರ ಅನಂತರ ಕ್ಷೇಮಕನವರೆಗೆ ಅವರ ಸಂತತಿ ಕ್ರಮವಾಗಿ ಬೆಳೆಯುತ್ತದೆ.

ಕ್ಷೇಮಕಾತ್ ಪರತಃ ಪೂರ್ತಿಂ ಶಕ್ತಿಸ್ತೇ ಯಾಸ್ಯತಿ ಧ್ರುವಮ್ ।
ನ ದ್ರಷ್ಟವ್ಯಂ ಭೂತಲಂ ತೇ ಕುತ ಏವ ಸ್ಪೃಶೇದ್ಭುವಮ್ ॥ ೪೫ ॥
ಯಾವತ್ ಪಾರ್ಥಾ ಅಹಂ ಚಾತ್ರ ತತೋ ಭುವಿ ಪದಂ ಕುರು ।
ಇತ್ಯುಕ್ತೋ ವಾಸುದೇವೇನ ಮೋಚಿತೋ ಧರ್ಮಜೇನ ಚ ॥ ೪೬ ॥

ತಾನ್ ಪ್ರಣಮ್ಯ ಯಯೌ ಪಾರೇ ಸಮುದ್ರಸ್ಯಾಽಶ್ರಯದ್ ಗುಹಾಮ್ ।
ಪಾರ್ಥಾಶ್ಚ ಕೃಷ್ಣಸಹಿತಾ ರಕ್ಷಂತಃ ಕ್ಷ್ಮಾಂ ಮುದಂ ಯಯುಃ ॥ ೪೭ ॥

'ಕ್ಲೇಮಕನ ಆನಂತರ ನಿನ್ನ ಶಕ್ತಿ ನಿಶ್ಚಯವಾಗಿಯೂ ಪೂರ್ಣ ಬೆಳೆಯುತ್ತದೆ. ಪಾಂಡವರೂ ನಾನೂ ಇಲ್ಲಿ ಇರುವಷ್ಟು ಕಾಲ ನೀನು ಭೂತಲವನ್ನು ನೋಡಲೂ ಕೂಡದು ಎಂದ ಮೇಲೆ ಹೇಗೆ ಸ್ಪರ್ಶಿಸುವಿ? ನಾವು ಹೋದ ಬಳಿಕ ನೀನು ಭೂಮಿಯ ಮೇಲೆ ಕಾಲೂರಬಹುದು.' ಹೀಗೆ ಶ್ರೀಕೃಷ್ಣ ಕಲಿಗೆ ಹೇಳಿದ, ಧರ್ಮರಾಜ ಅವನನ್ನು ಬಿಟ್ಟ. ಅವನು ಅವರನ್ನು ನಮಿಸಿ ಹೊರಟುಹೋದ. ಸಮುದ್ರದ ಆಚೆ ದ್ವೀಪದಲ್ಲಿ ಒಂದು ಗುಹೆಯನ್ನು ಆಶ್ರಯಿಸಿದ. ಪಾಂಡವರು ಶ್ರೀಕೃಷ್ಣ ಸಹಿತರಾಗಿ ಭೂಮಿಯನ್ನು ಆಳುತ್ತ ಆನಂದಪಟ್ಟರು.

ಏವಂ ಪಾರ್ಥಾನ್ ಪ್ರತಿಷ್ಠಾಪ್ಯ ಶಕ್ರಪ್ರಸ್ಥೇ ತು ಸಾರ್ಜುನಃ ।
ಕ್ರೀಡನ್ ದಿವ್ಯಾಃ ಕಥಾಃ ಪ್ರಾಹ ಪುತ್ರಶೋಕಾಪನುತ್ತಯೇ ॥ ೪೮ ॥

ಹೀಗೆ ಶ್ರೀಕೃಷ್ಣ ಪಾಂಡವರನ್ನು ಸ್ಥಾಪಿಸಿ ಅರ್ಜುನನೊಡಗೂಡಿ ಇಂದ್ರಪ್ರಸ್ಥದಲ್ಲಿ ವಿಹರಿಸುತ್ತ ಅವನ ಪುತ್ರಶೋಕ ಪರಿಹಾರಕ್ಕಾಗಿ ದಿವ್ಯವಾದ ಕಥೆಗಳನ್ನು ಹೇಳಿದ.

ಋಷಿಮುನಿಗಳ ದೇವತೆಗಳ ವಂಶಚರಿತ್ರೆಗಳನ್ನು ಯುದ್ಧದ ರಮ್ಯಕಥೆಗಳನ್ನು ಶ್ರೀಕೃಷ್ಣ ಅರ್ಜುನನಿಗೆ ಹೇಳಿ ನಾನು ಇಲ್ಲಿಗೆ ಬಂದ ಕೆಲಸವಾಯಿತು. ಕೌರವರನ್ನು ನಾಶಮಾಡಿ ನಿಮಗೆ ರಾಜ್ಯ ಕೊಡಿಸಿದ್ದೇನೆ. ಇನ್ನು ದ್ವಾರಕೆಗೆ ಹೊರಡುತ್ತೇನೆ, ಎಂದ. ಆಗ ಅರ್ಜುನ ಅಂದು ನೀನು ಗೀತೋಪದೇಶ ಮಾಡಿದ್ದು ಮರೆತು ಹೋಗಿದೆ ತಿರುಗಿ ಹೇಳು ಎಂದ.

ಅನುಗೀತೆ

ಗೀತೋಕ್ತಂ ವಿಸ್ಮೃತಂ ಚಾಸ್ಮೈ ಪುನರ್ವಿಸ್ತರತೋಽವದತ್ ।
ವಾಣೇ ಪ್ರಾಣೋ ವಾಸುದೇವ ಇತ್ಯೇತೈರಖಿಲಂ ತತಮ್ ॥ ೪೯ ॥
ಸರ್ವೋತ್ತಮತ್ವಮೇತೇಷಾಂ ಸರ್ವಮೇತದ್ವಶೇ ಜಗತ್ ।
ಉತ್ತರೋತ್ತರಮೇತೇಽಪಿ ಗುಣೋಚ್ಚಾಸ್ತದ್ವಶೇಽಪರೇ ॥ ೫೦ ॥

ಅರ್ಜುನನಿಗೆ ಶ್ರೀಕೃಷ್ಣ ಗೀತೆಯಲ್ಲಿ ಉಪದೇಶಿಸಿದುದು ಮರೆತುಹೋಯಿತು. ಅದನ್ನು ಪುನಃ ವಿಸ್ತಾರವಾಗಿ ಅನುಗೀತೆಯಲ್ಲಿ ಶ್ರೀಕೃಷ್ಣ ಉಪದೇಶಿಸಿದ. ಭಾರತಿ, ಮುಖ್ಯಪ್ರಾಣ, ಶ್ರೀಕೃಷ್ಣ ಈ ಮೂವರಿಂದಲೇ ಎಲ್ಲ ಜಗತ್ತು ವ್ಯಾಪ್ತವಾಗಿದೆ. ಸರ್ವೋತ್ತಮತ್ವ ಈ ಮೂವರಿಗೆ ಮಾತ್ರ ಇದೆ. ಈ ಎಲ್ಲ ಜಗತ್ತು ಇವರ ವಶದಲ್ಲಿ ಇದೆ. ಇವರಲ್ಲಿ ಮೇಲು ಮೇಲಿನವರು ಹೆಚ್ಚು ಹೆಚ್ಚು ಗುಣವಂತರು. ಬೇರೆ ರುದ್ರಾದಿಗಳು ಇವರ ವಶದಲ್ಲಿ ಇರುತ್ತಾರೆ.

ಆಶ್ವಮೇಧಿಕ ಪರ್ವದಲ್ಲಿ ಅನುಗೀತಾಪರ್ವವೆಂಬುದು ಒಂದು ಉಪಪರ್ವ. ಹದಿನೇಳನೇ ಅಧ್ಯಾಯದಿಂದ ಐವತ್ತೊಂದನೆ ಅಧ್ಯಾಯದ

ವರೆಗೆ ಗುರುಶಿಷ್ಯಸಂವಾದ ರೂಪದಲ್ಲಿ ಬ್ರಾಹ್ಮಣ ದಂಪತಿ ಸಂವಾದ ರೂಪದಲ್ಲಿ ಅಧ್ಯಾತ್ಮೋಪದೇಶ ಕಂಡುಬರುತ್ತದೆ.

ನಾರಾಯಣಾಯ ದೇವಾಯ ಯದವಿಂದನ್ ಪಶೂನ್ ಪುರಾ।
ತತ್ರಸಾಮಾನಿ ಗಾಯಂತಿ ತತ್ರಚಾಹುರ್ನಿದರ್ಶನಂ॥ (ಆಶ್ವ ೨೬-೧೬) ಎಂದು ಮುಂತಾಗಿ ವಿಷ್ಣುಪೂಜೆಯನ್ನು ಪ್ರಶಂಸಿಸಲಾಗಿದೆ.

[1]ಇಲ್ಲಿ ಜಗತ್ತೆಂದರೆ ಉತ್ಪತ್ತಿಲಯಉಳ್ಳ ಮಹತ್ತತ್ವದವರೆಗಿನ ಪ್ರಪಂಚ ಮಾತ್ರವೆ ವಿವಕ್ಷಿತ. ಏಕೆಂದರೆ ಜ-ಉತ್ಪತ್ತಿ, ಗತ್-ಲಯಗಳನ್ನು ಹೊಂದುವುದೆ 'ಜಗತ್' ಎನಿಸುತ್ತದೆ. ಮಹತ್ತತ್ವದವರೆಗೆ ಭಾರತೀ ಮುಖ್ಯಪ್ರಾಣರಿಗೂ ವ್ಯಾಪ್ತಿ ಉಂಟು.

[2]ಸರ್ವೋತ್ತಮತ್ವ ಮೂವರಿಗೂ ಉಂಟೆಂದರೆ, ಹರಿಗೆ ನಿರವಧಿಕ ಸರ್ವೋತ್ತಮತ್ವ, ಪ್ರಾಣಿನಿಗೆ ಜೀವೋತ್ತಮತ್ವ, ಭಾರತಿಗೆ ಆಧಿಕಾರಿಕ ಸಕಲ ದೇವಿಯರಿಗಿಂತ ಉತ್ತಮತ್ವ ಉಂಟು.

ಈ ತಾರತಮ್ಯವನ್ನು ಆಶ್ವಮೇಧಿಕ ಪರ್ವದಲ್ಲಿ ೨೪ನೇ ಅಧ್ಯಾಯದಲ್ಲಿ ವರ್ಣಿಸಲಾಗಿದೆ.

ಇತ್ಥಂ ಹರೇರ್ವಶೇ ಸರ್ವಂ ಗುಣಪೂರ್ಣಶ್ಚ ಸ ಪ್ರಭುಃ।
ಏಕ ಏವ ನ ಚಾನ್ಯೋಽಸ್ತಿ ಪ್ರಾಣೋಽಚ್ಯಾ ತದಧೋ ರಮಾ ॥೫೧॥

'ಹೀಗೆ ಹರಿಯ ವಶದಲ್ಲಿಯೆ ಎಲ್ಲವೂ ಇದೆ. ಗುಣಪೂರ್ಣ ಆ ಪ್ರಭು ಒಬ್ಬನೆ ಹೊರತು ಇನ್ನೊಬ್ಬನಿಲ್ಲ. ಅವನಿಗಿಂತ ಕಡಿಮೆಯವಳು ಮುಖ್ಯಪ್ರಾಣನಿಗಿಂತ ಹೆಚ್ಚಿನವಳು ರಮೆ.

ಸ ಹುತಾಶ ಇತಿ ಪ್ರೋಕ್ತೋ ಹುತಮತ್ಯಖಿಲಂ ಯತಃ।
ವಾಕ್ಪ್ರಾಣಮಧ್ಯಗೋ ನಿತ್ಯಂ ಧಾರಯತ್ಯಖಿಲಂ ಜಗತ್ ॥೫೨॥
ಸ ಈಶೋ ಬ್ರಹ್ಮರುದ್ರಾದ್ಯಾ ಜೀವಾ ಏವ ಪ್ರಕೀರ್ತಿತಾಃ।
ಯೇ ತಸ್ಯಾನಾದಿಸದ್ಭಕ್ತಾ ಮುಕ್ತಿಯೋಗ್ಯಾ ಹಿ ತೇ ಸ್ಮೃತಾಃ ॥೫೩॥

'ಹೋಮಿಸಿದ್ದನ್ನೆಲ್ಲ ಉಣ್ಣುವುದರಿಂದ ಶ್ರೀಹರಿ ಹುತಾಶನೆನಿಸಿದ್ದಾನೆ. ವಾಕ್ ಪ್ರಾಣರ ಹೃದಯ ಕಮಲದಲ್ಲಿದ್ದು ನಿತ್ಯವೂ ಸಕಲ ಜಗತ್ತನ್ನು ಅವನೇ ಧರಿಸುತ್ತಾನೆ. ಅವನೆ ಈಶ.

1. ಅಖಿಲಂ ತತಮಿತ್ಯತ್ರ ಅಖಿಲಂ ಜಗದಿತಿ ಜಗತ್ಪದಮಾಕೃಷ್ಯ ಯೋಜನೀಯಂ। ತಥಾಚ ಜಾಯತೇ ಗಚ್ಛತಿ ಚೇತಿ ವ್ಯುತ್ಪತ್ತ್ಯಾ ಉತ್ಪತ್ತಿ ನಾಶವನ್ಮಹತ್ತತ್ತ್ವಾಂತಂ ತತ್ತ್ವಮೇವ ಜಗತ್। ತತ್ರ ಚ ವಾಣೇ ಪ್ರಾಣ ಯೋರ್ವ್ಯಾಪ್ತಿರಸ್ತ್ಯೇವ। -ವಾದಿರಾಜೀಯ
2. ವಿಷ್ಣೋರ್ನಿರವಧಿಕ ಸರ್ವೋತ್ತಮತ್ವಂ। ಇಯದಾಮನನಾದಿತಿ ಬ್ರಹ್ಮಸೂತ್ರೇಽಧಿಕಾರಿಣಾಂ ಪ್ರಾಣಾವ ಸಾನತ್ವೋಕ್ತೇಃ ಆಧಿಕಾರಿಕ ಮಂಡಲಸ್ಥ ಸಕಲ ಜೀವೋತ್ತಮತ್ವಂ ಪ್ರಾಣಸ್ಯ। ವಾಣ್ಯಾಸ್ತು ಆಧಿಕಾರಿಕ ಮಂಡಲಸ್ಥ ದೇವೀಷು ಸರ್ವೋತ್ತಮತ್ವಮಿತಿ ವಿವೇಕಃ। -ವಾದಿರಾಜೀಯ

ಬ್ರಹ್ಮರುದ್ರಾದಿಗಳೆಲ್ಲ ಜೀವರೆಂದೇ ಕರೆಸಿಕೊಂಡಿದ್ದಾರೆ. ಅವನ ಅನಾದಿ ಸದ್ಭಕ್ತರು ಯಾರೋ ಅವರು ಮುಕ್ತಿಯೋಗ್ಯರೆನಿಸುತ್ತಾರೆ.

ಆಶ್ವಮೇಧಿಕಪರ್ವ ೨೫ನೇ ಅಧ್ಯಾಯದಲ್ಲಿ ಹುತಾಶನನಾಮಕನ ಮಹಿಮೆ ವರ್ಣಿತವಾಗಿದೆ.

ಅನಾದಿದ್ವೇಷಿಣೋ ಯೇಽಸ್ಮಿಂಸ್ತಮೋಯೋಗ್ಯಾಃ ಸುಪಾಪಿನಃ ।
ಮಿಶ್ರಾ ಮಧ್ಯಾ ಇತಿ ಜ್ಞೇಯಾಃ ಸಂಸಾರಪರಿವರ್ತಿನಃ ॥ ೫೪ ॥
ಏವಂ ಜೀವಾಸ್ತ್ರಿಧಾ ಪ್ರೋಕ್ತಾ ಭವಂತ್ಯೇತೇ ನ ಚಾನ್ಯಥಾ ।
ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದೈಹಿಕಮಾನಸೈಃ ॥ ೫೫ ॥

ಶ್ರೀಹರಿಯಲ್ಲಿ ಅನಾದಿ ದ್ವೇಷಿಗಳು ಮಹಾಪಾಪಿಗಳು, ತಮೋಯೋಗ್ಯರು. ಮಿಶ್ರರು, ಮಧ್ಯರು, ಸಂಸಾರದಲ್ಲಿರುವವರು ಎಂದು ತಿಳಿಯಬೇಕು. ಹೀಗೆ ಜೀವರು ತ್ರಿವಿಧರೆನಿಸುತ್ತಾರೆ. ಇದಕ್ಕೆ ವ್ಯತ್ಯಾಸವಾಗುವುದಿಲ್ಲ. ಜೀವರಲ್ಲಿ ದೈಹಿಕ ಮತ್ತು ಮಾನಸಿಕ ಚಿಹ್ನೆಗಳಿಂದ ತಾರತಮ್ಯವನ್ನು ತಿಳಿಯಬೇಕು.

ಅಶ್ವಮೇಧಿಕಪರ್ವ 27ನೇ ಅಧ್ಯಾಯದಲ್ಲಿ ಈ ತಾರತಮ್ಯ ವರ್ಣಿತವಾಗಿದೆ.

[1]ದೈಹಿಕ ಚಿಹ್ನೆಗಳೆಂದರೆ ಹೀಗೆ-

ಮಹತ್ತತ್ವದ ವ್ಯಾಪ್ತಿ ಎಷ್ಟರವರೆಗೆ ಇರುವುದೋ ಅಷ್ಟರತನಕ ಬ್ರಹ್ಮನ ಶರೀರವಿದೆ. ಅದಕ್ಕಿಂತ ಕೆಳಗೆ ಅಹಂಕಾರತತ್ವದ ವ್ಯಾಪ್ತಿ ಇರುವಷ್ಟು ರುದ್ರ ಶೇಷ ಗರುಡರ ಶರೀರವಿದೆ. ಅದಕ್ಕಿಂತ ಕೆಳಗೆ ಮನಸ್ತತ್ವವ್ಯಾಪ್ತಿ ಇರುವಷ್ಟು ಇಂದ್ರಕಾಮರ ಶರೀರವಿದೆ. ಹೀಗೆ ದೇವತೆಗಳ ಶರೀರ ಪರಿಮಾಣ ತಾರತಮ್ಯದಿಂದ ಅವರ ತಾರತಮ್ಯವನ್ನು ತಿಳಿಯಬಹುದು.

---

1. ದೈಹಿಕ ಲಿಂಗಂ ನಾಮ ಯಾವನ್ಮಹತ್ತತ್ವಂ ತಾವದ್ ಬ್ರಹ್ಮಣೋ ದೇಹಸ್ತಿಷ್ಠತಿ। ತತೋಽರ್ವಾಕ್ ಯಾವದಹಂಕಾರ ತತ್ತ್ವಂ ತಾವದ್ ರುದ್ರಶೇಷ ಗರುಡಾನಾಂ ದೇಹಾಸ್ತಿಷ್ಠಂತಿ। ತತೋಽರ್ವಾಕ್ ಯಾವನ್ಮನಸ್ತತ್ವಂ ತಾವದಿಂದ್ರ ಸ್ಕಂದಯೋ ರ್ದೇಹಸ್ತಿಷ್ಠತಿ। ಏವಂಚ ಪೂರ್ವಪೂರ್ವದೇವ ದೇಹಾಃ ಸ್ಥೂಲ ಸ್ಥೂಲಾಃ। ಉತ್ತರೋತ್ತರ ದೇವ ದೇಹಾಸ್ತು ಸೂಕ್ಷ್ಮ ಸೂಕ್ಷ್ಮಾಃ। ತತಶ್ಚ ದೈಹಿಕಂ ದೇಹಸಂಬಂಧಿ ಪರಿಮಾಣಂ ದೇವಾನಾಂ ತಾರತಮ್ಯೇ ಲಿಂಗಂ। ಬ್ರಹ್ಮಾ ಸಕಲವೇದೋಕ್ತ ಗುಣಾನ್ ಮನಸಾ ಜಾನಾತಿ। ರುದ್ರಾದ್ಯಾಸ್ತು ತತೋಽಪಿ ಕಿಂಚಿದೂನತಯಾ ಜಾನಂತಿ। ತಥಾ ಚ ಕ್ರಮಾದೂನತಯಾ ಸ್ಥಿತಂ ಮಾನಸಂ ಜ್ಞಾನಮಪಿ ದೇವಾನಾಂ ತಾರತಮ್ಯೇ ಲಿಂಗಮತಿ ಭಾವಃ। -ವಾದಿರಾಜೀಯ

ದೈಹಿಕೇತಿ ದೇಹಸಂಬಂಧಿ ಶಂಖಚಕ್ರಾದಿ ಧಾರಣೈಃ, ಶ್ರೀ ವಿಷ್ಣುಮುದ್ದಿಶ್ಯ ಪ್ರದಕ್ಷಿಣ ನಮಸ್ಕಾರಾದ್ಯೈರ್ವಾ ಮಾನಸೈರ್ಜ್ಞಾನಾದ್ಯೈರ್ಲಿಂಗೈರ್ಲಕ್ಷಣೈಃ ತಾರತಮ್ಯಂ ಜ್ಞೇಯಂ। ಜೀವಾನಾಮಿತಿ ಶೇಷಃ। ಉಕ್ತ ಲಕ್ಷಣಾ ಉತ್ತಮಾಃ ತದ್ರಹಿತಾ ಅಧಮಾ ಇತಿ ವಿಜ್ಞೇಯಮಿತಿ ಭಾವಃ। -ಜನಾರ್ದನೀಯ

ದೇಹಸಂಬಂಧೀನಿ ಸಾಮುದ್ರ ಲಕ್ಷಣಾನಿ। ಮಾನಸಾನಿ ಭಕ್ತ್ಯಾದೀನಿ। -ವಾದಿರಾಜೀಯ

ಆಶ್ವಮೇಧಿಕ 41, 42 ಅಧ್ಯಾಯಗಳಲ್ಲಿ ಮಹದಾದಿತ್ವ ನಿರೂಪಣೆ ಇದೆ.

ಅಥವಾ ದ್ವಾತ್ರಿಂಶಲ್ಲಕ್ಷಣಗಳಲ್ಲಿ ಎಷ್ಟೆಷ್ಟು ಹೆಚ್ಚು ಲಕ್ಷಣಯುಕ್ತರೋ ಅಷ್ಟಷ್ಟು ಉತ್ತಮರು ಎಂದು ತಾರತಮ್ಯ. ಅಥವಾ ಶಂಖಚಕ್ರಾದಿಧಾರಣ ವಿಷ್ಣುವಿಗೆ ಪ್ರದಕ್ಷಿಣ ನಮಸ್ಕಾರಗಳು ಮುಂತಾದವುಗಳಿದ್ದರೆ ಉತ್ತಮ ಜೀವರೆಂದೂ ಇಲ್ಲದಿದ್ದರೆ ಅಧಮರೆಂದೂ ತಾರತಮ್ಯವನ್ನು ತಿಳಿಯಬಹುದು.

ಮಾನಸ ಚಿಹ್ನೆಗಳೆಂದರೆ ಹೀಗೆ-

ಬ್ರಹ್ಮ ಸಕಲ ವೇದೋಕ್ತ ವಿಷ್ಣು ಗುಣಗಳನ್ನು ಉಪಾಸನ ಮಾಡುತ್ತಾನೆ. ರುದ್ರಾದಿಗಳು ಕಡಿಮೆ ಕಡಿಮೆಯಾಗಿ ಉಪಾಸನೆ ಮಾಡುತ್ತಾರೆ. ಇದು ತಾರತಮ್ಯದ್ಯೋತಕ.

ವಿಷ್ಣೋರ್ಲಿಂಗಾನುಸಾರಿತ್ವಾತ್ತಾರತಮ್ಯಾತ್ ತದೀಕ್ಷಣಮ್ ।
ವಿಷ್ಣೋಸ್ತದನುಗಾನಾಂ ಚ ಪ್ರೀತಿಕೃದ್ ಧರ್ಮ ಈರಿತಃ ॥ ೫೬ ॥
ಅಧರ್ಮೋಽನ್ಯ ಇಯಂ ನಿಷ್ಠಾ ಪ್ರಲಾಪಃ ಕಿಂ ಕರಿಷ್ಯತಿ ।
ಏವಮಾದ್ಯನುಶಾಸ್ಯಾಜಃ ಪಾರ್ಥಂ ಪಾರ್ಥೈಃ ಸುಸತ್ಕೃತಃ ॥ ೫೭ ॥

'ಈ ದೈಹಿಕ ಮಾನಸಿಕ ಚಿಹ್ನೆಗಳಿಗೆ ಅನುಗುಣವಾಗಿಯೆ ಶ್ರೀಹರಿ ಅನುಗ್ರಹಿಸುವುದರಿಂದ ಜೀವರನ್ನು ತಾರತಮ್ಯದಿಂದಲೆ ತಿಳಿಯಬೇಕು. ಮತ್ತು ವಿಷ್ಣುವಿಗೂ ಅವನ ಭಕ್ತರಿಗೂ ಸಂತೋಷ ಉಂಟುಮಾಡಬೇಕು. ಇದೇ ಧರ್ಮ. ಬೇರೆ ಎಲ್ಲವೂ ಅಧರ್ಮ. ಇದು ಶಾಸ್ತ್ರನಿರ್ಣಯ. ಪುತ್ರಶೋಕದಿಂದ ಅತ್ತರೆ ಏನು ಫಲ? ಇತ್ಯಾದಿಯಾಗಿ ಶ್ರೀಕೃಷ್ಣ ಅರ್ಜುನನಿಗೆ ಉಪದೇಶಿಸಿ ಹಸ್ತಿನಾಪುರಕ್ಕೆ ಹೋಗಿ ಅಲ್ಲಿ ಪಾಂಡವರಿಂದ ಬಹಳ ಸತ್ಕಾರ ಹೊಂದಿದ.

ಉದಂಕ ಮುನಿಗೆ ಅಮೃತ

ಕಥಂಚಿತ್ ತಾನವಸ್ಥಾಪ್ಯ ಸುದೂರಾನುಗತಾನ್ ಪ್ರಭುಃ ।
ಸುಭದ್ರಾಸಹಿತಃ ಪ್ರಾಯಾದ್ ಯಾನೇನ ದ್ವಾರಕಾಂ ಪುರೀಮ್ ॥ ೫೮ ॥

ಬಲುದೂರದವರೆಗೆ ಹಿಂಬಾಲಿಸಿ ಬಂದ ಪಾಂಡವರನ್ನು ಕಷ್ಟದಿಂದ ಹಿಂದೆ ನಿಲ್ಲಿಸಿ ಶ್ರೀಕೃಷ್ಣ ಸುಭದ್ರಾಸಹಿತನಾಗಿ ರಥದಿಂದ ದ್ವಾರಕಾ ಪಟ್ಟಣಕ್ಕೆ ತೆರಳಿದ.

ಸಮಾಧಿವಿರತೋದಂಕಪರಿಪೃಷ್ಟಃ ಪಥಿ ಪ್ರಭುಃ ।
ಹತಂ ದುರ್ಯೋಧನಂ ಪ್ರಾಹ ಸಭ್ರಾತೃಸುತಸೈನಿಕಮ್ ॥ ೫೯ ॥

ದಾರಿಯಲ್ಲಿ ಸಮಾಧಿಯನ್ನು ಬಿಟ್ಟು ಎದ್ದಿದ್ದ ಉದಂಕಮುನಿ ಶ್ರೀಕೃಷ್ಣನನ್ನು ಕೇಳಿದಾಗ ಅವನು ಹೇಳಿದ, ದುರ್ಯೋಧನ ತನ್ನ ಸೋದರರಿಂದ ಮಕ್ಕಳಿಂದ ಸೈನಿಕರಿಂದ ಸಮೇತನಾಗಿ ಹತನಾದ ಎಂದು.

ಮಹಾಭಾರತದಲ್ಲಿ ಮುನಿಯ ಹೆಸರು ಉತ್ತಂಕ ಎಂದಿದೆ.

ತಂ ಶಿಷ್ಯವಧಕೋಪೇನ ಶಪ್ತುಮಾತ್ಮಾನಮುದ್ಯತಮ್ ।
ಕೇಶವೋಽಶಮಯದ್ ವಾಕ್ಯೈರ್ವಿಶ್ವರೂಪಂ ಪ್ರದರ್ಶ್ಯ ಚ ॥೬೦॥

ಶಿಷ್ಯನಾದ ದುರ್ಯೋಧನನ ವಧೆಯ ಕೋಪದಿಂದ ಉದಂಕಮುನಿ ಶ್ರೀಕೃಷ್ಣನನ್ನು ಶಪಿಸಲು ಉದ್ಯುಕ್ತನಾದ. ಶ್ರೀಕೃಷ್ಣ ವಿಶ್ವರೂಪವನ್ನು ತೋರಿ ಒಳ್ಳೆಯ ಮಾತುಗಳಿಂದ ಅವನನ್ನು ಸಮಾಧಾನಪಡಿಸಿದ.

'ನೀನು ಶಕ್ತನಾಗಿದ್ದೂ ಕುರುಪಾಂಡವರ ಯುದ್ಧವನ್ನು ತಪ್ಪಿಸಲಿಲ್ಲ' ಎಂದು ಮುನಿ ಕೋಪಗೊಂಡು ಶಪಿಸತೊಡಗಿದ್ದ. ಆಗ ಅರ್ಜುನನಿಗೆ ತೋರಿದ್ದ ವಿಶ್ವರೂಪವನ್ನೇ ಮುನಿಗೂ ತೋರಿದ ಶ್ರೀಕೃಷ್ಣ.

ಮದ್ಭಕ್ತೋ ನಿತರಾಮೇಷ ಮದಾರಾಧನತತ್ಪರಃ ।
ಮಾಮವಜ್ಞಾಯ ನಿರಯಂ ಮಾಽನುತ್ಥಾನಂ ವ್ರಜೇದಿತಿ ॥೬೧॥
ಕೃಪಯಾ ವಾಸುದೇವೇನ ಬೋಧಿತಃ ಶಾಂತಮಾನಸಃ ।
ಪಶ್ಚಾತ್ತಾಪಾಭಿತಪ್ತಾತ್ಮಾ ತಮೇವ ಶರಣಂ ಯಯೌ ॥೬೨॥

ಈತ ನನ್ನಲ್ಲಿ ಬಹಳ ಭಕ್ತಿಉಳ್ಳವ. ನನ್ನ ಆರಾಧನೆಯಲ್ಲಿ ನಿರತ. ನನ್ನನ್ನು ತಿರಸ್ಕರಿಸಿ ಶಾಶ್ವತ ನರಕವನ್ನು ಹೊಂದದಿರಲಿ ಎಂದು ಕೃಪೆಯಿಂದ ಶ್ರೀಕೃಷ್ಣ ಬೋಧಿಸಿದಾಗ ಉದಂಕ ಮುನಿಯ ಮನಸ್ಸು ಸಮಾಧಾನಗೊಂಡಿತು. ಆತ ಪಶ್ಚಾತ್ತಾಪದಿಂದ ಬೆಂದ ಮನಸ್ಸಿನಿಂದ ಕೃಷ್ಣನನ್ನೇ ಶರಣು ಹೊಂದಿದ.

ನಚ ತೇ ತಪಸೋ ನಾಶಮಿಚ್ಛಾಮಿ ತಪತಾಂ ವರ (ಆಶ್ವ೫೩.೨೫)

'ನಿನ್ನ ತಪಸ್ಸು ಹಾಳಾಗದಿರಲಿ ಎಂದು ನಾನು ಬಯಸಿದ್ದೇನೆ' ಎಂದು ಪ್ರೀತಿಯಿಂದ ಶ್ರೀಕೃಷ್ಣ ಬೋಧಿಸಿದಾಗ ಮುನಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪಪಟ್ಟು ಶರಣಾದ.

ತಸ್ಮೈ ದೇವೋಽಭಯಂ ದತ್ತ್ವಾ ಪ್ರೇಷಯಿಷ್ಯೇಽಮೃತಂ ತವ ।
ದಾತುಂ ಶಕ್ರಮಿತಿ ಪ್ರೋಕ್ತ್ವಾ ಯಯೌ ದ್ವಾರವತೀಂ ಪ್ರಭುಃ ॥೬೩॥

ದೇವ ಶ್ರೀಕೃಷ್ಣ ಉದಂಕನಿಗೆ ಅಭಯನೀಡಿ ನಿನಗೆ ಅಮೃತವನ್ನು ಕೊಡಲು ದೇವೇಂದ್ರನನ್ನು ಕಳಿಸುವೆನೆಂದು ಹೇಳಿ ದ್ವಾರಕೆಗೆ ತೆರಳಿದ.

'ವಿಶ್ವರೂಪದರ್ಶನ ಅಮೋಘ. ಅದರಿಂದ ಏನಾದರೂ ವರವನ್ನು ಕೇಳು' ಎಂದ ಶ್ರೀಕೃಷ್ಣ. ಮುನಿ ಈ 'ಮರುಭೂಮಿಯಲ್ಲಿ ನೀರು ಕೊಡು' ಎಂದು ಕೇಳಿದ. ನೀರೇಕೆ? ನೀರಿನ ರೂಪದಲ್ಲಿ ಅಮೃತವನ್ನೆ ಕೊಡಲು ದೇವೇಂದ್ರ ನನ್ನು ಕಳಿಸುವೆನೆಂದ ಶ್ರೀಕೃಷ್ಣ.

ಅಥಾಽದಿದೇಶ ದೇವೇಶಂ ವಾಸುದೇವೋಽಮೃತಂ ಮುನೇಃ ।
ದೇಹೀತಿ ವಂಚಯಿಷ್ಯಾಮೀತ್ಯಾಹ ಸೋಽಪಿ ಕ್ಷಮಾಪಯನ್ ॥೬೪॥

ಬಳಿಕ ಶ್ರೀಕೃಷ್ಣ ಮುನಿಗೆ ಅಮೃತ ನೀಡೆಂದು ದೇವೇಂದ್ರನಿಗೆ ಆದೇಶಿಸಿದ. ಇಂದ್ರ ಕ್ಷಮೆ ಬೇಡುತ್ತ ಮುನಿಯನ್ನು ವಂಚಿಸುವೆನೆಂದ.

ನಾನು ಮುನಿಯನ್ನು ವಂಚಿಸುತ್ತೇನೆ. ಆದರೂ ನಿನ್ನ ಮಾತಿನಲ್ಲಿ ವಿಶ್ವಾಸವಿಟ್ಟು ಅಮೃತವನ್ನು ಸ್ವೀಕರಿಸಲು ಒಪ್ಪಿದರೆ ಕೊಡುವೆನೆಂದ ಇಂದ್ರ.

ಓಮಿತ್ಯುಕ್ತೋ ಭಗವತಾ ತತ್ಸ್ನೇಹಾತ್ ಸ ಶಚೀಪತಿಃ ।
ಸುಜುಗುಪ್ಸಿತಮಾತಂಗವೇಷೋ ಭೂತ್ವಾ ಮುನಿಂ ಯಯೌ ॥೬೫॥

ಇಂದ್ರನ ಮೇಲಿನ ಪ್ರೀತಿಯಿಂದ ಶ್ರೀಕೃಷ್ಣ 'ಆಗಲಿ' ಎಂದ. ಇಂದ್ರ ಬಲು ಜುಗುಪ್ಸಿತವಾದ ಚಂಡಾಲವೇಷ ಧರಿಸಿ ಮುನಿಯ ಬಳಿಗೆ ನಡೆದ.

ಚಂಡಾಲ ದಿಗಂಬರನಾಗಿದ್ದ. ಮೈಎಲ್ಲ ಕೊಳೆ. ಭಯಂಕರ ರೂಪ. ಕತ್ತಿ ಬಿಲ್ಲುಬಾಣಗಳನ್ನು ಧರಿಸಿದ್ದಾನೆ. ನಾಯಿಗಳ ಹಿಂಡಿನಿಂದ ಸುತ್ತುವರಿದಿದ್ದಾನೆ.

ಮೂತ್ರಸ್ರೋತಸಿ ಸೌಧಂ ಚ ನಿಧಾಯ ಕಲಶಂ ವಶೀ ।
ಮೂತ್ರಯನ್ನಿವ ತಂ ಪ್ರಾಹ ವಾಸುದೇವಃ ಸುಧಾಮಿಮಾಮ್ ।
ಮಹರ್ಷೇ ಪ್ರೇಷಯಾಮಾಸ ತವಾರ್ಥೇ ತತ್ ಪಿಬೇತಿ ಚ ॥೬೬॥
ಸ ಮೂತ್ರಮಿತಿ ಮತ್ವಾ ತಂ ಯಾಹೀತ್ಯೇವಾಽಹ ಭತ್ಸಯನ್ ।
ವಂಚಯಿತ್ವೈವ ತಂ ಶಕ್ರೋ ಯಯೌ ಪ್ರೀತಃ ಸ್ವಮಾಲಯಮ್ ॥೬೭॥

ಯೋಗಿ ಇಂದ್ರ ಮೂತ್ರದ್ವಾರದಲ್ಲಿ ಅಮೃತಕಲಶವನ್ನಿಟ್ಟುಕೊಂಡು ಮೂತ್ರ ಮಾಡುವವನಂತೆ ತೋರುತ್ತ 'ಮಹರ್ಷಿ, ಕೃಷ್ಣ ಈ ಅಮೃತವನ್ನು ನಿನಗಾಗಿ ಕಳಿಸಿಕೊಟ್ಟಿದ್ದಾನೆ. ಅದರಿಂದ ಕುಡಿ' ಎಂದ. ಮುನಿ ಅದನ್ನು ಮೂತ್ರವೆಂದೇ ಬಗೆದು ನಿಂದಿಸುತ್ತ 'ಆಚೆತೊಲಗು' ಎಂದ. ದೇವೇಂದ್ರ ಹೀಗೆ ಮುನಿಯನ್ನು ವಂಚಿಸಿ ಸಂತುಷ್ಟನಾಗಿ ಸ್ವರ್ಗಕ್ಕೆ ಹೊರಟುಹೋದ.

ಮೂತ್ರಸ್ಪರ್ಶವಾದರೆ ಅಮೃತ ಅಪವಿತ್ರವಾಗುವುದೆಂದು ಯೋಗಿಯಾದ ಇಂದ್ರ ಯೋಗಬಲದಿಂದ ಮೂತ್ರವನ್ನು ತಡೆದು ಬೇರೆಯೆ ನೀರನ್ನು ನಿರ್ಮಿಸಿ ಸುರಿಸಿದ್ದ. ಭಾರತದಲ್ಲಿ ವಸ್ತುತಃ ಮೂತ್ರ ಸುರಿಸಿದಂತೆ ಕಥೆ ಇದೆ. ಅದರ ಅಭಿಪ್ರಾಯವಿದು ಎಂದು ವಾದಿರಾಜೀಯ ಹೇಳಿದೆ.

ನೀಲಕಂಠೀ ಪ್ರಕಾರ ತನ್ನ ಕಾಲಿನ ಕೆಳಗೆ ಚರ್ಮದ ಚೀಲದಲ್ಲಿ ನೀರಿದೆ. ಕುಡಿ ಎನ್ನುತ್ತಾನೆ ಚಂಡಾಲ. ಅಥವಾ ಪಾತಾಳ ಗಂಗೆಯ ನೀರಿದೆ ಕುಡಿ ಎನ್ನುತ್ತಾನೆ. ಮೂತ್ರದ ಪ್ರಸ್ತಾವವೆ ಇಲ್ಲ.

ಇಂದ್ರ, ಹೀಗೆ ಮುನಿಯನ್ನು ವಂಚಿಸಿ, ಮುನಿಯೆ, ನೀನು ಬಹಳ ಬಾಯಾರಿರುವೆ ನಿನ್ನನ್ನು ನೋಡಿ ನನಗೆ ಕರುಣೆ ಉಕ್ಕಿ ಹರಿಯುತ್ತಿದೆ. ಶ್ರೀಕೃಷ್ಣ ನಿನಗಾಗಿ ಕಳಿಸಿಕೊಟ್ಟಿರುವ ಈ ಅಮೃತವನ್ನು ಯಥೇಚ್ಛ ಕುಡಿ ಎಂದು ಪುನಃ ಪುನಃ ಆಗ್ರಹಪಡಿಸಿದ. ಮರುಭೂಮಿಯಲ್ಲಿ ಮುನಿ ಬಹಳ ಬಾಯಾರಿದ್ದುದು ನಿಜ. ಆದರೆ ಚಂಡಾಲನ ಮೂತ್ರವೆಂದು ಮುನಿಗೆ ಕೋಪ. ಹಿಂದೆ ಆತ ತನ್ನ ಗುರುವಾದ ಬೈದನಿಗೆ ಪೌಷ್ಯರಾಜನ ರಾಣಿಯ ಕರ್ಣಕುಂಡಲಗಳನ್ನು ಗುರುದಕ್ಷಿಣೆಯಾಗಿ ತರಲು ಹೊರಟಾಗ ಇಂದ್ರ ಮನುಷ್ಯರೂಪದಿಂದ ಒಂದು ಎತ್ತಿನ ಮೇಲೇರಿ ಬಂದು ಎತ್ತಿನ ಗೋಮಯ ಗಂಜಳಗಳನ್ನು ಉಣ್ಣು ಎಂದುದಕ್ಕೆ ಮುನಿ ಉಂಡಿದ್ದ. ಅದು ವಸ್ತುತಃ ಅಮೃತವೆ ಆಗಿತ್ತು. ತಿರುಗಿ ಅಮೃತ ಉಣಿಸಲು ಇಂದ್ರ ಒಪ್ಪಲಿಲ್ಲ. ಆಗ ಗೋಮೂತ್ರವನ್ನು ಕುಡಿದಿದ್ದ ಮುನಿ ಈಗ ಚಂಡಾಲನ ಮೂತ್ರವನ್ನು ಕುಡಿಯಲು ಅಸಹ್ಯಪಟ್ಟ, 'ಛಿ, ತೊಲಗಾಚೆ' ಎಂದ. ದೇವೇಂದ್ರ ಕೃತಕೃತನಾಗಿ ನಾಯಿಗಳೊಂದಿಗೆ ಅದೃಶ್ಯನಾದ.

ಅಸಾಧಾರಣಮನ್ನಂ ಹಿ ದೇವಾನಾಮಮೃತಂ ಸದಾ ।
ಅನ್ಯಪೀತಿಸ್ತತಸ್ತಸ್ಯ ದೇವಾನಾಂ ಪರಮಾಪ್ರಿಯಾ ॥೬೮॥

ಅಮೃತ ಸದಾ ದೇವತೆಗಳಿಗೇ ಮೀಸಲಾದ ಆಹಾರ. ಅದರಿಂದ ಅದನ್ನು ಅನ್ಯರು ಕುಡಿಯುವುದು ದೇವತೆಗಳಿಗೆ ಏನೂ ಇಷ್ಟವಿಲ್ಲ. ಅದರಿಂದ ವಂಚಿಸಿದ.

ಆತ್ಮದತ್ತಪ್ರಸಾದಾಚ್ಚ ಸ್ವಾಪರಾಧಾತ್ ಪ್ರಚಾಲಿತೇ ।
ಉದಂಕೇ ವಾಸುದೇವಸ್ತು ಯುಕ್ತಮಿತ್ಯೇವ ಮನ್ಯತೇ ॥೬೯॥

ಉದಂಕಮುನಿ ಸ್ವಾಪರಾಧದಿಂದಲೆ ಶ್ರೀಕೃಷ್ಣ ಕೊಡುತ್ತಿದ್ದ ಅನುಗ್ರಹದಿಂದ ವಂಚಿತನಾದಾಗ ಶ್ರೀಕೃಷ್ಣ ಇದು ಸರಿಯೆಂದೇ ಭಾವಿಸಿದ.

ಶ್ರೀಕೃಷ್ಣ ನೀರಿನ ರೂಪದಿಂದ ಅಮೃತವನ್ನು ಕೊಡುತ್ತೇನೆ ಎಂದು ಸ್ಪಷ್ಟ ಹೇಳಿದ್ದರೂ ಉದಂಕ ಅದನ್ನು ಮೂತ್ರವೆಂದು ತಿಳಿದ. ಕೃಷ್ಣನ ಮಾತಿನಲ್ಲಿ ಅವಿಶ್ವಾಸ. ಇದು ಮಹಾಪರಾಧ. ಅದರಿಂದ ಮುನಿ ಅಮೃತದಿಂದ ವಂಚಿತನಾದುದು ಉಚಿತವೆ.

ಸ್ವಪುರೀಂ ಪ್ರಾಪ್ಯ ಯದುಭಿಃ ಪೂಜಿತಃ ಶೂರಸೂನವೇ ।
ವೃತ್ತಾಂತಂ ಕಥಯಾಮಾಸ ಕೇಶವೋ ಯದುಸಂಸದಿ ॥೭೦॥

ಶ್ರೀಕೃಷ್ಣ ದ್ವಾರಕೆಗೆ ಹೋಗಿ, ಯಾದವರಿಂದ ಸತ್ಕೃತನಾಗಿ ಯಾದವರ ಸಭೆಯಲ್ಲಿ ವಸುದೇವನಿಗೆ ಕುರುಕ್ಷೇತ್ರ ಯುದ್ಧದ ವೃತ್ತಾಂತವನ್ನು ಹೇಳಿದ.

ವಧಮಂತರಿತಂ ಸೂನೋಃ ಸಾತ್ವತೇಶೇನ ಸಾತ್ವತೀ ।
ಪ್ರಣಮ್ಯ ಕಥಯೇತ್ಯೂಚೇ ತತ ಆಹ ಜನಾರ್ದನಃ ॥ ೭೧ ॥

ಶ್ರೀಕೃಷ್ಣ ಅಭಿಮನ್ಯು ವಧೆಯ ವೃತ್ತಾಂತವನ್ನು ಹೇಳದೆ ಬಿಟ್ಟಾಗ ಸುಭದ್ರೆ ನಮಿಸಿ ಅದನ್ನೂ ಹೇಳೆಂದಳು. ಆಗ ಶ್ರೀಕೃಷ್ಣ ಅದನ್ನೂ ಹೇಳಿದ.

ತತಃ ಸುದುಃಖಿತಾಃ ಶೂರಪುತ್ರಾದ್ಯಾ ಅಭಿಮನ್ಯವೇ ।
ಶ್ರಾದ್ಧದಾನಾನಿ ಬಹುಶಶ್ಚಕ್ರುಃ ಕೇಶವಸಂಯುತಾಃ ॥ ೭೨ ॥

ಆಗ ವಸುದೇವ ಮುಂತಾದವರು ಬಹಳ ದುಃಖಿತರಾಗಿ ಶ್ರೀಕೃಷ್ಣನೊಡಗೂಡಿ ಅಭಿಮನ್ಯುವಿಗೆ ಬಹಳ ಶ್ರಾದ್ಧ ದಾನಗಳನ್ನು ನಡೆಸಿದರು.

ಅರವತ್ತು ಲಕ್ಷ ಬ್ರಾಹ್ಮಣರಿಗೆ ಭೋಜನ ಮಾಡಿಸಿದರೆಂದು ಮಹಾಭಾರತ ಹೇಳಿದೆ. (ಆಶ್ವ೬೨.೬)

ಅಶ್ವಮೇಧಕ್ಕೆ ಸನ್ನಾಹ

ನಿವಸತ್ಯತ್ರ ವಿಶ್ವೇಶೇ ಧರ್ಮಪುತ್ರಃ ಕ್ರತೂತ್ತಮಮ್ ।
ಅಶ್ವಮೇಧಮನುಷ್ಠಾತುಂ ನಾವಿಂದದ್ ವಿತ್ತಮಂಜಸಾ ॥ ೭೩ ॥

ಶ್ರೀಕೃಷ್ಣ ದ್ವಾರಕೆಯಲ್ಲಿ ವಾಸಮಾಡುತ್ತಿದ್ದಾಗ ಧರ್ಮರಾಜ ಅಶ್ವಮೇಧವೆಂಬ ಶ್ರೇಷ್ಠಯಾಗವನ್ನು ವೈಭವದಿಂದ ನಡೆಸಲು ಬಯಸಿದ. ಆದರೆ ಆವಶ್ಯಕವಾದ ಧನವನ್ನು ಅವನಿಗೆ ಪಡೆಯಲಾಗಲಿಲ್ಲ.

ಹತಶೇಷಾತ್ ಕ್ಷತ್ರಸಂಘಾತ್ ಕರಂ ನೈಚ್ಛದ್ ದಯಾಪರಃ ।
ನಚ ಮಧ್ಯಮಕಲ್ಪೇನ ಯಷ್ಟುಂ ತಸ್ಯ ಮನೋ ಗತಮ್ ॥ ೭೪ ॥

ಅಳಿದುಳಿದ ಕ್ಷತ್ರಿಯ ಸಮುದಾಯದಿಂದ ಕಪ್ಪವನ್ನು ಕೊಳ್ಳಲು ದಯಾಪರನಾದ ಧರ್ಮರಾಜ ಬಯಸಲಿಲ್ಲ. ಗುರುಜನರ ಹಿಂಸೆ ಮಾಡಿಯೂ ಮಧ್ಯಮಕಲ್ಪದಿಂದ ಯಾಗ ಮಾಡುವುದು ಅವನ ಮನಸ್ಸಿಗೆ ಬರಲಿಲ್ಲ.

ಗುರುಜನರ ಹಿಂಸೆ ಮಾಡಿದ್ದರಿಂದ ಅದರ ಪರಿಹಾರಕ್ಕೆ ಉತ್ತಮ ಕಲ್ಪದಿಂದಲೆ ಯಾಗ ಮಾಡಬೇಕು. ಆದರೆ ರಾಜರೆಲ್ಲ ಸತ್ತಿದ್ದಾರೆ. ಅವರ ಎಳೆ ಮಕ್ಕಳಿಗೆ ಹಿರಿಯರ ಅಗಲಿಕೆಯ ದುಃಖವೆ ಸಾಕಷ್ಟಿದೆ. ಇದರ ಮೇಲೆ ಕಪ್ಪ ನೀಡಲು ಆಗ್ರಹಿಸಿದರೆ ಬಹಳ ಹಿಂಸೆಯಾಗುತ್ತದೆ ಎಂದು ದಯಾಪರನಾದ ಧರ್ಮರಾಜ ಚಿಂತಿಸಿದ.

ವಿಜ್ಞಾಯ ನಿತ್ಯವಿಜ್ಞಾತನಿಖಿಲೋ ಬಾದರಾಯಣಃ ।
ಆವಿರ್ಭೂತೋ ಹಿಮವತಃ ಶೃಂಗಂ ಯತ್ರಾಭಿಸಂಗತಮ್ ॥ ೭೫ ॥

ಮೇರುಶೃಂಗೇಣ ಯತ್ರೈವ ವಿಷ್ಣುಃ ಸ್ವಾತ್ಮಾನಮವ್ಯಯಮ್ ।
ಲೋಕಸ್ಯ ಸಂಗ್ರಹಾಯೇಜೇ ಕರ್ಮಬಂಧೋಜ್ಝಿತೋಽಪಿ ಸನ್ ॥ ೭೬॥
ಶಂಕರಾದ್ಯಾಃ ಸುರಾ ಯತ್ರ ಮರುತ್ತಶ್ಚೇಜಿರೇ ಹರಿಮ್ ।
ದಾನವೋ ವೃಷಪರ್ವಾ ಚ ತತ್ರಾಸ್ತಿ ಧನಮಕ್ಷಯಮ್ ॥ ೭೭ ॥
ತಚ್ಛಂಕರಶರೀರಸ್ಥಂ ಜಾಮದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯ ಯಜ ತೇನ ಚ ॥ ೭೮ ॥
ಇತ್ಯಾಹ ವ್ಯಾಸವಾಕ್ಯಾನು ಭೀಮೋಽಪ್ಯಾಹ ನೃಪೋತ್ತಮಮ್ ॥ ೭೯ ॥

ಸದಾ ಸರ್ವಜ್ಞರಾದ ಶ್ರೀ ಬಾದರಾಯಣರು ಇದನ್ನು ತಿಳಿದು ಆವಿರ್ಭೂತರಾದರು. 'ಹಿಮಾಲಯ ಶಿಖರ ಮೇರು ಶಿಖರದೊಂದಿಗೆ ಸೇರುವಲ್ಲಿ ಹಿಂದೆ ವಿಷ್ಣು ಕರ್ಮಬಂಧರಹಿತನಾಗಿದ್ದರೂ ಲೋಕಶಿಕ್ಷಣಕ್ಕಾಗಿ ತನ್ನ ನಾಶರಹಿತರೂಪವನ್ನೇ ಯಜ್ಞದಿಂದ ಆರಾಧಿಸಿದ. ರುದ್ರಾದಿ ದೇವತೆಗಳೂ ಮರುತ್ತರಾಜನೂ ವೃಷಪರ್ವ ದಾನವನೂ ವಿಷ್ಣುವನ್ನು ಯಜ್ಞದಿಂದ ಆರಾಧಿಸಿದರು. ಅಲ್ಲಿ ಅಕ್ಷಯಧನವಿದೆ. ಅದರಿಂದ ಶಿವಶರೀರಾಂತರ್ಗತನಾದ ಸರ್ವೋತ್ತಮನಾದ ಪರಶುರಾಮರೂಪಿ ನಾರಾಯಣನನ್ನು ಯಜ್ಞದಿಂದ ಆರಾಧಿಸಿ ಅವನ ಅನುಜ್ಞೆಯಿಂದಲೆ ಆ ಧನವನ್ನು ಸ್ವೀಕರಿಸಿ ಅದರಿಂದಯಾಗ ಮಾಡು' ಎಂದರು ಬಾದರಾಯಣರು. ಅವರು ಹಾಗೆ ಹೇಳಿದಾಗ ಭೀಮನೂ ಧರ್ಮರಾಜನಿಗೆ ಹಾಗೇ ಹೇಳಿದ.

ಯಜ್ಞನಾಮಕನಾದ ಹರಿ ಹಿಮಾಲಯದಲ್ಲಿ ಯಜ್ಞಮಾಡುವಾಗ ದೇವತೆಗಳು ಆ ಯಜ್ಞಕ್ಕಾಗಿ ಸುವರ್ಣಮಯವಾದ ಮೇರುಶಿಖರವನ್ನು ಅಲ್ಲಿ ತಂದಿಟ್ಟರು. ಅದರಿಂದ ಅಲ್ಲಿ ಹಿಮಾಲಯ ಶಿಖರ ಮೇರು ಶಿಖರವನ್ನು ಸೇರುತ್ತದೆ ಎಂದು ಪ್ರಮಾಣ ಸಂಗ್ರಹಕಾರರ ಅಭಿಪ್ರಾಯ.

ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯೋಽಖಿಲೇಶ್ವರಃ ।
ಸ ಶಂಕರಶರೀರಸ್ಥೋ ಯಜ್ಞೋಚ್ಛಿಷ್ಟಧನಾದಿಪಃ ॥ ೮೦ ॥

'ಸರ್ವೇಶ್ವರನಾದ ಪರಶುರಾಮರೂಪನಾದ ವಿಷ್ಣುವೆ ಧನಕ್ಕೆ ದೇವತೆ. ಅವನೆ ಶಿವಶರೀರಾಂತರ್ಗತನಾಗಿ ಯಜ್ಞಶೇಷವಾದ ಧನಕ್ಕೆ ಒಡೆಯನಾಗಿರುತ್ತಾನೆ.

ತೇನೈವ ವಿಷ್ಣುನಾ ದತ್ತಮರ್ಜುನಾಯಾಸ್ತ್ರಮುತ್ತಮಮ್ ।
ಕಾರ್ಯಾಣ್ಯನ್ಯಾನಿ ಚಾಸ್ಮಾಕಂ ಕೃತಾನ್ಯೇತೇನ ವಿಷ್ಣುನಾ ॥ ೮೧ ॥

ಆ ವಿಷ್ಣುವೆ ಅರ್ಜುನನಿಗೆ ಉತ್ತಮವಾದ ಪಾಶುಪತ ಅಸ್ತ್ರವನ್ನು ಕೊಟ್ಟಿದ್ದಾನೆ. ನಮ್ಮ ಬೇರೆ ಕಾರ್ಯಗಳೂ ಆ ವಿಷ್ಣುವಿನ ಅನುಗ್ರಹದಿಂದಲೆ ಸಾಧಿತವಾಗಿವೆ.

ಸ ಬ್ರಹ್ಮರುದ್ರಶಕ್ರಾದಿಪದದಾತಾಽಖಿಲೇಶ್ವರಃ ।
ಸ್ವತಂತ್ರಃ ಪರತಂತ್ರಾಂಸ್ತಾನಾವರ್ತಯತಿ ಚೇಚ್ಛಯಾ ॥ ೮೨ ॥

'ಅವನೆ ಬ್ರಹ್ಮರುದ್ರ ಇಂದ್ರಾದಿಗಳಿಗೆ ಅವರ ಪದವಿಗಳನ್ನು ನೀಡುವವನು. ಸರ್ವೇಶ್ವರ, ಸ್ವತಂತ್ರ. ಪರತಂತ್ರರಾದ ಬ್ರಹ್ಮಾದಿಗಳನ್ನು ಅವನೆ ಸ್ವೇಚ್ಛೆಯಿಂದ ಸಂಸಾರದಲ್ಲಿ ತಿರುಗಿಸುತ್ತಾನೆ.

ಪ್ರಿಯೋಽಸ್ಮಾಕಂ ಪ್ರಿಯಾಸ್ತಸ್ಯ ಸರ್ವದೈವ ವಯಂ ನೃಪ ।
ಅತಸ್ತದಭ್ಯನುಜ್ಞಾತಧನೇನೈವ ಯಜಾಮಹೇ ॥೮೩॥

'ಅವನೇ ನಮಗೆ ಸದಾಪ್ರಿಯ. ಅವನಿಗೆ ನಾವು ಸದಾ ಪ್ರಿಯರು. ಅದರಿಂದ ಅವನ ಅನುಮತಿಯಿಂದ ಸಿಗುವ ಹಣದಿಂದಲೆ ನಾವು ಯಜ್ಞ ಮಾಡೋಣ.

ಯಜ್ಞನಾಮಕ ಹರಿಯಾಗಲಿ ರುದ್ರಾದಿ ದೇವತೆಗಳಾಗಲಿ ಮರುತ್ತರಾಜ ವೃಷಪರ್ವದಾನವರಾಗಲಿ ಎಲ್ಲರೂ ಅಲ್ಲಿ ಯಾಗ ಮಾಡಿದ ಬಳಿಕ ಉಳಿದ ಸಂಪತ್ತನ್ನು ರುದ್ರನಿಗೆಂದು ಅಲ್ಲಿಯೆ ಬಿಟ್ಟು ಹೋದರು. 'ಉಚ್ಛೇಷಣ ಭಾಗೋ ವೈ ರುದ್ರಃ' ಎಂಬ ವಿಧಿಯಂತೆ ಹಾಗೇ ಮಾಡಬೇಕು. ಯಜ್ಞದಲ್ಲಿ ಉಳಿದ ಸಂಪತ್ತೆಲ್ಲ ರುದ್ರನಿಗೆ, ಅಂದರೆ ರುದ್ರಾಂತರ್ಯಾಮಿ ಪರಶುರಾಮನಿಗೆ ಮೀಸಲು ಎನ್ನುತ್ತದೆ ಆ ಶ್ರುತಿ. ಶಿವಾಂತರ್ಯಾಮಿಯಾದ ಅವನೆ ಶಿವನ ಮೂಲಕ ಅರ್ಜುನನಿಗೆ ಪಾಶುಪತಾಸ್ತ್ರ ಕೊಡಿಸಿದವನು. ಅವನೆ ಆ ಧನವನ್ನು ಸ್ವೀಕರಿಸಲು ನಮಗೆ ಅನುಮತಿ ನೀಡಿದರೆ ಏನಡ್ಡಿ?

ಸೋಽಯಂ ಪಿತಾಮಹೋಽಸ್ಮಾಕಂ ವ್ಯಾಸಸ್ತನ್ನಃ ಪ್ರದಾಸ್ಯತಿ ।
ಇತ್ಯುಕ್ತ್ವಾ ತಂ ಪುರಸ್ಕೃತ್ಯ ಕೃಷ್ಣದ್ವೈಪಾಯನಂ ಯಯುಃ ॥೮೪॥

'ಆ ಪರಶುರಾಮನೆ ಇನ್ನೊಂದು ರೂಪದಿಂದ ನಮ್ಮ ತಾತನಾದ ವೇದವ್ಯಾಸನೆನಿಸಿದ್ದಾನೆ. ಅವನೆ ಆ ಸಂಪತ್ತನ್ನು ನಮಗೆ ಕೊಡಿಸುತ್ತಿದ್ದಾನೆ'. ಹೀಗೆ ಹೇಳಿಕೊಂಡು ಪಾಂಡವರು ವೇದವ್ಯಾಸರನ್ನು ಮುಂದೆ ಮಾಡಿಕೊಂಡು ಹೋದರು.

ಹೋಗಿ ಹಿಮಾಲಯದಲ್ಲಿ ರಾತ್ರಿ ಉಪವಾಸವಿದ್ದು ಮರುದಿನ ರುದ್ರನಿಗೂ ಅವನ ಗಣಗಳಿಗೂ ಕುಬೇರನಿಗೂ ಹೋಮಾಹುತಿ ನೀಡಿ ಆರಾಧಿಸಿದರು. ರುದ್ರನಿಂದ ಧನವನ್ನು ಸ್ವೀಕರಿಸಲು ಅನುಜ್ಞೆ ಪಡೆದರು.

ಧನಂ ಕೃಷ್ಣಃ ಸಮಾದಾಯ ಸಮಂತಾಚ್ಛತಯೋಜನಮ್ ।
ದದೌ ತೇಷಾಂ ತೇಽಪಿ ಚೋಹುರ್ಹಸ್ತ್ಯಶ್ವೋಷ್ಟ್ರನರಾದಿಭಿಃ ॥೮೫॥

ವೇದವ್ಯಾಸರು ಸುತ್ತಲೂ ನೂರುಯೋಜನ ಪರಿಮಿತವಾದ ಧನವನ್ನು ತೆಗೆದುಕೊಟ್ಟರು. ಪಾಂಡವರು ಅದನ್ನು ಆನೆ ಕುದುರೆ ಒಂಟೆ ಮನುಷ್ಯರಿಂದ ಹೊರಿಸಿದರು.

ವೇದವ್ಯಾಸರು ಒಂದೆಡೆ ನೆಲ ಅಗೆಸಿ ನಿಧಿಯನ್ನು ತೋರಿಸಿಕೊಟ್ಟರು. ಅರವತ್ತು ಸಾವಿರ ಒಂಟೆಗಳು, ಅವುಗಳಿಗೆ ಎರಡುಪಟ್ಟು ಕುದುರೆಗಳು, ಒಂದು ಲಕ್ಷ ಆನೆಗಳು, ಅಷ್ಟೇ ಬಂಡಿಗಳೂ ಹಣವನ್ನು ಹೊತ್ತು ನಡೆದವು.

ಕತ್ತೆಗಳ ಮತ್ತು ಮನುಷ್ಯ ಆಳುಗಳ ಸಂಖ್ಯೆ ಅಪರಿಮಿತವೆ ಆಗಿತ್ತೆಂದು ಮಹಾಭಾರತ ಹೇಳಿದೆ.

ಯುಧಿಷ್ಠಿರಮೃತೇ ಸರ್ವೇ ಭೀಮಸೇನಪುರೋಗಮಾಃ।
ಯಜ್ಞಾರ್ಥಮೂಹಿರೇ ಭೂರಿ ಸ್ವರ್ಣಮುದ್ಯದ್ರವಿಪ್ರಭಮ್ ॥೮೬॥

ಧರ್ಮರಾಜ ಹೊರತು ಭೀಮಸೇನ ಮುಂತಾದವರೆಲ್ಲರೂ ಉದಿಸುವ ಸೂರ್ಯನಂತೆ ಹೊಳೆವ ಬಹಳ ಚಿನ್ನವನ್ನು ಯಜ್ಞಕ್ಕಾಗಿ ಆನೆ ಮುಂತಾದವುಗಳಿಂದ ಹೊರಿಸಿದರು.

ಧರ್ಮರಾಜ ವೇದವ್ಯಾಸರಿಂದ ಅನುಜ್ಞೆ ಪಡೆದು ಪುರೋಹಿತನೊಂದಿಗೆ ಹಸ್ತಿನಾವತಿಗೆ ಹೊರಟು ಹೋದ. (ಆಶ್ವ. 65.20) ಅದರಿಂದ ಭೀಮಸೇನ ಮುಂತಾದವರೇ ಧನವನ್ನು ತಂದರು.

ಉದಂಕ ಮೇಘಗಳು

ತದೈವ ವಾಸುದೇವೋಽಪಿ ಸಭಾರ್ಯಃ ಸಹ ಭದ್ರಯಾ।
ಆಗಚ್ಛನ್ ಹಸ್ತಿನಪುರಂ ಪಥ್ಯುದಂಕೇನ ಪೂಜಿತಃ ॥೮೭॥

ಆಗಲೆ ಶ್ರೀಕೃಷ್ಣನೂ ಭಾರ್ಯೆಯರೊಂದಿಗೆ ಮತ್ತು ಸುಭದ್ರೆಯೊಂದಿಗೆ ಹಸ್ತಿನಾಪುರಕ್ಕೆ ಹೊರಟ. ಬರುತ್ತ ದಾರಿಯಲ್ಲಿ ಪುನಃ ಉದಂಕನಿಂದ ಪೂಜಿತನಾದ.

ತತ್ಕಾಮವರ್ಷಿಣೋ ಮೇಘಾಂಸ್ತಸ್ಯ ದತ್ತೋದಕಾರ್ಥಿನಃ।
ಸಫಲಂ ಸ್ವವರಂ ಕೃತ್ವಾ ಜಗಾಮ ಗಜಸಾಹ್ವಯಮ್ ॥೮೮॥

ಉದಂಕ ಜಲಾರ್ಥಿಯಾಗಿದ್ದರಿಂದ ಶ್ರೀಕೃಷ್ಣ ಅವನಿಗೆ ಯಥೇಚ್ಛವಾಗಿ ಮಳೆಗರೆವ ಮೊಡಗಳನ್ನು ಕೊಟ್ಟು ತನ್ನ ವರವನ್ನು ಸಫಲವನ್ನಾಗಿ ಮಾಡಿ ಹಸ್ತಿನಾಪುರಕ್ಕೆ ತೆರಳಿದ.

[1]ಅಮೃತ ನೀಡುವೆನೆಂದು ಶ್ರೀಕೃಷ್ಣ ಕೊಟ್ಟಿದ್ದ ವರವನ್ನು ಅವಿಶ್ವಾಸದಿಂದ ಮುನಿ ತಾನೇ ವ್ಯರ್ಥಗೊಳಿಸಿದ್ದ. ಆದರೂ ಶ್ರೀಕೃಷ್ಣ 'ಸತ್ಯಸಂಕಲ್ಪ'ನಾದ್ದರಿಂದ 'ಅವೃತ' ಶಬ್ದಕ್ಕೆ ನೀರು ಎಂಬ ಅರ್ಥವೂ ಇರುವುದರಿಂದ ಮರುಭೂಮಿಯಲ್ಲಿ ನೀರಿಲ್ಲದೆ ಬವಣೆ ಪಡುತ್ತಿದ್ದ ಮುನಿಗೆ ನೀರೇ ಅಮೃತವಾಗಿದ್ದರಿಂದ ಶ್ರೀಕೃಷ್ಣ ತನ್ನ ವರವನ್ನು ಸತ್ಯವಾಗಿಸುವುದಕ್ಕಾಗಿ ಮರುಭೂಮಿಯಲ್ಲಿ ಮಳೆಗರೆವ ಮೋಡಗಳನ್ನೆ ಉದಂಕನಿಗೆ ಕೊಟ್ಟ. ಆ ಮೋಡಗಳಿಗೆ 'ಉದಂಕ ಮೇಘ'ಗಳೆಂದೆ ಹೆಸರಾಯಿತು.

---

1. ಉದಂಕಂ ಪ್ರತಿ ಅಮೃತಂ ದಾಸ್ಯಾಮೀತಿ ಸ್ವದತ್ತವರಸ್ಯ ಸ್ವಾಜ್ಞಯಾ ಇಂದ್ರೇಣ ಮೋಘೀ ಕೃತತ್ವಾತ್ ವೃಷ್ಟ್ಯರ್ಥಿನಸ್ತಸ್ಯ ವೃಷ್ಟಿದಾನೇನ 'ಪಯಃ ಕೀಲಾಲ ಮಮೃತಂ ಇತ್ಯುಕ್ತ್ಯಾ ಜಲಸ್ಯಾಮೃತತ್ವೇನ ಚ ತಮೇವ ಸ್ವವರಂ ಸ್ವದತ್ತವರಂ ಸಫಲಂ ಕೃತ್ವೇತ್ಯರ್ಥಃ। ಸತ್ಯವ್ರತ ಇತಿ ಹಿ ಭಗವತೋ ನಾಮೇತಿ ಭಾವಃ।
-ವಾದಿರಾಜೀಯ

ಆಸನ್ನೇಷ್ವೇವ ಪಾರ್ಥೇಷು ವ್ಯಾಸೇ ಚ ಪುರುಷೋತ್ತಮೇ ।
ಪ್ರವಿವೇಶ ಪುರಂ ಕೃಷ್ಣಸ್ತದಾಽಸೂತೋತ್ತರಾ ಮೃತಮ್ ॥೮೯॥

ಪಾಂಡವರೂ ಪುರುಷೋತ್ತಮ ಶ್ರೀವೇದವ್ಯಾಸರೂ ಸಮೀಪಕ್ಕೆ ಬರುತ್ತಿದ್ದಾಗಲೆ ಶ್ರೀಕೃಷ್ಣನೂ ಹಸ್ತಿನಾಪುರವನ್ನು ಪ್ರವೇಶಿಸಿದ. ಆಗಲೆ ಉತ್ತರೆ ಮೃತಶಿಶುವನ್ನು ಪ್ರಸವಿಸಿದಳು.

ದ್ರೌಣ್ಯಸ್ತ್ರಸೂದಿತಂ ಬಾಲಂ ದೃಷ್ಟ್ವಾ ಕುಂತ್ಯಾದಿಕಾಃ ಸ್ತ್ರಿಯಃ ।
ಶರಣ್ಯಂ ಶರಣಂ ಜಗ್ಮುರ್ವಾಸುದೇವಂ ಜಗತ್ಪತಿಮ್ ॥೯೦॥

ಹುಟ್ಟುವಾಗಲೆ ಅಶ್ವತ್ಥಾಮನ ಅಸ್ತ್ರದಿಂದ ಹತವಾಗಿದ್ದ ಶಿಶುವನ್ನು ಕಂಡು ಕುಂತಿ ಮುಂತಾದ ಸ್ತ್ರೀಯರು ಸರ್ವರಕ್ಷಕನಾದ ಜಗದೊಡೆಯ ಶ್ರೀಕೃಷ್ಣನನ್ನು ಮೊರೆಹೊಕ್ಕರು.

ಪ್ರತ್ಯಕ್ಷಮಾತ್ಮನಾ ಗರ್ಭೇ ರಕ್ಷಿತಂ ಪ್ರಸವೇ ಹತಮ್ ।
ಪುನರುಜ್ಜೀವಯಾಮಾಸ ಕೇಶವಃ ಪಾರ್ಥತಂತವೇ ॥೯೧॥

ಗರ್ಭದಲ್ಲಿ ಪ್ರತ್ಯಕ್ಷವಾಗಿ ತನ್ನಿಂದ ರಕ್ಷಿತನಾಗಿದ್ದು ಪ್ರಸವಕಾಲದಲ್ಲಿ ಹತನಾದ ಬಾಲಕ ಪರೀಕ್ಷಿತನನ್ನು ಪಾಂಡವರ ಸಂತತಿಯ ರಕ್ಷಣೆಗಾಗಿ ಶ್ರೀಕೃಷ್ಣ ಪುನಃ ಬದುಕಿಸಿದ.

ಅಸ್ತ್ರ ಅಮೋಘವೆಂದು ತೋರಿದ. ತಾನೂ ರಕ್ಷಕನೆಂದು ತೋರಿ ಕೊಂಡ ಬ್ರಹ್ಮಾಸ್ತ್ರವನ್ನು ಉಪಸಂಹರಿಸಿದ ಶ್ರೀಕೃಷ್ಣ. ಒಡನೆ ಆ ಅಸ್ತ್ರ ಜ್ವಲಿಸುತ್ತ ಬ್ರಹ್ಮನ ಬಳಿಗೆ ಹೊರಟುಹೋಯಿತು. ಶ್ರೀಕೃಷ್ಣ ತನ್ನ ಪಾದಕಮಲದಿಂದ ಪರೀಕ್ಷಿತನ ಶರೀರವನ್ನು ಆ ಪಾದಮಸ್ತಕ ಸವರಿದ. ನಿಧಾನವಾಗಿ ಶರೀರದಲ್ಲಿ ಚೈತನ್ಯ ಬಂದಿತು. ಮನೆತುಂಬ ಪ್ರಕಾಶ ಹಬ್ಬಿತು. ರಾಕ್ಷಸರೆಲ್ಲರೂ ದೂರ ಓಡಿದರು.

ತದೈವ ವಿವಿಶುಃ ಪಾರ್ಥಾಃ ಸಕೃಷ್ಣಾಃ ಸಧನೋಚ್ಚಯಾಃ ।
ಸರ್ವೇ ಮುಮುದಿರೇ ದೃಷ್ಟ್ವಾ ಪೌತ್ರಂ ಕೇಶವರಕ್ಷಿತಮ್ ॥೯೨॥

ಆಗಲೆ ವೇದವ್ಯಾಸರೊಂದಿಗೆ ಪಾಂಡವರು ಧನರಾಶಿಯುಕ್ತರಾಗಿ ಹಸ್ತಿನಾವತಿಯನ್ನು ಪ್ರವೇಶಿಸಿದರು. ಶ್ರೀಕೃಷ್ಣನಿಂದ ರಕ್ಷಿತನಾದ ಮೊಮ್ಮಗನನ್ನು ಕಂಡು ಆನಂದಿಸಿದರು.

ದದೌ ದಾನಾನಿ ಬಹುಶೋ ಧರ್ಮಪುತ್ರೋ ಯುಧಿಷ್ಠಿರಃ ।
ಪೌತ್ರಜನ್ಮನಿ ಹೃಷ್ಟಾತ್ಮಾ ವಾಸುದೇವಂ ನನಾಮ ಚ ॥೯೩॥

ಧರ್ಮಪುತ್ರನಾದ ಯುಧಿಷ್ಠಿರ ಮೊಮ್ಮಗನ ಜನನದಿಂದ ಸಂತುಷ್ಟಮನಸ್ಕನಾಗಿ ಬಹಳ ದಾನಗಳನ್ನು ನೀಡಿದ ಮತ್ತು ಶ್ರೀಕೃಷ್ಣನನ್ನು ನಮಿಸಿದ.

ಕುಂತೀಕೃಷ್ಣಾಸುಭದ್ರಾಭಿರ್ವೃರಾಟ್ಸ್ಯೈಕನ್ಯಾಭಿರೇವ ಚ ।
ಪಾಂಡವೈಃ ಪುರುಷೈಶ್ಚಾನ್ಯೈಃ ಸಂಸ್ತುತಃ ಪ್ರಣತೋ ಹರಿಃ ॥೯೪॥

ಕುಂತಿ ದ್ರೌಪದಿ ಸುಭದ್ರೆ ಉತ್ತರೆ ಬೇರೆ ಸ್ತ್ರೀಯರು ಪಾಂಡವರು ಮತ್ತು ಬೇರೆ ಜನರೂ ಕೃಷ್ಣನನ್ನು ಹೊಗಳಿದರು ನಮಿಸಿದರು.

ತತಃ ಕೃಷ್ಣಾಭ್ಯನುಜ್ಞಾತಾಃ ಪಾರಾಶರ್ಯಸದಸ್ಯಕಾಃ ।
ಆರೇಭಿರೇಕಶ್ವಮೇಧಂ ತೇ ಮುನಿಭಿರ್ಬ್ರಹ್ಮವಾದಿಭಿಃ ॥೯೫॥

ಬಳಿಕ ಪಾಂಡವರು ಶ್ರೀಕೃಷ್ಣನಿಂದ ಅನುಜ್ಞೆ ಪಡೆದು ವೇದವ್ಯಾಸರನ್ನು ಸದಸ್ಯರನ್ನಾಗಿ ಮಾಡಿಕೊಂಡು ಬ್ರಹ್ಮವಾದಿಗಳಾದ ಮುನಿಗಳೊಂದಿಗೆ ಅಶ್ವಮೇಧಯಾಗವನ್ನು ಆರಂಭಿಸಿದರು.

ಸರ್ವಯಜ್ಞಾತ್ಮಕಂ ತೇಷಾಮಶ್ವಮೇಧಂ ಜಗತ್ಪತಿಃ ।
ಕಾರಯಾಮಾಸ ಭಗವಾನ್ ಕೃಷ್ಣದ್ವೈಪಾಯನಃ ಸ್ವಯಮ್ ॥೯೬॥

ಜಗದೊಡೆಯ ಭಗವಾನ್ ಶ್ರೀವೇದವ್ಯಾಸರು ಸ್ವತಃ ಪಾಂಡವರ ಅಶ್ವಮೇಧ ಯಜ್ಞವನ್ನು ಸರ್ವಯಜ್ಞಸ್ವರೂಪವಾಗುವಂತೆ ನಡೆಸಿಕೊಟ್ಟರು.

ಸಾಧನಾನಿ ತು ಸರ್ವಾಣಿ ಶಾಲಾಂ ಚೈವ ಹಿರಣ್ಮಯೀಮ್ ।
ಪವಮಾನಸುತಶ್ಚಕ್ರೇ ಕೃಷ್ಣದ್ವೈಪಾಯನೇರಿತಃ ॥೯೭॥

ಎಲ್ಲ ಯಜ್ಞ ಸಾಧನಗಳನ್ನೂ ಸುವರ್ಣಮಯವಾದ ಯಜ್ಞಶಾಲೆಯನ್ನೂ ವೇದವ್ಯಾಸರ ಆದೇಶದಂತೆ ಭೀಮಸೇನನೆ ಸಿದ್ಧಪಡಿಸಿದ.

ಅಶ್ವಮೇಧದ ಕುದುರೆ

ಅಥಾನುಮಂತ್ರಿತೋತ್ಸೃಷ್ಟಂ ಪುರೋಹಿತಪುರಸ್ಕೃತಮ್ ।
ತುರಗಂ ಕೃಷ್ಣಸಾರಂಗಮನುವವ್ರಾಜ ವಾಸವಿಃ ॥೯೮॥

ಬಳಿಕ ಪಾಂಡವರು ಕಪ್ಪು ಮತ್ತು ಚಿತ್ರಬಣ್ಣಗಳಿಂದ ಕೂಡಿದ ಕುದುರೆಯನ್ನು ಅಭಿಮಂತ್ರಿಸಿ ಬಿಟ್ಟರು. ಪುರೋಹಿತರಾದ ಧೌಮ್ಯರನ್ನು ಮುಂದೆ ಮಾಡಿಕೊಂಡು ಅರ್ಜುನ ಕುದುರೆಯನ್ನು ಹಿಂಬಾಲಿಸಿದ.

ಸ ಜಿತ್ವಾ ರುಂಧತಃ ಸರ್ವಾನ್ ನೃಪತೀನ್ ಶಸ್ತ್ರತೇಜಸಾ ।
ಚಾರಯಾಮಾಸ ಸರ್ವೇಷು ರಾಷ್ಟ್ರೇಷ್ವವಿಜಿತೋಽರಿಭಿಃ ॥೯೯॥

ಶತ್ರುಗಳಿಂದ ಪರಾಭವವಿಲ್ಲದ ಅರ್ಜುನ ಆ ಕುದುರೆಯನ್ನು ತಡೆಯುವ ಎಲ್ಲ ರಾಜರನ್ನು ಶಸ್ತ್ರಬಲದಿಂದ ಗೆದ್ದು ಎಲ್ಲ ರಾಷ್ಟ್ರಗಳಲ್ಲಿ ತಿರುಗಿಸಿದ.

ಯುಧಿಷ್ಠಿರಾಜ್ಞಯಾ ತೇನ ನ ಕಶ್ಚಿನ್ನಿಹತಸ್ತದಾ ।
ಆಹೂತಾಶ್ಚ ನೃಪಾಸ್ತೇನ ಯಜ್ಞಾರ್ಥಂ ಪ್ರೀಯತಾಽಖಿಲಾಃ ॥೧೦೦॥

ಯುಧಿಷ್ಠಿರನ ಆಜ್ಞೆ ಇದ್ದುದರಿಂದ ಅರ್ಜುನ ಯಾರನ್ನೂ ಆಗ ಕೊಲ್ಲಲಿಲ್ಲ.

ಸಂತುಷ್ಟನಾದ ಆತ ಯಜ್ಞಕ್ಕೆ ಎಲ್ಲ ರಾಜರ್ನೂ ಆಹ್ವಾನಿಸಿದ.

ಮಣಲೂರಂ ಕ್ರಮಾತ್ ಪ್ರಾಪ್ತಸ್ತತ್ಸೈನಂ ಬಭ್ರುವಾಹನಃ ।
ಅಭ್ಯಯಾದರ್ಘ್ಯಪಾದ್ಯಾದ್ಯೈಸ್ತಮಾಹ ವಿಜಯಃ ಸುತಮ್ ॥೧೦೧॥

ಅರ್ಜುನ ಕ್ರಮವಾಗಿ ಮಣಲೂರಿಗೆ ಬಂದಾಗ ಬಭ್ರುವಾಹನ ಅವನನ್ನು ಅರ್ಘ್ಯ ಪಾದ್ಯಾದಿಗಳಿಂದ ಇದಿರುಗೊಂಡ. ಅರ್ಜುನ ಮಗನಿಗೆ ನುಡಿದ.

ಯೋದ್ಧುಕಾಮೋಽರ್ಘ್ಯಮಾದಾಯ ತ್ವಯಾಽದ್ಯಾಭಿಗತೋ ಹ್ಯಹಮ್ ।
ನ ಪ್ರೀಯೇ ಪೌರುಷಂ ಧಿಕ್ ತೇ ಯನ್ಮೇಧ್ಯಾಶ್ವೇ ನ ವಾರಿತಃ ॥೧೦೨॥

ಯುದ್ಧಮಾಡಲು ಬಯಸಿದ್ದ ನನ್ನನ್ನು ನೀನು ಅರ್ಘ್ಯವನ್ನು ಹಿಡಿದು ಇದಿರುಗೊಂಡೆ. ಅದರಿಂದ ನನಗೆ ಸಂತೋಷವಿಲ್ಲ. ನನ್ನ ಯಜ್ಞಾಶ್ವವನ್ನು ನೀನು ತಡೆಯಲಿಲ್ಲ. ನಿನ್ನ ಪೌರುಷಕ್ಕೆ ಧಿಕ್ಕಾರ!

ಬಭ್ರುವಾಹನ ಕಾಳಗ

ತದಾಽಪಿ ಪಿತೃಭಕ್ತ್ಯೈನಮಯುದ್ಧ್ಯಂತಮುಲೂಪಿಕಾ ।
ಪ್ರಾಹ ಯುಧ್ಯಸ್ವ ಯತ್ ಪ್ರೀತ್ಯೈ ಗುರೋಃ ಕಾರ್ಯಮಸಂಶಯಮ್ ॥೧೦೩॥

ಆಗಲೂ ತಂದೆಯ ಮೇಲಿನ ಭಕ್ತಿಯಿಂದ ಬಭ್ರುವಾಹನ ಯುದ್ಧ ಮಾಡದಿದ್ದಾಗ ಉಲೂಪಿ ಹೇಳಿದಳು. 'ಯುದ್ಧಮಾಡು. ತಂದೆಗೆ ಯಾವುದು ಸಂತೋಷಕರವೋ ಅದನ್ನು ನಿಃಸಂಶಯವಾಗಿ ಮಗ ಮಾಡಬೇಕು.'

ಪಾತಾಳದಿಂದ ಆಗತಾನೆ ಮೇಲೆ ಬಂದ ಉಲೂಪಿ ಬಭ್ರುವಾಹನನ್ನು ಕಂಡಳು. ಅವನು ಸುಮ್ಮನೆ ಚಿಂತಾಕ್ರಾಂತನಾಗಿ ಕುಳಿತಿದ್ದುದನ್ನೂ ಅರ್ಜುನ ಮತ್ತೆ ಮತ್ತೆ ಅವನನ್ನು ಹಳಿಯುತ್ತಿದ್ದುದನ್ನೂ ಕಂಡು ಅರ್ಘ್ಯ ಪಾದ್ಯಾದಿಗಳಿಂದ ತಂದೆಯನ್ನು ಇದಿರುಗೊಳ್ಳಬೇಡ. ಅವನಿಗೆ ಇಷ್ಟವಾದ ಯುದ್ಧದಿಂದಲೆ ಅವನನ್ನು ಸಂತೋಷಗೊಳಿಸು ಎಂದಳು.

ಪ್ರೀಣನಾಯೈವ ಯುಧ್ಯಸ್ವ ಪಿತ್ರೇ ಸಂದರ್ಶಯನ್ ಬಲಮ್ ।
ಇತ್ಯುಕ್ತೋ ಯುಯುಧೇ ಪಿತ್ರಾ ಬಲಂ ಸರ್ವಂ ಪ್ರದರ್ಶಯನ್ ॥೧೦೪॥

'ತಂದೆಗೆ ನಿನ್ನ ಬಲವನ್ನು ತೋರುತ್ತ ಅವನನ್ನು ಸಂತೋಷಪಡಿಸುವುದಕ್ಕಾಗಿಯೆ ಯುದ್ಧಮಾಡು' ಉಲೂಪಿ ಹೀಗೆ ಹೇಳಿದಾಗ ಬಭ್ರುವಾಹನ ತನ್ನೆಲ್ಲ ಬಲವನ್ನೂ ತೋರುತ್ತ ತಂದೆಯೊಡನೆ ಯುದ್ಧ ಮಾಡಿದ.

ಹಂಸಧ್ವಜಯುಕ್ತ ಸುವರ್ಣರಥವೇರಿ ಬಭ್ರುವಾಹನ ನೆಲದಲ್ಲಿ ನಿಂತ

ಅರ್ಜುನನೊಡನೆ ಹೋರಾಟಕ್ಕೆ ನಿಂತ. ಕ್ಷಣದಲ್ಲಿ ಧ್ವಜ ಬಿದ್ದಿತು. ಕುದುರೆಗಳೂ ಅಸುನೀಗಿದವು. ಬಭ್ರುವಾಹನ ಕೆಳಗಿಳಿದು ಯುದ್ಧಮಾಡಿದ.

ಅರ್ಜುನಸ್ತು ಸುತಸ್ನೇಹಾನ್ಮಂದಂ ಯೋಧಯತಿ ಸ್ಮಯನ್ ।
ಸ ತು ಸರ್ವಾಯುಧಕ್ಷೇಪೇಽಪ್ಯವಿಕಾರಂ ಧನಂಜಯಮ್ ॥೧೦೫॥

ದೃಷ್ಟ್ವಾ ಬಾಲ್ಯಾತ್ ಪರೀಕ್ಷಾಯೈ ಮಂತ್ರಪೂತಂ ಮಹಾಶರಮ್ ।
ಚಿಕ್ಷೇಪ ಪಿತ್ರೇ ದೈವೇನ ತೇನೈನಂ ಮೋಹ ಆವಿಶತ್ ॥೧೦೬॥

ಅರ್ಜುನ ಮಗನ ಮೇಲಿನ ಪ್ರೀತಿಯಿಂದ ನಗುತ್ತ ಮೆಲ್ಲಗೆ ಯುದ್ಧಮಾಡಿದ. ಬಭ್ರುವಾಹನ ಎಲ್ಲ ಆಯುಧಗಳನ್ನೆಸೆದರೂ ಅರ್ಜುನನಲ್ಲಿ ಏನೂ ವಿಕಾರವಾಗದಿದ್ದುದನ್ನು ಕಂಡು ಹುಡುಗತನದಿಂದ ಅರ್ಜುನನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ ದೈವಾತ್ ಮಂತ್ರಪೂರಿತವಾದ ಮಹಾಬಾಣವನ್ನೇ ಅವನ ಮೇಲೆ ಎಸೆದ. ಅದರಿಂದ ಅವನನ್ನು ಮೂರ್ಛೆ ಕವಿಯಿತು.

ಹಿಂದೆ ಭೀಷ್ಮ ಪತನವಾದಾಗ ಗಂಗೆಯೂ ವಸುದೇವತೆಗಳೂ ಕುಪಿತರಾಗಿ ಅರ್ಜುನನಿಗೆ ಶಾಪ ನೀಡಿದ್ದರು. ಯುದ್ಧದಲ್ಲಿ ನೀನೂ ಮೂರ್ಛಿತನಾಗಿ ಬೀಳು ಎಂದು. ಬಭ್ರುವಾಹನನ ಸಮ್ಮೋಹನ ಮಂತ್ರಪೂರಿತವಾದ ಮಹಾಬಾಣದೊಂದಿಗೆ ಈ ಶಾಪವೂ ಸೇರಿತು. ದೈವವೆಂದರೆ ದೇವತೆಗಳು ನೀಡಿದ್ದ ಶಾಪ.[1] ಹತನಾಗೆಂದು ಶಾಪ ನೀಡಿರಲಿಲ್ಲ. ಅರ್ಜುನ ಹತನೂ ಆಗಲಿಲ್ಲ.

ಮೂರ್ಛಿತಂ ತಂ ಗುರುಂ ದೃಷ್ಟ್ವಾ ತದ್ಭಕ್ತ್ಯಾ ಭೃಶದುಃಖಿತಃ ।
ಪ್ರಾಯೋಪವಿಷ್ಟಸ್ತನ್ಮಾತಾ ವಿಲಲಾಪಾತಿದುಃಖಿತಾ ॥೧೦೭॥

ತಂದೆ ಮೂರ್ಛಿತನಾದುದನ್ನು ಕಂಡು ಅವನ ಮೇಲಿನ ಭಕ್ತಿಯಿಂದ ಬಭ್ರುವಾಹನ ಬಹು ದುಃಖಿತನಾಗಿ ಪ್ರಾಯೋಪವೇಶಕ್ಕೆ ಕುಳಿತ. ಅವನ ತಾಯಿ ಚಿತ್ರಾಂಗದೆ ಅತಿ ದುಃಖಿತಳಾಗಿ ವಿಲಾಪ ಮಾಡಿದಳು.

ವಿಜಗರ್ಹ ತದೋಲೂಪೀಂ ಧಿಗ್ ಜಗತ್ತ್ರಯಪೂಜಿತಮ್ ।
ಅಜೀಘನೋ ಮೇ ಭರ್ತಾರಂ ಪುತ್ರೇಣೈವಾವಿಜಾನತಾ ॥೧೦೮॥

ಚಿತ್ರಾಂಗದೆ ಉಲೂಪಿಯನ್ನು ನಿಂದಿಸಿದಳು. 'ನಿನಗೆ ಧಿಕ್ಕಾರವಿರಲಿ, ಮೂಲೋಕದಲ್ಲಿ ಪೂಜಿತನಾದ ನನ್ನ ಪತಿಯನ್ನು ಏನೂ ತಿಳಿಯದ ಮಗನಿಂದಲೆ ಕೊಲ್ಲಿಸಿದೆ.

ಲೋಕವೀರಂ ಪತಿಂ ಹಿತ್ವಾ ನ ಮೇ ಕಾರ್ಯಂ ಸುತೇನ ಚ ।
ಪತಿಲೋಕಮಹಂ ಯಾಸ್ಯೇ ತೃಪ್ತಾ ಭವ ಕಲಿಪ್ರಿಯೇ ॥೧೦೯॥

---

1. ದೈವೇನ। ಅಧರ್ಮೇಣ ಭೀಷ್ಮಾದಿ ಹನನಾಖ್ಯದೋಷಾತ್ ಅರ್ಜುನೋಽಪಿ ರಣೇಽತಿವೇದನಾಂ ಪ್ರಾಪ್ನೋತ್ವಿತಿ ಶಾಪರೂಪ ದೇವತಾವಾಕ್ಯೋಪೋದ್ಬಲತೇನೇತ್ಯರ್ಥಃ। -ವಾದಿರಾಜೀಯ

ಲೋಕದಲ್ಲಿಯೆ ಶ್ರೇಷ್ಠ ವೀರನಾದ ಪತಿಯನ್ನು ಕಳೆದುಕೊಂಡು ನನಗೆ ಮಗನಿಂದ ಏನೂ ಪ್ರಯೋಜನ ಆಗಬೇಕಾಗಿಲ್ಲ. ಪತಿಲೋಕವನ್ನೆ ನಾನು ಸೇರುವೆ. ಕಲಹಪ್ರಿಯಳೆ, ನೀನು ತೃಪ್ತಳಾಗು.

ಇತ್ಯುಕ್ತ್ವಾ ಮರಣಾಯೈವ ತಾಂ ವಿನಿಶ್ಚಿತಮಾನಸಾಮ್ ।
ಧರಾಯಾಂ ವಿಲುಠಂತೀಂ ಚ ದೃಷ್ಟ್ವಾ ಭುಜಗನಂದಿನೀ ॥೧೧೦॥
ನಾಗಲೋಕಾತ್ ಸಮಾದಾಯ ವಿಶಲ್ಯಕರಣೀಂ ಕ್ಷಣಾತ್ ।
ಉತ್ಥಾಪಯಾಮಾಸ ಪತಿಂ ತ್ರಿಲೋಕಾತಿರಥಂ ತಯಾ ॥೧೧೧॥

ಹೀಗೆ ಹೇಳಿ ಚಿತ್ರಾಂಗದೆ ಪ್ರಾಣತ್ಯಾಗಕ್ಕೇ ಮನಸ್ಸಿನಲ್ಲಿ ನಿಶ್ಚೈಸಿ ನೆಲದಲ್ಲಿ ಹೊರಳಾಡುತ್ತಿದ್ದನ್ನು ಕಂಡು ಉಲೂಪಿ ಕ್ಷಣದಲ್ಲಿ ನಾಗಲೋಕದಿಂದ ವಿಶಲ್ಯಕರಣಿಯನ್ನು ಎತ್ತಿಕೊಂಡು ಅದರಿಂದ ಮೂಲೋಕದ ಅತಿರಥನಾದ ಪತಿಯನ್ನು ಎಬ್ಬಿಸಿದಳು.

ಮಹಾಭಾರತದಲ್ಲಿ ಸಂಜೀವನ ಮಣಿಯನ್ನು ನೆನೆದ ಕೂಡಲೆ ಅದು ಉಲೂಪಿಯ ಕೈಗೆ ಬಂದಿತು. ಅದನ್ನು ಬಭ್ರುವಾಹನ ಅರ್ಜುನನ ಎದೆಯ ಮೇಲಿಟ್ಟ. ಅರ್ಜುನ ಒಡನೆ ಎಚ್ಚೆತ್ತ.

ಪ್ರಹಸ್ಯೋವಾಚ ಚ ತದಾ ಶ್ರುತಂ ವಾಕ್ಯಂ ಪುರಾ ಮಯಾ ।
ಸುರಲೋಕೇ ಸುರೈಃ ಪ್ರೋಕ್ತಂ ಭೀಷ್ಮಾದ್ಯಾ ನಾತಿಧರ್ಮತಃ ॥೧೧೨॥
ಯದ್ಧತಾಸ್ತೇನ ದೋಷೇಣ ಪಾರ್ಥಸ್ತೇನಾತಿವೇದನಾಮ್ ।
ರಣೇ ವ್ರಜೇದಿತಿ ನ ತತ್ ಪರತಃ ಸ್ಯಾದಿತಿ ಹ್ಯಹಮ್ ।
ವಚನಾದೇವ ದೇವಾನಾಂ ಯುಧ್ಯೇತ್ಯಾತ್ಮಜಮಬ್ರವಮ್ ॥೧೧೩॥

ಬಳಿಕ ಉಲೂಪಿ ನಕ್ಕು ಹೇಳಿದಳು, 'ಅರ್ಜುನ ಭೀಷ್ಮಾದಿಗಳನ್ನು ಕೇವಲ ಧರ್ಮದಿಂದ ವಧಿಸಲಿಲ್ಲ. ಆ ದೋಷದಿಂದ ಅವನು ಯುದ್ಧದಲ್ಲಿ ಅತಿಯಾದ ವೇದನೆಯನ್ನು ಹೊಂದುವನು' ಎಂದು ದೇವಲೋಕದಲ್ಲಿ ವಸುದೇವತೆಗಳು ಹೇಳಿದ ಮಾತನ್ನು ಹಿಂದೆ ನಾನು ಕೇಳಿದ್ದೆ. ಅದು ಇನ್ನೊಬ್ಬನಿಂದಾಗಕೂಡದು ಎಂದು ದೇವತೆಗಳ ಮಾತಿನಿಂದಲೆ ಮಗನಿಗೆ 'ನೀನು ಯುದ್ಧ ಮಾಡು' ಎಂದು ಹೇಳಿದೆ.

ವಸುಗಳು ಶಾಪವಚನವನ್ನು ಕೇಳಿ ಉಲೂಪಿ ತನ್ನ ತಂದೆಯಾದ ಧೃತರಾಷ್ಟ್ರನಾಗನನ್ನು ಅವರ ಬಳಿಗೆ ಕಳಿಸಿದಳು. ವಸುಗಳು ಸಂತುಷ್ಟರಾಗಿ ಅರ್ಜುನನ ಕೀರ್ತಿ ಹೆಚ್ಚುವಂತೆ ಅವನ ಮಗನಿಂದಲೆ ಆತ ಮೂರ್ಛಿತ ನಾಗಲೆಂದು ಹೇಳಿದರು. ಅದಕ್ಕೇ ಉಲೂಪಿ ಮಗನಾದ ಬಭ್ರುವಾಹನನನ್ನು ಯುದ್ಧಕ್ಕೆ ಪ್ರೇರಿಸಿದಳು.

ದೇವಾನಾಮೇವ ಸಂಕಲ್ಪಾನ್ಮೂರ್ಛಿತಶ್ಚಾರ್ಜುನೋಽಭವತ್ ।
ಭುಕ್ತದೋಷಫಲಶ್ಚಾಯಂ ಪುನರ್ಭೋಕ್ಷ್ಯತಿ ನಾನ್ಯತಃ ॥೧೧೪॥

ದೇವತೆಗಳ ಸಂಕಲ್ಪದಿಂದಲೆ ಅರ್ಜುನ ಮೂರ್ಛಿತನಾದ. ಈಗ ಅವನ ಅಪರಾಧದ ಫಲವನ್ನು ಅವನು ಭೋಗಿಸಿದ್ದಾನೆ. ಇನ್ನು ಪುನಃ ಇನ್ನೊಬ್ಬರಿಂದ ಅದನ್ನು ಭೋಗಿಸುವುದಿಲ್ಲ.

ಅನ್ಯೇನ ಪಾತಿತಸ್ಯಾಸ್ಯ ಯಶೋ ನಶ್ಯೇತ್ ತ್ರಿಲೋಕಗಮ್ ।
ನಾರ್ಜುನಸ್ಯ ಯಶೋ ನಶ್ಯೇದಿತಿ ದೈವೈರಿದಂ ಕೃತಮ್ ॥೧೧೫॥

ಬೇರೆಯವರಿಂದ ಅರ್ಜುನ ಯುದ್ಧದಲ್ಲಿ ಬೀಳಿಸಲ್ಪಟ್ಟಿದ್ದರೆ ಮೂಲೋಕದಲ್ಲಿ ಹರಡಿದ್ದ ಅವನ ಕೀರ್ತಿ ನಶಿಸುತ್ತಿತ್ತು. ನಶಿಸಕೂಡದೆಂದೇ ದೇವತೆಗಳು ಈ ಕಾರ್ಯ ಮಾಡಿದರು.

[1]ಪಾಪಿಗಳನ್ನೂ ಅವರ ಕಡೆ ನಿಂತ ಸಾತ್ವಿಕರನ್ನೂ ಹೇಗೆ ಕೊಂದರೂ ಪಾಪವಿಲ್ಲ ಎಂದು ಭಗವಂತನೆ ಧರ್ಮರಾಜನಿಗೆ ಹೇಳಿದ್ದಾನೆ. ಅದರಿಂದ ಕೇವಲ ಧರ್ಮದಿಂದಲೆ ಭೀಷ್ಮನನ್ನು ಅರ್ಜುನ ಬೀಳಿಸಿದ್ದಾನೆ. ಒಂದು ವೇಳೆ ಅಧರ್ಮವಾಗಿದ್ದರೂ ಅಪರೋಕ್ಷ ಜ್ಞಾನಿಗಳಿಗೆ ಅದರ ಲೇಪವಿಲ್ಲ. ಆದರೂ ವಸುಗಳು ಕುಪಿತರಾಗಿ ಶಾಪ ನೀಡಿದರು, ಭೀಷ್ಮನ ಮೇಲಿನ ಅತಿಯಾದ ಪ್ರೀತಿಯಿಂದ ಮತ್ತು ಆಸುರಾವೇಶದಿಂದ. ಭೀಮ ದುರ್ಯೋಧನನ ತೊಡೆ ಮುರಿದುದು ಅಧರ್ಮವೆಂದು ಬಲರಾಮ ಅಶ್ವತ್ಥಾಮಾದಿಗಳು ಹೇಳಿದಂತೆಯೇ ಇದು. ಅರ್ಜುನನಿಗೆ ಮೂರ್ಛೆ ಬಂದುದು ಅವನ ಪ್ರಾರಬ್ಧಕರ್ಮದಿಂದಲೆ. ಹೀಗಾಗಿ ಅವನ ಪ್ರಾರಬ್ಧ ತೀರಿತು. ಮಗ ತನ್ನನ್ನೂ ಮೀರಿಸಿದ ಪರಾಕ್ರಮಿ ಎಂದು ಅವನ ಕೀರ್ತಿಯೂ ಹೆಚ್ಚಿತು.

ಇತ್ಯುಕ್ತಃ ಪ್ರೀತಿಮಾಪೇದೇ ಪುತ್ರಭಾರ್ಯಾಯುತೋಽರ್ಜುನಃ ।
ಯಜ್ಞಾರ್ಥಂ ತಾವಥಾಽಹೂಯ ಪೂಜಿತಃ ಪ್ರಯಯೌ ತತಃ ॥೧೧೬॥

ಉಲೂಪಿ ಹೀಗೆ ಹೇಳಿದಾಗ ಪುತ್ರಭಾರ್ಯೆಯರಿಂದ ಯುಕ್ತನಾದ ಅರ್ಜುನ ಸಂತೋಷಗೊಂಡ. ಯಜ್ಞಕ್ಕೆ ಅವರನ್ನು ಆಹ್ವಾನಿಸಿ ಸತ್ಕೃತನಾಗಿ ಅಲ್ಲಿಂದ ಮುಂದೆ ನಡೆದ.

---

1. ನನು ಭೀಷ್ಮಾದಯೋಽರ್ಜುನೇನ ಧರ್ಮೇಣೈವ ಹತಾಃ। ಪಾಪಂ ಚ ಪಾಪಾನುಗತಂ ಚ ಹತ್ವಾ ಕಥಂಚನಾಪ್ಯಸ್ತಿ ನ ಚೈವ ಪಾಪಮಿತಿ ಭಗವದುಕ್ತೇಃ। ಅತೋ 'ಭೀಷ್ಮಾದ್ಯಾ ನಾತಿ ಧರ್ಮತೋ ಹತಾ' ಇತಿ ಸುರೈಃ ಕಥ ಮುಕ್ತಮಿತಿಚೇತ್। ಉಚ್ಯತೇ। ಭೀಷ್ಮಾದಿಷು ಸ್ನೇಹವಶಾತ್ ತೈಸ್ತಥೋಕ್ತಂ। ತದ್ಯಥಾ ದುರ್ಯೋಧನ ಸ್ನೇಹಾತ್ ಬಲಭದ್ರದ್ರೌಣ್ಯಾದಿಭಿಃ ದುರ್ಯೋಧನೋಽಧರ್ಮೇಣ ಹತ ಇತ್ಯುಕ್ತಮಿತಿ। ಪ್ರಾರಬ್ಧ ಕರ್ಮಾನುಭವಾಭಿಪ್ರಾಯೇಣ ಭುಕ್ತ ದೋಷ ಫಲ ಇತ್ಯುಕ್ತಂ, ನ ತ್ವಯಂ ಪರಾಜಯೋ ಭೀಷ್ಮಾದಿವಧಜ ಪಾಪ ನಿಮಿತ್ತಕಃ। ಉಕ್ತರೀತ್ಯಾ ಭೀಷ್ಮಾದಿ ವಧಸ್ಯ ಪಾಪ ಸಾಧನತ್ವಾಭಾವತ್। ನಾರಾಯಣ ದ್ವಿಟ್ ತದನುಬಂಧಿನಿಗ್ರಹೋ ನೃಣಾಂ ಪರಮೋ ಧರ್ಮ ಇತ್ಯುಕ್ತತ್ವಾತ್। ಅಪರೋಕ್ಷ ಜ್ಞಾನಿನಾಂ ಸ್ವೋತ್ತಮ ದ್ರೋಹಂ ವಿನಾಽಪರೋಕ್ಷ ಜ್ಞಾನಾನಂತರ ಕೃತ ಪಾಪಲೇಪಾಭಾವಾಚ್ಚ...। –ಪ್ರಮಾಣ ಸಂಗ್ರಹ

ದ್ವಾರಕಾಯಾಃ ಸಮೀಪಸ್ಥಂ ಪ್ರದ್ಯುಮ್ನಾದ್ಯಾಃ ಸುತಾ ಹರೇಃ ।
ಪ್ರಸಹ್ಯಾಶ್ವಮಪಾಜಹ್ರುರಾಹ್ವಯಂತೋಽರ್ಜುನಂ ಯುಧೇ ॥೧೧೭॥

ದ್ವಾರಕೆಯ ಸಮೀಪಕ್ಕೆ ಅರ್ಜುನ ಬಂದಾಗ ಕೃಷ್ಣನ ಮಕ್ಕಳು ಪ್ರದ್ಯುಮ್ನ ಮುಂತಾದವರು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತ ಬಲಾತ್ಕಾರವಾಗಿ ಕುದುರೆಯನ್ನು ಅಪಹರಿಸಿದರು.

ಸುಭದ್ರಾಹರಣಂ ಮಾಪ್ಯಂ ನೀತೇಽಶ್ವೇ ತೈರ್ಧನಂಜಯಃ ।
ಗೌರವಾದ್ ವಾಸುದೇವಸ್ಯ ಮಾತುಲಸ್ಯ ಚ ಕೇವಲಮ್ ॥೧೧೮॥
ಮಾತುಲಾಯಾಬ್ರವೀದಶ್ವಂ ಹೃತಂ ಪೌತ್ರೈರಬಂಧುವತ್ ।
ಸ ನಿರ್ಭರ್ತ್ಸ್ಯ ಕುಮಾರಾಂಸ್ತಾನ್ ಮೇಧ್ಯಮಶ್ವಮಮೋಚಯತ್ ೧೧೯॥

ಸುಭದ್ರಾಹರಣದಿಂದ ಬಂದ ಅಪಕೀರ್ತಿಯನ್ನು ತೊಡೆದುಕೊಳ್ಳಲು ಪ್ರದ್ಯುಮ್ನ ಮುಂತಾದವರು ಕುದುರೆಯನ್ನು ಅಪಹರಿಸಿದಾಗ ಅರ್ಜುನ ಕೃಷ್ಣನ ಹಾಗೂ ವಸುದೇವನ ಮೇಲಿನ ಗೌರವ ಭಾವನೆಯಿಂದ ವಸುದೇವನಿಗೆ ಹೇಳಿದ, ನಿನ್ನ ಮೊಮ್ಮಕ್ಕಳು ಶತ್ರುಗಳಂತೆ ನಮ್ಮ ಕುದುರೆಯನ್ನು ಅಪಹರಿಸಿದ್ದಾರೆ ಎಂದು. ಆಗ ವಸುದೇವ ಕುಮಾರರನ್ನು ಬೈದು ಯಾಗದ ಕುದುರೆಯನ್ನು ಬಿಡಿಸಿದ.

ಮಾತುಲಂ ಸ ಪ್ರಣಮ್ಯಾಥ ಯಜ್ಞಾರ್ಥಂ ತಾನ್ ನಿಮಂತ್ರ್ಯ ಚ ।
ಗಚ್ಛನ್ ಗಜಾಹ್ವಯಂ ದೂತಮಗ್ರತೋಽಯಾಪಯನ್ನೃಪೇ ॥೧೨೦॥

ಬಳಿಕ ಅರ್ಜುನ ವಸುದೇವನನ್ನು ನಮಿಸಿ ಯಜ್ಞಕ್ಕೆ ಅವರನ್ನು ಆಮಂತ್ರಿಸಿ ಹಸ್ತಿನಾವತಿಗೆ ಹೋಗುತ್ತ ಧರ್ಮರಾಜನಿಗೆ ದೂತನನ್ನು ಮುಂಚಿತವಾಗಿ ಕಳಿಸಿಕೊಟ್ಟ.

ಅರ್ಜುನನಲ್ಲಿ ಸಾಮುದ್ರಿಕ ಲಕ್ಷಣ

ಸಕೃಷ್ಣಃ ಸಹಸೋದರ್ಯಃ ಶ್ರುತ್ವಾಽಸೌ ಪ್ರಾಪ್ತಮರ್ಜುನಮ್ ।
ಪ್ರೀತೋ ಬಾಷ್ಪಾಭಿಪೂರ್ಣಾಕ್ಷೋ ಭ್ರಾತೃಸ್ನೇಹಾದಭಾಷತ ॥೧೨೧॥

ಶ್ರೀಕೃಷ್ಣನಿಂದಲೂ ಸೋದರರಿಂದಲೂ ಸಮೇತನಾದ ಧರ್ಮರಾಜ ಅರ್ಜುನ ಹಿಂತಿರುಗಿ ಬಂದುದನ್ನು ಕೇಳಿ ಸಂತುಷ್ಟನಾಗಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಸೋದರಸ್ನೇಹದಿಂದ ಹೇಳಿದ.

ವಾಸುದೇವ ನ ಪಶ್ಯಾಮಿ ದುರ್ಲಕ್ಷಣಮಥಾರ್ಜುನೇ ।
ಕೇನ ದುರ್ಲಕ್ಷಣೇನಾಯಂ ಬಹುದುಃಖೀ ಪ್ರವಾಸಗಃ ॥೧೨೨॥

'ಕೃಷ್ಣ! ಅರ್ಜುನನಲ್ಲಿ ದುರ್ಲಕ್ಷಣವನ್ನು ನಾ ಕಾಣೆ. ಯಾವ ದುರ್ಲಕ್ಷಣದಿಂದ ಈತ ಸದಾ ಪ್ರವಾಸದಲ್ಲಿದ್ದು ಬಹಳ ಕ್ಲೇಶ ಅನುಭವಿಸುತ್ತಿದ್ದಾನೆ?'

ಪೃಷ್ಟಸ್ತಂ ಕೇಶವಃ ಪ್ರಾಹ ಭ್ರಾತಾ ತೇ ದೀರ್ಘಪಿಂಡಿಕಃ ।
ತೇನಾಯಂ ದುಃಖಬಹುಲ ಇತ್ಯುಕ್ತ್ವಾ ಪುನರೇವ ಚ ॥೧೨೩॥

ವದಂತಮೇವ ಪಾಂಚಾಲೀ ಕಟಾಕ್ಷೇಣ ನ್ಯವಾರಯತ್ ।
ಸಮಸ್ತಲಕ್ಷಣಾಭಿಜ್ಞಾಃ ಕೃಷ್ಣಃ ಸತ್ಯಾ ವೃಕೋದರಃ ॥೧೨೪॥
ಕೃಷ್ಣಾ ಚ ಪಂಚಮೋ ನಾಸ್ತಿ ವಿದ್ಯಾ ಶುದ್ಧೇಯಮಂಜಸಾ ॥೧೨೫॥
ಪ್ರಸಂಗಾತ್ ಪ್ರಾಪ್ತುಮಿಚ್ಛೇತ್ ತಾಂ ವಿದ್ಯಾಶೀಲೋ ಯುಧಿಷ್ಠಿರಃ ।
ಇತಿ ಲೋಭಾತ್ ತು ಪಾಂಚಾಲೀ ವಾಸುದೇವಂ ನ್ಯವಾರಯತ್ ೧೨೬ ॥

ಧರ್ಮರಾಜ ಹೀಗೆ ಕೇಳಿದಾಗ, ಶ್ರೀಕೃಷ್ಣನೆಂದ, 'ಅರ್ಜುನನ ಶರೀರ ಉದ್ದ. ಅದರಿಂದ ಅವನಿಗೆ ಕ್ಲೇಶ ಹೆಚ್ಚು.' ಹೀಗೆ ಹೇಳಿ ಕೃಷ್ಣ ಪುನಃ ಮುಂದುವರಿದು ಹೇಳಲು ತೊಡಗಿದಾಗಲೇ ದ್ರೌಪದಿ ಕಡೆಗಣ್ಣ ನೋಟದಿಂದ ತಡೆದಳು. ಸಕಲ ಸಾಮುದ್ರಿಕ ಲಕ್ಷಣಜ್ಞರು ಶ್ರೀಕೃಷ್ಣ ಸತ್ಯಭಾಮೆ ಭೀಮ ದ್ರೌಪದಿಯರು ಹೊರತು ಐದನೆಯವನಿಲ್ಲ. ಈ ಸಾಮುದ್ರಿಕಶಾಸ್ತ್ರ ಬಹಳ ಶುದ್ಧವಾದುದು. ವಿದ್ಯಾರ್ಜನ ಸ್ವಭಾವದವನಾದ ಧರ್ಮರಾಜ ಈ ಪ್ರಸಂಗದಿಂದ ಅದನ್ನು ಕಲಿಯಲು ಬಯಸಬಹುದೆಂದು ಲೋಭದಿಂದ ದ್ರೌಪದಿ ಕೃಷ್ಣನನ್ನು ತಡೆದಿದ್ದಳು.

[1]'ದೀರ್ಘ ಪಿಂಡಿಕ' ಎಂದರೆ ದೀರ್ಘಶರೀರಿ ಎಂದು ವಾದಿರಾಜೀಯದಲ್ಲಿ ಹೇಳಿದೆ. 'ಪದಂಘ್ರಿಶ್ಚರಣೋಽಸ್ತ್ರಿಯಾಂ ತದ್ ಗ್ರಂಥೀ ಪಿಂಡಿಕೇ ಗುಲ್ಫೌ' ಎಂದು ಅಮರಕೋಶ ಪಾಠವಿಟ್ಟುಕೊಂಡು ಲಕ್ಷಾಲಂಕಾರದಲ್ಲಿ ಪಿಂಡಿಕೆ ಎಂದರೆ ಕಾಲಿನ ಗಂಟು ಎಂದಿದೆ. ಇದು ಇನ್ನೊಂದು ಅರ್ಥ. ವಿರೋಧವಿಲ್ಲ.

'ಪಿಂಡಿ' ಎಂದರೆ ಶರೀರ, 'ಕ' ಎಂದರೆ ತಲೆ, ಎರಡೂ ದೀರ್ಘ ಎಂದು ಪ್ರಮಾಣಸಂಗ್ರಹಕಾರರು ಹೇಳುತ್ತಾರೆ. ಜನಾರ್ದನ ಭಟ್ಟೀಯ ಅನಂತಭಟ್ಟೀಯಗಳು ಪಿಂಡಿ ಎಂದರೆ ಕಾಲಿನ ಹಿಮ್ಮಡಿ ಎನ್ನುತ್ತಿವೆ. ನೀಲಕಂಠಿ ಮೊಣಕಾಲಿನ ಮೀನಖಂಡ ಎನ್ನುತ್ತಿದೆ.

ತದ್ಗೌರವಾದ್ ವಾಸುದೇವೋ ನೋತ್ತರಂ ಪ್ರತ್ಯಭಾಷತ ।
ವಿಸ್ಮಾರಯಾಮಾಸ ಚ ತಂ ಪ್ರಬ್ರುವಾಣಃ ಕಥಾಂತರಮ್ ॥೧೨೭॥

---

1. 'ಸಂಘಾತ ಘಾಸಯೋಃ ಪಿಂಡಿರ್ದ್ವಯೋಃ ಪುಂಸಿ ಕಲೇವರೇ' ಇತ್ಯನು ಶಾಸನಾತ್ ಪಿಂಡಿರ್ದೇಹಃ। ಸ್ವಾರ್ಥೇ ಕಪ್ರತ್ಯಯಃ। ಪಿಂಡಿರೇವ ಪಿಂಡಿಕಃ। ದೀರ್ಘಃ ಪಿಂಡಿಕೋ ಯಸ್ಯ ಸಃ ದೀರ್ಘಪಿಂಡಿಕೋ ದೀರ್ಘದೇಹ ಇತ್ಯರ್ಥಃ। –ವಾದಿರಾಜೀಯ

ಪಿಂಡಿಕೇ ಗುಲ್ಫೌ। ಪದಂಘ್ರಿಶ್ಚರಣೋಽಸ್ತ್ರಿಯಾಂ ತದ್ ಗ್ರಂಥೀ ಪಿಂಡಿಕೇ ಗುಲ್ಫೌ' ಇತ್ಯಮರಃ। –ಲಕ್ಷಾಲಂಕಾರ

ದೀರ್ಘೇ ಪಿಂಡಿಕೇ ದೇಹಶಿರಸೀ ಯಸ್ಯ ಸಃ ತಥೋಕ್ತಃ ದೀರ್ಘದೇಹೋ ದೀರ್ಘಶಿರಸ್ಕಶ್ಚೇತ್ಯರ್ಥಃ। ಉದರಸ್ಯ ಕಿಂಚಿದಾಧಿಕ್ಯಮಿತಿ ಕಿಂಚಿದುದರಾಧಿಕ್ಯಸ್ಯ ದೇಹಶಿರೋದೈರ್ಘ್ಯಜ್ಞಾಪಕಸ್ಯ ವಕ್ಷ್ಯಮಾಣತ್ವಾಚ್ಚ। ಅನಂತ ಭಟ್ಟಾರಕಾಸ್ತು ದೀರ್ಘಪಿಂಡಿಕಃ ದೀರ್ಘಪಾರ್ಷ್ಣಿಕ ಇತಿ ವ್ಯಾಚಕ್ಷತೇ। ತಚ್ಚಿಂತ್ಯಂ ಉಕ್ತಮಾನ ವಿರೋಧಾತ್। –ಪ್ರಮಾಣ ಸಂಗ್ರಹ

ದ್ರೌಪದಿಯ ಕಣ್ಣಸನ್ನೆಗೆ ಬೆಲೆಕೊಟ್ಟು ಶ್ರೀಕೃಷ್ಣ ಮುಂದೆ ಹೇಳಲಿಲ್ಲ. ಬೇರೆ ಮಾತನ್ನು ಹೇಳುತ್ತ ಈ ಪ್ರಸಂಗವನ್ನು ಮರೆಸಿದ.

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಸ್ತಥಾಽಽಧಿಕ್ಯಂ ದುರ್ಲಕ್ಷಣಮತೋಽರ್ಜುನೇ ॥೧೨೮॥

ಅರ್ಜುನನಲ್ಲಿ ಹೊಟ್ಟೆ ಸ್ವಲ್ಪ ಉದ್ದವಾಗಿರುವುದು ವೃಷಣವೂ ಸ್ವಲ್ಪ ದಪ್ಪವಾಗಿರುವುದು ಎಡತೋಳೂ ಉದ್ದವಾಗಿರುವುದು ಬೇರೆ ದುರ್ಲಕ್ಷಣವಾಗಿತ್ತು.

ನೈವೋಕ್ತಂ ವಾಸುದೇವೇನ ದೃಶ್ಯಮಾನಮಪಿ ಸ್ಫುಟಮ್ ।
ಜ್ಞಾನಾನಂದಹ್ರಾಸಕರಾ ಹ್ಯೇತೇ ದೋಷಾಃ ಸದಾತನಾಃ ॥೧೨೯॥

ಅದು ಸ್ಫುಟವಾಗಿ ಕಾಣುತ್ತಿದ್ದರೂ ಶ್ರೀಕೃಷ್ಣ ಹೇಳಲಿಲ್ಲ. ಈ ದೋಷಗಳು ಸದಾ ಇದ್ದು ಜ್ಞಾನಾನಂದಗಳಿಗೆ ಹ್ರಾಸಕರವಾಗಿವೆ.

[1]ಸದಾ ಇವೆ ಎಂದರೆ ಬಾಹ್ಯಶರೀರದಲ್ಲಿ ಮಾತ್ರವಲ್ಲದೆ ಸ್ವರೂಪ ಶರೀರದಲ್ಲಿಯೂ ಇವೆ. ಅದರಿಂದ ಮುಕ್ತಿಯಲ್ಲಿಯೂ ಇದ್ದು ಈ ದೋಷಗಳಿಲ್ಲದ ಬ್ರಹ್ಮಾದಿಗಳಿಗಿಂತ ಜ್ಞಾನಾನಂದಗಳು ಕಡಿಮೆಯಾಗಿರುವುದಕ್ಕೆ ಸೂಚಕವಾಗಿವೆ. ದುಃಖಕ್ಕೆ ಸೂಚಕವಲ್ಲ. ಮುಕ್ತಿಯಲ್ಲಿ ದುಃಖಲೇಶವೂ ಇಲ್ಲ. ಸಂಸಾರದಲ್ಲಿ ಇವೇ ದುಃಖಕ್ಕೂ ಸೂಚಕವಾಗುತ್ತವೆ.

ಸಮಸ್ತಜೀವರಾಶೌ ತದ್ ದುಷ್ಟಲಕ್ಷಣವರ್ಜಿತೌ ।
ಪೂರ್ಣಚಿತ್ಸುಖಶಕ್ತ್ಯಾದೇರ್ಯೋಗ್ಯೌ ಕೃಷ್ಣಾ ಚ ಮಾರುತಿಃ ॥೧೩೦॥
ಅನಾದಿದುಃಖಹೀನತ್ವೇ ಸುಖಾಧಿಕ್ಯೇ ಚ ಲಕ್ಷಣಮ್ ।
ರುಗ್ಮಿಣೀಸತ್ಯಭಾಮಾದಿರೂಪಾಯಾಃ ಶ್ರಿಯ ಏವ ತು ॥೧೩೧॥
ಮುಖ್ಯಂ ತತೋಽಪಿ ಮುಖ್ಯಂ ತು ಸ್ವಾತಂತ್ರ್ಯಾದೇರಶೇಷತಃ ।
ಗುಣರಾಶೇಃ ಪರಂ ಲಿಂಗಂ ನಿತ್ಯಂ ವ್ಯಾಸಾದಿರೂಪಿಣಃ ।
ವಿಷ್ಣೋರೇವ ನ ಚಾನ್ಯಸ್ಯ ಸ ಹ್ಯೇಕಃ ಪೂರ್ಣಸದ್ಗುಣಃ ॥೧೩೨॥

ಸಮಸ್ತ ಜೀವರಾಶಿಯಲ್ಲಿ ದುರ್ಲಕ್ಷಣ ರಹಿತರು ಪೂರ್ಣ ಜ್ಞಾನಾನಂದ ಬಲಾದಿಗಳಿಗೆ ಯೋಗ್ಯರಾದ ದ್ರೌಪದೀ ಭೀಮರು ಮಾತ್ರ. ಅನಾದಿಕಾಲದಿಂದ ದುಃಖಹೀನರಾಗಿರುವುದರಲ್ಲಿಯೂ ಅಧಿಕ ಸುಖಿಗಳಾಗಿರುವುದರಲ್ಲಿಯೂ ಸೂಚಕವಾದ ಲಕ್ಷಣ ವಾಯುಭಾರತಿಯರಿಗಿಂತಲೂ ಮುಖ್ಯವಾಗಿರುಕ್ಮಿಣೀ ಸತ್ಯಭಾಮಾ ಮುಂತಾದ ರೂಪಗಳುಳ್ಳ

1. ನ ಕೇವಲಮೇತೇ ಸ್ಥೂಲದೇಹೇ ದೋಷಾಃ। ಕಿಂತು ಸ್ವರೂಪೇಽಪಿ ಸದಾತನಾಃ ನಿತ್ಯಾಃ ಸಂತಿ। ತೇಷಾಂ ಕಿಂ ಫಲಮಿತ್ಯತ ಉಕ್ತಂ ಜ್ಞಾನೇತಿ। ನಿತ್ಯತ್ವಾನ್ಮುಕ್ತಾವಪಿ ಜ್ಞಾನಾನಂದಾಚ್ಛಾದಕಾ ಇತಿ ಭಾವಃ।
-ಫಲಾರೀಯ, ಜನಾರ್ದನೀಯ

ಲಕ್ಷ್ಮಿಗೇ ಇರುತ್ತದೆ. ಅವಳಿಗಿಂತಲೂ ಮುಖ್ಯವಾಗಿ ಸ್ವಾತಂತ್ರ್ಯಾದಿ ಸಕಲ ಗುಣರಾಶಿಗಳಿಗೆ ಉತ್ತಮ ಸೂಚಕವಾದ ಲಕ್ಷಣಗಳು ಸದಾಕಾಲ ವ್ಯಾಸಾದಿರೂಪನಾದ ವಿಷ್ಣುವಿಗೇ ಹೊರತು ಇನ್ನೊಬ್ಬನಿಗಿಲ್ಲ. ಅವನೊಬ್ಬನೇ ಪೂರ್ಣ ಸದ್ಗುಣಾಳ್ಳವನು.

ಸಾಶ್ವೇಕರ್ಜುನೇ ಯಜ್ಞವಾಟಂ ಪ್ರವಿಷ್ಟೇಕಸ್ಯ ಸಹೋದರಾಃ ।
ಪೂಜಿತಾಃ ಪೂಜಯಾಮಾಸುರ್ಮುದಿತಾಃ ಸಹಕೇಶವಾಃ ॥೧೩೩॥

ಅರ್ಜುನ ಕುದುರೆಯೊಂದಿಗೆ ಯಜ್ಞಶಾಲೆಯನ್ನು ಪ್ರವೇಶಿಸಿದಾಗ ಅವನ ಸೋದರರೂ ಶ್ರೀಕೃಷ್ಣನೂ ಸಂತುಷ್ಟರಾದು. ಪರಸ್ಪರ ಆಲಿಂಗನಾದಿಗಳಿಂದ ಸತ್ಕೃತರಾದರು ಮತ್ತು ಸತ್ಕರಿಸಿದರು.

ಅಶ್ವಮೇಧಯಾಗ

ತತಃ ಸ ಯಜ್ಞೋ ಯದುವೀರರಕ್ಷಿತೋ
ವ್ಯಾಸೋಪದಿಷ್ಟೋ ಮುನಿಭಿಃ ಪ್ರವರ್ತಿತಃ ।
ಅಶೋಭತಾಲಂ ಸಕಲೈರ್ನೃಪೈಶ್ಚ
ಸಮಾಗತೈರ್ವಿಪ್ರವರೈಶ್ಚ ಜುಷ್ಟಃ ॥೧೩೪॥

ಬಳಿಕ ಆ ಯಜ್ಞ ಶ್ರೀಕೃಷ್ಣನ ರಕ್ಷಣೆಯಲ್ಲಿ ಮತ್ತು ಶ್ರೀವ್ಯಾಸರ ನೇತೃತ್ವದಲ್ಲಿ ಮುನಿಗಳಿಂದ ನಡೆಸಲ್ಪಟ್ಟಿತು. ಎಲ್ಲ ರಾಜರುಗಳೂ ಎಲ್ಲ ಮುನಿಗಳೂ ಬಂದು ಭಾಗವಹಿಸಿದ್ದರಿಂದ ಯಜ್ಞ ಬಹಳ ಶೋಭಿಸಿತು.

ಸ ಕೃಷ್ಣಯುಗ್ಮೇನ ಚ ಭಾರ್ಗವೇಣ
ತ್ರಿಧಾ ವಿಭಕ್ತೇನ ಪರೇಣ ಪುಂಸಾ ।
ಅಧಿಷ್ಠಿತೋಽಶೋಭತ ವಿಶ್ವಮೇತದ್
ವಿಶ್ವಾದಿರೂಪೇಣ ಯಥೈವ ತೇನ ॥೧೩೫॥

ವಿಶ್ವ ತೈಜಸ ಪ್ರಾಜ್ಞರೂಪನಾದ ಹರಿಯಿಂದ ಅಧಿಷ್ಠಿತವಾದ ಲೋಕದಂತೆ ವಾಸಿಷ್ಠ ಕೃಷ್ಣ ಯಾದವಕೃಷ್ಣ ಎಂಬ ಇಬ್ಬರು ಕೃಷ್ಣರಿಂದ ಮತ್ತು ಪರಶುರಾಮನಿಂದ ಹೀಗೆ ಮೂರಾಗಿ ವಿಭಾಗಗೊಂಡ ಪರಮ ಪುರುಷನಿಂದ ಅಧಿಷ್ಠಿತವಾದ ಆ ಯಜ್ಞ ಶೋಭಿಸಿತು.

ಯಥಾ ವಿರಿಂಚಸ್ಯ ಪುರಾಽಽಸ ಯಜ್ಞೋ
ಯಥೈವ ಶಕ್ರಸ್ಯ ಶತಕ್ರತುತ್ವೇ ।
ತಥೈವ ಸೋಽಭೂದ್ ವಿಧಿಶರ್ವಶಕ್ರ
ಪೂರ್ವೈಃ ಸುರೈರಾವಿರಲಂಕೃತೋಽಧಿಕಮ್ ॥೧೩೬॥

ಹಿಂದೆ ಬ್ರಹ್ಮನ ಯಜ್ಞ ಹೇಗೋ, ಇಂದ್ರ ಶತಕ್ರತುವೆನಿಸುವಾಗ ಅವನ ಯಜ್ಞ ಹೇಗೋ ಹಾಗೇ ಪಾಂಡವರ ಯಜ್ಞವೂ ಕೂಡ ಬ್ರಹ್ಮ ರುದ್ರ ಇಂದ್ರ ಮುಂತಾದ ದೇವತೆಗಳಿಂದ ಪ್ರತ್ಯಕ್ಷವಾಗಿ ಚೆನ್ನಾಗಿ ಅಲಂಕೃತವಾಗಿತ್ತು.

ನ ದೇವಗಂಧರ್ವಮುನಿಸ್ವಧರ್ಮ
ಮತ್ರ್ಯಾದಿಕೇಷ್ವಾಸ ಸ ಯೋಽತ್ರ ನಾಽಸ ।
ಸ್ವಲಂಕೃತೈರ್ನಾಕಿಜನೈಃ ಸಕಾಂತೈ-
ರರೂರುಚನ್ನಾಕವದೇತದೋಕಃ ॥೧೩೭॥

ದೇವ ಗಂಧರ್ವ ಮುನಿ ಸ್ವಧರ್ಮನಿಷ್ಠರಾದ ಮಾನವರು ಮುಂತಾದವರಲ್ಲಿ ಯಾರೂ ಈ ಯಜ್ಞದಲ್ಲಿ ಭಾಗವಹಿಸದಿದ್ದವನು ಇರಲಿಲ್ಲ. ಒಳ್ಳೆಯ ಅಲಂಕೃತರಾದ ಪತ್ನೀ ಸಮೇತರಾದ ದೇವತೆಗಳಿಂದ ಈ ಲೋಕವೆ ದೇವಲೋಕದಂತೆ ಶೋಭಿಸಿತು.

ವಾದಿರಾಜೀಯ ಪ್ರಕಾರ 'ಸ ಯೋಽತ್ರ ಸಂಭ್ರಮಃ' ಎಂದು ಪಾಠ. ಈ ಯಜ್ಞದಲ್ಲಿದ್ದ ಸಂಭ್ರಮ ದೇವ ಗಂಧರ್ವಾದಿಗಳ ಯಾವುದೇ ಕಾರ್ಯಕ್ರಮದಲ್ಲಿ ಇರಲಿಲ್ಲ. ಅಭೂತಪೂರ್ವವೆ ಅಗಿತ್ತು ಎಂದು ವ್ಯಾಖ್ಯಾನಿಸಿದೆ.

ತತ್ರೈವ ತತ್ತ್ವಾನಿ ಸಸಂಶಯಾನಿ
ನಿಸ್ಸಂಶಯಾನ್ಯಾಸುರಲಂ ವಿವಾದೇ ।
ಪರಸ್ಪರೋತ್ಥೇ ಹರಿಣಾ ತ್ರಿರೂಪಿಣಾ
ಸಂಸ್ಥಾಪಿತಾನ್ಯಗ್ರ್ಯವಚೋಭಿರುಚ್ಚೈಃ ॥೧೩೮॥

ಆ ಯಾಗಶಾಲೆಯಲ್ಲಿ ಚೆನ್ನಾಗಿ ಪರಸ್ಪರ ತತ್ವವಿಚಾರ ಉಂಟಾದಾಗ ಮೂರು ರೂಪದವನಾದ ಹರಿ ಉತ್ತಮ ವಚನಗಳಿಂದ ಉತ್ಕೃಷ್ಟವಾಗಿ ತತ್ವಗಳನ್ನು ಸ್ಥಾಪಿಸಿದ. ಆಗ ಸಂಶಾಯಾಸ್ಪದವಾಗಿದ್ದ ಪ್ರಮೇಯಗಳೆಲ್ಲವೂ ಸಂಶಯ ಮುಕ್ತವಾದುವು.

ಪ್ರಗೀತಗಂಧರ್ವವರಃ ಪ್ರನೃತ್ತ
ಸದಪ್ಸರಾಃ ಸಂತತವಾದಿವಿಪ್ರಃ ।
ವಿವೇಚಯದ್ದೇವನೃಪೌಘ ಏಕೋ
ರರಾಜ ರಾಜಾಽಖಿಲಸತ್ಕ್ರತೂನಾಮ್ ॥೧೩೯॥

ಶ್ರೇಷ್ಠ ಗಂಧರ್ವರು ಹಾಡಿದರು. ಉತ್ತಮ ಅಪ್ಸರೆಯರು ಕುಣಿದರು. ಮುನಿಗಳು ನಿರಂತರ ತತ್ವವಿಚಾರ ಮಾಡಿದರು. ದೇವತೆಗಳ ಮತ್ತು ರಾಜರ ಸಮೂಹಗಳು ತಮ್ಮ ತಮ್ಮ ವೈಶಿಷ್ಟ್ಯಗಳನ್ನು ಪ್ರತ್ಯೇಕವಾಗಿ ತೋರಿದುವು. ಹೀಗೆ ಉತ್ತಮ ಯಜ್ಞಗಳಲ್ಲೆಲ್ಲ ಉತ್ತಮವಾದ ಈ ಯಜ್ಞ ಶೋಭಿಸಿತು.

ಸರ್ವಾಲಂಕಾರ ಭರಿತರಾದ ದೇವತೆಗಳೂ ರಾಜರೂ ಒಂದೇ ರೀತಿಯಾಗಿ ಕಾಣುತ್ತಿದ್ದರು. ಆವರ ಮಾತಿನಿಂದಲೆ ಇವರು ರಾಜರು ಇವರು ದೇವತೆಗಳೆಂದು ವಿವೇಚಿಸಿ ತಿಳಿಯಬೇಕಾಗಿತ್ತು. ಅಥವಾ ದೇವತೆಗಳೂ

ರಾಜರೂ ಪರಸ್ಪರ ಸೇರಿ ತತ್ವವಿವೇಚನೆ ಮಾಡುತ್ತಿದ್ದರು ಎನ್ನುವುದು ವಿವಕ್ಷಿತವಾಗಿದೆ.

ಸಮಸ್ತದೇವ್ಯಃ ಸಹವಾಸುದೇವ್ಯಃ
ಸ್ವಲಂಕೃತಾಃ ಫುಲ್ಲಮುಖಾರವಿಂದಾಃ।
ವಿಚೇರುರತ್ರೈವ ಸಹಾಪ್ಸರೋಭಿ-
ರ್ನಿಷೇದುರಪ್ಯಚ್ಯುತಸತ್ಕಥಾರಮಾಃ ॥೧೪೦॥

ಅರಳಿದ ಮುಖಕಮಲಉಳ್ಳ, ಚೆನ್ನಾಗಿ ಅಲಂಕೃತರಾದ ಎಲ್ಲ ದೇವತಾ ಸ್ತ್ರೀಯರೂ ಕೃಷ್ಣಪತ್ನಿಯರೊಂದಿಗೆ ಮತ್ತು ಅಪ್ಸರೆಯರೊಂದಿಗೆ ಯಾಗಶಾಲೆಯಲ್ಲಿ ಸಂಚರಿಸಿದರು. ಹರಿಯ ಉತ್ತಮ ಕಥೆಗಳಲ್ಲಿ ಆಸಕ್ತರಾಗಿ ಕುಳಿತರು.

ನ ವೈ ಮುಮುಕ್ಷುರ್ನ ಬುಭೂಷುರತ್ರ
ನ ವೈ ವಿವಿತ್ಸುಶ್ಚ ಕುತೋ ಬುಭುಕ್ಷುಃ।
ನಾಸತ್ಯಕಾಮಾ ಅಭವನ್ ಕುತಶ್ಚಿತ್
ಪ್ರದಾತರಿ ಪ್ರಾಜ್ಞವರೇಕನಿಲಾತ್ಮಜೇ ॥೧೪೧॥

ಪ್ರಾಜ್ಞರಲ್ಲಿ ಶ್ರೇಷ್ಠನಾದ ಭೀಮಸೇನ ಎಲ್ಲವನ್ನೂ ಕೊಡುತ್ತಿದ್ದಾಗ ಮೋಕ್ಷಾರ್ಥಿಯ ಬಯಕೆಯಾಗಲಿ, ಐಶ್ವರ್ಯಾರ್ಥಿಯ ಬಯಕೆಯಾಗಲಿ ಜ್ಞಾನಾರ್ಥಿಯ ಬಯಕೆಯಾಗಲಿ ಸುಳ್ಳಾದುದಿಲ್ಲ. ಅನ್ನಾರ್ಥಿಯ ಬಯಕೆ ಸುಳ್ಳಾಗುವುದೆಂತು? ಯಾರೊಬ್ಬನ ಬಯಕೆಯೂ ಸುಳ್ಳಾಗಲಿಲ್ಲ.

ಮೋಕ್ಷಾರ್ಥಿಗಳಿಗೆ ಭೀಮಸೇನ ಮೂರು ರೂಪದ ಹರಿಯ ದರ್ಶನ ಮಾಡಿಸಿದ. ಧನಾರ್ಥಿಗೆ ಯಥೇಚ್ಛ ಧನವನ್ನಿತ್ತ. ಜ್ಞಾನಾರ್ಥಿಗೆ ಮೂರುರೂಪದ ಹರಿಯಿಂದಲೆ ಜ್ಞಾನಕೊಡಿಸಿದ. ಹಸಿದವನಿಗೆ ಷಡ್ರಸಾನ್ನ ಉಣಿಸಿದ. ಹೀಗೆ ಯಾರ ಬಯಕೆಯೂ ಸುಳ್ಳಾಗದಂತೆ ಭೀಮಸೇನ ಎಲ್ಲ ದಾನಕಾರ್ಯವನ್ನೂ ನಿರ್ವಾಹ ಮಾಡಿದ.

ದಿನೇದಿನೇ ತತ್ರ ಮಹಾನ್ನಪರ್ವತಾಃ
ಸಭಕ್ಷಸಾರಾ ರಸವಂತ ಊರ್ಜಿತಾಃ।
ನದ್ಯಃ ಪಯಃಸರ್ಪಿರಜಸ್ರಪೂರ್ಣಾಃ
ಸಮಾಕ್ಷಿಕಾದ್ಯಾ ಅಪಿ ಪಾಯಸಹ್ರದಾಃ ॥೧೪೨॥
ಹ್ರದಾ ಮಹಾಂತಸ್ತ್ರಿದಶಾದಿಯೋಗ್ಯಾಃ
ಸುಯೋಗಯುಕ್ತಾ ಹರಿಚಂದನಾದೇಃ।
ತಥಾಽಂಜನಾಲಕ್ತಕಮುಖ್ಯಮಂಡನ
ದ್ರವ್ಯಾಗ್ರ್ಯವಾಪ್ಯೋ ಮಣಿಕಾಂಚನೋದ್ಭವಾಃ ॥೧೪೩॥

ಯಥೇಷ್ಟಪಾನಾಶನಭೋಗಶಿಷ್ಟಾಃ
ಸಹಸ್ರಶೋ ಮಾರುತಿನಾಪಿ ಕಾರಿತಾಃ ।
ಗಂಧಾ ರಸಾದ್ಯಾಶ್ಚ ಸಮಸ್ತಭೋಗಾ
ದಿವೀವ ತತ್ರಾಽಸುರತೀವ ಹೃದ್ಯಾಃ ॥೧೪೪॥

ಪ್ರತಿದಿನವೂ ಅಲ್ಲಿ ರಸಭರಿತವಾದ ಉತ್ತಮ ಅನ್ನದ ದೊಡ್ಡ ಬೆಟ್ಟಗಳು, ಭಕ್ಷ್ಯವಿಶೇಷಗಳು, ಜೇನು ಹಾಲುತುಪ್ಪ ಮುಂತಾದವುಗಳಿಂದ ತುಂಬಿ ಹರಿವ ನದಿಗಳು ಪಾಯಸದ ಮಡುಗಳು, ಪರಿಮಳ ದ್ರವ್ಯಯುಕ್ತವಾದ ದೇವಾದಿಯೋಗ್ಯ ಶ್ರೀ ಗಂಧಾದಿಗಳ ದೊಡ್ಡ ಮಡುಗಳು, ಅಂಜನ ಅಲಕ್ತಕ ಮುಂತಾದ ಅಲಂಕಾರ ಸಾಧನಗಳ ರತ್ನ ಸುವರ್ಣ ನಿರ್ಮಿತವಾದ ದೊಡ್ಡ ಬಾವಿಗಳು. ಯಥೇಷ್ಟ ಪಾನ ಭೋಜನ ಯೋಗ್ಯ ಭೋಗವಸ್ತುಗಳಿಂದ ಕೂಡಿ ಉತ್ತಮವೆನಿಸಿದ ಗಂಧಗಳು ರಸ ಮುಂತಾದ ಸಮಸ್ತ ಭೋಗಗಳು ಇವೆಲ್ಲವನ್ನೂ ಸಹಸ್ರಾರು ಸಂಖ್ಯೆಯಲ್ಲಿ ಭೀಮಸೇನ ಸಿದ್ಧಪಡಿಸಿದ್ದ. ದೇವಲೋಕದಲ್ಲಿ ಹೇಗೋ ಹಾಗೆ ಆ ಯಾಗಶಾಲೆಯಲ್ಲಿ ಅವು ಮನೋಹರವಾಗಿ ಕಂಗೊಳಿಸಿದುವು.

ನೈತಾದೃಶಃ ಕಶ್ಚನ ಭೂತಪೂರ್ವೋ
ಮಖೋ ಽನಾ ರಾಮವಿರಿಂಚವಜ್ರಿಣಾಮ್ ।
ಮಖಾನಿತಿ ಪ್ರೋಚುರಶೇಷ ಲೋಕಾ
ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥೧೪೫॥

ಶ್ರೀಹರಿಯಿಂದ ನಡೆಸಲ್ಪಟ್ಟ ಆ ಯಜ್ಞವನ್ನು ಕಂಡು ಎಲ್ಲರೂ ಹೇಳಿಕೊಂಡರು, 'ಶ್ರೀರಾಮನ, ಚತುರ್ಮುಖನ, ಇಂದ್ರನ ಯಜ್ಞ ಹೊರತು ಇಂಥ ಯಜ್ಞ ಬೇರೆ ಯಾವುದೂ ಹಿಂದೆ ನಡೆದಿರಲಿಲ್ಲ.

ಸ ಏವಮದ್ಧಾ ಹರಿದೈವತಃ ಕ್ರತುಃ
ಪಂಚಾಶ್ವಮೇಧಾತ್ಮಕ ಉಚ್ಚಕಲ್ಪಃ ।
ದಿನೇದಿನೇ ಸ್ವಲ್ಪದ್ಗುಣೋ ಬಭೂವ
ಮುದಾವಹೋ ವತ್ಸರಪಂಚಕತ್ರಯಮ್ ॥೧೪೬॥

ದಿನೇ ದಿನೇ ಹೆಚ್ಚು ಹೆಚ್ಚು ಗುಣಗಳಿಂದ ಕೂಡಿ ಉತ್ತಮ ಕಲ್ಪದ ಐದು ಅಶ್ವಮೇಧರೂಪವಾಗಿ ಹದಿನೈದು ವರ್ಷಪರ್ಯಂತ ಆ ವಿಷ್ಣುದೇವತಾಕವಾದ ಯಜ್ಞ ಚೆನ್ನಾಗಿ ಸಂತೋಷದಾಯಕವಾಗಿ ನಡೆಯಿತು.

[1]ದರ್ಶಪೂರ್ಣಮಾಸ ಪ್ರಯಾಜಾನುಯಾಜ ಮುಂತಾದ

---

1. ದರ್ಶಪೂರ್ಣಮಾಸಪ್ರಯಾಜಾನುಯಾಜಾದಿ ಪೂರ್ವೋತ್ತರೇಷ್ಟಿಕರಣಾಯ ಏಕೈಕಸಾಂಗಾಶ್ವಮೇಧಸ್ಯ ವರ್ಷತ್ರಯಮಪೇಕ್ಷಿತಂ। ಅತೋ ವತ್ಸರಪಂಚಕತ್ರಯಮಿತ್ಯುಕ್ತಂ। ಪಂಚಪಾಂಡವಾನಾಂ ಏಕೈಕಾಶ್ವಮೇಧ ಇತಿಭಾವೇನ ಪಂಚಾಶ್ವಮೇಧಾತ್ಮಕ ಇತ್ಯುಕ್ತಂ। -ವಾದಿರಾಜೀಯ

ಪೂರ್ವೋತ್ತರ ಯಾಗಗಳೊಂದಿಗೆ ಸಾಂಗವಾಗಿ ಮೂರು ಪ್ರಧಾನಾಹುತಿ ಯುಕ್ತವಾಗಿ ಒಂದು ಅಶ್ವಮೇಧಯಾಗ ಮಾಡಲು ಮೂರುವರ್ಷಗಳು ಬೇಕಾಗುತ್ತವೆ, ಪಂಚಪಾಂಡವರಿಗೆ ಪಂಚಯಾಗಗಳು – ಎಂದು ಹದಿನೈದು ವರ್ಷಗಳು ಬೇಕು–ಪಂಚಕತ್ರಯವರ್ಷ' ಪಂಚಾಶ್ವಮೇಧಾತ್ಮಕ ಎಂಬ ಪದಗಳು ಇದನ್ನು ಸೂಚಿಸುತ್ತವೆ.

ಯಜ್ಞಾವಸಾನೇ ನಿಖಿಲಾಶ್ಚ ಪಾಂಡವಾಃ
ಕೃಷ್ಣಾ ಚ ಪೃಥ್ವೀಮಖಿಲಾಂ ಸವಿತ್ತಾಮ್ ।
ಮಾಂಗಲ್ಯಮಾತ್ರಂ ದಯಿತಾಶರೀರೇ
ನಿಧಾಯ ಸರ್ವಾಭರಣಾನಿ ಚೈವ ॥೧೪೭॥
ಸಮರ್ಪಯಾಮಾಸುರಜೇ ವರೇಣ್ಯೇ
ವ್ಯಾಸೇ ವಿಭಾಗಾಯ ಯಥೋಕ್ತಮೃತ್ವಿಜಾಮ್ ।
ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋ
ರತೋ ವಿಭಾಗಾರ್ಥಮಿವಾಕರ್ಪಯಂಸ್ತೇ ॥೧೪೮॥
ಹೃದಾ ಸಮಸ್ತಂ ಹರಯೇಽರ್ಪಿತಂ ತೈಃ
ಸ ಹಿ ದ್ವಿಜಸ್ಥೋಽಪಿ ಸಮಸ್ತಕರ್ತಾ ।
ದೇಹೇಂದ್ರಿಯಪ್ರಾಣಮನಾಂಸಿ ಚೇತನೈಃ
ಸಹೈವ ತಸ್ಮಾ ಅತಿಸೃಜ್ಯ ನೇಮುಃ ॥೧೪೯॥
ತ್ವದೀಯಮೇತನ್ನಿಖಿಲಂ ವಯಂ ಚ
ನ ತ್ವಸ್ಮದೀಯಂ ಕ್ವಚ ಕಿಂಚನೇಶ ।
ಸ್ವತಂತ್ರ ಏಕೋಽಸಿ ನ ಕಶ್ಚಿದನ್ಯಃ
ಸರ್ವತ್ರ ಪೂರ್ಣೋಽಸಿ ಸದೇತಿ ಹೃಷ್ಟಾಃ ॥೧೫೦॥

ಯಾಗದ ಕೊನೆಯಲ್ಲಿ ಎಲ್ಲ ಪಾಂಡವರೂ ದ್ರೌಪದಿಯೂ ಕೋಶಸಮೇತವಾಗಿ ಸಮಸ್ತ ಪೃಥಿವಿಯನ್ನೂ, ಪತ್ನಿಯರ ಮೈಯಲ್ಲಿ ಮಾಂಗಲ್ಯ ಒಂದನ್ನುಳಿದು ಎಲ್ಲ ಆಭರಣಗಳನ್ನೂ ಸರ್ವೋತ್ತಮರಾದ ವೇದವ್ಯಾಸರಲ್ಲಿ ಋತ್ವಿಜರಿಗೆ ವಿಧ್ಯುಕ್ತವಾಗಿ ವಿಭಾಗ ಮಾಡಿಕೊಡುವುದಕ್ಕಾಗಿ ಸಮರ್ಪಿಸಿದಂತೆ ತೋರಿಕೊಂಡರು. ಏಕೆಂದರೆ ಈ ವೇದವ್ಯಾಸರೂಪಿ ಹರಿಗೆ ವಿಭಾಗ ಮಾಡುವುದು ಇಷ್ಟವಾನೆ? ವಸ್ತುತಃ ಆ ಹರಿಯೆ ಎಲ್ಲ ಋತ್ವಿಜರಲ್ಲಿದ್ದು ಎಲ್ಲ ಋತ್ವಿಜರ ಕರ್ಮವನ್ನೂ ಮಾಡುವವನಾದ್ದರಿಂದ ಅವನಿಗೇ ಎಲ್ಲವನ್ನೂ ಮನಸ್ಸಿನಿಂದ ಅರ್ಪಿಸಿದ್ದರು. ಅವರು ಹೇಳಿದರು, 'ಪ್ರಭು, ಇದೆಲ್ಲವೂ ನಿನ್ನದೆ. ನಾವೂ ನಿನ್ನವರೆ. ನಮ್ಮದು ಎಂದು ಏನೂ ಎಲ್ಲಿಯೂ ಇಲ್ಲ. ನೀನೊಬ್ಬನೆ ಸ್ವತಂತ್ರ. ಬೇರೆ ಯಾರೂ ಅಲ್ಲ, ನೀನೆ ಎಲ್ಲಕಡೆ ಯಾವಾಗಲೂ ಸಕಲ ಗುಣಪೂರ್ಣನಾಗಿರುವೆ' ಹೀಗೆ ಹೇಳುತ್ತ ಚೇತನಗಳೊಂದಿಗೆ ದೇಹ ಇಂದ್ರಿಯ ಪ್ರಾಣ ಮನಸುಗಳನ್ನೂ ಹರಿಗೆ ಅರ್ಪಿಸಿ ಸಂತುಷ್ಟರಾಗಿ ನಮಿಸಿದರು.

[1]ಯಾಗದ ಕೊನೆಯಲ್ಲಿ ಋತ್ವಿಜರಿಗೆ ಸರ್ವಸ್ವ ದಕ್ಷಿಣೆಕೊಡಬೇಕು. ಪತ್ನಿಯರ ಮೈಯಲ್ಲಿ ಮಾಂಗಲ್ಯ ಒಂದನ್ನು ಉಳಿದು ಎಲ್ಲ ಆಭರಣಗಳನ್ನೂ ಕೊಡಬೇಕು. ಸಮಸ್ತ ಪೃಥಿವಿಯನ್ನೂ ನೀಡಬೇಕು. ಆದರೆ ಹೋತೃ ಅಧ್ವರ್ಯು ಉದ್ಗಾತೃ ಬ್ರಹ್ಮ ಎಂದು ಮುಂತಾದ ಬೇರೆ ಬೇರೆ ಹದಿನಾರು ಋತ್ವಿಜರಿಗೆ ಇಂತಿಷ್ಟು ದಕ್ಷಿಣೆ ಎಂದು ವೇದದಲ್ಲಿ ವಿಹಿತವಾಗಿರುವುದರಿಂದ ವಿಧ್ಯುಕ್ತವಾಗಿ ಹಂಚಬೇಕು. ಈ ಕೆಲಸವನ್ನು ಪಾಂಡವರು ವೇದವ್ಯಾಸರಿಗೇ ವಹಿಸಿದರು. ಏಕೆಂದರೆ ವ್ಯಾಸ ಎಂದರೆ ವಿಭಾಗ ಮಾಡುವವನು, ಹಂಚುವವನು ಎಂದರ್ಥ. ವೇದವನ್ನು ವಿಭಾಗಮಾಡಿ ಆಯಾ ಶಾಖೆಯವರಿಗೆ ಆಯಾ ಭಾಗಗಳೆಂದು ಹಂಚಿದ ವ್ಯಾಸರಿಗೆ ವೇದೋಕ್ತ ದಕ್ಷಿಣೆ ವಿಭಾಗಮಾಡಿ ಹಂಚುವ ಕಾರ್ಯ ಪ್ರಿಯವೆತಾನೆ? ಎಂದು ಅವರಿಗೇ ಆ ಕೆಲಸ ವಹಿಸಿದರು. ವಸ್ತುತಃ ಋತ್ವಿಜರಿಗೆ ಹಂಚಲೆಂದೇ ಸಂಪತ್ತನ್ನು ವ್ಯಾಸರಿಗೆ ಕೊಟ್ಟಿರಲಿಲ್ಲ. ಅದು ತೋರಿಕೆಗೆ. ವಾಸ್ತವದಲ್ಲಿ ಎಲ್ಲ ಋತ್ವಿಜರ ಕಾರ್ಯವನ್ನು ಅವರೊಳಗೆ ನಿಂತು ಹರಿಯೆ ಮಾಡಿದ್ದರಿಂದ ಅವರಿಗೆ ಕೊಟ್ಟರೂ ಅವರೊಳಗಿದ್ದು ಹರಿಯೆ ಸ್ವೀಕರಿಸುವುದರಿಂದ ಮತ್ತು ಎಲ್ಲ ಸಂಪತ್ತೂ ಹರಿಯದೇ ಆದ್ದರಿಂದ ಹರಿಗೇ ಮನಃಪೂರ್ವಕ ಸಮರ್ಪಿಸಿದ್ದರು.

ವೇದವ್ಯಾಸರೂಪಿ ಹರಿಗೆ ಎಂದೇ ಮನಃಪೂರ್ವಕವಾಗಿ ಕೊಟ್ಟುದನ್ನು ಪುನಃ ಹಿಂತಿರುಗಿ ತೆಗೆದುಕೊಂಡು ವ್ಯಾಸರ ಆದೇಶದಂತೆ ಋತ್ವಿಜರಿಗೆ ಹಂಚಿದರೆ ದತ್ತಾಪಹಾರವಾಗದೆ? ಎಂದರೆ ಎಲ್ಲವೂ ಹರಿಯದೇ, ಅದನ್ನು

---

1. ಅಮುಷ್ಯ ಸಹಸ್ರಮಾಖ್ಯಾತ್ರೇ ದದ್ಯಾದಿತ್ಯಾದಿನಾ ಯಜ್ಞೇ ಋತ್ವಿಗಾದೀನಾಂ ದೀಯಮಾನ ದಕ್ಷಿಣಾವಿಭಾಗಾದಿ ಪ್ರತಿಪಾದಕ ವೇದವಿಭಾಗ ಕರ್ತುರ್ವೇದವ್ಯಾಸಸ್ಯ ವಿಭಾಗಃ ವೇದೋಕ್ತಪ್ರಕಾರೇಣ ದಕ್ಷಿಣಾದೀನಾಂ ವಿಭಾಗಃ ಯತ್ ಯಸ್ಮಾತ್ ಕಾರಣಾತ್ ಪ್ರಿಯಃ ಅತಸ್ತೇ ಪಾಂಡವಾಃ ವಿಭಾಗಾರ್ಥಮಾರ್ಪಯನ್ನಿವ। ಇವಶಬ್ದೇನ ಪಶ್ಯತಾಂ ವಿಭಾಗಾರ್ಥಮೇವಾರ್ಪಯನ್ನಿತ್ಯೇವ ಬುದ್ಧಿಂ ಜನಯಾಮಾಸುರಿತಿ ಸೂಚಿತಂ। ವಸ್ತುತಸ್ತು ತೈರ್ಹ್ಯದಾ ಹರಯ ಏವ ಸಮಸ್ತಮರ್ಪಿತಂ। ದ್ವಿಜಸ್ಥೋಽಪಿ ಸಮಸ್ತಕರ್ತಾ ಸ ಏವ ಹಿ। ಅತಃ ಋತ್ವಿಕ್ಕರೇ ದಾನಮಪಿ ವಿಷ್ಣುಹಸ್ತ ಏವ ದಾನಂ ಸ್ಯಾತ್। ತಸ್ಮಾತ್ ಸಾಕ್ಷಾತ್ ಸ್ವಕರೇಣೈವ ಪ್ರತಿಗ್ರಹೀತರಿ ಹರೌ ಸತಿ ಕಿಮನ್ಯಕರೇ ದಾನೇನೇತಿ ಹರಾವೇವ ಸಮರ್ಪಯಾಮಾಸುರಿತಿ ಭಾವಃ।... ಲೋಕದೃಷ್ಟ್ಯೈವೇದಮರ್ಪಣಂ। ವಸ್ತುಗತ್ಯಾ ಸಮಸ್ತ ವಿತ್ತಸ್ಯ ತದೀಯತ್ವಾತ್ ಕಃ ಸಮರ್ಪಕ ಇತಿ ಭಾವಃ।... ತಟಾಕೋದಕೇನ ತಟಾಕೇ ತರ್ಪಣವತ್ ತವ ವಿತ್ತಮೇವ ತುಭ್ಯಂ ದತ್ತಂ। ನ ತ್ವಜ್ಞಸ್ಯ ಮಹಾಬಲೇರಿವಾಸ್ಮಾಕಂ ವಿತ್ತ ಸ್ವಾತಂತ್ರ್ಯಾಭಿಮಾನ ಇತಿ ಭಾವಃ।

-ವಾದಿರಾಜೀಯ

ನನ್ವನರ್ಥಸಾಧನಭೂತಂ ದತ್ತಾಪಹಾರಂ ಕೃತ್ವಾ ಋತ್ವಿಗ್ಭ್ಯಃ ಕಥಂ ದತ್ತಮಿತ್ಯತ ಆಹ-ಸಹೀತಿ। ದ್ವಿಜಸ್ಥಃ ಋತ್ವಿಕ್ಸ್ಥಃ ಸನ್ ಸಮಸ್ತಕರ್ತಾ ಋತ್ವಿಗ್ ವಿಹಿತ ಸರ್ವಕರ್ಮಕರ್ತಾ ಸ ಏವ ಹಿ ಯಸ್ಮಾತ್ ತಸ್ಮಾತ್ ದತ್ತಾಪ ಹಾರ ದೋಷೋ ನಾಸ್ತೀತ್ಯರ್ಥಃ। -ಜನಾರ್ದನೀಯ

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬಂತೆ ಅವನಿಂದ ತೆಗೆದುಕೊಂಡು ಋತ್ವಿಜರೊಳಗಿರುವ ಅವನಿಗೇ ಕೊಡಬೇಕು. ಇದರಲ್ಲಿ ದೋಷವಿಲ್ಲ.

ತತೋ ವಿಭಕ್ತೇ ಮುನಯೋಽವದಂಸ್ತೇ
ಪ್ರತ್ಯರ್ಪಯಾಮೋ ವಯಮೇಷು ರಾಜ್ಯಮ್ ।
ಪೂರ್ಣಾ ಹಿರಣ್ಯೇನ ವಯಂ ಧರಾಯಾಃ
ಪ್ರಪಾಲನೇ ಯೋಗ್ಯತಮಾ ಇಮೇ ಹಿ ॥೧೫೧॥

ಋತ್ವಿಜರಿಗೆ ದಕ್ಷಿಣೆಯನ್ನು ವಿಭಾಗಮಾಡಿದಾಗ ಅವರು ಹೇಳಿದರು. ನಾವು ರಾಜ್ಯವನ್ನು ಪಾಂಡವರಿಗೇ ಹಿಂತಿರುಗಿ ಕೊಡುತ್ತೇವೆ. ಏಕೆಂದರೆ ಭೂಮಿಯನ್ನು ಆಳುವುದಕ್ಕೆ ಅವರೆ ಯೋಗ್ಯರು. ನಾವು ಸುವರ್ಣದಿಂದಲೆ ತೃಪ್ತರಾಗಿದ್ದೇವೆ.

ಪಾರ್ಥಾಃ ಸಭಾರ್ಯಾ ದ್ವಿಜವಾಕ್ಯಮೇತ-
ನ್ನಿಶಮ್ಯ ಕೃಷ್ಣಾಯ ಪುನಃ ಪ್ರಣಮ್ಯ ।
ಊಚುಸ್ತಪೋ ನೋಽಸ್ತು ವನೇಽರ್ಪಯಿತ್ವಾ
ರಾಜ್ಯಂ ಮಖಾಂತೇ ತ್ವಯಿ ಧರ್ಮಲಬ್ಧಮ್ ॥೧೫೨॥

ಸಪತ್ನೀಕರಾದ ಪಾಂಡವರು ಮುನಿಗಳ ಈ ಮಾತನ್ನು ಕೇಳಿ ವೇದವ್ಯಾಸರಿಗೆ ಪುನಃ ನಮಿಸಿ ಹೇಳಿದರು. ನಾವು ಧರ್ಮದಿಂದ ಗಳಿಸಿದ ಈ ರಾಜ್ಯವನ್ನು ಯಾಗದ ಕೊನೆಯಲ್ಲಿ ನಿಮ್ಮಲ್ಲಿ ಅರ್ಪಿಸಿ ಕಾಡಿಗೇ ಹೋಗುವೆವು. ನಮಗೆ ಕಾಡಿನಲ್ಲಿ ತಪಸ್ಸೇ ಇರಲಿ.'

ಇತೀರಿತಃ ಪ್ರಾಹ ಸ ಬಾದರಾಯಣೋ
ಮುನೀಶ್ವರೈರಪ್ಯಭಿಯಾಚಿತಃ ಪ್ರಭುಃ ।
ಹಿರಣ್ಯಮೇವ ಸ್ವಮಿದಂ ಮುನೀನಾಂ
ಮದಾಜ್ಞಯಾ ಭುಂಗ್ಧ್ವಮಶೇಷರಾಜ್ಯಮ್ ॥೧೫೩॥

ಪಾಂಡವರು ಹೀಗೆ ಹೇಳಿದಾಗ ಪ್ರಭು ಬಾದರಾಯಣರು ಮುನೀಶ್ವರರಿಂದ ಪ್ರಾರ್ಥಿತರಾಗಿ ನುಡಿದರು. 'ಮುನಿಗಳಿಗೆ ಈ ಸುವರ್ಣ ಸಂಪತ್ತೇ ಇರಲಿ. ನನ್ನಾಜ್ಞೆಯಿಂದ ನೀವೆ ಸಮಸ್ತ ರಾಜ್ಯವನ್ನು ಭೋಗಿಸಿರಿ.

ಸಮರ್ಪಿತಂ ಮೇ ಫಲವಚ್ಚ ತತ್ ಸ್ಯಾತ್
ಪುನರ್ಗ್ರಹೋ ನೈವ ಚ ದೋಷಕಾರೀ ।
ಪಿತಾಮಹೋಽಹಂ ಭವತಾಂ ವಿಶೇಷತೋ
ಗುರುಃ ಪತಿಶ್ಚೈವ ತತೋ ಮದರ್ಹಥ ॥೧೫೪॥

'ಆಗ ನನಗೆ ನೀವು ಎಲ್ಲವನ್ನೂ ಸಮರ್ಪಿಸಿದುದು ಸಫಲವಾಗುವುದು. ಒಮ್ಮೆ ಸಮರ್ಪಿಸಿದ್ದನ್ನು ಪುನಃ ತಮಗಾಗಿ ಸ್ವೀಕರಿಸಿದರೂ ನಿಮಗೆ ಅದು ದತ್ತಾಪಹಾರದೋಷಕ್ಕೆ

ಕಾರಣವಾಗದು. ಏಕೆಂದರೆ ನಾನು ನಿಮಗೆ ತಾತ. ವಿಶೇಷವಾಗಿ ಗುರು. ಮತ್ತು ಸ್ವಾಮಿ. ಅದರಿಂದ ನೀವು ನನ್ನಿಂದ ರಾಜ್ಯವನ್ನು ಪಡೆಯಲು ಅರ್ಹರಾಗಿರುವಿರಿ.

ನೀವು ರಾಜ್ಯಸುಖ ಅನುಭವಿಸಿದರೆ ನನಗೆ ನೀವು ಸರ್ವಸ್ವ ಸಮರ್ಪಣೆ ಮಾಡಿದುದಕ್ಕೆ ಫಲ ಸಿಕ್ಕಂತಾಗುತ್ತದೆ. ಏಕೆಂದರೆ ನನಗೆ ಮಾಡಿದ ಸೇವೆ ಮೋಕ್ಷಫಲವನ್ನು ಮಾತ್ರವಲ್ಲದೆ ಐಹಿಕಫಲವನ್ನೂ ಕೊಡುತ್ತದೆ. ನನಗೆ ಅರ್ಪಿಸಿದ ರಾಜ್ಯವನ್ನು ಪುನಃ ನೀವು ಸ್ವೀಕರಿದರೆ ದತ್ತಾಪಹಾರ ಎನ್ನಬಾರದು. ಏಕೆಂದರೆ ನೀವು ಮೂರು ರೀತಿಯಿಂದ ನನ್ನ ಸೊತ್ತಿಗೆ ಹಕ್ಕುದಾರರು – (೧) ನೀವು ನನ್ನ ಮೊಮ್ಮಕ್ಕಳು (೨) ಶಿಷ್ಯರು (೩) ಭೃತ್ಯರು. ತಾತನ ಸೊತ್ತು ಮೊಮ್ಮಕ್ಕಳಿಗೆ, ಗುರುವಿನ ಸೊತ್ತು ಶಿಷ್ಯರಿಗೆ, ಪ್ರಭುವಿನ ಆಸ್ತಿ ಭೃತ್ಯರಿಗೆ ಎಂಬುದು ಪ್ರಸಿದ್ಧವಿದೆ.

ಇತೀರಿತಾಸ್ತೇ ಪ್ರತಿಪದ್ಯ ರಾಜ್ಯಂ
ದದುರ್ಹಿರಣ್ಯಂ ನಿಖಿಲಂ ಚ ತಸ್ಮೈ ।
ವಿಭಜ್ಯ ವಿಪ್ರಾನ್ ಸ ನಿಜಂ ತು ಭಾಗ-
ಮದಾತ್ ಪೃಥಾಯೈ ನಿಖಿಲಂ ಪ್ರಸನ್ನಃ ॥೧೫೫॥

ವೇದವ್ಯಾಸರು ಹೀಗೆ ಹೇಳಿದಾಗ ಪಾಂಡವರು ರಾಜ್ಯವನ್ನು ಸ್ವೀಕರಿಸಿ ಎಲ್ಲ ಸುವರ್ಣವನ್ನು ಅವರಿಗೆ ನೀಡಿದರು. ಅವರು ಅದನ್ನು ಋತ್ವಿಜರಿಗೆ ಹಂಚಿದರು. ಆಗ ತಮಗೆ ಸಂದ ಭಾಗವನ್ನು ಎಲ್ಲವನ್ನೂ ಪ್ರಸನ್ನರಾಗಿ ಕುಂತಿಗೆ ಕೊಟ್ಟರು.

[1]ಮಾವನ ಸೊತ್ತನ್ನು ಪಡೆಯಲು ಸೊಸೆಗೆ ಅರ್ಹತೆ ಇದೆ. ಕುಂತಿ ಸೊಸೆ. ಮತ್ತು ಪತಿರಹಿತಳಾದ್ದರಿಂದ ಅವಳ ಬ್ರಾಹ್ಮಣಾರಾಧನೆ ಮುಂತಾದ ಕಾರ್ಯಕ್ಕೆ ಆವಶ್ಯಕವಾದ ಧನವನ್ನು ಮಾವನೆ ಕೊಡುವುದು ಯುಕ್ತ.

ಸಭಾರ್ಯಕಾಣಾಂ ವರರತ್ನಭೂಷಣಾ-
ನ್ಯಶೇಷತಃ ಪುತ್ರಭುವಾಂ ಪ್ರದಾಯ ।
ಪೃಥಕ್ಪೃಥಗ್ ಯೋಗ್ಯವರಾಂಸ್ತ ಥೈಭ್ಯಃ
ಪ್ರಾದಾತ್ ಪ್ರಭುಸ್ತೇ ಮುದಿತಾಃ ಪ್ರಣೇಮುಃ ॥೧೫೬॥

ಪ್ರಭು ವೇದವ್ಯಾಸರು ಪಾಂಡವರಿಗೂ ಅವರ ಪತ್ನಿಯರಿಗೂ ಎಲ್ಲ ಉತ್ತಮ ರತ್ನಾಭರಣಗಳನ್ನು ಕೊಟ್ಟು ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ಯೋಗ್ಯವಾದ ವರಗಳನ್ನು ನೀಡಿದರು. ಸಂತುಷ್ಟರಾದ ಪಾಂಡವರು ವ್ಯಾಸರನ್ನು ನಮಿಸಿದರು.

---

1. ಶ್ವಶುರಾತ್ ಸ್ನುಷಾಯಾ ಅಪಿ ವಿತ್ತಗ್ರಹಣ ಯೋಗ್ಯತಾಯಾ ದರ್ಶನಾತ್। ತುಶಬ್ದೇನ ಪತಿರಹಿತಾಯಾಸ್ತವ ವಿಪ್ರಪೂಜಾದಿ ಕಾರ್ಯ ವಿಶೇಷಾರ್ಥಂ ತ್ವಮಿದಂ ಗೃಹಾಣೇತಿ ಸೂಚಯತಿ।
-ವಾದಿರಾಜೀಯ

ತದ್ ಯಜ್ಞಪಂಚಕಮಜಸ್ರಿಗುಣಾಂ ಸ ಏಭ್ಯಃ
ಸದ್ದಕ್ಷಿಣಾಂ ಕ್ರತುಪತಿರ್ನಿಖಿಲಾಮವಾಪ್ಯ ।
ಚಕ್ರೇಽಶ್ವಮೇಧತ್ರಯಮೇಕಮೇಕಂ
ತೇಷಾಂ ಹರಿರ್ಬಹುಸುವರ್ಣಕನಾಮಧೇಯಮ್ ॥೧೫೭

ಯಜ್ಞೇಶ್ವರರಾದ ವೇದವ್ಯಾಸರು 'ಬಹುಸುವರ್ಣಕ' ನಾಮಕವಾದ ಐದು ಯಜ್ಞಗಳನ್ನೂ, ಅವುಗಳಿಂದ ಮೂರುಪಾಲು ಉತ್ತಮ ದಕ್ಷಿಣೆಯನ್ನೂ ಪಡೆದು ಅವುಗಳನ್ನು ಒಂದೊಂದನ್ನೂ ಮೂರು ಅಶ್ವಮೇಧಗಳಾಗುವಂತೆ ಮಾಡಿದರು.

ಬಹುತ್ವಾತ್ ಕಾಂಚನಸ್ಯಾಸ್ಯ ಖ್ಯಾತೋ ಬಹು ಸುವರ್ಣಕಃ।
(ಆಶ್ವ 89.15)

ಎಂದು ಮಹಾಭಾರತ ಹೇಳಿದಂತೆ ಬಹು ಸುವರ್ಣ ದಕ್ಷಿಣೆ ಇರುವುದರಿಂದ ಯಾಗ 'ಬಹುಸುವರ್ಣಕ'ವೆನಿಸಿತು. ಮೂರು ಪಾಲು ದಕ್ಷಿಣೆ ಮಾತ್ರದಿಂದಲೆ ಮೂರು ಅಶ್ವಮೇಧವನ್ನು ಪ್ರತಿಯೊಬ್ಬ ಪಾಂಡವ ಮಾಡಿದಂತಾಯಿತೆಂದು ಮಹಾಭಾರತ ಹೇಳಿದಂತೆ ಕಾಣುತ್ತದೆ. ಪ್ರಮಾಣ ಸಂಗ್ರಹಕಾರರೂ ಹಾಗೇ ಒಪ್ಪುತ್ತಾರೆ. ಆದರೆ ಯಾಗ ಹದಿನೈದು ವರ್ಷ ನಡೆಯಬೇಕಾದರೆ ವಾದಿರಾಜೀಯ ಹೇಳುತ್ತದೆ–

ವಸ್ತುತ ಪಾಂಡವರು ಮಾಡಿದುದು ಒಂದು ಅಶ್ವಮೇಧಯಾಗ. ಆದರೆ ಮೂರು ವರ್ಷಗಳಲ್ಲಿ ಮೂರುಬಾರಿ ಪ್ರಧಾನಾಹುತಿ ನೀಡಿ ಮೂರುಪಾಲು ದಕ್ಷಿಣೆ ಕೊಡುವುದರಿಂದ ಮೂರುವರ್ಷಗಳ ಒಂದು ಯಾಗ ಮೂರು ಅಶ್ವಮೇಧವಾಯಿತು. ಪ್ರತಿಯೊಬ್ಬರೂ ಹೀಗೆ ಮಾಡುತ್ತ ಐವರೂ ಸೇರಿ ಹದಿನೈದು ವರ್ಷಕಾಲ ಅನುಷ್ಠಾನ ಮಾಡಿದ್ದರಿಂದ ಮೂರು ವರ್ಷಗಳ ಅಶ್ವಮೇಧವನ್ನು ಐದು ಬಾರಿ ಮಾಡಿದಂತಾಯಿತು. ಅದರಿಂದ ಈ ಐದು ಯಾಗಗಳೂ ಪ್ರತಿಯೊಂದು ಮೂರು ಅಶ್ವಮೇಧವೆನಿಸಿತು.[1]

ಅಸುರನ ಯಾಗನಿಂದೆ - ನಕುಲೋಪಾಖ್ಯಾನ

ಸಕೃಷ್ಣೇಷ್ವಥ ಪಾರ್ಥೇಷು ಸುಸ್ನಾತಾವಭೃಥೇಷ್ವಲಮ್ ।
ಪಂಚೇಂದ್ರವದ್ ವಿರಾಜತ್ಸು ಸ್ತೂಯಮಾನೇಷ್ವಪೀಶ್ವರೈಃ ॥೧೫೮॥

1. ತ್ರಿವರ್ಷಾತ್ಮಕೈಕೈಕಾಶ್ವಮೇಧಸ್ಯ ಏಕೈಕಸ್ಮಿನ್ವರ್ಷೇ ಏಕೈಕಾಶ್ವೇನಾಹುತಿದಾನಾತ್ ಅಶ್ವಮೇಧತ್ರ್ಯಾತ್ಮಕತ್ವ ಮಸ್ತೀತಿ ಭಾವೇನ ಅಶ್ವಮೇಧ ತ್ರಯಮೇಕಮೇಕಮಿತ್ಯುಕ್ತಂ। ಪ್ರಾಧಾನ್ಯವಿವಕ್ಷಯಾಶ್ವಮೇಧ ಪಂಚಕತ್ವಮವಾಂತರಭಾಗಪರ್ಯಾಲೋಚನಯಾ ಏಕೈಕಾಶ್ವಮೇಧಸ್ಯ ತ್ರ್ಯಶ್ವಮೇಧತ್ವಮಪ್ಯಸ್ತಿ। ಅತೋಽಶ್ವಮೇಧಾನಾಂ ಪಂಚತ್ವಂ ಪಂಚದಶತ್ವಂ ಚ ವಿವಕ್ಷಾಭೇದೇನ ಘಟತ ಇತಿ ಭಾವಃ।
–ವಾದಿರಾಜೀಯ

ಸ್ತೂಯಮಾನೇ ಚ ತದ್ಯಜ್ಞೇ ಕ್ರೋಧೋ ನಕುಲತಾಂ ಗತಃ ।
ಕೃತ್ವೋಗ್ರಗರ್ಜನಂ ಯಜ್ಞಂ ತಾಂಶ್ಚ ಯಜ್ಞಕೃತೋಽಖಿಲಾನ್ ॥೧೫೯॥
ಗರ್ಹಯನ್ನೂಚಿವಾನಿತ್ಥಂ ಭಾರ್ಯಾಪುತ್ರಸ್ನುಷಾಯುತಃ ।
ಸಕುಪ್ರಸ್ಥಮದಾದ್ ವಿಪ್ರ ಉಂಛವೃತ್ತಿಃ ಸುಭಕ್ತಿತಃ ॥೧೬೦॥
ಧರ್ಮಾಯಾತಿಥಯೇ ತಸ್ಯ ಕಲಾಂ ನಾರ್ಹತಿ ಷೋಡಶೀಮ್ ।
ಯಜ್ಞೋಽಯಮಿತಿ ಹೇತುಂ ಚ ವಿಪ್ರೈಃ ಪೃಷ್ಟೋಽಬ್ರವೀತ ॥೧೬೧॥

ಪಾಂಡವರು ದ್ರೌಪದಿಯೊಂದಿಗೆ ಅವಭೃಥ ಸ್ನಾನಮಾಡಿ ಐವರು ಇಂದ್ರರಂತೆ ಶೋಭಿಸುತ್ತಿದ್ದಾಗ ರಾಜರು ಅವರನ್ನು ಕೊಂಡಾಡಿದರು. ಯಜ್ಞವನ್ನೂ ಕೊಂಡಾಡಿದರು. ಆಗ ಕ್ರೋಧಾಭಿಮಾನಿ ಅಸುರ ಮುಂಗುಸಿಯಾಗಿ ಭಯಂಕರ ಗರ್ಜನೆ ಮಾಡಿ ಯಜ್ಞವನ್ನೂ ಯಜ್ಞಮಾಡಿದ ಎಲ್ಲ ಪಾಂಡವರನ್ನೂ ನಿಂದಿಸುತ್ತ ಹೇಳಿದ. 'ಉಂಛ ವೃತ್ತಿಯಿಂದ ಜೀವಿಸುತ್ತಿದ್ದ ಒಬ್ಬ ಬ್ರಾಹ್ಮಣ ಹೆಂಡತಿ ಮಗ ಸೊಸೆಯರಿಂದೊಡಗೂಡಿ ಬಹಳ ಭಕ್ತಿಯಿಂದ ಹಿಟ್ಟಿನ ರಾಶಿಯನ್ನು ಅತಿಥಿಯಾಗಿ ಬಂದ ಯಮನಿಗೆ ದಾನ ಮಾಡಿದ. ಅದರ ಹದಿನಾರನೆ ಒಂದಂಶಕ್ಕೂ ಈ ಯಜ್ಞ ಸಮವಾಗದು' ಎಂದು. ಮುನಿಗಳು ಇದಕ್ಕೆ ಕಾರಣವನ್ನು ಕೇಳಲು ಅಸುರ ಹೇಳಿದ-

ಒಂದು ಬರಗಾಲದಲ್ಲಿ ಅತಿಥಿಗೆ ಬ್ರಾಹ್ಮಣ ತನ್ನ ಪಾಲಿನ ಹಿಟ್ಟನ್ನು ದಾನಮಾಡಿದ. ಅದು ಸಾಲದಾಯಿತು. ಹೆಂಡತಿ ಮಗ ಸೊಸೆ ಇವರೆಲ್ಲರ ಪಾಲಿನ ಹಿಟ್ಟನ್ನೂ ಕೊಡಿಸಿದ. ಹದಿನೈದು ವರ್ಷಕಾಲ ನಿರಂತರ ಅನ್ನದ ಬೆಟ್ಟಗಳನ್ನೆ ಪಾಂಡವರು ದಾನ ಮಾಡಿದರೂ ಅದು ಒಮ್ಮೆ ನೀಡಿದ ಸ್ವಲ್ಪ ಹಿಟ್ಟನ ದಾನಕ್ಕೆ ಹದಿನಾರನೆ ಒಂದಂಶಕ್ಕೂ ಸಮವಲ್ಲ ಎಂದ ಕ್ರೋಧಾಸುರ.

ಅತಿಥೇಸ್ತಸ್ಯ ಪಾದೋದಕ್ಲಿನ್ನಃ ಪಾರ್ಶ್ವೋ ಹಿರಣ್ಮಯಃ ।
ಏಕೋ ಮಮಾಭೂದಪರಃ ಸರ್ವತೀರ್ಥಾದಿಕೇಷ್ವಪಿ ॥೧೬೨॥
ಮಜ್ಜತೋಽವಭೃಥೇಷ್ವದ್ಧಾ ಯಜ್ಞಾನಾಮತ್ರ ಚಾಽದರಾತ್ ।
ನಾಭೂದಿತ್ಯಥ ತತ್ತತ್ತ್ವವೇದಿಭಿರ್ಮುನಿಪುಂಗವೈಃ ॥೧೬೩॥
ಕೃಷ್ಣೇನ ಚ ತಮೋಽಂಧಂ ತಂ ಪ್ರಾಪಯದ್ಭಿಃ ಸ್ಮಿತೇ ಕೃತೇ ।
ಅದರ್ಶನಂ ಜಗಾಮಾಽಶು ತಮಃ ಪ್ರಾಪ ಚ ಕಾಲತಃ ॥೧೬೪॥

'ಆ ಅತಿಥಿಯ ಪಾದೋದಕದಿಂದ ಒದ್ದೆಯಾದ ನನ್ನ ಮೈಯ ಒಂದು ಪಾರ್ಶ್ವ ಸುವರ್ಣಮಯವಾಯಿತು. ಬಳಿಕ ಎಲ್ಲ ಪವಿತ್ರ ಜಲಗಳಲ್ಲಿಯೂ ಇಲ್ಲಿ ಯಜ್ಞದ ಅವಭೃಥ ಜಲಗಳಲ್ಲಿಯೂ ಆದರದಿಂದ ನಾನು ಚೆನ್ನಾಗಿ ಮುಳುಗಿದರೂ ಇನ್ನೊಂದು ಪಾರ್ಶ್ವ ಸುವರ್ಣಮಯವಾಗಲೆ ಇಲ್ಲ.' ಪಾಂಡವರ ಯಜ್ಞದ ನಿಜವಾದ ಮಹತ್ವವನ್ನು ಅರಿತಿದ್ದ ಮುನಿಪುಂಗವರೂ ಕೃಷ್ಣನೂ ಕ್ರೋಧಾಸುರನನ್ನು ಅಂಧಂತಮಸ್ಸಿಗೆ ಕಳಿಸಲು ಬಯಸಿ

ಮುಗುಳು ನಕ್ಕಾಗ ಅಸುರ ಅದೃಶ್ಯನಾದ. ಸ್ವಲ್ಪಕಾಲವಾದ ಬಳಿಕ ತಮಸ್ಸನ್ನು ಹೊಂದಿದ.

ಕ್ರೋಧಾಸುರ ಕೊಟ್ಟ ವಿವರಣೆಯನ್ನು ಮುನಿಗಳಾಗಲಿ ಶ್ರೀಕೃಷ್ಣನಾಗಲಿ ನಿರಾಕರಿಸದೆ ಮುಗುಳುನಗು ನಕ್ಕಿದ್ದರಿಂದ 'ಅಪ್ರತಿಷಿದ್ಧಮನುಮತಂ' ಎಂಬಂತೆ ನನ್ನ ವಾದ ಎಲ್ಲರಿಗೂ ಸಮ್ಮತವೆಂದು ಅಸುರನಿಗೆ ಅನಿಸಿತು. ಅನ್ಯಥಾ ಜ್ಞಾನ ದೃಢವಾಯಿತು ತಮಸ್ಸು ಲಭಿಸಿತು.[1]

ತದರ್ಥಮೇವ ಹೈರಣ್ಯಃ ಪಾರ್ಶ್ವಸ್ತಸ್ಯಾಭವತ್ ಪುರಾ ।
ಕೃಷ್ಣಸ್ಯ ಪಾಂಡವಾನಾಂ ಚ ಮಖಾದೇಶ್ಚ ಗುಣಾನ್ ಬಹೂನ್ ।
ವದಂತೋ ಭತ್ಸಯಾಂಚಕ್ರುಸ್ತನ್ಮತಜ್ಞಾ ಮಧುದ್ವಿಷಃ ॥೧೬೫॥

ಅದಕ್ಕಾಗಿಯೆ ಅವನ ಒಂದು ಪಾರ್ಶ್ವ ಹಿಂದೆ ಬಂಗಾರವಾಗಿತ್ತು. ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದಿದ್ದ ಮುನಿಗಳು ಶ್ರೀಕೃಷ್ಣನ ಪಾಂಡವರ ಮತ್ತು ಯಜ್ಞಾದಿಗಳ ಬಹಳ ಗುಣಗಳನ್ನು ಹೇಳುತ್ತ ಅಸುರನನ್ನು ನಿಂದಿಸಿದರು.

[2]ಅಸುರನ ಒಂದು ಪಾರ್ಶ್ವ ಬಂಗಾರವಾದುದು ಅತಿಥಿಯ ಪಾದೋದಕದಿಂದ ಅಲ್ಲ. ಅವನಿಗೆ ಮಿಥ್ಯಾಜ್ಞಾನ ದೃಢವಾಗಲೆಂದೇ ತಾತ್ಕಾಲಿಕ ಸೃಷ್ಟಿಯಲ್ಲಿ ಕುಶಲರಾದ ದೇವತೆಗಳು ಹಾಗೆ ಮಾಡಿದ್ದರು. ಇಲ್ಲದಿದ್ದರೆ ಆತ ಆ ಬ್ರಾಹ್ಮಣನ ಪಾದೋದಕದಲ್ಲಿ ಬಹುಬಾರಿ ಹೊರಳಿದ್ದರೂ ಇನ್ನೊಂದು ಪಾರ್ಶ್ವವೇಕೆ ಬಂಗಾರವಾಗಲಿಲ್ಲ? ಪಾದೋದಕದಿಂದ ಒದ್ದೆಯಾದ ನೆಲವೇಕೆ ಬಂಗಾರವಾಗಲಿಲ್ಲ? ಬ್ರಾಹ್ಮಣನ

---

1. ಅತ್ರಾದೂಷಯಿತ್ವಾ ಮಂದಸ್ಮಿತಮಾತ್ರಕರಣಾತ್ ತೇಷಾಮಪೀದಮನುಮತಮೇವಾಸೀದಿತಿ ಬೋಧಯಿತ್ವಾ ತದ್ಧೃದಿ ಯಜ್ಞನಿಂದನಂ ದೃಢೀಕೃತ್ಯ ತಮಃ ಪ್ರಾಪಯಾಮಾಸುರಿತಿ ಭಾವಃ।
-ವಾದಿರಾಜೀಯ

2. ತಸ್ಯ ಮಿಥ್ಯಾಜ್ಞಾನದೃಢೀಕರಣಾರ್ಥಮೇಕಃ ಪಾರ್ಶ್ವಃ ಹೈರಣ್ಯಃ ಹಿರಣ್ಮಯಃ ಅಭವತ್ ತಾತ್ಕಾಲಿಕ ಸೃಷ್ಟಿಕುಶಲ ದೇವಾನಾಂ ಚೇಷ್ಟಯಾ ಅಭವತ್। ನತು ವಿಪ್ರಪಾದೋದಕ ಸತ್ವೇನ। ತಥಾಸತಿ ಅನ್ಯಸ್ಯಾಪಿ ಪಾರ್ಶ್ವಸ್ಯ ಸೌವರ್ಣತ್ವಂ ಸ್ಯಾದಿತ್ಯಾಶಯಾ ವಿಪ್ರಪಾದೋದಕೇ ಬಹುಶಃ ಪರಿವೇಷ್ಟನಂ ಕುರ್ವತ-ಸ್ತಸ್ಯಾನ್ಯೋಽಪಿ ಪಾರ್ಶ್ವಃ ಕುತೋ ಹೈರಣ್ಯೋ ನಾಭೂತ್? ಕುತೋ ವಾ ಪಾದಪ್ರಕ್ಷಾಲನೋದಕಕ್ಲಿನ್ನಾ ಭೂಮಿಃ ಹಿರಣ್ಮಯಾ ನಾಭೂತ್? ಕುತಶ್ಚಾತಿಥಿಭೂತ ಬ್ರಾಹ್ಮಣಪಾದೌ ಪ್ರಕ್ಷಾಲಯತ ಉಂಛವೃತ್ತೇ ಬ್ರಾಹ್ಮಣಸ್ಯ ಹಸ್ತೌ ಸೌವರ್ಣೌ ನಾಭೂತಾಂ? ಕಿಂ ಬಹುನಾ? ಸಾಕ್ಷಾದ್ ವಿಷ್ಣೋ ರ್ಬ್ರಹ್ಮಣಾ ಪ್ರಕ್ಷಾಲಿತ ಪಾದೋದಕಮತಿಸಮರ್ಥೇನ ಶಿವೇನ ಭಕ್ತ್ಯಾ ಶಿರಸಿ ಧೃತಂ ನ ಪೌರಟಮಕರೋತ್। ಕಿಂತು ಶಿವಃ ಶಿವೋಽಭೂದಿತಿ ಸ್ಮೃತೇಃ ತಂ ಶಿವಂ ನಿಷ್ಪಾಪಂ ಕೃತ್ವಾ ಪರಮ ಶೋಭನಮೇವಾಕರೋತ್। ತದಾ ಕಿಂ ವಾಚ್ಯಮನ್ಯಪಾದೋದಕಸ್ಯ ಸುವರ್ಣೀಕರಣಶಕ್ತಿ ರ್ನಾಸ್ತೀತಿ? ಅಪಿ ಚಾತಿಥಿ ಭೂತ ಬ್ರಾಹ್ಮಣ ಪಾದ ಪ್ರಕ್ಷಾಲನೋದಕಸ್ಯೈವ ಸುವರ್ಣಕರಣಶಕ್ತೌ ಪ್ರತಿವರ್ಷಂ ಶ್ರಾದ್ಧ ಕರ್ತೃಣಾಂ ದಾರಿದ್ರ್ಯ ವಿಚ್ಛೇದ ಪ್ರಸಂಗಶ್ಚ। ಅತೋ ಯತ್ಕಿಂಚಿದೇತತ್। -ವಾದಿರಾಜೀಯ

ಕಾಲುತೊಳೆದ ಉಂಛವೃತ್ತಿ ಬ್ರಾಹ್ಮಣನ ಕೈಗಳೀಕೆ ಬಂಗಾರವಾಗಲಿಲ್ಲ? ಹೆಚ್ಚೇಕೆ ಸಾಕ್ಷಾತ್ ಶ್ರೀಹರಿಯ ಪಾದಗಳನ್ನು ಬ್ರಹ್ಮ ತೊಳೆದಾಗ ಆ ಪಾದೋದಕವನ್ನು ಶಿವ ಭಕ್ತಿಯಿಂದ ಶಿರದಲ್ಲಿ ಹೊತ್ತರೂ ಶಿರ ಬಂಗಾರವಾಗಲಿಲ್ಲ. ಶಿವ ಪಾಪರಹಿತ, ಮಂಗಳಕರನಾದನಷ್ಟೆ ಎಂದಮೇಲೆ ಬೇರೆ ಪಾದೋದಕ್ಕೆ ಬಂಗಾರ ಮಾಡುವ ಶಕ್ತಿ ಇಲ್ಲವೆಂದು ಬೇರೆ ಏನು ಹೇಳಬೇಕು? ಅತಿಥಿ ಬ್ರಾಹ್ಮಣರ ಪಾದೋದಕಕ್ಕೆ ಬಂಗಾರ ಮಾಡುವ ಶಕ್ತಿ ಇದ್ದರೆ ಪ್ರತಿವರ್ಷ ಶ್ರಾದ್ಧ ಮಾಡುವವರಿಗೆ ದಾರಿದ್ರ್ಯವಿಲ್ಲವಾಗ ಬೇಕಾದೀತು.

ಶ್ರಾದ್ಧಾರ್ಥಂ ಹಿ ಪಯಃ ಪೂರ್ವಂ ಜಮದಗ್ನೇರದೂಷಯತ್ ।
ನಾಕುಲೇನೈವ ರೂಪೇಣ ಕ್ರೋಧಸ್ತಂ ಪಿತರೋಽಶಪನ್ ॥೧೬॥
ಭವ ತ್ವಂ ನಕುಲಸ್ತಾವದ್ ಯಾವದ್ ಧರ್ಮಾದಿಕಾನ್ ಸುರಾನ್ ॥೧೬೭॥
ಕ್ಷೇಪ್ಸ್ಯಸೀತಿ ತಮೋ ಘೋರಂ ಭೂಯಃ ಪಾಪೇನ ಯಾತ್ವಯಮ್ ।
ಇತ್ಯಭಿಪ್ರೇತ್ಯ ತೈಃ ಶಪ್ತಸ್ತಥಾ ಕೃತ್ವಾ ತಮೋಽಭ್ಯಯಾತ್ ॥೧೬೮॥

ಶ್ರಾದ್ಧಕ್ಕಾಗಿ ಇಟ್ಟಿದ್ದ ಜಮದಗ್ನಿಯ ಹಾಲನ್ನು ಹಿಂದೆ ಈ ಕ್ರೋಧಾಸುರ ಮುಂಗುಸಿಯ ರೂಪದಿಂದಲೆ ಎಂಜಲು ಮಾಡಿದ್ದ. ಅವನನ್ನು ಪಿತೃಗಳು ಶಪಿಸಿದರು. 'ಧರ್ಮರಾಜಾದಿ ದೇವತೆಗಳನ್ನು ನಿಂದಿಸುವವರೆಗೂ ನೀನು ಮುಂಗುಸಿಯಾಗಿರು' ಎಂದು. ಮಹಾಪಾಪದಿಂದ ಈತ ಘೋರವಾದ ಅಂಧಂತಮಸ್ಸನ್ನು ಹೊಂದಲಿ ಎಂದು ಬಯಸಿಯೆ ಅವರು ಹಾಗೆ ಮಾಡಿದ್ದರು. ಕ್ರೋಧಾಸುರ ಹಾಗೇ ಮಾಡಿ ತಮಸ್ಸನ್ನು ಹೊಂದಿದ.

ಜಮದಗ್ನಿ ತಾನೇ ಹೋಮಧೇನುವಿನ ಹಾಲು ಕರೆದು ಶುಚಿಯಾದ ಪಾತ್ರೆಯಲ್ಲಿ ಇಟ್ಟಿದ್ದ. ಮಹಾಭಾರತ ಔತ್ತರೇಯಪಾಠದಲ್ಲಿ ಧರ್ಮನೆ ಮುನಿಯನ್ನು ಪರೀಕ್ಷಿಸಲು ಕ್ರೋಧರೂಪದಿಂದ ಬರುತ್ತಾನೆ. ದಾಕ್ಷಿಣಾತ್ಯಪಾಠದಲ್ಲಿ ಕ್ರೋಧಾಭಿಮಾನಿ ಅಸುರ. ಅವನನ್ನು ಮುನಿ ಶಪಿಸಲಿಲ್ಲ. ಶ್ರಾದ್ಧಕ್ಕಾಗಿ ಇಟ್ಟಿದ್ದ ಹಾಲನ್ನು ಎಂಜಲು ಮಾಡಿದ್ದರಿಂದ ಪಿತೃಗಳೆ ಶಪಿಸಿದರು. ಪಾಂಡವರ ಯಜ್ಞಧರ್ಮವನ್ನು ಆಕ್ಷೇಪಿಸು ಆಗ ಶಾಪ ಮುಕ್ತಿ ಎಂದರು. ಅದರಂತೆ ಮಾಡಿ ಅಸುರ ಮುಂಗುಸಿ ಜನ್ಮದಿಂದ ಮುಕ್ತನಾದ. ಆದರೆ ಯಜ್ಞದೂಷಣದ ಮಹಾಪಾಪದಿಂದ ತಮಸ್ಸನ್ನು ಹೊಂದಿದ.

ಹಾಲನ್ನು ಎಂಜಲು ಮಾಡಿದ್ದು ಮಹಾಪಾಪವೇನಲ್ಲ. ಅದರಿಂದ ತಮಸ್ಸಾಗಲಾರದು. ಮುಂಗುಸಿಯಂಥ ಹೀನ ಜನ್ಮ ಬರಬಹುದು. ಅದರಿಂದ ಪಿತೃಗಳು ಹಾಗೇ ಶಪಿಸಿದ್ದರು. ಪರಮವೈಷ್ಣವರಾದ ಪಾಂಡವರಲ್ಲಿ ಅಪಚಾರ

ಮಾಡಿ ಮಹಾಪಾಪ ಸಂಪಾದಿಸಿ ಅಂಧಂತಮಸ್ಸನ್ನು ಹೊಂದಲಿ ಎಂಬುದೇ ಪಿತೃಗಳ ಅಭಿಪ್ರಾಯವಾಗಿತ್ತು.[1]

ಯದ್ಯಪ್ಯಲ್ಪಧನತ್ಯಕ್ತಂ ವಿತ್ತಂ ಬಹುಫಲಂ ಭವೇತ್ ।
ತಥಾಽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ ॥೧೬೯॥
ಸತಾಂ ಪ್ರೀತಿಶ್ಚ ತತ್ರಾಪಿ ಸದ್ವರೋ ಹರಿರೇವ ಹಿ ।
ಪಾರ್ಥೇಭ್ಯೋಽಭ್ಯಧಿಕಃ ಕರ್ತಾ ಸಮೋ ವಾ ಕೋ ಗುಣೈರ್ಭವೇತ್ ೧೭೦

ಅಲ್ಪಧನ ಉಳ್ಳವನು ಕೊಟ್ಟ ಧನ ಅಧಿಕಫಲವನ್ನು ಕೊಟ್ಟೀತು. ಆದರೂ ಕರ್ತನ ಜ್ಞಾನ ಭಕ್ತ್ಯಾದಿ ಮಹಾಗುಣಗಳು ಮತ್ತು ಅವುಗಳಿಂದ ಉಂಟಾಗುವ ಸಜ್ಜನರ ಸಂತೋಷಗಳೆ ಅನಂತಫಲದಾಯಕಗಳು. ಸಜ್ಜನರಲ್ಲಿ ಉತ್ತಮನು ಶ್ರೀಹರಿಯೆ. ಭಕ್ತ್ಯಾದಿಗುಣಗಳಲ್ಲಿ ಪಾಂಡವರಿಗಿಂತ ಶ್ರೇಷ್ಠನಾದ ಅಥವಾ ಅವರಿಗೆ ಸಮನಾದ ಕರ್ತನೂ ಯಾರು ಇರಬಲ್ಲ?

ದಾನಕ್ಕೆ ಪಾಂಡವರಂಥ ಕರ್ತರಿಲ್ಲ, ಹರಿಯಂಥ ಪಾತ್ರರಿಲ್ಲ, ಸಜ್ಜನರು ಪಾತ್ರರು. 'ಸದೇವ ಸೋಮ್ಯೇದಮಗ್ರ ಆಸೀತ್' ಎಂಬ ಶ್ರುತಿ ಇರುವುದರಿಂದ ಸಚ್ಛಬ್ದ 'ಸಚ್ಛಬ್ದ ಉತ್ತಮಂ ಬ್ರೂಯಾತ್' ಎಂಬ ಸ್ಮೃತಿಯಂತೆ ಸರ್ವೋತ್ತಮನಾದ ಹರಿಯನ್ನೆ ಹೇಳುತ್ತದೆ. ಅವನಿಗೆ ಅನುಪಮ ಭಕ್ತರಾದ ಪಾಂಡವರು ಪ್ರತ್ಯಕ್ಷ ತೃಪ್ತಿ ನೀಡಿದರೆ ದಾನ ಎಷ್ಟು ಅನಂತಫಲ ನೀಡುತ್ತದೆ ಎಂಬುದು ನಿರ್ಣಯದ ಅಭಿಪ್ರಾಯ.

ನೀಲಕಂಠಿಯಲ್ಲಿ ಅಶ್ವಮೇಧಕ್ಕಿಂತಲೂ ಹಿಟ್ಟಿನದಾನವೆ ಅಧಿಕವಾಯಿತೆಂದು ನಿರ್ಣಯಿಸಿದೆ!

ಸತಾಂ ಚ ಪ್ರವರೋ ವಿಷ್ಣುಃ ಸದ್ಭಿರ್ಮುನಿಸುರೈರ್ವೃತಃ ।
ಪ್ರತ್ಯಕ್ಷತಃ ಕಾರಯತಿ ಪಾರ್ಥೈಃ ಪ್ರಿಯತಮೈಶ್ಚ ತೈಃ ॥೧೭೧॥
ಯಂ ಮಖಪ್ರವರಂ ತಸ್ಯ ಸಮಂ ಕಿಂ ಶುಭಸಾಧನೈಃ ।
ಪಠಂತ ಪೈಂಗಿನಶ್ಚೈತಾನ್ ಮಂತ್ರಾನನ್ವರ್ಥಕಾನಿಹ ॥೧೭೨॥

ಸಜ್ಜನರಲ್ಲಿ ಶ್ರೇಷ್ಠನಾದ ವಿಷ್ಣು ಸಜ್ಜನರಾದ ಮುನಿವರರಿಂದ ಯುಕ್ತನಾಗಿ ಅತ್ಯಂತ ಪ್ರಿಯರಾದ ಪಾಂಡವರ ಮೂಲಕ ಶುಭಸಾಧನಗಳಿಂದ ಪ್ರತ್ಯಕ್ಷವಾಗಿ ಯಾವ ಯಜ್ಞವನ್ನು ಮಾಡಿಸುತ್ತಿರುವನೋ ಆ ಯಜ್ಞಕ್ಕೆ ಸಮಾನವಾಗಿ ಪುಣ್ಯಕರವಾದ ಇನ್ನೊಂದು ಕರ್ಮ

1. ಪಯೋದೂಷಣ ಮಾತ್ರೇಣ ಅಂಧಂತಮಃ ಪ್ರಾಪ್ತ್ಯಯೋಗಾತ್ ದುರ್ಯೋಜನಿರೂಪಾ ನಕುಲತ್ವೈವೋಚಿತಾ। ಪರಮವೈಷ್ಣವ ಪಾಂಡವ ದ್ವೇಷಾನಂತರಂ ತಮಃ ಪ್ರಾಪ್ತಿರಿತಿ ಪಿತೃಣಾಂ ಭಾವ ಇತಿಜ್ಞೇಯಂ।
-ವಾದಿರಾಜೀಯ

ಯಾವುದು? ಏಕೆಂದರೆ ಪೈಂಗಿ ಶಾಖೆಯವರು ಅರ್ಥಗರ್ಭಿತವಾದ ಮುಂದೆ ಹೇಳುವ ಮಂತ್ರಗಳನ್ನು ಪಠಿಸುತ್ತಾರೆ.

'ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಕ್ರಮಾತ್ ಪರಮ್ ॥೧೭೩॥
ವೈಷ್ಣವೇಷ್ವಪಿ ಮರ್ತ್ಯೈರ್ಯತ್ ಕೃತಂ ಶತಗುಣಂ ತತಃ ।
ಗಾಂಧರ್ವಂ ಕರ್ಮ ತಸ್ಮಾಚ್ಚ ಮುನಿಭಿಃ ಪಿತೃಭಿಸ್ತತಃ ॥೧೭೪॥
ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ ಕ್ರಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ ಬ್ರಹ್ಮಕೃತೋಪಮಮ್ ॥೧೭೫॥

'ವಿಷ್ಣುಭಕ್ತರಲ್ಲದವರು ಮಾಡಿದ ಎಲ್ಲ ಕರ್ಮವೂ ಅಲ್ಪಫಲ ಉಳ್ಳದ್ದೆನಿಸುತ್ತದೆ. ವಿಷ್ಣುಭಕ್ತರು ಮಾಡಿದ್ದು ಅನಂತಫಲ ಉಳ್ಳದ್ದು. ಅದರಲ್ಲಿಯೂ ವರ್ಣಕ್ರಮದಿಂದ ಮೇಲು ಮೇಲಿನವರ ಕರ್ಮ ಹೆಚ್ಚು ಫಲಉಳ್ಳದ್ದು. ವೈಷ್ಣವರಲ್ಲಿಯೂ ಮಾನವರು ಮಾಡಿದ್ದಕ್ಕಿಂತ ನೂರು ಪಾಲು ಗಂಧರ್ವರು ಮಾಡಿದ್ದು ಶ್ರೇಷ್ಠ. ಅದಕ್ಕಿಂತ ಪಿತೃಗಳು ಮಾಡಿದ್ದು ನೂರುಪಾಲು ಶ್ರೇಷ್ಠ. ಅದಕ್ಕಿಂತ ಮುನಿಗಳು ಮಾಡಿದ್ದು ನೂರುಪಾಲು ಶ್ರೇಷ್ಠ. ಅದಕ್ಕಿಂತ ದೇವತೆಗಳು, ಇಂದ್ರ, ಶಿವ, ಬ್ರಹ್ಮರು ಮಾಡಿದ್ದು ಕ್ರಮವಾಗಿ ನೂರುಪಟ್ಟು ಹೆಚ್ಚು ಶ್ರೇಷ್ಠವೆಂದು ತಿಳಿಯಬೇಕು. ಬ್ರಹ್ಮ ಮಾಡಿದ್ದಕ್ಕೆ ಸಮಾನ ಇನ್ನೊಂದಿಲ್ಲ.

ವರ್ಣಕ್ರಮದಿಂದ ಕರ್ಮಶ್ರೇಷ್ಠವೆಂದರೆ ಶೂದ್ರ ಮಾಡಿದ್ದಕ್ಕಿಂತ ವೈಶ್ಯಮಾಡಿದ್ದು, ವೈಶ್ಯಮಾಡಿದ್ದಕ್ಕಿಂತ ಕ್ಷತ್ರಿಯ ಮಾಡಿದ್ದು, ಕ್ಷತ್ರಿಯ ಮಾಡಿದ್ದಕ್ಕಿಂತ ಬ್ರಾಹ್ಮಣ ಮಾಡಿದ್ದು ಶ್ರೇಷ್ಠ ಎಂದು ಭಾವ.

'ವೈಷ್ಣವತ್ವಂ ಕ್ರಮಾದ್ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ।
ಫಲಾಧಿಕ್ಯಂ ಕರ್ಮಣಾಂ ಹಿ ವಿಷ್ಣೋಃ ಪ್ರೀತ್ಯೈವ ನಾನ್ಯಥಾ' ॥೧೭೬॥

ವಿಷ್ಣುಭಕ್ತಿ ಜೀವರಾಶಿಗಳಲ್ಲಿ ಕ್ರಮಕ್ರಮವಾಗಿ ಬ್ರಹ್ಮನವರೆಗೆ ಹೆಚ್ಚು ಹೆಚ್ಚಾಗಿರುತ್ತದೆ. ಕರ್ಮಗಳಿಗೆ ಅಧಿಕ ಫಲ ಸಿಗುವುದು ಶ್ರೀಹರಿಗೆ ಆಗುವ ತೃಪ್ತಿಯಿಂದಲೆ ಹೊರತು ಬೇರಾವುದರಿಂದಲೂ ಅಲ್ಲ.

ಭಕ್ತಿತಾರತಮ್ಯದಿಂದ ವಿಷ್ಣುಪ್ರೀತಿಯಲ್ಲಿ ತಾರತಮ್ಯ. ಅದರಿಂದ ಫಲ ತಾರತಮ್ಯ ಹೊರತು ಕರ್ತನ ಅಲ್ಪಧನ ಬಹುಧನಗಳು ಅಪ್ರಯೋಜಕ.

ಇತಿ ತೇನ ನ ಪಾರ್ಥಾನಾಂ ಕರ್ಮಣಾಽನ್ಯತ್ ಸಮಂ ಕ್ವಚಿತ್ ।
ಗುಣೈರ್ಜ್ಞಾನಾದಿಭಿರ್ವಾಽಪಿ ತಸ್ಮಾತ್ ಕ್ರೋಧಃ ಸ ತಾಮಸಃ ।
ವಿನಿಂದ್ಯ ತಾನ್ ಸುಸತ್ತ್ವಸ್ಥಾಂಸ್ತಮೋಽಂಧಮುಪಜಗ್ಮಿವಾನ್ ॥೧೭೭॥

ಹೀಗೆ ಪೈಂಗಿಶಾಖೆಯ ಮಂತ್ರಗಳಿರುವುದರಿಂದ ಪಾಂಡವರ ಯಜ್ಞಕ್ಕೆ ಸಮಾನ ಇನ್ನೊಂದು ಎಲ್ಲಿಯೂ ಇಲ್ಲ. ಅವರ ಜ್ಞಾನಾದಿ ಗುಣಗಳಿಗೂ ಸಮಾನವಾದ ಗುಣ ಇನ್ನೊಂದು ಎಲ್ಲಿಯೂ ಇಲ್ಲ. ಅದರಿಂದ ತಾಮಸನಾದ ಆ ಕ್ರೋಧಾಸುರ ಮಹಾ ಸಾತ್ವಿಕರಾದ ಆ ಪಾಂಡವರನ್ನು ನಿಂದಿಸಿ ಅಂಧಂತಮಸ್ಸನ್ನು ಹೊಂದಿದ.

ಅಥ ಪೃಷ್ಟೋ ವಾಸುದೇವಃ ಸುರವಿಪ್ರಾದಿಸಂಸದಿ ।
ಯುಧಿಷ್ಠಿರೇಣ ಸಂಹೃಷ್ಟೋ ಜಗಾದಾಶೇಷತಃ ಪ್ರಭುಃ ॥೧೭೮॥

ಬಳಿಕ ದೇವತೆಗಳು ಮುನಿಗಳು ಮುಂತಾದವರ ಸಭೆಯಲ್ಲಿ ಧರ್ಮರಾಜ ಪ್ರಶ್ನೆಗಳನ್ನು ಕೇಳಿದಾಗ ಶ್ರೀಕೃಷ್ಣ ಎಲ್ಲ ವೈಷ್ಣವ ಧರ್ಮಗಳನ್ನೂ ಉಪದೇಶಿಸಿದ.

ಈ ಉಪದೇಶರೂಪವಾದ 23 ಅಧ್ಯಾಯಗಳ ವೈಷ್ಣವಧರ್ಮಪರ್ವ ದಾಕ್ಷಿಣಾತ್ಯಪಾಠದಲ್ಲಿ ಮಾತ್ರ ಉಪಲಬ್ಧವಿದೆ. ಔತ್ತರೇಯ ಪಾಠದಲ್ಲಿ ಇಲ್ಲ. ಇಡೀ ಒಂದು ಪರ್ವವೆ 'ಕ್ವಚಿದಂತರಿತಾನಿ ಚ' ಎಂಬಂತೆ ಅಲ್ಲಿ ಲುಪ್ತವಾಗಿದೆ. ವಸ್ತುತಃ 'ಅನಂತ ಂ ವೈಷ್ಣವಕೃತಂ' ಎನ್ನವುದಕ್ಕೆ ಈ ಪರ್ವ ಸಂಗತವೇ ಆಗಿದೆ.

ತೇ ಚ ಶ್ರುತ್ವಾಽಖಿಲಾನ್ ಧರ್ಮಾನ್ ಭಕ್ತ್ಯಾ ಪರಮಯಾ ಯುತಾಃ ।
ಪೂಜಯಂತೋ ಜಗನ್ನಾಥಮಾಪುಶ್ಚ ಪರಮಾಂ ಮುದಮ್ ॥೧೭೯॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಯಾಗಸಮಾಪ್ತಿರ್ನಾಮ ತ್ರಿಂಶೋಽಧ್ಯಾಯಃ

ಪರಮಭಕ್ತಿಯಿಂದ ಯುಕ್ತರಾದ ಪಾಂಡವರು ಎಲ್ಲ ಧರ್ಮಗಳನ್ನೂ ಕೇಳಿ ಶ್ರೀಕೃಷ್ಣನನ್ನು ಆರಾಧಿಸುತ್ತ ಪರಮಾನಂದವನ್ನು ಹೊಂದಿದರು.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ಯಾಗ ಸಮಾಪ್ತಿ ಎಂಬ
ಮೂವತ್ತನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 31

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯದ್ಭಕ್ತಾಃ ಪಾಂಡುಪುತ್ರಾಃ ಕ್ಷಿತಿಮಥ ಜಗೃಹುರ್ಧರ್ಮರಾಜಸ್ತ್ವರಾವಾನ್
ಧರ್ಮೇ ಯತ್ಪ್ರೀತಯೇಽಭೂತ್ ಪವನಜವಚನೈರಾಂಬಿಕೇಯಂ ವಿರಕ್ತಂ।
ವ್ಯಾಸಾತ್ಮಾ ಯೋ ವನಸ್ಥಂ ತ್ವಕೃತ ನಿಜಮನೋಽಭೀಷ್ಟವಂತಂ ಗತಂ ಸ್ವಂ
ಸ್ಥಾನಂ ಪಾರ್ಥಾಃ ಸ್ಮರಂತೋ ಮುಮುದುರಪಿ ಪದಂ ಯಸ್ಯ ಕೃಷ್ಣಂ ತಮೀಡೇ॥೩೧॥

ಶ್ರೀಕೃಷ್ಣನಿಂದ ಕೂಡಿದ ಪಾಂಡವರು ಭೂಮಿಯನ್ನು ಆಳಿದರು. ಧರ್ಮರಾಜ ಭೀಮನ ಮಾತುಗಳಿಂದ ಶ್ರೀಕೃಷ್ಣಪ್ರೀತ್ಯರ್ಥವಾಗಿ ಧರ್ಮವಾಚರಿಸುವಲ್ಲಿ ತ್ವರೆ ಮಾಡಿದ. ಭೀಮನ ಮಾತುಗಳಿಂದ ವೈರಾಗ್ಯ ತಳೆದ ಧೃತರಾಷ್ಟ್ರನನ್ನು ವೇದವ್ಯಾಸರೂಪನಾದ ಶ್ರೀಕೃಷ್ಣ ವಾನಪ್ರಸ್ಥಕ್ಕೆ ಕಳಿಸಿದ. ಮೃತಪುತ್ರರನ್ನು ಕಣ್ಣಾರೆ ಕಾಣುವ ಅವನ ಮನೋಭೀಷ್ಟವನ್ನೂ ಸಲ್ಲಿಸಿದ. ಅವನಿಗೆ ತನ್ನ ಲೋಕವನ್ನು ಸೇರುವಂತೆ ಅನುಗ್ರಹಿಸಿದ. ಅವನ ಪಾದವನ್ನು ನೆನೆಯುತ್ತ ಪಾಂಡವರು ಆನಂದಿಸಿದರು. ಅಂಥ ಶ್ರೀಕೃಷ್ಣನನ್ನು ಸ್ತುತಿಸುವೆನು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೩೧

ಧೃತರಾಷ್ಟ್ರಾದಿಸ್ವರ್ಗಪ್ರಾಪ್ತಿಃ

॥ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

'ನಾಳೆ ಬಾ' ಎಂದ ಧರ್ಮರಾಜ

ಓಂ ॥ ಯಜ್ಞೇಶ್ವರೇಣಾಭಿಯುತೇಷು ಭಕ್ತ್ಯಾ
ಮಹೀಂ ಪ್ರಶಾಸತ್ಸು ಪೃಥಾಸುತೇಷು ।
ಯಿಯಕ್ಷುರಾಗಾನ್ನಿಶಿ ವಿಪ್ರವರ್ಯೋ
ಯುಧಿಷ್ಠಿರಂ ವಿತ್ತಮಭೀಪ್ಸಮಾನಃ ॥೧॥

ಯಜ್ಞೇಶ್ವರನಾದ ಶ್ರೀಕೃಷ್ಣನಿಂದ ಯುಕ್ತರಾದ ಪಾಂಡವರು ಹರಿಭಕ್ತಿಯುಕ್ತರಾಗಿ ಭೂಮಿಯನ್ನು ಆಳುತ್ತಿದ್ದಾಗ ಯಾಗಮಾಡುವ ಬಯಕೆಯಿಂದ ಬ್ರಾಹ್ಮಣೋತ್ತಮನೊಬ್ಬ ಹಣವನ್ನು ಬಯಸಿ ರಾತ್ರಿಯಲ್ಲಿ ಧರ್ಮರಾಜನ ಬಳಿಗೆ ಬಂದ.

ಈ ಕಥೆ ವರಾಹಪುರಾಣ ಚಾತುರ್ಮಾಸ ಮಾಹಾತ್ಮ್ಯದಲ್ಲಿ ಬರುತ್ತದೆ. (ಅಧ್ಯಾಯ 23 ಶ್ಲೋ. ೧೭೨-೧೯೪) ಅಲ್ಲಿ ಶ್ರೀಹರಿಯೆ ಬ್ರಾಹ್ಮಣರೂಪದಿಂದ ಬಂದು ಬೇಡಿದನೆಂದಿದೆ.

ಪ್ರಾತರ್ದದಾನೀತಿ ನೃಪಸ್ಯ ವಾಕ್ಯಂ
ನಿಶಮ್ಯ ವಿಪ್ರಸ್ತ್ವರಿತೋ ಮಖಾರ್ಥೇ ।
ಭೀಮಂ ಯಯಾಚೇ ಸ ನೃಪೋಕ್ತಮಾಶು
ನಿಶಮ್ಯ ಚಾದಾನ್ನಿಜಹಸ್ತಭೂಷಣಮ್ ॥೨॥

ಬೆಳಿಗ್ಗೆ ಕೊಡುವೆನೆಂದು ಯುಧಿಷ್ಠಿರ ಹೇಳಿದಾಗ ಅದನ್ನು ಕೇಳಿ ಬ್ರಾಹ್ಮಣ ತ್ವರೆಯಿಂದ ಭೀಮನಲ್ಲಿ ಯಾಗಕ್ಕೆ ಹಣವನ್ನು ಕೇಳಿದ. ಭೀಮ ಯುಧಿಷ್ಠಿರ ಹೇಳಿದ್ದನ್ನು ಕೇಳಿ ತಾನೆ ಬೇಗನೆ ತನ್ನ ಕೈಯ ಆಭರಣವನ್ನಿತ್ತ.

ಅನರ್ಘಮಗ್ನಿಪ್ರತಿಮಂ ವಿಚಿತ್ರ
ರತ್ನಾನ್ವಿತಂ ವಿಪ್ರವರಸ್ತದಾಪ್ಯ ।

ಯಯೌ ಕೃತಾರ್ಥೋಽಥ ಚ ನಂದಿಘೋಷ-
ಮಕಾರಯದ್ ವಾಯುಸುತಸ್ತದೈವ ॥೩॥

ಭೀಮನ ಕೈಯ ಆಭರಣ ಅಮೂಲ್ಯ ವಿಚಿತ್ರ ರತ್ನ ಖಚಿತ. ಬೆಂಕಿಯಂತೆ ಹೊಳೆಯುತ್ತಿತ್ತು. ಬ್ರಾಹ್ಮಣೋತ್ತಮ ಅದನ್ನು ಪಡೆದು ಕೃತಾರ್ಥನಾಗಿ ಹೊರಟು ಹೋದ. ಭೀಮ ಆಗಲೆ ಆನಂದದ ಭೇರೀನಾದವನ್ನು ಮಾಡಿಸಿದ.

ಅಕಾಲಜಂ ತಂ ತು ನಿಶಮ್ಯ ರಾಜಾ
ಪಪ್ರಚ್ಛ ದೂತೈಸ್ತಮುವಾಚ ಭೀಮಃ ।
ಯನ್ಮರ್ತ್ಯದೇಹೋಽಪಿ ವಿನಿಶ್ಚಿತಾಯು-
ರಭೂನ್ನೃಪಸ್ತೇನ ಮಮಾಽಸ ಹರ್ಷಃ ॥೪॥

ಅಕಾಲದಲ್ಲಿ ಉಂಟಾದ ಆ ಭೇರಿನಾದವನ್ನು ಕೇಳಿ ರಾಜಾ ಯುಧಿಷ್ಠಿರ ದೂತರ ಮೇಲೆ ದೂತರನ್ನು ಕಳಿಸಿ ಭೀಮನಲ್ಲಿ ವಿಚಾರಿಸಿದ. ಭೀಮನೆಂದ, ಮಾನವ ದೇಹದವನಾಗಿದ್ದೂ ಯುಧಿಷ್ಠಿರ ತನ್ನಾಯುಷ್ಯದ ಬಗ್ಗೆ ನಿಶ್ಚಯ ಜ್ಞಾನವನ್ನು ಹೊಂದಿದ್ದಾನೆ. ಅದರಿಂದ ನನಗೆ ಆನಂದವಾಯಿತು.

ಇತೀರಿತೋಽಸೌ ನೃಪತಿಸ್ತ್ವರೇತ
ಧರ್ಮಾರ್ಥಮಿತ್ಯಸ್ಯ ಮತಂ ಪ್ರಪೂಜಯನ್ ।
ಜಗಾದ ಸಾಧ್ವಿತ್ಯಥ ಭೂಯ ಏವ
ಧರ್ಮೇ ತ್ವರಾವಾನಪಿ ಸಂಬಭೂವ ॥೫॥

ಭೀಮ ಹೀಗೆ ಹೇಳಿದಾಗ ಯುಧಿಷ್ಠಿರ 'ಧರ್ಮಾಚರಣೆಯಲ್ಲಿ ತ್ವರೆ ಮಾಡಬೇಕು.' ಎಂಬ ಭೀಮನ ಅಭಿಪ್ರಾಯವನ್ನು ತಿಳಿದು ಹೊಗಳುತ್ತ 'ಭೀಮ ಮಾಡಿದ್ದು ಯುಕ್ತ' ಎಂದ. ಬಳಿಕ ಧರ್ಮಾಚರಣೆಯಲ್ಲಿ ಇನ್ನೂ ಹೆಚ್ಚು ತ್ವರೆ ಮಾಡಿದ.

ವರಾಹಪುರಾಣದಲ್ಲಿ ಧರ್ಮರಾಜ ಪಶ್ಚಾತ್ತಾಪದಿಂದ ನೊಂದು ಸಂಕಟಪಡುತ್ತಿದ್ದಾಗ ಆ ಬ್ರಾಹ್ಮಣನೆ ಬಂದು ಕೃಷ್ಣರೂಪನಾಗಿ ನಿಂತು ಸಂತೈಸಿದ. ಧರ್ಮಾಚರಣೆಯಲ್ಲಿ ವಿಲಂಬ ಸಲ್ಲದು ಎಂದ.

ಧೃತರಾಷ್ಟ್ರನಿಗೆ ವೈರಾಗ್ಯ

ಅಥಾಽಂಬಿಕೇಯಂ ವಿಷಯೇಷು ಸಕ್ತಂ
ದುಸ್ಸಂಗದುಷ್ಟಂ ಕೃತಭೂರಿದೋಷಮ್ ।
ಸಮಸ್ತರಾಜಾಪ್ಯಹೇತುಭೂತಂ
ನಿಚಾಯ್ಯ ತಂ ಮಾರುತಿರನ್ವಕಂಪತ ॥೬॥

ಬಳಿಕ ಧೃತರಾಷ್ಟ್ರ ದುರ್ಜನ ಸಂಗದೋಷದಿಂದ ಸಮಸ್ತರಾಜರ ನಾಶಕ್ಕೆ ಕಾರಣನಾಗಿ ಮಹಾಪಾಪಮಾಡಿದ್ದರೂ ವಿಷಯಭೋಗದಲ್ಲಿ ಆಸಕ್ತನಾಗಿದ್ದುದನ್ನು ಕಂಡು ಭೀಮ ಅವನಲ್ಲಿ ಅನುಕಂಪೆ ತೋರಿದ.

ಅಕುರ್ವತಸ್ತೀಕ್ಷ್ಣತಪಃ ಕುತಶ್ಚಿ
ನ್ನೈವಸ್ವ ಲೋಕಾಪ್ತಿರಮುಷ್ಯ ಭೂಯಾತ್ ।
ರಾಗಾಧಿಕೋಽಯಂ ನ ತಪಶ್ಚ ಕುರ್ಯಾ
ದಿತ್ಯಸ್ಯ ವೈರಾಗ್ಯಕರಾಣಿ ಚಕ್ರೇ ॥೭॥

ಧೃತರಾಷ್ಟ್ರನಿಗೆ ತೀವ್ರ ತಪಸ್ಸು ಮಾಡದೆ ತನ್ನ ಗಂಧರ್ವಲೋಕ ಪ್ರಾಪ್ತಿ ಯಾವ ಕಾರಣದಿಂದಲೂ ಆಗದು. ವಿಷಯಾಸಕ್ತಿ ಬಹಳ ಇರುವುದರಿಂದ ತಪಸ್ಸನ್ನು ಮಾಡಲಾರ. ಎಂದು ಅವನಿಗೆ ವೈರಾಗ್ಯ ಉಂಟು ಮಾಡಲು ಉಪಾಯಗಳನ್ನು ಭೀಮ ಕೈಗೊಂಡ.

ಆಜ್ಞಾಂ ಪರೈರಸ್ಯ ನಿಹಂತಿ ಸೋದರೈ
ರ್ವಧೂಜನೈರಪ್ಯತಿಪೂಜಿತೇಽಸ್ಮಿನ್ ।
ಸ ನಿಷ್ಪತತ್ಯೇವಮಪೀತರೈಃ ಸ
ಸಂಪೂಜಿತೋ ನಾಽಸ ತದಾ ವಿರಾಗಃ ॥೮॥

ಸೋದರರೂ ಸ್ತ್ರೀಯರೂ ಧೃತರಾಷ್ಟ್ರನನ್ನು ಅತಿಯಾಗಿ ಸತ್ಕರಿಸುತ್ತಿದ್ದರೂ ಭೀಮ ಇತರ ಜನರಿಂದ ಅವನ ಆಜ್ಞೆಯ ಉಲ್ಲಂಘನೆ ಮಾಡಿಸಿದ. ತಾನೂ ನಿಷ್ಠುರವಾಗಿ ಮಾತನಾಡಿ ನಿರಾಕರಿಸಿದ. ಹೀಗಿದ್ದರೂ ಇತರರು ಚೆನ್ನಾಗಿಯೆ ಸತ್ಕರಿಸುತ್ತಿದ್ದುದರಿಂದ ಧೃತರಾಷ್ಟ್ರನಿಗೆ ವೈರಾಗ್ಯ ಬರಲಿಲ್ಲ.

ಸರ್ವೇ ಹಿ ಪಾರ್ಥಾಸ್ತಮೃತೇ ಸಭಾರ್ಯಾ
ವೈಚಿತ್ರವೀರ್ಯಂ ಪರಮಾದರೇಣ ।
ಪರ್ಯೇವ ಚಕ್ರುಃ ಸತತಂ ಸಭಾರ್ಯಂ
ಕೃಷ್ಣಾ ಚ ನ ಸ್ಯಾತ್ ತನಯಾರ್ತಿಮಾನಿತಿ ॥೯॥

ಭೀಮನೊಬ್ಬನು ಹೊರತು ಎಲ್ಲ ಪಾಂಡವರೂ ಪತ್ನೀ ಸಮೇತರಾಗಿ ಸತತವಾಗಿ ಪರಮಾದರದಿಂದ ಪತ್ನೀ ಸಹಿತನಾದ ಧೃತರಾಷ್ಟ್ರನನ್ನು ಉಪಚರಿಸಿದರು. ಅವನು ಪುತ್ರಶೋಕದಿಂದ ಪೀಡಿತನಾಗದಿರಲೆಂದು ದ್ರೌಪದಿಯೂ ಉಪಚರಿಸಿದಳು.

ದ್ರೌಪದಿ ಧೃತರಾಷ್ಟ್ರನನ್ನು ಬಹಳವಾಗಿ ಉಪಚರಿಸಿದುದು ಅವನು ಪುತ್ರಶೋಕಪೀಡಿತನಾಗಿ ಪುತ್ರರನ್ನು ವಧಿಸಿದ ಭೀಮನಲ್ಲಿ ದ್ವೇಷ ಮಾಡಿ ಪಾಪ ಕಟ್ಟಿಕೊಳ್ಳದಿರಲಿ ಎಂದು ಕರುಣೆಯಿಂದ ಅವನ ಪುತ್ರಶೋಕವನ್ನು ಮರೆಸುವ ಉದ್ದೇಶದಿಂದಲೆ ಕೂಡಿತ್ತು. ಅದರಿಂದ ಭೀಮನಿಗೆ ವಿರೋಧ

ಮಾಡಿದಂತಾಗಲಿಲ್ಲ. ಧೃತರಾಷ್ಟ್ರನ ಹಿತಸಾಧನೆಯೆ ಇಬ್ಬರಿಗೂ ಅಪೇಕ್ಷಿತ ವಾಗಿತ್ತು.

ಸ ಪ್ರೀಯಮಾಣೋ ನಿತರಾಂ ಚ ತೇಷು
ನೈವಾಧಿಕಂ ಪ್ರೀಯತೇ ಭೀಮಸೇನೇ ।
ಸ್ಮರನ್ ಸುತಾಂಸ್ತೇನ ಹತಾನ್ ಸಮಸ್ತಾ-
ನಪಿ ಪ್ರಭಾವಂ ಪರಮಸ್ಯ ಜಾನನ್ ॥೧೦॥

ಧೃತರಾಷ್ಟ್ರ ಭೀಮನ ಮಹಾಬಲವನ್ನು ಅರಿತವನಾಗಿದ್ದರೂ ಬೇರೆ ಪಾಂಡವರಲ್ಲಿ ಬಹಳ ಪ್ರೀತಿ ಮಾಡುವಾಗಲೂ ಭೀಮಸೇನನಲ್ಲಿ ಹೆಚ್ಚು ಪ್ರೀತಿ ಮಾಡಲಿಲ್ಲ. ಅವನು ತನ್ನೆಲ್ಲ ಮಕ್ಕಳನ್ನು ಕೊಂದುದನ್ನೇ ನೆನೆಯುತ್ತಿದ್ದ.

ಧೃತರಾಷ್ಟ್ರ ಅರ್ಜುನಾದಿಗಳ ಪರಾಕ್ರಮವನ್ನು ಮೆಚ್ಚಿ ಹೊಗಳಿದರೂ ಭೀಮನ ಅಪಾರಶಕ್ತಿಯ ಬಗ್ಗೆ ಮೆಚ್ಚಿಕೆಯ ನುಡಿ ನುಡಿಯುತ್ತಿರಲಿಲ್ಲ. ಅವನು ತನ್ನ ಮಕ್ಕಳನ್ನು ಕೊಂದುದನ್ನು ಮರೆಯಲಿಲ್ಲ.

ತಸ್ಯಾಪನೇತುಂ ವಿಷಯೇಷು ಸಕ್ತಿಂ
ದ್ವೇಷಂ ತಥೈವಾಕೃನಿ ಭೀಮಸೇನಃ ।
ಜಗಾದ ಮಾದ್ರೀಸುತಯೋಃ ಸಮಕ್ಷ-
ಮಾಸ್ಫೋಟ್ಯ ಸಂಶೃಣ್ವತ ಏವ ತಸ್ಯ ॥೧೧॥

ಭೀಮಸೇನ ಧೃತರಾಷ್ಟ್ರನಿಗೆ ವಿಷಯ ಭೋಗದಲ್ಲಿ ಆಸಕ್ತಿಯನ್ನೂ ತನ್ನಲ್ಲಿ ದ್ವೇಷವನ್ನು ಕಳೆಯುವುದಕ್ಕಾಗಿ ನಕುಲ ಸಹದೇವರ ಸಮಕ್ಷಮದಲ್ಲಿ ಧೃತರಾಷ್ಟ್ರ ಕೇಳುವಂತೆ ಭುಜ ತಟ್ಟಿಕೊಂಡು ಹೇಳಿದ.

[1]ವೈರಾಗ್ಯ ಬಂದಮೇಲೆ ತಪಸ್ಸಿನಲ್ಲಿ ನಿರತನಾದಾಗ ಧೃತರಾಷ್ಟ್ರ ತನಗೆ ಈ ಒಳ್ಳೆಯ ವೈರಾಗ್ಯ ಬುದ್ಧಿ ಭೀಮನ ಪ್ರೇರಣೆಯಿಂದಲೆ ಬಂದಿತೆಂದು ಅರಿತು ಕೊಳ್ಳುತ್ತಾನೆ. ದ್ವೇಷಭಾವನೆಯನ್ನು ಬಿಡುತ್ತಾನೆ ಎಂದು ಭೀಮನ ಆಶಯ.

ತಾವಿಮೌ ಮೇ ಭುಜೌ ವೃತ್ತೌ ಪೀನೌ ಚಂದನರೂಷಿತೌ ।
ಯಯೋರಂತರಮಾಸಾದ್ಯ ಜರಠಸ್ಯ ಸುತಾ ಹತಾಃ ॥೧೨॥

'ದುಂಡಾಗಿ ಪುಷ್ಟವಾಗಿ ಶ್ರೀಗಂಧಲೇಪಯುಕ್ತವಾದ ಈ ನನ್ನ ಭುಜಗಳ ನಡುವೆ ಸಿಲುಕಿಯೆ ಈ ಮುದುಕನ ಮಕ್ಕಳೆಲ್ಲ ಹತರಾದರು' ಎಂದು.

---

1. ಉತ್ಪನ್ನ ವೈರಾಗ್ಯಸ್ಯ ಧೃತರಾಷ್ಟ್ರಸ್ಯ ತಪಸ್ಯವಸ್ಥಾನದಶಾಯಾಂ ಭೀಮಪ್ರೇರಣಯಾ ಮಮೇಯಂ ಸುಬುದ್ಧಿರಾಸೀತ್ ಇತಿ ಸ್ವಸ್ಮಿನ್ ದ್ವೇಷೋಽಪಿ ಕ್ರಮೇಣ ಗಮಿಷ್ಯತೀತಿ ಭಾವೇನ ದ್ವೇಷಮಪನೇತುಮಿತ್ಯುಕ್ತಂ। -ವಾದಿರಾಜೀಯ

ಯಮೌ ತದನ್ವಮೋದೇತಾಂ ತತ್ಸ್ನೇಹಾದ್ ಗೌರವಾದಪಿ ।
ನೈವ ತತ್ ಕೃಷ್ಣಯಾ ಜ್ಞಾತಂ ಪೃಥಯಾ ಚ ಸಪುತ್ರಯಾ ॥೧೩॥
ತಚ್ಛ್ರುತ್ವೋತ್ವನ್ನನಿರ್ವೇದಂ ಕ್ಷತ್ತಾ ಜ್ಯೇಷ್ಠಸ್ಯ ವರ್ಧಯನ್ ।
ಉವಾಚ ಜೀವಿತಾಶಾ ತೇ ನನು ರಾಜನ್ ಗರೀಯಸೀ ॥೧೪॥

ನಕುಲ ಸಹದೇವರು ಭೀಮನ ಮಾತನ್ನು ಒಪ್ಪಿದರು. ಆದರೆ ಧೃತರಾಷ್ಟ್ರನ ಮೇಲಿನ ಪ್ರೀತಿಯಿಂದಲೂ ಗೌರವದಿಂದಲೂ ಏನೂ ಹೇಳಲಿಲ್ಲ. ಈ ಸಂಗತಿ ದ್ರೌಪದಿಗಾಗಲಿ ಕುಂತಿಗಾಗಲಿ ಧರ್ಮರಾಜ ಅರ್ಜುನರಿಗಾಗಲಿ ತಿಳಿಯಲಿಲ್ಲ. ಭೀಮನ ಈ ಮಾತನ್ನು ಕೇಳಿ ಧೃತರಾಷ್ಟ್ರನಿಗೆ ವೈರಾಗ್ಯ ಮೂಡಿತು. ಆ ವೈರಾಗ್ಯವನ್ನು ಹೆಚ್ಚಿಸಲು ವಿದುರ ಅವನಿಗೆ ಹೇಳಿದ. 'ರಾಜನೆ, ನಿನಗೆ ಬದುಕುವಾಸೆ ಅತಿಯಾಗಿದೆ.

ಅಹೋ ಗರೀಯಸೀ ಜಂತೋರ್ಜೀವಿತಾಶಾ ಯಯಾ ಭವಾನ್ ।
ಭೀಮಾಪವರ್ಜಿತಂ ಪಿಂಡಮಾದತ್ತೇ ಗೃಹಪಾಲವತ್ ॥೧೫॥

'ಆಶ್ಚರ್ಯ! ಜಂತುವಿಗೆ ಬದುಕುವಾಸೆ ದೊಡ್ಡದು. ಅದರಿಂದಲೇ ನೀನು ಭೀಮನೆಸೆವ ಅನ್ನದ ಪಿಂಡವನ್ನು ಮನೆ ಕಾಯುವ ನಾಯಿಯಂತೆ ಉಣ್ಣುತ್ತಿ!'

'ಭಾಗವತ (೧.೧೩.೨೩) ದಲ್ಲಿ ಬರುವ ಈ ಶ್ಲೋಕ ನಿರ್ಣಯದಲ್ಲಿ ಪ್ರಕ್ಷಿಪ್ತ ಎಂದು ಕೆಲವರು ಹೇಳುತ್ತಾರೆ. ಹಾಗಿದ್ದರೂ ಶ್ರೀಮದಾಚಾರ್ಯರ ವಚನಗಂಗೆಯಲ್ಲಿ ಸೇರಿದ ಸಣ್ಣ ತೊರೆಯಂತೆ ಗ್ರಾಹ್ಯವೆ' ಎಂದು ಜನಾರ್ದನೀಯ ಅಭಿಪ್ರಾಯಪಡುತ್ತದೆ.

ನ ಚಾಪರಾಧ್ಯೋ ಭೀಮಸ್ಯ ಬ್ರುವತಸ್ತ್ವಾಮಿದಂ ವಚಃ ।
ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ ॥೧೬॥
ಹೃತಂ ಕ್ಷೇತ್ರಂ ಧನಂ ಯಸ್ಯ ಕಿಂ ಭೀಮೇನ ಕೃತಂ ತ್ವಯಿ ।
ಅಲಮಾಸಜ್ಜತಸ್ತೇಽದ್ಯ ನಿರ್ವೇದಕರಮೀರಿತಮ್ ॥೧೭॥
ಉಪಕಾರಾಯ ಭೀಮೇನ ತವ ದ್ವೇಷಂ ತ್ಯಜಾತ್ರ ತತ್ ।
ವಿಮುಚ್ಯ ದ್ವೇಷಕಾಮೌ ತ್ವಂ ವನೇ ತೀರ್ಥನಿಷೇವಕಃ ॥೧೮॥
ತಪಸಾಕಾರಾಧಯ ಹರಿಂ ತತಃ ಪೂತೋ ಭವಿಷ್ಯಸಿ ।
ಇತ್ಯುಕ್ತೋ ದ್ವೇಷಮುತ್ಸೃಜ್ಯ ಭೀಮೇ ನಿರ್ವೇದಮಾಗತಃ ॥೧೯॥

ಭೀಮ ನಿನಗೆ ಈ ಮಾತನ್ನು ಹೇಳಿದರೂ ಅವನದೇನೂ ತಪ್ಪಿಲ್ಲ. ನಿನ್ನ ಮಕ್ಕಳು ಅವನಿಗೆ ಬೆಂಕಿ ಹಚ್ಚಿದ್ದಾರೆ. ವಿಷವಿಕ್ಕಿದ್ದಾರೆ. ಹೆಂಡತಿಯನ್ನು ಅವಮಾನಿಸಿದ್ದಾರೆ. ಭೂಮಿ ಧನಗಳನ್ನು ಅಪಹರಿಸಿದ್ದಾರೆ. ಇದನ್ನೆಲ್ಲ ಮಾಡಿಸಿದ ನಿನಗೆ ಪ್ರತಿಯಾಗಿ ಭೀಮ ಏನು ಅಪಕಾರ ಮಾಡಿದ್ದಾನೆ? ಅತಿಯಾಗಿ ವಿಷಯಾಸಕ್ತನಾದ ನಿನಗೆ ಇಂದು ಉಪಕಾರಕ್ಕಾಗಿ ವೈರಾಗ್ಯ

ಉಂಟುಮಾಡುವ ಮಾತನ್ನಾಡಿದ್ದಾನೆ. ಅದರಿಂದ ನೀನು ಭೀಮನಲ್ಲಿ ದ್ವೇಷಭಾವನೆಯನ್ನು ಬಿಟ್ಟುಬಿಡು. ರಾಗದ್ವೇಷಗಳನ್ನು ತ್ಯಜಿಸಿ ಅರಣ್ಯದಲ್ಲಿ ತೀರ್ಥಗಳನ್ನು ಸೇವಿಸುತ್ತ ತಪಸ್ಸಿನಿಂದ ಹರಿಯನ್ನು ಆರಾಧಿಸು. ಆಗ ನೀನು ಪಾಪಮುಕ್ತನಾಗುವಿ. ಹೀಗೆ ವಿದುರ ಹೇಳಿದಾಗ ಧೃತರಾಷ್ಟ್ರ ಭೀಮನಲ್ಲಿ ದ್ವೇಷವನ್ನು ಬಿಟ್ಟು ವೈರಾಗ್ಯ ಹೊಂದಿದ.

ಅನುಜ್ಞಾಂ ತಪಸೇ ಪ್ರಾಪ್ತುಮುಪವಾಸಪರೋಽಭವತ್ ।
ಅನಶ್ನಂತಂ ಚತುರ್ಥೇಽಹ್ನಿ ಧೃತರಾಷ್ಟ್ರಂ ಯುಧಿಷ್ಠಿರಃ ॥ ೨೦ ॥
ಜ್ಞಾತ್ವಾ ಸಂಪ್ರಾರ್ಥಯಾಮಾಸ ಭೋಜನಾರ್ಥಂ ಪುನಃ ಪುನಃ ।
ಅನುಜ್ಞಾಂ ವನವಾಸಾಯ ತ್ವತ್ತಃ ಪ್ರಾಪ್ಯೈವ ಸರ್ವಥಾ ॥ ೨೧ ॥
ಭೋಕ್ಷ್ಯೇಽನ್ಯಥಾ ನೇತಿ ವದನ್ ಧೃತರಾಷ್ಟ್ರಃ ಶ್ರಮಾನ್ವಿತಃ ।
ಉಪವಾಸಕೃಶೋ ಭಾರ್ಯಾಂ ಶಿಶ್ರಿಯೇ ಮೂರ್ಛಿತಃ ಕ್ಷಣಾತ್ ॥ ೨೨ ॥

ಧೃತರಾಷ್ಟ್ರ ತಪಸ್ಸಿಗೆ ಧರ್ಮರಾಜನಿಂದ ಅನುಜ್ಞೆ ಪಡೆಯಲು ಉಪವಾಸ ಮಾಡತೊಡಗಿದ. ನಾಲ್ಕನೆ ದಿನ ಧೃತರಾಷ್ಟ್ರ ಉಣದಿದ್ದುದನ್ನು ತಿಳಿದು ಯುಧಿಷ್ಠಿರ ಭೋಜನಕ್ಕಾಗಿ ಪುನಃ ಪುನಃ ಪ್ರಾರ್ಥಿಸಿದ. ವನವಾಸಕ್ಕೆ ಒಪ್ಪಿಗೆಯನ್ನು ನಿನ್ನಿಂದ ಪಡೆದೇ ನಾನು ಉಣ್ಣುವೆನು. ಇಲ್ಲದಿದ್ದರೆ ಸರ್ವಥಾ ಇಲ್ಲ ಎನ್ನುತ್ತ, ಉಪವಾಸದಿಂದ ಸೊರಗಿ ಆಯಾಸಗೊಂಡಿದ್ದ ಧೃತರಾಷ್ಟ್ರ ಗಾಂಧಾರಿಯನ್ನು ಆಶ್ರಯಿಸಿದ. ಕ್ಷಣದಲ್ಲಿ ಮೂರ್ಛಿತನಾದ.

ಶಂತಮೇನ ಕರೇಣಾಥ ಧರ್ಮಜಸ್ತಂ ಮೃದು ಸ್ಪೃಶನ್ ।
ಶನೈಃ ಸಂಜ್ಞಾಮಗಮಯದಬ್ರವೀಚ್ಚ ಸುದುಃಖಿತಃ ॥ ೨೩ ॥

ಧರ್ಮರಾಜ ಅತ್ಯಂತ ಸುಖಕರವಾದ ಕೈಯಿಂದ ಧೃತರಾಷ್ಟ್ರನನ್ನು ಮೃದುವಾಗಿ ಸ್ಪರ್ಶಿಸಿ ಮೆಲ್ಲಗೆ ಎಚ್ಚರಗೊಳಿಸಿದ. ಬಹಳ ದುಃಖಿತನಾಗಿ ನುಡಿದ.

ಪುರಸ್ಕೃತ್ಯ ಯುಯುತ್ಸುಂ ತ್ವಂ ಕುರು ರಾಜ್ಯಮಕಂಟಕಮ್ ।
ವಯಮೇವ ತ್ವದರ್ಥಾಯ ಕುರ್ಮಃ ಸರ್ವೇ ತಪೋ ವನೇ ॥ ೨೪ ॥

'ಯುಯುತ್ಸುವನ್ನು ಮುಂದೆ ಮಾಡಿಕೊಂಡು ನೀನು ನಿಷ್ಕಂಟಕವಾಗಿ ರಾಜ್ಯವಾಳು. ನಾವೆ ಎಲ್ಲರೂ ನಿನಗಾಗಿ ಕಾಡಿನಲ್ಲಿ ತಪಸ್ಸು ಮಾಡುವೆವು'.

ನೇತ್ಯಾಹ ಧೃತರಾಷ್ಟ್ರಸ್ತಂ ಕುಲಧರ್ಮೋ ಹಿ ನೋ ವನೇ ।
ಅಂತೇ ದೇಹಪರಿತ್ಯಾಗಸ್ತನ್ಮಾಽನುಜ್ಞಾತುಮರ್ಹಸಿ ॥ ೨೫ ॥

'ಬೇಡ' ಎಂದ ಧೃತರಾಷ್ಟ್ರ. 'ಅಂತ್ಯಕಾಲದಲ್ಲಿ ಕಾಡಿನಲ್ಲಿ ದೇಹ ಪರಿತ್ಯಾಗ ಮಾಡುವುದು ನಮಗೆ ಕುಲಧರ್ಮ. ಅದಕ್ಕೆ ನನಗೆ ನೀನು ಒಪ್ಪಿಗೆ ನೀಡು' ಎಂದ.

ತಯೋರ್ವಿವದತೋರೇವಂ ಕೃಷ್ಣದ್ವೈಪಾಯನಃ ಪ್ರಭುಃ ।
ಸರ್ವಜ್ಞಃ ಸರ್ವಕರ್ತೇಶ ಆವಿರ್ಭೂತೋಽಬ್ರವೀನ್ನೃಪಮ್ ॥ ೨೬ ॥

ಹೀಗೆ ಧೃತರಾಷ್ಟ್ರ ಧರ್ಮರಾಜರು ವಿವಾದ ಮಾಡುತ್ತಿದ್ದಾಗ ಸರ್ವಜ್ಞ ಸರ್ವಕರ್ತ ಸರ್ವಸ್ವಾಮಿ ಪ್ರಭು ಶ್ರೀವೇದವ್ಯಾಸರು ಆವಿರ್ಭವಿಸಿ ಧರ್ಮರಾಜನಿಗೆ ಹೇಳಿದರು.

ತಪಸಾಕಶೇಷದೋಷಾಣಾಂ ಕ್ಷಯಕಾಮಮಿಮಂ ನೃಪಮ್ ।
ಅನುಜಾನೀಹಿ ನೈವಾಸ್ಯ ಧರ್ಮವಿಘ್ನಕರೋ ಭವ ॥೨೭॥

ತಪಸ್ಸಿನಿಂದ ಎಲ್ಲ ಪಾಪ ಪರಿಹರಿಸಿಕೊಳ್ಳಲು ಬಯಸುತ್ತಿರುವ ಧೃತರಾಷ್ಟ್ರನಿಗೆ ನೀನು ಒಪ್ಪಿಗೆ ನೀಡು. ಅವನ ಧರ್ಮಸಾಧನೆಗೆ ನೀನು ಅಡ್ಡ ಬರಬೇಡ.

ಕಾಲೇ ನಿರ್ವೇದಮಾಪನ್ನಸ್ತಪಸಾ ದಗ್ಧಕಿಲ್ಬಿಷಃ ।
ಶುಭಾಂ ಗತಿಮಯಂ ಯಾಯಾದನ್ಯಥಾ ನ ಕಥಂಚನ ॥೨೮॥

ಯೋಗ್ಯಕಾಲದಲ್ಲಿ ವೈರಾಗ್ಯಹೊಂದಿ ತಪಸ್ಸಿನಿಂದ ಪಾಪಗಳನ್ನು ಸುಟ್ಟುಕೊಂಡರೆ ಮಾತ್ರ ಈತ ಸದ್ಗತಿಯನ್ನು ಪಡೆಯುತ್ತಾನೆ. ಇಲ್ಲದಿದ್ದರೆ ಸರ್ವಥಾ ಇಲ್ಲ.

ಪಾಪಿಗಳಿಗೇಕೆ ಶ್ರಾದ್ಧ ?

ಇತ್ಯುಕ್ತೋ ಧರ್ಮರಾಜಸ್ತಮನುಜಜ್ಞೇ ಸ ಚಾಶಿತಃ ।
ಶಿಕ್ಷಯಾಮಾಸ ಸದ್ಧರ್ಮಾನ್ ನೀತಿಂ ಚ ವಿದುಷೇಕಪ್ಯಲಮ್ ॥೨೯॥
ಕೇವಲಸ್ನೇಹತೋ ರಾಜ್ಞೇ ಶುಶ್ರಾವ ವಿನಯಾತ್ ಸ ಚ ।
ಅನುಜ್ಞಾಯ ಗೃಹಂ ಪ್ರಾಪ್ತೇ ಧರ್ಮಜೇ ವಿದುರಂ ಪುನಃ ॥೩೦॥
ಶ್ರಾದ್ಧಾಯ ವಿತ್ತಮಾಕಾಂಕ್ಷನ್ ಪ್ರೇಷಯಾಮಾಸ ತದ್ವಚಃ ।
ಶ್ರುತ್ವಾ ಯುಧಿಷ್ಠಿರೋ ಭೀಮಮಾಹ ದಾತವ್ಯಮದ್ಯ ನಃ ॥೩೧॥
ಪುತ್ರಪೌತ್ರಾಪ್ತಬಂಧೂನಾಂ ಶ್ರಾದ್ಧೇಚ್ಛೋರ್ವಿತ್ತಮಂಜಸಾ ।
ತಮಾಹ ಭೀಮಃ ಪಾಪಾನಾಂ ವಿಮುಖಾನಾಂ ಮಧುದ್ವಿಷಃ ।
ಪಾರಲೌಕಿಕಸಾಹಾಯ್ಯಂ ನ ಕಾರ್ಯಮಿತರಾರ್ಥತಃ ॥೩೨॥
ದತ್ತೇನಾಪಿ ಹಿ ವಿತ್ತೇನ ಪುತ್ರಶ್ರಾದ್ಧಂ ಕರಿಷ್ಯತಿ ।
ತಜ್ಜ್ಞಾತ್ವಾ ದದತಾಂ ದೋಷೋ ಭವೇದಿತಿ ವಿಚಿಂತಯನ್ ॥೩೩॥

ಶ್ರೀವೇದವ್ಯಾಸರು ಹೀಗೆ ಹೇಳಿದಾಗ ಧರ್ಮರಾಜ ಧೃತರಾಷ್ಟ್ರನಿಗೆ ಒಪ್ಪಿಗೆಯಿತ್ತ. ಧೃತರಾಷ್ಟ್ರ ಭೋಜನ ಮಾಡಿದ. ಧರ್ಮರಾಜ ತಿಳಿದವನೇ ಆದರೂ ಕೇವಲ ಪ್ರೀತಿಯಿಂದ ರಾಜಾ ಧೃತರಾಷ್ಟ್ರ ಅವನಿಗೆ ಸದ್ಧರ್ಮಗಳನ್ನೂ ನೀತಿಯನ್ನೂ ಉಪದೇಶಿಸಿದ. ಅವನೂ ವಿನಯದಿಂದ ಅದನ್ನು ಕೇಳಿದ. ಬಳಿಕ ವನವಾಸಕ್ಕೆ ಒಪ್ಪಿಗೆ ಕೊಟ್ಟು ಧರ್ಮರಾಜ ತನ್ನ ಅರಮನೆಗೆ ಹಿಂತಿರುಗಿದಾಗ ಧೃತರಾಷ್ಟ್ರ ಮಕ್ಕಳಿಗೆ ಶ್ರಾದ್ಧ ಮಾಡುವುದಕ್ಕಾಗಿ ಹಣವನ್ನು ಬಯಸಿ ವಿದುರನನ್ನು ಕಳಿಸಿಕೊಟ್ಟ. ಧರ್ಮರಾಜ ಅವನ ಮಾತನ್ನು ಕೇಳಿ ಭೀಮನಿಗೆ ಹೇಳಿದ. 'ಪುತ್ರ ಪೌತ್ರರಿಗೂ ಆಪ್ತರಿಗೂ ಬಂಧುಗಳಿಗೂ ಶ್ರಾದ್ಧ ಮಾಡಬಯಸುವ ಧೃತರಾಷ್ಟ್ರನಿಗೆ ನಾವು

ಇಂದು ಹಣ ಕೊಡಬೇಕು.' ಭೀಮ ಆಲೋಚಿಸಿದ, 'ಪಾಪಿಷ್ಠರೂ ಕೃಷ್ಣ ದ್ವೇಷಿಗಳೂ ಆದ ಕೌರವರಿಗೆ ಪಾರಲೌಕಿಕ ಸಹಾಯವನ್ನು ಮಾಡಕೂಡದು. ಭೀಷ್ಮಾದಿ ಬೇರೆ ಬಂಧುಗಳಿಗಾಗಿ ಧೃತರಾಷ್ಟ್ರನಿಗೆ ಹಣಕೊಟ್ಟರೂ ಅದರಿಂದ ಅವನು ಮಕ್ಕಳಿಗೆ ಶ್ರಾದ್ಧ ಮಾಡುವನು. ಅದನ್ನು ತಿಳಿದೂ ನಾವು ಹಣಕೊಟ್ಟರೆ ನಮಗೇ ಪಾಪಬರುತ್ತದೆ'. ಹೀಗೆ ಆಲೋಚಿಸಿ ಭೀಮ ನುಡಿದ.

ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ।
ಭೀಷ್ಮಾದೀನಾಂ ವಯಂ ಶ್ರಾದ್ಧಕರ್ತಾರಸ್ತೇನ ಕಿಂ ತತಃ ॥೩೪॥

'ದುರ್ಯೋಧನ ಮುಂತಾದವರು ಎಲ್ಲರೂ ಕಷ್ಟಕ್ಕಿಂತ ಅಧಿಕ ಕಷ್ಟಕರವಾದ ದುರ್ಗತಿಯನ್ನೇ ಹೊಂದಲಿ. ಭೀಷ್ಮ ಮುಂತಾದವರಿಗೆ ನಾವು ಶ್ರಾದ್ಧ ಮಾಡುವೆವು. ಅದಕ್ಕಾಗಿ ನಾವು ಧೃತರಾಷ್ಟ್ರನಿಗೆ ಹಣಕೊಟ್ಟು ಏನು ಪ್ರಯೋಜನ?

ಧೃತರಾಷ್ಟ್ರನಿಗೆ ಹಣಕೊಟ್ಟು ದುರ್ಯೋಧನಾದಿಗಳಿಗೆ ಶ್ರಾದ್ಧ ಮಾಡಿಸಿದರೆ ಅವರಿಗೆ ಪರಲೋಕದಲ್ಲಿ ಸುಖವಾದೀತು. ಪಾಪಿಗಳಿಗೆ ಪರಲೋಕ ಸುಖ ಸಿಗಬಾರದು. ಹಣಕೊಡದಿದ್ದರೆ ಭೀಷ್ಮಾದಿ ಸಜ್ಜನರಿಗೆ ಶ್ರಾದ್ಧವಿಲ್ಲದಂತಾಗಿ ಅವರಿಗೆ ಪರಲೋಕದಲ್ಲಿ ದುಃಖವಾದೀತೆಂದು ಚಿಂತಿಸಬೇಕಾಗಿಲ್ಲ. ಅವರಿಗೆ ನಾವು ಶ್ರಾದ್ಧ ಮಾಡುತ್ತೇವೆ. ಭೀಷ್ಮಾದಿಗಳಿಗೆ ಎಂದು ಹಣ ನೀಡಿದರೆ ಧೃತರಾಷ್ಟ್ರ ಅಂಧ ಪ್ರೇಮದಿಂದ ದುರ್ಯೋಧನಾದಿಗಳಿಗೆ ಶ್ರಾದ್ಧ ಮಾಡುತ್ತಾನೆ. ಅದರಿಂದ ಹಣ ಕೊಡಕೂಡದು.

ಕಾನೀನತ್ವಾತ್ತು ಕರ್ಣಸ್ಯ ಸಹಾಸ್ಮಾಭಿಃ ಪೃಥೈವ ಹಿ ।
ಶ್ರಾದ್ಧಕರ್ಮಣ್ಯಧಿಕೃತಾ ಕಿಂ ತಸ್ಮೈ ದೀಯತೇ ಧನಮ್ ॥೩೫॥

ಕರ್ಣ ಕನ್ಯಾಪುತ್ರನಾದ್ದರಿಂದ ಅವನಿಗೆ ನಮ್ಮೊಂದಿಗೆ ಕುಂತಿಯೆ ಶ್ರಾದ್ಧ ಮಾಡುವಲ್ಲಿ ಅಧಿಕಾರ ಹೊಂದಿರುತ್ತಾಳೆ. ಅವನಿಗೆ ಶ್ರಾದ್ಧ ಮಾಡಲು ಧೃತರಾಷ್ಟ್ರನಿಗೆ ಏಕೆ ಹಣ ನೀಡಬೇಕು?

ಕುಂತೀ ಕರ್ಣಾಯ ದಾಸ್ಯತಿ (ಆಶ್ರಮ ೧೧.೮) ಎಂದು ಭಾರತ ಹೇಳುವಂತೆ, ವಿವಾಹಕ್ಕಿಂತ ಮೊದಲು ಕುಂತಿಯಲ್ಲಿ ಕರ್ಣ ಹುಟ್ಟಿದ್ದರಿಂದ ಕುಂತಿಗೆ ಶ್ರಾದ್ಧಾಧಿಕಾರವಿದೆ. ಅನಂತರ ಹುಟ್ಟಿದ್ದರೆ ನಮಗೆ ಅಧಿಕಾರ. ಅಂತೂ ನಮ್ಮೊಂದಿಗೆ ಕುಂತಿಗೇ ಶ್ರಾದ್ಧಾಧಿಕಾರವಿರುವಾಗ ಧೃತರಾಷ್ಟ್ರನೇಕೆ ಅದಕ್ಕೆ ಹಣ ಪಡೆಯಬೇಕು.[1]

---

1. ಪಾಂಡೋರ್ವಿವಾಹಾನಂತರಂ ಜಾತತ್ವೇ ಅಸ್ಮಾಕಮಗ್ರಜೋ ಭವಿಷ್ಯತಿ। ತದಾಸ್ಮಾಭಿಃ ಶ್ರಾದ್ಧಂ ದೇಯಂ। ಕನ್ಯಾದಶಾಯಾಮೇವ ಜಾತತ್ವಾತ್ ಪ್ರಸವಿತ್ರ್ಯಾ ಕುಂತ್ಯೈವ ದಾತವ್ಯಂ। ಇತಿ ಭಾವೇನ ಕಾನೀನತ್ವಾದಿತ್ಯುಕ್ತಂ। -ವಾದಿರಾಜೀಯ

ಇತ್ಯುಕ್ತವಂತಂ ನೃಪತಿರರ್ಜುನಶ್ಚೋಚತುಃ ಪುನಃ ।
ಯಿಯಾಸೋರ್ಯಾಚಮಾನಸ್ಯ ನಿಜಬಾಹುಬಲಾರ್ಜಿತಮ್ ॥೩೬॥
ದೇಹಿ ವಿತ್ತಂ ಪರಮತಃ ಕಿಂ ತ್ವಾಮೇಷೋಽಭಿಯಾಚತೇ ।
ಇತ್ಯುಕ್ತಮಪಿ ನೇತ್ಯೇವ ಬ್ರುವಾಣಂ ಶುದ್ಧಧಾರ್ಮಿಕಮ್ ॥೩೭॥
ಅಪ್ರೀತ್ಯಾ ಜೋಷಮಾಸ್ಸ್ವೇತಿ ಪ್ರೋಚ್ಯೋವಾಚ ಯುಧಿಷ್ಠಿರಃ ।
ಕೋಶತೋ ಯದ್ ಬಹಿರ್ವಿತ್ತಂ ದಾನಭೋಗಾದಿಕಾರಣಮ್ ॥೩೮॥
ಮಮ ಸನ್ನಿಹಿತಂ ಸರ್ವಂ ತತ್ ಪಿತ್ರೇ ಚಾರ್ಪಿತಂ ಮಯಾ ।
ಏವಮೇವಾರ್ಜುನೋಽಪ್ಯಾಹ ವಿದುರಂ ಪುನರೂಚತುಃ ॥೩೯॥
ಮುಖ್ಯಧರ್ಮರತೇ ಭೀಮೇ ನ ಪಿತಾ ಕ್ರೋದ್ಧುಮರ್ಹತಿ ॥೪೦॥

ಭೀಮ ಹೀಗೆ ಹೇಳಿದಾಗ ಧರ್ಮರಾಜನೂ ಅರ್ಜುನನೂ ಪುನಃ ಹೇಳಿದರು. 'ಧೃತರಾಷ್ಟ್ರ ವನವಾಸಕ್ಕೆ ಹೋಗಲು ಬಯಸಿ ಶ್ರಾದ್ಧಕ್ಕೆ ಹಣವನ್ನು ಕೇಳುತ್ತಿರುವಾಗ ಅವನ ಬಾಹುಬಲದಿಂದ ಆರ್ಜಿತವಾದ ಹಣವನ್ನೆ ಅವನಿಗೆ ಕೊಡು. ಇನ್ನುಮುಂದೆ ಅವನು ನಿನ್ನನ್ನು ಕೇಳುವನೆ?' ಹೀಗೆ ಹೇಳಿದರೂ ಶುದ್ಧ ಧಾರ್ಮಿಕನಾದ ಭೀಮ 'ಕೊಡಲಾರೆ' ಎಂದಾಗ ಧರ್ಮರಾಜ ಅಸಮಾಧಾನದಿಂದ 'ಹಾಗಾದರೆ ಸುಮ್ಮನಿರು' ಎಂದು ಹೇಳಿ ಪುನಃ ಹೇಳಿದ. 'ಕೋಶಕ್ಕೆ ಸೇರದೆ ಹೊರಗಿರುವ, ನನ್ನ ದಾನಭೋಗಾದಿಗಳಿಗೆ ಉಪಯುಕ್ತವಾದ ನನ್ನ ಬಳಿ ಇರುವ ಎಲ್ಲ ಹಣವನ್ನೂ ನಾನು ತಂದೆಯಾದ ಧೃತರಾಷ್ಟ್ರನಿಗೆ ಕೊಡುತ್ತೇನೆ.' ಇದೇರೀತಿ ಅರ್ಜುನನೂ ಹೇಳಿದ. ಬಳಿಕ ಇಬ್ಬರೂ ವಿದುರನಿಗೆ ಹೇಳಿದರು. 'ಮುಖ್ಯ ಧರ್ಮದಲ್ಲಿ ನಿರತನಾದ ಭೀಮನಲ್ಲಿ ತಂದೆ ಕೋಪಗೊಳ್ಳಬಾರದು.'

ನಮ್ಮ ಸಂಪಾದನೆಯನ್ನು ಕೊಟ್ಟರೆ ಅಧರ್ಮಕ್ಕೆ ಪ್ರೋತ್ಸಾಹವಾಗುವುದು. ಅವನ ಸಂಪಾದನೆಯನ್ನೇ ಕೊಟ್ಟರೂ ಅಧರ್ಮಕ್ಕೆ ಅನುಮತಿ ನೀಡಿದಂತಾಗುವುದು ಎಂದು ದುರ್ಯೋಧನಾದಿಗಳ ಶ್ರಾದ್ಧಕ್ಕೆ ಹಣ ನೀಡಲೊಲ್ಲ, ಭೀಮಸೇನ.

ಇತ್ಯುಕ್ತೋ ವಿತ್ತಮಾದಾಯ ಗತ್ವಾ ಕ್ಷತ್ತಾಽಗ್ರಜೇಽಬ್ರವೀತ್ ।
ಯುಧಿಷ್ಠಿರಾರ್ಜುನೌ ಭಕ್ತಿಂ ನಿತರಾಂ ತ್ವಯಿ ಚಕ್ರತುಃ ॥೪೧॥

ಯುಧಿಷ್ಠಿರ ಅರ್ಜುನರು ಹೀಗೆ ಹೇಳಿದಾಗ ವಿದುರ ಹಣವನ್ನು ತೆಗೆದುಕೊಂಡು ಹೋಗಿ ಧೃತರಾಷ್ಟ್ರನ ಬಳಿಯಲ್ಲಿ ಹೇಳಿದ, 'ಯುಧಿಷ್ಠಿರ ಅರ್ಜುನರು ನಿನ್ನಲ್ಲಿ ಬಹಳ ಭಕ್ತಿ ತೋರಿದರು.

ನಾತಿಹೃಷ್ಟಸ್ತ್ವದಾಜ್ಞಾಯಾಂ ಭೀಮಸ್ತನ್ಮಾ ಕ್ರುಧೋಽತ್ರ ಚ ।
ಶುದ್ಧೇ ಕ್ಷತ್ರಿಯಧರ್ಮೇ ಹಿ ನಿರತೋ ಯದ್ ವೃಕೋದರಃ ॥೪೨॥

'ನಿನ್ನಾಜ್ಞೆ ಪಾಲಿಸುವುದರಲ್ಲಿ ಭೀಮ ಹೆಚ್ಚು ಉತ್ಸಾಹ ತೋರುವುದಿಲ್ಲ. ಅವನು ಶುದ್ಧ ಕ್ಷತ್ರಿಯ ಧರ್ಮದಲ್ಲಿ ನಿರತನಾಗಿದ್ದಾನೆ. ಆದರಿಂದ ಅವನಲ್ಲಿ ಕೋಪ ಮಾಡಬೇಡ.

ಶುದ್ಧೇ ಕ್ಷತ್ರಿಯಧರ್ಮೇ ಹಿ ನಿರತೋಽಯಂ ವೃಕೋದರಃ।
ಎಂಬುದು ಮಹಾಭಾರತ ವಚನ.(ಆಶ್ರಮ ೧೩.೮)

ನೃಪಾರ್ಜುನೌ ಧರ್ಮರತಾವಪಿ ಲೋಕಕೃಪಾಪರೌ ।
ಅಜಾತಕೋಪಸ್ತಚ್ಛ್ರುತ್ವಾ ಧೃತರಾಷ್ಟ್ರಃ ಪ್ರಶಾಂತಧೀಃ ॥೪೩॥

'ಯುಧಿಷ್ಠಿರ ಅರ್ಜುನರೂ ಕ್ಷತ್ರಿಯ ಧರ್ಮದಲ್ಲಿ ನಿರತರೇ, ಆದರೆ ಅವರು ಲೋಕದ ಮೇಲೆ ಕೃಪೆ ಮಾಡುವವರು.' ವಿದುರ ಹೀಗೆ ಹೇಳಿದ್ದನ್ನು ಕೇಳಿ ಧೃತರಾಷ್ಟ್ರ ಶಾಂತ ಬುದ್ಧಿಯವನಾದ. ಅವನಲ್ಲಿ ಭೀಮನ ಬಗ್ಗೆ ಕೋಪ ಉಂಟಾಗಲಿಲ್ಲ.

ಕೃತ್ವಾ ಶ್ರಾದ್ಧಾನಿ ಸರ್ವೇಷಾಂ ಮಹಾದಾನಾನ್ಯನಾರತಮ್ ।
ದಶರಾತ್ರಂ ದದೌ ಶುದ್ಧಮನಸಾ ನಿರ್ಋಣತ್ವಧೀಃ ॥೪೪॥

ಪುತ್ರರ ಋಣ ಪರಿಹಾರವಾಗಲಿ ಎಂಬ ಅಭಿಪ್ರಾಯ ಉಳ್ಳ ಧೃತರಾಷ್ಟ್ರ ಶುದ್ಧ ಮನಸ್ಸಿನಿಂದ ಎಲ್ಲರಿಗೂ ಶ್ರಾದ್ಧಮಾಡಿ ಹತ್ತು ದಿನಗಳ ಕಾಲ ನಿರಂತರವಾಗಿ ಮಹಾದಾನಗಳನ್ನು ನೀಡಿದ.

[1]ಪಾಪಿಷ್ಠರಾದ ಪುತ್ರರ ಋಣಪರಿಹಾರವಾಗಲಿ. ಆದರಿಂದ ಮುಂದೆ ಅವರ ಸಂಬಂಧ ತನಗಾಗದಿರಲಿ ಎಂಬ ಶುದ್ಧ ಮನಸ್ಸಿನಿಂದ, ಪುತ್ರಮೋಹದಿಂದ ಮುಕ್ತವಾದ ನಿರ್ಮಲ ಮನಸ್ಸಿನಿಂದ ದುರ್ಯೋಧನಾದಿಗಳಿಗೆ ಧೃತರಾಷ್ಟ್ರ ಶ್ರಾದ್ಧಮಾಡಿದನೆಂದು ಮಹಾಭಾರತದ ಈ ವಚನ ಸೂಚಿಸುತ್ತಿದೆ-

ಬಭೂವ ಪುತ್ರಪೌತ್ರಾಣಾಮನೃಣೋ ಭರತರ್ಷಭ।
(ಆಶ್ರಮ ೧೪.೧೮)

ಆಶ್ರಮ ವಾಸ

ಸರ್ವಂ ಸಮರ್ಪ್ಯ ಗೋವಿಂದೇ ಪಾರ್ಥೇಭ್ಯೋಽನ್ಯೇಭ್ಯ ಏವ ಚ ।
ಸ್ವಜನೇಭ್ಯಃ ಸಮಾದಾಯ ಸ್ರವನ್ನೇತ್ರೇಭ್ಯ ಉಚ್ಚಧೀಃ ॥೪೫॥
ಅನುಜ್ಞಾಂ ನಿರ್ಗತಃ ಪ್ರಾಹ ಪೌರಜಾನಪದಾನ್ ನೃಪಃ ।
ಧರ್ಮತೋ ರಕ್ಷಿತಾ ಯೂಯಮಸ್ಮತ್ಪೂರ್ವೈರ್ಮಹಾತ್ಮಭಿಃ ॥೪೬॥
ನ ಚಾಹಂ ಪರಮಸ್ನೇಹಾದ್ ಯುಷ್ಮಾಭಿಃ ಸುಕೃಪಾಲುಭಿಃ ।
ಅರಕ್ಷಿತೇತಿ ಕಥಿತಃ ಪ್ರಮಾದಾದಪಿ ಸಜ್ಜನಾಃ ॥೪೭॥

ಉತ್ತಮ ಬುದ್ಧಿಉಳ್ಳ ಧೃತರಾಷ್ಟ್ರ ಎಲ್ಲ ಕರ್ಮವನ್ನೂ ಶ್ರೀಹರಿಗೆ ಸಮರ್ಪಿಸಿ, ಕಣ್ಣೀರು

1. ಪಾಪಿಷ್ಠಪುತ್ರಾಣಾಂ ಋಣಮೋಚನೇ ತತ್ಸಂಬಂಧಃ ಪುನರ್ನ ಸ್ಯಾದಿತಿ ಬುದ್ಧಿಮಾನಿತಿ ಭಾವಃ।
-ಜನಾರ್ದನೀಯ

ಸುರಿಸಿದ ಪಾಂಡವರಿಂದಲೂ ಬೇರೆ ಬಂಧುಗಳಿಂದಲೂ ಒಪ್ಪಿಗೆ ಪಡೆದು ಕಾಡಿಗೆ ಹೊರಟು ಪೌರರಿಗೂ ಗ್ರಾಮೀಣ ಜನರಿಗೂ ಹೇಳಿದ 'ಸಜ್ಜನರೆ! ಮಹಾತ್ಮರಾದ ನಮ್ಮ ಪೂರ್ವಿಕರು ನಿಮ್ಮನ್ನು ಧರ್ಮದಿಂದ ಕಾಪಾಡಿದರು. ನಾನು ಹಾಗೆ ಮಾಡಲಿಲ್ಲ. ಆದರೂ ಬಹಳ ಕೃಪಾಳುಗಳಾದ ನೀವು ಬಹಳ ಪ್ರೀತಿ ಇದ್ದ ಕಾರಣ, ತಪ್ಪಿಯೂ ಕೂಡ ನನ್ನನ್ನು ನಿಮ್ಮ ರಕ್ಷಕನಲ್ಲವೆಂದು ಹೇಳಲಿಲ್ಲ.

ಇಷ್ಟಂ ಚ ಯಜ್ಞೈಃ ಪೂರ್ತೈಶ್ಚ ಚರಿತಂ ಯುಷ್ಮದಾಶ್ರಯಾತ್ ।
ಪುತ್ರಸ್ತು ಮಮ ಪಾಪಾತ್ಮಾ ಸರ್ವಕ್ಷತ್ರವಿನಾಶಕಃ ॥ ೪೮ ॥
ಸರ್ವಾತಿಶಂಕೀ ಮೂಢಶ್ಚ ವೃದ್ಧಾನಾಂ ಶಾಸನಾತಿಗಃ ।
ಸೌಭ್ರಾತ್ರಂ ಯೇನ ಸಂತ್ಯಜ್ಯ ಪಾಂಡವೇಷು ಮಹಾತ್ಮಸು ।
ಕೃತಂ ವಿರೂಪಂ ಸುಮಹತ್ ಕುರ್ಯಾದ್ ಯನ್ನಾಪರಃ ಕ್ವಚಿತ್ ॥ ೪೯ ॥

ನಿಮ್ಮ ಆಶ್ರಯದಿಂದ ನಾನು ಯಾಗಗಳನ್ನು ನಡೆಸಿದೆ. ಜಲಾಶಯಾದಿಗಳನ್ನು ನಿರ್ಮಿಸಿದೆ. ನನ್ನ ಮಗನು ಮಾತ್ರ ಪಾಪಾತ್ಮ, ಸಕಲ ಕ್ಷತ್ರಿಯರ ನಾಶಕ್ಕೆ ಕಾರಣನಾದ. ಎಲ್ಲರಲ್ಲಿಯೂ ಸಂದೇಹಪಡುವವನು, ಮೂಢ, ಹಿರಿಯರ ಮಾತನ್ನು ಉಲ್ಲಂಘಿಸುವವ, ಅವನು ಮಹಾತ್ಮರಾದ ಪಾಂಡವರಲ್ಲಿ ಪ್ರೀತಿ ಮಾಡದೆ ಇನ್ನಾರೂ ಎಲ್ಲಿಯೂ ಮಾಡದಿದ್ದಂಥ ಮಹಾದ್ವೇಷವನ್ನೆ ಮಾಡಿದ.

ಅಪ್ರಿಯಾಣಿ ಚ ಕೃಷ್ಣಸ್ಯ ಸುಬಹೂನ್ಯಾಚರತ್ ಕುಧೀಃ ।
ಪ್ರಾಯಸ್ತೇನಾಪಿ ಮಂದೇನ ಯುಷ್ಮಾಸ್ವಪ್ಯಶಿವಂ ಕೃತಮ್ ॥ ೫೦ ॥
ಭ್ರಾತರೋಽಸ್ಯ ಚ ಸರ್ವೇಽಪಿ ತಚ್ಛೀಲಮನುವರ್ತಿನಃ
ಹತಾಶ್ಚ ಸ್ವೇನ ಪಾಪೇನ ಸಸುತಾಮಾತ್ಯಬಾಂಧವಾಃ ॥ ೫೧ ॥

ದುರ್ಬುದ್ಧಿಯಾದ ನನ್ನ ಮಗ ಕೃಷ್ಣನಿಗೆ ಅಪ್ರಿಯವಾದ ಬಹಳ ದುಷ್ಕರ್ಮಗಳನ್ನು ನಡೆಸಿದ. ಮೂರ್ಖನಾದ ಅವನು ನಿಮ್ಮಲ್ಲಿಯೂ ಬಹಳ ಕೆಟ್ಟದನ್ನು ಮಾಡಿರುತ್ತಾನೆ. ಅವನ ಸೋದರರು ಎಲ್ಲರೂ ಅವನ ಶೀಲವನ್ನೇ ಅನುಸರಿಸಿದವರು. ತಮ್ಮ ಪಾಪದಿಂದ ಮಕ್ಕಳು ಮಿತ್ರರು ಬಾಂಧವರೊಂದಿಗೆ ಹತರಾದರು.

ಮಹಾಭಾರತದಲ್ಲಿ ದುರ್ಯೋಧನ ಪ್ರಜೆಗಳಿಗೆ ಪೀಡೆ ಮಾಡಲಿಲ್ಲ ಎಂದು ಧೃತರಾಷ್ಟ್ರ ಪ್ರಜೆಗಳ ಮುಂದೆ ಹೇಳುವಂತೆ ಕಾಣುತ್ತದೆ-

ಅಪಿ ತತ್ರ ನ ವೋ ಮಂದೋ ದುರ್ಬುದ್ಧಿರಪರಾದ್ಧವಾನ್।
ತಸ್ಯಾಪರಾಧಾದ್ ದುರ್ಬುದ್ದೇರಭಿಮಾನಾನ್ಮಹೀಕ್ಷಿತಾಂ।
ವಿಮರ್ದಃ ಸುಮಹಾನಾಸೀತ್ ಅನಯಾತ್ ಸ್ವಕೃತಾದಥ
ಘಾತಿತಾಃ ಕೌರವೇಯಾಶ್ಚ ಪೃಥಿವೀ ಚ ವಿನಾಶಿತಾ॥

(ಆಶ್ರಮ ೯.೫)

ಇಲ್ಲಿ 'ನ ಅಪರಾದ್ಧವಾನ್' ಅಪರಾಧಮಾಡಿಲ್ಲ' ಎಂದು ಹೇಳಿದ್ದರೂ 'ನ ಅಪರಾದ್ಧವಾನ್?' 'ಅಪರಾಧ ಮಾಡಿಲ್ಲವೆ?' ಎಂದು ಪ್ರಶ್ನಾರ್ಥಕ ಚಿಹ್ನೆ ಹಾಕಿಕೊಳ್ಳಬಹುದು. ಏಕೆಂದರ 'ಧರ್ಮದಿಂದಾಗಲಿ ಅಧರ್ಮದಿಂದಾಗಲಿ ತನ್ನ ರಾಜ್ಯಭಾರ ಕಾರ್ಯವನ್ನು ಯಶಸ್ವಿಯಾಗಿ ಸಾಧಿಸಿ ಕೊಳ್ಳಬೇಕು' ಎನ್ನುವ ಕಣಿಕನೀತಿ, ದುರ್ಯೋಧನನದಾಗಿತ್ತು. ಇದರ ಫಲವಾಗಿ ಧೃತರಾಷ್ಟ್ರ ಹೇಳುವಂತೆ ಪ್ರಜೆಗಳು ನೈತಿಕವಾಗಿ ಅಧಃಪತನ ಹೊಂದಿದರು. 'ಪೃಥಿವೀ ಚ ವಿನಾಶಿತಾ' ಅದರಿಂದಲೆ ತುಂಬಿದ ಸಭೆಯಲ್ಲಿ ಪಾಂಡವರ ಪಟ್ಟ ಮಹಿಷಿಯ ಮಾನಹರಣ ಯತ್ನ ನಡೆಯಿತು. ಪ್ರಜೆಗಳು ಮೂಕಪ್ರೇಕ್ಷಕರಾದರು. ಭೀಷ್ಮ ದ್ರೋಣರಂಥ ರಾಜಕೀಯ ತಜ್ಞರೂ ಸುಮ್ಮನಿದ್ದರು. ದುರ್ಯೋಧನನನ್ನು ಕೃಷ್ಣ ಕೊಲ್ಲಿಸಿದನೆಂದು ಉದಂಕ ಮುನಿಯೂ ಕುಪಿತನಾದ. ಹೀಗೆ ಲೋಕವೆಲ್ಲ ದುರ್ಯೋಧನನನ್ನು ವೈಯಕ್ತಿಕವಾಗಿ ಆರಾಧಿಸತೊಡಗಿತ್ತು. ಜನ ತಮ್ಮನ್ನು ತಾವೇ ತಿಳಿದುಕೊಂಡಿರಲಿಲ್ಲ. ನಿರ್ಣಯ ಹೇಳುವಂತೆ ಇದು 'ಅಶಿವ' ಅಮಂಗಲ. ಈ ನೈತಿಕ ಅಧಃಪತನಕ್ಕೆ ಕಾರಣ ದುರ್ಯೋಧನ, ಅವನ ಕಣಿಕ ನೀತಿ.

ತೇಷಾ ಮಸ್ಥಿರ ಬುದ್ಧೀನಾಂ
ಲುಬ್ಧಾನಾಂ ಕಾಮಚಾರಿಣಾಂ।
ಕೃತೇ ಯಾಚೀಕದ್ಯ ವಃ ಸರ್ವಾನ್
ಗಾಂಧಾರೀಸಹಿತೋಕಸತಾಂ॥ (ಆಶ್ರಮ ೯.೧೮)

ಎಂದು ಧೃತರಾಷ್ಟ್ರ ಕೌರವರ ಪರವಾಗಿ ಪ್ರಜೆಗಳಲ್ಲಿ ಕ್ಷಮಾಯಾಚನೆ ಮಾಡುವ ಈ ಸಂದರ್ಭದಲ್ಲಿ ದುರ್ಯೋಧನ ಪ್ರಜೆಗಳಲ್ಲಿ ತಪ್ಪು ಮಾಡಿಲ್ಲವೆನ್ನುವುದು ಸಂದರ್ಭಕ್ಕೆ ಸರಿಹೋಗದು. ತಪ್ಪು ಮಾಡಿರದಿದ್ದರೂ ಮಾಡಿದ್ದಾನೆ ಎನ್ನಬೇಕಾಗಿರುವ ಸಂದರ್ಭ. ಮಾಡಿಲ್ಲ ಎನ್ನಲಾರ. ಆದರಿಂದ, 'ಪ್ರಾಯಸ್ತೇನಾಪಿ ಮಂದೇನ ನ ಯುಷ್ಮಾಸ್ವಶಿವಂ ಕೃತಂ' ಎಂಬ ನಿರ್ಣಯಪಾಠದಲ್ಲಿಯೂ ಕಾಕುಸ್ವರ, ಪ್ರಶ್ನಾರ್ಥಕ ಚಿಹ್ನೆ ಇಟ್ಟುಕೊಳ್ಳುವುದು ಉಚಿತವಾಗುತ್ತದೆ.

'ಪ್ರಾಯಸ್ತೇನಾಪಿ ಮಂದೇನ ನ ಯುಷ್ಮಾಸು ಶಿವಂ ಕೃತಂ'

ಎಂಬ ಪಾಠದಲ್ಲಿ ಕ್ಲೇಶವಿಲ್ಲ.

ವ್ಯಾಖ್ಯಾನಗಳಲ್ಲಿ ಎಲ್ಲೆಡೆ, 'ಯುಷ್ಮಾಸ್ವಪ್ಯ ಶಿವಂ ಕೃತಂ
'ಯುಷ್ಮಾಸು ಪ್ರಾಯೋ ಬಾಹುಲ್ಯೇನಾಶಿವಮನಿಷ್ಟಂ ಕೃತಂ'

ಎಂದೇ ಕಾಣುತ್ತದೆ.

ಮಹಾಭಾರತದಲ್ಲಿಯೂ 'ನವೋ ಮಂದೋ' 'ಎಳೆಹುಡುಗ, ಬುದ್ಧಿ

ಇಲ್ಲದವ ಅಪರಾಧಮಾಡಿದ್ದಾನೆ' ಎಂದೇ ಪಾಠಪ್ರಚಲಿತವಾಗಿದೆ. 'ನ ವೋ ಮಂದೋ' ಎಂದಲ್ಲ.

ಸೋಽಕಹಂ ವಯೋಗತಶ್ಚೈವ ಪುತ್ರಾಧಿಭಿರಭಿಪ್ಲುತಃ ॥೫೨॥
ತತ್ಸಂಬಂಧಾತ್‌ಕೃತಂ ಪಾಪಂ ಸ್ವಕೃತಂ ಚಾತ್ಯಪೇಶಲಮ್ ।
ಪಾಂಡವೇಷು ಸಕೃಷ್ಣೇಷು ತಪಸಾ ಮಾರ್ಷ್ಟುಮುದ್ಯತಃ ॥೫೩॥

ನಾನು ವೃದ್ಧನಾಗಿದ್ದೇನೆ. ಪುತ್ರರು ಉಂಟು ಮಾಡಿದ ಮನೋವ್ಯಥೆಗಳಿಂದ ಪೀಡೆಗೊಳಗಾಗಿದ್ದೇನೆ. ಅವರ ಸಂಸರ್ಗದಿಂದ ನಾನು ಪಾಂಡವರಲ್ಲಿಯೂ ಕೃಷ್ಣನಲ್ಲಿಯೂ ಮಾಡಿದ ಪಾಪಕರ್ಮ ಕ್ರೂರವಾದುದು. ತಪಸ್ಸಿನಿಂದ ಆ ಪಾಪಕರ್ಮವನ್ನು ತೊಳೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ.

ತತ್ರ ಮಾಮನುಜಾನೀಧ್ವಂ ಕೃಪಯಾ ಮಿತ್ರವತ್ಸಲಾಃ ।
ಮತ್ಪ್ರಿಯಾರ್ಥಮಪಿ ಸ್ನೇಹಃ ಪಾಂಡವೇಷು ಮಹಾತ್ಮಸು
ಕ್ರಿಯಮಾಣೋಽಪಿ ಕರ್ತವ್ಯೋ ಭೂಯ ಏವ ಸದಾಽಚಲಃ ॥೫೪॥

ಮಿತ್ರರಲ್ಲಿ ಪ್ರೀತಿಯುಳ್ಳ ನೀವು ಕೃಪೆಯಿಂದ ನಮಗೆ ಅನುಮತಿ ನೀಡಿರಿ. ನೀವು ಮಹಾತ್ಮರಾದ ಪಾಂಡವರಲ್ಲಿ ಪ್ರೀತಿ ಮಾಡುತ್ತಲೇ ಇರುವಿರಿ. ನನ್ನ ಸಂತೋಷಕ್ಕಾಗಿ ಅದನ್ನು ಇನ್ನೂ ಹೆಚ್ಚಾಗಿ ಸದಾ ಅಚಲವಾಗಿ ಮಾಡುತ್ತಿರಬೇಕು.

ತೇ ಹಿ ಮೇ ಪುತ್ರಕಾಃ ಸಂತ ಇಹಾಮುತ್ರ ಚ ಸೌಖ್ಯದಾಃ ॥೫೫॥
ಇತ್ಯುಕ್ತೇ ಸ್ವಗುಣಾನುಚ್ಚೈಃ ಕೀರ್ತಯದ್ಭಿಃ ಸುದುಃಖಿತೈಃ ।
ಪರ್ಯಶ್ರುನಯನೈಃ ಕೃಚ್ಛ್ರಾತ್ ಪೌರಜಾನಪದೈಶ್ಚಿರಾತ್ ।
ಅನುಜ್ಞಾತೋ ಯಯೌ ಪಾರ್ಥೈರನುಯಾತಃ ಸುದೂರತಃ ॥೫೬॥

'ಏಕೆಂದರೆ ಅವರು ನನ್ನ ಒಳ್ಳೆಯ ಮಕ್ಕಳು. ಇಹದಲ್ಲಿಯೂ ಪರದಲ್ಲಿಯೂ ಸೌಖ್ಯ ನೀಡುವವರು.' ಧೃತರಾಷ್ಟ್ರ ಹೀಗೆ ಹೇಳಿದಾಗ ಪೌರರೂ ಗ್ರಾಮಸ್ಥರೂ ಕಣ್ಣೀರು ಸುರಿಸಿದರು. ಬಹಳ ದುಃಖಿಸಿದರು. ಧೃತರಾಷ್ಟ್ರನ ಗುಣಗಳನ್ನು ಗಟ್ಟಿಯಾಗಿ ಪ್ರಶಂಸೆ ಮಾಡಿದರು. ಬಹು ಹೊತ್ತಾದ ಬಳಿಕ ಕಷ್ಟದಿಂದ ವನಕ್ಕೆ ಹೋಗಲು ಅವರು ಅನುಮತಿ ನೀಡಿದಾಗ ಧೃತರಾಷ್ಟ್ರ ನಡೆದ. ಬಲು ದೂರದವರೆಗೆ ಪಾಂಡವರು ಹಿಂಬಾಲಿಸಿದರು.

ಸಂಜಯೋ ವಿದುರಶ್ಚೈನಂ ಸಭಾರ್ಯಮನುಜಗ್ಮತುಃ ।
ಅನುವವ್ರಾಜ ತಂ ಕುಂತೀ ವನಾಯ ಕೃತನಿಶ್ಚಯಾ ॥೫೭॥

ಸಂಜಯನೂ ವಿದುರನೂ ಗಾಂಧಾರೀ ಸಮೇತನಾದ ಧೃತರಾಷ್ಟ್ರನನ್ನು ಹಿಂಬಾಲಿಸಿದರು. ಕುಂತಿಯೂ ವನವಾಸಕ್ಕೆ ನಿಶ್ಚಯಮಾಡಿ ಧೃತರಾಷ್ಟ್ರನನ್ನು ಹಿಂಬಾಲಿಸಿದಳು.

ವಾರ್ಯಮಾಣಾಽಪಿ ತನಯೈಃ ಸಭಾರ್ಯೈರ್ಭೃಶದುಃಖಿತೈಃ ।
ಸಂಸ್ಥಾಪ್ಯ ತಾನ್ ಸುಕೃಚ್ಛ್ರೇಣ ಯಯೌ ಸಾಽನ್ವೇವ ತಂ ನೃಪಮ್ ॥೫೮॥

ಮಕ್ಕಳು ಪತ್ನೀಸಮೇತರಾಗಿ ಬಹಳ ದುಃಖಿತರಾಗಿ ಕುಂತಿಯನ್ನು ತಡೆದರೂ ಅವಳು ಅವರನ್ನು ಬಹಳ ಕಷ್ಟದಿಂದ ಹಿಂದೆ ನಿಲ್ಲಿಸಿ ಧೃತರಾಷ್ಟ್ರನನ್ನು ಹಿಂಬಾಲಿಸಿಯೆ ಹೋದಳು.

ಸಂದರ್ಶಿತಪಥೋ ರಾಜಾ ಕುಂತೀವಿದುರಸಂಜಯೈಃ।
ಗಾಂಧಾರೀಸಹಿತಃ ಪ್ರಾಪ ಕುರುಕ್ಷೇತ್ರಂ ಜಗದ್ಗುರೋಃ ॥೫೯॥
ಕ್ರಮೇಣೈವಾಶ್ರಮಂ ವ್ಯಾಸದೇವಸ್ಯ ಸುರಪೂಜಿತಮ್ ॥೬೦॥

ಗಾಂಧಾರೀ ಸಹಿತನಾದ ಧೃತರಾಷ್ಟ್ರನಿಗೆ ಕುಂತಿ ವಿದುರ ಸಂಜಯರು ದಾರಿ ತೋರಿದರು. ಅವನು ಕ್ರಮವಾಗಿ ಕುರುಕ್ಷೇತ್ರವನ್ನು ಸೇರಿದ. ಜಗದ್ಗುರು ವೇದವ್ಯಾಸರ ದೇವಪೂಜಿತವಾದ ಆಶ್ರಮವನ್ನು ಸೇರಿದ.

ಭಾಗವತದಲ್ಲಿ 'ಪತಿಂ ಪ್ರಯಾಂತಂ ಸುಬಲಸ್ಯ ಪುತ್ರೀ' ಎಂದು ಗಾಂಧಾರಿ ಮಾತ್ರ ಧೃತರಾಷ್ಟ್ರನೊಂದಿಗೆ ಕಾಡಿಗೆ ಹೋದಂತೆ ಕಾಣುತ್ತದೆ. ಆದರೆ ಅಲ್ಲಿ ಗಾಂಧಾರಿ ಹೋದಳೆಂದಿದೆ ಹೊರತು ಗಾಂಧಾರಿ ಮಾತ್ರ ಹೋದಳೆಂದಿಲ್ಲ. ಕುಂತಿಯೂ ಹೋದಳೆಂದಿಟ್ಟುಕೊಳ್ಳಬೇಕು-

ಕುಂತೀ ಗಾಂಧಾರೀಮನುಸೃತ್ಯ ವ್ರಜಂತೀ
ಸ್ಕಂಧಾಸಕ್ತಂ ಹಸ್ತಮಥೋದ್ವಹಂತೀ
ರಾಜಾ ಗಾಂಧಾರೀಸ್ಕಂಧದೇಶೇಽವಸಜ್ಯ
ಪಾಣಿಂ ಯಯೌ ಧೃತರಾಷ್ಟ್ರಃ ಪ್ರತೀತಃ ॥

ಎಂದು ಕುಂತಿಯ ಹೆಗಲ ಮೇಲೆ ಗಾಂಧಾರಿಯ ಕೈ, ಗಾಂಧಾರಿಯ ಹೆಗಲ ಮೇಲೆ ಧೃತರಾಷ್ಟ್ರನ ಕೈ- ಹೀಗೆ ಮಹಾಭಾರತ(ಆಶ್ರ 16.9)ದಲ್ಲಿ ವರ್ಣಿತವಾಗಿದೆ. ಧೃತರಾಷ್ಟ್ರ ಕುರುಡ. ಗಾಂಧಾರಿಯೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಳು. ಅದರಿಂದ ಕುಂತಿಯೆ ಅವರಿಗೆ ದಾರಿ ತೋರಿದಳು.

[1]'ಭ್ರಾತೃಸಂದರ್ಶಿತಾಧ್ವಾ' ಎಂದು ಭಾಗವತ ವಾಕ್ಯ, 'ಸಂದರ್ಶಿತ ಪಥೋ ರಾಜಾ ಕುಂತೀ ವಿದುರ ಸಂಜಯೈಃ' ಎಂದು ನಿರ್ಣಯ ವಾಕ್ಯ ಇವೆರಡರ ಅಭಿಪ್ರಾಯ- ಹೀಗೆ ನಡೆಯುವಾಗ ದಾರಿ ತೋರಿದವಳು ಕುಂತಿಯೆ. ಅರಮನೆಯಲ್ಲಿ ಹಿತೋಪದೇಶ ಮಾಡಿ ವೈರಾಗ್ಯ ಮಾರ್ಗ ತೋರಿದವನು ವಿದುರ, ಅದು ತಟಸ್ಥನಾಗಿದ್ದ ಸಂಜಯನಿಗೂ

1. ಭ್ರಾತೃಸಂದರ್ಶಿತಾದ್ವೇತಿ ಚ ಭಾಗವತೋಕ್ತೋಕಪ್ಯಧ್ವಾ ವಿದುರೇಣ ಸ್ವಗೃಹ ಏವ ಸಂದರ್ಶಿತೋ ವೈರಾಗ್ಯ ಮಾರ್ಗ ಏವ, ನತು ವನಮಾರ್ಗಃ। ಸಂದರ್ಶಿತಪಥೋ ರಾಜಾ ಕುಂತೀ ವಿದುರ ಸಂಜಯೈರಿತ್ಯತ್ರಾಪಿ ಕುಂತ್ಯಾ ಅಧ್ವನಿ ಸಂದರ್ಶಿತ ವನವಮಾರ್ಗಃ। ವಿದುರೋಕ್ತ ವೈರಾಗ್ಯ ಮಾರ್ಗಃ ತಟಸ್ಥ ಸಂಜಯಸ್ಯಾಪ್ಯನುಮತ ಇತಿ ಹೇತೋಃ ಸೋಽಪಿ ಗೃಹೀತಃ। -ವಾದಿರಾಜೀಯ

ಅನುಮತವಾಗಿತ್ತು' ಎಂದು. ಇಬ್ಬರೂ ಅರಣ್ಯವಾರ್ಗವನ್ನು ತೋರಿದರೆಂದಲ್ಲ.

ವೇದವ್ಯಾಸರ ಆಶ್ರಮವೆಂದರೆ ವ್ಯಾಖ್ಯಾನಗಳ ಪ್ರಕಾರ ಬದರಿಕಾಶ್ರಮ. ಆದರೆ ಮಹಾಭಾರತ (ಆಶ್ರಮ 20.11)ಪ್ರಕಾರ ಕುರುಕ್ಷೇತ್ರದಲ್ಲಿಯೂ ಒಂದು ವ್ಯಾಸಾಶ್ರಮವಿದೆ. ಅಲ್ಲಿ ಧೃತರಾಷ್ಟ್ರ ವ್ಯಾಸರಿಂದ ವಾನಪ್ರಸ್ಥಾಶ್ರಮ ದೀಕ್ಷೆ ಸ್ವೀಕರಿಸಿ ಶತಯೂಪನೆಂಬ ರಾಜರ್ಷಿಯ ಆಶ್ರಮದ ಬಳಿ ವಾಸ ಮಾಡುತ್ತಾನೆ. ಶತಯೂಪ ಹಿಂದೆ ಕೇಕಯ ರಾಜ್ಯದ ಅರಸನಾಗಿದ್ದ.

ತ್ರಿವತ್ಸರಾದಸ್ಯ ನಿಜಸ್ಯ ಲೋಕ-
ಪ್ಯಾಕಪ್ತಿಂ ಸಭಾರ್ಯಸ್ಯ ಜಗಾದ ತತ್ರ।
ಬ್ರಹ್ಮಾಂಕಜಸ್ತೇನ ಭೃಶಂ ಪ್ರತೀತೋ
ವ್ಯಾಸೋಪದಿಷ್ಟಂ ವ್ಯಚರತ್ ತಪೋಽಗ್ರ್ಯಮ್ ॥೬೧॥

ಬದರಿಕಾಶ್ರಮದಲ್ಲಿ ಸಪತ್ನೀಕನಾದ ಧೃತರಾಷ್ಟ್ರನಿಗೆ ನಾರದರು ಮೂರು ವರ್ಷದಲ್ಲಿ ಸ್ವಲೋಕಪ್ರಾಪ್ತಿ ಎಂದು ಹೇಳಿದರು. ಅದರಿಂದ ಧೃತರಾಷ್ಟ್ರ ಬಹಳ ವಿಶ್ವಾಸ ಹೊಂದಿ ವೇದವ್ಯಾಸರಿಂದ ಉಪದಿಷ್ಟವಾದ ಉತ್ತಮವಾದ ತಪಸ್ಸನ್ನಾಚರಿಸಿದ.

ಸಕ್ಷತ್ತೃಗಾಂಧಾರಿಪೃಥೇ ಸಸಂಜಯೇ
ತಪೋಭಿರಾರಾಧಯತಿ ಪ್ರಭುಂ ಹರಿಮ್ ।
ವೈಚಿತ್ರವೀರ್ಯೇಽತ್ರ ಸದಾರಬಂಧು
ಭೃತ್ಯಾಶ್ಚ ಪಾರ್ಥಾ ದೃಶಯೇ ಸಮಾಯಯುಃ ॥೬೨॥

ವಿದುರ ಗಾಂಧಾರಿ ಕುಂತಿ ಸಂಜಯರಿಂದೊಡಗೂಡಿ ಧೃತರಾಷ್ಟ್ರ ಪ್ರಭುಶ್ರೀಹರಿಯನ್ನು ತಪಸ್ಸುಗಳಿಂದ ಆರಾಧಿಸುತ್ತಿರಲು ಅವರನ್ನು ಕಾಣಲು ಪಾಂಡವರು ಪತ್ನಿಯರಿಂದ ಬಂಧುಗಳಿಂದ ಭೃತ್ಯರಿಂದ ಯುಕ್ತರಾಗಿ ಬರುತ್ತಿದ್ದರು.

ಕ್ಷತ್ತೈಕತಾಮತ್ರ ಯುಧಿಷ್ಠಿರೇಣ
ಪ್ರಾಪ್ತೋಽಥ ಭಾರ್ಯಾಸಹಿತಂ ಸಸಂಜಯಮ್ ।
ಉಪಾಸಮಾನೇಷು ವಿಚಿತ್ರವೀರ್ಯ
ಪುತ್ರಂ ಪೃಥಾಂ ಚೈವ ಪೃಥಾಸುತೇಷು ॥೬೩॥
ಪ್ರಾದುರ್ಬಭೂವಾಮಿತಶಕ್ತಿತೇಜೋ
ಜ್ಞಾನಾದ್ಭುತೈಶ್ವರ್ಯಸುಖಾದಿರೂಪಃ ।
ವ್ಯಾಸೋ ಹರಿಸ್ತತ್ರ ಸಮೀಕ್ಷ್ಯ ಸರ್ವೇ
ಸಂಪೂಜಯಾಮಾಸುರುದಗ್ರಭಕ್ತ್ಯಾ ॥೬೪॥

ಬದರಿಕಾಶ್ರಮದಲ್ಲಿ ವಿದುರ ಧರ್ಮರಾಜನಲ್ಲಿ ಐಕ್ಯ ಹೊಂದಿದ. ಬಳಿಕ ಗಾಂಧಾರೀ ಸಹಿತನಾದ, ಸಂಜಯಸಹಿತನಾದ, ಧೃತರಾಷ್ಟ್ರನನ್ನೂ ಕುಂತಿಯನ್ನೂ ಪಾಂಡವರು ಸೇವಿಸುತ್ತಿದ್ದಾಗ ಅಮಿತ ಶಕ್ತಿ ತೇಜಸ್ಸು ಜ್ಞಾನ ಅದ್ಭುತ ಐಶ್ವರ್ಯ ಸುಖ ಮುಂತಾದ ಗುಣಸ್ವರೂಪರಾದ ವೇದವ್ಯಾಸರು ಅಲ್ಲಿ ಪ್ರಾದುರ್ಭವಿಸಿದರು. ಅವರನ್ನು ಕಂಡು ಎಲ್ಲರೂ ಉತ್ತಮ ಭಕ್ತಿಯಿಂದ ಪೂಜಿಸಿದರು.

ವಿದುರ ಎವೆಯಿಕ್ಕದೆ ಧರ್ಮರಾಜನನ್ನು ದಿಟ್ಟಿಸಿ ನೋಡುತ್ತ 'ಪರಕಾಯ ಪ್ರವೇಶ' ಎಂಬ ಒಂದು ಯೋಗಸಿದ್ಧಿಯ ಬಲದಿಂದ ಅವನ ಶರೀರವನ್ನು ಪ್ರವೇಶಿಸಿದ. ಅವರಿಬ್ಬರೂ ಒಬ್ಬನೆ ಯಮನ ಎರಡು ಅಂಶಗಳಾದ್ದರಿಂದ ಸೇರಿ ಐಕ್ಯ ಹೊಂದಿದರು. ವಿದುರನ ಶರೀರ ನಿಶ್ಚೇತನವಾಗಿ ಬಿದ್ದಿತು. ಧರ್ಮರಾಜನಿಗೆ ಒಳ್ಳೆಯ ಬಲ ಚೈತನ್ಯ ತುಂಬಿಕೊಂಡ ಅನುಭವವಾಯಿತು.

ವಿದುರ ಯತಿಯಾಗಿ ಶರೀರ ತ್ಯಾಗ ಮಾಡಿದ್ದರಿಂದ ಸಂಸ್ಕಾರ ಮಾಡಲಿಲ್ಲ. ಅಣಿಮಾಂಡವ್ಯ ಮುನಿಯ ಶಾಪದಿಂದ ನೂರುವರ್ಷ ಕಾಲ ಮಾತ್ರ ವಿದುರನಿಗೆ ಶೂದ್ರತ್ವವಿದ್ದಿತು. ಬಳಿಕ ಬ್ರಾಹ್ಮಣ್ಯ ಯತಿತ್ವಗಳು ಬಂದಿದ್ದವು.

ಮಡಿದವರೊಂದಿಗೆ ಪುನರ್ಮಿಲನ

ತೈಃ ಪೂಜಿತಸ್ತತ್ರ ನಿಷಣ್ಣ ಆಹ
ಯದ್ಯದ್ ಯದಿಷ್ಟಂ ಪ್ರವದಂತು ತತ್ತತ್ ।
ದಾಸ್ಯಾಮಿ ತಸ್ಯಾದ್ಯ ತದಿತ್ಯಮುಷ್ಮಿನ್
ಭಕ್ತ್ಯುಚ್ಛ್ರಯಃ ಪಾಂಡುಸುತೈಃ ಸದಾರೈಃ । ।೬೫ ॥
ವೃತೋಽತ್ರ ಕುಂತೀ ರವಿಸೂನುಜನ್ಮ
ಮೃತ್ಯೂತ್ಥದೋಷಾಪಗಮಂ ಯಯಾಚೇ ॥೬೬ ॥

ಪಾಂಡವರಿಂದ ಮತ್ತು ಧೃತರಾಷ್ಟ್ರ ಮುಂತಾದವರಿಂದ ಪೂಜಿತರಾದ ವೇದವ್ಯಾಸರು ಕುಳಿತು ಹೇಳಿದರು. ನಿಮಗೆ ಏನೇನು ಇಷ್ಟವೋ ಅದೆಲ್ಲವನ್ನೂ ಹೇಳಿರಿ. ನಾನು ನಿಮ್ಮ ಆ ಅಭೀಷ್ಟಗಳನ್ನು ಈಗ ಪೂರೈಸುತ್ತೇನೆ ಎಂದು. ಆಗ ಪಾಂಡವರೂ ಅವರ ಪತ್ನಿಯರೂ ವೇದವ್ಯಾಸರಲ್ಲಿ ಭಕ್ತಿ ಹೆಚ್ಚಲೆಂದು ಕೇಳಿಕೊಂಡರು. ಕುಂತಿ ಕರ್ಣನ ಜನನ ಮರಣಗಳಿಂದ ತನಗೆ ಬಂದ ಪಾಪದ ಪರಿಹಾರವನ್ನು ಕೇಳಿಕೊಂಡಳು.

ಮದುವೆಯಾಗದ ಕನ್ಯಾವಸ್ಥೆಯಲ್ಲಿ ಕರ್ಣನಿಗೆ ಜನ್ಮವಿತ್ತುದು, ಅದನ್ನು ರಹಸ್ಯವಾಗಿಟ್ಟು ಪಾಂಡವರಿಂದಲೆ ಅವನನ್ನು ಕೊಲ್ಲಿಸಿದುದು ಇವು ಕುಂತಿಯ

ದೋಷಗಳು. ಅವುಗಳಿಂದ ಸೂಚಿತವಾಗುವ ಪ್ರಾರಬ್ಧ ಪರಿಹಾರವಾಗಲಿ ಎಂದು ಕುಂತಿ ಕೇಳಿಕೊಂಡಳು.

ತೇಷಾಂ ಪ್ರದತ್ತೇಷ್ವಭಿವಾಂಛಿತೇಷು
ವೈಚಿತ್ರವೀರ್ಯಃ ಸಹ ಭಾರ್ಯಯೈವ।
ಸಮ್ಮಂತ್ರ್ಯ ನಿಃಶೇಷರಣೇಹತಾನಾಂ
ಸಂದರ್ಶನಂ ಪ್ರಾರ್ಥಿತವಾಂಸ್ತಮೀಶಮ್ ॥೬೭॥

ಕುಂತಿಗೂ ಪಾಂಡವರಿಗೂ ಅವರ ಅಭೀಷ್ಟಗಳನ್ನು ವೇದವ್ಯಾಸರು ಕೊಟ್ಟಾಗ ಧೃತರಾಷ್ಟ್ರ ಗಾಂಧಾರಿಯೊಡನೆ ಆಲೋಚಿಸಿ ಯುದ್ಧದಲ್ಲಿ ಸತ್ತವರೆಲ್ಲರನ್ನೂ ತಾವು ಕಾಣಬೇಕೆಂದು ಕೇಳಿಕೊಂಡ.

ತತಸ್ತು ತೇ ಸತ್ಯವತೀಸುತಸ್ಯ
ಸರ್ವೇಶ್ವರಸ್ಯಾಽಜ್ಞಯಾ ಸರ್ವ ಏವ।
ಸಮಾಗತಾಃ ಸ್ವರ್ಗಲೋಕಾತ್ ಕ್ಷಣೇನ
ದತ್ತಾ ಚ ದಿವ್ಯಾ ದೃಗಮುಷ್ಯ ರಾಜ್ಞಃ ।
ಊಷುಶ್ಚ ರಾತ್ರಿಂ ಪರಮಾಜ್ಞಯೈವ
ಸರ್ವೇ ಸ್ವಭಾರ್ಯಾಸಹಿತಾ ಯಥಾ ಪುರಾ ॥೬೮॥

ಆಗ ಸರ್ವೇಶ್ವರ ವೇದವ್ಯಾಸರ ಆಜ್ಞೆಯಿಂದ ಅವರೆಲ್ಲರೂ ಕ್ಷಣದಲ್ಲಿ ವೀರಸ್ವರ್ಗಲೋಕದಿಂದ ಬಂದರು. ವೇದವ್ಯಾಸರು ಆಗ ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ನೀಡಿದ್ದರು. ಯುದ್ಧದಲ್ಲಿ ಮೃತರಾದವರೆಲ್ಲರೂ ವೇದವ್ಯಾಸರ ಇಚ್ಛೆಯಂತೆ ಗಂಗಾಪ್ರವಾಹದೊಳಗಿಂದ ಹಿಂದಿನಂತೆಯೇ ಮನುಷ್ಯ ದೇಹದಲ್ಲಿ ಬಂದು ಒಂದು ರಾತ್ರಿ ಇಡೀ ಪತ್ನೀ ಸಮೇತರಾಗಿ ವಾಸಮಾಡಿದರು.

ಪಾಂಡವರು ಕರ್ಣನೊಡನೆ ಪ್ರೀತಿಯಿಂದ ಕೂಡಿ ಆನಂದಿಸಿದರು. ನೀಲಕಂಠಿಯಲ್ಲಿ ಹೇಳಿದಂತೆ ಸೂಕ್ಷ್ಮಶರೀರದಿಂದ ಕರ್ಣಾದಿಗಳು ಬರಲಿಲ್ಲ. ಜೊತೆಗೆ ವಿಹಾರಕ್ಕೆ ಯೋಗ್ಯವಾದ ಶರೀರ, ದಿವ್ಯವೇಷ, ಅಪ್ಸರೆಯರೂ ಜೊತೆಗಿದ್ದರು.

ತೃಪ್ತಃ ಸದಾರೋ ನೃಪತಿಶ್ಚ ತತ್ರ
ಸರ್ವೇಽಪಿ ದೃಷ್ಟ್ವಾ ಪರಮಾದ್ಭುತಂ ತತ್ ॥೬೯॥
ಅಥಾಽಜ್ಞಯೈವಾಸ್ಯ ಪರಸ್ಯ ಸರ್ವಾಃ
ಸ್ತ್ರಿಯೋ ನಿಜೇಶೈಃ ಸಹಿತಾ ಯಯುಃ ಸ್ವಃ।
ಏನೋತ್ತರಾಂ ತಾಂ ತು ಕಥಾಂ ನಿಶಮ್ಯ
ಪಾರೀಕ್ಷಿತೋಽಯಾಚತ ತಾತದೃಷ್ಟಿಮ್ ।

ತಂ ಚಾಽನಯಾಮಾಸ ತದೈವ ಕೃಷ್ಣೋ
ಹ್ಯಚಿಂತ್ಯಶಕ್ತಿಃ ಸ ವಿಕುಂಠಲೋಕಾತ್ ॥೭೦॥

ಗಾಂಧಾರೀ ಸಮೇತನಾದ ಧೃತರಾಷ್ಟ್ರನೂ ಪಾಂಡವರು ಮುಂತಾದವರೂ ಪರಮಾದ್ಭುತವಾದ ಮೃತರಾಗಮನವನ್ನು ಕಂಡು ತೃಪ್ತರಾದರು. ಬಳಿಕ ವೇದವ್ಯಾಸರ ಇಚ್ಛೆಯಂತೆಯೆ ಉತ್ತರೆ ಹೊರತು ಎಲ್ಲ ಸ್ತ್ರೀಯರೂ ಗಂಗಾನದಿಯಲ್ಲಿ ಶರೀರತ್ಯಾಗ ಮಾಡಿ ತಮ್ಮ ಪತಿಗಳೊಂದಿಗೆ ಸ್ವರ್ಗಕ್ಕೆ ತೆರಳಿದರು. ಈ ಕಥೆಯನ್ನು ಕೇಳಿ ಜನಮೇಜಯ ರಾಜನೂ ತಂದೆಯಾದ ಪರೀಕ್ಷಿತನನ್ನು ನೋಡಬೇಕೆಂದು ಕೇಳಿಕೊಂಡ. ಅಚಿಂತ್ಯಶಕ್ತಿ ಉಳ್ಳ ವೇದವ್ಯಾಸರು ಅವನನ್ನೂ ಆಗಲೆ ವೈಕುಂಠಲೋಕದಿಂದ ತರಿಸಿದರು.

ದುರ್ಯೋಧನಾದಿಗಳೂ ಕರ್ಣ ಅಭಿಮನ್ಯು ಮುಂತಾದವರೂ ಬಾಹ್ಲೀಕ ಭೂರಿಶ್ರವ ಭೀಷ್ಮ ದ್ರೋಣಾದಿಗಳೂ ಪರಸ್ಪರ ದ್ವೇಷಮಾತ್ಸರ್ಯಾದಿಗಳನ್ನು ಮರೆತು ಅನ್ಯೋನ್ಯವಾಗಿ ಪ್ರೀತಿಯಿಂದಲೇ ಪತ್ನೀ ಸಹಿತರಾಗಿ ವಿಹರಿಸಿ ಎಲ್ಲರೂ ಆ ರಾತ್ರಿಯನ್ನು ಕಳೆದು ಗಂಗೆಯಲ್ಲಿ ಮುಳುಗಿ ಅದೃಶ್ಯರಾದರು. ಆಗ ಪತ್ನಿಯರೂ ಮುಳುಗಿ ಶರೀರ ತ್ಯಾಗ ಮಾಡಿದರು. ಪತಿಲೋಕ ಪಡೆದರು. ಈ ಪುತ್ರದರ್ಶನ ಪರ್ವ ಶ್ರವಣದಿಂದ ಇಹಪರಗಳಲ್ಲಿ ಪ್ರಿಯಲಾಭ ಎಂದು ಫಲಶ್ರುತಿಯೂ ಇದೆ.

ದೃಷ್ಟ್ವಾ ಸ ಪಾರೀಕ್ಷಿತ ಆಪ ತುಷ್ಟಿಂ
ಸ್ವತಾತಮೀಶೇನ ಸಮಾಹೃತಂ ಪುನಃ ।
ಸಂಪೂಜ್ಯ ತಂ ಕೃಷ್ಣಮಪೀಶವಂದ್ಯಂ
ಕ್ಷಮಾಪಯಾಮಾಸ ಪರೀಕ್ಷಿದಾತ್ಮಜಃ ।
ಚಕ್ರೇ ಚ ವಿಸ್ರಂಭಮತೀವ ಭಾರತೇ
ಪುನಶ್ಚ ತತ್ರತ್ಯಜನೈಃ ಸಮೇತಃ ॥೭೧॥

ಜನಮೇಜಯ ವೇದವ್ಯಾಸರಿಂದ ತರಿಸಲ್ಪಟ್ಟ ತನ್ನ ತಂದೆಯನ್ನು ಪುನಃ ಕಂಡು ಸಂತುಷ್ಟನಾದ. ಅವನನ್ನೂ ಬ್ರಹ್ಮಾದಿ ವಂದ್ಯರಾದ ವೇದವ್ಯಾಸರನ್ನೂ ಸೇವಿಸಿ ಕ್ಷಮೆಕೇಳಿದ. ಮೃತನಾದ ಪರೀಕ್ಷಿತನನ್ನು ಅಲ್ಲಿದ್ದ ಜನರೊಂದಿಗೆ ತಾನು ಪುನಃ ಕಂಡಬಳಿಕ ಭಾರತ ಗ್ರಂಥದಲ್ಲಿ ಬಹಳ ವಿಶ್ವಾಸವಿರಿಸಿದ.

ಪರೀಕ್ಷಿತನನ್ನು ಮಾತ್ರವಲ್ಲದೆ ಅವನ ಮಂತ್ರಿ ಪರಿವಾರದವರನ್ನೂ ಶಮೀಕ ಶೃಂಗಿ ಮುನಿಗಳನ್ನೂ ವ್ಯಾಸರು ತರಿಸಿದರು. ಜನಮೇಜಯನ ಸರ್ಪಯಾಗದ ಅವಭೃಥದಲ್ಲಿ ಎಲ್ಲರೂ ಸ್ನಾನಮಾಡಿದರು.

ಭಾರತದಲ್ಲಿ ಬರುವ ಪಾತ್ರಗಳಿಲ್ಲವೂ ಕೇವಲ ಕಾಲ್ಪನಿಕವಲ್ಲ.

ಎಲ್ಲರೂ ಐತಿಹಾಸಿಕ ವ್ಯಕ್ತಿಗಳು ಎಂದು ವಿಶ್ವಾಸ ತಾಳಿದ ಜನಮೇಜಯ. ಭೀಮ ಮೇಲೆ ಆಕಾಶಕ್ಕೆ ಎಸೆದ ಆನೆ ಮುಂತಾದವುಗಳು ಮೇಘ ಮಂಡಲಾದಿಗಳಲ್ಲಿ ಸೇರಿಕೊಂಡು ಈಗಲೂ ಆಗಾಗ ಕುರುಕ್ಷೇತ್ರದಲ್ಲಿ ಬೀಳುತ್ತಿವೆ. ಹುಟ್ಟು ಕುರುಡನಿಗೂ ದಿವ್ಯದೃಷ್ಟಿ ಕೊಟ್ಟು ವೇದವ್ಯಾಸರು ತೋರಿಸಿದರು ಇತ್ಯಾದಿ ವರ್ಣನೆಗಳಲ್ಲಿ ಜನಮೇಜಯನಿಗೆ ಮೊದಲು ಇದ್ದ ಅಪನಂಬಿಕೆ ಈಗ ಹೊರಟುಹೋಯಿತು. - ಜನಾರ್ದನೀಯ

ಪಾರ್ಥಾಃ ಪುನಃ ಪ್ರಾಪ್ಯ ಪುರಂ ಸ್ವಕೀಯಂ
ಧರ್ಮೇಣ ಪೃಥ್ವೀಂ ಪರಿಪಾಲಯಂತಃ ।
ಭಾಗಾನರಾಗಾ ಅಜುಷಂತ ಯೋಗ್ಯಾನ್
ಯುಕ್ತಾ ಜಗದ್ಧಾತರಿ ವಾಸುದೇವೇ ॥ ೭೨ ॥

ಪಾಂಡವರು ಪುನಃ ತಮ್ಮ ಪಟ್ಟಣವನ್ನು ಸೇರಿ ಧರ್ಮದಿಂದ ಭೂಮಿಯನ್ನು ಆಳುತ್ತ ಸರ್ವಧಾರಕನಾದ ಶ್ರೀಕೃಷ್ಣನಲ್ಲಿ ಭಕ್ತಿಯುಕ್ತರಾಗಿ ಅನಾಸಕ್ತಿಯಿಂದ ಯೋಗ್ಯವಾದ ಭೋಗಗಳನ್ನು ಅನುಭವಿಸಿದರು.

ಧೃತರಾಷ್ಟ್ರನ ಮರಣ

ವರ್ಷತ್ರಯಾಂತೇ ತ್ಯಸಮಾಹಿತಾಗ್ನಿಂ
ತ್ಯಕ್ತಾಗ್ನಿಭಿಸ್ತೈರ್ವನಮಾಲಿಹದ್ಭಿಃ ।
ತೇ ಶುಶ್ರುವುರ್ಧೃತರಾಷ್ಟ್ರಂ ಸಭಾರ್ಯಂ
ಸಹೈವ ಕುಂತ್ಯಾ ಪರಿದಗ್ಧದೇಹಮ್ ॥ ೭೩ ॥

ತನ್ನೆದೆಯಲ್ಲಿ ಔಪಾಸನಾಗ್ನಿಯನ್ನು ಸಮಾರೋಪ ಮಾಡಿಕೊಂಡಿದ್ದ ಧೃತರಾಷ್ಟ್ರ ಮೂರುವರ್ಷಗಳ ಕೊನೆಯಲ್ಲಿ ಆ ಅಗ್ನಿಯನ್ನು ಹೊರಗೆ ಇಟ್ಟಾಗ ಅದು ಕಾಡನ್ನು ಸುಡಲುತೊಡಗಿತು. ಧೃತರಾಷ್ಟ್ರ ಗಾಂಧಾರೀ ಸಹಿತನಾಗಿ ಕುಂತಿಯೊಂದಿಗೆ ಆ ಅಗ್ನಿಯಲ್ಲಿ ಶರೀರವನ್ನು ಸುಟ್ಟುಕೊಂಡುದನ್ನು ಪಾಂಡವರು ಕೇಳಿದರು.

ಔಪಾಸನಾಗ್ನಿಯನ್ನು ಹೃದಯದಲ್ಲಿ ಸಮಾರೋಪಮಾಡಿಕೊಂಡಿದ್ದ ಧೃತರಾಷ್ಟ್ರ ಮೂರು ವರ್ಷಗಳಾದ ಬಳಿಕ ಕುರುಕ್ಷೇತ್ರದಿಂದ ಗಂಗಾದ್ವಾರಕ್ಕೆ ಹೋಗಿ ಒಂದು ಇಷ್ಟಿ ಮಾಡಲು ಆ ಅಗ್ನಿಯನ್ನು ಹೊರಗೆ ಅಗ್ನಿಕುಂಡದಲ್ಲಿ ಸ್ಥಾಪಿಸಿದ. ಇಷ್ಟಿ ಮುಗಿಯಿತು. ಅದು ದೈವಾತ್ ಕಾಳ್ಗಿಚ್ಚಾಗಿ ಹಬ್ಬಿತು. ಧೃತರಾಷ್ಟ್ರ ಗಾಂಧಾರಿ ಕುಂತಿಯರು ಅದರಲ್ಲಿ ಬೆಂದು ಹೋದರು. ಹೀಗೆ ಸಂಸ್ಕೃತಾಗ್ನಿಯಲ್ಲಿ ಬೆಂದು ಹೋದ್ದರಿಂದ ದುರ್ಮರಣವಾಗಿಲ್ಲ. ಸಂಜಯನಿಗೆ ಕಣ್ಣು ಕಾಣುತ್ತಿತ್ತು. ಓಡುವ ಸಾಮರ್ಥ್ಯವೂ ಇತ್ತು. ಆದರಿಂದ

ಓಡಿಹೋಗಲು ಧೃತರಾಷ್ಟ್ರ ಆಜ್ಞೆ ಮಾಡಿದ. ತಾನು ಪೂರ್ವಾಭಿಮುಖವಾಗಿ ಕುಳಿತು ಧ್ಯಾನ ಪರನಾದ. ಗಾಂಧಾರೀ ಕುಂತಿಯರೂ ಹಾಗೇ ಮಾಡಿದರು. ಸಂಜಯ ಅವರಿಗೆ ಪ್ರದಕ್ಷಿಣೆ ಮಾಡಿ ಕಾಡಿನಲ್ಲಿ ವೇದವ್ಯಾಸರ ಬಳಿಗೆ ಓಡಿದ. ಈ ವಾರ್ತೆಯನ್ನು ಗಂಗಾತೀರದಲ್ಲಿ ಅವನ ಮುಖದಿಂದ ನಾರದರು ಕೇಳಿ ಪಾಂಡವರಿಗೆ ತಿಳಿಸಿದರು.

ಏಟಾಮುಖಂ ಧ್ಯಾನಪರಂ ನಿಶಮ್ಯ
ಸ್ವರ್ಯಾತಮಾತ್ಮೀಯಪಿತೃವ್ಯಮಾಶು ।
ಸಮೇತ್ಯ ಭರ್ತ್ರಾ ಪ್ರತಿಪೂಜ್ಯಮಾನಾಂ
ಕುಂತೀಂ ಚ ತಪ್ತಾ ವಿದಧುಃ ಕ್ರಿಯಾಶ್ಚ ॥ ೭೪ ॥

ಚೆಂಡನ್ನು ಬಾಯಲ್ಲಿ ಇಟ್ಟುಕೊಂಡು ಧ್ಯಾನಪರನಾಗಿ ಧೃತರಾಷ್ಟ್ರ ಸ್ವರ್ಗಕ್ಕೆ ತೆರಳಿದ್ದನ್ನೂ ಕುಂತಿ ಸ್ವರ್ಗವನ್ನು ಸೇರಿ ಪತಿಯೊಡನೆ ಪೂಜಿತಳಾದುದನ್ನೂ ನಾರದರಿಂದ ಕೇಳಿ ಪಾಂಡವರು ದುಃಖಿತಪ್ತರಾಗಿ ಉತ್ತರಕ್ರಿಯೆಗಳನ್ನು ನಡೆಸಿದರು.

ತೇ ವಿಷ್ಣುಭಕ್ತ್ಯಾ ಪರಿಪೂತಕರ್ಮಭಿ-
ರ್ಜ್ಞಾನೇನ ಚಾಂತೇ ತಮನುಸ್ಮರಂತಃ ।
ಪಾರ್ಥೈಃ ಸುಪುತ್ರೈಃ ಸುಕೃತೋರ್ಧ್ವಕರ್ಮಭಿ-
ರ್ವೃದ್ಧಿಂ ಶುಭಾಮ್ಯಾಪುರನಪ್ಯಯಾಂ ಶುಭಾಮ್ ॥ ೭೫ ॥

ಕುಂತಿ ಗಾಂಧಾರಿ ಧೃತರಾಷ್ಟ್ರರು ಪುಣ್ಯವಂತರು. ವಿಷ್ಣುಭಕ್ತಿಯಿಂದಲೂ ಪುಣ್ಯಕರ್ಮಗಳಿಂದಲೂ ಜ್ಞಾನದಿಂದಲೂ ಅಂತ್ಯಕಾಲದಲ್ಲಿ ಹರಿಯನ್ನು ಸದಾ ಸ್ಮರಿಸಿದರು. ಸುಪುತ್ರರಾದ ಪಾಂಡವರೂ ಅವರಿಗೆ ಚೆನ್ನಾಗಿ ಉತ್ತರಕ್ರಿಯೆ ಮಾಡಿದರು. ಅದರಿಂದ ಅವರು ಶಾಶ್ವತವಾದ ಆನಂದಾಭಿವೃದ್ಧಿಯನ್ನು ಹೊಂದಿದರು.

ಗಾವದ್ಗಣೆರ್ವ್ಯಾಸಸಕಾಶಮೇತ್ಯ
ಶುಶ್ರೂಷಯಾ ತಸ್ಯ ಪುನರ್ನಿಜಾಂ ಗತಿಮ್ ।
ಪ್ರಪೇದಿವಾನ್ ಪಾಂಡುಸುತಾಶ್ಚ ಕೃಷ್ಣಂ
ಪ್ರತೀಕ್ಷಮಾಣಾಃ ಪೃಥಿವೀಮಶಾಸನ್ ॥ ೭೬ ॥

ಸಂಜಯ ವೇದವ್ಯಾಸರ ಬಳಿಗೆ ಬಂದು ಅವರ ಸೇವೆಯಿಂದ ನಿಜಗತಿಯನ್ನು ಪಡೆದ. ಪಾಂಡವರೂ ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಇದಿರು ನೋಡುತ್ತ ಭೂಮಿಯನ್ನು ಆಳಿದರು.

ಅಷ್ಟಾದಶಾಬ್ದಾಃ ಪೃಥಿವೀಂ ಸಮಸ್ತಾಂ
ಪ್ರಶಾಸತಾಮೇವಮಗುರ್ಮಹಾತ್ಮನಾಮ್ ।

ಅರಿಕ್ತಧರ್ಮಾರ್ಥಸುಖೋತ್ತಮಾನಾ-
ಮನುಜ್ಞಿತಾನಂತಪದಸ್ಮೃತೀನಾಮ್ ॥ ೭೭ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಧೃತರಾಷ್ಟ್ರಾದಿ ಸ್ವರ್ಗಪ್ರಾಪ್ತಿರ್ನಾಮ ಏಕತ್ರಿಂಶೋಽಧ್ಯಾಯಃ

ಮಹಾತ್ಮರಾದ ಪಾಂಡವರು ಹರಿಚರಣ ಸ್ಮರಣೆಯನ್ನು ಬಿಡದೆ ಸದಾ ಮಾಡುತ್ತ ಪೂರ್ಣವಾದ ಧರ್ಮಾರ್ಥ ಮೋಕ್ಷಗಳಿಗೆ ಭಾಜನರಾಗಿ ಸಮಸ್ತ ಪೃಥಿವಿಯನ್ನು ಆಳುತ್ತಿದ್ದಂತೆ ಹದಿನೆಂಟು ವರ್ಷಗಳು ಕಳೆದುವು.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ
ಧೃತರಾಷ್ಟ್ರಾದಿಸ್ವರ್ಗಪ್ರಾಪ್ತಿ
ಎಂಬ
ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 32

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯೋ ಯಷ್ಟಾವಿಪ್ರಶಾಪಾದ್ ಯದುಕುಲಮವಧೀದರ್ಥಿತೋಽಗಾತ್ ಸ್ವಲೋಕಂ
ದೇವೈರ್ಭೈಷ್ಮ್ಯ ದ್ಯುಪೇತೋ ಯದನು ನಿಜಪದಂ ಪಾಂಡವಾ ಅಪ್ಯವಾಪುಃ।
ದೈತ್ಯಾ ಯದ್ದ್ವೇಷತೋಽಂಧೇ ತಮಸಿ ನಿಪತಿತಾ ಬುದ್ಧರೂಪೋಽಭವದ್ಯಃ
ಕಲ್ಕ್ಯಂತ್ಯಾಂತೇ ಕಲೇರ್ಯಃ ಕುಜನನಿಧನಕೃತ್ ಪಾತು ಸೋಽಸ್ಮಾನ್ಮುಕುಂದಃ॥ ೩॥

ಶ್ರೀಕೃಷ್ಣ ಸತ್ರಯಾಗವನ್ನು ಮಾಡಿದ. ಮುನಿಶಾಪದಿಂದ ಯದುಕುಲವನ್ನು ನಾಶಪಡಿಸಿದ. ದೇವತೆಗಳಿಂದ ಪ್ರಾರ್ಥಿತನಾಗಿ ರುಕ್ಮಿಣೀ ಮುಂತಾದವರೊಡಗೂಡಿ ತನ್ನ ಲೋಕಕ್ಕೆ ಹೊರಟುಹೋದ. ಬಳಿಕ ಪಾಂಡವರೂ ತಮ್ಮ ಲೋಕವನ್ನು ಸೇರಿದರು. ದೈತ್ಯರು ಮುಕುಂದನ ದ್ವೇಷದಿಂದ ಅಂಧಂತಮಸ್ಸಿನಲ್ಲಿ ಬಿದ್ದರು. ಮುಕುಂದ ಬುದ್ಧರೂಪನಾಗಿ ಅವತರಿಸಿದ. ಕಲಿಯುಗದ ಕೊನೆಯಲ್ಲಿ ಕಲ್ಕಿರೂಪನಾಗಿಯೂ ಅವತರಿಸಿ ದುರ್ಜನರನ್ನು ವಧಿಸುತ್ತಾನೆ. ಅಂಥ ಮುಕುಂದ ನಮ್ಮನ್ನು ಕಾಪಾಡಲಿ.

ಮಹಾಭಾರತತಾತ್ಪರ್ಯನಿರ್ಣಯಾಶಯ ಸಂಗ್ರಹಃ।
ರಾಘವೇಂದ್ರೇಣ ಯತಿನಾ ಕೃತಃ ಸಜ್ಜನ ಸಂವಿದೇ ॥ ೩೩॥

ಹೀಗೆ ಸಜ್ಜನರ ಬೋಧೆಗಾಗಿ ಶ್ರೀರಾಘವೇಂದ್ರಯತಿಗಳಿಂದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ ಭಾವಸಂಗ್ರಹ ಗ್ರಂಥ ವಿರಚಿತ ವಾಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೩೨

ಪಾಂಡವಸ್ವರ್ಗಾರೋಹಣ

॥ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಶ್ರೀಕೃಷ್ಣನ ಸತ್ರಯಾಗ

ಓಂ ॥ ತತಃ ಕುರುಕ್ಷೇತ್ರಮವಾಪ್ಯ ಕೃಷ್ಣೋ
ದೀಕ್ಷಾಂ ಪ್ರಪೇದೇ ದ್ವಿಷಡಬ್ದಸತ್ರೇ ।
ಸ ಏವ ಚ ವ್ಯಾಸಭೃಗೂದ್ವಹಾತ್ಮಾ
ಚಕ್ರೇಽಸ್ಯ ಸಾದಸ್ಯಮಜೋಽಪ್ರಮೇಯಃ ॥೧॥

ಬಳಿಕ ಶ್ರೀಕೃಷ್ಣ ಕುರುಕ್ಷೇತ್ರಕ್ಕೆ ಹೋಗಿ ಹನ್ನೆರಡು ವರ್ಷಗಳ ಸತ್ರದಲ್ಲಿ ದೀಕ್ಷಾಬದ್ಧನಾದ. ಅಪ್ರಮೇಯನಾದ ಅವನೆ ವೇದವ್ಯಾಸ ಪರಶುರಾಮರೂಪಗಳಿಂದ ಸದಸ್ಯಕರ್ಮವನ್ನೂ ನಿರ್ವಹಿಸಿದ.

ಯಜ್ಞಶಾಲೆಯಲ್ಲಿ ನಡೆಯುವ ಎಲ್ಲ ಕ್ರಿಯಾಕಲಾಪ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವ ಋತ್ವಿಜ ಸದಸ್ಯನೆನಿಸುತ್ತಾನೆ ಎಂದು ವಾದಿರಾಜೀಯ.

ತತ್ರರ್ತ್ವಿಜೋ ದಕ್ಷಭೃಗುಪ್ರಧಾನಾಃ
ಪಾರ್ಥಾ ಯದೂನಾಂ ಪ್ರವರೈಃ ಸಮೇತಾಃ ।
ಬ್ರಹ್ಮೇಶಶಕ್ರಪ್ರಮುಖಾಃ ಸುರಾಶ್ಚ
ಚಕ್ರುಃ ಸುಸಾಚಿವ್ಯಮನಂತದಾಸಾಃ ॥೨॥

ಆ ಯಜ್ಞದಲ್ಲಿ ದಕ್ಷಭೃಗು ಮುಂತಾದ ಋತ್ವಿಜರೂ ಯಾದವ ಶ್ರೇಷ್ಠರೂ ಪಾಂಡವರೂ ಬ್ರಹ್ಮರುದ್ರ ಇಂದ್ರ ಮೊದಲಾದ ದೇವತೆಗಳೂ ಎಲ್ಲರೂ ಶ್ರೀಹರಿಯ ದಾಸರಾದ ಪ್ರಯುಕ್ತ ಬಹಳ ಸಹಾಯ ಗೈದರು.

ಸರ್ವೇ ಚ ಜೀವಾ ವಸುಧಾತಲಸ್ಥಾ
ಯೇಽನ್ಯೇಽಂತರಿಕ್ಷದ್ಯುಮುಖೋತ್ತರೇಷು ।

ವಸಂತಿ ನಾರಾಯಣಪಾದಸಂಶ್ರಯಾ-
ಸ್ತೇ ಚಾತ್ರ ಸರ್ವೇ ಮುಮುದುಃ ಸನಾಗಾಃ ॥೩॥

ಭೂತಲದಲ್ಲಿದ್ದ ಎಲ್ಲ ಜೀವರೂ, ಬೇರೆ ಅಂತರಿಕ್ಷ ಸ್ವರ್ಗ ಮುಂತಾದ ಮೇಲಿನ ಲೋಕಗಳಲ್ಲಿ ಯಾರು ವಾಸ ಮಾಡುವರೋ ಅವರೂ ಪಾತಾಳವಾಸಿಗಳಾದ ನಾಗರೂ ನಾರಾಯಣನ ಪಾದಗಳನ್ನು ಆಶ್ರಯಿಸಿದ ಎಲ್ಲರೂ ಈ ಯಜ್ಞದಲ್ಲಿ ಸೇರಿ ಸಂತೋಷ ಗೊಂಡರು.

ಸುನಿರ್ಣಯಸ್ತತ್ತ್ವವಿನಿರ್ಣಯಾರ್ಥಿನಾಂ
ತತ್ತ್ವಸ್ಯ ಚಾಭೂದಿಹ ವಾದಶೀಲಿನಾಮ್ ।
ಮಿಥೋ ವಿವಾದಾತ್ ಸುರಭೂಸುರಾಣಾಂ
ವಾಕ್ಯಾದ್ಧರೇರ್ವ್ಯಾಸಭೃಗೂದ್ವಹಾತ್ಮನಃ ॥೪॥

ದೇವತೆಗಳೊಳಗೆ ಪರಸ್ಪರವಾಗಿಯೂ ಮುನಿಗಳೊಳಗೆ ಪರಸ್ಪರವಾಗಿಯೂ ನಡೆದ ವಾಕ್ಯಾರ್ಥ ಗೋಷ್ಠಿಗಳಿಂದ ಮತ್ತು ವ್ಯಾಸ ಪರಶುರಾಮರೂಪನಾದ ಹರಿಯ ಮಾತುಗಳಿಂದ, ವಾದಶೀಲರಾಗಿ ತತ್ವನಿರ್ಣಯವನ್ನು ಬಯಸುವ ಜನರಿಗೆ ಈ ಯಜ್ಞದಲ್ಲಿ ಒಳ್ಳೆಯ ತತ್ವನಿರ್ಣಯವಾಯಿತು.

ಧರ್ಮಾರ್ಥಕಾಮಾನಖಿಲಾನವಾಪು-
ಸ್ತದರ್ಥಿನೋ ಮುಕ್ತಿಮಪೀಹ ಕೃಷ್ಣಾತ್ ।
ಯಥೇಷ್ಟಪಾನಾಶನವಾಸಸೋ ಜನಾ
ವಿಚೇರುರತ್ರಾಮರಮಾನವಾದಯಃ ॥೫॥

ಈ ಯಜ್ಞದಲ್ಲಿ ಧರ್ಮಾರ್ಥ ಕಾಮಗಳನ್ನು ಬಯಸುವವರು ಅವೆಲ್ಲವನ್ನೂ ಕೃಷ್ಣನಿಂದ ಪಡೆದರು. ಮೋಕ್ಷಾರ್ಥಿಗಳು ಮೋಕ್ಷವನ್ನೂ ಕೃಷ್ಣನಿಂದ ಪಡೆದರು. ದೇವತೆಗಳು ಮನುಷ್ಯರು ಮುಂತಾದ ಜನರು ಯಥೇಷ್ಟ ಅನ್ನಪಾನ ವಸ್ತ್ರಗಳನ್ನು ಹೊಂದಿ ಸಂಚರಿಸಿದರು.

ಕ್ಷೇತ್ರಂ ತದಾಸೀದ್ಧರಿಲೋಕಸಮ್ಮಿತಂ
ಯದೀಯುರತ್ರಾಖಿಲಸಜ್ಜನಾ ಯುತಿಮ್ ।
ನಾನಾಪ್ತಕಾಮಾಶ್ಚ ಯತೋ ಬಭೂವು-
ರ್ನಿರ್ಯತ್ನದೃಶ್ಯಶ್ಚ ಯತೋಽತ್ರ ಕೇಶವಃ ॥೬॥

ಕುರುಕ್ಷೇತ್ರ ಆಗ ವಿಷ್ಣುಲೋಕಕ್ಕೆ ಸದೃಶವಾಗಿತ್ತು. ಏಕೆಂದರೆ ಇಲ್ಲಿ ಎಲ್ಲ ಸಜ್ಜನರೂ ಒಂದೆಡೆ ಸೇರಿದ್ದರು. ಯಾರೂ ತಮ್ಮ ಕಾಮನೆಗಳನ್ನು ಪೂರೈಸಿಕೊಳ್ಳದಿದ್ದವರು ಇಲ್ಲಿ ಇರಲಿಲ್ಲ. ಮತ್ತು ಇಲ್ಲಿ ಕೃಷ್ಣ ಏನೂ ಪ್ರಯಾಸವಿಲ್ಲದೆ ಕಣ್ಣಿಗೆ ಕಾಣಿಸಿಕೊಳ್ಳುತ್ತಿದ್ದ.

ಯಾದವರ ಅಂತಃಕಲಹ

ದ್ವಾದಶಾಬ್ದಂ ಮಹಾಸತ್ರಮೇವಮೇತಾದೃಶಂ ಹರಿಃ ।
ಸಮಾಪ್ಯಾವಭೃಥಸ್ನಾತಃ ಪೂಜಯಿತ್ವಾಽಖಿಲಾನ್ ಜನಾನ್ ।
ಅನುಜಜ್ಞೇ ಕ್ರಮೇಣೈವ ವತ್ಸರೇಣ ಸಮಾಗತಾನ್ ॥೭॥
ಸ್ವಕುಲಂ ಸಂಜಿಹೀರ್ಷುಃ ಸ ವಿಪ್ರಶಾಪಮಜೀಜನತ್ ॥೮॥

ಹನ್ನೆರಡು ವರ್ಷಗಳ ಮಹಾಸತ್ರವನ್ನು ಶ್ರೀಕೃಷ್ಣ ಹೀಗೆ ಇದೇ ರೀತಿಯಲ್ಲಿ ಮಾಡಿ ಮುಗಿಸಿ ಅವಭೃಥ ಸ್ನಾನ ಮಾಡಿ ಎಲ್ಲ ಜನರನ್ನೂ ಸತ್ಕರಿಸಿ ಬಂದಿರುವವರೆಲ್ಲರನ್ನೂ ಕ್ರಮವಾಗಿ ಒಂದು ವರ್ಷದಲ್ಲಿ ಹಿಂದೆ ಕಳಿಸಿಕೊಟ್ಟ. ತನ್ನ ಕುಲವನ್ನು ಸಂಹರಿಸಲು ಬಯಸಿ ಬ್ರಾಹ್ಮಣ ಶಾಪವನ್ನು ಉಂಟು ಮಾಡಿದ.

ಶ್ರೀಕೃಷ್ಣನ ಇಚ್ಛೆಯಿಂದಲೆ ಬ್ರಾಹ್ಮಣ ಶಾಪ ಬಂದಿತು. ಅವನ ಇಚ್ಛೆಯಿಂದಲೆ ಗಾಂಧಾರಿಯೂ ಶಪಿಸಿದ್ದಳು.

ಯಾದವರು ಸಾಂಬನಿಗೆ ಗರ್ಭಿಣಿ ಸ್ತ್ರೀ ವೇಷ ತೊಡಿಸಿ ಈಕೆ ಪುತ್ರಾರ್ಥಿಯಾದ ಬಭ್ರುವಿನ ಹೆಂಡತಿ. ಇವಳು ಏನು ಹೆರುವಳು ಹೇಳಿ ಎಂದು ಬ್ರಾಹ್ಮಣರನ್ನು ಕೇಳಿ ಅಪಹಾಸಗೈದರು. ವಿಶ್ವಾಮಿತ್ರ ಅಸಿತ ಕಣ್ವ ಭೃಗು ದುರ್ವಾಸ ಅಂಗಿರ ಕಶ್ಯಪ ವಾಮದೇವ ನಾರದ ಗರ್ಗ ಮೊದಲಾದ ಮಹಾಮುನಿಗಳು ಕುಪಿತರಾದರು. ಗರ್ಗಮುನಿ ನಿಮ್ಮ ಕುಲವನ್ನು ನಾಶಮಾಡುವ ಒನಕೆಯನ್ನು ಹೆರುತ್ತಾನೆ. 'ಈ ಸಾಂಬ' ಎಂದರು. ಈ ಒನಕೆಯಿಂದ ನೀವು ಪರಸ್ಪರ ಹೊಡೆದುಕೊಂಡು ಹತರಾಗುವಿರಿ. ಬಲರಾಮ ಸಮುದ್ರವನ್ನು ಪ್ರವೇಶಿಸುತ್ತಾನೆ. ಶ್ರೀಕೃಷ್ಣನೂ ಜರಾವ್ಯಾಧನ ಬಾಣದಿಂದ ಶರೀರತ್ಯಾಗ ಮಾಡುತ್ತಾನೆ ಎಂದರು.

ಉಪದಿಶ್ಯ ಪರಂ ಜ್ಞಾನಮುದ್ಧವಾಯಾಮುಮಾಶ್ರಮಮ್ ।
ಬದರ್ಯಾಖ್ಯಂ ಪ್ರಾಪಯಿತ್ವಾ ಸಪ್ತಮಾಬ್ದಂ ಶತೋತ್ತರಮ್ ॥೯॥
ಪ್ರತೀಕ್ಷನ್ ಪಾಲಯಾಮಾಸ ಪಾರ್ಥೈಃ ಸಹ ಭುವಂ ಪ್ರಭುಃ ।
ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋಽಪತತ್ ।
ಷಟ್‌ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥೧೦॥

ಶ್ರೀಕೃಷ್ಣ ಉದ್ಧವನಿಗೆ ಉತ್ತಮ ಜ್ಞಾನವನ್ನು ಉಪದೇಶಿಸಿ ಬದರಿಕಾಶ್ರಮಕ್ಕೆ ಕಳಿಸಿ ತನಗೆ ಅವತಾರ ಸಮಾಪ್ತಿಗಾಗಿ ನೂರೇಳನೇ ವರ್ಷವನ್ನು ಪ್ರತೀಕ್ಷಿಸಿ ಪಾಂಡವರೊಂದಿಗೆ ಭೂಮಿಯನ್ನು ಆಳಿದ. ಯಾವಾಗ ದುರ್ಯೋಧನ ಪತನ ಹೊಂದಿದನೋ ಆಗಲೆ ಕಲಿಯುಗ ಪ್ರಾರಂಭವಾಯಿತು. ಆದರೆ ಶ್ರೀಕೃಷ್ಣ ಪುನಃ ಮೂವತ್ತಾರು ವರ್ಷ ಕೃತಯುಗವನ್ನೇ ನಡೆಸಿದ.

ಕೃತಾದಪಿ ವಿಶೇಷೋಽಯಂ ಯತ್ ಪುಣ್ಯಸ್ಯಾಧಿಕಂ ಫಲಮ್ ।
ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥೧೧॥

ಕಲಿಯುಗ ಸ್ವಭಾವದಿಂದ ಮತ್ತು ಶ್ರೀಕೃಷ್ಣನ ಸಂಕಲ್ಪದಿಂದ ಪುಣ್ಯಕರ್ಮಕ್ಕೆ ಅಧಿಕ ಫಲ, ಪಾಪಕರ್ಮಕ್ಕೆ ಅಲ್ಪ ಫಲವಾದ್ದರಿಂದ ಈ ಮೂವತ್ತಾರು ವರ್ಷಗಳ ಕಾಲ ಕೃತಯುಗಕ್ಕಿಂತಲೂ ಅಧಿಕವೆನಿಸಿತ್ತು.

ಏವಂ ಸುಧಾರ್ಮಿಕೇ ಲೋಕೇ ಹರಿಭಕ್ತಿಪರಾಯಣೇ ।
ನಷ್ಟೇಷು ಕಲಿಲಿಂಗೇಷು ಯುಗವೃತ್ತಿಮಭೀಪ್ಸವಃ ॥೧೨॥
ಬ್ರಹ್ಮರುದ್ರಾದಯೋ ದೇವಾಃ ಸ್ತುತ್ವಾ ಕೇಶವಮವ್ಯಯಮ್ ।
ವ್ಯಜ್ಞಾಪಯನ್ ಸ್ವಲೋಕಾಪ್ತಿಮೋಮಿತ್ಯಾಹ ಸ ಚಾಚ್ಯುತಃ ॥೧೩॥

ಹೀಗೆ ಲೋಕವು ಬಹಳ ಧರ್ಮನಿರತವಾಗಿದ್ದು ಹರಿಭಕ್ತಿಯಲ್ಲಿ ಆಸಕ್ತವಾದಾಗ ಕಲಿಯುಗದ ಲಕ್ಷಣಗಳು ಮರೆಯಾದಾಗ ಕಲಿಯುಗದ ಪ್ರವೃತ್ತಿಯಾಗಬೇಕೆಂದು ಬಯಸಿದ ಬ್ರಹ್ಮರುದ್ರಾದಿ ದೇವತೆಗಳು ಅವ್ಯಯನಾದ ಶ್ರೀಕೃಷ್ಣನನ್ನು ಸ್ತುತಿಸಿ ತನ್ನ ಲೋಕಕ್ಕೆ ಹಿಂತಿರುಗಿ ಬರಬೇಕೆಂದು ವಿಜ್ಞಾಪಿಸಿದರು. ಕೃಷ್ಣನೂ ಆಗಲಿ ಎಂದ.

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇರ್ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥೧೪॥

ಸಜ್ಜನರೆ ಭೂಮಿಯ ಮೇಲೆ ಅಧಿಕರಾದರೆ ಕಲಿಕಾಲದ ವಿಜೃಂಭಣೆ ಸರಿಯಾಗಿ ಆಗಲಾರದು ಎಂದು ತನ್ನ ಕುಲವನ್ನು ಸಂಹರಿಸಲು ಪ್ರಭಾಸಕ್ಕೆ ಕರೆದುಕೊಂಡು ಹೋದ, ಶ್ರೀಕೃಷ್ಣ.

ಯಾದವರೆಲ್ಲರೂ ದೇವಾಂಶಸಂಭೂತರಾದ ಸಜ್ಜನರು ಅವರ ಸಂಖ್ಯೆಯೂ ಅಪರಿಮಿತ. ಅವರು, ಅವರ ಸಂತತಿ ಬದುಕಿರುವಷ್ಟುಕಾಲ ಕಲಿ ಭೂಮಿಯಲ್ಲಿ ಚೆನ್ನಾಗಿ ಮೆರೆಯಲಾರ. ಮತ್ತು ಶ್ರೀಕೃಷ್ಣ ಪರಂಧಾಮಕ್ಕೆ ಹೋದಬಳಿಕ ಈ ಯಾದವರಲ್ಲಿ ಔದ್ಧತ್ಯಮುಂತಾದ ಮನೋವಿಕಾರಗಳೂ ಬರಬಹುದು. ತನ್ನೊಂದಿಗೆ ಅವರು ಶರೀರ ತ್ಯಾಗ ಮಾಡಿದರೆ ಅವರಿಗೆ ಪುಣ್ಯವೂ ಅಧಿಕ (ಭಾಗ.ತಾ.೧೧.೬.೩೦) ಹೀಗಾಗಿ ಅವರನ್ನೆಲ್ಲ ಪ್ರಭಾಸಕ್ಷೇತ್ರಕ್ಕೆ ಕರೆದುಕೊಂಡು ಹೋದ.

ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತ್ವತಿಧರ್ಮದಾ ।
ಗತ್ವೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹತ್ಫಲಮಿತ್ಯಜಃ ॥೧೫॥
ಪ್ರಕಾಶಯಿತುಮೇವೈತಾನ್ ಪ್ರಭಾಸಾಯ ಕುಶಸ್ಥಲಾತ್ ।
ನೀತ್ವಾ ದಾನಾನಿ ಸದ್ಧರ್ಮಾಂಸ್ತೈರಕಾರಯದಚ್ಯುತಃ ॥೧೬॥

ಪುಣ್ಯಕ್ಷೇತ್ರದಲ್ಲಿಯೂ ಸ್ವಗೃಹದಲ್ಲಿ ಮರಣ ಹೊಂದುವುದು ಹೆಚ್ಚು ಪುಣ್ಯದಾಯಕ

ವಲ್ಲ. ಅಲ್ಪವಾಗಿದ್ದರೂ ಬೇರೆಯೆ ಆದ ಕ್ಷೇತ್ರಕ್ಕೆ ಹೋದರೆಯೆ ಮಹಾಫಲ. ಇನ್ನು ಅಲ್ಲಿಯೆ ಮರಣ ಹೊಂದಿದರೆ ಏನು ಹೇಳಬೇಕು? ಎಂದು ತಿಳಿಸಲು ಶ್ರೀಕೃಷ್ಣ ಯಾದವರನ್ನು ಕುಶಸ್ಥಲದಿಂದ ಪ್ರಭಾಸಕ್ಕೆ ಒಯ್ದು ಅಲ್ಲಿ ಒಳ್ಳೆಯ ದಾನಧರ್ಮಕಾರ್ಯಗಳನ್ನು ಮಾಡಿಸಿದ.

ದ್ವಾರಕೆಯಲ್ಲಿ ಅನೇಕ ಅಪಶಕುನಗಳನ್ನು ಉಂಟುಮಾಡಿ ಶ್ರೀಕೃಷ್ಣ ಹೇಳಿದ- 'ಅಪಶಕುನಗಳಾಗುತ್ತಿವೆ. ಬ್ರಾಹ್ಮಣ ಶಾಪವೂ ಇದೆ. ನಾವೆಲ್ಲ ಪ್ರಭಾಸಕ್ಕೆ ಹೋಗಿ ಧಾನಧರ್ಮಗಳಿಂದ ಅನಿಷ್ಟಗಳನ್ನು ಪರಿಹರಿಸಿ ಕೊಳ್ಳೋಣ' ಎಂದು. ದ್ವಾರಕೆ ದೊಡ್ಡ ಪುಣ್ಯಕ್ಷೇತ್ರವೆ. ಆದರೂ ಬೇರೆಯೆ ಆದ ಒಂದು ಸಣ್ಣ ಪುಣ್ಯಕ್ಷೇತ್ರವನ್ನಾದರೂ ಸೇರಿ ಅಲ್ಲಿ ಮರಣ ಹೊಂದ ಬೇಕು. ಸ್ವಕ್ಷೇತ್ರದಲ್ಲಿ ಅಲ್ಲ ಎಂಬುದು ಶ್ರೀಕೃಷ್ಣನ ಅಭಿಪ್ರಾಯ.

ತೇ ತತಃ ಶಾಪದೋಷೇಣ ಕೃಷ್ಣೇನೈವ ವಿಮೋಹಿತಾಃ ।
ಮೈರೇಯಮತ್ತಾ ಅನ್ಯೋನ್ಯಂ ನಿಪಾತ್ಯ ಸ್ವಾಂ ತನುಂ ಗತಾಃ ॥೧೭॥
ತದ್ ದೃಷ್ಟ್ವಾ ಬಲದೇವೋಽಪಿ ಯೋಗೇನ ಸ್ವಾಂ ತನುಂ ಜಹೌ ॥೧೮॥

ಯಾದವರು ಬಳಿಕ ಶಾಪದೋಷದಿಂದ ಕೃಷ್ಣನಿಂದಲೆ ಮೋಹಪರವಶರಾದರು. ಮದ್ಯಪಾನದಿಂದ ಮತ್ತರಾಗಿ ಪರಸ್ಪರ ಸಂಹರಿಸಿ ತಮ್ಮ ನಿಜ ಸ್ವರೂಪವನ್ನು ಪಡೆದರು. ಅದನ್ನು ನೋಡಿ ಬಲರಾಮನೂ ಯೋಗದಿಂದ ತನ್ನ ಶರೀರವನ್ನು ಪರಿತ್ಯಜಿಸಿದ. ಮೂಲರೂಪನ್ನು ಪಡೆದ.

ಸೌಪ್ತಿಕದಲ್ಲಿ ಅಶ್ವತ್ಥಾಮನೊಂದಿಗೆ ಸೇರಿ ರಾತ್ರಿಯಲ್ಲಿ ಶಿಬಿರದ ಮುಗ್ಧ ಸ್ತ್ರೀಬಾಲಕರನ್ನು ಹತ್ಯೆ ಮಾಡಿದವನು, ಸ್ಯಮಂತಕ ಮಣಿಗಾಗಿ ಸತ್ರಾಜಿತನನ್ನು ಕೊಲ್ಲಿಸಿದವನು ಕೃತವರ್ಮನೆಂದು ಸಾತ್ಯಕಿ ಆಕ್ಷೇಪಿಸಿ ಜಗಳಕ್ಕೆ ಕರೆದ. ಪ್ರದ್ಯುಮ್ನನೂ ಸೇರಿದ. ಇಬ್ಬರೂ ಹತರಾದಾಗ ಶ್ರೀಕೃಷ್ಣ ದರ್ಭೆಯನ್ನು ಕಿತ್ತ. ಅದರಿಂದಲೆ ಹೊಡೆದು ಎಲ್ಲರನ್ನೂ ಕೊಂದ. ಈ ದರ್ಭೆ ಒನಕೆಯ ಅವಶೇಷದಿಂದ ಬೆಳೆದಿತ್ತು. ಉಗ್ರಸೇನನ ಆದೇಶದಂತೆ ಒನಕೆಯನ್ನು ಗಂಧದಂತೆ ತೇದು ಸಮುದ್ರಕ್ಕೆ ಹಾಕಲಾಗಿತ್ತು. ಆದರೆ ಆ ಪುಡಿ ಸಮುದ್ರತೀರಕ್ಕೆ ಬಂದು ದರ್ಭೆಯ ಹುಲ್ಲಾಗಿ ಬೆಳೆದಿತ್ತು. ಅದನ್ನು ಕಿತ್ತರೆ ಪ್ರತಿಯೊಂದು ಹುಲ್ಲುಕಡ್ಡಿಯೂ ವಜ್ರಾಯುಧದಂಥ ಒನಕೆಯಾಗಿ ಯಾದವರನ್ನು ಸಂಹರಿಸಿತು.

ಕೃಷ್ಣಾವತಾರ ಸಮಾಪ್ತಿ

ತತಃ ಪರೇಶೋಽಗಣಿತಾನುಭಾವಃ
ಸ್ವಸಾರಥಿಂ ಪಾಂಡವಾನಾಂ ಸಕಾಶಮ್ ।

ಸ್ವಲೋಕಯಾನಪ್ರತಿಬೋಧನಾಯ
ಸ್ವಸ್ಯಾನು ಚೈಷಾಂ ತ್ವರಯಾಽಭ್ಯಯಾತಯತ್ ॥೧೯॥

ಬಳಿಕ ಅನಂತಶಕ್ತಿ ಉಳ್ಳ ಶ್ರೀಕೃಷ್ಣ ಪಾಂಡವರಿಗೆ ತನ್ನ ಅನಂತರ ತಾವೂ ತಮ್ಮ ಲೋಕಕ್ಕೆ ತೆರಳಬೇಕೆಂದು ಸೂಚನೆ ಕೊಡುವುದಕ್ಕಾಗಿ ಅವರ ಬಳಿಗೆ ತನ್ನ ಸಾರಥಿಯಾದ ದಾರುಕನನ್ನು ತ್ವರೆಯಿಂದ ಕಳಿಸಿಕೊಟ್ಟ.

ಅಥಾಽಸತಃ ಪಿಪ್ಪಲಮೂಲ ಈಶಿತು-
ರೂರುಸ್ಥಿತಂ ಪಾದತಲಂ ಸುತಾಮ್ರಮ್ ।
ದೃಷ್ಟ್ವಾ ಜರಾ ನಾಮ ಸಸರ್ಜ ಶಲ್ಯಂ
ಭಕ್ತೋಽಪ್ಯಲಂ ರೋಹಿತಂ ಶಂಕಮಾನಃ ॥೨೦॥

ಬಳಿಕ ಅಶ್ವತ್ಥದ ಬುಡದಲ್ಲಿ ಕುಳಿತ ಶ್ರೀಕೃಷ್ಣನ ತೊಡೆಯ ಮೇಲಿರಿಸಿದ್ದ ಬಲು ಕೆಂಪಾದ ಅಂಗಾಲನ್ನು ಕಂಡು ಜರ ಎಂಬ ಬೇಡ, ಬಹಳ ಭಕ್ತನಾಗಿದ್ದರೂ, ರೋಹಿತ ಮೃಗವೆಂದು ಭ್ರಮಿಸಿ ಬಾಣವನ್ನೆಸೆದ.

ಇಲ್ಲಿ ಪ್ರಮಾಣ ಸಂಗ್ರಹಕಾರರು ಹೇಳುತ್ತಾರೆ-

'ವಸುದೇವನಿಗೆ ಶೂದ್ರಸ್ತ್ರೀಯಲ್ಲಿ ಜನಿಸಿದವ ಈ ಜರವ್ಯಾಧ. ಉತ್ತಮ ಬಿಲ್ಲುಗಾರ. ಮಹಾ ಬಲಿಷ್ಠ.

ಶೂದ್ರಾಯಾಮಭವದ್ವೀರೋ ವಸುದೇವಾನ್ಮಹಾಬಲಃ।
ಜರಾ ನಾಮ ನಿಷಾದಾನಾಂ ಪ್ರಭುಃ ಸರ್ವಧನುಷ್ಮತಾಂ॥

ಎನ್ನುತ್ತದೆ ಮಹಾಭಾರತ ಮೌಸಲ ಪರ್ವ.

ಗಾಂಧಾರೀ ಶಾಪದಿಂದ ಶ್ರೀಕೃಷ್ಣನ ಶರೀರತ್ಯಾಗಕ್ಕೂ ಒಬ್ಬ ವಸುದೇವ ಪುತ್ರನೇ ಆದ ಜರವ್ಯಾಧ ಬೇಕಾಯಿತು. ವಿಪ್ರಶಾಪದಿಂದ ಈ ವ್ಯಾಧ ಮೀನು ನುಂಗಿದ್ದ ಒನಕೆ ತುಂಡನ್ನು ಬಾಣದ ತುದಿಗೆ ಸೇರಿಸಿ ಎಸೆದಿದ್ದ. ದೂರ್ವಾಸರು ಶ್ರೀಕೃಷ್ಣನಿಗೆ ಅಂಗಾಲಲ್ಲಿ ಮೃತ್ಯು ಎಂದು ಶಾಪಕೊಟ್ಟಿದ್ದರಿಂದ ಅಂಗಾಲಿಗೇ ಬೇಡ ಬಾಣವನ್ನೆಸೆದಿದ್ದ.

ವಿಪ್ರಶಾಪದಿಂದಲೇ ಬಲರಾಮ ಸಮುದ್ರ ಪ್ರವೇಶ ಮಾಡಿದ.

ಅಚ್ಛೇದ್ಯಾಭೇದ್ಯದೇಹಸ್ಯ ಶಲ್ಯೇ ಪಾದಮುಪಸ್ಥಿತೇ ।
ಸಮೀಪಮಾಗತೋ ವ್ಯಾಧೋ ದೃಷ್ಟ್ವಾ ಭೀತೋಽಪತದ್ ಭುವಿ ॥೨೧॥

ಅಚ್ಛೇದ್ಯ ಅಭೇದ್ಯ ದೇಹದವನಾದ ಕೃಷ್ಣನ ಪಾದಕ್ಕೆ ಬಾಣಬಿದ್ದಾಗ ಸಮೀಪಕ್ಕೆ ಬಂದ ಬೇಡ ನೋಡಿ ಭಯಪಟ್ಟು ನೆಲದ ಮೇಲೆ ಬಿದ್ದು ನಮಿಸಿದ.

ವಿಪ್ರವಾಕ್ಯಂ ಮಾನಯಾನಃ ಕಾರಯಿತ್ವಾಽಽತ್ಮನಾ ಹರಿಃ ।
ಪಾಪಂ ಮಾ ಜಹಿ ದೇವೇತಿ ಯಾಚಂತಮನಯದ್ ದಿವಮ್ ॥೨೨॥

ಮುನಿಶಾಪವನ್ನು ಮಾನಿಸುತ್ತ ಶ್ರೀಕೃಷ್ಣ ಬೇಡನಿಂದ ಅದರಂತೆ ಮಾಡಿಸಿ ಅವನು 'ದೇವ, ಪಾಪಿಯಾದ ನನ್ನನ್ನು ಕೊಲ್ಲು' ಎಂದು ಬೇಡಿದಾಗ ಅವನನ್ನು ಸ್ವರ್ಗಕ್ಕೆ ಕಳಿಸಿದ.

ಪಾದಪ್ರಹಾರದೋಷೇಣ ತಂ ಭೃಗುಂ ವ್ಯಾಧತಾಂ ಗತಮ್ ।
ಪಶ್ಚಾತ್ತಾಪೇನ ಭಕ್ಯಾ ಚ ಸುಪ್ರೀತಸ್ತಚ್ಛರೀರಿಣಮ್ ।
ಸ್ವಾಜ್ಞಾಪ್ರಾಪ್ತವಿಮಾನೇನ ದಿವಂ ನಿನ್ಯೇ ಜನಾರ್ದನಃ ॥೨೩॥
ನೀಚಾ ಯೋನಿರ್ನೀಚನೀಚ ಕರ್ಮಾಕಪ್ತಂ ನೀಚಕರ್ಮತಃ ।
ಅದುಷ್ಟತ್ವಾತ್ತು ಮನಸೋ ಭಕ್ತಿಲೋಪೋ ನಚಾಪ್ಯಭೂತ್ ॥೨೪॥
ಭೃಗೋರತ್ರಾಬುದ್ಧಿಪೂರ್ವಂ ನಾತಿದೋಷಕೃದಪ್ಯಭೂತ್ ॥೨೫॥

ಶ್ರೀಹರಿಗೆ ಕಾಲಿಂದ ಒದ್ದ ಪಾಪದಿಂದ ಭೃಗುಮುನಿ ಬೇಡನ ಜನ್ಮ ಪಡೆದಿದ್ದ. ಶ್ರೀಕೃಷ್ಣ ಅವನ ಪಶ್ಚಾತ್ತಾಪದಿಂದಲೂ ಭಕ್ತಿಯಿಂದಲೂ ಸುಪ್ರೀತನಾಗಿ, ನೀಚಕರ್ಮದಿಂದ ನೀಚವಾದ ಯೋನಿಯನ್ನೂ ನೀಚಕ್ಕಿಂತ ನೀಚವಾದ ಕರ್ಮವನ್ನೂ ಹೊಂದಿದ್ದ ಅವನನ್ನು ಆ ಶರೀರದಿಂದಲೇ ತನ್ನಾಜ್ಞೆಯಿಂದ ಬಂದ ವಿಮಾನದಿಂದ ಸ್ವರ್ಗಕ್ಕೆ ಕಳಿಸಿದ. ಎದೆಗೆ ಒದ್ದಾಗ ಭೃಗುವಿನ ಮನಸ್ಸು ದುಷ್ಟವಾಗಿರಲಿಲ್ಲವಾದ್ದರಿಂದ ವ್ಯಾಧ ಜನ್ಮದಲ್ಲಿಯೂ ಭಕ್ತಿಲೋಪವಾಗಿರಲೀ ಈ ವ್ಯಾಧ ಜನ್ಮದಲ್ಲಿಯೂ ತಿಳಿಯದೆ ಬಾಣ ಎಸೆದುದರಿಂದ ಹೆಚ್ಚು ಪಾಪಕರವೂ ಆಗಲಿಲ್ಲ

ತ್ರೇತಾಯುಗದ ವಾಲಿಯೆ ಹಿಂದಿನ ಸೇಡನ್ನು ತೀರಿಸಲೆಂದು ದ್ವಾಪರದಲ್ಲಿ ಬೇಡನಾಗಿ ಹುಟ್ಟಿದ್ದನೆಂದು ಹೇಳುವುದುಂಟು. ಅದನ್ನು ನಿರ್ಣಯ ಒಪ್ಪುವುದಿಲ್ಲ. ಹಿಂದೆ ತ್ರಿಮೂರ್ತಿಗಳನ್ನು ಪರೀಕ್ಷಿಸಲು ಬಂದು ಹರಿಯ ಎದೆಗೆ ಒದ್ದ ಭೃಗುಮುನಿ ಆ ಪಾಪದಿಂದ ಬೇಡನಾಗಿ ಹುಟ್ಟಿದ್ದ ಎನ್ನುತ್ತದೆ. ಪರೀಕ್ಷೆಗಾಗಿಯಾದರೂ ಎದೆಗೆ ಒದ್ದುದು ನೀಚ ಕರ್ಮ. ಅದರಿಂದ ಬಂದ ಬೇಡಜನ್ಮ ನೀಚ ಜನ್ಮ. ಅದರಿಂದ ಶ್ರೀಕೃಷ್ಣನ ಕಾಲಿಗೆ ಬಾಣ ಎಸೆದುದು ಎದೆಗೆ ಒದ್ದ ನೀಚಕರ್ಮಕ್ಕಿಂತಲೂ ನೀಚವಾದ ಕರ್ಮ. ಆದರೂ ಹರಿಸರ್ವೋತ್ತಮತ್ವವನ್ನು ಸ್ಥಾಪಿಸಿದ ಪುಣ್ಯದಿಂದ ಮತ್ತು ಎದೆಗೆ ಒದ್ದಾಗ ಮನಸ್ಸು ಶುದ್ಧವೆ ಇದ್ದುದರಿಂದ, ವ್ಯಾಧ ಜನ್ಮದಲ್ಲಿಯೂ ವಿಷ್ಣುಭಕ್ತಿ ಲೋಪವಾಗಿರಲಿಲ್ಲ. ಮತ್ತು ತಿಳಿಯದೆ ಬಾಣ ಎಸೆದುದಕ್ಕೆ ಪಶ್ಚಾತ್ತಾಪವೂ ಉಂಟಾಗಿತ್ತು. ಅದರಿಂದ ಸಶರೀರ ಸ್ವರ್ಗ ಪ್ರಾಪ್ತಿಯಾಯಿತು.

[1]ಶ್ರೀಕೃಷ್ಣನ ಪಾದ ಅಚ್ಛೇದ್ಯ ಅಭೇದ್ಯವಾದ್ದರಿಂದ ಅದಕ್ಕೆ ಬೇಡನ

---

1. ಅಪಿಪದೇನ ಭಕ್ತಿರೂಪ ಮಹಾ ಪ್ರಾಯಶ್ಚಿತ್ತಕರಣಾತ್ ಕೃಷ್ಣಚರಣಸ್ಯೇಷದಪಿ ವೇಧಾಭಾವೇನ ಸುವರ್ಣಪುಷ್ಪ ಪೂಜಾವತ್ ಅಯೋಮಯ ಪುಷ್ಪ ಪೂಜೋಪಮತ್ವೇನ ಈಷದಪಿ ದೋಷೋ ನಾಸ್ತೀತಿ ಸೂಚಿತಂ। ಅನ್ಯಥಾ ತೇನೈವ ಶರೀರೇಣ ಸ್ವರ್ಗಾರೋಹಣಾಯೋಗಾತ್। -ವಾದಿರಾಜೀಯ

ಬಾಣದಿಂದ ಏನೂ ಗಾಯವಾಗಲಿಲ್ಲ. ಬೇಡನ ಭಕ್ತಿಗೆ ಒಲಿದು ಶ್ರೀಕೃಷ್ಣ ಬೇಡನ ಬಾಣದ ಏಟನ್ನು ಸುವರ್ಣಪುಷ್ಪಾರ್ಚನೆಯಂತೆ ಆಯೋಮಯ ಪುಷ್ಪಾರ್ಚನೆ ಎಂದೇ ಬಗೆದು ಸ್ವೀಕರಿಸಿದ. ಆದರಿಂದ ಏನೂ ಪಾಪ ಬರಲಿಲ್ಲ. ಇಲ್ಲದಿದ್ದರೆ ಆದೇ ಶರೀರದಿಂದ ಸ್ವರ್ಗಾರೋಹಣ ಶಕ್ಯವಾಗುತ್ತಿರಲಿಲ್ಲ.

[1]ಬೇಡ ಧರ್ಮರಾಜನಂತೆ ಸಶರೀರನಾಗಿ ಸ್ವರ್ಗಕ್ಕೆ ಹೋದರೂ ಅಲ್ಲಿ ಆಕಾಶಗಂಗೆಯಲ್ಲಿ ಶರೀರ ತ್ಯಾಗ ಮಾಡಿದ. ಆದರಿಂದ ನನ್ನ ಅನುಗ್ರಹದಿಂದ ಒಬ್ಬ ಬೇಡ ಸಶರೀರನಾಗಿ ಸ್ವರ್ಗಕ್ಕೆ ಹೋಗಬಲ್ಲ. ನಾನು ಹೋಗಲಾರೆನೆ? ಎಂದು ತಿಳಿಸುವ ಉದ್ದೇಶವಷ್ಟೆ ಕೃಷ್ಣನದು.

ತತೋ ವಿರಿಂಚೇಶಪುರಂದರಾದ್ಯಾಃ
ಪುನಃ ಸ್ತುವಂತೋಽಭಿಯಯುಃ ಪ್ರಣಮ್ಯ ।
ಕೃಷ್ಣಂ ಸ ಚಾಶ್ವೇವ ಯಯೌ ಸ್ವಲೋಕಂ
ಸ್ವತೇಜಸಾ ಸರ್ವಮಿದಂ ಪ್ರಕಾಶಯನ್ ॥ ೨೬ ॥

ಶ್ರೀಕೃಷ್ಣ ತನ್ನ ಪ್ರಕಾಶದಿಂದ ಈ ಲೋಕವನ್ನೆಲ್ಲ ಬೆಳಗುತ್ತ ಬೇಗನೆ ತನ್ನ ಲೋಕಕ್ಕೆ ತೆರಳಿದ. ಬ್ರಹ್ಮರುದ್ರ ಇಂದ್ರಾದಿಗಳು ಪುನಃ ಶ್ರೀಕೃಷ್ಣನನ್ನು ಸ್ತೋತ್ರ ಮಾಡುತ್ತ ನಮಿಸಿ ಅವನನ್ನು ಹಿಂಬಾಲಿಸಿದರು.

ಗೋಪಾಲಮಂತ್ರಂ ಭಜತಾಂ ಫಲಪ್ರದ
ಸ್ತ್ವೇಕೇನ ರೂಪೇಣ ಸ ಭುವ್ಯದೃಶ್ಯಃ ।
ತಸ್ಥೌ ದ್ವಿತೀಯೇನ ಚ ಸೂರ್ಯಮಂಡಲೇ
ತೃತೀಯಮಾಸೀಚ್ಛಿವಪೂಜಿತಂ ವಪುಃ ॥ ೨೭ ॥

ಗೋಪಾಲ ಮಂತ್ರವನ್ನು ಭಜಿಸುವವರಿಗೆ ಫಲಪ್ರದವಾಗಿ ಒಂದು ರೂಪದಿಂದ ಶ್ರೀಕೃಷ್ಣ ಭೂಮಿಯಲ್ಲಿ ಅದೃಶನಾಗಿ ನಿಂತ. ಎರಡನೇ ರೂಪದಿಂದ ಸೂರ್ಯಮಂಡಲದಲ್ಲಿ ನಿಂತ. ಮೂರನೆಯ ರೂಪ ಶಿವನಿಂದ ಪೂಜಿತವಾಗಿ ನಿಂತಿತು.

ಸಂಪೂಜಿತಂ ಬ್ರಹ್ಮಲೋಕೇ ಚತುರ್ಥಂ
ಕಂಜೋದ್ಭವೇನಾಥ ಪರಂ ಸ್ವಧಾಮ ।
ಸಮಾಪ್ನುವಾನಂ ವಪುರಸ್ಯ ಪಂಚಮಂ
ಭಕ್ತ್ಯೈಕನ್ವಯುರ್ದೇವವರಾಃ ಸ್ವಶಕ್ತ್ಯಾ ॥ ೨೮ ॥

1. ವ್ಯಾಧಸ್ಯ ತದ್ದೇಹೇನೈವ ಸ್ವರ್ಗದಾನಂ ವ್ಯಾಧೋಽಪಿ ಏತದ್ದೇಹೇನೈವ ಮದನುಗ್ರಹೇಣೈವ ಸ್ವರ್ಗಂ ಗತಃ ಕಿಮ್ವಹಮಿತಿ ಕೈಮುತ್ಯ ದ್ಯೋತನಾರ್ಥಂ । ದಿವಂ ನಿನ್ಯೇ। ತತ್ರ ಚಾಕಾಶ ಗಂಗಾಯಾಂ ದೇಹಂ ತ್ಯಕ್ತ್ವಾ ಸ್ವರ್ಗಂ ಗತಃ। ಧರ್ಮಜವತ್। -ಪ್ರಮಾಣಸಂಗ್ರಹ

ನಾಲ್ಕನೆಯ ರೂಪ ಬ್ರಹ್ಮಲೋಕದಲ್ಲಿ ಬ್ರಹ್ಮನಿಂದ ಪೂಜಿತವಾಗಿ ನಿಂತಿತು. ಬಳಿಕ ತನ್ನ ಪರಂಧಾಮವನ್ನು ಹೊಂದುತ್ತಿದ್ದ ಶ್ರೀಕೃಷ್ಣನ ಐದನೇ ರೂಪವನ್ನು ದೇವೋತ್ತಮರು ಭಕ್ತಿಯಿಂದ ತಮ್ಮ ಶಕ್ತಿ ಇದ್ದಷ್ಟು ಹಿಂಬಾಲಿಸಿದರು.

ತತ್ತೇಜಸಾ ತೇ ಪ್ರವಿಮುಷ್ಟದೃಷ್ಟಯಃ
ಪುರುಷ್ಟುತಾದ್ಯಾ ಅಮಿತೋರುದೀಧಿತೇಃ।
ಯಾವತ್ ಸ್ವಗಮ್ಯಂ ತ್ವನುಗಮ್ಯ ತಸ್ಥು-
ರ್ನಿಮೀಲಿತಾಕ್ಷಾ ವಿಹತೋರ್ಧ್ವಚಾರಾಃ ॥ ೨೯ ॥

ಅಮಿತ ಮಹಾ ಪ್ರಕಾಶಶಾಲಿಯಾದ ಶ್ರೀಕೃಷ್ಣನ ಐದನೆ ರೂಪದ ಪ್ರಕಾಶದಿಂದ ಇಂದ್ರಾದಿ ದೇವತೆಗಳಿಗೆ ಕಣ್ಣು ಕಾಣದಾಯಿತು. ತಮಗೆ ಎಷ್ಟು ದೂರ ಹಿಂಬಾಲಿಸಲು ಸಾಧ್ಯವೋ ಅಷ್ಟು ದೂರಕ್ಕೆ ಹಿಂಬಾಲಿಸಿ ಕಣ್ಣುಮುಚ್ಚಿ ಮೇಲೆ ಹೋಗಲಾರದೆ ನಿಂತು ಬಿಟ್ಟರು.

ಏಂದ್ರೇಶಶೇಷಾನುಗತಃ ಸ್ವಯಂಭೂ-
ರ್ಧಾಮ ಪ್ರವಿಷ್ಟಂ ತಮಜಂ ಪ್ರಣಮ್ಯ।
ಏಂದ್ರಾದಿಕೈರಪ್ಯಯುತಃ ಸ್ವಪಿತ್ರಾಽ-
ಶ್ಲಿಷ್ಟೋ ರಹಶ್ಚಾಽಕಥಯತ್ ತಥಾಽಸ್ತೌತ್ ॥ ೩೦ ॥

ಗರುಡ ಶೇಷ ರುದ್ರರು ಜೊತೆಗೆ ಬರುತ್ತಿದ್ದರೂ ಅವರನ್ನು ಬಿಟ್ಟು ಬ್ರಹ್ಮ, ವೈಕುಂಠಧಾಮವನ್ನು ಪ್ರವೇಶಿಸಿದ ಹರಿಯನ್ನು ನಮಿಸಿ ತನ್ನ ತಂದೆಯಾದ ಆತನಿಂದ ಆಲಿಂಗಿತನಾಗಿ ರಹಸ್ಯ ಸಂಭಾಷಣೆಯನ್ನೂ ನಡೆಸಿದ. ಹಾಗೇ ಸ್ತೋತ್ರವನ್ನೂ ಮಾಡಿದ.

ನಿನ್ನ ಅಂಗಸಂಗದಿಂದ ಪವಿತ್ರರಾದ ಗೋಪಿಯರು ಮುಂತಾದವರಿಗೆ ಮೊದಲಿಗಿಂತಲೂ ಉತ್ತಮವಾದ ಲೋಕಗಳನ್ನು ಕೊಡುತ್ತೇನೆ ಎಂದು ಮುಂತಾಗಿ ರಹಸ್ಯದಲ್ಲಿ ಹೇಳಿದ ಬ್ರಹ್ಮ. -ವಾದಿರಾಜೀಯ

ಸ ಪೂರ್ವರೂಪೇಣ ಸಮಾಪ್ಯ ಚೈಕ್ಯಂ
ವಿಭಜ್ಯ ಚೇಚ್ಛಾನುಸೃತೋಽಥ ರೇಮೇ।
ಹರಿಃ ಶ್ರಿಯಾ ಬ್ರಹ್ಮಮುಖೈಶ್ಚ ಮುಕ್ತೈಃ
ಸಂಪೂಜ್ಯಮಾನೋಽಮಿತಸದ್ಗುಣಾತ್ಮಾ ॥ ೩೧ ॥

ಲಕ್ಷ್ಮಿಯಿಂದಲೂ ಬ್ರಹ್ಮಾದಿ ಮುಕ್ತರಿಂದಲೂ ಚೆನ್ನಾಗಿ ಪೂಜಿಸಿಕೊಳ್ಳುವ ಅಪರಿಮಿತ ಸದ್ಗುಣ ಸ್ವರೂಪನಾದ ಶ್ರೀಕೃಷ್ಣ ತನ್ನ ಮೂಲರೂಪದಿಂದ ಐಕ್ಯ ಹೊಂದಿಯೂ ವಿಶೇಷ ಶಕ್ತಿಯಿಂದ ಬೇರೆಯಾಗಿಯೂ ಇದ್ದು ಇಚ್ಛಾನುಸಾರವಾಗಿ ಲಕ್ಷ್ಮಿಯೊಂದಿಗೆ ವಿಹರಿಸಿದ.

ಬ್ರಹ್ಮಾಽಪಿ ಶರ್ವಾದಿಯುತಃ ಸ್ವಲೋಕಂ
ಪ್ರಾಪ್ತಃ ಪುನಸ್ತತ್ರ ಗತಂ ಚ ಕೃಷ್ಣಮ್।

ರೇಮೇಽಭಿಪಶ್ಯನ್ ಪ್ರತಿಪೂಜಯಂಸ್ತಂ
ಸುರಾಶ್ಚ ಸರ್ವೇ ರವಿಬಿಂಬಸಂಸ್ಥಮ್ ॥೩೨॥

ಬ್ರಹ್ಮನೂ ರುದ್ರಾದಿ ಸಮೇತನಾಗಿ ತನ್ನ ಲೋಕವನ್ನು ಹೊಂದಿ ಪುನಃ ಅಲ್ಲಿದ್ದ ಕೃಷ್ಣನನ್ನು ನೋಡುತ್ತ ಪೂಜಿಸುತ್ತ ಆನಂದಿಸಿದ. ಎಲ್ಲ ದೇವತೆಗಳೂ ಸೂರ್ಯ ಬಿಂಬದಲ್ಲಿದ್ದ ಕೃಷ್ಣನನ್ನು ನೋಡುತ್ತ ಪೂಜಿಸುತ್ತ ಆನಂದಿಸಿದರು.

ಯತೋ ನ ದರ್ಶಿತಾ ಭ್ರಾಂತಿಃ ಪ್ರಾದುರ್ಭಾವೇಷ್ವಪಿ ಕ್ವಚಿತ್ ।
ದೇಹತ್ಯಾಗಾನುಕಾರೇಣ ಹರಿಣಾ ತದಿಹಾಚ್ಯುತಃ ॥೩೩॥
ಮೋಹಯಿತ್ವಾಽಸುರಾನಂಧಂ ತಮಃ ಪ್ರಾಪಯಿತುಂ ಪ್ರಭುಃ ।
ಚಿದಾನಂದೈಕದೇಹೋಽಪಿ ತ್ಯಕ್ತಂ ದೇಹಮಿವಾಪರಮ್ ।
ಸೃಷ್ಟ್ವಾ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ ದಿವಮ್ ॥೩೪॥
ದಾರುಕೋಕ್ತ್ಯಾ ಸಮಾಯಾತಃ ಪಾರ್ಥಸ್ತಮದಹತ್ ತದಾ ॥೩೫॥
ರೌಹಿಣೇಯಾದಿಕಾನಾಂ ಚ ಶರೀರಾಣಿ ಪ್ರಧಾನತಃ ।
ದಾರುಕೋ ವಿಷ್ಣುಲೋಕಂ ತು ಪುನರಾಪ ಯಥಾಗತಮ್ ॥೩೬॥

ಶ್ರೀಹರಿ ಹಿಂದೆ ಯಾವ ಅವತಾರಗಳಲ್ಲಿಯೂ ದೇಹತ್ಯಾಗದ ನಟನೆಯಿಂದ ಭ್ರಾಂತಿ ಉಂಟು ಮಾಡದಿದ್ದುದರಿಂದ ಈ ಕೃಷ್ಣಾವತಾರದಲ್ಲಿ ಪ್ರಭು ಅಚ್ಯುತ ಅಸುರರನ್ನು ಮೋಹಗೊಳಿಸಿ ಅಂಧಂತಮಸ್ಸಿಗೆ ನೂಕಲು ತಾನು ಚಿದಾನಂದ ಮಾತ್ರ ಶರೀರನಾಗಿದ್ದರೂ ತ್ಯಕ್ತವಾದ ದೇಹದಂತೆ ಕಾಣುವ ತನ್ನ ದೇಹಕ್ಕೆ ಸದೃಶವಾದ ಇನ್ನೊಂದು ಗೌಣ ದೇಹವನ್ನು ನಿರ್ಮಿಸಿ ನೆಲದ ಮೇಲೆ ಒರಗಿಸಿ ವೈಕುಂಠಕ್ಕೆ ತೆರಳಿದ. ಆಗ ದಾರುಕನ ಮಾತಿನಿಂದ ಬಂದ ಅರ್ಜುನ ಅದನ್ನೂ ಬಲರಾಮ ಮುಂತಾದವರ ಮುಖ್ಯ ಶರೀರಗಳನ್ನೂ ದಹಿಸಿದ. ದಾರುಕ ಬಂದ ಹಾಗೆಯೇ ತಿರುಗಿ ವಿಷ್ಣುಲೋಕಕ್ಕೆ ತೆರಳಿದ.

ಅರ್ಜುನ ದಹಿಸಿದ ಕೃಷ್ಣನ ಶರೀರ ವಾಸ್ತವದಲ್ಲಿ ಕೃಷ್ಣನ ಶರೀರವಲ್ಲ. ಅದಕ್ಕೆ ಸದೃಶ ಮಾತ್ರ. ಚಿತ್ರದಲ್ಲಿ ಬರೆದ ಸಿಂಹ ನಿಜವಾದ ಸಿಂಹವಲ್ಲ. ಅದಕ್ಕೆ ಸದೃಶ ಹೇಗೋ ಹಾಗೆ. ಅದರಿಂದ ಅದು ಗೌಣ ಶರೀರ. ಬಲರಾಮಾದಿಗಳ ಶರೀರ ಹೀಗೆ ಗೌಣ ಶರೀರವಲ್ಲ. ಮುಖ್ಯವೆ. ಶ್ರೀಕೃಷ್ಣನ ಶರೀರವೂ ಹಾಗೇ ಮುಖ್ಯವೆಂದು ಅಸುರರಿಗೆ ಮೋಹ ಉಂಟುಮಾಡಿದ್ದಾನೆ. ಸಜ್ಜನರಿಗೆ ಮೋಹ ಉಂಟಾಗಲು ಶಕ್ಯವಿಲ್ಲ. ಬೇಡನಿಗೇ ಸಶರೀರವಾಗಿ ಪರಲೋಕ ನೀಡಿದ ಶ್ರೀಕೃಷ್ಣ ತಾನು ಸಶರೀರನಾಗಿ ಹೋಗಲಾರನೆ? ಎಂದು ಅವರಿಗೆ ಯಥಾರ್ಥ ಜ್ಞಾನವೇ ಇರುತ್ತದೆ.

ತಥೈವ ಜನಮೋಹಾಯ ಪ್ರಾಪ ವಹ್ನಾವದೃಶ್ಯತಾಮ್ ।
ರುಕ್ಮಿಣ್ಯಗಾದ್ಧರೇಃ ಪಾರ್ಶ್ವಂ ಸತ್ಯಾ ಕೃತ್ವಾ ತಪಸ್ತಥಾ ॥೩೭॥

ಕೃಷ್ಣನಂತೆಯೆ ರುಕ್ಮಿಣಿಯೂ ಜನರಿಗೆ ಮೋಹ ಉಂಟುಮಾಡುವುದಕ್ಕಾಗಿ ಬೆಂಕಿಯಲ್ಲಿ ಅದೃಶ್ಯಳಾದಳು. ಹಾಗೇ ಸತ್ಯಭಾಮೆಯೂ ತಪಸ್ಸು ಮಾಡಿ ಕಾಡಿನಲ್ಲಿ ಮರೆಯಾಗಿ ಹರಿಯ ಒಳಿ ಸೇರಿದಳು.

ಚಿದಾನಂದೈಕದೇಹೇ ಹಿ ದ್ವಿರೂಪೇ ಇವ ತೇ ಯತಃ ।
ಏಕೈವಾತಃ ಕೃಷ್ಣವತ್ ತೇ ದುಷ್ಪಾನ್ ಮೋಹಯತಸ್ತಥಾ ॥೩೮॥

ರುಕ್ಮಿಣೀ ಸತ್ಯಭಾಮೆಯರು ಎರಡು ರೂಪದವರಂತಿದ್ದರೂ ಏಕಮಾತ್ರ ಲಕ್ಷ್ಮೀಸ್ವರೂಪರೇ ಆಗಿದ್ದು ಚಿದಾನಂದೈಕ ದೇಹರೇ ಆಗಿರುವುದರಿಂದ ಕೃಷ್ಣನಂತೆ ದುಷ್ಟರಿಗೆ ಮೋಹಗೊಳಿಸುತ್ತಾರಷ್ಟೆ.

ಅನ್ಯಾ ಮಹಾಮಹಿಷ್ಯಸ್ತು ತ್ಯಕ್ತ್ವಾ ದೇಹಂ ಹುತಾಶನೇ ।
ಕಾಶ್ಚಿತ್ ಕಾಶ್ಚಿಚ್ಚ ತಪಸಾ ತ್ಯಕ್ತದೇಹಾ ಹರಿಂ ಯಯುಃ ॥೩೯॥

ಜಾಂಬವತೀ ಮುಂತಾದ ಇತರ ಮಹಾಮಹಿಷಿಯರು ಕೆಲವರು ದೇಹವನ್ನು ಅಗ್ನಿಯಲ್ಲಿ ಪರಿತ್ಯಜಿಸಿ, ಇನ್ನು ಕೆಲವರು ತಪಸ್ಸಿನಿಂದ ದೇಹತ್ಯಾಗಮಾಡಿ ಹರಿಯನ್ನು ಹೊಂದಿದರು.

ರೌಹಿಣೇಯಾದಿಕಾನಾಂ ಚ ಭಾರ್ಯಾ ವಹ್ನಿಮುಖೇ ತನುಮ್ ।
ತ್ಯಕ್ತ್ವಾ ಸ್ವಭರ್ತೃಸೇವಾಽಪುಃ ಸರ್ವಾ ಏವ ಪತಿವ್ರತಾಃ ॥೪೦॥

ಬಲರಾಮಾದಿಗಳ ಪತ್ನಿಯರೂ ಪತಿವ್ರತೆಯರು. ಅಗ್ನಿಮುಖದಲ್ಲಿ ಸಹಗಮನ ಮಾಡಿ ಶರೀರವನ್ನು ತ್ಯಜಿಸಿ ತಮ್ಮ ಪತಿಗಳನ್ನೇ ಸೇರಿದರು.

ವಸುದೇವಃ ಪಾರ್ಥಮುಖಾಚ್ಛ್ರುತ್ವೈತದ್ ಯೋಗಮಾಸ್ಥಿತಃ ।
ತ್ಯಕ್ತ್ವಾ ದೇಹಂ ಕಶ್ಯಪತ್ವಂ ಪ್ರಾಪ ಕೃಷ್ಣಾನುರಾಗತಃ ॥೪೧॥

ವಸುದೇವ, ಅರ್ಜುನನ ಮುಖದಿಂದ ಇದನ್ನು ಕೇಳಿ ಯೋಗವನ್ನು ಅವಲಂಬಿಸಿ ಕೃಷ್ಣಭಕ್ತಿಯಿಂದ ದೇಹವನ್ನು ತೊರೆದು ಕೃಷ್ಣನ ಅನುಗ್ರಹದಿಂದ ಕಶ್ಯಪನಾದ.

ಕಶ್ಯಪಾವತಾರನಾದ ವಸುದೇವ ಯೋಗಬಲದಿಂದ ಶರೀರತ್ಯಾಗ ಮಾಡಿ ತನ್ನ ಮೂಲರೂಪವನ್ನು ಸೇರಿ ಐಕ್ಯಹೊಂದಿ ಕಶ್ಯಪನೇ ಆದ.

ತಸ್ಯಾರ್ಜುನೋಽಶ್ವಮೇಧಾಗ್ನಾವಂತ್ಯಕರ್ಮಾಕರೋತ್ ತದಾ ।
ತ್ಯಕ್ತದೇಹಾಸ್ತಸ್ಯ ಭಾರ್ಯಾ ವಹ್ನೌ ಪ್ರಾಪುಸ್ತಮೇವ ಚ ॥೪೨॥

ವಸುದೇವನಿಗೆ ಅವನ ಅಶ್ವಮೇಧಾಗ್ನಿಯಲ್ಲಿಯೆ ಅರ್ಜುನ ಅಂತ್ಯಕ್ರಿಯೆ ಮಾಡಿದ. ಅವನ ಪತ್ನಿಯರೂ ಅದೇ ಅಗ್ನಿಯಲ್ಲಿ ಪತಿಯೊಂದಿಗೆ ಸಹಗಮನ ಮಾಡಿ ಶರೀರವನ್ನು ತೊರೆದು ಸ್ವರ್ಗದಲ್ಲಿ ಅವನನ್ನೇ ಸೇರಿದರು.

ಕೃಷ್ಣ ಪತ್ನಿಯರ ಪಾಡು

ಸ್ತ್ರಿಯೋ ಬಾಲಾಂಸ್ತಥಾಽಽದಾಯ ಧನಂ ಚೈವ ಧನಂಜಯಃ ।
ವಿನಿರ್ಯಯೌ ದ್ವಾರವತ್ಯಾಸ್ತಾಂ ಜಗ್ರಾಸ ಚ ಸಾಗರಃ ॥ ೪೩ ॥

ಅರ್ಜುನ ಕೃಷ್ಣನ ಹದಿನಾರು ಸಾವಿರದ ನೂರು ಮಂದಿ ಮಡದಿಯರನ್ನೂ ಬಾಲಕರನ್ನೂ ಧನವನ್ನೂ ಹಿಡಿದುಕೊಂಡು ದ್ವಾರಕೆಯಿಂದ ಹೊರಗೆ ನಡೆದ. ಆಗ ದ್ವಾರಕೆಯನ್ನು ಸಮುದ್ರ ಮುಳುಗಿಸಿತು.

ಬ್ರಹ್ಮನ ಪ್ರತಿದಿನವೂ ಇಪ್ಪತ್ತೆಂಟನೆ ದ್ವಾಪರದ ಕೊನೆಯಲ್ಲಿ ಸಮುದ್ರರಾಜ ತನ್ನೊಳಗೆ ಜೋಪಾನವಾಗಿರಿಸಿಕೊಂಡ ದ್ವಾರಕೆಯನ್ನು ಕೃಷ್ಣನಿಗೆ ಕೊಡುತ್ತಾನೆ. ಕೃಷ್ಣ ತೆರಳಿದಾಗ ತಿರುಗಿ ತನ್ನೊಳಗೆ ಸೇರಿಸಿಕೊಳ್ಳುತ್ತಾನೆ. 'ಕೋಶಧಾರೋಹ್ಯಹಂ ತಸ್ಯ' ಎಂದು ಭಾರತದಲ್ಲಿ ತಾನು ಕೃಷ್ಣನ ಕೋಶಧಾರಕನೆಂದು ಹೇಳಿಕೊಳ್ಳುತ್ತಾನೆ ಸಮುದ್ರರಾಜ.. ಬ್ರಹ್ಮಪ್ರಲಯ ಪರ್ಯಂತವೂ ಈ ದ್ವಾರಕೆಗೆ ಲಯವಿಲ್ಲ. ದೈನಂದಿನ ಲಯದಲ್ಲಿ ಭೂಮ್ಯಂತರಿಕ್ಷ ಸ್ವರ್ಗಗಳು ಲಯ ಹೊಂದುವಾಗಲೂ ದ್ವಾರಕೆ ಘನೋದಕದಲ್ಲಿ ಇದ್ದೇ ಇರುತ್ತದೆ ಎನ್ನುತ್ತದೆ ಲಕ್ಷ್ಮಾಲಂಕಾರ.

ಸ್ತ್ರೀಬಾಲಸಹಿತೇ ಪಾರ್ಥ ಏಕಸ್ಮಿನ್ ಪಥಿ ಗಚ್ಛತಿ ।
ಶಾಪಾತ್ ಸುಪಾಪಾ ಆಭೀರಾಃ ಸ್ತ್ರೀಜನಾನ್ ಜಹ್ರುರುದ್ಧತಾಃ ॥ ೪೪ ॥

ಸ್ತ್ರೀಯರಿಂದಲೂ ಬಾಲಕರಿಂದಲೂ ಸಹಿತನಾಗಿ ಅರ್ಜುನ ನಡೆದಾಗ ಒಂದು ದಾರಿಯಲ್ಲಿ ಶ್ರೀಕೃಷ್ಣನ ಶಾಪದಿಂದ ಮಹಾಪಾಪಿಗಳಾದ ಮ್ಲೇಚ್ಛರು ಉದ್ಧತರಾಗಿ ಸ್ತ್ರೀಯರನ್ನು ಅಪಹರಿಸಿದರು.

ಯಾಸ್ತಾಃ ಷೋಡಶಸಾಹಸ್ರವನಿತಾಃ ಶತಸಂಯುತಾಃ ।
ಕೃಷ್ಣಶಾಪಾನ್ಮ್ಲೇಚ್ಛವಶಂ ಯಯುರ್ದರ್ಪನಿಮಿತ್ತತಃ ॥ ೪೫ ॥

ಶ್ರೀಕೃಷ್ಣನ ಹದಿನಾರು ಸಾವಿರದ ನೂರು ಮಂದಿ ಪತ್ನಿಯರು ದರ್ಪನಿಮಿತ್ತವಾಗಿ ಅವನಿಂದ ಶಾಪ ಹೊಂದಿ ಮ್ಲೇಚ್ಛರಿಗೆ ವಶರಾದರು.

ಹ್ರಿಯಮಾಣೇ ಧನೇ ಚೈವ ವನಿತಾಸು ಚ ವಾಸವಿಃ ।
ಯುಯುತ್ಸುರ್ಗಾಂಡಿವಂ ಸಜ್ಯಂ ಕೃಚ್ಛ್ರೇಣೈವ ಚಕಾರ ಹ ॥ ೪೬ ॥

ಧನವನ್ನೂ ಸ್ತ್ರೀಯರನ್ನೂ ಮ್ಲೇಚ್ಛರು ಅಪಹರಿಸುವಾಗ ಅರ್ಜುನ ಯುದ್ಧ ಮಾಡಲು ಬಯಸಿ ಗಾಂಡೀವವನ್ನು ಕಷ್ಟದಿಂದಲೆ ಹೆದೆಯೇರಿಸಿದ.

ಕ್ಷೀಣಾಸ್ತಸ್ಯ ಶರಾ ದೈವಾನ್ನಾಸ್ತ್ರಾಣಿ ಸ್ಮೃತಿಮಾಯಯುಃ ।
ಸ ತದ್ ದೈವಕೃತಂ ಜ್ಞಾತ್ವಾ ಸಂಸ್ಮರನ್ ಪುರುಷೋತ್ತಮಮ್ ।
ನಿಘ್ನನ್ ಶತ್ರೂನ್ ಗಾಂಡಿವೇನ ಶೇಷಂ ರಕ್ಷನ್ ಕುರೂನಗಾತ್ ॥ ೪೭ ॥

ದೈವಾತ್ ಅರ್ಜುನನ ಬಾಣಗಳು ಎಲ್ಲವೂ ಬರಿದಾದುವು. ಅಸ್ತ್ರಗಳೂ ಸ್ಮರಣೆಗೆ ಬರಲಿಲ್ಲ. ಅದನ್ನು ಅವನು ದೈವಕೃತವೆಂದುಕೊಂಡು ಕೃಷ್ಣನನ್ನು ನೆನೆಯುತ್ತ ಗಾಂಡೀವದಿಂದಲೆ ಶತ್ರುಗಳನ್ನು ಕೊಂದು ಉಳಿದ ಧನಸಂಪತ್ತನ್ನು ರಕ್ಷಿಸುತ್ತ ಕುರುಕ್ಷೇತ್ರಕ್ಕೆ ತೆರಳಿದ.

ತದಾ ಕುರುಕ್ಷೇತ್ರಗತಂ ಜಗದ್ಗುರುಂ
ಸುಪೂರ್ಣವಿಜ್ಞಾನಬಲಾಬ್ಧಿಸತ್ಸುಖಮ್ ।
ತಮೇವ ವಾಸಿಷ್ಠಕುಲೋದ್ಭವಂ ಹರಿಂ
ನಿರೀಕ್ಷ್ಯ ದುಃಖೇನ ಪಪಾತ ಪಾದಯೋಃ ॥೪೮॥

ಆಗ ಕುರುಕ್ಷೇತ್ರದಲ್ಲಿದ್ದ ಪೂರ್ಣಜ್ಞಾನಶಕ್ತಿ ಸಮುದ್ರನೂ ಉತ್ತಮ ಆನಂದಪೂರ್ಣನೂ ಜಗದ್ಗುರುವೂ ಆದ ಶ್ರೀವೇದವ್ಯಾಸ ರೂಪದಿಂದ ವಸಿಷ್ಠ ಕುಲದಲ್ಲಿ ಪ್ರಾದುರ್ಭವಿಸಿದ ಅದೇ ಹರಿಯನ್ನು ಕಂಡು ಕೃಷ್ಣವಿರಹದುಃಖದಿಂದ ಪಾದಗಳಲ್ಲಿ ನಮಿಸಿದ.

ಸ ತೇನ ಪುಂಸಾಂ ಪ್ರವರೇಣ ಹೇತುಭಿಃ
ಸಂಬೋಧಿತೋಽಜ್ಞಾನತಮೋಽಂಶುಮಾಲಿನಾ ।
ಸಂಸ್ಥಾಪ್ಯ ಚೇತಃ ಪುನರೇವ ತಸ್ಮಿನ್
ಜಹೌ ಶುಚಃ ಪ್ರಾಯಶ ಏವ ಧೈರ್ಯಾತ್ ॥೪೯॥

ಅಜ್ಞಾನ ತಮಸ್ಸಿಗೆ ಸೂರ್ಯರೆನಿಸಿದ ಪುರುಷೋತ್ತಮರಾದ ವೇದವ್ಯಾಸರು ಅರ್ಜುನನನ್ನು ಯುಕ್ತಿಯುಕ್ತವಾಗಿ ತಿಳಿಯಹೇಳಿದಾಗ ಅರ್ಜುನ 'ಈತನೆ ಆ ಕೃಷ್ಣ' ನೆಂದು ಅವರಲ್ಲಿ ಮನಸ್ಸನ್ನಿಟ್ಟು ಧೈರ್ಯದಿಂದ ಬಹುಪಾಲು ಶೋಕಗಳನ್ನು ಮರೆತ.

ಕೃಷ್ಣಪತ್ನಿಯರು ಪ್ರಭಾಸಕ್ಷೇತ್ರದಲ್ಲಿ ಅಷ್ಟಾವಕ್ರ ಮುನಿಯಿಂದ 'ನೀವು ಮ್ಲೇಚ್ಛವಶರಾಗಿರಿ, ಅದಕ್ಕೇ ಅರ್ಜುನನ ಬಲಕ್ಷಯವೂ ಆಗಲಿ' ಎಂದು ಶಪ್ತರಾಗಿದ್ದರು. (ಮೌಸಲ 9.32) ಈ ವಿಷಯವನ್ನೂ ವ್ಯಾಸರು ಅರ್ಜುನನಿಗೆ ಹೇಳಿದರು.

ಸ್ತ್ರಿಯೋ ಮ್ಲೇಚ್ಛಹೃತಾಃ ಕೃಷ್ಣಪ್ರೇಷಿತಾದ್ ದಾಲ್ಭ್ಯತಃ ಪುನಃ ।
ಗೋವಿಂದೈಕಾದಶೀಂ ಶ್ರುತ್ವಾ ಕೃತ್ವಾ ಸಾರಸ್ವತೇ ಜಲೇ ॥೫೦॥
ನಿಮಜ್ಜ್ಯ ವಾಯೋರ್ವಚನಾತ್ ತ್ಯಕ್ತದೇಹಾ ದಿವಂ ಯಯುಃ ।
ಅರ್ಜುನಸ್ತು ಕುರುಕ್ಷೇತ್ರೇ ಹಾರ್ದಿಕ್ಯಯುಯುಧಾನಯೋಃ ।
ಸುತೌ ಸಾರಸ್ವತೇ ಚೈವ ದೇಶೇ ರಾಜ್ಯೇಽಭ್ಯಷೇಚಯತ್ ॥೫೧॥

ಮ್ಲೇಚ್ಛರಿಂದ ಅಪಹೃತರಾದ ಕೃಷ್ಣ ಪತ್ನಿಯರು ಕೃಷ್ಣ ಕಳಿಸಿದ್ದ ದಾಲ್ಭ್ಯ ಮುನಿಯಿಂದ ಗೋವಿಂದೈಕಾದಶೀ ವ್ರತ ಮಹಿಮಾದಿಗಳನ್ನು ಕೇಳಿ ಆ ವ್ರತವನ್ನು ಆಚರಿಸಿ, ಸರಸ್ವತೀ ನದೀಜಲದಲ್ಲಿ ಸ್ನಾನಮಾಡಿ ವಾಯುವಿನ ವಚನದಿಂದ ಆ ಜಲದಲ್ಲಿ ಶರೀರತ್ಯಾಗ ಮಾಡಿ

ಸ್ವರ್ಗಕ್ಕೆ ಹೋದರು. ಅರ್ಜುನ ಕೃತವರ್ಮ ಸಾತ್ಯಕಿಗಳ ಪುತ್ರರನ್ನು ಕುರುಕ್ಷೇತ್ರ ಸಾರಸ್ವತ ದೇಶಗಳಲ್ಲಿ ಆಳುವುದಕ್ಕೆ ಪಟ್ಟಾಭಿಷೇಕ ಮಾಡಿದ.

ಚೈತ್ರ ಮೊದಲಾದ ಹನ್ನೆರಡು ತಿಂಗಳುಗಳ ಶುಕ್ಲ ಏಕಾದಶಿಗಳಿಗೆ ಕ್ರಮವಾಗಿ ಕೇಶವಾದಿ ದ್ವಾದಶಮೂರ್ತಿಗಳೂ ಕೃಷ್ಣ ಏಕಾದಶಿಗಳಿಗೆ ಕ್ರಮವಾಗಿ ಸಂಕರ್ಷಣಾದಿ ದ್ವಾದಶಮೂರ್ತಿಗಳೂ ನಿಯಾಮಕರೆಂದಿಟ್ಟು ಕೊಂಡರೆ ಆಷಾಢ ಶುಕ್ಲ ಏಕಾದಶಿಗೆ ಗೋವಿಂದ ನಿಯಾಮಕನಾಗುತ್ತಾನೆ. ಅದು ಗೋವಿಂದೈಕಾದಶಿ. ಅದನ್ನು ಆಚರಿಸಲು ಶ್ರೀಕೃಷ್ಣ ದಾಲ್ಭ್ಯಮುನಿಯನ್ನು ಕಳಿಸಿ ಉಪದೇಶ ಕೊಡಿಸಿದ್ದಾನೆ. ಕೃಷ್ಣ ಪತ್ನಿಯರು ಎಲ್ಲ ಏಕಾದಶೀ ವ್ರತಗಳನ್ನು ಆಚರಿಸುವವರೆ. ಆದರೂ ಕೃಷ್ಣ ತಮ್ಮ ರೂಪಕ್ಕೆ ಮನಸೋತನೆಂದು ಅಹಂಕಾರಪಟ್ಟಿದ್ದಕ್ಕೆ ಮ್ಲೇಚ್ಛರ ವಶರಾಗಿರೆಂದು ಕೃಷ್ಣ ಶಾಪಕೊಟ್ಟಿದ್ದರಿಂದ ಅವರಿಗೆ ಮ್ಲೇಚ್ಛಸ್ಪರ್ಶ ಸೂಚಿತವಾದ ಪ್ರಾರಬ್ಧವನ್ನು ಪ್ರಾಯಶ್ಚಿತ್ತದಿಂದ ಕಳೆದುಕೊಳ್ಳಲು ಪ್ರಾಯಶ್ಚಿತ್ತ ರೂಪದಿಂದ ವಿಶೇಷವಾಗಿ ವ್ರತವನ್ನಾಚರಿಸಿದರು. ಬಳಿಕ ಸರಸ್ವತೀ ನದಿಯಲ್ಲಿ ಸ್ನಾನ ಮಾಡುವಾಗ ಅಶರೀರವಾಣಿಯಿಂದ ವಾಯು ನುಡಿದಂತೆ ಅದೇ ನದಿಯಲ್ಲಿ ಶರೀರತ್ಯಾಗ ಮಾಡಿದರು.

ಆಷಾಢ ಶುಕ್ಲ ಏಕಾದಶಿ ಗೋವಿಂದೈಕಾದಶಿ ಎಂಬುದು ಜನಾರ್ದನೀಯ ವಾದಿರಾಜೀಯ ವೇದಾಂಗತೀರ್ಥೀಯ ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ. ಆದರೆ ಪ್ರಮಾಣ ಸಂಗ್ರಹಕಾರರ ಅಭಿಪ್ರಾಯದಲ್ಲಿ ಫಾಲ್ಗುಣಮಾಸದಲ್ಲಿ ಸೂರ್ಯ ಕುಂಭರಾಶಿಯಲ್ಲಿ ಇರುವಾಗ, ಶನಿಗುರುಗಳು ಮಕರ ರಾಶಿಯಲ್ಲಿ ಇರುವಾಗ, ಪುಷ್ಯ ನಕ್ಷತ್ರ ಭಾನುವಾರ ಯುಕ್ತವಾದ ಫಾಲ್ಗುಣ ಶುದ್ಧ ಏಕಾದಶಿಯೆ ಗೋವಿಂದೈಕಾದಶಿ, ಬ್ರಹ್ಮಾಂಡ ಪುರಾಣ ಹೀಗೆ ಹೇಳಿದೆ-

ಕುಂಭೇ ರವೌ ಫಾಲ್ಗುನೇ ಸ್ಯಾನ್ಮಕರಸ್ಥಾಂಗಿರಃ ಶನೀ।
ದ್ವಾದಶೀ ಶುಕ್ಲಪಕ್ಷಸ್ಯ ಪುಷ್ಯರ್ಕ್ಷ ರವಿವಾಸರಾ।
ಗೋವಿಂದ ದ್ವಾದಶೀ ನಾಮ ಮಹಾಪಾತಕನಾಶಿನೀ॥

'ಕುಂಭರಾಶಿಯಲ್ಲಿ ಸೂರ್ಯ' ಮುಂತಾದ ಲಕ್ಷಣವಿಲ್ಲದ, ಪ್ರತಿ ವರ್ಷದ, ಫಾಲ್ಗುನಮಾಸದ ಶುಕ್ಲಕೃಷ್ಣ ದ್ವಾದಶಿಗಳಿಗೂ ಗೋವಿಂದೈಕಾದಶಿ ಎಂಬ ಹೆಸರಿದೆ.

ದ್ವಾದಶ್ಯಾಂ ಫಾಲ್ಗುನೇ ಮಾಸಿ ಗೋವಿಂದಾಖ್ಯಮುಪೋಷ್ಯ ಮಾಂ
ಪೂಜಯೇದ್ ಯಃ ಸಮಾಪ್ನೋತಿ ಹ್ಯತಿರಾತ್ರ ಫಲಂ ನೃಪ॥
ಇತಿ ಕೃಷ್ಣ ವಚನಾತ್ ಧರ್ಮರಾಜಂ ಪ್ರತಿ ಆಶ್ವಮೇಧಿಕ ಪರ್ವಣಿ।

ಇಲ್ಲಿ ಉಪವಾಸವನ್ನು ಹೇಳಿ ದ್ವಾದಶೀಶಬ್ದವನ್ನು ಹೇಳಿದ್ದರಿಂದ ದ್ವಾದಶೀ ಉಪವಾಸ ನಿಷಿದ್ಧವಾಗಿರುವುದರಿಂದ 'ದ್ವಾದಶಿ' ಎಂದರೆ ಏಕಾದಶಿ ವಿವಕ್ಷಿತ ಎಂದಿದ್ದಾರೆ.

ಆಷಾಢ ಶುಕ್ಲ ಏಕಾದಶಿಯನ್ನೂ ಗೋವಿಂದೈಕಾದಶಿ ಎಂದರೆ ಪ್ರಮಾಣ ವಿರೋಧ ಇಲ್ಲ. ಫಾಲ್ಗುನಮಾಸಕ್ಕೆ ನಿಯಾಮಕನಾದ ಗೋವಿಂದ ಆಷಾಢಶುಕ್ಲ ಏಕಾದಶಿಗೂ ನಿಯಾಮಕನೆನಿಸಿದರೆ ವಿರೋಧವಿಲ್ಲ.[1]

ಅನಿರುದ್ಧಸುತಂ ವಜ್ರಂ ಪ್ರಿಯಂ ಕೃಷ್ಣಸ್ಯ ಸದ್ಗುಣಮ್ ।
ಸ ಶೂರಸೇನೇಂದ್ರಪ್ರಸ್ಥರಾಜಾನಮಕರೋದ್ ವಶೀ ॥ ೫೨ ॥

ಶ್ರೀಕೃಷ್ಣನಿಗೆ ಪ್ರಿಯನಾದ ಸದ್ಗುಣಿಯಾದ ಅನಿರುದ್ಧ ಪುತ್ರ ವಜ್ರನನ್ನು ಅರ್ಜುನ ಶೂರಸೇನ ದೇಶ ಮತ್ತು ಇಂದ್ರಪ್ರಸ್ಥಗಳಿಗೆ ರಾಜನನ್ನಾಗಿ ಮಾಡಿದ.

ಸ್ತ್ರೀಬಾಲಾಂಶ್ಚ ಧನಂ ಚೈವ ತಸ್ಮಿನ್ ಸಂಸ್ಥಾಪ್ಯ ಫಲ್ಗುನಃ ।
ಯಯೌ ಭ್ರಾತೄನಶೇಷಂ ಚ ವೃತ್ತಂ ತೇಷಾಮವರ್ಣಯತ್ ॥ ೫೩ ॥

ಸ್ತ್ರೀಯರನ್ನೂ ಬಾಲಕರನ್ನೂ ಧನವನ್ನೂ ವಜ್ರನ ವಶದಲ್ಲಿ ಇರಿಸಿ ಅರ್ಜುನ ಸೋದರರ ಬಳಿಗೆ ನಡೆದ. ಅವರಿಗೆ ಎಲ್ಲ ವೃತ್ತಾಂತವನ್ನೂ ಬಣ್ಣಿಸಿದ.

ತೇ ಚಾವಿಯೋಗಸಮಯಂ ಸ್ಮರಂತೋ ಮುರವೈರಿಣಾ ।
ಅಭ್ಯಷಿಂಚನ್ ಭಾಗವತಂ ಮಾಹಾರಾಜ್ಯೇ ಪರೀಕ್ಷಿತಮ್ ॥ ೫೪ ॥

ಪಾಂಡವರು ತಮಗೆ ಶ್ರೀಕೃಷ್ಣನ ವಿಯೋಗವಿಲ್ಲದಂತೆ ಮಾಡಿಕೊಳ್ಳಲು, ವಿಯೋಗಕಾಲದಲ್ಲಿ ತಾವೇ ಇರಕೂಡದೆಂದು ಮಾಡಿದ ಸಂಕಲ್ಪವನ್ನು ಆಲೋಚಿಸುತ್ತ ಭಗವದ್ಭಕ್ತನಾದ ಪರೀಕ್ಷಿತನನ್ನು ಮಹಾರಾಜ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿದರು.

ಸ್ತ್ರೀಹಾರಿಣಾಂ ಚ ಮ್ಲೇಚ್ಛಾನಾಂ ವಧಾಯೈನಮಯೋಜಯನ್ ।
ಕೃತಂ ಚ ತೇನ ತತ್ ಕರ್ಮ ವೋಢ್ರಾ ಪೈತಾಮಹೀಂ ಧುರಮ್ ॥ ೫೫ ॥

ಸ್ತ್ರೀಯರನ್ನು ಅಪಹರಿಸಿದ ಮ್ಲೇಚ್ಛರ ವಧೆಗೆ ಪರೀಕ್ಷಿತನನ್ನು ಆಜ್ಞಾಪಿಸಿದರು. ತಾತಂದಿರು ವಹಿಸಿಕೊಟ್ಟ ಕಾರ್ಯಭಾರವನ್ನು ಪರೀಕ್ಷಿತ ಹೊತ್ತು ಯಶಸ್ವಿಯಾಗಿ ನಡೆಸಿದ.

---

1. ಯದಾ ಮಾರ್ಗಶೀರ್ಷಾದಿಮಾಸಾನಾಂ ದೇವತಾಃ ಕೇಶವಾದ್ಯಾಃ ತದಾಽಷಾಢಸ್ಯಾಪಿ ವಾಮನ ಏವ ದೇವತಾ। ಯದಾ ತು ಸಾಂವತ್ಸರಿಕ ದ್ವಾದಶ ಶುಕ್ಲೈಕಾದಶೀನಾಂ ಕೇಶವಾದಿ ದ್ವಾದಶಮೂರ್ತಯೋ ದೇವತಾಃ, ಸಾಂವತ್ಸರಿಕ ದ್ವಾದಶ ಕೃಷ್ಣೈಕಾದಶೀನಾಂ ತು ಸಂಕರ್ಷಣಾದಿ ದ್ವಾದಶಮೂರ್ತಯೋ ದೇವತಾಃ ತದಾ ಚೈತ್ರಶುದ್ಧೈಕಾದಶೀಮಾರಭ್ಯ ಗಣನಾಯಾಮಾಷಾಢಶುದ್ಧೈಕಾದಶ್ಯಾಃ ಗೋವಿಂದೋ ದೇವತಾ। ಯದ್ಯಪಿ ವಿಷ್ಣುಪ್ರೀತ್ಯರ್ಥಂ ಏಕಾದಶೀವ್ರತಂ ಸರ್ವದಾ ಕುರ್ವಂತಿ। ತಥಾಪಿ ಪ್ರಾಯಶ್ಚಿತ್ತತಯಾ ಕರಣಾತ್ ವಿಶಿಷ್ಯೋಕ್ತಿಃ। -ವಾದಿರಾಜೀಯ

ಸಮಯಂ ಪರಿರಕ್ಷದ್ಭಿರ್ನ ಪಾರ್ಥೈರೇವ ಯತ್ ಕೃತಮ್ ॥ ೫೬ ॥
ವಾಸುದೇವಪದಾ ಸ್ಪೃಷ್ಟಭೂಕಂಟಕಸಮುದ್ಧೃತಿಃ ।
ಸಮಯಃ ಪಾಂಡವಾನಾಂ ಹಿ ತಸ್ಯೈವಾನುಗತಿಃ ಪರಮ್ ॥ ೫೭ ॥

ತಮ್ಮ ಪ್ರತಿಜ್ಞೆಯನ್ನು ರಕ್ಷಿಸುವುದಕ್ಕಾಗಿ ಪಾಂಡವರು ಆ ಕೆಲಸವನ್ನು ತಾವೇ ಮಾಡಲಿಲ್ಲ. ಶ್ರೀಕೃಷ್ಣನ ಪಾದ ಸ್ಪರ್ಶವಿರುವಷ್ಟು ಕಾಲ ಮಾತ್ರ ಭೂಮಿಗೆ ಕಂಟಕ ರೂಪರಾದ ದುರ್ಜನರ ನಾಶ ಮಾಡಬೇಕು. ಬಳಿಕ ಶ್ರೀಕೃಷ್ಣನನ್ನೇ ಹಿಂಬಾಲಿಸಬೇಕು ಎಂಬುದು ಪಾಂಡವರು ತೊಟ್ಟ ಪ್ರತಿಜ್ಞೆಯಾಗಿತ್ತು.

ಅನುವ್ರಜದ್ಭಿರ್ವಿಶ್ವೇಶಂ ನಾಸ್ಮಾಭಿರ್ಭೂಸ್ತದುಜ್ಝಿತಾ ।
ಭೋಜ್ಯಾ ರಕ್ಷ್ಯಾಽಪಿ ವಾ ತೇಷಾಮಿತ್ಯೇವ ಸಮಯಃ ಪುರಾ ॥ ೫೮ ॥

ನಾವು ಕೃಷ್ಣನನ್ನು ಅನುಸರಿಸಬೇಕು. ಅವನು ಬಿಟ್ಟುಹೋದ ಭೂಮಿಯನ್ನು ಭೋಗಿಸುವುದಾಗಲಿ ರಕ್ಷಿಸುವುದಾಗಲಿ ಕೂಡದು ಎಂದು ಪಾಂಡವರು ಹಿಂದೆ ಕೈಗೊಂಡ ಪ್ರತಿಜ್ಞೆಯಾಗಿತ್ತು.

ರಾಜನಿರುವಾಗ ಭಟರಿರಬೇಕು. ಅವನು ಹೋಗುವಾಗ ಜೊತೆಗೆ ಹೋಗಬೇಕು. ಪಾಂಡವರು ಶ್ರೀಕೃಷ್ಣನ ಭಟರು. ಅವನು ಹೊರಟಾಗ ಅವನ ಪ್ರತಿನಿಧಿಗಳಾಗಿ ದುಷ್ಟಸಂಹಾರ ಮಾಡಲು ಬಯಸಲಿಲ್ಲ. ಏಕೆಂದರೆ ಅವನಿಗೆ ಅವನೆ ಪ್ರತಿನಿಧಿ! ತಾವು ಕೇವಲ ಭಟರು ಎಂದುಕೊಂಡರು.
-ವಾದಿರಾಜೀಯ

ತತ್ರ ಕಾಲೀ ಭೀಮಭಾರ್ಯಾ ವೈಷ್ಣವಂ ಯೋಗಮಾಸ್ಥಿತಾ ।
ಕೃಷ್ಣಯೈಕತ್ವಮಾಪನ್ನಾ ತ್ಯಕ್ತ್ವಾ ದೇಹಂ ತು ಮಾನುಷಮ್ ॥ ೫೯ ॥

ಭೀಮನ ಪತ್ನಿ ಕಾಳಿ ಹರಿಧ್ಯಾನ ರೂಪವಾದ ಯೋಗಬಲವನ್ನು ಅವಲಂಬಿಸಿ ಮನುಷ್ಯ ಶರೀರವನ್ನು ತೊರೆದು ದ್ರೌಪದಿಯಲ್ಲಿ ಐಕ್ಯ ಹೊಂದಿದಳು.

ಸುಭದ್ರಾದ್ಯಾಸ್ತು ಯಾ ಭಾರ್ಯಾಃ ಪಾರ್ಥಾನಾಂ ತು ತದಾಜ್ಞಯಾ ।
ಯುಯುತ್ಸುಶ್ಚಾತ್ರ ಶಿಕ್ಷಾರ್ಥಂ ಪೌತ್ರಸ್ಯೈವಾವಸನ್ ಪುರೇ ॥ ೬೦ ॥

ಸುಭದ್ರೆ ಮುಂತಾದ ಪಾಂಡವ ಪತ್ನಿಯರೂ ಯುಯುತ್ಸುವೂ ಪಾಂಡವರ ಆಜ್ಞೆಯಂತೆ ಪರೀಕ್ಷಿತನಿಗೆ ಧರ್ಮಶಿಕ್ಷಣೆಗಾಗಿ ಹಸ್ತಿನಾವತಿ ಪಟ್ಟಣದಲ್ಲಿಯೆ ವಾಸಮಾಡಿದರು.

ಪಾಂಡವರ ಮಹಾಪ್ರಸ್ಥಾನ

ಸಂತ್ಯಜ್ಯ ರಾಜಚಿಹ್ನಾನಿ ವೈಷ್ಣವಂ ಯೋಗಮಾಸ್ಥಿತಾಃ ।
ವೀರಾಧ್ವಾನಂ ಯಯುಃ ಸರ್ವೇ ಕೃಷ್ಣಯಾ ಸಹ ಪಾಂಡವಾಃ ॥ ೬೧ ॥

ರಾಜ ಚಿಹ್ನೆಗಳನ್ನು ಬಿಟ್ಟು ಹರಿಧ್ಯಾನ ಯೋಗನಿಷ್ಠರಾಗಿ ಪಾಂಡವರು ದ್ರೌಪದಿ ಯೊಂದಿಗೆ ಯೋಗಿಗಳಿಗೆ ಯೋಗ್ಯವಾದ ಈಶಾನ್ಯದಿಕ್ಕಿನ ಮಾರ್ಗದಲ್ಲಿ ಮಹಾಪ್ರಸ್ಥಾನ ಕೈಗೊಂಡರು.

ಪ್ರಾಗುದೀಚೀಂ ದಿಶಂ ಪೂರ್ವಂ ಯಯುಸ್ತತ್ರಾರ್ಜುನೋ ಧನುಃ ।
ನಾತ್ಯಜಲ್ಲೋಭತಸ್ತತ್ತು ಸಮುದ್ರಮುಪ ಪಾವಕಃ ।
ದೃಷ್ಟ್ವಾ ಯಯಾಚೇ ರಾಜಾನಂ ತದುಕ್ತಃ ಪ್ರಾಸ್ಯದಂಬುಧೌ ॥೬೨॥

ಮೊದಲಿಗೆ ಈಶಾನ್ಯ ದಿಕ್ಕಿನಲ್ಲಿ ಪ್ರಯಾಣಮಾಡಿದರು. ಅವರಲ್ಲಿ ಅರ್ಜುನ ಲೋಭದಿಂದ ಗಾಂಡೀವವನ್ನು ತ್ಯಜಿಸಲಿಲ್ಲ. ಸಮುದ್ರ ತೀರದಲ್ಲಿ ಅಗ್ನಿ ಅದನ್ನು ನೋಡಿ ಧರ್ಮರಾಜನಲ್ಲಿ ಬೇಡಿದ. ಧರ್ಮರಾಜನ ಮಾತಿನಂತೆ ಅರ್ಜುನ ಅದನ್ನು ಸಮುದ್ರದಲ್ಲಿ ಹಾಕಿದ.

ಪ್ರಾತಿಭಾವ್ಯಂ ತು ವರುಣೇ ನಿಸ್ತೀರ್ಯಾಗ್ನಿರದೃಶ್ಯತಾಮ್ ।
ಯಯೌ ತೇಽಪಿ ಯಯುಃ ಕ್ಷಿಪ್ರಂ ಪ್ಲವಂತಃ ಸಪ್ತವಾರಿಧೀನ್ ॥೬೩॥
ಅಹೋಭಿಃ ಸಪ್ತಭಿರ್ಯೋಗಂ ಸಮಾರೂಢಾಃ ಪ್ರದಕ್ಷಿಣಮ್ ।
ಕೃತ್ವಾ ಕ್ವಚಿದಸಜ್ಜಂತ ಆಸೇದುರ್ಗಂಧಮಾದನಮ್ ॥೬೪॥

ಅಗ್ನಿ ಹೀಗೆ ವರುಣನಲ್ಲಿ ಋಣವನ್ನು ಪರಿಹರಿಸಿಕೊಂಡು ಅದೃಶ್ಯನಾದ. ಪಾಂಡವರು ಯೋಗಾರೂಢರಾಗಿ ಬೇಗನೆ ಏಳು ದಿನಗಳಲ್ಲಿ ಏಳು ಸಮುದ್ರಗಳನ್ನು ಯೋಗಬಲದಿಂದ ಹಾರುತ್ತಲೆ ಹೋದರು. ಎಲ್ಲಿಯೂ ವಿಶ್ರಮಿಸದೆ ಭೂಪ್ರದಕ್ಷಿಣೆ ಮಾಡಿ ಗಂಧಮಾದನ ಪರ್ವತಕ್ಕೆ ಬಂದರು.

ದೇಹಪಾತಕ್ಕೆ ಕಾರಣ

ಅತ್ರ ನಾರಾಯಣಕ್ಷೇತ್ರೇ ತೇಷಾಂ ತನ್ವೋಽಪತನ್ ಕ್ರಮಾತ್ ।
ದ್ರೌಪದೀಸಹದೇವಾದಿಪಂಚಾನಾಂ ತತ್ರ ಮಾರುತಿಃ ॥೬೫॥
ಸದೇಹನಾಕಾನಿಚ್ಛತ್ವಾದ್ ದೇಹಪ್ರಪತನಂ ಹಿ ತತ್ ॥೬೬॥
ತೇಷಾಮಿಹೇತಿ ಯಾಥಾರ್ಥ್ಯಂ ಜಾನನ್ ಪಪ್ರಚ್ಛ ಧರ್ಮಜಮ್ ।
ಕೇನಕೇನಾಪತದ್ ದೇಹೋ ದೋಷೇಣ ನ ಇತಿ ಕ್ರಮಾತ್ ॥೬೭॥

ಅಲ್ಲಿ ಬದರಿಕಾಶ್ರಮದಲ್ಲಿ ದ್ರೌಪದಿ ಸಹದೇವ ಮುಂತಾದ ಐವರ ಶರೀರಗಳು ಕ್ರಮವಾಗಿ ಪತನ ಹೊಂದಿದವು. ಅವರಿಗೆ ದೇಹಸಹಿತರಾಗಿ ಸ್ವರ್ಗಕ್ಕೆ ಹೋಗಲು ಇಚ್ಛೆಯಿಲ್ಲದ ಕಾರಣದಿಂದಲೆ ಹೀಗೆ ದೇಹಪತನವಾಗಿತ್ತು. ಈ ನಿಜಸಂಗತಿಯನ್ನು ಭೀಮ ತಿಳಿದಿದ್ದರೂ 'ಯಾವ ಯಾವ ದೋಷದಿಂದ ನಮ್ಮ ದೇಹಗಳು ಕ್ರಮವಾಗಿ ಬಿದ್ದುವೆಂ'ದು ಧರ್ಮರಾಜನನ್ನು ಕೇಳಿದ.

ಮೃತಿಕಾಲೇ ಹಿ ಯೋ ಯಸ್ಯ ದೋಷಂ ವಕ್ಷ್ಯಣಮೋಚನಮ್ ।
ತಸ್ಮಾತ್ ಸ್ಯಾದುಕ್ತದೋಷಸ್ಯೇತ್ಯಾಹ ಯಚ್ಛ್ರುತಿರೇವ ತತ್ ॥೬೮॥
ಋಣಮೋಕ್ಷಾಯ ಸರ್ವೇಷಾಂ ಭೀಮೋ ದೋಷಾನವಾದಯತ್ ೬೯ ॥

ಮರಣಕಾಲದಲ್ಲಿ ಯಾರು ಯಾರ ದೋಷವನ್ನು ಹೇಳುವನೋ ಅವನಿಗೆ ಆ ದೋಷ ಹೇಳಿದವನ ಋಣ ಪರಿಹಾರವಾಗುವುದು ಎಂದು ಶ್ರುತಿ ಹೇಳುವುದರಿಂದ ಎಲ್ಲರ ಋಣ ಪರಿಹಾರಕ್ಕಾಗಿ ಎಲ್ಲರ ದೋಷಗಳನ್ನು ಧರ್ಮರಾಜನಿಂದ ಭೀಮ ಹೇಳಿಸಿದ.

ಸ್ವಚ್ಛಂದ ಮರಣಿಗಳಾದ ಪಾಂಡವರಿಗೆ ಶುಕ ನಾರದ ಮುಂತಾದ ಮುನಿಗಳಂತೆ ಯೋಗಬಲದಿಂದ ಆಕಾಶ ಮಾರ್ಗದಲ್ಲಿ ಸಂಚರಿಸಲು ಶಕ್ತಿ ಇದ್ದಿತು. ದೇಹಸಹಿತರಾಗಿಯೆ ಸ್ವರ್ಗಕ್ಕೆ ಹೋಗಲು ಶಕ್ತರಾಗಿದ್ದರು. ಸಪ್ತ ಸಮುದ್ರ, ದ್ವೀಪಗಳನ್ನು ಹಾಗೇ ಯೋಗಬಲದಿಂದ ಪ್ರದಕ್ಷಿಣೆ ಮಾಡಿ ಬಂದಿದ್ದರು. ಅವರಿಗೆ ದೇಹಪಾತ ಆಯಾಸ ಪ್ರಯುಕ್ತವಾಗಿಯೂ ಅಲ್ಲ. ಪಾಪನಿಮಿತ್ತವಾಗಿಯೂ ಅಲ್ಲ. ಮನುಷ್ಯ ದೇಹವನ್ನು ಸ್ವರ್ಗಕ್ಕೆ ಒಯ್ಯಲು ಇಚ್ಛೆ ಇಲ್ಲದ್ದರಿಂದ ತಾವಾಗಿ ಶರೀರ ತ್ಯಾಗ ಮಾಡಿದರಷ್ಟೆ, ಇದು ಭೀಮನಿಗೂ ಗೊತ್ತು. ಆದರೂ ಏಕೆ ದೇಹಪತನವಾಯಿತೆಂದು ಕೇಳುತ್ತಾನೆ. ಏನಾದರೂ ದೋಷವನ್ನು ಹೇಳಲಿ. ಅದರಿಂದ ಅವರಿಗೆ ಅವನ ಋಣ ಪರಿಹಾರವಾಗಲಿ ಎನ್ನುವುದೆ ಭೀಮನ ಆಶಯವಾಗಿತ್ತು

'ಒಬ್ಬರ ಹಿಂದೆ ಒಬ್ಬರಂತೆ ಈ ಆರುಜನ ತಿಂಗಳುಗಟ್ಟಲೆ ಸಾಗಿದ್ದರು. ಇದ್ದಕ್ಕಿದ್ದಂತೆ ದ್ರೌಪದಿಯು ಕುಸಿದು ಕೆಳಗೆ ಬಿದ್ದಳು. ಭೀಮನು ಅಲ್ಲಿಯೆ ನಿಂತು ಇವಳೇಕೆ ಬಿದ್ದಳು?' ಎಂದು ಮೂಢಪ್ರಶ್ನೆಯನ್ನು ಕೇಳಿದ. ಇಷ್ಟೊಂದು ದಾರಿ ನಡೆದ ನಂತರ ಅವರು ಹೇಗೆ ಬೀಳದಿರಬಹುದು?' (ಯುಗಾಂತ) ಎಂದು ಆಧುನಿಕರ ವಿಮರ್ಶೆ!

'ತೇಷಾಂತು ಗಚ್ಛತಾಂ ಶೀಘ್ರಂ
ಸರ್ವೇಷಾಂಯೋಗಧರ್ಮಿಣಾಂ' (ಮಹಾಪ್ರಸ್ಥಾನ ೨-೩)

ಎಂದು ಮಹಾಭಾರತವೆ ಹೇಳುವಂತೆ ಏಳು ದಿನಗಳಲ್ಲಿ ಏಳು ಸಮುದ್ರಗಳನ್ನು ಯೋಗಬಲದಿಂದ ಪ್ರದಕ್ಷಿಣೆ ಮಾಡಿ ಬಂದಿದ್ದ ಪಾಂಡವರ ಬಗ್ಗೆ ಭೀಮನ ಬಗ್ಗೆ ಎಷ್ಟು ಬಾಲಿಶವಾಗಿ ಮಾತನಾಡುತ್ತಾರೆ!

ಸೋಽಪೀಚ್ಛಾಪತಿತಾನ್ ದೇಹಾನಜಾನನ್ ಶುದ್ಧಕರ್ಮಣಾಮ್ ।
ಅಪಶ್ಯನ್ ಕಾರಣಂ ಪ್ರಾಹ ದೋಷಾತ್ ಸ್ಯಾದೇವಮಿತ್ಯಪಿ ।
ರಾಜಾ ಸಂಭಾವನಾಮಾತ್ರಾನ್ನಹಿ ಕಾರ್ಯಮಕಾರಣಮ್ ॥೭೦॥

ಧರ್ಮರಾಜ ದ್ರೌಪದೀ ಮುಂತಾದವರ ಶರೀರ ಅವರ ಇಚ್ಛೆಯಿಂದ ಬಿದ್ದಿತೆಂಬುದನ್ನು

ತಿಳಿಯದೆ, ಅವರು ಶುದ್ಧಕರ್ಮವನ್ನೆ ಮಾಡುವವರಾದ್ದರಿಂದ ಶರೀರಪಾತಕ್ಕೆ ಕಾರಣವಾಗ ಬಹುದಾದ ಪಾಪ ಒಂದನ್ನೂ ಕಾಣದೆ, ದೋಷದಿಂದ ಹೀಗಾಗಿರಬಹುದೆಂದು ಊಹೆಯಿಂದಲೆ ಹೇಳುತ್ತಾನೆ. ಏಕೆಂದರೆ ಕಾರಣವಿಲ್ಲದೆ ಕಾರ್ಯ ಆಗದು ತಾನೆ?

ದ್ರೌಪದಿಗೆ ಅರ್ಜುನನಲ್ಲಿ ವಿಶೇಷ ಪ್ರೀತಿ. ಸಹದೇವನಿಗೆ ತಾನೇ ರಾಜನೀತಿ ಬಲ್ಲವನೆಂದು ಅಹಂಕಾರ, ನಕುಲನಿಗೆ ರೂಪ ಸೌಂದರ್ಯದ ಮದ. ಅರ್ಜುನನಿಗೆ ಒಂದೇ ದಿನದಲ್ಲಿ ಎಲ್ಲ ಶತ್ರುಗಳನ್ನೂ ನಾಶ ಮಾಡುವೆನೆಂದು ಅಹಂಕಾರ, ಹಾಗೆ ಹೇಳಿ ಪ್ರತಿಜ್ಞೆಯನ್ನು ಪೂರೈಸದಿರುವುದು, ಭೀಮನಿಗೆ ಅತಿಯಾಗಿ ಉಣ್ಣುವುದು ಮತ್ತು ಬಲಿಷ್ಠನೆಂಬ ಅಹಂಕಾರ ದೋಷಗಳು ಎನ್ನುತ್ತಾನೆ ಧರ್ಮರಾಜ

'ಸ್ವಚ್ಛಂದಮೃತ್ಯವೋ ಯೋಗಾದ್ ದೇಹಾನುತ್ಸೃಜ್ಯ ಪಾಂಡವಾಃ ।
ಕೃಷ್ಣಾ ಚಾऽಪುಃ ಪರಂ ಸ್ಥಾನಂ ಯನ್ನ ಯಾಂತ್ಯಪಿ ದೇವತಾಃ' ॥೭೧॥
ಇತಿ ಶ್ರುತೇರ್ನ ತೇ ಪಾಪಾದ್ ದೇಹಾಂಸ್ತತ್ಯಜುರೂರ್ಜಿತಾಃ ॥೭೨॥

'ಪಾಂಡವರೂ ದ್ರೌಪದಿಯೂ ಸ್ವಚ್ಛಂದ ಮರಣಿಗಳು. ಅದರಿಂದ ಯೋಗದಿಂದ ಶರೀರ ತ್ಯಾಗಮಾಡಿ ದೇವತೆಗಳಿಂದಲೂ ಹೊಂದಲಾಗದಂಥ ಉತ್ತಮ ಲೋಕವನ್ನು ಹೊಂದಿದರು' ಎಂದು ಶ್ರುತಿ ಇರುವುದರಿಂದ ಶಕ್ತಿಶಾಲಿಗಳಾದ ಅವರು ಪಾಪದಿಂದ ದೇಹಗಳನ್ನು ತೊರೆಯಲಿಲ್ಲ.

'ಋಣಾನ್ಯುನ್ಮುಚ್ಯ ದೋಷೋಕ್ತ್ಯಾ ಸ್ವಾನಾಂ ಭೀಮಃ ಸ್ವಕಾಂ ತನುಮ್ ।
ತತ್ಯಾಜ ಪರಮಂ ಧ್ಯಾಯನ್ನಾಪ ಚ ಸ್ಥಾನಮುತ್ತಮಮ್ ।'
ಇತಿ ಸ್ಕಾಂದಪುರಾಣೋಕ್ತಂ ವ್ಯಾಸವಾಕ್ಯಮೃಷೀನ್ ಪ್ರತಿ ॥೭೩॥

ಭೀಮ ತನ್ನವರನ್ನು ದೋಷಾರೋಪಣದ ಮೂಲಕ ಋಣದಿಂದ ಮೋಚನಗೊಳಿಸಿ ಪರಮಾತ್ಮನನ್ನು ಧ್ಯಾನಿಸುತ್ತ ತನ್ನ ಶರೀರವನ್ನು ತೊರೆದ. ಮತ್ತು ಉತ್ತಮ ಲೋಕವನ್ನು ಹೊಂದಿದ'. ಎಂದು ಸ್ಕಾಂದಪುರಾಣದಲ್ಲಿ ಋಷಿಗಳಿಗೆ ವ್ಯಾಸರು ಹೇಳಿದ ವಚನವಿದೆ.

ಭೀಮಾದೃತೇ ಹಿ ಚತುರ್ಷು ಪಕ್ಷಪಾತಸ್ತು ವಾಸವೌ ।
ಯೋಗ್ಯ ಏವೇತಿ ಕೃಷ್ಣಾಯಾ ನ ದೋಷಃ ಸ್ಯಾತ್ ಕಥಂಚನ ॥೭೪॥

ಭೀಮನಲ್ಲಿ ಹೊರತು ಉಳಿದ ನಾಲ್ವರಲ್ಲಿ ಅರ್ಜುನನಲ್ಲಿ ದ್ರೌಪದಿಗೆ ಪಕ್ಷಪಾತವಿರುವುದು ಯೋಗ್ಯವೆ. ಅದರಿಂದ ಅದು ದ್ರೌಪದಿಗೆ ಯಾವರೀತಿಯಿಂದಲೂ ದೋಷವಲ್ಲ.

ಭೀಮ ವಾಯುಸ್ವರೂಪನೆ. ಅವನು ದ್ರೌಪದಿಗೆ ನಿಯತಪತಿಯೆ. ಉಳಿದವರಲ್ಲಿ, ವಾಯುವಿನ ಆವೇಶ ಅಧಿಕವಿದ್ದಲ್ಲಿ ಅಧಿಕಪ್ರೀತಿ,

ಇಂದ್ರಾವತಾರನಾದ ಅರ್ಜುನನಲ್ಲಿ ಅಧಿಕ ಆವೇಶವಿದ್ದುದರಿಂದ ಅವನಲ್ಲಿ ದ್ರೌಪದಿಗೆ ಪಕ್ಷಪಾತ ಉಚಿತವೇ ಆಗಿದೆ.

ನೀತಿರೂಪೇ ವೀರ್ಯಬಲೇ ಮಹಾಂತ್ಯೇಷಾಂ ಯತಃ ಕ್ರಮಾತ್ ।
ಪ್ರಾಣಿತ್ವಾದ್ ಭೋಗಶಕ್ತಿಶ್ಚ ನ ಹಿ ದೋಷಾಯ ಮಾರುತೇಃ ॥ ೭೫ ॥

ನೀತಿ ರೂಪ ವೀರ್ಯಬಲಗಳು ಪಾಂಡವರಲ್ಲಿ ಕ್ರಮವಾಗಿ ಹೆಚ್ಚು ಇರುವುದರಿಂದ ಕ್ರಮವಾಗಿ ಹೆಚ್ಚು ಪಕ್ಷಪಾತವಿರಿಸಿದುದು ದೋಷವಲ್ಲ. ಭೀಮ ಮುಖ್ಯಪ್ರಾಣನಾದ್ದರಿಂದ ಅವನಿಗೆ ಹೆಚ್ಚಿನ ಭೋಜನ ಶಕ್ತಿ ಇರುವುದೂ ದೋಷವಲ್ಲ.

ರಾಜಕೀಯದಲ್ಲಿ ಲೌಕಿಕ ವಿವೇಕ ಬುದ್ಧಿರೂಪವಾದ ನೀತಿ, ಅಲ್ಪವಾದ ಗುಣ, ಸಹದೇವನಲ್ಲಿ ಇದೆ. ಸ್ತ್ರೀಗೆ ಆಕರ್ಷಕವಾದ ಸುಂದರರೂಪ ಅದಕ್ಕಿಂತ ಹೆಚ್ಚಿನ ಗುಣ, ನಕುಲನಲ್ಲಿ ಇದೆ. ಕ್ಷತ್ರಿಯನಿಗೆ ಆವಶ್ಯಕವಾದ ವೀರ್ಯ ಇನ್ನೂ ಹೆಚ್ಚಿನದಾದ ಗುಣ, ಅರ್ಜುನನಲ್ಲಿ ಇದೆ. ಬಲ ಕ್ಷತ್ರಿಯರಿಗೆ ಮಹಾಗುಣ, ಅದು ಭೀಮನಲ್ಲಿ ಇದೆ. ಅದರಿಂದ ಕ್ರಮವಾಗಿ ಹೆಚ್ಚು ಹೆಚ್ಚು ಅಭಿಮಾನವನ್ನು ದ್ರೌಪದಿ ಇರಿಸಿದರೆ ಉಚಿತವೆ ಆಗುತ್ತದೆ.

ಭೀಮನ ಹೊಟ್ಟೆಬಾಕತನವೂ ದೋಷವಲ್ಲ. ಏಕೆಂದರೆ ಅವನು ಮುಖ್ಯಪ್ರಾಣ ಸ್ವರೂಪ. ಎಲ್ಲರ ಎಲ್ಲ ಶಾರೀರಿಕ ಮಾನಸಿಕ ವಾಚಿಕ ಚಟುವಟಿಕೆಗಳನ್ನು ಅವನೆ ಮಾಡಬೇಕು. ಎಲ್ಲರು ಉಣ್ಣುವ ಅನ್ನವನ್ನು ಅವನೆ ಉಣಬೇಕು. ಎಲ್ಲರೂ ಊಟದಲ್ಲಿ ಮೊದಲಿಗೆ ನೀಡುವ ಪಂಚಪ್ರಾಣಾಹುತಿಗಳನ್ನು ಮಾತ್ರ ತೆಗೆದುಕೊಂಡರೂ ಅದರ ಮೊತ್ತ ಬೆಟ್ಟದಷ್ಟಾದೀತು. ಅಂಥ ಭೀಮ ಒಂದು ಸಾವಿರ ಸೇರು ಅಕ್ಕಿ ಅನ್ನ ಉಂಡರೆ ಏನು ಮಹಾ? ಅದರಿಂದ ಭೀಮನ ಸ್ವರೂಪ ವಿಚಾರ ಮಾಡಿದರೆ ಹೆಚ್ಚು ಉಣ್ಣುವುದು ಅವನಿಗೆ ದೋಷವಲ್ಲ, ಗುಣವೆ. ಧರ್ಮರಾಜ ಇದನ್ನು ತಿಳಿಯದೆ ದೋಷವೆಂದು ಹೇಳುತ್ತಾನೆ. - ವಾದಿರಾಜೀಯ

'ಯಥಾಸ್ವರೂಪವಿಜ್ಞಾನಮಾತ್ಮನ್ಯಪಿ ನ ದೋಷಕೃತ್ ।'
ಇತಿ ವ್ಯಾಸಸ್ಮೃತೇರೇಷಾಮುಕ್ತದೋಷೋದ್ಭವಃ ಕಥಮ್ ॥ ೭೬ ॥

'ತನ್ನ ಸ್ವರೂಪ ಹೇಗಿದೆಯೋ ಹಾಗೆ ತಿಳಿದುಕೊಳ್ಳುವುದು ತನ್ನಲ್ಲಿ ದೋಷಕ್ಕೆ ಕಾರಣವಲ್ಲ' ಎಂದು ವ್ಯಾಸಸ್ಮೃತಿ ಇರುವುದರಿಂದ ಪಾಂಡವರಿಗೆ ಧರ್ಮರಾಜ ಹೇಳಿದ ದೋಷ ಹೇಗೆ ದೋಷವಾದೀತು?

ಸಹದೇವ ತನ್ನನ್ನು ತಾನು ರಾಜ ನೀತಿಜ್ಞನೆಂದು ಹೇಳಿಕೊಂಡರೆ ತಪ್ಪಿಲ್ಲ. ಅವನು ನೀತಿಜ್ಞನೆ. ಹಾಗೇ ನಕುಲ ತಾನು ರೂಪವಂತನೆಂದು,

ಅರ್ಜುನ ತಾನು ವೀರನೆಂದು, ಭೀಮ ತಾನು ಬಲಿಷ್ಠನೆಂದು ತಿಳಿದಿದ್ದರೆ ತಪ್ಪಿಲ್ಲ. ತಮ್ಮಲ್ಲಿ ಇಲ್ಲದ ಗುಣವನ್ನು ಆರೋಪಿಸಿಕೊಂಡರೆ ಅಹಂಕಾರವಾಗುವುದು. ಭೀಮ ತನ್ನಲ್ಲಿ ಹೇಳಿಕೊಳ್ಳುವ ಅಧಿಕಬಲ ಶ್ರುತಿಸಿದ್ದ-

ಅಧಃ ಸಪತ್ನಾ ಮೇ ಪದೋರಿಮೇ ಸರ್ವೇ ಅಭಿಷ್ಠಿತಾಃ।

ಶ್ರೀಕೃಷ್ಣನೂ ಗೀತೆಯಲ್ಲಿ- 'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ' ಎಂದು ತನ್ನ ಸರ್ವೋತ್ತಮತ್ವವನ್ನು ತಾನೆ ಹೇಳಿಕೊಳ್ಳುತ್ತಾನೆ. ಅದರಿಂದ ಪಾಂಡವರು ತಮ್ಮ ಗುಣಗಳನ್ನು ಹೇಳಿಕೊಳ್ಳುವುದು ದೋಷವಲ್ಲ.

ಕದಾಚಿದತಿಮಾನೋಽಪಿ ತ್ರಯಾಣಾಮೇಷು ಜಾಯತೇ ।
ತಥಾಽಪಿ ತತ್ಫಲಂ ನೈತತ್ ತಾರತಮ್ಯಂ ಹಿ ಮುಕ್ತಿಗಮ್ ॥೭೭॥
ಗುಣದೋಷಾಧಿಕಾಲ್ಪತ್ವಾದತ್ರಸ್ಥಮಪಿ ಹಿ ಶ್ರುತಮ್ ।
ಪ್ರಾರಬ್ಧಕರ್ಮನಾಶೇ ಹಿ ಪತೇದ್ ದೇಹೋಽಪ್ಯಪಾಪಿನಃ ॥೭೮॥

ಕೆಲಮೊಮ್ಮೆ ಸಹದೇವ ನಕುಲ ಅರ್ಜುನರಲ್ಲಿ ಮೂವರಲ್ಲಿ ಅತಿಯಾದ ಅಹಂಕಾರವೂ ಉಂಟಾಗುವುದು. ಆದರೂ ಅದಕ್ಕೆ ದೇಹಪಾತ ಫಲವಲ್ಲ. ಮನುಷ್ಯರಿಗೆ ಮುಕ್ತಿಯಲ್ಲಿ ಆನಂದ ವೃದ್ಧಿಹ್ರಾಸಗಳೆ ಅದಕ್ಕೆ ಫಲವೆಂದು ಶ್ರುತಿಸಿದ್ಧವಾಗಿದೆ. [1]ಮನುಷ್ಯರಿಗೂ ಅಪರೋಕ್ಷ ಜ್ಞಾನಾನಂತರ ಗುಣ ದೋಷಗಳು ಅಧಿಕ ಅಥವಾ ಅಲ್ಪವಾದ ಮಾತ್ರಕ್ಕೆ ಸಂಸಾರದಲ್ಲಿರುವ ದೇಹಪಾತಾದಿಗಳು ಅದರ ಫಲವಾಗಿರುವುದಿಲ್ಲ ಎಂದಮೇಲೆ ದೇವತೆಗಳಿಗೆ ಏನು ಹೇಳಬೇಕು? ಪಾಪರಹಿತನ ದೇಹವೂ ಕೂಡ ಪ್ರಾರಬ್ಧ ತೀರಿದಾಗ ಪತನ ಹೊಂದುತ್ತದೆ.

ಅಹಂಕಾರವನ್ನು ತನಗಿಂತ ಕೆಳಗಿನವರ ಮುಂದೆ ಪ್ರದರ್ಶಿಸಿದರೆ ಅಪರೋಕ್ಷಿಗಳಿಗೆ ಇಂಥ ದೋಷ ಲೇಪವಾಗುವುದಿಲ್ಲ. ಹಿರಿಯರ ಮುಂದೆ ಪ್ರದರ್ಶಿಸಿದರೆ ಮನುಷ್ಯರಿಗೆ ಮುಕ್ತಿಯಲ್ಲಿ ಆನಂದಾಭಿವ್ಯಕ್ತಿಯಲ್ಲಿ ನ್ಯೂನತೆ ಉಂಟಾಗುತ್ತದೆ ಹೊರತು ಈಗ ಶರೀರ ಪಾತವಾಗುವುದು ಅದರ ಫಲ ಸರ್ವಥಾ ಅಲ್ಲ.

ಅನ್ವಯ ವ್ಯತಿರೇಕ ವ್ಯಭಿಚಾರಗಳಿರುವುದರಿಂದ ದೇಹಪಾತಕ್ಕೆ ಪಾಪ

---

1. ನೃಣಾಮಪ್ಯಪರೋಕ್ಷ ಜ್ಞಾನಾನಂತರಂ ಗುಣದೋಷಯೋರಧಿಕತ್ವಾದಲ್ಪತ್ವಾದ್ವಾ ಅತ್ರಸ್ಥಂ ಅತ್ರ ಸಂಸಾರೇ ಸ್ಥಂ ವಿದ್ಯಮಾನಂ ಏತತ್ ದೇಹಪಾತಾದಿಕಂ ತತ್ಫಲಂ ಗುಣ ದೋಷಯೋಃ ಫಲಂ ನ ಕಿಂತು ಮುಕ್ತಿಗಂ ತಾರತಮ್ಯಂ ಸುಖವೃದ್ಧಿಹ್ರಾಸಾಖ್ಯ ತಾರತಮ್ಯಮೇವ ಶ್ರುತಂ ತತ್ಫಲತ್ವೇನ ಶ್ರುತಂ। ತದಾ ಕಿಂ ವಕ್ತವ್ಯಂ, ದೇವನಾಮೇಷಾಮಪಾಪಾನಾಂ ಪಾಪಾದ್ದೇಹಪಾತೋ ನೇತಿ ಸಮಗ್ರ ಶ್ಲೋಕ-ಸ್ಯಾಭಿಪ್ರಾಯಃ। -ವಾದಿರಾಜೀಯ

ಕಾರಣವಲ್ಲ. ದೇಹಕ್ಕೆ ಕಾರಣವಾದ ಪ್ರಾರಬ್ಧ ತೀರುವುದೇ ದೇಹಪಾತಕ್ಕೆ ಕಾರಣ.

ಯುಧಿಷ್ಠಿರೋಽಪಿ ಹಿ ಸ್ವರ್ಗಂ ಬುಭುಜೇ ನೈವ ತತ್ತನುಃ ।
ಅತಿಮಾನಾದಯೋ ದೋಷಾಃ ಕುತ ಏವ ಹಿ ಮಾರುತೇಃ ॥೭೯॥
ಅನಾದಿಕಾಲತಃ ಸರ್ವದೋಷಹೀನಾ ಗುಣಾಧಿಕಾಃ ।
ಸರ್ವಜೀವಗಣೇಭ್ಯೋ ಯೇ ತೇ ಹಿ ವಾಯುತ್ವಮಾಪ್ನುಯುಃ ।
ಋಜವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥೮೦॥

ಧರ್ಮರಾಜನೂ ಕೂಡ ಸಶರೀರನಾಗಿ ಸ್ವರ್ಗಸುಖವನ್ನು ಅನುಭವಿಸಲಿಲ್ಲ. ಅದರಿಂದ ಅತಿಯಾದ ಅಹಂಕಾರ ಮುಂತಾದುವು ಭೀಮನಿಗೆ ಹೇಗೆ ದೋಷವಾಗುವುವು? ಅನಾದಿ ಕಾಲದಿಂದ ಗರುಡಶೇಷಾದಿ ಎಲ್ಲ ಜೀವ ಸಮೂಹಗಳಿಗಿಂತ ಅಧಿಕ ಗುಣ ಉಳ್ಳವರು, ಸರ್ವದೋಷರಹಿತರು, ದೇವತೆಗಳಿಗೂ ದೇವತೆಗಳು- ಇಂಥ ಋಜುಗಳೆಂಬ ದೇವತೆಗಳು ಯಾರೋ ಅವರೇ ವಾಯು ಪದವಿಗೆ ಬರುತ್ತಾರೆ ತಾನೆ?

ಧರ್ಮರಾಜನಿಗೆ ಪ್ರಾರಬ್ಧ ಮುಗಿದಿಲ್ಲವಾದ್ದರಿಂದ ಅದೇ ಶರೀರದಿಂದ ಸ್ವರ್ಗಕ್ಕೆ ಹೋದ. ಆದರೆ ಅಷ್ಟರಲ್ಲಿ ಪ್ರಾರಬ್ಧ ತೀರಿದಾಗ ಸ್ವರ್ಗಲ್ಲಿರುವ ಭಾಗೀರಥಿಯಲ್ಲಿ ಶರೀರತ್ಯಾಗ ಮಾಡಿಯೆ ಸ್ವರ್ಗ ಭೋಗವನ್ನು ಅನುಭವಿಸಿದ. ಇತರರಿಗೆ ಪಾಪದಿಂದ ಶರೀರಪಾತವೆಂದು ಹೇಳುವ ಧರ್ಮರಾಜ ತನ್ನಲ್ಲಿ ಪಾಪವನ್ನು ಹೇಳುವುದಿಲ್ಲ. ಹಾಗಾದರೆ ತಾನೇಕೆ ಶರೀರವನ್ನು ತೊರೆದ? ಪ್ರಾರಬ್ಧ ನಾಶದಿಂದ ತನಗೆ ಶರೀರತ್ಯಾಗವೆನ್ನುವುದಾದರೆ ಸಮಾನ ನ್ಯಾಯದಿಂದ ಭೀಮಾದಿಗಳಿಗೂ ಹಾಗೇ ಪ್ರಾರಬ್ಧ ನಾಶದಿಂದ ಶರೀರತ್ಯಾಗವೆನ್ನಬೇಕು. ಅತಿಯಾದ ಅಹಂಕಾರಾದಿ ದೋಷದಿಂದಲ್ಲ. ಸಹದೇವ ಮುಂತಾದವರಿಗೆ ಕೆಲವೊಮ್ಮೆ ಅತಿಯಾದ ಅಹಂಕಾರವಿದ್ದರೂ ಭೀಮನಿಗೆ ಅದು ಸರ್ವಥಾ ಇಲ್ಲ. ಏಕೆಂದರೆ ನಿರ್ದೋಷನಾದ ದೇವೋತ್ತಮನಾದ ಋಜುಗಣಸ್ಥನಾದ ದೇವನೆ ವಾಯುಪದವಿಗೆ ಬರುತ್ತಾನೆ. ಆ ವಾಯು ಸ್ವರೂಪನಾದ ಭೀಮನಿಗೆ ಅತಿ ಅಹಂಕಾರ ಮುಂತಾದ ದೋಷಗಳು ಸರ್ವಥಾ ಸಂಭಾವಿತವಲ್ಲ.

ಅಭಾವಂ ಹ್ಯತಿಮಾನಾದೇರ್ಭೀಮಸ್ಯಾಕಹ ಚ ಕೇಶವಃ ॥೮೧॥
'ಯತ್ಕಿಂಚಾಕಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ' ॥೮೨॥
ಇತಿ ತಸ್ಮಾದ್ ಯಥಾ ಯುದ್ಧೇ ಧರ್ಮಹಾನಿಮಮನ್ಯತ ।
ಏವಮತ್ರಾಪ್ಯಧರ್ಮೇಣ ದೇಹಪಾತಂ ನೃಪೋಽಬ್ರವೀತ್ ॥೮೩॥

ಅತಿಯಾದ ಅಹಂಕಾರ ಮುಂತಾದ ದೋಷಗಳು ಭೀಮನಲ್ಲಿ ಇಲ್ಲವೆಂದು ಶ್ರೀಕೃಷ್ಣನೆ ಹೇಳಿದ್ದಾನೆ 'ಭೀಮ! ನೀನು ನಿನ್ನಲ್ಲಿ ಬಹಳ ಅಲ್ಪಗುಣಗಳನ್ನೆ ಹೇಳಿಕೊಳ್ಳುವಿ. ಅದಕ್ಕಿಂತ ಸಾವಿರಪಾಲು ಅಧಿಕ ಗುಣಗಳನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ' ಎಂದು. ಅದರಿಂದ ಧರ್ಮರಾಜ ಧರ್ಮಯುದ್ಧದಲ್ಲಿ ಅಧರ್ಮವಾಯಿತೆಂದುಕೊಂಡಂತೆ ದೇಹಪಾತ ಪಾಪದಿಂದಾಯಿತು ಎಂದ.

[1]ಭೀಮ! ನಿನ್ನಲ್ಲಿ ಸಾವಿರಪಾಲು ಹೆಚ್ಚು ಗುಣವಿದ್ದರೂ ಅದೆಲ್ಲವನ್ನೂ ಹೇಳಿದರೆ ಜಂಬವಾದೀತೆಂದು ಸಂಕೋಚಪಟ್ಟು ಸ್ವಲ್ಪವೆ ಹೇಳಿಕೊಳ್ಳುತ್ತಿ ಎಂದು ಉದ್ಯೋಗಪರ್ವದಲ್ಲಿ (೭೭.೩) ಶ್ರೀಕೃಷ್ಣ ಹೇಳಿದ್ದಾನೆ. ಅಂಥ ಭೀಮ ತನ್ನ ಯೋಗ್ಯತೆಗೆ ಮೀರಿದ ಗುಣ ತನ್ನಲ್ಲಿ ಉಂಟೆಂದು ಜಂಬ ಕೊಚ್ಚಿಕೊಳ್ಳುವುದು ಹೇಗೆ ಸಂಭಾವಿತ? ಧರ್ಮರಾಜನಿಗೆ ಭ್ರಾಂತಿ. ಧರ್ಮಯುದ್ಧದಲ್ಲಿ ಅಧರ್ಮವನ್ನು ಶಂಕಿಸಿದ ಆತನಿಗೆ ನಿಷ್ಪಾಪಿಯಲ್ಲಿ ಪಾಪವನ್ನು ಶಂಕಿಸುವುದು ಒಂದು ಅಭ್ಯಾಸವೆ ಆಗಿಹೋಗಿದೆ.

ಪೂಜ್ಯೇಭ್ಯಃ ಪೂರ್ವಮೇವೈಷಾಂ ದೇಹಪಾತಮಭೀಪ್ಸತಾಮ್ ।
ತತ್ಕ್ರಮಾತ್ ದೇಹಪಾತೋಽಭೂನ್ನ ಪಾಪಾನ್ಮೃತ್ಯತಾಂ ಯಥಾ ॥೮೪॥
ನಹಿ ಪಾಪಫಲಂ ಮುಕ್ತೌ ದೇಹಪಾತಃ ಕಥಂಚನ ।
ಕಿಂತು ಕರ್ಮಕ್ಷಯಾದೇವ ತಥಾ ಸರ್ವತ್ರ ನಿಶ್ಚಿತಃ ॥೮೫॥

ದೇವತೆಗಳು ಮುಕ್ತಿಗೆ ಹೋಗುವಾಗ ಉತ್ತಮದೇವತೆಗಳಿಗಿಂತ ಮೊದಲು ತಮ್ಮ ದಿವ್ಯದೇಹ ಪತನ ಹೊಂದಲಿ ಎಂಬ ಇಚ್ಛೆಯಿಂದಲೆ ಅವರಿಗೆ ಹಾಗೇ ದೇಹಪಾತವಾಗುವುದು ಹೊರತು ಪಾಪದಿಂದಲ್ಲ. ಮುಕ್ತಿಯಲ್ಲಿ ದೇಹಪಾತವಾಗುವುದು ಸರ್ವಥಾ ಪಾಪದ ಫಲವಲ್ಲ, ಕರ್ಮಕ್ಷಯದಿಂದಲೆ ಅದು ಸಂಭವಿಸುತ್ತದೆ ಎನ್ನುವುದು ಬ್ರಹ್ಮಸೂತ್ರ ಮುಂತಾದ ಸಕಲಶಾಸ್ತ್ರಗಳ ನಿರ್ಣಯ. ಹಾಗೇ ವಯಸ್ಸಿನಲ್ಲಿ ಹಿರಿಯರಾದವರಿಗಿಂತ ಮೊದಲು ಕಿರಿಯರು ತಮ್ಮ ಮಾನುಷ ದೇಹ ಪತನ ಹೊಂದಲಿ ಎಂದು ಬಯಸಿದ್ದರಿಂದ ಆ ಕ್ರಮದಿಂದಲೆ ಪಾಂಡವರಿಗೂ ದ್ರೌಪದಿಗೂ ದೇಹ ಪತನವಾಯಿತು ಹೊರತು ಪಾಪದಿಂದಲ್ಲ.

[2]ಮುಕ್ತಿಕಾಲದಲ್ಲಿ ದೇವತೆಗಳಿಗೆ ಅವರ ದಿವ್ಯ ದೇಹ ಕ್ರಮವಾಗಿ

---

1. ಸಹಸ್ರಗುಣ ಮಾಹಾತ್ಮ್ಯೇಷು ಸತ್ಸ್ವಪಿ ತ್ವಮಾತ್ಮನ್ಯಲ್ಪಮೇವ ಸಂಭಾವಯಸೀತಿ ಕೇಶವೇನ ಭೀಮಂ ಪ್ರತಿ ನಿರೂಪಣಾತ್ ಸ್ವಸ್ಮಿನ್ ವಿದ್ಯಮಾನಾನೇಕ ಗುಣಾನಪ್ಯಹಂಕಾರಿತ್ವ ಭೀತ್ಯಾಽಕಥಯತೋ ಭೀಮಸ್ಯ ಕುತಃ ಸ್ವಯೋಗ್ಯತಾತಿರೇಕೇಣ ಸ್ವಸ್ಮಿನ್ ಗುಣ ಕಥನರೂಪಾತಿಮಾನ ಇತಿ ಭಾವಃ। ತರ್ಹಿ ಧರ್ಮರಾಜಃ ಕುತೋ ದೋಷಮಾಹೇತ್ಯಾಶಂಕ್ಯ ಅಪಾಪೇ ಪಾಪಶಂಕಿತ್ವಂ ತಸ್ಯ ಸ್ವಭಾವ ಇತಿ ಭಾವೇನಾಹ ಯಥಾ ಯುದ್ಧೇ ಧರ್ಮಹಾನಿಮಿತಿ। -ವಾದಿರಾಜೀಯ

2. ಕಿಂಚ ಮುಕ್ತಿಕಾಲೇ ಮುಮುಕ್ಷೂಣಾಂ ಉತ್ತಮಾಧಿಕಾರಿಣಾಂ ದೈವಿಕೋ ದೇಹಃ ಕಾಮಾದೇವ ಕ್ರಮಾತ್

ಸ್ವೋತ್ತಮ ದೇವತೆಗಳಲ್ಲಿ ಸ್ವೇಚ್ಛೆಯಿಂದಲೆ ಲಯ ಹೊಂದುತ್ತದೆ. ಪಾಪದಿಂದಲ್ಲ. ಎಲ್ಲ ಪ್ರಾರಬ್ಧ ಆಗ ಕ್ಷಯವಾಗಿರುವುದರಿಂದ ಪಾಪವೆ ಇರುವುದಿಲ್ಲ. ಹೀಗೆ ದಿವ್ಯ ದೇಹವನ್ನೆ ಕಳೆದುಕೊಳ್ಳಲು ದೇವತೆಗಳು ಬಯಸುತ್ತಿರುವಾಗ, ನಟರು ವೇಷ ಧರಿಸುವಂತೆ ತಾವು ಧರಿಸಿದ ನಿಂದ್ಯವಾದ ಮನುಷ್ಯ ಶರೀರವನ್ನು ವಯಸಿನಲ್ಲಿ ಹಿರಿಯವರಾದವರಿಗಿಂತ ಮೊದಲೆ ಕಳೆದುಕೊಳ್ಳಲು ಬಯಸುವುದರಲ್ಲಿ ಏನು ಆಶ್ಚರ್ಯ? ಅದರಿಂದ ವಯಸ್ಸಿನ ಕ್ರಮದಿಂದಲೆ ದ್ರೌಪದೀ ಮುಂತಾದವರಿಗೆ ಕ್ರಮವಾಗಿ ಸ್ವೇಚ್ಛೆಯಿಂದಲೆ ದೇಹಪಾತವಾಯಿತು, ಪಾಪದಿಂದಲ್ಲ. ಪಾಪದಿಂದಾಗಿದ್ದರೆ 'ಅಶ್ವತ್ಥಾಮಾ ಹತಃ' ಎಂದು ಹೇಳಲು ಕೃಷ್ಣ ಹೇಳಿದಾಗ ಅವನ ಮಾತಿನಲ್ಲಿ ಅವಿಶ್ವಾಸ ತೋರಿದ ಮಹಾಪಾಪದಿಂದ ಮೊದಲಿಗೆ ವಯಸ್ಸಿನಲ್ಲಿ ಹಿರಿಯನಾದ ಧರ್ಮರಾಜನಿಗೇ ದೇಹಪಾತವಾಗಬೇಕಿತ್ತು. ಬಳಿಕ ಭೀಮನ ಶರೀರಪಾತ ಹೀಗೆ ವಯಸ್ಸಿನ ಕ್ರಮದಿಂದ ಹಿರಿಯರೇ ಮೊದಲಿಗೆ ದೇಹಪಾತ ಹೊಂದಬೇಕಾಗಿತ್ತು. ಐವರು ಗಂಡಂದಿರು ಬದುಕಿರುವಾಗ ಎಲ್ಲರಿಗಿಂತ ಮೊದಲು ಹೆಂಡತಿ ಸಾಯುವುದು ಎಲ್ಲಿಯೂ ಕಂಡಿಲ್ಲ. ಅದರಿಂದ ಕಿರಿಯರು ಮೊದಲಿಗೆ ಕ್ರಮವಾಗಿ ಸತ್ತಿದ್ದು ಸ್ವೇಚ್ಛೆಯಿಂದಲೆ ಎನ್ನಬೇಕು.

ನರಕ ದರ್ಶನ

ತೇಷು ಸ್ವಲೋಕಾನ್ ಪ್ರಾಪ್ತೇಷು ಧರ್ಮಜಃ ಶ್ವಾತ್ಮನಾ ಸಹ ।
ಯಯೌ ಪುರೋ ದೇವರಥಸ್ತದಾಽಸ್ಯಾವತತಾರ ಹ ॥ ೮೬ ॥

ಭೀಮ ಮುಂತಾದವರು ತಮ್ಮ ಲೋಕಗಳಿಗೆ ಹೋದ ಬಳಿಕ ಧರ್ಮರಾಜ ನಾಯಿರೂಪದ ತನ್ನ ಜೊತೆಗೇ ಮುಂದೆ ನಡೆದ. ಆಗ ಅವನ ಮುಂದೆ ದೇವರಥ ಇಳಿದು ಬಂದಿತು.

ಸ್ವಸ್ವಪೂಜ್ಯೇಷು ನಶ್ಯತಿ, ನತು ಪಾಪೇನ। ಕಿಮುತ ನಟವತ್ ಕಾರ್ಯವಶಾತ್ ಗೃಹೀತೋ ಮಾನುಷೋ ದೇಹ ಇತಿ ಭಾವೇನಾಹ ಪೂಜ್ಯೇಭ್ಯ ಇತಿ। ಯಥಾ ಮುಚ್ಯತಾಂ ಅಗ್ನ್ಯಾದಿ ರುದ್ರಾಂತಾವರದೇವಾನಾಂ ದೇಹಪಾತಃ ಪೂಜ್ಯೇಭ್ಯೋ ಬ್ರಹ್ಮಾದ್ಯುತ್ತಮೋತ್ತಮ ದೇವೇಭ್ಯಃ ಪೂರ್ವಂ ಪೂರ್ವಮೇವ ತತ್ಕ್ರಮಾತ್ ಕೇವಲಂ ಮುಮುಕ್ಷಯೈವಾಭೂತ್ ನತು ಪಾಪಾತ್ ಏವಮೇವೈಷಾಂ ದ್ರೌಪದ್ಯಾ ಸಹ ಪಾಂಡವಾನಾಂ ಪೂಜ್ಯೇಭ್ಯೋ ಧರ್ಮರಾಜಾದಿಭ್ಯಃ ಪೂರ್ವಂ ಪೂರ್ವಮೇವ ಜುಗುಪ್ಸಿತ ಸ್ವಾಪ್ರಿಯ ಮಾನುಷ ದೇಹಪಾತೋ ಮುಮುಕ್ಷಯೈವಾಭೂತ್। ನತು ಪಾಪಾತ್। ಪಾಪೇನ ನಾಶಶ್ಚೇತ್ ವಯೋಜ್ಯೇಷ್ಠಸ್ಯ ಕೃಷ್ಣವಾಕ್ಯೇಽಪ್ಯನಾಶ್ವಾಸಾಖ್ಯ ಮಹಾಪಾಪಂ ಕುರ್ವತಃ ಧರ್ಮರಾಜಸ್ಯೈವ ಸ್ಯಾತ್। ತತೋ ಜ್ಯೇಷ್ಠಕ್ರಮೇಣೈವಾಪರೇಷಾಮಪಿ ಸ್ಯಾತ್। ನತು ಪ್ರತಿಲೋಮ್ನೇತಿ ಭಾವಃ। ನ ಹಿ ಪಂಚಸು ಭರ್ತೃಷು ಸತ್ಸು ಭಾರ್ಯಾಯಾಃ ಪೂರ್ವಂ ಗಮನಂ ಕ್ವಾಪಿ ದೃಷ್ಟಂ। ಅತ ಉಕ್ತ ಏವಾಭಿಸಂಧಿಃ। –ವಾದಿರಾಜೀಯ

ರಥಮಾರುಹೇತಿ ಕಥಿತೋ ರಥಿನಾ ಪುರತಃ ಶುನಃ ।
ಆರೋಹಮಬ್ರವೀನ್ನೈತದ್ ಯುಕ್ತಮಿತ್ಯಾಹ ಸೋಽಪಿ ತಂ ॥೮೭॥

ರಥವನ್ನೇರು ಎಂದು ಸೂತ ನುಡಿದಾಗ ಮೊದಲಿಗೆ ನಾಯಿ ಏರಬೇಕು ಎಂದ ಧರ್ಮರಾಜ. ಇದು ಯುಕ್ತವಲ್ಲ ಎಂದ ಸೂತ.

ನಾರುಹೇಯಂ ವಿನಾ ಶ್ವಾನಮಿತಿ ತೇನ ಸ್ಥಿರೋದಿತೇ ।
ಸ್ವರೂಪಂ ದರ್ಶಯಾಮಾಸ ಧರ್ಮೋ ಹ್ಯಾಪ್ತಃ ಶ್ವರೂಪತಾಮ್ ॥೮೮॥

ನಾಯಿಯನ್ನು ಬಿಟ್ಟು ನಾನು ರಥವನ್ನೇರಲಾರೆ ಎಂದು ದೃಢವಾಗಿ ಧರ್ಮರಾಜ ಹೇಳಿದಾಗ ನಾಯಿಯ ರೂಪವನ್ನು ತಳೆದಿದ್ದ ಯಮ ನಿಜರೂಪವನ್ನು ತೋರಿದ.

ಆನೃಶಂಸ್ಯಪರತ್ವೇನ ಕೀರ್ತಿಮೇವಾತ್ಮನೋ ವೃಷಃ ।
ವ್ಯಾಪಯಾಮಾಸ ಕೌಂತೇಯರೂಪಿಣೋ ಧರ್ಮಸೂಕ್ತಿಭಿಃ ॥೮೯॥

ತಾನು ದಯಾಪರನೆನ್ನುವ ತನ್ನ ಕೀರ್ತಿಯನ್ನು ಹೀಗೆ ಯಮ ಧರ್ಮರಾಜ ರೂಪಿಯಾದ ತನ್ನ ಧರ್ಮಯುಕ್ತ ವಚನಗಳ ಮೂಲಕ ಪ್ರಸಿದ್ಧಿಪಡಿಸಿದ.

ಯಮ ಪಾಪಿಗಳಿಗೆ ನರಕದಲ್ಲಿ ಶಿಕ್ಷೆ ನೀಡುವ ಕ್ರೂರಿಯಾದರೂ ತನ್ನನ್ನು ಆಶ್ರಯಿಸಿದ ನಾಯಿಯನ್ನೂ ರಕ್ಷಿಸುವ ಛಲವನ್ನು ಮೆರೆದು ದಯಾವೀರನೆನಿಸಿದ.

ತತಃ ಸ ರಥಮಾರುಹ್ಯ ಲೋಕಾನಾಮುತ್ತರೋತ್ತರಮ್ ।
ಅತಿಕ್ರಮ್ಯಾಖಿಲಾನ್ ರಾಜ್ಞೋ ಜಗಾಮ ಶ್ರೀಪತಿಪ್ರಿಯಃ ॥೯೦॥

ಬಳಿಕ ಹರಿಪ್ರಿಯನಾದ ಧರ್ಮರಾಜ ಮೇಲುಮೇಲಿನ ವೀರಸ್ವರ್ಗದ ಎಲ್ಲ ರಾಜರುಗಳನ್ನೂ ದಾಟಿ ಮುಂದುವರಿದ.

ಸರ್ವೇಷಾಮುತ್ತರಂ ಲೋಕಮೈಂದ್ರಂ ಪ್ರಾಪ್ಯೇದಮೇವ ತೇ ।
ಸ್ಥಾನಮಿತ್ಯುದಿತೋ ದೇವೈರ್ದುರ್ಯೋಧನಮವೈಕ್ಷತ ॥೯೧॥

ಎಲ್ಲಕ್ಕಿಂತ ಮೇಲೆ ಇಂದ್ರ ತನ್ನ ಲೀಲೆಗಾಗಿ ನಿರ್ಮಿಸಿದ್ದ ಸಾಂಕಲ್ಪಿಕ ಸ್ವರ್ಗದ ಇಂದ್ರಭವನಕ್ಕೆ ಹೋದಾಗ ದೇವತೆಗಳು ಧರ್ಮರಾಜನಿಗೆ ಇದೇ ನಿನ್ನ ಸ್ಥಾನ ಎಂದರು. ಆದರೆ ಧರ್ಮರಾಜ ಅಲ್ಲಿ ದುರ್ಯೋಧನನನ್ನು ಕಂಡ.

ಸಭ್ರಾತೃಕಂ ಜ್ವಲಂತಂ ಚ ಸರ್ವೇಷಾಮುಪರಿ ಸ್ಥಿತಮ್ ।
ತಂ ದೃಷ್ಟ್ವಾಪರಮಕ್ರುದ್ಧೋ ನಿಮೀಲ್ಯ ನಯನೇ ಶುಭೇ ॥೯೨॥
ಭ್ರಾತರೋ ಮೇ ಕ್ವ ಕೃಷ್ಣಾ ಚ ಕರ್ಣಾದ್ಯಾಃ ಕ್ವ ಚ ಬಾಂಧವಾಃ ।
ಧೃಷ್ಟದ್ಯುಮ್ನಾದಯಃ ಪುತ್ರಾ ಹೈಡಿಂಬಾದ್ಯಾಶ್ಚ ಸರ್ವಶಃ ॥೯೩॥

ಯಾದವಾಶ್ಚೇತಿ ಪಪ್ರಚ್ಛ ದೇವಾಂಸ್ತೇ ಚ ತಮಬ್ರುವನ್ ।
ಕಿಂ ತೇ ತೈಃ ಸ್ವಕೃತಂ ಕರ್ಮ ಭುಜ್ಯತೇಽತ್ರ ನಚಾಪರೈಃ ॥೯೪॥

ಎಲ್ಲರಿಗಿಂತ ಉಚ್ಚಸ್ಥಾನದಲ್ಲಿ ಸೋದರರೊಂದಿಗೆ ಕುಳಿತು ಮೆರೆಯುತ್ತಿದ್ದ ದುರ್ಯೋಧನನನ್ನು ಕಂಡು ಧರ್ಮರಾಜ ಬಹಳ ಕುಪಿತನಾಗಿ ತನ್ನ ಸುಂದರವಾದ ಕಣ್ಣುಗಳನ್ನು ಮುಚ್ಚಿ 'ಕರ್ಣಮುಂತಾದ ನನ್ನ ಸೋದರರೆಲ್ಲಿ, ದ್ರೌಪದಿ ಎಲ್ಲಿ, ಧೃಷ್ಟದ್ಯುಮ್ನ ಮುಂತಾದ ಬಾಂಧವರೂ ಘಟೋತ್ಕಚಮುಂತಾದ ಮಕ್ಕಳೂ ಎಲ್ಲರೂ ಎಲ್ಲಿ, ಯಾದವರೆಲ್ಲಿ' ಎಂದು ದೇವತೆಗಳನ್ನು ಕೇಳಿದ. ಅವರು ಅವನಿಗೆ ಹೇಳಿದರು, 'ಅವರಿಂದ ನಿನಗೆ ಏನು ಪ್ರಯೋಜನ? ಇಲ್ಲಿ ಎಲ್ಲರೂ ತಾವು ಮಾಡಿದ ಕರ್ಮವನ್ನು ತಾವು ಅನುಭವಿಸುತ್ತಿದ್ದಾರೆ. ಬೇರೆಯವರಲ್ಲ'.

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ ।
ಸರ್ವಾತಿಶಂಕೀ ಮಿತ್ರಧ್ರುಙ್ ನಾರಾಯಣಪರಾಙ್ಮುಖಃ ॥೯೫॥
ನಾಸ್ತಿಕೋಽತಿಶಠಃ ಕ್ರೂರೋ ದ್ವೇಷ್ಟಾ ವಿಷ್ಣೋಶ್ಚ ತದ್ಭವಾಮ್ ।
ಕಥಂ ದುರ್ಯೋಧನಃ ಸ್ಥಾನಂ ಸರ್ವೋತ್ತಮಮವಾಪ್ತವಾನ್ ॥೯೬॥

ದೇವತೆಗಳು ಹೀಗೆ ಹೇಳಿದಾಗ ಧರ್ಮರಾಜನೆಂದ 'ಪಾಪಿಯಾದ ಈ ದುರ್ಯೋಧನ ಭೂಲೋಕದಲ್ಲಿ ಎಲ್ಲ ರಾಜರನ್ನು ನಾಶಮಾಡಿದವ' ಎಲ್ಲರಲ್ಲಿಯೂ ಸಂಶಯಪಡುವ ಸ್ವಭಾವದವ. ಮಿತ್ರದ್ರೋಹಿ. ಹರಿಗೆ ವಿಮುಖ, ನಾಸ್ತಿಕ, ಮಹಾವಂಚಕ, ಕ್ರೂರ, ವಿಷ್ಣುವೈಷ್ಣವ ದ್ವೇಷಿ. ಇವನು ಸರ್ವೋಚ್ಚವಾದ ಸ್ಥಾನವನ್ನು ಹೇಗೆ ಪಡೆದ?

ಕಥಂ ಚ ಸರ್ವಧರ್ಮಜ್ಞಾ ನಾರಾಯಣಪರಾಯಣಾಃ ।
ಸಂಸ್ಥಿತಾಃ ಪರಮೇ ಧರ್ಮೇ ದೃಶ್ಯಂತೇಽತ್ರ ನ ಮತ್ಪ್ರಿಯಾಃ ॥೯೭॥

'ಸರ್ವಧರ್ಮಗಳನ್ನೂ ಬಲ್ಲವರು. ನಾರಾಯಣನನ್ನೆ ನಂಬಿದವರು, ಪರಮ ಧರ್ಮನಿಷ್ಠರು ಮತ್ತು ನನಗೆ ಪ್ರಿಯರೂ ಆದ ನನ್ನವರು ಇಲ್ಲಿ ಏಕೆ ಕಾಣಿಸುತ್ತಿಲ್ಲ?

ಯತ್ರ ಸಂತಸ್ತು ತೇ ಸಂತಿ ತತ್ರ ಸ್ಥಾತವ್ಯಮೇವ ಮೇ ।
ನಿರಯೇಽಪಿ ನ ಚಾತ್ರಾಪಿ ಹ್ಯನೇನ ಸಹ ಪಾಪಿನಾ ॥೯೮॥

'ಎಲ್ಲಿ ಆ ಸಜ್ಜನರಿರುವರೋ ಅಲ್ಲಿ ನಾನಿರಬೇಕು. ನರಕದಲ್ಲಾದರೂ ಸರಿಯೆ. ಈ ಪಾಪಿಯೊಂದಿಗೆ ಸ್ವರ್ಗದಲ್ಲಿಯೂ ನಾನಿರಲಾರೆ'.

ಅಸ್ಯ ವೀರತಮಸ್ಯೇದಂ ಧಾರ್ತರಾಷ್ಟ್ರಸ್ಯ ಯುಜ್ಯತೇ ।
ಇತ್ಯುಕ್ತಾ ದೇವತಾ ದೂತಂ ಸ್ವಾನಾಂ ಸಂದರ್ಶನಾರ್ಥಿನಃ ॥೯೯॥
ರಾಜ್ಞಃ ಸಂಪ್ರೇಷಯಾಮಾಸುಸ್ತತ್ಸಂದರ್ಶಿತವರ್ತ್ಮನಾ ।
ದುರ್ಗಂಧೇನ ಸುಕೃಚ್ಛ್ರೇಣ ತಮಸಾ ಪ್ರಾವೃತೇನ ಚ ॥೧೦೦॥

ಗತೈವ ಕಿಯತೀಂ ಭೂಮಿಂ ತದ್ದುರ್ಗಂಧಾಸಹೋ ನೃಪಃ ।
ಇಚ್ಛನ್ ನಿವರ್ತನಂ ತತ್ರ ಸ್ವಾನಾಂ ವಾಚ ಇವಾಶೃಣೋತ್ ॥೧೦೧॥

ದೇವತೆಗಳು 'ಉತ್ತಮ ವೀರನಾದ ದುರ್ಯೋಧನನಿಗೆ ಈ ಉತ್ತಮ ಸ್ಥಾನ ಯೋಗ್ಯವೆ ಆಗಿದೆ' ಎಂದು ಹೇಳಿ ತನ್ನವರನ್ನು ಕಾಣಲು ಬಯಸಿದ ಧರ್ಮರಾಜನಿಗೆ ದೂತನನ್ನು ಕಳಿಸಿಕೊಟ್ಟರು. ಧರ್ಮರಾಜ ಅವನು ತೋರಿಸಿದ ದುರ್ಗಂಧಮಯ ಕತ್ತಲು ಕವಿದ ಕಷ್ಟಕರವಾದ ದಾರಿಯಲ್ಲಿ ಸ್ವಲ್ಪದೂರ ಹೋದ ಬಳಿಕ ಆ ದುರ್ಗಂಧವನ್ನು ಸಹಿಸಲಾರದೆ ಹಿಂತಿರುಗಲು ಬಯಸಿದಾಗ ಅಲ್ಲಿ ಅವನಿಗೆ ತನ್ನವರ ಮಾತುಗಳು ಕೇಳಿ ಬಂದಂತಾಯಿತು.

ಕ್ಷಣಂ ತಿಷ್ಠ ಮಹಾರಾಜ ಸನ್ನಿಧಾನಬಲಾತ್ ತವ ।
ವೇದನಾ ನೋ ನ ಮಹತೀತ್ಯೇತಚ್ಛ್ರುತ್ವಾ ಯುಧಿಷ್ಠಿರಃ ॥೧೦೨॥
ಕೇ ಯೂಯಮಿತಿ ಪಪ್ರಚ್ಛ ದೀನಧ್ವನಿವಿಶಂಕಿತಃ ।
ಭೀಮೋಽಹಮರ್ಜುನಃ ಕರ್ಣ ಇತ್ಯಾದ್ಯುಕ್ತಮಿವಾಶೃಣೋತ್ ॥೧೦೩॥

'ಮಹಾರಾಜ! ಒಂದು ಕ್ಷಣ ನಿಲ್ಲು, ನಿನ್ನ ಸಾಮೀಪ್ಯದ ಬಲದಿಂದ ನಮ್ಮ ವೇದನೆ ಕಡಿಮೆಯಾಗುತ್ತಿದೆ' ಈ ದೀನಧ್ವನಿಯನ್ನು ಕೇಳಿ ಯುಧಿಷ್ಠಿರ ಸಂಶಯದಿಂದ ಕೇಳಿದ. 'ಯಾರು ನೀವು?' 'ನಾನು ಭೀಮ, ನಾನು ಅರ್ಜುನ, ನಾನು ಕರ್ಣ' ಎಂದು ಮುಂತಾಗಿ ಹೇಳಿದಂತಾಯಿತು. ಅದನ್ನು ಧರ್ಮರಾಜ ಕೇಳಿದ.

ಶ್ರುತ್ವಾ ತತ್ ಕೃಪಯಾಽಽವಿಷ್ಟಃ ಶೋಕಾಮರ್ಷಸಮನ್ವಿತಃ ।
ಆಹ ದೂತಂ ಯಥೇಷ್ಟಂ ತ್ವಂ ಗಚ್ಛ ನಾಹಮಿತೋ ವ್ರಜೇ ॥೧೦೪॥
ನ ಚ ಸ್ವರ್ಗೇಣ ಮೇ ಕಾರ್ಯಂ ತ್ಯಕ್ತ್ವಾ ಸ್ವಜನಮೀದೃಶಮ್ ।
ಇತ್ಯುಕ್ತಃ ಪ್ರಯಯೌ ದೂತಸ್ತತ್ಥಾವತ್ರ ಯುಧಿಷ್ಠಿರಃ ॥೧೦೫॥

ಧರ್ಮರಾಜ ಅದನ್ನು ಕೇಳಿ ಕರುಣೆಯಿಂದ ದುಃಖ ಕೋಪಯುಕ್ತನಾಗಿ ದೂತನಿಗೆ ಹೇಳಿದ, 'ನೀನು ನಿನಗೆ ಮನಬಂದಲ್ಲಿಗೇ ಹೋಗು, ನಾನು ಇಲ್ಲಿಂದ ಹೋಗಲಾರೆ. ಇಂಥ ಬಂಧುಗಳನ್ನು ಬಿಟ್ಟು ನನಗೆ ಸ್ವರ್ಗದಿಂದಲೂ ಏನಾಗಬೇಕಾಗಿಲ್ಲ.' ಹೀಗೆ ಹೇಳಿದಾಗ ದೂತ ಹೊರಟು ಹೋದ. ಧರ್ಮರಾಜ ಅಲ್ಲಿಯೆ ನಿಂತ.

ತತೋಽತ್ರ ದೇವಾಃ ಪುರೂಹೂತಪೂರ್ವಕಾಃ
ಸಮಾಯಯುಃ ಸ್ನೇಹವಶಾದ್ ಯುಧಿಷ್ಠಿರೇ ।
ತೇಷ್ವಾಗತೇಷ್ವೇವ ನ ತತ್ರ ವಾಚೋ
ದೀನಾ ನ ದುರ್ಗಂಧತಮೋಽಪ್ಯಪಶ್ಯತ್ ॥೧೦೬॥

ಆಗ ಅಲ್ಲಿಗೆ ಇಂದ್ರಾದಿ ದೇವತೆಗಳು ಧರ್ಮರಾಜನಲ್ಲಿ ಸ್ನೇಹವಶದಿಂದ ಬಂದರು. ಅವರು ಬಂದೊಡನೆ ಅಲ್ಲಿ ದುಃಖದ ಮಾತುಗಳು ಕೇಳಿಸದಂತಾದುವು. ದುರ್ಗಂಧ ಅಂಧಕಾರಗಳು ಇಲ್ಲವಾದುವು.

ಸ್ವರ್ಗೋತ್ತಮಂ ದೇಶಮಪಶ್ಯದೇತ-
ಮಭ್ರಾಂತಚೇತಾಃ ಸ ಯುಧಿಷ್ಠಿರಸ್ತದಾ ।
ಆಹಾತ್ರ ಧರ್ಮಃ ಪುನರಾತ್ಮಸದೃಶಃ
ಪ್ರಕಾಶಯನ್ ಪಾಂಡುಸುತಾಭಿಧಂ ಸ್ವಮ್ ॥೧೦೭॥

ಆಗ ಭ್ರಮಮುಕ್ತ ಬುದ್ಧಿಯವನಾದ ಯುಧಿಷ್ಠಿರ ಆ ಪ್ರದೇಶ ಸ್ವರ್ಗಕ್ಕಿಂತ ಉತ್ತಮವಾಗಿರುವುದನ್ನು ಕಂಡ. ಯಮ ತನ್ನ ಉತ್ತಮವಾದ ಕೀರ್ತಿಯನ್ನು ಪ್ರಸಿದ್ಧಿಗೊಳಿಸುವುದಕ್ಕಾಗಿ ಧರ್ಮರಾಜ ರೂಪದ ತನಗೇ ಹೇಳಿದ.

ಧರ್ಮಾದ್ ವಿಶಿಷ್ಟಾ ಹಿ ಸದಾಽನೃಶಂಸತಾ
ದೃಷ್ಟಾ ಚ ಸಾ ತ್ವಯ್ಯಧಿಕಾ ತ್ರಿಶೋ ಮಯಾ ।
ಶಕ್ರೋಽಪ್ಯವಾಚೈನಮಿದಂ ಮೃಷಾ ತೇ
ಪ್ರದರ್ಶಿತಂ ದ್ರೋಣಕೃತೇ ಮೃಷಾಗಿರಃ ॥೧೦೮॥
ಕೃಚ್ಛ್ರಾದಿದಂ ತೇ ಕಥಿತಂ ನ ಚಾತಿ
ವಿಸ್ರಂಭ ಆಸೀತ್ ತವ ಕೃಷ್ಣವಾಕ್ಯೇ ।
ನ ಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್
ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ॥೧೦೯॥

'ಎಲ್ಲ ಧರ್ಮಕ್ಕಿಂತ ಸದಾ ಶ್ರೇಷ್ಠವಾದುದು ದಯೆ. ಅದು ನಿನ್ನಲ್ಲಿ ಅಧಿಕವಾಗಿರುವುದನ್ನು ಮೂರು ಬಾರಿ ನಾನು ಕಂಡೆ' ಇಂದ್ರನೆಂದ, ದ್ರೋಣನಿಗೆ ಸುಳ್ಳು ಹೇಳಿದ ನಿನಗೆ ಈ ಸುಳ್ಳು ನರಕ ಪ್ರದರ್ಶಿತವಾಯಿತು. ಏಕೆಂದರೆ ನೀನೀ ಸುಳ್ಳನ್ನು ಕಷ್ಟದಿಂದ ಹೇಳಿದೆ. ಶ್ರೀಕೃಷ್ಣನ ಮಾತಿನಲ್ಲಿ ನಿನಗೆ ಪೂರ್ಣ ವಿಶ್ವಾಸವಿರಲಿಲ್ಲ. ಕೃಷ್ಣನ ಆಜ್ಞೆ ಇದ್ದರೆ ಸಕಲಶಾಸ್ತ್ರ ವಿರುದ್ಧ ಆಚರಣ ಉಳ್ಳವನಿಗೂ ಏನೂ ಪಾಪ ಬರಲಾರದು.

ದ್ರೋಣನಿಗೆ ಸುಳ್ಳು ಹೇಳಿದ್ದರಿಂದ ಧರ್ಮರಾಜನಿಗೆ ನರಕದರ್ಶನವಾಯಿತೆಂದು ಮಹಾಭಾರತದಲ್ಲಿ ಹೇಳಿದಂತೆ ಕಾಣುತ್ತದೆ. ನೀಲಕಂಠಿಯಲ್ಲಿ ಹಾಗೇ ಹೇಳಿದೆ. ನಿರ್ಣಯ ಹೇಳುತ್ತದೆ-

ದ್ರೋಣ ಸಾತ್ವಿಕನಾಗಿದ್ದರೂ ಪಾಪಿ ಕೌರವರ ಕಡೆಯಿಂತು ಹೋರಾಡುತ್ತಿದ್ದ. ಅವನ ಮುಂದೆ ಸುಳ್ಳು ಹೇಳಿದರೆ ಅದು ಸತ್ಯವೆನಿಸುತ್ತಿತ್ತು. ಆದರೆ ಕೃಷ್ಣನ ಮಾತಿನಲ್ಲಿ ವಿಶ್ವಾಸವಿಡದೆ 'ಕುಂಜರ' ಶಬ್ದ ಸೇರಿಸಿ ಸತ್ಯವನ್ನು ನುಡಿದುದರಿಂದ ಅದು ಸುಳ್ಳಾಯಿತು. ಈ ಸುಳ್ಳಿನ ಫಲ ನರಕದರ್ಶನ. ದೇವತೆಗಳಿಗೆ ನರಕವಿಲ್ಲ. ಅದರಿಂದ ದೇವತೆಗಳು ತಾತ್ಕಾಲಿಕವಾಗಿ ಸ್ವಾಪ್ನಪದಾರ್ಥದಂತೆ ನರಕದ ದೃಶ್ಯವನ್ನು ನಿರ್ಮಿಸಿ ತೋರಿದ್ದಾರೆ.

ಇಲ್ಲದಿದ್ದರೆ ಭೂಮಿಯ ಕೆಳಗಿರುವ ನರಕ ಸ್ವರ್ಗಮಾರ್ಗದಲ್ಲಿ ಹೇಗೆ ಸಿಕ್ಕೀತು? ಎನ್ನುತ್ತದೆ ಲಕ್ಷ್ಮಾಲಂಕಾರ.

ಸ್ವಪ್ನದಲ್ಲಿ ಪ್ರದರ್ಶಿತವಾಗುವ ಹುಲಿಸಿಂಹ ಮುಂತಾದವುಗಳಂತೆ ಕೆಲವು ಜೀವರನ್ನು ತತ್ಕಾಲದಲ್ಲಿ ಭೀಮಾದಿರೂಪದಿಂದ ಸೃಷ್ಟಿಮಾಡಿ ಅವರ ಮುಖದಿಂದ ಆರ್ತಧ್ವನಿಯನ್ನು ಹೊರಡಿಸಿದ್ದಾರೆ. 'ಧರ್ಮರಾಜ ಸ್ವಲ್ಪದೂರ ಹೋದ ಬಳಿಕ' ಎಂದು ಹೇಳಿದ್ದರಿಂದ ಇದು ಸ್ವರ್ಗದ ಸಮೀಪ ಪ್ರದೇಶವೇ ಹೊರತು ಸ್ವರ್ಗವಲ್ಲ. ದುರ್ಯೋಧನನಿಗೆ ಸಾಕ್ಷಾತ್ ಸ್ವರ್ಗವಿಲ್ಲ. ಸ್ವರ್ಗದಿಂದ ಕೆಳಗೆ ಸ್ವರ್ಗಕ್ಕೆ ಅಯೋಗ್ಯರಾದ ಅಸುರ ಮುಂತಾದವರಿಗಾಗಿ ನಿರ್ಮಿತವಾದ ಉಪಸ್ವರ್ಗ. ಎನ್ನುತ್ತದೆ ವಾದಿರಾಜೀಯ.

ಧರ್ಮರಾಜನಲ್ಲಿ ಮೂರು ಬಾರಿ ದಯಾಗುಣ ಕಂಡಿದ್ದು ಮೊದಲಿಗೆ ಯಕ್ಷಪ್ರಶ್ನೆಯಲ್ಲಿ ತಾಯಿಯಿಲ್ಲದ ನಕುಲನಲ್ಲಿ ದಯೆದೋರಿ ಅವನೆ ಏಳಲಿ ಎಂದು ಯಕ್ಷನನ್ನು ಪ್ರಾರ್ಥಿಸಿದ್ದು. ಎರಡನೆ ಬಾರಿ ಸ್ವರ್ಗಾರೋಹಣ ಕಾಲದಲ್ಲಿ ನಾಯಿಯ ಮೇಲೆ ದಯೆ ದೋರಿ. ನನ್ನನ್ನು ಆಶ್ರಯಿಸಿ ಬಂದ ನಾಯಿಗೆ ಇಲ್ಲದ ಸ್ವರ್ಗ ನನಗೂ ಬೇಡ ಎನ್ನುತ್ತಾನೆ. ಮೂರನೇ ಬಾರಿ ಇದೀಗ ಸುಳ್ಳು ನರಕದಲ್ಲಿ ಭೀಮಾದಿಗಳ ಆರ್ತಧ್ವನಿ ಕೇಳಿ ಎದೆಕರಗಿ ನನಗೆ ಸ್ವರ್ಗ ಬೇಡ, ಇದೇ ನರಕವೆ ಇರಲಿ ಎನ್ನುತ್ತಾನೆ.

ಬ್ರಹ್ಮಾಪರೋಕ್ಷ್ಯೇಽಪಿ ವಿಕರ್ಮ ಸೂಚಕಂ
ಪ್ರಾರಬ್ಧಪಾಪಸ್ಯ ವಿಘಾತನಂ ಯಥಾ ।
ಪಶ್ಯಾತ್ರ ಭೀಮಪ್ರಮುಖಾನ್ ಸುಖಿಸ್ಥಾನ್
ಸಂಪೂಜ್ಯಮಾನಾಂಸ್ತ್ರಿದಶೈಃ ಸುರೂಪಾನ್ ॥೧೧೦॥

ಬ್ರಹ್ಮಾಪರೋಕ್ಷ ಬಂದ ಬಳಿಕ ಜ್ಞಾನಿ ಮಾಡಿದ ಪಾಪಕರ್ಮ ವಿಷಭಕ್ಷಣದಂತೆ ಪ್ರಾರಬ್ಧಪಾಪಕ್ಕೆ ಸೂಚಕವಾಗುತ್ತದೆ. ಈಗ ಸುಖಿವಾಗಿ ದೇವತೆಗಳಿಂದ ಆದರಿಸಲ್ಪಡುತ್ತಿರುವ ಸುಂದರ ರೂಪದವರಾದ ಭೀಮ ಮುಂತಾದವರನ್ನು ಇಲ್ಲಿ ನೋಡು.

ಅಪರೋಕ್ಷ ಜ್ಞಾನಿಯಾದ ಧರ್ಮರಾಜ ಸುಳ್ಳು ಹೇಳಿದ್ದಕ್ಕೆ ನರಕ ದರ್ಶನವೇಕಾಯಿತು? ಜ್ಞಾನಿಗೆ ಸಾಮಾನ್ಯವಾಗಿ ಯಾವ ಪಾಪವೂ ಅಂಟುವುದಿಲ್ಲ. ಹರಿಗುರುದ್ರೋಹಾದಿ ಪ್ರಬಲ ಪಾಪ ಮುಕ್ತಿಯಲ್ಲಿ ಆನಂದಹ್ರಾಸಕ್ಕೆ ಕಾರಣವಾದೀತು ಹೊರತು ಈಗ ಅನುಭವಿಸುವ ದುಃಖಕ್ಕೆ ಅದು ಕಾರಣವಾಗದು ತಾನೆ? ಎಂಬ ಪ್ರಶ್ನೆಗೆ ಇಲ್ಲಿ ಸಮಾಧಾನವಿದೆ. ಧರ್ಮರಾಜ ಸುಳ್ಳು ಹೇಳಿದ್ದು ನರಕದರ್ಶನಕ್ಕೆ ಕಾರಣವಾಗಲಿಲ್ಲ.

ನರಕದರ್ಶನಕ್ಕೆ ಕಾರಣವಾದ ಪ್ರಬಲ ಪ್ರಾರಬ್ಧಕ್ಕೆ ಅದು ಸೂಚಕವಾಗಿತ್ತು. ವಿಷಭಕ್ಷಣ ಮರಣಕ್ಕೆ ಕಾರಣವಲ್ಲ. ಕೆಲವರಿಗೆ ವಿಷಉಂಡರೂ ಮರಣ ಉಂಟಾಗುವುದಿಲ್ಲ. ಆದರಿಂದ ವಿಷಭಕ್ಷಣ ಮರಣಕಾರಣವಾದ ಪ್ರಾರಬ್ಧಕ್ಕೆ ಸೂಚಕ. ಹಾಗೇ ಇದು.

ಕುತಃ ಪರಬ್ರಹ್ಮದೃಶಾಂ ಸುಶುದ್ಧ
ಸತ್ಕರ್ಮಣಾಂ ವಿಷ್ಣುಪರಾಯಣಾನಾಮ್ ।
ಪರೇಣ ಯೋಗೇನ ವಿಸೃಷ್ಟತನ್ವಾಂ
ದುಃಖಂ ಭವೇದ್ ದೇವವರಾಧಿಪಾನಾಮ್ ॥೧೧೧॥

ಪರಬ್ರಹ್ಮಪರೋಕ್ಷ ಉಳ್ಳವರು, ಅತ್ಯಂತ ಶುದ್ಧ ಸತ್ಕರ್ಮ ಮಾಡಿದವರು, ವಿಷ್ಣುಭಕ್ತರು, ಉತ್ತಮ ಯೋಗಬಲದಿಂದ ಶರೀರತ್ಯಾಗಮಾಡಿದವರು, ದೇವೋತ್ತಮರಿಗೂ ಅಧಿಪತಿಗಳು, ಭೀಮ ಮುಂತಾದವರು. ಅವರಿಗೆ ದುಃಖ ಎಲ್ಲಿಂದ ಬಂದೀತು?

ಏತೇ ಹಿ ದೇವಪ್ರವರಾಃ ಪೃಥಿವ್ಯಾಂ
ಜಾತಾ ಭುವೋ ಭಾರಜಿಹೀರ್ಷಮೀಶಮ್ ।
ಪ್ರತೋಷ್ಯ ತದ್ಭಾವಿತಬುದ್ಧಿಕರ್ಮಭಿಃ
ಪುನಶ್ಚ ತೇನೈವ ಸಹಾಽಪಿರೇ ದಿವಮ್ ॥೧೧೨॥

ಈ ಭೀಮ ಮುಂತಾದವರು ದೇವೋತ್ತಮರು ಭೂಮಿಯಲ್ಲಿ ಅವತರಿಸಿ, ಭೂಭಾರ ಕಳೆಯಲು ಬಯಸಿದ ಹರಿಯನ್ನು ಅವನಲ್ಲಿ ಅರ್ಪಿತವಾದ ಜ್ಞಾನಕರ್ಮಗಳಿಂದ ಆರಾಧಿಸಿ ಪುನಃ ಅವನೊಂದಿಗೇ ಸ್ವರ್ಗವನ್ನು ಹೊಂದಿದ್ದಾರೆ.

ಧರ್ಮರಾಜನ ಶರೀರ ತ್ಯಾಗ

ನ ತೇ ನೃಪಾದ್ಯಾಪಿ ಹಿ ಮಾನುಷೋ ಗತೋ
ಭಾವಸ್ತತೋ ದ್ವೇಷ್ಟಿ ಸುಯೋಧನಾದೀನ್ ।
ನಿಮಜ್ಜ್ಯ ತದ್ ವಿಷ್ಣುಪದೋದಕೇಽತ್ರ
ವಿಸೃಜ್ಯ ದೇಹಂ ಭಜ ದೇವಭಾವಮ್ ॥೧೧೩॥

'ರಾಜನೆ! ನಿನಗಿನ್ನೂ ಮನುಷ್ಯ ಸ್ವಭಾವ ಬಿಟ್ಟು ಹೋಗಿಲ್ಲ. ದುರ್ಯೋಧನಾದಿಗಳನ್ನು ಇನ್ನೂ ದ್ವೇಷಿಸುತ್ತಿರುವಿ'. ಅದರಿಂದ ಇಲ್ಲಿ ಗಂಗಾಜಲದಲ್ಲಿ ಮುಳುಗಿ ದೇಹವನ್ನು ತೊರೆದು ದೇವತ್ವವನ್ನು ಪಡೆ.

ಪಾಪಿ ದುರ್ಯೋಧನನೂ ಜೊತೆಗೆ ಇರುವುದಾದರೆ ನನಗೆ ಅಂಥ ಸ್ವರ್ಗಬೇಡ ಎನ್ನುವಷ್ಟು ಕೋಪ ಧರ್ಮರಾಜನಿಗೆ. ವಸ್ತುತಃ ಅದು ವೀರರಾಗಿ ರಣರಂಗದಲ್ಲಿ ಮಡಿದವರಿಗೆ ಇರುವ ಉಪಸ್ವರ್ಗ. ಅದು ಪಾಪಿಗಳಿಗೂ

ಉಂಟೆಂಬುದನ್ನು ಧರ್ಮರಾಜ ತಿಳಿಯದೆ ಕೋಪಿಸಿಕೊಂಡ. ಈ ಅಜ್ಞಾನ ದ್ವೇಷ ಕೋಪಗಳು ಅವನಿಗೆ ಮನುಷ್ಯದೇಹ ಸಂಬಂಧದಿಂದ ಬಂದವುಗಳು. ಅದರಿಂದ ಆ ದೇಹವನ್ನು ಬಿಡಲು ಹೇಳುತ್ತಾರೆ ದೇವತೆಗಳು.

ಮನುಷ್ಯ ದೇಹವಿಲ್ಲದ ದೇವತೆಗಳೂ ದುರ್ಯೋಧನನನ್ನು ದ್ವೇಷಿಸುವುದರಿಂದ ಧರ್ಮರಾಜ ದ್ವೇಷಿಸಿದ್ದರಲ್ಲಿ ತಪ್ಪೇನಿದೆ? ಮನುಷ್ಯದೇಹನಿಮಿತ್ತವಾಗಿ ಆ ದ್ವೇಷ ಉಂಟಾಗಿದೆ ಎಂದೇಕೆ ಹೇಳಬೇಕು ಎಂಬ ಪ್ರಶ್ನೆಗೆ ಹೀಗೆ ಸಮಾಧಾನ - ದುರ್ಯೋಧನಾದಿಗಳು ಈ ಉಪಸ್ವರ್ಗದಲ್ಲಿ ಅನುಭವಿಸುವ ಸುಖ ಅವರ ಪ್ರಾರಬ್ಧ ಪುಣ್ಯವಶದಿಂದ ಬಂದುದು. ಪ್ರಾರಬ್ಧ ಪುಣ್ಯಕ್ಕೆ ಫಲ ನೀಡುವವರು ದೇವತೆಗಳೆ. ಫಲ ಈತನಿಗೆ ಸಿಗಬಾರದು. ನೀಡಲಾರೆವು ಎಂದು ದ್ವೇಷಮಾಡುವುದಿಲ್ಲ. ಈತ ತಮೋಯೋಗ್ಯ, ತಮಸ್ಸಿನಲ್ಲಿ ಬಿದ್ದು ಮಹಾದುಃಖ ಅನುಭವಿಸಲಿ ಎಂದೇ ದ್ವೇಷಮಾಡುತ್ತಾರೆ. ಧರ್ಮರಾಜ ಹಾಗಲ್ಲ. ದುರ್ಯೋಧನ ತನ್ನ ಪ್ರಾರಬ್ಧ ಪುಣ್ಯದ ಫಲವನ್ನು ಅನುಭವಿಸಿದರೆ ಅದನ್ನೂ ದ್ವೇಷಿಸುತ್ತಾನೆ. ಇದು ಅಜ್ಞಾನ, ಮನುಷ್ಯ ಸ್ವಭಾವದ್ದು. ಅದು ಇನ್ನೂ ಅವನನ್ನು ಬಿಟ್ಟಿಲ್ಲ ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

ಸತ್ಯಾಭಿನವೀಯದಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಂಡು ನಿರ್ಣಯ ಶ್ಲೋಕಕ್ಕೆ ಬೇರೆ ರೀತಿ ವ್ಯಾಖ್ಯಾನ ಮಾಡಲಾಗಿದೆ-

'ರಾಜನೆ! ನಿನಗೆ ಹಿಂದೆ ಮನುಷ್ಯ ಸ್ವಭಾವ ಎಂದೂ ಬಿಟ್ಟುಹೋಗಿರಲಿಲ್ಲ, ಏಕೆಂದರೆ ನೀನು ಈಗಮಾತ್ರ ದುರ್ಯೋಧನನನ್ನು ದ್ವೇಷಿಸುತ್ತಿರುವೆ.'[2]

---

1. ನನು ದುರ್ಯೋಧನಾದಿಷು ದೇವಾನಾಂ ದ್ವೇಷಃ ಸುತರಾಮಪೇಕ್ಷಿತಃ। ಅತೋ ಮಾನುಷಭಾವಾದ್ ದ್ವೇಷ್ಟೀತಿ ಕಥಮಿತಿ ಚೇತ್ ಸತ್ಯಂ। ದುರ್ಯೋಧನಾದಿಭಿರುತ್ಕೃಷ್ಟೋಪಸ್ವರ್ಗೇಽನುಭೂಯಮಾನಂ ಸುಖಂ ಪ್ರಾರಬ್ಧ ಪುಣ್ಯವಶಾದೇವ। ತಸ್ಯ ಚ ಫಲದಾತಾರೋ ದೇವಾಸ್ತಾವನ್ಮಾತ್ರೇಣ ನ ದ್ವಿಷಂತಿ। ಕಿಂತು ತಮೋ ಯೋಗ್ಯೋಽಯಮಂಧೇತಮಸಿ ಪತಿತ್ವಾ ಮಹಾದುಃಖಮನುಭವತ್ವಿತ್ಯೇವ ದ್ವಿಷಂತಿ। ತವ ತ್ವಯಂ ದ್ವೇಷೋ ಮಾನುಷಭಾವೇನ ತತ್ಕೃತ ಕರ್ಮವಶತ್ವಾಜ್ಞಾನಾದೇವೇತಿ ಭಾವೇನ ತತೋ ಭವಾನ್ ದ್ವೇಷ್ಟೀತ್ಯುಕ್ತಂ। -ವಾದಿರಾಜೀಯ

2. ಹೇ ನೃಪ ತೇ ಮಾನುಷೋ ಭಾವಃ ಪೂರ್ವಂ ಕದಾಪಿ ನ ಗತಃ। ಹಿ ಯಸ್ಮಾತ್ ಅದ್ಯ ಇದಾನೀಂ ಭವಾನ್ ಸುಯೋಧನಾದೀನ್ ದ್ವೇಷ್ಟಿ ತತಃ ಕಾರಣಾತ್ ತೇ ಮಾನುಷೋ ಭಾವಃ ಅದ್ಯ ಇದಾನೀಂ ಗತ ಇತಿ।

ಏತೇನ 'ಹಿ ಯಸ್ಮಾತ್ ಸುಯೋಧನಾದೀನ್ ದ್ವೇಷ್ಟಿ ತತಃ ಕಾರಣಾತ್ ತೇ ಮಾನುಷೋ ಭಾವೋಽದ್ಯಾಪಿ ನಗತ' ಇತಿ ಕಥನಮುಯುಕ್ತಂ। ಮಾನುಷ ಭಾವ ವರ್ಜಿತಾನಾಂ ಭೀಮಾದೀನಾಂ ಸುಯೋಧನಾದಿದ್ವೇಷದರ್ಶನಾತ್।

ಹಿಂದೆ ಧರ್ಮರಾಜ ಮನುಷ್ಯ ಸ್ವಭಾವ ಪ್ರಯುಕ್ತ ದುರ್ಯೋಧನನನ್ನು ದ್ವೇಷಿಸುತ್ತಿರಲಿಲ್ಲ. ಸಂಧಿಯಾಗಲಿ ಎನ್ನುತ್ತಿದ್ದ. ಈಗ ದ್ವೇಷಿಸುತ್ತಾನೆ. ಅದರಿಂದ ಮನುಷ್ಯ ಸ್ವಭಾವ ಬಿಟ್ಟಿದೆ ಎನ್ನುವುದು ಸ್ಪಷ್ಟ. ಇನ್ನೇಕೆ ಮನುಷ್ಯದೇಹ? ಬಿಟ್ಟುಬಿಡು ಎನ್ನುತ್ತಿದ್ದಾರೆ, ದೇವತೆಗಳು.

ಸುಯೋಧನಾದ್ಯಾ ಯದಿಮೇ ಸುಪಾಪಾ
ಆರಬ್ಧಕರ್ಮಕ್ಷಯಮಾಪ್ಯ ನಿತ್ಯೇ।
ನಿಃಶೇಷಸೌಖ್ಯೋಜ್ಝಿತನಿತ್ಯದುಃಖೇ
ವಶಾಃ ಪತಿಷ್ಯಂತ್ಯಪುನರ್ನಿವೃತ್ತಾಃ ॥೧೧೪॥

ಈ ದುರ್ಯೋಧನ ಮುಂತಾದವರು ಪಾಪಿಗಳಾದುದರಿಂದ ಪ್ರಾರಬ್ಧ ಪುಣ್ಯಕ್ಷಯ ಹೊಂದಿದ ಬಳಿಕ ಯಾವ ಸುಖವೂ ಇಲ್ಲದಂಥ ನಿತ್ಯ ದುಃಖಮಯವಾದ ನಿತ್ಯ ನರಕದಲ್ಲಿ ಪುನರಾವೃತ್ತಿ ಇಲ್ಲದವರಾಗಿ ಹರಿಯ ಅಧೀನರಾಗಿ ಬೀಳುವರು.

ದೇವಾಂಶಜಾ ಯೇ ತು ಸಮಸ್ತಶಸ್ತೇ
ಸ್ವಮೂಲರೂಪಂ ಸಮವಾಪ್ಯ ಕಾಲೇ ।
ಸ್ವತಾರತಮ್ಯಾನುಸೃತಾಂ ವಿಮುಕ್ತಿಂ
ಪ್ರಾಪ್ಸ್ಯಂತಿ ನಾತ್ರಾಪಿ ವಿಚಾರ್ಯಮಸ್ತಿ ॥೧೧೫॥

ದೇವಾಂಶ ಸಂಭೂತರು ಯಾರೋ ಅವರೆಲ್ಲರೂ ತಮ್ಮ ಮೂಲರೂಪವನ್ನು ಹೊಂದಿ ಬ್ರಹ್ಮಪ್ರಳಯ ಕಾಲದಲ್ಲಿ ತಮ್ಮ ಯೋಗ್ಯತಾ ತಾರತಮ್ಯಕ್ಕೆ ಅನುಗುಣವಾದ ಮುಕ್ತಿಯನ್ನು ಹೊಂದುತ್ತಾರೆ. ದೈತ್ಯರ ತಮಃಪ್ರಾಪ್ತಿಯಲ್ಲಾಗಲಿ ದೇವತೆಗಳ ಮುಕ್ತಿ ಪ್ರಾಪ್ತಿಯಲ್ಲಾಗಲಿ ಸಂಶಯಕ್ಕೆ ಅವಕಾಶವಿಲ್ಲ.

ಇತ್ಯುಕ್ತ ಆಶ್ವೇವ ನಿಮಜ್ಜ್ಯ ಗಂಗಾಂ
ಧರ್ಮಾತ್ಮಜಸ್ತಂ ಪ್ರವಿಸೃಜ್ಯ ದೇಹಮ್ ।
ಸದ್ಯೋ ಬಭೌ ದೈವಮವಾಪ್ಯ ಕಾಯಂ
ವಿಸೃಷ್ಟರೋಷಾದಿಸಮಸ್ತದೋಷಃ ॥೧೧೬॥

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ।
ಸರ್ವಾತಿಶಂಕೀ ಮಿತ್ರಧ್ರುಗ್ನಾರಾಯಣಪರಾಙ್ಮುಖಃ

ಇತ್ಯುಕ್ತ್ವಾನ್ಯಥಾನುಪಪತ್ತ್ಯಾ ದುರ್ಯೋಧನಾದೀನ್ ದೃಷ್ಟ್ವಾಶುಭಾರ್ಥಂ ಧರ್ಮರಾಜೇನ ನಯನಾಚ್ಛಾದನಸ್ಯ ಕೃತತ್ವಾತ್ ತದನ್ಯಥಾನುಪಪತ್ತ್ಯಾ ಚ ಧರ್ಮರಾಜಸ್ಯ ಮಾನುಷೋ ಭಾವೋ ಗತ ಇತ್ಯರ್ಥಸ್ಯ ಸಿದ್ಧತ್ವಾಚ್ಚೇತಿ ದೂಷಣಂ ಪರಾಸ್ತಂ। ಅತ್ರ ಮಾನುಷೋ ಭಾವೋಽದ್ಯಾಪಿ ನ ಗತ ಇತ್ಯರ್ಥೋ ನೋಚ್ಯತೇ। ಕಿಂತು ಪೂರ್ವಮಿತ್ಯಾದೇಃ ಶೇಷೇಣ ಪೂರ್ವಂ ಕದಾಪಿ ಮಾನುಷೋ ಭಾವೋ ನ ಗತಃ ಇದಾನೀಂ ಮಾನುಷೋ ಭಾವೋ ಗತ ಇತ್ಯರ್ಥ ಉಚ್ಯತೇ ಇತಿ ಸ್ವೀಕರಣಾತ್॥

-ಸತ್ಯಾಭಿನವೀಯ

ದೇವತೆಗಳು ಹೀಗೆ ಹೇಳಿದಾಗ ಧರ್ಮರಾಜ ಬೇಗನೆ ಗಂಗೆಯಲ್ಲಿ ಮುಳುಗಿ ಅದರಲ್ಲಿ ಮನುಷ್ಯ ದೇಹವನ್ನು ತೊರೆದು ದಿವ್ಯಶರೀರ ಪಡೆದು ಕೋಪ ಮುಂತಾದ ಎಲ್ಲ ದೋಷವನ್ನೂ ಕಳೆದುಕೊಂಡು ಬೆಳಗಿದ.

ಸ ತು ಪ್ರಪಶ್ಯನ್ ಸ್ವಜನಂ ಸಮಸ್ತಂ
ಸ್ವಮೂಲರೂಪಾತಿಸಮೀಪಸಂಸ್ಥಮ್ ।
ದದರ್ಶ ಭೀಮಂ ಚ ಮರುತ್ಸಮೀಪೇ
ಮಧ್ಯೇ ಜ್ವಲಂತಂ ಮರುತಾಂ ಗಣಸ್ಯ ॥೧೧೭॥

ಧರ್ಮರಾಜ ತನ್ನ ಬಂಧು-ಜನರೆಲ್ಲರೂ ತಮ್ಮ ಮೂಲರೂಪಗಳಿಗೆ ಅತಿ ಸಮೀಪದಲ್ಲಿದ್ದುದನ್ನು ನೋಡುತ್ತ, ಮರುತ್ತುಗಳ ಸಮೂಹದ ನಡುವೆ ಮುಖ್ಯಪ್ರಾಣನ ಸಮೀಪ ಹೊಳೆಯುತ್ತಿದ್ದ ಭೀಮನನ್ನೂ ಕಂಡ.

ದದರ್ಶ ಕೃಷ್ಣಾಮಪಿ ತತ್ಸಮೀಪೇ
ಶ್ರಿಯಾ ಜ್ವಲಂತೀಂ ಸಮತೀತ್ಯ ಚಾನ್ಯಾಃ ।
ಸ್ಪಷ್ಟುಂ ಚ ಸಂಸ್ಕಾರವಶಾದಿಯೇಷ
ನಿಷಿಧ್ಯ ತಂ ಪ್ರಾಹ ಸುರಾಧಿರಾಜಃ ॥೧೧೮॥

ಧರ್ಮರಾಜ ಭೀಮನ ಸಮೀಪದಲ್ಲಿ ಪ್ರಕಾಶದಿಂದ ಬೆಳಗುತ್ತಿದ್ದ ದ್ರೌಪದಿಯನ್ನೂ ಕಂಡು ಬೇರೆ ದೇವಿಯರನ್ನು ದಾಟಿ ಸಂಸ್ಕಾರವಶದಿಂದ ಅವಳನ್ನು ಸ್ಪರ್ಶಿಸಲು ಬಯಸಿದ. ದೇವೇಂದ್ರ ತಡೆದು ಹೇಳಿದ'.

ಏಷಾ ಹಿ ಸಾಕ್ಷಾಜ್ಜಗತಾಂ ಪ್ರಿಯಸ್ಯ
ಪ್ರಾಣಾತ್ಮನೋ ಜೀವವರೇಶ್ವರಸ್ಯ ।
ಪ್ರಾಣಪ್ರಿಯಾ ಶ್ರೀರಿತಿ ನಾಮ ಯಸ್ಯಾಃ
ಶಮಾತ್ಮಕೇಽಸ್ಮಿನ್ ರಮತೇ ಯದೇಷಾ ॥೧೧೯॥

ಇವಳು ಸಾಕ್ಷಾತ್ ಲೋಕಪ್ರಿಯನಾದ ಜೀವೋತ್ತಮ ಮುಖ್ಯಪ್ರಾಣನ ಪ್ರಾಣಪ್ರಿಯೆ. ಇವಳು ಸುಖಸ್ವರೂಪನಾದ ಪ್ರಾಣನಲ್ಲಿ ಸದಾ ರಮಿಸುವುದರಿಂದ ಶ್ರೀ ಎಂದು ಇವಳಿಗೆ ಹೆಸರು.

ಮಹಾಭಾರತ (ಸ್ವರ್ಗಾ 4.12) ದಲ್ಲಿ ಧರ್ಮರಾಜ ದ್ರೌಪದಿಯನ್ನು ಸ್ಪರ್ಶಿಸಲು ಬಯಸಿದಾಗ 'ಈಕೆ ಶ್ರೀದೇವಿ. ನಿನಗಾಗಿ ದ್ರೌಪದಿಯಾಗಿ ಮನುಷ್ಯ ಜನ್ಮ ಪಡೆದಿದ್ದಳು' ಎನ್ನುತ್ತಾನೆ ಇಂದ್ರ. ಇದು ಸ್ವರ್ಗಕ್ಕೆ ಸಮ್ಮತಿಯೆ? ಅಲ್ಲ, ಎನ್ನುತ್ತದೆ ನಿರ್ಣಯ.

ಯುಷ್ಮಚ್ಚತುರ್ದೇಹಗತಸ್ಯ ವಾಯೋ
ರ್ವಾಯುಪ್ರಿಯಾ ಭೀಮತನೋಸ್ತಥೈವ ।

ಭೋೀಗಾಯ ಸೃಷ್ಟಾ ಪುರುಷೋತ್ತಮೇನ
ಯುಷ್ಮತ್ಪ್ರಿಯಾರ್ಥಂ ಭವತಾಂ ಚ ದಾರ್ಯೈಃ ॥೧೨೦॥

ನಿಮ್ಮ ನಾಲ್ವರ ಶರೀರದಲ್ಲಿದ್ದ ಮತ್ತು ಪ್ರತ್ಯೇಕವಾಗಿಯೂ ಭೀಮರೂಪನಾಗಿದ್ದ ವಾಯುವಿನ ಭೋೀಗಕ್ಕಾಗಿ ನಿಮ್ಮ ಸಂತೋಷದ ಸಲುವಾಗಿ ನಿಮ್ಮ ಪತ್ನಿಯರೊಂದಿಗೆ ವಾಯುಪತ್ನಿ ಭಾರತಿ ದ್ರೌಪದಿಯಾಗಿ ಹರಿಯಿಂದ ಸೃಷ್ಟಳಾಗಿದ್ದಳು.

ಪ್ರೀತಿಸ್ತತೋ ಹ್ಯಭ್ಯಧಿಕಾ ಬಭೂವ
ಭೀಮಸ್ಯ ಚಾಸ್ಯಾಸ್ತದನು ಸ್ಮ ಪಾರ್ಥೇ ।
ತತೋ ಭವತ್ಸ್ವೇವ ಯಥಾಕ್ರಮೇಣ
ಗುಣಾನುಸಾರೇಣ ಸಮೀರಣಸ್ಯ ॥೧೨೧॥

ಅದರಿಂದ ಭೀಮನಿಗೂ ದ್ರೌಪದಿಗೂ ಪರಸ್ಪರ ಹೆಚ್ಚು ಪ್ರೀತಿ ಇದ್ದಿತು. ಅನಂತರ ಅರ್ಜುನನಲ್ಲಿ ಅನಂತರ ನಿಮ್ಮಲ್ಲಿ ವಾಯುವಿನ ಆವೇಶವೆಂಬ ಗುಣಕ್ಕೆ ಅನುಸಾರವಾಗಿ ಕ್ರಮದಿಂದ ಪ್ರೀತಿ ಇದ್ದಿತು.

ಇದಾ ಹಿ ಸಾ ಶುದ್ಧತನುಃ ಪ್ರಜಾತಾ
ಶಚ್ಯಾದಿಯೋಗಾಪಗತಾಗ್ರ್ಯದೇಹಾ ।
ಯೂಯಂ ಚ ಸರ್ವೇ ಮರುತೋ ವಿಶೇಷ
ಸಂಯೋಗಹೀನಾಃ ಸ್ವಶರೀರಸಂಸ್ಥಾಃ ॥೧೨೨॥

ಈಗ ಆ ದ್ರೌಪದಿ ಶಚೀ ಮುಂತಾದ ದೇವಿಯರ ಆವೇಶರಹಿತವಾದ ಉತ್ತಮದೇಹ ಉಳ್ಳವಳಾಗಿ ಶುದ್ಧಭಾರತೀ ರೂಪಳಾಗಿದ್ದಾಳೆ. ನೀವೆಲ್ಲರೂ ಮುಖ್ಯಪ್ರಾಣನ ವಿಶೇಷಾವೇಶ ರಹಿತರಾಗಿ ನಿಮ್ಮ ಶರೀರದಲ್ಲಿ ಇರುವಿರಿ.

'ಇದಾ' ಎಂದರೆ, ಯದಾ-ತದಾ-ಕದಾ ಎಂದು ಮುಂತಾದವುಗಳಂತೆ ಕಾಲಾರ್ಥಕ ದಾ ಪ್ರತ್ಯಯ ಇದಂ ಶಬ್ದದ ಮೇಲೆ ಬಂದಿದೆ. 'ಈಗ' ಎಂದರ್ಥ. ವೇದದಲ್ಲಿ ಹೀಗೆ ಪ್ರಯೋಗವಿದೆ. 'ತದೋ ದಾ ಚ' ಎಂಬ ಪ್ರಾಣಿನಿಸೂತ್ರದಲ್ಲಿ ತದ್ ಶಬ್ದದ ಮೇಲೆ ಮಾತ್ರ 'ದಾ' ವಿಹಿತ. ಇದಂ ಶಬ್ದದಮೇಲೆ ಅಲ್ಲ. ಆದರೂ 'ಸರ್ವೈಕಾನ್ಯಕಿಂ ಯತ್ತದಃ ಕಾಲೇ ದಾ' ಎಂದು ತದ್ ಶಬ್ದಕ್ಕೆ 'ದಾ' ವಿಧಾನ ಮಾಡಿರುವಾಗ ಇಲ್ಲಿ ಪುನಃ ವಿಧಾನ ಮಾಡಿದ್ದು ವ್ಯರ್ಥವಾಗಿ 'ಇದಂ' ಶಬ್ದದಮೇಲೂ 'ದಾ' ಬರುವುದೆಂದು ಜ್ಞಾಪಿಸುತ್ತದೆ. ಅದರಿಂದ ಈ ಅಪೂರ್ವ ಪದಪ್ರಯೋಗ ಸಾಧು ಎನ್ನುತ್ತದೆ ವರದ

ರಾಜೀಯ.[1] ಹೃಷಿಕೇಶ ತೀರ್ಥಿಯ ಪಾಠದಲ್ಲಿಯೂ 'ಇದಾ' ಎಂದೇ ಇದೆ. ಹೃಷಿಕೇಶತೀರ್ಥೀಯ ಪಾಠವನ್ನು ಪ್ರಾಯಃ ವರದರಾಜೀಯ ವ್ಯಾಖ್ಯಾನ ಅನುಸರಿಸಿರುವುದರಿಂದ ಈ ಸಂಪುಟದಲ್ಲಿ ಅದನ್ನೇ ಸ್ವೀಕರಿಸಿದೆ.

ಸ್ಪರ್ಶೇಽಪಿ ನಾಸ್ಯಾಃ ಪವಮಾನಪತ್ನ್ಯಾಃ
ಸುಪ್ರೀತತಾಽಲಂ ಭವತಾಮಿದಾನೀಮ್ ।
ನ ಚೋತ್ತರತ್ರಾಪಿ ಭವೇತ್ ಕಥಂಚಿದ್
ದಿವೌಕಸಾಂ ಮಾನುಷದೇಹಿನೋ ಯಥಾ ॥೧೨೩॥

ಈಗ ಈ ವಾಯುಪತ್ನಿಯ ಸ್ಪರ್ಶಮಾಡುವುದಕ್ಕೂ ನಿಮಗೆ ಶುದ್ಧಿ, ಯೋಗ್ಯತೆ ಇಲ್ಲ. ಮುಂದೆಯೂ ಅದು ಸರ್ವಥಾ ಬರುವುದಿಲ್ಲ. ಮನುಷ್ಯ ದೇಹಿಗೆ ದೇವತೆಗಳ ಸ್ಪರ್ಶ ಯೋಗ್ಯತೆ ಹೇಗೆ ಇಲ್ಲವೋ ಹಾಗೆ.

ಇತೀರಿತಂ ತಂ ಪ್ರತಿಸನ್ನಿವೃತ್ತಂ
ವಿನಾಶಯನ್ ಮಾನುಷವಾಸನಾಂ ಸ್ವಯಮ್ ।
ಸಮಾಶ್ಲಿಷಚ್ಛುದ್ಧತನುಃ ಸ್ವತೋಽಧೋ
ಧರ್ಮೋ ಹರೇಃ ಸೋಽಭವದಾಶು ತತ್ಸಮಃ ॥೧೨೪॥

ಇಂದ್ರ ಹೀಗೆ ಹೇಳಿದಾಗ ಧರ್ಮರಾಜ ದ್ರೌಪದೀ ಸ್ಪರ್ಶಕ್ಕೆ ಹಿಮ್ಮೆಟ್ಟಿದ. ಅವನ ಮಾನುಷ ಸಂಸ್ಕಾರವನ್ನು ಕಳೆಯುವುದಕ್ಕಾಗಿ ಶ್ರೀಹರಿಯ ಬಲಸ್ತನದಿಂದ ಉದ್ಭವಿಸಿದ ಶುದ್ಧಶರೀರಿಯಾದ ಧರ್ಮ ಸ್ವತಃ ಅವನನ್ನು ಆಲಿಂಗಿಸಿದ. ಒಡನೆ ಧರ್ಮರಾಜ ಧರ್ಮನಿಗೆ ಪೂರ್ತಿ ಸದೃಶನಾದ.

ಸ್ವರ್ಗದಲ್ಲಿ ಪಾಂಡವರು

ತತಸ್ತು ಪಾರ್ಥಾ ಅಖಿಲಾಃ ಸ್ವಮೂಲ
ರೂಪೈಃ ಸಹೈವಾಽವಿವಿಶುರ್ಮುದಾಽನ್ವಿತಾಃ ।
ಸ್ವೀಯಾನಿ ಸದ್ಮಾನಿ ತತೋಽಪ್ಯನೂನ
ಭೋಗಾಃ ಸದಾ ಸನ್ನ್ಯವಸಂಶ್ಚ ತತ್ರ ॥೧೨೫॥

ಬಳಿಕ ಎಲ್ಲ ಪಾಂಡವರೂ ಸಂತುಷ್ಟರಾಗಿ ತಮ್ಮ ಮೂಲರೂಪಗಳೊಂದಿಗೆ ತಮ್ಮ ಲೋಕಗಳನ್ನು ಪ್ರವೇಶಿಸಿದರು. ಮೂಲರೂಪಗಳಿಗಿಂತ ಕಡಿಮೆಯಲ್ಲದ ಭೋಗಉಳ್ಳವರಾಗಿ ಪತ್ನೀ ಸಮೇತರಾಗಿ ಅಲ್ಲಿ ವಾಸ ಮಾಡಿದರು.

---

1. ಇದಾ ಇದಾನೀಂ। ಯದ್ಯಪಿ 'ತದೋ ದಾ ಚೇ'ತಿ ಸೂತ್ರೇಣ ತಚ್ಛಬ್ದಾದೇವ ದಾವಿಧಾನಂ। ತಥಾಪಿ 'ಸರ್ವೈಕಾನ್ಯ ಕಿಂ ಯುತ್ತದಃ ಕಾಲೇ ದೇ'ತ್ಯನೇನ ಸೂತ್ರೇಣ ತಸ್ಯ ಸಿದ್ಧತ್ವಾದ್ ವ್ಯರ್ಥಂ ಸತ್ ದಾನೀಂ ಚೇತ್ಯತ್ರ ಸಂಬಧ್ಯತ ಇತ್ಯಭಿಪ್ರೇತ್ಯ ಇದೇತಿ ಪ್ರಯುಕ್ತಮಿತಿ ದ್ರಷ್ಟವ್ಯಂ। – ವರದರಾಜೀಯ

ಯಮನಿಗೆ ಯಮ ಧರ್ಮ ಎಂಬ ಎರಡು ರೂಪಗಳು. ಧರ್ಮ ಸಾಕ್ಷಾತ್ ಶ್ರೀಹರಿಯ ಬಲಸ್ತನದಿಂದ ಉದ್ಭವಿಸಿದವ. ಯಮ ಸೂರ್ಯಪುತ್ರ. ಧರ್ಮರಾಜ ಧರ್ಮನ ಆಲಿಂಗನದಿಂದ ಮನುಷ್ಯ ಸಂಸ್ಕಾರವನ್ನು ಪೂರ್ತಿ ಕಳೆದುಕೊಂಡು ಯಮಲೋಕದಲ್ಲಿ ಯಮನ ಬಳಿ ಜೊತೆಗೇ ಕುಳಿತ. ಹೊರತು ಅವನೊಡನೆ ಐಕ್ಯಹೊಂದಲಿಲ್ಲ. ಏಕೆಂದರೆ ಬೇರೆಯಾಗಿದ್ದು ಸುಖ ಅನುಭವಿಸುವ ಪ್ರಾರಬ್ಧ ಇನ್ನೂ ಇದ್ದಿತು. ಅದನ್ನು ಮುಂದೆ ಹೇಳುತ್ತಾರೆ.

ತತ್ರಾಪಿ ಕೃಷ್ಣೇನ ಸಮಾಗಮೋಽಭೂತ್
ಪುರೇವ ತೇಷಾಮತಿತತ್ಪರಾಣಾಮ್ ।
ಚಿಕ್ರೀಡ ಏಭಿಃ ಸಹಿತಸ್ತಥೈವ —
ಕೃಷ್ಣೋಽಪಿ ತದ್ವತ್ ಸರಥೋಽರ್ಜುನೇನ ॥೧೨೬॥

ಅಲ್ಲಿಯೂ ಅತ್ಯಂತ ಕೃಷ್ಣಭಕ್ತರಾದ ಪಾಂಡವರಿಗೆ ಹಿಂದಿನಂತೆ ಶ್ರೀಕೃಷ್ಣನೊಡನೆ ಸಮಾಗಮವಾಯಿತು. ಶ್ರೀಕೃಷ್ಣನು ಹಾಗೇ ಪಾಂಡವರೊಡನೆ ವಿಹರಿಸಿದ. ಹಿಂದಿನಂತೆಯೆ ರಥವೇರಿ ಅರ್ಜುನನೊಡನೆ ವಿಹರಿಸಿದ.

ಅನ್ಯೇ ಚ ದೇವಾಂಶಭವಾಃ ಸಮಸ್ತಾಃ
ಸ್ವಮೂಲರೂಪೈಕ್ಯಮವಾಪುರಾಶು ।
ಕರ್ಮಕ್ಷಯಾದೇವ ಸುರೇತರಾಸ್ತು
ಪುಣ್ಯಕ್ಷಯಂ ಪ್ರಾಪ್ಯ ಭುವಿ ಪ್ರಜಾತಾಃ ॥೧೨೭॥
ಚತುಃಸಹಸ್ರಂ ತ್ರಿಶತೋತ್ತರಂ ತೇ
ಸಂವತ್ಸರಾಣಾಮನುಭೂಯ ದಿವ್ಯಾನ್ ।
ಭೋಗಾನ್ ನರತ್ವೇಽಪಿ ಸದೇಶ್ವರೋಽಹ-
ಮಸಜ್ಜಗಚ್ಚೇತಿ ಧಿಯಾಽಽಪ್ನುವಂಸ್ತಮಃ ॥೧೨೮॥

ಬೇರೆ ದ್ರೋಣ ಮುಂತಾದ ದೇವಾಂಶಸಂಭೂತರೆಲ್ಲರೂ ಪ್ರಾರಬ್ಧ ಕರ್ಮಕ್ಷಯದಿಂದಲೆ ಬೇಗನೆ ತಮ್ಮ ಮೂಲರೂಪಗಳೊಂದಿಗೆ ಐಕ್ಯಹೊಂದಿದರು. ಅಸುರರು ನಾಲ್ಕು ಸಾವಿರದ ಮುನ್ನೂರು ವರ್ಷಪರ್ಯಂತ ವೀರಸ್ವರ್ಗದಲ್ಲಿ ದಿವ್ಯ ಭೋಗಗಳನ್ನು ಅನುಭವಿಸಿ ಪುಣ್ಯಕ್ಷಯ ಹೊಂದಿ ಭೂಲೋಕದಲ್ಲಿ ಹುಟ್ಟಿದರು. ಆಗ ಮನುಷ್ಯರಾಗಿ ಹುಟ್ಟಿ ಸದಾ ನಾನೇ ಭಗವಂತ ಜಗತ್ತು ಸುಳ್ಳು ಎಂಬ ಉಪಾಸನೆಯಿಂದ ತಮಸ್ಸನ್ನು ಸಂಪಾದಿಸಿಕೊಂಡರು.

ದುಃಖೇಽಪಿ ತೇಷಾಮಿಹ ತಾರತಮ್ಯಂ
ಕಲೇಃ ಪರಂ ದುಃಖಮಿಹಾಖಿಲಾಚ್ಚ ।

ಯಥಾ ವಿರಿಂಚಸ್ಯ ಸುಖಂ ಪರಂ ಸ್ಯಾ-
ನ್ಮುಕ್ತೌ ಹರಿದ್ವೇಷಕೃತೋ ವಿಶೇಷಃ ॥೧೨೯॥

ಅಂಧಂತಮಸ್ಸಿನಲ್ಲಿ ಅಸುರರಿಗೂ ದುಃಖದಲ್ಲಿ ತಾರತಮ್ಯವಿದೆ. ಅಸುರರಲ್ಲಿ ಎಲ್ಲರಿಗಿಂತ ಕಲಿಗೆ ಹೆಚ್ಚು ದುಃಖ. ಮುಕ್ತಿಯಲ್ಲಿ ಬ್ರಹ್ಮನಿಗೆ ಹೇಗೆ ಎಲ್ಲರಿಗಿಂತ ಹೆಚ್ಚು ಸುಖವೋ ಹಾಗೆ. ಅಸುರರಿಗೆ ಹರಿದ್ವೇಷ ತಾರತಮ್ಯದಿಂದ ದುಃಖದಲ್ಲಿ ತಾರತಮ್ಯ.

ಕೇಚಿತ್ ಪಿಶಾಚಾಸುರರಾಕ್ಷಸತ್ವ-
ಮವಾಪ್ಯ ವಿಷ್ಣೋರಪಿ ತತ್ಪರಾಣಾಮ್ ।
ದ್ವೇಷಾತ್ ತಮೋಽಂಧಂ ತ್ವರಯಾ ಸಮಾಪ್ನುಯು-
ರ್ದೇವಾಃ ಸ್ವಕಾಲೇ ನಿಜಯೋಗ್ಯಮುಕ್ತಿಮ್ ॥೧೩೦॥

ಎಲ್ಲ ಅಸುರರೂ ಮನುಷ್ಯರಾಗಿ ಹುಟ್ಟುವುದಿಲ್ಲ. ಕೆಲವರು ಪಿಶಾಚ ಅಸುರ ರಾಕ್ಷಸ ಜನ್ಮಪಡೆದು ವಿಷ್ಣು ವೈಷ್ಣವ ದ್ವೇಷದಿಂದ ಬೇಗನೆ ಅಂಧಂತಮಸ್ಸನ್ನು ಹೊಂದುತ್ತಾರೆ. ದೇವತೆಗಳು ಸ್ವರೂಪಯೋಗ್ಯತಾನುಗುಣಸಾಧನೆ ಪೂರ್ತಿಯಾದಾಗಲೆ ತಮಗೆ ಯೋಗ್ಯವಾದ ಮುಕ್ತಿಯನ್ನು ಹೊಂದುವರು.

ಚತುಃಸಹಸ್ರೇ ತ್ರಿಶತೋತ್ತರೇ ಗತೇ
ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ
ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥೧೩೧॥

ಆ ಭೀಮನೆ ಕಲಿಯುಗದಲ್ಲಿ ನಾಲ್ಕು ಸಾವಿರದ ಮುನ್ನೂರು ವರ್ಷಗಳು ಕಳೆದಾಗ ಪುನಃ ಬ್ರಾಹ್ಮಣನಾಗಿ ಹುಟ್ಟಿ ದೈತ್ಯರಿಂದ ಮರೆ ಮಾಡಲ್ಪಟ್ಟ ಹರಿತತ್ವವನ್ನು ಉಪದೇಶಿಸಿದ.

ತದೈವ ಕೃಷ್ಣಾಽಪಿ ಭುವಿ ಪ್ರಜಾತಾ
ಪ್ರೀತ್ಯೈ ಹರೇರಂಧತಮಸ್ಯಪಾತಯತ್ ।
ಮಹಾಸುರಾನ್ ವಿಷ್ಣುಪರಾರ್ಜುನಾದ್ಯಾಃ
ಕೃತೇ ಪ್ರಜಾತಾ ಹರಿತೋಷಣಾಯ ।
ಪುನಶ್ಚ ತೇ ಸ್ಥಾನಮವಾಪ್ಯ ಸರ್ವೇ
ಸ್ವೀಯಂ ಪರಾಂತೇ ತು ವಿಮುಕ್ತಿಮಾಪ್ನುಯುಃ ॥೧೩೨॥

ಆಗಲೆ ದ್ರೌಪದಿಯೂ ಭೂಮಿಯಲ್ಲಿ ಅವತರಿಸಿ ವಿಷ್ಣುಪ್ರೀತಿಗಾಗಿ ಮಹಾ ಅಸುರರನ್ನು ಅಂಧಂತಮಸ್ಸಿನಲ್ಲಿ ಬೀಳಿಸಿದಳು. ವಿಷ್ಣು ಭಕ್ತರಾದ ಅರ್ಜುನ ಮುಂತಾದವರು ಹರಿಪ್ರೀತಿಗಾಗಿ ಮುಂದಿನ ಕೃತಯುಗದಲ್ಲಿ ವಿಕುಕ್ಷಿ ಮುಂತಾದ ರಾಜರಾಗಿ ಹುಟ್ಟಿ ಪುನಃ ತಮ್ಮ ಸ್ಥಾನವನ್ನು ಹೊಂದಿ ಬ್ರಹ್ಮಪ್ರಳಯಾನಂತರ ಮುಕ್ತಿಯನ್ನು ಹೊಂದುವರು.

ಅಸುರರು ಬ್ರಹ್ಮಪ್ರಳಯದವರೆಗೂ ಕಾಯುವುದಿಲ್ಲ. ಒಂದೊಂದು ಅಂಶದಿಂದ ವಿಷ್ಣುದ್ವೇಷವನ್ನು ಯಥಾಶಕ್ತಿ ಬೆಳೆಸಿಕೊಂಡು ತಮಸ್ಸಿಗೆ ಬೀಳುತ್ತಲೆ ಇರುತ್ತಾರೆ.

ವಾಯುತ್ವಮಾಪ್ತಃ ಸ ಹನೂಮದಂಶೋ
ಬ್ರಾಹ್ಮಂ ಪದಂ ಪ್ರಾಪ್ಯ ವೃಕೋದರಶ್ಚ ।
ವಾಗೀಶ್ವರೀತ್ವಂ ಗತಯೈವ ಕೃಷ್ಣಯಾ
ಸಹೈವ ಮುಕ್ತಿಂ ಗಮಿತಾಽಖಿಲೋತ್ತಮಾಮ್ ॥೧೩೩॥

ಹನುಮಂತನೆಂಬ ಅಂಶವೂ ಭೀಮ ಎಂಬ ಅಂಶವೂ ವಾಯುವಿನೊಡನೆ ಐಕ್ಯಹೊಂದಿ ಬ್ರಹ್ಮಪದವಿಯನ್ನು ಪಡೆದು, ಸರಸ್ವತೀಪದವಿಯನ್ನು ಹೊಂದಿದ ಭಾರತಿಯೊಂದಿಗೆ ಎಲ್ಲರಿಗಿಂತ ಉತ್ತಮವಾದ ಮುಕ್ತಿಯನ್ನು ಹೊಂದುವುದು.

ಭುವಿ ದ್ಯುಲೋಕೇ ಚ ವಿರಿಂಚತಾಯಾಂ
ಮುಕ್ತೌ ಚ ತಾಭ್ಯಾಮಧಿಕಂ ಸಮಸ್ತಾತ್ ।
ಸಂತೋಷ್ಯತೇ ಪೂರ್ಣಗುಣೋ ರಮೇಶಃ
ಸದೈವ ನಿತ್ಯೋರ್ಜಿತತದ್ಭಕ್ತಿಭ್ಯಾಮ್ ॥೧೩೪॥

ಭೂಲೋಕದಲ್ಲಿಯೂ ಸ್ವರ್ಗದಲ್ಲಿಯೂ ಬ್ರಹ್ಮಪದವಿಯಲ್ಲಿಯೂ ಮುಕ್ತಿಯಲ್ಲಿಯೂ ಸದಾ ನಿತ್ಯಉತ್ಕೃಷ್ಟ ವಿಷ್ಣು ಭಕ್ತಿಯುಳ್ಳ ವಾಯು ಭಾರತಿಯರು ಪೂರ್ಣಗುಣನಾದ ರಮೇಶನನ್ನು ಎಲ್ಲ ಜೀವಸಮೂಹಕ್ಕಿಂತ ಅಧಿಕವಾಗಿ ಸಂತೋಷ ಪಡಿಸುವರು.

ಭೂಷನ್ ನ ಯೋಽಧಿ ಬಭ್ರೂಷು ನಮ್ನತೇ
ಬಳಿತ್ಥಾ ತದ್ ವಪುಷೇ ಧಾಯಿ ದರ್ಶತಮ್ ।
ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ
ಇತ್ಯಾದಿಸೂಕ್ತಾನಿ ಚ ತತ್ಪ್ರಮಾಣಮ್ ॥೧೩೫॥

'ಭೂಷನ್ನ ಯೋಧಿ ಬಭ್ರೂಷು ನಮ್ನತೇ' 'ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ' 'ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ' ಇತ್ಯಾದಿ ಸೂಕ್ತಗಳು ಈ ವಿಷಯದಲ್ಲಿ ಪ್ರಮಾಣಗಳು.

'ಭೂಷನ್ನ ಯೋಧಿ' 'ತಾಂ ಸು ತೇ' ಮಂತ್ರಗಳ ಅರ್ಥ

ಭೂಷನ್ ನ ಯೋಽಧಿ ಬಭ್ರೂಷು ನಮ್ನತೇ
ವೃಷೇವ ಪತ್ನೀರಭ್ಯೇತಿ ರೋರುವತ್ ।

ಓಜಾಯಮಾನಸ್ತನ್ವಶ್ಚ ಶುಂಭತೇ
ಭೀಮೋ ನ ಶೃಂಗಾ ದವಿಧಾವ ದುರ್ಗೃಭಿಃ ॥
(ಋಗ್ವೇದ ೧.೧೪೦.೬)

ದುರ್ಗೃಭಿಃ ಭೂಷನ್ - ಯಾರಿಂದಲೂ ಸೆರೆಹಿಡಿಯಲಾಗದವನಾಗಿ ರಣಭೂಮಿಯಲ್ಲಿ ಸಂಚರಿಸುತ್ತ, ಯಃ- ಯಾರು, ಬಭ್ರೂಷು ಅಧಿ- ನಾನಾವರ್ಣದ ಸೈನ್ಯಗಳಲ್ಲಿ ಅಧಿಕ ಬಲಶಾಲಿ ಎನಿಸಿ, ನ ನಮ್ನತೇ- ಶತ್ರುಗಳಿಗೆ ಎಂದೂ ಮಣಿಯುವುದಿಲ್ಲವೋ, ರೋರುವತ್ ವೃಷೇವ- ಗೂಳಿಡುವ ಬಸವನಂತೆ. ಪತ್ನೀಃ ಅಭ್ಯೇತಿ- ಪತ್ನಿಯರನ್ನು ಇದಿರುಗೊಳ್ಳುವನೋ, ಓಜಾಯಮಾನಃ ತನ್ವಃ ಶುಂಭತೇ- ಓಂಕಾರವಾಚ್ಯನಾದ ಹರಿಯಿಂದ ಜನಿಸಿ ತನ್ನ ಅನಂತರೂಪಗಳನ್ನು ಮೆರೆಸುವನೋ, ಶೃಂಗಾ ನ- ಎರಡು ಬೆಟ್ಟದ ಶಿಖರಗಳಂಥ ಆನೆಗಳನ್ನೂ, ದವಿಧಾವ- ಆಕಾಶದಲ್ಲಿ ಬಲು ಎತ್ತರಕ್ಕೆ ಎಸೆದನೋ, ಸಃ ಭೀಮಃ- ಅವನೇ ಭೀಮಸೇನ.

ಭೀಮಸೇನ 'ಭೂಷನ್' ರಣರಂಗದಲ್ಲಿ ಅಪ್ರತಿಹತವಾಗಿ ಸಂಚರಿಸುವವನು. 'ಷದ್-ಸಂಚರಿಸು' ಎಂಬ ಧಾತುವಿನ ಷಕಾರ ಸಕಾರವಾಗಬೇಕು, ಭೂಸನ್ ಎಂದಾಗಬೇಕು. ಆಗಿಲ್ಲ. ಏಕೆಂದರೆ ಭೀಮನ ಸಂಚಾರ ಅಪ್ರತಿಹತ ಎಂದು ಸೂಚಿಸುವುದಕ್ಕಾಗಿ ಧಾತುವನ್ನು ವ್ಯತ್ಯಾಸ ಮಾಡದೆ ಹಾಗೇ ಪ್ರಯೋಗಿಸಲಾಗಿದೆ. ದುರ್ಗೃಭಿಃ- ದುರ್ ಉಪಸರ್ಗ ಪೂರ್ವಕ ಗ್ರಹ ಧಾತು. ಹಕಾರ ವೈದಿಕ ವ್ಯಾಕರಣ ನಿಯಮದಂತೆ ಭಕಾರವಾಗಿದೆ. ಯಾರಿಗೂ ಸೆರೆಹಿಡಿಯಲಾಗದವನು ಭೀಮ ಎಂದರ್ಥ. ಬಭ್ರೂ ಎಂದರೆ ಕಪಿಲ ಪಿಂಗಲ ವರ್ಣದ ಸೈನ್ಯಗಳು. ಏಕೆಂದರೆ ಚತುರಂಗ ಸೈನ್ಯದಲ್ಲಿ ನಾನಾ ವರ್ಣಗಳಿರುವುದು ಸಹಜ. ಭೀಮ ರಥಿಕನಾಗಿ, ಗಜಾರೂಢನಾಗಿ, ಅಶ್ವಾರೂಢನಾಗಿ, ಕೇವಲ ಕಾಲಾಳು ಆಗಿಯೂ, ರಥ ಆಯುಧಾದಿಗಳ ಸಹಾಯವಿಲ್ಲದೆಯೂ ರಣರಂಗದಲ್ಲಿ ಅಜೇಯನಾಗಿ ಸಂಚರಿಸಬಲ್ಲವ. ಕೇವಲ ಸಂಚರಿಸುವುದು ಮಾತ್ರವಲ್ಲ, 'ಅಧಿ' ಅಧಿಕಬಲನೆನಿಸುತ್ತಾನೆ. ಬಾಣಗಳ ಮಳೆಯನ್ನು ಭೀಮ ನೀರಿನ ಮಳೆಯನ್ನು ಬಸವ ಇದಿರಿಸುವಂತೆ ಇದಿರಿಸಿ ರಣರಂಗದಲ್ಲಿ ನಡೆದು ದ್ರೋಣನ ರಥವನ್ನು ಎಂಟು ಬಾರಿ ಮೇಲೆ ಆಕಾಶದಲ್ಲಿ ಹಾರಿಸಿದ್ದಾನೆ. ನ ನಮ್ನತೇ- ಶತ್ರುಗಳಿಗೆ ತಲೆಬಾಗುವುದಿಲ್ಲ. ಅಶ್ವತ್ಥಾಮ ಪ್ರಯೋಗಿಸಿದ ನಾರಾಯಣಾಸ್ತ್ರಕ್ಕೂ ತಲೆಬಾಗುವುದಿಲ್ಲ. ರೋರುವತ್ ವೃಷೇವ- ಗೂಳಿಡುವ ಬಸವ ಹಸುಗಳನ್ನು ಸ್ವಾಗತಿಸುವಂತೆ ಭೀಮ ಕಾಳೀ ದ್ರೌಪದೀ ಮುಂತಾದ ಪತ್ನಿಯರನ್ನು

ಅಭ್ಯೇತಿ-ಸ್ವಾಗತಿಸುತ್ತಾನೆ, ಹೊರತು, ಕಾಮಾಸಕ್ತನಾಗಿ ಅವರ ಹಿಂದೆ ಹಿಂದೆ ಹೋಗುವವನಲ್ಲ. ಹನುಮದ್ರೂಪ ಮಧ್ವರೂಪಗಳಂತೆ ಪತ್ನೀರಹಿತನೂ ಅಲ್ಲ. ಇದು ಅವನ ಮನೋನಿಗ್ರಹವನ್ನು ತೋರಿಸುತ್ತದೆ. ಓಂಕಾರ ವಾಚ್ಯನಾದ ಪರಮಾತ್ಮನ ಪುತ್ರನಾದ ವಾಯುವಿನ ಎಲ್ಲ ರೂಪಗಳೂ ಹರಿಯಿಂದಲೆ ಹುಟ್ಟಿರುತ್ತವೆ. 'ವಾಯೋರ್ದಿವ್ಯಾನಿ .ರೂಪಾಣಿ ಪದ್ಮತ್ರಯಯುತಾನಿ ಚ' ಎಂಬಂತೆ ವಾಯುವಿನ ಮೂರು 'ಪದ್ಮ' ಸಂಖ್ಯೆಯ ರೂಪಗಳು ಹರಿಯಿಂದ ಜನಿಸಿವೆ. 'ತನ್ವಃ' ಎಂಬ ಬಹುವಚನ ಇದನ್ನು ಸೂಚಿಸುತ್ತದೆ. ಬೆಟ್ಟದ ಶಿಖರಗಳಂಥ ಎರಡು ಮದ್ದಾನೆಗಳನ್ನು ಎರಡು ಕೈಗಳಲ್ಲಿ ಏಕಕಾಲದಲ್ಲಿ ಎತ್ತಿ ಆಕಾಶದ ಮೇಲೆ ಬಲು ಎತ್ತರಕ್ಕೆ ಎಸೆಯ ಬಲ್ಲವನು ಭೀಮ. ಹೀಗೆ ಈ ಮಂತ್ರ ಭೀಮನ ಯುದ್ಧ ಪರಾಕ್ರಮವನ್ನೂ ಮನೋನಿಗ್ರಹವನ್ನೂ ಬಾಹುಬಲವನ್ನೂ ಸ್ಪಷ್ಟವಾಗಿ ಕೊಂಡಾಡುತ್ತಿದೆ.

ಬಳಿತ್ಥಾಸೂಕ್ತದ ಅರ್ಥವಿವರಣೆ ನಿರ್ಣಯ (೨.೧೫೬) ದಲ್ಲಿ ಹಿಂದೆ ಬಂದಿದೆ.

~~ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ~~
ಯತ್ ತ್ವಾ ಭೀತೇ ರೋದಸೀ ಅಹ್ವಯೇತಾಂ।
ಪ್ರಾವೋ ದೇವಾಂ ಅತಿರೋ ದಾಸಮೋಜಃ
ಪ್ರಜಾಯೈ ತ್ವಸ್ಯೈ ಯದಶಿಕ್ಷ ಇಂದ್ರ॥ (ಋಗ್ವೇದ ೧೦.೫೪.೧)

ಮಘವನ್ ಇಂದ್ರ-ಬಂಡಿ ಅನ್ನ ಉಣ್ಣುವ ಪರಮೈಶ್ವರ್ಯಶಾಲಿಯಾದ ಭೀಮನೆ! ತ್ವಂ ದೇವಾನ್ ಪ್ರ-ಆವಃ ಇತಿ ಯತ್-ನೀನು ದೇವತೆಗಳನ್ನು ಚೆನ್ನಾಗಿ ಕಾಪಾಡಿದಿ ಎನ್ನುವುದು ಯಾವುದೋ, ದಾಸಂ ಓಜಃ -ಶತ್ರುಗಳ ಪರಾಕ್ರಮವನ್ನು, ಆ ಅತಿರಃ ಇತಿಯತ್-ಚೆನ್ನಾಗಿ ಎಲ್ಲಿಡೆ ಮಣಿಸಿದಿ ಎನ್ನುವುದು ಯಾವುದೋ ತ್ವಸ್ಯೈ ಪ್ರಜಾಯೈ ಅಶಿಕ್ಷಃ-ನಿನ್ನವರಿಗೆ ಧರ್ಮಶಿಕ್ಷಣ ನೀಡಿರುವಿ ಎನ್ನುವುದು ಯಾವುದೋ ತಾಂ ತೇ ಸುಕೀರ್ತಿಂ -ಆ ನಿನ್ನ ಉತ್ತಮ ಕೀರ್ತಿಯನ್ನು, ತ್ವಾ-ನಿನ್ನ ಮುಂದೆ, ಭೀತೇ ರೋದಸೀ-ಭಯಗೊಂಡ ಭೂಮ್ಯಂತರಿಕ್ಷಗಳು, ಅಹ್ವಯೇತಾಂ-ಕೂಗಿ ಕರೆದು ಹೊಗಳಿದುವು.

ಭೀಮಸೇನ ಬಂಡಿ ಅನ್ನ ಉಣ್ಣುವ ಶಕ್ತಿ ಉಳ್ಳವನು. ಎಲ್ಲರನ್ನೂ ಆಳುವ ಶಕ್ತಿ ಉಳ್ಳವನು, ಅದರಿಂದ ಇಂದ್ರನೆನಿಸಿದ, ಮತ್ತು ಒಂದು ಮನ್ವಂತರದಲ್ಲಿ ರೋಚನ ನಾಮಕನಾಗಿ ಇಂದ್ರ ಪದವಿಯನ್ನೂ ಆಳಿ ಇಂದ್ರನೆನಿಸಿದ. ದೇವಾಸುರ ಸಂಗ್ರಾಮದಲ್ಲಿ ಮಾತ್ರವಲ್ಲದೆ ಭಾರತ

ಯುದ್ಧದಲ್ಲಿಯೂ ದೇವತೆಗಳನ್ನು ಕಾಪಾಡಿ ಅಸುರರ ಪರಾಕ್ರಮವನ್ನು ಮಣಿಸಿದವನು. ಕ್ಷತ್ರಿಯರಾಗಿದ್ದು ತಮ್ಮ ಪ್ರಾಣರಕ್ಷಣೆಗಾಗಿ ಶತ್ರುವಿನ ನಾರಾಯಣಾಸ್ತ್ರಕ್ಕೂ ತಲೆಬಾಗದಿರಿ ಎಂದು ಘೋಷಿಸುತ್ತ ಶುದ್ಧ ಕ್ಷತ್ರಿಯಧರ್ಮವನ್ನು ತನ್ನವರಿಗೆ ಬೋಧಿಸಿದವನು. ದುಃಶಾಸನನ ಎದೆ ಬಗಿದು ರಕ್ತಪಾನ ಮಾಡಿ ಸಿಂಹನಾದ ಗೈದಾಗ ಕರ್ಣನಂಥ ಶತ್ರುಗಳೂ ಹೆದರಿ ಕಣ್ಣುಮುಚ್ಚಿದರು. ಭೂಮ್ಯಂತರಿಕ್ಷಗಳು ಬೆದರಿದವು. ಹೇ ಭೀಮಸೇನ! ಎಂದು ಕೂಗಿಕರೆದು, ಅವನ ಈ ದೇವವಾತ್ಸಲ್ಯವನ್ನೂ ಶತ್ರು ಭಯಂಕರತ್ವವನ್ನೂ, ಶುದ್ಧಕ್ಷಾತ್ರ ಧರ್ಮಶಿಕ್ಷಣವನ್ನೂ ಭೂಮ್ಯಂತರಿಕ್ಷಗಳಲ್ಲಿರುವ ಎಲ್ಲ ಸಜ್ಜನರೂ ಹೊಗಳಿದರು.

ಅನ್ಯಾನಿ ವಾಕ್ಯಾನಿ ಚ ವೈದಿಕಾನಿ
ಸಪಂಚರಾತ್ರೋಕ್ತಪುರಾಣಕಾನಿ।
ಪೃಷ್ಟಶ್ಚ ಭೀಷ್ಮೋಽತ್ರ ಯುಧಿಷ್ಠಿರೇಣ-
ತನ್ಮೋಕ್ಷಧರ್ಮೇಷ್ವಪಿ ಕಿಂಚಿದಾಹ ॥೧೩೬॥

ಬೇರೆ ವೇದವಚನಗಳೂ ಪಂಚರಾತ್ರೋಕ್ತಿಗಳೂ ಪುರಾಣಗಳೂ ಈ ವಿಷಯದಲ್ಲಿ ಪ್ರಮಾಣಗಳು. ಈ ವಿಷಯದಲ್ಲಿ ಧರ್ಮರಾಜ ಕೇಳಿದಾಗ ಭೀಷ್ಮ ಮೋಕ್ಷಧರ್ಮಗಳಲ್ಲಿಯೂ ಸಂಕ್ಷೇಪವಾಗಿ ಇದನ್ನು ಹೇಳಿದ್ದಾನೆ.

ಶುದ್ಧಾಭಿಜನ ಸಂಪನ್ನಾಃ ಪಾಂಡವಾಃ ಸಂಶಿತವ್ರತಾಃ।
ವಿಹೃತ್ಯ ದೇವಲೋಕೇಷು ಪುನರ್ಮಾನುಷ್ಯಮೇಷ್ಯಥ॥
(ಶಾಂತಿ 280.69)

'ಶುದ್ಧ ಕುಲದಲ್ಲಿ ಹುಟ್ಟಿ ಸತ್ಕರ್ಮಾಚರಣೆ ಮಾಡಿದ ಪಾಂಡವರು ನೀವು ಮುಂದೆ ದೇವಲೋಕಗಳಲ್ಲಿ ವಿಹರಿಸಿ ತಿರುಗಿ ಮನುಷ್ಯರಾಗಿ ಹುಟ್ಟುವಿರಿ.' ಎಂದು ಮೋಕ್ಷ ಧರ್ಮಪರ್ವದಲ್ಲಿ ಭೀಷ್ಮ ವಚನ.

ಏವಂ ಪ್ರಯಾತೇಷು ಸಕೇಶವೇಷು
ಸ್ವಾನೇವ ಲೋಕಾನ್ ಯದುಪಾಂಡವೇಷು।
ಪರೀಕ್ಷಿದಾದ್ಯಾಸ್ತು ತದನ್ವಯೋತ್ಥಾ
ವ್ಯಾಸಾನುಶಿಷ್ಟಾಃ ಪೃಥಿವೀಮರಕ್ಷನ್ ॥೧೩೭॥

ಹೀಗೆ ಶ್ರೀಕೃಷ್ಣನೂ ಯಾದವರೂ ಪಾಂಡವರೂ ತಮ್ಮ ಲೋಕಕ್ಕೆ ಹೋದಾಗ ಅವರ ವಂಶದಲ್ಲಿ ಬಂದ ಪರೀಕ್ಷಿತ ಮುಂತಾದ ರಾಜರು ವೇದವ್ಯಾಸರಿಂದ ಉಪದಿಷ್ಟರಾಗಿ ಭೂಮಿಯನ್ನು ಆಳಿದರು.

ಬುದ್ಧಾವತಾರ

ತೈಃ ಕ್ಷೇಮಕಾಂತೈರಿಹ ಭಾರತಾದಿ
ಶಾಸ್ತ್ರಾಣಿ ಶೃಣ್ವದ್ಭಿರಶೇಷವಿದ್ಭಿಃ ।
ವ್ಯಾಸಪ್ರಭಾವಾಚ್ಚ ಕಲೌ ಚ ಧರ್ಮೋ ಜ್ಞಾನಂ ಚ ಸುತ್ರಾತಮಗಾನ್ನ ನಾಶಮ್ ॥೧೩೮॥

ಕ್ಷೇಮಕನ ವರೆಗಿನ ಆ ರಾಜರು ಭಾರತಾದಿ ಶಾಸ್ತ್ರಗಳನ್ನು ಕೇಳಿ ಸರ್ವಜ್ಞರೆನಿಸಿ ಧರ್ಮವನ್ನೂ ಜ್ಞಾನವನ್ನೂ ಚೆನ್ನಾಗಿ ರಕ್ಷಣೆ ಮಾಡಿದ್ದರಿಂದಲೂ ವೇದವ್ಯಾಸರ ಪ್ರಭಾವದಿಂದಲೂ ಅವು ನಾಶವನ್ನು ಹೊಂದಲಿಲ್ಲ.

ಸಂವತ್ಸರಾಣಾಂ ತು ಸಹಸ್ರಕೇ ಗತೇ
ಪ್ರಾಪ್ತೇಷು ವಿದ್ಯಾಮಖಿಲೇಷು ಸತ್ಸು ।
ದಗ್ಧಾಃ ಪುರಾ ಯೇ ತ್ರಿಪುರಂ ಘ್ನತೈವ
ರುದ್ರೇಣ ಜಾತಾಃ ಪೃಥಿವೀತಲೇ ತೇ ॥೧೩೯॥

ಕಲಿಯುಗದಲ್ಲಿ ಒಂದು ಸಾವಿರ ವರ್ಷಗಳು ಕಳೆದಾಗ ಎಲ್ಲ ಸಜ್ಜನರೂ ತತ್ವಜ್ಞಾನವನ್ನು ಹೊಂದಿದ್ದಾಗ ಹಿಂದೆ ತ್ರಿಪುರ ನಾಶಕನಾದ ಶಿವನಿಂದ ಯಾವ ಅಸುರರು ದಗ್ಧರಾಗಿದ್ದರೋ ಅವರು ಭೂತಲದಲ್ಲಿ ಹುಟ್ಟಿದರು.

ಅದರ್ಶನಂ ಸರ್ವಮುನೀಂದ್ರವೃಂದ್ಯೈಃ
ಸಹೈವ ಸಜ್ಞಾನಮಹಾನಿದಾನೇ ।
ವ್ಯಾಸೇ ಪ್ರಯಾತೇಽಪಿ ಸುತತ್ತ್ವವಿದ್ಯಾ
ತತ್ಸಂಪ್ರದಾಯಾದಪಿ ತೈರವಾಪ್ತಾ ॥೧೪೦॥

ಉತ್ತಮ ಜ್ಞಾನಕ್ಕೆ ಆಶ್ರಯರಾದ ವೇದವ್ಯಾಸರು ಎಲ್ಲ ಶ್ರೇಷ್ಠ ಮುನಿಸಮೂಹಗಳೊಂದಿಗೆ ಅದೃಶ್ಯರಾದರೂ ಕೂಡ ಆ ಅಸುರರು ಉತ್ತಮ ತತ್ವಜ್ಞಾನವನ್ನು ಶ್ರೀವ್ಯಾಸ ಸಂಪ್ರದಾಯದ ಬಲದಿಂದ ಪಡೆದುಕೊಂಡರು.

ಉತ್ಸಾದಿತತ್ವಾತ್ತು ದುರಾಗಮಾನಾಂ
ತತ್ಸಂಪ್ರದಾಯಸ್ಯ ಚ ನಾಶಿತತ್ವಾತ್ ।
ಪ್ರಸಾರಿತತ್ವಾಚ್ಚ ಸದಾಗಮಾನಾಂ
ಪಾಪಾ ಅಪಿ ಜ್ಞಾನಮವಾಪುರೇತತ್ ॥೧೪೧॥

ದುಷ್ಟ ಆಗಮಗಳು ನಾಶಗೊಳಿಸಲ್ಪಟ್ಟಿದ್ದರಿಂದ, ಅವುಗಳ ಸಂಪ್ರದಾಯವೂ ನಾಶಿತವಾದ್ದರಿಂದ ಸದಾಗಮಗಳು ಪ್ರಸಾರ ಹೊಂದಿದ್ದರಿಂದ ಪಾಪಿಗಳೂ ಈ ತತ್ವಜ್ಞಾನವನ್ನು ಪಡೆದರು.

ಶುನಾ ಪುರೋಡಾಶಮಿವಾವಲೀಢಂ
ವೇದಶ್ರುತಿಂ ವಾಽಂತ್ಯಜನೈರವಾಪ್ತಾಮ್ ।
ಅನಂತದುಃಖಾಪ್ತಿಸುಯೋಗ್ಯದೈತ್ಯೈ
ರ್ವಿದ್ಯಾಮವಾಪ್ತಾಂ ತು ನ ಸೇಹಿರೇ ಸುರಾಃ ॥೧೪೨॥

ನಾಯಿ ಹವಿಷ್ಯಾನ್ನವನ್ನು ಆಸ್ವಾದಿಸುವಂತೆ, ಚಂಡಾಲರು ವೇದಶ್ರವಣವನ್ನು ಪಡೆವಂತೆ ಅನಂತ ದುಃಖಕ್ಕೆ ಅತ್ಯಂತ ಯೋಗ್ಯರಾದ ದೈತ್ಯರು ತತ್ವಜ್ಞಾನವನ್ನು ಪಡೆದಾಗ ದೇವತೆಗಳು ಸಹಿಸಲಿಲ್ಲ.

ನಾವಾಗ್ಗತಿಃ ಕ್ವಾಪಿ ಸುವೇದಿನಾಂ ಭವೇತ್
ಪ್ರಾಪ್ಯಂ ಸುಖಂ ನಿತ್ಯಮವಶ್ಯಮೇಭಿಃ ।
ಪ್ರಾಪ್ಯಂ ತಮೋಽಂಧಂ ತ್ವಸುರೈರ್ನ ಮುಕ್ತಿಃ
ಕದಾಚಿದಾಪ್ಯಾ ತದಚಿಂತಯನ್ ಸುರಾಃ ॥೧೪೩॥

ತತ್ವಜ್ಞಾನಿಗಳಿಗೆ ಎಂದೂ ಅಧೋಗತಿಯಾಗಬಾರದು. ಅವರು ಅವಶ್ಯ ನಿತ್ಯ ಸುಖವನ್ನು ಪಡೆಯಬೇಕು. ಆದರೆ ಅಸುರರು ಅಂಧತಮಸ್ಸನ್ನೇ ಪಡೆಯಬೇಕು, ಎಂದೂ ಮುಕ್ತಿಯನ್ನಲ್ಲ ಅದರಿಂದ ದೇವತೆಗಳು ಆಲೋಚಿಸಿದರು.

ಜ್ಞಾನಪ್ರದಾನಾಯ ಸತಾಂ ತದನ್ಯ
ಜ್ಞಾನಪ್ರಣಾಶಾಯ ಚ ವಿಷ್ಣುನೈತೇ ।
ಕ್ಲೃಪ್ತಾಸ್ತತಸ್ತೇ ಸವಿರಿಂಚಶರ್ವಾ
ವಿಜ್ಞಾಪಯಾಮಾಸುರುಪೇತ್ಯ ವಿಷ್ಣುಮ್ ॥೧೪೪॥

ಸಜ್ಜನರಿಗೆ ಜ್ಞಾನ ನೀಡುವುದಕ್ಕೂ ಅನ್ಯರಿಗೆ ಜ್ಞಾನ ನಾಶಮಾಡುವುದಕ್ಕೂ ಶ್ರೀಹರಿ ದೇವತೆಗಳನ್ನು ನೇಮಿಸಿದ್ದಾನೆ. ಅದರಿಂದ ಬ್ರಹ್ಮರುದ್ರಾದಿ ದೇವತೆಗಳು ಶ್ರೀಹರಿಯ ಬಳಿಗೇ ಹೋಗಿ ಹೇಳಿಕೊಂಡರು.

ಕ್ಷೀರೋದಧೇರುತ್ತರತೀರನಿಷ್ಠಿತೈ
ರಭಿಷ್ಟುತಃ ಸುಷ್ಟುತಿಭಿಃ ಪುರುಷ್ಟುತಃ ।
ಪ್ರದಾಯ ತೇಷಾಮಭಯಂ ರಮಾಪತಿಃ
ಕ್ಷಣಾದಭೂಚ್ಚಾರುತಮಾಕೃತಿಃ ಶಿಶುಃ ॥೧೪೫॥

ದೇವತೆಗಳು ಕ್ಷೀರಸಾಗರದ ಆಚೆ ದಡದಲ್ಲಿ ನಿಂತು ಒಳ್ಳೆಯ ಸ್ತೋತ್ರಗಳಿಂದ ಸ್ತುತಿ ಮಾಡಿದರು. ಶ್ರೀಹರಿ ಅವರಿಗೆ ಅಭಯ ನೀಡಿ ಕ್ಷಣದಲ್ಲಿ ಅತಿ ಸುಂದರ ಆಕೃತಿಯ ಶಿಶುವಾದ.

ಯಸ್ತ್ರೈಪುರಾಣಾಂ ಪ್ರಥಮೋಽತ್ರ ಜಾತಃ
ಶುದ್ಧೋದನೇತ್ಯೇವ ಜಿನೇತಿ ಚೋಕ್ತಃ ।

ಕ್ಷೇತ್ರೇ ಗಯಾಖ್ಯೇಽಸ್ಯ ಶಿಶುಂ ಪ್ರಜಾತಂ
ಸಂಪ್ರಾಸ್ಯ ದೂರೇಽತ್ರ ಬಭೂವ ವಿಷ್ಣುಃ ॥೧೪೬॥

ತ್ರಿಪುರಾಸುರರಲ್ಲಿ ಮೊದಲನೆಯವನು ಭೂಮಿಯಲ್ಲಿ ಹುಟ್ಟಿ ಶುದ್ಧೋದನನೆಂದೂ ಜಿನನೆಂದೂ ಕರೆಸಿಕೊಂಡಿದ್ದ. ಅವನಿಗೆ ಗಯಾಕ್ಷೇತ್ರದಲ್ಲಿ ಆಗತಾನೆ ಹುಟ್ಟಿದ ಶಿಶುವನ್ನು ದೂರಕೆ ಎಸೆದು ವಿಷ್ಣು ತಾನು ಶಿಶುರೂಪನಾಗಿ ಮಲಗಿದ.

[1]ಲೋಕಾನ್ ಘ್ನತಾಂ ಮತಿವಿಮೋಹಂ ಎಂದು ಭಾಗವತದಲ್ಲಿ (೨.೭.೩೭) ಹೇಳಿದಂತೆ ತ್ರಿಪುರ ಸ್ತ್ರೀಯರಿಗೆ ವ್ಯಭಿಚಾರವನ್ನು ಧರ್ಮವೆಂದು ಬೋಧಿಸಿದ ಒಂದು ಬುದ್ಧಾವತಾರ ಹಿಂದೆ ಆಗಿತ್ತು. ಇದೀಗ ಜಿನಪುತ್ರನಾಗಿ ಎರಡನೇ ಬಾರಿ ಬುದ್ಧಾವತಾರ.

ಅಜಾನಮಾನಾಃ ಸ್ವಶಿಶುಂ ಗತಂ ತಂ
ಶಿಶುಂ ಹರಿಂ ವೀಕ್ಷ್ಯ ನಿಜಂ ಸ್ಮ ಮೇನಿರೇ
ತೇಷಾಂ ತದಾ ವೈದಿಕಕರ್ಮ ವೀಕ್ಷ್ಯ
ಸಂಪ್ರಾಹಸತ್ ತದ್ವಪುಷೈವ ಕೇಶವಃ ॥೧೪೭॥

ತಮ್ಮ ಶಿಶು ಮರೆಯಾದುದನ್ನು ಅರಿಯದೆ ಜಿನ ಮುಂತಾದವರು ಶಿಶುರೂಪಿ ಶ್ರೀಹರಿಯನ್ನು ಕಂಡು ತಮ್ಮ ಶಿಶುವೆಂದೇ ಭ್ರಮಿಸಿದರು. ಆಗ ಶ್ರೀಹರಿ ಅವರ ವೈದಿಕ ಕರ್ಮವನ್ನು ಕಂಡು ಶಿಶು ಶರೀರದಿಂದಲೆ ಗಟ್ಟಿಯಾಗಿ ನಕ್ಕುಬಿಟ್ಟ.

ತಂ ಜಾತಮಾತ್ರಂ ಪ್ರಹಸಂತಮೀಕ್ಷ್ಯ
ಸುವಿಸ್ಮಿತೈಃ ಪೃಷ್ಟ ಉವಾಚ ವಿಷ್ಣುಃ
ಬುದ್ಧೋಽಹಮಿತ್ಯೇವ ಸುನಿತ್ಯಬೋಧಾ
ಜ್ಜಗಾದ ಚೈಷಾಮಥ ಬುದ್ಧದರ್ಶನಮ್ ॥೧೪೮॥

---

1. ತತಃ ಕಲೌ ಸಂಪ್ರವೃತ್ತೇ ಸಂಮೋಹಾಯ ಸುರದ್ವಿಷಾಂ।
ಬುದ್ಧೋ ನಾಮ್ನಾ ಜಿನಸುತಃ ಕೀಕಟೇಷು ಭವಿಷ್ಯತಿ॥
ಇತಿ ಭಾಗವತ ವಚನಾತ್ ಜಿನ ಸುತತಯಾಪ್ಯೇಕವಾರಂ ಬುದ್ಧಾವತಾರೋಽಸ್ತಿ।
ದೇವದ್ವಿಷಾಂ ನಿಗಮವರ್ತ್ಮನಿವಿಷ್ಠಿತಾನಾಂ
ಪೂರ್ಭರ್ಭಯೇನ ಸಹಿತಾಭಿರದೃಶ್ಯಮೂರ್ತಿಃ।
ಲೋಕಾನ್ಘ್ನತಾಂ ಮತಿವಿಮೋಹಮತಿಪ್ರಲೋಭಂ
ವೇಷಂ ವಿಧಾಯ ಯದಭಾಷತ ತೌಪಧರ್ಮ್ಯಂ॥
ಇತಿ ದ್ವಿತೀಯಸ್ಕಂಧವಚನಾತ್ ತ್ರೈಪುರಸ್ತ್ರೀಣಾಮೌಪಧರ್ಮ್ಯಂ ಉಪಪತಿಗ್ರಾಹ್ಯ ಇತಿ ಪ್ರಮೇಯ ಸಂಬಂಧಿಧರ್ಮಂ ಭಾಷಿತುಮಪ್ಯೇಕವಾರಂ ಬುದ್ಧಾವತಾರೋಽಸ್ತೀತಿ ಜ್ಞೇಯಂ॥

-ವಾದಿರಾಜೀಯ

ಹುಟ್ಟಿದೊಡನೆ ಶಿಶು ನಗುವುದನ್ನು ಕಂಡು ಬಹಳ ವಿಸ್ಮಿತರಾದ ಜಿನ ಮೊದಲಾದವರು ಯಾರು ನೀನೆಂದು ಕೇಳಿದಾಗ ಶ್ರೀಹರಿ ನಿತ್ಯ ಜ್ಞಾನ ಸ್ವರೂಪನಾದ್ದರಿಂದ 'ನಾನು ಬುದ್ಧ' ಎಂದ. ಬಳಿಕ ಅವರಿಗೆ ಬೌದ್ಧ ಧರ್ಮವನ್ನು ಉಪದೇಶಿಸಿದ.

ತಥಾಽಪ್ಯವಿಶ್ವಾಸಮವೇಕ್ಷ್ಯ ತೇಷಾಂ
ಸಸ್ಮಾರ ದೇವಾನಖಿಲಾನ್ ಜನಾರ್ದನಃ।
ವಿಜ್ಞಾಯ ತೇ ತಸ್ಯ ಮನೋಗತಂ ವಿಭಾವ್
ಪ್ರಚಿಕ್ಷಿಪುರ್ಹೇತಿಗಣಾನಮುಷ್ಮಿನ್ ॥೧೪೯॥

ಆದರೂ ಅವರಿಗೆ ತನ್ನಲ್ಲಿ ನಂಬಿಕೆ ಬಾರದಿದ್ದುದನ್ನು ಕಂಡು ಬುದ್ಧ ಎಲ್ಲ ದೇವತೆಗಳನ್ನೂ ಯುದ್ಧದ ಸಲುವಾಗಿ ನೆನೆದ. ಅವರು ಅವನ ಮನೋಗತವನ್ನರಿತು ತಮ್ಮ ಆಯುಧಗಳನ್ನು ಬಾಲಬುದ್ಧನ ಮೇಲೆ ಎಸೆದರು.

ಸ ಜಾತಮಾತ್ರಃ ಶಿವಪೂರ್ವಕಾಣಾಂ
ಶೂಲಾದಿಹೇತೀರಖಿಲಾ ನಿಗೀರ್ಯ।
ದೈತ್ಯಾತಿಮೋಹಾಯ ನಿಜಂ ಚ ಚಕ್ರಂ
ಸ್ವಮುಕ್ತಮಾಶ್ವೇವ ವಶೀ ಸಮಗ್ರಹೀತ್ ॥೧೫೦॥

ಆಗತಾನೆ ಹುಟ್ಟಿದ ಶಿಶು ಬುದ್ಧ ರುದ್ರಾದಿಗಳ ತ್ರಿಶೂಲ ಮುಂತಾದ ಎಲ್ಲ ಆಯುಧಗಳನ್ನೂ ನುಂಗಿ, ಈ ಬುದ್ಧ ವಿಷ್ಣುವಿಗಿಂತಲೂ ಶ್ರೇಷ್ಠ ಎಂದು ದೈತ್ಯರಿಗೆ ಅತ್ಯಂತ ಮೋಹ ಉಂಟು ಮಾಡುವುದಕ್ಕಾಗಿ, ಮೂಲರೂಪದ ವಿಷ್ಣು ತಾನೇ ಎಸೆದ ತನ್ನ ಚಕ್ರವನ್ನೂ ಬುದ್ಧರೂಪಿ ತಾನೇ ಬೇಗನೆ ಹಿಡಿದುಕೊಂಡ.

ತದಾಸನತ್ವೇನ ವಿಧಾಯ ತಸ್ಮಿನ್
ಸಮಾಸ್ಥಿತಂ ದೇವಗಣಾಃ ಪ್ರಣಮ್ಯ।
ಜಗ್ಮುಃ ಸ್ವಧಾಮಾನಿ ವಚಾಂಸಿ ತಸ್ಯ
ಸ್ವೀಚಕ್ರುರಾಶ್ವೇವ ಜಿನಾದಿದೈತ್ಯಾಃ ॥೧೫೧॥

ಆ ಚಕ್ರವನ್ನು ಆಸನವನ್ನಾಗಿ ಮಾಡಿ ಅದರ ಮೇಲೆ ಕುಳಿತ ಬುದ್ಧನನನ್ನು ದೇವ ಸಮೂಹಗಳು ನಮಿಸಿ ತಮ್ಮ ಲೋಕಗಳಿಗೆ ತೆರಳಿದುವು. ಜಿನ ಮೊದಲಾದ ದೈತ್ಯರು ಬೇಗನೆ ಬುದ್ಧನ ಮಾತುಗಳನ್ನು ಪ್ರಮಾಣವೆಂದು ಅಂಗೀಕರಿಸಿದರು.

ತೇ ಜ್ಞಾನಧರ್ಮಾವಪಹಾಯ ಪಾಪಾ
ವಿಮೋಹಿತಾ ದೇವವರೇಣ ಸರ್ವೇ।
ಜಗ್ಮುಸ್ತಮೋಽಂಧಂ ಕ್ಷಣಿಕಂ ಸಮಸ್ತಂ
ಜ್ಞಾನಂ ನ ಸಚ್ಚೇತಿ ದೃಢಂ ಸ್ಮರಂತಃ ॥೧೫೨॥

ಆ ಪಾಪಿಗಳೆಲ್ಲರೂ ದೇವೋತ್ತಮನಾದ ಬುದ್ಧನಿಂದ ವಿಮೋಹಿತರಾಗಿ ವೈದಿಕ ಜ್ಞಾನಧರ್ಮಗಳನ್ನು ತೊರೆದು 'ಎಲ್ಲವೂ ಕ್ಷಣಿಕವೆ ಜ್ಞಾನವೆ, ಸತ್ಯವಲ್ಲ, ಅಸತ್, ಶೂನ್ಯ, ಅಭಾವವೆ' ಎಂದು ದೃಢವಾಗಿ ಉಪಾಸನೆ ಮಾಡುತ್ತ ಅಂಧಂತಮಸ್ಸನ್ನು ಹೊಂದಿದರು.

ನಾರಾಯಣಃ ಪ್ರಾಪ್ಯ ಸುರೇಂದ್ರವೃಂದಂ
ವೃತ್ತಂ ಚ ತೇಷಾಮಖಿಲಂ ನಿಗದ್ಯ।
ಪೃಷ್ಟಶ್ಚ ತೈರಾಹ ನಿಜಂ ಹೃದಿಸ್ಥಂ
ಬೌದ್ಧಾಗಮಾರ್ಥಂ ಸೃತಿಬಂಧಮೋಚನಮ್ ॥೧೫೩॥

ಬುದ್ಧ ದೇವಸಮೂಹದ ಬಳಿಕ ಹೋಗಿ ಅವರಿಗೆನಡೆದ ಸಂಗತಿಯನ್ನೆಲ್ಲ ಹೇಳಿ ಅವರು ಕೇಳಿದಾಗ ತನ್ನ ಹೃದ್ಗತವಾದ ಸಂಸಾರಬಂಧಮೋಚಕವಾದ ಬೌದ್ಧಾಗಮದ ಸಾರವನ್ನು ತಿಳಿಸಿ ಹೇಳಿದ.

ಬೌದ್ಧಮತದ ನಿಜಸ್ವರೂಪ

ಕ್ಷಣಾದಯಃ ಕ್ಷಣಿಕಾಸ್ತದ್ವಿಶೇಷಾ
ಯತಃ ಪ್ರಯಾಂತ್ಯೇವ ನಿಸರ್ಗತೋಽಖಿಲಾಃ।
ತತಃ ಸ್ಥಿರತ್ವೇಽಪಿ ವಿಶೇಷಸಂಶ್ರಯಾ-
ದುಕ್ತಂ ಕ್ಷಣಸ್ಥಾಯಿ ಮಯಾ ಸಮಸ್ತಮ್ ॥೧೫೪॥

ಕ್ಷಣಾದಿಗಳೂ ಅವುಗಳ ವಿಶೇಷಗಳೂ ಎಲ್ಲವೂ ಸ್ವಾಭಾವಿಕವಾಗಿ ಅಲ್ಪಕಾಲದಲ್ಲಿ ನಾಶಹೊಂದುವುದರಿಂದ ಸ್ಥಾಯಿಯಾಗಿದ್ದರೂ ಕ್ಷಣಿಕವೆನಿಸುತ್ತವೆ. ವಿಶೇಷ ಬಲದಿಂದ ಎಲ್ಲವನ್ನೂ ನಾನು ಕ್ಷಣಿಕ ಎಂದಿದ್ದೇನೆ.

[1]ಕ್ಷಣಾದಿಗಳೆಂದರೆ ಕ್ಷಣಗಳು ಮತ್ತು ಘಟಪಟಾದಿ ಸಮಸ್ತ ವಸ್ತುಗಳೂ

---

1. ಕ್ಷಣಾದಯಃ ಕ್ಷಣಿಕಾ ಇತ್ಯತ್ರ, ಆದಿಪದೇನ ಘಟಾದಯಃ ಸರ್ವೇಪದಾರ್ಥಾಗೃಹ್ಯಂತೇ। ತದ್ವಿಶೇಷಾ ಇತ್ಯನೇನ ನಿಮೇಷಯಾಮಾದ್ಯಾಃ ಕಾಲವಿಶೇಷಾ ಗೃಹ್ಯಂತೇ। ತತ್ರ ಕ್ಷಣಾದಯಃ ಸರ್ವೇಪಿ ಕ್ಷಣ ವರ್ತಿತ್ವಾದೇವ ಕ್ಷಣಿಕಾಃ। ಕ್ಷಣಾನಾಂ ಕ್ಷಣವರ್ತಿತ್ವಂ ನಾಮ ನ ಕ್ಷಣಾಂತರ ವರ್ತಿತ್ವಂ। ಪೂರ್ವಕ್ಷಣಸ್ಯ ಕ್ಷಣಾಂತರೇಽ ಭಾವಾತ್। ಕಂತು ಸ್ಥಿತಿಕಾಲೇ ಕ್ಷಣಾಖ್ಯೇ ಸ್ವಸ್ಮಿನ್ನೇವ ವರ್ತಿತ್ವಂ। ಉತ್ಪತ್ತಿಕ್ಷಣಸ್ಯ ನಾಶಕ್ಷಣಸ್ಯ ಚ ಸ್ಥಿತಿಕಾಲತ್ವಾಭಾವಾತ್ ಸ್ಥಿತಿಕಾಲೇ ಕ್ಷಣಮಾತ್ರ ವರ್ತಿತ್ವಸ್ಯ ನ ಭಂಗಃ। ಇಮಾಂ ಬುದ್ಧದೇವಾ ಭಿಮತಾಂ ಶಬ್ದಮರ್ಯಾದಾಮಜಾನಾನಾ ಬೌದ್ಧಾಸ್ತು ಪೂರ್ವೋತ್ತರ ಕಲಾವಿಕಲಕ್ಷಣವರ್ತಿತ್ವಂ ಕ್ಷಣಿಕತ್ವಮಾಹುಃ। ಅತೋ ಭ್ರಮ ಮೂಲಂ ತಚ್ಚಾಸ್ತ್ರಂ। ನನು ಸ್ವಕ್ಷಣ ಏವ ಸ್ವಸ್ಯ ವರ್ತಿತ್ವಂ ನಾಮ ಸ್ವಸ್ಮಿನ್ನೇವ ಸ್ವಸ್ಯ ವರ್ತಿತ್ವಂ। ಏವಂ ಚಾತ್ಮಾಶ್ರಯಃ ಸ್ಯಾದಿತ್ಯತ ಉಕ್ತಂ ವಿಶೇಷ ಸಂಶ್ರಯಾದಿತಿ। ತರ್ಹಿ ಘಟೇಽಪಿ ಘಟಃ ಕುತೋ ನಾಂಗೀಕ್ರಿಯತೇ ಇತಿ ನ ಚೋದ್ಯಂ ನೈಮಿತ್ತಿಕೇ ಸತಿ ನಿಮಿತ್ತಾನುಸರಣಂ ನತು ನಿಮಿತ್ತೇ ಸತಿ ನೈಮಿತ್ತಿಕಕಲ್ಪನಾ। ತಾಪನಿಮಿತ್ತ ಘರ್ಮಜಲಸ್ಯ ಶಿಲಾಯಾ-ಮಪಿ ಕಲ್ಪನಾಪ್ರಸಂಗಾತ್।

-ವಾದಿರಾಜೀಯ

ವಿವಕ್ಷಿತವಾಗಿವೆ. ಅವುಗಳ ವಿಶೇಷವೆಂದರೆ ನಿಮೇಷ ಯಾಮ ಮುಂತಾದ ಕಾಲ ವಿಶೇಷಗಳು. ಕ್ಷಣಾದಿಗಳೆಲ್ಲ ಕ್ಷಣದಲ್ಲಿರುವುದರಿಂದ ಕ್ಷಣಿಕಗಳು.

ಕ್ಷಣವು ಕ್ಷಣದಲ್ಲಿರುವುದೆಂದರೆ ಒಂದು ಕ್ಷಣ ಇನ್ನೊಂದು ಕ್ಷಣದಲ್ಲಿ ಇರುವುದೆ ಇಲ್ಲ. ಉತ್ಪತ್ತಿ ಕ್ಷಣದಲ್ಲಾಗಲಿ ನಾಶಕ್ಷಣದಲ್ಲಾಗಲಿ ಆ ಕ್ಷಣ ಇರುವುದೆ ಇಲ್ಲ. ತನ್ನಲ್ಲಿ ತಾನಿರುತ್ತದೆ. ಇದು ಆತ್ಮಾಶ್ರಯದೋಷವಲ್ಲ. ಭೇದಕಾರ್ಯಕಾರಿ ವಿಶೇಷದಿಂದ ಈ ದೋಷ ಪರಿಹಾರವಾಗುತ್ತದೆ. ಹಾಗಾದರೆ ಘಟದಲ್ಲಿ ಘಟ ಏಕೆ ಇರಬಾರದು ಎನ್ನಕೂಡದು. ಕಾರ್ಯ ವಿದ್ದಲ್ಲಿ ಕಾರಣವಿರಬೇಕು ಹೊರತು ಕಾರಣವಿದ್ದಲ್ಲಿ ಕಾರ್ಯವಿರಬೇಕೆಂದು ನಿಯಮವಿಲ್ಲ. ನಮಗೆ ಮೈ ಬೆವರಿದರೆ ತಾಪವಿದ್ದೇ ಇದೆ. ಕಲ್ಲು ಬಂಡೆಗೆ ತಾಪವಿದ್ದ ಮಾತ್ರಕ್ಕೆ ಅದಕ್ಕೆ ಬೆವರು ಬರುವುದಿಲ್ಲ ತಾನೆ?

ಕ್ಷಣವೆಂದರೆ ಅಲ್ಪಕಾಲ. ಅಲ್ಪಕಾಲದಲ್ಲಿ ಆ ಅಲ್ಪಕಾಲವೂ ಅನಿತ್ಯ ಪ್ರಪಂಚವೂ ಇರುವುದರಿಂದ ಕ್ಷಣಿಕವೆನಿಸುತ್ತವೆ ಎನ್ನುವುದು ಬುದ್ಧನ ಅಭಿಪ್ರಾಯ. ಇದನ್ನರಿಯದೆ ಬೌದ್ಧರು ಕ್ಷಣಮಾತ್ರವಲ್ಲದೆ ಸಮಸ್ತ ಪ್ರಪಂಚವೂ ಕೇವಲ ಒಂದೇ ಕ್ಷಣದಲ್ಲಿ ಇರುವಂಥದ್ದೆಂದು ಹೇಳುತ್ತಾರೆ. ಇದು ದುರ್ಮತ.

ತದ್ವಾನ್ ವಿಶೇಷಶ್ಚ ಯತೋ ನ ಭಿನ್ನೌ
ಸದಾ ಸ್ವನಿರ್ವಾಹಕಶಕ್ತಿಯುಕ್ತೌ।
ಅತಃ ಕ್ಷಣಸ್ಥಾಯಿ ಸಮಸ್ತಮೇತತ್
ಸ್ಥಿರಾತ್ಮಕಂ ಚೇತಿ ಹಿ ನಾಸ್ತಿ ಭೇದಃ ॥೧೫೫॥

ಸಕಲ ಪದಾರ್ಥಗಳಲ್ಲಿರುವ ವಿಶೇಷವೂ ವಿಶೇಷ ಉಳ್ಳ ಆ ಪದಾರ್ಥಗಳೂ ಬೇರೆಯಲ್ಲದಿರುವುದರಿಂದ ಅವು ಸ್ವನಿರ್ವಾಹಕ ಶಕ್ತಿಯುಕ್ತವಾಗಿವೆ. ಆದರಿಂದ ಈ ಸಮಸ್ತ ಪ್ರಪಂಚವೂ ಕ್ಷಣ ಸ್ಥಾಯಿ ಎಂದರೂ ಸ್ಥಿರವೆಂದರೂ ವಿರೋಧವಿಲ್ಲ.

[1]ವಿಶೇಷ ಕ್ಷಣದಲ್ಲಿ ಹೇಗೋ ಹಾಗೆ ಘಟಾದಿ ಎಲ್ಲ ಪದಾರ್ಥಗಳಲ್ಲಿಯೂ ಇದೆ. ಇಲ್ಲದಿದ್ದರೆ ಘಟದಲ್ಲಿ ಘಟತ್ವವಿದೆ ಎಂಬ ವ್ಯವಹಾರ

1. ಸೋಯಂ ವಿಶೇಷಃ ಕ್ಷಣ ಇವ ಘಟಾದಿಪ್ರಪಂಚೇಽಪ್ಯಂಗೀಕರ್ತವ್ಯಃ। ಅನ್ಯಥಾ ಘಟತ್ವಪಟತ್ವಾದ್ಯಭಿನ್ನ ಘಟಾದೀನಾಂ ಆಧಾರಾಧೇಯಭಾವೋ ನಸ್ಯಾತ್। ಏವಂ ಚ ಕ್ಷಣಾದೀನಾಂ ಕ್ಷಣಿಕತ್ವವತ್ ತತ್ತನ್ನಿಷ್ಠವಿಶೇಷಣಾಮಪಿ ತದ್ವದೇವ ಕ್ಷಣಿಕತ್ವಂ। ಅಭಿನ್ನತ್ವೇ ಕಥಂ ತದ್ವಾನ್ ವಿಶೇಷಶ್ಚೇತಿ ಪ್ರಯೋಗ ಇತ್ಯತ ಉಕ್ತಂ ಸ್ವನಿರ್ವಾಹಕಶಕ್ತಿಯುಕ್ತಾವಿತಿ। ತತ್ರ ತದ್ವತಃ ಸ್ವನಿರ್ವಾಹಕತ್ವಂ ಗ್ರಹಾವಿಷ್ಟಪುರುಷಸ್ಯ ಶಕ್ತಿ ವಿಶೇಷವತ್ ವಿಶೇಷಸಂಬಂಧಾದೇವ। ನ ತು ಸ್ವಶಕ್ತ್ಯಾ ಗ್ರಹಸ್ಯೇವ। ವಿಶೇಷಸ್ಯ ತು ಸ್ವತ ಏವೇತಿ ವಿವೇಕಃ। -ವಾದಿರಾಜೀಯ

ಕೂಡಲಾರದು. ಏಕೆಂದರೆ ಅವೆರಡೂ ಅಭಿನ್ನವಾಗಿಯೆ ಇವೆ. ಹೀಗೆ ಕ್ಷಣಿಕವಾದ ಕ್ಷಣಿಲವಾದಿ ಮತ್ತು ಘಟಪಟಾದಿಗಳಿಗಿಂತ ಅಲ್ಲಿರುವ ವಿಶೇಷಗಳು ಅಭಿನ್ನವಾದ್ದರಿಂದ ಆ ವಿಶೇಷಗಳೂ ಕ್ಷಣಿಕಗಳೆ. ಅಭಿನ್ನವಾದರೆ 'ವಿಶೇಷ ಉಳ್ಳದ್ದಿಂ'ದು ಆಧಾರಾಧೇಯ ಭಾವ ಹೇಗೆಎನ್ನಕೂಡದು. ವಿಶೇಷ ಸ್ವನಿರ್ವಾಹಕ. ಅದನ್ನು ಹೊಂದಿದ್ದರಿಂದ ಪದಾರ್ಥವೂ ಸ್ವನಿರ್ವಾಹಕ. ಭೂತಕ್ಕೆ ಶಕ್ತಿ ಇರುವುದು ಸ್ವಾಭಾವಿಕ. ಭೂತಾವೇಶದಿಂದ ಒಬ್ಬನಿಗೆ ಅದೇ ಶಕ್ತಿ ಬರಬಹುದು. ಅದೇರೀತಿ ವಿಶೇಷ ಮತ್ತು ಅದನ್ನು ಹೊಂದಿದ ಪದಾರ್ಥಗಳು ಎರಡೂ ಸ್ವನಿರ್ವಾಹಕಗಳು.

ಅನೇಕ ಕ್ಷಣ ವೃತ್ತಿ ಪದಾರ್ಥ ಏಕಕ್ಷಣ ವೃತ್ತಿಯೂ ಹೌದು. ಆದರೆ ಇದನ್ನೆ ಕ್ಷಣಿಕತ್ವವೆಂದಿಟ್ಟುಕೊಂಡರೆ ಇದಕ್ಕೆ ಪದಾರ್ಥದಿಂದ ಭೇದಾಭೇದವಿದೆ. ಸ್ವನಿರ್ವಾಹಕ ವಿಶೇಷ ಬೇಕಿಲ್ಲ. ಅಲ್ಪಕಾಲ ವೃತ್ತಿ ವಸ್ತು ಆ ಅಲ್ಪಕಾಲವಿರುವುದು ಕ್ಷಣಿಕತ್ವ ಅದು ವಸ್ತು ಸ್ವರೂಪ. ವಿಶೇಷ ಬೇಕು. ಹೀಗೆ ವಿಶೇಷ ಬಲದಿಂದಲೆ ಸ್ಥಿರವಸ್ತು ಕ್ಷಣಿಕವೆನಿಸುತ್ತದೆ.

ಜ್ಞೋಽಹಂ ಸದೈಕಃ ಪರಮೋ ಮಯೈತತ್
ಸದಾಽನನೀಯಂ ಚ ಯತೋಽಸ್ವತನ್ತ್ರಮ್ ।
ಜ್ಞಾನಾತ್ಮಕಂ ವಿಶ್ವಮತೋ ಮಯೋಕ್ತಂ
ಜಡಸ್ವರೂಪಂ ಚ ಕಿಮು ಸ್ಮ ಚೇತನಮ್ ॥೧೫೬॥

ಸರ್ವೋತ್ತಮನಾದ ನಾನು ಅದ್ವಿತೀಯನಾಗಿದ್ದು 'ಜ್ಞ' ಎನಿಸಿದ್ದೇನೆ. ಅಂಥ ನನ್ನಿಂದ ಈ ಪ್ರಪಂಚ 'ಅನ' ಪ್ರವೃತ್ತಿ ಮಾಡುತ್ತದೆ. ಏಕೆಂದರೆ ಅದು ಅಸ್ವತಂತ್ರ. ಅದರಿಂದ ವಿಶ್ವವನ್ನು ಜ್ಞಾನಾತ್ಮಕವೆಂದು ನಾನು ಹೇಳಿದೆ. ಇಲ್ಲದಿದ್ದರೆ ಜಡ ಸ್ವರೂಪದ ಈ ಪ್ರಪಂಚ ಚೇತನವಾದೀತೆ?

ಶಂಶೀಲಕೋಽಹಂ ಯತ ಏವ ಚೋಚ್ಚಃ
ಶೂನಾಮಕಸ್ತದ್ಧಿ ಮಯಾ ನಿಧೇಯಮ್. ।
ಶೂನ್ಯಾಭಿಧಂ ದೋಷವಿರುದ್ಧರೂಪೋ
ದೋಷೋಜ್ಝಿತೋಽನ್ಯಸ್ತ್ವಖಿಲಾದನಾಮಾ ॥೧೫೭॥
ಏನೈವ ಸಾದ್ಯಂ ತ್ವಸದೇವ ನಾಮತ
ಸ್ತ್ವಭಾವ ಏನೈವ ಭವೇದ್ ಯತಸ್ತತ್ ।
ಇತ್ಯಾದಿ ಬೋದ್ಧವ್ಯಮಿದಂ ಸಮಸ್ತಂ
ಮಯೋದಿತಂ ಕ್ವಾಪಿ ನ ಹೇಯಮಸ್ತಿ ॥೧೫೮॥

ನಾನು ಸುಖ ಸ್ವರೂಪ, ಉತ್ತಮನೂ ಆಗಿದ್ದೇನೆ. ಅದರಿಂದ 'ಶೂ' ಎಂದು ನನಗೆ ಹೆಸರು. ಅಂಥ ನನ್ನಿಂದ ವಿಶ್ವವು ವಿವಿಧ ಕಾರ್ಯಗಳಲ್ಲಿ ಪ್ರೇರಿಸಲ್ಪಡುತ್ತದೆ. ಅದರಿಂದ

ಶೂನ್ಯನಾಮಕವಾಗಿದೆ. ದೋಷರಹಿತನಾಗಿದ್ದು ದೋಷ ವಿರುದ್ಧ ರೂಪನಾದ್ದರಿಂದಲೂ ಸರ್ವಪ್ರಪಂಚ ವಿಲಕ್ಷಣನಾದ್ದರಿಂದಲೂ ನಾನು 'ಅ' ಎಂಬ ಹೆಸರುಳ್ಳವನು. ಅಂಥ ನನ್ನಿಂದ ನಾಶಮಾಡಲ್ಪಡುವುದರಿಂದ 'ಅಸತ್' ಎನಿಸುತ್ತದೆ. 'ಅ' ನಾಮಕನಾದ ನನ್ನಿಂದ ಹುಟ್ಟುವುದರಿಂದ 'ಅಭಾವ'ವೆಂದೂ ಕರೆಸಿಕೊಂಡಿದೆ. ಇತ್ಯಾದಿಯಾಗಿ ನಾನು ಹೇಳಿದ್ದನ್ನು ಎಲ್ಲವನ್ನೂ ಸರಿಯಾಗಿ ತಿಳಿಯಬೇಕು. ಆದರಲ್ಲಿ ಎಲ್ಲಿಯೂ ತ್ಯಾಜ್ಯ ಅಂಶವಿಲ್ಲ.

ವಿಜ್ಞಾನವಾದಿಗಳು ಹಗ್ಗದಲ್ಲಿ ಭ್ರಮೆಯಿಂದ ಕಲ್ಪಿಸುವ ಹಾವಿನ ಆಕಾರದಂತೆ ಪ್ರಪಂಚವನ್ನು ಕೇವಲ ಜ್ಞಾನದ ಆಕಾರವೆಂದು ಹೇಳುತ್ತಾರೆ. ಜ್ಞಾನಕ್ಕಿಂತ ಬೇರೆ ಇಲ್ಲ ಎನ್ನುತ್ತಾರೆ. ವಸ್ತುತಃ 'ಜ್ಞ' ನಾಮಕ ಹರಿಯಿಂದ 'ಅನ' ಪ್ರವೃತ್ತಿ ಮಾಡುವುದರಿಂದ ಎಲ್ಲವೂ 'ಜ್ಞಾನ'. ಶೂನ್ಯವಾದಿಗಳು ಜಗತ್ತನ್ನು ಶೂನ್ಯ ಅಸತ್ ಅಭಾವ ಎನ್ನುತ್ತಾರೆ. ಕಾಣುವುದೆಲ್ಲ ಸತ್ಯವಲ್ಲ. ಸ್ವಪ್ನದಂತೆ ಕರಗಿ ಶೂನ್ಯವಾಗುತ್ತದೆ. ಶೂನ್ಯಕ್ಕೇ ಅಸತ್ ಅಭಾವ ಎಂದು ಹೆಸರುಗಳು ಎನ್ನುತ್ತಾರೆ. ವಸ್ತುತಃ ಪ್ರಪಂಚಕ್ಕೆ ಬಾಧವಿಲ್ಲದ್ದರಿಂದ ಅದು ಸತ್ಯ. ಆದರೆ ಬುದ್ಧ ಶೂನ್ಯವೆಂದು ಕರೆದ. ಏಕೆಂದರೆ 'ಶು' ಎಂದರೆ ಆನಂದ ಸ್ವಭಾವದವನು. 'ಉ' ಎಂದರೆ ಉತ್ತಮ. 'ನ್ಯ' ಎಂದರೆ ವಿವಿಧ ಕಾರ್ಯ ಗಳಲ್ಲಿ ಪ್ರವೃತ್ತಿ ಹೊಂದುವಂಥದ್ದು. ಆನಂದಸ್ವಭಾವನಾದ ಸರ್ವೋತ್ತಮ ನಾದ ಹರಿಯಿಂದ ಪ್ರವೃತ್ತಿ ಮಾಡುವ ಪ್ರಪಂಚ ಶು+ ಉ+ ನ್ಯ 'ಶೂನ್ಯ'ವೆನಿಸು ತ್ತದೆ. 'ಅಸತ್' ಎಂಬಲ್ಲಿ 'ಅ' ಎಂದರೆ ದೋಷ ದೂರ. 'ಸತ್' ಎಂದರೆ ಅಂಥ ಪರಮಾತ್ಮನಿಂದ ಲಯಹೊಂದುವಂಥದ್ದು. 'ಅಭಾವ' ಎಂಬಲ್ಲಿಯೂ 'ಅ' ನಾಮಕ ಹರಿಯಿಂದ 'ಭಾವ' ಉತ್ಪನ್ನವಾಗುವ ಪ್ರಪಂಚ ಎಂದರ್ಥ.

ಇತ್ಯಾದಿ ದೇವಾನ್ ಪ್ರತಿಬೋಧಯಂಶ್ಚ
ದೇವೈಃ ಸಹೋವಾಸ ಸ ಬುದ್ಧದೇವಃ ।
ಗತ್ವಾ ಸ್ವಧಾಮಾಪ್ಯಪರೇಣ ರೂಪೇ-
ಣಾಽಸ್ತೇ ಪೃಥಕ್ ಚೈಕತನುರ್ಯಥೇಪ್ಸಮ್ ॥೧೫೯॥

ಬುದ್ಧದೇವ ಇವೇ ಮೊದಲಾದುವನ್ನು ದೇವತೆಗಳಿಗೆ ಬೋಧಿಸುತ್ತ ದೇವತೆಗಳೊಂದಿಗೆ ವಾಸಮಾಡಿದ. ಮತ್ತೊಂದು ರೂಪದಿಂದ ವೈಕುಂಠಮಂದಿರಕ್ಕೂ ಹೋಗಿ ಮೂಲ ರೂಪದೊಂದಿಗೆ ಒಂದಾಗಿಯೂ ಮತ್ತೆ ಬೇರೆಯಾಗಿಯೂ ತನ್ನಿಷ್ಟದಂತೆ ಇದ್ದಾನೆ.

ತತಸ್ತು ಬುದ್ಧೋದಿತಪಕ್ಷಸಂಸ್ಥೋ
ಜಿನೋಽಪಿ ಚಕ್ರೇ ಮತಮನ್ಯದೇವ ।
ಬೌದ್ಧೇನ ಜೈನೇನ ಮತೇನ ಚೈವ
ದೈತ್ಯಾಂಶಕಾಃ ಪ್ರೀತಿಮಗುಃ ಸಮಸ್ತಾಃ ॥೧೬೦॥

ಬಳಿಕ ಬುದ್ಧ ಹೇಳಿದ ಪಕ್ಷದಲ್ಲಿದ್ದು ಜಿನನೂ ಬುದ್ಧನಿಗೆ ಸಮ್ಮತವಲ್ಲದ ಬೇರೆ ಮತವನ್ನು ಸ್ಥಾಪಿಸಿದ. ಹೀಗೆ ಬುದ್ಧನಿಂದ ಆರಂಭವಾದ ಜೈನಮತದಿಂದ ದೈತ್ಯಾಂಶ ಸಂಭೂತರು ಎಲ್ಲರೂ ತೃಪ್ತಿ ಹೊಂದಿದರು.

ಪ್ರಶಾಂತವಿದ್ಯೇತ್ಯಭಿಧಂ ತಥಾಽನ್ಯದ್
ಬುದ್ಧೋಕ್ತಶಾಸ್ತ್ರಂ ತ್ರಿದಶಾ ಅವಾಪ್ಯ ।
ತೋಷಂ ಯಯುರ್ವೇದಸಮಸ್ತಸಾರಂ
ಯಾಮಾಶ್ರಿತಾನಾಮಚಿರೇಣ ಮುಕ್ತಿಃ ॥೧೬೧॥

ಪ್ರಶಾಂತ ವಿದ್ಯೆ ಎಂದು ಕರೆಸಿಕೊಂಡ ಬೇರೆ ಬುದ್ಧೋಕ್ತವಾದ ಶಾಸ್ತ್ರವನ್ನು ದೇವತೆಗಳು ಪಡೆದು ತೃಪ್ತಿ ಹೊಂದಿದರು. ಏಕೆಂದರೆ ಅದು ವೇದದ ಸಮಸ್ತ ಸಾರರೂಪವಾಗಿದ್ದು ಅದನ್ನು ಉಪಾಸನೆ ಮಾಡುವವರಿಗೆ ಬೇಗನೆ ಮುಕ್ತಿಯಾಗುವುದು.

ಅನ್ಯೇ ಮನುಷ್ಯಾ ಅಪಿ ಭಾರತಾದ್ಯಂ
ಸತ್ಸಂಪ್ರದಾಯಂ ಪರಿಗೃಹ್ಯ ವಿಷ್ಣುಮ್ ।
ಯಜಂತ ಆಪುಃ ಪರಮಾಂ ಗತಿಂ ತ-
ನ್ನ ಸೇಹಿರೇ ಕ್ರೋಧವಶಾದಿದೈತ್ಯಾಃ ॥೧೬೨॥

ಬೇರೆ ಮಾನವರೂ ಕೂಡ ಸತ್ಸಂಪ್ರದಾಯ ಯುಕ್ತವಾದ ಭಾರತಾದಿ ಶಾಸ್ತ್ರವನ್ನು ಸ್ವೀಕರಿಸಿ ವಿಷ್ಣುವನ್ನು ಆರಾಧಿಸಿ ಪರಗತಿಯನ್ನು ಪಡೆದರು. ಅದನ್ನು ಕ್ರೋಧವಶರು ಮುಂತಾದ ದೈತ್ಯರು ಸಹಿಸಲಿಲ್ಲ.

ಅಶುಚಿಗಳಾದವರು ಮಾಡುವ ಜನೋಪಕಾರಿ ಕಾರ್ಯಗಳ ಪುಣ್ಯವನ್ನು ಕಸಿದುಕೊಳ್ಳುವ ದೇವಗಣಗಳು ಕ್ರೋಧವಶರೆಂದು ನೀಲಕಂಠ ಹೇಳುತ್ತದೆ! (ಮಹಾಪ್ರ. 3-10)

ಶೈವಂ ತಪಸ್ತೇ ವಿಪುಲಂ ವಿಧಾಯ
ಜಗದ್ವಿಮೋಹೋರ್ಜಿತಶಕ್ತಿಮಸ್ಮಾತ್ ।
ಪ್ರಾಪ್ಯ ಪ್ರಜಾತಾ ಭುವಿ ಮೋಹನಂ ಚ
ಚಕ್ರುಃ ಕುತರ್ಕೈರಭಿದಾಂ ವದಂತಃ ॥೧೬೩॥

ಶಿವನನ್ನು ಕುರಿತು ತಪಸ್ಸು ಮಾಡಿ ಅವರು ಲೋಕವನ್ನು ಮೋಹಗೊಳಿಸಲು ಮಹಾಶಕ್ತಿಯನ್ನು ಅವನಿಂದ ಪಡೆದು ಭೂಮಿಯಲ್ಲಿ ಹುಟ್ಟಿದರು. ಜೀವಪರಮಾತ್ಮರಿಗೆ ಅಭೇದವನ್ನು ಹೇಳುತ್ತ ದುಷ್ಟತರ್ಕಗಳಿಂದ ಮೋಹ ಉಂಟುಮಾಡುವ ಶಾಸ್ತ್ರವನ್ನೂ ರಚಿಸಿದರು.

ತೇಷಾಂ ಪ್ರಪಾತಾಯ ಸತಾಂ ವಿ ಮುಕ್ತ್ಯೈ
ಜನ್ಮಾಽಸ ಭೀಮಸ್ಯ ಯದುಕ್ತಮತ್ರ ।

ದುರ್ಗಾ ಪುನರ್ವಿಪ್ರಕುಲೇಽವತೀರ್ಯಾ
ಹನಿಷ್ಯತಿ ವ್ರಾತಮಥಾಸುರಾಣಾಮ್ ॥೧೬೪॥

ಅವರ ಅಧೋಗತಿಗಾಗಿಯೂ ಸಜ್ಜನರ ಮುಕ್ತಿಗಾಗಿಯೂ ಭೀಮನು ಹಿಂದೆ ಹೇಳಿದಂತೆ ಮಧ್ವಾವತಾರ ಮಾಡಿದ. ದುರ್ಗೆ ಪುನಃ ಪಯಸ್ವಿನೀ ನದೀತೀರದಲ್ಲಿ ಬ್ರಾಹ್ಮಣ ಕುಲದಲ್ಲಿ ಅವತರಿಸಿ ಅಸುರರ ಗುಂಪನ್ನು ಸಂಹರಿಸುವಳು.

ಹಿಂದೆ ಹೇಳಿದಂತೆ ಎಂದರೆ, ಬಳಿತ್ಥಾಸೂಕ್ತವನ್ನು ಉದಾಹರಿಸಿ ದ್ವಿತೀಯಾಧ್ಯಾಯದಲ್ಲಿ ಹೇಳಿದಂತೆ, ಮತ್ತು ಈ ಅಧ್ಯಾಯದಲ್ಲಿ 131ನೇ ಶ್ಲೋಕದಲ್ಲಿ ಹೇಳಿದೆ-

ಜಾತಃ ಪುನರ್ವಿಪ್ರತನುಃ ಸ ಭೀಮೋ
ದೈತ್ಯೈರ್ನಿಗೂಢಂ ಹರಿತತ್ವಮಾಹ।

ಕಲ್ಕ್ಯವತಾರ

ತತಃ ಕಲೇರಂತಮವಾಪ್ಯ ಧರ್ಮ
ಜ್ಞಾನಾದಿಕಲ್ಯಾಣಗುಣಪ್ರಹೀನೇ।
ಲೋಕೇ ವಿರಿಂಚತ್ರಿಪುರಘ್ನಶಕ್ರ
ಪೂರ್ವಾಃ ಪಯೋಬ್ಧಿಂ ತ್ರಿದಶಾಃ ಪ್ರಜಗ್ಮುಃ ॥೧೬೫॥

ದುರ್ಗಾವತಾರಾನಂತರ ಕಲಿಯುಗದ ಅಂತ್ಯದಲ್ಲಿ ಲೋಕದಲ್ಲಿ ಧರ್ಮಜ್ಞಾನಾದಿ ಸದ್ಗುಣಗಳು ಮರೆಯಾದಾಗ ಬ್ರಹ್ಮ ರುದ್ರ ಇಂದ್ರ ಮುಂತಾದ ದೇವತೆಗಳು ಕ್ಷೀರಸಾಗರದ ಬಳಿಗೆ ಹೋದರು.

ನಾರಾಯಣಸ್ತೈಃ ಸ್ತುತಿಪೂರ್ವಮರ್ಥಿತೋ
ಭವಾಯ ಲೋಕಸ್ಯ ಸ ಶಂಭಲಾಖ್ಯೇ।
ಗ್ರಾಮೇ ಮುನೇರ್ವಿಷ್ಣುಯಶೋಽಭಿಧಸ್ಯ
ಗೃಹೇ ಬಭೂವಾಽವಿರಚಿಂತ್ಯಶಕ್ತಿಃ ॥೧೬೬॥

ದೇವತೆಗಳು ನಾರಾಯಣನನ್ನು ಸ್ತುತಿಪೂರ್ವಕವಾಗಿ ಬೇಡಿದಾಗ ಸಜ್ಜನರಿಗೆ ಧರ್ಮಜ್ಞಾನಾದಿ ಸಂಪತ್ತಿಗಾಗಿ ಅಚಿಂತ್ಯಶಕ್ತಿಉಳ್ಳ ನಾರಾಯಣ ಶಂಭಲವೆಂಬ ಗ್ರಾಮದಲ್ಲಿ ವಿಷ್ಣುಯಶನೆಂಬ ಹೆಸರಿನ ಮುನಿಯ ಪತ್ನಿಯಲ್ಲಿ ಆವಿರ್ಭವಿಸುತ್ತಾನೆ.

ಕಲೇಸ್ತು ಕಾಲ್ಕಾರತ ಏಷ ಕಲ್ಕೀ
ಜ್ಞಾನಂ ಕಲಂ ಕಂ ಸುಖಮೇವ ತದ್ವಾನ್।
ಕಲ್ಕೀತಿ ವಾ ತೇನ ಸಮಸ್ತದಸ್ಯು
ವಿನಾಶನಂ ತೇನ ದಿನಾದ್ ವ್ಯಧಾಯಿ ॥೧೬೭॥

ಈತನು ಕಲಿಯನ್ನು ಹಿಂಸೆಮಾಡುವುದರಿಂದ ಕಲ್ಕಿ ಎನಿಸುತ್ತಾನೆ. ಮತ್ತು ಜ್ಞಾನ 'ಕಲ' ಎನಿಸುತ್ತದೆ. ಸುಖವೆ 'ಕ' ಎನಿಸುತ್ತದೆ. ಜ್ಞಾನಸುಖ ಉಳ್ಳವನಾದ್ದರಿಂದಲೂ 'ಕಲ್ಕಿ' ಎನಿಸುತ್ತಾನೆ. ಆ ಕಲ್ಕಿ ಒಂದೇ ದಿನದಲ್ಲಿ ಎಲ್ಲ ಅಸುರರನ್ನೂ ನಾಶಮಾಡುತ್ತಾನೆ.

ಬಂಧನ ಅಥವಾ ಹಿಂಸೆ ಎಂಬ ಅರ್ಥದಲ್ಲಿ 'ಕಲ' ಮತ್ತು 'ಕೃ' ಧಾತುಗಳು ಜೊತೆ ಸೇರಬೇಕು. ಆಗ ಕಲ್+ಕ=ಕಲ್ಕವೇ ಕಾಲ್ಕಾರ. ಕಲ್ಕ ಉಳ್ಳವನೆ ಕಲ್ಕಿ. ಕಲಿಯನ್ನು ಹಿಂಸಿಸುತ್ತಾನೆ ಎಂದರ್ಥ. ಅಥವಾ ಕಲ್=ಜ್ಞಾನ, ಕ=ಸುಖ. ಪೂರ್ಣ ಕಲ್ಕಗಳು ಉಳ್ಳವನೆ ಕಲ್ಕಿ ಎನ್ನುತ್ತದೆ ವಾದಿರಾಜೀಯ. ಬೇರೆ ವ್ಯಾಖ್ಯಾನಗಳಲ್ಲಿ 'ಕಾತ್ಕಾರ' ಎಂದು ಪಾಠ. ಓಡಿಸುವುದು ಎಂದರ್ಥ.

ಅಧರ್ಮವೃತ್ತಂ ವಿಮುಖಂ ಹರೇಶ್ಚ
ನಿಹತ್ಯ ನಿಃಶೇಷಜನಂ ತುರಂಗೀ ।
ಸಂಸ್ಥಾಪಯಾಮಾಸ ಸ ಧರ್ಮಸೇತುಂ
ಜ್ಞಾನಂ ಸ್ವಭಕ್ತಿಂ ಚ ನಿಜಪ್ರಜಾಸು ॥೧೬೮॥

ಕಲ್ಕಿ ಕುದುರೆಯನ್ನೇರಿ ಅಧರ್ಮಪ್ರವೃತ್ತರಾದ ಹರಿವಿಮುಖರಾದ ಎಲ್ಲ ಜನರನ್ನೂ ಕೊಂದು ಧರ್ಮ ವ್ಯವಸ್ಥೆಯನ್ನು ನಿಲ್ಲಿಸುತ್ತಾನೆ.

ಇತ್ಯಾದ್ಯನಂತಾನಿ ಹರೇರುದಾರ
ಕರ್ಮಾಣಿ ರೂಪಾಣಿ ಚ ಸದ್ಗುಣಾಶ್ಚ ।
ನಿತ್ಯವ್ಯಪೇತಾಖಿಲದೋಷಕಸ್ಯ
ಬ್ರಹ್ಮೇತ್ಯನಂತೇತಿ ಚ ನಾಮ ಯೇನ ॥೧೬೯॥

ಸಮಸ್ತ ದೋಷಗಳಿಂದ ಸದಾ ದೂರನಾದ ಹರಿಯಲ್ಲಿ ಇವೇ ಮೊದಲಾದ ಅನಂತ ಉತ್ತಮಕರ್ಮಗಳೂ ರೂಪಗಳೂ ಸದ್ಗುಣಗಳೂ ತುಂಬಿರುವುದರಿಂದಲೇ ಅವನಿಗೆ ಬ್ರಹ್ಮ ಎಂದೂ ಅನಂತ ಎಂದೂ ನಾಮಗಳು.

ನಿರ್ಣಯಗ್ರಂಥದ ಮಹತ್ವ

ಆನಂದತೀರ್ಥಾಖ್ಯಮುನಿಃ ಸುಪೂರ್ಣ
ಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ
ತಸ್ಯೈವ ಶಿಷ್ಯೋ ಜಗದೇಕಭರ್ತುಃ ॥೧೭೦॥

ಪೂರ್ಣಪ್ರಜ್ಞ ಎಂಬ ಉತ್ತಮನಾಮಉಳ್ಳ ಆನಂದತೀರ್ಥರೆಂಬ ಮುನಿ ಬದರಿಯಲ್ಲಿ ವೇದವ್ಯಾಸರೂಪ ನಾರಾಯಣನಿಂದ ಆಜ್ಞಪ್ತರಾಗಿ, ಈ ಗ್ರಂಥವನ್ನು ರಚಿಸಿದರು. ಅವರು ಜಗತ್ತಿನ ಏಕೈಕ ನಿಯಾಮಕರಾದ ಆ ವೇದವ್ಯಾಸರ ಮುಖ್ಯ ಶಿಷ್ಯರು.

ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್
ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇದೇತಿಹಾಸಾಂಶ್ಚ ಪುರಾಣಯುಕ್ತಾನ್
ಯಥಾವದನ್ಯಾ ಅಪಿ ಸರ್ವವಿದ್ಯಾಃ ॥೧೭೦॥

ಆನಂದತೀರ್ಥರು ವೇದವ್ಯಾಸರ ಅನುಗ್ರಹದಿಂದ ವೇದ ಪಂಚರಾತ್ರ ಉಪನಿಷತ್ತು ಬ್ರಹ್ಮಸೂತ್ರಗಳನ್ನೂ ಇತಿಹಾಸ ಪುರಾಣಗಳನ್ನೂ ಬೇರೆ ಎಲ್ಲ ಶಾಸ್ತ್ರಗಳನ್ನೂ ಯಥಾವತ್ತಾಗಿ ತಿಳಿದಿದ್ದಾರೆ.

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ
ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ
ಹರಿಂ ಗುರುಂ ಪ್ರೀಣಯತಾತಮುನೈವ ॥೧೭೨॥

ಈ ಗ್ರಂಥ ಆ ಎಲ್ಲ ಶಾಸ್ತ್ರಗಳಿಗೆ ನಿರ್ಣಾಯಕವಾಗಿದೆ. ವಿಶೇಷವಾಗಿ ಭಾರತ ನಿರ್ಣಯಾತ್ಮಕವಾಗಿದೆ. ಇದನ್ನು ಜಗಜ್ಜನಕರಾದ ಜಗದ್ಗುರುಗಳಾದ ವೇದವ್ಯಾಸರನ್ನು ಸಂತೋಷಪಡಿಸಲೆಂದೇ ಆನಂದತೀರ್ಥರು ರಚಿಸಿದರು.

ವಿನಿರ್ಣಯೋ ನಾಸ್ಯಮುನಾ ವಿನಾ ಯದ್
ವಿಪ್ರಸ್ಥಿತಾನಾಮಿವ ಸರ್ವವಾಚಾಮ್ ।
ತದ್ ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ
ವ್ಯಾಖ್ಯಾತಥ ತೇಷಾಮಯಥಾ ಕೃತಾಽನ್ಯೈಃ ॥೧೭೩॥

ಆಪಾತತಃ ಪರಸ್ಪರ ವಿರುದ್ಧವಾಗಿ ಅಲ್ಲಲ್ಲಿ ಇರುವ ಎಲ್ಲ ಶಾಸ್ತ್ರ ವಚನಗಳ ಅರ್ಥ ನಿರ್ಣಯ ಈ ಗ್ರಂಥದ ಸಹಾಯವಿಲ್ಲದೆ ಶಕ್ಯವಿಲ್ಲ. ನಿರ್ಣಯದ ಉದ್ದೇಶದಿಂದಲೆ ಶ್ರೀವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿದ್ದರು. ಆದರೆ ಅವುಗಳಿಗೆ ಪರರು ವಿಪರೀತವಾಗಿ ವ್ಯಾಖ್ಯಾನ ಮಾಡಿದರು.

ನಿಗೂಹಿತಂ ಯದ್ ಪುರುಷೋತ್ತಮತ್ವಂ
ಸೂತ್ರೋಕ್ತಮಪ್ಯತ್ರ ಮಹಾಸುರೇಂದ್ರೈಃ ।
ಜೀವೇಶ್ವರೈಕ್ಯಂ ಪ್ರವದದ್ಭಿರುಗ್ರೈ
ರ್ವ್ಯಾಖ್ಯಾಯ ಸೂತ್ರಾಣಿ ಚಕಾರ ಚಾऽವಿಃ॥೧೭೪॥

ಹರಿಸರ್ವೋತ್ತಮತ್ವವನ್ನು ಸೂತ್ರದಲ್ಲಿ ಹೇಳಿದ್ದರೂ ಅದನ್ನು ಕ್ರೂರರಾದ ಮಹಾ ಅಸುರೇಂದ್ರರು ಜೀವೇಶ್ವರೈಕ್ಯವನ್ನು ಹೇಳುತ್ತ ಮರೆಮಾಡಿದರು. ಅದನ್ನು ಶ್ರೀಮದಾನಂದ ತೀರ್ಥರು ಸೂತ್ರವನ್ನು ಸರಿಯಾಗಿ ವ್ಯಾಖ್ಯಾನಿಸಿ ಸ್ಪಷ್ಟಗೊಳಿಸಿದರು.

ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ
ಪೃಥಕ್ಪೃಥಕ್ ಚೋಪನಿಷತ್ಸು ಭಾಷ್ಯಮ್ ।
ಕೃತ್ವಾಽಖಿಲಾನ್ಯಂ ಪುರುಷೋತ್ತಮಂ ಚ
ಹರಿಂ ವದಂತೀತಿ ಸಮರ್ಥಯಿತ್ವಾ ॥೧೭೫॥
ತನುಸ್ಯತೀಯಾ ಪವನಸ್ಯ ಸೇಯಂ
ಸದ್ಭಾರತಾರ್ಥಪ್ರತಿಪಾದನಾಯ ।
ಗ್ರಂಥಂ ಚಕಾರೇಮಮುದೀರ್ಣವಿದ್ಯಾ
ಯಸ್ಮಿನ್ ರಮಂತೇ ಹರಿಪಾದಭಕ್ತಾಃ ॥೧೭೬॥

ಶ್ರೀವೇದವ್ಯಾಸರ ಆಜ್ಞೆಯಿಂದ ಸೂತ್ರಗಳಿಗೆ ಉತ್ತಮ ಭಾಷ್ಯವನ್ನು ರಚಿಸಿ ಪ್ರತ್ಯೇಕ ಪ್ರತ್ಯೇಕವಾಗಿ ಉಪನಿಷತ್ತುಗಳಿಗೂ ಉತ್ತಮ ಭಾಷ್ಯಗಳನ್ನು ರಚಿಸಿ ಅವೆಲ್ಲವೂ ಸರ್ವವಿಲಕ್ಷಣನಾದ ಸರ್ವೋತ್ತಮನಾದ ಹರಿಯನ್ನೆ ಹೇಳುತ್ತವೆ ಎಂದು ಸಮರ್ಥಿಸಿ ವಾಯುವಿನ ಮೂರನೆ ಅವತಾರರಾದ ಶ್ರೀಮದಾನಂದತೀರ್ಥರು ಉತ್ತಮವಾದ ಭಾರತದ ಅರ್ಥವನ್ನು ಪ್ರತಿಪಾದಿಸುವುದಕ್ಕೆ ಈ ಗ್ರಂಥವನ್ನು ರಚಿಸಿದರು. ಇದನ್ನು ಅಧ್ಯಯನ ಮಾಡುತ್ತ ಉತ್ತಮ ಜ್ಞಾನಿಗಳೂ ಹರಿಪಾದ ಭಕ್ತರಾಗಿ ಆನಂದಿಸುತ್ತಾರೆ.

ತೃತೀಯಮಸ್ಯ ವೃಷಭಸ್ಯ ದೋಹಸೇ
ದಶಪ್ರಮತಿಂ ಜನಯಂತ ಯೋಷಣಃ ॥೧೭೭॥
ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ
ಈಶಾನಾಸಃ ಶವಸಾ ಕ್ರಂತ ಸೂರಯಃ ।
ಯದೀಮನು ಪ್ರದಿವೋ ಮಧ್ವ ಆಧವೇ
ಗುಹಾ ಸಂತಂ ಮಾತರಿಶ್ವಾಮಥಾಯತಿ ॥೧೭೮॥

ಮುಖ್ಯಪ್ರಾಣನ ಮೂರನೆ ಅವತಾರರಾದ ಪೂರ್ಣಪ್ರಜ್ಞರನ್ನು ಶ್ರೀಭೂದುರ್ಗೆಯರೆಂಬ ವೇದಾಭಿಮಾನಿ ಸ್ತ್ರೀಯರು ಜ್ಞಾನಕಾರ್ಯಕ್ಕಾಗಿ ಹುಟ್ಟಿಸಿದರು. ಜ್ಞಾನರೂಪರಾದ ಭಕ್ತಪಾಲಕರಾದ ಪೂರ್ಣಪ್ರಜ್ಞರಿಂದಲೆ ರುದ್ರಾದಿ ದೇವತೆಗಳು ತತ್ವಜ್ಞಾನವನ್ನು ಸುಖವಾಗಿ ಚೆನ್ನಾಗಿ ಪಡೆದರು. ಸರ್ವಜ್ಞ ಮಧ್ವರೂಪಿ ವಾಯುದೇವರೆ ದುರ್ವಾದಿಗಳಿಂದ ಮರೆಮಾಡಲ್ಪಟ್ಟ ಶ್ರೀಹರಿಯ ಸರ್ವೋತ್ತಮತ್ವವನ್ನು ಶಾಸ್ತ್ರಾನುಸಾರವಾಗಿ ನಿರ್ಣಯಿಸುತ್ತಾರೆ.

ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ
ಯಥಾ ಪುರಾಣೇಷು ಚ ಪಂಚರಾತ್ರೇ ।
ಅತ್ರೋದಿತಾ ಯಾಶ್ಚ ಕಥಾಃ ಸಮಸ್ತಾ
ವೇದೇತಿಹಾಸಾದಿವಿನಿರ್ಣಯೋಕ್ತಾಃ ॥೧೭೯॥

ಇವೇ ಮೊದಲಾದ ವಚನಗಳಿಂದ ಇದೆಲ್ಲವೂ ಉಕ್ತವಾಗಿದೆ. ಹಾಗೇ ಪುರಾಣಗಳಲ್ಲಿಯೂ ಪಂಚರಾತ್ರದಲ್ಲಿಯೂ ಹೇಳಿದೆ. ಈ ಗ್ರಂಥದಲ್ಲಿ ಹೇಳಿದ ವಿಷಯಗಳೆಲ್ಲವೂ ವೇದ ಇತಿಹಾಸ ಮುಂತಾದವುಗಳ ಅರ್ಥನಿರ್ಣಯಕ್ಕಾಗಿ ಉಕ್ತವಾಗಿವೆ.

ತಸ್ಮಾದಯಂ ಗ್ರಂಥವರೋಽಖಿಲೋರು
ಧರ್ಮಾದಿಮೋಕ್ಷಾಂತಪುಮರ್ಥಹೇತುಃ ।
ಕಿಂ ವೋದಿತೈರಸ್ಯ ಗುಣೈಸ್ತತೋಽನ್ಯೈ ।
ರ್ನಾರಾಯಣಃ ಪ್ರೀತಿಮುಪೈತ್ಯತೋಽಲಮ್ ॥೧೮೦॥

ಅದರಿಂದ ಇದು ಉತ್ತಮ ಗ್ರಂಥ. ಸಕಲ ಧರ್ಮಾದಿ ಮೋಕ್ಷಾಂತ ಮಹಾಪುರುಷಾರ್ಥಗಳಿಗೆ ಕಾರಣವಾಗುತ್ತದೆ. ಇದರ ಬೇರೆ ಮಹಿಮೆಗಳನ್ನು ಏನು ಹೇಳಬೇಕು? ಇದರಿಂದ ನಾರಾಯಣ ಬಹಳ ಸುಪ್ರೀತನಾಗುತ್ತಾನೆ ಎಂದರೆ ಸಾಕು.

ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ
ಬಟ್ ತದ್ ದರ್ಶಿತಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ ।
ವಾಯೋ ರಾಮವಚೋನಯಂ ಪ್ರಥಮಕಂ ಪಕ್ಷೋ ದ್ವಿತೀಯಂ ವಪು-
ರ್ಮಧ್ವೋ ಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ॥೧೮೧॥

ಯಾವ ವಾಯುದೇವನ ಮೂರು ದಿವ್ಯರೂಪಗಳು ವೇದಮಂತ್ರದಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿವೆಯೋ, ಲೋಕವನ್ನು ಕಾಪಾಡುವ ಬಲಜ್ಞಾನಪೂರ್ಣವಾಗಿರುವ ಮೂಲ ಮಹಾರೂಪವೆ ಏನೂ ವ್ಯತ್ಯಾಸವಿಲ್ಲದೆ ಮೂರು ಅವತಾರ ಮಾಡಿದೆ. ರಾಮನ ಸಂದೇಶವನ್ನು ಸೀತೆಗೆ ಒಯ್ದ ಹನುಮಂತನೆ ಮೊದಲನೆ ರೂಪ. ಕುರುಸೇನೆಯನ್ನು ನಿರ್ನಾಮ ಮಾಡಿದ ಭೀಮ ಎರಡನೆ ರೂಪ. ಮಧ್ವರೆ ಮೂರನೆ ರೂಪ. ಮೂರನೆ ರೂಪವೆ ಈ ಗ್ರಂಥವನ್ನು ನಾರಾಯಣನ ಪ್ರೀತಿಗಾಗಿ ರಚಿಸಿದೆ.

ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥೧೮೨॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಪಾಂಡವಸ್ವರ್ಗಾರೋಹಣಂ ನಾಮ
ದ್ವಾತ್ರಿಂಶೋಽಧ್ಯಾಯಃ

ಸರ್ವಗುಣ ಸಂಪೂರ್ಣನೂ ಸರ್ವದೋಷರಹಿತನೂ ಆದ ಆ ವಿಷ್ಣುವೆ ನನಗೆ ಪರಮಮಿತ್ರ. ಅವನು ಚೆನ್ನಾಗಿ ಸುಪ್ರೀತನಾಗಲಿ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಪಾಂಡವಸ್ವರ್ಗಾರೋಹಣ
ಎಂಬ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

ಶ್ರೀ ಮದಾನಂದತೀರ್ಥಭಗವತ್ಪಾದರು ರಚಿಸಿದ

ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ - ೧೦

ಶ್ರೀಮಹಾಭಾರತತಾತ್ಪರ್ಯನಿರ್ಣಯ

ಭಾಗ- ೪

ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಕನ್ನಡ ಸಾರ ಸಹಿತ.

ಅನುವಾದಕರು :

ವಿದ್ವಾನ್ ಕೆ.ಹಯವದನಪುರಾಣಿಕ, ಎಮ್.ಎ

ಪ್ರಕಾಶಕರು

ಅಖಿಲ ಭಾರತ ಮಾಧ್ವ ಮಹಾಮಂಡಲ

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು- 560 028

ಕನ್ನಡ ಸರ್ವಮೂಲ - ಮಹಾಭಾರತತಾತ್ಪರ್ಯನಿರ್ಣಯ - ಭಾಗ - ೪
೧೦ನೆಯ ಈ ಸಂಪುಟವನ್ನು ಶ್ರೀವಿಶ್ವೇಶತೀರ್ಥಶ್ರೀಪಾದರು ತಮ್ಮ ಚತುರ್ಥ
ಪರ್ಯಾಯದ ಶ್ರೀಮಧ್ವನವಮೀಮಹೋತ್ಸವ ಸಮಾರಂಭದಲ್ಲಿ
ಉಡುಪಿಯಲ್ಲಿ ದಿ. ೨-೨-೨೦೦೧ರಂದು ಬಿಡುಗಡೆಗೊಳಿಸಿದರು.

ಪುಟಗಳು : 598

ಬೆಲೆ : **120/-**

ಪ್ರಕಾಶಕರು : **ಅಖಿಲ ಭಾರತ ಮಾಧ್ವ ಮಹಾಮಂಡಲ,** ಬೆಂಗಳೂರು- 560 028

ಹಕ್ಕುಗಳು ಕಾದಿರಿಸಲ್ಪಟ್ಟಿವೆ.

ಸಂಪಾದಕ ಮಂಡಳಿ

ಅಧ್ಯಕ್ಷರು

ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

ಕಾರ್ಯಾಧ್ಯಕ್ಷರು

ಪ್ರೊ. ಕೆ.ಟಿ. ಪಾಂಡುರಂಗಿ, ವೇದಾಂತ ವಿದ್ವಾನ್, ಮೀಮಾಂಸಾ ಶಿರೋಮಣಿ

ಕಾರ್ಯದರ್ಶಿಗಳು

ಪ್ರೊ. ಡಿ. ಪ್ರಹ್ಲಾದಾಚಾರ್ಯ, ನ್ಯಾಯ ವೇದಾಂತ ವಿದ್ವಾನ್

ಸದಸ್ಯರು

ವಿದ್ವಾನ್ ಕೆ. ಹಯವದನ ಪುರಾಣಿಕ

ವಿದ್ವಾನ್ ಪಿ. ಕೇಶವ ಬಾಯರಿ

ವಿದ್ವಾನ್ ರಾಮಾಚಾರ್ಯ ಜಿ. ಮಾಳಗಿ

ವಿದ್ವಾನ್ ಜಿ. ಗುರುವೆಂಕಟಾಚಾರ್ಯ

ವಿದ್ವಾನ್ ಎ. ಹರಿದಾಸಭಟ್ಟ

ಅಕ್ಷರ ಜೋಡಣೆ: **ಪೂರ್ಣಪ್ರಜ್ಞ ಸಂಶೋಧನ ಮಂದಿರ**
ಪೂರ್ಣಪ್ರಜ್ಞವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ.

ಗ್ರಂಥಗಳು ದೊರೆಯುವ ಸ್ಥಳ: **ಅಖಿಲ ಭಾರತ ಮಾಧ್ವ ಮಹಾಮಂಡಲ**
ಪೂರ್ಣಪ್ರಜ್ಞವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ,
ಬೆಂಗಳೂರು-೫೬೦ ೦೨೮ ದೂರವಾಣಿ : 6690068.

ಮುದ್ರಣ : **ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು**

ಶ್ರೀ 108 ಶ್ರೀಪೇಜಾವರ ಮಠಾಧೀಶರಾದ
ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಸಂದೇಶ

ಶ್ರೀ ಮಧ್ವಾಚಾರ್ಯರ 750ನೇ ವರ್ಷದ ಜಯಂತಿಯ ಸಂದರ್ಭದಲ್ಲಿ ಕೈಗೊಂಡಿರುವ ಜ್ಞಾನಪ್ರಸಾರ ಯೋಜನೆಯ ಅಂಗವಾಗಿ ಶ್ರೀಮದಾಚಾರ್ಯರ ಎಲ್ಲಾ ಗ್ರಂಥಗಳ ಕನ್ನಡ ಅನುವಾದವನ್ನು ಪ್ರಕಾಶಿಸುವ ಬೃಹತ್ ಯೋಜನೆಯನ್ನು ಆನಂದತೀರ್ಥ ಪ್ರತಿಷ್ಠಾನದ ಸಹಕಾರದಿಂದ ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕೈಗೊಂಡಿದೆ. ತೆಲುಗು, ತಮಿಳು ಮುಂತಾದ ಪ್ರಾದೇಶಿಕ ಭಾಷೆಗಳಲ್ಲಿಯೂ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿಯೂ ಅನುವಾದವನ್ನು ಪ್ರಕಟಿಸುವ ಬಯಕೆ ನಮ್ಮದಾಗಿದೆ. ಜಗತ್ತಿನ ಸತ್ಯತತ್ವಗಳನ್ನು ಅನುಭವದ ನೆಲೆಯಲ್ಲಿ ಪರೀಕ್ಷಿಸಿ ಸರಿಯಾದ ಪ್ರಮಾಣಗಳ ಆಧಾರದಲ್ಲಿ ವೈಜ್ಞಾನಿಕವಾಗಿ ವಿವೇಚಿಸುವ ವಿಶಿಷ್ಟತೆಯನ್ನು ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ನಾವು ಕಾಣಬಹುದು. ಎಲ್ಲಾ ಪ್ರಮಾಣ, ತರ್ಕ, ಊಹಾಪೋಹಗಳಿಗಿಂತಲೂ ಅನುಭವಕ್ಕೆ ಹೆಚ್ಚಿನ ಸ್ಥಾನವನ್ನು ಶ್ರೀಮದಾಚಾರ್ಯರು ನೀಡಿದ್ದಾರೆ. ಎಲ್ಲ ಭಾಷೆಗಳಲ್ಲಿ ಆಚಾರ್ಯರ ಗ್ರಂಥಗಳ ಅನುವಾದದ ಪ್ರಕಟಣೆಯು ಜಗತ್ತಿನ ಜಿಜ್ಞಾಸುಗಳಿಗೆ ಈ ಸತ್ಯದ ಅರಿವುಂಟಾಗಲು ಅನುಕೂಲವಾಗುವುದು. ಶ್ರೀಮದಾಚಾರ್ಯರ ಸಂದೇಶವು ವಿಶ್ವದಲ್ಲಿ ಪ್ರತಿಧ್ವನಿತವಾಗಲಿ, ಈ ಗ್ರಂಥ ಪ್ರಕಾಶನದಿಂದಾಗಿ ಜ್ಞಾನ, ಭಕ್ತಿ, ಕರ್ತವ್ಯ, ಚಾರಿತ್ರ್ಯಗಳ ಬಗ್ಗೆ ಜನಜಾಗೃತಿಯುಂಟಾಗಲಿ ಎಂದು ಹಾರೈಸುತ್ತೇವೆ. ಭಕ್ತರೂ, ಅಭಿಮಾನಿಗಳೂ, ಜಿಜ್ಞಾಸುಗಳೂ ಆದ ಎಲ್ಲಾ ಮಹಾಜನರ ಸಹಕಾರದಿಂದ, ಹರಿವಾಯುಗಳ ಅನುಗ್ರಹದಿಂದ ಈ ಪವಿತ್ರವಾದ ಮಹತ್ತರವಾದ ಜ್ಞಾನಕಾರ್ಯವು ಯಶಸ್ವಿಯಾಗಲಿ ಎಂದು ಆಶಿಸುತ್ತೇವೆ.

ಶ್ರೀ ಶ್ರೀವಿಶ್ವೇಶತೀರ್ಥಶ್ರೀಪಾದರು
ಪರ್ಯಾಯ ಶ್ರೀ ಪೇಜಾವರ ಮಠ, ಉಡುಪಿ.

ದಿನಾಂಕ 02.02.2001

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾಮಂಡಲವು ಕ್ರಿ.ಶ. 1986ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು ಹನ್ನೆರಡು ವರ್ಷಗಳಲ್ಲಿ ಒಂಭತ್ತು ಸಂಪುಟಗಳನ್ನು ಹೊರತರಲಾಗಿದೆ. ಗೀತಾಪ್ರಸ್ಥಾನ, ಉಪನಿಷತ್ ಪ್ರಸ್ಥಾನ ಮತ್ತು ದಶಪ್ರಕರಣಗಳು ಅನುವಾದ ಸಹಿತ ಪೂರ್ಣವಾಗಿ ಪ್ರಕಟಗೊಂಡಿವೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ರಾಮಾಯಣ ಪರ್ಯಂತದ ಒಂಭತ್ತು ಅಧ್ಯಾಯಗಳು ಮತ್ತು ಮುಂದಿನ ಹದಿನೆಂಟು ಅಧ್ಯಾಯದವರೆಗಿನ ಎರಡನೆಯ ಭಾಗವೂ ಪ್ರಕಟವಾಗಿದೆ. ಅದರ ಜೊತೆಯಲ್ಲೆ ಸಂಕೀರ್ಣ ಗ್ರಂಥಗಳನ್ನೂ ಪ್ರಕಟಿಸಲಾಯಿತು. ನಡುವೆ ಜಿಜ್ಞಾಸುಗಳ ಅಪೇಕ್ಷೆಯಂತೆ ಗೀತಾಪ್ರಸ್ಥಾನ ಮತ್ತು ದಶೋಪನಿಷತ್ತುಗಳ ಪುನರ್ಮುದ್ರಣವನ್ನು ಕೈಗೆತ್ತಿಗೊಳ್ಳಲಾಯಿತು. ಕ್ರಿ.ಶ. ೧೯೯೯ರಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪೀಠಾರೋಹಣದ ೬೦ನೇ ವರ್ಷದ ಮಹೋತ್ಸವ ಸಮಾರಂಭದಲ್ಲಿ ಮಹಾಭಾರತ ತಾತ್ಪರ್ಯ ವಿನಿರ್ಣಯದ ಹತ್ತೊಂಭತ್ತರಿಂದ ಇಪ್ಪತ್ತೆರಡು ಅಧ್ಯಾಯಗಳ ವರೆಗಿನ[illegible]ರುವ ಸಂಪುಟವನ್ನು ಹೊರತರಲಾಯಿತು. ಇದೀಗ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪರ್ಯಾಯದ ಸಂದರ್ಭದಲ್ಲಿ ಜರುಗಲಿರುವ ಶ್ರೀಮಧ್ವನವಮೀ ಮಹೋತ್ಸವದಲ್ಲಿ ಮಹಾಭಾರತ ತಾತ್ಪರ್ಯ ವಿನಿರ್ಣಯದ ೨೩ರಿಂದ ೩೨ ಅಧ್ಯಾಯಗಳ ವರೆಗಿನ ಸಂಪೂರ್ಣ ಭಾಗವನ್ನು ಪ್ರಕಟಿಸಲು ಸಂತೋಷವೆನಿಸುತ್ತದೆ. ಇದರ ಅನುವಾದವನ್ನು ನಡೆಸಿಕೊಟ್ಟ ವಿದ್ವಾನ್ ಕೆ. ಹಯವದನ ಪುರಾಣಿಕರಿಗೆ ಕೃತಜ್ಞತೆಗಳು.

ತಮ್ಮ ನಿರಂತರ ಕೆಲಸಗಳ ಮಧ್ಯದಲ್ಲೂ ಬಿಡುವು ಮಾಡಿಕೊಂಡು ಸರಳ ಸುಂದರ ಭಾಷೆಯಲ್ಲಿ ಗ್ರಂಥದ ಸಾರವನ್ನು ಬರೆದು ಅನುಗ್ರಹಿಸಿದ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಅನಂತ ಪ್ರಣಾಮಗಳು. ಕನ್ನಡ ಅರಿಯದ ಜಿಜ್ಞಾಸುಗಳಿಗೂ ತಿಳಿಯಲು ಅನುಕೂಲವಾಗುವಂತೆ ಆಂಗ್ಲ ಭಾಷೆಯಲ್ಲಿ ಸಾರವನ್ನು ಬರೆದುಕೊಟ್ಟ ಪ್ರೊ। ಕೆ.ಟಿ. ಪಾಂಡುರಂಗಿಯವರಿಗೂ ಕೃತಜ್ಞತೆಗಳು.

ವಿದ್ವಾನ್ ಮಳಗಿ ಜಯತೀರ್ಥಾಚಾರ್ಯರು ತಮ್ಮ ಬಳಿ ಇದ್ದ 'ಹುಗ್ಗಿ' ಎಂಬ ಹಸ್ತ ಲಿಖಿತ ವ್ಯಾಖ್ಯಾನವನ್ನು ನೀಡಿದ್ದಾರೆ. ವಿದ್ವಾನ್ ನಾಗಸಂಪಿಗೆಯವರು ವರದರಾಜೀಯ ಮತ್ತು ತಾಮ್ರಪರ್ಣೀಯ ವ್ಯಾಖ್ಯಾನ ನೀಡಿದ್ದಾರೆ. ಇವರಿಬ್ಬರಿಗೂ ಕೃತಜ್ಞತೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಪೂರ್ಣಪ್ರಜ್ಞ ಸಂಶೋಧನ ಮಂದಿರ ವಹಿಸಿಕೊಂಡು, ಅಂದವಾಗಿ ಮಾಡಿಕೊಟ್ಟಿದೆ. ಮಂದಿರದ ಅಧಿಕಾರಿ ವರ್ಗಕ್ಕೆ ಕೃತಜ್ಞತೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ರಾಷ್ಟ್ರೋತ್ಥಾನ ಮುದ್ರಣಾಲಯದವರಿಗೂ

ಕೃತಜ್ಞತೆಗಳು. ಮುಖಪುಟದ ವಿನ್ಯಾಸವನ್ನು ಮಾಡಿದ ಶ್ರೀ ಕೆ.ಎಂ. ಶೇಷಗಿರಿ ಇವರಿಗೂ ಕೃತಜ್ಞತೆಗಳು.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸದೆ ಅತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಸಿಕೊಳ್ಳುವರೆಂದು ನಂಬಿದ್ದೇವೆ.

೨೦.೧.೨೦೦೧

ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ
ಅಧ್ಯಕ್ಷರು
ಅ.ಭಾ.ಮಾ.ಮ.ಮಂಡಲ, ಬೆಂಗಳೂರು

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986ರಲ್ಲಿ ಶ್ರೀ ಮಧ್ವಾಚಾರ್ಯರ ೭೫೦ನೆಯ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸಮಗ್ರ ಸರ್ವಮೂಲಗ್ರಂಥಗಳ ಭಾಷಾಂತರ ಕಾರ್ಯವನ್ನು ಶ್ರೀ ವಿಶ್ವೇಶತೀರ್ಥರು ಸಂಕಲ್ಪಿಸಿದರು. ಅಂದಿನಿಂದ ಇದುವರೆಗೆ ಒಟ್ಟು ಒಂಭತ್ತು ಸಂಪುಟಗಳು ಹೊರಬಂದಿವೆ. ಅಲ್ಲದೆ ಮೂರು ಬೃಹತ್ ಸಂಪುಟಗಳ ಪುನರ್ಮುದ್ರಣ ಕಾರ್ಯವೂ ನಡೆದಿದೆ. ಇದೀಗ ಶ್ರೀ ವಿಶ್ವೇಶತೀರ್ಥರ ಶ್ರೀಕೃಷ್ಣಪೂಜಾ ಪರ್ಯಾಯದ ಸಂದರ್ಭದಲ್ಲಿ ಹತ್ತನೆಯ ಸಂಪುಟ ಪ್ರಕಾಶಗೊಳ್ಳುತ್ತಿದೆ.

ಕ್ರಿ.ಶ. 1887 ರಲ್ಲಿ ಗೀತಾಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ದಶೋಪನಿಷತ್ತುಗಳು, ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್ತುಗಳ ಮೂರು ಸಂಪುಟಗಳು ಹೊರಬಂದವು. 1993ರಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದ ಮೊದಲ ಭಾಗವು ಪ್ರಕಟವಾಯಿತು. ಮರುವರ್ಷ ದಶಪ್ರಕರಣಗಳನ್ನು ಪ್ರಕಾಶಪಡಿಸಲಾಯಿತು.

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿವೆ. ಮೊದಲ ಒಂಭತ್ತು ಅಧ್ಯಾಯದವರೆಗೆ ರಾಮಾಯಣದ ಕಥಾಭಾಗವು ಮುಕ್ತಾಯವಾಗಿದೆ. ಹತ್ತನೆಯ ಅಧ್ಯಾಯದಲ್ಲಿ ಶ್ರೀ ವೇದವ್ಯಾಸರ ಅವತಾರ ಮತ್ತು ಅವರು ನಡೆಸಿದ ಜ್ಞಾನಕಾರ್ಯಗಳ ವಿವರಣೆ ಇದೆ. ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥೆಯು ಆರಂಭವಾಗುತ್ತದೆ. ಇದರಲ್ಲಿ ಹತ್ತೊಂಬತ್ತನೆಯ ಅಧ್ಯಾಯದಿಂದ ಇಪ್ಪತ್ತೆರಡನೆಯ ಅಧ್ಯಾಯಗಳವರೆಗಿನ ಭಾಗವನ್ನು ಭಾಷಾಂತರ ಮಾಡಿ ಕ್ರಿ.ಶ. ೧೯೯೯ರಲ್ಲಿ ಕೊಡಲಾಗಿದೆ. ಇದೀಗ ೨೩ ರಿಂದ ೩೨ ಅಧ್ಯಾಯಗಳು ಹತ್ತನೆಯ ಸಂಪುಟವಾಗಿ ಹೊರಬಂದಿದೆ. ಇಲ್ಲಿಗೆ ಮಹಾಭಾರತ ತಾತ್ಪರ್ಯ ನಿರ್ಣಯ ಪೂರ್ಣಗೊಂಡಂತಾಗಿದೆ.

ಈ ಗ್ರಂಥದ ಅನುವಾದವನ್ನು ವಿದ್ವಾನ್ ಕೆ. ಹಯವದನ ಪುರಾಣಿಕರು ಮಾಡಿದ್ದಾರೆ. ಇಲ್ಲಿ ಗ್ರಂಥದ ಶ್ಲೋಕಗಳಿಗೆ ಸರಿಹೊಂದುವ ಅನುವಾದದ ಜೊತೆಗೆ ಉಪಯುಕ್ತ ಮಾಹಿತಿಗಳನ್ನು ಆಧಾರಸಹಿತ ನಿರೂಪಿಸಲಾಗಿದೆ. ಮಹಾಭಾರತದ ಕಥೆಗೂ ಆಚಾರ್ಯರು ನೀಡಿದ ನಿರ್ಣಯಕ್ಕೂ ಇರುವ ಸಂಬಂಧವನ್ನೂ ಔಚಿತ್ಯವನ್ನೂ ವಿದ್ವತ್‌ಪೂರ್ಣವಾಗಿ ನೀಡಲಾಗಿದೆ. ನಿರ್ಣಯದ ಅನೇಕ ವ್ಯಾಖ್ಯಾನಗಳ ಮುಖ್ಯಾಂಶಗಳ ಉಲ್ಲೇಖವನ್ನು ಮಾಡಲಾಗಿದೆ. ಈ ಗ್ರಂಥವನ್ನು ಅನುವಾದಿಸಿದ ಶ್ರೀ ಕೆ. ಹಯವದನ ಪುರಾಣಿಕರಿಗೆ ಕೃತಜ್ಞತೆಗಳು.

ಬಿಡುವಿಲ್ಲದ ಕಾರ್ಯದ ಮಧ್ಯೆಯೂ ಇವುಗಳ ಸಾರ ಸಂಗ್ರಹಿಸಿ ಕೊಟ್ಟ ಶ್ರೀವಿಶ್ವೇಶತೀರ್ಥಶ್ರೀಪಾದರಿಗೆ ಸಾಷ್ಟಾಂಗ ಪ್ರಣಾಮಗಳು.

ಈ ಸಂಪುಟದ ಅಕ್ಷರ ಜೋಡಣೆ, ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಸಂಸ್ಥೆಗಳಿಗೂ ಕೃತಜ್ಞತೆಗಳು.

೨೦. ೧. ೨೦೦೧

ಕೆ. ಟಿ. ಪಾಂಡುರಂಗಿ

ಕಾರ್ಯಾಧ್ಯಕ್ಷರು, ಸಂಪಾದಕ ಮಂಡಳಿ

ಮಹಾಭಾರತ ತಾತ್ಪರ್ಯನಿರ್ಣಯ ಸಾರ

ಮಹಾಭಾರತ ತಾತ್ಪರ್ಯ ನಿರ್ಣಯ ಕನ್ನಡ ಅನುವಾದದ 4ನೇ ಸಂಪುಟವನ್ನು ಜನತೆಯ ಮುಂದಿಡಲು ಆನಂದಿಸುತ್ತಿದ್ದೇವೆ. ಇದರಲ್ಲಿ ವಿರಾಟಪರ್ವದಿಂದ ಕೊನೆಯವರೆಗಿನ ಮಹಾಭಾರತದ ನೈಜ ಕಥೆಯ ನಿರೂಪಣೆಯಿದೆ. ಕುರುಕ್ಷೇತ್ರದಲ್ಲಿ ನಡೆದ ಯುದ್ಧದ ಪೂರ್ಣ ಚಿತ್ರಣವನ್ನು ಮಹಾಭಾರತವು 4-5 ಪರ್ವಗಳಲ್ಲಿ ವಿಸ್ತಾರವಾಗಿ ವರ್ಣಿಸಿದೆ. ಅದರಂತೆ ರಾಮಾಯಣದಲ್ಲಿಯೂ ಯುದ್ಧಕಾಂಡದಲ್ಲಿ ವಿಸ್ತಾರವಾಗಿ ರಾಮರಾವಣಯುದ್ಧದ ನಿರೂಪಣೆಯಿದೆ. ಇದರ ಸಂಗ್ರಹವಾದ ಮತ್ತು ಕ್ರಮಬದ್ಧವಾದ ನಿರೂಪಣೆಯನ್ನು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ನಾವು ಕಾಣಬಹುದು. ಯುದ್ಧದಲ್ಲಿ ನಡೆದ ಘಟನೆಗಳಲ್ಲಿ ನಮಗೆ ಮೂಡಬಹುದಾದ ಸಂಶಯಗಳ ನಿವಾರಣೆಯ ಜೊತೆಗೆ ಯುದ್ಧದ ಸಮಗ್ರ ಚಿತ್ರಣವನ್ನು ಕ್ರೋಢೀಕರಿಸಿ ನಮಗೆ ಆಚಾರ್ಯರು ನೀಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀರಾಮ ಇಂದ್ರಜಿತ್ ಯುದ್ಧಪ್ರಸಂಗವನ್ನು ಉದಾಹರಿಸಬಹುದು. ಇಂದ್ರಜಿತ್‌ನಿಂದ ಎರಡು ಬಾರಿ ಪರಾಭವಗೊಂಡಂತೆ ಶ್ರೀರಾಮನು ತೋರಿಸಿಕೊಂಡನು. ಒಮ್ಮೆ ಅವನ ನಾಗಾಸ್ತ್ರಬಂಧನಕ್ಕೆ ಒಳಗಾದನು. ಆಗ ಗರುಡನು ಆಗಮಿಸಿ ಆ ನಾಗಗಳನ್ನು ಓಡಿಸಿದನು. ಮತ್ತೊಮ್ಮೆ ಶ್ರೀರಾಮನು ಇಂದ್ರಜಿತ್‌ನ ಅಸ್ತ್ರದಿಂದ ಮೂರ್ಛಿತನಾಗಿ ತೋರಿಸಿಕೊಂಡಾಗ ಹನುಮಂತನು ಸಂಜೀವಿನೀ ಪರ್ವತವನ್ನು ಎತ್ತಿ ತಂದು ತನ್ನ ಶೌರ್ಯವನ್ನು ತೋರಿಸಿದನು. ಒಮ್ಮೆ ಗರುಡನಿಗೆ ಸೇವಾವಕಾಶವನ್ನು ನೀಡಿದ, ಮತ್ತೊಮ್ಮೆ ಹನುಮಂತನ ಅದ್ಭುತ ಶಕ್ತಿಯು ಜಗಜ್ಜಾಹೀರಾಗುವಂತೆ ಮಾಡಿದ ಶ್ರೀರಾಮನು ಮೂರನೆ ಬಾರಿ ಇಂದ್ರಜಿತನು ಕಣ್ಣಿಗೆ ಕಾಣದಂತೆ ಅಸ್ತ್ರಗಳನ್ನು ಪ್ರಯೋಗಿಸಿದಾಗ ನೇರವಾಗಿ ತಾನೇ ಅವನನ್ನು ಎದುರಿಸಿ ಅವನ ಮಾಯಾ ಚಮತ್ಕಾರಗಳನ್ನೆಲ್ಲಾ ಲೀಲಾಜಾಲವಾಗಿ ವಿಫಲಗೊಳಿಸಿದನು. ತನ್ನ ಭಕ್ತರ ಕೀರ್ತಿಗಾಗಿ ತನ್ನ ಸೋಲಿನ ನಟನೆಯನ್ನು ಮಾಡುವ ಭಗವಂತನ ಭಕ್ತವಾತ್ಸಲ್ಯವನ್ನು ತಾತ್ಪರ್ಯನಿರ್ಣಯದಿಂದಲೇ ನಾವು ತಿಳಿದುಕೊಳ್ಳಬೇಕು.

ಅದರಂತೆ ಅನೇಕ ಬಾರಿ ಕರ್ಣನನ್ನು ಸುಲಭವಾಗಿ ಸೋಲಿಸಿ ಝಾಡಿಸಿದ ಭೀಮನು ಒಮ್ಮೆ ಕರ್ಣನಿಂದ ಪರಾಜಯವನ್ನು ಪಡೆದಂತೆ ಕಾಣಿಸಿಕೊಳ್ಳುತ್ತಾನೆ. ಇದರ ರಹಸ್ಯವನ್ನು ಆಚಾರ್ಯರೇ ನಿರೂಪಿಸುತ್ತಾರೆ. ಸ್ಪರ್ಧೆಯ ಭಾವನೆಯಿಲ್ಲದೆ ನಡೆದ ಯುದ್ಧದಲ್ಲಿ ಕರ್ಣನಿಗೆ ಸೋಲೇ ಇಲ್ಲವೆಂದು ಕರ್ಣನಿಗೆ ಭಗವಾನ್ ಪರಶುರಾಮನು ನೀಡಿದ ಅಭಯ ವಚನ. ಕರ್ಣನು ಭೀಮನ ಜೊತೆಗೆ ಸ್ಪರ್ಧಾಭಾವವಿಲ್ಲದೆ ಯುದ್ಧವನ್ನು ನಡೆಸಿದಾಗ ಭಗವಂತ ತನ್ನ ಮೇಲಿನ ಅಭಿಮಾನದಿಂದ ತನ್ನ ಮಾತನ್ನು ಹುಸಿಗೊಳಿಸಿ ತನಗೆ ವಿಜಯ ನೀಡಬಹುದಾದರೂ ಭಗವಂತನ ವರದಾನಕ್ಕೆ ಗೌರವ ನೀಡುವುದು ತನ್ನ ಕರ್ತವ್ಯವೆಂದು ಭೀಮನು ಕರ್ಣನ ಮುಂದೆ ತನ್ನ ಪರಾಭವದ ನಾಟಕವಾಡಿದನೆಂದು ನಿರ್ಣಯದಲ್ಲಿ ವಿವರಣೆಯನ್ನು ನೀಡಲಾಗಿದೆ.

ಭೀಮಸೇನನು ದುಃಶಾಸನನ ರಕ್ತ ಕುಡಿಯುವಂತಹ ಅಮಾನವೀಯ ವರ್ತನೆಯಿಂದ

ಭೀಮನ ಬಗ್ಗೆ ಅಪಪ್ರಚಾರವನ್ನು ನಡೆಸದೆ, ಆದರ ವಾಸ್ತವ ಘಟನೆಗಳನ್ನು ತಾತ್ಪರ್ಯ ನಿರ್ಣಯದಿಂದಲೇ ನಾವು ತಿಳಿಯಬೇಕು. ಶತ್ರುಗಳನ್ನು ಬೆದರಿಸಲು ಇದು ಭೀಮನು ನಡೆಸಿದ ಪ್ರದರ್ಶನವೇ ಹೊರತು ಭೀಮನು ವಾಸ್ತವವಾಗಿ ರಕ್ತವನ್ನು ಕುಡಿದಿಲ್ಲ. ದುಃಶಾಸನನ ರಕ್ತವು ಭೀಮನ ಹಲ್ಲನ್ನು ದಾಟಿ ಒಳಗೆ ಸೇರಲೇ ಇಲ್ಲ. ರಕ್ತಪಾನದಂತಹ ರಾಕ್ಷಸಕೃತ್ಯವನ್ನು ಭೀಮನು ನಡೆಸಿಯೇ ಇಲ್ಲವೆನ್ನುವ ನಿಜಸ್ಥಿತಿಯನ್ನು ಈ ಗ್ರಂಥದಿಂದ ನಾವು ಅರಿತುಕೊಳ್ಳಬಹುದು.

ಧೃತರಾಷ್ಟ್ರನು ಕೊನೆಗೆ ವೈರಾಗ್ಯಭಾವನೆಯನ್ನು ತಳೆದು ಹಸ್ತಿನಾವತಿಯನ್ನು ತೊರೆದು ತಪಸ್ಸಿಗಾಗಿ ವನವಾಸಕ್ಕೆ ಹೊರಟು ನಿಂತಿದ್ದಾನೆ. ಆಗ ತನ್ನ ಕೊನೆಯಾಸೆಯೆಂದು ದುರ್ಯೋಧನ ಮುಂತಾದ ತನ್ನ ಮಕ್ಕಳಿಗಾಗಿ ಶ್ರಾದ್ಧ, ದಾನ, ಸಂತರ್ಪಣೆಗಾಗಿ ವಿಶೇಷವಾದ ಧನಸಂಪತ್ತನ್ನು ಧರ್ಮರಾಜನಲ್ಲಿ ಬೇಡಿದನು. ಧರ್ಮರಾಜನು ಇದನ್ನು ಪೂರೈಸಲು ಸಿದ್ಧನಾದನು. ಆದರೆ ವಿಶ್ವವಿಘಾತಕರೂ ಧರ್ಮ ಮತ್ತು ಭಗವಂತನ ವಿದ್ರೋಹಿಗಳೂ ಆದ ಈ ದುಷ್ಟರಿಗಾಗಿ ಹಣವನ್ನು ನೀಡಲು ಭೀಮಸೇನ ನಿರಾಕರಿಸಿದ. ಇದು ಭೀಮನ ದೀರ್ಘ ದ್ವೇಷ, ದುರಾಗ್ರಹವೆಂದು ಸಾಮಾನ್ಯವಾಗಿ ಜನರಿಗೆ ತೋರಬಹುದು. ಇದರ ಹಿಂದಿರುವ ಉನ್ನತ ವಿಚಾರವನ್ನು ಆಚಾರ್ಯರು ಸ್ಪಷ್ಟೀಕರಿಸಿದ್ದಾರೆ. ದೇಶದ ಸಂಪತ್ತು ಜನರ ಲೌಕಿಕ ಮತ್ತು ಆಧ್ಯಾತ್ಮಿಕ ಕಲ್ಯಾಣಕಾರ್ಯಕ್ಕಾಗಿಯೇ ಮೀಸಲು. ಆ ಹಣವನ್ನು ಈ ದುಷ್ಟರ ಹೆಸರಿನಲ್ಲಿ ನಡೆಯುವ ಖಾಸಗಿ ಕಾರ್ಯಕ್ಕೆ ಉಪಯೋಗಿಸುವುದು ಸಲ್ಲದು. ಪ್ರಜೆಗಳ ಹಿತಕ್ಕಾಗಿ ಉಪಯೋಗಿಸಬೇಕಾದ ಸರಕಾರದ ಹಣವನ್ನು ಧೃತರಾಷ್ಟ್ರನು ಲೋಕವಿದ್ರೋಹಿಗಳಾದ ತನ್ನ ಮಕ್ಕಳ ಉಪಯೋಗಕ್ಕಾಗಿ ವಿನಿಯೋಗಿಸುವುದು ಸರಿಯಲ್ಲವೆಂದು ಇದರ ಹಿಂದಿರುವ ಉದಾತ್ತ ಧಾರ್ಮಿಕ ಮತ್ತು ರಾಜಕೀಯ ದೃಷ್ಟಿಯನ್ನು ಗ್ರಹಿಸಬೇಕಾದರೆ ಈ ಗ್ರಂಥವನ್ನೇ ನಾವು ಆಶ್ರಯಿಸಬೇಕು. ಕೊನೆಗೆ ಭೀಮನ ದೃಢನಿಷ್ಠೆಗೆ ತಲೆಬಾಗಿ ರಾಜ್ಯದ ಬೊಕ್ಕಸದಿಂದ ಒಂದುಕಾಸೂ ನೀಡದೆ ತನ್ನ ಸ್ವಂತ ವಿನಿಯೋಗಕ್ಕಿರುವ ಖಾಸಗಿ ಹಣವನ್ನು ಧರ್ಮರಾಜನು ಧೃತರಾಷ್ಟ್ರನಿಗೆ ನೀಡುವನು.

ಮಹಾಭಾರತ ಬಗ್ಗೆ ಇಂತಹ ಅಪೂರ್ವವಾದ ಬೆಳಕನ್ನು ನೀಡುವ ಮಹಾಭಾರತ ತಾತ್ಪರ್ಯ ನಿರ್ಣಯದ ಕನ್ನಡ ಅನುವಾದವನ್ನು ಜನತೆಯಲ್ಲಿ ಪ್ರಸ್ತುತ ಪಡಿಸಲು ನಾವು ಆನಂದಪಡುತ್ತೇವೆ. ಉತ್ತಮ ಲೇಖಕರೂ ವಿಮರ್ಶಕರೂ ಆದ ಹಯವದನ ಪುರಾಣಿಕರು ಬಹಳ ಸುಂದರವಾಗಿ ಇದನ್ನು ಅನುವಾದಿಸಿ ಹರಿವಾಯುಗಳ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಅಖಿಲ ಭಾರತ ಮಾಧ್ವ ಮಹಾ ಮಂಡಲವು ಆರಂಭಿಸಿದ ಸರ್ವಮೂಲ ಅನುವಾದ ಯೋಜನೆಯು ಯಶಸ್ವಿಯಾಗಿ ಮುನ್ನಡೆದು ಬೇಗನೆ ಪೂರ್ಣಗೊಳ್ಳಲೆಂದು ಅಪೇಕ್ಷಿಸುತ್ತೇವೆ.

ಉಡುಪಿ
ದಿನಾಂಕ 02.02.2001

ಶ್ರೀ ಶ್ರೀವಿಶ್ವೇಶತೀರ್ಥಶ್ರೀಪಾದರು
ಪರ್ಯಾಯ ಶ್ರೀ ಪೇಜಾವರ ಮಠ, **ಉಡುಪಿ.**
ಸಂರಕ್ಷಕರು, ಅ.ಭಾ.ಮಾ.ಮ.**ಮಂಡಲ.**

ಒಳಗೇನಿದೆ ?

ಅಧ್ಯಾಯ ೨೩

(ವಿರಾಟಪರ್ವ)

ವಿರಾಟ ನಗರದಲ್ಲಿ ಪಾಂಡವರು **1**

ನಾರಾಯಣನ ಅನುಗ್ರಹದಿಂದ ಪಾಂಡವರು ವನವಾಸವನ್ನು ಪೂರೈಸಿ ವಿರಾಟನಗರದಲ್ಲಿ ಅಜ್ಞಾತವಾಸವನ್ನು ಪ್ರಾರಂಭಿಸಿದರು. ಧರ್ಮರಾಜ ಯತಿವೇಷ ಧರಿಸಿದ. ಭೀಮ ಅಡಿಗೆಯವನಾದ. ಅರ್ಜುನ ಬೃಹನ್ನಲೆಯಾಗಿ ಅಂತಃಪುರದ ಸ್ತ್ರೀಯರಿಗೆ ನಾಟ್ಯವಿದ್ಯೆ ಕಲಿಸತೊಡಗಿದ. ನಕುಲ ಅಶ್ವಪಾಲಕನಾದ. ಸಹದೇವ ಗೋಶಾಲೆಗೆ ಅಧ್ಯಕ್ಷನಾದ. ಕ್ಷತ್ರಿಯ ಗೃಹಸ್ಥನಿಗೆ ಪರಪಾಕ ಪ್ರಶಸ್ತವಲ್ಲ ಎಂದು ಭೀಮ ತಾನೇ ಶೂದ್ರವೇಷದಲ್ಲಿ ಅಡಿಗೆಯವನಾದ. ಭೀಮನ ಮಡದಿ ದ್ರೌಪದಿ ಭೀಮನಂತೆಯೆ ಶೂದ್ರವೇಷ ಧರಿಸಿ ಸೈರಂಧ್ರಿಯಾದಳು.

ಮಲ್ಲಯುದ್ಧ **12**

ಅಜ್ಞಾತವಾಸದ ಮೂರು ತಿಂಗಳುಗಳು ಕಳೆದಾಗ ವಿರಾಟನಗರಕ್ಕೆ ಜೀಮೂತನೆಂಬ ಮಹಾಮಲ್ಲ ಬಂದ. ವಿರಾಟನ ಜಟ್ಟಿಗಳು ಭಯಗೊಂಡು ಮುಂದೆ ಬಾರದಿದ್ದಾಗ ಭೀಮನೆ ಹೋರಾಡಿ ಆ ಮಲ್ಲನನ್ನು ಗುದ್ದಿ ಕೊಂದ. ವಿರಾಟನಿಗೆ ಕೀರ್ತಿತಂದ.

ಕೀಚಕ ವಧ **17**

ಅಜ್ಞಾತವಾಸ ಇನ್ನೂ ಎರಡು ತಿಂಗಳು ಬಾಕಿ ಇದ್ದಾಗ ವಿರಾಟನ ಮೈದುನ ಕೀಚಕ ದಿಗ್ವಿಜಯ ಮುಗಿಸಿಕೊಂಡು ನಗರಕ್ಕೆ ಹಿಂತಿರುಗಿದ. ದ್ರೌಪದಿಯನ್ನು ಕಂಡು ಮೋಹಪರವಶನಾದ. ಭೀಮ ಅವನನ್ನು ರಾತ್ರಿಯಲ್ಲಿ ನಾಟ್ಯಶಾಲೆಗೆ ಕರೆಸಿ ಗುದ್ದಿ ಕೊಂದ. ಬೆಳಗ್ಗೆ ಉಪಕೀಚಕರು ಅವನ ಹೆಣವನ್ನು ಒಯ್ಯುತ್ತ ದ್ರೌಪದಿಯನ್ನೂ ಜೊತೆಗೆ ಸುಡಲು ಯತ್ನಿಸಿದರು. ಭೀಮ ಅವರೆಲ್ಲರನ್ನೂ ಕೊಂದ.

ದಕ್ಷಿಣ ಗೋಗ್ರಹಣ **23**

ಕೀಚಕ ವಧೆ ಭೀಮನೆ ಮಾಡಿದ್ದೆಂದು ಅನುಮಾನಪಟ್ಟು ಕೌರವರು ವಿರಾಟನ ಗೋವುಗಳನ್ನು ಸೆರೆಹಿಡಿದರು, ಈಗ ಕೀಚಕನಿಲ್ಲ, ಪಾಂಡವರಿದ್ದರೆ ಅವರೇ ಬಿಡಿಸಿಕೊಳ್ಳಲು ಬರುತ್ತಾರೆ ಎಂದು. ಅಷ್ಟರಲ್ಲಿ ಅಜ್ಞಾತವಾಸ ಪೂರ್ಣವಾಗಿತ್ತು. ಆಗಿಲ್ಲ ಎಂದರು ಕೌರವರು. ರಾತ್ರಿಯಲ್ಲಿ ಕೌರವರ ಕಡೆಯ ಸುಶರ್ಮ ದಕ್ಷಿಣದಿಕ್ಕಿನ ಗೋವುಗಳನ್ನೂ ಬೆಳಿಗ್ಗೆ ಕೌರವರು ಸ್ವತಃ ಉತ್ತರ ದಿಕ್ಕಿನ ಗೋವುಗಳನ್ನೂ ಹಿಡಿಯಲು ನಿರ್ಧರಿಸಿದರು. ಸುಶರ್ಮನನ್ನು ನಿಗ್ರಹಿಸಲು ಅರ್ಜುನ ಹೊರತು ಎಲ್ಲ ಪಾಂಡವರೂ ಹೋದರು. ಸುಶರ್ಮನಿಗೆ ವಿರಾಟ ಸೆರೆ ಸಿಕ್ಕಾಗ ಭೀಮನೆ ಬಿಡಿಸಿದ.

ಉತ್ತರ ಗೋಗ್ರಹಣ 25

ಬೆಳಿಗ್ಗೆ ನಗರದಲ್ಲಿ ಉತ್ತರಕುಮಾರನೊಬ್ಬನೆ ಇದ್ದ. ಆತ ಬೃಹನ್ನಳೆಯನ್ನು ಸಾರಥಿಯನ್ನಾಗಿಮಾಡಿಕೊಂಡು ಕೌರವರ ಸೈನ್ಯವನ್ನು ಕಂಡೊಡನೆ ಭಯದಿಂದ ಪಲಾಯನ ಮಾಡತೊಡಗಿದ. ಅರ್ಜುನ ಅವನನ್ನು ತಡೆದು ನಿಲ್ಲಿಸಿದ. ಶಮಿಯ ಬುಡದಲ್ಲಿ ಗಾಂಡೀವವನ್ನೂ ಕಪಿಧ್ವಜ ರಥವನ್ನೂ ಪರಿಗ್ರಹಿಸಿದ. ಉತ್ತರನ ಸಾರಥ್ಯದಲ್ಲಿ ಏಕಾಂಗಿಯಾಗಿ ಕೌರವರೊಡನೆ ಹೋರಾಡಿ ಸಂಮೋಹನಾಸ್ತ್ರದಿಂದ ಎಲ್ಲರನ್ನೂ ಮೋಹಗೊಳಿಸಿ ಗೋವುಗಳನ್ನು ಬಿಡಿಸಿದ.

ಅಭಿಮನ್ಯು ವಿವಾಹ 30

ಮರುದಿನ ಬೆಳಿಗ್ಗೆ ಪಾಂಡವರು ನಿಜರೂಪದಲ್ಲಿ ತೋರಿಕೊಂಡರು. ಶ್ರೀಕೃಷ್ಣ ದ್ರುಪದ ಮುಂತಾದವರನ್ನು ಕರೆಸಿಕೊಂಡು ವಿರಾಟ ಅಭಿಮನ್ಯುವಿಗೆ ಉತ್ತರೆಯನ್ನು ಕೊಟ್ಟು ವಿವಾಹ ಮಾಡಿದ.

ಅಜ್ಞಾತವಾಸ ಪೂರ್ತಿ 32

ಪಾಂಡವರ ಅಜ್ಞಾತವಾಸ ಭಂಗವಾಯಿತು. ತಿರುಗಿ ಅವರು ಕಾಡಿಗೆ ಹೋಗಲಿ ಎನ್ನಲು ತೊಡಗಿದರು, ಕೌರವರು. ಚಾಂದ್ರಮಾನ ಗಣಿತರೀತ್ಯಾ ಪೂರ್ತಿಯಾಗಿದೆ ಎಂದು ಭೀಷ್ಮ ಮುಂತಾದವರು ಹೇಳಿದರೂ ಅವರು ಕೇಳಲಿಲ್ಲ.

ಅಧ್ಯಾಯ ೨೪

(ಉದ್ಯೋಗ ಪರ್ವ)

ಹಸ್ತಿನಾವತಿಗೆ ರಾಯಭಾರ 39

ದ್ರುಪದ ತನ್ನ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ರಾಯಭಾರಕ್ಕಾಗಿ ಕಳಿಸಿದ. ಪುರೋಹಿತ ಭೀಮಾರ್ಜುನರ ಬಲ ಪರಾಕ್ರಮಗಳನ್ನು ಬಣ್ಣಿಸಿ ಪಾಂಡವರಿಗೆ ಅರ್ಧರಾಜ್ಯ ಕೊಡಲು ಕೇಳಿಕೊಂಡ. ಧೃತರಾಷ್ಟ್ರ ಒಪ್ಪಲಿಲ್ಲ.

ಶ್ರೀಕೃಷ್ಣ ಯಾವ ಕಡೆಗೆ? 42

ಅರ್ಜುನ ದುರ್ಯೋಧನರಿಬ್ಬರೂ ಏಕಕಾಲದಲ್ಲಿ ಕೃಷ್ಣನ ಬಳಿಗೆ ಬಂದು ಸಹಾಯ ಕೇಳಿದರು. ನಿರಾಯುಧನಾದ ಒಬ್ಬ ಕೃಷ್ಣ ಬೇಕೆ ಅಥವಾ ಹತ್ತು ಲಕ್ಷ ನಾರಾಯಣೀ ಸೈನ್ಯ ಬೇಕೆ? ಎಂದರೆ ಅರ್ಜುನ ಕೃಷ್ಣನೆ ಇರಲಿ ಎಂದ. ಸೈನ್ಯ ಸಿಕ್ಕಿತೆಂದು ಹರ್ಷಪಟ್ಟ ದುರ್ಯೋಧನ. ಬಲರಾಮ ಎರಡೂ ಪಕ್ಷಗಳನ್ನು ಸೇರದೆ ತೀರ್ಥಯಾತ್ರೆಗೆ ಹೊರಟುಹೋದ.

ಸೈನ್ಯ ಜಮಾವಣೆ **45**

ಪಾಂಡವರ ಪಕ್ಷದಲ್ಲಿ ವಿರಾಟ ದ್ರುಪದ ಕಾಶಿರಾಜ ಪುರುಜಿತ್ ಕುಂತಿಭೋಜ ಚೇಕಿತಾನ ಸಾತ್ಯಕಿ ಮುಂತಾದವರಿಂದ ಕೂಡಿದ ಏಳು ಅಕ್ಷೌಹಿಣಿ ಸೈನ್ಯ ಕೂಡಿತು. ಕೌರವರ ಪಕ್ಷದಲ್ಲಿ ಭೀಷ್ಮ ದ್ರೋಣ ಕರ್ಣ ಶಲ್ಯ ಅಶ್ವತ್ಥಾಮ ಕೃಪ ಮುಂತಾದವರಿಂದ ಕೂಡಿದ ಹನ್ನೊಂದು ಅಕ್ಷೌಹಿಣಿ ಸೈನ್ಯ ಸೇರಿತು.

ಸಂಜಯನ ರಾಯಭಾರ **55**

ಗುರುಹಿರಿಯರನ್ನು ಯುದ್ಧದಲ್ಲಿ ಹಿಂಸಿಸುವುದು ಅಧರ್ಮ ಎಂದು ಪಾಂಡವರಿಗೆ ಧೃತರಾಷ್ಟ್ರ ಸಂಜಯನ ಮೂಲಕ ಹೇಳಿ ಕಳಿಸಿದ. ನಮಗೆ ಐದು ಗ್ರಾಮಗಳನ್ನಾದರೂ ಕೊಡು, ಕೌರವರ ಎಲ್ಲ ಅಪರಾಧಗಳನ್ನೂ ನಾವು ಕ್ಷಮಿಸಲು ಸಿದ್ಧರಿದ್ದೇವೆ. ಇದಕ್ಕೂ ಒಪ್ಪದಿದ್ದರೆ ಯುದ್ಧ ಅನಿವಾರ್ಯ ಎಂದರು ಪಾಂಡವರು.

ವಿದುರನೀತಿ, ಸನತ್ಸುಜಾತೀಯ **57**

ಕುರುಕುಲದ ವಿನಾಶ ಸನ್ನಿಹಿತವಾಗಿದೆ ಎಂದು ಸಂಜಯ ಎಚ್ಚರಿಸಿದಾಗ ಧೃತರಾಷ್ಟ್ರನಿಗೆ ರಾತ್ರಿ ನಿದ್ರೆ ಬರಲಿಲ್ಲ. ವಿದುರನನ್ನು ಕರೆಸಿ ನೀತಿಯನ್ನು ಕೇಳಿದ. ಸನತ್ಸುಜಾತರನ್ನು ಕರೆಸಿ ಅಧ್ಯಾತ್ಮವನ್ನು ಕೇಳಿದ.

ಭೀಮನಿಗೆ ಭೀತಿ! **60**

ಶ್ರೀಕೃಷ್ಣನನ್ನು ಸಂಧಾನಕ್ಕೆ ಹೋಗಲು ಕೇಳಿಕೊಂಡ ಧರ್ಮರಾಜ. ಶ್ರೀಕೃಷ್ಣ ಐವರು ಪಾಂಡವರನ್ನೂ ದ್ರೌಪದಿಯನ್ನೂ ಸಂಧಿಯ ಬಗ್ಗೆ ಅಭಿಪ್ರಾಯ ಕೇಳಿದಾಗ ಭೀಮ ಸಂಧಿಯೆ ಇರಲಿ ಎಂದ. ಶತ್ರುಭಯವೆ? ಎಂದು ಶ್ರೀಕೃಷ್ಣ ಕೇಳಿದಾಗ ಭೀಮ, 'ಕುಲನಾಶ ಪಾಂಡವರಿಂದಾಯಿತೆಂಬ ಅಪಕೀರ್ತಿಯ ಭಯ' ಎಂದ. ದ್ರೌಪದಿ 'ಯುದ್ಧವಾಗಲೆ ಬೇಕು, ಪಾಪಿಗಳಿಗೆ ಶಿಕ್ಷೆಯಾಗಲೆ ಬೇಕು' ಎಂದಳು.

ವಿದುರನ ಆತಿಥ್ಯ **65**

ಶ್ರೀಕೃಷ್ಣ ಹಸ್ತಿನಾವತಿಗೆ ತೆರಳಿದ. ಜೊತೆಗೆ ಪರಶುರಾಮ ವೇದವ್ಯಾಸರೂ ಬೇರೆ ಮುನಿಗಳೂ ಹೋದರು. ಧೃತರಾಷ್ಟ್ರನ ಅರಮನೆಯಲ್ಲಿ ಶ್ರೀಕೃಷ್ಣನಿಗೆ ಸತ್ಕಾರ ನಡೆಯಿತು. ಬಳಿಕ ಶ್ರೀಕೃಷ್ಣ ದುರ್ಯೋಧನನ ಅರಮನೆಗೆ ಬಂದಾಗ ಆತ ಭೋಜನಕ್ಕೆ ಆಮಂತ್ರಣ ನೀಡಿದ. ಶ್ರೀಕೃಷ್ಣ ಅದನ್ನು ನಿರಾಕರಿಸಿ, ವಿದುರನ ಮನೆಯಲ್ಲಿ ಉಂಡ.

ವಿಶ್ವರೂಪ ದರ್ಶನ **70**

ಪಾಂಡವರಿಗೆ ಅರ್ಧರಾಜ್ಯ ಕೊಡುವುದು ನ್ಯಾಯವೆಂದು ಶ್ರೀಕೃಷ್ಣ ಸಭೆಯಲ್ಲಿ ಹೇಳಿದಾಗ

ಕೌರವರು ಅವನನ್ನು ಬಂಧಿಸಲು ಯತ್ನಿಸಿದರು. ಶ್ರೀಕೃಷ್ಣ ವಿಶ್ವರೂಪ ತಾಳಿ ಭೀತಿಗೊಳಿಸಿದ. ಅವರು ಪಾಪಿಗಳು, ಕುಲನಾಶಕರೆಂಬುದನ್ನು ಲೋಕಕ್ಕೆ ತೋರಿಸಿದ.

ಕರ್ಣನ ಜನ್ಮರಹಸ್ಯ 77

ಶ್ರೀಕೃಷ್ಣ ಕರ್ಣನ ಬಳಿ ಏಕಾಂತದಲ್ಲಿ ಅವನ ಜನ್ಮರಹಸ್ಯವನ್ನು ಹೇಳಿ ಪಾಂಡವ ಪಕ್ಷಕ್ಕೆ ಬಾ ಎಂದ. ಕರ್ಣ ಒಪ್ಪಲಿಲ್ಲ.

ಕುಂತಿ ಮಗನಲ್ಲಿ ಬೇಡಿದಳು 79

ಕುಂತಿ ಕರ್ಣನ ಬಳಿಗೆ ಬಂದು ಪಾಂಡವರ ಜೊತೆ ಸೇರೆಂದು ಪ್ರೀತಿಯಿಂದ ಕೇಳಿದಳು. ಕರ್ಣ ಒಪ್ಪಲಿಲ್ಲ. ಆದರೂ ಅರ್ಜುನನೊಬ್ಬನನ್ನು ಹೊರತು ಬೇರೆ ನಾಲ್ವರು ಪಾಂಡವರನ್ನೂ ಕೊಲ್ಲಲಾರೆ ಎಂದು ಮಾತುಕೊಟ್ಟ.

ಅಧ್ಯಾಯ ೨೫
(ಭೀಷ್ಮ ಪರ್ವ)

ಮೊದಲನೆ ದಿನದ ಯುದ್ಧ – ಗೀತೋಪದೇಶ 83

ಅರ್ಜುನ ಬಾಂಧವ ಮೋಹಕ್ಕೊಳಗಾಗಿ ವಿಷಾದಪಟ್ಟಾಗ ಶ್ರೀಕೃಷ್ಣ ಗೀತೋಪದೇಶ ಮಾಡಿ ವಿಶ್ವರೂಪವನ್ನು ತೋರಿದ. ಬಂಧುಗಳು ಹೊಡೆಯುವಾಗ ಪ್ರತಿಯಾಗಿ ಕೂಡಲೆ ಹೊಡೆಯಬಾರದೆಂದು ಭೀಮ ಸುಮ್ಮನೆ ನಿಂತಾಗ ಅವನ ರಕ್ಷಣೆಗೆಂದು ಅಭಿಮನ್ಯು ಮುಂತಾದವರು ಬಂದು ತಾವೇ ಪೀಡಿತರಾದರು. ಆಗ ಭೀಮನೆ ಬಿಲ್ಲುಗಾರಿಕೆಯನ್ನು ತೋರಿ ಶತ್ರುಗಳನ್ನು ಓಡಿಸಿದ. ಓಡುತ್ತಿದ್ದ ತಮ್ಮ ಸೈನ್ಯವನ್ನು ಭೀಷ್ಮ ಮೊದಲಾದವರು ತಡೆದು ನಿಲ್ಲಿಸಿದರು.

ದ್ವಂದ್ವ ಯುದ್ಧ 92

ದ್ರೋಣ-ದ್ರುಪದ, ಸಾತ್ಯಕಿ-ಕೃತವರ್ಮ, ದುಃಶಾಸನ-ಸಹದೇವ, ನಕುಲ-ವಿಕರ್ಣ, ದ್ರೌಪದೀಪುತ್ರರು-ದುರ್ಮುಖ ಮುಂತಾದವರು- ಹೀಗೆ ದ್ವಂದ್ವ ಯುದ್ಧ ನಡೆದಾಗ ಸಾತ್ಯಕಿ ಹೊರತು ಇನ್ನೆಲ್ಲ ಪಾಂಡವ ಪಕ್ಷದವರೂ ಸೋತರು. ಶಲ್ಯ ಉತ್ತರಕುಮಾರನನ್ನು ಕೊಂದ. ಭೀಷ್ಮ-ಸೌಮದತ್ತಿಗಳನ್ನು ಅರ್ಜುನ-ಅಭಿಮನ್ಯುಗಳು ಇದಿರಿಸಿದರು. ಅರ್ಜುನ ಬಹಳ ಸೌಮ್ಯವಾಗಿಯೆ ಯುದ್ಧ ಮಾಡಿದ. ಅದನ್ನು ಕಂಡು ಕೋಪದಿಂದ ಧರ್ಮರಾಜ ಸೈನ್ಯವನ್ನು ಹಿಂದೆ ಕರೆಸಿಕೊಂಡ.

ಎರಡನೆ ದಿನದ ಯುದ್ಧ: ಕರ್ಣ ರಣರಂಗಕ್ಕೆ ಕಾಲಿಡಲಿಲ್ಲ 94

ಭೀಷ್ಮ ಕರ್ಣನನ್ನು ಅರ್ಧರಥನೆಂದು ಹಳಿದುದರಿಂದ ಭೀಷ್ಮನ ಪತನವಾಗುವವರೆಗೂ

ತಾನು ರಣರಂಗಕ್ಕೆ ಕಾಲಿಡಲಾರೆನೆಂದ ಕರ್ಣ. ಭೀಷ್ಮ ಅದ್ಭುತ ಪರಾಕ್ರಮ ತೋರಿದ. ಭೀಮಾರ್ಜುನರು ಗೌರವ ಭಾವನೆಯಿಂದಲೆ ಸೌಮ್ಯವಾಗಿ ಯುದ್ಧ ಮಾಡಿದರು.

ಮೂರನೆ ದಿನದ ಯುದ್ಧ: ಶ್ರೀಕೃಷ್ಣ ಚಕ್ರವೆತ್ತಿದ 96

ಅರ್ಜುನ ಭೀಷ್ಮನೊಡನೆ ಮೃದುವಾಗಿಯೆ ಯುದ್ಧ ಮಾಡುವುದನ್ನು ಕಂಡು ಶ್ರೀಕೃಷ್ಣ ಚಕ್ರವನ್ನೆತ್ತಿ ತಾನೆ ಭೀಷ್ಮನ ಕಡೆಗೆ ನುಗ್ಗಿದ. ಭೀಷ್ಮ ಧನುಷ್ಟಂಕಾರ ಮಾಡುತ್ತ 'ಬಾ! ನನ್ನನ್ನು ವಧಿಸು! ನನಗೆ ಕೀರ್ತಿ ಬರಲಿ' ಎಂದ. ಅರ್ಜುನ ಶ್ರೀಕೃಷ್ಣನ ಕಾಲು ಹಿಡಿದು ಕೇಳಿಕೊಂಡಾಗ ಹಿಂತಿರುಗಿದ. ಬಳಿಕ ಭೀಷ್ಮ ಯುದ್ಧದಲ್ಲಿ ಅನೇಕಬಾರಿ ಅರ್ಜುನನಿಗೆ ಸೋತ. ಆದರೂ ತಾನು ಗೈದ ಪ್ರತಿಜ್ಞೆಯಂತೆ ಪ್ರತಿದಿನವೂ ಹತ್ತು ಸಾವಿರಕ್ಕೆ ಕಡಿಮೆ ಇಲ್ಲದಂತೆ ರಥಿಕರನ್ನು ಕೊಂದ.

ನಾಲ್ಕನೆ ದಿನದ ಯುದ್ಧ: ಇಪ್ಪತ್ತೈದು ಕೌರವರ ಸಂಹಾರ 99

ಭೀಮ ಭೀಷ್ಮದ್ರೋಣರ ಸಾರಥಿಗಳನ್ನು ಕೆಡವಿ ವ್ಯೂಹವನ್ನು ಭೇದಿಸಿ ಹೊಕ್ಕು ಇಪ್ಪತ್ತೈದು ಮಂದಿ ಧೃತರಾಷ್ಟ್ರಪುತ್ರರನ್ನು ಕೊಂದ. ದುರ್ಯೋಧನನ ರಥ ಆಯುಧಗಳನ್ನೂ ನಾಶಮಾಡಿ ಅವನಿಗೆ ತೀವ್ರ ಗಾಯಗೊಳಿಸಿ ಮೂರ್ಛೆ ಬರಿಸಿದ.

ಕೃಷ್ಣಾರ್ಜುನರ ಮಹಿಮೆ 100

ರಾತ್ರಿಯಲ್ಲಿ ದುರ್ಯೋಧನ ಭೀಷ್ಮನ ಬಳಿಯಲ್ಲಿ 'ಪ್ರತಿದಿನ ತನಗೇ ಪರಾಭವವೇಕೆ?' ಎಂದ. 'ಪಾಂಡವರು ದೇವತೆಗಳು, ಶ್ರೀಕೃಷ್ಣ ನಾರಾಯಣ. ಅದರಿಂದ ಸಂಧಿ ಮಾಡಿಕೊಳ್ಳು' ಎಂದು ಭೀಷ್ಮ ಬೋಧಿಸಿದಾಗ ದುರ್ಯೋಧನ ಕೈಮುಗಿದ. ಇದು ದಂಭಾಚಾರ. ಏಕೆಂದರೆ ಮರುದಿನ ಯುದ್ಧಕ್ಕೇ ಹೊರಟ.

ಐದನೆ ದಿನದ ಯುದ್ಧ: ಭೀಮನ ಪರಾಕ್ರಮ 101

ಧೃಷ್ಟದ್ಯುಮ್ನನ ಸಂಮೋಹನಾಸ್ತ್ರವನ್ನು ವಿಜ್ಞಾನಾಸ್ತ್ರದಿಂದ ದ್ರೋಣ ಶಮನಗೊಳಿಸಿದ. ಧೃಷ್ಟದ್ಯುಮ್ನನನ್ನು ದುರ್ಯೋಧನ ಬಹಳ ಪೀಡಿಸಿದಾಗ ಭೀಮ ದುರ್ಯೋಧನನ ರಥ ಆಯುಧಗಳನ್ನು ನಾಶಪಡಿಸಿ ಬಾಣಗಳಿಂದ ಮೂರ್ಛೆಗೊಳಿಸಿದ. ಕೃಪ ಅವನನ್ನು ತನ್ನ ರಥದಲ್ಲಿ ಒಯ್ದ. ಅರ್ಜುನ ಇಪ್ಪತ್ತೇಳು ಸಾವಿರ ರಥಿಕರನ್ನು ಕೊಂದ. ಭೂರಿಶ್ರವ ಸಾತ್ಯಕಿಯ ಹತ್ತುಮಕ್ಕಳನ್ನು ಕೊಂದ. ಅವರಿಬ್ಬರೂ ಪರಸ್ಪರ ರಥಗಳನ್ನು ನಾಶಮಾಡಿಕೊಂಡು ಖಡ್ಗಯುದ್ಧಕ್ಕೆ ತೊಡಗಿದಾಗ ಸಾತ್ಯಕಿಯನ್ನು ಭೀಮನೂ ಭೂರಿಶ್ರವನನ್ನು ದುರ್ಯೋಧನನೂ ತಮ್ಮ ರಥದಲ್ಲಿ ದೂರ ಒಯ್ದರು.

ಆರನೆ ದಿನದ ಯುದ್ಧ: ಭೀಷ್ಮ ಪರಾಜಯ 104

ಭೀಷ್ಮಾರ್ಜುನರಿಗೆ ಭಾರಿ ಯುದ್ಧ ನಡೆಯಿತು. ಭೀಷ್ಮನಿಗೆ ಪರಾಜಯವಾಯಿತು.

ಏಳನೇ ದಿನದ ಯುದ್ಧ: ಘಟೋತ್ಕಚನ ಪರಾಕ್ರಮ **104**

ಭಗದತ್ತನಲ್ಲಿದ್ದ ವೈಷ್ಣವಾಸ್ತ್ರದ ಮೇಲಿನ ಗೌರವ ಬುದ್ಧಿಯಿಂದ ಭೀಮ ತಾನು ಅವನ ಇದಿರಿಗೆ ಹೋಗದೆ ಘಟೋತ್ಕಚನನ್ನು ಕಳಿಸಿದ. ಘಟೋತ್ಕಚ ಒಬ್ಬನೆ ಮಾಯೆಯಿಂದ ನಾಲ್ಕು ಆನೆಗಳನ್ನೇರಿ ನಾಲ್ಕು ದಿಕ್ಕುಗಳಿಂದ ಬಂದು ಭಗವದತ್ತನನ್ನೂ ಅವನ ಸುಪ್ರತೀಕ ಗಜವನ್ನೂ ಬಹಳ ಪೀಡಿಸಿದಾಗ ಕೌರವರು ಬೇಗನೆ ಸೈನ್ಯವನ್ನು ಹಿಂದೆ ಕರೆಸಿಕೊಂಡರು.

ಎಂಟನೆ ದಿನದ ಯುದ್ಧ: ಇರಾವಂತನ ವಧ **108**

ಅರ್ಜುನನ ಪುತ್ರ ಇರಾವಂತ ಶಕುನಿಯ ಆರು ಮಂದಿ ಸೋದರರನ್ನು ಕೊಂದ. ಅಲಂಬುಸರಾಕ್ಷಸನಿಂದ ಹತನಾದ. ಅಲಂಬುಸನನ್ನು ಘಟೋತ್ಕಚ ಓಡಿಸಿದ. ಘಟೋತ್ಕಚನನ್ನು ದುರ್ಯೋಧನ ದ್ರೋಣ ಶಲ್ಯ ಅಶ್ವತ್ಥಾಮ ಮುಂತಾದವರೆಲ್ಲರೂ ಆಕ್ರಮಿಸಿದರು. ಭೀಮ ಘಟೋತ್ಕಚನ ರಕ್ಷಣೆಗೆ ನಿಂತಾಗ ಅವರೆಲ್ಲರೂ ಪಲಾಯನ ಮಾಡಿದರು.

ಒಂಭತ್ತನೆ ದಿನದ ಯುದ್ಧ : ಅಭಿಮನ್ಯು ಪರಾಕ್ರಮ **114**

ಅಭಿಮನ್ಯು-ದುರ್ಯೋಧನರ ಯುದ್ಧ ಅದ್ಭುತವಾಗಿತ್ತು. ಅಭಿಮನ್ಯುವಿನ ಸಾರಥಿಯನ್ನು ದುರ್ಯೋಧನ ಕೊಂದಾಗ ಭೀಮ ದುರ್ಯೋಧನನ ಕುದುರೆಗಳನ್ನು ಕೊಂದ. ಭೀಷ್ಮ ಹದಿನಾಲ್ಕು ಸಾವಿರ ಮಹಾರಥರನ್ನು ಕೊಂದ. ದ್ರೋಣ ವಿರಾಟನ ಮಗನಾದ ಶಂಖನನ್ನು ಕೊಂದ.

ಹತ್ತನೆ ದಿನದ ಯುದ್ಧ : ಭೀಷ್ಮ ಪತನ **118**

ರಾತ್ರಿಯಲ್ಲಿ ಭೀಷ್ಮನ ಶಿಬಿರಕ್ಕೆ ಪಾಂಡವರು ಶ್ರೀಕೃಷ್ಣನೊಂದಿಗೆ ಬಂದರು. ಯುದ್ಧದಲ್ಲಿ ಶಿಖಂಡಿಯನ್ನು ಮುಂದೆ ನಿಲ್ಲಿಸಲು ಅನುಮತಿ ಕೇಳಿದರು. ಭೀಷ್ಮ ಆಗಲಿ ಎಂದ. ಅದರಂತೆ ಮರುದಿನ ಅರ್ಜುನ ಶಿಖಂಡಿಯನ್ನು ಮುಂದೆ ನಿಲ್ಲಿಸಿ ಹಿಂದಿನಿಂದ ಬಾಣಗಳ ಮಳೆಗರೆದು ಭೀಷ್ಮನನ್ನು ಶರಮಂಚದಲ್ಲಿ ಕೆಡವಿದ. ಬಾಣಗಳಿಂದಲೆ ತಲೆದಿಂಬು ಮಾಡಿಕೊಟ್ಟ. ವಾರುಣಾಸ್ತ್ರದಿಂದ ನೆಲವನ್ನು ಭೇದಿಸಿ ಭೀಷ್ಮನ ಬಾಯಿಗೇ ನೆಲದೊಳಗಿಂದ ನೀರು ಬಂದು ಬೀಳುವಂತೆ ಮಾಡಿದ. ಇಂಥ ಅಸ್ತ್ರವೇತ್ತರಾದ ಪಾಂಡವರೊಡನೆ ಸಂಧಿಮಾಡಿಕೊಳ್ಳೆಂದು ದುರ್ಯೋಧನನಿಗೆ ಭೀಷ್ಮ ಉಪದೇಶಿಸಿದ.

ಅಧ್ಯಾಯ ೨೬

(ದ್ರೋಣಪರ್ವ)

ಕರ್ಣನಿಗೆ ಭೀಷ್ಮನ ಅನುಮತಿ **131**

ಕರ್ಣ ಕಣ್ಣೀರಿಡುತ್ತ ಭೀಷ್ಮನ ಬಳಿಗೆ ಬಂದು ತಾನು ಅವನನ್ನು ಅವಮಾನಿಸಿದ್ದಕ್ಕೆ ಕ್ಷಮೆ ಬೇಡಿ ಯುದ್ಧಕ್ಕೆ ಇಳಿಯಲು ಅನುಮತಿ ಕೇಳಿದ. ಭೀಷ್ಮ ಅವನನ್ನು ಪ್ರಶಂಸಿಸಿ ಅನುಮತಿ ನೀಡಿದ.

ಹನ್ನೊಂದನೆ ದಿನದ ಯುದ್ಧ - ದ್ರೋಣನ ಪ್ರತಿಜ್ಞೆ **132**

'ಧರ್ಮರಾಜನನ್ನು ಕೊಲ್ಲಬೇಡಿ, ಕೊಂದರೆ ಕೃಷ್ಣ ಸುಮ್ಮನಿರಲಾರ. ಅದರಿಂದ ಸೆರೆಹಿಡಿದು ತನ್ನಿ. ಜೂಜಾಡಿ ತಿರುಗಿ ಕಾಡಿಗೆ ಕಳಿಸುತ್ತೇನೆ' ಎಂದು ದುರ್ಯೋಧನ ದ್ರೋಣನಿಗೆ ಹೇಳಿ ಸೆರೆ ಹಿಡಿವ ಪ್ರತಿಜ್ಞೆಯನ್ನು ಅವನಿಂದ ಮಾಡಿಸಿದ. ಭೀಮಾರ್ಜುನರ ರಕ್ಷಣೆಯಿದ್ದುದರಿಂದ ಅವನನ್ನು ಸೆರೆಹಿಡಿಯುವುದು ದ್ರೋಣನಿಗೆ ಶಕ್ಯವಾಗಲಿಲ್ಲ. ಭೀಮನೊಡನೆ ಗದಾಯುದ್ಧದಲ್ಲಿ ಶಲ್ಯ ಮೂರ್ಛಿತನಾದಾಗ ಅವನನ್ನು ಕೃಪ ತನ್ನ ರಥದಲ್ಲಿ ಒಯ್ದ.

ಹನ್ನೆರಡನೆ ದಿನದ ಯುದ್ಧ - ಸಂಶಪ್ತಕರ ಶಪಥ **135**

ದ್ರೋಣನಿಗೆ ಧರ್ಮರಾಜನನ್ನು ಸೆರೆಹಿಡಿಯಲು ಶಕ್ಯವಾಗಲಿ ಎಂದು ಸಂಶಪ್ತಕರು ಅರ್ಜುನನನ್ನು ಅವನಿಂದ ದೂರದಲ್ಲಿ ತಡೆದರು. ಅರ್ಜುನನ ವಧೆ ಮಾಡದೆ ಹೋದರೆ ಪಂಚಮಹಾಪಾತಕಿಗಳ ಘೋರ ನರಕ ನಮಗಾಗಲಿ ಎಂದು ಶಪಥ ಮಾಡಿದ್ದರಿಂದ ಅವರು ಸಂಶಪ್ತಕರೆನಿಸಿದರು. ಅರ್ಜುನ ಧರ್ಮರಾಜನ ರಕ್ಷಣೆಗೆ ಬಾರದಿದ್ದಲ್ಲಿ ಅಣ್ಣತಮ್ಮಂದಿರೊಳಗೆ ಒಡಕು ಮೂಡಬಹುದೆಂಬ ಎಣಿಕೆಯೂ ದುರ್ಯೋಧನನದಾಗಿತ್ತು. ಅರ್ಜುನ ಸಂಮೋಹನಾಸ್ತ್ರದಿಂದ ಸಂಶಪ್ತಕರನ್ನು ಮೋಹಗೊಳಿಸಿ ಪರಸ್ಪರ ಹೊಡೆದುಕೊಳ್ಳುವಂತೆ ಭ್ರಮೆಯಲ್ಲಿ ಬೀಳಿಸಿ ಹೊರಟುಹೋದ.

ಭಗದತ್ತನ ವೈಷ್ಣವಾಸ್ತ್ರ **137**

ಭಗದತ್ತ ವೈಷ್ಣವಾಸ್ತ್ರವನ್ನು ಭೀಮನ ಮೇಲೆ ಪ್ರಯೋಗಿಸಿ ವ್ಯರ್ಥಗೊಳಿಸಬಹುದು. ಅದರಿಂದ ತಾನೆ ಅದನ್ನು ಧರಿಸುವುದಾಗಿ ಶ್ರೀಕೃಷ್ಣ ಸಂಕಲ್ಪಿಸಿದ. ಅರ್ಜುನನ ರಥವನ್ನು ಭಗದತ್ತನ ಮುಂದೆ ತಂದ. ಕ್ಷಿಪ್ರಗತಿಯಿಂದ ಚಲಿಸುವ ಆ ರಥವನ್ನು ಭಗದತ್ತನ ಆನೆಗೆ ಹಿಡಿಯಲಾಗಲಿಲ್ಲ. ಭಗದತ್ತ ವೈಷ್ಣವಾಸ್ತ್ರವನ್ನು ಎಸೆದ. ಅದನ್ನು ಶ್ರೀಕೃಷ್ಣ ತಾನೆ ಎದೆಯಲ್ಲಿ ಧರಿಸಿದ. ಬಳಿಕ ಅರ್ಜುನನ ಬಾಣಕ್ಕೆ ಭಗದತ್ತ ಬಲಿಯಾಗುತ್ತಾನೆ. ಅರ್ಜುನ ಶಕುನಿಯ ತಮ್ಮಂದಿರಾದ ಅಚಲ ವೃಷಕರನ್ನೂ ಕೊಂದು ಶಕುನಿಯ ಮಾಯೆಯನ್ನು ವಿಜ್ಞಾನಾಸ್ತ್ರದಿಂದ ನಾಶಪಡಿಸಿದ. ಅಶ್ವತ್ಥಾಮ ಮಾಹಿಷ್ಮತಿಯ ನೀಲನನ್ನು ಕೊಂದ.

ಹದಿಮೂರನೆ ದಿನದ ಯುದ್ಧ - ಅಭಿಮನ್ಯು ವಧ **146**

ಅರ್ಜುನನನ್ನು ದೂರ ಕಳಿಸಿದರೆ ಇನ್ನಾರಿಗೂ ಭೇದಿಸಲಾಗದಂಥ ಪದ್ಮವ್ಯೂಹವನ್ನು ರಚಿಸಿ ಪಾಂಡವರ ಕಡೆಯ ಒಬ್ಬ ಪ್ರಮುಖ ಮಹಾರಥನನ್ನು ಕೊಲ್ಲುವುದಾಗಿ ದ್ರೋಣ ಪ್ರತಿಜ್ಞೆ ಮಾಡಿದ. ಭೀಮ ವ್ಯೂಹವನ್ನು ಭೇದಿಸಬಲ್ಲವನೆ ಆದರೂ ಅದಕ್ಕಾಗಿ ಮಂತ್ರವನ್ನು ಬಳಸುವುದು ಕಾಮ್ಯಕರ್ಮವಾಗುವುದೆಂದು ಆತ ಅದನ್ನು ಒಲ್ಲ. ಅಭಿಮನ್ಯು ಭೇದಿಸಿ ಒಳಗೆ ಪ್ರವೇಶಿಸಿದ.

ಅವನ ಹಿಂದಿನಿಂದ ಭೀಮ ಮುಂತಾದವರು ಪ್ರವೇಶಿಸದಂತೆ ಶಿವ ವರದಿಂದ ಯುಕ್ತನಾದ ಜಯದ್ರಥ ತಡೆದ. ಅಭಿಮನ್ಯುವನ್ನು ತಾವೇ ನೇರವಾಗಿ ಕೊಲ್ಲಲು ದ್ರೋಣ ಮುಂತಾದವರಿಗೆ ಶ್ರೀಕೃಷ್ಣನ ಭಯವಿದ್ದಿತು. ಅದರಿಂದ ಎಲ್ಲರೂ ಕೂಡಿ ಹಿಂದಿನಿಂದ ಅವನ ರಥ ಕುದುರೆ ಧನುಸ್ಸುಗಳನ್ನು ಕಡಿದರು. ಆಗ ಗದಾಧಾರಿಯಾದ ಅಭಿಮನ್ಯು ಮತ್ತು ಗದಾಧಾರಿಯಾದ ದುಃಶಾಸನನ ಮಗ ಇಬ್ಬರೂ ಪರಸ್ಪರ ಹೋರಾಡಿ ಅಸುನೀಗಿದರು.

ಅರ್ಜುನನ ಪ್ರತಿಜ್ಞೆ - ಕೈಲಾಸ ಯಾತ್ರೆ **151**

ಧರ್ಮರಾಜ ಮುಂತಾದವರಿಗೆ ಈ ಪುತ್ರಶೋಕವನ್ನು ಮರೆಸಲು ವೇದವ್ಯಾಸರು ಹದಿನಾರು ರಾಜರ ಉಪಾಖ್ಯಾನಗಳನ್ನು ಹೇಳಿದರು. ಅರ್ಜುನ ಪ್ರತಿಜ್ಞೆ ಮಾಡಿದ. ನಾಳೆ ಸೂರ್ಯಾಸ್ತವಾಗುವುದರೊಳಗೆ ಜಯದ್ರಥನ ವಧ ಮಾಡುವೆನು ಇಲ್ಲವೆ, ಅಗ್ನಿಪ್ರವೇಶ ಮಾಡುವೆನು ಎಂದು. ರಾತ್ರಿ ಸ್ವಪ್ನದಲ್ಲಿ ಅರ್ಜುನನನ್ನು ಶ್ರೀಕೃಷ್ಣ ಕೈಲಾಸಕ್ಕೆ ಒಯ್ದು ಅಲ್ಲಿ ಶಿವನಿಂದ ಅವನಿಗೆ ಪುನಃ ಪಾಶುಪತಾಸ್ತ್ರ ಮಂತ್ರೋಪದೇಶವನ್ನು ಕೊಡಿಸಿದ.

ಹದಿನಾಲ್ಕ ದಿನದ ಹಗಲು ಯುದ್ಧ - ಅಲಂಬುಸ ವಧ **155**

ಜಯದ್ರಥನ ರಕ್ಷಣೆಗಾಗಿ ದ್ರೋಣ ಶಕಟವ್ಯೂಹ ಪದ್ಮವ್ಯೂಹ ಚಕ್ರವ್ಯೂಹ ಎಂದು ಮೂರು ವ್ಯೂಹಗಳನ್ನು ಒಂದರೊಳಗೆ ಇನ್ನೊಂದರಂತೆ ನಿರ್ಮಿಸಿದ. ಅರ್ಜುನ ಒಳಗೆ ಹೋಗಿ ದೃಢಾಯು ಅಚ್ಯುತಾಯು ವಿಂದ ಅನುವಿಂದರನ್ನೂ ಶ್ರುತಾಯುಧನನ್ನೂ ಕೊಂದ. ಮಂತ್ರಬಲದಿಂದ ಸರ್ವಾಂಗಗಳಲ್ಲಿ ಅಭೇದ್ಯ ಕವಚ ತೊಟ್ಟ ದುರ್ಯೋಧನನನ್ನೂ ಪರಾಭವಗೊಳಿಸಿದ. ದ್ರೋಣನ ಮುಂದೆ ಧರ್ಮರಾಜ ವಿರಥನಾಗಿ ನಿರಾಯುಧನಾಗಿ ಸಹದೇವನ ರಥವನ್ನೇರಿ ಹೊರಟು ಹೋದ. ಭೀಮ ಅಲಂಬುಸ ರಾಕ್ಷಸನನ್ನು ತ್ವಾಷ್ಟ್ರಾಸ್ತ್ರದಿಂದ ಪರಾಭವಗೊಳಿಸಿದ. ಬಳಿಕ ಆ ರಾಕ್ಷಸನನ್ನು ಘಟೋತ್ಕಚ ಕೊಂದ.

ಭೂರಿಶ್ರವ ವಧ **174**

ಸಾತ್ಯಕಿ ಶ್ರೀಕೃಷ್ಣನ ವರದಿಂದ ಒಂದು ದಿನದ ಮಟ್ಟಿಗೆ ಅಜೇಯನೆನಿಸಿ ಕೃತವರ್ಮನನ್ನು ಗೆದ್ದು ಜಲಸಂಧ ರಾಕ್ಷಸನನ್ನು ಕೊಂದು ಭೂರಿಶ್ರವನೊಡನೆ ಮಾತ್ರ ಖಡ್ಗಯುದ್ಧದಲ್ಲಿ ಸೋತು ಅಪಾಯ ಸ್ಥಿತಿಯಲ್ಲಿದ್ದಾಗ ದೂರದಿಂದಲೆ ಅರ್ಜುನ ಭೂರಿಶ್ರವನ ತೋಳನ್ನು ಬಾಣದಿಂದ ಕತ್ತರಿಸಿದ. ಭೂರಿಶ್ರವ ಕೃಷ್ಣಾರ್ಜುನರನ್ನು ಆಕ್ಷೇಪಿಸಿ ಪ್ರಾಯೋಪವೇಶಕ್ಕೆ ಕುಳಿತಾಗ ಸಾತ್ಯಕಿ ಅವನ ಶಿರವನ್ನು ತರಿದ.

ಕುದುರೆಗಳ ಕಾಲು ತೊಳೆದ ಶ್ರೀಕೃಷ್ಣ **178**

ಬಾಯಾರಿದ ಕುದುರೆಗಳಿಗಾಗಿ ಅರ್ಜುನ ರಣಭೂಮಿಯಲ್ಲಿಯೆ ವಾರುಣಾಸ್ತ್ರದಿಂದ ಜಲಾಶಯ ನಿರ್ಮಿಸಿದ. ಬಾಣಗಳಿಂದ ಅಶ್ವಶಾಲೆಯನ್ನೂ ನಿರ್ಮಿಸಿದ. ಶ್ರೀಕೃಷ್ಣ

ಕುದುರೆಗಳನ್ನು ಬಿಚ್ಚಿ ನೀರು ಕುಡಿಸಿ ಮೈಯಲ್ಲಿ ನೆಟ್ಟಿದ್ದ ಬಾಣಗಳನ್ನು ಕಿತ್ತೊಗೆದು ಮೈದಡವಿ ಆಯಾಸ ಪರಿಹರಿಸಿದ. ತಿರುಗಿ ರಥಕ್ಕೆ ಕಟ್ಟಿದ.

ಭೀಮಸೇನ ದ್ರೋಣರ ಸಮರ **179**

ಅರ್ಜುನ ಸಾತ್ಯಕಿಗಳ ರಕ್ಷಣೆಗಾಗಿ ಧರ್ಮರಾಜ ಭೀಮನನ್ನು ಕಳಿಸಿದ. ಭೀಮನನ್ನು ದ್ರೋಣ ತಡೆದಾಗ ಭೀಮ ಅವನ ರಥವನ್ನು ಎತ್ತಿ ಆಕಾಶಕ್ಕೆ ಒಗೆದ. ದ್ರೋಣ ಇನ್ನೊಂದು ರಥವೇರಿದರೆ ಅದನ್ನೂ ಹಾರಿಸಿದ. ಹೀಗೆ ಎಂಟು ಬಾರಿಯಾದ ಮೇಲೆ ದ್ರೋಣ ದೂರಕ್ಕೆ ಸರಿದ. ಭೀಮ ಹನ್ನೆರಡು ಧೃತರಾಷ್ಟ್ರ ಪುತ್ರರ ಶಿರಶ್ಛೇದಗೈದ. ಕೃತವರ್ಮನನ್ನೂ ಗೆದ್ದು ಕೃಷ್ಣಾರ್ಜುನರ ಬಳಿಗೆ ಬಂದ.

ಭೀಮ ಕರ್ಣರ ಯುದ್ಧ **187**

ಭೀಮನೊಡನೆ ಯುದ್ಧದಲ್ಲಿ ಕರ್ಣಸೋತು ಪಲಾಯನಮಾಡಿ ವಿಶ್ರಾಂತಿ ಪಡೆದು ತಿರುಗಿ ವಿಕರ್ಣ ಚಿತ್ರಸೇನ ಮುಂತಾದ ಇಪ್ಪತ್ತಮೂರು ಧೃತರಾಷ್ಟ್ರಪುತ್ರರೊಂದಿಗೆ ಭೀಮನ ಇದಿರಿಗೆ ಬಂದ. ಭೀಮ ಆ ಎಲ್ಲ ಧೃತರಾಷ್ಟ್ರಪುತ್ರರ ಶಿರಶ್ಛೇದಗೈದ. ಕರ್ಣನನ್ನು ಕುದುರೆಸಾರಥಿ ರಥರಹಿತನನ್ನಾಗಿ ಮಾಡಿ ಪ್ರಾಣಾಪಾಯಸ್ಥಿತಿಗೆತಂದ. ಕರ್ಣ ಅಳುತ್ತ ಓಡಿಹೋದ. ಹೀಗೆ ಇಪ್ಪತ್ತೊಂದು ಬಾರಿ ಕರ್ಣನನ್ನು ಭೀಮ ಗೆದ್ದು ಇಪ್ಪತ್ತೆರಡನೆ ಬಾರಿ ಅವನ ಕವಚ ಕುಂಡಲಗಳನ್ನು ಕತ್ತರಿಸಿದ. ಆದರೆ ಪರಶುರಾಮನ ವರಕ್ಕೆ ಮಾನ್ಯತೆ ನೀಡುವುದಕ್ಕಾಗಿ ಸೋತಂತೆ ತೋರಿಕೊಂಡ. ಕರ್ಣನ ರಥದೊಳಗೇ ಹಾರಿದ. ಕರ್ಣ ಭಯದಿಂದ ನೊಗದ ಕೆಳಗೆ ಅವಿತುಕೊಂಡ. ಬಳಿಕ ಭೀಮ ದೂರ ಸರಿದು ಕರ್ಣನ ಬಾಣಗಳನ್ನು ಸತ್ತ ಆನೆಗಳ ಶವಗಳಿಂದ ತಡೆಯುತ್ತ ನಿಂತ. ಕರ್ಣ ಭೀಮನ ಬಳಿಗೆ ಬಂದು ಬಿಲ್ಲಿನ ತುದಿಯಿಂದ ಕುತ್ತಿಗೆಗೆ ತಿವಿದು 'ತೂಬರ! ಹೊಟ್ಟೆ ಬಾಕ!' ಎಂದು ಅಪಹಾಸಗೈದ. ಆಗ ಅರ್ಜುನ ಕವಚರಹಿತನಾದ ಕರ್ಣನನ್ನು ಬಾಣಗಳಿಂದ ದೂರಕ್ಕೆ ಓಡಿಸಿದ. ಕರ್ಣ ತಿರುಗಿ ಶಕ್ತ್ಯಾಯುಧ ಧರಿಸಿ ಬಂದಾಗ ಶ್ರೀಕೃಷ್ಣ ಸಾತ್ಯಕಿಯನ್ನು ಮುಂದೆ ಮಾಡಿದ. ಕರ್ಣ ಅವನೊಡನೆ ಸ್ಪರ್ಧೆಯಿಂದ ಹೋರಾಡಿ ಪರಾಜಿತನಾದ.

ಭೀಮನ ರಹಸ್ಯ ಪ್ರತಿಜ್ಞೆ **198**

ಯಾರು ನನ್ನನ್ನು ತೂಬರ, ಹರಕುಗಡ್ಡದವನೆಂದು ಅಪಹಾಸ ಮಾಡುವನೋ ಅವನನ್ನು ಕೊಲ್ಲುವೆನೆಂದು ಭೀಮನ ರಹಸ್ಯ ಪ್ರತಿಜ್ಞೆ. ಹಾಗೇ, ಯಾರು ನನ್ನ ಗಾಂಡೀವವನ್ನು ಹಳಿಯುವನೋ ಅವನನ್ನು ಕೊಲ್ಲುವೆನೆಂದು ಅರ್ಜುನನ ರಹಸ್ಯಪ್ರತಿಜ್ಞೆ. ಭೀಮನ ಪ್ರತಿಜ್ಞೆಯನ್ನು ದುರ್ಯೋಧನ ಕದ್ದು ಆಲಿಸಿದ್ದ. ಅವನ ಮೂಲಕ ಕರ್ಣನಿಗೂ ಅದು ತಿಳಿದಿತ್ತು. ಅದರಿಂದ ಕರ್ಣ 'ತೂಬರ' ಎಂದು ಹಳಿದು ಭೀಮನಿಗೆ ವಧ್ಯನಾದ. ಅರ್ಜುನ ಅವನ ವಧಪ್ರತಿಜ್ಞೆಯನ್ನೇ ಮಾಡಿದ್ದ. ಅದರಿಂದ ಭೀಮ ಅರ್ಜುನನಿಗೆ ಹೇಳಿದ, 'ನೀನೆ

ಕರ್ಣನನ್ನು ವಧಿಸು, ನಿನ್ನ ಪ್ರತಿಜ್ಞೆ ಪೂರೈಸುವುದು, ಹಿರಿಯನಾದ್ದರಿಂದ ನನ್ನ ಪ್ರತಿಜ್ಞೆಯೂ ನಿನ್ನ ಮೂಲಕ ಪೂರ್ತಿಯಾಗುವುದು' ಎಂದು.

ಹಗಲಲ್ಲಿ ರಾತ್ರಿ ! **202**

ಅಶ್ವತ್ಥಾಮ ಕರ್ಣರು ಬಲವಾಗಿ ತಡೆದುದರಿಂದ ಅರ್ಜುನನಿಗೆ ಅವರನ್ನು ದಾಟಿ ಜಯದ್ರಥನ ಬಳಿಗೆ ಹೋಗಲು ಶಕ್ಯವಾಗಲಿಲ್ಲ. ಸೂರ್ಯಾಸ್ತ ಸಮೀಪಿಸಿತು. ಅದಕ್ಕೆ ಶ್ರೀಕೃಷ್ಣ ತಮಸ್ಸನ್ನು ನಿರ್ಮಿಸಿದ.

ಜಯದ್ರಥ ವಧ **204**

ರಾತ್ರಿಯಾಯಿತೆಂದು, ಅರ್ಜುನನ ಅಗ್ನಿಪ್ರವೇಶವನ್ನು ವೀಕ್ಷಿಸಲು ಎಲ್ಲರೂ ಬಂದರು. ಜಯದ್ರಥನೂ ಕಾಣಿಸಿಕೊಂಡ. ಒಡನೆ ಶ್ರೀಕೃಷ್ಣನ ಆದೇಶದಂತೆ ಅರ್ಜುನ ಜಯದ್ರಥನ ಶಿರವನ್ನು ತರಿದ. ಪಾಶುಪತಾಸ್ತ್ರದ ಪ್ರಭಾವದಿಂದ ಜಯದ್ರಥನ ತಲೆ ನೆಲಕ್ಕೆ ಬೀಳದಂತೆ ಆಕಾಶದಲ್ಲಿಯೆ ನಿಲ್ಲಿಸಿದ. ಪುಂಖಾನುಪುಂಖವಾಗಿ ಬಾಣಗಳನ್ನು ಹೊರಡಿಸಿ ಆ ತಲೆಯನ್ನು ದೂರದ ಸಮಂತಪಂಚಕದ ಬಳಿ ಸಂಧ್ಯಾವಂದನೆಗೆ ಕುಳಿತಿದ್ದ ಅವನ ತಂದೆಯ ಮಡಿಲಲ್ಲೇ ಬೀಳಿಸಿದ. ಅವನು ಆ ತಲೆಯನ್ನು ನೆಲಕ್ಕೆ ಹಾಕಿದಾಗ ಅವನ ತಲೆ ಸಾವಿರ ಹೋಳಾಯಿತು.

ಹದಿನಾಲ್ಕನೆ ದಿನದ ರಾತ್ರಿ ಯುದ್ಧ - ಕರ್ಣನಿಗೆ ಭೀಮನ ಸಂಕೇತ **211**

ಭೀಮ ಕರ್ಣನ ಕಣ್ಣ ಮುಂದೇ ದುಷ್ಕರ್ಣ ಕರ್ಣರೆಂಬ ಇಬ್ಬರು ಧೃತರಾಷ್ಟ್ರ ಪುತ್ರರನ್ನು ಕಾಲಿಂದ ತುಳಿದುಕೊಂದ. ಕಾಲಿಂಗನನ್ನು ಮುಷ್ಟಿಯಿಂದ ತಿವಿದುಕೊಂದ. ತನಗೆ ಯಾವ ಆಯುಧದ ಅಪೇಕ್ಷೆಯೂ ಇಲ್ಲ ಎಂಬುದನ್ನು ಅವನು ಕರ್ಣನಿಗೆ ಹೀಗೆ ತೋರಿದ. ಕರ್ಣ ಎಸೆದ ಒಂದು ಶಕ್ತ್ಯಾಯುಧವನ್ನು ತಿರುಗಿ ಅವನ ಮೇಲೆಯೆ ಎಸೆದು ಇಂದ್ರನ ದಿವ್ಯಶಕ್ತ್ಯಾಯುಧವನ್ನೂ ನೀನು ನನ್ನ ಮೇಲೆ ಎಸೆದಿದ್ದರೆ ಅದನ್ನೂ ಹೀಗೇ ಮಾಡಿ ನಿನ್ನನ್ನು ಕೊಲ್ಲುತ್ತಿದ್ದೆ ಎಂದು ತೋರಿಸಿದ. ಗದೆಯಿಂದ ಕರ್ಣನ ರಥವನ್ನು ಪುಡಿಮಾಡಿ, ಅರ್ಜುನನಿಗಾಗಿ ನಿನ್ನನ್ನು ಬಿಟ್ಟಿ ಇಲ್ಲದಿದ್ದರೆ ನಿನ್ನನ್ನು ಈ ಗದೆಯಿಂದ ಹೀಗೇ ಪುಡಿಮಾಡುತ್ತಿದ್ದೆ ಎಂದು ಸೂಚನೆ ನೀಡಿದ. ಕರ್ಣ ಸಹದೇವನನ್ನು ವಿರಥನನ್ನಾಗಿ ಮಾಡಿ ಕುತ್ತಿಗೆಗೆ ಬಿಲ್ಲು ಸಿಕ್ಕಿಸಿ ಅಪಹಾಸ ಮಾಡಿದ.

ಘಟೋತ್ಕಚ ಅಶ್ವತ್ಥಾಮರ ಸಮರ **215**

'ತಂದೆಯೊಡನೆ ಯುದ್ಧ ಮಾಡಬೇಡ' ಎನ್ನುವ ಅಶ್ವತ್ಥಾಮನಿಗೆ 'ನೀನು ನನ್ನ ತಂದೆಯಲ್ಲ, ಶತ್ರುಪಕ್ಷದಲ್ಲಿರುವುದರಿಂದ ಶತ್ರುವೇ ಆಗಿರುವಿ' ಎನ್ನುತ್ತಾನೆ ಘಟೋತ್ಕಚ. ಒಂದು ಲಕ್ಷ ರಾಕ್ಷಸರಿಂದ ಕೂಡಿದ ಒಂದು ಅಕ್ಷೌಹಿಣಿ ಸೇನೆಯೊಂದಿಗೆ ಘಟೋತ್ಕಚ ಅಶ್ವತ್ಥಾಮನನ್ನು ಇದಿರಿಸಿ ಎಲ್ಲ ಸೈನ್ಯವನ್ನೂ ಕಳೆದುಕೊಂಡ. ಮಗ ಅಂಜನಪರ್ವನೂ ಈ ಯುದ್ಧದಲ್ಲಿ ಮಡಿದ. ತಾನೂ ಮೂರ್ಛಿತನಾದ. ಸಾರಥಿ ಅವನನ್ನು ದೂರಕ್ಕೆ ಒಯ್ದ.

ಘಟೋತ್ಕಚ ವಧ **218**

ಶ್ರೀಕೃಷ್ಣ ಘಟೋತ್ಕಚನನ್ನು ಹುರಿದುಂಬಿಸಿ ಕರ್ಣನ ಬಳಿಗೆ ಕಳಿಸಿದ. ಅಲ್ಲಿ ಘಟೋತ್ಕಚ ಅಲಂಬಲ ರಾಕ್ಷಸನ ಶಿರಶ್ಛೇದ ಮಾಡಿ ಆ ರುಂಡವನ್ನು ದುರ್ಯೋಧನನ ಮೇಲೇ ಎಸೆದ. ಅಲಾಯುಧನನ್ನು ಕೊಂದು ಅವನ ತಲೆಯನ್ನೂ ದುರ್ಯೋಧನನ ಎದೆಗೆ ಒಗೆದ. ಅವನಿಂದ ಬಹಳ ಪೀಡಿತರಾದ ಕೌರವರು ಶಕ್ತ್ಯಾಯುಧವನ್ನು ಎಸೆಯಲು ಕರ್ಣನನ್ನು ಒತ್ತಾಯಿಸಿದರು. ಕರ್ಣ ಎಸೆದ. ಘಟೋತ್ಕಚ ಬಿದ್ದ. ಬೀಳುವಾಗಲೂ ಬಹಳ ಕೌರವ ಸೈನ್ಯವನ್ನು ಪುಡಿಮಾಡಿದ. ಶ್ರೀಕೃಷ್ಣ ಆನಂದದಿಂದ ಕುಣಿದ, 'ಅರ್ಜುನ! ನಿನಗಾಗಿ ಕಾದಿರಿಸಿದ್ದ ಶಕ್ತ್ಯಾಯುಧ ವ್ಯಯವಾಯಿತು, ನೀನು ಉಳಿದುಕೊಂಡೆ!' ಎಂದ. 'ಘಟೋತ್ಕಚ ಉಳಿದಿದ್ದರೂ ರಾಕ್ಷಸ ಸ್ವಭಾವದಿಂದ ಲೋಕೋಪದ್ರವಿಯಾಗುತ್ತಿದ್ದ, ಅವನು ಮಡಿದುದೂ ಒಳ್ಳೆಯದೆ ಆಯಿತು' ಎಂದ.

ಬಾಹ್ಲೀಕ ವಧ **224**

ಹಿಂದೆ ಬಾಹ್ಲೀಕ ಭೀಮನನ್ನು ಕೇಳಿಕೊಂಡಿದ್ದ. 'ನೀನೆ ನನ್ನನ್ನು ವಧಿಸು. ಆಗ ನನಗೆ ಕೀರ್ತಿ ಪುಣ್ಯಲೋಕಗಳು ಲಭಿಸುವುವು' ಎಂದು. ಭೀಮ ಆಗಲಿ ಎಂದಿದ್ದ. ಬಾಹ್ಲೀಕ ಸಾತ್ಯಕಿಯನ್ನು ವಿರಥನನ್ನಾಗಿ ಮಾಡಿ ಕೊಲ್ಲಲು ಬಾಣ ಎಸೆದಾಗ ಭೀಮ ಅದನ್ನು ಮೂರಾಗಿ ಕತ್ತರಿಸಿದ. ಬಳಿಕ ಶತಘ್ನಿಯನ್ನೆಸೆದ ಬಾಹ್ಲೀಕನನ್ನು ಭೀಮ ಕೊಂದ.

ಹದಿನೈದನೆ ದಿನದ ಯುದ್ಧ-ದ್ರೋಣ ವಧ **226**

ದ್ರೋಣ ವೃದ್ಧನಾದರೂ ಯುವಕನಂತೆ ಹೋರಾಡುತ್ತ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ವಿರಾಟ ದ್ರುಪದರನ್ನೂ ಪುರುಜಿತ್ ಕುಂತಿಭೋಜರನ್ನೂ ವಧಿಸಿದ. ಅವನನ್ನು ಕೊಲ್ಲಲು ಧೃಷ್ಟದ್ಯುಮ್ನ ಸರ್ವ ಪ್ರಯತ್ನ ಮಾಡಿದ. ಭೀಮ ಅರ್ಜುನ ಸಾತ್ಯಕಿಯರು ಅಶ್ವತ್ಥಾಮನನ್ನು ದೊಡ್ಡ ಸೈನ್ಯದೊಂದಿಗೆ ಬಲು ದೂರದಲ್ಲಿ ತಡೆದು ನಿಲ್ಲಿಸಿದ್ದರು. ಕರ್ಣ ದುರ್ಯೋಧನ ಶಲ್ಯ ಕೃಪ ಕೃತವರ್ಮರನ್ನೂ ತಡೆದಿದ್ದರು. ಭೀಮ ಮಾಲವರಾಜನ ಅಶ್ವತ್ಥಾಮ ಎಂಬ ಆನೆಯನ್ನು ಕೊಂದು 'ಅಶ್ವತ್ಥಾಮಾ ಹತಃ' ಎಂದ. ದ್ರೋಣ ನಂಬಲಿಲ್ಲ. ಶ್ರೀಕೃಷ್ಣನ ಪ್ರೇರಣೆಯಂತೆ ಧರ್ಮರಾಜನೂ ಹಾಗೇ ಹೇಳುತ್ತ 'ಕುಂಜರಃ' ಎಂಬ ಶಬ್ದವನ್ನು ಅಸ್ಪಷ್ಟವಾಗಿ ಉಚ್ಚರಿಸಿದ. ದ್ರೋಣ ತನ್ನ ಮಗ ಹತನಾದನೆಂದೇ ಬಗೆದು ಶಕ್ತಿಗುಂದಿದ. 'ಬ್ರಾಹ್ಮಣನಾದ ನಿನಗೇಕೆ ಈ ಕ್ಷತ್ರಿಯರ ಯುದ್ಧ?' ಎಂದು ಭೀಮನೂ ಮೂದಲಿಸಿದ. ಆಕಾಶದಲ್ಲಿ ಮುನಿಗಳೂ ಬಂದು 'ಈ ಕ್ಷತ್ರಿಯನಾಶವನ್ನು ಸಾಕುಮಾಡು' ಎಂದರು. ದ್ರೋಣನಿಗೆ ಆಗ ಅಸ್ತ್ರಗಳೂ ಮರೆಯಾದವು. ಸಕಲಕರ್ಮಗಳನ್ನೂ ಹರಿಗೆ ಅರ್ಪಿಸಿ ಯೋಗಾರೂಢನಾಗಿ ಹರಿಧ್ಯಾನ ಮಾಡುತ್ತ ಶರೀರತ್ಯಾಗ ಮಾಡಿದ. ಜ್ಯೋತಿರೂಪದಿಂದ ತೆರಳಿ ಮೂಲರೂಪದೊಂದಿಗೆ ಐಕ್ಯಹೊಂದಿದ. ಬಳಿಕ ಧೃಷ್ಟದ್ಯುಮ್ನ ತಿಳಿಯದೆ ಅವನ ನಿರ್ಜೀವ ಶರೀರದ ಶಿರಶ್ಛೇದ ಗೈದ.

ನಾರಾಯಣಾಸ್ತ್ರ **233**

ಅಶ್ವತ್ಥಾಮ ನಾರಾಯಣಾಸ್ತ್ರವನ್ನು ಪ್ರಯೋಗಿಸಿದ. 'ಎಲ್ಲರೂ ಆಯುಧ ಕೆಳಗಿಟ್ಟು ಅಸ್ತ್ರಕ್ಕೆ ತಲೆಬಾಗಿ ತಮ್ಮನ್ನು ಕಾಪಾಡಿಕೊಳ್ಳಿ' ಎಂದ ಶ್ರೀಕೃಷ್ಣ. 'ಹಾಗೆ ಮಾಡಬೇಡಿ, ಇದು ಶುದ್ಧಕ್ಷತ್ರಿಯ ಧರ್ಮವಲ್ಲ' ಎಂದ ಭೀಮ. ಎಲ್ಲರೂ ನಮಿಸಿದ್ದರಿಂದ ಅಸ್ತ್ರ ಭೀಮನನ್ನೆ ಆಕ್ರಮಿಸಿತು. ಆದರೆ ಅಸ್ತ್ರಾಭಿಮಾನಿ ಅವನೆ ಆದ್ದರಿಂದ ಬೆಂಕಿಯ ನಡುವೆ ಬೆಂಕಿಯಂತೆ ನಿಂತ. ಹುಂಕಾರದಿಂದ ಬಾರಿ ಬಾರಿಗೆ ಅಸ್ತ್ರವನ್ನು ದೂರ ಅಟ್ಟುತ್ತ ನಿಂತ. ಅರ್ಜುನ ತನ್ನ ಪಾಲಿನ ಸೇವೆಯೆಂದು ವಾರುಣಾಸ್ತ್ರವನ್ನು ಪ್ರಯೋಗಿಸಿದ. ಬಳಿಕ ಕೃಷ್ಣಾರ್ಜುನರು ಭೀಮನ ರಥದ ಮೇಲೆ ಹತ್ತಿ ಅವನ ಆಯುಧವನ್ನು ಕಸಿದು ತಲೆಯನ್ನು ಬಾಗಿಸಿದರು. ಅಸ್ತ್ರ ಶಾಂತವಾಯಿತು. ತಿರುಗಿ ಅಶ್ವತ್ಥಾಮ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದ. ಶ್ರೀಕೃಷ್ಣ ರಥವನ್ನು ಮೇಲೆ ಎತ್ತರಕ್ಕೆ ಹಾರಿಸಿ ಅಸ್ತ್ರದಿಂದ ಪಾರುಮಾಡಿದ. ಅಸ್ತ್ರ ಒಂದು ಅಕ್ಷೌಹಿಣಿ ಸೈನ್ಯವನ್ನು ಪೂರ್ತಿ ಸುಟ್ಟಿತು. ಆದರೂ ಅರ್ಜುನನ ರಥ ಉಳಿಯಿತೆಂದು ಕೋಪ ನಿರಾಶೆಗಳಿಂದ ಅಶ್ವತ್ಥಾಮ ಆಯಧವನ್ನು ಬಿಸುಟು ನಡೆದ. ವೇದವ್ಯಾಸರು ಬಂದು ನೀನಿನ್ನೂ ಮಾಡಬೇಕಾದುದು ಬಹಳ ಇದೆ ಎನ್ನುತ್ತ ಸಮಾಧಾನಪಡಿಸಿದರು.

ಅಧ್ಯಾಯ ೨೭
(ಕರ್ಣಪರ್ವ)

ಹದಿನಾರನೆ ದಿನದ ಯುದ್ಧ **243**

ಗಜಾರೂಢನಾದ ಭೀಮನ ಮುಂದೆ ಗಜಾರೂಢನಾದ ಕ್ಷೇಮಧೂರ್ತಿ ಬಂದು ಕಾದಿ ಮಡಿದ. ಭೀಮ ಅಶ್ವತ್ಥಾಮರ ಅದ್ಭುತವಾದ ಅಸ್ತ್ರಯುದ್ಧದಲ್ಲಿ ಕೊನೆಗೆ ಅಶ್ವತ್ಥಾಮ ಮೂರ್ಛಿತನಾಗಿ ಹೊರಟುಹೋದ. ಕರ್ಣ ನಕುಲನನ್ನು ವಿರಥನನ್ನಾಗಿ ಮಾಡಿ ಬೆನ್ನಟ್ಟಿ ಬಿಲ್ಲಿನ ತುದಿಯಿಂದ ಕುತ್ತಿಗೆಯನ್ನು ಸೆಳೆದು ಅಪಹಾಸ ಮಾಡಿದ. ಕೇಕಯ ದೇಶದ ವಿಂದ ಅನುವಿಂದರನ್ನು ಸಾತ್ಯಕಿ ಕೊಂದ. ಅರ್ಜುನ ಕರ್ಣನನ್ನು ಇದಿರಿಸಿ ಕ್ಷಣದಲ್ಲಿ ವಿರಥನನ್ನಾಗಿ ಮಾಡಿದ. ಅದರಿಂದ ಕರ್ಣ ದುರ್ಯೋಧನನಿಗೆ ಶಲ್ಯನನ್ನು ಸಾರಥ್ಯಕ್ಕೆ ಒಪ್ಪಿಸಲು ಹೇಳಿದ.

ಹದಿನೇಳನೆ ದಿನದ ಯುದ್ಧ **249**

ಶಲ್ಯ ಸಾರಥಿಯಾಗಿ ಕರ್ಣನ ತೇಜೋವಧೆ ಮಾಡಿದ. ಕರ್ಣ ಧರ್ಮರಾಜನನ್ನು ವಿರಥನನ್ನಾಗಿ ಮಾಡಿ ಬಿಲ್ಲನ್ನು ಕುತ್ತಿಗೆಗೆ ಹಾಕಿ ಅವನನ್ನೂ ಕೃಷ್ಣನನ್ನೂ ಹಳಿದ. ಅದನ್ನು ಕಂಡು ಭೀಮ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಕರ್ಣ ತನ್ನೆಡೆಗೆ ಧಾವಿಸಿ ಬರುವಂತೆ ಮಾಡಿದ. ಬಾಣಗಳಿಂದ ಅವನನ್ನು ಮೂರ್ಛೆಗೊಳಿಸಿ ಕೃಷ್ಣನನ್ನು ನಿಂದಿಸಿದ ಅವನ ನಾಲಗೆಯನ್ನು ಕೊಯ್ಯಲು ಬಂದ. ಆಗ ಶಲ್ಯ ತಡೆದು ಹೇಳಿದ, 'ಈತ ಅರ್ಜುನನಿಗೆ ಬೇಕಾದವನು' ಎಂದು.

ಅರ್ಜುನ ಅಶ್ವತ್ಥಾಮರ ಯುದ್ಧ **256**

ಸಂಶಪ್ತಕರೊಡನೆ ಯುದ್ಧ ಮಾಡುತ್ತಿದ್ದ ಅರ್ಜುನನನ್ನು ಅಶ್ವತ್ಥಾಮ ಕರೆದ. ಶರಪಂಜರದಲ್ಲಿ ಬಂಧಿಸಿದ. ಶ್ರೀಕೃಷ್ಣ ಅವನನ್ನು ಆಲಿಂಗಿಸಿ ಶಕ್ತಿ ತುಂಬಿದ. ಅಶ್ವತ್ಥಾಮ ಸಾರಥಿಯನ್ನು ಕಳೆದುಕೊಂಡು ತಾನೆ ಸಾರಥ್ಯಮಾಡುತ್ತ ಇನ್ನೊಮ್ಮೆ ಅರ್ಜುನನನ್ನು ಬಾಣಗಳಿಂದ ಬಂಧಿಸಿದ. ಪುನಃ ಶ್ರೀಕೃಷ್ಣ ಅವನನ್ನು ಆಲಿಂಗಿಸಿ ಶಕ್ತಿ ತುಂಬಿದ. ಅಶ್ವತ್ಥಾಮ ಅರ್ಜುನನ ಬಿಲ್ಲಿನ ಹೆದೆಯನ್ನು ಕತ್ತರಿಸಿದ. ಅದೂ ಚಿಗುರಿ ಮೊದಲಿನಂತಾಯಿತು. ಅರ್ಜುನ ಅಶ್ವತ್ಥಾಮನ ಕುದುರೆಗಳ ಹಗ್ಗಗಳನ್ನೂ ಕತ್ತರಿಸಿದಾಗ ಅಶ್ವತ್ಥಾಮ ನಾನು ಇದಕ್ಕಿಂತ ಹೆಚ್ಚೇನು ಮಾಡಲಾರೆ ಎಂದುಕೊಂಡು ಹೊರಟುಹೋದ.

ಧೃಷ್ಟದ್ಯುಮ್ನ ಅಶ್ವತ್ಥಾಮರ ಯುದ್ಧ **261**

ಅಶ್ವತ್ಥಾಮ ಧೃಷ್ಟದ್ಯುಮ್ನನ ರಥ ಆಯುಧಗಳನ್ನು ನಾಶಪಡಿಸಿದರೂ ಬಾಣಗಳಿಂದ ಅವನ ಮೈಯಲ್ಲಿ ಗಾಯ ಮಾಡಲು ಶಕ್ತನಾಗಲಿಲ್ಲ. ಖಡ್ಗದಿಂದಾಗಲಿ ಬೇರೆ ಶಸ್ತ್ರಾಸ್ತ್ರಗಳಿಂದಾಗಲಿ ಅವನ ಚರ್ಮಕ್ಕೆ ಒಂದಿಷ್ಟು ಗಾಯವಾಗದಿದ್ದಾಗ ಅವನನ್ನು ನೆಲದಲ್ಲಿ ಕೆಡವಿ ಹಿಂಸಿಸಿದ. ಆಗ ಭೀಮಾರ್ಜುನರು ಬಂದು ತಡೆದರು. ಬಳಿಕ ಧೃಷ್ಟದ್ಯುಮ್ನ ಕೃತವರ್ಮನನ್ನು ವಿರಥನನ್ನಾಗಿಸಿದ. ಕೃಪ ಅವನನ್ನು ತನ್ನ ರಥದಲ್ಲಿ ಒಯ್ದ.

ಯುಧಿಷ್ಠಿರನ ಪರಾಭವ **263**

ದುರ್ಯೋಧನ ನಕುಲಸಹದೇವರನ್ನು ವಿರಥರನ್ನಾಗಿ ಮಾಡಿದ. ಆಗ ಧರ್ಮರಾಜ ಅವನನ್ನು ಇದಿರಿಸಿ ತಾನೆ ವಿರಥನಾದ. ಇತ್ತ ಕರ್ಣನೊಡನೆ ಹೋರಾಡುತ್ತಿದ್ದ ಭೀಮ ಅವನು ನೋಡುತ್ತಿದ್ದಂತೆಯೆ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಕರ್ಣನ ಮಗನಾದ ಸುಷೇಣನನ್ನು ಕೊಂದ. ಕರ್ಣ ಕುಪಿತನಾಗಿ ಭೀಮನನ್ನು ಬಿಟ್ಟು ನಕುಲ ಸಹದೇವ ಧರ್ಮರಾಜರನ್ನು ವಿರಥರನ್ನಾಗಿ ಮಾಡಿ ಅಪಹಾಸ ಮಾಡಿದ. ಅದಕ್ಕೆ ತಿರುಗಿ ಭೀಮ ದುರ್ಯೋಧನನನ್ನು ಕರ್ಣನ ಕಣ್ಣೆದುರಿನಲ್ಲಿಯೆ ಬಹಳ ಪೀಡಿಸಿದ. ಯುಧಿಷ್ಠಿರ ತನ್ನ ಪರಾಭವಕ್ಕೆ ಬೇಸತ್ತು ಶಿಬಿರಕ್ಕೆ ನಡೆದು ಮಲಗಿದ.

ಅರ್ಜುನ ಅಶ್ವತ್ಥಾಮರ ಯುದ್ಧ **266**

ರಣರಂಗದಲ್ಲಿ ಧರ್ಮರಾಜನನ್ನು ಕಾಣದೆ ಅರ್ಜುನ ಶಿಬಿರದ ಕಡೆಗೆ ಹೊರಟಾಗ ಅಶ್ವತ್ಥಾಮ ಇದಿರಾದ. ಅವನ ಶರಪಂಜರದಲ್ಲಿ ಅರ್ಜುನ ಬದ್ಧನಾದ. ಗಾಂಡೀವದ ಹೆದೆಯೂ ಕಡಿದುಹೋಯಿತು. ಶ್ರೀಕೃಷ್ಣ ಅವನನ್ನು ಆಲಿಂಗಿಸಿ ಶಕ್ತಿ ತುಂಬಿದ. ಆಗ ಅವನು ಅಶ್ವತ್ಥಾಮನ ಸಾರಥಿಯನ್ನು ಕೊಂದು ಕುದುರೆಗಳ ಹಗ್ಗಗಳನ್ನೂ ಕಡಿದ. ಅತ್ತ ಕರ್ಣ ದುರ್ಯೋಧನರ ಆಕ್ರಮಣಕ್ಕೆ ಪಾಂಡವಸೇನೆ ಹಿಮ್ಮೆಟ್ಟಿದಾಗ ಭೀಮ ಕೌರವಸೇನೆಯನ್ನು ಓಡಿಸಿದ. ಆಗ ಕರ್ಣ ಅಮೋಘವಾದ ಭಾರ್ಗವಾಸ್ತ್ರವನ್ನು ಪ್ರಯೋಗಿಸಿದ. ದೂರದಿಂದಲೆ ಅರ್ಜುನ ಅದನ್ನು

ಕಂಡು ಕರ್ಣನ ಬಳಿಗೆ ಹೋಗದೆ ಬೇರೆ ದಾರಿಯಿಂದ ಭೀಮನ ಬಳಿಗೆ ಹೋಗಿ ಯುಧಿಷ್ಠಿರನನ್ನು ಕಾಣಲು ಶಿಬಿರಕ್ಕೆ ನಡೆದ.

ಗಾಂಡೀವದ ನಿಂದೆ **270**

ಅರ್ಜುನ ಕರ್ಣನನ್ನು ಕೊಂದು ಬಂದಿದ್ದಾನೆ ಎಂದೇ ಭಾವಿಸಿದ್ದ ಧರ್ಮರಾಜನಿಗೆ ಇನ್ನೂ ಕೊಂದಿಲ್ಲವೆಂದು ತಿಳಿದಾಗ ನಿರಾಸೆಯಾಯಿತು. ಕೋಪದಿಂದ 'ನಿನ್ನ ಈ ಗಾಂಡೀವದಿಂದ ನಿನಗೇನು ಪ್ರಯೋಜನ? ಕೃಷ್ಣನಿಗೆ ಕೊಡು, ಅವನು ಕರ್ಣನನ್ನು ಕೊಲ್ಲುತಾನೆ' ಎಂದ. ಗಾಂಡೀವದ ನಿಂದೆ ಮಾಡುವವನನ್ನು ಕೊಲ್ಲುವೆನೆಂದು ಅರ್ಜುನ ಮಾಡಿದ್ದ ಪ್ರತಿಜ್ಞೆಯಂತೆ ಆತ ಧರ್ಮರಾಜನನ್ನು ಕೊಲ್ಲಲು ಹೊರಟು ಶ್ರೀಕೃಷ್ಣನ ಆದೇಶದಂತೆ ಅವನನ್ನು 'ನೀನು' ಎನ್ನುತ್ತ ಏಕವಚನದಿಂದ ಹಳಿದ. ಗುರುಹಿರಿಯರಿಗೆ ಇದು ವಧೆಗೆ ಸಮಾನ. ಬಳಿಕ ಅದಕ್ಕೆ ಪ್ರಾಯಶ್ಚಿತ್ತವಾಗಿ ಅರ್ಜುನ ಆತ್ಮಹತ್ಯೆಗೆ ಹೊರಟ. ಬೇಡ, ಅದಕ್ಕೆ ಪ್ರತಿನಿಧಿಯಾಗಿ ಆತ್ಮಪ್ರಶಂಸೆ ಮಾಡಿಕೊಳ್ಳಿ ಎಂದ ಕೃಷ್ಣ. ಅರ್ಜುನ ಹಾಗೇ ಮಾಡಿದ. ಧರ್ಮರಾಜ ಬೇಸರಪಟ್ಟು ಕಾಡಿಗೆ ಹೊರಟ. ಆಗ ಶ್ರೀಕೃಷ್ಣ ಅರ್ಜುನನ ರಹಸ್ಯ ಪ್ರತಿಜ್ಞೆ ಮುಂತಾದುವನ್ನು ತಿಳಿಸಿ ಸಮಾಧಾನಪಡಿಸಿದ.

ಶಕುನಿಯ ಪರಾಭವ **276**

ಶಕುನಿ ಭೀಮನನ್ನು ಇದಿರಿಸಿದ. ರಥ ಆಯುಧಗಳನ್ನು ಕಳೆದುಕೊಂಡು ನೆಲದಲ್ಲಿ ಬಿದ್ದ. ಭೀಮ ಅವನನ್ನು ಕೊಲ್ಲಲಿಲ್ಲ, ಸಹದೇವನ ಪ್ರತಿಜ್ಞೆ ಹಾಳಾಗಬಾರದು ಎಂದು. ಮೂರ್ಛಿತನಾಗಿ ಶ್ವಾಸಮಾತ್ರವೆ ಉಳಿದಿದ್ದ ಅತನನ್ನು ದುರ್ಯೋಧನ ಎತ್ತಿ ತನ್ನ ರಥದಲ್ಲಿ ಒಯ್ದ.

ದುಃಶಾಸನನ ರಕ್ತಪಾನ **276**

ದುಃಶಾಸನ ಭೀಮನನ್ನು ಇದಿರಿಸಿದ. ಭೀಮ ಅವನನ್ನು ಸಿಂಹದಂತೆ ಆಕ್ರಮಿಸಿ ವಿರಥನನ್ನಾಗಿ ಮಾಡಿ ಹಿಡಿದೆಳೆದು ನೆಲದಲ್ಲಿ ಕೆಡವಿ ಗದೆಯಿಂದ ಎದೆ ಸೀಳಿದ. ಹೊಟ್ಟೆಯ ಮೇಲೆ ಕುಳಿತು ಕತ್ತಿಯಿಂದ ಎದೆಯಲ್ಲಿ ರಕ್ತದ ಮಡುವನ್ನು ನಿರ್ಮಿಸಿದ. ಮಾನವರಕ್ತ ಅಪೇಯವೆಂದು, ಕುಡಿಯದೆ, ಕುಡಿದಂತೆ ತೋರಿಕೊಂಡ. ನರಸಿಂಹನಿಗೆ ಇದು ಸೋಮಾಹುತಿ ಎಂಬ ಭಾವನೆಯಿಂದ ಮನ್ಯುಸೂಕ್ತವನ್ನು ಕಂಡ. 'ದ್ರೌಪದಿಗೆ ಪತಿಗಳಿಲ್ಲ' ಎಂದ ಕೌರವರಿಗೆ ಪ್ರತಿಯಾಗಿ, 'ನಿಮ್ಮ ಸ್ತ್ರೀಯರಿಗೇ ಪತಿಗಳಿಲ್ಲ' ಎಂದ. ಪಾಂಡವರನ್ನು ಜೊಳ್ಳು ಎಳ್ಳು ಕಾಳುಗಳೆಂದು ಅಪಹಾಸ ಮಾಡಿದವರಿಗೆ ಅವರೆ ಜೊಳ್ಳೆಂದು ತೋರಿಸಿದ. ಪಾಂಡವರನ್ನು ಗೋವುಗಳೆಂದು ಗೇಲಿ ಮಾಡಿದವರಿಗೆ ಅವರೇ ಗೋವುಗಳೆಂದು ಹೇಳಿ, ಒಂದು ಮುಹೂರ್ತಕಾಲ ರಣರಂಗದಲ್ಲಿ ಹುಲಿಯಂತೆ ಹೆಜ್ಜೆ ಹಾಕಿ ಕುಣಿದ. ಎರಡೂ ಸೈನ್ಯಗಳು ಭಯದಿಂದ ಸ್ತಂಭಿತವಾದುವು. ಕರ್ಣಭೀತಿಯಿಂದ ಕಣ್ಣುಮುಚ್ಚಿದ. ಬಳಿಕ ಭೀಮ

ದುರ್ಯೋಧನನ ಬೇರೆ ತಮ್ಮಂದಿರನ್ನು ಕೊಂದ. ಆ ದಿನದ ಯುದ್ಧದಲ್ಲಿ ಒಟ್ಟು ಇಪ್ಪತ್ತು ಧೃತರಾಷ್ಟ್ರಪುತ್ರರು ಹತರಾದರು.

ಕರ್ಣಾರ್ಜುನ ಯುದ್ಧ 284

ಕರ್ಣನ ಮಗ ವೃಷಸೇನ ನಕುಲನನ್ನು ವಿರಥನನ್ನಾಗಿ ಮಾಡಿದಾಗ ನಕುಲ ಕತ್ತಿ ಗುರಾಣಿ ಹಿಡಿದು ವೃಷಸೇನನ ಮೂರುಸಾವಿರ ಸೈನಿಕರನ್ನು ಕೊಂದ. ವೃಷಸೇನ ಅವನ ಗುರಾಣಿಯನ್ನು ಕತ್ತರಿಸಿ ಭೀಮಾರ್ಜುನರ ಮೇಲೂ ಬಾಣಗಳ ಮಳೆಗರೆದ. ಆಗ ಅರ್ಜುನ ಒಂದೇ ಬಾಣದಿಂದ ವೃಷಸೇನನ ಕುತ್ತಿಗೆ ಭುಜ ತೊಡೆಗಳನ್ನು ಕಡಿದು ಬೀಳಿಸಿದ. ಆಗ ಕರ್ಣಾರ್ಜುನರಿಗೆ ಅದ್ಭುತವಾದ ಯುದ್ಧ ನಡೆಯಿತು. ಆಕಾಶದಲ್ಲಿ ದೇವತೆಗಳೂ ಅಸುರರೂ ಅರ್ಜುನ ಕರ್ಣರ ಪಕ್ಷವಹಿಸಿ ನಿಂತರು. ದೇವಾಸುರ ಸಮರವಾದೀತೆಂದು ಹೆದರಿ ಶಿವ 'ಈ ಯುದ್ಧ ಸಮವಾಗಲಿ' ಎಂದ. 'ಧರ್ಮವಿದ್ದಲ್ಲಿ ಜಯವಾಗುವುದು' ಎಂದ ಬ್ರಹ್ಮ. 'ಕೃಷ್ಣನ ಸಂಕಲ್ಪದಂತೆ ಅರ್ಜುನನಿಗೆ ಜಯವಾಗಲಿ' ಎಂದ ಇಂದ್ರ. ಬ್ರಹ್ಮ 'ತಥಾಸ್ತು' ಎಂದ. ಮೊದಲಿಗೆ ಕರ್ಣನ ಕೈಮೇಲಾದಾಗ ಭೀಮ ಗದೆ ಎತ್ತಿ 'ನಾನೇ ಕರ್ಣನನ್ನು ಕೊಲ್ಲಲೆ? ಅಥವಾ ನೀನು ನಿನ್ನ ಪರಾಕ್ರಮವನ್ನು ಸರಿಯಾಗಿ ತೋರುವೆಯ?' ಎಂದು ಭೀಮ ಆರ್ಭಟಿಸಿದ. ಕೃಷ್ಣನೂ ಅರ್ಜುನನನ್ನು ನರಾವೇಶದಿಂದ ಶಕ್ತಿಪೂರ್ಣನನ್ನಾಗಿ ಮಾಡಿ ಹುರಿದುಂಬಿಸಿದ. ಒಡನೆ ಅರ್ಜುನನೊಬ್ಬನೆ ದುರ್ಯೋಧನ ಅಶ್ವತ್ಥಾಮ ಕೃಪ ಕೃತವರ್ಮರನ್ನು ಏಕಕಾಲದಲ್ಲಿ ವಿರಥರನ್ನಾಗಿ ಮಾಡಿದ. 'ಸಂಧಿ ಮಾಡಿಕೊಳ್ಳು' ಎಂದು ಅಶ್ವತ್ಥಾಮ ದುರ್ಯೋಧನನಿಗೆ ಹಿತನುಡಿದ. ಆದರೆ ದುರ್ಯೋಧನನೆಂದ, 'ದುಃಶಾಸನನ ರಕ್ತ ಕುಡಿದು ಹುಲಿಯಂತೆ ಕುಣಿದ, ಭೀಮ. ಇನ್ನು ಸಂಧಿಯ ಮಾತೆಲ್ಲಿ?' ಇತ್ತ ಅರ್ಜುನ ಹೆಚ್ಚು ಹೆಚ್ಚು ಶಕ್ತಿ ತುಂಬಿಕೊಂಡು ಕರ್ಣನನ್ನು ಪರಾಭವಗೊಳಿಸಿದ.

ಸರ್ಪಾಸ್ತ್ರ ಗುರಿ ತಪ್ಪಿತು 289

ಕರ್ಣ ಬ್ರಹ್ಮಾಸ್ತ್ರಯುಕ್ತವಾದ ಸರ್ಪಬಾಣವನ್ನೆಸೆದ. ಬತ್ತಳಿಕೆಯಲ್ಲಿ ಆಗ ಸರ್ಪಾಕಾರದ ಬಾಣದಲ್ಲಿ ಯೋಗಬಲದಿಂದ ತಕ್ಷಕ ಪುತ್ರನಾದ ಅಶ್ವಸೇನ ಸರ್ಪನೆ ಸನ್ನಿಹಿತನಾಗಿದ್ದ. ಖಾಂಡವ ದಹನ ಕಾಲದಲ್ಲಿ ಅವನ ತಾಯಿಯನ್ನು ಅರ್ಜುನ ಕೊಂದಿದ್ದಕ್ಕೆ ಈ ಅವಕಾಶಕ್ಕೆ ಅವನು ಕಾದಿದ್ದ. ಆದರೆ ಶ್ರೀಕೃಷ್ಣ ಅರ್ಜುನನ ರಥವನ್ನು ನೆಲಕ್ಕೆ ಒತ್ತಿ ಐದು ಅಂಗುಲದಷ್ಟು ತಗ್ಗಿಸಿದಾಗ ಅಸ್ತ್ರ ಗುರಿತಪ್ಪಿ ಅರ್ಜುನನ ಕಿರೀಟವನ್ನು ಮಾತ್ರ ಪುಡಿಮಾಡಿತು. ಅಶ್ವಸೇನ ಹಿಂತಿರುಗಿ ಬಂದು ಮರಳಿ ಬಾಣವನ್ನು ತೊಡು ಎಂದರೆ ಕರ್ಣ ಇಲ್ಲ ಎಂದ. ಸರ್ಪತಾನೇ ಅರ್ಜುನನ ಕಡೆಗೆ ಹಾರಿತು. ಅರ್ಜುನನ ಬಾಣಕ್ಕೆ ತುತ್ತಾಯಿತು.

ಕರ್ಣಾವಸಾನ 292

ಕರ್ಣನ ಅವಸಾನ ಕಾಲ ಸಮೀಪಿಸುತ್ತಿದ್ದಂತೆ ಬ್ರಾಹ್ಮಣ ಶಾಪದಿಂದ ಅವನ ರಥದ

ಚಕ್ರ ನೆಲದಲ್ಲಿ ಹೂತುಹೋಯಿತು. ದಿವ್ಯಾಸ್ತ್ರಗಳು ಮರೆಯಾದುವು. ಕೃಷ್ಣನ ಮಾತಿನಂತೆ ಅರ್ಜುನ ಅಂಜಲಿಕಾಸ್ತ್ರದಿಂದ ಕರ್ಣನ ಶಿರಶ್ಛೇದಗೈದ.

ಅಧ್ಯಾಯ ೨೮

(ಶಲ್ಯ-ಸೌಪ್ತಿಕ-ಸ್ತ್ರೀ ಪರ್ವಗಳು)

ಹದಿನೆಂಟನೆ ದಿನದ ಯುದ್ಧ - ಶಲ್ಯವಧ 297

ಶಲ್ಯನಿಂದ ಧರ್ಮರಾಜ ವಿರಥನಾದ. ಆಗ ಅರ್ಜುನ ಶಲ್ಯನ ಬಿಲ್ಲುಗಳನ್ನು ಕತ್ತರಿಸಿದ. ಛತ್ರ ಧ್ವಜ ಸಾರಥಿಗಳನ್ನು ಉರುಳಿಸಿದ. ಧರ್ಮರಾಜ ಕುದುರೆಗಳನ್ನು ಕೊಂದ. ಶಲ್ಯ ಇನ್ನೊಂದು ರಥವೇರಿ ಬಂದು ಧರ್ಮರಾಜನನ್ನು ಪುನಃ ವಿರಥನನ್ನಾಗಿ ಮಾಡಿದ. ಸಾತ್ಯಕಿ-ಧೃಷ್ಟದ್ಯುಮ್ನರ ಕುದುರೆಗಳನ್ನೂ ಕೊಂದ. ನಕುಲ-ಸಹದೇವರ ಬಿಲ್ಲುಗಳನ್ನೂ ಕಡಿದು ಶಂಖನಾದ ಮಾಡಿದ. ಭೀಮ ಇದನ್ನು ಸಹಿಸದೆ ಶಲ್ಯನನ್ನು ವಿರಥನನ್ನಾಗಿ ಮಾಡಿದ. ಮೂರುಬಾರಿ ರಥಗಳನ್ನು ಮುರಿದು ಮರ್ಮಸ್ಥಳಗಳಲ್ಲಿ ಬಾಣಗಳಿಂದ ಗಾಯಗೊಳಿಸಿದ. ಹೀಗಾಗಿ ಕವಚವಿಲ್ಲದ, ನಿರಾಯುಧ ಶಲ್ಯ ಮೈಗಾಯಗೊಂಡು ಶ್ವಾಸಮಾತ್ರವಿದ್ದು ಮರಣ ಹೊಂದುವುದಕ್ಕಾಗಿಯೆ ಮುಷ್ಟಿಯನ್ನೆತ್ತಿ ಧರ್ಮರಾಜನ ಬಳಿಗೆ ನಡೆದ. ಅಷ್ಟರಲ್ಲಿ ಧರ್ಮರಾಜ ಇನ್ನೊಂದು ರಥವೇರಿ ಶಕ್ತ್ಯಾಯುಧದಿಂದ ಅವನನ್ನು ಸಂಹರಿಸಿದ.

ದುರ್ಯೋಧನನ ಪಲಾಯನ 302

ಅರ್ಜುನ ಸುಶರ್ಮನನ್ನೂ ಅಳಿದುಳಿದ ಸಂಶಪ್ತಕರನ್ನೂ ಕೊಂದ. ಅಳಿದುಳಿದ ದುರ್ಯೋಧನನ ತಮ್ಮಂದಿರೆಲ್ಲರನ್ನೂ ಭೀಮ ಕೊಂದ. ಉಲೂಕನನ್ನೂ ಶಕುನಿಯನ್ನೂ ಸಹದೇವ ಕೊಂದ. ಅಶ್ವತ್ಥಾಮ ಕೃಪ ಕೃತವರ್ಮರನ್ನು ಭೀಮಾರ್ಜುನರು ಓಡಿಸಿದರು. ಸಾತ್ಯಕಿ ಸಂಜಯನನ್ನು ಸೆರೆಹಿಡಿದಾಗ ವೇದವ್ಯಾಸರು ಬಂದು ಬಿಡಿಸಿದರು. ದುರ್ಯೋಧನ ಭೀಮನೊಡನೆ ಹೋರಾಡಿ ವಾಹನ ಆಯುಧಗಳನ್ನು ಕಳೆದುಕೊಂಡು ಒಂದು ಗದೆಯನ್ನು ಮಾತ್ರ ಹಿಡಿದು ಓಡಿದ. ದ್ವೈಪಾಯನ ಸರೋವರವನ್ನು ಹೊಕ್ಕ.

ಗದಾಯುದ್ಧ 306

ದೂರ್ವಾಸರು ಉಪದೇಶಿಸಿದ ಮಂತ್ರಗಳನ್ನು ನೀರೊಳಗೆ ಕುಳಿತು ಒಂದು ಸಪ್ತಾಹ ಜಪಿಸಿದರೆ ಸತ್ತ ಯೋಧರೆಲ್ಲರೂ ತಿರುಗಿ ಬದುಕಿ ಬರುತ್ತಾರೆ, ಅವಧ್ಯರಾಗುತ್ತಾರೆ. ಅದಕ್ಕೆ ದುರ್ಯೋಧನ ಮಂತ್ರ ಜಪಕ್ಕಾಗಿ ಸರೋವರದಲ್ಲಿ ಅಡಗಿದ. ಇದನ್ನು ತಿಳಿದ ಪಾಂಡವರು ಅಲ್ಲಿಗೆ ಬಂದರು. 'ಭಯದಿಂದ ನೀರಲ್ಲಿ ಅಡಗಿದೆ' ಎಂದು ಮುಂತಾಗಿ ಚುಚ್ಚು ಮಾತುಗಳಿಂದ ಧರ್ಮರಾಜ ಅವನನ್ನು ಹೊರಗೆ ಬರಿಸಿದ. ನಿನಗೆ ಇಷ್ಟವಾದ ಆಯುಧದಿಂದ ನಮ್ಮಲ್ಲಿ ಐವರಲ್ಲಿ ಒಬ್ಬನನ್ನು ಗೆದ್ದರೂ ರಾಜ್ಯ ನಿನಗೆ, ನಾವು ಕಾಡಿಗೆ ಹೋಗುವೆವು ಎಂದ.

ದುರ್ಯೋಧನ ಗದೆಯನ್ನೆತ್ತಿಕೊಂಡ. ಭೀಮನನ್ನು ಆರಿಸಿಕೊಂಡ. ಯುದ್ಧ ಪ್ರಾರಂಭವಾಯಿತು.

ಆಪದ್ಧರ್ಮ **311**

'ಯುಧಿಷ್ಠಿರ! ಐವರಲ್ಲಿ ಯಾರಾದರೊಬ್ಬನನ್ನು ಆರಿಸಿಕೊಳ್ಳೆಂದು ಹೇಳಿದೆಯಲ್ಲ! ದುರ್ಯೋಧನನೇನೋ ಭೀಮನನ್ನು ಆರಿಸಿಕೊಂಡ. ಭೀಮನೂ ನ್ಯಾಯಮಾರ್ಗದಿಂದ ಅವನನ್ನು ಕೊಲ್ಲದೆ ಆಪದ್ಧರ್ಮವೆಂದು ಏನಾದರೊಂದು ಉಪಾಯ ಮಾಡಬೇಕಾಗುತ್ತದೆ' ಎಂದ ಶ್ರೀಕೃಷ್ಣ. ಇಲ್ಲಿ ಆಪತ್ತೆಂದರೆ ಪ್ರಾಣಾಪಾಯ ಅಥವಾ ಸೋಲಿನ ಪ್ರಸಂಗವಲ್ಲ, ಅದು ಭೀಮನಿಗೆ ಎಂದೂ ಇಲ್ಲ. ಊರುಭಂಗ ಪ್ರತಿಜ್ಞೆ ಮಾಡಿದ್ದಾನೆ, ನಾಭಿಯಿಂದ ಕೆಳಗೆ ಹೊಡೆಯುವಂತಿಲ್ಲ. ಈಗ, ತೊಡೆ ಮುರಿದರೆ ಗದಾಯುದ್ಧದ ನಿಯಮಭಂಗ, ಮುರಿಯದಿದ್ದರೂ ಪ್ರತಿಜ್ಞಾಭಂಗ. ಇದು ಆಪತ್ತು. ವಸ್ತುತಃ ಪ್ರತಿಜ್ಞಾಪಾಲನೆ ಮುಖ್ಯ. ಅದಕ್ಕಾಗಿ ಗದಾಯುದ್ಧ ನಿಯಮ ಮೀರಿದರೂ ಅಧರ್ಮವಿಲ್ಲ. ಆದರೂ ಅಜ್ಞಲೋಕ ಅಧರ್ಮವೆನ್ನುತ್ತದೆ. ಅದರಿಂದ ಲೋಕದೃಷ್ಟಿಯಿಂದಲೂ ಅಧರ್ಮವಾಗದಂತೆ ಉಪಾಯದಿಂದ ಭೀಮ ಊರುಭಂಗಮಾಡಬೇಕಾಗಿದೆ ಎನ್ನುವುದು ಶ್ರೀಕೃಷ್ಣನ ಅಭಿಪ್ರಾಯ.

ಊರುಭಂಗ **315**

ನನ್ನ ಪ್ರತಿಜ್ಞಾನುಸಾರ ದುರ್ಯೋಧನನ ತೊಡೆ ಮುರಿಯುವೆನೆಂದು ಘೋಷಣ ಮಾಡುತ್ತಲೆ ಭೀಮ ಯುದ್ಧಕ್ಕೆ ತೊಡಗಿದ. ದುರ್ಯೋಧನ ಭೀಮನನ್ನು ವಂಚಿಸುವುದಕ್ಕಾಗಿ ಕೈಕಾಲುಗಳನ್ನು ನೆಲಕ್ಕೂರಿ ತಲೆಬಾಗಿ ತೊಡೆಗಳನ್ನು ಮರೆಮಾಡಿದ. ಆಗ ಭೀಮ ನಾಭಿಗೆ ಸರಿಯಾಗಿ ಬೆನ್ನು ಬುಡಕ್ಕೇ ಹೊಡೆದ. ಎರಡೂ ತೊಡೆ ಮುರಿದು ಬಿದ್ದ ದುರ್ಯೋಧನ. ಭೀಮ ನಾಭಿಯಿಂದ ಕೆಳಗೆ ಹೊಡೆಯದಿದ್ದುದರಿಂದ ಅಧರ್ಮವಾಗಲಿಲ್ಲ. ಮೇಲೆ ಹೊಡೆಯದಿದ್ದುದರಿಂದ ಧರ್ಮವೂ ಆಗಲಿಲ್ಲ. ಉಪಾಯವಾಗಿ ಪ್ರತಿಜ್ಞೆಯನ್ನು ಪೂರೈಸಿದ. ಬಳಿಕ ಶ್ರೀಕೃಷ್ಣನನ್ನು ಜೂಜಿನಲ್ಲಿ ಪಣವಾಗಿಡಲು ಹೇಳಿದ ಅಪರಾಧಕ್ಕಾಗಿ ದುರ್ಯೋಧನನ ತಲೆಯನ್ನು ತುಳಿದ ಭೀಮ. ಆಗಲೆ ಋಷಭಸೂಕ್ತವನ್ನು ಕಂಡುಕೊಂಡ. ಕೃಷ್ಣನನ್ನು ಬಂಧಿಸುವ ಆಲೋಚನೆ ಹೊಳೆದುದೂ ಈ ತಲೆಯಲ್ಲಿಯೆ ತಾನೆ? ಎಂದು ಇನ್ನೂ ತುಳಿದ.

ಭೀಮ ಅಧರ್ಮ ಮಾಡಲಿಲ್ಲ **321**

'ಇದು ಅಧರ್ಮ!' ಎಂದ ಬಲರಾಮ. ಶ್ರೀಕೃಷ್ಣ ಎಷ್ಟು ಹೇಳಿದರೂ ಇದು ಧರ್ಮದಲ್ಲಿ ವಂಚನೆ ಎನ್ನುತ್ತ ದ್ವಾರಕೆಗೆ ನಡೆದ. ಅದರಿಂದ ಯುಧಿಷ್ಠಿರನಿಗೂ ಇದು ಅಧರ್ಮವೆಂದು ಸಂದೇಹ. ಪಾಪಿಗಳನ್ನು ಅಧರ್ಮದಿಂದಲೆ ಕೊಲ್ಲಬೇಕು ಎಂದ ಶ್ರೀಕೃಷ್ಣ. ಧರ್ಮರಾಜನಿಗೆ ದುರ್ಯೋಧನ ಪಾಪಿ ಎನ್ನುವುದರಲ್ಲಿಯೂ ಸಂದೇಹ. ಭೂಭಾರಹರಣದ ಪೂರ್ಣಪುಣ್ಯ ಭೀಮನಿಗೇ ಲಭಿಸಬೇಕೆಂದು ಶ್ರೀಕೃಷ್ಣ ಬೇಕೆಂದೇ ಧರ್ಮರಾಜನನ್ನು ಸಂದೇಹದಲ್ಲಿ ಇರಿಸಿದ.

ದುರ್ಯೋಧನ ಕೋಪದಿಂದ ಕೃಷ್ಣನನ್ನು ಮಹಾಪಾಪಿ ಎಂದ. ತಾನು ಯಜ್ಞಾದಿ ಸತ್ಕರ್ಮಮಾಡಿ ಯಥೇಚ್ಛಸುಖಭೋಗಮಾಡಿ ರಣರಂಗದಲ್ಲಿ ಕಾದಿ ಮಡಿಯುತ್ತಿದ್ದೇನೆ, ವೀರಸ್ವರ್ಗ ಪಡೆಯುತ್ತಿದ್ದೇನೆ, ನಾನೆ ಪುಣ್ಯಶಾಲಿ ಎಂದ. ಆಗ ದೇವತೆಗಳು ಅವನ ಮೇಲೆ ಪುಷ್ಪವೃಷ್ಟಿ ಕರೆದರು. ಅವನಿಗೆ ಈ ಮಿಥ್ಯಾಜ್ಞಾನ ಸ್ಥಿರವಾಗಲಿ, ತಮಸ್ಸಾಗಲಿ ಎಂದೇ ದೇವತೆಗಳು ಹೀಗೆ ಮಾಡಿದ್ದರು. ಆದರೆ ಧರ್ಮರಾಜನಿಗೆ ಸಂದೇಹ ಇನ್ನೂ ಬಲಿಯಿತು.

ಅಶ್ವತ್ಥಾಮನಿಗೆ ಸೇನಾಧಿಪತ್ಯ **333**

ಏಕಾಂಗಿಯಾಗಿ ರಣರಂಗದಲ್ಲಿ ಬಿದ್ದು ನರಳುತ್ತಿದ್ದ ದುರ್ಯೋಧನನ ಬಳಿಗೆ ಅಶ್ವತ್ಥಾಮ ಕೃಪ ಕೃತವರ್ಮರು ಬಂದರು. ಪಾಂಡವರ ಸಂತತಿಯನ್ನು ಅಳಿಸಿ ತನ್ನ ಹೆಂಡತಿಯಲ್ಲಿ ಸಂತತಿಯನ್ನು ಮುಂದುವರಿಸೆನ್ನುತ್ತ ದುರ್ಯೋಧನ ಅಶ್ವತ್ಥಾಮನಿಗೆ ಧೂಳಿನಿಂದ ಸೇನಾಧಿಪತ್ಯದಲ್ಲಿ ಅಭಿಷೇಕ ಮಾಡಿದ. ಇಲ್ಲಿಗೆ ಶಲ್ಯಪರ್ವ ಮುಗಿಯಿತು.

ಸೌಪ್ತಿಕ ಪರ್ವ **334**

ರಾತ್ರಿ ಕಾಡಿನಲ್ಲಿ ಮರದ ಕೆಳಗೆ ಮಲಗಿದ್ದ ಅಶ್ವತ್ಥಾಮನಿಗೆ ಮರದ ಮೇಲೆ ಒಂದು ಸಾವಿರ ಕಾಗೆಗಳನ್ನು ಒಂದು ಗೂಬೆ ಕೊಂದುದನ್ನು ಕಂಡು ಪಾಂಡವರ ಶಿಬಿರದಲ್ಲಿ ರಾತ್ರಿ ಮಲಗಿರುವವರನ್ನೆಲ್ಲ ಹೀಗೆ ತಾನೊಬ್ಬನೆ ಕೊಲ್ಲಬೇಕೆನ್ನುವ ಆಲೋಚನೆ ಹೊಳೆಯಿತು. ತಕ್ಷಣ ಶಿಬಿರದ ಕಡೆಗೆ ಹೊರಟ. ಕೃಪ ಕೃತವರ್ಮರೂ ಅವನನ್ನು ಹಿಂಬಾಲಿಸಿದರು.

ಶಿಬಿರ ದ್ವಾರದಲ್ಲಿ ಭೂತ **335**

ಶ್ರೀಕೃಷ್ಣನ ಆದೇಶದಂತೆ ರುದ್ರ ಪಾಂಡವರ ಶಿಬಿರ ದ್ವಾರದಲ್ಲಿ ಭೂತ ರೂಪದಿಂದ ನಿಂತಿದ್ದ. ಶ್ರೀಕೃಷ್ಣನೂ ಅನಂತ ರೂಪಗಳಿಂದ ನಿಂತಿದ್ದ. ಅಶ್ವತ್ಥಾಮ ಭೂತದ ಮೇಲೆ ಎಲ್ಲ ಆಯುಧಗಳನ್ನು ಎಸೆದರೂ ಭೂತ ಅವನ್ನು ನುಂಗಿತು, ಹೊರತು ದಾರಿ ಬಿಡಲಿಲ್ಲ. ಆಗ ಅಶ್ವತ್ಥಾಮ ರುದ್ರಾಂತರ್ಯಾಮಿಯಾದ ಹರಿಗೆ ಶಿಬಿರ ವಾಸಿಗಳ ಹತ್ಯೆಯನ್ನು ಯಜ್ಞರೂಪದಿಂದ ಅರ್ಪಿಸುವುದಾಗಿ ಸಂಕಲ್ಪಿಸಿದ. ಒಡನೆ ರುದ್ರ ಎಲ್ಲ ಆಯುಧಗಳನ್ನು ಕೊಟ್ಟು ದಾರಿಬಿಟ್ಟು ಅದೃಶ್ಯನಾದ. ಅಶ್ವತ್ಥಾಮ ಕೃಪ ಕೃತವರ್ಮರನ್ನು ದ್ವಾರದಲ್ಲಿ ನಿಲ್ಲಿಸಿ ಹೊರಗೆ ಓಡಿಹೋಗುವವರನ್ನು ಕೊಲ್ಲಲು ಆದೇಶ ನೀಡಿ ತಾನು ಒಳಗೆ ನಡೆದ.

ವೀರಯೋಧರ ಮಾರಣಹೋಮ **338**

ಮಲಗಿದ್ದ ಧೃಷ್ಟದ್ಯುಮ್ನನ ಎದೆಗೆ ಒದ್ದು ಗುರುಹತ್ಯಾ ಪಾತಕಿಗೆ ಶಸ್ತ್ರದಿಂದ ವಧೆ ಸಲ್ಲದೆಂದು ಬಿಲ್ಲಿನ ಹಗ್ಗವನ್ನು ಕೊರಳಿಗೆ ಸುತ್ತಿ ಬಿಗಿದು ಮಥನ ಮಾಡಿ ಕೊಂದ. ಬಳಿಕ ಶಿಖಂಡಿ ಯುಧಾಮನ್ಯು ಉತ್ತಮೌಜ ಜನಮೇಜಯರನ್ನೂ ಕೊಂದ. ದ್ರೌಪದೀ ಪುತ್ರರನ್ನೂ ಕೊಂದ. ಭೀಮನಿಗೆ ಕಾಳೀದೇವಿಯಲ್ಲಿ ಜನಿಸಿದ ಸರ್ವತ್ರಾತನನ್ನು ಕ್ಷಣದಲ್ಲಿ ಶಿವ ಕೈಲಾಸಕ್ಕೊಯ್ದು

ಕಾಪಾಡಿದ. ಏಕೆಂದರೆ ಕಾಳಿಯ ತಂದೆ ಕಾಶಿರಾಜನಿಗೆ ಶಿವ ಹಾಗೆ ವರವಿತ್ತಿದ್ದ. ಮುಂದೆ ಪಾಂಡವರ ರಾಜ್ಯಭಾರಕಾಲದಲ್ಲಿಯೂ ಶರ್ವತ್ರಾತ ಹಿಂತಿರುಗಿ ಬರಲಿಲ್ಲ. ಪರೀಕ್ಷಿತನಿಗೆ ಪಟ್ಟನೀಡುವ ಶ್ರೀಕೃಷ್ಣನ ಸಂಕಲ್ಪಾನುಸಾರ ಶಿವ ಅವನನ್ನು ತನ್ನ ಬಳಿಯೆ ಇರಿಸಿಕೊಂಡ.

ಶಿಬಿರ ದಾಹ **341**

ಅಶ್ವತ್ಥಾಮ ಮುಂದೆ ಚೇಕಿತಾನ ಚೇದಿ ಪಾಂಚಾಲ ಕರೂಶ ಕಾಶಿರಾಜರುಗಳ ಸಂಬಂಧಿಗಳನ್ನೂ ಇತರ ಎಲ್ಲ ವೀರರನ್ನೂ ಸಂಹರಿಸಿ ಮಕ್ಕಳನ್ನೂ ಹೆಂಗಸರನ್ನೂ ಕೊಲ್ಲಲು ಶಿಬಿರಕ್ಕೇ ಬೆಂಕಿ ಹಚ್ಚಿದ. ಧೃಷ್ಟದ್ಯುಮ್ನನ ಸಾರಥಿಯೊಬ್ಬನೇ ತಪ್ಪಿಸಿಕೊಂಡು ಓಡಿ ಉಪಪ್ಲಾವ್ಯದಲ್ಲಿ ದ್ರೌಪದಿಗೆ ಎಲ್ಲ ವೃತ್ತಾಂತವನ್ನೂ ತಿಳಿಸಿದ. ಅಶ್ವತ್ಥಾಮ ದ್ರೌಪದೀಪುತ್ರರ ತಲೆಗಳನ್ನು ಒಯ್ದು ದುರ್ಯೋಧನನಿಗೆ ತೋರಿದಾಗ ಅವನು ತೃಪ್ತನಾಗಿ ಶರೀರತ್ಯಾಗ ಮಾಡಿದ.

ಬ್ರಹ್ಮಾಸ್ತ್ರ ಪ್ರಯೋಗ **343**

ಭೀಮ ಅಶ್ವತ್ಥಾಮನನ್ನು ಬೆನ್ನಟ್ಟಿದಾಗ ಆತ ಭಯದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಶ್ರೀಕೃಷ್ಣನಿಂದ ಸುದರ್ಶನ ಚಕ್ರವನ್ನು ಪಡೆದು ಅವನನ್ನೆ ವಧಿಸಬೇಕೆಂದು ಆಲೋಚಿಸುವಂಥ ದುಡುಕು ಬುದ್ಧಿ ಅಶ್ವತ್ಥಾಮನದು. ಅವನು ಈಗ ಭೀಮನ ಮೇಲೆ ಬ್ರಹ್ಮಾಸ್ತ್ರ ಬಿಡಬಹುದು ಎನ್ನುತ್ತ ಶ್ರೀಕೃಷ್ಣ ಧರ್ಮರಾಜ ಅರ್ಜುನರೊಂದಿಗೆ ಹೊರಟ. ಅರ್ಜುನ ಅಶ್ವತ್ಥಾಮನ ಬ್ರಹ್ಮಾಸ್ತ್ರಕ್ಕೆ ಪ್ರತಿಯಾಗಿ ತಾನೂ ಬ್ರಹ್ಮಾಸ್ತ್ರ ಪ್ರಯೋಗಿಸಿದ. ಎರಡು ಅಸ್ತ್ರಗಳ ನಡುವೆ ವೇದವ್ಯಾಸರು ಬಂದು ನಿಂತು ನಿಮ್ಮ ನಿಮ್ಮ ಅಸ್ತ್ರಗಳನ್ನು ನೀವು ಉಪಸಂಹರಿಸಿ ಎಂದರು. ಅರ್ಜುನ ಉಪಸಂಹರಿಸಿದ. ಅಶ್ವತ್ಥಾಮನ ಬ್ರಹ್ಮಚರ್ಯ ನಷ್ಟವಾಗಿದ್ದರಿಂದ ಅವನ ಅಸ್ತ್ರವನ್ನೂ ಅರ್ಜುನನೆ ಉಪಸಂಹರಿಸಬೇಕಾಯಿತು. ಹೀಗೆ ಸೋತ ಅಶ್ವತ್ಥಾಮನಿಂದ ಅವನ ತಲೆಯಲ್ಲಿದ್ದ ಸ್ವಾಭಾವಿಕವಾದ ಮಣಿಯನ್ನು ಭೀಮ ಸ್ವೀಕರಿಸಿದ.

ಪಾಂಡವ ಸಂತತಿಯ ಉಳಿವು **348**

ಉತ್ತರೆಯ ಗರ್ಭದಲ್ಲಿದ್ದ ಏಕಮಾತ್ರ ಪಾಂಡವ ಸಂತತಿಯನ್ನು ನಾಶಮಾಡುವ ಸಂಕಲ್ಪದಿಂದ ಅಶ್ವತ್ಥಾಮ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ್ದ. ಆದರೆ ಒಂದು ಸಾವಿರ ವರ್ಷಕಾಲ ಭೂಮಿಯಲ್ಲಿ ಪಾಂಡವರ ಸಂತತಿ ಇರುವಂತೆ ಮಾಡಲು ಶ್ರೀಕೃಷ್ಣ ಸಂಕಲ್ಪಿಸಿದ್ದ. ಹೀಗಾಗಿ ಶ್ರೀಕೃಷ್ಣ ಒಂದು ರೂಪದಿಂದ ಗರ್ಭಸ್ಥ ಶಿಶುವಿನ ರಕ್ಷಣೆಗೆ ನಿಂತ.

ಭಾಗವತ ವಿರೋಧ ಪರಿಹಾರ **351**

ಭಾಗವತದಲ್ಲಿ ಅಶ್ವತ್ಥಾಮನನ್ನು ಅರ್ಜುನ ಕಟ್ಟಿತಂದು ದ್ರೌಪದಿಯ ಕಾಲಬುಡಕ್ಕೆ ಹಾಕಿದಂತೆ, ಗುರುಪುತ್ರನೆಂಬ ಆದರದಿಂದ ದ್ರೌಪದಿ ಅವನನ್ನು ಬಿಡಿಸಿದಂತೆ ವರ್ಣನೆ ಇದೆ.

ಆದರೆ ಈ ವರ್ಣನೆ ಅಶ್ವತ್ಥಾಮನ ಸ್ವಪ್ನವೃತ್ತಾಂತಕ್ಕೆ ಸಂಬಂಧಿಸಿದೆ. ವಾಸ್ತವದಲ್ಲಿ ಭೀಮನೆ ಅಶ್ವತ್ಥಾಮನನ್ನು ಬೆನ್ನಟ್ಟಿಬಂದ. ಅದರಿಂದ ಭಾಗವತವಿರೋಧವಿಲ್ಲ. ಬಳಿಕ ಅಶ್ವತ್ಥಾಮ ತಾನು ಸ್ವಪ್ನದಲ್ಲಿ ಕಂಡಿದ್ದು ಹೆಚ್ಚಿನಂಶ ಸತ್ಯವಾಯಿತು ಎಂದುಕೊಂಡ. ಇಲ್ಲಿಗೆ ಸೌಪ್ತಿಕ ಪರ್ವ ಮುಗಿಯಿತು.

ಸ್ತ್ರೀಪರ್ವ-ಭೀಮ ಪ್ರತಿಮೆ ಪುಡಿಯಾಯಿತು. **354**

ಪಾಂಡವರು ಧೃತರಾಷ್ಟ್ರನಿಗೆ ನಮಿಸಿದರು. ಭೀಮ ನಮಿಸುವಾಗ ಶ್ರೀಕೃಷ್ಣ ಅವನನ್ನು ಈಚೆಗೆ ಎಳೆದು ಅವನ ಪ್ರತಿಮೆಯನ್ನು ಮುಂದೆ ನಿಲ್ಲಿಸಿದ. ಅಂಧ ಧೃತರಾಷ್ಟ್ರನಿಗೆ ಅದು ತಿಳಿಯಲಿಲ್ಲ. ತನ್ನ ನೂರು ಮಕ್ಕಳನ್ನು ಕೊಂದವನೆಂದು ರೋಷದಿಂದ ಬಿಗಿಯಾಗಿ ಅಪ್ಪಿ ಆ ಉಕ್ಕಿನ ಪ್ರತಿಮೆಯನ್ನು ಪುಡಿಮಾಡಿದ.

ಗಾಂಧಾರಿಯ ಕೋಪ **356**

'ನಾನು ಕುಲನಾಶಕನಾದ ಪಾಪಿ' ಎನ್ನುತ್ತ ಧರ್ಮರಾಜ ಗಾಂಧಾರಿಗೆ ನಮಿಸಿದಾಗ ಅವಳು ಕಣ್ಣಿಗೆ ಕಟ್ಟಿದ್ದ ಬಟ್ಟೆಯ ಅಂಚಿನಿಂದ ಧರ್ಮರಾಜನ ಕಾಲಿನ ಉಗುರುಗಳನ್ನು ದಿಟ್ಟಿಸಿದಳು. ಒಡನೆ ಅವು ಸುಟ್ಟು ಕಪ್ಪಾದವು. ಭೀಮ ನಮಿಸಿ ಅವಳ ಪ್ರಶ್ನೆಗಳಿಗೆ ಉತ್ತರವಾಗಿ ತಾನು ಪ್ರತಿಜ್ಞಾಪಾಲನೆಗಾಗಿ ದುರ್ಯೋಧನನ ತೊಡೆ ಮುರಿದೆ, ದುಃಶಾಸನನ ರಕ್ತ ಕುಡಿದಂತೆ ತೋರಿಕೊಂಡೆ ಎಂದ. ನೂರು ಮಂದಿಯೂ ಕೃಷ್ಣನ ಬಂಧನಕ್ಕೆ ಯತ್ನಿಸಿದ್ದರಿಂದ ಎಲ್ಲರನ್ನೂ ಕೊಲ್ಲಬೇಕಾಯಿತು ಎಂದೂ ಹೇಳಿದ.

ಗಾಂಧಾರಿಗೆ ದಿವ್ಯದೃಷ್ಟಿ **359**

ಪಾಂಡವರ ರಕ್ಷಣೆಯ ದೃಷ್ಟಿಯಿಂದ ಗಾಂಧಾರಿಯ ತಪಸ್ಸಿನ ಪುಣ್ಯವನ್ನು ಕಳೆಯಲು ವೇದವ್ಯಾಸರು ಅವಳಿಗೆ ದಿವ್ಯದೃಷ್ಟಿ ನೀಡಿ ಮೃತಪುತ್ರರೆಲ್ಲರ ಶವಗಳನ್ನೂ ಕಣ್ಣಾರೆ ಕಾಣುವಂತೆ ಮಾಡಿದರು. ಅವಳು ಶೋಕಪರವಶಳಾಗಿ ಶ್ರೀಕೃಷ್ಣನನ್ನು ಶಪಿಸಿದಳು, 'ನಮ್ಮ ಕುಲವನ್ನು ನಾಶಗೊಳಿಸಿದೆಯಾದ್ದರಿಂದ ನಿನ್ನ ಕುಲವೂ ಪರಸ್ಪರ ಕಲಹದಿಂದ ನಾಶಹೊಂದಲಿ' ಎಂದು. ಅವಳು ಪತಿಗಿಂತ ಹೆಚ್ಚು ಪುಣ್ಯ ಮಾಡಿದ್ದರಿಂದ ಶಾಪದ ಮೂಲಕ ಅದನ್ನು ಹೀಗೆ ಕಸಿದುಕೊಂಡ ಶ್ರೀಕೃಷ್ಣ.

ಅಂತ್ಯ ಸಂಸ್ಕಾರ **361**

ದುರ್ಯೋಧನ ಮುಂತಾದವರ ಹೆಂಡಂದಿರು ಪತಿಗಳ ಶವಗಳನ್ನು ಆಲಿಂಗಿಸಿಕೊಂಡು ಗೋಳಿಡುವುದನ್ನು ಶ್ರೀಕೃಷ್ಣ ದ್ರೌಪದಿಗೆ ತೋರಿಸಿದ. ಬಳಿಕ ಪಾಂಡವರು ಭೀಷ್ಮದ್ರೋಣ ಮುಂತಾದ ಸಜ್ಜನರಿಗೆ ತಾವೇ ಅಂತ್ಯೇಷ್ಟಿ ಮಾಡಿದರು. ಇನ್ನುಳಿದ ಸಜ್ಜನರ ಶವಗಳನ್ನು ಸಾರಥಿಗಳಿಂದ ಸರಸ್ವತೀ ನದಿಯಲ್ಲಿ ಹಾಕಿಸಿದರು. ಬೇರೆ ಎಲ್ಲ ಶವಗಳೂ ಹಾಗೇ ಬಿದ್ದಿದ್ದುವು. ಪಾಂಡವರು ಗಂಗೆಯಲ್ಲಿ ಬಾಂಧವರಿಗೆ ಜಲಾಂಜಲಿ ಕೊಡುವಾಗ 'ಕರ್ಣ ನಿಮ್ಮಣ್ಣ, ಅವನಿಗೂ

ಕೊಡಿರಿ' ಎಂದಳು ಕುಂತಿ. ಧರ್ಮರಾಜ ಆಘಾತಗೊಂಡು 'ಈ ರೀತಿ ಸ್ತ್ರೀಯರಲ್ಲಿ ರಹಸ್ಯ ಎಂದೂ ನಿಲ್ಲದಿರಲಿ' ಎಂದು ಶಪಿಸಿದ.

ಅಧ್ಯಾಯ ೨೯
(ಶಾಂತಿಪರ್ವ)

ಚಾರ್ವಾಕ ರಾಕ್ಷಸ 367

ಬ್ರಾಹ್ಮಣಾವಮಾನ ಮಾಡದಿದ್ದರೆ ನೀನು ಅವಧ್ಯನಾಗಿರುವಿ ಎಂದು ಬ್ರಹ್ಮನ ವರ ಪಡೆದಿದ್ದ ಚಾರ್ವಾಕ ರಾಕ್ಷಸ ಯತಿವೇಷದಿಂದ ಬಂದು 'ಬ್ರಾಹ್ಮಣರೆಲ್ಲರೂ ನಿನ್ನನ್ನು ನಿಂದಿಸುತ್ತಿದ್ದಾರೆ' ಎಂದು ಧರ್ಮರಾಜನ ಮುಂದೆ ನುಡಿದ. ಬ್ರಾಹ್ಮಣರು ಸಿಟ್ಟಾಗಿ ಅವನನ್ನು ಹುಂಕಾರದಿಂದ ಸುಟ್ಟರು.

ಭೀಷ್ಮನ ಉಪದೇಶ 369

'ತಾನು ಮಾಡಿದ್ದು ಪಾಪ, ಎಲ್ಲರೂ ಅಭಿಮಾನದಿಂದಲೆ ಅದನ್ನು ಪಾಪವಲ್ಲ ಎನ್ನುತ್ತಿದ್ದಾರೆ' ಎಂದುಕೊಂಡ ಧರ್ಮರಾಜ. ಅದರಿಂದ ಶತ್ರುಪಕ್ಷದವನಾದ ಭೀಷ್ಮನಿಂದಲೆ ಹೇಳಿಸಬೇಕೆಂದು ಧರ್ಮರಾಜನನ್ನು ಭೀಷ್ಮನ ಬಳಿಗೆ ಕಳಿಸಿದರು. ದೇವೋತ್ತಮರಾದ ಪಾಂಡವರಿಗೆ ಉಪದೇಶ ನೀಡಲು ಭೀಷ್ಮ ಶಕ್ತನಲ್ಲ. ಅವನೊಳಗೆ ನಿಂತು ಶ್ರೀಕೃಷ್ಣನೆ ನುಡಿದ.

ಭಾಗವತ ಧರ್ಮ 371

ಹರಿಸರ್ವೋತ್ತಮತ್ವ ದೇವತಾ ತಾರತಮ್ಯಜ್ಞಾನ, ವಿಷ್ಣು ವೈಷ್ಣವರಿಗೆ ವಿರೋಧ ಮಾಡದಿರುವುದು ಮುಂತಾದುದು ಸರ್ವಸಾಧಾರಣವಾದ ಭಾಗವತಧರ್ಮ.

ಚಾತುರ್ವರ್ಣ್ಯ ಧರ್ಮ 372

ತತ್ತ್ವೋಪದೇಶ ನೀಡುವುದು ಬ್ರಾಹ್ಮಣನಿಗೆ ವಿಹಿತವಾದ ವಿಶೇಷ ಧರ್ಮ. ಅವನು ಹೆಂಡತಿ ಮಕ್ಕಳಿಗೂ ಶಿಷ್ಯರಿಗೂ ಕೂಡ ಶಾರೀರಕವಾಗಿ ದಂಡ ಮಾಡಬಾರದು. ಅಪ್ರಯತ್ನವಾಗಿ ಸ್ವತಃ ಲಭ್ಯವಾದ ದ್ರವ್ಯದಿಂದಾಗಲಿ ಭಿಕ್ಷೆ ಬೇಡಿ ಪಡೆದ ದ್ರವ್ಯದಿಂದಾಗಲಿ, ಅಧ್ಯಾಪನ ಪೌರೋಹಿತ್ಯ ವೃತ್ತಿಗಳಿಂದಾಗಲಿ ಜೀವನ ನಿರ್ವಹಣೆ ಮಾಡಬೇಕು. ಮಹಾ ಆಪತ್ತಿನಲ್ಲಿ ವೈಶ್ಯಧರ್ಮವಾದ ಕೃಷಿ ವಾಣಿಜ್ಯ ಮುಂತಾದುವನ್ನು ಕೈಗೊಳ್ಳಬಹುದು. ಕ್ಷತ್ರಿಯನು ದೇವಸ್ವ ಬ್ರಹ್ಮಸ್ವಗಳನ್ನು ಹೊರತು ಬೇರೆ ಎಲ್ಲ ದ್ರವ್ಯಗಳನ್ನು ಅನುಭವಿಸಬಹುದು. ವಿರೋಧಿಯಾದ ಕ್ಷತ್ರಿಯನಿಂದ ಬಲಾತ್ಕಾರವಾಗಿ ಅಪಹರಿಸಬಹುದು. ಧರ್ಮದ ಕಡೆ ಹೋರಾಡುವಾಗ ಎಂದೂ ಪಲಾಯನ ಮಾಡಕೂಡದು. ವೈಶ್ಯನು ಕೃಷಿ ವಾಣಿಜ್ಯ ಗೋರಕ್ಷಣೆ ಬಡ್ಡಿ ವ್ಯವಹಾರಗಳನ್ನು ನಡೆಸಬೇಕು. ಶೂದ್ರ ತ್ರೈವರ್ಣಿಕ ಪರಿಚರ್ಯೆ ಮಾಡಬೇಕು.

ಸ್ತ್ರೀ ಪುರುಷ ಧರ್ಮಗಳು **374**

ಸ್ತ್ರೀಯರು ವೇದ ವ್ಯತಿರಿಕ್ತ ಪುರಾಣ ಮುಂತಾದುವನ್ನು ಅಭ್ಯಾಸ ಮಾಡಬೇಕು. ಪತಿವ್ರತೆಯರಾಗಿರಬೇಕು. ಪತಿಗಳಿಗಿಂತ ಹೆಚ್ಚು ಹೀನರಾದ ಪುರುಷರನ್ನು ಬಯಸಿದಂತೆಲ್ಲ ಹೆಚ್ಚು ದೋಷವಾಗುವುದು. ಪುರುಷರು ತ್ರಿವರ್ಣಸ್ಥರು ವೇದಾದಿ ಸಕಲ ಸಚ್ಛಾಸ್ತ್ರಗಳನ್ನೂ ಅಧ್ಯಯನ ಮಾಡಬೇಕು. ಪತ್ನೀವ್ರತಸ್ಥರಾಗಬೇಕು. ತನಗಿಂತ ಹೆಚ್ಚು ಉತ್ತಮರಾದ ಪುರುಷರ ಸ್ತ್ರೀಯರನ್ನು ಬಯಸಿದಂತೆಲ್ಲ ಹೆಚ್ಚು ದೋಷ ಅವರಿಗೆ ಬರುವುದು. ದೇವತಾ ಸ್ತ್ರೀಯರೂ ಋಷಿಪತ್ನಿಯರೂ ಉತ್ತಮ ಸ್ತ್ರೀಯರೆನಿಸುತ್ತಾರೆ. ಇವರು ಮನುಷ್ಯರಾಗಿ ಹುಟ್ಟಿದಾಗಲೂ ವೇದಾಧಿಕಾರವಿರುತ್ತದೆ.

ತ್ರಿವಿಧ ಜೀವರ ಸಾಧನೆ **375**

ವಿಷ್ಣು ವೈಷ್ಣವ ದ್ವೇಷಮಾಡುವವರು ತಮಸ್ಸಿಗೂ, ತತ್ವದಲ್ಲಿ ಸದಾ ಸಂಶಯ ಪಡುವವರು ನರಕಕ್ಕೂ ಹೋಗುತ್ತಾರೆ. ಗುಣ ದೋಷಗಳು ಸಮವಾಗಿರುವವರು ಪುನಃ ಪುನಃ ಮನುಷ್ಯ ಜನ್ಮ ಹೊಂದುವರು. ಜ್ಞಾನಾದಿ ಗುಣಗಳು ಅಧಿಕವಿದ್ದರೆ ಕ್ರಮೇಣ ದೋಷಗಳನ್ನು ಕಳೆದುಕೊಂಡು ಉತ್ತಮಲೋಕಗಳನ್ನೂ ಸರ್ವದೋಷಕ್ಷಯವನ್ನು ಹೊಂದಿರುವವರು ಜ್ಞಾನಸಾಧನೆ ಪೂರ್ತಿಯಾದಾಗ ಮೋಕ್ಷವನ್ನೂ ಹೊಂದುವರು.

ಪುರುಷಾರ್ಥ ಮೀಮಾಂಸೆ **376**

ಪುರುಷಾರ್ಥಗಳಲ್ಲಿ ಯಾವುದು ಶ್ರೇಷ್ಠ ಎಂಬ ವಿಷಯವನ್ನು ಚರ್ಚೆಗೆ ಮಂಡಿಸಿದ ಧರ್ಮರಾಜ. ಆಗ ವಿದುರನೆಂದ, 'ಧರ್ಮಶ್ರೇಷ್ಠ, ಅರ್ಥ ಮಧ್ಯಮ, ಕಾಮ ಅಧಮ' ಎಂದು. ಅರ್ಜುನನೆಂದ, 'ದೈವೀ ಸಂಪದ್ರೂಪವಾದ ಜ್ಞಾನ ಭಕ್ತ್ಯಾದಿ ಅರ್ಥ ಉತ್ತಮ. ಧರ್ಮಕ್ಕೆ ಅದು ಸಾಧ್ಯವೂ ಸಾಧನವೂ ಆಗಿದೆ. ಅದರಿಂದ ಧರ್ಮ ಮಧ್ಯಮ. ಮಾನುಷ ಅರ್ಥರೂಪವಾದ ಧನವೂ ಉತ್ತಮವೆ. ಅದರಿಂದ ಗುರು ದೇವತೆಗಳು ಸಂತುಷ್ಟರಾದರೆ ಮೋಕ್ಷವನ್ನು ಕೊಡಬಲ್ಲರು. ಕಾಮ ಅಧಮ ಎನ್ನುವುದು ಸರ್ವಸಮ್ಮತ'. ನಕುಲಸಹದೇವರೂ ಅರ್ಜುನನ ವಾದವನ್ನೇ ಪುರಸ್ಕರಿಸಿದರು. ಭೀಮನೆಂದ, 'ಕಾಮವೇಕೆ ಅಧಮ? ಕಾಮವೆಂದರೇನು? ಕಾಮಿತ. ಧರ್ಮ ಅರ್ಥ ಮೋಕ್ಷ ಈ ಮೂರೂ ಕಾಮಿತವಾದ್ದರಿಂದ ಕಾಮದಲ್ಲಿಯೆ ಅವು ಸೇರುತ್ತವೆ. ಜ್ಞಾನ, ಭಕ್ತ್ಯಾದಿಗಳು ಕಾಮಿತವಾಗದೆ ಹೋದರೆ ಮೋಕ್ಷ ಸಾಧನೆ ನಡೆಯದು. ಮೋಕ್ಷವೂ ಕಾಮಿತವಾಗದಿದ್ದರೆ ಸಾಧ್ಯವೆನಿಸದು. ಶ್ರೀಹರಿ ಕಾಮಿತನಾಗದಿದ್ದರೆ ಮೋಕ್ಷ ನೀಡಲಾರ. ಕಾಮನೆಯನ್ನೇ ಕಾಮ ಎನ್ನುವುದಾದರೆ ಅದು ಜೀವಸ್ವರೂಪ ಭೂತ ಕಾಮನೆ, ಮಾನಸಿಕ ಕಾಮನೆ ಎಂದು ಎರಡು ಬಗೆಯಾಗಿದೆ. ಸ್ವರೂಪಭೂತ ಕಾಮನೆ ಸಂಸಾರದಲ್ಲಿ ವ್ಯಕ್ತವಾಗದು. ಮೋಕ್ಷದಲ್ಲಿ ಮಾತ್ರ ವ್ಯಕ್ತವಾಗುವುದು. ಮಾನಸಿಕ ಕಾಮನೆ ಸಂಸಾರದಲ್ಲಿ ಸದಾ ವ್ಯಕ್ತ, ಮೋಕ್ಷದಲ್ಲಿ ಇಲ್ಲವೆ ಇಲ್ಲ. ಅದರಿಂದ ಅದು ಪ್ರಶ್ನಾರ್ಹವಲ್ಲ. ಸುಖಭೋಗ ರೂಪವಾದ

ಕಾಮದಲ್ಲಿ ತಾರತಮ್ಯವನ್ನು ಕೇಳುವಿಯಾದರೆ ಧರ್ಮ ಅರ್ಥಗಳಿಗೆರಡಕ್ಕೂ ಅವಿರೋಧಿಯಾದರೆ ಅದು ಉತ್ತಮ. ಎರಡರಲ್ಲಿ ಒಂದಕ್ಕೆ ವಿರೋಧಿಯಾದರೆ ಮಧ್ಯಮ. ಎರಡಕ್ಕೂ ವಿರೋಧಿಯಾದರೆ ಅಧಮ. ಅದರಿಂದ ಸದ್ಬುದ್ಧಿರೂಪಳಾದ ಸ್ತ್ರೀಯನ್ನು ಯಥೇಚ್ಛವಾಗಿಯೆ ಭೋಗಿಸು, ಸ್ರಕ್‌ಚಂದನ ವನಿತಾದಿ ಕಾಮೋಪಭೋಗವನ್ನೂ ಧರ್ಮಕ್ಕೆ ವಿರೋಧವಾಗದಂತೆ ಭೋಗಿಸು.' ಧರ್ಮರಾಜ ಎಲ್ಲರ ವಾದವನ್ನೂ ಪ್ರಶಂಸಿಸಿ ತಾನು ಮೋಕ್ಷವನ್ನು ಉತ್ತಮ ಪುರುಷಾರ್ಥ ಎಂದು ಸಮರ್ಥಿಸಿದ. ಮೋಕ್ಷವೂ ಭೀಮನ ಪ್ರಕಾರ ಕಾಮದಲ್ಲಿ ಸೇರುವುದರಿಂದ ವಿರೋಧವಿಲ್ಲವೆಂದು ಅವನು ಸುಮ್ಮನಿದ್ದ, ನಿರಾಕರಿಸಲಿಲ್ಲ.

ಅಧ್ಯಾಯ ೩೦

(ಆಶ್ವಮೇಧಿಕ ಪರ್ವ)

ಧರ್ಮರಾಜನ ವಿರಕ್ತಜೀವನ **389**

ಭೀಷ್ಮನ ನಿರ್ಯಾಣವಾದ ಬಳಿಕ ಧರ್ಮರಾಜ ವೇದವ್ಯಾಸ ಕೃಷ್ಣರಿಂದ ಸಾಂತ್ವನ ಪಡೆಯುತ್ತ ಭೋಗಗಳನ್ನು ಪೂರ್ತಿಯಾಗಿ ತೊರೆದು ಗೋವ್ರತ ಮುಂತಾದ ವ್ರತಗಳನ್ನೂ ತುಲಾಪುರುಷಾದಿ ಮಹಾದಾನಗಳನ್ನೂ ನಡೆಸುತ್ತ ಪಾಂಡುವಿನ ಮನೆಯಲ್ಲಿ ವಾಸ ಮಾಡಿದ.

ಭೀಮನ ವೈಭವದ ಜೀವನ - ಪ್ರಜೆಗಳ ಮಹಾಭಾಗ್ಯ **391**

ಭೀಮ ಯುವರಾಜನಾಗಿ ದ್ರೌಪದೀ ಕಾಳೀದೇವಿಯರೊಂದಿಗೂ ವಸುದೇವ ಪುತ್ರಿಯರಾದ ಇಪ್ಪತ್ತು ಮಂದಿ ಬೇರೆ ಪತ್ನಿಯರೊಂದಿಗೂ ಕೂಡಿ ದೇವಗಂಧರ್ವಾದಿ ಸೇವಿತನಾಗಿ ದಿವ್ಯಭೋಗಗಳನ್ನು ಅನುಭವಿಸುತ್ತ ದುರ್ಯೋಧನನ ಮನೆಯಲ್ಲಿ ವಾಸಮಾಡಿದ. ಪ್ರತಿಊರಿನಲ್ಲಿಯೂ ಐದು ಧರ್ಮಾಧಿಕಾರಿಗಳನ್ನು ನೇಮಿಸಿ ಅವರ ಮೂಲಕ ಏಕಾದಶ್ಯಾದಿ ಸಕಲ ವೈಷ್ಣವ ಧರ್ಮಗಳನ್ನೂ ಕಾಪಾಡಿದ. ಭೀಮನ ಆಳ್ವಿಕೆಯಲ್ಲಿ ಅವೈಷ್ಣವರು ಧರ್ಮದ್ರೋಹಿಗಳು ಎಲ್ಲಿಯೂ ಇರಲಿಲ್ಲ. ಎಲ್ಲರಿಗೂ ವೇದವ್ಯಾಸ ಕೃಷ್ಣರ ಸಂದರ್ಶನ ಉಪದೇಶ ಶ್ರವಣಗಳ ಭಾಗ್ಯವಿದ್ದುದರಿಂದ ಕಲಿಯುಗ ಕೃತಯುಗಕ್ಕಿಂತ ಮೇಲೆನಿಸಿತು. ಕಲಿಯುಗದಲ್ಲಿ ಅಲ್ಪಧರ್ಮಕ್ಕೂ ಮಹತ್ತಾದ ಪುಣ್ಯವಿರುವಾಗ ಮಹಾಧರ್ಮವನ್ನೆ ಆಚರಿಸುವ ಭೀಮನ ಪ್ರಜೆಗಳಿಗೆ ಎಷ್ಟು ಪುಣ್ಯ ಲಭಿಸಿರಬಹುದು!

ಅರ್ಜುನನ ಸಂಯಮ ಪೂರ್ಣಜೀವನ **395**

ಅರ್ಜುನ ಪರರಾಷ್ಟ್ರಗಳನ್ನು ನಿಯಂತ್ರಿಸುತ್ತ ಭೋಗಗಳನ್ನು ಕಡಿಮೆಮಾಡಿ ಸದಾ ಶ್ರೀಕೃಷ್ಣನ ಉಪದೇಶದಿಂದ ಪುತ್ರಶೋಕವನ್ನು ಮರೆತು ಸುಭದ್ರೆ, ಚಿತ್ರಾಂಗದೆಯರೊಡನೆ ದುಃಶಾಸನನ ಮನೆಯಲ್ಲಿ ವಾಸಮಾಡಿದ.

ಪಾಂಡವ ಕೀರ್ತಿನಾರಿ **397**

ಪಾಂಡವರ ಆಳ್ವಿಕೆಯಲ್ಲಿ ಎಲ್ಲಿಯೂ ರೋಗ ಅಕಾಲ ಮರಣಗಳಿರಲಿಲ್ಲ. ಮಳೆ ಬೆಳೆ ಚೆನ್ನಾಗಿದ್ದು ಸುಭಿಕ್ಷವಿರುತ್ತಿತ್ತು. ಜನರು ಆಸ್ತಿಕರಾಗಿದ್ದರು. ಪಾಂಡವರ ಕೀರ್ತಿನಾರಿ ಅಸುರಪಪಕ್ಷದವರ ತಲೆಗಳನ್ನು ಮೆಟ್ಟಿ ಬ್ರಹ್ಮಾಂಡವನ್ನು ವ್ಯಾಪಿಸಿ ನಿಂತಳು.

ಕಲಿನಿಗ್ರಹ **400**

ಭೀಮ ಕಲಿಯನ್ನು ಸೆರೆಹಿಡಿದು ತಂದು ಕೃಷ್ಣ ಯುಧಿಷ್ಠಿರರ ಮುಂದೆ ನಿಲ್ಲಿಸಿದ. ಪಾಂಡವರ ಸಂತತಿ ಇರುವಷ್ಟು ಕಾಲ ನೀನು ಭೂಮಿಯಲ್ಲಿ ಪ್ರಭಾವ ಬೀರಬೇಡ. ನಾವಿರುವಷ್ಟು ಕಾಲ ಭೂಮಿಯನ್ನು ಕಣ್ಣಿಂದ ನೋಡಲೂ ಕೂಡದು ಎಂದು ಯುಧಿಷ್ಠಿರ ಕಲಿಗೆ ಆಜ್ಞೆ ಮಾಡಿದ.

ಅನುಗೀತೆ **403**

ಗೀತೋಪದೇಶವನ್ನು ಮರೆತ ಅರ್ಜುನನಿಗೆ ಶ್ರೀಕೃಷ್ಣ ಅನುಗೀತೆಯನ್ನು ಉಪದೇಶಿಸಿದ - ಭಾರತಿ ಾಯು ಶ್ರೀಕೃಷ್ಣರು ಮೂವರೆ ಜಗನ್ನಿಯಾಮಕರು, ಜೀವರಲ್ಲಿ ತ್ತ್ವೈವಿಧ್ಯ ತಾರತಮ್ಯಗಳು ಎಂದೂ ವ್ಯತ್ಯಾಸವಾಗುವುದಿಲ್ಲ...ಇತ್ಯಾದಿ.

ಉದಂಕ ಮುನಿಗೆ ಅಮೃತ **406**

ಉದಂಕಮುನಿ ಶ್ರೀಕೃಷ್ಣನ ಭಕ್ತನೆ. ಆದರೆ ಕೌರವರನ್ನು ಶಿಷ್ಟರೆಂದು ಅಭಿಮಾನದಿಂದ ಕಂಡವ. ಶ್ರೀಕೃಷ್ಣ ಶಕ್ತಿ ಇದ್ದೂ ಅವರನ್ನು ಉಳಿಸಲಿಲ್ಲ ಎಂಬ ಕೋಪದಿಂದ ಶಾಪಕೊಡಲು ಉದ್ಯುಕ್ತನಾದ. ಅವನಿಗೆ ನರಕವಾಗದಿರಲಿ ಎಂದು ಕರುಣೆಯಿಂದ ಶ್ರೀಕೃಷ್ಣ ವಿಶ್ವರೂಪ ತೋರಿದ. ವಿಶ್ವರೂಪದರ್ಶನದ ಫಲವಾಗಿ ಇಂದ್ರನಿಂದ ನಿನಗೆ ಅಮೃತ ಕೊಡಿಸುವೆನೆಂದು ಹೇಳಿ ದ್ವಾರಕೆಗೆ ತೆರಳಿದ. ಮಾನವರಿಗೆ ಅಮೃತ ಯೋಗ್ಯವಲ್ಲ, ನಾನು ಮುನಿಯನ್ನು ವಂಚಿಸುವೆನು ಎಂದ ಇಂದ್ರ. ಕೃಷ್ಣ 'ಆಗಲಿ' ಎಂದ. ನನ್ನ ಮಾತಿನಲ್ಲಿ ಮುನಿಗೆ ವಿಶ್ವಾಸವಿರುವುದಾದರೆ ಅವನಿಗೆ ಅಮೃತ ಲಭ್ಯವಾಗುವುದು, ಇಲ್ಲದಿದ್ದರೆ ಇಲ್ಲ ಎಂದ. ಇಂದ್ರ ಅಸಹ್ಯವಾದ ಚಂಡಾಲ ವೇಷದಿಂದ ಬಂದು ಮೂತ್ರ ಮಾಡುವವನಂತೆ ತೋರಿಕೊಂಡು 'ಇಕೋ! ಅಮೃತ! ಕೃಷ್ಣ ನಿನಗಾಗಿ ಕಳಿಸಿದ್ದಾನೆ!' ಎಂದ. ಮುನಿ ಕೃಷ್ಣನ ಮಾತಿನಲ್ಲಿ ವಿಶ್ವಾಸವಿಡದೆ ಮೂತ್ರವೆಂದೇ ಬಗೆದು 'ಬೇಡ' ಎಂದ.

ಅಶ್ವಮೇಧಕ್ಕೆ ಸನ್ನಾಹ **410**

ಹಿಮಾಲಯದ ತುದಿಯಲ್ಲಿ ಮರುತ್ತ ರಾಜನೂ ವೃಷಪರ್ವ ದಾನವನೂ ಬಹಳ ಯಜ್ಞಮಾಡಿ ಉಳಿದ ಧನವನ್ನು ಅಲ್ಲಿಯೆ ಬಿಟ್ಟು ಹೋಗಿದ್ದರು. ಪಾಂಡವರು ವೇದವ್ಯಾಸರ ಆದೇಶದಂತೆ ಆ ಧನವನ್ನು ಅಶ್ವಮೇಧ ಯಜ್ಞಕ್ಕಾಗಿ ತಂದರು.

ಉದಂಕ ಮೇಘಗಳು **413**

ಶ್ರೀಕೃಷ್ಣ ಪಾಂಡವರ ಅಶ್ವಮೇಧದಲ್ಲಿ ಪಾಲುಗೊಳ್ಳಲು ಹಿಂತಿರುಗಿ ಬರುವಾಗ ದಾರಿಯಲ್ಲಿ ಪುನಃ ಉದಂಕ ಮುನಿಯನ್ನು ಕಂಡು ಅವನು ಮರುಭೂಮಿಯಲ್ಲಿ ಬಾಯಾರಿದಾಗೆಲ್ಲ ಮಳೆಗರೆವ ಮೋಡಗಳನ್ನು ಅನುಗ್ರಹಿಸಿದ. ಅವುಗಳಿಗೆ ಉದಂಕಮೇಘಗಳೆಂದೆ ಹೆಸರಾಯಿತು.

ಪರೀಕ್ಷಿತನ ಜನನ **414**

ಅಶ್ವತ್ಥಾಮನ ಬ್ರಹ್ಮಾಸ್ತ್ರ ಪ್ರಭಾವದಿಂದ ಹುಟ್ಟುವಾಗಲೆ ಮೃತನಾಗಿದ್ದ ಪರೀಕ್ಷಿತನನ್ನು ಶ್ರೀಕೃಷ್ಣ ಬದುಕಿಸಿದ.

ಅಶ್ವಮೇಧದ ಕುದುರೆ **415**

ಅಶ್ವಮೇಧದ ಕುದುರೆಯನ್ನು ಅರ್ಜುನ ಹಿಂಬಾಲಿಸಿದ. ಧರ್ಮರಾಜನ ಆಜ್ಞೆಯಂತೆ ಯಾವ ರಾಜರನ್ನೂ ಕೊಲ್ಲದೆ, ಗೆದ್ದು, ಕುದುರೆಯನ್ನು ಎಲ್ಲ ರಾಷ್ಟ್ರಗಳಲ್ಲಿ ತಿರುಗಿಸಿದ. ಮಣಲೂರಿಗೆ ಬಂದಾಗ ಅರ್ಜುನಪುತ್ರ ಬಭ್ರುವಾಹನ ತಂದೆ ಎಂದು ಪ್ರೀತಿಯಿಂದ ಇದಿರುಗೊಂಡರೆ ಮಗನ ಪರಾಕ್ರಮವನ್ನು ಕಾಣಬಯಸಿದ್ದ ಅರ್ಜುನನಿಗೆ ನಿರಾಸೆಯಾಯಿತು. ಅವನ ಸತ್ಕಾರವನ್ನು ನಿರಾಕರಿಸಿದ, ಯುದ್ಧಮಾಡು ಎಂದ.

ಬಭ್ರುವಾಹನ ಕಾಳಗ **416**

ಬಭ್ರುವಾಹನ ತಂದೆಯೊಡನೆ ಯುದ್ಧವನ್ನೊಲ್ಲದೆ ಚಿಂತಾಮಗ್ನನಾಗಿ ಕುಳಿತಾಗ ಉಲೂಪಿ ಬಂದು ಯುದ್ಧಕ್ಕೆ ಪ್ರೇರಣೆ ನೀಡಿದಳು. ಯುದ್ಧ ನಡೆಯಿತು. ಅರ್ಜುನ ಮಗನೊಡನೆ ಪ್ರೀತಿಯಿಂದ ಮೃದುವಾಗಿಯೆ ಯುದ್ಧ ಮಾಡಿದ. ಬಭ್ರುವಾಹನ ತನ್ನೆಲ್ಲ ಆಯುಧಗಳು ವ್ಯರ್ಥವಾದಾಗ ಪರೀಕ್ಷೆಗಾಗಿ ಮಂತ್ರಪೂರಿತವಾದ ಒಂದು ಮಹಾಬಾಣವನ್ನು ಎಸೆದ. ಅರ್ಜುನ ಮೂರ್ಛೆಹೊಂದಿದ. ಉಲೂಪಿ ನಾಗಲೋಕದಿಂದ ವಿಶಲ್ಯಕರಣಿಯನ್ನು ತಂದು ಅರ್ಜುನನನ್ನು ಎಚ್ಚರಿಸಿದಳು. ಅರ್ಜುನ ಭೀಷ್ಮನನ್ನು ಕೆಡವಿದಾಗ ಕುಪಿತರಾದ ವಸುದೇವತೆಗಳು ನೀನೂ ಯುದ್ಧದಲ್ಲಿ ಮೂರ್ಛಿತನಾಗಿ ಬೀಳೆಂದು ಶಪಿಸಿದರೆಂದೂ ಇಂಥ ಪರಾಭವ ಅರ್ಜುನನಿಗೆ ಬರುವುದಾದರೆ ಮಗನಿಂದಲೆ ಬರಲಿ ಅದರಿಂದ ಕೀರ್ತಿ ಎಂದು ಬಗೆದು ತಾನು ಬಭ್ರುವಾಹನನಿಗೆ ಯುದ್ಧ ಪ್ರಚೋದನೆ ನೀಡಿದೆ ಎಂದೂ ಉಲೂಪಿ ಹೇಳಿದಳು. ಮುಂದೆ ಕುದುರೆ ದ್ವಾರಕೆಗೆ ಬಂದಾಗ ಪ್ರದ್ಯುಮ್ನ ಮುಂತಾದವರು ಅದನ್ನು ಕಟ್ಟಿದರೂ ವಸುದೇವ ಬಿಡಿಸಿದ.

ಅರ್ಜುನನಲ್ಲಿ ಸಾಮುದ್ರಿಕ ಲಕ್ಷಣ **420**

ಅರ್ಜುನ ಸದಾ ಸಂಚಾರ ಮಾಡುತ್ತಾನೆ, ಏನು ಕಾರಣ ಎಂದು ಧರ್ಮರಾಜ ಕೇಳಿದಾಗ

ಅವನ ಶರೀರ ಸ್ವಲ್ಪ ಹೆಚ್ಚು ಉದ್ದ ಎಂದ ಶ್ರೀಕೃಷ್ಣ. ಅಷ್ಟರಲ್ಲಿ ದ್ರೌಪದಿ ಕಣ್ಣನೋಟದಿಂದ ತಡೆದಳು. ಹೊಟ್ಟೆ ಮತ್ತು ವೃಷಣಗಳು ಸ್ವಲ್ಪ ದೊಡ್ಡದಾಗಿರುವುದು, ಎಡತೋಳು ಸ್ವಲ್ಪ ಹೆಚ್ಚು ಉದ್ದವಾಗಿರುವುದು ಅವನಲ್ಲಿದ್ದ ದೋಷಗಳು. ಸಕಲ ದೋಷ ರಹಿತರಾದ ಜೀವರು ದ್ರೌಪದೀ ಭೀಮಸೇನರು ಮಾತ್ರ. ಈ ಎಲ್ಲ ಅಂಶವನ್ನೂ ಹೇಳದಂತೆ ದ್ರೌಪದಿ ತಡೆದುದು ಸಾಮುದ್ರಿಕ ಶಾಸ್ತ್ರದ ಗೋಪ್ಯತೆಯನ್ನು ಕಾಪಾಡುವುದಕ್ಕಾಗಿ.

ಅಶ್ವಮೇಧ ಯಾಗ **423**

ಪರಶುರಾಮ ವೇದವ್ಯಾಸ ಕೃಷ್ಣ ಈ ಮೂರು ಭಗವದ್ ರೂಪಗಳಿಂದ ಯುಕ್ತವಾದ ಅಶ್ವಮೇಧ ಯಾಗ ವೈಭವೋಪೇತವಾಗಿ ಉತ್ತಮಕಲ್ಪದ ಐದು ಅಶ್ವಮೇಧವಾಗಿ ಹದಿನೈದು ವರ್ಷಗಳ ಕಾಲ ನಡೆಯಿತು. ಕೊನೆಯಲ್ಲಿ ಸಮಸ್ತ ಭೂಮಂಡಲವನ್ನು ಪಾಂಡವರು ಋತ್ವಿಜರಿಗೆ ದಾನವಾಗಿ ಕೊಟ್ಟರು. ಋತ್ವಿಜರು ಭೂಮಿಗೆ ಪ್ರತಿನಿಧಿಯಾಗಿ ಸುವರ್ಣವನ್ನು ಸ್ವೀಕರಿಸಿ ಭೂಮಿಯನ್ನು ಹಿಂತಿರುಗಿಸಿದರು.

ಯಾಗ ನಿಂದೆ **431**

ಮುಂಗುಸಿರೂಪಿ ಕ್ರೋಧಾಸುರ ಯಾಗವನ್ನು ನಿಂದಿಸಿ 'ಒಬ್ಬ ಬಡಬ್ರಾಹ್ಮಣ ಅತಿಥಿಗೆ ಹಿಟ್ಟನ್ನು ದಾನಮಾಡಿದ. ಆ ಅತಿಥಿಯ ಪಾದೋದಕ ಸ್ಪರ್ಶದಿಂದ ನನ್ನ ಮೈಯ ಒಂದು ಪಾರ್ಶ್ವ ಬಂಗಾರವಾಯಿತು. ಈ ಯಾಗದ ಅವಭೃಥ ಜಲದಲ್ಲಿ ಮಿಂದರೂ ಇನ್ನೊಂದು ಪಾರ್ಶ್ವ ಬಂಗಾರವಾಗಲಿಲ್ಲ. ಅದರಿಂದ ಆ ದಾನದ ಹದಿನಾರನೆ ಒಂದಂಶಕ್ಕೆ ಈ ಯಾಗ ಸಮಾನವಲ್ಲ' ಎಂದ. ಇದಕ್ಕೆ ಯಾರೂ ಪ್ರತಿಯಾಗಿ ಹೇಳಲಿಲ್ಲ. ಎಲ್ಲರಿಗೂ ಇದು ಸಮ್ಮತವೆಂದು ತಿಳಿದು ಅಸುರ ಹೊರಟುಹೋದ, ತಮಸಿನಲ್ಲಿ ಬಿದ್ದ. ಈ ಅಸುರ ಹಿಂದೆ ಜಮದಗ್ನಿ ಶ್ರಾದ್ಧಕ್ಕಾಗಿ ಇರಿಸಿದ್ದ ಹಾಲನ್ನು ಎಂಜಲುಮಾಡಿ ಪಿತೃದೇವತೆಗಳಿಂದ 'ನೀನು ಮುಂಗುಸಿಯಾಗೆಂ' ದು ಶಪ್ತನಾಗಿದ್ದ. ಧರ್ಮರಾಜನ ಯಜ್ಞವನ್ನು ನಿಂದಿಸಿದಾಗ ಶಾಪಮುಕ್ತಿ ಎಂದೂ ಅವರು ಹೇಳಿದ್ದರು. ಅಸುರ ಹಾಗೇ ಯಜ್ಞವನ್ನು ನಿಂದಿಸಿ ಶಾಪಮುಕ್ತನಾಗಿ ತಮಸ್ಸಿಗೆ ನಡೆದಿದ್ದ. ಒಂದು ಕರ್ಮದ ಹಿನ್ನೆಲೆಯಲ್ಲಿ ಎಷ್ಟು ಶ್ರಮವಿದೆ ಎನ್ನುವುದಕ್ಕಿಂತ ಎಷ್ಟು ಜ್ಞಾನಾದಿ ಗುಣಗಳಿವೆ ಎನ್ನುವುದು ಮುಖ್ಯ. ಅದರಿಂದ ಪಾಂಡವರ ಯಾಗಕ್ಕೆ ಸಮಾನ ಇನ್ನೊಂದು ಕರ್ಮವಿಲ್ಲ. ಯಾಗದ ಕೊನೆಯಲ್ಲಿ ಶ್ರೀಕೃಷ್ಣ ಧರ್ಮರಾಜನ ಅಪೇಕ್ಷೆಯಂತೆ ಶೇಷಧರ್ಮಗಳನ್ನು ಉಪದೇಶಿಸಿದ.

ಅಧ್ಯಾಯ ೩೧

(ಆಶ್ರಮವಾಸಿಕ ಪರ್ವ)

ನಾಳೆ ಬಾ ಎಂದ ಧರ್ಮರಾಜ **441**

ರಾತ್ರಿಯಲ್ಲಿ ಒಬ್ಬ ಬ್ರಾಹ್ಮಣ ಬಂದು ಧರ್ಮರಾಜನಲ್ಲಿ ಯಾಗಕ್ಕೆ ಹಣ ಬೇಡಿದ. 'ನಾಳೆ

ಬಾ' ಎಂದ ಧರ್ಮರಾಜ. ಬ್ರಾಹ್ಮಣ ಭೀಮನಲ್ಲಿ ಬೇಡಿದ. ಭೀಮ ಬೇಗನೆ ಕೈಯ ಆಭರಣವನ್ನೆ ತೆಗೆದು ಕೊಟ್ಟ. ಬಳಿಕ ಆನಂದದ ಭೇರೀನಾದ ಹೊರಡಿಸಿದ. ಏಕೆ ಎಂದರೆ 'ಧರ್ಮರಾಜನಿಗೆ ತಾನು ನಾಳೆ ಬೆಳಿಗ್ಗೆವರೆಗೆ ಬದುಕಿರುವುದು ನಿಶ್ಚಿತವಿದೆ!' ಎಂದ. ಧರ್ಮಾಚರಣೆಯಲ್ಲಿ ವಿಲಂಬ ಸಲ್ಲದು ಎನ್ನುವ ಭೀಮನ ಅಭಿಪ್ರಾಯವನ್ನು ತಿಳಿದು ಧರ್ಮರಾಜ ಎಚ್ಚೆತ್ತುಕೊಂಡ.

ಧೃತರಾಷ್ಟ್ರನಿಗೆ ವೈರಾಗ್ಯ 442

ದೇಶದ ಸಮಸ್ತ ರಾಜರ ನಾಶಕ್ಕೆ ಕಾರಣನಾಗಿ ಮಹಾಪಾಪ ಮಾಡಿಯೂ ಧೃತರಾಷ್ಟ್ರ ವಿಷಯಾಸಕ್ತನಾಗಿರುವುದನ್ನು ಭೀಮ ಸಹಿಸಲಿಲ್ಲ. ಸೋದರರೂ ಎಲ್ಲ ಸ್ತ್ರೀಯರೂ ಧೃತರಾಷ್ಟ್ರನನ್ನು ಬಹಳ ಆದರಿಸಿದರೂ ತಾನು ಹಾಗೆ ಮಾಡಲಿಲ್ಲ, ಇತರರೂ ಮಾಡದಂತೆ ಪ್ರಚೋದನೆ ನೀಡಿದ. ಆದರೂ ದ್ರೌಪದಿ ವಿಶೇಷವಾಗಿ ಉಪಚರಿಸುತ್ತಿದ್ದಳು. ಏಕೆಂದರೆ ಪುತ್ರಶೋಕ ಪ್ರಯುಕ್ತವೆ ಧೃತರಾಷ್ಟ್ರನಿಗೆ ಭೀಮನಲ್ಲಿ ಕೋಪ. ಆ ಪುತ್ರಶೋಕವನ್ನು ಮರೆಸಿ ಭೀಮನ ಮೇಲಿನ ಕೋಪವನ್ನು ಆರಿಸಿ ಅನರ್ಥದಿಂದ ಕಾಪಾಡುವ ಬಯಕೆ ಅವಳದು. ಅವನಿಗೆ ವೈರಾಗ್ಯ ಬಂದರೆ ಅದಕ್ಕೆ ಕಾರಣನಾದ ಭೀಮ ತನ್ನ ಹಿತೈಷಿ ಎಂಬ ಭಾವನೆ ಬಂದೀತೆಂದು ಭೀಮನ ಆಶಯವಿದ್ದಿತು. ಅದರಿಂದ 'ನನ್ನ ಈ ಬಾಹುಗಳು ಮುದುಕನ ಎಲ್ಲ ಮಕ್ಕಳನ್ನೂ

ಕೊಂದವು' ಎಂದು ಪುನಃಪುನಃ ಹೇಳತೊಡಗಿದ. ವಿದುರನೂ ಹೇಳಿದ, 'ಭೀಮ ಅನಾದರದಿಂದ ಹಾಕುವ ಅನ್ನದ ಪಿಂಡವನ್ನು ನಾಯಿಯಂತೆ ತಿನ್ನುವಿ! ವಾನಪ್ರಸ್ಥಕ್ಕೆ ಏಕೆ ಹೋಗಬಾರದು?' ಎಂದು. ಧೃತರಾಷ್ಟ್ರನಿಗೆ ಜ್ಞಾನೋದಯವಾಯಿತು. ಕಾಡಿಗೆ ಹೊರಟ. ಧರ್ಮರಾಜ ಅದಕ್ಕೆ ಅನುಮತಿ ನೀಡದಿದ್ದಾಗ ಉಪವಾಸ ಸತ್ಯಾಗ್ರಹ ಮಾಡಿದ. ವೇದವ್ಯಾಸರ ಉಪದೇಶದಿಂದ ಧರ್ಮರಾಜ ಅನುಮತಿ ನೀಡಿದ.

ಪಾಪಿಗಳಿಗೇಕೆ ಶ್ರಾದ್ಧ ? 447

ಧೃತರಾಷ್ಟ್ರ ಮಕ್ಕಳಿಗೆ ಶ್ರಾದ್ಧಮಾಡಿ ಕಾಡಿಗೆ ಹೋಗಬೇಕೆಂದು ಬಯಸಿದ. ಭೀಮನೆಂದ, 'ಪಾಪಿಗಳಿಗೆ ಏಕೆ ಶ್ರಾದ್ಧ? ಅವರು ದುರ್ಗತಿ ಹೊಂದಲಿ. ನಾನು ಬೊಕ್ಕಸದಿಂದ ಹಣ ನೀಡಲಾರೆ.' ಕೊನೆಯಲ್ಲಿ ಧರ್ಮರಾಜ ಅರ್ಜುನರು ತಮ್ಮ ಸ್ವಂತದ ಹಣವನ್ನು ಕೊಟ್ಟರು. 'ಋಣ ಪರಿಹಾರವಾಗಲಿ, ಮುಂದಿನ ಜನ್ಮದಲ್ಲಿ ಆ ಪಾಪಿಗಳ ಬಾಂಧವ್ಯ ತಿರುಗಿ ತನಗೆ ಉಂಟಾಗದಿರಲಿ' ಎಂದು ಶುದ್ಧ ಮನಸ್ಸಿನಿಂದಲೆ ಧೃತರಾಷ್ಟ್ರ ಶ್ರಾದ್ಧ ಮಾಡಿದ.

ಆಶ್ರಮ ವಾಸ 450

ಧೃತರಾಷ್ಟ್ರ ಪ್ರಜೆಗಳ ಮುಂದೆ ಮಕ್ಕಳ ಪರವಾಗಿ ಕ್ಷಮಾಯಾಚನೆ ಮಾಡಿ ಬದರಿಕಾಶ್ರಮಕ್ಕೆ ಹೊರಟ. ಜೊತೆಗೆ ಗಾಂಧಾರಿಯೂ ಕುಂತಿ ವಿದುರ ಸಂಜಯರೂ ಹೊರಟರು. ಇನ್ನು ಮೂರು ವರ್ಷ ಧೃತರಾಷ್ಟ್ರನಿಗೆ ಆಯುಷ್ಯ ಎಂದರು ನಾರದರು. ವೇದವ್ಯಾಸರಿಂದ ಉಪದೇಶ ಪಡೆದು ಒಳ್ಳೆಯ ತಪಸ್ಸು ಮಾಡಿದ ಧೃತರಾಷ್ಟ್ರ. ವಿದುರ ಪರಕಾಯ ಪ್ರವೇಶವೆಂಬ

ಯೋಗಬಲದಿಂದ ಧರ್ಮರಾಜನ ಶರೀರವನ್ನು ಹೊಕ್ಕು ಅವನೊಂದಿಗೆ ಐಕ್ಯಹೊಂದಿದ. ಏಕೆಂದರೆ ಇಬ್ಬರೂ ಒಬ್ಬ ಯಮನ ಎರಡು ಅಂಶಗಳು.

ಮಡಿದವರೊಂದಿಗೆ ಪುನರ್ಮಿಲನ **456**

ಪಾಂಡವರು ಒಮ್ಮೆ ಸಪರಿವಾರರಾಗಿ ಧೃತರಾಷ್ಟ್ರನ ಆಶ್ರಮಕ್ಕೆ ಬಂದಾಗ ವೇದವ್ಯಾಸರು ಬಂದು ಎಲ್ಲರಿಗೂ ಅವರ ಮನೋಭೀಷ್ಟಗಳನ್ನು ಪೂರೈಸುವೆನು ಎಂದರು. ಕುಂತಿ ಕರ್ಣನಿಗೆ ತನ್ನಿಂದಾದ ಅನ್ಯಾಯದ ಪರಿಮಾರ್ಜನೆಯನ್ನು ಕೇಳಿಕೊಂಡಳು. ಪಾಂಡವರು ಹೆಚ್ಚಿನ ಭಕ್ತಿಯನ್ನು ಬೇಡಿದರು. ಧೃತರಾಷ್ಟ್ರ ಗಾಂಧಾರಿಯೊಡನೆ ಸಮಾಲೋಚಿಸಿ ಮೃತರಾದ ಎಲ್ಲ ಬಾಂಧವರನ್ನೂ ಕಾಣಬೇಕೆಂದು ಕೇಳಿಕೊಂಡ. ವೇದವ್ಯಾಸರು ಎಲ್ಲ ಮೃತರನ್ನೂ ತರಿಸಿದರು. ಧೃತರಾಷ್ಟ್ರ ಗಾಂಧಾರಿಯರಿಗೆ ದಿವ್ಯದೃಷ್ಟಿಯನ್ನೂ ನೀಡಿದರು. ಪಾಂಡವರೂ ಕೌರವರೂ ಎಲ್ಲರೂ ಪರಸ್ಪರ ದ್ವೇಷವನ್ನು ಮರೆತು ಒಂದು ರಾತ್ರಿ ಆನಂದದಿಂದ ನಲಿದಾಡಿದರು. ಈ ಕಥೆಯನ್ನು ಜನಮೇಜಯ ವೈಶಂಪಾಯನರಿಂದ ಕೇಳಿದಾಗ ನನಗೂ ಮೃತನಾದ ತಂದೆಯನ್ನು ತಿರುಗಿ ತಂದು ತೋರಿರೆಂದ. ವೇದವ್ಯಾಸರು ಒಡನೆ ಪರೀಕ್ಷಿತನನ್ನು ತಂದು ತೋರಿದರು.

ಧೃತರಾಷ್ಟ್ರನ ಮರಣ **459**

ಧೃತರಾಷ್ಟ್ರ ಕೊನೆಯ ಉತ್ಸರ್ಗೇಷ್ಟಿಯನ್ನು ಮಾಡಿದ. ಆ ಅಗ್ನಿ ಕಾಳ್ಗಿಚ್ಚಾಗಿ ವ್ಯಾಪಿಸಿ ಅವನನ್ನೆ ದಹಿಸಿತು. ಜೊತೆಗೆ ಗಾಂಧಾರಿ ಕುಂತಿಯರೂ ಸುಟ್ಟುಹೋದರು. ಸಂಜಯ ವೇದವ್ಯಾಸರ ಬಳಿಗೆ ಬಂದು ತನ್ನ ಸದ್ಗತಿಯನ್ನು ಸಾಧಿಸಿಕೊಂಡ.

ಅಧ್ಯಾಯ ೩೨

(ಮೌಸಲ-ಮಹಾಪ್ರಸ್ಥಾನಿಕ-ಸ್ವರ್ಗಾರೋಹಣ ಪರ್ವಗಳು)

ಶ್ರೀಕೃಷ್ಣನ ಸತ್ರಯಾಗ **465**

ಶ್ರೀಕೃಷ್ಣ ಕುರುಕ್ಷೇತ್ರದಲ್ಲಿ ಹನ್ನೆರಡು ವರ್ಷಗಳ ಸತ್ರಯಾಗವನ್ನು ಕೈಗೊಂಡ. ಅದರಲ್ಲಿ ವೇದವ್ಯಾಸ ಪರಶುರಾಮ ರೂಪದಿಂದ ತಾನೇ ಸದಸ್ಯನೂ ಆದ. ಬ್ರಹ್ಮರುದ್ರಾದಿ ದೇವತೆಗಳೂ ದಕ್ಷ ಭೃಗು ಮುಂತಾದ ಮುನಿಗಳೂ ಎಲ್ಲ ಯಾದವರೂ ಪಾಂಡವರೂ ಅಲ್ಲಿ ಸೇರಿದರು. ಎಲ್ಲರೂ ತಾವು ಬಯಸಿದ ಧರ್ಮಾದಿ ನಾಲ್ಕು ಪುರುಷಾರ್ಥಗಳನ್ನೂ ಶ್ರೀಕೃಷ್ಣನಿಂದ ಪಡೆದರು.

ಯಾದವರ ಅಂತಃಕಲಹ **467**

ಸಾಂಬನಿಗೆ ಯಾದವರು ಗರ್ಭಿಣೀಸ್ತ್ರೀಯ ವೇಷ ತೊಡಿಸಿ ಈಕೆ ಏನು ಹಡೆಯುವಳೆಂದು ಮುನಿಗಳ ಮುಂದೆ ಕೇಳಿ ಅಪಹಾಸ್ಯಗೈದಾಗ ಅವರು ಕುಪಿತರಾಗಿ ಈತ ಸಾಂಬ, ಕುಲನಾಶಕವಾದ ಒಂದು ಒನಕೆಯನ್ನು ಹೆರುತ್ತಾನೆ ಎಂದು ಶಪಿಸಿದರು. ಆ ಒನಕೆಯನ್ನು

ತೇದು ಸಮುದ್ರದಲ್ಲಿ ಹಾಕಿದರು ಯಾದವರು. ಇತ್ತ ಶ್ರೀಕೃಷ್ಣ ಅವತಾರ ಸಮಾಪ್ತಿ ಮಾಡಲೆಂದು ಬ್ರಹ್ಮರುದ್ರಾದಿ ದೇವತೆಗಳು ಕೇಳಿಕೊಂಡರು. ಶ್ರೀಕೃಷ್ಣ ಎಲ್ಲ ಯಾದವರನ್ನೂ ಪ್ರಭಾಸ ಕ್ಷೇತ್ರಕ್ಕೆ ಕರೆದೊಯ್ದ. ಏಕೆಂದರೆ ದ್ವಾರಕೆ ಮಹಾಪುಣ್ಯಕ್ಷೇತ್ರವಾಗಿದ್ದರೂ ಯಾದವರಿಗೆ ಸ್ವಕ್ಷೇತ್ರ. ಸ್ವಕ್ಷೇತ್ರದಲ್ಲಿ ಮರಣ ಪ್ರಶಸ್ತವಲ್ಲ. ಪ್ರಭಾಸದಲ್ಲಿ ಎಲ್ಲರೂ ಧರ್ಮಕಾರ್ಯಗಳನ್ನು ನಡೆಸಿ ಶ್ರೀಕೃಷ್ಣನ ಇಚ್ಛೆಯಂತೆ ಮದ್ಯಪಾನ ಮಾಡಿ ಪರಸ್ಪರ ಕಲಹ ಮಾಡಿದರು. ಒನಕೆಯ ಪುಡಿಯಿಂದ ಬೆಳೆದುನಿಂತಿದ್ದ ದರ್ಭೆಗಳಿಂದಲೆ ಹೊಡೆದುಕೊಂಡು ಮಡಿದರು. ತಮ್ಮ ನಿಜರೂಪಗಳನ್ನು ಹೊಂದಿದರು.

ಕೃಷ್ಣಾವತಾರ ಸಮಾಪ್ತಿ **469**

ಯಾದವ ಕುಲನಾಶದ ವಾರ್ತೆಯನ್ನು ಶ್ರೀಕೃಷ್ಣ ದಾರುಕನ ಮೂಲಕ ಪಾಂಡವರಿಗೆ ಕಳಿಸಿ ಅಶ್ವತ್ಥ ವೃಕ್ಷದ ಬುಡದಲ್ಲಿ ಕುಳಿತ. ವಸುದೇವನಿಗೆ ಶೂದ್ರ ಸ್ತ್ರೀಯಲ್ಲಿ ಜನಿಸಿದ್ದ ಮಹಾಬಲಿಷ್ಠನಾದ ಜರಾವ್ಯಾಧನ ಬಾಣದ ಏಟನ್ನು ಅಂಗಾಲಲ್ಲಿ ಸ್ವೀಕರಿಸಿದ. ಬೇಡನನ್ನು ಸಶರೀರವಾಗಿ ಸ್ವರ್ಗಕ್ಕೆ ಕಳಿಸಿದ. ಏಕೆಂದರೆ ಅವನು ಭೃಗುಮುನಿಯ ಅವತಾರ. ಸ್ವಭಾವತಃ ಭಕ್ತ. ಪಶ್ಚಾತ್ತಾಪದಿಂದ ಪರಿಶುದ್ಧನೂ ಆಗಿದ್ದ. ಶ್ರೀಕೃಷ್ಣ ತನ್ನ ಚಿನ್ಮಯ ಶರೀರವನ್ನು ಹೋಲುವ ಒಂದು ಪಾರ್ಥಿವ ಶರೀರವನ್ನು ನಿರ್ಮಿಸಿ ಬಿಟ್ಟುಹೋದ. ಆದರೆ ಗೋಪಾಲಮಂತ್ರೋಪಾಸಕರಿಗೆ ಫಲನೀಡಲು ಒಂದುರೂಪದಿಂದ ಭೂಮಿಯಲ್ಲಿ ಅದೃಶ್ಯನಾಗಿ ನಿಂತ. ಸೂರ್ಯಮಂಡಲ ಕೈಲಾಸ ಬ್ರಹ್ಮಲೋಕಗಳಲ್ಲಿಯೂ ಒಂದೊಂದು ರೂಪದಿಂದ ನಿಂತ. ಐದನೇ ರೂಪದಿಂದ ವೈಕುಂಠ ಧಾಮವನ್ನು ಪ್ರವೇಶಿಸಿ ಮೂಲರೂಪದೊಂದಿಗೆ ಐಕ್ಯಹೊಂದಿಯೂ ಬೇರೆಯಾಗಿಯೂ ಇಚ್ಛಾನುಸಾರವಾಗಿ ಲಕ್ಷ್ಮಿಯೊಂದಿಗೆ ವಿಹರಿಸಿದ. ಅಜ್ಞರಿಗೆ ಭ್ರಮೆ ಉಂಟುಮಾಡುವುದಕ್ಕಾಗಿ ಶ್ರೀಕೃಷ್ಣ ಪಾರ್ಥಿವಶರೀರ ತ್ಯಾಗಮಾಡಿದಂತೆ ತೋರಿಕೊಂಡರೆ, ರುಕ್ಮಿಣಿಯೂ ಬೆಂಕಿಗೆ ಹಾರಿದಂತೆ, ಸತ್ಯಭಾಮೆಯೂ ತಪಸ್ಸಿಗೆ ವನಪ್ರವೇಶ ಮಾಡಿದಂತೆ ತೋರಿಕೊಂಡರು. ಜಾಂಬವತಿ ಮೊದಲಾದವರು ಅಗ್ನಿಪ್ರವೇಶದಿಂದಲೋ ತಪಸ್ಸಿನಿಂದಲೋ ದೇಹತ್ಯಾಗಮಾಡಿ ಶ್ರೀಹರಿಯ ಬಳಿ ಸೇರಿದರು. ವಸುದೇವ ಯೋಗಬಲದಿಂದ ದೇಹತ್ಯಾಗಮಾಡಿದ.

ಕೃಷ್ಣಪತ್ನಿಯರ ಪಾಡು **476**

ಹದಿನಾರು ಸಾವಿರದ ನೂರು ಮಂದಿ ಕೃಷ್ಣಪತ್ನಿಯರನ್ನು ಅರ್ಜುನ ಕರೆದೊಯ್ಯುವಾಗ ದಾರಿಯಲ್ಲಿ ಮ್ಲೇಚ್ಛರಿಂದ ಆಕ್ರಮಣ ನಡೆಯಿತು. ಶ್ರೀಕೃಷ್ಣನ ವಿಯೋಗದಿಂದ ಅರ್ಜುನನಿಗೆ ಶಕ್ತಿ ಉಡುಗಿತು. ಗಾಂಡೀವಕ್ಕೆ ಹೆದೆ ಏರಿಸುವುದೂ ಕಷ್ಟವಾಯಿತು. ಅಕ್ಷಯ ಬತ್ತಳಿಕೆಗಳೂ ಬರಿದಾದುವು. ಕೃಷ್ಣಪತ್ನಿಯರು ಮ್ಲೇಚ್ಛರ ವಶರಾದರು. ಬಳಿಕ ಅವರು ಗೋವಿಂದೈಕಾದಶೀ ವ್ರತವನ್ನಾಚರಿಸಿ ಸರಸ್ವತೀ ನದಿಯಲ್ಲಿ ಶರೀರ ತ್ಯಾಗಮಾಡಿದರು.

ಪಾಂಡವರ ಮಹಾಪ್ರಸ್ಥಾನ **480**

ಶ್ರೀಕೃಷ್ಣ ಹೋದ ಬಳಿಕ ತಾವಿರಬಾರದೆಂದು ಪಾಂಡವರು ದ್ರೌಪದೀ ಸಮೇತರಾಗಿ ಮಹಾಪ್ರಸ್ಥಾನಕ್ಕೆ ಹೊರಟರು. ಅರ್ಜುನ ಅಗ್ನಿಯ ಅಪೇಕ್ಷೆಯಂತೆ ಗಾಂಡೀವವನ್ನು ಸಮುದ್ರದಲ್ಲಿ ಚೆಲ್ಲಿದ. ಬಳಿಕ ಆರುಮಂದಿಯೂ ಯೋಗಾರೂಢರಾಗಿ ಏಳುದಿನಗಳಲ್ಲಿ ಏಳು ಸಮುದ್ರಗಳನ್ನು ಸುತ್ತಿ ಭೂಪ್ರದಕ್ಷಿಣೆ ಮಾಡಿದರು. ಗಂಧಮಾದನ ಪರ್ವತಕ್ಕೆ ಬಂದರು. ಅಲ್ಲಿ ನಾರಾಯಣ ಕ್ಷೇತ್ರದಲ್ಲಿ ದ್ರೌಪದೀ ಸಹದೇವ ಮುಂತಾದವರ ಶರೀರಗಳು ಕ್ರಮವಾಗಿ ಪತನಹೊಂದಿದುವು.

ದೇಹಪಾತಕ್ಕೆ ಕಾರಣ **481**

ಯೋಗಿಗಳಾದ್ದರಿಂದ ಸ್ವೇಚ್ಛೆಯಿಂದ ಯೋಗಬಲದಿಂದಲೆ ಶರೀರತ್ಯಾಗ ಮಾಡಿದರೆಂದು ತಿಳಿದಿದ್ದರೂ ಭೀಮ ಧರ್ಮರಾಜನಲ್ಲಿ ಕೇಳಿದ, 'ಇವರು ಏಕೆ ಬಿದ್ದರು?' ಎಂದು. ಮರಣಕಾಲದಲ್ಲಿ ಅವರ ದೋಷವನ್ನು ಹೇಳಿದರೆ ಅವರಿಗೆ ಅವನ ಋಣ ಪರಿಹಾರವಾಗುವುದು ಎನ್ನುವುದು ಭೀಮನ ಆಶಯವಾಗಿತ್ತು. ಧರ್ಮರಾಜ ಬೇರೇನೂ ಕಾರಣವನ್ನು ಕಾಣದೆ ಅಹಂಕಾರ ಮುಂತಾದ ದೋಷಗಳನ್ನು ಆರೋಪಿಸಿ ಹೇಳಿದ. ಇಲ್ಲದಿದ್ದರೆ 'ನಿರ್ದೋಷಿ'ಯಾದ ತಾನೆ ಮುಂದೆ ಏಕೆ ಶರೀರತ್ಯಾಗ ಮಾಡಿದ? ಸರ್ವದೋಷರಹಿತನಾದ ಋಜುಯೋಗಿಯಾದ ಭೀಮನಲ್ಲಿಯೂ ಅಹಂಕಾರ ದೋಷ ಸಂಭಾವಿತವೆ? ಭೀಮ ಅಂದು ತನ್ನ ಬಲವನ್ನು ಹೇಳಿಕೊಂಡಾಗ ಅದು ಕಡಿಮೆಯಾಯಿತು. ಇದಕ್ಕಿಂತ ಸಾವಿರಪಟ್ಟು ಬಲ ನಿನ್ನಲ್ಲಿದೆ ಎಂದು ಶ್ರೀಕೃಷ್ಣನೆ ಹೇಳಿದನೆಂದ ಮೇಲೆ ಭೀಮ ತನ್ನಲ್ಲಿಲ್ಲದ ಬಲವನ್ನು ಎಂದೂ ಅಹಂಕಾರದಿಂದ ಹೇಳಿಕೊಂಡಿದ್ದಿಲ್ಲವೆನ್ನುವುದು ಸ್ಪಷ್ಟ. ದ್ರೌಪದಿಯೂ ಭೀಮನನ್ನು ಹೊರತು ಉಳಿದವರಲ್ಲಿ ಅರ್ಜುನನನ್ನು ಹೆಚ್ಚು ಆದರಿಸಿದ್ದರೆ ಅದಕ್ಕೆ ಅರ್ಜುನನ ಯೋಗ್ಯತೆ ಕಾರಣ. ಅರ್ಜುನ ನಕುಲ ಸಹದೇವರಿಗೂ ತಮ್ಮ ಶಕ್ತಿ ಸಾಮರ್ಥ್ಯ ಯೋಗ್ಯತೆಗಳ ಬಗ್ಗೆ ಅಭಿಮಾನವಿದ್ದುದು ದೋಷವಲ್ಲ.

ನರಕ ದರ್ಶನ **488**

ಧರ್ಮರಾಜನೊಬ್ಬನೆ ನಾಯಿಯೊಂದಿಗೆ ಮುಂದೆ ನಡೆದಾಗ ದೇವತೆಗಳ ರಥ ಬಂದಿತು. ಆತ ನಾಯಿಯನ್ನು ಬಿಟ್ಟು ನಾನೊಬ್ಬನೆ ರಥವೇರಲಾರೆ ಎಂದು ಆಗ್ರಹಪಟ್ಟಾಗ ನಾಯಿರೂಪದ ಯಮ ನಿಜರೂಪ ತಳೆದು ನಿಂತ. ಧರ್ಮರಾಜರೂಪದ ತನ್ನ ದಯಾಪರತ್ವವನ್ನು ತಾನೇ ಹೀಗೆ ಲೋಕಕ್ಕೆ ತೋರಿದ. ಬಳಿಕ ಧರ್ಮರಾಜ ರಥವನ್ನೇರಿ ವೀರಸ್ವರ್ಗದಲ್ಲಿ ದುರ್ಯೋಧನನನ್ನು ಕಂಡು ಅಸಹನೆಯಿಂದ ಹೊರಟುಬಿಟ್ಟ. ಮುಂದೆ ನರಕ ಕಾಣಿಸಿತು. ದುರ್ಗಂಧಮಯವಾದ ಅಂಧಕಾರ ಕವಿದ ಪ್ರದೇಶ. ಅಲ್ಲಿ ಭೀಮ ಅರ್ಜುನ ಕರ್ಣ ಮುಂತಾದವರ ದೀನ ಆಕ್ರಂದನ ಧ್ವನಿ ಕೇಳಿಸಿತು. 'ನನ್ನ ಸೋದರರಿರುವ ಈ ನರಕವೆ ನನಗಿರಲಿ' ಎಂದ ಧರ್ಮರಾಜ. ಹೀಗೆ ಇಲ್ಲಿಯೂ ದಯಾಪರತ್ವವನ್ನೆ ಧರ್ಮರಾಜ ಮೆರೆದ. ಈ ನರಕದರ್ಶನ 'ಅಶ್ವತ್ಥಾಮಾ ಹತಃ'

ಎನ್ನುವಲ್ಲಿ ಕುಂಜರ ಶಬ್ದವನ್ನು ಸೇರಿಸಿದುದರ ಫಲ. ಶ್ರೀಕೃಷ್ಣನ ಮಾತಿನಲ್ಲಿ ವಿಶ್ವಾಸ ಮಾಡದಿದ್ದುದರ ಫಲ. ಪ್ರಾರಬ್ಧ ಸೂಚಕ.

ಧರ್ಮರಾಜನ ಶರೀರತ್ಯಾಗ **494**

ಪಾಪಿ ದುರ್ಯೋಧನನಿಗೂ ರಣರಂಗದಲ್ಲಿ ಮಡಿದ ಪ್ರಯುಕ್ತ ಸ್ವಲ್ಪ ಕಾಲ ವೀರಸ್ವರ್ಗವಿದೆ ಎನ್ನುವುದು ಧರ್ಮರಾಜನಿಗೆ ಹೊಳೆಯದಿದ್ದುದು ಮನುಷ್ಯದೇಹ ಪ್ರಯುಕ್ತ. ಅದರಿಂದ ಅದನ್ನು ಬಿಡಲು ಹೇಳಿದರು ದೇವತೆಗಳು. ಧರ್ಮರಾಜ ದೇವಗಂಗೆಯಲ್ಲಿ ಮುಳುಗಿ ಶರೀರವನ್ನು ಪರಿತ್ಯಜಿಸಿದ. ಇನ್ನೂ ಮನುಷ್ಯ ಜನ್ಮದ ಸಂಸ್ಕಾರಶೇಷವಿದ್ದುದರಿಂದ ಭೀಮನ ಬಳಿ ನಿಂತಿದ್ದ ಶುದ್ಧ ಭಾರತೀಸ್ವರೂಪಳಾದ ದ್ರೌಪದಿಯನ್ನು ಸ್ಪರ್ಶಿಸಲು ಬಯಸಿದ. ಒಡನೆ ಮೂಲರೂಪಿ ಧರ್ಮರಾಜ ಅವನನ್ನು ಆಲಿಂಗಿಸಿ ಸ್ವಸ್ಥನನ್ನಾಗಿ ಮಾಡಿದ.

ಸ್ವರ್ಗದಲ್ಲಿ ಪಾಂಡವರು **499**

ಸ್ವರ್ಗದಲ್ಲಿಯೂ ಪಾಂಡವರಿಗೆ ಶ್ರೀಕೃಷ್ಣನ ಸಮಾಗಮವಾಯಿತು. ಶ್ರೀಕೃಷ್ಣ ಅರ್ಜುನನೊಡನೆ ವಿಹಾರ ಮಾಡಿದ. ದ್ರೋಣ ಭೀಷ್ಮ ಮುಂತಾದ ಬೇರೆ ದೇವಾಂಶ ಸಂಭೂತರೆಲ್ಲರೂ ತಮ್ಮ ಮೂಲರೂಪಗಳೊಡನೆ ಐಕ್ಯ ಹೊಂದಿದರು. ಅಸುರರು ನಾಲ್ಕು ಸಾವಿರದ ಮುನ್ನೂರು ವರ್ಷಕಾಲ ವೀರಸ್ವರ್ಗವನ್ನು ಅನುಭವಿಸಿ ಪುಣ್ಯಕ್ಷಯದಿಂದ ಭೂಮಿಯಲ್ಲಿ ಹುಟ್ಟಿನಾನೆ ಭಗವಂತ, ಪ್ರಪಂಚ ಸುಳ್ಳು ಎಂದರು. ತಮಸ್ಸಿಗೆ ಪೂರ್ಣ ಸಾಧನೆ ಮಾಡಿಕೊಂಡರು. ಆಗ ಭೀಮನೆ ಮಧ್ವಾವತಾರ ಮಾಡಿ ಸಜ್ಜನರಿಗೆ ಹರಿತತ್ವವನ್ನು ಉಪದೇಶಿಸಿದ. ಈ ಎಲ್ಲ ಭೀಮನ ಮಹಿಮೆಗಳನ್ನು ವೇದಮಂತ್ರಗಳು ಹೊಗಳುತ್ತಿವೆ.

ಬುದ್ಧಾವತಾರ **506**

ಕಲಿಯುಗದಲ್ಲಿ ಒಂದು ಸಾವಿರ ವರ್ಷಕಾಲ ಪಾಂಡವರ ಸಂತತಿ ಇದ್ದುದರಿಂದ ತತ್ವಜ್ಞಾನ ನಶಿಸಲಿಲ್ಲ. ಆಗ ತ್ರಿಪುರಾಸುರರು ಹುಟ್ಟಿ ತತ್ವಜ್ಞಾನವನ್ನು ಪಡೆದರು. ಅಸುರರಿಗೆ ತಮಸ್ಸಾಗಬೇಕು. ಆದರೆ, ತತ್ವಜ್ಞಾನವಿರುವಷ್ಟು ಕಾಲ ತಮಸ್ಸಾಗದು. ಅದಕ್ಕೆ ದೇವತೆಗಳ ಪ್ರಾರ್ಥನೆಯಂತೆ ಶ್ರೀಹರಿ ಬುದ್ಧನಾಗಿ ಅವತರಿಸಿದ. ಆಗ ತಾನೆ ಹುಟ್ಟಿದ್ದ ಜಿನನ ಶಿಶುವನ್ನು ದೂರಕ್ಕೆ ಎಸೆದು ತಾನು ಶಿಶುರೂಪನಾಗಿ ಮಲಗಿದ. ಜಿನನ ವೈದಿಕ ಆಚಾರಗಳನ್ನು ಕಂಡು ನಕ್ಕ. ಪ್ರಪಂಚ ಶೂನ್ಯ. ವೇದ ಅಪ್ರಮಾಣ ಎಂದ. ಅವನಿಗೆ ತನ್ನಲ್ಲಿ ವಿಶ್ವಾಸ ಬರಿಸುವುದಕ್ಕಾಗಿ ಎಲ್ಲ ದೇವತೆಗಳನ್ನೂ ತಮ್ಮ ಆಯುಧ ಎಸೆಯಲು ಆದೇಶಿಸಿದ. ಆ ಎಲ್ಲ ಆಯುಧಗಳನ್ನು ಶಿಶುರೂಪನಾದ ತಾನು ನುಂಗಿದ. ಮೂಲರೂಪದಿಂದ ತಾನು ಎಸೆದ ಸುದರ್ಶನ ಚಕ್ರವನ್ನು ತಾನೆ ಹಿಡಿದು ಆಸನವಾಗಿ ಮಾಡಿ ಅದರ ಮೇಲೆ ಕುಳಿತ. ಈ ಶಿಶು ಅಸಾಮಾನ್ಯ ಜ್ಞಾನಿ, ಬುದ್ಧ ಎಂದುಕೊಂಡು ಅವನ ಮಾತನ್ನು ಬೌದ್ಧರು ಕೇಳಿದರು. ತಪ್ಪಾಗಿ ತಿಳಿದರು. ಬೌದ್ಧ ಮತವನ್ನು ಹರಡಿದರು. ಜಿನನೂ ಬೇರೆಯೆ ಆದ ಜೈನಮತವನ್ನು ಪ್ರಾರಂಭಿಸಿದ. ಬುದ್ಧ ಮುಂದೆ

ದೇವಲೋಕಕ್ಕೆ ಹೋಗಿ ತನ್ನ ಉಪದೇಶವಾಣಿಯ ನಿಜವಾದ ಅರ್ಥವನ್ನು ಹೇಳಿ ಸಂತೋಷಪಡಿಸಿದ. ಅದು ಬೇಗನೆ ಮುಕ್ತಿನೀಡುವ ಪ್ರಶಾಂತವಿದ್ಯೆ ಎನಿಸಿತು. ಮುಂದೆ ಕ್ರೋಧವಶರೆಂಬ ದೈತ್ಯರು ಪುನಃ ಮಾನವರಾಗಿ ಹುಟ್ಟಿ ಶಿವವರಬಲದಿಂದ ಎಲ್ಲೆಡೆ ಅಭೇದವನ್ನು ಪ್ರತಿಪಾದಿಸಿದಾಗ ಮಧ್ವಾವತಾರವಾಯಿತು. ಮುಂದೆ ಅಸುರ ಸಂಹಾರಕ್ಕೆ ದುರ್ಗೆಯೂ ಪ್ರಾದುರ್ಭವಿಸುತ್ತಾಳೆ.

ಕಲ್ಕ್ಯವತಾರ 515

ಕಲಿಯುಗದ ಕೊನೆಯಲ್ಲಿ ಬ್ರಹ್ಮರುದ್ರಾದಿಗಳಿಂದ ಪ್ರಾರ್ಥಿತನಾಗಿ ಶ್ರೀಹರಿ ವಿಷ್ಣುಯಶನೆಂಬ ಬ್ರಾಹ್ಮಣನ ಮಗನಾಗಿ ಪ್ರಾದುರ್ಭವಿಸಿ ಕಲಿನಿಗ್ರಹ ಮಾಡುತ್ತಾನೆ. ಕಲ್ಕಿ ಎಂದು ಪ್ರಸಿದ್ಧನಾಗುತ್ತಾನೆ.

ನಿರ್ಣಯಗ್ರಂಥದ ಮಹತ್ವ 516

ಈ ನಿರ್ಣಯ ಗ್ರಂಥವನ್ನು ಶ್ರೀಮಧ್ವಾಚಾರ್ಯರು ಬದರಿಯ ವೇದವ್ಯಾಸರೂಪಿ ನಾರಾಯಣನ ಆಜ್ಞಾನುಸಾರವಾಗಿ ರಚಿಸಿದರು. ಅವರು ಆ ನಾರಾಯಣಶಿಷ್ಯರಾಗಿ ಅವನ ಅನುಗ್ರಹದಿಂದ ಸಕಲ ಸಚ್ಛಾಸ್ತ್ರಗಳನ್ನೂ ಯಥಾರ್ಥವಾಗಿ ತಿಳಿದವರು. ಈ ಗ್ರಂಥದ ಸಹಾಯವಿಲ್ಲದೆ ಸಚ್ಛಾಸ್ತ್ರವಚನಗಳ ಅರ್ಥನಿರ್ಣಯ ಶಕ್ಯವಿಲ್ಲ. ಬ್ರಹ್ಮಸೂತ್ರವು ನಿರ್ಣಯಕ್ಕಾಗಿಯೆ ರಚಿತವಾಗಿದ್ದರೂ ಅದಕ್ಕೆ ಅಪವ್ಯಾಖ್ಯಾನಗಳು ಬಂದಿವೆ. ಶ್ರೀಮದಾಚಾರ್ಯರು ವೇದವ್ಯಾಸರ ಆಜ್ಞೆಯಂತೆ ಅದಕ್ಕೆ ಉತ್ತಮವಾದ ಭಾಷ್ಯವನ್ನು ರಚಿಸಿ, ಭಾರತದ ಅರ್ಥನಿರ್ಣಯಕ್ಕೆ ಈ ಗ್ರಂಥವನ್ನೂ ರಚಿಸಿದರು. ತೃತೀಯಮಸ್ಯ ವೃಷಭಸ್ಯ ದೋಹಸೇ ಎಂದು ಮುಂತಾಗಿ ವೇದಮಂತ್ರಗಳು ಇದನ್ನು ಹೇಳುತ್ತಿವೆ. ಅದರಿಂದ ಈ ಗ್ರಂಥ ಸಮಸ್ತ ಪುರುಷಾರ್ಥ ಸಿದ್ಧಿಗೆ ಸಾಧನ. ಇದರ ಅಧ್ಯಯನದಿಂದ ನಾರಾಯಣ ಸುಪ್ರೀತನಾಗುತ್ತಾನೆ.

-೦-೦-

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - 23